ಶ್ರೀಶಂಕರಭಗವತ್ಪಾದವೃತ್ತಾಂತ ಸಾರಸರ್ವಸ್ವ



ಶ್ರೀಶಂಕರಭಗವತ್ಪಾದಾಚಾರ್ಯರು

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1995

ಗ್ರಂಥದ ಬಗ್ಗೆ

ಶ್ರೀಶಂಕರಭಗವತ್ಪಾದರ ಜೀವನಚರಿತ್ರೆಯನ್ನು ತಿಳಿಸುವ 'ಶಂಕರ ವಿಜಯ'ಗಳೆಂಬ ಹೆಸರಿನ ಗ್ರಂಥಗಳು ಆಯಾಕಾಲಕ್ಕೆ ವಿದ್ವಾಂಸರು ಗುರುಭಕ್ತಿ, ಶ್ರದ್ಧೆ ಸಂಪ್ರದಾಯಗಳ ಚೌಕಟ್ಟಿಗೆ ಒಳಪಟ್ಟು ಜಾರಿಯಲ್ಲಿಟ್ಟ ಕಾವ್ಯಗ್ರಂಥಗಳೇ ಹೊರತು ಐತಿಹಾಸಿಕ ದಾಖಲೆಗಳಲ್ಲ. ಈ ಕಾರಣದಿಂದ ಶಂಕರವಿಜಯಗಳಲ್ಲಿ ಚರಿತ್ರೆಯ ನಾಯಕರ ಜೀವನ ಘಟನೆಗಳ ವಿಷಯಕ್ಕೆ ಪರಸ್ಪರವಿರೋಧವಿರುವುದು ಅನಿವಾರ್ಯವಾಗಿದೆ.

ಇಂಥ ಕ್ಲಿಷ್ಟವಿಷಯಗಳನ್ನೆಲ್ಲ ಈ ಗ್ರಂಥಕರ್ತರು ತಮಗೆ ಒದಗಿದ ದಾಖಲೆಗಳು ಹಾಗೂ ಗ್ರಂಥಗಳಿಂದ ಸಂಗ್ರಹಿಸಿ ಪರಸ್ಪರ ಹೋಲಿಸಿ ಸತ್ಯಕ್ಕೆಹತ್ತಿರವಾದವುಗಳನ್ನು ವಿಮರ್ಶಿಸಿ ಇಲ್ಲಿ ತಿಳಿಸಿದ್ದಾರೆ. ಇದರಿಂದ ಕೆಲವರಿಗೆ ಸಂತೋಷವೂ ಕೆಲವರಿಗೆ ಬೇಸರವೂ ಆಗಿದೆ ಯೆಂಬುದು ನಿಜ. ಆದರೂ ನಿಜವನ್ನು ಗೊತ್ತುಪಡಿಸುವ ಒಂದೇ ದೃಷ್ಟಿಯಿಂದ ಈ ವಿಮರ್ಶಾತ್ಮಕ ಪ್ರಬಂಧವು ರಚಿತವಾಗಿದೆಯೆಂಬುದು ಓದುಗರಿಗೆ ಮನದಟ್ಟಾಗಲಿದೆ.

ಶ್ರೀಶಂಕರಾಚಾರ್ಯರ ಚರಿತ್ರೆಗಳಿಗಿಂತಲೂ ಅವರ ಉಪದೇಶ ಗಳೇ ಪ್ರಧಾನವೆಂದೂ ಅಂಥ ಉಪದೇಶಗಳನ್ನು ಅವರ ಪ್ರಸ್ಥಾನತ್ರಯ ಭಾಷ್ಯಗಳಿಂದಲೇ ತಿಳಿಯಬೇಕೆಂದೂ ಗ್ರಂಥಕರ್ತರು ಇಲ್ಲಿ ಒತ್ತಿ ಹೇಳಿರುತ್ತಾರೆ. ವಾಚಕರು ಗ್ರಂಥವನ್ನೋದಿದ ಮೇಲೆ ತಮ್ಮ ತಮ್ಮ ತೀರ್ಮಾನಕ್ಕೆ ಬರಬಹುದಾಗಿದೆ.

ಶ್ರೀ ಶಂಕರಭಗವತ್ಪಾದವೃತ್ತಾಂತ ಸಾರಸರ್ವಸ್ವ

ಶ್ರೀ ಶಂಕರಭಗವತ್ಪಾದಾಚಾರ್ಯರು

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1995

ಒಂದನೆಯ ಮುದ್ರಣದ ಪೀಠಿಕೆ

ಈ ಗ್ರಂಥವನ್ನು ಬರೆಯಬೇಕೆಂದು ನನ್ನನ್ನು ಮತ್ತೆಮತ್ತೆ ಒತ್ತಾಯದಿಂದ ಕೇಳಿದ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ವೇ॥ ಬ್ರ॥ ಶ್ರೀ॥ ಬಿ. ನಾರಾಯಣಭಟ್ಟರವರ ಅಭಿಪ್ರಾಯಕ್ಕೆ ಮನ್ನಣೆಕೊಡಬೇಕೆಂದು ಮನಸ್ಸಿಗೆ ಬಂದಾಗ ಗ್ರಂಥದ ವಿಷಯವು ಇಷ್ಟು ಜಟಿಲವಾಗಬಹುದೆಂಬ ಕಲ್ಪನೆಯು ನನಗೆ ಇರಲಿಲ್ಲ. ಗ್ರಂಥವು ಇಷ್ಟು ದೊಡ್ಡದಾಗಬಹುದೆಂಬ ನಿರೀಕ್ಷಣೆಯೂ ಇರಲಿಲ್ಲ. ಆದರೆ ಭಗವಂತನ ಅನುಗ್ರಹದಿಂದ ಅನೇಕರು ನನಗೆ ವಿಷಯಗಳನ್ನು ಒದಗಿಸಿಕೊಡುವದಕ್ಕೆ ಬಂದರು ; ಕೆಲವರು ಗ್ರಂಥವನ್ನು ನೋಡುವದಕ್ಕೂ ನೆರವಾದರು. ಆದರ ಫಲವಾಗಿ ಈ ಪುಸ್ತಕವು ಹೊರಬಂದಿದೆ.

ಶ್ರೀಶಂಕರಭಗವತ್ಪಾದರ ಹೆಸರು ಈಗ್ಗೆ ನಾಗರಿಕಪ್ರಪಂಚದಲ್ಲೆಲ್ಲ ಹರಡಿಕೊಂಡಿದೆ. ಅವರು ಭಾರತದೇಶಕ್ಕೇ ಅಲ್ಲದೆ ಇಡಿಯ ಭೂಮಂಡಲಕ್ಕೇ ಮಾಡಿರುವ ಉಪಕಾರವು ಅಷ್ಟಿಷ್ಟಲ್ಲ. ನಮಗೆ ಕಾಣುವ ಪ್ರಪಂಚವೆಲ್ಲವೂ ಪರಮಾರ್ಥವಾಗಿ ಪರಮಸತ್ಯವಾಗಿರುವ ಪರಬ್ರಹ್ಮವಸ್ತುವೊಂದೇ ; ಇಲ್ಲಿರುವ ಜೀವರುಗಳೆಲ್ಲರೂ ನಿಜವಾಗಿ ಪರಮಾತ್ಮಸ್ವರೂಪರೇ–ಎಂಬ ಶಾಶ್ವತತತ್ತ್ವವನ್ನು ಮನಗಾಣಿಸುವ ವೇದಾಂತಸಿದ್ಧಾಂತವನ್ನು ಅವರು ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರಗಳು– ಎಂಬ ಪ್ರಸ್ಥಾನತ್ರಯದ ತಮ್ಮ ಭಾಷ್ಯಗಳಲ್ಲಿ ವಿಶದಪಡಿಸಿರುತ್ತಾರೆ. ಆ ಗ್ರಂಥಗಳನ್ನು ಯಥಾಮತಿಯಾಗಿ ಕನ್ನಡಿಸುವ ಸೌಭಾಗ್ಯದ ಜೊತೆಗೆ ಅವರ ಚರಿತ್ರೆಯನ್ನೂ ಸ್ಮರಿಸಿಕೊಳ್ಳುವ ಸೌಭಾಗ್ಯವು ದೊರೆಯಿತಲ್ಲ !– ಎಂಬ ಹಿಗ್ಗು ನನ್ನ ಮನಸ್ಸಿನಲಿ ಮೊದಲು ಉಂಟಾಯಿತು. ಆದರೆ ಈ ಚರಿತ್ರೆಯ ಲೇಖನಕಾರ್ಯದಲ್ಲಿ ತೊಡಗಿದ ಸ್ವಲ್ಪಕಾಲದಲ್ಲಿಯೇ ಆ ಹಿಗ್ಗು ಮಾಯವಾಯಿತು. ಏಕೆಂದರೆ ನನ್ನ ದುರದೃಷ್ಟದಿಂದ ಜಗದ್ಗುರುಗಳಾದ ಆ ಆಚಾರ್ಯರ ವಿಷಯದಲ್ಲಿ ನಿಜವಾದ ಚರಿತ್ರೆಯನ್ನು ಬರೆದಿರುವ ಒಂದು ಗ್ರಂಥವೂ ಈವರೆಗೆ ಉಪಲಬ್ಧವಾಗಿರುವದಿಲ್ಲ; ಆದು ಸಿಕ್ಕುವ ಆಶೆಯೂ ಇಲ್ಲ.

ಆಚಾರ್ಯರ ಚರಿತ್ರೆಯ ಸಂಗ್ರಹಕ್ಕೆ ಸಾಮಗ್ರಿಯನ್ನು ಒದಗಿಸಿಕೊಂಡ ಮೇಲೆ ಸ್ಪಷ್ಟವಾಗಿ ತಿಳಿದುಬಂದದ್ದೇನೆಂದರೆ : ಶಂಕರವಿಜಯಗಳೆಂಬ ಕೆಲವು ಕಾವ್ಯಗಳು, ಅಲ್ಲಲ್ಲಿ ಆಚಾರ್ಯರಿಗೆ ಸಂಬಂಧಿಸಿದಂತೆ ಬರೆದಿರುವ ಕಟ್ಟುಕಥೆಗಳ ಸಂಗ್ರಹ ಮತ್ತು ಈ ಗ್ರಂಥಗಳ ಆಧಾರದಿಂದ ಶ್ರೀಶಂಕರಭಗವತ್ಪಾದರು ಸ್ಥಾಪಿಸಿರುವ ಮಠಗಳೆಂಬ ಹೆಸರಿನ ಸಂಸ್ಥೆಗಳವರು ಬರೆಯಿಸಿಟ್ಟುಕೊಂಡಿರುವ ವಿಚಾರಗಳ ಆಧಾರಗಳು ; ಈಚಿನ ಗ್ರಂಥವಿಮರ್ಶಕರು ಐತಿಹಾಸಿಕದೃಷ್ಟಿಯಿಂದ ಬರೆದಿರುವ ಗ್ರಂಥಗಳು– ಇಷ್ಟಲ್ಲದೆ ಮತ್ತೆ ಯಾವ ಸಾಮಗ್ರಿಯೂ ನಮಗೆ

ಸಿಕ್ಕಿಲ್ಲವೆಂಬುದು. ಐತಿಹಾಸಿಕದೃಷ್ಟಿಯಿಂದ ಬರೆದವರೂ ಬಲುನುಟ್ಟಿಗೆ ಒಂದೊಂದು ಮಠದ ಶಿಷ್ಯರಾಗಿದ್ದದ್ದರಿಂದ ತಮ್ಮ ತಮ್ಮ ವಿಷಯವಿವೇಚನೆಯನ್ನು ತಮ್ಮತಮ್ಮ ಮೆಚ್ಚುಗೆಗೆ ಪಾತ್ರವಾಗಿರುವ ಮಠಗಳಲ್ಲಿರುವ ಅಭಿನಿವೇಶಪೂರ್ವಕವಾಗಿಯೇ ಬರೆದಿರುತ್ತಾರೆ. ಕೆಲಸರು ಮಾತ್ರ ನಿಷ್ಪಕ್ಷಪಾತವಾಗಿ ಬರೆದಿದ್ದರೂ ಸರಿಯಾದ ಸಾಮಗ್ರಿಯ ಅಭಾವದಿಂದ ನಿಸ್ಸಹಾಯಕರಾಗಿ ತಿಳಿದಷ್ಟನ್ನು ಸಂಗ್ರಹಿಸಬೇಕಾಗಿಬಂದಿದೆ.

ಈಗ ನಾನು ಬರೆದಿರುವ ಪುಸ್ತಕವನ್ನು ಮೇಲೆ ಹೇಳಿದಂಥ ಗ್ರಂಥಗಳೆಲ್ಲವನ್ನೂ ಉಪಯೋಗಿಸಿಕೊಂಡೇ ಬರೆದಿರುತ್ತೇನಾದರೂ ಇದರಲ್ಲಿರುವ ಒಂದು ವಿಶೇಷವನ್ನು ಪುಸ್ತಕದ ಪ್ರಾರಂಭದಲ್ಲಿಯೇ ತಿಳಿಸಿರುತ್ತೇನೆ. ಆಚಾರ್ಯರ ಗ್ರಂಥಗಳೆಂದು ನಿರ್ವಿವಾದವಾಗಿ ಸರ್ವಸಂಮತವಾಗಿರುವ ಅವರ ಪ್ರಸ್ಥಾನತ್ರಯ ಭಾಷ್ಯಗಳಲ್ಲಿರುವ ಅಭಿಪ್ರಾಯಕ್ಕೆ ವಿರುದ್ಧವೆಂದು ನನಗೆ ತೋರಿದ ಯಾವ ವಿಷಯವನ್ನಾಗಲಿ ಆ ಅಭಿಪ್ರಾಯದ ಒರೆಗಲ್ಲಿಗೆ ತಿಕ್ಕಿನೋಡದೆ ಇಲ್ಲಿ ಬೆಲೆಯನ್ನು ಕಟ್ಟಲ್ಲ. ಅವಿರುದ್ಧವಾದ ಸ್ಥಲಗಳಲ್ಲಿಮಾತ್ರ ವಿವಿಧಗ್ರಂಥಗಳಲ್ಲಿರುವ ಅಭಿಪ್ರಾಯಗಳನ್ನು ಹೋಲಿಸಿನೋಡಿ ಅವುಗಳ ಸಾರಾಸಾರವಿವೇಕವನ್ನು ನನ್ನ ಅಲ್ಪಮತಿಗೆ ತಿಳಿದಂತೆ ಮಾಡಿ ನಿರ್ಣಯಿಸಿರುತ್ತೇನೆ.

ಹೀಗೆ ಮಾಡಿದ ನಿರ್ಣಯಗಳನ್ನು ನಿರ್ಭೀತಿಯಿಂದ ಬರೆದದ್ದರ ಫಲವಾಗಿ ಕೆಲವರಿಗೆ ಅಸಮಾಧಾನವಾಗಿದೆ ; ತತ್ತ್ವಜಿಜ್ಞಾಸುಗಳಿಗೆ ಹರ್ಷವೂ ಆಗಿದೆ. ಹೇಗಾದರೂ ಆಗಲಿ, ಭಗವತ್ಪಾದರ ಚರಿತ್ರೆಯಲ್ಲಿ ವಿನಾಕಾರಣವಾಗಿ ಆ ಮಹಾವಿಭೂತಿಪುರುಷರ ಯೋಗ್ಯತೆಗೆ ಕಲಂಕವನ್ನು ತರುವ ಯಾವ ವಿಷಯವನ್ನೂ ಯಾವ ಕಾರಣದಿಂದಲೂ ಒಪ್ಪಬಾರದೆಂಬ ಸಂಕಲ್ಪವನ್ನು ಸಾಗಿಸಿಕೊಂಡೇ ಬಂದಿದೇನೆಂಬುದೊಂದೇ ನನ್ನ ಮನಸ್ಸಿಗೆ ಸಮಾಧಾನ.

ಈ ಗ್ರಂಥವನ್ನು ಓದಿದ ಮಹಾತ್ಮರಿಗೆ ನನ್ನದೊಂದು ನಮ್ರವಿಜ್ಞಾಪನೆ ಏನೆಂದರೆ : ಆಚಾರ್ಯರ ಚರಿತ್ರೆ ಎಂದರೆ ಅವರ ಭಾಷ್ಯಗಳೇ ; ಆ ಗ್ರಂಥಗಳಲ್ಲಿರುವ ಉದಾತ್ತವಾದ ಅಭಿಪ್ರಾಯಗಳಿಂದಲೇ ಅವರ ಉಚ್ಚಸ್ಥಾನವನ್ನು ನಿರ್ಣಯಿಸಿ ಅವರ ಭಾಷ್ಯಗ್ರಂಥಗಳ ಪಠನಮನನಗಳ ಮೂಲಕವೇ ಆ ಜಗದ್ಗುರುಗಳನ್ನು ಆರಾಧಿಸಬೇಕು. ಆ ಮಹಾಮಹಿಮರಿಗೆ ನಮ್ಮ ಭಕ್ತಿಯನ್ನು ತೋರಿಸುವದಕ್ಕೆ ಇದಕ್ಕಿಂತ ಹೆಚ್ಚಿನ ಮಾರ್ಗವು ಯಾವದೂ ಇಲ್ಲ.

ಈ ಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವವನ್ನು ಬರೆಯುವಾಗ ನನಗೆ ವಿಶೇಷವಾಗಿ ಸಹಾಯವನ್ನು ಮಾಡಿರುವ ಕೆಲವರ ಹೆಸರುಗಳನ್ನು ಇಲ್ಲಿ ಜ್ಞಾಪಿಸಿಕೊಳ್ಳುವದು ಆವಶ್ಯ. ಮೊಟ್ಟಮೊದಲನೆಯದಾಗಿ ಹೊಸಪೇಟೆಯ ವೇ|| ಬ್ರ||

ಶ್ರೀ॥ ಬಿ. ನಾರಾಯಣಭಟ್ಟರವರು ಈ ಕೆಲಸಕ್ಕೆ ಬೇಕಾದ ಅನೇಕ ಗ್ರಂಥಗಳನ್ನು ಒದಗಿಸಿಕೊಟ್ಟು ಪ್ರೋತ್ಸಾಹಿಸಿರುತ್ತಾರೆ. ಎರಡನೆಯದಾಗಿ ಧಾರವಾಡದ ಜನತಾ ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ನಾರಾಯಣ ರಾವು ಚಂದ್ರ ಕುಲಕರ್ಣಿ ಎಂ.ಎ.,ಎಲ್.ಎಲ್.ಬಿ..ರವರು 'ಶ್ರೀಶಂಕರಾಚಾರ್ಯ' ಎಂಬ ಗ್ರಂಥ(ಶ್ರೀ॥ ಬಲದೇವ ಉಪಾಧ್ಯಾಯ ಎಂ.ಎ., ಸಾಹಿತ್ಯಾಚಾರ್ಯ– ಇವರು ಹಿಂದಿಭಾಷೆಯಲ್ಲಿ ಬರೆದಿರುವ ಪುಸ್ತಕ)ವನ್ನು ಎರವಲಾಗಿ ಕೊಟ್ಟು ಉಪಕಾರಮಾಡಿರುತ್ತಾರೆ. ಮೂರನೆಯದಾಗಿ ಹುಬ್ಬಳ್ಳಿಯ ಶ್ರೀಶ್ರೀ ಪರಮಹಂಸ ಅಭಿನವ ಪದ್ಮನಾಭತೀರ್ಥರು (ಪೂರ್ವಾಶ್ರಮದಲ್ಲಿ ಶ್ರೀ ಯೋಗೀಶ್ವರ ದತ್ತ ಮೂರ್ತಿದೀಕ್ಷಿತರು, ಬಂಕಾಪುರ) ಮರಾಠಿಭಾಷೆಯಲ್ಲಿ ಶ್ರೀ॥ ಮಹಾದೇವ ರಾಜಾರಾಮು ಬೋಡಸ್–ಎಂಬವರು ಬರೆದಿರುವ 'ಶ್ರೀಶಂಕರಾಚಾರ್ಯ ವ ತ್ಯಾಂಚಾ ಸಂಪ್ರದಾಯ' ಎಂಬ ಗ್ರಂಥವನ್ನು ಎರವಲಾಗಿ ಕೊಟ್ಟು ಉಪಕಾರಮಾಡಿರುತ್ತಾರೆ. ಬಹುಮುಖ್ಯವಾಗಿ ಇಲ್ಲಿ ಕೃತಜ್ಞತೆಯಿಂದ ನೆನೆಸಿಕೊಳ್ಳಬೇಕಾದವರೆಂದರೆ: ಶೃಂಗೇರಿ ಜಗದ್ಗುರು ಪೀಠದ ಇತಿಹಾಸವನ್ನು ಕುರಿತು ಇಂಗ್ಲಿಷಿನಲ್ಲಿ The Throne of Transcendental Wisdom ಎಂಬ ಗ್ರಂಥವನ್ನು ಬರೆದಿರುವ ಪುದುಕೋಟೆಯ ನಿವೃತ್ತ ಡೈರೆಕ್ಟರ್ ಆಫ್ ಎಜ್ಯುಕೇಷನ್ ಶ್ರೀ॥ ಕೆ. ಆರ್. ವೆಂಕಟರಾಮನ್ ರವರು. ಇವರು ತಾವು ಬರೆದಿರುವ ಗ್ರಂಥವನ್ನು ಕೊಟ್ಟದ್ದಲ್ಲದೆ ಮಠಗಳ ವಿಷಯವಾಗಿ ವಿವಾದವು ಬಂದ ಸಂದರ್ಭಗಳಲ್ಲೆಲ್ಲ ಶೃಂಗೇರೀಪೀಠಕ್ಕೆ ಅನುಕೂಲವಾಗುವ ಹಲವು ಐತಿಹಾಸಿಕವಿಷಯಗಳನ್ನು ಕುರಿತ ಟಿಪ್ಪಣಿಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸಿ ಸಹಾಯಮಾಡಿರುತ್ತಾರೆ. ಕೊನೆಯದಾಗಿ ಅತಿಮುಖ್ಯವಾಗಿ ಆಧ್ಯಾತ್ಮಪ್ರಕಾಶಕಾರ್ಯಾಲಯದ ಪಂಡಿತರಾದ ಅಧ್ಯಾತ್ಮವಿದ್ಯಾಪ್ರವೀಣ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಶಾಸ್ತ್ರಿಗಳವರು ಈ ಕೆಲಸಕ್ಕೆ ಮಾಡಿರುವ ಸಹಾಯವು ಅತ್ಯಮೋಘವಾಗಿದೆ. ನಾನು ಸರಿತಿಷ್ಟಗಳ ಕರಡನ್ನು ಮಾತ್ರ ಬರೆದು ಅವರಿಗೆ ಕೊಟ್ಟಮೇಲೆ ಮೂಲಗ್ರಂಥಗಳಿಗೆ ಹೋಲಿಸುವದು, ಗ್ರಂಥವನ್ನು ಅಚ್ಚಿಗೆ ಸಿದ್ಧಪಡಿಸುವದು, ಪ್ರೂಫುಗಳನ್ನು ತಿದ್ದುವದು–ಮುಂತಾದ ಹಲವು ರೀತಿಗಳಿಂದ ಈ ಕೆಲಸವನ್ನು ಪರಿಪೂರ್ತಿಗೊಳಿಸುವ ಶ್ರಮವನ್ನು ಅವರು ವಹಿಸಿರುತ್ತಾರೆ.

ಈ ಮಹನೀಯರುಗಳಿಗೆಲ್ಲ ಅಭೀಷ್ಟಸಿದ್ಧಿಯನ್ನುಂಟುಮಾಡಲಿ!–ಎಂದು ನಾನು ಶ್ರೀಮನ್ನಾರಾಯಣಭಗವಂತನಲ್ಲಿ ಈ ಮೂಲಕವಾಗಿ ಪ್ರಾರ್ಥಿಸುತ್ತೇನೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ
24—5—1963

ಗ್ರಂಥಕರ್ತ.

ವಿಷಯಾನುಕ್ರಮಣಿಕೆ

(ಕಂಸದಲ್ಲಿರುವ ಸಂಖ್ಯೆಗಳು ಪುಟವನ್ನು ಸೂಚಿಸುವವು)

೧. ಆಚಾರ್ಯರ ಚರಿತ್ರದ ಸಂಗ್ರಹಕ್ಕೆ ಸಾಮಗ್ರಿ

ಗ್ರಂಥವರ್ಗೀಯ ಉದ್ದೇಶ ( ) - ಆಧಾರಗ್ರಂಥಗಳು, ಶಂಕರವಿಜಯಗಳು (೨)– ಮಾಧವೀಯಸಂಕ್ಷೇಪಶಂಕರವಿಜಯ(೩)–ವ್ಯಾಸಾಚಲೀಯ (೪)– ಚಿದ್ವಿಲಾಸೀಯಶಂಕರ ವಿಜಯವಿಲಾಸ (೬)–ಆನಂತಾನಂದಗಿರೀಯ (೯)–ಶಂಕರವಿಜಯಗಳ ಆನುಕ್ರಮದ ತರ್ಕ (೧೨)– ಕಾಂಚೀಪೀಠಸಂಪ್ರದಾಯದ ಗ್ರಂಥಗಳು ( )– ಪುರಾಣಗಳು (೧೪)– ಪರಮತ ದವರ ಗ್ರಂಥಗಳು (೧)– ಸಾಮಗ್ರಿಗಳ ಉಪಯೋಗ (೫).

ಪುಟ ೧–೧೬

೨. ಶಂಕರಾಚಾರ್ಯರ ಆವಿರ್ಭಾವಕಾಲ

ಶಂಕರಾಚಾರ್ಯರು ಅವತಾರಪುರುಷರೆ? (೧೭)– ಶಂಕರಾಚಾರ್ಯರ ಕಾಲ(೧೯)– ಸಾಂಪ್ರದಾಯಿಕಕಾಲನಿರ್ಣಯದ ಉಪಸಂಹಾರ (೨೩)– ಬೃಹದಾರಣ್ಯಕಸೂತ್ರಭಾಷ್ಯಗಳ ಹೋಲಿಕೆ (೨೪)–ಸೂತ್ರಭಾಷ್ಯದ ಕಾಲ (೨೬)–ಭಾಷ್ಯದಲ್ಲಿ ಧರ್ಮಕೀರ್ತಿಯ ಪರಾಮರ್ಶ (೨೮) ದಿಙ್ನಾಗನ ಪರಾಮರ್ಶ (೨೯)– ಗುಣಮತಿಯ ಪರಾಮರ್ಶ (೩೦)– ಭಾಮತೀ ಕಾರನ ಸಾಕ್ಷ್ಯ.

ಪುಟ ೧೭–೪೧

೩. ಆಚಾರ್ಯರ ಜನ್ಮ, ತಂದೆತಾಯಿಗಳು

ಹುಟ್ಟಿದ ಸಂದರ್ಭ (೩೨)– ಆಚಾರ್ಯರ ತಾಯಿ, ತಂದೆ, ಅಜ್ಜ (೩೩)– ಶಂಕರಾಚಾರ್ಯರ ಜನ್ಮವೃತ್ತಾಂತ, ಹೆಸರು (೩೫)–ಆನಂತಾನಂದಗಿರೀಯ ಶಂಕರವಿಜಯ(೩೮)– ಕೂಷ್ಮಾಂಡಶಂಕರವಿಜಯ (೪೨)– ಕೇರಳದ ಐತಿಹ್ಯವೂ ಮಧ್ವವಿಜಯಾದಿಗ್ರಂಥಗಳೂ (೪೩)– ಬದರಿಯ ಸಾಕ್ಷ್ಯ (೪೫)–ಕೇಳೀಯರ ವಿಲಕ್ಷಣಾಚಾರ (೪೫).

ಪುಟ ೪೨–೫೦

೪. ಬಾಲ್ಯ, ವಿದ್ಯಾಭ್ಯಾಸ, ಆತುರಸಂನ್ಯಾಸ

ಚುರುಕುಬುದ್ಧಿಯ ಮಗು (೫೧)– ಉಪನಯನ [೫೧]–ವಿದ್ಯಾಭ್ಯಾಸದಲ್ಲಿ ಮುನ್ನಡೆ (೫೩)– ಶಂಕರಾಚಾರ್ಯರಿಗೆ ಬಾಲ್ಯದಲ್ಲೇ ಉತ್ಕೃಷ್ಟಜ್ಞಾನವುಂಟಾದದ್ದು (೫೬)– ಬಾಲ್ಯದಲ್ಲಿ ಆಚಾರ್ಯರು ಪ್ರದರ್ಶಿಸಿದ ಅದ್ಭುತಗಳು (೫೭)– ಅಗಸ್ತ್ಯರು ಶಂಕರರ ಆಯುಃಸ್ಸನ್ನು ಹೇಳಿದ್ದು (೬೦)- ಆತುರಸಂನ್ಯಾಸದ ಸಂದರ್ಭ (೬೨)– ಸಂನ್ಯಾಸಾಶ್ರಮದ ವಿಷಯಕ್ಕೆ ಶಂಕಾಸಮಾಧಾನಗಳು (೬೪).

ಪುಟ ೫೧–೬೬

೫. ಗೋವಿಂದಭಗವತ್ಪಾದರಲ್ಲಿ ವೇದಾಂತಾಭ್ಯಾಸ

ಶಂಕರರು ತಾಯಿಗೆ ಕೊಟ್ಟ ವಾಗ್ದಾನ (೬೭)– ಕೃಷ್ಣಮೂರ್ತಿಯ ಪುನಃಪ್ರತಿಷ್ಠೆ

ಆಚಾರ್ಯರು ಮನೆಯಿಂದ ಹೊರಟದ್ದು (೬೮). ಶಂಕರರು ಗೋವಿಂದಭಗವತ್ಪಾದರನ್ನು ಕಂಡು ಸ್ತುತಿಸಿದ್ದು (೬೪)- ಗೋವಿಂದಭಗವತ್ಪಾದರಿಗೆ ಚಂದ್ರನೆಂದು ಹೆಸರು (೬೫)- ಗೋವಿಂದಭಗವತ್ಪಾದರಿಗೆ ಜಯಗೋವಿಂದರೆಂಬ ಹೆಸರು (೬೨)- ಗೋವಿಂದಭಗವತ್ಪಾದರ ವಿಷಯಕ್ಕೆ ಕಲ್ಪನಾಕಥೆಗಳು(೬೩)- ಗೋವಿಂದಭಗವತ್ಪಾದರಿಗೂ ಶಂಕರರಿಗೂ ಆದ ಸಂಭಾಷಣೆ (೬೬)- ಆಚಾರ್ಯರ ಸಂನ್ಯಾಸಸ್ವೀಕಾರ (೬೮)- ಆಚಾರ್ಯರ ಸಂನ್ಯಾಸದ ಬಗ್ಗೆ ವಿಚಾರ (೬೯)- ಮಹಾವಾಕ್ಯಗಳ ಬಗ್ಗೆ ವಿಮರ್ಶೆ (೮೧)- ಗೋವಿಂದಭಗವತ್ಪಾದರೂ ಗುರುಪರಂಪರೆಯಲ್ಲಿ ತೆಡಕು [೮೨]- ಶಂಕರಾಚಾರ್ಯರು ಗುರುಗಳಲ್ಲಿ ಯೋಗಾಭ್ಯಾಸವನ್ನು ಮಾಡಿದರೆ ? [೮೩]- ಗೋವಿಂದಭಗವತ್ಪಾದರು ಉಪದೇಶಿಸಿದ ವೇದಾಂತಪ್ರಕ್ರಿಯೆ ಯಾವುದು ? [೮೪]- ಗುರುಗಳಿಂದ ಶಂಕರರಿಗೆ ಭಾಷ್ಯರಚನೆಗೆ ಆಜ್ಞೆ [೮೬]- ಚಂದ್ರಮೌಳೀಶ್ವರಲಿಂಗದ ವಿಚಾರ [೮೮]- ಮಣಿಮಂಜಗಿಯಲ್ಲಿರುವ ವೃತ್ತಾಂತ [೯೧],

ಪುಟ ೬೭-೯೨

೬. ಭಾಷ್ಯಾದಿಗಳ ನಿರ್ಮಾಣ

ಆಚಾರ್ಯರು ಗುರುಗಳಲ್ಲಿಂದ ನೇರವಾಗಿ ಕಾಶಿಗೆ ಹೋದರೆ ? (೯೩)- ಪದ್ಮಪಾದನೆಂಬ ಶಿಷ್ಯನ ಸ್ವೀಕಾರ (೯೩)- ಅಂತ್ಯಜನ ವೇಷದಿಂದ ವಿಶ್ವೇಶ್ವರನ ದರ್ಶನ (೯೪)- ಮುನೀಶ್ವರಪಂಚಕದಲ್ಲಿ ಜಾತಿಭೇದನಿರಾಸವಾದವಿದೆಯೆ ? (೯೭)- ಆಚಾರ್ಯರ ಭಾಷ್ಯದ ಗುರಿಯೇನು ? (೯೯) ಬದರೀಪ್ರಯಾಣ (೧೦೦) ಪಾಶುಪತಮತಖಂಡನ (೧೦೨) ಕಾಶೀಪಟ್ಟಣದ ಪರಾಮರ್ಶ (೧೦೩) ವ್ಯಾಸಸಂದರ್ಶನ (೧೦೪).

ಪುಟ ೯೩-೧೦೦

೭. ಆಚಾರ್ಯ-ಕುಮಾರಿಲಸಮಾಗಮ

ಶಿವಪಾಷಂಡಿಪರಾಭವ (೧೦೦)- ಭಟ್ಟರನ್ನು ಕಂಡದ್ದು (೧೦೧)- ಕುಮಾರಿಲರು ಉತ್ತರದೇಶದವರೆ ? (೧೦೨)- ಆಚಾರ್ಯರಿಗೆ ಭಟ್ಟಪಾದರ ಸುದ್ದಿ ತಿಳಿದದ್ದು ಎಲ್ಲಿ ? (೧೦೫)- ಭಟ್ಟರು ಮಾಡಿದ ಯಾವ ಪಾಪಕ್ಕೆ ಪ್ರಾಯಶ್ಚಿತ್ತ ? (೧೦೬)- ಭಟ್ಟರು ಬೌದ್ಧರನ್ನು ಕೊಲ್ಲಿಸಿದರೆ ? (೧೦೮)- ಆಚಾರ್ಯರು ಭಟ್ಟರನ್ನು ಯಾವ ಸ್ಥಿತಿಯಲ್ಲಿ ಕಂಡರು ? (೧೨೦)- ಭಟ್ಟರಿಗೆ ಪ್ರಾಯಶ್ಚಿತ್ತವಾದದ್ದು ಎಲ್ಲಿ ? (೧೨೦)- ಆಚಾರ್ಯರಿಗೂ ಭಟ್ಟರಿಗೂ ನಿಜವಾಗಿ ಸಮಾಗಮವಾಯಿತೆ ? (೧೨೧),

ಪುಟ ೧೧೦-೧೨೩

೮. ಮಂಡನಪ್ರಕರಣವಿಮರ್ಶೆ

ಭಟ್ಟರು ಆಚಾರ್ಯರಿಗೆ ಏನು ಹೇಳಿದರು ? (೧೨೪)- ಮಂಡನವಿಶ್ವರೂಪೈಕ್ಯ ವಿಚಾರ (೧೨೬)- ಮಂಡನನೇ ಸುರೇಶ್ವರಾಚಾರ್ಯರೆಂಬ ಬಗ್ಗೆ ವಿವಾದ (೧೩೦)- ಮಂಡನಸುರೇಶ್ವರೈಕ್ಯವಿಷಯಕ್ಕೆ ಈ ಗ್ರಂಥಕರ್ತರ ಅಭಿಪ್ರಾಯ (೧೩೪)- ಮಂಡನನೇ ಉಂಬೇಕನೆ ? (೧೩೬)- ಮಂಡನಮಿಶ್ರನಿದ್ದ ಸ್ಥಲದ ವಿಷಯಕ್ಕೆ ತರ್ಕಜಾಲ (೧೩೭)- ಮಂಡನನ ಭಾರ್ಯೆ ಯಾರು ? (೧೩೯).

ಪುಟ ೧೨೪-೧೪೦

೯. ಮಂಡನನೊಡನೆ ವಾದ

ಮಂಡನನ ಗೃಹ (೧೪೯)- ಮಂಡನನ ಮನೆಗೆ ಆಚಾರ್ಯರು ಬಂದ ದಿನ ಮತ್ತು ಪ್ರವೇಶಿಸಿದ ರೀತಿ (೧೪೩)- ಶಂಕರಾಚಾರ್ಯರು ಅನಿರೀಕ್ಷಿತವಾಗಿ ಬಂದಾಗ ಆದದ್ದೆಂಬ ಪ್ರಥಮಸಂಭಾಷಣೆ (೧೪೫)- ಮಂಡನನು ವಾದಕ್ಕೆ ಒಪ್ಪಿಗೆಯನ್ನಿತ್ತದ್ದು (೧೪೮)- ಆಚಾರ್ಯರ ಮತ್ತು ಮಂಡನನ ಪ್ರತಿಜ್ಞಾವಾಕ್ಯಗಳು (೧೫೧)- ಮಂಡನನೊಡನೆ ಆದ ವಾದ: ಮಾಧವೀಯದಂತೆ (೧೫೩)- ಮಂಡನನೊಡನೆ ವಾದ : ಚಿದ್ವಿಲಾಸೀಯದಂತೆ (೧೬೩)- ಮಂಡನ ವಾದದ ಪ್ರಾಮುಖ್ಯ (೧೬೫)- ಸಂನ್ಯಾಸವಿಷಯಕ್ಕೆ ಆಚಾರ್ಯರ ಅಭಿಪ್ರಾಯ (೧೬೮)- ಸಂನ್ಯಾಸವು ಕಲಿವರ್ಜ್ಯವೆ ? (೧೭೦)– ಜೈಮಿನಿಯ ಮತವು ಆಚಾರ್ಯರ ಸಿದ್ಧಾಂತಕ್ಕೆ ವಿರುದ್ಧವಲ್ಲ (೧೭೧)- ಮಂಡನನು ಆಚಾರ್ಯರ ಶಿಷ್ಯನಾದದ್ದು (೧೭೪).

ಪುಟ ೧೪೧-೧೭೬

೧೦. ಉಭಯಭಾರತಿಯೊಡನೆ ವಾದ

ಶಂಕರಮಂಡನವಾದವು ಎಷ್ಟುದಿನಗಳಿಂದಮೇಲೆ ಹೇಗೆ ಮುಗಿಯಿತು (೧೭೭)(ಉಭಯಭಾರತಿಯೊಡನೆ ಆದ ವಾದದ ಒಗಟುಗಳು (೧೪೦)- ಉಭಯಭಾರತೀವಾದದ ವಿಮರ್ಶೆ (೧೪೨)- ಭಾರತಿಯು ಕಾಮುಶಾಸ್ತ್ರವಿಷಯವಾಗಿ ಕೇಳಿದ್ದು (೧೯೬)- ಪರಕಾಯಪ್ರವೇಶ (೧೪೪)- ಪರಕಾಯಪ್ರವೇಶದ ಕಥೆಯ ವಿಮರ್ಶೆ (೧೯೦)- ಪದ್ಮಪಾದರಿಗೂ ಆಚಾರ್ಯರಿಗೂ ಆದ ಸಂಭಾಷಣೆಯ ವಿಮರ್ಶೆ (೧೯೧)- ಅಮರುಕಕಾವ್ಯರಚನೆ (೧೯೪)- ಆಚಾರ್ಯರನ್ನು ಶಿಷ್ಯರು ಗಾನಮೂಲಕವಾಗಿ ಎಚ್ಚರಿಸಿದ್ದು (೧೯೫)- ಕಾಮುಶಾಸ್ತ್ರವನ್ನು ಕಲಿತ ಬಳಿಕ ಆಚಾರ್ಯರು ಏನು ಮಾಡಿದರು ? (೧೯೪)– ಆಚಾರ್ಯರು ಬೆಂಕಿಹೊತ್ತಿಕೊಂಡಿದ್ದ ಶರೀರವನ್ನು ಹೊಕ್ಕರೆ ? (೨೦೧)– ನೃಶಿಂಹನು ಆಚಾರ್ಯರನ್ನು ಉರಿಯಿಂದ ಕಾಪಾಡಿದನೆ ? (೨೦೨)– ಆಚಾರ್ಯರು ಶಾರದೆಯನ್ನು ಜಯಿಸಿ ಶೃಂಗೇರಿಗೆ ಕರೆತಂದದ್ದು (೨೦೨). ಐತಿಹಾಸಿಕಭಾರತಿ (೨೦೩).

ಪುಟ ೧೭೭–೨೦೪

೧೧. ಮಂಡನನು ಆಚಾರ್ಯರ ಶಿಷ್ಯನಾದದ್ದು

ಮಂಡನನ ಸಂನ್ಯಾಸ (೨೦೫)– ತತ್ತ್ವಮಸಿವಾಕ್ಯ (೨೦೭)– ತತ್ತ್ವಮಸಿ ವಾಕ್ಯಾರ್ಥ (೨೦೪).

ಪುಟ ೨೦೫–೨೧೦

೧೨. ದಕ್ಷಿಣಕ್ಕೆ ಪ್ರಯಾಣ

ಕಾಪಾಲಿಕತನ್ನು ಜಯಿಸಿದ್ದು (೨೧೧)- ಹಸ್ತಾಮಲಕಲಾಭ (೨೧೩).

ಪುಟ ೨೧೧-೨೧೭

೧೩. ಶೃಂಗೇರಿ

ಆಚಾರ್ಯರು ಶೃಂಗೇರಿಗೆ ಯಾವಾಗ ಏಕೆ ಬಂದರು ? (೨೧೪)- ಶಾರದಾಪ್ರತಿಷ್ಠೆ (೨೨೧)- ಶಾರದಾಮಠಗಳ ಸ್ಥಾಪನೆ (೨೨೨)- ತೋಟಕಾಚಾರ್ಯರ ಶಿಷ್ಯವೃತ್ತಿ (೨೨೫) ತೋಟಕಾಖ್ಯಾನದ ವಿಮರ್ಶೆ ೨೨೩)- ಪದ್ಮಪಾದಾದಿಶಿಷ್ಯರುಗಳಲ್ಲಿ ಸ್ಪರ್ಧೆ (೨೨೯)- ವಾಖ್ಯಾನಪ್ರಸ್ಥಾನಗಳು ಹೊರಟದ್ದು ಹೇಗೆ? (೨೩೧)- ಪಂಚಪಾದಿಕೆಯು ಸುಟ್ಟು ಹೋದ ಕಥೆಯು ಸಂಭಾವನೀಯವೆ ? (೨೩೪).

ಪುಟ ೨೧೪-೨೪೨

೧೪. ಆಚಾರ್ಯರ ಮಾತೃಭಕ್ತಿ

ತಾಯಿಗೆ ಸದ್ಗತಿಯನ್ನು ಕೊಡಿಸಿದ್ದು [೨೪೨]. ಪುಟ ೨೪೨-೨೪೯

೧೫. ಆಚಾರ್ಯರ ದಿಗ್ವಿಜಯ

ಶೃಂಗೇರಿಯಿಂದ ಕಾಂಚಿಗೆ (೨೫೧)– ಕಾಂಚಿಯಿಂದ ಮರಳಿ ಶೃಂಗೇರಿಗೆ (೨೫೨)– ಕಾಂಚಿಯಿಂದ ಉತ್ತರಕ್ಕೆ ಯಾತ್ರೆಯ ನಿರ್ಧಾರ (೨೫೩) ಆಚಾರ್ಯರು ವೇಂಕಟಗಿರಿಗೆ ಹೋದದ್ದು (೨೫೪)– ಕರ್ನಾಟಕದಲ್ಲಿ ಕಾಪಾಲಿಕರನ್ನು ಜಯಿಸಿದ್ದು (೨೫೬)– ಗೋಕರ್ಣದಲ್ಲಿ ನೀಲಕಂಠಾಚಾರ್ಯನನ್ನು ಗೆದ್ದದ್ದು (೨೫೮)– ದ್ವಾರಕೆ, ಉಜ್ಜಯಿನಿ (೨೬೦)– ಬಾಹ್ಲಿಕದಲ್ಲಿ ಅರ್ಹತರ ಮತ್ತು ನೈಮಿಷದಲ್ಲಿ ಇತರರ ಸೋಲು (೨೬೩)– ಕಾಮರೂಪದಲ್ಲಿ ಅಭಿನವಗುಪ್ತ (೨೬೫)– ದಿಗ್ವಿಜಯದ ಉಪಸಂಹಾರ (೨೬೫)– ಷಣ್ಮತಸ್ಥಾಪನೆ (೨೬೭). ಪುಟ ೨೫೦-೨೬೯

೧೬. ಸರ್ವಜ್ಞಪೀಠಾರೋಹಣ, ತಿರೋಧಾನ

ಭಗಂಧರರೋಗಪರಿಹಾರ (೨೭೦)- ಗೌಡಪಾದದರ್ಶನ (೨೭೧)- ಸರ್ವಜ್ಞಪೀಠಾರೋಹಣ (೨೭೫)- ಆಚಾರ್ಯರು ಸ್ವಸ್ಥಾನಕ್ಕೆ ತೆರಳಿದ್ದು (೨೭೭)- ಆಚಾರ್ಯರ ತಿರೋಧಾನಕಾಲ (೨೮೨). ಪುಟ ೨೭೦-೨೮೨

೧೭. ಆಚಾರ್ಯರಿಂದಾಗಿರುವ ಲೋಕೋಪಕಾರ

ಹಿಂದಿನ ಗ್ರಂಥದ ಸಾರ (೨೮೩)- ಆಚಾರ್ಯರೂ ಬೌದ್ಧಮತವೂ (೨೮೫)- ಷಣ್ಮತ ಸ್ಥಾಪನೆ (೨೮೪)- ಮತಸೂಚಕಮುದ್ರಾಧಾರಣನಿಷೇಧ [೨೮೫]- ಶಾಕ್ತಾದಿಮತಗಳ ಸುಧಾರಣೆ [೨೮೯]- ಸಮಾಜಸುಧಾರಣೆ [೨೮೭]- ಆಚಾರ್ಯರ ಮಹಾಕಾರ್ಯಗಳ ಬಗೆಗೆ ಕಲ್ಪನೆ [೨೮೮]. ಪುಟ ೨೮೩-೨೮೪

೧೮. ಆಚಾರ್ಯರ ಮುಖ್ಯಗ್ರಂಥಗಳು

ಭಗವತ್ಪಾದರ ಗ್ರಂಥಗಳಿಗಿರುವ ಪ್ರಧಾನಸ್ಥಾನ [೨೮೯]- ಪ್ರಸ್ಥಾನತ್ರಯಭಾಷ್ಯಗಳು [೨೯೦]- ಬ್ರಹ್ಮಸೂತ್ರಭಾಷ್ಯ [೨೯೨]- ಉಪನಿಷದ್ಭಾಷ್ಯಗಳು [೨೯೩]- ಗೀತಾಭಾಷ್ಯ [೨೯೯]- ಇತರ ಭಾಷ್ಯಗಳು [೩೦೨]- ಸೂತಸಂಹಿತಾದಿಗ್ರಂಥಗಳನ್ನು ಆಚಾರ್ಯರು ನೋಡಿದ್ದರೆ? [೩೦೪]. ಪುಟ ೨೮೯-೩೦೦

೧೯. ಆಚಾರ್ಯರ ಉಪದೇಶ

ಆಚಾರ್ಯರ ಉಪದೇಶದ ನಿರ್ಣಯಕ್ಕೆ ಆಧಾರ [೩೦೬]- ಶಾಂಕರಸಿದ್ಧಾಂತದ ರೂಪರೇಖೆ [೩೦೨]- ಸಾಧನವಿವೇಕ [೩೦೧]- ಸಾಧನಫಲಗಳು [೩೦೩]. ಪುಟ ೩೦೧-೩೦೭

೨೦. ಆಚಾರ್ಯರ ವೇದಾಂತಸಂಪ್ರದಾಯ

ಆಚಾರ್ಯರ ಸಂಪ್ರದಾಯದ ಪೂರ್ವಾಚಾರ್ಯರುಗಳು [೩೦೪]- ದ್ರವಿಡಾಚಾರ್ಯ, ಬ್ರಹ್ಮನಂದಿ, ಉಪವರ್ಷ [೩೦೯]- ಆಚಾರ್ಯರ ಹಿಂದಿನ ಸಂಪ್ರದಾಯಾಂತರದ ವೃತ್ತಿಕಾರರುಗಳು [೩೨೦]. ಪುಟ ೩೦೪-೩೨೧

೨೧. ಅದ್ವೈತವ್ಯಾಖ್ಯಾನಪ್ರಸ್ಥಾನಗಳು

ವಾರ್ತಿಕಪ್ರಸ್ಥಾನ (೩೨೨)- ವಾಕ್ಯಾರ್ಥಜ್ಞಾನದಿಂದಲೇ ಆತ್ಮಜ್ಞಾನ (೩೨೨)-ವಾರ್ತಿಕ ಪ್ರಸ್ಥಾನದಲ್ಲಿ ಅವಿದ್ಯೆ (೩೨೨)- ಪಂಚಕೋಶವಿವೇಕ, ಅವಸ್ಥಾತ್ರಯವಿಮರ್ಶೆ (೩೨೩)- ಮೋಕ್ಷವ್ಯವಾದಖಂಡನೆ (೩೨೪)- ಮೋಕ್ಷಸಾಧನ (೩೨೪)- ವಾರ್ತಿಕಪ್ರಸ್ಥಾನದ ವಿಚಾರದ ಉಪಸಂಹಾರ (೩೨೫)- ಪಂಚಪಾದಿಕಾ ಮತ್ತು ವಿವರಣ- ಇವುಗಳ ಪ್ರಸ್ಥಾನ (೩೨೫)- ವಿವರಣಪ್ರಸ್ಥಾನದ ಮುಖ್ಯವಿಷಯಗಳು (೩೨೯)- ಭಾಮತೀಪ್ರಸ್ಥಾನ (೩೨೮)- ಭಾಮತೀಪ್ರಸ್ಥಾನದ ಮುಖ್ಯವಾದಗಳು (೩೨೮)- ಭಾಮತೀವಿವರಣಪ್ರಸ್ಥಾನಗಳ ವೈಲಕ್ಷಣ್ಯ (೩೨೯)- ವ್ಯಾಖ್ಯಾನಪ್ರಸ್ಥಾನಗಳ ವಿಚಾರದ ಉಪಸಂಹಾರ (೩೩೦).

ಪುಟ ೩೨೨–೩೩೨

೨೨. ಆಚಾರ್ಯಕೃತಪ್ರಕರಣಗಳು

ಪ್ರಕರಣಗಳ ವಿಭಾಗಕರಣ (೩೩೩)- ಕಾರ್ಯಾಲಯದಲ್ಲಿ ಪ್ರಕಟಿತವಾದ ಪ್ರಕರಣಗಳು (೩೩೩)- ಇನ್ನೂ ಪ್ರಕಟವಾಗದಿರುವ ಪ್ರಕರಣಗಳು (೩೩೭)-

ಪುಟ ೩೩೩-೩೩೮

೨೩. ಆಚಾರ್ಯರ ಹೆಸರಿನಲ್ಲಿರುವ ಸ್ತೋತ್ರಗಳು

ಸ್ತೋತ್ರಗಳ ವರ್ಗೀಕರಣ (೩೩೯)- ಸ್ತೋತ್ರಗಳ ವಿಷಯಕ್ಕೆ ವಿದ್ವಾಂಸರ ಅಭಿಪ್ರಾಯ (೩೪೦).

ಪುಟ ೩೩೯-೩೪೧

೨೪. ಶಂಕರಾಚಾರ್ಯರೂ ತಂತ್ರಶಾಸ್ತ್ರವೂ

ಆಚಾರ್ಯರು ತಂತ್ರಶಾಸ್ತ್ರಗ್ರಂಥಗಳನ್ನು ಬರೆದಿದಾರೆಯೆ? (೩೪೨)- ಆಚಾರ್ಯರಿಗೆ ಗೃಹಸ್ಥಶಿಷ್ಯರೂ ಇದ್ದರೆ? (೩೪೩)- ಆಚಾರ್ಯರ ಗುರುಪರಂಪರೆಯಲ್ಲಿ ಶ್ರೀವಿದ್ಯೆ ಇತ್ತೆ? (೩೪೪).

ಪುಟ ೩೪೨-೩೪೬

೨೫. ಆಚಾರ್ಯರು ಸ್ಥಾಪಿಸಿರುವ ಮಠಗಳು

ಮಠವಿಚಾರದಲ್ಲಿರುವ ಕ್ಲೇಶ (೩೪೭)- ಮಠಾಮ್ನಾಯಗಳು (೩೪೭)- ಮಠಾಮ್ನಾಯಗಳ ಸ್ಥಿತಿ (೩೪೮)- ಶೃಂಗೇರೀಮಠದ ಗುರುಪರಂಪರೆ (೩೪೯)- ಶೃಂಗೇರಿಪೀಠದ ಕೆಲವು ಮುಖ್ಯಗುರುಗಳ ಹೆಸರುಗಳು (೩೫೦)- ಕಾಂಚೀಕಾಮಕೋಟಿಪೀಠದ ಗುರುಪರಂಪರೆ (೩೫೬)- ಕಾಮಕೋಟಿಪೀಠದ ಮುಖ್ಯಗುರುಗಳು (೩೫೬)- ದ್ವಾರಕಾ, ಗೋವರ್ಧನ, ಜ್ಯೋತಿರ್ಮಠ- ಮುಂತಾದ ಮಠಗಳು (೩೬೦)- ಮಠಗಳ ವಿಚಾರದ ಉಪಸಂಹಾರ (೩೬೦).

ಪುಟ ೩೪೭-೩೬೦

೨೬. ಉಪಸಂಹಾರ

ಉಪಸಂಹಾರ (೩೬೧).

ಪರಿಶಿಷ್ಟಗಳು

(೧) ಶಂಕರಪರಾಮರ್ಶಕಪುರಾಣಗಳು : ಶಿವರಹಸ್ಯ (೩೬೩)- ಮಾರ್ಕಂಡೇಯಸಂಹಿತಾ (೩೭೯)- ಪುರಾಣಾಂತರವಚನಗಳು (೩೮೬).

ಪುಟ ೩೬೩-೩೮೭

(೨) ಆಚಾರ್ಯರನ್ನು ನಿಂದಿಸುವ ಪುರಾಣಗಳು : ಪದ್ಮಪುರಾಣ (೩೮೪)– ಮಧ್ವಪರಾಮರ್ಶಕಪುರಾಣವಾಕ್ಯಗಳು (೩೮೯)- ಮಧ್ವರಾಮಾನುಜರು ಕಲಿಯ ಆಮಾತ್ಯರಾದ ಕಾಮುಕ್ರೋಧಾಂಶಾವತಾರರೆಂಬ ಕಥೆ (೩೯೦)- ಸಂಸ್ಕೃತಚಂದ್ರಿಕೆ (೩೯೧). ಪುಟ ೩೮೪–೩೯೨

(೩) ಪರಮತದವರೆ ಅಭಿಪ್ರಾಯಗಳು : ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯನಿರ್ಣಯ (೩೯೨)– ಮಣಿಮಂಜರಿ (೩೯೩)- ಥಿಯಸಾಫಿಕಲ್ ಸೊಸೈಟಿಯವರ ಅಭಿಪ್ರಾಯ (೩೯೯). ಪುಟ ೩೯೨-೪೦೨

(೪) ಆಚಾರ್ಯರೆ ಕಾಲನಿರ್ಣಾಯಕರ ವಿವಿಧಾಭಿಪ್ರಾಯಗಳು : ಶಂಕರ ವಿಜಯಗಳು (೪೦೨)- ಅನ್ಯಮತಸ್ಥರ ಗ್ರಂಥಗಳು (೪೦೭)- ಆಧುನಿಕವಿದ್ವಾಂಸರ ಕಲ್ಪನೆಗಳು (೪೦೮). ಪುಟ ೪೦೨-೪೧೨

(೫) ಶಂಕರವಿಜಯಪಾಠಗಳು : ಆನಂದಗಿರಿ (೪೧೨)– ಚಿದ್ವಿಲಾಸೀಯಬೃಹಚ್ಛಂಕರವಿಜಯಗಳು (೪೧೩). ಪುಟ ೪೧೨-೪೧೭

(೬) ಆನಂದಗಿರೀಯ : ಆನಂದಗಿರೀಯದ ಪ್ರಾಚೀನಪಾಠ (೪೧೭)– ಆನಂದಗಿರೀಯದಲ್ಲಿರುವ ಪಾಠಾಂತರಗಳು (೪೧೮). ಪುಟ ೪೧೭-೪೧೯)

(೭) ಕೂಷ್ಮಾಂಡಶಂಕರವಿಜಯ : (೪೧೯). ಪುಟ ೪೧೯–೪೨೩

(೮) ಆಚಾರ್ಯರ ಚರಿತ್ರೆಗೆ ಸಂಬಂಧಪಟ್ಟ ಸ್ತೋತ್ರಾದಿಗಳು : ಕನಕಲಕ್ಷ್ಮೀಸ್ತವ (೪೨೪)- ನಿರ್ವಾಣದಶಕ (೪೨೭)- ಮನೀಷಾಪಂಚಕಮ್ (೪೨೮)-ಲಕ್ಷ್ಮೀನೃಸಿಂಹಕರಾವಲಂಬನಸ್ತೋತ್ರ (೪೩೦)– ಹಸ್ತಾಮಲಕಸ್ತೋತ್ರ (೪೩೨)- ತೋಟಕಪ್ರಕರಣ (೪೩೪)- ಶಿವಭುಜಂಗಪ್ರಯಾತಸ್ತೋತ್ರ (೪೩೬)- ವಿಷ್ಣುಭುಜಂಗಪ್ರಯಾತಸ್ತೋತ್ರ (೪೪೨). ಪುಟ ೪೨೪–೪೪೪

(೯) ಮಠಾಮ್ನಾಯಗಳು, ಗುರುಪರಂಪರೆಯ ಪಟ್ಟಿಗಳು : ಮಠಾಮ್ನಾಯ (೪೪೪)- ಮಠಾಮ್ನಾಯ (೪೪೬)- ಮಠಾಮ್ನಾಯಭಾಗ (೪೫೨)- ಮಠಾಮ್ನಾಯ ಸೇತು (೪೫೨)- ಶೃಂಗೇರೀಪೀಠಗುರುಪರಂಪರೆ (೪೬೫)- ಕಾಂಚೀಮಠದ ಗುರುಪರಂಪರೆ (೪೭೩). ದ್ವಾರಕಾಪೀಠಗುರುಪರಂಪರೆ (೪೮೫)- ಗೋವರ್ಧನಮಠ (೪೯೨)– ಜ್ಯೋತಿರ್ಮಠ (೪೯೫)– ಸುಮೇರು ಮಠ (೪೯೭)- ಉಪಪೀಠಗಳು : ಕೂಡಲಿಯ ಮಠ (೪೯೮). ಶಿವಗಂಗೆಯ ಮಠ (೫೦೫)- ಸಂಕೇಶ್ವರ ಮಠ (೫೦೬)- ಅವನೀಮಠ (೫೧೧)- ಶ್ರೀರಾಮಚಂದ್ರಾಪುರಮಠ (೫೧೧)– ವಿರೂಪಾಕ್ಷಿಮಠ (೫೧೩)- ಪುಷ್ಪಗಿರಿ ಮಠ (೫೧೪)- ಉಪಸಂಹಾರ (೫೧೫). ಪುಟ ೪೪೪–೫೧೬

ಸಹಾಯಕಗ್ರಂಥಗಳು

ಗ್ರಂಥಗಳ ಹೆಸರು ಸಂಕೇತ

ಶಂಕರವಿಜಯಗಳು

೧. (a) ಆನಂತಾನಂದಗಿರೀಯ ಶಂಕರವಿಜಯ ಆ. ಗಿ.
(ನೇ. ವೆಂಕಟಸುಬ್ಬಾಶಾಸ್ತ್ರಿ ಮುದ್ರಿತ–ತೆಲುಗು, ಮದ್ರಾಸ್, ೧೮೬೭)

(b) ಆನಂತಾನಂದಗಿರೀಯ ಶಂಕರವಿಜಯ ದೇ.
(ದೇವನಾಗರೀ–ಕಲ್ಕತ್ತ ಮುದ್ರಣ, 1881)

೨. ಕೇರಳೀಯ ಶಂಕರವಿಜಯ[1] (ನಾವು ನೋಡಿಲ್ಲ)

೩. ಕೂಷ್ಮಾಂಡಶಂಕರವಿಜಯ ಅಥವಾ ಶಂಕರಕಥಾಮೃತಸಾರ ಕೂ. ಶಂ.
(ಎಡತೊರೆಯ ಯೋಗಾನಂದಸ್ವಾಮಿಗಳಿಂದ ಪ್ರಕಟಿಸಲ್ಪಟ್ಟದ್ದು, ಬೆಂಗಳೂರು ಬುಕ್ ಡಿಪೋ ಪ್ರೆಸ್–ಬೆಂಗಳೂರು-1905)

೪. ಚಿದ್ವಿಲಾಸೀಯ ಶಂಕರವಿಜಯವಿಲಾಸ ಚಿ. ಶಂ.
(ವಾವಿಳ್ಳ ರಾಮಸ್ವಾಮಿಶಾಸ್ತ್ರಿ, ಮದ್ರಾಸ್–
ಇವರಿಂದ ಪ್ರಕಾಶಿತ ! ಯುವ. ಸಂ. 1875)

೫. ಮಾಧವೀಯ ಶಂಕರದಿಗ್ವಿಜಯ
('ಸಂಕ್ಷೇಪಶಂಕರವಿಜಯ' ಎಂದೂ ಹೆಸರು ಮಾ. ಶಂ.
(ಆದ್ವೈತರಾಜ್ಯಲಕ್ಷ್ಮೀ ಟೀಕಾಸಹಿತ,
ಆನಂದಾಶ್ರಮ, ಪೂನಾ, 1891ರಲ್ಲಿ ಮುದ್ರಿತ)

೬. ವ್ಯಾಸಾಚಲೀಯ ಶಂಕರವಿಜಯ ವ್ಯಾ. ಶಂ.
(ಕೈಬರಹಪ್ರತಿ, ಓರಿಯಂಟಲ್ ಲೈಬ್ರರಿ. ಮದ್ರಾಸ್-
ಇವರಿಂದ ಪಡೆದದ್ದು)

೭. ಬೃಹಚ್ಛಂಕರವಿಜಯ* (ನಾವು ನೋಡಿಲ್ಲ)

೮. ಪ್ರಾಚೀನಶಂಕರವಿಜಯ* (ನಾವು ನೋಡಿಲ್ಲ)

೯. ಶಂಕರವಿಜಯಚೂರ್ಣಿಕಾ (ನಿರ್ಣಯಸಾಗರ ಮುದ್ರಣ) ಶಂ. ಚೂ.

೧೦. ಭಗವತ್ಪಾದಾಭ್ಯುದಯಮ್ (ಲಕ್ಷ್ಮೀಣಸೂರಿವಿರಚಿತಮ್)
(ವಾಣೀವಿಲಾಸ ಪ್ರೆಸ್-ಶ್ರೀರಂಗ ಮುದ್ರಣ 1927)

1. ಗೋವಿಂದನಾಥಕೃತ 'ಶಂಕರಾಚಾರ್ಯಚರಿತ' ಎಂಬುದು ಈ 'ಕೇರಳೀಯ ಶಂಕರವಿಜಯ'ವಾಗಿರಲಾರದು ಎಂದು ಕೋರುತ್ತದೆ.

* ಇವು ಶುಂಭಕೋಣ ಶಂಕರಮಠದಲ್ಲಿರುವುದಾಗಿ ವಾರ್ತೆ.

ಗ್ರಂಥಗಳ ಹೆಸರು ಸಂಕೇತ

೧೧. ಶಂಕರಮಂದಾರಸೌರಭ (ನೀಲಕಂಠಕೃತ)
(ಅರ್ವಾಚೀನ ಕೈಬರಹಪ್ರತಿ)

೧೨. ಶಂಕರಾಚಾರ್ಯಚರಿತಮ್ (ಗೋವಿನ್ದನಾಥವಿರಚಿತಮ್) ಗೋ.ಶಂ.ಚ.
(ಕೇರಳ ಪಬ್ಲಿಷಿಂಗ್ ಹೌಸ್, 1926)

೧೩. (a) ಶಂಕರಾಭ್ಯುದಯ (ನೀಲಕಂಠಶಾಸ್ತ್ರಿ ಕೃತ 1926)
(b) ಶಂಕರಾಭ್ಯುದಯ (ರಾಜಚೂಡಾಮಣಿಕೃತ ;
ನಾವು ನೋಡಿಲ್ಲ)

೧೪. (a) ಶಂಕರದಿಗ್ವಿಜಯಸಾರ (ಸದಾಶಿವೇನ್ದ್ರಕೃತ)
(b) ಶಂಕರದಿಗ್ವಿಜಯಸಾರ (ಅರ್ವಾಚೀನ)
(ಶ್ರೀನಿವಾಸಕೇದಲಾಯಕೃತ 1959)

೧೫. ಶಂಕರಕಥಾಸುಧಾನಿಧಿ (ಕೈಬರಹಪ್ರತಿ, ರಾಮಶರ್ಮರಚಿತ)

ಸಂಪ್ರದಾಯಗ್ರಂಥಗಳು

೧. ಗುರುರತ್ನಮಾಲಿಕಾ (ಅತ್ಯಬೋಧಕೃತ ಸುಷಮಾವ್ಯಾಖ್ಯಾಸಹಿತ)
(ಕಲಾರತ್ನಾಕರ ಪ್ರೆಸ್, ಮದ್ರಾಸ್ 1896) ಗು. ರ.

೨. ಪುಣ್ಯಶ್ಲೋಕಮಂಜರೀ
(ಮದ್ರಾಸ್ ಕಲಾರತ್ನಾಕರಶಾಲೆ, ಶಾ. ಶ. ೧೮೧೫)

೩. ಶಿವರಹಸ್ಯ ಶಿ. ರ.

೪. ಮಾರ್ಕಣ್ಡೇಯಸಂಹಿತಾ

೫. ಗುರುವಂಶಕಾವ್ಯ (ನಾವು ನೋಡಿಲ್ಲ)

೬. ಗುರುಪರಂಪರಾಸ್ತೋತ್ರಮ್
(ವಾಣೀವಿಲಾಸ ಪ್ರೆಸ್, ಶ್ರೀರಂಗಮ್)

೭. ಮಠಾಮ್ನಾಯಗಳು–ಮಠಾಮ್ನಾಯಸೇತು–
ಮಹಾನುಶಾಸನ
(ಕಾಂಚೀ ಮತ್ತು ದ್ವಾರಕಾಪೀಠದವರ ಪ್ರಕಟನೆಗಳು)

ವಿಮರ್ಶಾತ್ಮಕಗ್ರಂಥಗಳು

1. Sri Shankaracharya and
His Kamakoti Peetham NKVS
(By N·K· Venkateshm Pantulu M·A·)
A· D, 1931

ಗ್ರಂಥಗಳ ಹೆಸರು ಸಂಕೇತ

2. The Throne of Transcendental Wisdom KRTTW
(By K.R. Venkataraman) A.D. 1959)

3 Shankaracharya The Great and His Successors in Kanchi NVSSK
(By N. Venkataraman M.A.) A.D. 1923

4. Sri Sringeri Sharada Mutt
(By Kakarala S. Sundararamaiah) A.D. 1958

5. Shankaracharya His Life & Times CNKS
(By C.N. Krishna Swami Iyer M.A.L.T.)

6. ಶ್ರೀ ಶಂಕರಾಚಾರ್ಯ (ಶ್ರೀ ಬಲದೇವಉಪಾಧ್ಯಾಯ, ಎಂ. ಎ. ಸಾಹಿತ್ಯಾಚಾರ್ಯ)
(ಹಿಂದೀ ಪುಸ್ತಕ) ಕ್ರಿ. 1950 ಬಲ, ಶಂ.

7. ಶಂಕರಚರಿತ್ರಕಾಲವಿಚಾರ
(ಬೆಳ್ಳಾವೆ ಸೋಮನಾಥಯ್ಯನವರು,
ಮುದ್ರಣ ; ಏರಿಷ್ ಪ್ರೆಸ್, ಬೆಂಗಳೂರು 1912)

8. ಜಗದ್ಗುರು ಶ್ರೀಶಂಕರಭಗವತ್ಪಾದಾಚಾರ್ಯಚರಿತ್ರಮು ಶ್ರೀ.ಶಂ.
(ಶ್ರೀಷ್ಮಲೂರು ಕೃಷ್ಣಸ್ವಾಮಯ್ಯಗಾರು, ತೆಲುಗು 1928)

9. ಆಚಾರ್ಯ ಶ್ರೀಮಚ್ಛಂಕರಭಗವತ್ಪೂಜ್ಯಪಾದರು ಕೂ.ಶಂ.
(ಕೂಡಲೀ ಪೀಠಾಧ್ಯಕ್ಷರ ಭಾಷಣ, 1953)

10. ಶಂಕರಾಚಾರ್ಯ ವ ತ್ಯಾಂಚಾ ಸಂಪ್ರದಾಯ (ಮರಾಠಿ) ಮಹಾದೇವ. ರಾಜಾರಾಮಬೋಡಸ್ ಎಂ.ಎ ಎಲ್.ಎಲ್.ಬಿ., 1923
ಬೋ. ಶಂ.

11 ಶ್ರೀಶಾಂಕರಪೀಠತತ್ತ್ವದರ್ಶನಮ್ ಚೌಖಂಬಾ ಸಂಸ್ಕೃತ ಪುಸ್ತಕಾಲಯ ವಾರಣಾಸೀ (1935) ಶಾಂ. ಪೀ. ತ. ದ.

12. ಗಂಗಾದಿತೀರ್ಥವಿಜಯಯಾತ್ರಾ (ಕಾಂಚೀಪೀಠಾಧಿಷ್ಠಾನಾಮ್)
(Viswamitra Press, Calcutta) ಕ್ರಿ. 1934

13. ಹವ್ಯಕಸಮಾಜ ಮತ್ತು ಶ್ರೀಗುರುಮಠದ ಸಂಕ್ಷಿಪ್ತ ಇತಿಹಾಸ ಹ. ಗು. ಇ.
(ರಾಮಚಂದ್ರಾಪುರಮಠ, ತೀರ್ಥಹಳ್ಳಿ) ಕ್ರಿ. ಶ. 1958

ಗ್ರಂಥಗಳ ಹೆಸರು	ಸಂಕೇತ

14. ದ್ವಾರಕಾಜಗದ್ಗುರು ಸಂಸ್ಥಾನದ ಸಂಕ್ಷಿಪ್ತ ಇತಿಹಾಸ (ಕನ್ನಡ) ಕ್ರಿ. ಶ. 1940
15. ಶಾರದಾಪೀಠ ದ್ವಾರಕಾಸಂಸ್ಥಾನದ ಗುರುಪರಂಪರೆ ಕ್ರಿ. ಶ. 1957
16. ಜಗದ್ಗುರುಪಾರಂಪರ್ಯಸ್ತುತಿಃ (ಕೂಡಲೀ ಶೃಂಗೇರೀ ಸಂಸ್ಥಾನಮ್) ಕ್ರಿ. 1946
17. ವಿರೂಪಾಕ್ಷಿ ಪೀಠ ಗುರುಪರಂಪರೆ (ಐಂದ್ರಾವತಿ ಪ್ರೆಸ್, ಕರ್ನೂಲ್ 1931)
18. ಕೂಡಲಿಶೃಂಗೇರಿಮಠೀಯ ಪ್ರಾಚೀನಶಾಸನಲೇಖನಸಂಗ್ರಹ

ಪರಾಮೃಷ್ಟವಾಗಿರುವ ಆಕರಗ್ರಂಥಗಳು

ಬ್ರಹ್ಮಸೂತ್ರಭಾಷ್ಯ (ಆಚಾರ್ಯಭಗವತ್ಪಾದಕೃತ)	ಬ್ರ. ಸೂ. ಭಾ
ಗೀತಾಭಾಷ್ಯ (,,)	ಗೀ. ಭಾ
ತೈತ್ತಿರೀಯೋಪನಿಷದ್ಭಾಷ್ಯ ,,	ತೈ. ಭಾ
ಬೃಹದಾರಣ್ಯಕೋಪನಿಷದ್ಭಾಷ್ಯ ,,	ಬೃ. ಭಾ
ಛಾಂದೋಗ್ಯೋಪನಿಷದ್ಭಾಷ್ಯ (ಆಚಾರ್ಯಭಗವತ್ಪಾದಕೃತ)	ಛಾಂ. ಭಾ
ಮುಂಡಕೋಪನಿಷದ್ಭಾಷ್ಯ ,,	ಮುಂ. ಭಾ
ಕಾಠಕೋಪನಿಷದ್ಭಾಷ್ಯ ,,	ಕಾ. ಭಾ
ಗೌಡಪಾದಕಾರಿಕಾ (ಮಾಂಡೂಕ್ಯಕಾರಿಕಾ)ಭಾಷ್ಯ ,,	ಗೌ. ಕಾ. ಭಾ
ಬಾದರಾಯಣಕೃತ ವೇದಾಂತಸೂತ್ರಗಳು	ವೇ. ಸೂ
ಶ್ರೀಮದ್ಭಾಗವತ	ಭಾಗ
ನೈಷ್ಕರ್ಮ್ಯಸಿದ್ಧಿ (ಸುರೇಶ್ವರಾಚಾರ್ಯಕೃತ)	ನೈ. ಸಿ
ಬೃಹದಾರಣ್ಯಕವಾರ್ತಿಕ ,,	ಬೃ. ವಾ
ಉಪದೇಶಸಾಹಸ್ರಿ (ಗದ್ಯ)	ಉಪ
ಶ್ಲೋಕವಾರ್ತಿಕ	ಶ್ಲೋ. ವಾ
ತಂತ್ರವಾರ್ತಿಕ	ತಂ. ವಾ
ಪ್ರಮಾಣವಾರ್ತಿಕಭಾಷ್ಯ (ಧರ್ಮಕೀರ್ತಿಕೃತ)	ಪ್ರ. ವಾ. ಭಾ
ರಾಮತೀರ್ಥವ್ಯಾಖ್ಯಾ (ದಕ್ಷಿಣಾಮೂರ್ತಿಸ್ತೋತ್ರಕ್ಕೆ)	ರಾ. ತೀ
ಬ್ರಹ್ಮಸಿದ್ಧಿ (ಮಂಡನಮಿಶ್ರವಿರಚಿತ)	ಬ್ರ. ಸಿ
ನಿರ್ಣಯಸಿಂಧು	ನಿ. ಸಿಂ.

ಗ್ರಂಥಗಳ ಹೆಸರು	ಸಂಕೇತ
ಜೈಮಿನೀಯಸೂತ್ರ	ಜೈ. ಸೂ.
ತೈತ್ತಿರೀಯಬ್ರಾಹ್ಮಣ	ತೈ. ಬ್ರಾ.
ಪಂಚಪಾದಿಕಾ–ವಿವರಣವ್ಯಾಖ್ಯಾಸಹಿತ	ಪೋ. ಪಂ. ಪಾ.
(ಪೋಲಗಂ ಶ್ರೀರಾಮಶಾಸ್ತ್ರಿಗಳು ಸಂವಾದಿಸಿರುವದು)	
ಕಲ್ಪತರುವ್ಯಾಖ್ಯಾನ–ಪರಿಮಳವ್ಯಾಖ್ಯಾನ	ಕ. ತ. ಪ.
ವಿವರಣವ್ಯಾಖ್ಯಾನ (ಪುಟ)	ವಿ. ಪು.

ಇತರಗ್ರಂಥಗಳು

ಮಣಿಮಂಜರಿ	
ಮಣಿಮಂಜರೀಭೇದಿನೀ	ಮಣಿ. ಭೇ.
ಪ್ರಭಾತ (ವಾರಪತ್ರಿಕೆ, ಮಂಗಳೂರು)	
Gowdeswar Gnanottama Shivacharya (By G. Srinivasa Iyer)	GGS
The Kumbakonam Mutt Claims (R. Krishna Swamy Iyer 1959)	KMC

ಸೂಚನೆ :– ಈ ಪುಸ್ತಕದಲ್ಲಿ ಆಧಾರಗ್ರಂಥಗಳಾಗಿ ಉಪಯೋಗಿಸಿರುವ ಗ್ರಂಥಗಳಿಗೆಲ್ಲ ಸಂಕೇತಗಳನ್ನು ಅಲ್ಲಲ್ಲಿ ಕೊಟ್ಟಿರುತ್ತೇವೆ.

॥ ಶ್ರೀ ಗುರುಭ್ಯೋ ನಮಃ ॥

ಶ್ರೀಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವ

ಓಂ ನಮೋ ನಾರಾಯಣಾಯ, ನಮೋ ಬಾದರಾಯಣಾಯ,
ನಮಃ ಶಂಕರಾಯ

—೦—

೧. ಆಚಾರ್ಯರ ಚರಿತ್ರದ ಸಂಗ್ರಹಕ್ಕೆ ಸಾಮಗ್ರಿ

ಗ್ರಂಥರಚನೆಯ ಉದ್ದೇಶ

೧. ಶ್ರೀಮಚ್ಛಂಕರಭಗವತ್ಪಾದರವರ ಚರಿತ್ರೆ, ಅವರಿಂದಾಗಿರುವ ಲೋಕೋಪಕಾರ, ಅವರು ಬರೆದಿರುವ ಗ್ರಂಥಗಳು, ಅವರ ಉಪದೇಶಗಳು– ಮುಂತಾದವುಗಳ ನಿಜವನ್ನು ಅರಿತುಕೊಳ್ಳಬೇಕೆನ್ನುವವರು ಆ ಆಚಾರ್ಯವರ್ಯರ ವಿಷಯಕ್ಕೆ ರಚಿತವಾಗಿರುವ ಕಾವ್ಯಗಳಲ್ಲಿ ಕಾಣಬರುವ ವಿವಿಧಕಲ್ಪನೆಗಳ ಮತ್ತು ಆಧುನಿಕ ವುರಾತತ್ತ್ವವಿಮರ್ಶಕರ ಊಹಾಪೋಹಗಳ ಚಕ್ರಭೀಮನಕೋಟೆಯೊಳಗಿಂದ ಹೇಗೋ ಹೊರಕ್ಕೆ ಬಂದು ತಮತಮಗೆ ಮಾನ್ಯವೆಂದು ತೋರುವ ತೀರ್ಮಾನಗಳಿಂದಲೇ ತೃಪ್ತರಾಗಬೇಕಾಗಿದೆ– ಎಂಬುದೊಂದು ವಿಷಾದಕರವಾದ ಸತ್ಯವು. ಆದರೂ ಈ ದುರ್ಘಟಕಾರ್ಯದಲ್ಲಿ ತೊಡಗಿರುವವರ ವಿಚಾರಘರ್ಷಣೆಯು ಈಗ ಎಲ್ಲಿಯವರೆಗೆ ಬಂದು ನಿಂತಿದೆ ? ಇದೇ ವಿಷಯದಲ್ಲಿ ಇನ್ನೂ ತೃಪ್ತಿಕರವಾದ ತೀರ್ಮಾನಗಳನ್ನು ಮಾಡಿಕೊಳ್ಳುವ ವಿಮರ್ಶೆಗೆ ಅವಕಾಶವಿದೆಯೆ ?– ಎಂದು ಕೇಳುವವರ ಕುತೂಹಲನಿವೃತ್ತಿಗಾಗಿ ಈ ಗ್ರಂಥರಚನೆಯ ಪ್ರಯತ್ನವನ್ನು ನಾವು ಮಾಡಿರುತ್ತೇವೆ.

ಈವರೆಗೆ ಆಚಾರ್ಯರ ವಿಷಯದಲ್ಲಿ ಪ್ರಕಾಶಕ್ಕೆ ಬಂದಿರುವ ಗ್ರಂಥಗಳಲ್ಲಿ ಅಯಾ ಶಂಕರಪೀಠಗಳ ಸಂಪ್ರದಾಯಕ್ಕೆ ಒಪ್ಪಾಗಿರುವಂತೆ ವಿಷಯಗಳನ್ನು ಸಂಗ್ರಹಿಸಿ ಬರೆದಿರುವ ಚರಿತ್ರೆಗಳೂ ವಿಮರ್ಶನಗ್ರಂಥಗಳೂ ಒಂದು ಪಂಗಡ; ಈ ಗ್ರಂಥಗಳನ್ನು ಉಪಯೋಗಿಸಿಕೊಂಡು ಯಾವದೊಂದು ಸಂಪ್ರದಾಯದ ಅಭಿಮಾನವನ್ನೂ ತಾಳದೆ ಐತಿಹಾಸಿಕದೃಷ್ಟಿಯಿಂದ ನಿಜವನ್ನು ಊಹಿಸಿ ತಮ್ಮ ತೀರ್ಪನ್ನು ಬರೆದಿರುವ ಗ್ರಂಥಗಳು ಇನ್ನೊಂದು ಪಂಗಡ. ನಿಷ್ಪಕ್ಷಪಾತದಿಂದ ನಿಜವನ್ನರಿತುಕೊಳ್ಳಬೇಕೆನ್ನುವವರಿಗೆ ಈ ಎರಡನೆಯ ವಂಗಡದವರ ಗ್ರಂಥಗಳಿಂದಲೇ ಹೆಚ್ಚು ಪ್ರಯೋಜನವೆಂಬುದರಲ್ಲಿ ಸಂಶಯವಿಲ್ಲ. ಆದರೆ ಇಂಥ ತೀರ್ಪುಗಳನ್ನು ನ್ಯಾಯಾಲಯದವರು ತಮಗೆ ಸಿಕ್ಕಿರುವ ಸಾಕ್ಷಿಗಳ ಅಭಿಪ್ರಾಯದಿಂದಲೇ ಸಿದ್ಧಾಂತಕ್ಕೆ ಬರುವಂತೆ ಗ್ರಂಥಕಾರರ ಬಹುಮತದಿಂದಮಾತ್ರವೇ ರೂಪಿಸಿಕೊಳ್ಳು

ವದು ಅಷ್ಟು ಸಮಂಜಸವೆಂದು ನಮಗೆ ಕಾಣುವದಿಲ್ಲ. ಆಚಾರ್ಯರ ವಿಷಯಕ್ಕೆ ಬರೆದಿರುವ ಶಂಕರವಿಜಯಗಳನ್ನೂ ಇತರ ಐತಿಹಾಸಿಕಸಾಮಗ್ರಿಗಳನ್ನೂ ತುಲನಾತ್ಮಕದೃಷ್ಟಿಯಿಂದ ಉಪಯೋಗಿಸಿಕೊಳ್ಳುವದೇ ಅಲ್ಲದೆ ಆಚಾರ್ಯರ ಗ್ರಂಥಗಳಿಂದು ನಿಃಸಂದಿಗ್ಧವಾಗಿ ಗೊತ್ತಾಗಿರುವ ಕೃತಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ಅವುಗಳಿಗೆ ಅವಿರುದ್ಧವಾಗಿಯೇ ಇತರಸಾಮಗ್ರಿಗಳನ್ನೂ ಅಂಗೀಕರಿಸುವದು ಹೆಚ್ಚು ತೃಪ್ತಿಕರವಾದೀತೆಂದು ನಮ್ಮ ಭಾವನೆಯಿದೆ. ವೇದಾಂತವಿಚಾರದ ಇತಿಹಾಸವನ್ನು ತಿಳಿಯಬೇಕೆನ್ನುವವರಿಗೆ ಆಚಾರ್ಯರ ಗ್ರಂಥಗಳಂತೆ ಅವರ ಶಿಷ್ಯಪ್ರಶಿಷ್ಯಪರಂಪರೆಯವರ ಗ್ರಂಥಗಳೂ ಅವಶ್ಯವಾಗಿ ಪರೀಕ್ಷಣೀಯಗಳಾಗಿರುವವೆಂಬುದು ಸ್ಪಷ್ಟವೇ ಆಗಿದೆ. ಆದರೆ ಆಚಾರ್ಯರ ಚರಿತ್ರೆಯನ್ನಾಗಲಿ ಅವರ ಉಪದೇಶವನ್ನಾಗಲಿ ಗೊತ್ತುಪಡಿಸುವದಕ್ಕೆ ಹೊರಟಿರುವಾಗ ಅವರ ಮೂಲಗ್ರಂಥಗಳಲ್ಲಿರುವ ಅಭಿವ್ಯಾಯಗಳಿಗೆ ಅಗ್ರಸ್ಥಾನವನ್ನು ಕೊಡುವದು ಅತ್ಯವಶ್ಯವು. ಆದ್ದರಿಂದ ಈ ದೃಷ್ಟಿಯಿಂದಲೇ ನಾವು ಆಚಾರ್ಯರ ಚರಿತ್ರಾದಿಗಳ ಸತ್ಯತೆಯನ್ನು ನಿರ್ಧರಿಸುವದಕ್ಕೆ ಹೊರಟಿರುತ್ತೇವೆ. ಭಗವತ್ಪಾದವಿಷಯಕವಾದ ಮಿಕ್ಕ ಗ್ರಂಥಗಳಿಗೂ ಈ ಗ್ರಂಥಕ್ಕೂ ತುಲನೆಯನ್ನು ಮಾಡುವಾಗ ಈ ವಿಶೇಷವನ್ನು ಮನಸ್ಸಿನಲ್ಲಿಟ್ಟೇ ನಮ್ಮ ಅಭಿಪ್ರಾಯಗಳಿಗೆ ಬೆಲೆಯನ್ನು ಕಟ್ಟಬೇಕೆಂದು ವಾಚಕರನ್ನು ಬೇಡಿಕೊಳ್ಳುತ್ತೇವೆ.

ಆಧಾರಗ್ರಂಥಗಳು, ಶಂಕರವಿಜಯಗಳು

೨. ಚರಿತ್ರೆಯ ವಿಷಯಕ್ಕೆ ಮೂಲಾಧಾರವಾಗಿರುವ ಗ್ರಂಥಗಳೆಂದರೆ **ಶಂಕರವಿಜಯ**ಗಳೆಂಬ ಹೆಸರಿನ ಕಾವ್ಯಗಳು. ಈ ಹೆಸರಿನ ಇಪ್ಪತ್ತೈರಡು ಗ್ರಂಥಗಳನ್ನು ಶ್ರೀಬಲದೇವ ಉಪಾಧ್ಯಾಯರೆಂಬವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುತ್ತಾರೆ. ಅವುಗಳಲ್ಲಿ ಪ್ರಕಟವಾಗದಿರುವವೇ ಬಹಳ ಇವೆ. ನಾವು ಕಣ್ಣಾರೆ ನೋಡಿರುವವು ಇವು ; **ವ್ಯಾಸಾಚಲೀಯ ಶಂಕರವಿಜಯ, ಮಾಧವೀಯ ಸಂಕ್ಷೇಪಶಂಕರಜಯ, ಚಿದ್ವಿಲಾಸೀಯ ಶಂಕರವಿಜಯವಿಲಾಸ, ಅನಂತಾನಂದಗಿರೀಯ ಶಂಕರವಿಜಯ, ಸದಾನಂದವ್ಯಾಸಕೃತ ಶಂಕರದಿಗ್ವಿಜಯಸಾರ** (ಕೈಬರಹ, ಅಪೂರ್ಣ), **ಗುರುರತ್ನಮಾಲಾ–ಸುಷಮಾಸಹಿತ, ಶಂಕರಮಂದಾರಸೌರಭ** (ನೀಲಕಂಠಕೃತ), **ಶಂಕರಕಥಾಸುಧಾನಿಧಿ** (ಕೈಪ್ರತಿ, ರಾಮಶರ್ಮವಿರಚಿತ), **ಶಂಕರಚರಿತ್ರಮ್** (ಶಂಕರವಿಜಯ ಚೂರ್ಣಿಕಾ, ಗುರುನಾಥಕೃತ), **ಶ್ರೀಶಂಕರಾಭ್ಯುದಯ** (ನೀಲಕಂಠಶಾಸ್ತ್ರಿಕೃತ), **ಭಗವತ್ಪಾದಾಭ್ಯುದಯ** (ಲಕ್ಷ್ಮಣಸೂರಿವಿರಚಿತ), **ಶಂಕರದಿಗ್ವಿಜಯಸಾರ** (ಅರ್ವಾಚೀನ, ಶ್ರೀನಿವಾಸಕೇದಲಾಯಕೃತ). ಹೀಗೆ ಶಂಕರವಿಜಯಗಳು ಅನೇಕವಾಗಿದ್ದರೂ ಅವುಗಳಲ್ಲಿ ಯಾವವೂ ಆಚಾರ್ಯರ ಕಾಲದವು

ಗಳಲ್ಲವಾದ್ದರಿಂದ ಅವುಗಳಲ್ಲಿ ವರ್ಣಿತವಾಗಿರುವ ವಿಷಯಗಳಿಗೆ ಐತಿಹಾಸಿಕ ದೃಷ್ಟಿಯಿಂದ ಹೆಚ್ಚಿನ ಬೆಲೆಯೇನೂ ಇಲ್ಲ. ಆದರೂ ಅವನ್ನು ಬಿಟ್ಟರೆ ನಮಗೆ ಮತ್ತೆ ಯಾವ ಮೂಲವೂ ಇಲ್ಲದ್ದರಿಂದ ಅವುಗಳಲ್ಲಿ ಸರ್ವಸಂಮತವಾದ ವಿಷಯ ಗಳನ್ನು ಆರಿಸಿಕೊಂಡು ಯಥಾಯೋಗ್ಯವಾಗಿ ಅವುಗಳಲ್ಲಿ ವಿಶ್ವಾಸವನ್ನಿಡ ಬೇಕಾಗಿರುತ್ತದೆ.

ಮಾಧವೀಯ ಸಂಕ್ಷೇಪಶಂಕರಜಯ

೩. ಶಂಕರವಿಜಯಗಳೆಂದು ಪ್ರಸಿದ್ಧವಾಗಿರುವ ಗ್ರಂಥಗಳ ಕಾಲವನ್ನು ನಿರ್ಣಯಿಸುವದು ಕಷ್ಟವಾಗಿದೆ. ಇವುಗಳಲ್ಲಿ ತಿಳಿಸಿರುವ ಚರಿತ್ರೆಯ ವಿವರ ಗಳನ್ನು ಎಷ್ಟರಮಟ್ಟಿಗೆ ನಂಬಬಹುದೆಂಬುದಕ್ಕೆ ನಮ್ಮ ಅಭಿಪ್ರಾಯವನ್ನು ಆಲ್ಲಲ್ಲಿಯೇ ಕೊಡುತ್ತಾ ಹೋಗುವೆವು. ಈಗ ನಾವು ಕೊಡುವ ಇವುಗಳ ಸಾಮಾನ್ಯವಿವರಗಳನ್ನು ನೆನಪಿನಲ್ಲಿಟ್ಟಿದ್ದರೆ ಮುಂದೆ ನಮ್ಮ ಅಭಿವ್ರಾಯಗಳ ಬೆಲೆಯನ್ನು ಗೊತ್ತುಮಾಡುವದಕ್ಕೆ ವಾಚಕರಿಗೆ ಸಹಾಯವಾದೀತು.

ಮಾಧವೀಯ ಶಂಕರವಿಜಯವೆಂದು ಪ್ರಸಿದ್ಧವಾಗಿರುವ ಗ್ರಂಥಕ್ಕೆ 'ಸಂಕ್ಷೇಪಶಂಕರಜಯ'ವೆಂದೇ ಕವಿಯು ಪ್ರತಿಯೊಂದು ಸರ್ಗದ ಅಂತ್ಯದಲ್ಲಿ ಹೆಸರನ್ನು ಕೊಟ್ಟಿರುತ್ತಾನೆ. ಇದು ಸುಪ್ರಸಿದ್ಧವಿದ್ಯಾರಣ್ಯಸ್ವಾಮಿಗಳವರು ಪೂರ್ವಾಶ್ರಮದಲ್ಲಿ ಮಾಧವಾಚಾರ್ಯನೆಂಬ ಹೆಸರಿನಿಂದ ಬರೆದದ್ದೆಂದು ಬಹು ಜನರ ನಂಬಿಕೆಯಿದೆ. ಆದರೆ ಈ ನಂಬಿಕೆಗೆ ಮುಂಗಲದಲ್ಲಿರುವ ವಿದ್ಯಾತೀರ್ಥರ ಸ್ಮರಣೆಯನ್ನೂ, 'ಇತಿ ಶ್ರೀಮಾಧವೀಯೇ' ಎಂದು ಬರೆದಿರುವ ಸರ್ಗಸಮಾಪ್ತಿ ವಾಕ್ಯವನ್ನೂ ಬಿಟ್ಟರೆ ಮತ್ತೆ ಯಾವ ಆಧಾರವೂ ಇಲ್ಲ. ಇವನ್ನು ಶ್ರೀವಿದ್ಯಾರಣ್ಯರು ಬರೆದಿರಲಾರರೆಂಬುದಕ್ಕೆ ಕಾರಣಗಳಲ್ಲಿ ಕೆಲವನ್ನು ಇಲ್ಲಿ ಕೊಡುವೆವು ;

(1) ಶೃಂಗೇರಿಯಲ್ಲಿ ಪೀಠಾಧ್ಯಕ್ಷರಾಗಿದ್ದ ಶ್ರೀಸಚ್ಚಿದಾನಂದಭಾರತೀಸ್ವಾಮಿಗಳವರ ಆಪ್ಪಣೆಯಂತೆ ('ಸಚ್ಚಿದಾನನ್ದಭಾರತೀನಿರ್ಮಾಪಿತೇ') ಕಾಶೀ ಲಕ್ಷ್ಮಣಶಾಸ್ತ್ರಿಗಳ್ಳು ಬರೆದಿದ್ದೆವೆಂಬ ಗುರುವಂಶಕಾವ್ಯವೆಂಬ ಗ್ರಂಥದಲ್ಲಿರುವ ಶಂಕರಚರಿತ್ರೆಗೂ ಮಾಧವೀಯ ದಲ್ಲಿರುವ ಶಂಕರಚರಿತ್ರೆಯ ವಿವರಗಳಿಗೂ ಹೆಚ್ಚು ಕಡಿಮೆಯಿದೆ. ಗುರುವಂಶಕಾವ್ಯವು ಶೃಂಗೇರಿಯ ಪುಸ್ತಕಭಂಡಾರದಲ್ಲಿಯೇ ದೊರೆತ ಪ್ರತಿಯಿಂದ ಶ್ರೀರಂಗಂ ವಾಣೀವಿಲಾಸ ಮುದ್ರಾಣಾಲಯದಲ್ಲಿ ಅಚ್ಚಾಗಿದೆ. ವಿದ್ಯಾರಣ್ಯರು ಬರೆದ ಚರಿತ್ರೆಯ ವಿವರಕ್ಕೆ ವಿರುದ್ಧವಾಗಿರುವ ವಿಷಯಗಳನ್ನು ಶೃಂಗೇರಿ ಪೀಠದವರು ಬರೆಯಿಸಿದರೆಂಬುದು ವಿಶ್ವಸನೀಯವಾಗಿಲ್ಲ. ಗುರುವಂಶಕಾವ್ಯವು ನಿರ್ಮಿತವಾದಾಗ ಈ ಮಾಧವೀಯಗ್ರಂಥವು ಇನ್ನೂ ಹೊರಕ್ಕೆ ಬಂದಿರಲಿಲ್ಲವೆಂದು ಹೇಳುವದೇ ಯುಕ್ತಿಯುಕ್ತವಾಗಿ ಕಾಣುತ್ತದೆ.

(2) ಗ್ರಂಥಕರ್ತನು 'ಪ್ರೌಢೋಽಯಂ ನವಕಾಲಿದಾಸಕವಿತಾಸಂತಾನಸಂತಾನಕಃ (ಮಾ. ಶಂ. ೧-೯), 'ವಾಗೇಷಾ ನವಕಾಲಿದಾಸವಿದುಷಃ;' (ಮಾ. ಶಂ. ೧-೧೦) ಎಂದು ಎರಡು ಶ್ಲೋಕಗಳಲ್ಲಿ ತನ್ನನ್ನು ನವಕಾಲಿದಾಸನೆಂದು ಹೊಗಳಿಕೊಂಡಿರುತ್ತಾನೆ. ಮಾಧವಾ

ಚಾರ್ಯರಿಗೆ ಈ ಬಿರುದು ಇವ್ವಪ್ಪದಕ್ಕೆ ಆಧಾರವಿಲ್ಲ; ಭಾಗವತಚಂಪುವನ್ನು ಬರೆದ ಮಾಧವನೆಂಬಾತನಿಗೆ ಈ ಬಿರುದು ಇತ್ತು,

(3) ಶಂಕರಾಭ್ಯುದಯವೆಂಬ ಗ್ರಂಥವು ನಾಯಕರಾಜನ ಆಸ್ಥಾನಕವಿಯಾದ ಶ್ರೀರಾಜಚೂಡಾಮಣಿದೀಕ್ಷಿತನು ಬರೆದದ್ದು; ಆ ಕಾವ್ಯದ ನಾಲ್ಕನೆಯ ಸರ್ಗದಲ್ಲಿರುವ ಇಪ್ಪತ್ತೂನಾಲ್ಕು ಶ್ಲೋಕಗಳನ್ನು ಇವ್ವಪ್ಪ ಇದ್ದಹಾಗೆಯೇ ಮಾಧವಕವಿಯು ತನ್ನ ಗ್ರಂಥದ ಹನ್ನೆರಡನೆಯ ಸರ್ಗದ ಆದಿಯಲ್ಲಿ ಸೇರಿಸಿಕೊಂಡಿರುತ್ತಾನೆಂದು ಎನ್. ಕೆ. ವೆಂಕಟೇಶಪುತಲುರವರು (*NKVS. Appendix* 11) ಹೇಳುತ್ತಾರೆ. ಈ ಶಂಕರಾಭ್ಯುದಯಗ್ರಂಥದ ಆರು ಸರ್ಗಗಳು ಪ್ರಕಾಶಿತವಾಗಿರುವದರಿಂದ ಈ ಎರಡು ಕಾವ್ಯಗಳಲ್ಲಿ ಯಾರು ಯಾರಿಂದ ಗ್ರಂಥಚೌರ್ಯವನ್ನು ಮಾಡಿರಬೇಕೆಂಬುದನ್ನು ವಾಚಕರು ಊಹಿಸಬಹುದಾಗಿದೆ. ರಾಜಚೂಡಾಮಣಿಯು ಹದಿನೇಳನೆಯ ಶತಮಾನದವನಾದ್ದರಿಂದ ಅವನ ಶ್ಲೋಕಗಳನ್ನು ತೆಗೆದುಕೊಂಡ ಮಾಧವಾಚಾರ್ಯನು ಅದಕ್ಕಿಂತ ಈಚಿನವನಾಗಿರಬೇಕೆಂದಾಗುತ್ತದೆ; ಏಕೆಂದರೆ ವಿದ್ಯಾರಣ್ಯರು ೧೪ನೆಯ ಶತಮಾನದವರು.

(4) ಗ್ರಂಥಕಾರನು, ಶಂಕರಾಚಾರ್ಯರಿಗಿಂತ ಹಿಂದೆ ಇದ್ದವರೆಂದು ಐತಿಹಾಸಿಕರು ನಿಶ್ಚಯಿಸಿರುವ ಬಾಣಪಂಡಿತಮಯೂರರೊಡನೆಯೂ ಆಚಾರ್ಯರಿಗಿಂತ ಈಚಿನವರೆಂದು ಐತಿಹಾಸಿಕರು ಗೊತ್ತುಪಡಿಸಿರುವ ಶ್ರೀಹರ್ಷ, ಭಟ್ಟಿಭಾಸ್ಕರ, ಉದಯನ– ಇವರೊಡನೆಯೂ ಆಚಾರ್ಯರು ವಾದಮಾಡಿದಂತೆ ವರ್ಣಿಸಿರುತ್ತಾನೆ. ವಿದ್ಯಾರಣ್ಯರಂಥವರು ಹೀಗೆ ಪರಿಗಣಿಸಿದರೆಂದು ನಂಬುವದು ಕಷ್ಟ.

(5) ಮಾಧವಕವಿಯು ಮಂಗಲಶ್ಲೋಕದಲ್ಲಿ 'ಪ್ರಣಮ್ಯ ವರಮಾತ್ಮಾನಂ ಶ್ರೀವಿದ್ಯಾತೀರ್ಥರೂಪಿಣಮ್ ॥ ಪ್ರಾಚೀನಶಂಕರಜಯೇ ಸಾರಃ ಸಂಗೃಹ್ಯತೇ ಸ್ಫುಟಮ್॥ (ಮಾ. ಶ. ೧–೧) 'ವಿದ್ಯಾತೀರ್ಥ'ರೂಪಿಯಾದ ಪರಮಾತ್ಮನನ್ನು ನಮಸ್ಕರಿಸಿ 'ಪ್ರಾಚೀನಶಂಕರಜಯ'ದಲ್ಲಿ ಸಾರವನ್ನು ಸ್ಫುಟವಾಗಿ ಸಂಗ್ರಹಿಸುತ್ತೇನೆ– ಎಂದು ಬರೆದಿರುತ್ತಾನೆ. ತನ್ನ ಗ್ರಂಥದಲ್ಲಿ 'ಶಾಂಕರವಾಕ್ಯಸಾರ'ವನ್ನು ಕಾಣಿರಿ (ಲಘುಸಂಗ್ರಹೇಽಸ್ಮಿನ್ನುದ್ವೀಕ್ಷ್ಯತಾಂ ತಾಜ್ಜರವಾಕ್ಯಸಾರಃ ೧–೨) ಎಂದಿರುತ್ತಾನೆ. ವಿದ್ಯಾತೀರ್ಥರೆಂಬವರು ಶೃಂಗೇರಿಪೀಠದ ಗುರುಪರಂಪರೆಯಲ್ಲಿ ಭಾರತೀತೀರ್ಥರಿಗೂ ವಿದ್ಯಾರಣ್ಯರಿಗೂ ಗುರುಗಳಾದ ವಿದ್ಯಾಶಂಕರರೆಂದು ಕೆ. ಆರ್. ವೆಂಕಟರಾಮನ್ (*KRTTW. p.*29) ಬರೆಯುತ್ತಾರೆ. ಶಂಕರವಿಜಯದ ಕವಿಯು ವಿದ್ಯಾರಣ್ಯರೆಂಬುವರಿಗೆ ವಿದ್ಯಾತೀರ್ಥಸ್ಮರಣೆಯೇ ಆಧಾರವಾಗಿದೆ. ಆದರೆ ವಿದ್ಯಾರಣ್ಯರು ಮಾಧವಾಚಾರ್ಯರಲ್ಲವೆಂದೇ ವೆಂಕಟರಾಮನ್ನರವರು ವಾದಿಸಿರುತ್ತಾರೆ. (*KRTTW. p.* 33). ಅದು ನಿಜವಾದರೆ ಈ ಶಂಕರವಿಜಯವು ವಿದ್ಯಾರಣ್ಯಕೃತವಲ್ಲವೆಂದೇ ಆಗುತ್ತದೆ; ಆದರೆ ಸಾಯಣಮಾಧವರಿಬ್ಬರೂ ವಿದ್ಯಾತೀರ್ಥರ ಶಿಷ್ಯರೆಂಬವರ ಪಕ್ಷದಲ್ಲಿಯೂ ಮಾಧವಗ್ರಂಥಗಳೆಂದು ಪ್ರಸಿದ್ಧವಾಗಿರುವ ಗ್ರಂಥಗಳ ಪಟ್ಟಿಯಲ್ಲಿ ಈ ಶಂಕರವಿಜಯವನು

---

1. ಭಾಗವತಚಂಪುವನ್ನು ಬರೆದಾತನು ತನ್ನ ಹೆಸರು ಮಾಧವನೆಂದು ಹೇಳಿಕೊಂಡಿಲ್ಲವಾದರೂ ಅವನ ಹೆಸರು ಆದೇ ಎಂದು ಶೋಧಕರು ಕೆಲವರು ನಿಶ್ಚಯಿಸಿರುತ್ತಾರೆ. ಆತನು 'ಅಭಿನವಪದಪೂರ್ವಃ ಕಾಳಿದಾಸಃ' (೧–೭). 'ನವಕಾಳಿದಾಸವಿದುಷಶ್ಚಮ್ಪೂಪ್ರಬನ್ಧಾಮೃತೇ'(೧–೧೫೨)ಎಂದು ನವಕಾಳಿದಾಸನೆಂಬ ಬಿರುದನ್ನು ಸೇಳಿಕೊಂಡಿರುತ್ತಾನೆ. ಯಮಕಾನುಪ್ರಾಸಾದಿಗಳಿಂದ ಅವನ ಶೈಲಿಯು ಶಂಕರವಿಜಯಕಾರನ ಶೈಲಿಯನ್ನೇ ಹೋಲುತ್ತಿದೆ.

ಯಾವುದೂ ವಿರೋಧವಿಲ್ಲವೆಂಬುದನ್ನು ನಾವು ಮನಸ್ಸಿಗೆ ತಂದುಕೊಳ್ಳುವದು ಅವಶ್ಯವಿದೆ. ಮಾಧವೀಯಕ್ಕೆ ಡಿಂಡಿಮವ್ಯಾಖ್ಯಾನವನ್ನು ಬರೆದಿರುವ ಧನಪತಿಸೂರಿಯು 'ಶ್ರೀ ವಿದ್ಯಾತೀರ್ಥೋ ಭಗವಾನ್ ಭಾಷ್ಯಕಾರಃ' ಎಂದು ಬರೆದಿರುವದು ಯಾವ ಸಂಪ್ರದಾಯಕ್ಕೂ ಒಪ್ಪಲ್ಪವಾದ್ದರಿಂದ ಅದನ್ನು ನಾವು ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದದ್ದಿಲ್ಲ.

ವ್ಯಾಸಾಚಲೀಯ :

೪. ಮೇಲೆ ಹೇಳಿದ ಶ್ಲೋಕಗಳಲ್ಲಿ ಪರಾಮೃಷ್ಟರಾಗಿರುವ **'ಪ್ರಾಚೀನ ಶಂಕರಜಯ'** ಯಾವದು ? ಕಾಂಚೀಪೀಠಸಂಪ್ರದಾಯಾನುಸಾರಿಗಳಾದ ಆತ್ಮಬೋಧೇಂದ್ರರು **'ಪ್ರಾಚೀನಶಂಕರವಿಜಯ'** ವೆಂಬ ಹೆಸರಿನ ಒಂದು ಗ್ರಂಥದಿಂದ ಕೆಲವುಭಾಗವನ್ನು ತಮ್ಮ ಸುಷಮಾಗ್ರಂಥದಲ್ಲಿ ಅಲ್ಲಲ್ಲಿ ಉದಾಹರಿಸಿರುತ್ತಾರೆ. ಅವರು ಉದಾಹರಿಸಿರುವ ಶಂಕರವಿಜಯದಲ್ಲಿ ಆಚಾರ್ಯರ ಜನ್ಮಕಾಲವನ್ನು ಸ್ಪಷ್ಟವಾಗಿ ವಿವರಿಸಿದೆಯಾದರೂ ಮಾಧವನು[1] ಅದನ್ನು ಕೊಟ್ಟಿಲ್ಲ ; ಅಲ್ಲಿರುವ ಕೆಲವು ವಿವರಕ್ಕೂ ಮಾಧವೀಯದ ವಿವರಕ್ಕೂ ವಿರೋಧವೂ ಇದೆ. ಇದನ್ನು ಮುಂದೆ ಅಲ್ಲಲ್ಲಿ ತೋರಿಸುವೆವು. ಆದ್ದರಿಂದ ಮಾಧವನು ಹೇಳಿರುವ 'ಪ್ರಾಚೀನಶಂಕರಜಯ'ವು ಅದಲ್ಲ.[2]

ಇನ್ನು **ಮಾಧವೀಯದಲ್ಲಿ** ಪರಾಮರ್ಶಿಸಿರುವ 'ವ್ಯಾಸಾಚಲೀಯಶಂಕರವಿಜಯ'ವೆಂಬ ಗ್ರಂಥವೊಂದು ಬೇರೆ ಇದೆ. **ಈ** ಶ್ಲೋಕವನ್ನು ನೋಡಿ :

ನೇತಾ ಯತ್ರೋಲ್ಲಸತಿ ಭಗವತ್ಪಾದಸಂಜ್ಞೋ ಮಹೇಶ:
ಶಾನಿರ್ಯತ್ರ ಪ್ರಕಟತಿ ರಸಃ ಶೇಷವಾನುಜ್ಜ್ವಲಾದ್ಯೈಃ
ಯತ್ರಾವಿದ್ಯಾಕ್ಷತಿರಪಿ ಫಲಂ ತಸ್ಯ ಕಾವ್ಯಸ್ಯ ಕರ್ತಾ
ಧನ್ಯೋ ವ್ಯಾಸಾಚಲಕವಿವರಸ್ತತ್ಕೃತಿಜ್ಞಾಶ್ಚ ಧನ್ಯಾಃ ॥

—(ಮಾ. ಶಂ. ೧–೧೬)

---

1. ಆತ್ಮಬೋಧರು ಬರೆದಿರುವ 'ಸುಷುಮಾ' ಎಂಬ ಗುರುರತ್ನಮಾಲಿಕೆಯ ವ್ಯಾಖ್ಯಾನದಲ್ಲಿ ಮಾಧವಾಚಾರ್ಯರೇ ವಿದ್ಯಾರಣ್ಯರೆಂದು ಪಾದಿಸಿದೆ : 'ಶ್ರೂಯತೇ ಚ ಅಯಮೇವ ಶ್ರೀಶಙ್ಕರಾನನ್ದೇನ್ದ್ರಮುನಿನಾ ದತ್ತವಿದ್ಯಾರಣ್ಯನಾಮಾ ಸಹೈವಾಷ್ಟಭಿಃ ಸಬ್ರಹ್ಮಚಾರಿಭಿಃ ಸಚ್ಚಿದಾನನ್ದಾದಿಭಿರಚೀಕ್ಲೃಪದಷ್ಟೌಮಠಾನಾತ್ಮನಶ್ಚೈಕಮುಧಿತುರ್ಜ್ಞಭದ್ರಮ್ ಅನುವಿರೂಪಾಕ್ಷೇಶ್ವರಮ್ ಅತಿನೇಲಪ್ರಭೃತ್ಯುದ್ಧಮಧ್ವಕದಧ್ವಾದಿವಿಮತಪ್ರಚಾರರೋಧಿನ ಇತಿ' (ಸು. ೭೬). ಶಂಕರಾನಂದರು ಮಾಧವನಿಗೆ ವಿದ್ಯಾರಣ್ಯನೆಂಬ ಹೆಸರನ್ನು ಕೊಟ್ಟರು. ವಿದ್ಯಾರಣ್ಯರು ಇನ್ನೆಂಟು ಸಬ್ರಹ್ಮಚಾರಿಗಳೊಡನೆ ಎಂಟು ಮಠಗಳನ್ನೂ, ತಮ್ಮದಾಗಿ ವಿರೂಪಾಕ್ಷೇಶ್ವರನ ಹತ್ತಿರದಿಂದು ಮಠವನ್ನೂ ಸ್ಥಾಪಿಸಿ ಮಧ್ವಾದಿಮಾವರ್ಗಗಳನ್ನು ಅಡ್ಡಗಟ್ಟಿದರು–ಎಂದರ್ಥ.

2. ಈ ಪ್ರಾಚೀನಶಂಕರವಿಜಯವನ್ನು 'ಮೂಕಶಂಕರ'ರೆಂಬ ಕಾಂಚೀಪೀಠದ ಹದಿನೆಂಟನೆಯ ಅಧ್ಯಕ್ಷರು ಬರೆದರೆಂದು ವೆಂಕಟರಾಮನ್ನರವರ ಹೇಳಿಕೆ (NVSSK. p 73) ಇದಕ್ಕೆ 'ಪ್ರಾಚೀನ'ವೆಂಬ ಹೆಸರನ್ನು ಏಕೆ ಕೊಟ್ಟರೆಂಬುದನ್ನು ಅಲ್ಲಿ ಹೇಳಿಲ್ಲ.

'ಭವಗತ್ಪಾದರೆಂಬ ಹೆಸರಿನ ಮಹೇಶ್ವರನೇ ಯಾವದಕ್ಕೆ ನಾಯಕನೋ, ಯಾವದರಲ್ಲಿ ಶೃಂಗಾರಾದಿಯಾದ ಅಪ್ರಧಾನರಸಗಳಿಂದೊಡಗೂಡಿದ ಶಾಂತರಸವೆ ಪ್ರಧಾನವಾಗಿರುವದೋ, ಯಾವದರಲ್ಲಿ ಅವಿದ್ಯಾನಾಶವೇ ಫಲವೋ ಆ ಕಾವ್ಯದ ಕರ್ತೃವಾವ ವ್ಯಾಸಾಚಲಕವಿಯೇ ಧನ್ಯನು, ಆತನ ಕೃತಿಯನ್ನು ಬಲ್ಲವರೂ ಧನ್ಯರು !'

ಈ ಶ್ಲೋಕದಲ್ಲಿ ಹೇಳಿರುವ 'ವ್ಯಾಸಾಚಲಕವಿಃ' ಎಂಬುದಕ್ಕೆ 'ವ್ಯಾಸ ಇವಾಚಲಃ ಸ್ಥಿರತ್ವಾತ್ಸೌ ಕವಿಶ್ರೇಷ್ಠಶ್ಚ ಇತಿ ವ್ಯಾಸಾಚಲಕವಿವರೋ ಮಾಧವೋ ಧನ್ಯಃ' ವ್ಯಾಸನಂತೆ ಅಚಲನಾಗಿರುವ ಕವಿಶ್ರೇಷ್ಠನಾದ ಮಾಧವನು– ಎಂಬ ಅರ್ಥವನ್ನು ಡಿಂಡಿಮವ್ಯಾಖ್ಯಾನಕಾರನು ಮಾಡಿರುತ್ತಾನೆ. ನವಕಾಳಿದಾಸನೆಂಬ ಆತ್ಮಶ್ಲಾಘನೆಯನ್ನು ಮಾಡಿಕೊಂಡಿರುವ ಮಾಧವನು ತನ್ನನ್ನು ವ್ಯಾಸಾಚಲನೆಂದೂ ಹೇಳಿಕೊಂಡಿರಬಹುದೆಂದು ಕಲ್ಪನೆಮಾಡಬಹುದಾದರೂ 'ವ್ಯಾಸಾಚಲೀಯ'ವೆಂಬ ಗ್ರಂಥವು ಪ್ರತ್ಯಕ್ಷವಾಗಿರುವಾಗ ಹೀಗೆ ವ್ಯಾಖ್ಯಾನಕೌಶಲವನ್ನು ತೋರಿಸಿರುವದು ವಿದ್ಯಾತೀರ್ಥಶಬ್ದದ ವ್ಯಾಖ್ಯಾನದಂತೆಯೇ ಡಿಂಡಿಮಕಾರನಿಗೆ ನಿಜಸ್ಥಿತಿ ಗೊತ್ತಿರಲಿಲ್ಲವೆಂಬುದನ್ನೇ ತೋರಿಸುತ್ತದೆಯೆನ್ನಬೇಕು. ಡಿಂಡಿಮಕಾರನು ಕಾಶಿಯಲ್ಲಿದ್ದ ಪಂಡಿತ ರಾಮಕುಮಾರಜಿ ಎಂಬ ಸಾರಸ್ವತ ಬ್ರಾಹ್ಮಣನ ಪುತ್ರನಂತೆ (ಬಲ. ಶಂ. ಪು. ೧೩). ಆದ್ದರಿಂದ ನಿಜವನ್ನರಿಯದೆ ಅವನು ಹೀಗೆ ವ್ಯಾಖ್ಯಾನಮಾಡಿರಬಹುದು. ಈಚೆಗೆ ವ್ಯಾಸಾಚಲೀಯವು ಮದರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ಅಚ್ಚಾಗಿದೆ ; ಅಲ್ಲಿಂದ ತರಿಸಿಕೊಂಡ ಕೈಬರಹದ ಪ್ರತಿಯೊಂದು ನಮ್ಮಲ್ಲಿದೆ. ಮಾಧವೀಯಕ್ಕೂ ವ್ಯಾಸಾಚಲೀಯಕ್ಕೂ ಸುಮಾರು ಶ್ಲೋಕಗಳಷ್ಟು ಗ್ರಂಥವು ಸಮಾನವಾಗಿರುವದಾಗಿ ತಿಳಿದುಬಂದಿದೆ. ವ್ಯಾಸಾಚಲೀಯವೇ ಇವೆರಡರಲ್ಲಿ ಪೂರ್ವತರವೆಂಬುದಕ್ಕೆ ಸಾಕ್ಷಿಯಾಗಿ ಅಚ್ಚಿನ ವ್ಯಾಸಾಚಲೀಯದಲ್ಲಿ 'ವ್ಯಾಸಾಸಲಪ್ರಮುಖಪಣ್ಡಿತಃ' ಎಂದು ಮುಂತಾಗಿರುವ ಮಾಧವೀಯದ ಒಂದನೆಯ ಸರ್ಗದ ಒಂದು ಶ್ಲೋಕವನ್ನು ಮುದ್ರಿತ ವ್ಯಾಸಾಚಲೀಯದಲ್ಲಿ ಪ್ರಕಾಶಕರು ಉದಾಹರಿಸಿದಾರಂತೆ. ಆದರೆ ಆ ಶ್ಲೋಕವು ತೆಲುಗಿನಲ್ಲಿ ಆಥವಾ ದೇವನಾಗರಿಯಲ್ಲಿ ಅಚ್ಚಾಗಿರುವ ಮಾಧವೀಯದಲ್ಲಿ ಕಂಡುಬರುವದಿಲ್ಲ. ಇದೇ ವಿಷಯದಲ್ಲಿ ವಿಮರ್ಶೆಯನ್ನು ಮಾಡಿರುವ ಬೆಳ್ಳಾವೆ ಸೋಮನಾಥಯ್ಯನವರು (ಸೋ. ಶಂ. ಪು. ೧) ಇನ್ನೆರಡು ಶ್ಲೋಕಗಳನ್ನು ಉದಾಹರಿಸಿರುತ್ತಾರೆ. ಅವು ಒಂದನೆಯ ಸರ್ಗದ ಎರಡು–ಮೂರನೆಯ ಶ್ಲೋಕಗಳಂತೆ :

ಅತ್ಯುನ್ನತಸ್ಯ ಕಾವ್ಯದ್ರೋರ್ವ್ಯಾಸಾದ್ರಿಮುಖಜನ್ಮನಃ ।
ಸಮುದ್ಗಾಣ್ಯರ್ಥಪುಷ್ಪಾಣಿ ಗೃಹೀತುಮುಹಮುತ್ಸಹೇ ॥೨॥

ಹ್ರಸ್ವಧೀಸ್ಫುಣಿನಾ ಯಾವದಾಯಾತ್ತಾವದಾದದತ್ ।
ಸಂಕ್ಷೇಪಶಙ್ಕರಜಯಸ್ರಜಂ ಸಂದರ್ಭಯಾಮ್ಯಹಮ್ ॥ ೩ ॥

'ವ್ಯಾಸಾದ್ರಿಯ ಮುಖದಲ್ಲಿ ಹುಟ್ಟಿದ ಎತ್ತರವಾಗಿರುವ ಕಾವ್ಯವೃಕ್ಷದ ಎಲ್ಲಾ ಅರ್ಘ್ಯರೂಪವಾದ ಹೂಗಳನ್ನೂ ಎತ್ತಿಕೊಳ್ಳುವದಕ್ಕೆ ನಾನು ಅಶಕ್ತನು. ಮೋಟಾಗಿರುವ ಬುದ್ಧಿಯೆಂಬ ದೋಟಿಯಿಂದ ಎಷ್ಟು ಸಿಕ್ಕೀತೋ ಅಷ್ಟನ್ನು ತೆಗೆದು ಕೊಂಡು 'ಸಂಕ್ಷೇಪಶಂಕರಜಯ'ವೆಂಬ ಮಾಲಿಕೆಯನ್ನು ಕಟ್ಟುವೆನು'–ಎಂಬುದು ಶ್ಲೋಕಗಳ ಅರ್ಥ. ಈಗಿನ ಅಚ್ಚಿನ ಪುಸ್ತಕಗಳಲ್ಲಿ ಇವೂ ಹೇಗೋ ಮಾಯವಾಗಿದೆ. ಇದರಂತೆ 'ವ್ಯಾಸಾಚಲಪ್ರಮುಖಪಣ್ಡಿತಃ' ಎಂಬ ಶ್ಲೋಕವೂ ಏತಕ್ಕೆ ಕೈಬಿಟ್ಟುಹೋಗಿರಬಾರದು ? ಆದ್ದರಿಂದ ವ್ಯಾಸಾಚಲಕವಿಯನ್ನು ಮಾಧವನ್ನ ಸ್ಮರಿಸಿರುವದು ನಿಶ್ಚಯವೆಂದಾಯಿತು.

ಈಗ ನಮಗೆ ಸಿಕ್ಕಿರುವ ವ್ಯಾಸಾಚಲೀಯವೇ ಮಾಧವೀಯಕ್ಕೆ ಮೂಲವೆಂಬುದು ಮಾತ್ರ ಇನ್ನೂ ಸಂಶಯಗ್ರಸ್ತವಾಗಿದೆ. ಏಕೆಂದರೆ ಅದರಲ್ಲಿರುವ ಕಥೆಯ ವಿವರಕ್ಕೂ ಮಾಧವೀಯದಲ್ಲಿರುವ ಕಥೆಯ ವಿವರಕ್ಕೂ ಕೆಲವುಕಡೆ ವಿರೋಧವೇ ಇದೆ. ಇದನ್ನು ನಾವು ಮುಂದೆ ಶಂಕರಜೀವನಚರಿತ್ರೆಯನ್ನು ಬರೆಯುವಾಗ ಅಲ್ಲಲ್ಲಿ ತೋರಿಸುತ್ತಾ ಹೋಗುವೆವು. ಮಾಧವನು ಹೊಗಳಿರುವ ವ್ಯಾಸಾಚಲೀಯವು ಪ್ರಕೃತ ಸಿಕ್ಕಿರುವ ವ್ಯಾಸಾಚಲೀಯಕ್ಕಿಂತ ಬೇರೆಯಾಗಿದ್ದಿರಬಹುದೆಂಬುವಕ್ಕೆ ಇಲ್ಲಿ ಒಂದು ಸಂಭಾವನಾಯುಕ್ತಿಯನ್ನು ಮಾತ್ರ ತಿಳಿಸಿದರೆ ಸಾಕಾಗಿದೆ. ಆಚಾರ್ಯರಿಗೆ ಉಪನಯನವನ್ನು ಯಾರು ಮಾಡಿಸಿದರೆಂಬ ವಿಷಯಕ್ಕೆ ಸುತಭೇದವಿದೆ; ಆ ವಿಷಯವನ್ನು ಪ್ರಸ್ತಾಪಿಸುವಾಗ ಆದರ ವಿವರವನ್ನು ಕೊಡುವೆವು. ಮಾಧವಕವಿಯು ಆಚಾರ್ಯರ ತಂದೆಯು ಉಪನಯನವನ್ನು ಮಾಡುವದಕ್ಕಾಗದೆ ಮಗನು ಇನ್ನೂ ಮೂರು ವರ್ಷದವನಾಗಿರುವಾಗಲೇ ಮೃತನಾದನು ಎಂಬರ್ಥದ ಒಂದು ಶ್ಲೋಕವನ್ನು ಬರೆದಿರುತ್ತಾನೆ :

ಶಿವಗುರುಃ ಸ ಜರಂಸ್ತ್ರಿಸವೋ ಶಿತಾ–
ವನುಗತ ಕರ್ಮವಶಃ ಸುತಮೋದಿತಃ ।
ಉಪನಿನೀಷಿತಸೂನುರಪಿ ಸ್ವಯಂ
ನ ಹಿ ಯಮೋಽಸ್ಯ ಕೃತಾಕೃತವಿಾಕ್ಷತೇ ॥ (ಮಾ.ಶಂ. ೪–೧೧)

ಈ ಶ್ಲೋಕವು ವ್ಯಾಸಾಚಲೀಯದ್ದೆಂದು ಆತ್ಮಬೋಧರು ಗುರುರತ್ನ ಮಾಲಿಕೆಯ ೧೮ನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಉದಾಹರಿಸಿರುತ್ತಾರೆ; ಆದರೆ ಈ ನಮ್ಮ ವ್ಯಾಸಾಚಲೀಯದಲ್ಲಿ 'ತಂ ಪಞ್ಚಮಾಬ್ದ ಉಪನೇತು ಮುನಾಃ ಸ ಏವ ಪಞ್ಚತ್ವಮಾಪ ದುರತಿಕ್ರಮಕಾಲ ವಿಷಃ' ॥(ವ್ಯಾ.ಶಂ.

೪–೩೨) ಎಂಬ ಇದೇ ಆರ್ಷದ ಬೇರೊಂದು ಶ್ಲೋಕವಿದೆ. ಆದ್ದರಿಂದ ಇದು ಮಾಧವೀಯಕ್ಕೆ ಮೂಲವಲ್ಲ. ಪ್ರಕಾಶಕ್ಕೆ ಬಂದಿರುವ ವ್ಯಾಸಾಚಲೀಯವು ಅಪೂರ್ಣಸ್ಥಿತಿಯಲ್ಲಿದೆ; ನಮ್ಮಲ್ಲಿರುವ ಕೈಪ್ರತಿಯಲ್ಲಿ ಹನ್ನೊಂದನೆಯ ಸರ್ಗದೊಳಗೆ ೧೧೨ರಿಂದ ೧೩೫ರವರೆಗಿನ ಶ್ಲೋಕಗಳನ್ನು ಆನವಶ್ಯಕವಾದ ಸ್ಥಾನದಲ್ಲಿ –ಅವು ಮಾಧವೀಯಕ್ಕೇ ಸೇರಿದವುಗಳಾಗಿದ್ದರೂ –ಯಾರೋ ತುರುಕಿಸಿದ್ದಾರೆ; ಅವುಗಳಲ್ಲಿ ಪ್ರಕೃತಮಾಧವೀಯಶ್ಲೋಕವೂ ಇದೆ!! ಆದ್ದರಿಂದ ಇದೊಂದು ಕೃತ್ರಿಮಪ್ರತಿ ಎಂಬುದು ಸ್ಪಷ್ಟವಾಗಿದೆ. ಹೀಗಿದ್ದರೂ 'ವ್ಯಾಸಾಚಲ' (೩,೪,೬, ೧೦), 'ವಾಸಶೈಲ' (೨), 'ವ್ಯಾಸಾದ್ರಿ' (೫–೯) ಅಥವಾ 'ವ್ಯಾಸಗಿರಿ' (೧೨) ಪ್ರೋಕ್ತವಾದ ಗ್ರಂಥವಿದೆಂದು ಮತ್ತೆಮತ್ತೆ ಸರ್ಗಗಳ ಕೊನೆಯಲ್ಲಿರುವದರಿಂದ ಮೂ ವ್ಯಾಸಾಚಲೀಯದಿಂದ ಸಂಗ್ರಹಿಸಿದ ಗ್ರಂಥವಾದರೂ ಆಗಿರಬೇಕೆಂಬುದರಲ್ಲಿ ಸಂಶಯವು ಕಾಣಿಸುವದಿಲ್ಲ. **ಗೋವಿಂದನಾಥನು** ಬರೆದಿರುವ ಶಂಕರಾಚಾರ್ಯಚರಿತ (ಕೇರಳೀಯಶಂಕರವಿಜಯ)ದಲ್ಲಿಯೂ ವ್ಯಾಸಾಚಲಕವಿಯು ಪರಾಮರ್ಶವಿರುವದಾಗಿ ವ್ಯಾಸಾಚಲೀಯದ ಪ್ರಕಾಶಕರು ತಿಳಿಸಿರುತ್ತಾರೆ; ಆದ್ದರಿಂದ ಆ ಗ್ರಂಥಕರ್ತೃವಿಗಿಂತ ಹಿಂದೆಯೇ ವ್ಯಾಸಾಚಲೀಯವು ಇದ್ದಿತೆಂದಾಗುತ್ತದೆ. ಆತ್ಮಬೋಧರು ವ್ಯಾಸಾಚಲೀಯದ್ದೆಂದು ಉದಾಹರಿಸಿರುವ ನಾಲ್ಕು ಶ್ಲೋಕಗಳು ಈಗ ಆಚ್ಛಾಗಿರುವ ವ್ಯಾಸಾಚಲೀಯದಲ್ಲಿ ಕಾಣುವದಿಲ್ಲವೆಂದು ತಿಳಿಯಬಂದಿದೆ, ಆತ್ಮಬೋಧರು ಕುಂಭಕೋಣಮಠದ ಪಕ್ಷಪಾತಿಗಳೆಂದು **ಸುಂದರರಾಮಯ್ಯನವರೇ** ಮೊದಲಾದವರು (KSSS. p.21, 27) ಆಭಿಪ್ರಾಯಪಟ್ಟಿರುವದಕ್ಕೆ ಸ್ವಲ್ಪಮಟ್ಟಿಗೆ ಆಧಾರವಿದೆಯಾದರೂ ನಾವು ಉದಾಹರಿಸಿರುವ 'ತಂ ಪಞ್ಚಮಾಬ್ದ ಉಪನೇತುಮನಾಃ' (ವ್ಯಾ. ಶಂ. ೪–೩೨) ಎಂಬ ಶ್ಲೋಕವು ಪಕ್ಷಪಾತಿಗಳ ಶ್ಲೋಕವೆನ್ನುವದಕ್ಕೆ ಬರುವದಿಲ್ಲ; ಆತ್ಮಬೋಧರು ಉದಾಹರಿಸಿರುವ 'ಶಿವಗುರುಃ ಸ ಜರನ್' ಎಂಬ ವ್ಯಾಸಾಚಲೀಯಶ್ಲೋಕವು ತಮ್ಮ ಮತಕ್ಕೆ ವಿರುದ್ಧವೆಂದೇ ಒಪ್ಪಿ ಉದಾಹರಿಸಿದ್ದರಿಂದ ಈ ಸಂದರ್ಭದಲ್ಲಿ ಅವರಮೇಲೆ ಯಾವ ಅಪವಾದವನ್ನೂ ಹೊರಿಸುವದಕ್ಕೆ ಬರುವಂತಿಲ್ಲ. ಈ ಎಲ್ಲಾ ಕಾರಣಗಳಿಂದ **ವ್ಯಾಸಾಚಲೀಯ**ವೆಂಬ ಗ್ರಂಥವೊಂದನ್ನು ಮಾಧವಕವಿ ಪರಾಮರ್ಶಿಸಿರುವನೆಂಬುದು ಖಂಡಿತವೆಂದು ನಿಶ್ಚಯವಾಗುತ್ತದೆ. ಎನ್. ವೆಂಕಟರಾಮನ್‌ರವರು "ಮಹದೇವ (ಚತುರ್ಥ) ಎಂಬ ಕಾಂಚೀಪೀಠಾಧಿಪರು ಪೂರ್ವಾಶ್ರಮದಲ್ಲಿ **ಕುಪ್ಪಣ್ಣ**ನೆಂಬ ಹೆಸರಿನವರು; ಕಾಂಚಿಯಲ್ಲಿದ್ದ ಕಾಮೇಶ್ವರ, ಕಮಲಾಂಬ-ಎಂಬ ದಂಪತಿಗಳ ಮಕ್ಕಳು, ಅವರು ವ್ಯಾಸಾಚಲದಲ್ಲಿ ವಾಸಮಾಡುತ್ತಿದ್ದದ್ದರಿಂದ **ವ್ಯಾಸಾಚಲ**ನೆಂದೂ ಅವರಿಗೆ ಹೆಸರು ಇತ್ತು. ಅವರೇ ವ್ಯಾಸಾಚಲೀಯಗ್ರಂಥಕರ್ತರು' (NVSSK. p.98) ಎಂದು ಬರೆದಿದಾರೆ. ಇದರ ನಿಜವನ್ನು ಗೊತ್ತುಪಡಿಸುವದು ಆವಶ್ಯ.

ಚಿದ್ವಿಲಾಸೀಯ ಶಂಕರವಿಜಯವಿಲಾಸ

೫. ನಮ್ಮಲ್ಲಿರುವ ತೆಲುಗುಪುಸ್ತಕವು 1875ರಲ್ಲಿ ಮದ್ರಾಸು ವಾವಿಳ್ಳ ರಾಮಶಾಸ್ತ್ರಿಗಳಿಂದ ಪ್ರಕಟವಾದದ್ದು. ಇದರಲ್ಲಿ ಚಿದ್ವಿಲಾಸನೆಂಬ ಗುರುವು ವಿಜ್ಞಾನಕಂದನೆಂಬ ಶಿಷ್ಯನಿಗೆ ಹೇಳಿದಂತೆ ಕಥೆಯನ್ನು ಬರೆದಿದೆ. ಮಾಧವೀಯದಲ್ಲಿರುವ ಕಥಾವಿವರಕ್ಕೂ ಇದರಲ್ಲಿರುವ ವಿವರಕ್ಕೂ ಹೆಚ್ಚುಕಡಿಮೆಯಿದೆ. ಇವೆರಡರಲ್ಲಿ ಯಾವದು ಮೊದಲು ರಚಿತವಾಯಿತೋ ಹೇಳುವದಕ್ಕೆ ಬರುವಂತಿಲ್ಲ. ಈ ಗ್ರಂಥಕರ್ತರ ಹೆಸರಿನವರೊಬ್ಬರು ಇಪ್ಪತ್ತೈದನೆಯ ಕಾಂಚೀಪೀಠಾಧಿಪರಾಗಿದ್ದರು. (NVSK. p.77) ಆದರೆ ಆವರೇ ಈ ಶಂಕರವಿಜಯವನ್ನು ಬರೆದವರೋ ಬೇರೊಬ್ಬರೋ ತಿಳಿಯದು. ಇವರು ಆಚಾರ್ಯರ ವಿಷಯಕ್ಕೆ ಕರ್ಮಾನುಷ್ಠಾನದ ವಿವರಗಳನ್ನು ಮಿಕ್ಕವರಿಗಿಂತ ವಿಸ್ತರಿಸಿ ತಿಳಿಸಿರುತ್ತಾರೆ. ಇದನ್ನು ಈ ಗ್ರಂಥದಲ್ಲಿ ಅಲ್ಲಲ್ಲಿ ನಾವು ತಿಳಿಸುತ್ತಾ ಹೋಗುವೆವು.

ಆನಂತಾನಂದಗಿರೀಯ

೬. ಆನಂದಗಿರೀಯವೆಂದು ರೂಢಿಯಾಗಿ ಜನರು ಕರೆಯುತ್ತಿರುವ ಶಂಕರವಿಜಯವು ನಿಜವಾಗಿ ಆನಂತಾನಂದಗಿರಿ ಎಂಬಾತನಿಂದ ರಚಿತವಾದದ್ದು. ಇದರ ತೆಲುಗು ಆಚ್ಚಿನ ಪ್ರತಿಯೊಂದು ನಮ್ಮಲ್ಲಿ ಇರುತ್ತದೆ (ನೇ.ವೆಂಕಟಸುಬ್ಬಾಶಾಸ್ತ್ರಿಮುದ್ರಿತ 1867 ಡಿಸೆಂಬರ್ 10). 'ಈ ಗ್ರಂಥವು ಕೃತಕವೆಂಬುದು ಸ್ಪಷ್ಟ., ಸರ್ವಥಾ ನಿರುಪಯೋಗಿ' (an obvious forgery and quite useless) ಎಂದು ಎನ್. ವೆಂಕಟರಾಮನ್‌ರವರು (NVSK. Appendix) ಬರೆದಿರುತ್ತಾರೆ. ಈ ನಿಷ್ಠುರವಾಕ್ಯನ ವಿಶೇಷಣವು ಗ್ರಂಥಕ್ಕೆ ತಕ್ಕದ್ದೇ ಎಂತ ಕಾಣುತ್ತದೆ. ಏಕೆಂದರೆ ಇತ್ತೀಚಿನ ಎಷ್ಟೋ ವಿಷಯಗಳನ್ನು ಸಂಗ್ರಹಿಸಿರುವ ಈ ಗ್ರಂಥಕರ್ತನು 'ಆನನ್ತಾನನ್ದಗಿರಿರಹಮ್ ಅಪ್ರತಿಹತಾಜ್ಞಸ್ಯ ಭಗವತಃ ಶಿಷ್ಯಃ ಸ್ವಗುರೋರವತಾರಪ್ರಯೋಜನಂ ವರ್ಣಯಾಮಿ' (ಆ. ಶಂ. ಪು. ೧) ಅಪ್ರತಿಹತಾಜ್ಞರಾದ ಭಗವಂತರ ಶಿಷ್ಯನಾದ ಆನಂತಾನಂದಗಿರಿಯೆಂಬ ನಾನು ನನ್ನ ಗುರುವಿನ ಅವತಾರಪ್ರಯೋಜನವನ್ನು ವರ್ಣಿಸುತ್ತೇನೆ– ಎಂದು ಗ್ರಂಥದ ಆದಿಯಲ್ಲಿಯೂ 'ಜಯತು ಸಕಲಲೋಕೈಃ ಸೇವ್ಯಮಾನೋ ಗುರುರ್ಮೇ' (ಆ. ಪು. ೨೫೬) ಸಕಲಲೋಕಸೇವ್ಯನಾದ ನನ್ನ ಗುರುವು ಜಯಶೀಲನಾಗಲಿ !–ಎಂದು ಗ್ರಂಥದ ಕೊನೆಯಲ್ಲಿಯೂ ತಾನು ಆಚಾರ್ಯರ ಶಿಷ್ಯನೆಂದು ಹೇಳಿಕೊಂಡಿರುತ್ತಾನೆ.

ಆದರೂ ಈ ಶಂಕರವಿಜಯಕ್ಕೆ ಆಧಾರವೇ ಇಲ್ಲವೆಂದು ಹೇಳುವದಕ್ಕೆ ಬರುವದಿಲ್ಲ. ಏಕೆಂದರೆ ಶಂಕರವಿಜಯಕ್ಕೆ [illegible]ನ್ನು ಬರೆದಿರುವ ಅಚ್ಯುತ

ರಾಯ ಪೋಡಕ-ಎಂಬಾತನು ಅದ್ವೈತರಾಜ್ಯಲಕ್ಷ್ಮೀಃ ಎಂಬ ಟೀಕೆಯಲ್ಲಿ ಜೇಕೊಂದು ಆನಂದಗಿರೀಯವನ್ನು ಪೂರ್ವಪರ್ಶಿಸಿರುತ್ತಾನೆ. ಮಾಧವೀಯದಲ್ಲಿರುವ (೧-೨).

ಯುವ್ವಜ್ಪಟಾನಾಂ ಪಟಲೋ ವಿಶಾಲೋ
ನಿಲೋಕ್ಯತೇಽಲ್ಪೇ ಕಿಲ ದರ್ಪಣೇಽಪಿ ।
ತದ್ವನ್ಮದೀಯೇ ಲಘುಸಂಗ್ರಹೇಽಸ್ಮಿ-
ನ್ಮದ್ವೀಕ್ಷ್ಯತಾಂ ಶಾಂಕರವಾಕ್ಯಸಾರಃ ॥

ಹೇಗೆ ಸಣ್ಣಕನ್ನಡಿಯಲ್ಲಿಕೂಡ ಗಡಿಗೆಗಳ ಆಥವಾ ಆನೆಗಳ ತಲೆಗಳ ಸಮೂಹವು ವಿಸ್ತೃತವಾದದ್ದು ಕಾಣಬರುವದೋ ಅದರಂತೆ ನನ್ನ ಈ ಲಘು 'ಸಂಗ್ರಹದಲ್ಲಿ" ಶಾಂಕರವಾಕ್ಯಸಾರವನ್ನು ನೋಡಬಹುದು- ಎಂಬರ್ಥದ ಶ್ಲೋಕದಲ್ಲಿರುವ ಶಾಙ್ಕರವಾಕ್ಯಸಾರಃ, ಎಂಬ ಶಬ್ದಕ್ಕೆ ಶಙ್ಕರಸ್ಯ ಭಗವತೋ ಭಾಷ್ಯಕಾರಸ್ಯಾಯಂ ತಾಙ್ಕರಃ, ಆನನ್ದಗಿರ್ಯಭಿಧಃ। ತಸ್ಯ ತತ್ಪ್ರಿಯ ಶಿಷ್ಯಸ್ಯ ವಾಕ್ಯಸಾರಃ' ಶಾಂಕರನೆಂದರೆ ಭಗವದ್ಭಾಷ್ಯಕಾರರ ಪ್ರಿಯಶಿಷ್ಯನಾದ ಆನಂದಗಿರಿಯೆಂಬಾತನೇ ; ಆತನ ವಾಕ್ಯದ ಸಾರವು' ಎಂದು ವ್ಯಾಖ್ಯಾನಮಾಡಿರುತ್ತಾನೆ. ಇಲ್ಲಿ ಮಾಧವಕವಿಯು ತನ್ನ ಕೃತಿಯನ್ನು ಲಘುಸಂಗ್ರಹವೆಂದಿರುವದರಿಂದ ಮೂಲವಾದ 'ಪ್ರಾಚೀನಶಂಕರವಿಜಯ'ವು ವಿಸ್ತಾರವಾಗಿತ್ತೆಂದು ಊಹಿಸುವದಕ್ಕೆ ಅವಕಾಶವಿದೆ ; ಸಣ್ಣ ಕನ್ನಡಿಯ ದೃಷ್ಟಾಂತವೂ ಆಗಲೇ ಒಪ್ಪಾಗುತ್ತದೆ. ಆದರೆ ಪ್ರಕೃತದಲ್ಲಿ ನಮಗೆ ಗೊತ್ತಿರುವ ಆನಂದಗಿರೀಯವು ಆಕಾಶದಲ್ಲಿ ಅಲ್ಪವೇ ಆಗಿರುವದರಿಂದ ಇದರ ಸಾರವು ಮಾಧವೀಯವು ಎನ್ನುವದಕ್ಕೆ ಬರುವಂತಿಲ್ಲ. ಇನ್ನೊಂದು ಮಾತು. ಇದೇ ಆಚ್ಯುತರಾಯನು ಮತ್ತೊಂದುಕಡೆಯಲ್ಲಿ 'ಏತತ್ಕಥಾಜಾಲಂ ಬೃಹಚ್ಛಙ್ಕರವಿಜಯ ಏವ ಆನನ್ದಜ್ಞಾನಾಖ್ಯಾನನ್ದಗಿರಿವಿರಚಿತೇ ದ್ರಷ್ಟವ್ಯಮ್ ಇತಿ ದಿಕ್' ಎಂದು (ಮಾ.ಶಂ. ೧೬-೧೦೩) ಟೀಕೆಯಲ್ಲಿ) ಬರೆದಿರುತ್ತಾನೆ. ಈ ಕಥೆಯೆಲ್ಲ ಆನಂದಜ್ಞಾನರೆಂಬ ಹೆಸರಿನ ಆನಂದಗಿರಿಗಳಿಂದ ವಿರಚಿತವಾದ ಬೃಹಚ್ಛಂಕರವಿಷಯದಲ್ಲಿಯೇ ನೋಡತಕ್ಕದ್ದೆಂದು ಸೂಚನೆ-ಎಂದು ಬರೆದಿರುವದನ್ನು ನೋಡಿದರೆ, ಮಾಧವೀಯಕ್ಕಿಂತ ಆನಂದಗಿರೀಯ ಶಂಕರವಿಜಯವು ದೊಡ್ಡದಾಗಿತ್ತೆಂದೇ ಗೊತ್ತಾಗುತ್ತದೆ.

ಹೀಗಿದ್ದರೂ ಆ ಶಂಕರವಿಜಯವು ಪಠನಕ್ಕೆ ಸಿಕ್ಕದ ಹಾಗಾದಮೇಲೆಯೇ ಬರೆದಿರುವದರಿಂದ ಈಗಿನ ಆನಂತಾನಂದಗಿರೀಯವನ್ನೇ ಜನರು ಆನಂದಗಿರೀಯವೆಂಬ ಭ್ರಾಂತರಾಗಿರಬೇಕೆಂದು ತೋರುತ್ತದೆ. ಆ ಭ್ರಾಂತಿಗೆ "ಆನಂದಗಿರಿ' ಎಂಬ ಹೆಸರೇ ಅಲ್ಲದೆ ಮತ್ತೊಂದು ಕಾರಣವೂ ಇರುತ್ತದೆ. ಅದೇನೆಂದರೆ ಮಾಧ

ವೀಯದ ಡಿಂಡಿಮವ್ಯಾಖ್ಯಾನಕಾರನಾದ ಧನಪತಿಸೂರಿಯು ತನ್ನ ವ್ಯಾಖ್ಯಾನದಲ್ಲಿ ಬರೆದುಕೊಂಡಿರುವ ಅನೇಕಸಂಗ್ರಹವಾಕ್ಯಗಳು ಸ್ವಲ್ಪಹೆಚ್ಚುಕಡಿಮೆಯಾಗಿ ಈ ಆನಂತಾನಂದಗಿರೀಯದಲ್ಲಿ ಕಾಣಬರುತ್ತಿವೆ. ಉದಾಹರಣೆಗೆ ಮಾಧವೀಯದ ೧೫–೧೮ರಲ್ಲಿ ಕಾಣುವ 'ಅಥ ಶಿಷ್ಯನರೈರ್ಯುತಃ' (ಆಮೇಲೆ ಶಿಷ್ಯಶ್ರೇಷ್ಠರಿಂದ ಕೂಡಿದ)ಎಂಬ ಮಾತಿಗೆ 'ಅಥಾನನ್ತರಂ ಪದ್ಮಪಾದ–ಹಸ್ತಾಮಲಕ–ಸನಿತ್ಸಾನಂದ–ಚಿದ್ವಿಲಾಸ– ವಿಜ್ಞಾನಕನ್ದ–ವಿಷ್ಣುಗುಪ್ತ– ಶುದ್ಧಕೀರ್ತಿ– ಭಾನುಮರೀಚಿ– ಕೃಷ್ಣದರ್ಶನ– ಬುದ್ಧಿವೃದ್ಧಿ– ವಿರಿಞ್ಚಿಪಾದಾನನ್ತಾನನ್ದಗಿರಿಪ್ರಮುಖೈಃ ಸಹಸ್ರೈಃ ಶಿಷ್ಯನರೈರ್ಯುತಃ' ಎಂಬ ವ್ಯಾಖ್ಯಾನವಿದೆ. ಆನಂದಗಿರೀಯದಲ್ಲಿಯೂ ಆಚಾರ್ಯರ ಶಿಷ್ಯರನ್ನು ಇದೇ ಅನುಕ್ರಮದಿಂದ ಹೇಳಿರುವದು ಕಾಣುತ್ತದೆ: 'ಪದ್ಮಪಾದ– ಹಸ್ತಾಮಲಕ– ಸನಿತ್ಸಾನಂದ– ಚಿದ್ವಿಲಾಸ– (ವಿ)ಜ್ಞಾನಕಂದ– ವಿಷ್ಣುಗುಪ್ತ–(ಶುದ್ಧ?) ಕೀರ್ತಿ– ಭಾನುಮರೀಚಿ–ಕೃಷ್ಣದರ್ಶನ–ಬುದ್ಧಿವೃದ್ಧಿ–ವಿರಿಞ್ಚಿಪಾದ– ಶುದ್ಧಾನನ್ತಾನನ್ದಗಿರಿಪ್ರಮುಖೈಃ ಶಿಷ್ಯವರೈಃ ಸೇವ್ಯಮಾನಃ' (ಆ. ಶಂ. ಳ-ವು. ೧೮). ಇದರಂತೆ ಅದೇ ಸರ್ಗದ ೨ನೆಯ ಶ್ಲೋಕವ್ಯಾಖ್ಯಾನದಲ್ಲಿ ಡಿಂಡಿಮಕಾರನು 'ತಥಾ ಹಿ ಶ್ರೀಶಙ್ಕರಾಚಾರ್ಯೋ ಮಧ್ಯಾರ್ಜುನಂ ನಾಮ ಶಿವಾವಿರ್ಭೂತಸ್ಥಲವಿಶೇಷಂ ಪ್ರಾಪ | ಮಧ್ಯಾರ್ಜುನೇಶಾನಮುದ್ಭೃಷ್ಟಪೂರ್ವಂ ವಿದ್ಯಾದಿಭಿಃ ಪೂಜಿತಪಾದಪದ್ಮಮ್ | ಋದ್ಧೋಪಚಾರೈರಭಜತ್ಪರೇಶಂ ನಿಷ್ಪಾಪತಾಂ ಪ್ರಾಪ ಫಲೈಕಪಾತ್ರಮ್"ಎಂದು ಮುಂತಾಗಿ 'ಶುದ್ಧಾದ್ವೈತಪರಾಯಣಾ ಬಭೂವುಃ' ಎಂಬವರೆಗಿನ ಭಾಗವು ಆನಂದಗಿರೀಯದ ಪಜ್ಜ್ಟಗಳೇ ಆಗಿವೆ. ಇದರಂತೆ ಅದೇ ಸರ್ಗದ ನಾಲ್ಕನೆಯ ಶ್ಲೋಕ, ಆರನೆಯ ಶ್ಲೋಕ–ಇವುಗಳ ವ್ಯಾಖ್ಯಾನದಲ್ಲಿಯೂ ಆನಂದಗಿರೀಯದ ಪಜ್ಜ್ಟಗಳೇ ಕಾಣಬರುತ್ತವೆ. ಡಿಂಡಿಮಕಾರನು 'ಅತ್ರ ಪ್ರಾಚೀನಾನುರೋಧೇನ ಮಧ್ಯಾರ್ಜುನಂ ಪ್ರಾಪ್ಯ ತತಃ ಸರ್ವಾನ್ ಕರು ಭೋ ವಿಜಿಗೀಷುಃ ಪ್ರಥಮಂ ಸೇತುಂ ಪ್ರತಿ ಪ್ರತಸ್ಥೇ ಇತಿ-ವ್ಯಾಖ್ಯೇಯಮ್' ಪ್ರಾಚೀನ ಮತಕ್ಕನುಗುಣವಾಗಿ ಇಲ್ಲಿ ಬಿಟ್ಟಿರುವದನ್ನು ಸೇರಿಸಿಕೊಂಡು ವ್ಯಾಖ್ಯಾನಮಾಡಬೇಕು- ಎಂದು ಬರೆದಿರುವದರಿಂದ ಆನಂದಗಿರೀಯವೇ ಆ ವ್ಯಾಖ್ಯಾನಕ್ಕಿಂತ ಹಿಂದಿನದೆಂದೂ ಅದೇ ಮಾಧವೀಯಕ್ಕೆ ಮೂಲವಾದ 'ಪ್ರಾಚೀನಶಂಕರಜಯ'ವೆಂದೂ, ಜನರು ಕಲ್ಪಿಸಿರಬಹುದು. ಸರಿಯಾಗಿ ನೋಡಿದರೆ ಮಾಧವೀಯಕ್ಕಿಂತ ದೊಡ್ಡದಾಗಿರುವ ಪ್ರಾಚೀನಶಂಕರವಿಜಯವು ಎಂದಿಗೂ ಈಗ ನಮ್ಮ ಮುಂದಿರುವ ಅಲ್ಪಕಾಯದ ಆನಂದಗರೀಯವಾಗಲಾರದೆಂಬುದು ಸ್ಪಷ್ಟವೇ ಆಗಿದೆ. ಇದೂ ಅಲ್ಲದೆ ಡಿಂಡಿಮಕಾರನು ಇದೇ ಸರ್ಗದ ೨ನೆಯ ಶ್ಲೋಕದ ವ್ಯಾಖ್ಯಾನದಲ್ಲಿ ೫೮೧ ಶ್ಲೋಕಗಳನ್ನು ಉದಾಹರಿಸಿರುತ್ತಾನೆ. ಅವುಗಳು ಯಾವವೂ ಈಗಿನ ಆನಂದಗಿರೀಯದಲ್ಲಿಲ್ಲ. ಇದರಂತೆ ೧ನೆಯ ಶ್ಲೋಕಕ್ಕೆ ೧, ೪ನೆಯ ಶ್ಲೋಕಕ್ಕೆ (೪೯ ÷ ೩೫೩) ೪೦೩; ೨೫ನೆಯ ಶ್ಲೋಕದ ಕೊನೆಯಲ್ಲಿ

ತ್ತನೆಯ ಶ್ಲೋಕಕ್ಕೆ ಪೂರಕವಾಗಿ ಇನ್ನೂ ಕೆಲವು ಶ್ಲೋಕಗಳನ್ನೂ ಉದಾಹರಿಸಿರುತ್ತಾನೆ; ಆತ್ಮಬೋಧರು ಉದಾಹರಿಸಿರುವ ಪ್ರಾಚೀನಶಂಕರವಿಜಯದ ಶ್ಲೋಕಗಳಲ್ಲಿ ಯಾವುದೊಂದನ್ನೂ ಟೀಕಾಕಾರನು ಉದಾಹರಿಸಿಲ್ಲ; ಆ ವಿಜಯಕ್ಕೆ ವಿರುದ್ಧವಾಗಿಯೇ ಮಾಧವೀಯದಲ್ಲಿ ಕಥೆಯ ವಿವರಗಳು ಕಾಣಿಸುತ್ತವೆ. ಆದ್ದರಿಂದಲೂ ಈವರೆಗೆ ನಾವು ಹೇಳಿಬಂದಿರುವ ಕಾರಣಗಳಿಂದಲೂ ಆನಂತಾನಂದಗಿರೀಯಕ್ಕಿಂತ ಬೇರೆಯಾದ ಒಂದು ಆನಂದಗಿರೀಯಶಂಕರವಿಜಯವು ಇತ್ತೀಚಿನ ಯಾವುದೋ ಮಾಧವಕವಿಯು ಸಂಗ್ರಹಿಸಿರುತ್ತಾನೆಂಬ ಅಭಿಪ್ರಾಯದಿಂದ ಡಿಂಡಿಮಕಾರನು ಈ ಶ್ಲೋಕಗಳನ್ನು ಉದಾಹರಿಸಿರುತ್ತಾನೆಂತಲೂ ಕಲ್ಪಿಸಬಹುದಾಗಿದೆ. ಕುಂಭಕೋಣಪಲ್ಲಿ ಆ ಆನಂದಗಿರೀಯದ ಪ್ರತಿ ಇರುವುದಾಗಿಯೂ ಅದರಿಂದಲೇ ಡಿಂಡಿಮಕಾರನು ಈ ಶ್ಲೋಕಗಳನ್ನು ಉದಾಹರಿಸಿರುತ್ತಾನೆಂದೂ ಎಸ್. ವೆಂಕಟರಾಮನ್ ರವರು (NVSK. Appendix) ಹೇಳುತ್ತಾರೆ. ಇದು ನಿಜವಾದರೆ ಆನಂತಾನಂದಗಿರಿಯ ಗ್ರಂಥವು ಕೃತವೆಂದೂ ಅವನೇ ಡಿಂಡಿಮ ವಾಕ್ಯಗಳನ್ನು ಬಳಸಿಕೊಂಡು ತನ್ನ ಗ್ರಂಥವನ್ನು ಬರೆದಿರುತ್ತಾನೆಂದೂ ಹೇಳಬಹುದಾಗುತ್ತದೆ. ಆನಂತಾನಂದಗಿರಿ ಎಂಬ ಹೆಸರಿನ ಶಿಷ್ಯನನ್ನು ಡಿಂಡಿಮಕಾರನೂ ಉಲ್ಲೇಖಿಸಿರುವುದರಿಂದ ಆ ಹೆಸರು ಪ್ರಾಚೀನಶಂಕರಜಯದಲ್ಲಿಯೇ ಇತ್ತೆಂದೂ ಅವನ್ನು ತನ್ನ ಹೆಸರೆಂದು ತೋರಿಸಿಕೊಳ್ಳುವುದಕ್ಕೆ ಈ ಕೃತ್ರಿಮಗ್ರಂಥಕಾರನು ಪ್ರಯತ್ನಿಸಿರಬಹುದೆಂದೂ ನಿರ್ಧಾರವಾಗುತ್ತದೆ; ಏಕೆಂದರೆ ಆಲ್ಲಲ್ಲೇ ಆ ಹೆಸರನು ಇವನು ಮತ್ತೆಮತ್ತೆ ಹೊಗಳಿರುವುದು ಈ ಚಿಕ್ಕಗ್ರಂಥದಲ್ಲಿ ಕಾಣುತ್ತದೆ. ಆನಂತಾನಂದಗಿರಿಯೇ ಆಗಲಿ, ಇನ್ನೊಬ್ಬ ಆನಂದಗಿರಿಯೇ ಆಗಲಿ, ಆಚಾರ್ಯರ ಸಮಕಾಲಿಕರೆಂಬುದಕ್ಕೆ ಪ್ರಮಾಣವಿಲ್ಲವೆಂಬುದು ನಿಶ್ಚಿತ. ಈ ವಿಷಯವನ್ನು ಯಥಾಸ್ಥಾನದಲ್ಲಿ ಮತ್ತೆಮತ್ತೆ ಪ್ರಸ್ತಾಪಿಸುವೆವು.

ಈ ಸಂದರ್ಭದಲ್ಲಿ ಇನ್ನೊಂದು ಊಹೆಯನ್ನು ಮಾಡುವುದಕ್ಕೆ ಅವಕಾಶವಿದೆ. ಆತ್ಮಬೋಧರು ಆಗಾಗ್ಗೆ ಉದಾಹರಿಸಿರುವ ಪ್ರಾಚೀನಶಂಕರವಿಜಯವನ್ನು ಯಾರೋ ಕಾಂಚೀಸಂಪ್ರದಾಯಾಭಿಮಾನಿಗಳು ಮಾಧವೀಯ ಶಂಕರವಿಜಯದ ರಚನೆಯಾದ ಮೇಲೆ ಬರೆದಿರಬಹುದು. ಆಗ್ಗೆ ಆನಂದಗಿರೀಯವು ಕಣ್ಮರೆಯಾಗಿದ್ದರಿಂದ 'ಪ್ರಾಚೀನಶಂಕರಜಯ' ಎಂಬುದೇ ಗ್ರಂಥದ ಹೆಸರೆಂದು ತೋರಿಸುವುದಕ್ಕೆ ಆ ಗ್ರಂಥಕರ್ತನು ಪ್ರಯತ್ನಿಸಿಯೂ ಇರಬಹುದು. ಏಕೆಂದರೆ ಯಾವನೂ ನಿಜವಾಗಿ ತನ್ನ ಗ್ರಂಥಕ್ಕೆ 'ಪ್ರಾಚೀನ'ಶಂಕರವಿಜಯ ಎಂದು ನಾಮಕರಣ ಮಾಡುವ ಸಂಭವವಿಲ್ಲ.

ಶಂಕರವಿಜಯಗಳ ಅನುಕ್ರಮದ ತರ್ಕ

೭. ನಾವು ಮೇಲೆ ಉದಾಹರಿಸಿರುವ ಡಿಂಡಿಮಾನಂತಾನಂದಗಿರೀಯಗಳ ಶಿಷ್ಯನಾಮಾವಳಿಯ ಕೀರ್ತನೆಯಿಂದ ಇನ್ನೊಂದು ಉಪಸಿದ್ಧಾಂತವು ಹೊರಡ್ಡು

ತ್ತದೆ. ಆ ಶಿಷ್ಯರೊಳಗೆ ಚಿದ್ವಿಲಾಸ, ವಿಜ್ಞಾನಕಂದ– ಎಂಬ ಹೆಸರುಗಳೂ ಇವೆಯೆಂಬುದನ್ನೂ ಆ ಹೆಸರುಗಳು ಚಿದ್ವಿಲಾಸೀಯದ ಗ್ರಂಥಕ್ಕೆ ಬೇಕಾದ ಗುರು ಶಿಷ್ಯರಾಗಿದಾರೆಂಬುದನ್ನೂ ವಾಚಕರು ಲಕ್ಷಿಸಬೇಕು. ಆನಂತಾನಂದಗಿರಿಯು ಚಿದ್ವಿಲಾಸೀಯದ ಈಚೆಗೆ ತನ್ನ ಗ್ರಂಥವನ್ನು ಬರೆದಿರಬಹುದು; ಪಾಚೀನ ಶಂಕರವಿಜಯದ ಕರ್ತೃವಾದ ಆನಂದಗಿರಿಯೂ ಚಿದ್ವಿಲಾಸೀಯವು ಹುಟ್ಟಿದ ಮೇಆಯೇ ಬರೆದಿರಲೂಬಹುದು. ಇದು ನಿಜವಾದರೆ ತಮ್ಮ ಗ್ರಂಥಕ್ಕಾಗಿ ಚಿದ್ವಿಲಾಸರು ಕಲ್ಪಿಸಿದ್ದ ಆ ಎರಡು ಹೆಸರುಗಳು ಶಂಕರರ ನೇರಾದ ಶಿಷ್ಯರವೇ ಎಂದು ಈಚೆಗೆ ಭ್ರಾಂತಿಯುಂಟಾಗಿರಬಹುದೆಂದಾಗುತ್ತದೆ. ಈ ಕಲ್ಪನೆಯನ್ನು ಇಟ್ಟು ಕೊಂಡರೆ ಆನಂದಗಿರೀಯ, ಚಿದ್ವಿಲಾಸೀಯ, ಆತ್ಮಬೋಧರ ಪ್ರಾಚೀನಶಂಕರ ವಿಜಯ, ವ್ಯಾಸಾಚಲೀಯ, ಮಾಧವೀಯ, ಆನಂತಾನಂದಗಿರೀಯ–ಈ ಆನು ಕ್ರಮದಲ್ಲಿ ಶಂಕರವಿಜಯಗಳು ರಚಿತವಾಗಿರಬಹುದೆಂದು ಹೇಳಬೇಕಾಗುತ್ತದೆ.

ಮಾಧವನು ತನ್ನದು ಅಲ್ಪಸಂಗ್ರಹವೆಂದದ್ದರಿಂದ ಬೃಹಚ್ಛಂಕರವಿಜಯ ವೊಂದು ಆ ಮೊದಲೇ ಇದ್ದಿರಬೇಕೆಂಬ ಕಲ್ಪನೆಯೂ ಉಂಟಾಗುವದಷ್ಟೆ? ಚಿತ್ಸುಖಾಚಾರ್ಯರ **ಬೃಹಚ್ಛಂಕರವಿಜಯ**ವೆಂಬುದು ಈ ಕಲ್ಪನೆಯುಂಟಾ ದಾಗ ಯಾರಿಂದಲೋ ರಚನೆಯಾಗಿರಬಹುದೆ? ಹಾಗಿಲ್ಲದಿದ್ದರೆ ಯಾರುತಾನೆ ತಮ್ಮ ಗ್ರಂಥಕ್ಕೆ 'ಬೃಹತ್'ಶಂಕರವಿಜಯವೆಂದು ಹೆಸರಿಟ್ಟುಕೊಂಡಾರು? ಇದು ಹೇಗೇ ಆಗಲಿ, **ಚಿತ್ಸುಖಾಚಾರ್ಯರ ಬೃಹಚ್ಛಂಕರವಿಜಯ**ವು ಚಿದ್ವಿಲಾಸೀಯಕ್ಕೆಂತ ಮೊದಲು ಇರಬೇಕು; ಅಥವಾ ಆದಾದಮೇಲಾದರೂ ನಿರ್ಮಿತವಾಗಿರಬೇಕು. ಏಕೆಂದರೆ ಈ ಎರಡಕ್ಕೂ ಬಹಳ ನಿಕಟವಾದ ಹೋಲಿಕೆಗಳು ಇರುತ್ತವೆ. ಇದನ್ನು ಪ್ರಮಾಣಾನುಸಾರವಾಗಿ ಮುಂದೆ ತಿಳಿಸುವೆವು.

ಕಾಂಚೀಪೀಠಸಂಪ್ರದಾಯದ ಗ್ರಂಥಗಳು

೮. ಕಾಮಕೋಟಿಪೀಠಸಂಪ್ರದಾಯಾನುಸಾರವಾಗಿ ಮಾಧವೀಯಶಂಕರ ವಿಜಯಕ್ಕೆ ಯಾವ ಪ್ರಾಮಾಣ್ಯವೂ ಇಲ್ಲ. ಆವರು ಸರ್ವಜ್ಞ ಸದಾಶಿವಬೋಧರ **ಪುಣ್ಯಶ್ಲೋಕಮಂಜರೀ**, ಸದಾಶಿವಬ್ರಹ್ಮೇಂದ್ರರಚಿತ **ಗುರುರತ್ನಮಾಲಿಕಾ** ಮತ್ತು ಆದರಮೇಲೆ ಆತ್ಮಬೋಧರು ಬರೆದಿರುವ **ಸುಷಮಾ**– ಎಂಬೀ ಮೂರು ಗ್ರಂಥಗಳನ್ನು ಪ್ರಾಮಾಣಿಕವೆಂದು ಎಣಿಸಿರುತ್ತಾರೆ. ಈ ಮೂರರೊಳಗೆ **ಸುಷಮಾಸಹಿತ ಗುರುರತ್ನಮಾಲಿಕಾ** ಎಂಬ ಗ್ರಂಥದ ಮೂಲವನ್ನು ಬರೆ ದಿರುವ ಪುಸ್ತಕವೊಂದು ನಮ್ಮಲ್ಲಿದೆ. ಸುಷಮಾವ್ಯಾಖ್ಯಾನದ ಭಾಗಗಳನ್ನು ಮಾತ್ರ ಇದರಲ್ಲಿ ಬರೆದುಕೊಂಡಿದೆ. ಆತ್ಮಬೋಧರು ಮಾಧವಕವಿಗಿಂತ ಈಚಿನವರಾದರೂ ಕೆಲವು ಪ್ರಾಚೀನಗ್ರಂಥಗಳನ್ನು ತಮ್ಮ ಸುಷಮಾಖ್ಯ

ವ್ಯಾಖ್ಯಾನದಲ್ಲಿ ಉದಾಹರಿಸಿರುತ್ತಾರೆ. ಆವರಿಗೆ ಕಾಂಚೀಪೀಠದ ಅಭಿಮಾನವು ಸ್ವಾಭಾವಿಕವಾಗಿರುತ್ತದೆಯಾದರೂ ನಾವು ಈವರೆಗೆ ಉದಾಹರಿಸಿರುವ ಶಂಕರ ವಿಜಯಗಳ ಬೆಲೆಯನ್ನು ಕಟ್ಟುವಾಗ ತುಲನಾತ್ಮಕವಿಮರ್ಶೆಗೆ ಆವರ ಗ್ರಂಥವು ಬಹಳ ಪ್ರಯೋಜನಕರವಾಗಿದೆ ಎಂಬುದನ್ನು ವಾಚಕರು ಅಗಲಿ ಕಂಡುಕೊಂಡಿರ ಬೇಕು. ನಮಗೆ ಸಿಕ್ಕದೆ ಇರುವ ಪ್ರಾಚೀನಶಂಕರವಿಜಯ, ಬೃಹಚ್ಛಂಕರ ವಿಜಯ, ಕೇರಳೀಯಶಂಕರವಿಜಯ–ಮುಂತಾದ ಅನೇಕ ಗ್ರಂಥಗಳ ಶ್ಲೋಕ ಗಳನ್ನು ಆವರು ಉದಾಹರಿಸಿರುತ್ತಾರೆ. ಮಠಗಳ ವಿಚಾರಕ್ಕೆ ಆ ಗ್ರಂಥವೇ ಅಲ್ಲದೆ ಇನ್ನೂ ಕೆಲವು ನಣ್ಣ ಸುಟ್ಟ ಗ್ರಂಥಗಳನ್ನು ನಾವು ಉಪಯೋಗಿಸುವೆವು. ಆವುಗಳಿಗೆ ಐತಿಹಾಸಿಕದೃಷ್ಟಿಯಿಂದ ಎಷ್ಟು ಬೆಲೆಯನ್ನು ಕೊಡಬಹುದೆಂಬುದನ್ನು ಅಲ್ಲಲ್ಲಿಯೇ ತಿಳಿಸುತ್ತಾ ಹೋಗುವೆವು.

ಪುರಾಣಗಳು

೯. ಮೇಲೆ ಹೇಳಿದ ಶಂಕರವಿಜಯಗಳಲ್ಲದೆ ಕೆಲವು ಪುರಾಣವಚನಗಳಲ್ಲಿ ಯೂ ಶಂಕರಾಚಾರ್ಯರ ಪರಾಮರ್ಶವು ಕಂಡುಬರುತ್ತದೆ. **ಲಿಂಗಪುರಾಣ, ಕೂರ್ಮಪುರಾಣ, ವಾಯುಪುರಾಣ, ಭವಿಷ್ಯೋತ್ತರ, ಮಾರ್ಕಂಡೇಯ ಸಂಹಿತಾ, ಸೌರಪುರಾಣ,** ಇವೆಲ್ಲಕ್ಕಿಂತಲೂ ಮುಖ್ಯವಾಗಿ **ಶಿವರಹಸ್ಯ**–ಇಷ್ಟು ಆಚಾರ್ಯರ ವಿಷಯವನ್ನು ಪರಾಮರ್ಶಿಸಿರುವ ಪುರಾಣಭಾಗಗಳು ನಮಗೆ ಸಿಕ್ಕಿ ರುತ್ತವೆ. ಇವುಗಳನ್ನೆಲ್ಲ ೧ನೆಯ ಪರಿಶಿಷ್ಟದಲ್ಲಿ ಕೊಟ್ಟಿರುವೆವು

ಪುರಾಣಗಳಲ್ಲಿ ಕಲಿಯುಗದಲ್ಲಿ ಹೀಗೆಹೀಗೆ ನಡೆಯುವದೆಂಬುದನ್ನು ದೇವತೆ ಗಳೋ ಋಷಿಗಳೋ ಹೇಳಿದಂತೆ ಬರೆಯುವದೊಂದು ಪದ್ಧತಿಯಾಗಿದೆ. ಆಧುನಿಕ ವಿಮರ್ಶಕಬುದ್ಧಿಯ ವಾಚಕರಿಗೆ ಇಂಥ ಗ್ರಂಥಗಳಲ್ಲಿ ಯಾವ ಶ್ರದ್ಧೆಯೂ ಇರುವ ದಿಲ್ಲ. ಆವರ ವಿಚಾರಸರಣಿಯು ಹೇಗಿರುವದೆಂದರೆ : ಆಯಾ ಮತದ ಅಭಿಮಾನಿ ಗಳು ಪುರಾಣಗಳಲ್ಲಿ ತಮ್ಮತಮ್ಮ ಆಚಾರ್ಯರನ್ನು ಹೊಗಳುವ ಶ್ಲೋಕಗಳನ್ನು ದೇವತಾವಾಕ್ಯಗಳು, ಋಷಿವಾಕ್ಯಗಳು– ಎಂಬ ಭಾವವು ಬರುವಂತೆ ರಚಿಸಿ ಅಲ್ಲಲ್ಲ ತೋರಿಸುವದಕ್ಕೆ ಅವಕಾಶವಿರುತ್ತದೆ ; ಏಕೆಂದರೆ ಪುರಾಣಗಳು ಇಂತಿಷ್ಟೇ ಪ್ರಮಾಣವಾಗಿರುವವೆಂದಾಗಲಿ[1] ಇಂಥ ವಾಕ್ಯಗಳು ಪ್ರಕ್ಷಿಪ್ತವಾದವುಗಳೆಂದಾಗಲಿ ನಿರ್ಣಯಿಸುವದು ಎಂಥವರಿಗೂ ಕಷ್ಟವಾಗಿರುತ್ತದೆ. ಇದಲ್ಲದೆ ಶಂಕರಾಚಾರ್ಯ ಮಧ್ವಾದ್ಯಾಚಾರ್ಯರುಗಳ ಚರಿತ್ರೆಯನ್ನು ಸೇರಿಸಿ ಆವರನ್ನು ಹೊಗಳಿರುವ

---

1. ಪಂಡಿತ ಜ್ವಾಲಾಪ್ರಸಾದಮಿಶ್ರ ಎಂಬುವರು ಹಿಂದೀಭಾಷೆಯಲ್ಲಿ ಬರೆದಿರುವ ಅಷ್ಟಾದಶಪುರಾಣದರ್ಪಣದ ಪು. ೫೧ರಲ್ಲಿ ಭಿನ್ನಭಿನ್ನಮತಗಳ ಪ್ರಕಾರ ಪುರಾಣಗಳ ಶ್ಲೋಕ ಸಂಖ್ಯಾಪ್ರಮಾಣವನ್ನು ಕೊಟ್ಟಿರುವದನ್ನು ನೋಡಿರಿ.

ಅಥವಾ ನಿಂದಿಸಿರುವ ಭಾಗಗಳೂ ಪುರಾಣಾದಿಗಳಲ್ಲಿ ಕಂಡುಬರುತ್ತವೆ. ಇಂಥ ಕೆಲವು ಉದಾಹರಣೆಗಳನ್ನು ೩ನೆಯ ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ; ಅವುಗಳಲ್ಲಿ ಶಿವನು ಕಲಿಯುಗದಲ್ಲಿ ತಾನೇ ಅವತರಿಸಿ ಜಗತ್ತನ್ನು ಕೆಡಿಸುವ ಕಾರಣದಿಂದ ಮಾಯಾವಾದವೆಂಬ ಅವೈದಿಕವಾದ ಆಸಚ್ಛಾಸ್ತ್ರವನ್ನು ರಚಿಸುವೆನೆಂದು ಹೇಳಿಕೊಂಡಂತೆ ಅರ್ಥವಾಗುವ **ಪದ್ಮಪುರಾಣದ** ಕೆಲವು ಶ್ಲೋಕಗಳೂ ಇವೆ; ಲೋಕಕಲ್ಯಾಣಕ್ಕಾಗಿ ಶಂಕರಾಚಾರ್ಯರಾಗಿ ಹುಟ್ಟುವೆನೆಂದು ಪುರಾಣಗಳಲ್ಲಿ ಹೇಳಿಕೊಂಡಿರುವ ಶಿವನೇ ಲೋಕನಾಶಕ್ಕಾಗಿ ತಾನು ಅವತರಿಸುವನೆಂದು ಹೇಳಿಕೊಂಡಿರುವನೆಂದು ಹೇಳುವ ಪುರಾಣವಾಕ್ಯಗಳ ಪ್ರಮಾಣದಿಂದ ಏನನ್ನು ತಾನೆ ನಿರ್ಧರಿಸಲಾದೀತು?

ಪರಮತದವರ ಗ್ರಂಥಗಳು

೧೦. ಆಚಾರ್ಯರನ್ನು ಹೊಗಳಿ ಬರೆದಿರುವ ಪರಮತದವರು ಇರುವಂತೆ ಅವರನ್ನು ತೆಗಳಿ ಅವರ ವಿಷಯಕ್ಕೆ ಅಪಪ್ರಚಾರವನ್ನು ಮಾಡಿರುವವರೂ ಏನೂ ಕಡಿಮೆಯಾಗಿಲ್ಲ. ಅಂಥ ನಮ್ಮ ದೇಶದ ವೇದಾಂತಿಗಳಲ್ಲಿ ಶಂಕರಾಚಾರ್ಯರ ನಿಕರ್ಷವನ್ನೂ ಮಧ್ವಾಚಾರ್ಯರ ಉತ್ಕರ್ಷವನ್ನೂ ತೋರಿಸುವದಕ್ಕೆಂದು ಬರೆದಿರುವ **ಮಣಿಮಂಜರಿ ಮಧ್ವವಿಜಜಯ**–ಎಂಬ ಗ್ರಂಥಗಳ ನಿರ್ಮಾಪಕರೂ ಸೇರಿರುತ್ತಾರೆ. ಮತದ್ವೇಷವೂ ಅನ್ಯಮತನಿಂದೆಯೂ ಹೆಮ್ಮೆಗೆ ಕಾರಣವೆಂದು ಭಾವಿಸಿದ್ದ ಕಾಲದಲ್ಲಿ ಬರೆದ ಇಂಥ ಗ್ರಂಥಗಳಿಗೆ ಪ್ರತ್ಯುತ್ತರವಾಗಿ ಬೇರೆಗ್ರಂಥಗಳು ಹುಟ್ಟುವವೆಂಬುದು ನಿರೀಕ್ಷಣೀಯವೇ ಆಷ್ಟೆ? **ಮಣಿಮಂಜರಿಭೇದಿನಿ** ಮುಂತಾದ ಗ್ರಂಥಗಳು ಆ ಜಾತಿಗೆ ಸೇರಿದವುಗಳಾಗಿವೆ. ಐತಿಹಾಸಿಕದೃಷ್ಟಿಯಿಂದ ಆ ಬಗೆಯ ಗ್ರಂಥಗಳಿಗೂ ಒಂದು ಸ್ಥಾನವಿರುತ್ತದೆ. ಆದ್ದರಿಂದ ಆವುಗಳನ್ನೂ ಅಲ್ಲಲ್ಲಿ ವಿಮರ್ಶೆಗೆ ತೆಗೆದುಕೊಳ್ಳುವೆವು. ಪರಮತದವರ ಅಭಿಪ್ರಾಯಗಳನ್ನು ೩ನೆಯ ಪರಿಶಿಷ್ಟದಲ್ಲಿ ಕೊಟ್ಟಿರುತ್ತದೆ.

ಸಾಮಗ್ರಿಗಳ ಉಪಯೋಗ

೧೧. ಈವರೆಗೆ ನಾವು ಹೇಳಿರುವ ಮುಖ್ಯಶಂಕರವಿಜಯಗಳನ್ನು ಅಲ್ಲಲ್ಲಿ ಉದಾಹರಿಸಿಕೊಂಡು ವಿಮರ್ಶಿಸುತ್ತಾ ಹೋಗುವೆವು. **ಮಾಧವೀಯ ಶಂಕರವಿಜಯವೇ** ಎಲ್ಲಕ್ಕಿಂತಲೂ ಪ್ರಸಿದ್ಧತರವೂ ಜನಾನುರಾಗಕ್ಕೆ ಪಾತ್ರವೂ ಆಗಿರುವದರಿಂದ ಬಹಳಮಟ್ಟಿಗೆ ಕಥೆಯನ್ನು ಆದರ ಆನುಕ್ರಮವನ್ನನುಸರಿಸಿಯೇ ಹೇಳುವೆವು. ಮಿಕ್ಕ ವಿಜಯಗಳಲ್ಲಿರುವ ವೈಲಕ್ಷಣ್ಯವನ್ನು ಅಲ್ಲಲ್ಲಿಯೇ ಹೇಳುತ್ತಾ ವಿಮರ್ಶಿಸುತ್ತಾ ಹೋಗುವೆವು. ಈಗಿನ ವಿಮರ್ಶಕರ ಅಭಿಪ್ರಾಯಗಳನ್ನೂ ಅಲ್ಲಲ್ಲಿ

ಕೊಡುತ್ತಾ ಅವಕ್ಕೆ ನಮ್ಮ ಸಮ್ಮತಿಯನ್ನು ಅಥವಾ ವಿಮತಿಯನ್ನು ಸಕಾರಣವಾಗಿ ಸೂಚಿಸುತ್ತಾ ಹೋಗುವೆವು. ಶಾಂಕರವೇದಾಂತಸಿದ್ಧಾಂತಕ್ಕೆ ವಿರುದ್ಧವಾದ ಯಾವ ಅಭಿಪ್ರಾಯವೂ ಸ್ವೀಕಾರ್ಯವಲ್ಲವಾದ್ದರಿಂದ ನಮ್ಮ ಅಸಾಧಾರಣ ಅಭಿಪ್ರಾಯಗಳಿಗೆ ಆಚಾರ್ಯರ ಪ್ರಮಾಣವಾಕ್ಯಗಳನ್ನು ತಪ್ಪದೆ ಉದಾಹರಿಸುವೆವು. ಈ ಕಾರ್ಯವು ಸ್ವಲ್ಪಮಟ್ಟಿಗಾದರೂ ಸಫಲವಾಗುವಂತೆ ನಮಗೆ ಆಚಾರ್ಯರ ಅನುಗ್ರಹವಾದರೆ, ವಾಚಕರೂ ಆದರಿಂದ ತುಷ್ಟರಾದರೆ, ನಾವು ಧನ್ಯರು.

೨. ಶಂಕರಾಚಾರ್ಯರ ಆವಿರ್ಭಾವಕಾಲ

ಶಂಕರಾಚಾರ್ಯರು ಅವತಾರಪುರುಷರೆ ?

೧೨. ಒಂದನೆಯ ಪರಿಶಿಷ್ಟದಲ್ಲಿ ಕೊಟ್ಟಿರುವ ಪುರಾಣವಾಕ್ಯಗಳ ಆಧಾರದಿಂದ ಶಂಕರವಿಜಯಕಾರರೂ ಮತಸಂಪ್ರದಾಯದ ಅನುಯಾಯಿಗಳೂ ನಮ್ಮ ದೇಶದ ಆಸ್ತಿಕರಲ್ಲಿ ಬಹಳ ಜನರೂ ಶಂಕರಾಚಾರ್ಯರು ಶಿವಾವತಾರವೆಂದೇ ನಂಬುತ್ತಾರೆ. ಈ ಅವತಾರವಾದವು ಆಚಾರ್ಯರಿಗೆ ಸಂಮತವೆ ?– ಎಂದು ವಿಚಾರಮಾಡುವದಕ್ಕೆ ಹೊರಟರೆ, ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಲ್ಲಿ 'ಅವತಾರ'ವೆಂಬ ಶಬ್ದವೇ ಕಾಣಿಸುವದಿಲ್ಲ. ಆದರೂ **'ಸ್ಯಾತ್ ಪರಮೇಶ್ವರಸ್ಯಾಪಿ ಇಚ್ಛಾವಶಾನ್ಮಾಯಾಮಯಂ ರೂಪಂ ಸಾಧಕಾನುಗ್ರಹಾರ್ಥಮ್'** (ಸೂ. ಭಾ. ೧–೧–೨೦) ಪರಮೇಶ್ವರನೂ ಸಾಧಕರನ್ನು ಅನುಗ್ರಹಿಸುವದಕ್ಕೋಸ್ಕರ ಮಾಯಾಮಯವಾದ ರೂಪವನ್ನು ಇಚ್ಛಾಮಾತ್ರದಿಂದ ಧರಿಸಬಹುದು– ಎಂದು ಸೂತ್ರಭಾಷ್ಯದಲ್ಲಿ ಆಚಾರ್ಯರು ಬರೆದಿರುತ್ತಾರೆ. **ಮಹಾಭಾರತದಲ್ಲಿ** ಮಹಾವಿಷ್ಣುವು ಮತ್ಸ್ಯಾದಿರೂಪಗಳನ್ನು ಧರಿಸಿ ಲೋಕಾನುಗ್ರಹವನ್ನು ಮಾಡಿದನೆಂದು ಭೀಷ್ಮಸ್ತವರಾಜಾದಿಗಳಲ್ಲಿ ಬರೆದಿದೆ ; ಆಚಾರ್ಯರು ಭೀಷ್ಮಸ್ತವರಾಜದಿಂದ ಶ್ಲೋಕಗಳನ್ನು ಆರಿಸಿ ಸೂತ್ರಭಾಷ್ಯದಲ್ಲಿ ಉದಾಹರಿಸಿರುವದು ಕಂಡುಬರುತ್ತದೆ. ಭಾಗವತದಲ್ಲಿ ಭಗವಂತನ 'ಅವತಾರಗಳು' ಅನಂತವಾಗಿರುತ್ತವೆಯೆಂದು('ಅವತಾರಾ ಹ್ಯಸಂಖ್ಯೇಯಾ ಹರೇಃ ಸತ್ತ್ವನಿಧೇರ್ದ್ವಿಜಾ:' ಭಾಗ. ೧–೩–೨೬)ವರ್ಣಿಸಿದೆ. ಆಚಾರ್ಯರೂ **'ಸ ಆದಿಕರ್ತಾ ನಾರಾಯಣಾಖ್ಯೋ ವಿಷ್ಣುರ್ಭೂತ್ವಸ್ಯ ಬ್ರಹ್ಮಣೋ ಬ್ರಾಹ್ಮಣತ್ವಸ್ಯ ರಕ್ಷಣಾರ್ಥಂ ದೇವಕ್ಯಾಂ ವಸುದೇವಾದಂಶೇನ ಕೃಷ್ಣಃ ಕಿಲ ಸಂಬಭೂವ'** (ಗೀ. ಭಾ. ಆವ.) ಆದಿಕರ್ತನಾದ ನಾರಾಯಣನೆಂಬ ಹೆಸರಿನ ಆ ವಿಷ್ಣುವು ಭೂಮಿಯ ಬ್ರಹ್ಮವಾದ ಬ್ರಾಹ್ಮಣ್ಯವನ್ನು ರಕ್ಷಿಸುವದಕ್ಕಾಗಿ ದೇವಕಿಯಲ್ಲಿ ವಸುದೇವನಿಂದ ಅಂಶದಿಂದ ಕೃಷ್ಣನಾದನು– ಎಂದು ಬರೆದಿರುತ್ತಾರೆ. ಆದ್ದರಿಂದ ಸನಾತನಾರ್ಯ ಧರ್ಮದಲ್ಲಿ ವಿಶ್ವಾಸವಿರುವವರಿಗೆ ಅವತಾರದಲ್ಲಿ ನಂಬಿಕೆಯಿರುವದು ಸಹಜವಾಗಿದೆ.

ಸರ್ವಶಕ್ತನಾದ ಈಶ್ವರನು ಭೂಮಿಯಮೇಲೆ ಅವತರಿಸಿಯೇ ಧರ್ಮಸಂಸ್ಥಾಪನೆಮಾಡಬೇಕಾದ ಆವಶ್ಯಕತೆಯೇನೂ ಇಲ್ಲ. ಅವತಾರಪುರುಷರು

ಗಳೆಂಬವರಲ್ಲಿ ಯೂ ನ್ಯೂನಾತಿರೇಕಗಳು ಕಂಡುಬರುತ್ತಿರುವವಾದ್ದರಿಂದ ಅವರನ್ನು ಸರ್ವಜ್ಞನಾದ ಈಶ್ವರನ ಅವತಾರವೆಂದು ಕರೆಯಲಾಗದು– ಎಂದು ಕೆಲವರು ಅವತಾರವಾದವನ್ನು ಆಕ್ಷೇಪಿಸುತ್ತಾರೆ. ಮಹಾಕಾರ್ಯಗಳನ್ನು ಮಾಡುವ ಮಹಾತ್ಮರಲ್ಲಿ ತತ್ತ್ಕಾಲಕ್ಕೆ ಪರಮೇಶ್ವರನ ಆವೇಶವುಂಟಾಗಿರುತ್ತದೆ; ಆದ್ದರಿಂದ ಅವರನ್ನು ಅವತಾರಪುರುಷರೆಂದು ಮಹಾಜನರು ನಂಬುತ್ತಾರೆ– ಎಂದು ಕೆಲವರು ಕಲ್ಪಿಸಿರುತ್ತಾರೆ. 'अजायमानोऽपि बहुधा विजायते' (ತೈ. ಆ. ೩–೧೩) ಎಂಬ ಶ್ರುತಿಯನ್ನೂ 'अजोऽपि सन्नव्ययात्मा' (ಗೀ. ೪–೬) ಎಂಬ ಗೀತೋಕ್ತಿಯನ್ನೂ ಅನುಸರಿಸಿ ಶಂಕರಭಗವತ್ಪಾದರು "स च भगवान् ज्ञानैश्वर्यशक्तिबलवीर्यतेजोभिः सदा संपन्नस्त्रिगुणात्मिकां वैष्णवीं स्वां मायां प्रकृतिं वशीकृत्य अजोऽव्ययो भूतानामीश्वरो नित्यशुद्धबुद्धमुक्तस्वभावोऽपि सन् स्वमायया देहवानिव जात इव च लोकानुग्रहं कुर्वन् लक्ष्यते" ಎಂದು ಗೀತಾವತರಣಿಕೆಯ ಭಾಷ್ಯದಲ್ಲಿ ಬರೆದಿರುತ್ತಾರೆ 'ಆ ಭಗವಂತನು ಜ್ಞಾನ, ಐಶ್ವರ್ಯ, , ಬಲ, ವೀರ್ಯ, ತೇಜಸ್ಸು– ಇವುಗಳಿಂದ ಯಾವಾಗಲೂ ಕೂಡಿರುವವನು; ತ್ರಿಗುಣಾತ್ಮಕವಾದ ಮಾಯೆ ಯೆಂಬ ಮೂಲಪ್ರಕೃತಿಯನ್ನು ಅಳವಡಿಸಿಕೊಂಡೇ– ಅಜನೂ ಅವ್ಯಯನೂ ಭೂತಗಳಿಗೆಲ್ಲ ಒಡೆಯನೂ ನಿತ್ಯಶುದ್ಧಬುದ್ಧಮುಕ್ತಸ್ವಭಾವನೂ ಆಗಿದ್ದರೂ– ತನ್ನ ಮಾಯೆಯಿಂದ ದೇಹವಂತನಾದಂತೆಯೂ ಹುಟ್ಟಿದವನಂತೆಯೂ ಕಾಣಿಸಿ ಕೊಂಡು ಲೋಕಾನುಗ್ರಹವನ್ನು ಮಾಡುತ್ತಿರುತ್ತಾನೆ' ಎಂಬ ಈ ಭಾಷ್ಯವಾಕ್ಯವು ಅವತಾರಕ್ಕೆ ಎಲ್ಲಾ ಉಪಪತ್ತಿಗಳನ್ನೂ ಒದಗಿಸಿಕೊಡುತ್ತಿದೆ ಎಂದು ಹೇಳಬಹುದು. ಆದ್ದರಿಂದ ಆದ್ವೈತಸಿದ್ಧಾಂತದಲ್ಲಿ ವಿಶ್ವಾಸವಿರುವವರು ಅವತಾರವಾದದಲ್ಲಿ ಶ್ರದ್ಧೆ ಯಿಡುವದೇನೂ ಅಸಂಗತವೆನಿಸಲಾರದು. 'ಸರ್ವಶಕ್ತನಾಗಿರುವ ಪರಮೇಶ್ವರನು ಏತಕ್ಕೆ ಅವತರಿಸಬೇಕು?. ಎಂಬ ಆಕ್ಷೇಪವನ್ನು ಒಡ್ಡುವವರು ನಿತ್ಯತೃಪ್ತನಾದ ಪರಮೇಶ್ವರನು ಜಗತ್ತನ್ನೇಕೆ ಸೃಷ್ಟಿಸಬೇಕು? ಆ ಸರ್ವಶಕ್ತನು ಭಕ್ತರಿಗೆ ಜ್ಞಾನಭಕ್ತಿವೈರಾಗ್ಯಾದಿಸಾಧನಗಳ ಮೂಲಕವೇ ಮುಕ್ತಿಯಾಗಬೇಕೆಂದೇಕೆ ಸಂಕಲ್ಪಿಸಬೇಕು?– ಎಂಬ ಆಕ್ಷೇಪಗಳಿಗೂ ಪರಿಹಾರವನ್ನು ಕಂಡುಕೊಳ್ಳ ಲಾರರೆಂಬುದು ಸ್ಪಷ್ಟವಾಗಿದೆ. ಶಿವರಹಸ್ಯದಲ್ಲಿ ಆಚಾರ್ಯರನ್ನು ಅಂಶಾವತಾರವೆಂದೇ ಒತ್ತಿ ಹೇಳಿದಂತೆ ಕಾಣುತ್ತದೆ. ಪರಮೇಶ್ವರನು ಒಂದು ಕಾಲದಲ್ಲಿ ಒಂದು ದೇಶದಲ್ಲಿ ತೋರಿಕೊಂಡರೆ ಅದು ಅಂಶವೆಂದು ಹೇಳುವದೇ ಯುಕ್ತ. ಆದರೂ 'व्यावृत्तकृत्स्नोपाधिभेदापेक्षया तु सर्वः परत्वेनाभिधीयते श्रुतिस्मृतिवाक्येभ्यः' ಉಪಾಧಿರಹಿತವಾದ ರೂಪದಿಂದ ಪ್ರತಿಯೊಬ್ಬನೂ ಪರಮಾತ್ಮನೇ ಎಂಬ (ಬೃ. ಭಾ. ೧–೪–೬) ಭಾಷ್ಯಕಾರರ

ಉಕ್ತಿಯಂತ ಬ್ರಹ್ಮಾತ್ಮೈಕತ್ವವನ್ನು ಮನಗಂಡು ಸರ್ವರಿಗೂ ಬೋಧಿಸಿದ ಆಚಾರ್ಯರು ಪರಮಾತ್ಮನೇ ಎಂದರೂ ತಪ್ಪಾಗುವದಿಲ್ಲವೆಂದು ನಮ್ಮ ಭಾವನೆ.

ಶಂಕರಾಚಾರ್ಯರ ಕಾಲ

೧೩. ಆಚಾರ್ಯರು ಕಾಲಾತೀತನಾದ ಪರಮಶಿವನೇ ಆದ್ದರಿಂದಲೇ ಏನೋ ಎಂಬಂತೆ ಅವರ ಆವಿರ್ಭಾವತಿರೋಧಾನಕಾಲಗಳ ನಿರ್ಣಯವನ್ನು ಮಾಡುವದು ಅತ್ಯಂತಕಷ್ಟವಾಗಿರುತ್ತದೆ. ಪ್ರಚಲಿತಶಾಂಕರಪೀಠಗಳ ಸಂಪ್ರದಾಯದವರು ಒಬ್ಬೊಬ್ಬರು ಒಂದೊಂದು ಕಾಲವನ್ನು ಕೊಟ್ಟಿರುತ್ತಾರೆ :

(೧) ಕಾಮಕೋಟಪೀಠದ ಸಂಪ್ರದಾಯದಂತೆ ; ಆತ್ಮಬೋಧರು ಉದಾಹರಿಸಿರುವ ಪ್ರಾಚೀನಶಂಕರವಿಜಯದಲ್ಲಿ (ಗು. ಸ. ೩-೪೬) ಈ ಶ್ಲೋಕವಿದೆ :

ಶಿಷ್ಯೇ ಪ್ರಯಾತ್ಯನಲಶೇವಧಿಬಾಣನೇತ್ರೇ
ಯೋ ನನ್ದನೇ ದಿನಮುಣಾವುದಗಧ್ವಭಾಜಿ ।
ರಾಧೇಽದಿತೇರುಡುನಿ ನಿರ್ಗತಮುಸ್ತಲಗ್ನೇ[1]
ಪ್ಯಾಹೂತವಾನ್ ಶಿವಗುರುಃ ಸ ಚ ಶಙ್ಕರೇತಿ ॥

'ಕಲಿಪ್ರಾರಂಭವಾದಮೇಲೆ ತ್ರಿಣಿನೆಯ ಸಂವತ್ಸರವಾದ ನಂದನ ಸಂವತ್ಸರದ ಉತ್ತರಾಯಣ ವೈಶಾಖ (ಶುದ್ಧ ಪಂಚಮಿ) ಪುನರ್ವಸುನಕ್ಷತ್ರದಲ್ಲಿ ಕರ್ಕಾಟಕಲಗ್ನದಲ್ಲಿ (ವಿದ್ಯಾಧಿಪತಿ ಎಂಬ ಹೆಸರುಳ್ಳ ಶಿವಗುರುವಿನಿಂದ ಹುಟ್ಟಿದನು). ಶಿವಗುರುವು ಶಂಕರನೆಂದು ಆತನನ್ನು ಕರೆದನು'. ಈ ಮತೆಪ್ರಕಾರ ಆಚಾರ್ಯರು ಕ್ರಿ. ಪೂ. 509ರಲ್ಲಿ ಜನಿಸಿದರೆಂದು ಒಪ್ಪಿದೆ.

ವ್ಯಾಸಾಚಲೀಯದಲ್ಲಿ

ಅಬ್ಧೀ ಕಲೇರನಲವರ್ಷಶರಾಕ್ಷಿಸಂಖ್ಯೇ
ಶ್ರೀನನ್ದನೇ ದಿನಮುಣಾವುದಗಧ್ವಭಾಜಿ ।
ರಾಧೇಽಧಿಪಜ್ಞಾವಿತಿಥಾವಸಿತೇತರಾಯಾಮ್
ವಾರೇ ರನೇರದಿತಿಭೇ ಸುಭಯೋಗಯುಕ್ತೇ ॥
ಲಗ್ನೇ ಶುಭೇ ಶುಭಯುತೇ ಶುಭುವೇ ಕುಮಾರಂ
ಶ್ರೀಪಾರ್ವತೀವ ಸುಖಿನೀ ಶುಭವೀಕ್ಷಿತೇ ಚ
ಜಾಯಾ ಸತೀ ಶಿವಗುರೋರ್ನಿಜತುಜ ಸಂಸ್ಥೇ
ಸೂರ್ಯೇ ಕುಜೇ ರವಿಸುತೇ ಚ ಗುರೌ ಚ ಕೇನ್ದ್ರೇ ॥

---

1. ಶ್ರೀ. ಶಂ. ದಲ್ಲಿ 'ಆಜ್ಞಲಗ್ನೇ' ಎಂದಿದೆ; ನಮ್ಮಲ್ಲಿರುವ ಸುಭಮಾಗ್ರಂಥದಲ್ಲಿ ಕೈಪ್ರತಿಯಲ್ಲಿ ಅಸ್ತಲಗ್ನೇ ಎಂದಿದೆ. ಇದು 'ಅಂಬುಲಗ್ನೇ' ಎಂದಿರಬೇಕೆ? ಜ್ಯೋತಿಷ್ಕರು ಇದನ್ನು ನಿರ್ಣಯಮಾಡಬೇಕು.

ಶ್ರೀ.ಶಂ. ೪–೨೦,೨೧) ಎಂದಿದೆಯಂತೆ (ಶ್ರೀ.ಶಂ.ಆನು. ೨ ಪು. 1). ನಮ್ಮಲ್ಲಿರುವ ಪುಸ್ತಕದಲ್ಲಿ ಮೊದಲನೆಯ ಶ್ಲೋಕವಿಲ್ಲ; ಎರಡನೆಯ ಶ್ಲೋಕವು ಮಾತ್ರ ಮಾಧವಕವಿಕೃತಶಂಕರವಿಜಯದಲ್ಲಿದೆ (ಮಾ.ಶಂ. ೨–೨೧). ಯುಧಿಷ್ಠಿರ ಶಕ ೨೬೩೧ನೆಯ ನಂದನಸಂವತ್ಸರದ ವೈಶಾಖ ಶುದ್ಧ ೫ ಭಾನುವಾರ, ಪುನರ್ವಸು ನಕ್ಷತ್ರದಲಿ ಅಭಿಜಿನ್ಮುಹೂರ್ತದಲ್ಲಿ ಕರ್ಕಾಟಕಲಗ್ನದಲ್ಲಿ ರವಿಕುಜಗುರುಶನಿಗಳು ಉಚ್ಚಸ್ಥರಾಗಿ ಕೇಂದ್ರದಲ್ಲಿರಲು ಶುಕ್ರನು ಉಚ್ಚಸ್ಥಾನದಲ್ಲಿದ್ದು ಬುಧನು ರವಿಯೊಡನೆ ಸೇರಿರಲು ಇಂಥ ಶುಭಮುಹೂರ್ತದಲ್ಲಿ ಆರ್ಯಾಂಬೆಯು ಮಗನನ್ನು ಪಡೆದಳು –ಎಂಬುದು ಶ್ಲೋಕದ ಒಟ್ಟರ್ಥ. ಇಲ್ಲಿಯೂ ಪ್ರಾಚೀನಶಂಕರವಿಜಯದಲ್ಲಿರುವ ವಿವರಗಳೇ ಇವೆ. ಕರ್ಕಾಟಕಲಗ್ನದ ವಿಚಾರವುಮಾತ್ರ ಇಲ್ಲಿಲ್ಲ; ವೈಶಾಖ ಶು. ೫ ರವಿವಾರ ಜನನವೆಂದು ಬರೆದಿದೆ. ಇದೂ ಕಾಂಚೀಪೀಠದ ಸಂಪ್ರದಾಯಕ್ಕೆ ಅನುಸಾರವಾಗಿದೆ.

ಇದೇ ಗ್ರಂಥದಲ್ಲಿ ಆಚಾರ್ಯರು ಸಿದ್ಧಿಹೊಂದಿದ ವಿವರಗಳು ಹೀಗಿವೆಯಂತೆ:

ವರ್ಷೇ ಕಲೇಃ ಶರವಿಲೋಚನಶಾಸ್ತ್ರನೇತ್ರೇ
ರಕ್ತಾಕ್ಷಿನಾಮ್ನಿ ವೃಷಶುಕ್ಲಮುಕುನ್ದತಿಥ್ಯಾಮ್ ।
ಗಚ್ಛನ್ ಸ ಜಾತು ಸವಿಧೇ ಪರದೇವತಾಯಾಃ
ತ್ಯಕ್ತುಂ ಸಮೃಜ್ಪದಥ ಭೌತಿಕಮಾತ್ಮದೇಹಮ್ ॥

'ಕಲಿ ೩೬೫೫ನೆಯ ರಕ್ತಾಕ್ಷಿಸಂವತ್ಸರದ (ಕ್ರಿ.ಪೂ. 477) ವೈಶಾಖ ಶುದ್ಧ ದ್ವಾದಶೀ ದಿನ ಪರದೇವತೆಯ ಸಮೀಪಕ್ಕೆ ಹೋಗಿ ಭೌತಿಕದೇಹವನ್ನು ಬಿಡುವದಕ್ಕೆಚ್ಛಿಸಿದರು' (ಶ್ರೀ.ಶಂ. ೨ ಪು. 22). ಈ ಶ್ಲೋಕವೂ ನಮ್ಮ ವ್ಯಾಸಾಚಲೀಯದಲ್ಲಿಲ್ಲ. ಇದಕ್ಕನುಗುಣವಾಗಿಯೇ **ಪ್ರಾಚೀನಶಂಕರವಿಜಯದಲ್ಲಿಯೂ**

ಕಲ್ಯಬ್ದೈಶ್ಚ ಶರೇಕ್ಷಣಾಧ್ವನಯನೈಃ ಸತ್ಕಾಮುಕೋಟಿಪ್ರಭೇ
ಪೀಠೇ ನ್ಯಸ್ಯ ಸುರೇಶ್ವರಂ ಸಮುವಿಶುಂ ಸರ್ವಜ್ಞಸಂಜ್ಞಂ ಮುನಿಮ್ ।
ಕಾಮಾಕ್ಷ್ಯಾಃ ಸವಿಧೇ ಸ ಜಾತು ನಿವಿಶನ್ನುನ್ಮುಕ್ತಲೋಕಸ್ಪೃಹೋ
ದೇಹಂ ಸ್ವಂ ವ್ಯಪಹಾಯ ದೇಹ್ಯನುಗಮಂ ಧಾಮ ಪ್ರಪೇದೇ ಪರಮ್ ॥

ಎಂದಿದೆಯೆಂದು ಆತ್ಮಬೋಧರು ಹೇಳುತ್ತಾರೆ. ಶ್ರೀಚಿತ್ಸುಖಾಚಾರ್ಯರು ಬರೆದಿರುವ **ಬೃಹಚ್ಛಂಕರವಿಜಯದಲ್ಲಿಯೂ** ಇದಕ್ಕನುಗುಣವಾಗಿಯೇ ಜನನ ಕಾಲವಿದೆ. ಇದನ್ನು ೪ನೆಯ ಮತ್ತು ೫ನೆಯ ಪರಿಶಿಷ್ಟದಲ್ಲಿ ಕೊಟ್ಟಿದೆ.

ಆಚಾರ್ಯರು ಸಿದ್ಧಿಯನ್ನು ಹೊಂದಿದ ಕಾಲವನ್ನು **ಬೃಹಚ್ಛಂಕರವಿಜಯ**ದಲ್ಲಿ ಹೀಗೆ ಬರೆದಿದೆಯಂತೆ;

ವಹ್ನ್ಯಬ್ಧಿಶಾಸ್ತ್ರನಯನಾಬ್ಜಯುಧಿಷ್ಠಿರಾಬ್ದೇ
ದ್ವಾತ್ರಿಂಶತಂ ಹಿ ಶರದೋ ಧರಣೀಂ ವಿಭೂಷ್ಯ ।
ಶ್ರೀಶಙ್ಕರೇನ್ದ್ರಗುರುರಾಟ್ಪ್ರತರಾಜಸೇನಃ
ಸಂಶಿಷ್ಯ ಧರ್ಮಮಖಿಲಂ ಶಿವತಾಂ ಪುಪೇದೇ ॥

—(ಶ್ರೀ. ಶಂ. ಅನು. ಪು ೨೭)

ಯುಧಿಷ್ಠಿರಶಕ ೨೬೬೩ (ಕ್ರಿ.ಪೂ. 477ರಲ್ಲಿ) ಮೂವತ್ತೆರಡು ವರ್ಷಗಳು ಭೂಮಿಯನ್ನಲಂಕರಿಸಿದ ಮೇಲೆ ರಾಜಸೇನನಿಂದ ಸೇವೆಗೊಂಡ ಶ್ರೀಶಂಕರೇಂದ್ರ ಗುರುರಾಜನು ಶಿವತ್ವವನ್ನು ಹೊಂದಿದನು– ಎಂದು ಶ್ಲೋಕಾರ್ಥ.

(೨) ದ್ವಾರಕಾಮಠದ ಬಳಿಯಲ್ಲಿರುವ ಒಂದು ಶಾಸನದಲ್ಲಿ ಯುಧಿಷ್ಠಿರಶಕ ೨೬೬೧ನೆಯ ವೈಶಾಖ ಶುದ್ಧ ಪಂಚಮಿಯಲ್ಲಿ ಅವತರಿಸಿ ೨೬೬೩ನೆಯ ಕಾರ್ತಿಕ ಹುಣ್ಣಿಮೆಯಲ್ಲಿ ಬ್ರಹ್ಮೀಭೂತರಾದರೆಂದು ಇದೆಯಂತೆ. ಇದು ಚಿತ್ಸುಖರ ಹೇಳಿಕೆಯೇ ಆಗಿದೆ.

ಇಲ್ಲಿಯವರೆಗೆ ಕ್ರಿಸ್ತಪೂರ್ವ ಐದನೆಯ ಶತಮಾನವೇ ಆಚಾರ್ಯರ ಜನನಕಾಲವೆಂದು ಹೇಳುವವರ ಮತವನ್ನು ತಿಳಿಸಿದಂತಾಯಿತು.

(೩) ಶೃಂಗೇರೀಪೀಠದ ಸಂಪ್ರದಾಯದಂತೆ ವಿಕ್ರಮಶಕೆ ೧೪ನೆಯ ಈಶ್ವರಸಂವತ್ಸರದ ವೈಶಾಖ ಶುದ್ಧ ೫ ಆರ್ದ್ರಾನಕ್ಷತ್ರ ಮಿಥುನಲಗ್ನದಲ್ಲಿಯೇ ಆಚಾರ್ಯರ ಅವತಾರವು ವಿಕ್ರಮಶಕೆಯ ೪೬ನೆಯ ಜ್ಯೇಷ್ಠ ಶುದ್ಧ ದ್ವಾದಶಿಯ ದಿನ ಕೈಲಾಸಗಮನವೆಂದು ಹೇಳುತ್ತಾರೆ. ಈ ಸಂಪ್ರದಾಯದಲ್ಲಿ ಕ್ರಿ.ಪೂ. 44ರಿಂದ ಕ್ರಿ.ಪೂ. 12ರವರೆಗೆ ಆಚಾರ್ಯರ ಕಾಲವಾಗಿದೆ. ಕೂಡಲಿಮಠದ ಪರಂಪರೆಯು ಪಟ್ಟಿಯಲ್ಲಿ ವಿಕ್ರಮಶಕೆ ೭೫ನೆಯ ವರ್ಷದಲ್ಲಿ (ಕ್ರಿ.ಪೂ. 18(ಆಚಾರ್ಯರ ಅವತಾರವಾಗಿ ವಿಕ್ರಮಶಕೆ ೧೦೭ನೆಯ ವರ್ಷ (ಕ್ರಿ.ಶ.50) ದಲ್ಲಿ ಕೈಲಾಸವನ್ನು ಸೇರಿದರೆಂದು ಸೂಚಿಸಿದೆ ಎಂದು ಸಂಸ್ಥಾನದ ಪೀಠಾಧಿಪರ ಉಪನ್ಯಾಸದಲ್ಲಿ (ಪು. ೯) ಇವೆ. ಇಲ್ಲಿ ಕ್ರಿಸ್ತಪೂರ್ವ, ಮತ್ತು ಕ್ರಿಸ್ತಾನಂತರದ ಒಂದನೆಯ ಶತಮಾನವನ್ನು ಆಚಾರ್ಯರ ಕಾಲವೆಂದು ಅಂಗೀಕರಿಸಲಾಗಿದೆ.4

1. ಯುಧಿಷ್ಠಿರಶಕಾರಂಭದ ವಿಷಯಕ್ಕೆ ವಿವಿಧಾಭಿಪ್ರಾಯಗಳಿವೆ. (ಶ್ರೀ. ಶಂ. ಅನು ೨ ಪು. ೨೮. ೩೨). ಇಲ್ಲಿ ಕಲ್ಯಾರಂಭದಿಂದ ೨೬೬೩ಕ್ಕೇ ಆಚಾರ್ಯರ ಜನನವೆಂದಿಟ್ಟುಕೊಂಡಿದೆ.

2. ಶೃಂಗೇರಿಯಲ್ಲಿ ಅಂಗೀಕರಿಸಿದ ವಿಕ್ರಮಶಕೆಯು ಉತ್ತರದೇಶದ ಮಾಲವ ಶಕೆಯಲ್ಲವೆಂದೂ ಚಾಲುಕ್ಯವಿಕ್ರಮವನ್ನು ತೆಗೆದುಕೊಳ್ಳಬೇಕೆಂದೂ ಸರ್ವಪ್ರಥಮವಿಕ್ರಮನು ಕ್ರಿ. ಶ. 670ರಲ್ಲಿ ಸಿಂಹಾಸನಾಧಿರೋಹಣಮಾಡಿದ್ದರಿಂದ ಶಂಕರರ ಜನನವು ಕ್ರಿ ಶ. 684 ತಿರೋಧಾನ ಕ್ರಿ.ಶ. 716 ಎಂದಾಗುವದೆಂದೂ ಕಲ್ಪಿಸಿದವರು ಲೋಕಮಾನ್ಯತಿಲಕರು (?) (ಬಲ. ಶಂ. ಪು. ೩೯–೪೦.)

2. ಶ್ರೀ. ಶಂ. ಅನು. ೨ ಪು. ೨೯ ನೋಡಿರಿ.

4. ಬಾಳೆಕುದುರುಮತದಲ್ಲಿ ಕೂಡಲಿ ಪೀಠಾಧ್ಯಕ್ಷರು ಮಾಡಿದ ಭಾಷಣ (ಕೂ.ಶಂ. ಪು. ೯)

(೪) ಆಚಾರ್ಯರ ಜನ್ಮಕಾಲವು ವೈಶಾಖ ಶು. ೫ ಎಂದು ಬಹುಮತ ವಿದ್ದರೂ ದಶಮಿಯೆನ್ನುವವರೂ ಇದಾರೆ; ಹಾಗೆಯೇ ಬ್ರಹ್ಮೀಭೂತರಾದ ದಿನ ವ್ಯಾಪಕ ಎನ್ನುವವರಂತೆ ಹುಣ್ಣಿಮೆಯೆನ್ನುವವರೂ ಇದಾರೆ. ಉದಾಹರಣೆಗೆ ನೀಲಕಂಠಭಟ್ಟಕೃತ **ಶಂಕರವಿಜಯಸಾರ**ಭದಲ್ಲಿ ಹೀಗಿದೆ :

ಪ್ರಾಸೂತಶಿಷ್ಯಶರದಾಮುತಿಯೋಗವರ್ತ್ಯಾ–
ನೇಕಾದಶಾಧಿಕಶತೋನ ಚತುಃಸಹಸ್ರ್ಯಾಮ್ ।
ಸಂವತ್ಸರೇ ವಿಭವನಾಮ್ನಿ ಶುಭೇ ಮುಹೂರ್ತೇ
ರಾಧೇ ಸಿತೇ ಶಿವಗುರೋರ್ಗೃಹಿಣೀ **ದಶಮ್ಯಾಮ್** ॥

ಕಲಿ (೪೦೦೦ಕ್ಕೆ ೧೧೧ ಕಡಿಮೆ ಆಂದರೆ) ೩೮೮೯ನೆಯ ವಿಭವಸಂವತ್ಸರದ ವೈಶಾಖ ಶುದ್ಧ ದಶಮಿಯದಿನ ಶಿವಗುರುವಿನ ಪತ್ನಿಯು ಶಂಕರರನ್ನು ಹಡೆದಳು ಎಂದರ್ಥ. ಇವಕ್ಕನುಗುಣವಾಗಿ ಶಂಕರಜಯಂತಿಯನ್ನು ಈಗಲೂ ದಶಮಿಯ ದಿನ ಆಚರಿಸುವವರು ಉತ್ತರಕರ್ನಾಟಕದಲ್ಲಿರುತ್ತಾರೆ.

ಮಾಧವೀಯಶಂಕರವಿಜಯದಲ್ಲಿ ಕಾಲವನ್ನು ಕೊಟ್ಟಿರುವದಿಲ್ಲ. ಹಿಂದೆ (ಪು. ೧೯) ಹೇಳಿರುವ ವ್ಯಾಸಾಚಲೀಯವ ಎರಡನೆಯ ಶ್ಲೋಕವೇ ಇಲ್ಲಿಯೂ ಕಾಣಬರುತ್ತದೆ. ಲಗ್ನೇ ಶುಭೇ ಶುಭಯತೇ ಸುಷುವೇ ಕುಮಾರಂ| ಶ್ರೀಪಾರ್ವತೀವ ಸುಖಿನೀ ಶುಭವೀಕ್ಷಿತೇ ಚ॥ ಜಾಯಾ (ಆರ್ಯಾ) ಸತೀ ಶಿವಗುರೋರ್ನಿಜತುಜ್ಗಸಂಸ್ಥೇ | ಸೂರ್ಯೇ ಕುಜೇ ರವಿಸುತೇ ಗುರುಣಾ ಚ ಕೇನ್ದ್ರೇ॥ (ಮಾ.ಶಂ. ೩–೭). ಮಾಧವ, ವ್ಯಾಸಾಚಲ– ಇವರಿಬ್ಬರಲ್ಲಿ ಒಬ್ಬರು ಒಬ್ಬರಿಂದ ಶ್ಲೋಕವನ್ನು ತೆಗೆದುಕೊಂಡಿರುವರೆಂಬುದು ಖಂಡಿತ.

ಚಿದ್ವಿಲಾಸೀಯ(ಜನೆಯ ಸರ್ಗ)ದಲ್ಲಿ :

ದಿವಸೇ ಮಾಧವತೌ ಚ ಸ್ವೋಚ್ಚಸ್ಥೇ ಗ್ರಹಪಞ್ಚಕೇ
ಮಧ್ಯಾಹ್ನೇ ಚಾಭಿಜಿನ್ನಾಮಮುಹೂರ್ತೇ ಚಾರ್ದ್ರಯಾ ಯುತೇ॥೩೮॥
ಉದಯಾಚಲವೇಲೇವ ಭಾನುಮನ್ತಂ ಮಹೌಜಸಮ್ ।
ಪ್ರಾಸೂತ ತನಯಂ ಸಾಧ್ವೀ ಗಿರಿಜೇವ ಷಡಾನನಮ್ ॥೩೯॥

ಇಲ್ಲಿ ಆಚಾರ್ಯರ ಹೆಸರನ್ನು ಹೇಳಿಲ್ಲ. ಹಿಂದೆ ಹೇಳಿದ 'ಬೃಹಚ್ಛಂಕರವಿಜಯ'ದಲ್ಲಿ ಹೇಳಿರುವ ಜನ್ಮಕಾಲವೇ ಸ್ವಲ್ಪಹೆಚ್ಚುಕಡಿಮೆಯಾಗಿ ಆದೇ ಮಾತುಗಳಲ್ಲಿ ವರ್ಣಿತವಾಗಿರುವದನ್ನು ವಾಚಕರು ಲಕ್ಷಿಸಬೇಕು. ಬೃಹಚ್ಛಂಕರವಿಜಯವನ್ನು ಆತ್ಮಬೋಧೇಂದ್ರರು ಪ್ರಮಾಣಗ್ರಂಥವೆಂದು ಪರಿಗಣಿಸಿರುತ್ತಾರೆ; ಆದರ ಶ್ಲೋಕಗಳೇ ಇವರಲ್ಲಿಯೂ ಇರುವವೆಂಬುದರಿಂದ ಈ ಗ್ರಂಥದ ಕಾಲವನ್ನು

ನಿರ್ಣಯಿಸುವವರಿಗೆ ವ್ಯಾಮೋಜನಕರವಾಗಬಹುದೆಂದು ಇನೆಯ ಪರಿಶಿಷ್ಟದಲ್ಲಿ ಆ ಶ್ಲೋಕಗಳನ್ನು ಕೊಟ್ಟಿರುತ್ತೇವೆ. ಕೇರಳೀಯಶಂಕರವಿಜಯದಲ್ಲಿ (ಆ. ೨–೨೩) ಹೀಗಿದೆಯಂತೆ (ಶ್ರೀ. ಶಂ. ಅನು. ಪು. ೨೦) :

ಪ್ರವೃದ್ಧೇ ಪತ್ಸ ಚಾಸೂಪ ನನ್ದನಂ ನನ್ದನೇ ಶುಭೇ ।
ವೈಶಾಖೇ ಮಾಸಿ ಪಞ್ಚಮ್ಯಾಂ ಶುಕ್ಲಪಕ್ಷೇ ಪುನರ್ವಸೌ ॥

'ನಂದನಸಂವತ್ಸರದ ವೈಶಾಖಮಾಸ ಶುದ್ಧ ಪಂಚಮಿಯಲ್ಲಿ ಪುನರ್ವಸು ನಕ್ಷತ್ರದಲ್ಲಿ ಆರ್ಯಾಂಬೆ ಕಂದನನ್ನು ಹಡೆದಳು'. ಇಲ್ಲಿ ಶಕೆಯ ವಿಚಾರವಿಲ್ಲ.

'ಕೇರಳೋತ್ಪತ್ತಿ' ಎಂಬ ಗ್ರಂಥದಲ್ಲಿ ಕಲಿ ೩೫೧೧ (ಕ್ರಿ.ಶ. 400) ಎಂದೂ ಅವರು ೩೮ ವರ್ಷಗಳ ಕಾಲ ಬದುಕಿದ್ದರೆಂದೂ ಇದೆಯಂತೆ. (Indian Antiquary VII p. 282, ಬಲ, ಪು. ೩೧) ಇದರಲ್ಲಿರುವ ಒಂದು ಕಥೆಯ ವಿಷಯಕ್ಕೆ ೪ನೆಯ ಪರಿಶಿಷ್ಟವನ್ನು ನೋಡಿ.

ಸಾಂಪ್ರದಾಯಿಕಕಾಲನಿರ್ಣಯದ ಉಪಸಂಹಾರ :

೧೪. ಶಂಕರವಿಜಯಗಳ ಮತ್ತು ಮಠದ ಸಂಪ್ರದಾಯಗಳ ಅಭಿಪ್ರಾಯವನ್ನು ಹೊಂದಿಸಿಕೊಳ್ಳುವದು ಹೇಗೂ ಸಾಧ್ಯವಿಲ್ಲವೆಂಬುದು ನಿಶ್ಚಿತವಾಗಿದೆ. ಕ್ರಿ. ಪೂ. ಐದನೆಯ ಶತಮಾನದಿಂದ ಹಿಡಿದು ಕ್ರಿ. ಶ. ಒಂದನೆಯ ಶತಮಾನದ ಆದಿಯವರೆಗೂ ತಮತಮಗೆ ತೋಚಿದ ಕಾಲಗಳನ್ನು ಅವರವರು ಬರೆದಿರುತ್ತಾರೆ. ಇವರಲ್ಲಿ ಯಾರೊಬ್ಬರೂ ಆಚಾರ್ಯರ ಕಾಲದವರಲ್ಲ; ಕೆಲವರು ವರ್ಷ, ತಿಂಗಳು, ವಾರ, ನಕ್ಷತ್ರ, ಲಗ್ನ– ಮುಂತಾವವುಗಳನ್ನು ಕೊಟ್ಟಿದ್ದರೂ ಅವರು ಕೊಟ್ಟಿರುವ ಕಾಲಕ್ಕೆ ಆಧಾರವೇನೆಂಬುದು ಸ್ಪಷ್ಟವಾಗಿರುವದಿಲ್ಲ; ಅವು ಯಾವ ಶಕೆ ಎಂಬುದು ಸ್ಪಷ್ಟವಾಗುವದಿಲ್ಲ. ಶಕೆಯಿದ್ದ ಕಡೆಯಲ್ಲಿಯೂ ಸಂಶಯಕ್ಕೆ ಅವಕಾಶವಿದೆ. ಈಗಿನ ಐತಿಹಾಸಿಕರು ಕೆಲಕೆಲವು ಬಾಹ್ಯಸಾಕ್ಷ್ಯಗಳಿಂದ ತರ್ಕಿಸಿ ಸಿದ್ಧಾಂತ ಮಾಡಿರುವ ಕಾಲಗಳೂ ಒಮ್ಮತವಾಗಿರುವದಿಲ್ಲ; ತರ್ಕಕ್ಕೆ ನಿಲುಗಡೆ ಎಲ್ಲಿಂದ ಬರಬೇಕು ? ಈ ಕಾಲವಿಷಯಕವಾದ ಅಭಿಪ್ರಾಯಗಳನ್ನು ೪ನೆಯ ಪರಿಶಿಷ್ಟದಲ್ಲಿ ತೋರಿಸಿರುತ್ತೇವೆ. ಶಂಕರಭಗವತ್ಪಾದರು ವೈಶಾಖ ಶುದ್ಧ ಪಂಚಮಿಯ ದಿನ ಹುಟ್ಟಿದರೆಂದು ಹೇಳುವವರಿಗೆ ಬಹುಮತವಿದೆ; ದಶಮಿ ಎಂದು ಹೇಳುವವರ ಮತವು ಬಹಳ ಕಡಿಮೆಯ ಸಂಖ್ಯೆಯವರದು. ಆದರೆ ಪಂಚಮಿಯ ಪಕ್ಷವು ಕೂಡ ಸಾಧಾರವೆಂದು ನಂಬುವಹಾಗಿಲ್ಲ. 'ಶಂಕರ' ಎಂಬ ನಾಮಾಕ್ಷರಗಳ (೫,೧,೩ ಎಂಬ) ಅಂಕೆಗಳನ್ನು ಎಡಗಡೆಯಿಂದ ಎಣಿಸಿ ವೈಶಾಖ ಶುದ್ಧ ಪಂಚಮಿ ಎಂದು ತರ್ಕಿಸಿರಲೂಬಹುದು. ಇದರ ನಿಜವನ್ನು ಕಾಲಾತೀತನಾದ ಶಂಕರನೇ ಬಲ್ಲನೆಂದು ಹೇಳಬೇಕಾಗಿದೆ.

ಬೃಹದಾರಣ್ಯಕಸೂತ್ರಭಾಷ್ಯಗಳ ಹೋಲಿಕೆ :

೧೫. ಆಚಾರ್ಯರ ಕಾಲನಿರ್ಣಯಕ್ಕೆ ಅವರ ಗ್ರಂಥಗಳ ಆಂತರಂಗ ಪರೀಕ್ಷೆಯು ಬಹುಮುಖ್ಯವಷ್ಟೆ ? ಆದರೆ ಆಚಾರ್ಯರ ನಿಶ್ಚಿತಗ್ರಂಥಗಳು ಯಾವ ವೆಂಬುದನ್ನು ನಿಶ್ಚಯಿಸುವವೂ ಕಷ್ಟವಾಗಿದೆ ಎಂಬುದೊಂದು ದೌರ್ಭಾಗ್ಯವಾಗಿದೆ. ಪ್ರಸ್ಥಾನತ್ರಯಭಾಷ್ಯಗಳು ನಿಃಸಂಶಯವಾಗಿ ಆಚಾರ್ಯಕೃತವೆಂಬುದಕ್ಕೆ ಬಹು ಜನರ ಸಮ್ಮತಿ ಇದೆ. ಇವನ್ನು ಮುಂದೆ ಗ್ರಂಥಗಳ ವಿಚಾರವಾಗಿ ಬರೆಯುವಾಗ ವಿಚಾರಕ್ಕೆಟ್ಟುಕೊಳ್ಳಬೇಕಾಗಿದೆಯಾದರೂ ಸದ್ಯಕ್ಕೆ ಈ ವಿಷಯಕ್ಕೆಕೂಡ ಇರುವ ಒಂದು ತೊಡಕನ್ನು ಇಲ್ಲಿ ಹೇಳಲೇಬೇಕಾಗಿದೆ. ಈಗ **ಸೂತ್ರಭಾಷ್ಯ**ಕ್ಕೆ ಎಲ್ಲರೂ ಅಗ್ರಸ್ಥಾನವನ್ನು ಕೊಟ್ಟಿರುತ್ತಾರೆ. **ನೈಷ್ಕರ್ಮ್ಯಸಿದ್ಧಿ**ಯನ್ನು ಬರೆದ ಸುರೇಶ್ವರಾಚಾರ್ಯರು ಶ್ರೀಶಂಕರಪಾದಪದ್ಮಯುಗಲವನ್ನು ಸೇವೆಮಾಡಿ (ಶ್ರೀಮಚ್ಛಙ್ಕರವಾದಪದ್ಮಯುಗಲಂ ಸಂಸೇವ್ಯ, ನೈ. ಸಿ. ೪–೭೪) ತಾವು ಗ್ರಂಥವನ್ನು ಬರೆದಿರುವೆನೆಂದು ಬಾಯಿಬಿಟ್ಟು ಹೇಳಿಕೊಂಡಿರುವರಾದರೂ ಸೂತ್ರಭಾಷ್ಯದಿಂದ ಯಾವ ವಾಕ್ಯವನ್ನೂ ಅಲ್ಲಿ ಅವತರಿಸಿರುವದಿಲ್ಲ ; ಇದರಂತೆ **'ಶಂಕರಭಾನು'**ವೆಂದು ಗುರುಗಳನ್ನು ಕೊಂಡಾಡಿರುವ (ತಸ್ಮೈ ಶಙ್ಕರಭಾನವೇ ಬೃ.ವಾ. ೬–೨೫) **ಬೃಹದಾರಣ್ಯಕವಾರ್ತಿಕ**ದದಲ್ಲಿಯೂ ಸೂತ್ರಭಾಷ್ಯದ ವಾಕ್ಯಗಳ ಪರಾಮರ್ಶವಿರುವದಿಲ್ಲ. ಆದ್ದರಿಂದ ದೃಷ್ಟವಾದ ಆಧಾರದ ಮೇಲೆಯೇ ವಿಷಯವನ್ನು ನಂಬುವವರಾದ ಈಗಿನ ಗ್ರಂಥಶೋಧಕರಿಗೆ ಸೂತ್ರಭಾಷ್ಯ,ಬೃಹದಾರಣ್ಯಕಭಾಷ್ಯ-ಇವೆರಡೂ ಒಬ್ಬ ಶಂಕರಾಚಾರ್ಯರೇ ಬರೆದಿದಾರೆಂದು ತೋರಿಸಿಕೊಡುವದಕ್ಕೆ ನಮಗೆ ಸಾಧನವಿಲ್ಲವಾಗಿದೆ. ಶಂಕರರು ತಮ್ಮ ಗ್ರಂಥಗಳಲ್ಲಿ ಒಂದರಲ್ಲೊಂದನ್ನು ಹೆಸರಿಟ್ಟು ಪರಾಮರ್ಶಿಸುವ ಸ್ವಭಾವದವರಲ್ಲವಾದ್ದರಿಂದ ವಿಚಾರವು ಇನ್ನಷ್ಟು ದುಸ್ತರವಾಗಿರುತ್ತದೆ. ಇದರ ಜೊತೆಗೆ ಬೃಹದಾರಣ್ಯಕಭಾಷ್ಯದ ಶೈಲಿಯೂ ಸೂತ್ರಭಾಷ್ಯದ ಶೈಲಿಯೂ ಕೆಲವು ಸಂದರ್ಭಗಳಲ್ಲಿ ಬೇರೆಬೇರೆಯಾಗಿರುವಂತೆ ಕಾಣುತ್ತವೆ.

ಇಷ್ಟೇ ಅಲ್ಲ. ಒಂದು ಭಾಷ್ಯದಲ್ಲಿ **ಮತ್ತೊಂದರ**ಲ್ಲಿರುವ ಕೆಲವು ವಿಚಾರಗಳನ್ನು ಖಂಡಿಸಿರುವದೂ ಕಾಣಬರುತ್ತಿದೆ ?[1] ಉದಾಹರಣೆಗೆ ಸ್ವಭಾವದಿಂದ ಸರ್ವಗತವಾಗಿರುವ ಆನಂತವಾದ ಪ್ರಾಣಗಳಿಗೆ ಕರ್ಮಜ್ಞಾನವಾಸನೆಗಳಿಗೆ ತಕ್ಕಂತೆ ದೇಹಾಂತರವಾಗುವ ವೃತ್ತಿಯು ಸಂಕೋಚವಿಕಾಸಗಳನ್ನು ಪಡೆಯುತ್ತದೆ (ಅತಸ್ತದ್ವಶಾತ್ಸ್ವಭಾವತಶ್ಚ ಸರ್ವಗತಾನಾಮನನ್ತಾನಮಪಿ ಪ್ರಾಣಾನಾಂ ಕರ್ಮಜ್ಞಾನವಾಸನಾರೂಪೇಣೈವ ದೇಹಾರಮ್ಭವಶಾತ್ **ಪ್ರಾಣಾನಾಂ ವೃತ್ತಿಃ ಸಂಕುಚತಿ ವಿಕಸತಿ ಚ** ಬೃ. ೪–೪–೩, ಪು. ೯೧೨) ಎಂದು ಹೇಳಿರುವ

---

1. ಈ ವಿಷಯವಾಗಿ ಇದೇ ಗ್ರಂಥಕರ್ತರು ಬೃಹದಾರಣ್ಯಕಭಾಷ್ಯದ ಪೀಠಿಕೆಯಲ್ಲಿ ವಿಸ್ತಾರವಾಗಿ ಬರೆದಿರುವದನ್ನು ನೋಡಿರಿ.

ಮತವನ್ನೇ **ಸೂತ್ರಭಾಷ್ಯದಲ್ಲಿ** 'ಏವಂ ಶ್ರುತ್ಯುಕ್ತೇ: ದೇಹಾನ್ತರಪ್ರತಿಪತ್ತಿ ಪ್ರಕಾರೇ ಸತಿ **ಯಾಃ ಪುರುಷಮತಿಪ್ರಭವಾಃ ಕಲನಾಃ ವ್ಯಾಪಿನಾಂ ಕರಣಾನಾಮಾತ್ಮನಶ್ಚ ದೇಹಾನ್ತರಪ್ರತಿಪತ್ತೌ ಕರ್ಮವಶಾದ್ ವೃತ್ತಿ ಲಾಭಸ್ತತ್ರ ಭವತಿ**....ಇತ್ಯೇವಮಾದ್ಯಾಃ **ಸರ್ವಾ ಏವಾನಾದರ್ತವ್ಯಾಃ । ಶ್ರುತಿವಿರೋಧಾತ್** ॥" (ಸೂ. ಭಾ. ೩–೧–೧) ಎಂದು ಖಂಡಿಸಿರುತ್ತದೆ. ಬೃಹದಾರಣ್ಯಕಭಾಷ್ಯದಲ್ಲಿ 'ಪುತ್ತಿಕಾದಿಶರೀರೇಷು ಗೋತ್ವಾದಿವತ್ ಕೃತ್ಸ್ನೋ ವ್ಯೇನ ಪರಿಸಮಾಪ್ತ ಇತಿ ಸಮತ್ವಂ ಪ್ರಾಣಸ್ಯ | ನ ಪುನಃ ಶರೀರಪರಿಮಾಣೇನೈವ ಅಮೂರ್ತತ್ವಾತ್ಸರ್ವಗತತ್ವಾಚ್ಚ |.... ತೆ ಏತೇ ಸರ್ವ ಏವ ಸಮಾಃ ಸರ್ವೇ ಅನನ್ತಾಃ ಇತಿ ಶ್ರುತೇಃ |' 'ಪುತ್ತಿಕಾದಿಪ್ರಾಣಿಗಳ ಶರೀರದಲ್ಲಿ ಗೋತ್ವವೇ ಮುಂತಾದವುಗಳಂತೆ ಸಂಪೂರ್ಣವಾಗಿ ತುಂಬಿಕೊಂಡಿರುತ್ತಾನೆಂಬುದೇ ಪ್ರಾಣನ ಸಮತ್ವವು; ಇಷ್ಟೇ ಹೊರತು ಶರೀರದ ಪರಿಮಾಣವೇ ಉಳ್ಳವನು ಎಂಬ ಕಾರಣ ದಿಂದ ಸಮನಲ್ಲ. ಏಕೆಂದರೆ ಪ್ರಾಣನು ಅಮೂರ್ತನೂ ಸರ್ವಗತನೂ ಆಗಿರು ತ್ತಾನೆ ...'ಇವರೆಲ್ಲರೂ....ಸಮರು, ಎಲ್ಲರೂ ಅನಂತರು' ಎಂಬ ಶ್ರುತಿ ಇದಕ್ಕೆ ಪ್ರಮಾಣವು' ಎಂದು ಸೂತ್ರಭಾಷ್ಯದಲ್ಲಿ ಖಂಡಿಸಿರುವ ಈ ಪಕ್ಷವನ್ನೇ ಆವಲಂಬಿಸಿ **'ಸರ್ವಗತಸ್ಯ ತು ಶರೀರಪರಿಮಾಣವೃತ್ತಿಲಾಭೋ ನ ವಿರುಧ್ಯತೇ ।'** (ಸರ್ವಗತನಾದರೂ ಶರೀರಪರಿಮಾಣಕ್ಕೆ ತಕ್ಕಂತೆ ವೃತ್ತಿಲಾಭವಾಗುವದೇನೂ ವಿರುದ್ಧವಲ್ಲ) ಎಂದು ಬರೆದಿದೆ. ಸೂತ್ರಭಾಷ್ಯದಲ್ಲಿ ' ಸಮಃ ಪ್ಲುಷಿಣಾ ' ಮುಂತಾದ ಶ್ರುತಿಗಳಲ್ಲಿ ಪ್ರಾಣನು ವಿಭುವೆಂದೂ ಹೇಳಿವೆಯಲ್ಲ!– ಎಂಬ ಶಂಕೆಯನ್ನು ಎಬ್ಬಿಸಿ 'ಆಧಿದೈವಿಕೇನ ಸಮಷ್ಟಿವ್ಯಷ್ಟಿರೂಪೇಣ ಹಿರಣ್ಯಗರ್ಭೇಣ ಪ್ರಾಣಾತ್ಮನೈವೈತದ್ವಿಭುತ್ವಮಾಮ್ನಾಯತೇ ನಾಧ್ಯಾತ್ಮಿಕೇನ। **ಅಪಿ ಚ 'ಸಮಃ ಪ್ಲುಷಿಣಾ' ಇತ್ಯಾದಿನಾ ಸಾಮ್ಯವಚನೇನ ಪ್ರತಿಪ್ರಾಣಿನರ್ತಿನಾ ಪ್ರಾಣಸ್ಯ ಪರಿಚ್ಛೇದ ಏವ ಪ್ರದರ್ಶ್ಯತೇ। ತಸ್ಮಾದದೋಷಃ ।'** (ಸೂ. ಭಾ. ೨–೪–೧೩)ಎಂದು ಬರೆದಿದೆ. ಇಲ್ಲಿ 'ಪ್ರಾಣನು ಸರ್ವಗತನಾಗಿರುವ ನಾದರೂ ಶರೀರಪರಿಮಾಣಕ್ಕೆ ತಕ್ಕಂತೆ ವೃತ್ತಿಲಾಭವಾಗುವದೇನೂ **'ವಿರುದ್ಧ ವಲ್ಲ'** – ಎಂಬ ಬೃಹದಾರಣ್ಯಕವಾಕ್ಯದ ಅಭಿಪ್ರಾಯವನ್ನು ಮನದಂದರೆ ಶ್ರುತಿಗೆ ಆಥವಾ ಯುಕ್ತಿಗೆ ವಿರುದ್ಧವೆಂದು ಯಾರೋ ಆಕ್ಷೇಪಿಸಿದ್ದಕ್ಕೆ ಇದು ಸಮಾಧಾನವಾಗಿರಬೇಕೆಂದು ತರ್ಕಿಸುವದಕ್ಕೆ ಅವಕಾಶವಿದೆ ; ಸೂತ್ರಭಾಷ್ಯದಲ್ಲಿ "ಸಮಃ ಪ್ಲುಷಿಣಾ" ಎಂಬ ಶ್ರುತಿಯು ಮುಖ್ಯಪ್ರಾಣನಿಗೆ ವ್ಯಾಪಕತ್ವವನ್ನೇ ಹೇಳುತ್ತದೆಯಲ್ಲ !– ಎಂಬ ಶಂಕೆಯನ್ನು ಯಾರೋ ಮಾಡಿದ್ದಕ್ಕೆ ಆ ಶ್ರುತಿಯೂ **ಪರಿಚ್ಛೇದವನ್ನೇ** ಹೇಳುತ್ತದೆಯೆಂದು ವ್ಯಾಖ್ಯಾನಮಾಡಬಹುದಾಗಿದೆಯಾದ್ದ ರಿಂದ ನಮ್ಮ ಪಕ್ಷದಲ್ಲಿ **ಶ್ರುತಿವಿರೋಧದೋಷವಿಲ್ಲ** ಎಂದು ಸಮಾಧಾನವನ್ನು ಬರೆದಂತೆ ಕಾಣಿಸುತ್ತದೆ.

ಈ ರೀತಿಯಲ್ಲಿ ಎರಡು ಪಕ್ಷಗಳು ಒಂದೊಂದು ದೃಷ್ಟಿಯಿಂದ ಶ್ರುತಿಗೂ ಯುಕ್ತಿಗೂ ಹೊಂದುಗೆಯಾಗಿಯೇ ಇದೆಯಾದರೂ ಈ ಎರಡರಲ್ಲಿ ಯಾವುದನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ವೇದಾಂತಿಗಳಲ್ಲಿ ಮತಭೇದವು ಮೊದಲಿನಿಂದಲೂ ಇತ್ತೆಂದೂ ಆವುಗಳಲ್ಲಿ ಒಂದನ್ನು ಬೃಹದಾರಣ್ಯಕಭಾಷ್ಯವೂ ಇನ್ನೊಂದನ್ನು ಸೂತ್ರಭಾಷ್ಯವೂ ಸ್ವೀಕರಿಸಿರುವವೆಂದೂ 'ನ ವಿರುಧ್ಯತೇ' (ಬೃ. ಭಾ.), "ಆದೋಷಾ" (ಸೂ. ಭಾ.)ಎಂಬ ಮಾತುಗಳಿಂದ ಸೂಚಿತವಾಗಿದೆ ಎಂಬುದನ್ನು ವಿಮರ್ಶಕರು ಒಪ್ಪಬೇಕಾಗುತ್ತದೆ. ಇದು ಸರಿಯಾದರೆ ಈ ಎರಡು ಭಾಷ್ಯಗಳಿಗೂ ಕರ್ತೃಗಳು ಒಬ್ಬರೇ ಶಂಕರಾಚಾರ್ಯರಲ್ಲ ಎಂದು ವಾದಿಸುವವರಿಗೆ ಇಲ್ಲಿ ಅವಕಾಶವಿರುತ್ತದೆ. ಈ ಇಬ್ಬರು ಸಮಕಾಲಿಕರಾಗಿದ್ದರೂ ಇರಬಹುದು; ಒಬ್ಬರಿಗಿಂತ ಒಬ್ಬರು ಬೇರೆಯಾಗಿದ್ದರೂ ಇರಬಹುದು; **ಎನ್. ವೆಂಕಟರಾಮನ್**ರವರು ಬರೆದಿರುವ ಕಾಮಕೋಟಿಪೀಠದ ಗುರುಪರಂಪರೆಯ ಕಾಲಕೋಷ್ಟಕದಲ್ಲಿ (Chronological Table) ಆದ್ಯಶಂಕರ, ಕೃಪಾಶಂಕರ, ಉಜ್ಜ್ವಲಶಂಕರ, ಮೂಕಶಂಕರ ಮತ್ತು ಅಭಿನವಶಂಕರ– ಎಂದ ಐದುಜನ ಶಂಕರರನ್ನು ತೋರಿಸಿರುತ್ತದೆ. ಆ ಕೋಷ್ಟಕವು ವಿಶ್ವಸನೀಯವಾಗಿದ್ದರೆ ಆವರೊಳಗೆ ಸೂತ್ರಭಾಷ್ಯವನ್ನು ಬರೆದವರು ಯಾರೆಂಬುದನ್ನು ಯಾವದಾದರೊಂದು ಸ್ವತಂತ್ರಪ್ರಮಾಣದಿಂದ ಸಿದ್ಧಿಪಡಿಸಬೇಕಾದದ್ದು ಆವಶ್ಯವಾಗುತ್ತದೆ. ಬೃಹದಾರಣ್ಯಕಭಾಷ್ಯವನ್ನು ಬರೆದಿರುವವರು ವಾರ್ತಿಕಕಾರರಾದ ಸುರೇಶ್ವರಾಚಾರ್ಯರ ಗುರುಗಳು ಎಂಬುದಕ್ಕಂತೂ ಯಾವ ಆಡ್ಡಿಯೂ ಈ ತೊಡಕಿನಿಂದ ಬರುವಹಾಗಿಲ್ಲ; ಏಕೆಂದರೆ ಬೃಹದಾರಣ್ಯಕಭಾಷ್ಯಕಾರರು ತಮ್ಮ ಗುರುಗಳೆಂದು ಸುರೇಶ್ವರರೇ ಹೇಳಿಕೊಂಡುಬಿಟ್ಟಿರುತ್ತಾರೆ. ಈ ವಿಷಯದ ಸಾರಾಸಾರತೆಯನ್ನೂ ತತ್ತ್ವನಿರ್ಣಯದ ಕಾರ್ಯವನ್ನೂ ಪುರಾತತ್ತ್ವವಿಮರ್ಶಕರಿಗೆ ಬಿಟ್ಟು ಪ್ರಕೃತ ಸೂತ್ರಭಾಷ್ಯಕಾರರ ಕಾಲವಿಮರ್ಶೆಗೆ ಈಗ ಕೈಹಾಕುವೆವು.

ಸೂತ್ರಭಾಷ್ಯದ ಕಾಲ

೧೫. ಸೂತ್ರಭಾಷ್ಯದಲ್ಲಿ **ಸ್ರುಘ್ನ, ಮಥುರಾ, ಪಾಟಲಿಪುತ್ರ**–ಇವುಗಳ ಪರಾಮರ್ಶವನ್ನು (ಸೂ. ಭಾ. ೨–೧–೮, ೪–೨–೫) ಮಾಡಿರುತ್ತದೆ; ಆ ದೃಷ್ಟಾಂತಗಳಿಂದ ಆವು ಆಚಾರ್ಯರ ಕಾಲಕ್ಕೆ ಇದ್ದವೆಂದು ತಿಳಿಯಬೇಕಾಗುತ್ತದೆ. ಆದರೆ ಪಾಟಲಿಪುತ್ರವು ಕ್ರಿ-ಶ. 756ರಲ್ಲಿ ನದಿಯ ಪ್ರವಾಹದಲ್ಲಿ ಮುಳುಗಿ ಹೋಯಿತೆಂದು ಇತಿಹಾಸದಿಂದ ತಿಳಿಯುತ್ತದೆ. ಆದ್ದರಿಂದ ಆ ಕಾಲಕ್ಕಿಂತ ಆಚಾರ್ಯರು ಮೊದಲು ಇದ್ದರೆಂದಾಯಿತು. ಇದರಂತೆ **ಪೂರ್ಣವರ್ಮ**ನೆಂಬ ರಾಜನ ಪರಾಮರ್ಶವೂ (ಸೂ. ಭಾ. ೨–೧–೧೮) ಭಾಷ್ಯದಲ್ಲಿ ಕಾಣುತ್ತದೆ. ಪೂರ್ಣವರ್ಮನೆಂಬ ರಾಜನ ಹೆಸರು ಜಾವಾತಾಮ್ರಪಟ್ಟದಲ್ಲೊಂದು ಇದೆ.

ಯಾದರೂ ಆವಕ್ಕೂ ಆಚಾರ್ಯರಿಗೂ ಸಂಬಂಧವಿಲ್ಲ ; ಇನ್ನೊಬ್ಬ ಪೂರ್ಣವರ್ಮನು ಸಶ್ಚಿನುನುಗಧದೇಶದ ರಾಜನಾಗಿದ್ದನು ; ಆಚಾರ್ಯರು ಕಾಶಿಯಲ್ಲಿ ಭಾಷ್ಯವನ್ನು ಬರೆದಾಗ ಪೂರ್ಣವರ್ಮನ ಅಭಿಷೇಕವಾಗಿಹೋಗಿರಬೇಕು. ಆವನು ರಾಜ್ಯವಾಳುತ್ತಿದ್ದಾಗಲೇ ಆಚಾರ್ಯರು ಭಾಷ್ಯದಿಂದ ಪ್ರಖ್ಯಾತರಾಗಿರಬೇಕು. ಚೀನಾದೇಶದ ಹ್ಯೂಯನ್ತ್ಸಾಂಗ್[1] ಎಂಬಾತನು 637–38ರಲ್ಲಿ ಮಗಧದೇಶದಲ್ಲಿ ಪೂರ್ಣವರ್ಮನ ಪರಾಮರ್ಶವನ್ನು ಮಾಡಿರುತ್ತಾನೆ ; ಆದರೆ ಆವನನ್ನು ನೋಡಲಿಲ್ಲ. ಆಷ್ಟರಲ್ಲಿ ಆ ರಾಜನ ಆಳ್ವಿಕೆ ಮುಗಿದಿರಬೇಕು. ಆದ್ದರಿಂದ ಆ ರಾಜನು ಕ್ರಿ.ಶ. 6ನೆಯ ಶತಮಾನದ ಆಂತ್ಯಭಾಗದಲ್ಲಿದ್ದನು. ಆಚಾರ್ಯರೂ ಆ ಕಾಲದವರೇ ಆಗಿರಬೇಕು. ಹೀಗೆಂದು ಬೊಂಬಾಯಿ ಹೈಕೋರ್ಟು ಜಡ್ಜಿಗಳಾಗಿದ್ದ ಕಾಶಿನಾಥ ತ್ರ್ಯಂಬಕ ತೆಲಂಗ– ಎಂಬವರು ಕಲ್ಪಿಸಿರುತ್ತಾರೆ.[1]

ಇಲ್ಲಿ ಸ್ಫುಟ್ನಿಪಾಟಲಿಪುತ್ರಗಳ ಉದಾಹರಣೆಗಳನ್ನು (ಸೂ.ಭಾ.೨–೧–೧೮, ೪–೨–೫) ಆಚಾರ್ಯರು ಆ ಪಟ್ಟಣಗಳನ್ನು ನೋಡಿಯೇ ಬರೆದರೆ ? ಆಥವಾ ಸಂಸ್ಕೃತದಲ್ಲಿ ಬರೆಯುವ ವಾಡಿಕೆಯನ್ನು ನೋಡಿ ಬರೆದರೆ ? ಬೃಹದಾರಣ್ಯಕದಲ್ಲಿ ಜನಕನ ಯಜ್ಞಕ್ಕೆ ಕುರುಪಾಞ್ಚಾಲದೇಶದ ಬ್ರಾಹ್ಮಣರು ಬಂದಿದ್ದರು (ಕುರು ಪಞ್ಚಾಲಾನಾಂ ಬ್ರಾಹ್ಮಣಾ ಆಭಿಸಮೇತಾಃ ಬೃ. ೩–೧–೧) ಎಂದಿದೆ. ಭಾಷ್ಯಕಾರರು 'ತೇಷು ಹಿ ವಿದುಷಾಂ ಬಾಹುಲ್ಯಂ ಪ್ರಸಿದ್ಧಮ್' (ಆ ದೇಶಗಳಲ್ಲಲ್ಲವೆ, ವಿದ್ವಾಂಸರು ಹೆಚ್ಚಾಗಿರುವರೆಂದು ಪ್ರಸಿದ್ಧಿ ?) ಎಂದು ಬರೆದಿದಾರೆ. ಇಷ್ಟರಿಂದಲೇ ಆಚಾರ್ಯರು ಆ ದೇಶಗಳಲ್ಲಿದ್ದ ವಿದ್ವಾಂಸರನ್ನು ನೋಡಿದ್ದರೆಂದು ಹೇಳಬಹುದೆ ? 'ಸಮಸ್ತ ಭೂಮಿಗೂ ಒಡೆಯನನ್ನು ಅಯೋಧ್ಯಾಧಿಪತಿ ಎನ್ನುತ್ತಾರೆ' (ಸೂ.ಭಾ. ೧–೩–೭) ಎಂಬ ಉದಾಹರಣೆಯಿಂದ ಒಬ್ಬ ಆಯೋಧ್ಯಾರಾಜನು ಚಕ್ರವರ್ತಿಯಾಗಿದ್ದ ಕಾಲದಲ್ಲಿ ಆಚಾರ್ಯರು ಇದ್ದರೆಂದು ಕಲ್ಪಿಸಬಹುದೆ ? ಆಚಾರ್ಯರು ಪೂರ್ಣವರ್ಮನ ಕಾಲದಲ್ಲಿ ಮಗಧದೇಶಕ್ಕೆ ಹೋಗಿದ್ದರೆಂಬುದಕ್ಕೆ ಐತಿಹಾಸಿಕವಾದ ಆಧಾರವೇನಾದರೂ ಇದೆಯೆ ? ಪೂರ್ಣವರ್ಮನೆಂಬ ರಾಜನು ಇನ್ನು ಯಾರೂ ಇರಲಿಲ್ಲವೆ ? ಪೂರ್ಣವರ್ಮನ ಅಭಿಷೇಕಕ್ಕಿಂತ ಮೊದಲು ವಂಧ್ಯಾಪುತ್ರನು ರಾಜನಾಗಿದ್ದನು ಎಂದು ಕಾಲದ ಗಡಿಯನ್ನು ಹಾಕಿದರೆ ಬಂಜೆಯ ಮಗನು ರಾಜನಾಗಿದ್ದನೆಂದು ಹೇಳಲಾಗುವದಿಲ್ಲ' (ಸೂ. ಭಾ. ೨–೧–೧೮) ಎಂಬ ಭಾಷ್ಯವಾಕ್ಯದಿಂದ ಪೂರ್ಣವರ್ಮನ ಅಭಿಷೇಕಕಾಲದಲ್ಲಿ ಆಚಾರ್ಯರಿದ್ದರು ಎಂದಾದರೆ 'ಪೂರ್ಣವರ್ಮನ ಸೇವೆಯು ಅನ್ನವಸ್ತ್ರಗಳ ಫಲವನ್ನು ಮಾತ್ರ ಕೊಡುತ್ತದೆ, ರಾಜವರ್ಮನ ಸೇವೆ ರಾಜ್ಯಸಮಾನವಾದ ಫಲವನ್ನು ಕೊಡುತ್ತದೆ' (ಛಾಂ. ಭಾ. ೨–೨೩–೧) ಎಂಬ ವಾಕ್ಯದಿಂದ ರಾಜವರ್ಮನ ಮಹಿಮೆಯನ್ನು

1, ಭಾಗವತಜೂರ್ಜಿಕಾ ಪೂರ್ವಪೀಠಿಕಾ.

ಕೊಂಡಾಡಿದೆಯಾಗಿ ಆಚಾರ್ಯರು ಅವನ ಹೆಬ್ಬುಗಾರಿಕೆಯನ್ನು ನೋಡಿ ಬರೆದರೆಂದೇ ಆಗುತ್ತದೆಯೆ?–ಎಂಬ ಪ್ರಶ್ನೆಗಳು ಹಾಗೆಯೇ ಉಳಿದುಕೊಳ್ಳುತ್ತವೆ. ಆಚಾರ್ಯರು ಜಯಸಿಂಹ, ಕೃಷ್ಣಗುಪ್ತ– ಇವರನ್ನೂ (ಸೂ. ಭಾ. ೪–೩–೫) ಪರಾಮರ್ಶಿಸಿರುತ್ತಾರೆ; ಅವರೆಲ್ಲ ಆಚಾರ್ಯರ ಸಮಕಾಲಿಕರೆ?–ಎಂಬ ಪ್ರಶ್ನೆಯು ಏಳುತ್ತದೆ.

ಭಾಷ್ಯದಲ್ಲಿ ಧರ್ಮಕೀರ್ತಿಯ ಪರಾಮರ್ಶ

೧೬. ಸುರೇಶ್ವರಾಚಾರ್ಯರು ಬೃಹದಾರಣ್ಯಕಭಾಷ್ಯದಲ್ಲಿ

ತ್ರಿಷ್ವೇವ ತ್ವವಿನಾಭಾವಾದಿತಿ ಯದ್ಧರ್ಮಕೀರ್ತಿನಾ ।
ಪ್ರತ್ಯಜ್ಞಾಯಿ ಪ್ರತಿಜ್ಞೇಯಂ ಹೀಯೇತಾಸೌ ನ ಸಂಶಯಃ ॥

–(ಬೃ. ವಾ. ೪–೩೭–೫೩)

'ಮೂರರಲ್ಲಿಯೇ ಅವಿನಾಭಾವವಿರುವದರಿಂದ (ಹೇತುವು ಮೂರು ವಿಧ)– ಎಂದು **ಧರ್ಮಕೀರ್ತಿ** ಹೇಳಿರುವ ಪ್ರತಿಜ್ಞೆಯನ್ನು ಬಿಡಲೇಬೇಕಾಗುವದು' ಎಂದು ಬರೆದಿರುತ್ತಾರೆ. ('ತ್ರಿರೂಪಾಣಿ ತ್ರೀಣ್ಯೇವ ಲಿಙ್ಗಾನಿ । ಅನುಪಲಬ್ಧಿಃ ಸ್ವಭಾವಃ ಕಾರ್ಯಂ ಚ' ಎಂಬ ಧರ್ಮಕೀರ್ತಿಯ ನ್ಯಾಯಬಿಂದುವಾಕ್ಯಗಳನ್ನು ನೋಡಿ.)

ಅಭಿನ್ನೋಽಪಿ[1] ಹಿ ಬುದ್ಧ್ಯಾತ್ಮಾ ವಿಪರ್ಯಾಸಿತದರ್ಶನೈಃ ।
ಗ್ರಾಹ್ಯಗ್ರಾಹಕಸಂವಿತ್ತಿಭೇದವಾನಿವ ಲಕ್ಷ್ಯತೇ ॥

ವಿಜ್ಞಾನವು ನಿಜವಾಗಿ ಭೇದರಹಿತವಾಗಿದ್ದರೂ ತಪ್ಪುತಿಳಿವಳಿಕೆಯವರಿಗೆ ಗ್ರಾಹ್ಯಗ್ರಾಹಕಸಂವಿತ್ತಿ– ಎಂಬ ಭೇದಗಳುಳ್ಳದ್ದರಂತೆ ಕಾಣುತ್ತದೆ. ಎಂಬ ಅರ್ಥವುಳ್ಳ ಈ ಶ್ಲೋಕವು ಬೃಹದಾರಣ್ಯಕವಾರ್ತಿಕ (ಬೃ. ವಾ. ೪–೩–೪೭೬)ರಲ್ಲಿಯೂ ಉಪದೇಶಸಾಹಸ್ರಿ (ಉಪ. ೧೮–೧೩೯)ರಲ್ಲಿಯೂ ಉದಾಹೃತವಾಗಿದೆ. ಧರ್ಮಕೀರ್ತಿಯ (ಪ್ರ. ವಾ. ೩–೩೫೪) ಈ ಶ್ಲೋಕವು ಬೃಹದಾರಣ್ಯಕಭಾಷ್ಯಕಾರರಿಗೆ ಪರಿಚಿತವಾಗಿತ್ತೆಂಬುದಕ್ಕೆ ಇದು ಸಾಕಾಗಿದೆಯಾದರೂ ನಾವು ಆಗಲೆ ಒಡ್ಡಿರುವ ಭಾಷ್ಯದ್ವಯವಿರೋಧಾಭಾಸವನ್ನು ಕಂಡವರು ಸೂತ್ರಭಾಷ್ಯದಲ್ಲಿಯೂ **ಧರ್ಮಕೀರ್ತಿ**ಪರಾಮರ್ಶವು ಇದೆಯೆ ?– ಎಂಬ ಪ್ರಶ್ನೆಯನ್ನು ಕೇಳಬಹುದಾಗಿದೆ. ನನ್ನ ಸುದೈವದಿಂದ ಸೂತ್ರಭಾಷ್ಯದಲ್ಲಿಯೇ ಈ ವಾಕ್ಯವಿದೆ : **'ಜಾಪಿ ಚ ಸಹೋಪಲಮ್ಭನಿಯಮಾದಭೇದೋ ವಿಷಯವಿಜ್ಞಾನಯೋರಾಪತತಿ'** (ಇದಲ್ಲದೆ ವಿಷಯ, ಅದರ ವಿಜ್ಞಾನ– ಇವೆರಡೂ ಜೊತೆಯಲ್ಲಿಯೇ ನಿಯಮದಿಂದ ಕಾಣುತ್ತಿರುವದರಿಂದ ಅವೆರಡಕ್ಕೂ ಅಭೇದವೇ ಎಂದಾಗುತ್ತದೆ (ಸೂ. ಭಾ.

---

1. 'ಅವಿಭಾಗೋಽಪಿ' ಎಂದು ಅಚ್ಚಾಗಿರುವ **ಪ್ರಮಾಣವಾರ್ತಿಕದ** ಪಾಠ. ಉಪದೇಶಸಾಹಸ್ರಿಯಲ್ಲಿಯೂ 'ಅಭಿನ್ನೋಽಪಿ' ಎಂದೇ ಇದೆ.

೨–೨–೨೮). ವಿಜ್ಞಾನಕ್ಕಿಂತ ಬೇರೆಯಾಗಿ ವಿಷಯವೆಂಬುದು ಇಲ್ಲ– ಎಂಬ ವಿಜ್ಞಾನವಾದಿಗಳ ಮತವನ್ನು ಖಂಡಿಸುವದಕ್ಕಾಗಿ **ಈ** ವಾಕ್ಯವನ್ನು ಆಚಾರ್ಯರು ಅನುವಾದಮಾಡಿಕೊಂಡಿರುತ್ತಾರೆ. ಇದು 'ಸಹೋಪಲಮ್ಭನಿಯಮಾದ ಭೇದೋ ನೀಲತದ್ಧಿಯೋಃ' (ನಿಯಮದಿಂದ ಜೊತೆಜೊತೆಯಾಗಿಯೇ ಕಾಣುವ ದರಿಂದ ನೀಲ, ನೀಲಜ್ಞಾನ–ಎರಡೂ ಒಂದೇ ಎಂಬ ರೂಪದಲ್ಲಿ ಧರ್ಮಕೀರ್ತಿಯ **ಪ್ರಮಾಣವಿನಿಶ್ಚಯ**ದಲ್ಲಿದೆಯಂತೆ[1]; ಇದರ ಜೊತೆಗೆ 'ಭೇದಶ್ಚ ಭ್ರಾಂತಿವಿಜ್ಞಾನೈರ್ದೃಶ್ಯೇತೇನಾದ್ವಿವಾದ್ವಯೇ' (ಪ್ರ. ವಾ. ೩–೩೮೯) ಒಬ್ಬನೇ ಆಗಿರುವ ಚಂದ್ರನಲ್ಲಿ ಭೇದವನ್ನು ಕಾಣುವಂತೆ ಭ್ರಾಂತರ ತಿಳಿವಳಿಕೆಗೆ ಇವುಗಳ ಭೇದವು ಕಾಣಬಹುದು ಎಂಬ ಶ್ಲೋಕಾರ್ಧವನ್ನು ವೈದಿಕರು ಉದಾಹರಿಸುತ್ತಿರುತ್ತಾರೆ. ಧರ್ಮಕೀರ್ತಿಯ ಕಾಲವು ಕ್ರಿ. ಶ. 635 ರಿಂದ ಕ್ರಿ, ಶ. 650ರವರೆಗೆ ಎಂದು ನಿಶ್ಚಿತವಾಗಿರುವದರಿಂದ ಸೂತ್ರಭಾಷ್ಯಕಾರರಾದ ಆಚಾರ್ಯರು ಅದಕ್ಕಿಂತ ಮುಂಚೆ ಇರುವ ಸಂಭವವಿಲ್ಲವೆಂದು ಗೊತ್ತಾಗುತ್ತದೆ.

ದಿಙ್ನಾಗನ ಪರಾಮರ್ಶ

೧೭. ಇದಲ್ಲದೆ ಸೂತ್ರಭಾಷ್ಯದ ಇದೇ ಸೂತ್ರದಲ್ಲಿರುವ ವಿಜ್ಞಾನವಾದದ ಖಂಡನೆಯಲ್ಲಿ **ಈ** ವಾಕ್ಯಗಳಿವೆ :

> ಉಪಲಬ್ಧಿವ್ಯತಿರೇಕೋಽಪಿ ಬಲಾದರ್ಥಸ್ಯಾಭ್ಯುಪಗನ್ತವ್ಯಃ ಉಪಲಬ್ಧೀರೇವ । ನ ಹಿ ಕಶ್ಚಿದುಪಲಬ್ಧಿಮೇವ ಸ್ತಮ್ಭಃ ಕುಡ್ಯಂ ಚ ಇತ್ಯುಪಲಭತೇ । ಉಪಲಬ್ಧಿವಿಷಯತ್ವೇನೈವ ತು ಸ್ತಮ್ಭಕುಡ್ಯಾದೀನ್ ಸರ್ವೇ ಲೌಕಿಕಾ ಉಪಲಭನ್ತೇ । ಅತಶ್ಚ ಏವಮೇವ ಸರ್ವೇ ಲೌಕಿಕಾ ಉಪಲಭನ್ತೇ ಯತ್ಪ್ರತ್ಯಾಚಕ್ಷಾಣಾ ಅಪಿ ಬಾಹ್ಯಾರ್ಥಮೇವ ವ್ಯಾಚಕ್ಷತೇ "ಯದನ್ತರ್ಜ್ಞೇಯರೂಪಂ ತದ್ಬಹಿರ್ವದವಭಾಸತೇ" ಇತಿ । ತೇಽಪಿ ಸರ್ವಲೋಕಪ್ರಸಿದ್ಧಾಂ ಬಹಿರವಭಾಸಮಾನಾಂ ಪುರೋವಿದಂ ಪ್ರತಿಲಭಮಾನಾಃ ಪ್ರತ್ಯಾಖ್ಯಾತುಕಾಮಾಶ್ಚ ಬಾಹ್ಯಮರ್ಥಂ 'ಬಹಿರ್ವತ್' ಇತಿ ವತ್ಕಾರಂ ಕುರ್ವನ್ತಿ । ಇತರಥಾ ಹಿ ಕಸ್ಯಾಪ್ಯಹಿರ್ವದಿತಿ ಬ್ರೂಯುಃ ? । ನ ಹಿ ವಿಷ್ಣುಮಿತ್ರೋ ವನ್ಧ್ಯಾಪುತ್ರವದವಭಾಸತ ಇತಿ ಕಶ್ಚಿದಾಚಕ್ಷೀತ । ತಸ್ಮಾದ್ ಯಥಾನುಭವಂ ತತ್ತ್ವಮಭ್ಯುಪಗಚ್ಛದ್ಭಿಃ ಬಹಿರೇವಾವಭಾಸಕ ಇತಿ ಯುಕ್ತಮಭ್ಯುಪಗನ್ತುಂ ನ ತು ಬಹಿರ್ವದವಭಾಸತ ಇತಿ ॥
>
> —ಸೂ. ಭಾ. ೨–೨–೨೮

ಅರಿವಿಗಿಂತ ವ್ಯತಿರಿಕ್ತವಾಗಿಯೇ ಹೊರಗಿನ ಅರ್ಥವೆದೆಯೆಂದೂ ಹಾಗೆ ಕಾಣಿಸುವದರಿಂದಲೇ ಒಪ್ಪಬೇಕು; ಯಾರೂ ಅರಿವನ್ನೇ 'ಕಂಬ. ಗೋಡೆ', 'ಎಂದು' ಅರಿಯುವದಿಲ್ಲವಷ್ಟೆ ? ಮತ್ತೇನೆಂದರೆ ಅರಿವಿಗೆ ವಿಷಯವಾಗಿಯೇ ಎಲ್ಲಾ ಲೌಕಿಕರೂ ಕಂಬ, ಗೋಡೆ–ಮುಂತಾದವುಗಳನ್ನು ಅರಿಯುತ್ತಾರೆ. ಅದ್ದರಿಂದ ಹೀಗೆಯೇ ಎಲ್ಲಾ ಲೌಕಿಕರೂ ಅನು

1. ಈ ಗ್ರಂಥವು ತಿಬೆಟ್ಟಿನ ಭಾಷೆಯಲ್ಲಿ ಮಾತ್ರವೇ ಸಿಕ್ಕುತ್ತದೆ.

ಭವಿಸುತ್ತಾರೆ; ಅದನ್ನು ನಿರಾಕರಿಸುವವರುಕೂಡ ಹೊರಗಿನ ವಿಷಯವನ್ನೇ 'ಯದನ್ತ ರ್ಜ್ಞೇಯರೂಪಂ ತದ್ಬಹಿರ್ವದವಭಾಸತೇ' (ಒಳಗೆ ಇರುವ ಜ್ಞೇಯರೂಪವಿನಿಯೋಲ್ಲ, ಅವೇ ಹೊರಗಿರುವಂತೆ ತೋರುತ್ತದೆ) ಎನ್ನುತ್ತಿದಾರೆ ಅನರೂ ಎಲ್ಲಾ ಜನರಿಗೂ ಪ್ರಸಿದ್ಧವಾಗಿರುವ ಹೊರಗೆ ತೋರುವ ಅನುಭವವನ್ನು ಕಂಡೇ ಹೊರಗಿನ ವಿಷಯವನ್ನು ನಿರಾಕರಿಸಬೇಕೆಂದು 'ಹೊರಗಿರುವಂತೆ' ಎಂದು ಅಂಕೆಶಬ್ದವನ್ನು ಪ್ರಯೋಗಿಸುತ್ತಾರೆ. ಹಾಗಿಲ್ಲದಿದ್ದರೆ ಏತಕ್ಕೆ ಹೊರಗಿರುವಂತೆ–ಎಂದು ಹೇಳಿಯಾರು? ವಿಷ್ಣುಮಿತ್ರನು ಬಾಜೆಯ ಮಗನಂತೆ' ತೋರುತ್ತಾನೆ–ಎಂದು ಯಾವನೂ ಹೇಳಲಾರನಷ್ಟೆ? ಅದ್ದರಿಂದ 'ಆನುಭವಕ್ಕೆ ತಕ್ಕಂತೆ ವಸ್ತುತತ್ತ್ವವಿದೆ ಎಂದು ಒಪ್ಪತಕ್ಕವರು ಹೊರಗೇ ಕಾಣಿಸುತ್ತದೆ ಎಂದು ಒಪ್ಪುವದೇ ಯುಕ್ತವೇ ಹೊರತು ಹೊರಗಿರುವಂತೆ ಎಂದು (ಹೇಳತಕ್ಕ)ದ್ದಲ್ಲ.

ಇಲ್ಲಿ ಆರಿವಿಗಿಂತ ಬೇರೆಯಾಗಿ ಅದರ ವಿಷಯವಾದ ಕಂಬ, ಗೋಡೆ–ಮುಂತಾದ ವಿಷಯಗಳು ಇರುವದಿಲ್ಲವೆಂದು ಹೇಳುವ ವಿಜ್ಞಾನವಾದಿಯ ಪೂರ್ವಪಕ್ಷವನ್ನು ಖಂಡಿಸುವದಕ್ಕಾಗಿ "ಯದನ್ತರ್ಜ್ಞೇಯರೂಪಂ ತದ್ಬಹಿರ್ವದವ ಭಾಸತೇ' ಎಂಬ ದಿಙ್ನಾಗನ ಕಾರಿಕೆಯನ್ನು ಉದಾಹರಿಸಿದೆ. ಈ ಕಾರಿಕೆಯು ಆಲಂಬನಪರೀಕ್ಷೆ ಎಂಬ ಆಷ್ಟಶ್ಲೋಕಾತ್ಮಕವಾದ ಪ್ರಕರಣದಲ್ಲಿದೆ. ಅದರಲ್ಲಿ ಇದು ಆರನೆಯ ಕಾರಿಕೆ. ಇದನ್ನು ಮದರಾಸಿನಲ್ಲಿ ಅಡಿಯಾರ್ ಬುಲೆಟಿನ್ನಿನಲ್ಲಿ ಕ್ರಿ. ಶ. 1942ರಲ್ಲಿ ಅಚ್ಚುಹಾಕಿಸಿರುತ್ತಾರೆ. ದಿಙ್ನಾಗನು ವಸುಬಂಧುವಿನ ಶಿಷ್ಯನು; ಆದ್ದರಿಂದ ಅವನ ಕಾಲವು ಕ್ರಿ.ಶ. ಐದನೆಯ ಶತಮಾನವಾಗಿದೆ. ಆದ್ದರಿಂದ ಸೂತ್ರಭಾಷ್ಯಕಾಲವು ಅವಕ್ಕಿಂತ ಹಿಂದೆ ಇರುವ ಹಾಗಿಲ್ಲವೆಂದು ಇದರಿಂದ ಸಿದ್ಧವಾಯಿತು.

ಗುಣಮತಿಯ ಪರಾಮರ್ಶ

೧೮. ಸೂತ್ರಭಾಷ್ಯದಲ್ಲಿ (೨–೨–೩೨) 'ಬುದ್ಧಿಬೋದ್ಯಂ ತ್ರಯಾದನ್ಯತ್ ಸಂಸ್ಕೃತಂ ಕ್ಷಣಿಕಂ ಚ' ಪ್ರತಿಸಂಖ್ಯಾನಿರೋಧ, ಅಪ್ರತಿಸಂಖ್ಯಾನಿರೋಧ, ಆಕಾಶ –ಈ ಮೂರನ್ನು ಬಿಟ್ಟರೆ ಉಳಿದದ್ದೆಲ್ಲವೂ ಸಂಸ್ಕೃತವು (ಕಾರ್ಯವು), ಕ್ಷಣಿಕವೂ ಆಗಿದೆ–ಎಂಬರ್ಥದ ವಾಕ್ಯವನ್ನು ಉದಾಹರಿಸಿರುತ್ತದೆ. ಇದು ಗುಣಮತಿ ಎಂಬಾತನ ಅಭಿಧರ್ಮಕೋಶವ್ಯಾಖ್ಯಾನದಲ್ಲಿದೆಯಂತೆ. ಗುಣಮತಿಯ ಕಾಲವು (ಕ್ರಿ. ಶ. ೬೩೦ ರಿಂದ ೬೪೦) ಏಳನೆಯ ಶತಕದ ಮಧ್ಯಭಾಗವಾಗಿರುವದರಿಂದ ಸೂತ್ರಭಾಷ್ಯದ ಕಾಲವು ಅದಕ್ಕಿಂತ ಹಿಂದೆ ಇರಲಾರದೆಂದಾಗುತ್ತದೆ–ಎಂದು ಬಲದೇವ ಉಪಾಧ್ಯಾಯರು (ಬಲ. ಶಂ. ಪು. ೩೪) ಹೇಳುತ್ತಾರೆ.

ಭಾಮತೀಕಾರನ ಸಾಕ್ಷ್ಯ

೧೯. ವಾಚಸ್ಪತಿಮಿಶ್ರನು ಬರೆದಿರುವ ಭಾಮತೀವ್ಯಾಖ್ಯಾನವೇ ಆ ಆಚಾರ್ಯರ ಸೂತ್ರಭಾಷ್ಯಕ್ಕೆ ಪೂರ್ಣವಾಗಿ ಬರೆದದ್ದೆಂದು ನಮಗೆ ಸಿಕ್ಕಿರುವ

---

1. "ಯದನ್ತರ್ಜ್ಞೇಯರೂಪಂ ತು' ಎಂದು ಅಚ್ಚಾಗಿರುವ ಆಲಂಬನಪರೀಕ್ಷೆಯ ಪಾಠ.

ಪ್ರಾಚೀನವ್ಯಾಖ್ಯಾನ. (ಇದಕ್ಕಿಂತ ಹಿಂದಿನದಾದ ಪಂಚಪಾದಿಕೆ ಎಂಬ ಖಂಡ ವ್ಯಾಖ್ಯಾನವ ವಿಷಯವನ್ನು ಯಥಾಸ್ಥಾನದಲ್ಲಿ ಮುಂದೆ ವಿಮರ್ಶೆಗೆ ತೆಗೆದುಕೊಳ್ಳುವೆವು). ಆತನೇ ಬರೆದಿರುವ **ನ್ಯಾಯಸೂಚೀನಿಬಂಧದಲ್ಲಿ ಈ** ಶ್ಲೋಕವಿದೆ : 'ನ್ಯಾಯಸೂಚೀನಿಬನ್ಧೋಽಯಮುಕಾರಿ ವಿದುಷಾಂ ಮುದೇ | ಶ್ರೀವಾಚಸ್ಪತಿ ಮಿಶ್ರೇಣ ವಸ್ವಙ್ಕವಸಂವತ್ಸರೇ ||' ಇದರಂತೆ ಗ್ರಂಥವು ೯೯೬ನೆಯ ವತ್ಸರದಲ್ಲಿ ರಚಿತವಾದದ್ದೆಂದಾಗುತ್ತದೆ. ಅವರೇ ಬರೆದಿರುವ ವಾರ್ತಿಕನ್ಯಾಯತಾತ್ಪರ್ಯ ಟೀಕೆಗೆ ವ್ಯಾಖ್ಯಾನವಾಗಿ **ಪರಿಶುದ್ಧಿಯನ್ನು** ಬರೆದಿರುವ ಉದಯನಾಚಾರ್ಯರು **ಲಕ್ಷಣಾವಲೀ** ಎಂಬ ಗ್ರಂಥವನ್ನು 'ತರ್ಕಾಮ್ಬರಾಙ್ಕಪ್ರಮಿತೇಷ್ವತೀತೇಷು ಶಕಾನ್ತತಃ | ವರ್ಷೇಷೂದಯನಶ್ಚಕ್ರೇ ಸುಬೋಧಾಂ ಲಕ್ಷಣಾವಲೀಮವ್ ||' ೧೦೬೬ನೆಯ ಶಕಾಬ್ದದಲ್ಲಿ ಬರೆದಿರುವೆನೆಂದು ಹೇಳಿರುವದರಿಂದ ನ್ಯಾಯಸೂಚೀ ನಿಬಂಧದಲ್ಲಿ ಹೇಳಿರುವದು ಶಕವರ್ಷವೆಂದೇ ಹಿಡಿದರೆ ಮೂಲಕ್ಕೂ ವ್ಯಾಖ್ಯಾನಕ್ಕೂ ಎಂಬೇ ವರ್ಷಗಳ ಅಂತರವಾಗುವದು. ಆದರೆ ಈ ಇಬ್ಬರೂ ಸಮಕಾಲಿಕರಲ್ಲವೆಂದು ಐತಿಹಾಸಿಕರು ನಿರ್ಣಯಿಸಿರುತ್ತಾರೆ. ಆದ್ದರಿಂದ ವಾಚಸ್ಪತಿಯು ವಿಕ್ರಮವರ್ಷವನ್ನೇ ಹೇಳಿರಬೇಕು. ಹೀಗೆ ನೋಡಿದರೆ ನಿಬಂಧದ ಕಾಲವು (ಕ್ರಿ. ಶ. 841) ಒಂಬತ್ತನೆಯ ಶತಕದ ಮಧ್ಯಭಾಗವಾಗುತ್ತದೆ. ಆದ್ದರಿಂದ ಆಚಾರ್ಯರು ಸೂತ್ರಭಾಷ್ಯವನ್ನು ಅದಕ್ಕಿಂತ ಮೊದಲೇ ಬರೆದಿರಬೇಕಾಯಿತು– ಎಂಬುದು **ಬಲದೇವ ಉಪಾಧ್ಯಾಯರ** (ಬಲ. ಶಂ. ಪು. ೨೯) ಮತವಾಗಿದೆ. ಇದು ಯುಕ್ತವೆಂದೇ ನಮಗೆ ತೋರುತ್ತಿದೆ. ಏಕೆಂದರೆ ವಾಚಸ್ಪತಿಮಿಶ್ರನ ಭಾಮತಿಯಲ್ಲಿ[1] ಭಾಸ್ಕರಾಚಾರ್ಯರು ಶಂಕರಭಾಷ್ಯದ ಮೇಲೆ ಎತ್ತಿರುವ ಆಕ್ಷೇಪಗಳಿಗೆ ಸಮಾಧಾನವನ್ನು ಬರೆದಿರುವದು ಕಂಡುಬರುತ್ತದೆ. ಆದ್ದರಿಂದ ಭಾಸ್ಕರಾಚಾರ್ಯರಿಗಿಂತ ಹಿಂದೆ ಇದ್ದ ಆಚಾರ್ಯರು ಕ್ರಿ. ಶ. ಏಳನೆಯ ಶತಕದ ಅಂತ್ಯದಲ್ಲಿ ಅಥವಾ ಎಂಟನೆಯ ಶತಕದ ಆದಿಯಲ್ಲಿ ತಮ್ಮ ಸೂತ್ರಭಾಷ್ಯವನ್ನು ಬರೆದಿರಬೇಕೆಂದು ಕಲ್ಪಿಸುವದು ಸಾಧಾರವಾಗಿರುತ್ತದೆ ಎಂದಾಯಿತು.

1. ಭಾಮತಿಯ ಕೊನೆಯಲ್ಲಿ 'ನರೇಶ್ವರಾ ಯಚ್ಚರಿತಾನುಕಾರಮಿಚ್ಛನ್ತಿ ಕರ್ತುಂ ನ ಜ ಪಾರಯನ್ತಿ || ತಸ್ಮಿನ್ ಮಹಿಪೇ ಮಹನೀಯಕೀರ್ತೌ ಶ್ರೀಮನ್ನೃಗೇಽಕಾರಿ ಮಯಾ ನಿಬಂಧಃ ||೬||' ಮಿಕ್ಕ ದೊರೆಗಳು ಅನುಕರಿಸುವದಕ್ಕೆ ಯತ್ನಿಸಿದರೂ ಆಗದಿರುವ ಮಹಾ ಕೀರ್ತಿಯು ನೃಗನೆಂಬ ರಾಜನ ಕಾಲದಲ್ಲಿ ತಾನು ಅದನ್ನು ಬರೆದಿರುವದಾಗಿ ವಾಚಸ್ಪತಿ ಹೇಳಿಕೊಂಡಿರುತ್ತಾನೆ. ಆ ನೃಗನು ಯಾರೆಂಬುದನ್ನು ನಿಶ್ಚಯಿಸುವದೂ ಇಲ್ಲಿ ಅನಶ್ಯ. ಆತನು ನಾನ್ಯದೇವನಿಗಿಂತ ಮೊದಲು ಸುಮಾರು ಕ್ರಿ.ಶ. 962ರಲ್ಲಿ ಆಳುತ್ತಿದ್ದ ಮಿಥಿಲಾಧಿಪತಿ ಎಂದು ಸೂರ್ಯನಾರಾಯಣರಾವ್ ಮತ್ತು ಕೂಪ್ಪನ್ನಾ ರಾಜ– ಇವರು ಕಲ್ಪಿಸಿರುತ್ತಾರೆ. ಅವರ ಆಂಗ್ಲಭಾಷಾಂತರಸಹಿತಭಾಮತಿಯ ಪೀಠಿಕೆಯನ್ನು ನೋಡಿ. ಈ ಗ್ರಂಥವು ಮದರಾಸ್ ಅಡಿಯಾರ್‌ನಲ್ಲಿ ಪ್ರಕಾಶಿತವಾಗಿದೆ.

೩. ಆಚಾರ್ಯರ ಜನ್ಮ, ತಂದೆತಾಯಿಗಳು

೨೦. ಆಚಾರ್ಯರ ಜನನಕಾಲದ ವಿಷಯಕ್ಕೆ ಇರುವಷ್ಟು ಮತಭೇದವು ಹುಟ್ಟಿದ ಸ್ಥಲದ ವಿಷಯಕ್ಕೆ ಇಲ್ಲದಿರುವದೊಂದು ಸೌಭಾಗ್ಯವು. ಎಲ್ಲಾ ಶಂಕರ ವಿಜಯಗಳಲ್ಲಿಯೂ ಶಿವರಹಸ್ಯಾನುಗುಣವಾಗಿ ಕೇರಳದೇಶದಲ್ಲಿಯೇ ಆಚಾರ್ಯರ ಜನನವಾಯಿತೆಂದು ಒಪ್ಪಿರುತ್ತದೆ. ಶಿವರಹಸ್ಯದಲ್ಲಿ **'ಕೇರಲ**ದಲ್ಲಿರುವ **ಶಕಲ** ಗ್ರಾಮದಲ್ಲಿ **ಶಂಕರ**ನೆಂಬ ಹೆಸರಿನಿಂದ ದ್ವಿಜೋತ್ತಮನು ವಿಪ್ರಪತ್ನಿಯಲ್ಲಿ ನನ್ನ ಅಂಶದಿಂದ ಜನಿಸುವನು' (ಶಿ. ರ. ೧೬-೫) ಎಂದಿದೆ. ಕೇರಲವು ಈಗಿನ ತಿರುವಾಂಕೂರು, ಕೊಚಿನ್, ಮತ್ತು ಮಲಬಾರು –ಎಂಬ ದೇಶಗಳಾಗಿದೆ. ಶಂಕರವಿಜಯಗಳಲ್ಲಿ **ಕಾಲಟಿ** ಎಂಬ ಹೆಸರು ಇರುವದರಿಂದ ಆ ವೂರಿಗೇ 'ಶಶಲ' ಗ್ರಾಮವೆಂಬ ಹೆಸರು ಸ್ಥಲಪುರಾಣದಲ್ಲಿತ್ತೆಂದು ಊಹಿಸಬೇಕಾಗಿದೆ.

ಹುಟ್ಟಿದ ಸಂದರ್ಭ

೨೧. **ಮಾಧವೀಯ**ದಲ್ಲಿ ಆಚಾರ್ಯರ ಜನ್ಮದ ವಿಷಯವಾಗಿ ಹೀಗೆಂದು ಹೇಳಿದೆ : ದೇವತೆಗಳು ಕೈಲಾಸಕ್ಕೆ ಹೋಗಿ 'ಭೂಲೋಕದಲ್ಲಿ ಬೌದ್ಧರ ವ್ಯಾಪ್ತಿಯಿಂದ ಜನರು ವರ್ಣಾಶ್ರಮಧರ್ಮಗಳನ್ನು ಬಿಟ್ಟು ಅನೇಕ ಆನಾಚಾರಗಳನ್ನು ಅವಲಂಬಿಸಿರುವರು. ಕೆಲವರು ಶೈವವೈಷ್ಣವಾದ್ಯಾಗಮಗಳನ್ನು ಆಶ್ರಯಿಸಿ ಕರ್ಮವನ್ನು ಬಿಟ್ಟು ಕೆಟ್ಟುಹೋಗುತ್ತಿದಾರೆ. ಧರ್ಮವನ್ನು ಸ್ಥಾಪನೆಮಾಡಿ ಎಲ್ಲರನ್ನೂ ಉದ್ಧಾರಮಾಡಬೇಕು' ಎಂದು ಬೇಡಿಕೊಳ್ಳಲು ಈಶ್ವರನು ಸ್ಕಂದನನ್ನು ಕುರಿತು ನೀನು ಲೋಕದಲ್ಲಿ ಅವತರಿಸಿ **ಕರ್ಮಕಾಂಡ**ವನ್ನು ಉದ್ಧಾರಮಾಡು. ವಿಷ್ಣು ಮತ್ತು ಆದಿಶೇಷ– ಇವರಿಗೆ **ಉಪಾಸನಾಕಾಂಡ**ವನ್ನು ಉದ್ಧರಿಸುವಂತೆ ಆಪ್ಪಣೆಮಾಡಿರುತ್ತೇನೆ. ಬ್ರಹ್ಮನು ನಿನಗೆ ಸಹಾಯಕನಾಗಿ **ಮಂಡನನಾಗಿ** ಅವತರಿಸುವನು. ಸ್ವಯಂ ನಾನು ಶಂಕರಯತೀಂದ್ರನಾಗಿ ಹುಟ್ಟಿ **ಬ್ರಹ್ಮಸೂತ್ರ**ಗಳಿಗೆ ಅದ್ವೈತಪರವಾದ ಭಾಷ್ಯವನ್ನು ರಚಿಸಿ ಜನರ ಮೋಹವನ್ನು ಕಳೆಯುವೆನು' ಎಂದು (ಮಾ.ಶಂ. ೧–೪೦ರಿಂದ ೫೬) ತಿಳಿಸಿದನು. ಅದರಂತೆ ಇಂದ್ರಾದಿಗಳು ಬೇರೆಬೇರೆಯ ರೂಪದಿಂದ ಅವತರಿಸಿದರು. **ಚಿದ್ವಿಲಾಸೀಯ**ದಲ್ಲಿ ಬ್ರಹ್ಮನು ನಾರದರೊಡನೆ ಕೈಲಾಸಕ್ಕೆ ಹೋಗಿ ಪ್ರಾರ್ಥಿಸಿಕೊಂಡನೆಂದಿದೆ; **ಆನಂದಗಿರೀಯ**ದಲ್ಲಿಯೂ ಬ್ರಹ್ಮನು ಪ್ರಾರ್ಥಿಸಿಕೊಂಡನೆಂದಿದೆ.

ಈ ಕಥೆಯಲ್ಲಿ ದೇವತೆಗಳು ಶಿವನನ್ನು ಪ್ರಾರ್ಥಿಸಿಕೊಂಡರೆಂಬುದೂ ದೇವತೆಗಳು ಬೇರೆಬೇರೆಯ ಅಂಶಗಳಿಂದ ಅವತರಿಸಿದರೆಂಬುದೂ ಪುರಾಣೇತಿಹಾಸಗಳಲ್ಲಿ ಬಹಳ ಕಡೆ ವರ್ಣಿಸಿರುವದರ ಪ್ರತಿಧ್ವನಿಯಾಗಿದೆ. ಇದಲ್ಲನೆ **ಆತ್ಮಬೋಧರು** ಉದಾಹರಿಸಿರುವ **ಪ್ರಾಚೀನಶಂಕರವಿಜಯ**ದಲ್ಲಿ ಹೀಗಿದೆ :

ಶ್ರೀಶೋಽಭೂತ್ಸ ಸನನ್ದನಃ ಕಮಲಭೂರ್ಜಜ್ಞೇ ತಥಾ ಮಣ್ಡನಃ
ಸನಿ ಹಸ್ತಾಮಲಕೋ ಬಭೂವ ಪವನೋಽಪ್ಯಾಸೀದುದಙ್ಕೋಽನಲಃ ।
ಸೋಽಪ್ಯಾನನ್ದಗಿರಿತ್ವಮಾಪ ಧಿಷಣೋ ಭೇಜೇ ಗುಹೋ ಭಟ್ಟತಾ-
ಮೀಶಾದೇಶವಶಾತ್ ಸ ಚಿತ್ಸುಖವಪುರ್ಜಾತಃ ಪ್ರಜೇತಾ ಅಪಿ ॥

ಮೃತ್ಯುಃ ಪೃಥ್ವೀಧವ(ರ) ಇತಿ ಯಮೋಽಪ್ಯಬಭೌ ವಿಶ್ವರೂಪೋ
ದಧ್ರೇ ಯೇನಾಖಿಲಜನಜಿತಾ ತತ್ಪ್ರತಾಪಾಖ್ಯಧಾಮ ।
ಲೇಖಾಶ್ಚಾನ್ಯೇ ನಿಗಮಪದವೀಮಿನ್ದುಸೂರ್ಯೇನ್ದ್ರಶೇಷ
ಪ್ರಖ್ಯಾಃ ಪ್ರಖ್ಯಾಪಯಿತುಮುದಿತಾಃ ಖಣ್ಡನೈರ್ಮಣ್ಡನೈಶ್ಚ ॥

ನಾರಾಯಣನು ಸನಂದನನಾದನು, ಬ್ರಹ್ಮನು ಮಂಡನನಾದನು, ವಾಯುವು ಹಸ್ತಾಮಲಕನಾಗಿ, ಅಗ್ನಿಯು ಉದಂಕನಾಗಿಃ ಬೃಹಸ್ಪತಿಯು ಆನಂದಗಿರಿಯಾಗಿ, ಗುಹನು ಭಟ್ಟನಾಗಿ, ವರುಣನು ಚಿತ್ಸುಖನಾಗಿ ಮೃತ್ಯುವು ಪೃಥ್ವೀಧವ(ಧರ)ನಾಗಿ, ಯಮನು ವಿಶ್ವರೂಪನಾಗಿ ಆದರು. ಹೀಗೆಯೇ ಚಂದ್ರ, ಸೂರ್ಯ, ಇಂದ್ರ, ಶೇಷ– ಮುಂತಾದ ದೇವತೆಗಳೂ ಬೇರೆಬೇರೆಯವರಾಗಿ ಅವತರಿಸಿ ವೈದಿಕನೂರ್ಗವನ್ನು ಖಂಡನೆಗಳಿಂದಲೂ ಮಂಡನಗಳಿಂದಲೂ ಪ್ರಖ್ಯಾತಗೊಳಿಸಿದರು.

ಇದರಂತೆ **ಮಾಧವೀಯ**ದಲ್ಲಿ (೩–೧ರಿಂದ ೯ನೆಯ ಶ್ಲೋಕದವರೆಗೆ) ಪದ್ಮಪಾದಾದಿಗಳು ದೇವತೆಗಳ ಅಂಶಾವತಾರವಾಗಿ ಜನಿಸಿದ ವೃತ್ತಾಂತವಿದೆ. ಮಹಾಕಾರ್ಯಗಳನ್ನು ಮಾಡುವವರೆಲ್ಲ ದೈವಸಂಪತ್ತಿನಿಂದೊಡಗೂಡಿರುವದರಿಂದ ಅವರನ್ನು ದೇವಾಂಶಸಂಭೂತರೆಂದು ಭಾವಿಸುವದು ನಮ್ಮ ದೇಶಕ್ಕೆ ಹೊಸದಲ್ಲ. ಮೇಲಿನ ಪ್ರಾಚೀನಶಂಕರವಿಜಯದ ಶ್ಲೋಕಗಳ ಅರ್ಥದಲ್ಲಿ ಕಪ್ಪಕ್ಷರದಲ್ಲಿಟ್ಟಿರುವ ಹೆಸರುಗಳನ್ನು ಮತ್ತೆ ವಿಚಾರಕ್ಕೆ ತೆಗೆದುಕೊಳ್ಳಬೇಕಾಗುವದರಿಂದ ಸದ್ಯಕ್ಕೆ ಆ ವಿಷಯಕ್ಕೆ ಇಲ್ಲಿ ನಾವು ಏನನ್ನೂ ಹೇಳಿಲ್ಲ.

ಆಚಾರ್ಯರ ತಾಯಿ, ತಂದೆ, ಅಜ್ಜ

೨೨. **ಮಾಧವೀಯ**ದ ಎರಡನೆಯ ಸರ್ಗದಲ್ಲಿ ಮಹೇಶ್ವರನು ಕೇರಳದಲ್ಲಿರುವ ಪೂರ್ಣಾನದಿಯ ದಡದಲ್ಲಿ **ವೃಷಭಾದ್ರಿ**ಯೆಂಬ ಪರ್ವತದಲ್ಲಿ ಅವತರಿಸಿದನೆಂದೂ **ರಾಜಶೇಖರ**ನೆಂಬ ಆ ದೇಶದ ಅರಸು ಸ್ವಪ್ನದಲ್ಲಾದ ಪರಮೇಶ್ವರ ಪ್ರೇರಣೆಯಂತೆ ಅಲ್ಲಿ ಒಂದು ದೇವಾಲಯವನ್ನು ಕಟ್ಟಿಸಿದನೆಂದೂ ಆದರ ಬಳಿಯಲ್ಲಿರುವ **ಕಾಲಡಿ**ಯೆಂಬ ಅಗ್ರಹಾರದಲ್ಲಿ **ವಿದ್ಯಾಧಿರಾಜ**ನೆಂಬ ಪಂಡಿತನೊಬ್ಬನಿದ್ದನೆಂದೂ ವರ್ಣಿಸಿದೆ. ಆ ಪಂಡಿತನಿಗೆ **ಶಿವಗುರು** ಎಂಬ ಒಬ್ಬ ಮಗನಿದ್ದನು ; ಆವನು ಜ್ಞಾನದಲ್ಲಿ ಶಿವನೂ ವಚನದಲ್ಲಿ ಗುರುವೂ (೨–೫) ಆಗಿದ್ದದ್ದರಿಂದ ಆ ಹೆಸರು ಅವನಿಗೆ ಅನ್ವರ್ಥವಾಗಿತ್ತು ಎಂದು (ಮಾ. ಶಂ. ೨–೧ರಿಂದ ೫) ಹೇಳಿರುತ್ತದೆ.

ಇಲ್ಲಿ ಕಪ್ಪಕ್ಕರದಲ್ಲಿ ಆಚ್ಚುನೂಡಿಸಿರುವ ಸಂಜ್ಞಾನಾಮಗಳನ್ನು ಕುರಿತು ಸ್ವಲ್ಪ ವಿಮರ್ಶೆಮಾಡತಕ್ಕದ್ದಿದೆ. ಆ ಕಾಲದಲ್ಲಿ ಕೇರಳದಲ್ಲಿ **ರಾಜಶೇಖರ** ನೆಂಬ ಹೆಸರಿನ ಅರಸನಿದ್ದನೊ, ಅಥವಾ ಇದು ರಾಜಶ್ರೇಷ್ಠನು ಎಂಬರ್ಥದಲ್ಲಿ ಪ್ರಯೋಗಿಸಿರುವ ಆನ್ವರ್ಥನಾಮಮಾತ್ರವೊ ? ಶಂಕರರ ಅಜ್ಜನ ಹೆಸರು ವಿದ್ಯಾಧಿರಾಜ ; ಇದೂ ಶ್ರೇಷ್ಠ ಪಂಡಿತನು ಎಂಬರ್ಥದ ಆನ್ವರ್ಥನಾಮವಾಗಿರುವದಕ್ಕೆ ಸಾಕು. ಪ್ರಾಚೀನಶಂಕರವಿಜಯದಲ್ಲಿ ಈ ಪದ್ಯವಿದೆ :

ಈಶೋಽಪ್ಯಭೂತ್ಸನ್ನಮದವಿದ್ವದಭೇದ್ಯದರ್ಪ
ಸರ್ವಾಹಿತುಂಡ್ಡಕವಿದಗ್ಧಸಹಸ್ರಸೇವ್ಯೇ ।
ವಿದ್ಯಾಧಿಪತ್ಯಪರನಾಮ್ನಿ ಕುಲೇ ಶಿವಾಖ್ಯಾ-
ದಾರ್ಯಾಪತೇ ರವಿಸಪಸ್ರುಜಿಃ ಕುಮಾರಃ ॥ (೩-೪೫)
ಶಿಷ್ಯೇ ಪ್ರಯಾತ್ಯನಲಶೇವಧಿಬಾಣನೇತ್ರೇ ॥ ಇತ್ಯಾದಿ (೧೯ನೆಯ ಪುಟ)

ಮಹಾಹಂಕಾರವುಳ್ಳ ಮದಿಸಿದ ವಿದ್ವಾಂಸರೆಂಬ ಸರ್ಪಗಳಿಗೆ ಹಾವಾಡಿಗನಂತಿರುವ ಸಾವಿರಾರು ಜನರುಳ್ಳ ವಿದ್ಯಾಧಿಪತಿ ಎಂಬ ಹೆಸರುಳ್ಳ ಕುಲದಲ್ಲಿ ಶಿವನೆಂಬಾತನಿಂದ ಆರ್ಯಾಪತಿಯಿಂದ ಸಾವಿರ ಸೂರ್ಯರ ಪ್ರಕಾಶವುಳ್ಳ ಕುಮಾರನು ಹುಟ್ಟಿದನು ಎಂದಿದೆ. ಆ ಶ್ಲೋಕಕ್ಕೆ 'ವಿದ್ಯಾಧಿಪತಿ' ಎಂಬ ಹೆಸರುಳ್ಳ ಕುಲದಲ್ಲಿ ಎಂದೂ ಅರ್ಥವನ್ನು ಮಾಡಬಹುದಾಗಿದೆ. ಇನ್ನು ಶಂಕರರ ತಂದೆಯ ಹೆಸರು **ಶಿವಗುರು** ; ಇದಕ್ಕೆ ಶಿವನ ಗುರು ಎಂದರೆ ಶಿವನ ತಂದೆ ಎಂಬರ್ಥವೂ ಆಗುವಂತಿದೆ. ಶಿವನು ಇವನ ಹೊಟ್ಟೆಯಲ್ಲಿ ಹುಟ್ಟಿದನು ಎಂದಿಷ್ಟೇ ಅರ್ಥವಾದರೆ ಇದು ಸಂಜ್ಞಾನಾಮವಾಗುವದಿಲ್ಲ. ಆದರೂ ಶಿವಾಖ್ಯಾತ್, ಶಿವಶರ್ಮಣಃ (ಗು.ರ. ೧೬) ಮುಂತಾದ ಪ್ರಾಚೀನಪ್ರಯೋಗಗಳಿಂದ ಶಿವಗುರು ಎಂಬ ಹೆಸರು ಮಾಧವನ ಕಲ್ಪನೆಯಲ್ಲವೆಂದು ಧಾರಾಳವಾಗಿ ನಂಬಬಹುದು. ಇನ್ನು ತಾಯಿಯ ಹೆಸರು. ಶಂಕರರ ಕಾಲವನ್ನು ವಿಚಾರಿಸುವಾಗ ನಾವು ಆಗಲೆ (ಪು. ೧೯) ಉದಾಹರಿಸಿರುವ 'ಲಗ್ನೇ ಶುಭೇ' ಎಂಬ ಶ್ಲೋಕದಲ್ಲಿ 'ಜಾಯಾ ಸತೀ' (ಮಾ.ಶಂ ೨-೭೧) ಎಂದಿದೆ. **ಡಿಂಡಿಮವ್ಯಾಖ್ಯಾನ**ದಲ್ಲಿ 'ಶಿವಗುರೋರ್ಭಾರ್ಯಾ ಸತೀ' ಎಂದೇ ಇದೆ. ಮಾಧವೀಯವನ್ನೇ ಅನುಸರಿಸುವ **ಸದಾನಂದೀಯ**ದಲ್ಲಿ 'ಸಾ ಸತೀ ಸುಷುವೇ', (ಶಂ.ವಿ.ಸಾ.೨-೩೩)ಎಂದೇ ಇದೆ. ವ್ಯಾಸಾಚಲೀಯದಲ್ಲಿಯೂ 'ಜಾಯಾ ಸತೀ'ಎಂದೇ ಇದೆ(ವ್ಯಾ.ಶಂ. ೪-೨೧)ಎಂದು ಆಗಲೆ ಹೇಳಿದ್ದೇವೆ. ಆದರೆ ಮೇಲೆ ಉದಾಹರಿಸಿರುವ ಪ್ರಾಚೀನಶಂಕರವಿಜಯದಲ್ಲಿ ' ಶಿವಾಖ್ಯಾದಾರ್ಯಾ ಪತೀಃ ' ಎಂದಿರುವದನ್ನು ನೋಡಿಯೊ ಏನೊ, ಇಲ್ಲಿಯೂ 'ಆರ್ಯಾ ಸತೀ'ಎಂಬ ಪಾಠಾಂತರವನ್ನು ಕೆಲವರು ಕಲ್ಪಿಸಿರುತ್ತಾರೆ. ಆಕೆಯು **'ಮುಳ'**ನೆಂಬ ಪಂಡಿತನ ಮಗಳೆಂದು ಹೇಳಿರುವ (ಮಾ. ಶಂ. ೨-೩೨) ಮಾಧವೀಯಶ್ಲೋಕದಲ್ಲಿ ಆಕೆಯ ಹೆಸರಿಲ್ಲ. ವ್ಯಾಸಾಚಲೀಯದ ಹೋಲಿಕೆಯಿಂದ 'ಸತೀ' ಎಂಬುದೇ ಆಕೆಯ

ನೆಸರೆಂಬುದು ಇಬ್ಬರಿಗೂ ಸಂಮತವೆಂದು ಕಾಣುತ್ತದೆ. **ವ್ಯಾಸಾಚಲೀಯ**ದಲ್ಲಿ(ವ್ಯಾ. ಶಂ. ೧–೨೯) 'ವಿದ್ಯಾಧಿರಾಜಮುಖಪಣ್ಡಿತನಾಮಧೇಯೌ'–ಎಂದಿದೆ ತಮಿಳರು ಕ ಖ ಗಳನ್ನು ಗ ಘ ಎಂದೂ ಉಚ್ಚರಿಸುವದರಿಂದ **ಮುಘ** ಎಂಬ ಶಬ್ದವು ಮುಖಶಬ್ದದಿಂದ ಹುಟ್ಟಿರುವದಕ್ಕೆ ಸಾಕು. **ಚಿನ್ನಿಲಾಸೀಯ**ದಲ್ಲಿ ಆಜ್ಜನ ಹೆಸರನ್ನು ಕೊಟ್ಟಿಲ್ಲ ; ಶಿವಗುರುವನ್ನು **ಮುಖೀ** (ಶಿವಗುರುರ್ಮುಖೀ ಚಿ. ಶಂ. ೬–೨೬) **ಯೆಜ್ವಾ** (ಶಿವಗುರುರ್ಯಜ್ವಾ ಚಿ. ಶಂ. ೭–೧) ಎಂದು ಕರೆದಿರುವದರಿಂದ ದೀಕ್ಷಿತನೆಂದು ಕಾಣುತ್ತದೆ. ಮುಖಪಂಡಿತನೂ ಯಜ್ಞದೀಕ್ಷಿತನೇ ಆಗಿರಬಹುದು. ಹೇಗೇ ಆಗಲಿ, "ಆರ್ಯಾ", "ಸತೀ"– ಇವುಗಳು ಕ್ರಮವಾಗಿ ಪೂಜ್ಯಳು, ಸಾಧ್ವೀಮಣಿ–ಎಂಬರ್ಥದ ಅನ್ವರ್ಥದ ನಾಮಗಳೆಂದೂ ಕಲ್ಪಿಸುವ ಪಕ್ಷೆ, ಬರುವಂತಿದೆಯೆಂಬುದನ್ನು ನೆನಪಿಡಬೇಕು. ಅಂತೂ ಹೀಗೆ ಶಂಕರರ ತಾಯಿ, ತಂದೆ, ಅಜ್ಜ–ಇವರಿಗೆ ಈಗ ಪ್ರಖ್ಯಾತವಾಗಿರುವ ಸತೀ, ಶಿವಗುರು, ವಿದ್ಯಾಧಿರಾಜ–ಎಂಬ ಹೆಸರುಗಳೇ ಅಂಕಿತನಾಮಗಳೋ ಅಥವಾ ಕವಿಗಳು ಕಲ್ಪಿಸಿದವುಗಳೋ ಹೇಳುವದಕ್ಕೆ ಬರುವದಾಗಿಲ್ಲ.

ಶಂಕರಾಚಾರ್ಯರ ಜನ್ಮವೃತ್ತಾಂತ, ಹೆಸರು

೨೩. **ಮಾಧವೀಯ**ದಲ್ಲಿ ಹೀಗಿದೆ : ಸತೀದೇವಿಯ ಸೂಚನೆಯಂತೆ ಶಿವಗುರುವೂ ಅವನ ಪತ್ನಿಯೂ ಪುತ್ರಾರ್ಥವಾಗಿ ಶಿವನನ್ನು ಕುರಿತು ತಪಸ್ಸು ಮಾಡಿದರು. ಮನೆಯ ಬಳಿ ಇರುವ ಒಂದು ಹೊಳೆಯಲ್ಲಿ ಮಿಂದು ಕುಂದಮೂಲಾಶನರಾಗಿ ಶಿವನ ಸೇವೆಮಾಡುತ್ತಿರುವಾಗ ಕನಸಿನಲ್ಲಿ ಶಿವನು ಬ್ರಾಹ್ಮಣವೇಷದಿಂದ (ದ್ವಿಜವೇಷಧಾರೀ ಪ್ರತ್ಯಕ್ಷತಾಂ ಶಿವಗುರುಂ ಗತ ಆತ್ತನಿಸ್ಪೃಮ್, ೨–೫೧) ಬಂದು ಏತಕ್ಕೆ ತಪಸ್ಸುಮಾಡುತ್ತಿದ್ದೀಯೆ ? ನಿನಗೇನು ಬೇಕು ?– ಎಂದು ಕೇಳಿದನು. ಪುತ್ರೇಚ್ಛೆಯಿಂದ ತಪಸ್ಸುಮಾಡುತ್ತಿದ್ದೇನೆ ಎಂದು ಶಿವಗುರು ಹೇಳಿದನು. ಆಗ ಶಿವನು ಸರ್ವಜ್ಞನಾದ ಸರ್ವಗುಣೋಪೇತನಾದ ಒಬ್ಬನೇ ಮಗನು ಬೇಕೊ, ಅಥವಾ ಅದಕ್ಕೆ ವಿಪರೀತವಾಗಿರುವ ದೀರ್ಘಾಯುಸ್ಸುಳ್ಳ ಸ್ವಲ್ಪಗುಣವುಳ್ಳ ಬಹಳ ಪುತ್ರರು ಬೇಕೊ ? (ದೇವೋಽಪ್ಯಪೃಚ್ಛದಥ ತಂ ದ್ವಿಜ ವಿದ್ಧಿ ಸತ್ಯಂ ಸರ್ವಜ್ಞಮೇವಮಪಿ ಸರ್ವಗುಣೋಪಪನ್ನಮ್| ಪುತ್ರಂ ದದಾಮ್ಯಥ ಬಹೂನ್ ವಿಪರೀತ ಕಾಂಸ್ತೇ ಭೂರ್ಯಾಯುಷಸ್ತನುಗುಣಾನವದದ್ವಿಜೇಶಃ || ೨–೫೨) ಎನ್ನಲು 'ಆ ಬ್ರಾಹ್ಮಣನು ಸರ್ವಜ್ಞನಾದ ಒಬ್ಬ ಮಗನೇ ಇರಲಿ' ಎಂದನು. ಶಿವನು 'ಆಗಲಿ, ನಿನ್ನ ತಪಸ್ಸು ಪೂರ್ಣವಾಯಿತು, ಹೆಂಡತಿಯೊಡನೆ ಮನೆಗೆ ಹೋಗು' ಎಂದನು. ಶಿವಗುರು ಎಚ್ಚತ್ತಬಳಿಕ ಕನಸಿನ ಸುದ್ದಿಯನ್ನು ಹೆಂಡತಿಗೆ ಹೇಳಿದನು. ಆಕೆಯು ಅದನ್ನು ಕೇಳಿ ಸಂತೋಷಪಟ್ಟಳು. ಬಳಿಕ ಅವರಿಬ್ಬರೂ ಆತನನ್ನೇ ಸ್ಮರಿಸಿಕೊಳ್ಳುತ್ತಾ ಬ್ರಾಹ್ಮಣರಿಗೆ ಸಮಾರಾಧನೆಮಾಡಿ ಭೂರಿದಕ್ಷಿಣೆ

ಯನ್ನು ಕೊಟ್ಟು ತಿನರ ಆಶೀರ್ವಾದನನ್ನು ಪಡೆದು ಅವರುಂಡು ಮಿಕ್ಕ ಅನ್ನವನ್ನು ಉಂಡರು. ಆ ಅನ್ನದಲ್ಲಿ ವೈಷ್ಣವತೇಜಸ್ಸು ನೇರಿಕೊಂಡಿತು. (ಭುಕ್ತೇ ಪ್ರವಿಷ್ಟಮಭವತ್ಕಿಲ ವೈಷ್ಣವತೇಜಃ ॥ ೨–೫೬) ಸತೀದೇವಿಯು ಗರ್ಭಿಣಿಯಾಗಿ ಸುಮುಹೂರ್ತದಲ್ಲಿ ಮಗನನ್ನು ಹಡೆದಳು. ನೋಡಿದವರಿಗೆ ಸುಖವಾಗುತ್ತದೆಯೆಂಬ ಕಾರಣದಿಂದ ಆಪನಾ ಬಹುದಿನಕ್ಕೆ ಶಂಕರನ ಪ್ರಸಾದದಿಂದ ಹುಟ್ಟಿದವನು– ಎಂಬ ಕಾರಣದಿಂದ (೨–೬೩) ತಂದೆಯು ಮಗುವಿಗೆ **ಶಂಕರ**ನೆಂಬ ಹೆಸರನ್ನಿಟ್ಟನು (ಮಾ. ಶಂ. ೨–೪೬ ರಿಂದ ೬೩).

ವ್ಯಾಸಾಚಲೀಯದ ಕೈಬರಹದ ಪ್ರತಿಯಲ್ಲಿಯೂ ಹೀಗೆಯೇ ವಿವರವಿದೆ. ಮಾಧವೀಯದಲ್ಲಿ ಶಿವಗುರುವು ಪುತ್ರಸಂತತಿಯಾಗಲಿಲ್ಲವಲ್ಲ! ಎಂದು ಹಲುಬಿದಾಗ ಆತನ ಪತ್ನಿಯು 'ಶಿವನಿಗೆ ಶರಣುಹೋಗೋಣ; ಆವನಿಂದ ಸಕಲಾರ್ಥಗಳೂ ಸಿದ್ಧಿಯಾಗುವವೆಂಬುದಕ್ಕೆ ಉಪಮನ್ಯವೇ ಪ್ರಮಾಣ' (ತತ್ರೋಪಮನ್ಯುಮಹಿಮಾ ವರಮುಂ ಪ್ರಮಾಣಮ್ ಮಾ.ಶಂ. ೨–೪೮) ಎಂದು ಹೇಳಿರುವ ಶ್ಲೋಕವನ್ನು–ಎರಡನೆಯ ಮೂರನೆಯ ಸರ್ಗಗಳಲ್ಲಿ ವಿಸ್ತಾರವಾಗಿ ವರ್ಣಿಸಿದ ಬಳಿಕ–ಸ್ವಲ್ಪ ಮಾರ್ಪಡಿಸಿ ಹಾಕಿದೆ. (ಏವಂ ಫಲಪ್ರದಮನೀಶ್ವರ ಮಾಶ್ವರಾಣಾಮಾಶಂ ಭಜಾಮಃ; ವ್ಯಾ.ಶಂ. ೪–೧), ವ್ಯಾಸಾಚಲೀಯದಲ್ಲಿ ಶಿವಗುರುವಿನ ಮನೆಯ ಬಳಿ ಇದ್ದ ನದಿಯ ಹೆಸರನ್ನು ಹೇಳಿಲ್ಲ; ಆದ್ದರಿಂದ 'ತಸ್ಯೋಪಧಾನು ಕಿಲ ಸಂನಿಹಿತಾಪಗೈಕಾ" ಆನನ ಮನೆಯ ಹತ್ತಿರ ಒಂದು ಹೊಳೆಯಿತ್ತು ಎಂದು ಬರೆದಿರುವದು ಅಲ್ಲಿ ಸಹಜವಾಗಿ ತೋರುತ್ತಿದೆ; ಆದರೆ ಸರ್ಗದ ಆದಿಯಲ್ಲಿಯೇ 'ತತೋ ಮಹೇಶಃ ಕಿಲ ಕೇರಳೇಷು ಶ್ರೀಮದ್ವೃಷಾದ್ರೌ ಕರುಣಾಸಮುದ್ರಃ । ಪೂರ್ಣಾನದೀವುಣ್ಯತಟೇಸ್ವಯಮ್ಭೂರ್ಲಿಙ್ಗಾತ್ಮನಾನಙ್ಗ ಧಗಾವಿರಾಸೀತ್॥ (ಮಾ.ಶಂ. ೨–೧) ಆಮೇಲೆ ಕಾಮುದಹನನೂ ಕರುಣಾಸಾಗರನೂ ಆದ ಮಹೇಶ್ವರನು ವೃಷಾದ್ರಿಯಲ್ಲಿ ಪೂರ್ಣಾನದಿಯ ದಡದಲ್ಲಿ ಸ್ವಯಂಭುವಾದರೂ ಲಿಂಗರೂಪದಿಂದ ಆವಿರ್ಭವಿಸಿದನು–ಎಂದು ಹೇಳಿರುವ ಮಾಧವನು ಸಂನಿಹಿತಾಪಗೈಕಾ (ಒಂದು ನದಿಯು ಮನೆಯ ಹತ್ತಿರವಿತ್ತು) ಎಂದು ಹೇಳುವದು ಹೇಗೆ ಸಮಂಜಸವಾದೀತು? ಆದ್ದರಿಂದ ಈ ಪದ್ಯವನ್ನು ವ್ಯಾಸಾಚಲೀಯದಿಂದಲೇ ಮಾಧವನು ಪೂರ್ವೋತ್ತರವಿರೋಧವಾಗುವದೆಂಬುದನ್ನು ಲಕ್ಷಿಸದೆ ಬರೆದುಕೊಂಡುಹಾಕಿರಬಹುದೆ? ಇದು ವಿಚಾರಣೀಯವಾಗಿದೆ.

ಚಿದ್ವಿಲಾಸೀಯದಲ್ಲಿ: ಬ್ರಹ್ಮನಿಗೆ ಲೋಕೋದ್ಧಾರವನ್ನು ಮಾಡುವೆನೆಂದು ಶಿವನು ವಾಗ್ದಾನಮಾಡುವಾಗ 'ಶಿವಗುರುವು ಪೌಂಡರೀಕ, ವಾಜಪೇಯ - ಮುಂತಾದ ಯಜ್ಞಗಳನ್ನು ಮಾಡಿ ಸರ್ವಶಾಸ್ತ್ರವಿಶಾರದನಾಗಿ ಉಪನಿಷದರ್ಥವನ್ನು ಆವಲೋಕನಮಾಡಿ ಶಿವಾಖ್ಯವಾದ ಬ್ರಹ್ಮವೇ ಸರ್ವರ ಆತ್ಮವು

ಎಂದು ಆರಿತುಕೊಂಡು ನನ್ನನ್ನೇ ಶರಣುಹೊಂದಿರುತ್ತಾನೆ. ಹಗಲೂ ಇರುಳೂ ತನ್ನ ಭಾರ್ಯೆ **ಅರ್ಯಾ**ಯೊಡನೆ ಶಿವಗೌರಿಯರ ನಿವಾಸವನ್ನೇ ನೋಡುತ್ತಾ ಎಲ್ಲವನ್ನೂ ಮರೆತು ನನ್ನನ್ನೇ ಸ್ಮರಿಸುತ್ತಾ ಘೋರತಪಸ್ಸನ್ನು ಮಾಡುತ್ತಿರುತ್ತಾನೆ; **ವೃಷಾಚಲ**ವಾಸಿಯಾದ ನನ್ನನ್ನೇ ಭಜಿಸುತ್ತಿರುತ್ತಾನೆ. ಇದನ್ನು ನನಗೆ ಸರಸ್ವತಿ ಹೇಳಿರುವಳು. ಅವನ ಅಭೀಷ್ಟವನ್ನು ಸಲ್ಲಿಸಿ ಅವನ ಮಗನಾಗಿ ಶಂಕರನೆಂಬ ಹೆಸರಿನಿಂದ ಭೂತಲದಲ್ಲಿ ಸಂಚರಿಸುವೆನು' (ಚಿ. ಶಂ. ೪–೩೭ ರಿಂದ ೪೯) ಎಂದು ಹೇಳಿ ಶ್ರುತಿಸ್ಮೃತಿವಿರುದ್ಧಮತಗಳನ್ನು ಪರಿಹರಿಸಿ, ತಪಸ್ಸನ್ನು ಮಾಡುತ್ತಿರುವ ಶಿವಗುರುವಿಗೆ ಪುತ್ರದಾನವನ್ನು ಮಾಡಿ, ಭೇದವಾದಿತಪಸ್ಸಿನಿಂದ ಗ್ರಸ್ತರಾದ ಜನರನ್ನು ಉದ್ಧಾರಮಾಡಿ ತನ್ನ ಲೀಲೆಗಳನ್ನು ತೋರಿಸಬೇಕೆಂದು–ಕೇರಳಜನರ ವಿದ್ವತ್ತ್ವಿಯನ್ನು ಪಾವನಗೊಳಿಸಿ,ದಕ್ಷಿಣಕೈಲಾಸವೆನಿಸುವ ವೃಷಾಚಲಕ್ಕೆ ಬಂದನು; **ಚೂರ್ಣೀ** ಎಂಬ ಗಂಗೆಯಂತಿರುವ ಪಾಪವಿನಾಶಿನಿಯಾದ ನದಿಯು ಹರಿಯುತ್ತಿದೆ....ಆಳಕಾಪುರಿಯಂತಿರುವ **ಕಾಲಟಿ**ನಗರಿಯು ವಿರಾಜಿಸುತ್ತಿದೆ.... ಆ ವೃಷಭಾಚಲೇಶ್ವರನು ಆ ದಂಪತಿಗಳಿಬ್ಬರೂ ಸ್ವಪ್ನದಲ್ಲಿ ವಿಪ್ರರೂಪದಿಂದ ಕಾಣಿಸಿಕೊಂಡು 'ವರವನ್ನು ಬೇಡಿರಿ, ನೆರವೇರಿಸಿಕೊಡುವೆನು' ಎಂದು ಹೇಳಿದನು. ಆವರು ಭಕ್ತಿಭರರಾಗಿ ಇವನು ವೃಷಾಚಲೇಶ್ವರನೇ ಎಂದು ನಿಶ್ಚಯಿಸಿ ನಮಸ್ಕಾರಪೂರ್ವಕವಾಗಿ ತಮ್ಮ ವೃತ್ತಾಂತವನ್ನು ತಿಳಿಸಿದರು. (ತತಸ್ತೇನಾನ್ಯವಾದೀತ್ಥಂ ಸರ್ವಶಾಸ್ತ್ರವಿಶಾರಪಮ್ ॥೩೧॥ ದಾಸ್ಯಾಮಿ ಪುತ್ರಮೇಕಂ ವಾ ಚಿರೇತರವಯೋಯುತಮ್| ಅಥವಾ ಸುಚಿರಾಯುಷ್ಕಾನ್ ಬಹೂನ್ ಪುತ್ರಾಂಸ್ತು ಬಾಲಿಶಾನ್ ॥೩೨॥ ಸ್ವಲ್ಪಾಯುಸ್ಸಿನ ಸರ್ವಶಾಸ್ತ್ರವಿಶಾರದನಾದ ಮಗನನ್ನು ಕೊಡಲೊ? ಚಿರಾಯುಗಳಾದ ಮೂರ್ಖರಾದ ಅನೇಕ ಪುತ್ರರನ್ನು ಕೊಡಲೊ?– ಎಂದು ಕೇಳಿದನು. 'ಮೂರ್ಖರಾದ ಬಹುಮಕ್ಕಳಿಂದೇನು? ಸ್ವಲ್ಪಾಯುವಾದರೂ ವೇದವೇದಾಂಗತತ್ತ್ವವಿದನಾದವನೊಬ್ಬನೇ ಮಗನಾದರೂ ತನ್ನ ವಂಶವನ್ನು ಉದ್ಧಾರಮಾಡುತ್ತಾನೆ. ಆದ್ದರಿಂದ ಇಂಥ ಒಬ್ಬನೇ ಸಾಕು" ಎಂದು ಆಕೆ ಹೇಳಿದಳು. "ಹಾಗೇ ಆಗಲಿ!' ಎಂದು ಶಿವನು ಹೊರಟುಹೋದನು. ಹೀಗೆ ಆವರಿಬ್ಬರೂ ಒಬ್ಬರನ್ನೊಬ್ಬರು ನೋಡಿದರು. ಬೆಳಗ್ಗೆ ಎದ್ದು ಸುಪುತ್ರನನ್ನು ಕೊಟ್ಟೇ ಇರುವ ಗಿರಿಜಾಪತಿಯಾದ ವೃಷಾಚಲೇಶ್ವರನು ಮಾರ್ಕಂಡೇಯನನ್ನು ಚಿರಾಯುಷ್ಮನನ್ನಾಗಿ ಮಾಡಿದಂತೆ ಇವನನ್ನೂ ಮಾಡುತ್ತೇನೆ ಎಂದು ನಿಶ್ಚಯಿಸಿದರು, (ಸುಪುತ್ರಂ ದತ್ತವಾನೇವ ವೃಷಾಚಲ ಕೃತಾಶ್ರಯಃ ಚಿರಾಯುಷ್ಯಂ ಕರೋತ್ಯೇವ ಮೃಕಣ್ಡೋರಿವ ಬಾಲಕಮ್॥) ಸ್ವಪ್ನದರ್ಶನವು ಸಫಲವಾಯಿತೆಂದೇ ನೆನೆದುಕೊಂಡು ಶಿವಭಜನೆಯನ್ನು ನಿಲ್ಲಿಸಿ ಮನೆಗೆ ಹೋಗಿ ಬ್ರಾಹ್ಮಣಸಂತರ್ಪಣೆಯನ್ನು ಮಾಡಿ ಆವರ ಆಶೀರ್ವಾದವನ್ನು ಪಡೆದು ಆವರ ಭುಕ್ತಶೇಷವನ್ನು ಭುಂಜಿಸಿದರು. ಆ ಅನ್ನದಲ್ಲಿ ಈಶ್ವರನ

ಜ್ಯೋತಿಯು ಪ್ರವೇಶಿಸಿತು. ಆರ್ಯಾಂಬೆಯು ಗರ್ಭವನ್ನು ಧರಿಸಿ ಹತ್ತನೆಯ ಮಾಸದಲ್ಲಿ ಶುಭದಿನದಲ್ಲಿ ಮಗನನ್ನು ಹೆತ್ತಳು (ಚಿ. ಶಂ. ೫-೧ ರಿಂದ ೧೩, ೩೭).

ಈ ವಿವರವೂ ಮೂಢವೀಯದಲ್ಲಿರುವಂತೆಯೇ ಇವೆ. ವಿಶೇಷವೇನೆಂದರೆ, ಇಬ್ಬರೂ ಅಲ್ಲಿ ಒಬ್ಬರನ್ನೊಬ್ಬರು ನೋಡಿಲ್ಲ. ಇಬ್ಬರೂ ತಮ್ಮ ವೃತ್ತಾಂತವನ್ನು ಶಿವನಲ್ಲಿ ಹೇಳಿಕೊಂಡರು. (ಏಕೋಽಲಮುಯಮಿತ್ಯೇವಮವಾದೀತ್ಸಾ ತಥಾಗ್ರತಃ ॥) ಶಿವನು ಕೇಳಿದ ಪ್ರಶ್ನೆಗೆ ಹೇಳಬೇಕಾದ ಉತ್ತರವನ್ನು ಆಲೋಚಿಸುತ್ತಿರುವಲ್ಲಿ ಹೆಂಡತಿಯೇ ವೇದವೇದಾಂಗತತ್ತ್ವಜ್ಞನಾದ ಒಬ್ಬ ಮಗನೇ ಸಾಕೆಂದು ಹೇಳಿದಳು. ಆಕೆಯ ಹೆಸರು ಆರ್ಯಾ, ಸತೀ ಅಲ್ಲ. ನದಿಯ ಹೆಸರು ಇಲ್ಲಿ "ಚೂರ್ಣೀ" ಎಂದಿದೆ. ಪೂರ್ಣಾ ಅಲ್ಲ. 'ಚೂರ್ಣೀ ಸ್ರೋತಸ್ವಿನೀ ಯತ್ರ ಗಜೈರ್ನೀವಾಘೌಘನಾಶಿನೀ' (ಚಿ.ಶಂ.೫-೬). ಈ ಶಂಕರ ವಿಜಯದ ವಿಷಯಕ್ಕೆ ಇನ್ನೊಂದು ಮಾತನ್ನು ಹೇಳತಕ್ಕದ್ದು ಅವಶ್ಯವಿದೆ. ಇದರಲ್ಲಿರುವ ಶಂಕರರ ಜನ್ಮಕಾಲವು ಬೃಹಚ್ಛಂಕರವಿಜಯದಲ್ಲಿರುವ ಶ್ಲೋಕದಲ್ಲಿ ಇರುವ ಕಾಲವೇ ಆಗಿದೆ ಎಂದು ಆಗಲೆ (ಪು ೨೨) ಹೇಳಿರುವೆವಷ್ಟೆ? ಚಿತ್ಸುಖಾಚಾರ್ಯಕೃತವೆಂದು ಪ್ರಸಿದ್ಧವಾಗಿರುವ ಬೃಹಚ್ಛಂಕರವಿಜಯದ ಶ್ರೀಶಂಕರ ಪ್ರಾದುರ್ಭಾವದ ಪ್ರಕರಣವೊಂದು ಸುದೈವದಿಂದ ಪೂರ ಲಬ್ಧವಾಗಿದೆ. ಆದನ್ನೂ ಚಿದ್ವಿಲಾಸೀಯದ ಸನಾತನಪ್ರಕರಣವನ್ನೂ ಹೋಲಿಸಿದ್ದರಲ್ಲಿ ಈ ಎರಡು ಗ್ರಂಥಗಳಿಗೂ ಅತ್ಯಂತನಿಕಟಸಂಬಂಧವಿದೆಯೆಂದು ಗೊತ್ತಾಗುತ್ತದೆ. ಚಿದ್ವಿಲಾಸೀಯ ಪ್ರಕರಣವು ಆ ಗ್ರಂಥದ ಬಹ್ವಂಶವನ್ನು ಅನುಕರಿಸಿರಬಹುದೆಂಬ ಸೂಚನೆಯೂ ಇದರಿಂದ ಹೊರಡುತ್ತದೆ. ತತ್ತ್ವಾನ್ವೇಷಕರಾದ ವಾಚಕರ ಕುತೂಹಲನಿವೃತ್ತಿಗಾಗಿ ಆ ಪ್ರಕರಣವನ್ನು ಜನೆಯ ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ. ಇದರಿಂದ ಪಾಠಕರೇ ತಮ್ಮ ತಮ್ಮ ನಿರ್ಣಯಕ್ಕೆ ಬರಬೇಕಾಗಿದೆ.

ಆನಂತಾನಂದಗಿರೀಯ ಶಂಕರವಿಜಯ

೩೪. ಮೇಲೆ ಕೊಟ್ಟಿರುವ ಶಂಕರವಿಜಯಗಳ ವಿವರಗಳು ಬಲುಮಟ್ಟಿಗೆ ಹೊಂದುಗಡೆಯಾಗುತ್ತವೆ. ಆಚಾರ್ಯರು ಕೇರಳದಲ್ಲಿ ಕಾಲಡಿಯಲ್ಲಿಯೇ ಹುಟ್ಟಿದರೆಂಬ ವಿಷಯಕ್ಕೆ ಎಲ್ಲಾ ವಿಜಯಗಳಿಗೂ ಸಂಮತಿಯಿದೆ. ಆದರೆ ಆನಂತಾನಂದಗಿರಿಕೃತವಾದ ಶಂಕರವಿಜಯದಲ್ಲಿ ಮಾತ್ರ ಆಚಾರ್ಯರ ಜನ್ಮಸ್ಥಲ ತಂದೆತಾಯಿಗಳ ಹೆಸರು, ಹುಟ್ಟಿದ ಪ್ರಕಾರ- ಇವುಗಳ ವಿವರಗಳು ಭಿನ್ನವಾಗಿ ಕಾಣಬರುತ್ತಿವೆ. ಅದು ಹೇಗೆಂದರೆ :

'ಆ ಬಳಿಕ ಸರ್ವಾತ್ಮಕನಾದ ಶಿವನು ಚಿದಂಬರಪುರದಲ್ಲಿ ಆಕಾಶಲಿಂಗವೆಂಬ ಹೆಸರಿನಿಂದ ಪ್ರಖ್ಯಾತನಾಗಿದ್ದನು. ಆಪ **ಸರ್ವಜ್ಞ**ನೆಂಬ ಬ್ರಾಹ್ಮಣನೂ

ಕಾಮಾಕ್ಷೀ ಎಂಬ ಅವನ ಹೆಂಡತಿಯೂ ಚಿರಕಾಲ ಶಿವನನ್ನು ಫಲವಾಗಿವಿಶಿಷ್ಟಾ ಎಂಬ ಮಗಳನ್ನು ಪಡೆದರು. ಅವಳನ್ನು ಎಂಟನೆಯ ವರ್ಷದಲ್ಲಿ ವಿಶ್ವಜಿತ್ತು ಎಂಬ ವರನಿಗೆ ಕೊಟ್ಟು ಮದುವೆಮಾಡಿದರು. ಪತಿಸೇವಾನಿರತ ಳಾಗಿದ್ದರೂ ಆಕೆಯನ್ನು ಬಿಟ್ಟು ಗಂಡನು ತಪಸ್ಸುಮಾಡುವದಕ್ಕೆ ಆರಣ್ಯಕ್ಕೆ ಹೋದನು. (ತಾದೃಶೀಮಪಿ ಸಂತ್ಯಕ್ತ್ವಾ ಯಯೌ ವಿಶ್ವಜಿದದ್ಭುತಮ್|ಅರಣ್ಯೇ ತಪಸೇ ಕೃತ್ವಾ ಮನೋನಿಶ್ಚಯತಾಂ ಗತಃ ||). ಆಲ್ಲಿಂದ ಮುಂದಕ್ಕೆ ಆಕೆಯು ಚಿದಂಬರಮಹೇಶ್ವರನನ್ನೇ ಆರಾಧಿಸುತ್ತಿದ್ದಳು. ಆ ದೇವನು ಎಲ್ಲಾ ಕಡೆಯಲ್ಲಿಯೂ ಪೂರ್ಣನಾದರೂ ಆಕೆಯ ಮುಖಕಮಲವನ್ನು ಹೊಕ್ಕದ್ದನ್ನು ಕಂಡು ಆಲ್ಲಿಗೆ ಬಂದಿದ್ದ ಜನರು ವಿಸ್ಮಿತರಾದರು. ಆ ತೇಜಸ್ಸಿನಿಂದ ಕೂಡಿದ ವಿಶಿಷ್ಟೆಯು ಪಾರ್ವತಿಯಂತೆ ಮಹಾತೇಜಸ್ವಿನಿಯಾದಳು, ತಂದೆತಾಯಿಗಳೇ ಮುಂತಾಗಿ ಎಲ್ಲರಿಂದಲೂ ಗೌರವಿಸಲ್ಪಟ್ಟು ಗರ್ಭವತಿಯಾದಳು. ದಿನದಿನಕ್ಕೂ ಗರ್ಭವು ಬೆಳೆಯಿತು. ಬ್ರಾಹ್ಮಣರು ಚಿದಂಬರನನ್ನೇ ಯಜಮಾನನನ್ನಾಗಿ ಮಾಡಿಕೊಂಡು ಮೂರನೆಯ ತಿಂಗಳಿಂದಲೂ ಆಕೆಗೆ ವೇದೋಕ್ತಸಂಸ್ಕಾರಗಳನ್ನು ಮಾಡಿದರು. ಹತ್ತನೆಯ ತಿಂಗಳಲ್ಲಿ ವಿಶಿಷ್ಟೆಯ ಗರ್ಭದಿಂದ **ಮಹಾದೇವನು ಶಂಕರಾಚಾರ್ಯನೆಂಬ** ನಾಮದಿಂದ ಜನಿಸಿದನು' (ಆ. ಶಂ. ಪ್ರ. ೨ ಪು. ೮–೯) ಮೂಲಶ್ಲೋಕಗಳನ್ನು ಜನೆಯಂ ಪರಿಶಿಷ್ಟದಲ್ಲಿ ಕೊಟ್ಟಿದೆ.

ಈ ಆನಂತಾನಂದಗಿರಿಯು ಶಂಕರಾಚಾರ್ಯರ ಸಾಕ್ಷಾಚ್ಛಿಷ್ಯನೆಂದು ತನ್ನನ್ನು ಕರೆದುಕೊಂಡಿರುತ್ತಾನೆ. ಆದರೂ ಶಂಕರರ ತಾಯಿಯ ಹೆಸರು ವಿಶಿಷ್ಟೆಯೆಂದೂ ತಂದೆಯ ಹೆಸರು ವಿಶ್ವಜಿತ್ತೆಂದೂ ಮಾತಾಮಹನ ಹೆಸರು ಸರ್ವಜ್ಞನೆಂದೂ ಹೇಳುತ್ತಾನೆ. ಇದು ನಿಜವಾಗಿದ್ದರೆ ಮಿಕ್ಕವರು ಈ ಹೆಸರುಗಳನ್ನು ಬಿಟ್ಟು ತಾಯಿಯನ್ನು ಆರ್ಯಾಂಬೆ ಅಥವಾ ಸತಿ ಎಂದೂ ತಂದೆಯನ್ನು ಶಿವಗುರುವೆಂದೂ ಮಾತಾಮಹನು ಮಘ(ಅಥವಾ ಮಖ)ಪಂಡಿತನೆಂದೂ ಕರೆಯುವ ಧೈರ್ಯವನ್ನು ಹೇಗೆ ಮಾಡಿಕೊಂಡರೆಂದು ಮೊದಲನೆಯ ಆಕ್ಷೇಪವು ಎದ್ದುಕೊಳ್ಳುತ್ತದೆ. ಇದಲ್ಲದೆ ಶಂಕರರು ಪುರುಷಬೀಜದ ಹಂಗಿಲ್ಲದೆ ಶಿವನ ತೇಜಸ್ಸು ವಿಶಿಷ್ಟೆಯ ಮುಖವನ್ನು ಪ್ರವೇಶಿಸಿದ ಕಾರಣದಿಂದಲೇ ಆಕೆಯ ಗರ್ಭದಿಂದ ಹುಟ್ಟಿದರೆಂದು ಈತನು ಅತ್ಯಂತ ಅಸ್ವಾಭಾವಿಕಕಥೆಯನ್ನು ಕಲ್ಪಿಸಿರುತ್ತಾನೆ. ತೇಜಸ್ಸು ಪ್ರವೇಶಿಸಿದಾಗ ದೇವಾಲಯಕ್ಕೆ ಬಂದಿದ್ದ ಜನರು ನೋಡಿ ವಿಸ್ಮಿತರಾದರೆಂದು ಕಲ್ಪಿಸಿರುವದು ಮುಂದೆ ತಂದೆತಾಯಿಗಳೇ ಮುಂತಾದವರು ಆಕೆಯನ್ನು ಸಂಶಯಚಿತ್ತದಿಂದ ಕಾಣದೆ ಗೌರವಿಸಿದರು– ಎಂಬುದನ್ನು ಪುಷ್ಟಿಗೊಳಿಸುವದಕ್ಕಿರಬೇಕು. ಆದರೆ ದೇವಸ್ಥಾನದಲ್ಲಿದ್ದ ಜನರ ಹೇಳಿಕೆಯನ್ನೇ ನಂಬಿ ತಂದೆತಾಯಿಗಳೂ ಮಿಕ್ಕವರೂ ಹೇಗೆ ಆಕೆಯನ್ನು ಗೌರವಿಸಿದರು?ಕೆಲವರು ನಂಬಿದವರು, ಕೆಲವರು

ಸಂಬದೆ ಇವ್ವವರು– ಹೀಗೆ ಎಷ್ಟು ತಂಡವರಾಗಿ ಒಬ್ಬರು ಆಕೆಯನ್ನು ಗೌರವಿಸುವದು, ಮತ್ತೊಂದು ಪಂಗಡದವರು ಆಕೆಯನ್ನು ಬಹಿಷ್ಕರಿಸುವದು-ಹೀಗಾಗ ಬೇಕಾದದ್ದು ಸ್ವಾಭಾವಿಕವಲ್ಲವೆ ? ಮುಂದೆ ಆಚಾರ್ಯರ ಗೌರವಕ್ಕೂ ಎಲ್ಲಿಯಾದರೂ ಕುಂದುಬರಬೇಕಾಗಿತ್ತಲ್ಲವೆ ? ಹಾಗೆ ಆಗಲಿಲ್ಲವಾದ್ದರಿಂದ ಇದು ವಿಶ್ವಸನೀಯವಾದ ಕಥೆಯಲ್ಲ ಎಂದು **ಸೋಮನಾಥಯ್ಯನವರು** (ಸೋ. ಶಂ. ೩೨) ಶಂಕೆಯನ್ನೊಡ್ಡಿರುತ್ತಾರೆ. ಇದು ಯುಕ್ತಿಯುಕ್ತವಾಗಿದೆ. ಆಚಾರ್ಯರ ಜನ್ಮಸ್ಥಲವು ಕೇರಲದೇಶದ ಕಾಲಟಿ ಎಂದು ಮಿಕ್ಕವರೆಲ್ಲರೂ ಹೇಳಿರುವಲ್ಲಿ ಈ ಗ್ರಂಥಕರ್ತನು ಮಾತ್ರ **ಚಿದಂಬರವನ್ನು** ಹೇಳಿರುವದೇಕೆ ? ಮಾಧವಾದಿಗಳು ಶಿವನು ಶ್ವೇತಾದ್ರಿಯಲ್ಲಿ ಲಿಂಗರೂಪದಿಂದ ಆವಿರ್ಭವಿಸಿದನೆಂದು ಹೇಳುತ್ತಿರುವಲ್ಲಿ ಈತನು ಚಿದಂಬರದಲ್ಲಿ ಆಕಾಶಲಿಂಗರೂಪದಿಂದ ಆವಿರ್ಭವಿಸಿದನೆಂದು ಹೇಳುವದನ್ನು ನೋಡಿದರೆ ಈತನಿಗೆ ಚಿದಂಬರದಲ್ಲಿ ಬಹಳ ಶ್ರದ್ಧೆಯಿತ್ತೆಂಬುದು ಹೊರತು ಮತ್ತೇನೂ ಸಿದ್ಧನಾಗುವದಿಲ್ಲ. ಮುಂದೆ ಶಂಕರಾಚಾರ್ಯರು ತಮ್ಮ ದೇಹತ್ಯಾಗದ ಕಾಲಕ್ಕೆ ಸುರೇಶ್ವರಾಚಾರ್ಯರ ಮೂಲಕ ಮೋಕ್ಷಲಿಂಗವನ್ನು ಚಿದಂಬರಕ್ಕೆ ಕಳುಹಿಸಿಕೊಟ್ಟರೆಂದು (ಆ. ಶಂ. ೭೩. ವೃ. ೧೨೫೫) ಹೇಳಿರುವದೂ ಈ ಶ್ರದ್ಧೆಯನ್ನೇ ಪ್ರಕಟಿಸುತ್ತದೆ ಎನ್ನಬಹುದು ಎಂತ ಕಾಣಿಸುತ್ತದೆ. ತಾಯಿತಂದೆಗಳು, ಹುಟ್ಟಿದ ಸ್ಥಲ– ಮುಂತಾದವುಗಳ ಹೆಸರುಗಳನ್ನು ಮತ್ತೆ ಯಾರೂ ಹೇಳದೆ ಇರುವದನ್ನೇ ಬರೆದಿರುವದನ್ನು ನೋಡಿದರೆ ಈತನ ಕಾಲದಲ್ಲಿ ಆ ದೇಶದವರಿಗೆ ಈ ವಿವರಗಳು ಯಾವವೂ ನಿಶ್ಚಿತವಾಗಿ ತಿಳಿದಿರಲಿಲ್ಲವೆಂದು ಹೇಳಬೇಕಾಗುತ್ತದೆ.

ಆನಂತಾನಂದಗಿರಿಯು ಹೇಳುವ ವಿವರಗಳು **ಧೀರಶಂಕರ, ಅಭಿನವಶಂಕರ**– ಎಂಬ ಹೆಸರಿನ ಕಾಂಚೀಪೀಠದ ಗುರುಪರಂಪರೆಯಲ್ಲಿ ಮೂವತ್ತಾರನೆಯ ಪೀಠಾಧೀಶರಿಗೆ ಹೊಂದುತ್ತವೆಯೆಂದೂ ಅವರ ಚರಿತ್ರೆಯನ್ನು ಕಾಶ್ಮೀರದ ರಾಜನಾದ ಜಯಾಪೀಡನ ಆಸ್ಥಾನಕವಿಯಾದ **ವಾಕ್ಪತಿ**ಯೆಂಬಾತನು **ಶಂಕರೇಂದ್ರವಿಲಾಸ**ದಲ್ಲಿ ಬರೆದಿರುತ್ತಾನೆಂದೂ ಎನ್. ವೆಂಕಟರಾಮನ್‌ರವರು NVSK. pp18,82–85)ಹೇಳಿರುತ್ತಾರೆ. **ಅಭಿನವಶಂಕರಾಚಾರ್ಯರು** ವಿಶ್ವಜಿತ್ತಿನ ಮಕ್ಕಳು. ತಂದೆಯು ಸ್ವರ್ಗಸ್ಥನಾಗಲು ಆತನ ಚಿಕ್ಕವಯಸ್ಸಿನ ಹೆಂಡತಿಯೂ ಸಹಗಮನವಾಡಲು ಉದ್ಯುಕ್ತಳಾದಳು, ಆದರೆ ಆಕೆಯು ಗರ್ಭಿಣಿಯಾಗಿರುವ ಚಿಹ್ನೆಗಳು ಕಂಡದ್ದರಿಂದ ಅದನ್ನು ಬಾಂಧವರು ತಪ್ಪಿಸಿದರು. ಆಕೆಯು ಗರ್ಭಿಣಿಯಾಗಿ ಒಂಬತ್ತು ತಿಂಗಳು ತುಂಬಿದರೂ ಪ್ರಸವವಾಗಲಿಲ್ಲ. ಇನ್ನೊಂದು ವರ್ಷವಾದರೂ ಪ್ರಸವವಾಗದೆ ಇದ್ದದ್ದರಿಂದ ಆಕೆಗೆ ಏನೋ ರೋಗವಿರಬೇಕೆಂದು ಜನರು ಸಂಶಯಪಡುವದಕ್ಕಾರಂಭಿಸಿದರು. ಆದರೆ ತಂದೆ ಸತ್ತ

ಮೂರು ವರ್ಷಗಳಾದ ಬಳಿಕ ಆಕೆ ಒಬ್ಬ ಮಗನನ್ನು ಹಡೆದಳು ; ಆವಳು ಜನರ ಅಪವಾದಕ್ಕೆ ಆಂಜಿ ಮಗುವನ್ನು ಕಾಡಿನಲ್ಲಿ ಬಿಟ್ಟುಬಿಟ್ಟಳು. ಆಲ್ಲಿ ವ್ಯಾಘ್ರ ಪಾದಋಷಿಗಳ ಪತ್ನಿಯಾದ ಒಂದು ಹೆಣ್ಣು ಹುಲಿಯು ಅದನ್ನು ಪೋಷಿಸಿತು. ಐದು ವರ್ಷಕ್ಕೆ ಋಷಿಯೇ ಉಪನಯನವನ್ನು ಮಾಡಿ ವೇದಾಭ್ಯಾಸವನ್ನು ಮಾಡಿಸಿದನು. ವಿದ್ಯಾಘನರು ಚಿದಂಬರದಲ್ಲಿದ್ದಾಗ ಶಿವನು ಶಂಕರರ ಮಹಿಮೆಯನ್ನು ಅವರಿಗೆ ತಿಳಿಸಿದನು ; ಅದರಿಂದಲೇ ವಿದ್ಯಾಘನರು ಆವರನ್ನು ಪೀಠದಲ್ಲಿ ಅಭಿಷಿಕ್ತರನ್ನಾಗಿ ಮಾಡಿದರು.' ಇಲ್ಲಿ ಕೊಟ್ಟಿರುವ ಶಂಕರರ ತಂದೆತಾಯಿಗಳ ಹೆಸರನ್ನೂ ಜನ್ಮಕ್ರಮವನ್ನೂ ವಾಕ್ಪತಿಭಟ್ಟನ "ಶಂಕರೇಂದ್ರವಿಜಯವಿಲಾಸ"ಎಂಬ ಗ್ರಂಥದಿಂದ (೨ನೆಯ ಅಂಕದಿಂದ) ತೆಗೆದುಕೊಂಡಿದೆ ಎಂದು ವೆಂಕಟರಾಮನ್ನರು ಬರೆದಿದ್ದಾರೆ (NVSK p. 82). ಆದೇ ಶಂಕರೇಂದ್ರವಿಜಯವಿಲಾಸದಲ್ಲಿ

ಹಾಯನೇಽಥ ವಿಭವೇ ವೃಷಮಾಸೇ ದಶಮ್ಯಾಂ ಪಕ್ಷದಶಮಿದಿನಮಧ್ಯೇ ।
ಶೇವಧಿನ್ವಿಪದಿಶಾನಲವರ್ಷೇ ತಿಷ್ಯ ಏನಮುದಸೋಷ್ಟ ವಿಶಿಷ್ಟಾ ॥

ಕಲಿಸಂವತ್ಸರ ೩೮೮೯ನೆಯ ವಿಭವಸಂವತ್ಸರದ (ಕ್ರಿ. ಶ. 788)– ವೃಷಭ ಮಾಸದ ೧೦ ದಿನ ವಿಶಿಷ್ಟಾದೇವಿಯು ಈತನನ್ನು ಹಡೆದಳು– ಎಂದು ಇದೆಯಂತೆ. ಹೀಗೆ ಹೇಳುವದಕ್ಕೆ ವಂಕಟರಾಮನ್ನರಿಗೆ ಆತ್ಮಬೋಧರ **ಗುರುರತ್ನಮಾಲಿಕೆಯೆ** ವ್ಯಾಖ್ಯಾನವೇ ಆಧಾರ. ರತ್ನಮಾಲಿಕೆಯಲ್ಲಿ ಈ ಶ್ಲೋಕಗಳಿವೆ :

ನಿಜತಾಶವೃತೇಃ ಪರಂ ಪ್ರಕಾಶೇ
ಗಜಗರ್ಭೇ ತ್ರಿಶರದ್ವಿಪಚ್ಯ ಕೋಶೇ ।
ಗಮಯನ್ತಮಿವೋಲ್ಬವಾಸಶೇಷಂ
ಗಣಯೇ ವಿಶ್ವಜಿತಃ ಸುತಂ ವಿಶೇಷಾತ್ ॥೩೧॥

ಪರಿವಾದಭಯಾತ್ಪ್ರಸೂವಿಸೃಷ್ಟಂ
ವಿಪಿನೇ ವ್ಯಾಘ್ರವಧೂಭಿರೇವ ಪುಷ್ಟಮ್ ।
ನವಶಬ್ದರವಾದಿಮಾಚ್ಚ ಧೃಷ್ಟಂ
ನಮ ಮಾಧ್ಯಂದಿನಿನೈವ ಬಾಲ್ಯಶಿಷ್ಟಮ್ ॥೩೨॥

ಪರಮಭ್ರತನೋರ್ಗಿರೈವ ಶಮ್ಭೋ-
ರ್ವರವಿದ್ಯಾಘನವಿಷ್ಟರೋಪಲಮ್ಭೇ ।
ಅಧಿಕಾಞ್ಚಿಪುರೀಮಠಂ ಶುಭಂ ಭೋ
ಸ್ಮೃಧಿಕಶ್ಚಿತ್ತ ತನೋತು ತೇ ವಿದಮ್ಭಃ ॥೩೩॥

(ಮೊದಲನೆಯ ಶ್ಲೋಕದಲ್ಲಿ, ವಿಶ್ವಜಿತ್ತಿನ ಮಕ್ಕಳು ಗರ್ಭವಾಸವಿಶೇಷವನ್ನು ಮುಗಿಸಿಬಿಡಬೇಕೆಂತಲೋ ಎಂಬಂತೆ ಮೂರು ವರ್ಷ ಗಜಗರ್ಭವಾಸವನ್ನು ಮಾಡಿದರೆಂದು ಹೇಳಿದೆ. ಎರಡನೆಯದರಲ್ಲಿ, ಹೆಣ್ಣುಹುಲಿಗಳು ಆವರನ್ನು ಸಾಕಿದ

ವೆಂದಿದೆ ; ವ್ಯಾಸಪ್ರಸಾದೇ ಶಾಸ್ತ್ರಾಭ್ಯಾಸವನ್ನು ಮುಗಿಸಿದರೆಂದಿದೆ. ಮೂರೆ ನೆಯವರಲ್ಲಿ ಶಿವನ ಆಕಾಶವಾಣಿಯಂತೆ ಕಾಂಚೀಪುರಿಯ ವಿದ್ಯಾಧಿನಪೀಠಸ್ಥರಾಪ ರೆಂದಿದೆ. ಆವರು ಮೂವರಿಗಿಂತಲೂ ಅಧಿಕರು, ಎಂದರೆ ಶ್ರೀಶಂಕರಭಗವತ್ಪಾದ, ಶ್ರೀನುಜ್ಜ್ವಲಶಂಕರ, ಮೂಕಶಂಕರ–ಇವರಿಗಿಂತ ಹೆಚ್ಚಿನವರು ಎಂಬರ್ಥವನ್ನು ಆತ್ಮಬೋಧರು ತೆಗೆದಿರುತ್ತಾರೆ.) ಈ ಕಥೆಯನ್ನೆಲ್ಲ ಎಷ್ಟರಮಟ್ಟಿಗೆ ನಂಬ ಬಹುದೆಂಬುವನ್ನು ತತ್ತ್ವಶೋಧಕರು ನಿರ್ಣಯಿಸಬೇಕಾದದ್ದು ಅತ್ಯವಶ್ಯ. ನನ್ನ ಅಭಿಪ್ರಾಯವಂತೆ ಆದ್ಯಶಂಕರರ ಕಾಲವು ಕ್ರಿ.ಪೂ. ಆಥವಾ ಕ್ರಿ.ಶ. ಒಂದ ನೆಯ ಶತಮಾನವೆಂಬುವು ಸೂತ್ರಭಾಷ್ಯದ ಆಂತರಂಗಪರೀಕ್ಷೆಯಿಂದ ಹೊರಡುವ ದೆಂಬ ಸಿದ್ಧಾಂತಕ್ಕೆ ಇದು ವಿರುದ್ಧವಾಗುವದೆಂಬುವನ್ನು ಹೇಳಬೇಕಾದದ್ದೇ ಇಲ್ಲ.

ಇದುವರೆಗೆ ತೆಲುಗಿನ ಪುಸ್ತಕವಲ್ಲಿ ಆಚ್ಚಾಗಿರುವ (ಆ. ಶಂ. ಪು. ೮–೯) ಶ್ಲೋಕಗಳು ಆನಂದಗಿರೀಯವೇ ಎಂದಿಟ್ಟುಕೊಂಡು ವಿಮರ್ಶೆಮಾಡಿದ್ದಾಗಿದೆ. ಆದರೆ ಈ ಭಾಗವು ಆನಂದಗಿರಿಯ ಪ್ರಾಚೀನಕೋಶಗಳಲ್ಲಿಲ್ಲವೆಂದೂ ಆ ಹಸ್ತ ಲಿಖಿತಪ್ರತಿಗಳಲ್ಲಿ ಆಚಾರ್ಯರು ಸ್ವಾಭಾವಿಕರೀತಿಯಿಂದಲೇ ಜನಿಸಿದರೆಂದೇ ಇದೆಯೆಂದೂ **ಶ್ರೀಶಂಕರಪೀಠತತ್ತ್ವದರ್ಶನ** ಎಂಬ ಸಂಸ್ಕೃತಪುಸ್ತಿಕೆಯ ಪರಿಶಿಷ್ಟದಲ್ಲಿರುವ ಇಂಗ್ಲಿಷು ಲೇಖನದಲ್ಲಿ ಮದರಾಸಿನಲ್ಲಿರುವ ರಿಟೈರ್ಡ್ ಡೆಪ್ಯುಟಿ ಕಲೆಕ್ಟರ್ ಕೆ. ಕುಪ್ಪಸ್ವಾಮಯ್ಯನವರು ತಿಳಿಸಿರುತ್ತಾರೆ. ಈಗ ಆಚ್ಚಿನಲ್ಲಿ ಕಾಣುತ್ತಿರುವ ಪಾಠವು ಆದ್ವೈತದ್ವೇಷಿಗಳ, ಅಥವಾ ಕಾಮಕೋಟಿಪೀಠವಿದ್ವೇಷಿಗಳ, ಕೈವಾಡದಿಂದ ಆಗಿರಬೇಕೆಂದು ಕೆಲವರ ನಂಬಿಕೆಯಿದೆ ಎಂದು ಆವರ ಹೇಳಿಕೆ ; ಆ 'ಪ್ರಾಚೀನಪಾಠ'ವನ್ನು ಟಿನೆಯ ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ. ಅದು ನಿಜವಾದರೆ ಶಂಕರಜನ್ಮಸ್ಥಲವು ಕಾಲಟಿ ಎಂಬುದು ಸರ್ವಸಂಮತವೆಂದಾಗುತ್ತದೆ ; ಆದರೆ ದೌರ್ಭಾಗ್ಯದಿಂದ ಅದೂ ಸಂಶಯಾಸ್ಪದವಾಗಿಯೇ ಇದೆ.

ಕೂಷ್ಮಾಂಡಶಂಕರವಿಜಯ

೩೫. **ಕೂಷ್ಮಾಂಡಶಂಕರವಿಜಯ**ವೆಂಬ ಪೆಸರಿನ ಒಂದು ಗ್ರಂಥವುಂಟು. ಅದರ ಭಾಗವನ್ನು ಬೆಳ್ಳಾವೆ ಸೋಮನಾಥಯ್ಯನವರು ತಮ್ಮ **ಶಂಕರಚರಿತ್ರಕಾಲವಿಚಾರ** ಎಂಬ ಗ್ರಂಥದ (ಪು. ೨೧೧) ಒಂದನೆಯ ಅನುಬಂಧವಾಗಿ ಉದಾಹರಿಸಿರುತ್ತಾರೆ. ಅದರಲ್ಲಿರುವದರ ಸಾರವೇನೆಂದರೆ : **ಕೇರಳ**ವೆಂಬ ದೇಶದಲ್ಲಿ ಇಳಾ, **ಮುರುದ್ವೃಧಾ**, **ಚೂರ್ಣಾ** ಎಂಬ ನದಿಗಳು ಹರಿಯುತ್ತಿವೆ. ಚೂರ್ಣಾನದಿಯ ದಡವಲ್ಲಿ **ಪದ್ಮನಾಭನ** (!) ಮಂದಿರವಿದೆ. ಅಲ್ಲಿ **ಕಾಲಟಿ** ಎಂಬ ಮಹಾಕ್ಷೇತ್ರವಿದೆ. **ಈಶ್ವರ**ನು ಒಮ್ಮೆ ಭಿಕ್ಷುರೂಪದಿಂದ ಬಂದಾಗ ಆ ಗ್ರಾಮದ ಒಬ್ಬ ಭಕ್ತಿಪರಾಯಣಳಾದ ವಿಧವೆಗೆ ಒಂದು ಕುಂಬಳಕಾಯಿಯ

ಬೀಜವನ್ನು ಕೊಟ್ಟು ಇದನ್ನು ಕಂಬದ ಬುಡದಲ್ಲಿರುವ ಬಿಲದಲ್ಲಿ ಹಾಕು, ಅಲ್ಲಿ ಬಳ್ಳಿ ಬೆಳೆದು ಹಣ್ಣು ಬಿಟ್ಟಮೇಲೆ ಹಣ್ಣು ತಾನೇ ತೊಟ್ಟು ಕಳಚಿಕೊಳ್ಳುವದು. ನೀನೇನೂ ಅದನ್ನು ಕುಯ್ಯಬೇಡ' ಎಂದು ಹೇಳಿ ಅಂತರ್ಧಾನನಾದನು. ಆದರಂತೆ ಬಳ್ಳಿಯು ಹಬ್ಬಿ ಬಿಟ್ಟ ಒಂದು ಹಣ್ಣು ಕಂಬದಮೇಲಿನಿಂದ ಬಿದ್ದಿತು. ಅದರಲ್ಲಿ ಒಂದು ಮಗುವಿತ್ತು. ಅದನ್ನು ತಂದು ನಡೆದ ವೃತ್ತಾಂತವನ್ನೆಲ್ಲ ಜನರಿಗೆ ಹೇಳಲು ಅವರು ಅವಳನ್ನು ಗದರಿಸಿ ಹೊರಟು ಹೋದರು. ಆ ಬಳಿಕ ಅನಳು ಸಾಕಿದ ಮಗುವಿಗೆ ಬೃಹಸ್ಪತಿಯು ವೇದಶಾಸ್ತ್ರಗಳನ್ನು ಹೇಳಿಕೊಟ್ಟನು. ಬಾಲಶಂಕರನು ಕರ್ಮಸಂನ್ಯಾಸವನ್ನು ಮಾಡಿ ಗುರುಸನ್ನಿಧಿಗೆ ಹೋದನು. ಷಣ್ಮತಸ್ಥಾಪನವನ್ನು ಮಾಡಿದಬಳಿಕ ವೃಷಾದ್ರೀಶನ (!) ಬಳಿಗೆ ಹೋಗಿ ಅತನ ಸ್ತೋತ್ರವನ್ನು ಮಾಡುತ್ತಿದ್ದು ಶಿವಲೋಕಕ್ಕೆ ತೆರಳಿದನು !

ಇದು ಕಟ್ಟುಕಥೆಯೆಂದು ಹೇಳಬೇಕಾದದ್ದೇ ಇಲ್ಲವಷ್ಟೆ ? ಇದಕ್ಕೆ ಶ್ಲೋಕಗಳು ಮತ್ತೆಮತ್ತೆ ಸೇರಿ ಅನೇಕ ಅವತಾರಗಳಾಗಿವೆ ಎಂದು ಸೋಮನಾಥಯ್ಯನವರು ತಿಳಿಸಿರುತ್ತಾರೆ. ನಾವು ಗ್ರಂಥವನ್ನು ನೋಡಿಲ್ಲವಾದರೂ ಕುತೂಹಲಿಗಳಾದ ವಾಚಕರ ವಿನೋದಾರ್ಥವಾಗಿ ಒನೆಯ ಪರಿಶಿಷ್ಟದಲ್ಲಿ ನನುಗೆ ದೊರಕಿರುವಷ್ಟು ಶ್ಲೋಕಗಳನ್ನೇ ಹಾಕಿರುತ್ತೇವೆ. ಗ್ರಂಥಕರ್ತನು ಅನಂತಾನಂದಗಿರಿಗಿಂತಲೂ ಅದ್ಭುತಕಥೆಯನ್ನು ಕಟ್ಟಬೇಕೆಂಬ ಆಶೆಯಿಂದ ಶಂಕರರು ಅಯೋನಿಜರೆಂದು ತೋರಿಸುವದಕ್ಕಾಗಿ ಕುಂಬಳಕಾಯಿಯ ಗರ್ಭದಿಂದ ಆಚಾರ್ಯರಿಗೆ ಅವತಾರವನ್ನು ಮಾಡಿಸಿರುತ್ತಾನೆ ! ಆತನಿಗೆ ಚೂರ್ಣಾ (ಪೂರ್ಣಾ ? ನದಿಯ ದಡದಲ್ಲಿ ಪದ್ಮನಾಭದೇವಾಲಯವಿದೆ ಎನ್ನುವಷ್ಟು ಭೂಗೋಳದ ಜ್ಞಾನವಿದೆ ! ಹೇಗೇ ಆಗಲಿ, ಶಂಕರರ ಜನ್ಮಸ್ಥಾನವು ಕಾಲಟಿಯೆಂಬುದು ಅವನ ಕಿವಿಗೂ ಬಿದ್ದಿತ್ತು.

ಕೇರಳದ ಐತಿಹ್ಯವೂ ಮಧ್ವವಿಜಯಾದಿಗ್ರಂಥಗಳೂ

೨೬. ಕೇರಳದಲ್ಲಿ ಒಂದು ಐತಿಹ್ಯವಿದೆ. ಕಾಲಡಿಯಲ್ಲಿ ಒಬ್ಬ ವಿಧವೆಯು ತನ್ನ ಜೊತೆಯ ಹುಡುಗಿಯರೊಡನೆ ಶಿವಾಲಯಕ್ಕೆ ಹೋಗಿರುವಲ್ಲಿ ಅವರಲ್ಲಿ ಕೆಲವರು ಪುತ್ರಾರ್ಥಿಗಳಾಗಿ ಶಿವನನ್ನು ಪ್ರಾರ್ಥಿಸಿದರಂತೆ. ಈ ಬಾಲವಿಧವೆಯೂ ಹಾಗೆಯೇ ಪ್ರಾರ್ಥಿಸಿಕೊಂಡದ್ದರ ಫಲವಾಗಿ ಗರ್ಭಿಣಿಯಾಗಿ ಶಂಕರನನ್ನು ಹಡೆದಳಂತೆ. (NKS, p 14) ಈ ಕಥೆಯೂ ಕೂಷ್ಮಾಂಡವಿಜಯವೂ ಮೊದಲೇ ಹುಟ್ಟಿದ್ದು ಅವುಗಳ ಆಧಾರವನ್ನಿಟ್ಟುಕೊಂಡು ಆನಂತಾನಂದಗಿರಿಯ ಶಂಕರವಿಜಯದ ಕಥೆ ಹುಟ್ಟಿತೋ, ಅಥವಾ ಅದೇ ಹಳೆಯದಾಗಿದ್ದು ಈ ಕಥೆಗಾರರು ಅದಕ್ಕೆ ಉಪ್ಪುಕಾರವನ್ನು ಹಾಕಿ ಹೀಗೆ ಹೊಸಕಲ್ಪನೆಯನ್ನು ಮಾಡಿದರೋ ಹೇಳುವದಕ್ಕೆ ಬರುವಂತಿಲ್ಲ.

ಇದನ್ನು ನೆಪಮಾಡಿಕೊಂಡು ತ್ರಿವಿಕ್ರಮಪಂಡಿತನೆಂಬ ಮಧ್ವಾಚಾರ್ಯರ ಶಿಷ್ಯನೊಬ್ಬನ ಮಗನಾದ **ನಾರಾಯಣಪಂಡಿತನು ಮಧ್ವವಿಜಯ**ವು, **ಮಣಿ ಮಂಜರಿ**–ಎಂಬೆರಡು ಗ್ರಂಥಗಳಲ್ಲಿ ಆಚಾರ್ಯರ ವಿಷಯದ ಅಪಪ್ರಚಾರವನ್ನು ಪ್ರಯತ್ನಪೂರ್ವಕವಾಗಿ ಮಾಡಿರುತ್ತಾನೆ. ಆತನ ಕೆಲವು ವಾಕ್ಯಗಳನ್ನು ಇನೆಯ ಪರಿಶಿಷ್ಟದಲ್ಲಿ ಕಾಣಬಹುದು. ಪ್ರಕೃತಕ್ಕೆ **ಮಧ್ವವಿಜಯ**ದಲ್ಲಿರುವ ಒಂದು ಶ್ಲೋಕದಲ್ಲಿ ಅವನು ಬರೆದಿರುವದನ್ನು ವಾಚಕರ ಲಕ್ಷ್ಯಕ್ಕೆ ತರಬೇಕಾಗಿದೆ :

ಯೋ ಭೂರಿಸೈತೋ ಮಣಿಮಾನ್ ಮೃತಃ ಪ್ರಾಗ್ ।
ಪಾಗ್ನೀ ಬುಭೂಷು. ಪರಿತೋಷಿತೇಶಃ ।

ಸ ಸಜ್ಜರಾಖ್ಯೋಽಜಪ್ಪ್ರತಲೇಷು ಜಜ್ಞೇ !
ಸ್ಪರ್ಧಾ ಪರೇಷ್ಯಾಸುರಿಹಾಸುರೇನಾ೦ಽಶಃ ॥

'ಹಿಂದೆ ಭೀಮನಿಂದ ಹತನಾಗಿ ಯಾವ **ಮಣಿಮಂತ**ನೆಂಬ ದೈತ್ಯನು ಸತ್ತನೋ, ಅವನು ವಾಗ್ನಿಯಾಗಬೇಕೆಂಬ ಆಶೆಯಿಂದ ಈಶ್ವರನನ್ನು ಸಂತೋಷಗೊಳಿಸಿ **ಕಾಲಡಿ**ಯಲ್ಲಿ **ಸಂಕರ**ನೆಂಬ ಹೆಸರಿನಿಂದ ಸ್ಪರ್ಧೆ-ಯಿಂದ ಹುಟ್ಟಿದನು. ಇತರ ದೈತ್ಯಶ್ರೇಷ್ಠರೂ ಇಲ್ಲಿ ಹುಟ್ಟಿದರು.' ಶಂಕರ ಎಂಬ ಹೆಸರನ್ನು 'ಸಂಕರ' ಎಂದು ಬರೆದಿರುವದು ವಿಧವಾಪುತ್ರತ್ವವನ್ನು ತಿಳಿಸುವದಕ್ಕೇ ಎಂಬುದು **ಮಣಿಮಂಜರಿ**ಯಲ್ಲಿಯೂ (೬–೬, ೭) ಸ್ಪಷ್ಟವಾಗಿದೆ.

ತಮೇವ ಸಮಯಂ ದೈತ್ಯೋ ಮಣಿಮಾನಪ್ಯಜಾಯತ ।
ಮನೋರಥೇನ ಮಹತಾ ಬ್ರಾಹ್ಮಣ್ಯಾಂ ಜಾರತಃ ಖಲಾತ್ ।

ಉತ್ಪನ್ನಃ ಸಜ್ಜರಾತ್ಮಾಯಂ ಸರ್ವಕರ್ಮಬಹಿಷ್ಕೃತಃ ।
ಇತ್ಯುಕ್ತಃ ಸ್ವಜನೈರ್ಮಾತಾ ಸಜ್ಜರೇತ್ಯಾಜುಹಾವ ತಮ್ ॥೭॥

ಅದೇ ಕಾಲದಲ್ಲಿ ಮಣಿಮಂತನೆಂಬ ದೈತ್ಯನೂ ಬ್ರಾಹ್ಮಣಿಯಲ್ಲಿ ದುಷ್ಟನಾದ ಜಾರನಿಂದ ಹುಟ್ಟಿದನು. ಸಂಕರಾತ್ಮನಾಗಿ ಹುಟ್ಟಿದ ಇವನು ಸರ್ವಕರ್ಮ ಬಹಿಷ್ಕೃತನೆಂದು ನಂಟರು ಹೇಳಿದ್ದರಿಂದ ತಾಯೀ ಅವನಿಗೆ 'ಸಂಕರ' ಎಂದೇ ಹೆಸರಿಟ್ಟಳು–ಎಂದು ಶ್ಲೋಕದ ಅರ್ಥ.

ಇಲ್ಲಿ ತಾಯಿ ಮಗುವಿಗೆ ಸಂಕರನೆಂದು ಹೆಸರನ್ನಿಟ್ಟದ್ದಕ್ಕೆ ಗ್ರಂಥಕರ್ತನು ಹೇಳಿದ ಕಾರಣ ವಿಚಿತ್ರವಾಗಿದೆ. ತಾನು ಹಾದರಗಿತ್ತಿ ಎಂಬುದನ್ನು ಪ್ರತಿಕ್ಷಣವೂ ನೆನಪಿಗೆ ತರುವಂತೆ ಯಾವ ತಾಯಿಯಾದರೂ ಮಗನಿಗೆ ಇಂಥ ಹೆಸರನ್ನಿಟ್ಟುಕೊಂಡಾಳೆ ?–ಎಂಬುದನ್ನು ಇವನು ಯೋಚಿಸಲಿಲ್ಲ ! ಇದಂತಿರಲಿ. ಆಚಾರ್ಯರ ಹೆಸರು 'ಶಂಕರ', ಅವರು ಹುಟ್ಟಿದ ಊರು "ಕಾಲಡಿ" (ಅಜ್ಞಾತಲೇಷು

ಎಂಬುದಕ್ಕೆ ಇದೂ ಒಂದು ಪ್ರಮಾಣವಾಯಿತು. ಸಂಕರರ ತಾಯಿ 'ಪಜುರ ಪನ್ನೈ ಇಲ್ಲವರ್' ಎಂಬ ನಂಬೂದಿರಿ ಬ್ರಾಹ್ಮಣಕುಟುಂಬದವಳೆಂದೂ ಆ ಕುಲದವರೆಂದು ಹೇಳಿಕೊಳ್ಳುವವರು ಈಗಲೂ ತಿರುಚೂರಿನ ಹತ್ತಿರ ವಾಸವಾಗಿರುತ್ತಾರೆಂದೂ ಕೇರಳಪ್ರಾಂತದವರೆಲ್ಲ ಒಪ್ಪಿರುತ್ತಾರೆಂದು **ಬಲದೇವ ಉಪಾಧ್ಯಾಯರು** (ಬಲ.ಶಂ.ಪೂ.೪೦) ಹೇಳಿರುತ್ತಾರೆ. ಶಿವಗುರು 'ಕೈಪಿಲ್ಲಿ ಇಲ್ಲವರ್'ಗೆ ಸೇರಿದ ನಂಬೂದಿರಿ ಬ್ರಾಹ್ಮಣನು, ಆರ್ಯಾಂಬೆ 'ವೇಲಾಪಲೂರ್' ಅಥವಾ 'ಪಾಲೂಪನ್ನೈ ಇಲ್ಲವರ್'ಗೆ ಸೇರಿದಾಕೆ–ಎಂದು ಕೆ.ಆರ್. ವೆಂಕಟರಾಮನ್ನಯ್ಯರವರು (KRVTTWq.9) ಬರೆದಿದ್ದಾರೆ. ಆದರೆ ಈ ಇಬ್ಬರೂ ತಮ್ಮ ಮತಕ್ಕೆ ಆಧಾರವನ್ನೇನೂ ಬರೆದಿಲ್ಲ. ಈ ಹೇಳಿದ ಕುಟುಂಬದವರು ಕೇರಳದವರಾದ್ದರಿಂದ ಕೇರಳದ ಕಿಂವದಂತಿಯಿಂದಲೂ ಶಂಕರಾಚಾರ್ಯರು ಕೇರಳೀಯರೇ ಎಂದು ನಿಶ್ಚಯವಾಗುತ್ತದೆ.

ಬದರಿಯ ಸಾಕ್ಷ್ಯ

೨೭. ಆಚಾರ್ಯರು ಕೇರಳದವರೇ ಎಂಬುದಕ್ಕೆ ಇನ್ನೊಂದು ಗಮನಕವಿದೆ. ಪದರಿಕಾಶ್ರಮದಲಿ ಸ್ಥಾಪಿತವಾಗಿರುವ **ಬದರೀನಾಥ** ಅಥವಾ **ಪಶುಪತಿನಾಥ** ದೇವಾಲಯಗಳ ಪ್ರಧಾನಪೂಜಾರಿಗಳು ಬಹುಕಾಲದಿಂದ ನಂಬೂದಿರಿ ಬ್ರಾಹ್ಮಣರೇ ಆಗುತ್ತಾ ಬಂದಿರುತ್ತಾರೆ. ಅಲ್ಲಿರುವ ಮಂದಿರವನ್ನು ಆಚಾರ್ಯರೇ ಪ್ರತಿಷ್ಠೆಮಾಡಿಸಿದರೆಂದು ಐತಿಹ್ಯವಿದೆ. ಇದು ನಿಜವಾದರೆ ಅಲ್ಲಿಯ ಪೂಜೆಯು ವಿಧಿವತ್ತಾಗಿ ಆಗಬೇಕೆಂಬ ಉದ್ದೇಶದಿಂದ ಆಚಾರ್ಯರು ತಮ್ಮ ದೇಶದವರೇ ಆದ ವೈದಿಕರನ್ನು ಆಗ್ಗೆ ಕರೆಯಿಸಿಕೊಂಡಿರಬೇಕೆಂದು ನಂಬಬಹುದಾಗುತ್ತದೆ. ಈ ವಿಷಯವನ್ನು ಆಚಾರ್ಯರು ಸ್ಥಾಪಿಸಿದ ಮಠಗಳ ವಿಷಯವನ್ನು ಪ್ರಸ್ತಾಪಿಸುವಾಗ ಮತ್ತೊಮ್ಮೆ.

ಕೇರಳೀಯರ ವಿಲಕ್ಷಣಾಚಾರ

೨೮. ಕೇರಳದೇಶದಲ್ಲಿ ಮೂಲನಿವಾಸಿಗಳೆಲ್ಲ ಬ್ರಾಹ್ಮಣರು. ಆವರು ಪಂಚದ್ರಾವಿಡರೊಳಗೇ ಸೇರಿದವರಾದರೂ ಆವರ ಆಚಾರಗಳು ಕೆಲವು ವಿಷಯದ್ರಾವಿಡರಿಗಿಂತ ಅತಿವಿಲಕ್ಷಣವಾಗಿವೆ. ಆ ಜನರು ಬಾಲ್ಯದಲ್ಲಿ ಮದುವೆಮಾಡಿಕೊಳ್ಳುವದಿಲ್ಲ. ಸ್ತ್ರೀಯರಿಗೆ ಘೋಷಾಪದ್ಧತಿಯನ್ನಿಟ್ಟುಕೊಂಡಿದಾರೆ. ಸ್ತ್ರೀಯರು ಮಿಕ್ಕ ದ್ರಾವಿಡಬ್ರಾಹ್ಮಣರು ಆಡಿಗೆಮಾಡಿದ ಅನ್ನವನ್ನು ಉಣ್ಣುವದಿಲ್ಲ. ಬಲುಮಟ್ಟಿಗೆ ಶುದ್ಧರು, ಪತಿವ್ರತೆಯರು. ಆವರು ಚಿನ್ನಬೆಳ್ಳಿಯ ಒಡವೆಗಳನ್ನು ಕೈಗೆ ಹಾಕಿಕೊಳ್ಳುವದಿಲ್ಲ, ಕೊರಳಿಗೆ ಮಾತ್ರ ಹಾಕಿಕೊಳ್ಳುತ್ತಾರೆ. ಗಂಡಸರು ಮುಂದಲೆಯ ಮೇಲುಗಡೆಗೆ ಜುಟ್ಟನ್ನು ಬಿಡುತ್ತಾರೆ. ಬಲುಮಟ್ಟಿಗೆ

ಎಲ್ಲರೂ ವೇದಾಧ್ಯಯನಸಂಪನ್ನರು, ಆಚಾರಸಂಪನ್ನರು, ಕರ್ಮನಿಷ್ಠರು. ಅಲ್ಲಿ ಹಿರಿಯನೊಬ್ಬನಿಗೆ ನಾಶ್ಯ ನುಸುನೆ, ಮಿಕ್ಕವರು ನಾಯರ ಸ್ತ್ರೀಯರ ಕೂಟವನ್ನು ಮಾಡಿಕೊಳ್ಳುವರು. ಇವರು ತಮ್ಮತಮ್ಮ ತೋಟಗೆಳ ನಡುವೆ ಇಲ್ಲವಮ್ ಎಂಬ ಮನೆಗಳಲ್ಲಿ ವಾಸಮಾಡುತ್ತಾರೆ; ಇಲ್ಲನಿಗೊಂದು ದೇವಾಲಯವಿರುತ್ತದೆ. ಹಿಂದಿನ ಕಾಲದಲ್ಲಿ ಹೆಣಗಳನ್ನು ಕತ್ತರಿಸಿ ಸುಡುತ್ತಿದ್ದರಂತೆ; ಈಗ ಹೆಣಕ್ಕೆ ಕತ್ತಿಯಿಂದ ಅಲ್ಲಲ್ಲಿ ನುಚ್ಚೆಸಿಯೇ ಅದನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಮನೆಯ ಸುತ್ತಲೂ ಇರುವ ವಿಸ್ತಾರವಾದ ಒಂದು ಭಾಗವೇ ರುದ್ರಭೂಮಿ.

ಮೇಲಿ ನಾವು ಕೊಟ್ಟಿರುವದು ಸೋಮನಾಥಯ್ಯನವರ ಗ್ರಂಥದಿಂದ (ಸೋ. ಶಂ. ಪು. ೩೫-೩೬) ಸಂಗ್ರಹಿಸಿದ್ದು. ಕೇರಳದಲ್ಲಿರುವ ವಿವಿಧನಂಬಿಕೆಗಳ ಮತ್ತು ಆಚಾರಗಳ ವಿಷಯವಾಗಿ ಕರ್ಣಪರಂಪರೆಯಿಂದ ಹಬ್ಬಿರುವ ಸುದ್ದಿಗಳಲ್ಲಿ ಒಂದನ್ನು ತಿಳಿಸುವ ಅಖಿಲಾಷೆಯಿಂದ ಅಧ್ಯಾತ್ಮಪ್ರಕಾಶಪತ್ರಿಕೆಯ ಜಯಸಂವತ್ಸರದ (೨೩ನೆಯ ಸಂಪುಟದ) ವೈಶಾಖಸಂಚಿಕೆಗೆ **ಶ್ರೀಶಿವಪ್ರಕಾಶಾನಂದಪರಸ್ವತೀಸ್ವಾಮಿಗಳವರು** ಬರೆದಿದ್ದ ಎರಡು ಪತ್ರಗಳ ಸಂಗ್ರಹದ ಲೇಖನವೊಂದರ ಪ್ರತಿಲಿಪಿಯನ್ನು ವಾಚಕರ ಕುತೂಹಲಕ್ಕಾಗಿ ಈ ಕೆಳಗೆ ಕೊಟ್ಟಿರುತ್ತೇವೆ.

ಅತ್ತಂಗಲ್

[ಕನ್ಯಾಕುಮಾರಿ, ತ್ರಿವೇಂದ್ರ (ತಿರುವಿನಂತಪುರ), ಅನಂತಪದ್ಮನಾಭ-ಇವರ ದರ್ಶನವನ್ನು ತೆಗೆದುಕೊಂಡು ಕಾಲಡಿಯ ದಾರಿಯಲ್ಲಿರುವೆ. ಈ ಮಲಯಾಳಿಸೀಮೆಯಲ್ಲಿ ಬ್ರಾಹ್ಮಣ ಸಂನ್ಯಾಸಿಗಳ ವಿಷಯ ಏನೂ ತಿಳಿಯದು. ಸಂನ್ಯಾಸಿಗಳು 'ಅತಿವರ್ಣಾಶ್ರಮಿ' (ಸ್ವೇಚ್ಛಾಚಾರಿ) ಎಂದು ನಂಬಿಕೆ. ಮಲೆಯಾಳಿ ಬ್ರಾಹ್ಮಣೇತರಸಂನ್ಯಾಸಿಗಳೇ ಬಹಳ. ಅವರಲ್ಲಿ ಮಂತ್ರ, ಯಂತ್ರ, ಔಷಧಿ-ಇವು ಹೇರಳವಾಗಿವೆ. ಇದರಿಂದಾಗಿ ಜನರು ಕಾಷಾಯವಸ್ತ್ರಕ್ಕೆ ತುಂಬ ಅಂಜುತ್ತಾರೆ. ಶೃಂಗೇರಿ ಅಥವಾ ಕಾಮಕೋಟಿಪೀಠಗಳ ಪ್ರಭಾವ ಇಲ್ಲಿ ಇಲ್ಲ. ಕೆಲನರು ವೈಷ್ಣವ ನಾಶ್ಯ ಮಠಗಳಿವೆಯೆಂಬುದನ್ನು ಅರಿತಿದ್ದಾರೆ. ಲೋಕಗುರುಗಳಾದ ಆದ್ಯಶಂಕರಾಚಾರ್ಯರು ಇದ್ದರೆಂಬುದು ಎಲ್ಲಿಯೋ ಕೆಲವರಿಗೆ ಮಾತ್ರ ಗೊತ್ತಿದೆ. ತ್ರಿವೇಂದ್ರಂಗೆ ೧೬೦ ಮೈಲು ಕಾಲಡಿ, ಒಳದಾರಿ ೧೫೦ ಮೈಲು. ಶಂಕರಾಚಾರ್ಯರು ಇಲ್ಲಿಯವರೇ ಇದ್ದು ಇಲ್ಲಿಯ ಬ್ರಾಹ್ಮಣರಲ್ಲಿಯೂ ಅವರ ಹೆಸರು ಪ್ರಸಿದ್ಧವಿಲ್ಲದಿರುವದು ತುಂಬ ಆಶ್ಚರ್ಯಕರ. ಕೆಲ **ನಾಯರ್ ನಾಡರ್** ಜನರು 'ಪರಕಾಯಪ್ರವೇಶ', 'ಭಗಂದರರೋಗ' - ಇವನ್ನು ಆಚಾರ್ಯರಲ್ಲಿ ಆರೋಪಿಸಿ 'ಸರ್ವಂ ಖಲ್ವಿದಂ ಬ್ರಹ್ಮ', 'ಕರತಲಭಿಕ್ಷನ್ನಸ್ತರು

ತಲವಾಸಃ' ಈ ಮಟ್ಟಿದವರಿಗೆ ಆ ರೋಗವು ಬರಲು ಕಾರಣವೇನು?—ಎಂದು ಆಕ್ಷೇಪಿಸುತ್ತಾರೆ! ಈವರೆಗೂ ಒಬ್ಬ ಬ್ರಾಹ್ಮಣಯತಿಯೂ ಈ ಮಾರ್ಗವಾಗಿ ಬಂದಿಲ್ಲ. ಕಾರಣವೇನೆಂದರೆ ಪರ್ವತಗಳ ಸಾಲು, ಆಹಾರದ ಅನನುಕೂಲತೆ ಬಹಳ. ಶ್ರೀಶೃಂಗಗಿರಿಯ ಜಗದ್ಗುರುಗಳು ತ್ರಿವೇಂದ್ರಂಗೆ ಭೇಟಿಕೊಟ್ಟಿದ್ದರೆಂಬುದು ಅರಮನೆಯ ರಿಟೈರ್ಡ್ ಅಧಿಕಾರಿಗಳಿಗೆಮಟ್ಟಿಗೆ ಗೊತ್ತಿದೆ. ಇಲ್ಲಿಯ ಅನುಭವವನ್ನು ಬಿಡಿ ಸಂನ್ಯಾಸಿಗಳು ಬಂದು ನೋಡುವಹಾಗಿದೆ.

ಕಾಲಡಿ

ಕನ್ಯಾಕುಮಾರಿಯಿಂದ ವರ್ಕಲೆ, ಕ್ವೈಲೋನ್ (ಕೊಲ್ಲಂ Quilon ದ್ವಾರಾ ಕಾಲಡಿ 240 ಮೈಲುಗಳು. ಕನ್ಯಾಕುಮಾರಿಯಿಂದ ಕ್ವೈಲೋನ್ ವರೆಗೂ 113 ಮೈಲು ಪಶ್ಚಿಮಸಮುದ್ರತೀರಪ್ರದೇಶ. ವರ್ಕಲೆ[1], ಕ್ವೈಲೋನ್ ಸಮುದ್ರದ ಅಂಚಿನಲ್ಲಿಯೇ ಇದೆ. ಇದ್ದಕ್ಕೆ ಮುಂದೆ ಎರ್ನಾಕುಳಂ (ಕೊಚಿನ್ ಹಾರ್ಬರ್) 140 ಮೈಲುಗಳವರೆಗೂ ತೀರಪ್ರದೇಶದಲ್ಲಿಯೇ ರಾಜಮಾರ್ಗವುಂಟು. ಮಾರ್ಗದಲ್ಲಿ ಕ್ರೈಸ್ತ, ಮಾಪಿಳೆ ಜನಾಂಗ. ಬೆಟ್ಟಗಳು. ಸರೋವರ(?) ಹಿಂದಕ್ಕೆ ನುಗ್ಗಿರುವ ಜಲಭಾಗವು ನಾವೆ (ಜೋಟು)ಗಳ ಸಾಧನವಿಲ್ಲದೆ ಮುಂದು ವರಿಯಲಾಗುವದಿಲ್ಲವಾದ್ದರಿಂದ ಈ ದಾರಿಯನ್ನು ಬಿಟ್ಟು ಪೂರ್ವದಿಕ್ಕಿಗೆ ೭0 ಮೈಲು ಬಂದು ಭೂಮಾರ್ಗವಾಗಿ ಉತ್ತರಕ್ಕೆ 107 ಮೈಲು ಇರುವ ಕಾಲಡಿಗೆ ಬಂದದ್ದಾಯಿತು.

ಕಾಲಡಿ ಲ್ರಾವಂಕೋರ್ ಸಂಸ್ಥಾನದ ಉತ್ತರದ ಗಡಿಗೆ 16 ಮೈಲು ಇದೆ. ಕರ್ಣಾಟಕದವರು ಜೋಲಾರುಪೇಟೆ, ಈರೋಡ್, ಷೋರನೂರ್; ಷೋರನೂರಿನಿಂದ ಕಾಲಡಿರೋಡ್ (ಅಂಗಮಾಲಿ)— ಈ ಮಾರ್ಗವಾಗಿ ರೈಲಿನಲ್ಲಿ ಬರಬಹುದು. ಅಲ್ಲಿಂದ ದಕ್ಷಿಣಕ್ಕೆ ಐದು ಮೈಲುಗಳ ದೂರದಲ್ಲಿ ಕಾಲಡಿಯಿದೆ. ನಿಮ್ಮಲ್ಲಿಂದ ಚಾಮರಾಜನಗರ, ಕೊಯಮತ್ತೂರು— ಮಾರ್ಗವಾಗಿ ಬಸ್ಸಿನಿಂದಲೂ ಬರಬಹುದು.

ಕಾಲಡಿಕ್ಷೇತ್ರವು 'ತ್ರಾವನ್ಕೂರ್-ಕೊಚ್ಚಿ ಸಂಸ್ಥಾನದ ಕೋಟೆಯ ಡಿವಿಜನ್ನಿನ ಕುನ್ನತನಾಡು ತಾಲ್ಲೂಕಿನಲ್ಲಿದೆ' (ಸಂಸ್ಥಾನಗಳ ಕೂಡುವಿಕೆಯ ಮೊದಲು

1. ಇಲ್ಲಿ ಶ್ರೀಜನಾರ್ದನಸ್ವಾಮಿಯ ದೇವಸ್ಥಾನವಿದೆ. ವಸುಂಧರಾದೇವಿಯು ಸೌಭಾಗ್ಯದ ನೆಲೆವೀಡು. ಬೆಟ್ಟಕ್ಕೆ ಧುಮುಕುವ ಆದ್ಭುತಸಮುದ್ರದ ಸೊಬಗು. ಮೂವತ್ತು ಅಡಿಗಳ ಮೇಲುಮಟ್ಟದಲ್ಲಿ ರಂಗೂನ್‌ಮಾದರಿಯ ಭವ್ಯದೇವಾಲಯ' ದೇವಾಲಯದ ಮಧ್ಯರಂಗದಲ್ಲಿ ವಿಶಾಲವಾದ ಮನೋಹರವಾದ ಅಶ್ವತ್ಥವೃಕ್ಷವಿದೆ. ನಾಡಿನ ಸೊಬಗು ಕವಿ ವರ್ಣಿಸಬಲ್ಲ ಮಟ್ಟಕ್ಕೆ ಮಿಗಿದೆ.

ಕೋಟೆಯಂ ಜಿಲ್ಲ, ಕುನ್ನತ್ತನಾಡು ತಾಲ್ಲೂಕು). ಪೂರ್ಣಾನದಿಯು ಇಲ್ಲಿ ಪಶ್ಚಿಮವಾಹಿನಿ. ಭೂಭಾಗದ ಮಟ್ಟಕ್ಕೆ ಸುಮಾರು ೩೦–೩೫ ಅಡಿ ಕೆಳಭಾಗದಲ್ಲಿ ಪೂರ್ಣಾನದಿ ಹರಿಯುವ ಪ್ರದೇಶದಲ್ಲಿ ಭವ್ಯಸೋಪಾನಗಳನ್ನು ಕಟ್ಟಿ, ದಡದ ಅಂಚಿಗೆ ಇಸವಿ ಸನ್ 1860ರಿಂದ 1912ರವರೆಗೂ ಶ್ರೀಶೃಂಗಗಿರಿಜಗದ್ಗುರು ಪೀಠದಲ್ಲಿ ವಿರಾಜಮಾನವಾಗಿದ್ದ ಶ್ರೀಶ್ರೀಸಚ್ಚಿದಾನಂದಶಿವಾಭಿನವನೃಸಿಂಹ ಭಾರತೀಗುರುಸಾರ್ವಭೌಮರು ಶಂಕರಭಗವತ್ಪಾದರ ತಾಯಿಯ ವೃಂದಾವನ ವನ್ನೂ ಶ್ರೀಶಾರದಾಶ್ರೀಶಂಕರ ಆಲಯಗಳನ್ನೂ ನಿರ್ಮಿಸಿದರು.

ಆಲಯಗಳು ನಿರ್ಮಾಣವಾಗುವ ಮುನ್ನ ಇದೆಲ್ಲ ಕಾಡಾಗಿತ್ತು. ಶೋಧ ಕರು ಶಂಕರರ ಜನ್ಮಸ್ಥಲವನ್ನು ಕಂಡುಹಿಡಿಯುವದಕ್ಕೆ ಬಂದಾಗ ಇಲ್ಲಿ ಗಿಡ ಗೆಂಟೆಗಳ ನಡುವೆ ಒಂದು ಗಜ ಆಗಲ, ಎರಡು ಗಜ ಎತ್ತರದ ಚಿಕ್ಕ ಗುಡಿಯಲ್ಲಿ ಮಿನಿಮಿನಿ ನಿನುಗುವ ದೀಪವನ್ನು ಕಂಡು ವಿಚಾರಿಸಲು ಈ ಸ್ಥಲವೇ ಶಂಕರಾ ಚಾರ್ಯರ ಮನೆಯೆಂದೂ ಮನೆಯ ಆವರಣದ ಒಳಭಾಗದಲ್ಲಿ ಆವರ ತಾಯಿಯ ದಹನಸ್ಥಲವೆಂದೂ ಆಕೆಯ ಅಂತ್ಯಕ್ರಿಯೆಗಳಿಗೆ ಸಹಾಯಮಾಡಿದ ತಮ್ಮ ಪೂರ್ವಜರಿಗೆ ಸುಮಾರು ೫೦–೬೦ ಎಕರೆಯ ಆ ಪ್ರದೇಶವನ್ನು ದಾನವಾಗಿ ಕೊಟ್ಟು ಆಲ್ಲಿ ಪೂಜೆಮಾಡಿಕೊಂಡಿರಬೇಕೆಂದು ಹೇಳಿದರೆಂದೂ ಆಲ್ಲಿಯ ಕಾವಲು ಗಾರರೂ ಆರ್ಚಕನೂ ನುಡಿದರಂತೆ. ಸರ್ಕಾರದ ಸಹಾಯದಿಂದ ಪ್ರದೇಶವನ್ನು ಪಡೆದುಕೊಂಡು ಕಾವಲುಗಾರನಿಗೆ ಬೇರೆಯ ಭೂಮಿಯನ್ನೂ ಪರಿಹಾರದ್ರವ್ಯ ವನ್ನೂ ಕೊಡಿಸಿ ಬಳಿಕ ಆಲ್ಲಿ ಎರಡು ಬಂಗಲೆಗಳನ್ನೂ ೧೪ ಹೊಸಮಾದರಿಯ ಗೃಹಗಳನ್ನೂ ನಿರ್ಮಿಸಲಾಯಿತೆಂದೂ ತಿಳಿಯಬರುತ್ತದೆ.[1]

ಇಲ್ಲಿ ಶಂಕರರ ತಾಯಿಯ ದಹನದ ವಿಷಯದಲ್ಲಿ ಜನವಾರ್ತೆಯೇನೆಂದರೆ ಆಚಾರ್ಯರು ತಾಯಿಯ ದೇಹವನ್ನು ತುಂಡುತುಂಡಮಾಡಿ ಚಿತೆಯಲ್ಲಿ ಹಾಕಿದರಂತೆ. ಚಿತೆಯನ್ನು ಬಾಳೆಪಟ್ಟೆ, ತೆಂಗು, ಅಡಿಕೆಪಟ್ಟೆಗಳಿಂದಲೇ ಮಾಡಿ ತ್ತಂತೆ. ಈ ಪಟ್ಟೆಯನ್ನು ಒದಗಿಸಿದವರು ಸೀದಾಜಾತಿಯವರಂತೆ. ಇಂದಿಗೂ ನಂಬೂದ್ರಿ (ಮಲೆಯಾಳಿ) ಬ್ರಾಹ್ಮಣರಿಗೆ ಪ್ರತ್ಯೇಕ ದಹನಸ್ಥಳವಿಲ್ಲ. ತಮ್ಮ ಮನೆಯ ಹಿಂಭಾಗದಲ್ಲಿಯೋ ಮುಂಭಾಗದಲ್ಲಿಯೋ ಒಳ ಆವರಣದಲ್ಲಿ ಕೆಲ ವೊಂದು ಬಾಳೆಯಪಟ್ಟೆಗಳನ್ನು ಶಾಸ್ತ್ರವಾಗಿ ಹಾಕಿ ದಹನಕ್ರಿಯೆಯನ್ನಾಡುತ್ತಾರೆ. ಸೀದಾಜಾತಿಯವರು ಒಂದು ಬಾಳೆಪಟ್ಟೆ ಕೊಡುವವರೆಗೂ ಕಾದಿರಬೇಕಾಗುತ್ತದೆ.

---

1. ಕಾಲಡಿಯಿಂದ ಪಶ್ಚಿಮಕ್ಕೆ ೬ ಮೈಲು ದೂರದಲ್ಲಿ 'ಪೊನ್ನರ್ ತೋಡತ' ಎಂಬ ಊರು ಇದೆ. ಆ ಊರಲ್ಲಿ ಆಚಾರ್ಯರು ಭಿಕ್ಷೆಗೆ ಹೋದಾಗ ನೆಲ್ಲಿಕಾಯಿ ಹಾಕಿದ ಮನೆ ಯಿದೆ. ಕನಕಧಾರಾಸ್ತೋತ್ರಮಾಡಿದ್ದು ಇಲ್ಲಿಯೇ ಎನ್ನುತ್ತಾರೆ. ಇಂದಿಗೂ ಆಲ್ಲಿ ಎರಡು ಮನೆಗಳು ಶ್ರೀಮಂತತನದಲ್ಲಿವೆ. 'ಪೂರ್ಣತ್ತಿಲ್ಲಂ' ಎಂದು ಅವುಗಳ ಹೆಸರು.

ಆ ಜನರೇ ಬ್ರಾಹ್ಮಣರ ಪಿತೃಕರ್ಮಗಳಲ್ಲಿ ಪೌರೋಹಿತ್ಯವನ್ನುವಹಿಸಿ ತಿಲ,ದರ್ಭೆ, ಆಕ್ಷತೆ– ಇವನ್ನು ಕೊಡುತ್ತಾರೆ. ಅವರಿಲ್ಲದೆ ಪಿತೃಕರ್ಮಗಳು ನಡೆಯುವುದೇ ಇಲ್ಲ. ಸೀದಿಯನ್ ಜಾತಿಗೆ 'ಎಳೆಯದಿ', 'ನಂಬಿಯಾದಿ' ಜಾತಿಯಿಂದೂ ಹೆಸರಿದೆ. ಈಗಲೂ ಈ ಬ್ರಾಹ್ಮಣರು ಮೃತಕಳೇಬರಕ್ಕೆ ಕತ್ತಿಯಿಂದ ಆಲ್ಲಲ್ಲಿ ಸುಟ್ಟಿಸುತ್ತಾರೆ; ಪರಂಪರೆಯನ್ನು ಅನುಸರಿಸುವವರು ತುಂಡುಮಾಡುತ್ತಾರೆ; ಆಮೇಲೆ ಬಾಳೆಪಟ್ಟೆ ಸುತ್ತಿ ದಹನಕ್ಕೆ ಹಾಕುತ್ತಾರೆ.

ನಂಬೂದ್ರಿಯರಿಗೆ ಸುಂತ್ರವಿಲ್ಲ. ಬರಿಯ ಕೈತಿರುಗಿಸುವಿಕೆಯ ಹಾವ ಭಾವದ ತಂತ್ರ; ಕಣ್ಣು ಕಿವಿ ಮುಂತಾದ ದೇಹೇಂದ್ರಿಯಸ್ಥಾನಗಳನ್ನು ಮುಟ್ಟಿ ಕೊಳ್ಳುವರು, ಮೂರು ಆಚಮನವನಾಡುವರು; ಕೇಶವಾದಿನಾಮೋಚ್ಚಾರಣೆ ಯಿಲ್ಲ. ಅವರಲ್ಲಿ ಬೃಹಚ್ಚರಣ, ವಡಮ– ಎಂಬ ಎರಡು ಒಳಪಂಗಡಗಳಿವೆ; ವಡಮರಿಗೆ ಗೌರವ ಕಡಿಮೆ. ನಂಬೂದ್ರಿಗಳಲ್ಲಿ ತೀರ ಹಿರಿಯನು ಯಾವಾಗಲೂ ಓಲೆಯ ಛತ್ರಿಯನ್ನು ಹಿಡಿದುಕೊಂಡಿರುತ್ತಾನೆ; ದೇವಾಲಯಗಳಲ್ಲಿಯೂ ದೇವತಾದರ್ಶನವನಮನಕಾಲದಲ್ಲಿಯೂ ಅದರೊಡನೆಯೇ ಇರುತ್ತಾನೆ. ಈ ಜನರಿಗೆ ತ್ರಿಚೂರಿನಲ್ಲಿ ಗುರುಮಠವಿದೆ. ಮಠಾಧೀಶರಾದ ಸಂನ್ಯಾಸಿಗಳು ಇವರ ಕೈಯಿಂದ ಏನನ್ನೂ ತೆಗೆದುಕೊಳ್ಳುವದಿಲ್ಲ, ತಮ್ಮ ವಸ್ತ್ರಗಳನ್ನು ಇವರು ಮುಟ್ಟಗೊಡಿಸುವದಿಲ್ಲ. ಮಠಾಧೀಶರ ಉಪಚಾರಕ್ಕೆ ತಮಿಳುಜನರಿದ್ದಾರೆ. ತ್ರಿಚೂರಿನ ಮಠದಲ್ಲಿಯೇ ಶಂಕರರ ಪ್ರಥಮ ವಿದ್ಯಾಭ್ಯಾಸ ಜರುಗಿತಂತೆ

ಶ್ರೀಶಂಕರರು ಯಜುರ್ವೇದಿಗಳು. ಮನೆಯ ಹೆಸರು 'ಕೈಪಳ್ಳಿ ಇಲ್ಲಮ್' ಎಂದು (ಇಲ್ಲಂ ಎಂದರೆ ಮನೆ). ಇಲ್ಲಿ 'ಕಾಪಳ್ಳಿ ಇಲ್ಲಂ', 'ತಲೆಯಾತ್ತಂ ಪಳ್ಳಿಯಿಲ್ಲಂ' ಎಂಬ ಎರಡು ಮನೆಗಳಿವೆ. ಶ್ರೀಶಂಕರಾಚಾರ್ಯರ ತಾಯಿಯ ಅವಸಾನಕಾಲದಲ್ಲಿ ತಲೆಯಕಡೆ ಒಬ್ಬ, ಕಾಲುಕಡೆ ಒಬ್ಬ– ಹೀಗೆ ನಿಂತದ್ದರಿಂದ ಅವರ ಮನೆಗಳಿಗೆ ಈ ಹೆಸರುಗಳು ಬಂದಿವೆ ಎಂದು ಹೇಳುತ್ತಾರೆ.

ನಂಬೂದ್ರಿಗಳು ಶ್ರೀಭಗವತ್ಪಾದಾಚಾರ್ಯರ ಬಗ್ಗೆ ಪರಂಪರೆಯಿಂದ ಕರ್ಣಧಾರೆಯಾಗಿ ಬಂದ ವಾರ್ತೆಯನ್ನು ನಂಬಿ ಶ್ರೀ ಆಚಾರ್ಯರಿಗೆ ಈ ಕಾರಣಗಳಿಂದ ತಾವು ಎದುರಾಳಿಗಳಾಗಿರುತ್ತೇವೆಂದು ಹೇಳಿಕೊಳ್ಳುತ್ತಾರೆ: (೧) ಶಿವಗುರುವೆಂಬ ತಂದೆಯು ಕಾಲವಾಗಿ ಒಂಬತ್ತು ತಿಂಗಳಾದಮೇಲೆ ಶಂಕರರು ಜನಿಸಿದರು. (೨) ಕಲಿಯುಗದಲ್ಲಿ ಸಂನ್ಯಾಸವು ನಿಷಿದ್ಧವಾದರೂ ಸಂನ್ಯಾಸಿಗಳಾದರು. (೩) ಅವರು ಕರ್ಮಗಳನ್ನು ಬಿಟ್ಟಿದ್ದಲ್ಲದೆ ಕರ್ಮಕಾಂಡವನ್ನು ಹಳಿದು ಡೊಂಕಿಸಿದರು. (೪) ದೂರದಲ್ಲಿರುವ ಬೇರೆಬೇರೆಯ ಪ್ರಾಂತಗಳಿಗೆ ಹೋಗಿದ್ದರು; ಯಾರಯಾರಲ್ಲಿ ಏನೇನು ಆಹಾರವನ್ನು ಸೇವಿಸಿದರೊ! (೫) ಪರಮಹಂಸನು

ಕುಲಜಾತಿಗಳಿಲ್ಲದವನು, ವಿಧಿನಿಷೇಧಗಳಿಲ್ಲದವನು, ಕರ್ಮಬಾಹಿರನು. (೬) ಶಂಕರರು ಜ್ಯೇಷ್ಠ ಪುತ್ರನೊಬ್ಬನಿಗೇ ಪಿತೃವಿನ ಆಸ್ತಿ, ಇತರರು ಗೃಹತ್ಯಾಗವನ್ನು ಮಾಡಿ ಸಂನ್ಯಾಸಿಗಳಾಗಿರಬೇಕೆಂದು ನಿಯಮಿಸಿದರು. (೭) ಮಾತೃಕಳೇಬರವನ್ನು ತಾವೇ ತುಂಡುತುಂಡುಮಾಡಿ ದಹನಕ್ರಿಯೆಯನ್ನು ಜರುಗಿಸಿದರು.

ಈ ಕಾರಣಗಳಿಗೆಲ್ಲ ಯಾವ ಗ್ರಂಥಾಧಾರವೂ ಇಲ್ಲದಿದ್ದರೂ ಈ ಜನರು ಇಂಥ ಕಲ್ಪಿತಕಥೆಗಳನ್ನೇ ನಂಬಿಕೊಂಡಿರುತ್ತಾರೆ! ಇವರ ತಲೆಯಿಂದ ಈ ನಂಬಿಕೆಯನ್ನು ಓಡಿಸಿ ಅದರಲ್ಲಿ ಶಂಕರಾಚಾರ್ಯರ ನಿಜತತ್ತ್ವವನ್ನು ತುಂಬುವ ಮಹನೀಯರೋರ್ವರ ಅವತಾರವು ಅತ್ಯವಶ್ಯವಾಗಿದೆ. ಇಲ್ಲಿ ಮಲೆಯಾಳಿಭಾಷಾಭಿಜ್ಞರೇ ಬೇಕು. ಯಾವ ಮಹಾತ್ಮನಿಂದ ಈ ದಿವ್ಯಕಾರ್ಯವು ಜರುಗುವದೋ ನೋಡಬೇಕಾಗಿದೆ. ನನಗೆ ಭಾಷೆಯು ಬಾರದಿದ್ದರೂ ಶ್ರೀಶ್ರೀಸಚ್ಚಿದಾನಂದ ಸರಸ್ವತೀಸ್ವಾಮಿಗಳವರು 'ಹೃದಯಕ್ಕೆ ಹೃದಯವು ಉತ್ತರಕೊಡುತ್ತದೆ' ಎಂದು ಹೇಳಿರುವದು ಅನುಭವಸತ್ಯವೆಂದು ಕಂಡುಬಂದಿತು. ಇಂಗ್ಲಿಷು, ಸ್ವಲ್ಪ ಮುಸಲ್ಮಾನಿ (ಉರ್ದು)– ಈ ಭಾಷೆಗಳ ಸಹಾಯದಿಂದಲೂ ತೆಲುಗುಬಲ್ಲ ಮಧ್ಯಸ್ಥರಿಂದಲೂ ಇದೆಲ್ಲವನ್ನೂ ನಾನು ತಿಳಿದುಕೊಳ್ಳಲು ಸಮರ್ಥನಾದೆನು.]

೪. ಬಾಲ್ಯ, ವಿದ್ಯಾಭ್ಯಾಸ, ಆತುರಸಂನ್ಯಾಸ

ಚುರುಕುಬುದ್ಧಿಯ ಮಗು

೫೦. ಶಂಕರಾಚಾರ್ಯರ ಬಾಲ್ಯದ ವಿಷಯವೂ ನಮಗೆ ತಿಳಿದಿರುವದು ಅತ್ಯಲ್ಪವೇ. ಮಾಧವೀಯದಲ್ಲಿ ಹೀಗಿದೆ : ಒಂದನೆಯ ವರ್ಷದಲ್ಲಿ ಸ್ವಭಾಷೆಯನ್ನೂ ವರ್ಣಾಭ್ಯಾಸವನ್ನೂ ಪೂರೈಸಿದರು ; ಎರಡನೆಯ ವರ್ಷದಲ್ಲಿ ಬರೆಹ ಅಕ್ಷರಗಳನ್ನು ಓದಿದರು. ಆಮೇಲೆ ಕಾವ್ಯಪುರಾಣಗಳ ಅರ್ಥವನ್ನು ಶ್ರವಣವಿಲ್ಲದೆ ತಿಳಿದುಕೊಂಡರು, ಇವರಿಗೆ ಹೇಳಿಕೊಡುವದು ಗುರುಗಳಿಗೇನೂ ಕಷ್ಟವಾಗಲಿಲ್ಲ ; ಜೊತೆಯಲ್ಲಿರುವ ಹುಡುಗರಿಗೂ ಪಾಠವನ್ನು ಹೇಳುತ್ತಿದ್ದರು. ಮಿಕ್ಕ ಮಕ್ಕಳು ಮಣ್ಣಿನ ಧೂಳಿಯಲ್ಲಿ ಆಡುತ್ತಿರುವ ವಯಸ್ಸಿನಲ್ಲಿಯೇ ಸಕಲಲಿಪಿಗಳನ್ನೂ ಕಲಿತುಕೊಂಡರು (ಪೂಂ.ಶಂ. ೪–೧೦ರಿಂದ ೪). **ವ್ಯಾಸಾಚಲೀಯ**ದಲ್ಲಿಯೂ (ವ್ಯಾ. ಶಂ. ೪–೩೧) ಹೀಗೆಯೇ ಸಂಕ್ಷೇಪವಾಗಿ ಹೇಳಿದೆ. **ಚಿದ್ವಿಲಾಸೀಯ**ದಲ್ಲಿಯೂ ಐದು ವರ್ಷದೊಳಗೇ ಕೋಶ, ಸ್ತೋತ್ರ, ಕಾವ್ಯ, ಛಂದಸ್ಸು, ಅಲಂಕಾರ, ಗೀತ ವಾದಿತ್ರನೃತ್ತಾದಿಗಳನ್ನು ಕಲಿತನು (ಚಿ.ಶಂ. ೬–೩೬,೩೭) ಎಂದಿದೆ. **ಅನಂತಾನಂದಗಿರೀಯ**ದಲ್ಲಿಯೂ (ಪು. ೧) ಪ್ರಾಕೃತ, ಮಾಗಧಗೀರ್ವಾಣಾದಿಭಾಷೆಗಳಲ್ಲಿ ಕುಶಲನಾದನು ಎಂದಿದೆ. ಆದ್ದರಿಂದ ಬಾಲ್ಯದಲ್ಲಿಯೇ ಬುದ್ಧಿಯು ಬಹಳ ಚುರುಕಾಗಿತ್ತು ಎಂದು ಎಲ್ಲರೂ ಹೇಳಿದಂತೆ ಆಯಿತು.

ಉಪನಯನ

೫೧. ಮೂರನೆಯ ವರ್ಷದಲ್ಲಿ ಚೌಲವೂ ಐದನೆಯ ವರ್ಷದಲ್ಲಿ ಉಪನಯನವೂ ಆದವೆಂಬುದಕ್ಕೆ ಎಲ್ಲರ ಸಂಮತಿಯೂ ಇದೆ. ಆದರೆ ವ್ಯಾಸಾಚಲೀಯ ಮಾಧವೀಯ– ಇವುಗಳಲ್ಲಿ ನಾವು ಆಗಲೆ ಹೇಳಿರುವಂತೆ (ಪು. ೭) ಮಗನಿಗೆ ಉಪನಯನವನ್ನು ಮಾಡುವಷ್ಟರಲ್ಲಿಯೇ ಶಿವಗುರು ಮೃತನಾದನು ; ಅವನ ಹೆಂಡತಿಯು ಬ್ರಾಹ್ಮಣರ ಮೂಲಕ ಉಪನಯನವನ್ನು ಮಾಡಿಸಿದಳು ಎಂದು (ಪೂಂ. ಶಂ. ೪–೧೧, ೧೫ ; ವ್ಯಾ. ಶಂ. ೪–೩೨) ಹೇಳಿದೆ. **ಕೇರಳೀಯ ಶಂಕರವಿಜಯ**ದಲ್ಲಿಯೂ 'ಪಞ್ಚಮಾಬ್ದೇ ನಿಜಂ ಪುತ್ರಮುಪನೇತುಮನಾ ದ್ವಿಜಃ | ಪಞ್ಚತ್ವಮಗಮತ್ಸದ್ಯಃ ಕಾಲೋ ಹಿ ದುರತಿಕ್ರಮಃ ||' ಎಂದು ಇದೆ ಎಂತ (ಗು.ರ.ಶ್ಲೋ. ೧೪) ಆತ್ಮಬೋಧರು ಬರೆದಿರುತ್ತಾರೆ. ಆದರೆ ಈ ಕಥಾಕ್ರಮವು ನಿಜಕ್ಕೆ ಸರಿಯಲ್ಲವೆಂದೂ **ಗುರುರತ್ನಮಾಲಿಕೆ**ಯಲ್ಲಿ ಹೇಳಿರುವಂತೆ ಉಪನಯನವನ್ನು ಮಾಡಿಯೇ ಶಿವಗುರುವು ಮೃತನಾದನೆಂದೂ ಅವರು ಪ್ರತಿಪಾದಿಸಿರುತ್ತಾರೆ (ಗು.ರ. ೧೪). ಈ ತಮ್ಮ ಮತವು ಶಿವರಹಸ್ಯಕ್ಕೆ ವಿರುದ್ಧವಲ್ಲ

ವೆಂದು ತೋರಿಸುವದಕ್ಕಾಗಿ ಆತ್ಮಬೋಧರು 'ಉಪನೀತಸ್ತಥಾ ಮಾತ್ರಾ' (ಶಿ. ರ. ೧೬-೧೫) ಎಂಬ ವಾಕ್ಯಕ್ಕೆ 'ಶಿವರಹಸ್ಯವಚನಸ್ಯಾಪಿ....ಮಾತ್ರಾ ಗುರುಕುಲಂ ವ್ಯಾಪಿತ ಇತ್ಯರ್ಥಸ್ಯ ಸುಪಚತ್ವಾಚ್ಚ' ತಾಯಿಯು ಗುರುಕುಲಕ್ಕೆ ಕಳುಹಿಸಿದಳು ಎಂಬೂ ವ್ಯಾಖ್ಯಾನವಮಾಡಬಹುದೆಂದು ಬರೆದಿದಾರೆ. ಚಿದ್ವಿಲಾಸೀಯದಲ್ಲಿ ; ಐದನೆಯ ವರ್ಷದಲ್ಲಿ ಉಪನಯನವಾಡಿದರೆ ಬ್ರಹ್ಮವರ್ಚಸ್ಸನ್ನು ಹೊಂದುತ್ತಾನೆ-ಎಂಬ ಸೂತ್ರವನ್ನು ಆಪಲಂಬಿಸಿ ಸ್ವಭಾವದಿಂದಲೇ ಇದ್ದ ತೇಜಸ್ಸನ್ನು ಬ್ರಹ್ಮತೇಜಸ್ಸಿನಿಂದ ಪೆಚ್ಚಿಸುವದಕ್ಕೆ ಇಷ್ಟಪಟ್ಟು ಬಂಧುಗಳೊಡನೆ ಸೇರಿ ಕೊಂಡು ಉಪನಯನವಮಾಡಿಸಿದನು. 'ಪಞ್ಚಮಾಬ್ದೋಪನೀತಶ್ಚೇದ್ಬ್ರಹ್ಮವರ್ಚಸಮೃಚ್ಛತಿ | ಇತಿ ಸೂತ್ರಂ ಸನಾಲನ್ಬ್ಯ ನಿಜತೇಜಃಸಮುಜ್ಜ್ವಲಮ್ | ಬ್ರಾಹ್ಮೇಣ ತೇಜಸಾ ಭೂಯೋನಿರ್ಯೋಕ್ತುಂ ಮ್ರುತಮೈಪತ ॥ 'ಅತಸ್ಸ್ವೋಪನೀತಿಂ ಸ ಸಮಸ್ತೈರ್ಬನ್ಧುಭಿರ್ಯುತಃ ॥' (ಚಿ. ಶಂ. ೭-೩, ೯). ಚಿದ್ವಿಲಾಸೀಯವು ಮಾಧವೀಯಕ್ಕಿಂತ ಈಚಿನ ಗ್ರಂಥವಾದ್ದರಿಂದ ಉಪನಯನಕ್ಕೆ ಮುಂಜಿಯೇ ಶಿವಗುರುವು ವ್ಯತನಾಗಿರಬೇಕು- ಎಂದು (ಸೋ. ಶ. ಪು. ೪೦) ಸೋಮನಾಥಯ್ಯನವರು ಕಲ್ಪಿಸಿರುತ್ತಾರೆ. ಆದರೆ ಈ ವಿಷಯದಲ್ಲಿ ಗುರುರತ್ನಮಾಲಿಕೆಯು 'ಉಪನೀಯ ದಿವ ೧೧ ಸ್ವತಾತೇ' (ತಂದೆಯು ಉಪನಯನವನ್ನು ಮಾಡಿ ಸ್ವರ್ಗಸ್ಥನಾಗಲು ಗು. ರ. ಶ್ಲೋ. ೧೮) ಎಂದು ಹೇಳಿರುವದನ್ನು ಊರ್ಜಿತಗೊಳಿಸುವದಕ್ಕಾಗಿ ಆತ್ಮಬೋಧರು 'ಚೌಲಂ ಕರ್ಮ ಸಮಾಪ್ಯ ಚೋಪನಯನಂ ತಾತೇ ದಿವಂ ಪ್ರಸ್ಥಿತೇ' ಎಂಬ ಪ್ರಾಚೀನಶಂಕರವಿಜಯವಾಕ್ಯವನ್ನೂ 'ಶಿವಗುರುರುಪನೀಯ ಶಙ್ಕರಾರ್ಯಂ ನಿಗಮಮುಶೇಷಮಥಾಧ್ಯಜೀಗಪತ್ತಮ್' ಎಂಬ ಬೃಹಚ್ಛಂಕರವಿಜಯವಾಕ್ಯವನ್ನೂ ಪ್ರಮಾಣವಾಗಿ ಉದಾಹರಿಸಿರುತ್ತಾರೆ. ಆದ್ದರಿಂದ ಈ ವಿಷಯವಸ್ಲಿ ದ್ವಿಲಾಸೀಯ ವರ್ಣನೆಯ ವಿಷಯಕ್ಕೆ ಸಂಶಯಪಡುವ ಕಾರಣವಿಲ್ಲ. ಈ ವಿಷಯದಲ್ಲಿ ಎರಡು ಮತಗಳಿವೆ ಎಂದು ಮಾತ್ರ ಇಲ್ಲಿ ಸಿದ್ಧವಾಗುತ್ತದೆ. ಆದರೆ ಈ ಗ್ರಂಥದಲ್ಲ 'ಅನೇಹಸಿ ಮಹೋದಾರೇ ದ್ರಾವಿಡಾಚಾರಸಮ್ಮತಮ್ | ಪೌರ್ವೈಃ ಸ್ನಿಗ್ಧೈರ್ವಿದಗ್ಧೈಶ್ಚ ವೃದ್ಧೈರ್ಬನ್ಧುಭಿರನ್ವಿತಃ | ಚೌಲೋತ್ಸವಮಥಾಕಾರ್ಷೀತ್ ॥' (ಚಿ ಶಂ. ೬-೨೫, ೨೬) ಎಂದು ಚೌಲದ ಸಂಬಂಧದಿಂದಲೂ 'ದ್ರಾವಿಡಾಚಾರ ಪಾರಗಾನ್' (ಚಿ. ಶಂ. ೭-೫) ಎಂದು ಉಪನಯನಸಂಬಂಧದಿಂದಲೂ ಮುಂದೆ 'ಪತ್ಯುಃ ಸಾಧ್ವ್ಯಾರ್ದ್ವದೇಹಿಕಮ್ | ದ್ರಾವಿಡಾಚಾರವಿಧಿನಾ' (ಚಿ.ಶಂ. ೮-೯) ಎಂದು ಶಿವಗುರುವಿನ ಅಂತ್ಯಕ್ರಿಯೆಯ ಸಂಬಂಧದಿಂದಲೂ ಕರ್ಮಗಳು ದ್ರಾವಿಡಾಚಾರಕ್ಕೆ ಅನುಗುಣವಾಗಿ ಇದವೆಂದು ವರ್ಣಿಸಿರುವದು ಆಚಾರ್ಯರು ಕೇರಳೀಯರಾದ್ದರಿಂದ ಸರಿಯಾದ ಆಚಾರದ ಕರ್ಮಗಳಾಗಲಿಲ್ಲವೆಂಬ ಶಂಕೆ ಬರಬಾರದೆಂದೋ ಅಥವಾ ಅವರು ಶುದ್ಧದ್ರಾವಿಡರು (ತಮಿಳರು) ಎಂಬ

ಆಭಿನಿವೇಶದಿಂದಲೋ ಆಗಿರಬೇಕೆಂದು ಸೋಮನಾಥಯ್ಯನವರು ಕಲ್ಪಿಸಿರುವದು (ಸೋ.ಶಂ ೪೧) ನಮಗೂ ಯುಕ್ತಿಯುಕ್ತವಾಗಿ ತೋರುತ್ತದೆ. ಚಿದ್ವಿಲಾಸರಿಗೆ ಶಾಸ್ತ್ರವೊ ಈಚಿನ ಶಿಷ್ಟಾಚಾರಗಳೂ ಬಹಳ ಇಷ್ಟವಾಗಿರುತ್ತವೆ. ಆದ್ದರಿಂದಲೇ ಅವರು ಅಲ್ಲಲ್ಲಿ ಸೂತ್ರಗಳನ್ನೂ ಸ್ಮೃತಿಗಳನ್ನೂ ಉದಾಹರಿಸುತ್ತಿರುತ್ತಾರೆ; ಈಚಿನ ಆಚಾರಗಳನ್ನು ಆಚಾರ್ಯರಿಗೂ ಗಂಟುಹಾಕುವದಕ್ಕೆ ಪ್ರಯತ್ನಿಸುತ್ತಿರುತ್ತಾರೆ. ಈ ವಿಷಯವನ್ನು ಸಮಯವು ಬಂದಹಾಗೆ ಅಲ್ಲಲ್ಲಿ ವಾಚಕರ ಲಕ್ಷ್ಯಕ್ಕೆ ತರುವೆವು.

ಆನಂದಗಿರೀಯದಲ್ಲಿ ಅಚ್ಚಿನ ತೆಲುಗುಪುಸ್ತಕದಲ್ಲಿ 'ತೃತೀಯೇ ವರ್ಷೇ ಚೌಲಕರ್ಮ, ಪಞ್ಚಮೇ ವರ್ಷೇ ಮೌಞ್ಜೀಬನ್ಧಂ ವಿಧ್ಯುಕ್ತಿತಃ ಕುರ್ವನ್ತಿ ವಿಪ್ರಾಸ್ತಾಃ' (ಬ್ರಾಹ್ಮಣರುಗಳು ಮೂರನೆಯ ವರ್ಷದಲ್ಲಿ ಚೌಲಕರ್ಮವನ್ನೂ ಐದನೆಯ ವರ್ಷದಲ್ಲಿ ವಿಧ್ಯುಕ್ತವಾಗಿ ಮೌಞ್ಜೀಬಂಧವನ್ನೂ ಅಂದರೆ ಉಪನಯನವನ್ನೂ ಮಾಡಿದರು ಆ.ಶಂ.ವು. ೧೦) ಎಂದಿದೆ. ಪ್ರಾಚೀನಪಾಠವೆಂದು ಈಚೆಗೆ ಹೊರಕ್ಕೆ ತಂದಿರುವ ಪಾಠದಲ್ಲಿ 'ಪಞ್ಚವರ್ಷಸ್ಯ ವರ್ಣಾದಿಗ್ರಹಣೇ ನಾಸ್ಯ ಧೀಮತಃ | ಉಪನೀತಿಮುಕೃತ್ವೈವ ಮುಮೋದ ಮುಹಿತಃ ಪಿತಾಃ" (ರಾಂ. ಪೀ. ತ. ೧೫) ಎಂದು ಹೇಳಲಾಗಿದೆ. ಆದರೆ ಈ ಪ್ರಾಚೀನಪಾಠವೂ ಸಂಶಯಾಸ್ಪದವಾಗಿದೆ ಎಂಬುದನ್ನು ನಾವು ೭ನೆಯ ಪರಿಶಿಷ್ಟದಲ್ಲಿ ತೋರಿಸಿರುತ್ತೇವೆ. ಇದೂ ಅಲ್ಲದೆ ಆತ್ಮಬೋಧರ ಸುಷಮಾಗ್ರಂಥದಲ್ಲಿ ಆಚಾರ್ಯವಿಜಯೇ ಚ 'ತೃತೀಯೇ ವರ್ಷೇ ಚೌಲಕರ್ಮ ಪಞ್ಚಮೇ ಮೌಞ್ಜೀಬನ್ಧನಂ ವಿಧ್ಯುಕ್ತಿತಶ್ಚಕ್ರುರ್ವಿಪ್ರಾಸ್ತಾಃ' ಎಂಬ ವಾಕ್ಯವನ್ನು ಆಚಾರ್ಯವಿಜಯದ್ದೆಂದು ಉದಾಹರಿಸಿದೆ; ಆ ಗ್ರಂಥವೇ ಈ ಆನಂದಗಿರೀಯವೆಂದಾದರಂತೂ ಪ್ರಾಚೀನಪಾಠವೆಂಬುದೇ ಅರ್ವಾಚೀನವೆಂದಾಗುತ್ತದೆ. ಅಚ್ಚಿನ ಆನಂದಗಿರೀಯದಲ್ಲಿ ಆಚಾರ್ಯರ ಆವಯವಗಳನ್ನು ವರ್ಣಿಸುವಾಗ 'ಅರ್ಧೇನ್ದುಲಲಾಟಃ, ಪೂರ್ಣೇನ್ದುಮುಖಃ . **ಸಾಕ್ಷಾಚ್ಛಿದಮ್ಬರೇಶ ಇವ ವಿರಾಜಮಾನಃ**' ಎಂದು ವರ್ಣಿಸಿರುವ ಆನಂತಾನಂದಗಿರಿಯು ಚಿದಂಬರದಲ್ಲಿ ಆಚಾರ್ಯರು ಹುಟ್ಟಿದರೆಂಬುದರಲ್ಲಿಯೇ ಆಭಿನಿವೇಶವುಳ್ಳವನಂತೆ ಕಾಣಿಸುತ್ತಾನೆ; ಅದು ನಿಜವಾದರೆ ಈಗ ಹೊರಕ್ಕೆ ಬಂದಿರುವ 'ಪ್ರಾಚೀನಪಾಠವೇ ಅರ್ವಾಚೀನರು ಯಾರೋ ಕಲ್ಪಿಸಿರಬಹುದಾದದ್ದು—ಎಂದು ಊಹಿಸುವದಕ್ಕೂ ಎಡೆಯಿರುತ್ತದೆ. ಆದ್ದರಿಂದ ಆನಂದಗಿರಿಯ ಮ ಉಪನಯನವನ್ನು ಬ್ರಾಹ್ಮಣರೇ ಮಾಡಿಸಿದರೆಂಬ ಕಡೆಗೆ ಎಂದು ಹೇಳುವದೇ ಯುಕ್ತವೆಂದು ತೋರುತ್ತದೆ.

ವಿದ್ಯಾಭ್ಯಾಸದಲ್ಲಿ ಮುನ್ನಡೆ

೫೨. ಉಪನಯನವಾದ ಬಳಿಕ ಬ್ರಹ್ಮಚಾರಿಶಂಕರನು ಕ್ರಮವಾಗಿ ನಾಲ್ಕು ವೇದಗಳನ್ನೂ ವೇದಾಂತಗಳನ್ನೂ ಕಲಿತನು. ಸಹಪಾಠಿಗಳಿಗೆ ಅವನ ಜೊತೆಗೆ

ಅಷ್ಟು ವೇಗವಾಗಿ ಓದುವದಾಗಲಿಲ್ಲ. 'ಇಷ್ಟು ಬೇಗನೆ ಹೇಳಿಕೊಡುವದೆಂತು ? ಎಂದು ಗುರುಗಳಿಗೂ ಸಂಶಯವಾಯಿತು. ಶಂಕರನು ಎರಡು ಮೂರು ತಿಂಗಳಲ್ಲಿ ಗುರುವಿಗೆ ಸಮಾನನಾದನು– ಎಂದು ಬಣ್ಣಿಸಿದ್ದರಿಂದಲೂ (ಮಾ. ಶಂ. ೪–೧೬ರಿಂದ ೧೪) ಮಾಧವನಿಗೆ ತೃಪ್ತಿಯಾಗಲಿಲ್ಲ. ಕವಿತಾ ಕಲ್ಪನೆಯು ಲೋಕವಲ್ಲಿ ಸ್ವೇಚ್ಛೆಯಿಂದ ವಿಹರಿಸುತ್ತೆ

ವೇದೇ ಬ್ರಹ್ಮಸಮಸ್ತದಜ್ಞನಿಚಯೇ ಗಾರ್ಗ್ಯೋಪಮಸ್ತತ್ಕಥಾ
ತಾತ್ಪರ್ಯಾರ್ಥವಿನೇಚನೇ ಗುರುಸಮಸ್ತರ್ಕ್ಯಸಂವರ್ಣನೇ।
ಆಖ್ಯಾಜ್ಞೈಮಿನಿರೇವ ತತ್ಪಚನಜಪ್ರೌಢೋಪಬೃಂಹಕನ್ದೇ ಸಮೋ
ವ್ಯಾಸೇತ್ಯೇವ ಸ ಮೂರ್ತಿಮಾನಿವ ನವೋ ವಾಣೀವಿಲಾಸೈರ್ವೃತಃ ॥೧೯॥

ಅನೀಕ್ಷಿಕ್ಯೈಕ್ಷಿ ತತ್ಪೇ ಪರಿಚಿತಿರತುಲಾ ಕಾಪಿಲೇ ಕಾಪಿ ಲೇಭೇ
ಪೀತಂ ಪಾತಞ್ಜಲಾಮ್ಭಃ ಪರಮುಪಿ ವಿದಿತಂ ಭಾಟ್ಟಭಟ್ಟಾರ್ಥತತ್ತ್ವಮ್
ಯತ್ತೈಃ ಸೌಖ್ಯಂ ತಪನ್ಯಾನ್ತರಭವನದನುಲಾವ್ಯೈತವಿದ್ಯಾಸುಖೇಷ್ವಸ್ಮಿನ್
ಕೂಲೇ ಯೋಷ್ಟಾರ್ಥಃ ಸ ತೀರ್ಥೇ ಸುಖಯತಿ ವಿತತೇ ಹನ್ತ ನಾನ್ತರ್ಭವೇತ್ಕಿಮ್ ॥

"ವೇದವಲ್ಲಿ ಬ್ರಹ್ಮನಿಗೆ ಸಮನು, ವೇದಾಂಗಗಳಲ್ಲಿ ಗಾರ್ಗ್ಯನೇ. ವೇದಾರ್ಥತಾತ್ಪರ್ಯವನ್ನು ವಿವೇಚನೆಮಾಡುವದರಲ್ಲಿ ಬೃಹಸ್ಪತಿಸಮನು, ಆಸವಲ್ಲಿಯ ಕರ್ಮವನ್ನು ವರ್ಣಿಸುವದರಲ್ಲಿ ಜೈಮಿನಿಯೇ, ವೇದವಾಕ್ಯತತ್ತ್ವ ಜ್ಞಾನವನುಕೂಲದ ವಿಷಯವಲ್ಲಿ ವ್ಯಾಸರಿಗೇ ಸಮನು. ಹೊಸದಾಗಿ ಅವತರಿಸಿದ ವ್ಯಾಸನೋ ಎಂಬಂತೆ ವಾಗ್ವಿಲಾಸಗಳಿಂದ ಕೂಡಿದ್ದನು. ತರ್ಕವಿದ್ಯೆಯನ್ನು ನೋಡಿದ್ದಾಯಿತು. ತಂತ್ರದ ಆಸಮಾನಪರಿಚಯವಾಯಿತು. ಕಪಿಲರ ಸಾಂಖ್ಯವೂ ದೊರಕಿತು. ಪಾತಂಜಲಸಮುದ್ರವನ್ನು ಕುಡಿದದ್ದಾಯಿತು, ಭಟ್ಟರ ಘಟ್ಟಾರ್ಥತತ್ತ್ವವನ್ನು ತಿಳಿದದ್ದಾಯಿತು. (ಮುಂದೆ ಭಟ್ಟರ ದರ್ಶನವನ್ನು ವರ್ಣಿಸುವ ಸಂದರ್ಭವನ್ನು ಕವಿ ಇಲ್ಲಿ ಮುರಿತು ಭಟ್ಟರನ್ನು ಆಚಾರ್ಯರ ಪೂರ್ವಜರನ್ನಾಗಿ ಮಾಡಿರುತ್ತಾನೆ!) ಆ ಶಾಸ್ತ್ರಗಳಿಂದ ಬರುವ ಸೌಖ್ಯವು ನಿರ್ಮಲವಾದ ಆದ್ವೈತಾನಂದದಲ್ಲಿಯೇ ಅಡಕವಾಯಿತು; ಭಾವಿಯಿಂದಾಗುವ ಪ್ರಯೋಜನವು ಮಹಾಜಲವುಳ್ಳ ಸುತೀರ್ಥದಲ್ಲಿ ಅಂತರ್ಗತವಾಗುವದಿಲ್ಲವೆ ?' ಎಂದು ಯಮಕಾನುಪ್ರಾಸಗಳ ಸುರಿಮಳೆಯ ವೃತ್ತಗಳಿಂದ ಆಚಾರ್ಯರನ್ನು ವರ್ಣಿಸಿರುತ್ತಾನೆ.

ಈ ಸಂದರ್ಭದಲ್ಲಿ ಅನಂತಾನಂದಗಿರಿಯು "ಷಡ್ದರ್ಶನಮೂಲಃ, ಇತಿಹಾಸಸ್ಕಾಣಃ, ನಿಗಮಶಾಖಃ, ಷಡಙ್ಗಪಲ್ಲವಃ, ಸೂತ್ರಪುಷ್ಪೋ, ಮನ್ತ್ರ ಫಲಾಢ್ಯಃ, ಜ್ಞಾನಪಕ್ವಫಲಃ, ಶ್ರೀಶಙ್ಕರಕಲ್ಪವೃಕ್ಷ ಆಸೀತ್' (ಆ.ಶಂ.ಪು. ೧೦) –ಎಂದು ಆಚಾರ್ಯರನ್ನು ಕಲ್ಪವೃಕ್ಷವಾಗಿ ವರ್ಣಿಸಿ 'ವೇದೇ ಬ್ರಹ್ಮಸಮಃ' ಎಂಬ

ಮೇಲೆ ಉದಾಹರಿಸಿರುವ ಪದ್ಯವನ್ನೇ ಅಕ್ಷರಶಃ ಇಟ್ಟಿದ್ದಾನೆ ; 'ವ್ಯಾಸೇನೈವ' ಆದಮೇಲೆ 'ಮದೀಯ ಸದ್ಗುರುರಸೌ ಶ್ರೀಶಜ್ಕರಾರ್ಯಃ ಕ್ಷಿತೌ' ಎಂದು ಪೂರ್ಣ ಡಿಸಿದ್ದಾನೆ. ಆನಂದಗಿರಿಯು ಹಿಂದಿನವನಾದರೆ ಮಾಧವನು ಈ ಶ್ಲೋಕವನ್ನು ಆವನಿಂದಲೇ ತೆಗೆದುಕೊಂಡೆನೆನ್ನಬೇಕಾಗುತ್ತದೆ ; ಇಲ್ಲದಿದ್ದರೆ ಇಬ್ಬರೂ ಮತ್ತೊಂದು ಕಡೆಯಿಂದ ಈ ಪದ್ಯವನ್ನು ಆರಿಸಿಕೊಂಡಿರಬೇಕೆನ್ನಿಸುತ್ತದೆ. **ವ್ಯಾಸಾಚಲೀಯ**ದಲ್ಲಂತೂ **ಈ ಪದ್ಯವಿಲ್ಲ. ಅನಂತಾನಂದಗಿರಿ**ಯು ಕೊಟ್ಟಿರುವ ಮತ್ತೊಂದು ಪದ್ಯವನ್ನು ಇಲ್ಲಿ ಉದಾಹರಿಸುವೆವು. ಅದನ್ನು ಪರೀಕ್ಷಿಸುವವರಿಗೆ ಮತ್ತೇನಾದರೂ ಹೊಳೆದೀತೆಂದು ನಮ್ಮ ಆಶೆ ;

ಆದ್ಯೇತಾರ್ಣವಪೂರ್ಣಚನ್ದ್ರಮುಭಿದಾಪದ್ಮಾಟವೀಭಾಸ್ಕರಂ
ವಿದ್ವತ್ಕೋಟಿಸಮರ್ಚಿತಾಙ್ಘ್ರಿಯುಗಲಂ ಪ್ರದ್ವೇಷಿಕಕ್ಷಾನಲಮ್ ।
ಹೃದ್ಯಾಬದ್ಧಸಮಸ್ತವೇದಜನಿತಪ್ರೋದ್ಯದ್ವಿವೇಕಂ ಪರಂ
ಸ್ವಿದ್ಯದ್ವಾಗಮೃತಂ ಪರಾಪರಗುರುಂ ಶ್ರೀಶಜ್ಕರಂ ತಂ ಭಜೇ ॥

—(ಆ. ಶಂ. ಪು. ೧೦–೧೧)

ಇಲ್ಲಿರುವ 'ಶ್ರೀಶಜ್ಕರಂ ತಂ ಭಜೇ' ಎಂಬಲ್ಲಿ ದ್ಯ ಆಥವಾ ದ್ವ ಇರುವ ಯಾವದೋ ಒಂದು ಪದವನ್ನು ತೆಗೆದುಹಾಕಿ 'ಶ್ರೀಶಜ್ಕರಂ' ಎಂದು ಇಟ್ಟಿರುವಂತೆ ಭಾಸವಾಗುತ್ತಿದೆ.

ವ್ಯಾಸಾಚಲೀಯದಲ್ಲಿ ಆರ್ಯಾಂಬೆಯು ಪತಿಯ ಅಂತ್ಯಕರ್ಮವನ್ನು ಮಾಡಿದಳೆಂದೂ

ಸುಬ್ರಹ್ಮಚರ್ಯಮನುರುಧ್ಯ ನಿಜಂ ಸವೇದ
ಮಧ್ಯೈಷ್ಟ ವೇದಮಪರಂ ತಮನುಕ್ರಮೇಣ ।
ಏವಂ ಗುಣೈಃ(ರೋಃ ?) ಪರಿತವಾಂಶ್ಚತುರೋಽಪಿ ವೇದಾಂ–
ಸ್ತನ್ಮೂಲಮಸ್ಯ ಕಥಯನ್ತಿ ಯಜುಃಸಮಾಖ್ಯಮ್ ॥— (ವ್ಯಾ. ಶಂ. ೪–೯೯)

ಎಂದಿಷ್ಟೇ ಇದೆ. ಬ್ರಹ್ಮಚರ್ಯವನ್ನು ಅನುಸರಿಸಿಕೊಂಡು ಯಜುರ್ವೇದಾದಿಯಾಗಿ ನಾಲ್ಕು ವೇದಗಳನ್ನೂ ಕ್ರಮವಾಗಿ ಆಚಾರ್ಯರು ಅಧ್ಯಯನಮಾಡಿದರು ; ಆದ್ದರಿಂದ ಯಜುಃಶಾಖೆಯು ಅವರ ಸ್ವಶಾಖೆ–ಎಂದು ಈ ಗ್ರಂಥಕಾರರ ಅಭಿಪ್ರಾಯ.

ಚಿದ್ವಿಲಾಸೀಯದಲ್ಲಿ ತಂದೆಯೇ ಉಪನಯನವನ್ನು ಮಾಡಿ ವೇದಗಳನ್ನು ಅಧ್ಯಯನಮಾಡಿಸಿದನು, **ಜೈಮಿನಿಸೂತ್ರವ್ಯಾಸಸೂತ್ರ**ಗಳು, **ಉಪನಿಷತ್ತು**ಗಳು– ಇವನ್ನು ಹೇಳಿಕೊಟ್ಟನು (ಚಿ. ಶಂ. ೭–೨೪,೨೫), **ವೇದಾಂತಾರ್ಥ ಪರಿಜ್ಞಾನ**ದಿಂದ ಮತಿಯು ನಿರ್ಮಲವಾಯಿತು (೭–೨೭), **ಮಿಕ್ಕ ಶಾಸ್ತ್ರ**

ಗಳನ್ನು ಬಹು ದಿನ ಅಭ್ಯಾಸಮಾಡಿದವನಂತೆ ಬಾಲಕನು ವೇಗದಿಂದ ಗ್ರಹಿಸಿದನು (೭–೮೮). ಕಾಮುಕಲಾಶಾಸ್ತ್ರವನ್ನು ನೋಡುವದಕ್ಕೆ ಹೊರಡುವಷ್ಟರಲ್ಲಿಯೇ–ಶಿವಪುನ್ಮಠರಿಗೆ ವಿರೋಧವಿರುವದರಿಂದ–ಆತನು ಬ್ರಹ್ಮಸತ್ಯತ್ವವನ್ನೂ ವಿಕ್ಕದ್ದೆಲ್ಲವೂ ವಿನಶ್ವರವೆಂಬುದನ್ನೂ ನಿಶ್ಚಯಿಸಿಕೊಂಡನು. ಸರ್ವರಲ್ಲಿಯೂ ಪ್ರೇಮಾಗ್ಯವನ್ನೂ ಸರ್ವಜಂತುಗಳಲ್ಲಿಯೂ ಸಮತ್ವವನ್ನೂ ಪರಮಾತ್ಮನಲ್ಲಿ ಚಿತ್ತನಿಷ್ಠೆಯನ್ನೂ ಪಡೆದುಕೊಂಡನು (೮–೩೨)– ಎಂದು ಬರೆದಿದೆ. ಈ ಗ್ರಂಥಕಾರರ ಮತದಂತೆ ಶಂಕರರಿಗೆ ಆಗ ವೇದಾಂತಜ್ಞಾನಪಾರೀಣತ್ವವೇ ಬಂದುಬಿಟ್ಟಿತ್ತು !

ಶಂಕರಾಚಾರ್ಯರಿಗೆ ಬಾಲ್ಯದಲ್ಲಿಯೇ ಉತ್ಕೃಷ್ಟಜ್ಞಾನವುಂಟಾದದ್ದು

ಜಿ. ಆಚಾರ್ಯರಿಗೆ ಅಷ್ಟು ಚಿಕ್ಕವಯಸ್ಸಿನಲ್ಲಿ ಇಂಥ ವಿದ್ವತ್ತು ನಿಜವಾಗಿ ಬಂದಿರಬಹುದೆ ?– ಎಂದು ಸಂಶಯಪಡುವವರ ಸಮಾಧಾನಕ್ಕಾಗಿ ಸೋಮನಾಥಯ್ಯನವರು (ಸೋ. ಶಂ. ಪು. ೪೩ರಿಂದ ೬೫) ಕೌಲಿ ಎಂಬ ಇಂಗ್ಲಿಷು ಹುಡುಗನು ಹದಿನೈದನೆಯ ವರ್ಷದಲ್ಲಿ ಕವಿತೆಯನ್ನು ಮಾಡಿದ್ದು, ಫ್ರಾನ್ಸುದೇಶದ ರಾಜಮಂತ್ರಿ ಟರ್ಗೊ ಎಂಬಾತನು ಬಾಲ್ಯದಲ್ಲಿಯೇ ವಿದ್ವಾಂಸನಾಗಿದ್ದು, ಸ್ಕಾಟ್ಲಿಂಡಿನ ಥಾಮಸ್ ಬ್ರೌನ್ ಎಂಬಾತನು ತನ್ನ ನಾಲ್ಕನೆಯ ವರ್ಷದಲ್ಲಿಯೇ ಬೈಬಲ್‌ಕಥೆಗಳ ಪೂರ್ವಾಪರವಿರೋಧವನ್ನು ಹೊರಗೆಡಹಿದ್ದು, ಇಂಗ್ಲಿಷು ಕವಿ ಕೋಲ್‌ರಿಡ್ಜ್ ಎಂಬಾತನು ಹದಿನಾರನೆಯ ವರ್ಷದಲ್ಲಿಯೇ ಅಧ್ಯಾತ್ಮಶಾಸ್ತ್ರದಲ್ಲಿ ಮುಳುಗಿದ್ದದ್ದು, ಪಿಟ್ ಎಂಬ ಮಂತ್ರಿ ಇಪ್ಪತ್ತಿರಡನೆಯ ವರ್ಷದಲ್ಲಿಯೇ ಮಂತ್ರಿತ್ವವನ್ನು ನಿರ್ವಹಿಸಿದ್ದು, ಜಾನ್ ಸ್ಟುಅರ್ಟ್ ಮಿಲ್ ಎಂಬಾತನು ಮೂರನೆಯ ವರ್ಷದಲ್ಲಿಯೇ ಗ್ರೀಕು ಮುಂತಾದ ಭಾಷೆಗಳನ್ನು ಕಲಿತದ್ದು, ಲುಬೆಕ್ ಗ್ರಾಮದ ಹೀನಿಕರ್ ಎಂಬ ಹುಡುಗನು ಮತ್ತೊಬ್ಬರು ಆಡಿದ ಪ್ರತಿಯೊಂದು ವಾಕ್ಯವನ್ನೂ ಮರುನುಡಿದದ್ದು, ಅಮೆರಿಕದ ಹಾರ್ವರ್ಡ್ ಸಕಲ ವಿದ್ಯಾನಿಲಯದಲ್ಲಿ ಕಿಲಿಯಂ ಜೇಮ್ಸ್ ಸಿಡಿಸ್ ಎಂಬವನು ಹನ್ನೊಂದನೆಯ ವರ್ಷದಲ್ಲಿಯೇ ಗಣಿತಶಾಸ್ತ್ರದಲ್ಲಿ ಉಪನ್ಯಾಸಮಾಡಿದ್ದು–ಈ ಉದಾಹರಣೆಗಳನ್ನು ಕೊಟ್ಟಿರುತ್ತಾರೆ. ನಮ್ಮ ದೇಶದಲ್ಲಿಯೂ ಇಂಥ ಉದಾಹರಣೆಗಳಿವೆ. ಹಿತವಾದಿ (Hitabadi 207 ಮುಂಡಪುರ, ಕಾಶಿ) ಎಂಬ ಪತ್ರಿಕೆಯಲ್ಲಿ (ಬಂಗಾಳಿವರ್ಷ ೧೩೧೫ ವೈಶಾಖ ಏಕಾದಶೀ ದಿನಾಂಕದ ಸಂಚಿಕೆಯಲ್ಲಿ) ಅಸಾಧಾರಣಮೇಧಾಶಕ್ತಿ (Extra-ordinary memory) ಎಂಬ ತಲೆಬರಹದ ಕೆಳಗೆ ಒಬ್ಬ ಹುಡುಗನ ಬುದ್ಧಿಶಕ್ತಿಯನ್ನು ವರ್ಣಿಸಿತ್ತು. ಹಿಂದಿ, ಬಂಗಾಳಿ, ಇಂಗ್ಲಿಷು, ಸಂಸ್ಕೃತ–ಈ ಭಾಷೆಯ ಗ್ರಂಥಗಳು ಮತ್ತು ಪಾಣಿನಿಯ ವ್ಯಾಕರಣ–ಇವುಗಳನ್ನು

ಅವನು ಐದು ವರ್ಷದೊಳಗೆ ಓದಿದ್ದನು. ಅವನು ಎಂಟನೆಯ ವರ್ಷಕ್ಕೆ ಉಪನೀತನಾಗಿ ಸಾಮವೇದವನ್ನು ನಿಯಮಾಧ್ಯಯನಮಾಡುತ್ತಿರುವನೆಂದೂ ಅವನ ತಮ್ಮನು ಐನನೆಯ ವರ್ಷದಲ್ಲಿಯೇ ಗಣಿತಜ್ಞನಾಗಿರುವನೆಂದೂ **ಶ್ರೀವಿಧ್ವಂಶಧರಸರಸ್ವತಿ** ಎಂಬ ಬಂಗಾಳಿ ವೈದಿಕಬ್ರಾಹ್ಮಣನು ಅವರ ತಂದೆಯಿಂದೂ ಪ್ರಕಟವಾಗಿದೆ ಎಂತ ಒಂದು ನೋಟುಬುಕ್ಕಿನಲ್ಲಿ ನಾವು ಬರೆದುಕೊಂಡಿದೇವೆ. ಇದನ್ನು ಬಹಳಮಟ್ಟಿಗೆ 'Shankara the Sublime' ಎಂಬ ಮಹಾ ಶಂಕರಚರಿತ್ರೆ ಧೀರೇಂದ್ರನಾಥ (Dhirendra Nath) ಎಂಬವರು 1912 ರಲ್ಲಿ ಬರೆದು The Eastern Publishing Company. Calcutta. ಇವರು ಪ್ರಕಟಿಸಿದ ಪುಸ್ತಕದಿಂದ ನಾವು ತೆಗೆದುಕೊಂಡಿರಬೇಕು ; ಏಕೆಂದರೆ ಆ ಹೆಸರನ್ನು ಈ ನೋಟುಬುಕ್ಕಿನಲ್ಲಿ ಗುರುತುಮಾಡಿಕೊಂಡಿದೆ. ಈ ವೃಷ್ಟ್ಯಾಂತಗಳೆಲ್ಲ ಎಷ್ಟರಮಟ್ಟಿಗಾದರೂ ನಿಜವಾಗಿರಲಿ, ಲೋಕದಲ್ಲಿ ಒಬ್ಬನ ಶಕ್ತಿಯಷ್ಟೇ ಇನ್ನೊಬ್ಬನೆದೂ ಇರಬೇಕೆಂಬ ನಿಯಮವೇನೂ ಇಲ್ಲವಷ್ಟೆ ? ಹೀಗಿರುವಲ್ಲಿ ಶಂಕರರಿಗೆ ಚಿಕ್ಕವಯಸ್ಸಿನಲ್ಲಿಯೇ ಧರ್ಮಜ್ಞಾನವೈರಾಗ್ಯಗಳ ಅರಿವು ಆಯಿತೆಂಬುದು ನಿಜವಾಗಿರಲಾರದೆಂದು ನಾವೇಕೆ ಬಗೆಯಬೇಕು? ಶಂಕರ ವಿಜಯಗಳು ಎಷ್ಟಾದರೂ ಕಾವ್ಯಗಳು; ಶಂಕರರಲ್ಲಿ ಹೆಚ್ಚಿನ ಭಕ್ತಿಯ ಆವೇಶದಲ್ಲಿ ಕವಿಗಳು ಬರೆದ ಗ್ರಂಥಗಳು. ಆದ್ದರಿಂದ ಅವುಗಳಲ್ಲಿ ಅತಿಶಯೋಕ್ತಿಯಿರುವದು ನ್ಸ್ವಾಭಾವಿಕ. ಆದರೆ ಶಂಕರಕೃತವೆಂಬ ಭಾಷ್ಯಗ್ರಂಥಗಳ ಅವಲೋಕನದ ಆಧಾರದಿಂದ ನೋಡಿದರೂ ಆ ಗ್ರಂಥಕರ್ತರು ಅನಿತರಸಾಧಾರಣವಾದ ಅದ್ಭುತ ಜ್ಞಾನಶಕ್ತಿಯುಳ್ಳವರಾಗಿದ್ದರೆಂದು ನಾವು ಒಪ್ಪಲೇಬೇಕಾಗುತ್ತದೆ. ಹೀಗಿರುವಲ್ಲಿ **ಮಣಿಮಂಜರೀಕಾರನು** ವರ್ಣಿಸಿರುವ (ಪರಿ. ೩ರಲ್ಲಿ) ತಾಮಸತ್ವವು ಯಾವದೋ ಬೇರೆಯ ಸಂಕರನದಾಗಿರಬೇಕು; ಲೋಕಪ್ರಸಿದ್ಧ ಶಂಕರರಲ್ಲಿ ಅದನ್ನು ಶಂಕಿಸುವವರೇ ತಾಮಸರಾಗುವರು.

ಬಾಲ್ಯದಲ್ಲಿ ಆಚಾರ್ಯರು ಪ್ರದರ್ಶಿಸಿದ ಅದ್ಭುತಗಳು

೫೪. ಆಚಾರ್ಯರ ಚರಿತ್ರೆಯಲ್ಲಿ ಕೆಲವು ಅದ್ಭುತಘಟನೆಗಳು ಬರುತ್ತವೆ. ಅವು ನಮ್ಮ ಕಣ್ಣಿಗೆ ಅದ್ಭುತವೆಂದು ಕಂಡರೂ ಯೋಗಶಕ್ತಿಯುಳ್ಳ ಮಹಾತ್ಮರಿಗೂ ಅವು ಅಸಾಧ್ಯವೇ ಎನ್ನುವದಕ್ಕೆ ಬರುವದಿಲ್ಲ. ಆದರೂ ಇಂಥ ಘಟನೆಗಳು ನಿಜವಾಗಿ ನಡೆದವೆ ? ಅಥವಾ ಅವು ಆಚಾರ್ಯರಲ್ಲಿರುವ ಅಪರಿಮಿತ ಶ್ರದ್ಧಾಭಕ್ತಿಗಳಿಂದ ಜನರು ಕಲ್ಪಿಸಿದವುಗಳೆ ?– ಎಂಬುದನ್ನು ಪುರಾತತ್ತ್ವಶೋಧಕರು ನಿಶ್ಚಯಿಸಬೇಕಾಗಿರುತ್ತದೆ ; ಅಂಥವುಗಳಲ್ಲಿ ಕೆಲವನ್ನು ಇಲ್ಲಿ ತಿಳಿಸುವೆವು :

(1) ಒಮ್ಮೆ ಬ್ರಹ್ಮಚಾರಿ ಶಂಕರನು ತನ್ನ ಸ್ನೇಹಿತರೊಡನೆ ಭಿಕ್ಷಾರ್ಥವಾಗಿ ಒಬ್ಬ ಬಡಬ್ರಾಹ್ಮಣನ ಮನೆಯನ್ನು ಹೊಕ್ಕನು. ಬ್ರಾಹ್ಮಣಿಯು 'ಇಂಥ ವಟುವಿಗೆ ಕೊಡುವದಕ್ಕೆ ನಮಗೇನೂ ಅದೃಷ್ಟದಲ್ಲಿ ಬರೆಯಲಿಲ್ಲವಲ್ಲ!'– ಎಂದು ಕೊಂಡು ಚಿಂತಿಸುತ್ತಾ ಒಂದು ನೆಲ್ಲಿಕಾಯಿಯನ್ನು ಕೊಟ್ಟಳು. ಶಂಕರನು ಆಕೆಯ ದೀನವಚನವನ್ನು ಕೇಳಿ ಆಕೆಯಲ್ಲಿ ದಯಾರ್ದ್ರಚಿತ್ತನಾಗಿ ಆಕೆಯ ಬಡತನವನ್ನು ನೀಗುವಂತೆ ಲಕ್ಷ್ಮೀದೇವಿಯನ್ನು ಪ್ರಾರ್ಥಿಸಿದನು. ಲಕ್ಷ್ಮೀದೇವಿಯು ಪ್ರಸನ್ನಳಾಗಿ 'ಇವರು ಪೂರ್ವದಲ್ಲಿ ಯಾವ ಪುಣ್ಯವನ್ನೂ ಮಾಡಿಲ್ಲವಲ್ಲ! ಇವರಿಗೆ ಏನು ಕೊಡಲಿ?' ಎಂದು ಕೇಳಿದಳು. 'ತಾಯೆ, ನನಗೆ ಈ ನೆಲ್ಲಿಕಾಯನ್ನು ಕೊಟ್ಟರುತ್ತಾಳಲ್ಲ, ಈ ಪುಣ್ಯಕ್ಕೇನು ಕೊಡುತ್ತೀಯೋ ಕೊಡು' ಎಂದು ಶಂಕರನೆನ್ನಲು ಸಂತುಷ್ಟಳಾದ ದೇವಿಯು ಚಿನ್ನದ ನೆಲ್ಲಿಕಾಯನ್ನು ಆ ಮನೆಯೊಳಗೆಲ್ಲ ಮಳೆಗರೆದು ತುಂಬಿದಳು (ಮಾ. ಶಂ. ೪–೨೧ರಿಂದ ೩೧).

ಈ ಕಥೆಯು ವ್ಯಾಸಾಚಲೀಯಾದಿ ಪೂರ್ವತನಶಂಕರವಿಜಯಗಳಲ್ಲಿ ಕಾಣುವದಿಲ್ಲ. ಆಚಾರ್ಯರ ಹೆಸರಿನಲ್ಲಿ ಪ್ರಸಿದ್ಧವಾಗಿರುವ 'ಕನಕಲಕ್ಷ್ಮೀಸ್ತವ' ಅಥವಾ "ಕನಕಧಾರಾಸ್ತುತಿ" ಎಂಬ ಸ್ತೋತ್ರವನ್ನು ಮನಸ್ಸಿನಲ್ಲಿಟ್ಟು ಕೊಂಡು ಕವಿಯು ಈ ಕಥೆಯನ್ನು ಕಲ್ಪಿಸಿರಬಹುದು. ವಾಚಕರ ಉಪಯೋಗಕ್ಕಾಗಿ ಆ ಸ್ತೋತ್ರವನ್ನು ಅನೆಯ ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ.

(2) ಏಳನೆಯ ವರ್ಷದಲ್ಲಿಯೇ ಆಚಾರ್ಯರು ಗುರುಕುಲವಾಸವನ್ನು ಮುಗಿಯಿಸಿ ಮನೆಗೆ ಬಂದು ತಾಯಿಯ ಶುಶ್ರೂಷೆಯಲ್ಲಿ ನಿರತರಾದರು.[೪] ಮುದುಕಿಯಾದ ಆರ್ಯಾಂಬೆಯು ಒಮ್ಮೆ ನದಿಗೆ ಹೋಗಿ ಬಿಸಿಲಿನಲ್ಲಿ ಬಳಲಿ ನಡೆಯಲಾರದೆ ಇರಲು ಶಂಕರಬಾಲಕನು ತಾಯಿಗೆ ಶೈತ್ಯೋಪಚಾರಗಳನ್ನು ಮಾಡಿ ಸ್ವಜನರ ಸಹಾಯದಿಂದ ಆಕೆಯನ್ನು ಮನೆಗೆ ಕರೆದುಕೊಂಡುಬಂದನು.

ಬಳಿಕ ಆ ನದಿದೇವತೆಯನ್ನು ಭಕ್ತಿಯಿಂದ ಹೃದ್ಯವಾದ ಪದ್ಯಗಳಿಂದ ಸ್ತೋತ್ರಮಾಡಿದಾಗ ಸಂತುಷ್ಟಳಾದ ನದಿಯು 'ನಾಳೆ ಬೆಳಗ್ಗೆ ನಿನ್ನ ಇಷ್ಟಾರ್ಥವು ನೆರವೇರುವದು' ಎಂದು ವರವನ್ನು ಕೊಟ್ಟಳು. ಮಾರನೆಯ ದಿನವೇ ಕೃಷ್ಣಮುಂದಿರವ ಬಳಿಯವರೆಗೂ ನದಿಯು ಹರಿದುಬಂದದ್ದನ್ನು ಕಂಡರು. (ಮಾ. ೫–೫ರಿಂದ ೯) ವ್ಯಾಸಾಚಲೀಯದಲ್ಲಿಯೂ ಈ ಕಥೆಯಿದೆ.

ಅದ್ಯಾಪಿ ಕೇರಳಜರಾಃ ಸಮುದೀರಯಂತಿ ।
ಸ್ರೋತಸ್ವಿನೀ ಬಹುಜಲಾಂ ವಿಧುತೌಘಪೂರ್ಣಾಮ್ ॥
ಅಮ್ಬಾಪಗೇತಿ ಯದಿಯಂ ತನಯೇನ ಮಾತುಃ ।
ಸೌಖ್ಯಾರ್ಥಮಾತ್ಮನಿಲಯಾನ್ತಿಕಗಾಂ ವ್ಯಧತ್ತ ॥ –(ವ್ಯಾ. ಶಂ. ೪–೪೧)

ಈ ನದಿಯನ್ನು ಕೇರಳದವರು ಈಗಲೂ ಆಮ್ಬಾನದೀ (ಆಮ್ಮನಹೊಳೆ) ಎನ್ನುತ್ತಾರೆ ಎಂದಿದೆ. "ಆಮ್ಬಾರ್ಥಂ ಯದಿಯಂ ನೀತಾ ತಟಿನೀ ಸಮ್ಮ ಸಂನಿಧಿಮ್, ಆಮ್ಬಾತರಙ್ಗಿಣೀತ್ಯೇವ ಕಥ್ಯತೇಽದ್ಯಾಪಿ ಸಾ ಖಲು" ಎಂಬ ಶ್ಲೋಕವು ಚಿದ್ವಿಲಾಸೀಯದಲ್ಲಿದೆಯೆಂದೂ ಆಚಾರ್ಯರು ನದಿಯನ್ನು ಸ್ತುತಿಸಿದ 'ಮಹಾಪಗಾಸ್ತವ'ವೆಂಬ ಸ್ತೋತ್ರವೊಂದು ಇದೆಯೆಂದೂ ಸಂಕ್ಷೇಪ ಶಂಕರದಿಗ್ವಿಜಯದ ಆಧಾರದಿಂದ ಒಂದು ಟಿಪ್ಪಣಿಯನ್ನು 'ಭಗವತ್ಪಾದಾಭ್ಯುದಯ'ದ (ಪು. ೨೯) ಟಿಪ್ಪಣಿಯಲ್ಲಿ ಬರೆದಿದೆ, ನಮ್ಮಲ್ಲಿರುವ ಚಿದ್ವಿಲಾಸೀಯದಲ್ಲಿ ನದಿಯನ್ನು ತಿರುಗಿಸಿದ ಪ್ರಸ್ತಾವನೇ ಇಲ್ಲ. ಆದರ ಬದಲು 'ಶಿವಗುರು ಸಾಯುವ ಕಾಲಕ್ಕೆ ಆಚಾರ್ಯರು ಆವನಿಗೆ ಸಾಕ್ಷಾತ್ಕಾರವನ್ನು ಕೊಟ್ಟರು; ಎಲ್ಲೆಲ್ಲಿಯೂ ಶಿವನನ್ನೇ ನೋಡುತ್ತಾ ಶಿವಗುರು ಆತ್ಮನಿಷ್ಠನಾಗಿ ಲೋಕಾಂತರವನ್ನೈದಿದನು' (ಚಿ. ಶಂ. ೮–೩, ೪) ಎಂಬ ಕಥೆಯೊಂದಿದೆ.

(3) ಅತಿಮಾನುಷಚರಿತ್ರನಾದ ಈ ಬಾಲಕನನ್ನು ನೋಡಬೇಕೆಂಬ ಕುತೂಹಲದಿಂದ ಕೇರಳರಾಜನು ತನ್ನ ಮಂತ್ರಿಯಮೂಲಕ ಹೇಳಿಕಳುಹಿಸಲು ಆಚಾರ್ಯರು ತಮ್ಮ ಆಶ್ರಮಧರ್ಮವನ್ನು ಬಿಟ್ಟು ರಾಜನ ದರ್ಶನಕ್ಕೆ ಬರುವದು ಆಗಲಾರದೆಂದು ತಿಳಿಸಿದರೆ. ರಾಜನು ಆಶ್ಚರ್ಯದಿಂದ ಈ ಬ್ರಹ್ಮಚಾರಿಯ ಬಳಿಗೆ ತಾನೇ ಬಂದು ನಮಸ್ಕರಿಸಿ ಹತ್ತುಸಾವಿರ ಚಿನ್ನದ ನಾಣ್ಯಗಳನ್ನು ಸಮರ್ಪಿಸಿ ತಾನು ಮಾಡಿಸಿದ ಮೂರು ನಾಟಕಗಳನ್ನು ತೋರಿಸಿ ನಾಚಾರ್ಯರ ಮೆಚ್ಚಿಕೆಯನ್ನು ಪಡೆದನು; ತನಗೆ ಸದೃಶನಾದ ಪುತ್ರನಾಗಬೇಕೆಂಬ ಅಭೀಷ್ಟವನ್ನು ಸೂಚಿಸಿದನು. ಆಚಾರ್ಯರು 'ಈ ಹಣವನ್ನು ಗೃಹಸ್ಥರಿಗೆ ದಾನ ಮಾಡು, ನಿನ್ನ ಅಭಿಲಾಷೆಯು ನೆರವೇರುವದು' ಎಂದು ಹೇಳಿಕಳುಹಿಸಿದರು. ಎಷ್ಟೋ ಜನ ವೇದಶಾಸ್ತ್ರಜ್ಞರು ಬಂದು ಆಚಾರ್ಯರಿಂದ ಮಹಾದರ್ಶನಗಳನ್ನು ಕಲಿತುಕೊಂಡರು (ಮಾ. ಶಂ. ೫–೧೦ ರಿಂದ ೩೨). ಈ ವೃತ್ತಾಂತವು ಮಿಕ್ಕ ಶಂಕರವಿಜಯಗಳಲ್ಲಿ ಕಾಣುನದಿಲ್ಲ.

ಪ್ರಾಚೀನಶಂಕರವಿಜಯದಲ್ಲಿ

ಇತ್ಯಾಚಾರ್ಯಕುಲಂ ವಿಸೃಜ್ಯ ಜನನೀಮಾಪ್ತಾಷ್ಟಮಾಬ್ದಃ ಸ್ವಯಂ
ಪ್ರಾಪ್ತಃ ಸಂಯಮಿನಂದನಾಖ್ಯಯಾ ವ್ಯರಚಯತ್ತನ್ತ್ರಂ ಕಿಮುಪ್ಯಜ್ಞಸಾ ॥
ಚೂರ್ಣೀಮನ್ತ್ರಿಕಮಾನಿನಾಯ ಜನನೀಧಾಮ್ನಃ ಸ್ವರಾಜಃ ಪ್ರಭೋಃ
ಕಿಂ ವಾ ದುಷ್ಕರಮತ್ರ ಸರ್ವಜಗತೀಜಾಲಕ್ರಿಯಾಶೀಲಿನಃ ॥

—(ಗು. ರ. ೧೧ರ ಸುಷಮಾ)

'ಎಂಟನೆಯ ವರ್ಷವಾಗುತ್ತಲೂ ಆಚಾರ್ಯರು ಮನೆಯನ್ನು ಬಿಟ್ಟು ತಾಯಿಯ ಬಳಿಗೆ ಬಂದು ಸಂನ್ಯಾಸೇಚ್ಛೆಯಿಂದ ಒಂದು ತಂತ್ರವನ್ನು

ಮಾಡಿದರು. **ಚೂರ್ಣೀ**ನದಿಯನ್ನು ತಾಯಿಯ ಮನೆಯ ಹತ್ತಿರಕ್ಕೆ ಕರ ತಂದರು. ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವ ಪ್ರಭುವಿಗೆ ಯಾವದುತಾನೆ ದುಷ್ಕರವು ?" ಎಂದಿದೆ.

ಅಂತೂ ನದಿಯನ್ನು ತಿರುಗಿಸಿದ ಕಥೆಯು ಹಿಂದಿನಿಂದಲೂ ಇದೆಯೆಂದಾ ಯಿತು. ಈಗಲೂ ನದಿಗಳು ಆಗಿಂದಾಗ್ಗೆ ತಮ್ಮ ಪಾತ್ರವನ್ನು ಬದಲಾಯಿಸು ತ್ತಿರುವದು ಕಾಣುತ್ತಲೇ ಇವೆ. ಶಂಕರರು ತಾಯಿಯ ಮನೆಗೆ ಬಂದ ಕಾಲಕ್ಕೆ ಹೀಗೆ ನದಿಯು ಪಾತ್ರವನ್ನು ಬದಲಾಯಿಸಿರಬಹುದು.

ಆಗಸ್ತ್ಯರು ಶಂಕರಶ ಅಯುಸ್ಸನ್ನು ಹೇಳಿದ್ದು

೫೫. ಆಚಾರ್ಯರು ಬಹುದಿವಸ ತಾಯಿಯ ಬಳಿಯಲ್ಲಿರಲಿಲ್ಲ. ಅವರು ಆದಷ್ಟು ಬೇಗನೆ ಸಂನ್ಯಾಸಾಶ್ರಮವನ್ನು ಸ್ವೀಕರಿಸುವದಕ್ಕೆ ಅಭಿಲಾಷೆಯನ್ನು ತೋರಿಸಿದರು. ಈ ಅಭಿಪ್ರಾಯವನ್ನು **ವ್ಯಾಸಾಚಲಸೂ** (ವ್ಯಾ.ಶಂ. ೪–೪೨) **ಮಾಧವನೂ** (ಮಾಂ. ಶಂ. ೫–೩೪) ಒಂದು ಪದ್ಯದಿಂದ ವರ್ಣಿಸಿರುತ್ತಾರೆ ;

ಸಾ ಶಙ್ಕರಸ್ಯ ಶರಣಂ ಸ ಚ ತಜ್ಜನನ್ಯಾ
ಹ್ಯನ್ಯೋನ್ಯಯೋಗವಿರಹಸ್ತ್ವನಯೋರಸಹ್ಯಃ ।
ನೋ ವೋಢುಮಿಚ್ಛತಿ ತಥಾಪ್ಯಮನುಷ್ಯಭಾವಾ–
ನ್ಮೇರುಂ ಗತಃ ಕಿಮುಭವಾಞ್ಛತಿ ದುಷ್ಪ್ರದೇಶಮ್ ॥

"ಶಂಕರನಿಗೆ ಆಕೆಯೇ ಶರಣು, ತಾಯಿಗೆ ಆತನೇ ಶರಣು ; ಅವರು ಒಬ್ಬರನ್ನೊಬ್ಬರು ಅಗಲಿರಲಾರದೆ ಇದ್ದರು. ಆದರೆ ಅಮಾನವಪುರುಷನಾದ ಆತನು ವಿವಾಹವಾಗಲು ಇಚ್ಛಿಸಲಿಲ್ಲ. ಮೇರುಪರ್ವತವನ್ನು ಸೇರಿದವನು ಕೇಳು ಪ್ರದೇಶಕ್ಕೆ ಇಳಿಯಲು ಇಚ್ಛಿಸುವನೆ ?" ಮಾಧವನು ಇದರ ಜೊತೆಗೆ ಬೇರೊಂದು ಕಲ್ಪನೆಯನ್ನೂ ಸೇರಿಸಿಕೊಂಡಿರುತ್ತಾನೆ. ತಾಯಿಯು ಮಗನಿಗೆ ಸತ್ಪುಲಪ್ರಸೂತಳಾದ **ಕನ್ನಿ**ಕೆಯನ್ನು ತಂದು ಮದುವೆಮಾಡಬೇಕೆಂದು ಸೂಚಿಸು ತ್ತಿದ್ದಳು. ಒಮ್ಮೆ **ಉಪಮನ್ಯು, ದಧೀಚಿ, ಗೌತಮ, ತ್ರಿತಲ, ಅಗಸ್ತ್ಯ**– ಮುಂತಾದ ಮುನಿಗಳು ಕಲಿಯುಗದಲ್ಲಿ ಅವತರಿಸಿದ ಶಿವನನ್ನು ನೋಡುವದಕ್ಕೆ ಬಂದರು. ಶಂಕರನು ತಾಯಿಯೊಡನೆ ಅವರನ್ನು ಸತ್ಕರಿಸಿ ಸುಖಾಸನದಲ್ಲಿ ಕುಳ್ಳಿರಿಸಿದನು. ಅವರು ಆತನೊಡನೆ ಪರಮಾರ್ಥವಿಚಾರವನ್ನು ಮಾಡುತ್ತಿರು ವಲ್ಲಿ ತಾಯಿಯು **'ಈ ಅದ್ಭುತಮಹಿಮೆಯ ಬಾಲಕನ ವೃತ್ತಾಂತವನ್ನು ನನಗೆ** ಹೇಳಬಹುದಾದರೆ ತಿಳಿಸಬೇಕು' ಎಂದು ಕೇಳಿದಳು ; ಅವರು ಶಿವಗುರು ಈಶ್ವರನಲ್ಲಿ ಬೇಡಿ ಅಲ್ಪಾಯುಷ್ಕನಾದ ಸರ್ವಜ್ಞಪುತ್ರನನ್ನು ಕೇಳಿಕೊಂಡ ವೃತ್ತಾಂತವನ್ನು ತಿಳಿಸಿದರು. 'ನಿನ್ನ ಭಾಗ್ಯದಿಂದ ಶಿವನೇ ನಿನ್ನ ಮಗನಾಗಿ

ಹುಟ್ಟಿದಾನೆ, ಇನ್ನು ಅವನಿಗಿಂತ ಸರ್ವಜ್ಞನು ಎಲ್ಲಿರುತ್ತಾನೆ? ಎಂದು ಆಗಸ್ತ್ಯರು ಹೇಳಿದರು. 'ಇವನಿಗೆ ಆಯುಸ್ಸು ಎಷ್ಟು?' ಎಂದು ಅಕೆ ಕೇಳಲು ಆಗಸ್ತ್ಯರು 'ಎಂಟೂ ಮೇಲಿಂಟು, ಇವನ ಆಯುಸ್ಸು, ಕಾರಣಾಂತರದಿಂದ ಮತ್ತೂ ಹದಿನಾರು ವರ್ಷಗಳು ಬದುಕಿರುತ್ತಾನೆ' ಎಂದರು. ಋಷಿಗಳು ಹೊರಟುಹೋದರು. ಇದನ್ನು ಕೇಳಿ ಆಕೆಯು ದುಃಖದಿಂದ ಹಲುಬುತ್ತಿರಲು ಶಂಕರರು 'ತಾಯೆ, ಏತಕ್ಕೆ ನಿಷ್ಕಾರಣವಾಗಿ ದುಃಖಪಡುತ್ತಿರುವೆ? ಈ ದೇಹವೇನು ಸ್ಥಿರವೆ? ಇಂಥ ಎಷ್ಟುಜನ ಮಕ್ಕಳನ್ನು ನೀನು ಈವರೆಗೆ ಅನುಭವಿಸಿದ್ದಾಗಿದೆ? ಈಗ ಅವರೆಲ್ಲಿದ್ದಾರೆ? ನೀನೆಲ್ಲಿ, ನಾನೆಲ್ಲಿ? ಸಂಸಾರದಲ್ಲಿ ಜನರು ಕೂಡುವದು ಹಾದಿ ಹೋಕರು ಒಂದು ಕಡೆ ಸೇರಿ ಅಗಲುವಂತೆ. ಆದ್ದರಿಂದ ನಾನು ಚತುರ್ಥಾಶ್ರಮವನ್ನೇ ಸ್ವೀಕಾರಮಾಡಿ ಈ ಸಂಸಾರಬಂಧದಿಂದ ಬಿಡುಗಡೆಯಾಗುವದಕ್ಕೆ ಪ್ರಯತ್ನಿಸುವೆನು' ಎಂದು ಸಮಾಧಾನೋಕ್ತಿಗಳನ್ನು ಹೇಳಿದರು. ಈ ಕರ್ಣಕಠೋರವಾದ ಮಾತನ್ನು ಕೇಳಿ, ಆಕೆಗೆ ಇನ್ನಷ್ಟು ದುಃಖವಾಯಿತು. 'ಅಪ್ಪ, ಈ ಬುದ್ಧಿಯನ್ನು ಬಿಡು. ಮೊದಲು ಗೃಹಸ್ಥನಾಗಿ ಯಜ್ಞಾದಿಗಳನ್ನು ಮಾಡಿ ಆಮೇಲೆ ಯತಿಯಾಗು; ಏಕಪುತ್ರಳಾದ ನಾನು ನಿನ್ನನ್ನು ಬಿಟ್ಟು ಹೇಗೆ ಇರಲಿ? ನೀನೂ ಬಿಟ್ಟುಹೋದರೆ ನನ್ನ ಔರ್ಧ್ವದೇಹಿಕಕರ್ಮವನ್ನು ಮಾಡುವವರು ಯಾರು? ನಿನ್ನ ಹೃದಯವು ಏಕೆ ಕರಗದೆ ಇದೆ? ನನ್ನಲ್ಲಿ ದಯೆಯಿಡು' ಎಂದು ಬಗೆಬಗೆಯಾಗಿ ಹಲುಬಿದಳು. ಅದನ್ನು ಕಂಡು ಶಂಕರರು 'ಸಂನ್ಯಾಸಕ್ಕೆ ತಾಯಿಯ ಅನುಜ್ಞೆಯೇನೋ ಬೇಕು. ಇದಕ್ಕೇನುಮಾಡಲಿ?' ಎಂದು ಯೋಚಿಸುವದಕ್ಕೆ ತೊಡಗಿದರು (ಮಾ. ಶಂ. ೫–೩೬ರಿಂದ ೫೯).

ಈ ವಿವರವು ವ್ಯಾಸಾಚಲೀಯದಲ್ಲಾಗಲಿ, ಚಿದ್ವಿಲಾಸೀಯದಲ್ಲಾಗಲಿ ಇಲ್ಲ. ಇಲ್ಲಿ ಪರಿಶೀಲಿಸಿ ನೋಡಬೇಕಾದ ವಿಷಯಗಳು ಯಾವವೆಂಕರೆ :

(೧) ಶಂಕರರಿಗೆ ಬೇಗನೆ ವಿವಾಹಮಾಡಿಬಿಡಬೇಕೆಂದು ತಾಯಿ ಯೋಚಿಸಿಕೊಂಡಳು ಎಂಬ ಮಾತು ಕೇರಳೀಯರ ಆಚಾರಕ್ಕೆ ವಿರುದ್ಧವಾಗಿದೆ. ಏಕೆಂದರೆ ಆ ದೇಶದಲ್ಲಿ ಬಾಲವಿವಾಹದ ಪದ್ಧತಿಯೇ ಇಲ್ಲ. ವಿದ್ಯಾಧಿರಾಜನ ಮಗನಾದ ಶಿವಗುರುವು ಗುರುಕುಲವಾಸವನ್ನು ಮುಗಿಸಿಕೊಂಡು ಹಿಂತಿರುಗುವ ಸಮಯದಲ್ಲಿ ಗುರುವು 'ನೀನು ಹೋಗಿ ಮದುವೆಮಾಡಿಕೊಂಡು ನಿನ್ನ ತಂದೆತಾಯಿಗಳ ಅಭಿಲಾಷೆಯನ್ನು ಪರಿಪೂರ್ತಿಮಾಡು' ಎಂದು (ಮಾ. ಶಂ. ೨–೮ರಿಂದ ೧೪) ಹೇಳಿದಾಗ ಶಿವಗುರುವು ಸಂನ್ಯಾಸಾಶ್ರಮವನ್ನು ತೆಗೆದುಕೊಳ್ಳುವ ಕುತೂಹಲವನ್ನು ತೋರಿಸಿದನೆಂದು ಕವಿಯು ಹೀಗೆಯೇ ವರ್ಣಿಸುತ್ತಾನೆ. ಮುತ್ತೆ ಶಿವಗುರುವು ಮನೆಗೆ ಬರುತ್ತಲೂ ಅನೇಕರು ನಾನು ಮುಂದು, ತಾನು ಮುಂದೆಂದು ಕನ್ಯಾದಾನಕ್ಕೆ ಹಾತುವರಿದರೆಂದು ಹೇಳಿ ಶಿವಗುರುವಿನ ವಿವಾಹಕ್ಕೆ (ಮಾ. ಶಂ. ೨.೩೭

ರಿಂದ ೩೨) ಅವತರಣಿಕೆಯನ್ನು ಹಾಕಿರುತ್ತಾನೆ. ಈ ವಿವರವು ವ್ಯಾಸಾಚಲೀಯದಲ್ಲಿಯೂ ಇದೆ. ಇವರಿಬ್ಬರೂ ಕೇರಳೀಯರು ಪದ್ಧತಿಯನ್ನೇಕೆ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲವೆಂಬುದು ಗೊತ್ತಾಗುವಂತಿಲ್ಲ. ಆಚಾರ್ಯರ ವಿವಾಹವನ್ನು ಶಿವಗುರುವೇ ಯೋಚನೆಮಾಡಿದ್ದನೆಂದೂ ಆಚಾರ್ಯರು 'ಆಯ್ಯೋ! ನನ್ನ ತತ್ತ್ವವು ಇವನಿಗೆ ತಿಳಿಯದು; ನನ್ನ ಆಯುಸ್ಸು ಸ್ವಲ್ಪವೇ ಉಳಿದಿದೆ ಎಂಬುದೂ ತಿಳಿಯದಲ್ಲ! ಏನುಮಾಡಲಿ!' ಎಂದು ಯೋಚಿಸಿಕೊಂಡರು' (ಚಿ.ಶಂ. ೭–೩೫ರಿಂದ ೪೬) ಎಂದು ಚಿದ್ವಿಲಾಸೀಯದಲ್ಲಿ ಬರೆದಿರುವದು ಇನ್ನೂ ಸಾಹಸ. ಏಕೆಂದರೆ ಆಗ ಆವರಿಗೆ ಇನ್ನೂ ಐದು ವರ್ಷವಾಗಿತ್ತು !

(೨) ಋಷಿಗಳು ಬಂದಾಗ 'ಇವನ ಆಯುಸ್ಸು ಎಷ್ಟು ?'– ಎಂದು ತಾಯಿಯು ಕೇಳಿದಂತೆ ಮಾಧವನು ವರ್ಣಿಸಿರುತ್ತಾನೆ. ಆದರೆ ಮಗು ಹುಟ್ಟಿದಾಗ ಶಿವಗುರು ಜಾತಕವನ್ನು ಬರೆದು ಜ್ಯೋತಿಷ್ಕರನ್ನು ಆಯುಸ್ಸಿನ ವಿಚಾರದಲ್ಲಿ ಕೇಳಲೂ ಇಲ್ಲ, ಅವರು ಹೇಳಲೂ ಇಲ್ಲ; ಅಶುಭವಾದದ್ದನ್ನು ತಿಳಿದರೂ ಬಲ್ಲವರು ಪ್ರಾಯಶಃ ಹೇಳುವದಿಲ್ಲ (ನಾಪೃಚ್ಛಿ ಜೀವಿತಮನೇನ ಚ ತೈರ್ನ ಜೋಕ್ತಂ ಪ್ರಾಯೋ ವಿದನ್ನಪಿ ನ ವಕ್ತ್ಯಶುಭಂ ಶುಭಜ್ಞಃ ॥ ಮಾ.ಶಂ. ೨–೮೦, ವ್ಯಾ.ಶಂ. ೪–೨೬) ಎಂದು ಮಾಧವವ್ಯಾಸಾಚಲರಿಬ್ಬರೂ ಹೇಳಿರುತ್ತಾರೆ. ಅದ್ಭುತಕಥಾಪ್ರಿಯನಾದ ಮಾಧವನು ತಾಯಿಯು ಅಗಸ್ತ್ಯರನ್ನು ಮಗುವಿನ ಆಯುಸ್ಸನ್ನು ಕೇಳಿದಳೆಂದು ಇಲ್ಲಿ ಬರೆದವನು ಹಿಂದೆ ಏಕೆ ಜೋಯಿಸರನ್ನು ಕೇಳಿರಲಿಲ್ಲವೆಂಬುದನ್ನು ತಿಳಿಸಲಿಲ್ಲ.

ಆತುರಸಂನ್ಯಾಸದ ಸಂದರ್ಭ

೫೬. ಶಂಕರರು ಒಮ್ಮೆ ಸ್ನಾನಕ್ಕಾಗಿ ಹೋಗಿ ನೀರಿನಲ್ಲಿ ಮುಳುಗುವ ಹೊತ್ತಿಗೆ ಒಂದು ಮೊಸಳೆ ಅವರ ಕಾಲನ್ನು ಹಿಡಿದುಕೊಂಡಿತು. ಆಗ ಹುಡುಗನು 'ಅಮ್ಮ, ಮೊಸಳೆ ಕಾಲನ್ನು ಎಳೆಯುತ್ತಿದೆ' ಎಂದು ಗಟ್ಟಿಯಾಗಿ ಕಿರಿಚಿಕೊಂಡನು. ಮನೆಯಲ್ಲಿದ್ದ ತಾಯಿ ಮಗನ ಆರ್ತಧ್ವನಿಯನ್ನು ಕೇಳಿ ಓಡಿಬಂದು ಎಲ್ಲವನ್ನೂ ತಿಳಿದು 'ಆಯ್ಯೋ! ನನಗೆ ಕೊನೆಯ ಗತಿಯಾಗಿರುವ ಈ ಏಕಪುತ್ರನು ಸಾಯುತ್ತಾನಲ್ಲ!' ಎಂದು ಚಿಂತಿಸುತ್ತಿದ್ದಳು. 'ಅಮ್ಮ, ನೀನು ನನ್ನ ಸಂನ್ಯಾಸಕ್ಕೆ ಅನುಮತಿಕೊಟ್ಟರೆ ಈ ಪ್ರಾಣಿ ನನ್ನನ್ನು ಬಿಟ್ಟರೂ ಬಿಟ್ಟೀತು. ನೀನು ಅಪ್ಪಣೆ ಕೊಡುವದಾದರೆ ಸಂನ್ಯಾಸಸಂಕಲ್ಪವನ್ನು ಮಾಡುವೆನು' ಎಂದರು. ಆಗ ಇವನು ಹೇಗೂ ಸಾಯುತ್ತಾನೆ; ಒಂದುವೇಳೆ ಹೀಗೆ ಬದುಕಿದರೆ ಎಂದಾದರೂ ನನಗೆ ಇವನ ದರ್ಶನವಾದರೂ ಆಗಬಹುದು' ಎಂದು ಯೋಚಿಸಿಕೊಂಡು ಸಂಕಲ್ಪಕ್ಕೆ ಅನುಮತಿಯನ್ನು ಕೊಟ್ಟಳು' (ಮಾ.ಶಂ. ೫–೬೧ರಿಂದ ೬೭, ವ್ಯಾ.ಶಂ. ೪–೪೪ರಿಂದ ೪೮) ಎಂದು ಮಾಧವೀಯವ್ಯಾಸಾಚಲೀಯಗಳಲ್ಲಿ ವರ್ಣಿಸಿದೆ.

ಚಿದ್ವಿಲಾಸೀಯದಲ್ಲಿ ಕಥೆಯು ಹೀಗೆಯೇ ಇದೆ. ಆದರೆ ಆಚಾರ್ಯರು ಸಂನ್ಯಾಸಸಂಕಲ್ಪವನ್ನು ಮಾಡಿದಕೂಡಲೆ ಮೊಸಳೆಯು ಶಂಕರರನ್ನು ಬಿಟ್ಟು ಗಂಧರ್ವಾಕಾರವನ್ನು ಧರಿಸಿ ಅವರನ್ನು ನಮಸ್ಕರಿಸಿ 'ನಾನು ಪುಷ್ಪರಥನೆಂಬ ಗಂಧರ್ವನು. ಬ್ರಹ್ಮನ ಆಜ್ಞೆಯನ್ನು ಉಲ್ಲಂಘಿಸಿದ ಕಾರಣದಿಂದ ಆತನು ಮೊಸಳೆಯಾಗೆಂದು ಶಪಿಸಿದನು. ಮತ್ತೆ ನಾನು ಅವನನ್ನು ಬಹುನಾಗಿ ಪ್ರಾರ್ಥಿಸಿ ಕೊಂಡಕೂಡಲೆ 'ಶಿವನು ಶಂಕರಾಚಾರ್ಯನಾಗಿ ಅವತರಿಸುತ್ತಾನೆ; ಆತನ ಪಾದ ಧೂಳಿಯ ಸೋಂಕಿನಿಂದ ನಿನಗೆ ಶಾಪವೋಕ್ಷವಾಗುವದು' ಎಂದು ಹೇಳಿದ್ದನು. ಆದರಂತೆ ಈ ದಿನ ತಮ್ಮ ಅನುಗ್ರಹದಿಂದ ನಾನು ಕೃತಾರ್ಥನಾದೆನು; ಅನುಜ್ಞೆಯನ್ನು ಕೊಟ್ಟರೆ ಸ್ವರ್ಗಕ್ಕೆ ಹೋಗುವೆನು ಎಂದು ಹೇಳಿ ಹೊರಟುಹೋದನು. ದಡದಲ್ಲಿ ನಿಂತಿದ್ದ ಆರ್ಯಾಂಬೆಗೆ ಇದನ್ನೆಲ್ಲ ನೋಡಿ ಆಶ್ಚರ್ಯವೂ ಸಂತೋಷವೂ ಆಯಿತು; ಆಕೆಯು ಯಾವ ಮಾತನ್ನೂ ಆಡಲಾರದೆ ಇದ್ದಳು– ಎಂದು (ಚಿ. ಶಂ. ೮–೨೨ರಿಂದ ೩೨) ಹೆಚ್ಚಿಗೆಯ ವಿಷಯವೊಂದನ್ನು ತಿಳಿಸಿದೆ. ಈ ವಿಚಾರವು ಚಿದ್ವಿಲಾಸರ ಕಲ್ಪನೆಯಲ್ಲ, ಹಿಂದಿನವರೇ ಹೀಗೆಂದು ಆಗಲೆ ಹೇಳಿದ್ದರು. **ಪ್ರಾಚೀನಶಂಕರವಿಜಯಕಾರರು** ಹಿಂದೆ (ಪು. ೫೯) ನಾವು ಉದಾಹರಿಸಿದ ಶ್ಲೋಕದಲ್ಲಿ 'ಸಂಯಮುವಾಞ್ಛಯಾ ವ್ಯರಚಯತ್ತನ್ತ್ರಂ ಕಿಮುವ್ಯಞ್ಜಸಾ' ಸಂನ್ಯಾಸೇಚ್ಛೆಯಿಂದ ಒಂದಾನೊಂದು ಸರಿಯಾದ ತಂತ್ರವನ್ನು ಹೂಡಿದರು– ಎಂದು ಹೇಳಿದ್ದಾರಷ್ಟೆ? ಅಲ್ಲಿ ಅವರು ಆದರ ವಿವರವನ್ನು ಮತ್ತೊಂದು ಶ್ಲೋಕದಲ್ಲಿ ಹೀಗೆ ಕೊಟ್ಟಿರುತ್ತಾರೆ:

ಸ್ನಾನಾಯೇವ ಗತೋಽವಗಾಹನವಿಧೌ ಗ್ರಾಹಗ್ರಹಾರ್ತಿಂ ಪದೇ
ಮಾತ್ರೇ ಕಾಞ್ಚಿದಪೋಪದರ್ಶ್ಯ ಮಧುರಂ ಲಬ್ಧ್ವಾಽಭ್ಯನುಜ್ಞಾಂ ತತಃ ॥
ಪ್ರೈಷೋಚ್ಚಾರಣಪೂರ್ವಕಂ ಸನಿಯಮುಂ ಜಗ್ರಾಹ ದೃಷ್ಟ್ವಾನ್ತರೋ
ನಕ್ರಃ ಸೋಽಪ್ಯಮುಚತ್ (?) ಸ್ವಶಾಪವಿಕೃತಿಂ ಪಾದಾವಮರ್ಶಾತ್ಪ್ರಭೋಃ ॥

ಸ್ನಾನಕ್ಕೋ ಎಂಬಂತೆ ಹೋಗಿ ಮುಳುಗುತ್ತಿರುವಲ್ಲಿ ಮೊಸಳೆಯು ಕಾಲು ಹಿಡಿದ ಸಂಕಟವೊಂದನ್ನು ತಾಯಿಗೆ ತೋರಿಸಿ ಆಕೆಯ ಅನುಜ್ಞೆಯನ್ನು ಮಧುರವಾಗಿಯೇ ಪಡೆದು ಆದೇ ಸಂಧಿಯನ್ನು ಪಯೋಗಿಸಿಕೊಂಡು ಪ್ರೈಷೋಚ್ಚಾರ ಪೂರ್ವಕವಾಗಿ ಸಂನ್ಯಾಸವನ್ನು ಗ್ರಹಣಮಾಡಿದರು. ಮೊಸಳೆಯೂ ಆ ಪ್ರಭುವಿನ ಪಾದಸ್ಪರ್ಶದಿಂದ ಶಾಪದಿಂದಾಗಿದ್ದ ತನ್ನ ವೇಷವನ್ನು ಬಿಟ್ಟಿತು– ಎಂದು ಶ್ಲೋಕದ ಅರ್ಥ.

ಪೂರ್ಣಾ–ಅಥವಾ ಚೂರ್ಣೀ–ನದಿಯಲ್ಲಿ ಮೊಸಳೆಗಳಿರುವದೇನೋ ನಿಜ. ಶೃಂಗೇರಿಯ ಜಗದ್ಗುರು **ಶ್ರೀಸಚ್ಚಿದಾನಂದಶಿವಾಭಿನವನೃಸಿಂಹ ಭಾರತೀಸ್ವಾಮಿಗಳವರಿಂದ** ಕಾಲಟಿಯಲ್ಲಿ ಶಂಕರಪ್ರತಿಷ್ಠೆಯಾದ ಕಾಲಕ್ಕೆ ಈ

ಗ್ರಂಥಕರ್ತನೂ ಅಲ್ಲಿಗೆ ಹೋಗಿದ್ದನು. ಬೇಸಗೆಯ ಕಾಲವಾಗಿದ್ದರೂ ಆಗಲೂ ಪೂರ್ಣಾನದಿಯಲ್ಲಿ ದೋಣಿಗಳು ಓಡಾಡುತ್ತಿದ್ದವು. ಶಿವಗಂಗಾಮಠದ ಸ್ವಾಮಿಗಳ ಬೋಯಿಯೊಬ್ಬನನ್ನು ಮೊಸಳೆ ಹಿಡಿಯಿತೆಂಬ ಸುದ್ದಿ ಹುಟ್ಟಿ ಜನರಲ್ಲಿ ಕಲಕಲವೆದ್ದದ್ದನ್ನು ಪ್ರತ್ಯಕ್ಷವಾಗಿ ಕಂಡದ್ದಾಯಿತು. ಆದ್ದರಿಂದ ಶಂಕರರ ಕಾಲನ್ನು ಮೊಸಳೆ ಹಿಡಿದದ್ದು ಅಸಂಭವವಲ್ಲ. ಅವರು ಇನ್ನೂ ಎಂಟನೆಯ ವರ್ಷದವರಾಗಿದ್ದಾಗಲೆ ಈ ಘಟನೆಯು ನಡೆಯಿತೆಂಬುದಕ್ಕೆ ಎಲ್ಲಾ ಶಂಕರವಿಜಯಗಳ ಸಂಮತಿಯೂ ಇದೆ. ವಿರಕ್ತರಾದವರು ಬ್ರಹ್ಮಚರ್ಯದಿಂದಲೇ ಪಾರಿವ್ರಾಜ್ಯವನ್ನು ಸ್ವೀಕರಿಸಬಹುದೆಂಬುದಕ್ಕೆ ಜಾಬಾಲಶ್ರುತಿಯ ಪ್ರಾಮಾಣ್ಯವನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಅನೇಕ ಕಡೆಗಳಲ್ಲಿ ಉದಾಹರಿಸಿಯೂ ಇರುತ್ತಾರೆ. ಆ ಮಹಾನುಭಾವರಿಗೆ ಬ್ರಹ್ಮಚರ್ಯದಲ್ಲಿಯೇ ಅಂಥ ವೈರಾಗ್ಯವು ಬಂತೆಂಬುದೂ ಅಪೂರ್ವಘಟನೆಯಲ್ಲ. ಅದು ಎಲ್ಲರಿಗೂ ಸಾಮಾನ್ಯವಾಗಿ ಬರತಕ್ಕದ್ದಲ್ಲವೆಂಬುದೇನೋ ನಿಜ.

ಸಂನ್ಯಾಸಾಶ್ರಮವಿಷಯಕ್ಕೆ ಶಂಕಾಸಮಾಧಾನಗಳು

೫೭. ಸಂನ್ಯಾಸಾಶ್ರಮವು ಶಾಸ್ತ್ರವಿಹಿತವೆ? ಶಾಸ್ತ್ರವಿಹಿತವಾದರೂ ಕಲಿವರ್ಜ್ಯವಂದು ಕೆಲವು ಸ್ಮೃತಿಗಳಲ್ಲಿ ಹೇಳಿಲ್ಲವೆ? ಒಂದು ವೇಳೆ ಅದು ಶಾಸ್ತ್ರಸಂಮತವೆಂದು ಹೇಗೋ ಸಾಧಿಸಿದರೂ ಈಗಿನ ಕಾಲದ ದೃಷ್ಟಿಯಿಂದ ಪರಿಶೀಲಿಸಿದರೆ ವ್ಯವಹಾರದಲ್ಲಿ ತೊಡಗಿ ಲೋಕೋದ್ಧಾರವನ್ನು ಮಾಡುವದನ್ನು ಬಿಟ್ಟು ಪ್ರಪಂಚವ್ಯವಹಾರಕ್ಕೆ ಅಂಜಿ ಕರ್ಮಸಂನ್ಯಾಸವನ್ನು ಮಾಡಿ ಭಿಕ್ಷಾಚರ್ಯೆಗೆ ಪ್ರೋತ್ಸಾಹವನ್ನು ಕೊಡುವದು ಸಾಮಾಜಿಕನೀತಿಗೆ ಒಪ್ಪಾದೀತೆ? ಸಾಧು ಸಂನ್ಯಾಸಿಗಳೆಂಬ ಹೆಸರಿನಿಂದ ಸೋಮಾರಿಗಳು ಹೆಚ್ಚುವ ಸಮಾಜದಲ್ಲಿ ಆಭ್ಯುದಯಕ್ಕೆ ಕುಂದು ಬರುವದಿಲ್ಲವೆ? ಇನ್ನೂ ವಿವೇಕವು ಬಲಿತುಕೊಳ್ಳದಿರುವ ಬಾಲ್ಯದಲ್ಲಿಯೇ ಸಂನ್ಯಾಸವನ್ನು ಗ್ರಹಣಮಾಡುವ ಪದ್ಧತಿಯು ಒಪ್ಪತಕ್ಕದ್ದೆ?—ಎಂದು ಮುಂತಾದ ಎಷ್ಟೋ ಶಂಕೆಗಳು ಈ ಸಂದರ್ಭದಲ್ಲಿ ಓದುಗರ ಮನದಲ್ಲಿ ಮೊಳೆತುಕೊಳ್ಳುವದು ಸ್ವಾಭಾವಿಕವಾಗಿದೆ. ಇದಕ್ಕೆಲ್ಲ ವಿವರವಾಗಿ ಉತ್ತರವನ್ನು ಕೊಡುವದು ಪ್ರಕೃತಗ್ರಂಥಕ್ಕೆ ಸಂಬಂಧಿಸಿದ್ದಲ್ಲವಾದರೂ ಈ ವಿಷಯದಲ್ಲಿ ನಮ್ಮ ಅಭಿಪ್ರಾಯದ ರೂಪರೇಖೆಯನ್ನಾದರೂ ಇಲ್ಲಿ ಸ್ವಲ್ಪಮಟ್ಟಿಗೆ ಒಪ್ಪಿಸುವದು ಅವಶ್ಯವೆಂದು ತೋರಿದ್ದರಿಂದ ಈ ಶಂಕೆಗಳನ್ನು ಇಲ್ಲಿ ಪರಾಮರ್ಶಿಸಿರುತ್ತೇವೆ.

ಸಂನ್ಯಾಸಾಶ್ರಮವು ಶಾಸ್ತ್ರವಿಹಿತವೆ? ಕಲಿವರ್ಜ್ಯವಲ್ಲವೆ? ಎಂಬ ಪ್ರಶ್ನೆಗಳನ್ನು ಮುಂದೆ ಶಂಕರಮಂಡನಮಿಶ್ರಸಂವಾದದ ಪ್ರಕರಣದಲ್ಲಿ ಚರ್ಚಿಸುವೆವು. ಅದು ಶಾಸ್ತ್ರಸಂಮತವೆಂಬುದೇ ನಮ್ಮ ಅಭಿಪ್ರಾಯವೆಂಬುದಷ್ಟನ್ನು ಈಗ್ಗೆ

ಹೇಳಿಟ್ಟಿರುತ್ತೇವೆ. ಪ್ರಪಂಚವ್ಯವಹಾರಕ್ಕೆ ಅಂಜಿಕೊಂಡು ಸಂನ್ಯಾಸವಾಡ ಬಹುದೆ ?—ಎಂಬ ಪ್ರಶ್ನೆಗೆ ನಮ್ಮ ಉತ್ತರವಿದು. ಪ್ರಪಂಚವ ವ್ಯವಹಾರವೆಂದು ನಾವು ನಂಬಿಕೊಂಡಿರುವದಕ್ಕಿಂತಲೂ ಉತ್ತಮವಾದ ವ್ಯವಹಾರವೊಂದಿದ್ದರೆ ಈ ಸಂಸಾರವ್ಯವಹಾರದ ನಿಃಸಾರತೆಯನ್ನು ಕಂಡವರು ಇದನ್ನು ತ್ಯಜಿಸಿಯೇ ತೀರುವರು. ತಮ್ಮ ವರ್ತನೆಯು ಮಿಕ್ಕವರಿಗೆ ಒಪ್ಪಾಗಲಿ ಬಿಡಲಿ, ವಿರಕ್ತರಾದವರು ಮಿಕ್ಕವರ ಒಪ್ಪಿಗೆಯನ್ನು ಕಾಯುತ್ತಾ ತಮ್ಮ ಧ್ಯೇಯವನ್ನು ಎಂದಿಗೂ ಕಡೆಗಣಿಸಲಾತರೆಂಬುದು ಸ್ಪಷ್ಟವಾಗಿದೆ.

ಲೋಕೋದ್ಧಾರದ ವಿಷಯವನ್ನು ಮನಸ್ಸಿಗೆ ತಂದುಕೊಳ್ಳದೆ, ತಮ್ಮ ತನ್ನ ಕುಟುಂಬದ ಪೋಷಣೆಯ ಯೋಜನೆಯಲ್ಲಿಯೇ ಮುಗ್ನರಾಗಿರುವವರಿಗಿಂತ ವಿರಕ್ತರಾಗಿ "ವಸುಧೈವ ಕುಟುಂಬಕಮ್" ಭೂಮಂಡಲದವರೆಲ್ಲ ನಮ್ಮ ಕುಟುಂಬದವರೇ ಎಂಬ ಉದಾರಚರಿತರಿಗೇ ಲೋಕೋಪಕಾರವನ್ನು ಮಾಡುವದಕ್ಕೆ ಹೆಚ್ಚು ಅವಕಾಶವಿರುತ್ತದೆ ಎಂಬುದನ್ನು ವಿಚಾರಶೀಲರೆಲ್ಲರೂ ಒಪ್ಪುವರು. ಧನಸಂಪಾದನೆಯನ್ನು ಮಾಡುವದನ್ನು ಬಿಟ್ಟು ಭಿಕ್ಷಾಚರ್ಯೆಗೆ ಪ್ರೋತ್ಸಾಹವನ್ನು ಕೊಡಬಹುದೆ ?— ಎಂಬ ಆಕ್ಷೇಪವು ಸಂಸಾರದಲ್ಲಿ ವಿರಕ್ತರಾದವರಿಗೆ ಸರ್ವಥಾ ಅನ್ವಯಿಸತಕ್ಕದ್ದಲ್ಲ. ಯಾರು ಸ್ವಾರ್ಥವನ್ನು ಸ್ವಲ್ಪವೂ ಲೆಕ್ಕಿಸದೆ ಸಮಾಜದ ಹಿತಕ್ಕಾಗಿಯೇ ದುಡಿಯುತ್ತಿರುವರೋ ಅಂಥವರು ಭಿಕ್ಷಾಮಾತ್ರದಿಂದ ಜೀವನವಮಾಡುತ್ತಿದ್ದರೆ ಅಷ್ಟನ್ನಾದರೂ ಅವರಿಗೆ ಒದಗಿಸಿಕೊಡುವದು ಸಮಾಜದ ಕರ್ತವ್ಯವೇ ಆಗಿರುತ್ತದೆ. ಅಂಥ ಮಹನೀಯರು ಭಿಕ್ಷಾಚರ್ಯೆಯು ಅನಾಯಾಸದ ವೃತ್ತಿಯಿಂದೇನೂ ಅವನ್ನು ಅನುಸರಿಸಿರುವದಿಲ್ಲ. ಭಿಕ್ಷೆಯು ಸಿಕ್ಕಲಿ, ಸಿಕ್ಕದಿರಲಿ, ನಾಲಗೆಯ ಸಖಿಗೆ ಜೋಲುಬೀಳದೆ ಸಿಕ್ಕಿದಷ್ಟು ಅಲ್ಪ ಆಹಾರದಿಂದಲೇ ತೃಪ್ತರಾಗಿ ತಮ್ಮ ಉದಾತ್ತಧ್ಯೇಯವನ್ನೇ ಚಿಂತಿಸುತ್ತಾ ಜನರನ್ನು ಸರಿಯಾದ ಮಾರ್ಗಕ್ಕೆ ತರುವದಕ್ಕೆ ಹವಣಿಸುವವರನ್ನು ಭಿಕ್ಷಾವೃತ್ತಿಯ ಪ್ರೋತ್ಸಾಹಕರೆಂದು ಭಾವಿಸುವದಕ್ಕೇಕೂ ಕಾರಣವಿರುವದಿಲ್ಲ. ಲೋಕದೃಷ್ಟಿಯಿಂದ ಮತ್ತೊಬ್ಬರಿಗೆ ಯಾವ ಐಹಿಕಪ್ರಯೋಜನಗಳನ್ನೂ ಉಂಟುಮಾಡದೆ ಇದ್ದರೂ ಏಕಾಂತವಾಸವನ್ನು ಮಾಡುತ್ತಾ ಪರಮಪುರುಷಾರ್ಥಕ್ಕೆಂದೇ ಜೀವನವನ್ನು ವಿನಿಯೋಗಿಸುವವರುಕೂಡ ತಮ್ಮ ಶಾಂತಿದಾಂತಿ ಮುಂತಾದವುಗಳಿಂದಲೇ ಲೋಕಕ್ಕೆ ಮೇಲುಪಜ್ಞ್ಞಾಯಾಗಿರುವದರಿಂದ ಅಂಥವರನ್ನು ಭಿಕ್ಷಾವೃತ್ತಿಯ ಪ್ರೋತ್ಸಾಹಕರೆಂದು ಹಳಿಯುವದು ಎಂದಿಗೂ ಯುಕ್ತವೆನಿಸಲಾರದು. ಇನ್ನು ಪರಮಾರ್ಥಕ್ಕೇ ಜೀವನವನ್ನು ಧಾರೆಯೆರೆದಿರುವ ಮಹಾತ್ಮರ ಮನಸ್ಸಿನ ಮಟ್ಟವನ್ನು ಅರಿತುಕೊಳ್ಳಲಾರದೆ ಅವರ ಬಾಹ್ಯವೇಷವೃತ್ತ್ಯಾದಿಗಳನ್ನು ಮಾತ್ರ ಅನುಕರಿಸುವ ಸಾಧುಸಂನ್ಯಾಸಿಗಳು ಹೆಚ್ಚುವದು ಸಮಾಜಕ್ಕೆ ಒಳ್ಳೆಯದಲ್ಲವೆಂಬ ಮಾತಿಗೆ ಎರಡಿಲ್ಲ. ಬರಿಯ ವೇಷದ ಕಪಟಸಾಧುಸಂತರಿಗೆ ಗೌರವ

ವನ್ನು ಕೊಡದೆ ಇರುವದೇ ಸಮಾಜದ ಕರ್ತವ್ಯವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಸಮಾಜವು ತನ್ನುನ್ನು ಅನಾದರದಿಂದ ಕಾಣುತ್ತಿದೆ ಎಂಬುದನ್ನು ಕಂಡಕೂಡಲೆ ಅಂಥವನು ಅವಶ್ಯವಾಗಿ ತನ್ನು ವೇಷವನ್ನು ಬದಲಿಸಬೇಕಾಗುವದು. ಸರಕಾರದವರು ಜನರಿಗೆ ಸರಿಯಾದ ಜೀವನಮಾರ್ಗವನ್ನು ಕಲ್ಪಿಸಿ ಅವರವರ ಯೋಗ್ಯತೆಗೆ ತಕ್ಕಂತೆ ಕಾಯಿಕಮಾನಸಿಕರೂಪದ ಉದ್ಯೋಗಗಳನ್ನು ಏರ್ಪಡಿಸಿಕೊಟ್ಟರೆ ವೇಷದ ಸಾಧುಗಳ ಸಂಖ್ಯೆ ಅವಶ್ಯವಾಗಿ ಕಡಿಮೆಯಾಗುವದು ಅನಧಿಕಾರಿಗಳು ಸಂನ್ಯಾಸವನ್ನು ಸ್ವೀಕರಿಸಿದರೆ ಅವರನ್ನು ದಂಡಿಸಿ ಬಿಟ್ಟಯ ಕೆಲಸಕ್ಕೆ ರಾಜನು ವಿನಿಯೋಗಿಸಬೇಕೆಂದು ನಮ್ಮ ಸ್ಮೃತಿಗಳಲ್ಲಿಯೂ ಹೇಳಿರುತ್ತದೆ. ಆದ್ದರಿಂದ ಸೋಮಾರಿಗಳ ಸಂಖ್ಯೆ ಬೆಳೆಯದಂತೆ ನೋಡಿಕೊಳ್ಳುವ ಭಾರವು ತಮ್ಮ ತಲೆಯಮೇಲೆ ಬಿದ್ದಿದೆ ಎಂಬುದನ್ನು ಮರೆತು ನಿಜವಾದ ವಿರಕ್ತರಾದ ಸಾಧುಸಂನ್ಯಾಸಿಗಳನ್ನು ಹೀಯಾಳಿಸುವದೂ ಅವರ ವರ್ತನೆಗೆ ಅನುಕೂಲ್ಯಗಳನ್ನು ಕಲ್ಪಿಸಿಕೊಡನೆ ಇರುವದೂ ಸಮಾಜಕ್ಕೂ ಸರಕಾರಕ್ಕೂ ಪಾಪಸಂಘಟನೆಗೇ ಕಾರಣವಾಗುವದು.

ಈಗ ಬಾಲ್ಯಸಂನ್ಯಾಸದ ವಿಚಾರ. ಸಂನ್ಯಾಸವೆಂದರೆ ವಿರಕ್ತಿಯಿಂದ ಮಾಡತಕ್ಕ ಕೃತಿವಿಶೇಷವಾದ್ದರಿಂದ ಅದನ್ನು ಯಾವಾಗ ಮಾಡಬೇಕು ಎಂಬುದನ್ನು ವಿಧಿಸುವದಕ್ಕೆ ಬರುವದಿಲ್ಲ. "ಎಂದು ವಿರಕ್ತಿಯಾಗುವದೋ ಆಂದೇ ಮನೆಯನ್ನು ಬಿಟ್ಟು ಹೊರಡಬೇಕು" ಎಂದು ಶ್ರುತಿ ಹೇಳುತ್ತಿದೆ. ಆದ್ದರಿಂದ ವಿರಕ್ತರಾದ ಬಾಲಬ್ರಹ್ಮಚಾರಿಗಳೂ ಪಾರಿವ್ರಾಜ್ಯವನ್ನು ಪಡೆಯುವದು ಅಶಾಸ್ತ್ರೀಯವಲ್ಲ. ಆದರೆ ಕೇವಲ ಅಸ್ಖಲಿತವೀರ್ಯರೆಂಬ ಕಾರಣದಿಂದ ಏನೂ ಅರಿಯದ ಹುಡುಗರನ್ನು ಸಂನ್ಯಾಸಿಗಳಾಗಿ ಮಾಡುವದು ಶಾಸ್ತ್ರೀಯವಲ್ಲವೆಂದೇ ನಮಗೆ ತೋರುತ್ತಿದೆ. ಇದನ್ನು ಯುಕ್ತಾಯುಕ್ತವಿಮರ್ಶನನಿಚಕ್ಷಣರಾದವರು ಪರಿಶೀಲಿಸಿ ನಿರ್ಣಯಿಸಬೇಕು.

ಈ ಚರ್ಚೆಯನ್ನು ಇಷ್ಟು ಸಂಗ್ರಹವಾಗಿಯಾದರೂ ನಾವು ಇಲ್ಲಿ ಮಾಡಿರುವದು ಶಾಸ್ತ್ರೀಯವಿಷಯಗಳನ್ನು ಯುಕ್ತಿಪ್ರಧಾನವಾಗಿ ವಿಮರ್ಶಿಸಲೆಳಸುತ್ತಿರುವ ಆಧುನಿಕರ ತೃಪ್ತ್ಯರ್ಥವಾಗಿಯೇ ಹೊರತು ಅಚಾರ್ಯರಂಥ ಅಮಾನುಷವ್ಯಕ್ತಿಗಳ ಸಂನ್ಯಾಸದ ಯುಕ್ತಾಯುಕ್ತತೆಯನ್ನು ಪರಿಶೀಲಿಸುವದಕ್ಕಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಆಚಾರ್ಯರಿಂದಾಗಿರುವ ಲೋಕೋಪಕಾರವು ಅಖಿಲಭೂಮಂಡಲದಲ್ಲಿಯೂ ವಿಶ್ರುತವಾಗಿರುವದರಿಂದ ಅದರ ವಿಷಯದಲ್ಲಿ ಒಂದು ಚಕಾರತುಕಾರವನ್ನು ಆಡುವದಕ್ಕೂ ನಾವು ಅಧಿಕಾರಿಗಳಲ್ಲವೆಂಬುದು ಸ್ಪಷ್ಟವೇ ಆಗಿದೆ.

೫. ಗೋವಿಂದಭಗವತ್ಪಾದರಲ್ಲಿ ವೇದಾಂತಾಭ್ಯಾಸ

ಶಂಕರರು ತಾಯಿಗೆ ಕೊಟ್ಟ ವಾಗ್ದಾನ :

೫೮. ಹೀಗೆ ಮಾನಸಸಂನ್ಯಾಸವನ್ನು ಮಾಡಿದ ಬಳಿಕ ಆಚಾರ್ಯರು ನದಿಯ ದಡಕ್ಕೆ ಬಂದು ತಾಯಿಯಲ್ಲಿದ್ದ ಅಮಿತಭಕ್ತಿಯಿಂದ ಇಂತೆಂದರು : 'ತಾಯಿಯೆ, ನಾನು ಏನು ಮಾಡಬೇಕು, ಆಪ್ಪಣೆಕೊಡು; ಸಂನ್ಯಾಸಿಯಾಗಿರುವ ನಾನು ಏನೇನು ಮಾಡಬಹುದೋ ಆದೆಲ್ಲವನ್ನೂ ಆವಶ್ಯವಾಗಿ ಮಾಡುವೆನು ; ಆ ವಿಷಯಕ್ಕೆ ಸ್ವಲ್ಪವೂ ಹಿಂದುಮುಂದು ನೋಡುವದಿಲ್ಲ. ಆನ್ನಬಟ್ಟೆಗಳನ್ನಂತೂ ನನ್ನ ಪಿತ್ರಾರ್ಜಿತಧನವನ್ನು ತೆಗೆದುಕೊಳ್ಳುವ ಈ ಬಂಧುಗಳು ನಿನಗೆ ಕೊಟ್ಟೇ ಕೊಡುವರು ; ಆದರಂತೆ ನಿನಗೆ ರೋಗಾದಿಗಳು ಬಂದರೂ ನೋಡಿಕೊಳ್ಳುವರು. ಪೈತೃಕಧನವನ್ನು ತೆಗೆದುಕೊಂಡಿರುವದರಿಂದಲೂ ಮಹಾಜನರ ಭೀತಿಯಿಂದಲೂ ಸ್ಮೃತಿಸಂಸ್ಕಾರವನ್ನು ಮಾಡಿಯೇತೀರುವರು. ಆದ್ದರಿಂದ ನೀನು ಏತಕ್ಕೂ ಅಂಜಬೇಡ'. ಇದನ್ನು ಕೇಳಿ ತಾಯಿಯು 'ಅಪ್ಪ, ನೀನು ಹೇಗಾದರೂ ಮೊಸಳೆಯ ಬಾಯಿಂದ ಮುಕ್ತನಾಗಲಿ ಎಂದು ನಾನು ಸಂನ್ಯಾಸಕ್ಕೆ ಒಪ್ಪಿದೆನು. ನಾನು ಸತ್ತಾಗ ಮಾತ್ರ ನೀನು ಬಂದು ನನಗೆ ಸಂಸ್ಕಾರವನ್ನು ಮಾಡಬೇಕು ; ಹಾಗಿಲ್ಲದಿದ್ದರೆ ನಿನ್ನನ್ನು ನಾನು ಹಡೆದು ಫಲವೇನು ? ಹೇಳು !' ಎಂದಳು. ಆದಕ್ಕೆ ಶಂಕರರು 'ಆಮ್ಮ, ಹಗಲಲ್ಲೇ ಆಗಲಿ, ರಾತ್ರಿಯಲ್ಲೇ ಆಗಲಿ,ನೀನು ಸ್ವವಶಳಾಗಿ ಆಥವಾ ರೋಗಾದಿಗಳಿಂದ ಪರವಶಳಾಗಿ ಯಾವಾಗ ನನ್ನನ್ನು ಸ್ಮರಿಸುವೆಯೋ, ಆಗಲೇ ಎಲ್ಲವನ್ನೂ ಬಿಟ್ಟು ನಿನ್ನ ಬಳಿಗೆ ಬರುವೆನು, ಸಂಸ್ಕಾರವನ್ನೂ ಮಾಡುವೆನು. ಅನಾಥಳಾದ ನನ್ನನ್ನು ಬಿಟ್ಟು ಈ ಹುಡುಗನು ಸಂನ್ಯಾಸಮಾಡಿದನಲ್ಲ ! –ಎಂದು ಮಾತ್ರ ಚಿಂತಿಸಬೇಡ' ಎಂದು ಸಮಾಧಾನಗೊಳಿಸಿ ಬಂಧುಜನರನ್ನು ಕುರಿತು 'ನಾನು ಸಂನ್ಯಾಸಕ್ಕಾಗಿ ದೂರದೇಶಕ್ಕೆ ಹೋಗುವೆನು ; ಇಗೊ, ಈಕೆಯನ್ನು ನಿಮ್ಮ ವಶಕ್ಕೆ ಒಪ್ಪಿಸಿರುತ್ತೇನೆ'– ಎಂದು ಹೇಳಿ ಆಕೆಯ ಕಣ್ಣೀರನ್ನೊರಸಿದನು. (ಮಾ. ಶಂ. ೫–೬೭ರಿಂದ ೭೪) ಪ್ಯಾಸಾಚಲೀಯದಲ್ಲಿಯೂ (ವ್ಯಾ ಶಂ. ೪–೪೮ರಿಂದ ೫೫) ಹೀಗೆಯೇ ಇದೆ. ಆಲ್ಲಿ 'ತಾಯಿಯು ಸಂನ್ಯಾಸಕ್ಕೆ ಅನುಮತಿಯನ್ನು ಕೊಟ್ಟು ದುಃಖದಿಂದ ಮೂರ್ಛೆಹೋದಳು; ಆಚಾರ್ಯರು ಬಂದು ಶೈತ್ಯೋಪಚಾರವನ್ನು ಮಾಡಿದರು' (ವ್ಯಾ.ಶಂ. ೪–೪೪) ಎಂದಿರುವದೊಂದು ವಿಶೇಷ.

ಕೃಷ್ಣಮೂರ್ತಿಯು ಪುನಃಪ್ರತಿಷ್ಠೆ, ಆಚಾರ್ಯರು ಮನೆಯಿಂದ ಹೊರಟದ್ದು :

೫೯. ಶಂಕರಾಚಾರ್ಯರು ನದಿಯನ್ನು ಮನೆಯಕಡೆಗೆ ತಿರುಗಿಸಿದ್ದರಷ್ಟೆ ? ಆ ನದಿಯು ಕೃಷ್ಣಮಂದಿರದವರೆಗೂ ಬಂದಿತ್ತು. ಕೃಷ್ಣನು ಆಶರೀರವಾಣಿಯಿಂದ 'ಅಪ್ಪ, ತಾಯಿಗಾಗಿ ಮೂರಹಲ್ಲಿ ಹರಿಯುತ್ತಿದ್ದ ನದಿಯನ್ನು ಹತ್ತಿರಕ್ಕೆ ತಂದೆ ; ಈಗ ಅದರ ತೆರೆಗಳು ನನ್ನ ದೇವಾಲಯದ ಗೋಡೆಯನ್ನು ಕೆಡಹಿ ನನ್ನನ್ನು ಹೊಡೆಯುತ್ತಿವೆ. ಈಗ ನೀನೂ ಹೋಗುತ್ತೀಯಲ್ಲ! ನನಗೇನು ಹೇಳುತ್ತೀಯೆ ?' ಎಂದು ಕೇಳಿದನು. ಶಂಕರರು ಆ ಕೃಷ್ಣಮೂರ್ತಿಯನ್ನು ಪೆಗಲಮೇಲೆ ಇರಿಸಿ ಕೊಂಡುಬಂದು ನೀರಿನ ಬಾಧೆಯಿಲ್ಲದ ಸ್ಥಲಕ್ಕೆ ತಂದು ಪ್ರತಿಷ್ಠೆಮಾಡಿದರು. ಹೀಗೆ ತಾಯಿ, ಶ್ರೀಕೃಷ್ಣ—ಇಬ್ಬರ ಆಪ್ಪಣೆಯನ್ನೂ ಪಡೆದುಕೊಂಡು ಶಂಕರರು ಕ್ರಮಸಂನ್ಯಾಸಕ್ಕಾಗಿ ಹೊರಟರು (ಮೂ. ಶಂ. ೫—೭೫ರಿಂದ ೮೦ ; ವ್ಯಾ. ಶಂ. ೪—೫೮ರಿಂದ ೬೧).

ಚಿದ್ವಿಲಾಸೀಯದಲ್ಲಿ ಕೃಷ್ಣಮೂರ್ತಿಯ ಸಮಾಚಾರವಿಲ್ಲ. ಇಲ್ಲಿ ಈ ವಿಷಯವನ್ನು ಅತಿಸಂಕ್ಷೇಪದಿಂದ ಹೀಗೆಂದು ಹೇಳಿದೆ : ಚೂರ್ಣೀನದಿಯು ದಡಕ್ಕೆ ಬಂದೊಡನೆ ತಾಯಿಯನ್ನು ಹೊರಡುವದಕ್ಕೆ ಅನುಜ್ಞೆಕೇಳಿದನು. 'ಮನೆಯಲ್ಲಿದ್ದುಕೊಂಡು ಯಾವಾಗಲೂ ಪರಮಾತ್ಮನನ್ನು ಧ್ಯಾನಿಸುತ್ತಿರು. ನೀನು ಯಾವಾಗ ಸ್ಮರಿಸುವೆಯೋ ಆಗ ನಿನ್ನ ಬಳಿಗೆ ಬಂದೆನೆಂದು ತಿಳಿದುಕೊ' ಎಂದು ಹೇಳಿ ನಮಸ್ಕರಿಸಿ ಕ್ರಮಸಂನ್ಯಾಸಕ್ಕಾಗಿ ಹೊರಟರು (ಚಿ.ಶಂ. ೮—೩೪ರಿಂದ ೪೭).

ಶಂಕರರು ಗೋವಿಂದಭಗವತ್ಪಾದರನ್ನು ಕಂಡೇ ಸನ್ಯಾಸಿಸಿದ್ದು

೬೦. ಇಷ್ಟಹೊತ್ತಿಗೆ ಆಚಾರ್ಯರಿಗೆ ಸಾಧನಸಂಪತ್ತಿಯೆಲ್ಲವೂ ಒದಗಿ ತ್ತೆಂದು ಮಾಧವಕವಿಯು ವರ್ಣಿಸಿರುತ್ತಾನೆ (ಮೂ. ಶಂ. ೫—೮೨ರಿಂದ ೮೬). ಆರಣ್ಯಗಳು, ನದಿಗಳು, ನಗರಗಳು, ಪರ್ವತಗಳು, ಹಳ್ಳಿಗಳು, ಜನರು, ಪಶು ಗಳು— ಇವನ್ನು ಒಂದೊಂದಾಗಿ ಕಾಣುತ್ತಾ 'ಮಾಯಾವಿಯು ತೋರಿಸುವ ಮಾಯೆಯಂತೆ ಬ್ರಹ್ಮವೇ ಇವೆಲ್ಲವನ್ನೂ ಹೀಗೆ ತೋರಿಸುತ್ತದೆ' (ಮೂ. ಶಂ. ೫—೮೭) ಎಂದುತಿಳಿಯುತ್ತಿದ್ದರಂತೆ! 'ಏಕದಂಡಿಯಾಗಿ ಕಾಷಾಯಾಂಬರಧಾರಿ ಯಾಗಿ[1]' ನಡೆಯುತ್ತಾ ಆಶ್ರಮಚಿಹ್ನೆಗಳಿಂದ ಗೋವಿಂದಭಗವತ್ಪಾದರಿಂದ್ದ

---

1. ಆಚ್ಯುತರು ಶಂಕರರಿಗೆ ಗೋವಿಂದಭಗವತ್ಪಾದರಲ್ಲಿ ಕ್ರಮಸಂನ್ಯಾಸವನ್ನು ತೆಗೆದುಕೊ—ಎಂದು ಕನಸಿನಲ್ಲಿ ಹೇಳಿದ್ದನೆಂದು ಶ್ರೀಕೃಷ್ಣಸ್ವಾಮಿ ಅಯ್ಯರ್ (ಶ್ರೀ.ಶಂ. ಪು. ೯) ಹೇಳುತ್ತಾರೆ. ಅದಕ್ಕೆ ಆಧಾರವು ಯಾವದೊ! ಆಚಾರ್ಯರು ಆಚ್ಯುತಾಶ್ರಮ ವನ್ನು ಪಡಿಸುತ್ತಾ ಕಾಅಡಿಯಿಂದ ಹೊರಟರೆಂದು ಅವರು ಹೇಳುತ್ತಾರೆ.

ಸ್ಥಾನವನ್ನು ಗೊತ್ತುಮಡಿಕೊಂಡು ಚೋಟುಗಲದ ಬಿಲಪಬಾಯುಳ್ಳ ಗುಹ ಯನ್ನು (ಪ್ರಾದೇಶಮಾತ್ರನಿಸರನ್ಪ್ರತಿಹಾರಭಾಜಮ್) ಕಂಡು ಇದು ಗೋವಿಂದ ದೇಶಿಕರ ಗುಹೆ ಎಂದು ಜನರು ಹೇಳಿದ್ದನ್ನು ಕೇಳಿ ಬಾಗಿಲಿಗೇ ನಮಸ್ಕರಿಸಿ ಹೀಗೆಂದು ಸ್ತೋತ್ರವನ್ನು ಮಾಡಿದರು (ಮಾಂ. ಶಂ. ೫–೮ಲ ರಿಂದ ೯ಖ) :—

ವರ್ಯಧ್ವಜತಾಂ ಭಜತಿ ಯಃ ಪತಗೇನ್ದ್ರಕೇತೋಃ
ಪಾದಾಬ್ಜದತ್ತಮಥವಾ ಪರಮೇಶ್ವರಸ್ಯ ।
ತಸ್ಯೈವ ಮೂರ್ಧ್ನಿ ಧೃತಸಾಬ್ಧಿಮಹೀಧ್ರಭೂಮೇಃ
ಶೇಷಸ್ಯ ವಿಗ್ರಹಮಶೇಷಮಹಂ ನಮಾಮಿ ॥೫–೯॥

ಗರುಡಧ್ವಜನ ಹಾಸಿಗೆಯಾಪ, ಅಥವಾ ಪರಮೇಶ್ವರನ ಕಾಲುಂದುಗೆ ಯಾಪ, ಸಮುದ್ರಪರ್ವತಗಳೊಡಗೂಡಿದ ಭೂಮಿಯನ್ನು ಹೊತ್ತಿರುವ ಶೇಷನ ವಿಗ್ರಹವಾಗಿರುವ ನಿನ್ನನ್ನು ನಮಸ್ಕರಿಸುತ್ತೇನೆ.

ದೃಷ್ಟ್ವಾ ಪುರಾ ನಿಜಸಧರ್ಮಯುಜೋಮಭೀಷು–
ರನ್ತೇವಸನ್ತ ಇತಿ ತಾಮಪಜಾಯ ಶಾನ್ತಃ ।
ಏಕಾನನೇನ ಭುವಿ ಯಸ್ತ್ವಮತೀರ್ಯ ಶಿಷ್ಯಾ–
ನನ್ದಗ್ರಹೀನ್ನನು ಸ ಏವ ಶತಜ್ಞಲಿಸ್ತ್ವಮ್ ॥೯॥

ಪೂರ್ವದಲ್ಲಿ ನಿನ್ನ ಸಾವಿರ ಹೆಡೆಗಳನ್ನು ಕಂಡು ಶಿಷ್ಯರು ಅಂಜಿಕೊಂಡ ರೆಂದು ಆ ವೇಷವನ್ನು ಬಿಟ್ಟು ಶಾಂತವಾದ ಒಂದೇ ಮುಖವುಳ್ಳವನಾಗಿ ಶಿಷ್ಯರನ್ನು ಅನುಗ್ರಹಿಸಿದ ಆ ಪತಂಜಲಿಯೇ ನೀನೆಲ್ಲವೆ ?

ಉರಗಪತಿಮುಖಾದಧೀತ್ಯ ಸಾಕ್ಷಾತ್
ಸ್ವಯಮವನೇರ್ವಿವರಂ ಪ್ರವಿಶ್ಯ ಯೋನ ।
ಪ್ರಕಟಿತಮಜಲಾತಟೇ ಸ ಯೋಗಂ
ಜಗದುಪಕಾರವರೇಣ ಶಬ್ದಭಾಷ್ಯಮ್

ತಮುಖಿಲಗುಣಪೂರ್ಣಂ ವ್ಯಾಸಪುತ್ರಸ್ಯ ಶಿಷ್ಯಾ–
ದಧಿಗತಪರಮಾರ್ಥಂ ಗೌಡಪಾದಾನ್ಮಹರ್ಷೇಃ ।
ಅಧಿಜಿಗಮಿಷುರೇಷ ಬ್ರಹ್ಮಸಂಸ್ಥಾಮಹಂ ತ್ವಾಂ
ಪ್ರಸೃಮರಮಹಿಮಾನಂ ಪ್ರಾಪಮೈಕಾನ್ತಭಕ್ತ್ಯಾ ॥

ಪಾತಾಳವನ್ನು ಹೊಕ್ಕು ಸಾಕ್ಷಾತ್ ಶೇಷನಿಂದ ಅಧ್ಯಯನವನ್ನು ಮಾಡಿ ಭೂಲೋಕದಲ್ಲಿ ಯೋಗಶಾಸ್ತ್ರವನ್ನೂ ವ್ಯಾಕರಣಭಾಷ್ಯವನ್ನೂ ಲೋಕೋಪ ಕಾರಕ್ಕಾಗಿ ಪ್ರಕಟಿಸಿದೆಯಲ್ಲ, ಅಂಥ ಅಖಿಲಗುಣಪೂರ್ಣನಾದ, ಶುಕಶಿಷ್ಯ ಗೌಡಪಾದಮಹರ್ಷಿಗಳಿಂದ ಪರಮಾರ್ಥವನ್ನು ಅರಿತುಕೊಂಡಿರುವ ನಿನ್ನ

ಸವಿಾಪಕ್ಕೆ ಬ್ರಹ್ಮಸಂಸ್ಥನಾಗುವ ಪುಯನ್ನು ಆರಿತುಕೊಳ್ಳುವದಕ್ಕೆಂದು ನಾನು ಬಂದಿರುತ್ತೇನೆ.

ಈ ಮೇಲಿನ ಶ್ಲೋಕಗಳಲ್ಲಿ ಗೋವಿಂದಭಗವತ್ಪಾದರು **ಆದಿಶೇಷನ ಅವತಾರವೇ,** ವ್ಯಾಕರಣಶಾಸ್ತ್ರವನ್ನೂ ಯೋಗಶಾಸ್ತ್ರವನ್ನೂ ರ ಚಿ ಸಿ ರು ವ **ಪತಂಜಲಿಗಳೇ,** ಶುಕಶಿಷ್ಯರಾದ **ಶ್ರೀಗೌಡಪಾದರ** ಶಿಷ್ಯರೇ– ಎಂದು ವರ್ಣಿಸಿರುವದನ್ನು ವಾಚಕರು ಲಕ್ಷಿಸಬೇಕು. **ವ್ಯಾಸಾಚಲೀಯದಲ್ಲಿಯೂ**

ಶುಶ್ರಾವ ತಸ್ಯ ನಿಕಟೇ ಕಿಲ ಶಾಸ್ತ್ರಜಾಲಂ
ಯಶ್ಚಾಚ್ಛೃಣೋದ್ಬುಜಗಸಪ್ಮಗತಸ್ತ್ವನನ್ತಾತ್ ।
ಶಬ್ದಾಮ್ಬುರಾಶಿಮಖಿಲಂ ಸಮಯಂ ನಿಧಾಯ
ಯಶ್ಚಾಖಿಲಾನಿ ಭುವನಾನಿ ಬಿಭರ್ತಿ ಮೂರ್ಧ್ನಾ ॥ (ವ್ಯಾ. ಶಂ ೪–೬೪)

ಯಾವಾತನು ಪಾತಾಳಲೋಕದಲ್ಲಿ ಶಬ್ದಶಾಸ್ತ್ರವನ್ನೆಲ್ಲ ಶಪಥಪೂರ್ವಕವಾಗಿ ಶ್ರವಣಮಾಡಿದನೋ, ಯಾವನು ಭೂಮಿಯನ್ನೆಲ್ಲ ತಲೆಯಮೇಲೆ ಹೊತ್ತಿರುವನೋ, ಆ ಗೋವಿಂದನ ಸವಿಾಪದಲ್ಲಿ (ಶಂಕರನು) ಶಾಸ್ತ್ರಗಳನ್ನೆಲ್ಲ ಶ್ರವಣ ಮಾಡಿದನು–ಎಂದಿದೆ. ಆಲ್ಲಿ ಯೋಗದ ವಿವರವಿಲ್ಲ.

ಪ್ರಾಚೀನಶಂಕರವಿಜಯದಲ್ಲಿ

ಗೋವಿನ್ದಾಶ್ರಯಣಪ್ರಹೀನ್ದ್ರಾವತಾರ–
ಮಾರಾತ್ಪುಷ್ಕರಕರದೇಹಧುವಸ್ತಟಿನ್ಯಾಃ ।
(ಆಪ್ಯಾತ್ಪ್ರಜೇನ ಗಳಿತಾತ್ಮಭವಾಭಿಮಾನೇ–
ನಾಂಜಾಧಿತಂ ಚ ಪರಿಣಾ ನಿಯಮಂ ಶ್ರಿತೇನ ॥)

ಎಂಬ ಶ್ಲೋಕದಲ್ಲಿ ನರ್ಮದಾತೀರದಲ್ಲಿದ್ದ ಗೋವಿಂದಭಗವತ್ಪಾದರು ಆದಿ **ಶೇಷನ** ಅವತಾರವೆಂದಿದೆ. (ಇಲ್ಲಿ ಕಂಸದಲ್ಲಿಟ್ಟಿರುವ ಭಾಗವನ್ನು ನಾವು ಕನ್ನಡಿಸಿಲ್ಲ. ಅದನ್ನು ಇಷ್ಟರಲ್ಲಿಯೇ ಪ್ರಸ್ತಾಪಿಸಲಿರುವೆವು).

ಗುರುರತ್ನಪೂಲಿಕೆಯಲ್ಲಿ :

ಹರಿತಲ್ಪಹರಾಜ್ಞಾನೂಪುರಕ್ಷ್ಮಾ । ಧರಸೌಮಿತ್ರಿಬಲಾತ್ರಿಪುತ್ರಲಕ್ಷ್ಮಾ ॥
ಜಯತಾದುಪರೇವಮಾತ್ತಧರ್ಮಾ । ಜಯಗೋವಿನ್ದಮುನಿಃ ಸ ಜನ್ಮನಾಮಾ ॥

ವಿಷ್ಣುವಿನ ಹಾಸಿಗೆ, ಶಿವನ ಕಾಲಂದುಗೆ, ಭೂಧರ, ಲಕ್ಷ್ಮಣ, ಬಲರಾಮ, ಪತಂಜಲಿ– ಎಂಬ ಉಪಾಧಿಗಳುಳ್ಳ, ರೇವಾತೀರದಲ್ಲಿ ಆಶ್ರಮವನ್ನು ಮಾಡಿಕೊಂಡಿದ್ದ 'ಜಯಗೋವಿಂದಮುನಿಯು' ಜಯಶೀಲನಾಗಲಿ !–ಎಂದಿದೆ; ನಾವು ಉದಾಹರಿಸಿರುವ ಮಾಧವೀಯದ ೯ಳನೆಯ ಶ್ಲೋಕದಲ್ಲಿ ಈ ಅಭಿಪ್ರಾಯವೇ

ಇವೆ. ಈ ಅಭಿಪ್ರಾಯಕ್ಕೆ **ಪತಂಜಲಿಚರಿತ**ವೋ ಅಥವಾ ಮತ್ತೆ ಯಾವದೋ ಒಂದು ಮೂಲವಿರಬೇಕು.

ಗೋವಿಂದಭಗವತ್ಪಾದರಿಗೆ ಚಂದ್ರನೆಂಬ ಹೆಸರು

೬೧. ಗುರುರತ್ನಮಾಲಿಕೆಯಲ್ಲಿ ಗೋವಿಂದಭಗವತ್ಪಾದರಿಗೆ **ಚಂದ್ರ** ನೆಂಬ ಹೆಸರೂ ಉಂಟೆಂದು ಹೇಳಿದೆಯಷ್ಟೆ ? ಗೌಡಪಾದರಿಗೂ ಈ ಚಂದ್ರನಿಗೂ ಇರುವ ಸಂಬಂಧವನ್ನು ತಿಳಿಸುವ ಒಂದು ಕಥೆಯು ರಾಮಭದ್ರದೀಕ್ಷಿತವಿರಚಿತ **ಪತಂಜಲಚರಿತ್ರೆ**ಯಲ್ಲಿದೆಯೆಂದು ಎನ್. ವೆಂಕಟರಾಮನ್‌ರವರು (NVSN p- 24) ಬರೆದಿರುತ್ತಾರೆ. ಆದರ ಸಾರವೇನೆಂದರೆ :

ಒಮ್ಮೆ ಪತಂಜಲಿಗಳು ಒಂದು ತೆರೆಯ ಹಿಂದೆ ಇದ್ದುಕೊಂಡು ತಮ್ಮ ಶಿಷ್ಯರಿಗೆಲ್ಲ ಮಹಾಭಾಷ್ಯವನ್ನು ಹೇಳಿಕೊಡುತ್ತಿದ್ದರು. ಇಷ್ಟು ಜನರಿಗೆ ಏಕ ಕಾಲಕ್ಕೆ ಇವರು ಹೇಳಿಕೊಡುವದರ ಗುಟ್ಟೇನೆಂಬುದನ್ನು ತಿಳಿಸುಕೊಳ್ಳಬೇಕೆಂದು ಶಿಷ್ಯರು ತೆರೆಯನ್ನೆತ್ತಿ ನೋಡಲು ಸಹಸ್ರಫಣಾಯುಕ್ತನಾದ ಎರಡು ಸಾವಿರ ನಾಲಗೆಗಳ ಆದಿಶೇಷನೇ ಕಾಣಿಸಿದನು. ತನ್ನ ಮಾತನ್ನು ಮೀರಿ ಅನವಶ್ಯವಾದ ಕುತೂಹಲನನ್ನು ಪ್ರಕಟಿಸಿದ ಶಿಷ್ಯರನ್ನು ಅತನು ಕ್ರೋಧಯುಕ್ತನಾಗಿ ನೋಡಿದ್ದ ರಿಂದ ಆ ವಿಷಾನಲದಿಂದ ಅವರೆಲ್ಲ ಸುಟ್ಟು ಬೂದಿಯಾದರು. ಆ ಸ್ಥಲವನ್ನು ಬಿಟ್ಟು ಎಲ್ಲಿಗೋ ಹೋಗಿದ್ದ ಒಬ್ಬನುಮಾತ್ರ (ಇವರೇ ಗೌಡಪಾದರು) ಬಂದು ಕ್ಷಮೆಬೇಡಿದನು. ಪಾಠದ ನಡುವೆ ಹೊರಗೆ ಹೋಗಿದ್ದ ತಪ್ಪಿಗಾಗಿ ಬ್ರಹ್ಮ ರಾಕ್ಷಸನಾಗೆಂಬ ಶಾಪವು ಅವನಿಗೆ ಬಂದಿತು. ವ್ಯಾಕರಣಕ್ಕೆ ತಕ್ಕ ಅಧಿಕಾರಿಯು ನಿನಗೆ ದೊರಕುವವರೆಗೆ ಈ ಶಾಪವಿರುವದು ಎಂದು ಶಾಪಾವಧಿಯನ್ನು ಗುರು ಗಳು ಹೇಳಿದ್ದರು (ಮಾ. ಶಂ. ೫-೯೫ನ್ನು ನೋಡಿ).[1] ಪತಂಜಲಿಗಳು ಈ ಲೋಕವನ್ನು ಬಿಟ್ಟರು. ಉಳಿದುಕೊಂಡ ಆ ಶಿಷ್ಯನು ಬ್ರಹ್ಮರಾಕ್ಷಸನಾಗಿ ಮಹಾಭಾಷ್ಯಕ್ಕೆ ಅಚಾರ್ಯನಾದನು. 'ಪಚ್ ಧಾತುವಿಗೆ ನಿಷ್ಠಾ ಪ್ರತ್ಯಯವು ಸೇರಿದರೆ ಯಾವ ರೂಪವಾಗುವದು ?' ಎಂದು ಕೇಳಿದಾಗ 'ಪಚಿತಮ್' ಎಂದು ಹೇಳುವ ಶಿಷ್ಯರನ್ನೆಲ್ಲ ಅವನು ತಿಂದುಹಾಕುತ್ತಿದ್ದನು. ಕೊನೆಗೆ ಒಬ್ಬ ಶಿಷ್ಯನು 'ಪಕ್ವಮ್' ಎಂದಾಗುತ್ತದೆ ಎಂದು ಉತ್ತರವನ್ನೀಯಲು ಅವನೇ ಮಹಾಭಾಷ್ಯ ಪಾಠಕ್ಕೆ ಯೋಗ್ಯನೆಂದು ಗೊತ್ತಾಯಿತು.

ಆ ಶಿಷ್ಯನೇ **ಚಂದ್ರ**ನೆಂಬ ಹೆಸರಿನ ಉಜ್ಜಯಿನಿಯ ಬ್ರಾಹ್ಮಣನು. ಅವನಿಗೆ ಆ ಪತಂಜಲಿಶಿಷ್ಯನು ಮಹಾಭಾಷ್ಯವನ್ನೆಲ್ಲ ಹೇಳಿಕೊಟ್ಟನು. ಬ್ರಹ್ಮ

---

1. ಕಂಸವಧೆಯಲ್ಲಿಟ್ಟಿರುವ ಅಭಿಪ್ರಾಯಗಳು ನಮ್ಮವು. ಕೆಲವಂಶಗಳನ್ನು ಗುರುರತ್ನ ಮಾಲಿಕೆಯ (ಶ್ಲೋ. ೧೦) ವ್ಯಾಖ್ಯಾನದಂತೆ ನಾವು ತಿದ್ದಿಕೊಂಡಿರುತ್ತೇವೆ.

ರಾಕ್ಷಸನು ವಾಸವನಾಗಿದ್ದ ಆಲದಮರದ ಎಲೆಗಳಮೇಲೆಯೇ ಚಂದ್ರನು ಪಾಠವನ್ನು ಬರೆದುಕೊಳ್ಳುತ್ತಿದ್ದನು. ಕೊನೆಗೆ ಆ ಎಲೆಗಳನ್ನೆಲ್ಲ ಪಂಚೆಯಲ್ಲಿ ಮೂಟೆ ಕಟ್ಟಿಕೊಂಡು ಉಜ್ಜಯನಿಗೆ ಬಂದನು. ಅವನು ನಾಲ್ಕು ಜಾತಿಯ ನಾಲ್ಕು ಸ್ತ್ರೀಯರನ್ನು ಮದುವೆಯಾದನು. ಅವರಲ್ಲಿ ಅವನಿಗೆ ಕ್ರಮವಾಗಿ **ವರರುಚಿ, ವಿಕ್ರಮ, ಭಟ್ಟಿ, ಭರ್ತೃಹರಿ**–ಎಂಬ ಮಕ್ಕಳಾದರು. ಅವರೊಳಗೆ ಭರ್ತೃಹರಿಯು ಮಹಾವಿದ್ವಾಂಸನು ; ಚಂದ್ರನಿಂದ ಮಹಾಭಾಷ್ಯವನ್ನೆಲ್ಲ ಕಲಿತುಕೊಂಡು ಮಹಾವೈಯಾಕರಣಿ ಎನಿಸಿಕೊಂಡನು. ಆದರೆ ಅವನ ಅಪರಿಮಿತ ಗರ್ವದ ಫಲವಾಗಿ ಸಪಾದಲಕ್ಷಮಿತವಾದ ಅವನ ಗ್ರಂಥವು ನಷ್ಟವಾಯಿತು. (ಮೇಲೆ ನಾವು ಉದಾಹರಿಸಿರುವ 'ಅಪ್ಯಾತ್ಮಜೇನ' ಎಂಬ ಶ್ಲೋಕಾರ್ಧದಲ್ಲಿ ಪರಾಮೃಷ್ಟನಾಗಿರುವ ಹರಿಯು ಇವನೇ ಎಂದು ಕಾಣುತ್ತದೆ).

ಆಪರಾಧಿಯಾಗಿದ್ದ ಪತಂಜಲಿಶಿಷ್ಯನಿಗೆ ಈಗ ವಿಶಾಪವಾದ್ದರಿಂದ ಅವನು ವ್ಯಾಸಪುತ್ರರಾದ ಶುಕರನ್ನುಕಂಡು ಅವರಿಂದ ಸಂನ್ಯಾಸವನ್ನುತೆಗೆದುಕೊಂಡನು. ಬಳಿಕ ಅವನು ಹಿಮಾಲಯದಲ್ಲಿಯೇ ಇದ್ದುಕೊಂಡು ತಕ್ಷಶಿಲೆಯ ಶಾಕ್ಯರಾಜನಾದ **ಪ್ರಾಕೃತಿಯೇ** ಮುಂತಾದವರಿಂದಲೂ ಅಪಲೂನ್ಯ, ದಾಮೀಷ ಮೊದಲಾದ **ಅಪರಾಂತ್ಯ**ಯೋಗಿಗಳಿಂದ ಸೇವಿತರಾಗಿದ್ದ **ಅಯಸಾರ್ಚ್ಯ**ನೆಂಬ ಬೌದ್ಧಶ್ರೇಷ್ಠನನ್ನು ಆ ಮತದಿಂದ ಬಿಡುಗಡೆಮಾಡಿದನು. ಮತ್ತೆ ಹತ್ತಿರಕ್ಕೆ ಬಂದ **ಚಾಂದ್ರ**ನಿಗೆ ಸಂನ್ಯಾಸವನ್ನು ಕೊಟ್ಟು **ಗೋವಿಂದ**ನೆಂಬ ಹೆಸರನ್ನು ಕೊಟ್ಟನು. ಅವರೆಲ್ಲರಿಗೂ ಅದ್ವೈತವನ್ನು ಉಪದೇಶಿಸುತ್ತಾ ಇದ್ದನು. (ಮಾ.ಶಂ. ೯೬–೯೭ನೆಯ ಶ್ಲೋಕಗಳಲ್ಲಿ ಈ ಆರ್ಥವು ಪರಾಮೃಷ್ಟವಾಗಿರಬಹುದು).

ಮೇಲೆ ಕೊಟ್ಟಿರುವ ಕಥೆಯಿಂದ ಗೋವಿಂದಭಗವತ್ಪಾದರು **ಶೇಷನ ಅವತಾರ**ವೆಂದೂ ಅವರೇ **ಚಂದ್ರ**ನೆಂಬ ವೈಯಾಕರಣನೆಂದೂ ದಂತಕಥೆಯೊಂದು ಹೇಗೋ ಪ್ರಾಚೀನಕಾಲದಿಂದಲೂ ಜನರಲ್ಲಿ ಹರಡಿತ್ತೆಂದೂ ಆದನ್ನೇ ಮಾಧವಕವಿಯೂ ಅನುಸರಿಸಿರುತ್ತಾನೆಂದೂ ಹೇಳಬೇಕಾಗುವದು. ವ್ಯಾಸಾಚಲೀಯದಲ್ಲೇನೋ ಈ ಕಥೆಯಿಲ್ಲ. ಈ ವಿವರವು **ಹರಿನಿಃಶ್ರೇಯ, ಗೌಡಪಾದೋಲ್ಲಾಸ, ಪತಂಜಲಿವಿಜಯ**ಮೊದಲಾದಿಗಳಲ್ಲಿದೆ (ಹರಿನಿಃಶ್ರೇಯ ಗೌಡಪಾದೋಲ್ಲಾಸ, ಪತಞ್ಜಲಿವಿಜಯಾದಿಷು ನಿರೂಪ್ಯಮಾಣಾ ಕಥಾ) ಎಂದು ಆತ್ಮಬೋಧರು (ಗು. ರ. ಶ್ಲೋ. ೧೦) ಬರೆದಿರುತ್ತಾರೆ.

ಗೋವಿಂದಭಗವತ್ಪಾದರಿಗೆ ಜಯಗೋವಿಂದರೆಂಬ ಹೆಸರು

೬೨. ನಾವು ಉದಾಹರಿಸಿರುವ **ಗುರುರತ್ನಮಾಲಿಕೆ**ಯ ಶ್ಲೋಕದಲ್ಲಿ 'ಜಯಗೋವಿಂದಮುನಿಃ' ಎಂಬ ವಿಶೇಷಣವೂ ಇವೆಯಲ್ಲವೆ ? ಅದರ ಬಗ್ಗೆ **ಪ್ರಾಚೀನಶಂಕರವಿಜಯ**ದಲ್ಲಿ ಹೀಗಿದೆಯಂತೆ :

ಸತತಂ ನಿಗದನ್ಸಸೇನ ಯೋಽಸೌ
ಜಯಗೋವಿನ್ದ ಜಯೇತಿ ಸೂಕ್ತಿಮೇಕಾಮ್ ।
ಶ್ರುತಮೌನಮಭೂದ್ಯ (ದ್ಯತೋ ವಿ) ವಾದೇ
ಜಯಗೋವಿನ್ದಮುನಿಂ ತದಾಹುರೇನಮ್ ॥

'ಜಯ ಗೋವಿಂದ ಜಯ!' ಎಂದು ಬಾರಿಬಾರಿಗೂ ಹೇಳುತ್ತಾ ವಾದದಲ್ಲಿ ಮೌನವನ್ನೇ ಧರಿಸಿದ್ದದ್ದರಿಂದ ಜಯಗೋವಿಂದರೆಂದೇ ಇವರನ್ನು ಕರೆಯುತ್ತಾರೆ– ಎಂದರ್ಥ. (ಗೋವಿಂದನೆಂಬ ಹೆಸರನ್ನು ಗೌಡಪಾದರು ಕೊಟ್ಟರೆಂಬ ಕಥೆಯ ಗತಿಯೇನು?) ಗುರುರತ್ನಮಾಲಿಕೆಯ ಮುಂದಿನ (೧೨) ಶ್ಲೋಕದಲ್ಲಿ ಗೋವಿಂದರ ಶಿಷ್ಯನು 'ಹರಿ' ಎಂದಿದೆ. 'ಚನ್ದ್ರಾಶರ್ಮಣ ಏವ ಸುತಾ ಭರ್ತೃಹರಿವಿಕ್ರಮಭಟ್ಟವರರುಚಯಃ ಇತಿ ವೃದ್ಧಾಃ' ಎಂದು ಆತ್ಮಬೋಧರ ವ್ಯಾಖ್ಯಾನವಿದೆ. ಇದರ ಜೊತೆಗೆ 'ಹರಿಃ ಭರ್ತೃಪ್ರಪಞ್ಚಃ | ವಾಕ್ಯಪದೀಯಾದಿ ಮಹಾಪ್ರಬನ್ಧನಿರ್ಮಾತಾ ಇತಿ ಯಾವತ್ |' ಎಂದೂ ಇದೆ. ಅಲ್ಲಿ ಭರ್ತೃಪ್ರಪಞ್ಚಃ ಎಂಬುದು ಭರ್ತೃಹರಿಃ ಎಂಬುದಕ್ಕೆ ಬದಲು ಬಿದ್ದಿದೆ ಎಂದು ಕಲ್ಪಿಸಬೇಕು; ಇಲ್ಲದಿದ್ದರೆ ಆತ್ಮಬೋಧರಿಗೆ 'ಭರ್ತೃಪ್ರಪಂಚ'ರೆಂಬ ಭೇದಾಭೇದವಾದಿಗಳಾದ ವೇದಾಂತಿಗಳೊಬ್ಬರು ಇದ್ದರೆಂಬುದು ತಿಳಿದಿರಲಿಲ್ಲವೆಂದೇ ಹೇಳಬೇಕಾಗುವದು.

ಗೋವಿಂದಭಗವತ್ಪಾದರ ವಿಷಯಕ್ಕೆ ಕಲ್ಪನಾಕಥೆಗಳು

೬೩. ಈವರೆಗೆ ಹೇಳಿದ ಕಥೆಗಳಲ್ಲಿ ಯೋಗಶಾಸ್ತ್ರಪ್ರವರ್ತಕ ಪತಂಜಲಿ, ವ್ಯಾಕರಣಭಾಷ್ಯಕಾರ ಪತಂಜಲಿ, ಗೋವಿಂದಭಗವತ್ಪಾದರು– ಇವರನ್ನೆಲ್ಲ ಒಂದಾಗಿ ಭಾವಿಸಿರುವದು ಉಪಚಾರಕ್ಕೆಂದು ಹೇಳಬಹುದೇ ಹೊರತು ಆವೆಲ್ಲ ಒಬ್ಬ ವ್ಯಕ್ತಿಯ ಹೆಸರುಗಳೆಂದಾಗಲಿ, ಆವರುಗಳು ಏಕಕಾಲದಲ್ಲಿದ್ದರೆಂದಾಗಲಿ ಭಾವಿಸುವದಕ್ಕೆ ಆಧಾರವಿಲ್ಲ. ಪತಂಜಲಿಮಹಾಭಾಷ್ಯಕಾರರು ಪಾಣಿನಿಯ ವ್ಯಾಕರಣವನ್ನು ಬಹುಮುಖವಾಗಿ ವರ್ಣಿಸಿದ್ದರಿಂದ ಆವರು ಆದಿಶೇಷನೇ ಎಂದು ಯಾರೋ ಮೆಚ್ಚಿಕೆಯನ್ನು ತೋರಿಸಲು, ಆಲ್ಲಿಂದ ಮುಂದಕ್ಕೆ ಕಥಾಕಲ್ಪನೆಯು ಬೆಳೆಯುತ್ತಾ ಬಂದಿರಬೇಕು– ಎಂತ ತೋರುತ್ತದೆ.

ಇದಲ್ಲದೆ 'ಕತೆಗೆ ಕಾಲಿಲ್ಲ' ಎಂಬ ಗಾದೆಯಂತೆ ವ್ಯಾಸರು, ಶುಕರು– ಎಂಬ ದ್ವಾಪರಯುಗದವರಿಬ್ಬರನ್ನೂ ಗೌಡಪಾದರ ಹಿಂದೆ ಇದ್ದ ಆದ್ವೈತಾಚಾರ್ಯರು ಎಂದು ವರ್ಣಿಸಿರುವದೂ ಕಲ್ಪನಾರಾಜ್ಯಕ್ಕೇ ಸೇರಿರುತ್ತದೆ. ಅದು ಶುಕರ ಸಾಕ್ಷಾಚ್ಛಿಷ್ಯರು ಗೌಡಪಾದರು ಎಂಬರ್ಥದಲ್ಲಿರಲಾರದು. ಶುಕರಂತೆ ವಿರಕ್ತರಾಗಿ ಪರಮಾತ್ಮಾನುಸಂಧಾನದಲ್ಲಿದ್ದರೆಂಬುದಕ್ಕೆಮಾತ್ರವೇ ಮೊದಲು ಯಾರೋ ಶುಕಶಿಷ್ಯರೆಂದು ಕರೆದಿದ್ದು ಈಚೆಗೆ ಅವರು ಶುಕರ ಸಾಕ್ಷಾಚ್ಛಿಷ್ಯರೇ ಎಂಬ

ನಂಬಿಕೆಗೆ ಮೂಲವಾಗಿರಬಹುದೆಂತ ತೋರುತ್ತದೆ. ಹಾಗಿಲ್ಲದಿದ್ದರೆ ಶುಕರ ಕಾಲದ ಗೌಡಪಾದರು ಗೋವಿಂದಭಗವತ್ಪಾದರ ಕಾಲದವರೆಗೂ ಜೀವಿಸಿದ್ದರೆಂದು ಅಸಂಭಾವಿತವಾಗಿ ಕಲ್ಪಿಸಬೇಕಾಗಿಬರುತ್ತದೆ. ಇದನ್ನು ಅಸಂಭಾವಿತವಲ್ಲವೆಂದು ತಿಳಿಸುವದಕ್ಕೋ ಏನೊ, ಮಾಧವಕವಿ ಅವರಿಗೆ ಮಹರ್ಷಿಗಳು (ಗೌಡಪಾದಾನ್ಮಹರ್ಷೀಃ ಮಾ. ಶಂ. ೫-೯೭) ಎಂಬ ವಿಶೇಷಣವನ್ನು ಕೊಟ್ಟಿರುತ್ತಾನೆ.

ಇನ್ನೊಂದು ವಿಷಯವನ್ನು ಇಲ್ಲಿ ವಿಚಾರಮಾಡತಕ್ಕದ್ದಿದೆ. ಗೋವಿಂದ ಭಗವತ್ಪಾದರಿಗೂ ಚಂದ್ರಶರ್ಮನೆಂಬ ವೈಯಾಕರಣನಿಗೂ ಏಕತ್ವವನ್ನು ಕಲ್ಪಿಸಿರುವದು, ವರರುಚಿ, ವಿಕ್ರಮ, ಭಟ್ಟಿ, ಭರ್ತೃಹರಿ– ಇವರೆಲ್ಲ ಏಕಕಾಲದವರೆಂದು ಕಲ್ಪಿಸಿರುವದು– ಇವೆರಡೂ ಐತಿಹಾಸಿಕವಾದ ಆಧಾರವಿಲ್ಲದವುಗಳಾಗಿವೆ. ವ್ಯಾಕರಣಮಹಾಭಾಷ್ಯವನ್ನು ಚಂದ್ರನು ಕಾಶ್ಮೀರಕ್ಕೆ ಅಭಿಮನ್ಯುವಿನ ಕಾಲಕ್ಕೆ ತಂದನೆಂದು "ರಾಜತರಂಗಿಣಿ" (೧-೧೭೬) ಯಲ್ಲಿದೆಯಂತೆ (NVSK. p. 27). ಆ ಕಾರಣದಿಂದ ಅವನೂ ಪತಂಜಲಿಯೇ ಎಂದು ಯಾರೋ ಕಲ್ಪಿಸಿರಲೂಬಹುದು. 'ಈ ಅಭಿಮನ್ಯು ಸುಮಾರು ಕಲ್ಯಾದಿ ೩೧೪೧ನೆಯ ವರುಷದ ಸಮಯದಲ್ಲಿದ್ದಂತೆ ಆ ಕಾಲದ ನಾಣ್ಯಗಳಿಂದ ಗೊತ್ತಾಗಿದೆ. ಇದು ನಿಶ್ಚಯವಾಗಿದ್ದಪಕ್ಷದಲ್ಲಿ ಭಟ್ಟಿಯ ಕಾಲಕ್ಕೂ ಭರ್ತೃಹರಿಯ ಕಾಲಕ್ಕೂ ೩೦೦ ವರುಷಗಳ ಅಂತರವಿದ್ದಂತೆ ಆಯಿತು. ಮತ್ತು ಈ ಇಬ್ಬರಲ್ಲಿ ಒಬ್ಬನೂ ಉಜ್ಜಯಿನಿಯಲ್ಲಿ ಯಾದರೂ ಅಥವಾ ವಿಕ್ರಮಾದಿತ್ಯನ ಪೋಷಣೆಯಲ್ಲಿ ಯಾದರೂ ಇದ್ದಂತೆ ಕಾಣಬರುವದಿಲ್ಲ' ಎಂದು (ಸೋ. ಶಂ. ಪು. ೬೦) ಸೋಮನಾಥಯ್ಯನವರು ಬರೆಯುತ್ತಾರೆ. ಭಟ್ಟಿಕಾವ್ಯವನ್ನು ಬರೆದ ಭಟ್ಟಿಯು 'ಕಾವ್ಯಮಿದಂ ವಿಹಿತಂ ಮಯಾ ವಲಭ್ಯಾಂ ಶ್ರೀಧರಸೇನನರೇಂದ್ರಪಾಲಿತಾಯಾಮ್' (ಭಟ್ಟಿ. ೨೨-೩೪) ಶ್ರೀಧರಸೇನನು ಆಳುತ್ತಿದ್ದ ವಲಭಿಯಲ್ಲಿ ಕಾವ್ಯದ ರಚನೆಯನ್ನು ಮಾಡಿದೇನೆಂದು ಕಂಠೋಕ್ತವಾಗಿ ಹೇಳಿಕೊಂಡು ಇರುತ್ತಾನೆ!

"ರಸಹೃದಯತಂತ್ರ"ವೆಂಬ ಗ್ರಂಥವನ್ನು ಬರೆದಿದ್ದ ಗೋವಿಂದಭಿಕ್ಷುವೇ ಗೋವಿಂದಭಗವತ್ಪಾದರವರಾಗಿರಬಹುದೆಂಬ ಕಲ್ಪನೆಗೆ ಸೋಮನಾಥಯ್ಯನವರು ಸ್ವಲ್ಪ ಬೆಂಬಲವನ್ನು ಕೊಟ್ಟಿರುತ್ತಾರೆ **ಮಾಧವಾಚಾರ್ಯಕೃತ**"**ಸರ್ವದರ್ಶನಸಂಗ್ರಹ**"ದಲ್ಲಿ ರಸೇಶ್ವರದರ್ಶನವನ್ನು ಪ್ರತಿಪಾದಿಸುವಾಗ 'ಗೋವಿನ್ದಭಗವತ್ಪಾದಾಚಾರ್ಯೈರಪಿ', 'ತದುಕ್ತಮಾಚಾರ್ಯೈಃ ಎಂಬ ಗೌರವಾರ್ಥವಾದ ವಿಶೇಷಣಗಳನ್ನು ಉಪಯೋಗಿಸಿರುವದು, **ರಸೇಶ್ವರಸಿದ್ಧಾಂತ**ವೆಂಬ ಗ್ರಂಥದಲ್ಲಿ

ದೇವಾಃ ಕೇಚಿನ್ಮಹೇಶಾದ್ಯಾಃ ದೈತ್ಯಾಃ ಕಾವ್ಯಪುರಃಸರಾಃ
ಮುನಯೋ ವಾಲಖಿಲ್ಯಾದ್ಯಾ ನೃಪಾಃ ಸೋಮೇಶ್ವರಾದಯಃ ।
ಗೋವಿನ್ದಭಗವತ್ಪಾದಾಚಾರ್ಯೋ ಗೋವಿನ್ದನಾಯಕಃ
ಜರ್ಪಟಃ ಕಪಿಲೋ ವ್ಯಾಳಿಃ ಕಾಪಾಲಿಃ ಕನ್ದಲಾಯನಃ ।

ಎಂದು ರಸಸಿದ್ಧರ ಸಾಲಿನಲ್ಲಿ 'ಗೋವಿನ್ದಭಗವತ್ಪಾದಾಚಾರ್ಯ'ರನ್ನು ಸೇರಿಸಿರುವದು–ಇವೇ ಆ ಕಲ್ಪನೆಗೆ ಗಮುಕವಾಗಿರುತ್ತವೆ. ರಸಸಿದ್ಧ ಗೋವಿಂದಭಿಕ್ಷುವು ಹೈಹಯಕುಲದಲ್ಲಿ ಹುಟ್ಟಿದ ಕಿರಾತದೇಶದ ದೊರೆಯಾದ ಮಾಧನನೃಪತಿಯಿಂದ ಬಹುಮಾನವನ್ನು ಪಡೆದಿದ್ದನಂತೆ. ಆ ಮಾಧನದೇವನೂ ರಸವಾದದಲ್ಲಿ ವ್ಯವಸಾಯಮಾಡಿದ್ದನಂತೆ. ಹೈಹಯಕುಲದ ಕಾಮದೇವನೇ ಈ ಮಧನ ರಾಜನಿರಬಹುದೆಂಬ ಊಹೆಯೂ ಕಿರಾತದೇಶವು 'ತಪ್ತಕುಣ್ಡಂ ಸಮಾರಭ್ಯ ರಾಮುಕ್ಷೇತ್ರಾನ್ತರಂ ಶಿವೇ । ಕಿರಾತದೇಶೋ ವಿಜ್ಞೇಯೋ ವಿನ್ಧ್ಯಶೈಲೇಽವತಿಷ್ಠತೇ' ॥ ಎಂಬ ಶಿವಶಕ್ತಿಸಂಗಮತಂತ್ರದ ವಚನದಂತೆ ವಿಂಧ್ಯ ಪರ್ವತದ ಬಳಿಯಿದ್ದ ಒಂದು ದೇಶವೆಂದಾಗುತ್ತದೆ. ವಿಂಧ್ಯಪರ್ವತಗಳ ಉತ್ತರಕ್ಕೆ ಮಾಳವದೇಶವೂ ಅದರೊಳಗೆ ಉಜ್ಜಯಿನಿಯೂ ಇದ್ದು ಆ ಪರ್ವತದ ದಕ್ಷಿಣಕ್ಕೆ ನರ್ಮದಾನದಿ ಹರಿಯುತ್ತದೆ. ಆದ್ದರಿಂದ 'ಗೋವಿಂದಭಿಕ್ಷುವೇ ಗೋವಿಂದಭಗವತ್ಪಾದರೆಂದು ಇಟ್ಟುಕೊಂಡರೆ ಅವರು ಮಾಳವದೇಶದ ನಿವಾಸಿಗಳೆಂದೂ ಸಂನ್ಯಾಸಾಶ್ರಮಸ್ವೀಕರಿಸಿದಮೇಲೆ ತತ್ಸಮೀಪವರ್ತಿ ನರ್ಮದಾತೀರದಲ್ಲಿ ತಪಸ್ಸುಮಾಡುತ್ತಿದ್ದರೆಂದೂ ನಂಬುವದಕ್ಕೆ ಯಾವ ಆಕ್ಷೇಪಣೆಯೂ ಇರುವದಿಲ್ಲ' (ಸೋ.ಶಂ.ಪು. ೬೩) ಎಂಬುದು ಸೋಮನಾಥಯ್ಯನವರ ವಾದ.

ಇದಷ್ಟೂ ಕಲ್ಪನಾರಾಜ್ಯಕ್ಕೆ ಸೇರಿದ್ದೆಂಬುದಕ್ಕೆ ಯಾವ ಸಂಶಯವೂ ಇಲ್ಲ. 'ಗೋವಿಂದಭಗವತ್ಪಾದಾಚಾರ್ಯ'ನೆಂಬ ಒಂದು ಹೆಸರು ರಸಸಿದ್ಧರ ಪರಂಪರೆಯಲ್ಲಿದ್ದರೆ ಅದು ಪ್ರಕೃತ ಗೋವಿಂದಭಗವತ್ಪಾದರ ಹೆಸರೆಂಬುದಕ್ಕೆ ಆಧಾರವೇನೂ ಇಲ್ಲ ರಸಸಿದ್ಧರಲ್ಲಿ ಅದ್ವೈತಿಗಳು ಹೇಗೆ ಬಂದರು? ಆ ಸಿದ್ಧರೇ ಗೌಡಪಾದರ ಶಿಷ್ಯರಾಗಿದ್ದರೆಂಬುದಕ್ಕೆ ಆಧಾರವಿದೆಯೆ? 'ಗೋವಿನ್ದಭಗವತ್ಪಾದಾಚಾರ್ಯೋ ಗೋವಿನ್ದನಾಯಕಃ' ಎಂದು ಸಿದ್ಧವರಂಪರೆಯಲ್ಲಿ ಗೋವಿನ್ದನಾಯಕನೆಂಬ ಮತ್ತೊಂದು ಹೆಸರೂ ಇರುವದರಿಂದ ಗೋವಿಂದನೆಂಬ ಹೆಸರು ಅನೇಕ ರಸಸಿದ್ಧರಿಗೆ ಇತ್ತೆಂದೇಕೆ ಕಲ್ಪಿಸಬಾರದು? ಮಾಧವಾಚಾರ್ಯರು ಸರ್ವದರ್ಶನಸಂಗ್ರಹದಲ್ಲಿ 'ಗೋವಿನ್ದಭಗವತ್ಪಾದೈರಪಿ' ಎಂದು ಬರೆದಿರುವದು ಆ ರಸತಂತ್ರದ ಸಂಪ್ರದಾಯದವರು ಪರಾಮರ್ಶಿಸುವ ಬಗೆಯನ್ನು ಮಾತ್ರ ಸೂಚಿಸುತ್ತದೆ ಎಂದೇಕೆ ಕಲ್ಪಿಸಬಾರದು? ಸರ್ವದರ್ಶನಸಂಗ್ರಹದಲ್ಲಿ ಆಯಾ ದರ್ಶನಗಳನ್ನು ವರ್ಣಿಸುವಾಗ ಹೀಗೆಯೇ ಆಯಾ ದರ್ಶನಗಳ ಪೂರ್ವಾಚಾರ್ಯರುಗಳ ಹೆಸರುಗಳನ್ನು ಪರಾಮರ್ಶಿಸಿರುವದು ಕಾಣುತ್ತದೆ. ಅಷ್ಟುಮಾತ್ರದಿಂದ ಮಾಧವಾಚಾರ್ಯರೇ ತಮ್ಮ ದೃಷ್ಟಿಯಿಂದ ಆ ಗೌರವಾರ್ಥದ ವಿಶೇಷಣಗಳನ್ನು ಸೂಚಿಸಿರುವರೆಂಬುದಕ್ಕೇನು ಆಧಾರವಿದೆ? ಇದೂ ಅಲ್ಲದೆ 'ಗೋವಿನ್ದಭಗವತ್ಪಾದಾಚಾರ್ಯೋ ಗೋವಿನ್ದನಾಯಕಃ'– ಎಂಬ ನಾಮಾವಳಿಯಲ್ಲಿ ಇನ್ನು ಯಾರಿಗೂ ಕೊಡದೆ ಇರುವ ಭಗವತ್ಪಾದರೆಂಬ ಗೌರವಾರ್ಥಕಪದವನ್ನು

ಗೋವಿಂದಭಿಕ್ಷುವಿಗೆ ಕೊಟ್ಟರೆಂದು ಕಲ್ಪಿಸುವದಕ್ಕಿಂತ 'ಗೋವಿಂದಭಗವತ್ಪಾದಾಚಾರ್ಯ'ನೆಂಬ ಸಂಕೇತನಾಮದಿಂದಲೇ ಒಬ್ಬ ರಸಸಿದ್ಧನು ಪ್ರಸಿದ್ಧನಾಗಿದ್ದನೆಂದು ಕಲ್ಪಿಸುವದರಲ್ಲಿ ಲಾಘವವಿದೆಯಲ್ಲವೆ ?– ಎಂಬ ಆಕ್ಷೇಪಪರಂಪರೆಗಳು ಹುಟ್ಟಿಕೊಳ್ಳುತ್ತವೆ.

ಹೀಗೆಯೇ ಮಾಧವಕವಿಯು ಗೋವಿಂದಭಗವತ್ಪಾದರು ಒಂದು ಚೋಟಗಲದ ದ್ವಾರವುಳ್ಳ ಗುಹೆಯೊಳಗೆ ಯೋಗಾಭ್ಯಾಸವನ್ನು ಮಾಡಿಕೊಂಡಿದ್ದರೆಂದು (ಮೊ.ಶಂ. ೫–೯೨) ಕಲ್ಪಿಸಿರುವದಕ್ಕೆ 'ನಾರಾಯಣಂ ಪದ್ಮಭುವಂ....' ಎಂಬ ಗುರುಪರಂಪರೆಯ ಸ್ತೋತ್ರದಲ್ಲಿ ಅವರ ಹೆಸರಿಗೆ 'ಗೋವಿನ್ದಯೋಗೀನ್ದ್ರ–ಮ್' ಎಂದಿರುವ ವಿಶೇಷಣವೇ ಆಧಾರವಾಗಿದ್ದಿರಬಹುದೆಂದು ನಮ್ಮ ತರ್ಕ.

ಚಿದ್ವಿಲಾಸೀಯದಲ್ಲಿ ತಾಯಿಯನ್ನು ಸಮಾಧಾನಗೊಳಿಸಿ ಆಚಾರ್ಯರು ಬೇಗನೆ ಕ್ರಮಸಂನ್ಯಾಸವನ್ನು ಪಡೆದುಕೊಳ್ಳುವ ಅಭಿಲಾಷೆಯಿಂದ ತಮಗೆ ಗುರುವಾಗುವದಕ್ಕೆ ತಕ್ಕವನನ್ನು ಹುಡುಕಿಕೊಂಡು ಎಲ್ಲೆಲ್ಲಿಯೂ ಹುಡುಕುತ್ತಾ ಕ್ರಮವಾಗಿ ವಿಷ್ಣುವು ತಪಸ್ಸುಮಾಡುತ್ತಿರುವ ಬದರಿಗೆ ಹೋದರು (ಚಿ. ಶಂ. ೮–೩೬ರಿಂದ ೩೮) ಎಂದಿಷ್ಟೇ ಬರೆದಿದೆ. ಬದರಿಯ ಹೆಸರನ್ನು ಮತ್ತೆ ಯಾರೂ ಎತ್ತಿಲ್ಲ. ಬಾದರಾಯಣರೂ ಗೌಡಪಾದರೂ ಬದರಿಯಲ್ಲಿದ್ದರೆಂಬ ಐತಿಹ್ಯವನ್ನು ಇಟ್ಟುಕೊಂಡು ಗೋವಿಂದಭಗವತ್ಪಾದರನ್ನು ಅಲ್ಲಿಗೇ ಚಿದ್ವಿಲಾಸರು ವರ್ಗಾಯಿಸಿರಬಹುತೆಂದು ಕಾಣುತ್ತದೆ.

ಅಂತೂ ಗೌಡಪಾದರಂತೆ ಗೋವಿಂದಭಗವತ್ಪಾದರ ವೃತ್ತಾಂತವೂ ನಿಷ್ಕೃಷ್ಟವಾಗಿ ಯಾರೊಬ್ಬರಿಗೂ ತಿಳಿಯದು. ಎಲ್ಲರೂ ಕಲ್ಪನಾಜಾಲದಲ್ಲಿಯೇ ಒದ್ದಾಡುತ್ತಿರುವದು ಕಾಣಬರುತ್ತಿದೆ. ಒಟ್ಟಿನಲ್ಲಿ ಆಚಾರ್ಯರು ಅವರ ಶಿಷ್ಯರಾದರೆಂಬುದೊಂದು ಸರ್ವಸಂಮತವಾಗಿ ಉಳಿದುಕೊಂಡಿರುವ ವಿಷಯ.

ಗೋವಿಂದಭಗವತ್ಪಾದರಿಗೂ ಶಂಕರರಿಗೂ ಆದ ಸಂಭಾಷಣೆ

೬೪. ಇನ್ನು ಮುಂದಿನ ವೃತ್ತಾಂತವನ್ನು ಕೇಳೋಣ. ಗೋವಿಂದಭಗವತ್ಪಾದರವರನ್ನು ಕಂಡ ಶಂಕರಾಚಾರ್ಯರವರು ಅವರನ್ನು ಸ್ತೋತ್ರಮಾಡಿದ ಬಳಿಕ ಅವರು ಸಮಾಧಿಯಿಂದೆಚ್ಚೆತ್ತು 'ನೀನು ಯಾರು ?' ಎಂದರು. ಅದಕ್ಕೆ ಶಂಕರಾಚಾರ್ಯರು :

ನಾಹಂ ಮನುಷ್ಯೋ ನ ಪೃಥಿವೀ ನ ಜಲಂ ನ ತೇಜೋ
ನ ಸ್ಪರ್ಶನೋ ನ ಗಗನಂ ನ ಚ ತದ್ಗುಣಾ ವಾ ।
ನಾಪೀನ್ದ್ರಿಯಾಣ್ಯಪಿ ತು ವಿದ್ಧಿ ತತೋಽವಶಿಷ್ಟೋ
ಯಃ ಕೇವಲೋಽಸ್ತಿ ಪರಮಃ ಸ ಶಿವೋಽಹಮಸ್ಮಿ ॥

—(ಮೊ. ಶಂ. ೫–೯೯)

'ನಾನು ಪೃಥ್ವಿಯಲ್ಲ, ಅಪ್ಪಲ್ಲ, ತೇಜಸ್ಸಲ್ಲ, ವಾಯುವಲ್ಲ, ಆಕಾಶವಲ್ಲ ; ಅವುಗಳ ಗುಣಗಳೂ ಅಲ್ಲ ; ಇಂದ್ರಿಯಗಳೂ ಅಲ್ಲ. ಅವುಗಳೆಲ್ಲವನ್ನೂ ಕಳೆದುಳಿದ ಪರವು ಶಿವನೇ ನಾನು ಎಂದು ತಿಳಿಯಿರಿ' ಎಂದರೆಂದು ಮಾಧವಕವಿ ಬರೆದಿರುತ್ತಾನೆ. "ನ ಭೂಮಿರ್ನ ತೋಯಂ ನ ತೇಜೋ ನ ವಾಯು | ರ್ನ ಖಂ ನೇನ್ದ್ರಿಯಂ ವಾ ನ ತೇಷಾಂ ಸಮೂಹಃ | ಅನೈಕಾನ್ತಿಕತ್ವಾತ್ಸುಷುಪ್ತ್ಯಾಖ್ಯಕಸಿದ್ಧಸ್ತದೇಕೋ ವಶಿಷ್ಟಃ ಶಿವಃ ಕೇವಲೋಽಹಮ್ ||" ಎಂಬ ನಿರ್ವಾಣದಶಕಸ್ತೋತ್ರದ ಮೊದಲನೆಯ ಶ್ಲೋಕವನ್ನು ಮನಸ್ಸಿನಲ್ಲಿಟ್ಟುಕೊಂಡೇ ಆತನು ಈ ಪದ್ಯವನ್ನು ಬರೆದಿರಬಹುದೆಂದು ತೋರುತ್ತದೆ. ವೇದಾಂತಜಿಜ್ಞಾಸುವಾಗಿ ಕ್ರಮಸಂನ್ಯಾಸಕ್ಕೆ ಬಂದಿರುವ ಶಿಷ್ಯನು ಹೀಗೆ ವೇದಾಂತಸಿದ್ಧಾಂತವನ್ನು ಹೇಳಿಕೊಂಡನೆಂಬುದರ ಔಚಿತ್ಯವೇನೋ, ನನಗಂತೂ ತಿಳಿಯದು.

ಚಿದ್ವಿಲಾಸೀಯದಲ್ಲಿ ಹೀಗಿದೆ : ಶಂಕರರು ಬದರಿಗೆ ಹೋಗಿ ಅಲ್ಲಿ ಆಶ್ರಮದಲ್ಲಿ ತಪಸ್ಸನ್ನಮಾಡುತ್ತಿದ್ದ ತೇಜಸ್ವಿಗಳಾದ ಗೋವಿಂದಭಗವತ್ಪಾದರನ್ನು ಕಂಡು ಆಂಜನೇಜ್ಞೆಯಿಂದ ಮೂಲಿಕೆಗಾಗಿ ನೆಲವನ್ನಗೆಯುತ್ತಿರುವವನಿಗೆ ಸುವರ್ಣನಿಧಿಯೇ ಸಿಕ್ಕಿದಂತೆ ಆಶ್ಚರ್ಯಪಡುತ್ತಾ 'ಇವರು ನನಗೆ ಉಪದೇಶಿಸುವದಕ್ಕಾಗಿಯೇ ಅವತರಿಸಿರುವ ವಸಿಷ್ಠರೊ, ಶುಕರೊ, ಅಥವಾ ಕಶ್ಯಪರೊ ? ಅಥವಾ ವ್ಯಾಸರೇ ಇಲ್ಲಿರುತ್ತಾರಂತೆ, ಅವರೇ ಆಗಿರಬೇಕು. ಇವರು ಯಾರೇ ಆಗಲಿ, ಸೂರ್ಯನಂತೆ ತೇಜಸ್ವಿಗಳಾಗಿರುವ ಇವರಿಂದಲೇ ಕ್ರಮಸಂನ್ಯಾಸವನ್ನು ತೆಗೆದುಕೊಳ್ಳೋಣ' ಎಂದು ನಿಶ್ಚಯಿಸಿದರು (ಚಿ. ಶಂ. ೮–೪೭ರಿಂದ ೫೨). ಆ ಬಳಿಕ ಪ್ರದಕ್ಷಿಣನಮಸ್ಕಾರವನ್ನು ಮಾಡಿದ ಶ್ರೀಶಂಕರಾಚಾರ್ಯರನ್ನು ಕಂಡು ಗೋವಿಂದಭಗವತ್ಪೂಜ್ಯಪಾದರು 'ನೀನು ಯಾರು ? ಎಲ್ಲಿಂದ ಬಂದೆ ? ಎಲ್ಲಿಯವನು? ನಿನ್ನ ಹೆಸರೇನು? ದೇಶವು ಯಾವದು? ಇಲ್ಲಿಗೆ ಬಂದು ಎಷ್ಟು ದಿನಗಳಾದವು ? ಏತಕ್ಕೆ ಇಲ್ಲಿಗೆ ಬಂದೆ ?' ಎಂದು ಕೇಳಿದರು. ಶಂಕರರು 'ನಾನು ಕೇರಳದೇಶದಲ್ಲಿ ಕಾಲಟಿಯಲ್ಲಿ ಶಿವಗುರುವಿನ ಮಗನಾಗಿ ಹುಟ್ಟಿದವನು. ಬಾಲ್ಯದಲ್ಲಿಯೇ ತಂದೆ ಪರಲೋಕಕ್ಕೆ ಹೋದದ್ದರಿಂದ ತಾಯಿಯೇ ನನ್ನನ್ನು ಸಾಕಿದಳು. ತಕ್ಕಷ್ಟುಮಟ್ಟಿಗೆ ಶಾಸ್ತ್ರಗಳನ್ನು ಓದಿರುತ್ತೇನೆ. ನದಿಯಲ್ಲಿ ಮೊಸಳೆಯು ಕಾಲು ಹಿಡಿದದ್ದರಿಂದ ತತ್ಕಾಲಕ್ಕೆ ಸಂನ್ಯಾಸವನ್ನು ಸಂಕಲ್ಪಿಸಿದೆನು. ಕ್ರಮಸಂನ್ಯಾಸಕ್ಕೆ ತಕ್ಕ ಗುರುವನ್ನು ಹುಡುಕಿಕೊಂಡು ತಮ್ಮ ಬಳಿಗೆ ಬಂದೆನು. ಸಂನ್ಯಾಸವನ್ನು ಕೊಟ್ಟು ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು' ಎಂದು (ಚಿ. ಶಂ. ೯–೧೦ರಿಂದ ೧೩) ಸ್ವಾಭಾವಿಕರೀತಿಯಿಂದಲೇ ಉತ್ತರವನ್ನು ಕೊಟ್ಟರು.

ಶಂಕರರು ಶಿವಾವತಾರವಾದ್ದರಿಂದ ಆವರಿಗೆ ವೇದಾಂತವೇನೊ ಮೊದಲೇ ತಿಳಿದಿತ್ತು. ಸಂಪ್ರದಾಯರಕ್ಷಣೆಗಾಗಿ ಗುರುಕುಲವಾಸವನ್ನು ಮಾಡಿ ಜನರಿಗೆ

ಮಾರ್ಗವನ್ನು ತೋರಿಸಿದರು ಎಂದು ತಿಳಿಸುವದೇ ಮಾಧವಕವಿಯ ಉದ್ದೇಶ ವೆಂಬುದು ಸ್ಪಷ್ಟವಾಗಿದೆ. ಏಕೆಂದರೆ 'ಸ ಪ್ರಾಹ, ಶಙ್ಕರ, ಸ ಶಙ್ಕರ ಏವ ಸಾಕ್ಷಾಜ್ಜಾತಸ್ತ್ವಮಿತ್ಯಹಮನೈಮಿ ಸಮಾಧಿದೃಷ್ಟ್ಯಾ' (ವಯ. ಶಂ. ೫–೧೦೦) ಸಮಾಧಿದೃಷ್ಟಿಯಿಂದ ನೀನು ಸಾಕ್ಷಾಚ್ಛಂಕರನೇ ಎಂಬುದನ್ನು ನಾನು ತಿಳಿದುಕೊಂಡಿದೇನೆ– ಎಂದು ಗೋವಿಂದಭಗವತ್ಪಾದರು ಹೇಳಿದಂತೆ ಮುಂದಿನ ಶ್ಲೋಕದಲ್ಲಿ ಬರೆದಿರುತ್ತಾರೆ.

ಆಚಾರ್ಯರ ಸಂನ್ಯಾಸಸ್ವೀಕಾರ :

೬೫. ಗೋವಿಂದಭಗವತ್ಪಾದರು ಗುಹಾದ್ವಾರದಿಂದ ತಮ್ಮ ಪಾದಗಳನು ಹೊರಕ್ಕೆ ನೀಡಿದರು. ಶಂಕರಾಚಾರ್ಯರು ಜನರಿಗೆ ಆಚಾರಪ್ರದರ್ಶನವನ್ನು ಮಾಡುವದಕ್ಕಾಗಿ ಆ ಪಾದಗಳನ್ನು ಪೂಜಿಸಿದರು. ಗುರುಗಳನ್ನು ಸೇವಾದ್ಯುಪ ಚಾರಗಳಿಂದ ತುಷ್ಟಿಗೊಳಿಸಿ ಸಂಪ್ರದಾಯಪರಿಪಾಲನಬುದ್ಧಿಯಿಂದ ಅವರಿಂದ ಬ್ರಹ್ಮತತ್ತ್ವದ ಉಪದೇಶವನ್ನು ಬಯಸಿದರು. ಆ ಗೋವಿಂದಯತಿವರ್ಯರು ಅವರ ಪರಿಚರ್ಯೆಯಿಂದ ಸಂತುಷ್ಟರಾಗಿ ನಾಲ್ಕು ವೇದಗಳಿಂದಲೂ ಆರಿಸಿದ ವೇದಾಂತಮಹಾವಾಕ್ಯಗಳಿಂದ (ಚತುರ್ಭಿರ್ವೇದಶೇಖರವಚೋಭಿಃ) ನೀನೇ ಬ್ರಹ್ಮವು ಎಂದು ಉಪದೇಶಿಸಿದರು. ಸೂಕ್ಷ್ಮಬುದ್ಧಿಯುಳ್ಳ ಶಂಕರಾಚಾರ್ಯರು ದಯಾಳುವಾದ ಗುರುವಿನಿಂದ ಶಾಸ್ತ್ರರಹಸ್ಯವೆಲ್ಲವನ್ನೂ ಅರಿತುಕೊಂಡರು. ಪರಾಶರಸತ್ಯವತೀಸುತರಾದ ವ್ಯಾಸರು, ಅವರ ಮಗ ಶುಕಮುನಿ, ಅವರ ಶಿಷ್ಯರಾದ ಗೌಡಪಾದರು, ಅವರ ಶಿಷ್ಯರು ಗೋವಿಂದಭಗವತ್ಪಾದರು-ಇದು ಗುರುಪರಂಪರೆ. ಆ ಪರಂಪರೆಯ ಗೋವಿಂದಭಗವತ್ಪಾದರಲ್ಲಿ ಶಂಕರಾಚಾರ್ಯರು ಶ್ರವಣಮಾಡಿ ದರು (ಮಾ. ಶಂ. ೫–೧೧೧ರಿಂದ ೧೧೬) ಎಂದು ಮಾಧವೀಯದಲ್ಲಿದೆ. ಇಲ್ಲಿ ಕೊನೆಯಲ್ಲಿರುವ 'ವ್ಯಾಸಃ ಪರಾಶರಸುತಃ' ಮತ್ತು 'ಶುಶ್ರಾವ ತಸ್ಯ ನಿಕಟೇ' ಎಂಬ ಮಾಧವೀಯದ ಎರಡು ಶ್ಲೋಕಗಳೇ ವ್ಯಾಸಾಚಲೀಯದಲ್ಲಿ (ವ್ಯಾ. ಶಂ. ೪–೬೩,೬೪) ಕಾಣುತ್ತವೆ. ಆಲ್ಲಿ ಮಿಕ್ಕ ವಿವರಗಳಿಲ್ಲ. 'ಶ್ರೀಶಙ್ಕರೋಽಷ್ಟ ಸಮುಷ್ಟತುರೋಽಪಿ ವೇದಾನ್ ! ಸ ದ್ವಾದಶೇ ಸಕಲಶಾಸ್ತ್ರಕಲಾ ಮವಾಪ ॥' (ವ್ಯಾ. ಶಂ. ೯–೬೫) ಎಂಬ ಶ್ಲೋಕಾರ್ಧದಲ್ಲಿ ಆಗ ಅವರಿಗೆ ಹನ್ನೆರಡು ವರ್ಷವಯಸ್ಸಾಗಿತ್ತೆಂದು ಮಾತ್ರ ತಿಳಿಸಿದೆ.

ಜಿಜ್ಞಾಸೀಯದಲ್ಲಿರುವದೇನೆಂದರೆ : ಇಹಾಮುತ್ರಾರ್ಥಫಲತ್ಯಾಗ, ನಿತ್ಯಾನಿತ್ಯವಿವೇಕ, ಶಮಾದಿಗುಣಸಂಪತ್ತಿ, ಮುಮುಕ್ಷುತ್ವ, ಆನಾಲಸ್ಯ, ದೇಹಾಭಿ ಮಾನಾಭಾವ, ಏಷಣಾತ್ರಯರಾಹಿತ್ಯ–ಮುಂತಾದ ಗುಣಗಳನ್ನು ಕಂಡು ಇವನು ಸಂನ್ಯಾಸಾಶ್ರಮಕ್ಕೆ ಯೋಗ್ಯನೆಂದರಿತು ಹತ್ತಿರಕ್ಕೆ ಕರೆದು, ಅವನು ನಮಸ್ಕರಿಸಿದ ಮೇಲೆ ಅವನನ್ನು ಆಲಂಗಿಸಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ತತ್ತ್ವಮಸಿ

ಮುಂತಾದ ಮಹಾವಾಕ್ಯಗಳನ್ನೂ ಮುಮುಕ್ಷುಗಳು ನಿತ್ಯವೂ ಧ್ಯಾನಮಾಡ ತಕ್ಕ ರಹಸ್ಯವನ್ನೂ, ಸಂನ್ಯಾಸಿಗಳು ಆಚರಿಸತಕ್ಕದ್ದೆಂದು ವಿಶ್ವೇಶಸ್ಮೃತಿಯಲ್ಲಿ ಹೇಳಿರುವ ಧರ್ಮಗಳನ್ನೂ ಉಪದೇಶಿಸಿ ಕ್ರಮಸಂನ್ಯಾಸವನ್ನು ಕೊಟ್ಟು ತತ್ತ್ವೋಪದೇಶವನ್ನು ಮಾಡಿದರು. "ಆ ಪರಮಾತ್ಮನೇ ನಾನೆಂದು ತಿಳಿದು ಎಲ್ಲೆಲ್ಲಿಯೂ ಸಮದರ್ಶನನಾಗಿರು. ಮಿಕ್ಕ ಮಾತುಗಳನ್ನಾಡದಿರು, ಸ್ತ್ರೀಯರನ್ನು ನೋಡಬೇಡ. ಪುತ್ರ, ಮಿತ್ರ, ಸುವಸ್ತ್ರ, ಧನಧಾನ್ಯ, ರತ್ನ, ಮಣ್ಣು, ಕಲ್ಲು, ಕಟ್ಟಿಗೆ–ಇವುಗಳಲ್ಲಿ ಸಮುದರ್ಶಿಯಾಗಿರು. ಅತ್ಯಾಹಾರ, ಅನಾಹಾರ, ಹಿಂಸಾ, ಅನೃತ, ಪ್ರತಿಗ್ರಹ, ಅಸೂಯೆ, ಮಾನಾಪಮಾನ–ಇವುಗಳನ್ನು ಬಿಟ್ಟು ಯಾವಾಗಲೂ ನಡೆದುಕೊಳ್ಳುವನಾಗು. ಜೀವನ್ಮುಕ್ತನಾಗಿ ಶರೀರವನ್ನು ಸುಟ್ಟಬಳಿಕ ಯಂತೆ ಮಾಡಿಕೊಂಡಿರು. ಕೌಪೀನಕಟಿಸೂತ್ರದಂಡಕಮಂಡಲುಗಳನ್ನಿಟ್ಟುಕೊ. ಕಾಷಾಯ ಅಥವಾ ನಾರು ಬಟ್ಟೆ– ಇವುಗಳನ್ನಿಟ್ಟುಕೊ. ಒಂದೇ ನಗರದಲ್ಲಿರಬೇಡ, ಒಂದೇ ಮನೆಯಲ್ಲಿ ಭಿಕ್ಷೆಯನ್ನು ಮಾಡದಿರು. ವಿಹಿತವಾದದ್ದನ್ನು ಬಿಟ್ಟು ಭಿಕ್ಷೆಯನ್ನುಂಡು ಧನಸಂಪಾದನೆಯಲ್ಲಿ ಉದ್ಯುಕ್ತನಾಗುವ ಯತಿಯು ನಿಂದಿತನಾಗುವನು. ನಿರ್ಗುಣ, ನಿಷ್ಕಲ, ನಿರ್ವಿಕಲ್ಪ, ನಿರಂಜನ ಬ್ರಹ್ಮವೇ ನಾನೆಂದು ಯಥಾಸುಖವಾಗಿ ವಿಹರಿಸುತ್ತಿರು' ಎಂದು ಉಪ್ಪಣೆ ಕೊಟ್ಟರು (ಚಿ. ಶಂ. ೯–೧೪ ರಿಂದ ೩೮). ಗುರುಪರಂಪರೆಯನ್ನು ಕೇಳುವ ಕುತೂಹಲವನ್ನು ಶಂಕರರು ಪ್ರಕಟಿಸಲು ಸರ್ವವಿದ್ಯೇಗಳಿಗೂ ಈಶನಾದ ಶಿವನು ವಿಷ್ಣುವಿಗೆ ಉಪದೇಶಿಸಿದನು : ವಿಷ್ಣುವು ಬ್ರಹ್ಮನಿಗೆ, ಬ್ರಹ್ಮನು ವಸಿಷ್ಠನಿಗೆ, ವಸಿಷ್ಠನು ಶಕ್ತಿಗೆ, ಶಕ್ತಿಯು ಪರಾಶರನಿಗೆ, ಆತನು ವ್ಯಾಸನಿಗೆ, ವ್ಯಾಸನು ಶುಕನಿಗೆ, ಶುಕನು ಗೌಡಪಾದನಿಗ–ಹೀಗೆ ಬೋಧಿಸಿದರು. ಆ ಗೌಡಪಾದರೇ ನಮ್ಮ ಗುರುಗಳು–ಎಂದು ಹೇಳಿ ಗೌಡಪಾದರನ್ನು ಹೊಗಳಿದೆ (ಚಿ.ಶಂ. ೯–೩೬ ರಿಂದ ೪೮),

ಆಚಾರ್ಯರ ಸಂನ್ಯಾಸದ ಬಗ್ಗೆ ವಿಚಾರ

೬೬. ಈಗ ಮೂರೂ ಶಂಕರವಿಜಯಗಳ ಹೋಲಿಕೆಯಿಂದ ವಿಮರ್ಶಿಸಿ ತಿಳಿಯತಕ್ಕ ವಿಷಯಗಳು ಕೆಲವಿವೆ :

ಮೊದಲನೆಯದಾಗಿ ಶಂಕರಾಚಾರ್ಯರು ಮೊಸಳೆ ಹಿಡಿದಾಗ ಮನಸ್ಸಿನಲ್ಲಿ ಸಂನ್ಯಾಸವನ್ನು ಮಾಡಿದರು (ಸಂನ್ಯಸನಂ ಮನಸಾ ವ್ಯಧಾತ್ ಮಾ. ಶಂ. ೫–೯೭) ಎಂದು ಹೇಳಿದ್ದ ಮಾಧವನು ಗೋವಿಂದಭಗವತ್ಪಾದರನ್ನು ಅವರು ಕಂಡಾಗ ದಂಡಕಾಷಾಯವಸ್ತ್ರಗಳನ್ನಿಟ್ಟುಕೊಂಡಿದ್ದರೆಂದಿದಾನೆ (ದಣ್ಡಾನ್ವಿತೇನ ಧೃತರಾಗವಾಮ್ಬರೇಣ ಮಾ. ಶಂ. ೫–೯೦). ದಂಡಕಾಷಾಯವಸ್ತ್ರಗಳ ಧಾರಣೆ ಯಾವಾಗ ಆಯಿತು ? ಗುರುಗಳು ' ನಾಲ್ಕು ಮಹಾವಾಕ್ಯಗಳನ್ನು '

ಉಪದೇಶವು (ಮಾ. ಶಂ. ೫–೧೦೩) ಎಂದಿಷ್ಟೇ ಹೇಳಿದಾನೆಯೇ ಹೊರತು ಯಾವ ಸಂಸ್ಕಾರವನ್ನಾದರೂ ಅವರು ಮಾಡಿಸಿದರೆಂದು ಬರೆದಿಲ್ಲ. ಆ ಗುರೂಪದೇಶವೇ ಕ್ರಮಸಂನ್ಯಾಸವೆಂದು ಮಾಧವಕವಿಯ ಅಭಿಪ್ರಾಯವೆ? ಚಿದ್ವಿಲಾಸೀಯವಲ್ಲಿ ಕ್ರಮಸಂನ್ಯಾಸವ್ಯಾಪ್ತಿಗಾಗಿ (ಕ್ರಮಸಂನ್ಯಾಸೋಪಲಬ್ಧಯೇ ೮–೬೭) ಗುರುವನ್ನು ಪುಡುಕಿಕೊಂಡು ಹೋದರು ಎಂದಿದೆ; ಗೋವಿಂದಭಗವತ್ಪಾದರು ಕ್ರಮಸಂನ್ಯಾಸವನ್ನು ಕೊಟ್ಟು (ದತ್ತ್ವಾ ಕ್ರಮಸಂನ್ಯಾಸಮ್ ಚಿ. ಶ ೯–೨೦) ತತ್ತ್ವಬೋಧನೆಯನ್ನು ಮಾಡಿದರು ಎಂದಿದೆ. ಹೀಗೆ ಕ್ರಮಸಂನ್ಯಾಸಶಬ್ದವನ್ನು ಮತ್ತೆಮತ್ತೆ ಪ್ರಯೋಗಿಸಿರುವದರಿಂದ ಆಚಾರಪ್ರಿಯರಾದ ಚಿದ್ವಿಲಾಸರು ಯಾವದೋ ಒಂದು ಅಭಿಪ್ರಾಯದಿಂದಲೇ ಆ ಶಬ್ದವನ್ನು ಉಪಯೋಗಿಸಿದಾರೆಂದು ಹೇಳಬೇಕಾಗುತ್ತದೆ. ಆಗ ಗುರುಗಳ ಉಪದೇಶದಲ್ಲಿ ಕೌಪೀನಕಟಿಸೂತ್ರದಂಡಕಮಣ್ಡಲುಕಾಷಾಯಾದಿಗಳನ್ನು ಧರಿಸು (ಕೌಪೀನಂ ಕಟಿಸೂತ್ರಂ ಚ ಧಕ್ಷ್ವ ದಣ್ಡಕಮಣ್ಡಲೂ | ಕಾಷಾಯಂ ವಲ್ಕಲಂ ವಾಪಿ ಚಿ. ಶಂ. ೬–೬೫) ಎಂದಿರುವದರಿಂದ ಕ್ರಮಸಂನ್ಯಾಸವಾದ ಮೇಲೆ ಆಚಾರ್ಯರು ಕಾಷಾಯದಂಡಾದಿಗಳನ್ನು ಧರಿಸಿದರು ಎಂದು ತೋರುತ್ತದೆ. ಶಂಕರಭಗವತ್ಪಾದರು ಸಂನ್ಯಾಸವಿಷಯಕ್ಕೆ ಬರೆಯುವಾಗ ಛಾಂದೋಗ್ಯೋಪನಿಷದ್ಭಾಷ್ಯದಲ್ಲಿ "ಬ್ರಹ್ಮಸಂಸ್ಥಶಬ್ದೋ ನಿವೃತ್ತಸರ್ವಕರ್ಮತತ್ಸಾಧನಪರಿವ್ರಾಡೇಕವಿಷಯೇ ಆತ್ಯಾಶ್ರಮಿಣಿ ಪರಮಹಂಸಾಖ್ಯೇ ವೃತ್ತ ಇಹ ಭವಿತುಮರ್ಹತಿ। ಮುಖ್ಯಾಮೃತತ್ವಫಲಶ್ರವಣಾತ್" | ಅತಶ್ಚ ಇದಮೇವೈಕಂ ವೇದೋಕ್ತಂ ಪಾರಿವ್ರಾಜ್ಯಮ್ | ನ ಯಜ್ಞೋಪವೀತತ್ರಿದಣ್ಡಕಮಣ್ಡಲ್ವಾದಿಪರಿಗ್ರಹಃ' (ಬ್ರಹ್ಮಸಂಸ್ಥ ಎಂಬ ಶಬ್ದವು ಸರ್ವಕರ್ಮಗಳನ್ನೂ ಕರ್ಮಸಾಧನಗಳನ್ನೂ ಬಿಟ್ಟಿರುವ ಆತ್ಯಾಶ್ರಮಿಯಾದ ಪರಮಹಂಸನೆಂಬ ಪರಿವ್ರಾಜಕನಿಗೇ ಸಲ್ಲತಕ್ಕದ್ದೆಂಬುದು ಯುಕ್ತವು. ಏಕೆಂದರೆ ಮುಖ್ಯವಾದ ಅಮೃತತ್ವ–ಮೋಕ್ಷ–ಎಂಬ ಫಲವನ್ನು ಶ್ರುತಿಯಲ್ಲಿ ಹೇಳಿರುತ್ತದೆ. ಆದ್ದರಿಂದ **ಇದೊಂದೇ ನಿಜವಾದ ವೇದೋಕ್ತವಾದ ಪಾರಿವ್ರಾಜ್ಯವೇ ಹೊರತು, ಯಜ್ಞೋಪವೀತತ್ರಿದಣ್ಡಕಮಣ್ಡಲ್ವಾದಿಗಳನ್ನು ಸ್ವೀಕರಿಸುವದಲ್ಲ**–ಎಂದು (ಛಾಂ. ಭಾ. ೨–೨೩–೧) ಬರೆದಿರುತ್ತಾರೆ. ಆಲ್ಲಿ ಸಂನ್ಯಾಸಿಯು ಆಶ್ರಮವೇಷ(ಲಿಂಗ)ವಿಲ್ಲದವನಾಗಿರಬೇಕು–ಎಂಬರ್ಥದ ಸ್ಮೃತಿಯನ್ನು ಅವರು ಉದಾಹರಿಸಿರುತ್ತಾರೆ. ಆಚಾರ್ಯರಿಗೆ ಗೋವಿಂದಭಗವತ್ಪಾದರವರು ಕೊಟ್ಟ ಸಂನ್ಯಾಸವು ಪರಮಹಂಸಪಾರಿವ್ರಾಜ್ಯವೆಂಬದರಲ್ಲಿ ಯಾವ ಸಂಶಯವೂ ಇಲ್ಲ. **'ಪರಮಹಂಸಪರಿವ್ರಾಜಕಾಚಾರ್ಯೆ'** ಎಂಬ ಒಕ್ಕಣೆಯು ಅವರ ಗ್ರಂಥಗಳ ಸಮಾಪ್ತಿವಾಕ್ಯಗಳಲ್ಲೆಲ್ಲ ನಿಯಮವಾಗಿ ಬರುತ್ತದೆ. ಅವರಿಗೆ ದಂಡಕಾಷಾಯಾದಿಗಳು ಇದ್ದವೆ, ಇಲ್ಲವೆ? ಪರಮಹಂಸಸಂನ್ಯಾಸಿಗಳಿಗೆ ದಂ ಡ ಧಾ ರ ಣ ವು ಕೃತಾಕೃತವೆಂದೇ ಈಗಿನ

ನಿಬಂಧಗಳಲ್ಲಿಯೂ ಕಾಣಿಸುತ್ತಿದೆ. ಆದರೆ ಈಗಿನ ಪರಮಹಂಸರೆಂಬವರು 'ದಂಡತರ್ಪಣ'ವೆಂಬ ಕರ್ಮವೊಂದನ್ನು ಇಟ್ಟುಕೊಂಡಿರುತ್ತಾರೆ; ದಂಡಕ್ಕೆ ಬಟ್ಟೆಯಿಂದ ಮುದ್ರಾಂಕವನ್ನು ತೋರಿಸುವ ಬಟ್ಟೆಗಳನ್ನು ಕಟ್ಟಿಕೊಂಡೂ ಇರುತ್ತಾರೆ. ಇದೇನು ಶ್ರೌತವೊ, ಸ್ಮಾರ್ತವೊ ? ಯಾವ ಸ್ಮೃತಿಗಳಲ್ಲಿಯೂ ಈ ಸಂಬಂಧದ ವಾಕ್ಯಗಳು ಕಾಣಿಸುತ್ತಿಲ್ಲವಲ್ಲ! ಚಿದ್ವಿಲಾಸರು ಉದಾಹರಿಸಿರುವ ವಿಶ್ವೇಶ್ವರಸ್ಮೃತಿಯಲ್ಲಿ ಮುದ್ರೆಗಳು ಸಾಂಪ್ರದಾಯಿಕವೆಂದು ಬರೆದಿದೆ[1]; ದಂಡತರ್ಪಣವು ಅಲ್ಲಿಯೂ ಕಾಣಿಸುವದಿಲ್ಲ. ಸೂತ್ರಭಾಷ್ಯದಲ್ಲಿ (೩–೨–೨೦) ಹೇಳಿರುವಂತೆ ಕರ್ಮತತ್ಸಾಧನಗಳನ್ನು ಪರಿತ್ಯಜಿಸಿ ಶಮದಮಾದಿಗಳಿಂದೊಡಗೂಡಿ ಬ್ರಹ್ಮಾನುಸಂಧಾನದಲ್ಲಿರುವದೇ ಪಾರಮಹಂಸ್ಯವಾದರೆ ಪರಮಹಂಸರಿಗೆ ದಂಡವೂ ಅಪರ ತರ್ಪಣವೂ ಹೇಗೆ ನಿಯತವಾಗಿ ಪ್ರಾಪ್ತವಾಗುತ್ತವೆ? ದಂಡಗ್ರಹಣವು ಕೃತಾಕೃತವಾದರೆ ಅದು ಪರಮಹಂಸನ ಗುರುತೆಂದು ಭಾವಿಸಬಹುದೆ ? ಇದನ್ನು ಶಾಸ್ತ್ರಜ್ಞರು ವಿವೇಚಿಸಿನೋಡಬೇಕಾಗಿದೆ.

ಮಹಾವಾಕ್ಯಗಳ ಬಗ್ಗೆ ವಿಮರ್ಶೆ

೬೭. ಎರಡನೆಯದಾಗಿ (ಗೋವಿಂದಭಗವತ್ಪಾದರು ಶಂಕರಾಚಾರ್ಯರಿಗೆ ನಾಲ್ಕು ಮಹಾವಾಕ್ಯಗಳನ್ನು (ಚತುರ್ಭಿರ್ವೇದಶಿಖರವಚೋಭಿಃ) ಉಪದೇಶ ಮಾಡಿದರೆಂದು ಮಾಧವೀಯದಲ್ಲಿದೆ : ತತ್ತ್ವಮಸ್ಯಾದಿದಿವ್ಯಮಹಾವಾಕ್ಯಗಳನ್ನು (ಮಹಾವಾಕ್ಯಾನಿ ದಿವ್ಯಾನಿ ತತ್ತ್ವಮಸ್ಯಾದಿಕಾನ್ಯಪಿ ಚಿ.ಶಂ. ೯–೧೮೪)ಉಪದೇಶಿಸಿದರೆಂದಿದೆ. ಮಹಾವಾಕ್ಯಗಳೆಂದರೇನು? ಜೀವಬ್ರಹ್ಮೈಕ್ಯವನ್ನು ಹೇಳುವ ವಾಕ್ಯಗಳೆಂದು ಅಭಿವ್ಯಾಯವಾದರೆ ಅವು ನಾಲ್ಕೇ ಎಂದು ಗೊತ್ತುಪಡಿಸುವದಕ್ಕೇನು ಪ್ರಮಾಣ ? ಸಂನ್ಯಾಸಗ್ರಹಣಕಾಲದಲ್ಲಿ ಈ ವಾಕ್ಯಗಳನ್ನು ಉಪದೇಶಿಸಬೇಕೆಂಬುದಕ್ಕೆ ಶ್ರುತಿಯಲ್ಲಾಗಲಿ ಸ್ಮೃತಿಯಲ್ಲಾಗಲಿ ವಿಧಿಯು ಇರುವದೆ? ಚಿದ್ವಿಲಾಸರು ಉದಾಹರಿಸಿರುವ ವಿಶ್ವೇಶ್ವರರು ನಿಬಂಧಕಾರರೇ ಹೊರತು ಸ್ಮೃತಿಕಾರರಲ್ಲ. ಆದ್ದರಿಂದ ಅವರು ಹೇಳುವ ಮಹಾವಾಕ್ಯೋಪದೇಶಾದಿಗಳನ್ನು ಸ್ಮೃತ್ಯಂತರಕ್ಕೆ ಹೋಲಿಸಿಯೇ ಪ್ರಮಾಣಿಸಬೇಕಾಗಿದೆ ಸಂನ್ಯಾಸಿಗೆ ಓಂಕಾರೋಪಾಸನೆಯೇ ಮುಖ್ಯವೆಂಬುದು 'ಬ್ರಹ್ಮಸಂಸ್ಥೋಽಮೃತತ್ವಮೇತಿ' ಎಂಬ ಉಪನಿಷದ್ವಾಕ್ಯದಿಂದಲೇ ಸಿದ್ಧವಾಗುತ್ತದೆ. ಹೀಗಿರುವಲ್ಲಿ ಉಪಾಸ್ಯವೆಂದೂ ಮೋಕ್ಷಕ್ಕೆ ಸಾಧನವಾಗಿ ಜಿಜ್ಞಾಸ್ಯವೆಂದೂ ಪ್ರತ್ಯಕ್ಷಶ್ರುತಿಯಿಂದ ಚೋದಿತವಾಗಿರುವ ಓಂಕಾರದ

1. ವಿಶ್ವೇಶ್ವರಸ್ಮೃತಿ ಎಂಬುದು ಇತ್ತೀಚಿನ ನಿಬಂಧವಾಗಿರುವದರಿಂದ ಚಿದ್ವಿಲಾಸರು ಬಹಳ ಈಚಿನವರೆಂದೇ ಆಗುತ್ತದೆ. ಅವರ ಕಾಲವನ್ನು ನಿರ್ಧಾರಣೆಮಾಡುವದಕ್ಕೆ ಇದೊಂದು ಸಾಧನವೆಂದು ಬಗೆಯಬಹುದು.

ಉಪದೇಶವನ್ನು ಬಿಡಿಸಿ ಅವಿಹಿತವಾಗಿರುವ ಮಹಾವಾಕ್ಯೋಪದೇಶವು ಹೇಗೆ ಬಂದೀತು ? **ಶುಕರಹಸ್ಯೋಪನಿಷತ್ತಿನಲ್ಲಿ** ಇದರ ಪ್ರತಿಪಾದನೆಯಿರುವದು ನಿಜ ; ಆದರೆ ಆ ಉಪನಿಷತ್ತು ಸರ್ವಸಂಪ್ರತಿಪನ್ನವಾದ ಪ್ರಮಾಣವೆನ್ನುವದಕ್ಕೆ ಆಧಾರವಿಲ್ಲ. ಲಕ್ಷ್ಮಣಸೂರಿಕೃತ ಭಗವತ್ಪಾದಾಭ್ಯುದಯದಲ್ಲಿ 'ಇತಿ ಪ್ರಶಸ್ಯ ಭಗವಾನ್ ಸಂನ್ಯಾಸಂ ತಸ್ಯ ಮಾನಸಮ್ | ಕರ್ಮಣಾ ವಿಶದೀಕೃತ್ಯ ಮಹಾವಾಕ್ಯ ಚತುಷ್ಟಯಮ್ | ಉಪಾದಿಶತ್ಯತೀನ್ದ್ರಾಯ ಧ್ಯಾನನ್ಯಾಸಾದಿಪೂರ್ವಕಮ್ ||' (ಭ. ಆ. ೩-೪೪,೪೫) **ಧ್ಯಾನನ್ಯಾಸಾದಿಪೂರ್ವಕವಾಗಿ** ನಾಲ್ಕು ಮಹಾವಾಕ್ಯಗಳನ್ನು ಉಪದೇಶಿಸಿದರೆಂದು ಅದೇ ಉಪನಿಷತ್ತಿನ ಆಧಾರದಮೇಲೆ ಬರೆದಿದೆ. ಶ್ರೀಶಂಕರಭಗವತ್ಪಾದರವರು ಆ ಉಪನಿಷತ್ತನ್ನು ಎಲ್ಲಿಯೂ ಪ್ರಮಾಣವಾಗಿ ಹಿಡಿದಿಲ್ಲ. ಇದಲ್ಲದೆ ಈ ವಾಕ್ಯಗಳು ಆಯಾ ಉಪನಿಷತ್ತುಗಳು ಮಹಾತಾತ್ಪರ್ಯದಿಂದ ಬೋಧಿಸುತ್ತಿರುವ ಬ್ರಹ್ಮಾತ್ಮೈಕ್ಯವನ್ನು ಸಂಗ್ರಹಿಸಿ ತಿಳಿಯಿಸುವದರಿಂದ ಮಹಾವಾಕ್ಯಗಳೆನಿಸಿರುವವೇ ಹೊರತು ಜಪಾರ್ಥವಾಗಿ ವಿಧಿಸಿರುವ ಮಂತ್ರಗಳೆಂಬ ಕಾರಣದಿಂದಲ್ಲ. ವೇದಾಂತವಾಕ್ಯಗಳ ಅರ್ಥದ ಜ್ಞಾನವಾದ ಸಮಕಾಲದಲ್ಲಿಯೇ ಕರ್ತವ್ಯವೆಲ್ಲವೂ ಮುಗಿದುಹೋಗಿಬಿಡುತ್ತದೆ (ವಾಕ್ಯಾರ್ಥಜ್ಞಾನಸಮಕಾಲ ಏವ ತು ಪರ್ಯವಸಿತೋ ಭವತಿ। ಮುಂ. ಭಾ. ೧-೧-೬) ಎಂದು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಮತ್ತೆಮತ್ತೆ ಸಾರಿ ಹೇಳಿರುತ್ತಾರೆ. ಆದ್ದರಿಂದ ಈ ಮಹಾವಾಕ್ಯಗಳನ್ನು ಮಂತ್ರಗಳಂತೆ ಉಪದೇಶಿಸುವದೂ ಜಪಕ್ಕೆ ಇಟ್ಟುಕೊಳ್ಳುವದೂ ಶಂಕರಭಗವತ್ಪಾದರ ವೇದಾಂತಸಿದ್ಧಾಂತಕ್ಕೇ ವಿರುದ್ಧವೆಂದಾಯಿತು. ಏಕೆಂದರೆ ಈ ವಾಕ್ಯಗಳು ಬ್ರಹ್ಮಾತ್ಮಸ್ವರೂಪವನ್ನು ತಿಳಿಸಿಕೊಡುವದರಲ್ಲಿಯೇ ಪರ್ಯವಸಾನವಾಗುವವೇ ಹೊರತು ವಿಧಿಶೇಷವಾಗಿರುವ ಬ್ರಹ್ಮವನ್ನು ತಿಳಿಸುವದಿಲ್ಲವೆಂದು ಆಚಾರ್ಯರು ಸಮನ್ವಯಾಧಿಕರಣಭಾಷ್ಯದಲ್ಲಿ ನಿರ್ಣಯಿಸಿರುತ್ತಾರೆ. ಮಹಾವಾಕ್ಯವೆಂಬ ಶಬ್ದವೇ ಶಾಂಕರಭಾಷ್ಯಗಳಲ್ಲಿ ಕಾಣಿಸುವದಿಲ್ಲ.[1] ಆದ್ದರಿಂದ ಆಚಾರ್ಯರಿಗೆ ಗೋವಿಂದಭಗವತ್ಪಾದರವರು ಮಹಾವಾಕ್ಯಗಳ ಉಪದೇಶವನ್ನು ಮಾಡಿದರೆ ? —ಎಂಬುದು ಪರಿಶೀಲನೀಯವಾಗಿರುತ್ತದೆ.

ಗೋವಿಂದಭಗವತ್ಪಾದರ ಗುರುಪರಂಪರೆಯಲ್ಲಿ ತೊಡಕು

೬೮. **ಮೂರನೆಯದಾಗಿ** ಮಾಧವೀಯದಲ್ಲಿಯೂ ನ್ಯಾಸಾಚಲೀಯದಲ್ಲಿಯೂ ಗುರುಪರಂಪರೆಯನ್ನು ಹೇಳುವಾಗ 'ವ್ಯಾಸಃ ಪರಾಶರಸುತಃ'(ಮಾ. ಶಂ

---

1. ಐತರೇಯಭಾಷ್ಯದಲ್ಲಿ 'ವೇದಾನ್ತಮಹಾಭೇರ್ಯಾಂ ತತ್ತರ್ಣಮೂಲೇ ತಾಡ್ಯಮಾನಾಯಾಮ್' ಏ. ಭಾ. ೧-೩ ಎಂದಿರುವ ವಾಕ್ಯವನ್ನು 'ಮಹಾವಾಕ್ಯಭೇರ್ಯಾಮ್' ಎಂದು ಕೆಲವರು 'ಮಹಾವಾಕ್ಯ'ದಲ್ಲಿರುವ ಆಭಿನಿವೇಶದಿಂದ ತಿದ್ದಿಕೊಂಡಿರುವದುಂಟು. ಆದರೆ ಅದು ಸರ್ವಸಂಮತಪಾಠವಲ್ಲ.

೫-೧-೫) ಎಂಬಲ್ಲಿ ವ್ಯಾಸರು, ಶುಕರು, ಗೌಡಪಾದರು, ಗೋವಿಂದಭಗವತ್ಪಾದರು–ಈ ನಾಲ್ವರನ್ನೇ ಉಲ್ಲೇಖಿಸಿದೆ.

ಚಿದ್ವಿಲಾಸೀಯದಲ್ಲಿ ಶಿವ, ವಿಷ್ಣು, ಬ್ರಹ್ಮ, ವಸಿಷ್ಠ, ಶಕ್ತಿ, ಪರಾಶರ–ಇವರನ್ನು ಹಿಂದುಗಡೆಗೆ ಸೇರಿಸಿದೆ. ಈ ದೇಶದಲ್ಲಿ ಶೃಂಗೇರಿಮಠದ ಸಂಪ್ರದಾಯದಂತೆ ಶಾಂತಿಪಾಠವನ್ನು ಮಾಡುವವರು 'ನಾರಾಯಣಂ ಪದ್ಮಭುವಂ ವಸಿಷ್ಠಂ ಶಕ್ತಿಂ ಚ ತತ್ಪುತ್ರಪರಾಶರಂ ಚ | ವ್ಯಾಸಂ ಶುಕಂ ಗೌಡಪದಂ ಮಹಾಂತಂ ಗೋವಿಂದಯೋಗೀಂದ್ರಮಥಾಸ್ಯ ಶಿಷ್ಯಮ್ ||' ಎಂದು ನಾರಾಯಣಾದಿಯಾಗಿಯೇ ಹೇಳುತ್ತಾರೆ ಅನಂತಾನಂದಗಿರೀಯದಲ್ಲಿ ಈ ವಾಕ್ಯವೇ (ಆ.ಶಂ.ಪ್ರ. ೬೦ ಪು. ೨೨೪)[1] ಇದೆ. ಮಾಧವಕವಿ ಪರಾಶರರವರೆಗಿನ ಗುರುಗಳನ್ನು ಬಿಟ್ಟದ್ದಕ್ಕೇನು ಕಾರಣ? ಚಿದ್ವಿಲಾಸೀಯದಲ್ಲಿರುವ ಶಿವನನ್ನೇಕೆ ನಾರಾಯಣಾದಿಶ್ಲೋಕದಲ್ಲಿ ಸಂಗ್ರಹಿಸಲಿಲ್ಲ?– ಎಂಬುದೂ ಇಲ್ಲಿ ವಿಚಾರಣೀಯವಾಗಿದೆ. ನೀಲಕಂಠ ಶಾಸ್ತ್ರಿವಿರಚಿತ **ಶಂಕರಾಭ್ಯುದಯ**ಕಾವ್ಯದಲ್ಲಿ 'ಹರಿಧಾತೃವಸಿಷ್ಠಶಕ್ತಿತತ್ತ್ವನಯವ್ಯಾಸಶುಕೈಃ ಸಗೌಡಪಾದೈಃ | ಗುರುಭಿರ್ಗಮಿತಾಂ ಪರಂಪರಂ ಪರವಿದ್ಯಾಂ ಮಹತೀಮವಾಪ ಸಃ ||' (ಶಂ. ಆ. ೩–೫೦) ಎಂದು ನಾರಾಯಣಾದಿಯಾಗಿದೆಯೇ ಇದೆ. ಈಗ ಶೃಂಗೇರಿಯ ಮಠದ ಸಂಪ್ರದಾಯದವರೂ ಕೆಲವರು 'ಸದಾಶಿವಸಮಾರಂಭಾಂ ಶಙ್ಕರಾಚಾರ್ಯಮಧ್ಯಮಾಮ್ | ಅಸ್ಮದಾಚಾರ್ಯಪರ್ಯನ್ತಾಂ ವನ್ದೇ ಗುರುಪರಮ್ಪರಾಮ್||'ಎಂದು ಹೇಳಿಕೊಳ್ಳುವದು ಕೇಳಬರುತ್ತಿದೆ. ಅಂತೂ ಹೀಗೆ ಅದ್ವೈತಸಂಪ್ರದಾಯವು ಸದಾಶಿವನಿಂದ ಮೊದಲಾಯಿತೊ, ನಾರಾಯಣನಿಂದಲೇ ಬಂದಿತೊ–ಎಂಬುದೊಂದು ತೊಡಕಿನ ಪ್ರಶ್ನೆಯಾಗಿಬಿಟ್ಟಿದೆ.

ಶಂಕರಾಚಾರ್ಯರು ಗುರುಗಳಲ್ಲಿ ಯೋಗಾಭ್ಯಾಸವನ್ನು ಮಾಡಿದರೆ?

೯೯. **ನಾಲ್ಕನೆಯದಾಗಿ** ಇಲ್ಲಿ ವಿಮರ್ಶನೀಯವಾಗಿರುವ ವಿಷಯವೇನೆಂದರೆ 'ಗೋವಿಂದಯೋಗೀಂದ್ರ'ರೆಂದೇ ಪ್ರಸಿದ್ಧರಾಗಿದ್ದ ಗೋವಿಂದಭಗವತ್ಪಾದರವರು ಶಂಕರರಿಗೆ ಯೋಗವಿದ್ಯೆಯನ್ನು ಹೇಳಿಕೊಟ್ಟರೆ, ಇಲ್ಲವೆ? ಆವರು ರಸಸಿದ್ಧರೆಂಬುದಕ್ಕೆ ಇರುವ ತೊಡಕುಗಳನ್ನು ಆಗಲೆ (ಪು. ೭೫)ರಲ್ಲಿ ಹೇಳಿದ್ದೇವೆ. ಶಂಕರಾಚಾರ್ಯರು ಯೋಗವನ್ನು ಯಾರಲ್ಲಿ ಅಭ್ಯಾಸಮಾಡಿದರೆಂಬುದು ಸ್ಪುಟವಾಗಿ ಎಲ್ಲಿಯೂ ತಿಳಿಯಬರುವದಿಲ್ಲ. ಆವರು **ಯೋಗಪ್ರತ್ಯುಕ್ತ್ಯಧಿಕರಣ** ಭಾಷ್ಯದಲ್ಲಿ ಯೋಗದರ್ಶನವನ್ನು ತಿರಸ್ಕರಿಸಿದ್ದರೂ 'ಯೇನ ತ್ವಂಶೇನ ನ

1. ದೇವನಾಗರಿಯ ಆನಂದಗಿರೀಯವು ಈಚೆಗೆ ಸಿಕ್ಕಿದೆ. ಅದರಲ್ಲಿ ಇದು ೬೨ನೆಯ ಪ್ರಕರಣ ಪು. ೧೯೧ ಆಗಿದೆ. ಇನ್ನುಮುಂದೆ ಆ ಸಂಸ್ಕರಣದ ಪ್ರತಿಯನ್ನು 'ದೇ' ಎಂಬ ಅಕ್ಷರದಿಂದ ಸೂಚಿಸುತ್ತಾಹೋಗುವೆವು.

ವಿರುಧ್ಯೇತೇ ತೇನೇಷ್ಟಮೇವ ಸಾಂಖ್ಯಯೋಗಸ್ಮೃತ್ಯೋಃ ಸಾವಕಾಶತ್ವಮ್' (ಸೂ ಭಾ. ೨-೧-೩) ಆದರೆ ಯಾವ ಅಂಶದಲ್ಲಿ ಸಾಂಖ್ಯಯೋಗಸ್ಮೃತಿಗಳು ವೇದವಿರುದ್ಧವಲ್ಲವೋ ಆಷ್ಟರಮಟ್ಟಿಗೆ ಅವಕ್ಕೆ ಅವಕಾಶವಿದೆಯೆಂಬುದು ನಮಗೆ ಇಷ್ಟವೇ –ಎಂದು ಬರೆದಿರುತ್ತಾರೆ. ಇನ್ನೊಂದು ಕಡೆಯಲ್ಲಿ 'ಯೋಗೋಽಪ್ಯಣಿಮಾದ್ಯೈಶ್ವರ್ಯಪ್ರಾಪ್ತಿಫಲೋ ಸ್ಮರ್ಯಮಾಣೋ ನ ಶಕ್ಯತೇ ಸಾಹಸಮಾತ್ರೇಣ ಪ್ರತ್ಯಾಖ್ಯಾತುಮ್' (ಸೂ ಭಾ, ೧-೩-೩೪) ಯೋಗದಿಂದ ಅಣಿಮಾದ್ಯೈಶ್ವರ್ಯರೂಪವಾದ ಫಲವು ಬರುತ್ತದೆಯೆಂದು ಸ್ಮೃತಿಯಲ್ಲಿರುವದನ್ನು ಸಾಹಸಮಾತ್ರದಿಂದ ಅಲ್ಲಗಳೆಯುವದು ಆಗಲಾರದು–ಎಂದು ಬರೆದಿರುತ್ತಾರೆ. ಶಂಕರವಿಜಯಗಳಲ್ಲಿ ಆಚಾರ್ಯರ ಯೋಗಶಕ್ತಿಯನ್ನು ವರ್ಣಿಸಿಯೂ ಇದೆ. ಹೀಗಿರುವಲ್ಲಿ ಗೋವಿಂದಭಗವತ್ಪಾದರು ಯೋಗಶಾಸ್ತ್ರಪ್ರವರ್ತಕರಾದ ಪತಂಜಲಿಗಳ ಅವತಾರವೇ ಎಂದು ವರ್ಣಿಸಿದ್ದರೂ ಅವರಲ್ಲಿ ಶಂಕರರು ಯೋಗವನ್ನು ಅಭ್ಯಾಸಮಾಡಿದರೆಂದು ಬರೆಯಲಿಲ್ಲವೇಕೆ ? –ಎಂಬುದು ಪರಿಶೀಲನೀಯವಾಗಿದೆ.

ಶಂಕರಭಗವತ್ಪಾದರು ಈ ಗುರುಗಳಿಂದಲೇ ಯೋಗವನ್ನು ಕಲಿತಿರಬೇಕೆಂಬುದಕ್ಕೆ ಮಾಧವೀಯದಲ್ಲಿರುವ ಒಂದು ಅದ್ಭುತಘಟನೆಯೂ ಸಾಕ್ಷಿಯಾಗಿದೆ. ಆಚಾರ್ಯರು ಗುರುಸೇವೆಯನ್ನು ಮಾಡಿಕೊಂಡಿರುವಲ್ಲಿ ಮಳೆಗಾಲವು ಬಂದಿತು. ಒಮ್ಮೆ ಐದುದಿನಗಳವರೆಗೂ ಒಂದೇಸಮನೆ ಆನೆಯಸೊಂಡಿಲಗಾತ್ರದ ಧಾರೆಗಳ ಮಳೆ ಸುರಿಯಿತು. ನದಿಯ ನೀರು ಮರಗಳನ್ನು ಕೂಡ ಕೆಡವಿ ಕೊಚ್ಚಿಕೊಂಡು ಉಕ್ಕೇರಿಬಂದಿತು. ಜನರೆಲ್ಲರೂ ಭಯಗ್ರಸ್ತರಾಗಿದ್ದರು. ಗುರುಗಳಾದ ಗೋವಿಂದಭಗವತ್ಪಾದರು ಸಮಾಧಿಸ್ಥರಾಗಿದ್ದರಿಂದ ಅವರನ್ನು ಎಚ್ಚರಗೊಳಿಸಿ ವಿಷಯವನ್ನು ತಿಳಿಸುವದಕ್ಕಾಗದೆ ಶಂಕರರು ತಮ್ಮ ಕರಕಮಂಡಲುವನ್ನೇ ಪ್ರವಾಹದಮುಂದೆ ಇಟ್ಟರು. ನೀರೆಲ್ಲವೂ ಅದರೊಳಗೆ ಹೊಕ್ಕು ಅಡಗಿಕೊಂಡಿತು (ಮಾ. ಶಂ. ೫. ೧೩ಜರಿಂದ ೧೫೯) ಸಮಾಧಿಯಿಂದೆಚ್ಚತ್ತ ಗುರುಗಳು ಇಷ್ಟು ಬೇಗನೆ ಇವನಿಗೆ ಯೋಗಸಿದ್ಧಿಯು ದೊರೆಯಿತಲ್ಲ !– ಎಂದು ಸಂತೋಷಪಟ್ಟರು. (ಯೋಗಸಿದ್ಧಿಮಚಿರಾದಯಮಾಪೇತ್ಯಭ್ಯಪದ್ಯತತರಾಂ ಪರಿತೋಷಮ್ (ಮಾ.ಂ ಶಂ. ೫–೧೩೯). ಕಥೆಯು ಸಾಮಾನ್ಯರು ಎಂದಿಗೂ ನಂಬಲಾರದಷ್ಟು ಅದ್ಭುತಘಟನೆಯೆಂಬುದು ನಿಜವಾದರೂ ಈ ಗುರುಗಳಲ್ಲಿ ಆಚಾರ್ಯರಿಗೆ ಯೋಗವಿದ್ಯೆಯ ಅಭ್ಯಾಸವೂ ಆಯಿತೆಂದೇ ಮಾಧವಕವಿಯ ಅಭಿಪ್ರಾಯವೆಂತ ಹೇಳಲು ನಂಬುವದಕ್ಕೆ ಅಡ್ಡಿಯಿಲ್ಲವೆಂಬುದು ಸ್ಪಷ್ಟ. ಇದಲ್ಲದೆ ಚಿನ್ನದ ನೆಲ್ಲಿಕಾಯಿಗಳ ಮಳೆಯನ್ನು ಸುರಿಯಿಸಿದ ಅದ್ಭುತವನ್ನು ಇದರ ಹಿಂದೆಯೇ ಮಾಧವೀಯದಲ್ಲಿ ವರ್ಣಿಸಿರುತ್ತದೆ. ಆದರೆ ಈ ವಿಷಯಕ್ಕೆ ಮಿಕ್ಕ ಶಂಕರವಿಜಯಗಳ ಬೆಂಬಲವೇನೂ ಕಾಣಿಸುವದಿಲ್ಲ.

ಗೋವಿಂದಭಗವತ್ಪಾದರು ಉಪದೇಶಿಸಿದ ವೇದಾಂತಪ್ರಕ್ರಿಯೆ ಯಾವದು ?

೭೦. ಕೊನೆಯದಾಗಿ ಇಲ್ಲಿ ಯಾವ ಶಂಕರವಿಜಯದಲ್ಲಿಯೂ ಪರಾಮರ್ಶಿಸದೆ ಇರುವ ಒಂದು ಮುಖ್ಯವಿಷಯವನ್ನು ಪ್ರಸ್ತಾಪಿಸಬೇಕಾಗಿದೆ. ಗೋವಿಂದ ಭಗವತ್ಪಾದರು ಶಂಕರರಿಗೆ ಉಪದೇಶಿಸಿದ ವೇದಾಂತಪ್ರಕ್ರಿಯೆಯ ಸ್ವರೂಪ ವೇನು ? ಅವರು ತಮ್ಮ ಹಿಂದೆ ಅಥವಾ ಸಮಕಾಲದಲ್ಲಿ ಇದ್ದ ಪ್ರಕ್ರಿಯಾಂತರಗಳಲ್ಲಿದ್ದ ದೋಷವನ್ನೇನಾದರೂ ತಿಳಿಸಿದರೆ ? ಇದು ಬಹಳ ಮುಖ್ಯವಾದ ವಿಚಾರ. ಏಕೆಂದರೆ ಇದನ್ನು ಗೊತ್ತುಪಡಿಸಿದರೆ ಆಚಾರ್ಯರ ಭಾಷ್ಯಗಳಲ್ಲಿ ಈಗ ಕಾಣಬರುವ ವೇದಾಂತಪ್ರಕ್ರಿಯೆಯ ಸ್ವರೂಪನಿರ್ಧಾರಣೆಗೆ ಬಹಳ ಸಹಾಯವಾದೀತು ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಲ್ಲೆಲ್ಲ 'ಶ್ರೀಮದ್ಗೋವಿಂದಭಗವತ್ಪೂಜ್ಯ ಪಾದಶಿಷ್ಯ' ಎಂಬ ವಿಶೇಷಣವನ್ನು ಹಾಕಿಕೊಂಡೇ ಆಚಾರ್ಯರ ಹೆಸರನ್ನು ಉಲ್ಲೇಖಿಸುವ ಸಮಾಪ್ತಿವಾಕ್ಯಗಳು ಕಾಣಬರುತ್ತಿವೆ. ಇದು ಆಚಾರ್ಯರು ತಮಗೆ ಗೋವಿಂದಭಗವತ್ಪಾದರಲ್ಲಿದ್ದ ಪೂಜ್ಯಬುದ್ಧಿಯನ್ನು ಸೂಚಿಸುವ ವಿಶೇಷಣವೆಂಬುದು ನಿಶ್ಚಯವಾದರೂ ಇದನ್ನು ಆಚಾರ್ಯರೇ ಬರೆದರೋ ಇಲ್ಲವೋ ನಿಶ್ಚಯಿಸುವದಕ್ಕೆ ಬರುವಂತಿಲ್ಲ. ಸುದೈವದಿಂದ **ಮಾಂಡೂಕ್ಯೋಪನಿಷತ್ಕಾರಿಕಾಭಾಷ್ಯದ** ಕೊನೆಮಾಲ್ಲಿ ಆಚಾರ್ಯರು ಗುರುಗಳಿಂದ ತನುಗೆ ಆದ ಪರಮೋಪಕಾರವನ್ನು ವರ್ಣಿಸಿ ಬರೆದ ಶ್ಲೋಕವೊಂದಿದೆ ;

ಯತ್ಪ್ರಜ್ಞಾಲೋಕಧಾಸಾ ಪ್ರತಿಹತಮಗಮದ್ಧ್ವಾನ್ತಮೋಹಾನ್ಧಕಾರೋ
ಮಜ್ಜೋನ್ಮಜ್ಜಚ್ಚ ಘೋರೇ ಹ್ಯಸಕೃದುಪಜನೋದನ್ವತಿ ತ್ರಾಸನೇ ಮೇ।
ಯತ್ಪಾದಾವಾಶ್ರಿತಾನಾಂ ಶ್ರುತಿಶಮವಿನಯಪ್ರಾಪ್ತಿರಗ್ರ್ಯಾ ಹ್ಯಮೋಘಾ
ತತ್ಪಾದೌ ಪಾವನೀಯೌ ಭವಭಯವಿನುದೌ ಸರ್ವಭಾವೈರ್ನಮಸ್ಯೇ ತ

ಮತ್ತೆಮತ್ತೆ ಹುಟ್ಟುವದೆಂಬ ಭಯಂಕರವಾದ ಸಂಸಾರಸಾಗರದಲ್ಲಿ ಮುಳುಮುಳುಗಿ ಏಳುತ್ತಿದ್ದ ನನ್ನ ಹೃದಯದ ಮೋಹಾಂಧಕಾರವು ಯಾರ ಪ್ರಜ್ಞೆಯೆಂಬ ಬೆಳಕಿನ ಪ್ರಭೆಯಿಂದ ತೊಲಗಿತೋ, ಯಾರ ಪಾದಗಳನ್ನು ಆಶ್ರಯಿಸಿದವರಿಗೆ ಶ್ರುತಿ, ಶಮ, ವಿನಯ–ಇವುಗಳ ಅಮೋಘವಾದ ಅಗ್ರ್ಯಪ್ರಾಪ್ತಿಯಾಗುವದೋ, ಸಂಸಾರಭಯವನ್ನು ತೊಲಗಿಸುವ ಅವರ ಪವಿತ್ರಪಾದಗಳನ್ನು ಸರ್ವಭಾವದಿಂದ ಲೂ ನಮಸ್ಕರಿಸುತ್ತೇನೆ–ಎಂದು ಶ್ಲೋಕದ ಅರ್ಥ. ಈ ವಾಕ್ಯದ ಆಧಾರದಿಂದ ಆಚಾರ್ಯರಿಗೆ ಗೋವಿಂದಭಗವತ್ಪಾದರು ಬರಿಯ ಕ್ರಮಸಂನ್ಯಾಸದಾತೃಗಳಾದ ಗುರುಗಳೇ ಅಲ್ಲದೆ ಬ್ರಹ್ಮವಿದ್ಯಾಗುರುಗಳೂ ಆಗಿದ್ದರು, ಅವಿದ್ಯೆಯಿಂದಾಗಿರುವ ಸಂಸಾರಭಯವನ್ನು ನೀಗಿಸುವ ಜ್ಞಾನದಾತೃಗಳವರು ; ವಿದ್ಯೆಯಿಂದಾಗುವ ಶಮವಿನಯಾದಿಗಳಾದ ಬ್ರಹ್ಮನಿಷ್ಠರ ಗುಣಗಳನ್ನು ಆಧಾನಮಾಡಿದವರು–ಎಂದು

ನಾವು ಕಲ್ಪಿಸಬಹುದು. ಹೀಗಿದ್ದರೂ ಆ ಗೋವಿಂದಭಗವತ್ಪಾದರು ವೇದಾಂತ ಪ್ರಕ್ರಿಯೆಯ ಅಸಾಧಾರಣಸ್ವರೂಪವನ್ನು ಏನೆಂದು ಉಪದೇಶಿಸಿದ್ದರೆಂಬುದಕ್ಕೆ ನಮಗೆ ಮತ್ತೆ ಯಾವ ಆಧಾರವೂ ಇಲ್ಲದ್ದರಿಂದ ಸದ್ಯಕ್ಕೆ ಸಿಕ್ಕುತ್ತಿರುವ ಆಚಾರ್ಯರ ಭಾಷ್ಯಗ್ರಂಥಗಳಿಂದಲೇ ಅದನ್ನು ಊಹಿಸಿಕೊಳ್ಳಬೇಕಾಗಿರುತ್ತದೆ.

ಗುರುಗಳಿಂದ ಶಂಕರರಿಗೆ ಭಾಷ್ಯರಚನೆಗೆ ಆಜ್ಞೆ

೭೧. ಮಳೆಗಾಲವು ಕಳೆದಮೇಲೆ ಗುರುಗಳು ಶಿಷ್ಯಾಗ್ರಣಿಯಾದ ಶಂಕರಾಚಾರ್ಯರನ್ನು ಪತ್ತಿರಕ್ಕೆ ಕರೆದು ಹೀಗೆಂದರಂತೆ : 'ಅಪ್ಪ ಧಾರಣಾಧ್ಯಾನ ಸಮಾಧಿಗಳಿಂಪ ಮಳೆಗಾಲವನ್ನು ಕಳೆದ ಮಹಾತ್ಮರು ಈಗ ಎಲ್ಲೆಲ್ಲಿಯೂ ಸಂಚರಿಸುತ್ತಾ ಲೋಕವನ್ನು ಪವಿತ್ರಗೊಳಿಸುವರು. ಆದ್ದರಿಂದ ನೀನೂ ಈಗ ಕಾಶಿಯವರೆಗೆ ಹೋಗು. ಹಿಂದಕ್ಕೆ ವ್ಯಾಸರು ನನಗೆ ಹೇಳಿದ ಒಂದು ಕಥೆಯನ್ನು ಹೇಳುವೆನು ಕೇಳು. ಅತ್ರಿಮುನಿಯು ಹಿಮಾಲಯದಲ್ಲಿ ಸತ್ರಯಜ್ಞವನ್ನು ಮಾಡುತ್ತಿರುವಾಗ ವ್ಯಾಸರನ್ನು ಕುರಿತು 'ತಾವು ವೇದವನ್ನು ಶಾಖೆಗಳಾಗಿ ವಿಂಗಡಿಸಿ ಭಾರತಪುರಾಣಾದಿಗಳನ್ನು ರಚಿಸಿ ಯೋಗಭಾಷ್ಯವನ್ನು ಬರೆದು ಬ್ರಹ್ಮಸೂತ್ರವನ್ನು ರಚಿಸಿದಿರಿ. ಆ ಸೂತ್ರಗಳಿಗೆ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಅರ್ಥವನ್ನು ಮಾಡುತ್ತಿರುತ್ತಾರೆ; ಆದ್ದರಿಂದ ಅದಕ್ಕೊಂದು ಭಾಷ್ಯವನ್ನು ತಾವು ರಚಿಸಬೇಕು' ಎಂದು ನಾನು ಕೇಳಿಕೊಂಡೆನು. ಅವರು 'ಅಪ್ಪ, ನಿನ್ನಬಳಿಗೆ ಕಮಂಡಲು ವಿನಲ್ಲಿಯೇ ನದಿಯನ್ನು ಉಪಸಂಹಾರಮಾಡುವ ಶಿಷ್ಯನೊಬ್ಬನು ಬರುತ್ತಾನೆ. ಆತನು ಈ ದುರ್ಗತಗಳನ್ನು ಖಂಡಿಸುತ್ತಾನೆ' ಎಂದು ಹೇಳಿದರು. ಈಗ ಆ ಲಕ್ಷಣಗಳು ನಿನ್ನಲ್ಲಿ ಕಂಡುಬಂದಿವೆ. ಆದ್ದರಿಂದ ನೀನು ಕಾಶಿಗೆ ಹೋಗು' ಎಂದು ತಮ್ಮ ಸೇವೆಯಲ್ಲಿಯೇ ನಿಲ್ಲಬೇಕೆಂದು ಬಯಸಿದ ಶಂಕರನನ್ನು ಒಡಂಬಡಿಸಿ ಕಳುಹಿಸಿದರು (ಮಾ.ಶಂ. ೧೫೧ರಿಂದ ೧೬೩ರ ಸಾರ). ವ್ಯಾಸಾಚಲೀಯದಲ್ಲಿ ಈ ಕಥೆಯಿಲ್ಲ ಶಂಕರರು ಗೋವಿಂದಭಗವತ್ಪಾಡದಲ್ಲಿಂದ ಬದರಿಗೆ ಹೋದರು ('ತೀರ್ಥಾನಿ ಸೇವಿತುಮನಾಃ ಸ ಯಯಾವುದೀಚೀಂ | ಕಾಷ್ಠಾಂ ಕ್ಷಣೇನ ಬದರೀಂ ಮುನಿಸಜ್ಜುಷ್ಟಾಮ್' ॥ ವ್ಯಾ. ಸಂ. ೪-೬೬ ಎಂದಿಷ್ಟೇ ಇದೆ. ಆದ್ದರಿಂದ ಇದು ಮಾಧವನ ಕಲ್ಪನೆಯೇ ಆಗಿರಬೇಕು.

ಗೋವಿಂದಭಗವತ್ಪಾದರು ಶಂಕರರನ್ನು ಸಾಕ್ಷಾಚ್ಛಿವನೇ ಎಂದು ಸಮಾಧಿದೃಷ್ಟಿಯಿಂದ ಅರಿತುಕೊಂಡಿದ್ದರು (ಮಾ. ಶಂ. ೫-೧೦೦) ಎಂದು ಇದೇ ಸರ್ಗದಲ್ಲಿ ಬರೆದ ಕವಿಯು ಇಲ್ಲಿ ವ್ಯಾಸರಿಂದ ಈ ಶಿಷ್ಯನ ಮಹಿಮೆಯನ್ನು ಅರಿತುಕೊಂಡರೆಂದು ಹೇಳಿರುವದು ಸಂಗತವಲ್ಲವೆಂದು ನಮಗೆ ತೋರುತ್ತದೆ. ಭಾರತಾದಿಗಳನ್ನು ಬರೆದ ವ್ಯಾಸರೇ ಬ್ರಹ್ಮಸೂತ್ರಗಳನ್ನು ರಚಿಸಿದರು ಎಂಬುದು ನಮ್ಮ ದೇಶದವರ ಸಾಮಾನ್ಯವಾದ ನಂಬಿಕೆ. ಆದರೆ ಶಂಕರಾಚಾರ್ಯರು ಸೂತ್ರಕಾರ

ರನ್ನು ಬಾದರಾಯಣರೆಂದೇ ಕರೆಯುತ್ತಿರುವದರಿಂದಲೂ ಇವರೇ ಭಾರತಾದಿಗಳ ಕರ್ತೃಗಳೆಂದು ಎಲ್ಲಿಯೂ ಹೇಳದೆಇರುವದರಿಂದಲೂ ಕೃಷ್ಣದ್ವೈಪಾಯನ ವ್ಯಾಸರೂ ಬಾದರಾಯಣವ್ಯಾಸರೂ ಬೇರೆಬೇರೆ– ಎಂದು ಈಗಿನ ಗ್ರಂಥತತ್ತ್ವ ಶೋಧಕರು ಅಭಿಪ್ರಾಯಪಡುತ್ತಿರುತ್ತಾರೆ. ಇನ್ನು 'ಬ್ರಹ್ಮಸೂತ್ರವು' ಎಂದು ಏಕವಚನದಲ್ಲಿ ಇಲ್ಲಿ ಬರೆದಿರುವ ಪ್ರಯೋಗವು ಮಾಧವನಿಗೇ ಅಸಾಧಾರಣ ವಾಗಿದೆ. 'ವೇದಾಂತಸೂತ್ರ'ಗಳೆಂದೇ ಇವನ್ನು ಕರೆಯುವ ರೂಢಿಯಿದೆ; ದರ್ಶನ ವನ್ನು 'ಶಾರೀರಕಮೀಮಾಂಸಾ', 'ವೇದಾಂತಮೀಮಾಂಸಾ' ಎಂದೇ ಉಚಾ ರ್ಯರು ಕರೆದಿದ್ದಾರೆ. ಆಚಾರ್ಯರ ಕಾಲಕ್ಕಿಂತ ಮುಂಚೆಯೇ ಅನೇಕರ ಸೂತ್ರ ಭಾಷ್ಯಗಳು ಆಗಿದ್ದವೆಂಬುದು ನಿಜವಾದರೂ ಮಾಧವನು ಮನಸ್ಸಿನಲ್ಲಿಟ್ಟು ಕೊಂಡಿದ್ದ ಭಾಷ್ಯಕಾರರುಗಳು ಆಗ ಇರಲಿಲ್ಲವೆಂಬುದನ್ನು ಮುಂದೆ ಯಥಾ ಸ್ಥಾನದಲ್ಲಿ ಸ್ಪಷ್ಟಪಡಿಸುವೆವು.

ಚಿದ್ವಿಲಾಸೀಯದಲ್ಲಿ ಈ ಗುರುವಿನಾಜ್ಞೆಯನ್ನು ತಿಳಿಸುವ ಸಂದರ್ಭದಲ್ಲಿ **ಗೌಡಪಾದರ** ವಿಷಯಕ್ಕೆ ಗೋವಿಂದಭಗವತ್ಪಾದರು ಹೇಳಿರುವದು ವಾಚಕರಿಗೆ ಕುತೂಹಲವನ್ನು ಕೆರಳಿಸುವದಾಗಿದೆಯಾದ್ದರಿಂದ ಅದನ್ನು ಇಲ್ಲಿ ಪ್ರಸಂಗವಶ ದಿಂದ ಮೊದಲು ಹೇಳಬೇಕಾಗಿದೆ. ಗುರುಗಳು ತತ್ತ್ವಾರ್ಥವನ್ನು ಉಪದೇಶಿಸಿದ ಬಳಿಕ ಶಂಕರರು 'ನನಗೆ ಗುರುಪರಂಪರೆಯನ್ನು ದಯವಿಟ್ಟು ಹೇಳಬೇಕು' (೯-೩೪) ಎಂದು ಕೇಳಲು ಈಶ್ವರನಿಂದ ಹಿಡಿದು ಗೌಡಪಾದರವರೆಗಿನ ಗುರು ಗಳನ್ನು ಹೇಳಿದರು. 'ಆ **ಭಗವದ್ಗೌಡಪಾದರು** ನಮ್ಮ ಗುರುಗಳು. ಅವರು ಎರಡು ತೋಳುಗಳುಳ್ಳ ಬ್ರಹ್ಮನೇ. ವೇದವೇದಾಂತತತ್ತ್ವಜ್ಞರು, ನಿಖಿಲ ಸ್ಮೃತಿಗಳ ನಿರ್ಮಾತೃಗಳು, ಜೈಮಿನಿಸೂತ್ರಗಳನ್ನು ಸಾರ್ಥವಾಗಿ **ಮೂರು ಸಲ** ಅಧ್ಯಯನಮಾಡಿರುತ್ತಾರೆ. ದಿವ್ಯವಾದ ಉಪನಿಷತ್ತುಗಳನ್ನು ಸಾಭಿಪ್ರಾಯವಾಗಿ ಬಲ್ಲವರು, **ಪಾರಾಶರೀಯಸೂತ್ರ**ಗಳ ತತ್ತ್ವಾರ್ಥವನ್ನು ಬಲ್ಲವರು. ಶಾಸ್ತ್ರಸಮುದ್ರವನ್ನು ಯುಕ್ತಿಯ ಕಡಗೋಲಿನಿಂದ ಕಡೆದು ಅದ್ವೈತಾಮೃತವನ್ನು ಪಡೆದು **ಜೀವನ್ಮುಕ್ತ**ರಾಗಿ **ಸಂಚರಿಸುತ್ತಿರುವರು.** ಹೆಚ್ಚಿಗೆ ಹೇಳುವದರಿಂದೇನು? ದುರ್ಮತಗಳಿಂದ ವಿಪ್ಲವರಾಗಿರುವವರನ್ನು ಕಾಪಾಡುವದಕ್ಕೆ ಅವತರಿಸಿದ **ಶಿವ**ನೇ ('ನಗಜಾಜಾನಿರೇವ ಸಃ'). ಅಂಥ ಮಹಾತ್ಮರು ಜಗತ್ತಿನ ಮೋಹಧ್ವಾಂತವನ್ನು ಕಳೆಯುವದಕ್ಕಾಗಿಯೇ ಸಂಚರಿಸು ತ್ತಿರುವರು' ಎಂದರಂತೆ. ಇಲ್ಲಿ ಹೇಳಿರುವ ಕೆಲವು ವಿಶೇಷಣಗಳನ್ನು ಚಿದ್ವಿಲಾಸರು ಯಾವ ಆಧಾರದಿಂದ ಬರೆದಿರುವರೋ ನಮಗೆ ತಿಳಿಯದು. ಗೌಡಪಾದರು ಚಿರಜೀವಿಗಳಾಗಿ ಲೋಕದಲ್ಲಿ ಈಗಲೂ ಸಂಚರಿಸುತ್ತಾರೆ ಎಂಬ ಅಭಿಪ್ರಾಯವೂ ಗ್ರಂಥಕರ್ತರಿಗೆ ಇದ್ದಂತೆ ತೋರುತ್ತದೆ.

ಈಗ ಆಚಾರ್ಯರಿಗೆ ಗುರುಗಳು ಹೇಳಿದ್ದೇನೆಂಬುದನ್ನು ಕೇಳೋಣ. 'ಎಲೈ ಶಿಷ್ಯನೆ, ನೀನು ಬುದ್ಧಿವಂತನಾಗಿದ್ದು ಎಲ್ಲಾ ದರ್ಶನಗಳನ್ನೂ ಅರಿತುಕೊಂಡಿದ್ದೀಯೆ. ಪಾರಾಶರೀಯಸೂತ್ರಗಳಿಗೂ ದಶೋಪನಿಷತ್ತುಗಳಿಗೂ ಗೀತಾ ಸಹಸ್ರನಾಮಗಳಿಗೂ ರುದ್ರಾಧ್ಯಾಯಕ್ಕೂ ಆರ್ಷವನ್ನು ಯಾರೂ ಅರಿಯದೆ ಇರುತ್ತಾರೆ, ತಪ್ಪಾಗಿ ಹೇಳುತ್ತಿದ್ದಾರೆ. ಅವುಗಳಿಗೆ ಆದ್ವೈತಾರ್ಥಪ್ರಕಾಶಕವಾದ ಭಾಷ್ಯವನ್ನು ನೀನು ಮಾಡು' ಎಂದು ಹೇಳಿ ಶಿವನಿಂದ ಕ್ರಮುವಾಗಿ ಬಂದಿದ್ದ ಚಂದ್ರಮೌಳೀಶ್ವರನನ್ನೂ ರತ್ನಗರ್ಭಗಣಪತಿಯನ್ನೂ ಅವನಿಗೆ ಕೊಟ್ಟರು. (ಇತ್ಯುಕ್ತ್ವಾ ಚನ್ದ್ರಮೌಳೀಶಂ ರತ್ನಗರ್ಭಂ ಗಣಾಧಿಪಮ್ | ಶಿವಾತ್ಕ್ರಮಾದಿಹಾಯಾತಂ ಪದೌ ತಸ್ಮೈ ಸ ದೇಶಿಕಃ|| (ಚಿ. ಶಂ. ೯–೪೯ರಿಂದ ೫೨).

ಆಚಾರ್ಯರು ಈಗ ವೇದಾಂತಸಿದ್ಧಾಂತವನ್ನು ಅಳವಡಿಸಿಕೊಂಡು ಜನರ ಅಜ್ಞಾನವನ್ನು ತೊಲಗಿಸುವ ಸ್ಥಿತಿಗೆ ಬಂದಿದ್ದರೆಂದು ಸ್ಪಷ್ಟವಾಗುತ್ತದೆ. ಮಾಧವ ಕವಿಯು ಮುಖ್ಯವಾಗಿ ಬ್ರಹ್ಮಸೂತ್ರಗಳಿಗೇ ಭಾಷ್ಯವನ್ನು ಮಾಡುವಂತೆ ಗುರುಗಳು ಹೇಳಿದರೆಂದು ಬರೆದಿರುತ್ತಾನೆ; ಜಿದ್ವಿಲಾಸರು ಸೂತ್ರಗೀತೆಗಳಿಗೂ 'ಆದ್ವೈತಾರ್ಥ ಪ್ರಕಾಶವಾದ' ಭಾಷ್ಯವನ್ನು ಮಾಡು– ಎಂದು ಗುರುಗಳು ಹೇಳಿದಂತೆ ಬರೆದಿರುವದನ್ನು ನೋಡಿದರೆ ಆಗ ಆದ್ವೈತಪರವಾದ ಭಾಷ್ಯಗಳೇ ಇರಲಿಲ್ಲ ವೆಂದು ಅವರ ಅಭಿಪ್ರಾಯವೆಂದು ಕಲ್ಪಿಸುವದಕ್ಕೆ ಅವಕಾಶವಿದೆ. ಆದು ನಿಜವಾಪತೆ ಆ ಅಭಿಪ್ರಾಯವು ಸರಿಯಲ್ಲವೆಂಬುದನ್ನು ಮುಂದೆ ನಾವು ಸ್ಪಷ್ಟಗೊಳಿಸುವೆವು. ಆಚಾರ್ಯರು ಸಹಸ್ರನಾಮರುದ್ರಾಧ್ಯಾಯಗಳ ಗ್ರಂಥಕರ್ತರೆ?– ಎಂಬುವನ್ನೂ ಯಥಾಸ್ಥಾನವಲ್ಲಿ ವಿಮರ್ಶಿಸುವೆವು.

ಚಂದ್ರಮೌಳೀಶ್ವರಲಿಂಗದ ವಿಚಾರ

೭೨. ಈ ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆ ಎದ್ದುಕೊಳ್ಳುತ್ತದೆ. ಗೋವಿಂದ ಭಗವತ್ಪಾದರು 'ಶಿವನಿಂದ ಕ್ರಮುವಾಗಿ ಬಂದಿದ್ದ ಚಂದ್ರಮೌಳೀಶ್ವರಲಿಂಗವನ್ನೂ ರತ್ನಗರ್ಭಗಣಪತಿಯನ್ನೂ ಶಂಕರಾಚಾರ್ಯರಿಗೆ ಕೊಟ್ಟರು'– ಎಂಬ ಕಥೆಯು ಜಿದ್ವಿಲಾಸೀಯದಲ್ಲಿ ಮಾತ್ರ ಇದೆ, ಮಾಧವೀಯದಲ್ಲಿಲ್ಲ. ಮಾಧವೀಯವು ಶೃಂಗೇರೀಸಂಪ್ರದಾಯಕ್ಕೆ ಅನುಗುಣವಾದ ಶಂಕರವಿಜಯವೆಂದೇ ಅನೇಕರು ಭಾವಿಸುತ್ತಾರೆ; ಹೀಗಿದ್ದರೂ ಅದರಲ್ಲೀಕೆ ಈ ವಿಚಾರಗಳಿಲ್ಲ ? ಶೃಂಗೇರೀ ಮಠದಲ್ಲಿಯೇ ಈವರೆಗೂ ಚಂದ್ರಮೌಳೀಶ್ವರರತ್ನಗರ್ಭಗಣಪತಿಗಳ ಪೂಜೆ ನಡೆಯುತ್ತಿರುವದಲ್ಲ !–ಎಂಬುದೊಂದು ಶಂಕೆ.

ಇದರ ಜೊತೆಗೆ ಇನ್ನೊಂದು ಶಂಕೆಯಿದೆ : ಶಿವರಹಸ್ಯದಲ್ಲಿ

ತ್ವದರ್ಥೇ ಕೈಲಾಸಾಚಲವರಸುಪಾಲೀಗತಮಹಾ–
ಸಮುದ್ಯಚ್ಚನ್ದ್ರಾಭಂ ಸ್ಫಟಿಕಧವಲಂ ಲಿಙ್ಗಕುಲಕಮ್ |
ಸಮಾನೀತಂ ಸೋಮೋದ್ಯತವಿಮಲಮೌಳ್ಯರ್ಚನಯಾ ಪರಂ
ಕಲೌ ಲಿಙ್ಗಾರ್ಚಾಯಾಂ ಭವತಿ ಹಿ ವಿಮುಕ್ತಿಃ ಪರತರಾ ॥

ಎಂಬ ಶ್ಲೋಕದಲ್ಲಿ ಪಂಚಲಿಂಗಗಳನ್ನು ಶಿವನು ಆಚಾರ್ಯರಿಗೆ ಕೈಲಾಸದಿಂದ ತಂದು ಕೊಟ್ಟನೆಂದಿದೆ; ಚಿದ್ವಿಲಾಸೀಯದಲ್ಲಿರುವಂತೆ ಗೋವಿಂದಭಗವತ್ಪಾದರಿಗೆ ಅದು ಕ್ರಮಾಗತವಾಗಿ ಬಂದಿತ್ತೆಂಬ ಕಥೆಗೆ ಅಲ್ಲಿ ಅವಕಾಶವಿಲ್ಲ. ರತ್ನಗರ್ಭಗಣಪತಿಯ ವಿಚಾರವೇ ಅಲ್ಲಿಲ್ಲ.

ಇನ್ನೊಂದು ಅವಾಂತರವಿಚಾರ. ಚಂದ್ರಮೌಲೀಶ್ವರಲಿಂಗವು ಶೃಂಗೇರಿಗೆ ಹೇಗೆ ಬಂತೆಂಬ ವಿಷಯಕ್ಕೆ ಶೋಧನೆಯನ್ನು ನಡೆಯಿಸಿ ಕುಮಾರಮಾಧವ ಪೌ||ಸಾ|| ಶ್ರೀಕಂಠಶಾಸ್ತ್ರಿಗಳು ಬರೆದಿರುವದರ ಸಾರವೇನೆಂದರೆ: ಶೃಂಗೇರಿಯ ಪೀಠಾಧಿಪರಾಗಿದ್ದ ಶ್ರೀಸಚ್ಚಿದಾನಂದಭಾರತೀಸ್ವಾಮಿಗಳವರು ತಮ್ಮ ಆಸ್ಥಾನ ವಿದ್ವಾಂಸರಾಗಿದ್ದ ಕಾಶೀಲಕ್ಷ್ಮಣತಾಸ್ತ್ರಿಗಳೆಂಬವರಿಂದ ಬರೆಯಿಸಿದ **ಗುರುವಂಶ ಕಾವ್ಯ**ದಲ್ಲಿ ಮೂರನೆಯ ಸರ್ಗದಲ್ಲಿ ಶ್ರೀಶಂಕರಾಚಾರ್ಯರವರು ಸುರೇಶ್ವರಾಚಾರ್ಯರಿಗೆ ಶ್ರೀಶೃಂಗೇರೀಪೀಠದಲ್ಲಿ ಯೋಗಪಟ್ಟವನ್ನು ಕಟ್ಟಿ[1] ತಾವು ಕಾಂಚೀಕ್ಷೇತ್ರಕ್ಕೆ ಹೊರಡುವಾಗ :

ಶ್ರೀಚನ್ದ್ರಮೌಲೀಶ್ವರಲಿಙ್ಗಮುಸ್ಮೈ
ಸದ್ರತ್ನಗರ್ಭಂ ಗಣನಾಯಕಂ ಚ ।
ಸ ವಿಶ್ವರೂಪಾಯ ಸುಸಿದ್ಧದತ್ತಂ
ದತ್ತ್ವಾ ನ್ಯಗಾದೀಚ್ಛಿರಮರ್ಚಯೇತಿ ॥

ಎಂಬ ಶ್ಲೋಕವಿದೆ. ಸಿದ್ಧರು ಕೊಟ್ಟಿದ್ದ ಚಂದ್ರಮೌಲೀಶ್ವರನನ್ನೂ ರತ್ನಗರ್ಭ ಗಣಪತಿಯನ್ನೂ ವಿಶ್ವರೂಪನಿಗೆ ಕೊಟ್ಟು ಇವನ್ನು ಯಾವಾಗಲೂ ಪೂಜಿಸುತ್ತಿರು ಎಂದು ಹೇಳಿದರು– ಎಂದು ಶ್ಲೋಕಕ್ಕೆ ಅರ್ಥ. ಗ್ರಂಥಕರ್ತರೇ ಬರೆದದ್ದೆಂಬ ವ್ಯಾಖ್ಯಾನದಲ್ಲಿ 'ರೇವಣಸಿದ್ಧಮಹಾಯೋಗಿದತ್ತಮ್' ಎಂಬ ವಿವರಣೆಯಿದೆಯಂತೆ (!) ಇದರ ಆಧಾರದಮೇಲೆ ಪಂಡಿತ ಕಾಶೀನಾಥಶಾಸ್ತ್ರಿಗಳೆಂಬವರು ರೇಣುಕಾಚಾರ್ಯರು ಶಂಕರಾಚಾರ್ಯರಿಗೆ ಲಿಂಗವನ್ನು ಕೊಟ್ಟರೆಂಬುದಕ್ಕೆ ಆ ಗ್ರಂಥದ ಪೀಠಿಕೆಯಲ್ಲಿ ಕೊಟ್ಟು ಆಧಾರವನ್ನು ಬರೆದಿರುವಂತೆ (!) ಇದೆಲ್ಲದರ ವಿಮರ್ಶೆಯನ್ನು ಮಾಡಿ ಶ್ರೀಕಂಠಶಾಸ್ತ್ರಿಗಳವರು ರೇಣುಕಾಚಾರ್ಯರೂ ಶಂಕರಾಚಾರ್ಯರೂ ಸಮಕಾಲಿಕರಲ್ಲವೆಂದೂ ಗುರುವಂಶಕಾವ್ಯವೇನೂ ಪ್ರಮಾಣವಲ್ಲವೆಂದೂ ವಾದಿಸಿರುತ್ತಾರೆ (**ಶ್ರೀಚಂದ್ರಮೌಲೀಶ್ವರಲಿಂಗಾದಿವಿಚಾರಪ್ರಚಾರ** ಪು. ೧೯). ಅವರು ಶೃಂಗೇರಿಯ ಮಠದವರ ಅನುಜ್ಞೆಯಂತೆ **ಶಿವರಹಸ್ಯ**ವನ್ನೇ ಪ್ರಮಾಣವಾಗಿ ಹಿಡಿದು ಮೇಲೆ ನಾವು ಉದಾಹರಿಸಿರುವ ಶ್ಲೋಕವನ್ನೇ ಉದಾ

1. ಈ ವಾದಗ್ರಸ್ತವಿಷಯವನ್ನು ಮುಂದೆ ಮಠಗಳ ವಿಷಯವಾಗಿ ಬರೆಯುವಾಗ ಮತ್ತೆ ವಿಚಾರಕ್ಕೆ ತೆಗೆದುಕೊಳ್ಳುವೆವು.

ಮಾಡಿಸಿಕೊಂಡಿರುತ್ತಾರೆ. ಶಿವನು ಕೊಟ್ಟ ಐದು ಲಿಂಗಗಳಿಗೂ ಚಂದ್ರಮೌಳಿ ಎಂದೇ ಹೆಸರಿಂತ ಅವರು ಅರ್ಘ್ಯವನ್ನು ಮಾಡಿರುತ್ತಾರೆ. ಇದು ನಿಜವಾದರೆ ರತ್ನಗರ್ಭಗಣಪತಿಗೇನು ಗತಿ ? ಲಿಂಗವೂ ಗಣಪತಿಯೂ ಗೋವಿಂದಭಗವತ್ಪಾದರಿಂದ ಆಚಾರ್ಯರಿಗೆ ಬಂದವೆಂಬುವನ್ನು ಅವರು ಪ್ರಮಾಣವಾಗಿ ಹಿಡಿಯುವದಿಲ್ಲವೆ ? 'ಸುಸಿದ್ಧದತ್ತನಮ್' ಎಂಬ ಗುರುವಂಶಕಾವ್ಯವು ಪ್ರಮಾಣವಲ್ಲದಿದ್ದರೂ ಆ ಐತಿಹ್ಯವನ್ನು ಹೇಗೆ ಬಂದಿತು ?—ಎಂಬ ಪ್ರಶ್ನೆ ಹಾಗೇ ಉಳಿದುಕೊಳ್ಳುತ್ತದೆ.

ಇದೇ ಶ್ರೀಶಂಕರಶಾಸ್ತ್ರಿಗಳು ಮೇಲೆ ಹೇಳಿರುವ ಪುಸ್ತಿಕೆಯಲ್ಲಿ ಈ ವಿಷಯಕ್ಕೆ ಪು. ೧೬) ಬರೆದಿರುವ ಒಂದು ಐತಿಹಾಸಿಕವಿಷಯವು ವಾಚಕರ ಕುತೂಹಲವನ್ನು ಕೆರಳಿಸುವಂತಿದೆ. ಶಾಲಿವಾಹನಶಕ ೧೫೯೪ರಲ್ಲಿ ಕೆಳದಿಯ ರಾಜರಾದ ಸೋಮಶೇಖರನಾಯಕರಯ್ಯರೆಂಬುವರು ಬಾಳೆಹಳ್ಳಿ (ಬಾಳೆಹೊನ್ನೂರು) ಮಠದ ಗುರುಶಾಂತಸ್ವಾಮಿಯವರು ಕೆಳದಿಯ ಸಂಸ್ಥಾನಕ್ಕೆ ಅಪರಾಧವನ್ನು ಮಾಡಿರುವದಕ್ಕಾಗಿ ಅವರಲ್ಲಿದ್ದ ಚಂದ್ರಮೌಳೀಶ್ವರಲಿಂಗ,ಬಲದ ಶಂಖ,ಏಕಬೆತ್ತ-ಮುಂತಾದವುಗಳನ್ನು ಜಪ್ತಿಮಾಡಿಸಿ ತೆಗೆದುಕೊಂಡು ಇವುಗಳನ್ನು ಶೃಂಗೇರಿಯ ಮಠಕ್ಕೆ ಕೊಟ್ಟು ಭೂಚಕ್ರದ ಕೊಡೆ ಮುಂತಾದದ್ದನ್ನು ತಾವೇ ಇಟ್ಟುಕೊಂಡದ್ದಲ್ಲದೆ ೩೦೦ ಗ್ರಾಮಗಳಲ್ಲಿ ಬಾಳೆಹಳ್ಳಿ ಮಠದವರು ಕಪ್ಪಕಾಣಿಕೆ ವಸೂಲುಮಾಡುತ್ತಿದ್ದದ್ದನ್ನು ತಪ್ಪಿಸಿದರೆಂದು ಬಾಳೆಹಳ್ಳಿ ಮಠದಲ್ಲಿಯೇ ಸಿಕ್ಕಿದ ಶಾಸನದಿಂದ ತಿಳಿಯಬಂದಿರುತ್ತದೆ. (ಶಾಸನದ ಇಲಾಖೆಯ 1927ನೆಯ ಇಸವಿ 58ನೆಯ ನಂಬರು ರಿಪೋರ್ಟು). ಇಲ್ಲಿ ಬರೆದಿರುವ ಚಂದ್ರಮೌಲೀಶ್ವರಲಿಂಗವು ಯಾವದು? ಈ ಕಾಲದಲ್ಲಿ ಶೃಂಗೇರಿಯಲ್ಲಿ ಶ್ರೀನೃಸಿಂಹಭಾರತಿಗಳು (೬ನೆಯವರು)ಪೀಠಾಧಿಪತಿಗಳಾಗಿದ್ದರೆಂದು ತಿಳಿಯಬಂದಿದೆ (KRVTTW pp. 66–67(. ಆ ಗುರುಗಳಿಗಿಂತ ಮುಂಚೆ ಶೃಂಗೇರಿಯ ಮಠದಲ್ಲಿ ಚಂದ್ರಮೌಳೀಶ್ವರರತ್ನಗರ್ಭಗಣಪತಿಗಳು ಇದ್ದವೆ ? —ಎಂಬುದನ್ನು ಐತಿಹಾಸಿಕಶಾಸನಾದಿಗಳಿಂದ ಶೋಧಿಸುವದು ಆವಶ್ಯವಾಗಿದೆ.

ಗುರುವಂಶಕಾವ್ಯದಲ್ಲಿರುವ 'ಸುಪ್ರಸಿದ್ಧದತ್ತಮ್' ಎಂಬ ಶ್ಲೋಕಕ್ಕೆ ಸಿದ್ಧರಾದ ಗೋವಿಂದಭಗವತ್ಪಾದರು ಕೊಟ್ಟದ್ದು ಎಂದೂ ಅರ್ಥಮಾಡುವದಕ್ಕೆ ಬರುತ್ತದೆ; ಏಕೆಂದರೆ ಗೋವಿಂದಭಗವತ್ಪಾದರು ಯೋಗಿಗಳೆಂದೂ ರಸಸಿದ್ಧರೆಂದೂ ಐತಿಹ್ಯಗಳಿವೆಯೆಂದು ಆಗಲೆ ಹೇಳಿರುತ್ತೇವೆ. ಆದರೆ ಶಂಕರಾಚಾರ್ಯರು ಚಂದ್ರಮೌಲೀಶ್ವರಲಿಂಗವನ್ನು ಆರ್ಚಿಸುತ್ತಿದ್ದರೆ ?—ಎಂಬುದೇ ಮೊದಲು ಸಂಶಯಾಸ್ಪದವಾಗಿದೆ. ಆಚಾರ್ಯರು ಕ್ರಮಸಂನ್ಯಾಸವನ್ನು ತೆಗೆದುಕೊಂಡಾಗಲೇ ಮಠಸ್ಥಾಪನೆಯಾಯಿತೆಂಬುದನ್ನು ಯಾರೂ ಒಪ್ಪುವದಿಲ್ಲ. ಸರ್ವಕರ್ಮಸಂನ್ಯಾಸವನ್ನು ಮಾಡುವ ಪರಮಹಂಸರಿಗೆ ದೇವತಾರ್ಚನೆಯು ಎಲ್ಲಿಯೂ ವಿಹಿತವಾಗಿರು

ನದಿಲ್ಲ; ಆದು ಆಚಾರ್ಯರ ಭಾಷ್ಯಗಳಲ್ಲಿ ಎಲ್ಲಿಯೂ ಅಂಗೀಕೃತವಾಗಿಲ್ಲ. ಗುರು ಗಳು ಕೊಟ್ಟವುಗಳೆಂಬ ಕಾರಣದಿಂದ ಲಿಂಗವನ್ನೂ ಗಣಪತಿಯನ್ನೂ ಆಚಾರ್ಯರು ಮತ್ತೊಬ್ಬರಿಂದ ಪೂಜೆಮಾಡಿಸುತ್ತಿದ್ದರೆಂದು ನಿರಾಧಾರವಾಗಿ ಕಲ್ಪಿಸುವದು ಸಾಹಸವಾಗುವದು. ಭಾಷ್ಯಗ್ರಂಥಗಳಲ್ಲಿ ಪ್ರತೀಕೋಪಾಸನೆಗಳಿಗೆ ಉಪಮಾನವಾಗಿ 'ವಿಷ್ಣುವಿಗೆ ಸಾಲಗ್ರಾಮದಂತೆ' ಎಂದು ಎಷ್ಟೋ ಸಲ ಬರೆದಿರುತ್ತದೆ; ಆದರೆ ಒಂದೇ ಒಂದು ಕಡೆಯಲ್ಲಾದರೂ ಶಿವಲಿಂಗದ ಉದಾಹರಣೆಯು ಕಾಣುವದಿಲ್ಲ. ಇವೇಕೆ? ತಾವೇ ಲಿಂಗಾರ್ಚನೆಮಾಡುವವರಾಗಿದ್ದರೆ ಅದನ್ನು ಉದಾಹರಣೆಗೆ ನೆಗೆದುಕೊಳ್ಳುವದನ್ನು ಮರೆತರೆಂದು ಹೇಳುವದು ಸರಿಯಾಗುವದಿಲ್ಲ. ಇಂದಿನ ವರೆಗೂ ಶ್ರೀಶಂಕರಸಂಪ್ರದಾಯದ ಸಂನ್ಯಾಸಿಗಳು 'ನಾರಾಯಣ'ಶಬ್ದೋಚ್ಚಾರಣೆಯನ್ನು ಮಾಡುತ್ತಿರುವದೂ ಸುಪ್ರಸಿದ್ಧವಾಗಿದೆ. ಹೀಗಿರುವದರಿಂದ ಚಂದ್ರವಳ್ಳೀಶ್ವರಲಿಂಗವು ಆಚಾರ್ಯರಿಗೆ ನಿಜವಾಗಿಯೂ ಯಾರಿಂದಲಾದರೂ ಬಂದಿದ್ದಿತೆ? ಎಂಬುದು ಸಂಶಯಗ್ರಸ್ತವಾಗಿಯೇ ಉಳಿಯುತ್ತದೆ. ಎಷ್ಟೋ ಆದ್ಭುತಕಲ್ಪನೆಗಳನ್ನು ಉಲ್ಲೇಖಿಸಿರುವ ಮಾಧವಕವಿಯು ಇದನ್ನು ಪರಾಮರ್ಶಿಸದೆ ಬಿಟ್ಟದ್ದೇಕೆ? – ಎಂಬುದೂ ಬಿಚ್ಚಲಾಗದ ಕಗ್ಗಂಟಾಗಿ ಕುಳಿತಿದೆ.

ಮಣಿಮಂಜರಿಯಲ್ಲಿರುವ ವೃತ್ತಾಂತ

೭೩. ಆಚಾರ್ಯರು ಮಣಿಮಂತನ ಅವತಾರವೆಂದೂ ಸಂಕರಜಾತಿಯವರೆಂದೂ ಮಣಿಮಂಜರೀಕಾರನಾದ ನಾರಾಯಣಪಂಡಿತನು ಬರೆದಿರುವದು ಈಗಾಗಲೆ (ಪು. ೪೪ರಲ್ಲಿ) ವಾಚಕರಿಗೆ ತಿಳಿದಿದೆಯಷ್ಟೆ? ಶಂಕರರ ಬುದ್ಧಿಯು ಸೂಕ್ಷ್ಮವಾಗಿರಲಿಲ್ಲವೆಂದು ತಿಳಿಸುವದಕ್ಕೆಂದು ಈ ಪಂಡಿತನು ತಾಯಿಯು ಅವರಿಗೆ ತಾಮಸಾಹಾರವನ್ನು ತಿನ್ನಿಸುತ್ತಿದ್ದಳೆಂದು ಬರೆದಿರುವದರ ಜೊತೆಗೆ ಗೋವಿಂದ ಭಗವತ್ಪಾದರ ಕಥೆಯನ್ನೂ ಅವರ ವಿಷಯಕ್ಕೆ ಓದುಗರಲ್ಲಿ ಮರಭಿಪ್ರಾಯವುಂಟಾಗುವಂತೆಯೇ ಬರೆದಿರುತ್ತಾನೆ. ಅವನು ಬರೆದಿರುವ ಕಥೆಯಲ್ಲಿ ಗೋವಿಂದ ಭಗವತ್ಪಾದರ ಪೂರ್ವಾಶ್ರಮದ ಮಕ್ಕಳುಗಳ ಹೆಸರುಗಳು ಪತಂಜಲಿಚರಿತ್ರೆಯಲ್ಲಿರುವದಕ್ಕಿಂತ ಭಿನ್ನವಾಗಿರುತ್ತವೆ. ಕಥೆಯೂ ಮಾರ್ಪಟ್ಟಿದೆ. 'ಗೋವಿಂದ ಭಗವತ್ಪಾದರ ಗುರುಗಳಾದ ಗೌಡಪಾದರು ಪ್ರಚ್ಛನ್ನಬೌದ್ಧರೆಂಬ ಅಭಿಪ್ರಾಯವನ್ನು ಆಜ್ಞರ ಮನಸ್ಸಿನಲ್ಲಿ ಬೇರೂರಿಸುವದಕ್ಕೆಂದು ಆ ಪಂಡಿತವರ್ಯನು ಕಲ್ಪಿಸಿರುವ ಕಥೆಯನ್ನು ಪರಮತಗಳವರ ಅಭಿಪ್ರಾಯವನ್ನು ಸಂಗ್ರಹಿಸಿರುವ ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ. ಬಕ್ತಸ್ವಾಮಿ ಎಂಬ ಹೆಸರಿನ ಬೌದ್ಧನೊಬ್ಬನು ಗೌಡಪಾದರನ್ನು ಹೇಗೋ ಮೋಸಪಡಿಸಿ ಅವರಿಗೆ ಸಂನ್ಯಾಸವನ್ನು ಕೊಟ್ಟು 'ಶೂನ್ಯವೇ ಬ್ರಹ್ಮವು' ಎಂದು ಧ್ಯಾನಮಾಡುವಂತೆ ಉಪದೇಶಿಸಿದನಂತೆ. ಮುಂದೆ ಗೋವಿಂದಭಗವತ್ಪಾದರೂ ಆವರ ಶಿಷ್ಯರಾದ ಶಂಕರಾಚಾರ್ಯರೂ ಈ ಮತವನ್ನೇ

ವೈದಿಕವೆಂದು ಜನರಿಗೆ ಬೋಧಿಸಿದ್ದಲ್ಲದೆ ಸನ್ಮಾರ್ಗದಲ್ಲಿದ್ದ ಸಂನ್ಯಾಸಿಗಳನ್ನು ಹಿಂಸಿಸಿ ಬಲಾತ್ಕಾರದಿಂದ ಆವರನ್ನು ಅದ್ವೈತಮತಕ್ಕೆ ತಿರುಗಿಸಿದರಂತೆ! ಅದ್ವೈತಿಗಳು ಹೇಳುವ ನಿರ್ವಿಶೇಷಬ್ರಹ್ಮವೂ ಮಾಧ್ಯಮಿಕರ ಶೂನ್ಯವೂ ಒಂದೇ ಎಂದು ಈ ಫೆನಪಂಡಿತನ ಅಭಿಪ್ರಾಯ! ಅದ್ವೈತಿಗಳ ವೇದಾಂತಪ್ರಕ್ರಿಯೆಯನ್ನು ಅರಿತುಕೊಳ್ಳಲಾರದೆ, ಅಥವಾ ಅಲ್ಪಸ್ವಲ್ಪ ತಿಳಿದರೂ ಅದರಲ್ಲಿ ಅನಾದರವನ್ನುಂಟು ಮಾಡುವದಕ್ಕೆಂದು ಮತಾಂಧರು ಎಂಥೆಂಥ ಕಲ್ಪನೆಗಳನ್ನು ಮನಃಪೂರ್ವಕವಾಗಿ ಮಾಡಿ ಅಪಪ್ರಚಾರವನ್ನು ಮಾಡಿರುವರೆಂಬುದಕ್ಕೆ ಇದೂ ಒಂದು ನಿದರ್ಶನವಾಗಿರುತ್ತದೆ.

---

೬. ಭಾಷ್ಯಾದಿಗಳ ನಿರ್ಮಾಣ

ಆಚಾರ್ಯರು ಗುರುಗಳಲ್ಲಿಂದ ನೇರಾಗಿ ಕಾಶಿಗೆ ಹೋದರೆ ?

೭೪. ಆಚಾರ್ಯರು ಗುರುವಿನ ಆಪ್ಪಣೆಯಂತೆ **ಕಾಶಿಗೆ ಹೋದ ಕಥೆ** ವ್ಯಾಸಾಚಲೀಯದಲ್ಲಿಯೂ ಇಲ್ಲ, ಚಿದ್ವಿಲಾಸೀಯದಲ್ಲಿಯೂ ಇಲ್ಲ. ವ್ಯಾಸಾಚಲೀಯದಂತೆ ತೀರ್ಥಾಟನೆಗಾಗಿ ಆಚಾರ್ಯರು ಗೋವಿಂದಭಗವತ್ಪಾದರನ್ನು ಬಿಟ್ಟು ಉತ್ತರಕ್ಕೆ ಹೋಗಿ ಬದರಿಯನ್ನು ತಲುಪಿದರು (ಚಿದ್ವಿಲಾಸೀಯದಂತೆ ಬದರಿಯಲ್ಲಿಯೇ ಇದ್ದರು). ಆದರೆ ಮಾಧವೀಯ, ಶಂಕರದಿಗ್ವಿಜಯಸಾರ, ಶಂಕರಮಂದಾರಸೌರಭ–ಇವು ಮೂರರಲ್ಲಿಯೂ ಆಚಾರ್ಯರು ಕಾಶಿಗೆ ಹೋದದ್ದರ ವಿಚಾರವು ಇದೆ. ಮಾಧವೀಯದ ಕಥೆಯನ್ನು ಅಲ್ಲಲ್ಲಿ ಖಂಡಿಸಿರುವ ಆತ್ಮಬೋಧರ **ಸುಷವಾ**ಗ್ರಂಥದಲ್ಲಿಯೂ ಕಾಶೀಗಮನವಿಚಾರವಿದೆ. ಚಿದ್ವಿಲಾಸೀಯದಲ್ಲಿ ಕೂಡ ಆಚಾರ್ಯರು ಬದರಿಯಿಂದ ಪ್ರಯಾಗಕ್ಕೆ ಹೋಗಿ ಕಾಶಿಗೆ ಹೋದ ವಿಷಯವಿದೆ. ಆದ್ದರಿಂದ ಅವರು ಕಾಶಿಗೆ ಹೋದರೆಂಬುದು ಬಹುಮತಕ್ಕೆ ಒಪ್ಪಾಗಿದೆಯೆಂದು ನಾವು ಇಟ್ಟುಕೊಳ್ಳಬಹುದು.

ಕಾಶೀಕ್ಷೇತ್ರವು ಸುಪ್ರಸಿದ್ಧ ಪುರಾತನವಿದ್ಯಾಸ್ಥಾನವು. ವರಣಾ, ಅಸಿ–ಎಂಬ ಎರಡು ನದಿಗಳ ನಡುವೆ ಇರುವ ಕಾರಣ ಇದಕ್ಕೆ ವಾರಣಾಸಿ ಎಂಬ ಹೆಸರು ಬಂದಿದೆ. ಕಾಶಿಯಲ್ಲಿ ಮರಣವಾಗುವವರಿಗೆ ಶಿವನೇ ತಾರಕೋಪದೇಶವನ್ನು ಮಾಡುವನೆಂದೂ ಕ್ಷೇತ್ರವು ಬಹಳ ಪವಿತ್ರವಾದದ್ದೆಂದೂ ಪುರಾಣಗಳು ಕೊಂಡಾಡುವವು. ಪ್ರಲಯಕಾಲದಲ್ಲಿಯೂ ರುದ್ರನು ತ್ರಿಶೂಲದಮೇಲೆ ಈ ನಗರವನ್ನು ಎತ್ತಿ ನಿಲ್ಲಿಸಿ ಕಾಪಾಡುವನೆಂದು ಸ್ಥಲಮಾಹಾತ್ಮ್ಯಗಳು. ದಕ್ಷಿಣದೇಶದವರು ಮಿಕ್ಕ ನದಿಗಳನ್ನು ಹೊಗಳುವಾಗ ಗಂಗೆಗೆ ಹೋಲಿಸುವದೂ, ಪವಿತ್ರ ಸ್ಥಲಗಳನ್ನು ದಕ್ಷಿಣಕಾಶಿ ಎಂದು ಸ್ತುತಿಸುತ್ತಿರುವದೂ ಈ ಕ್ಷೇತ್ರದ ಮಹಿಮೆಗೆ ಒಂದು ಹೆಚ್ಚಿನ ಸಂಮತಿಯಾಗಿರುತ್ತದೆಯೆನ್ನಬಹುದು. ಹೀಗೆ ಅನೇಕ ಕಾರಣಗಳಿಂದ ಪ್ರಸಿದ್ಧಿಗೆ ಬಂದ ಈ ಸ್ಥಲವು ಕಾಶೀರಾಜನಿಗೆ ರಾಜಧಾನಿಯಾಗಿದ್ದು ವಿದ್ವಾಂಸರುಗಳಿಗೆ ಆಶ್ರಯವನ್ನಿತ್ತಿತ್ತು ; ಕಾಶಿಯಲ್ಲಿ ವಿದ್ವತ್ತನ್ನು ಪ್ರಕಟಿಸುವವರೇ ವಿದ್ವದ್ವರ್ಯರೆಂದು ಪರಿಗಣಿತರಾದರು. ಗೌತಮಬುದ್ಧನು ತನ್ನ ಧರ್ಮವನ್ನು ಉಪದೇಶಿಸುವದಕ್ಕೆ ಮೊದಲುಮಾಡಿದ್ದು ಇಲ್ಲಿಯೇ ; ಆಲ್ಲಿ **ಸಾರನಾಥ** (ಸಾರಂಗನಾಥ) ಎಂಬ ಬೌದ್ಧರ ಪ್ರಸಿದ್ಧಸ್ಥಾನವಿದೆ. ಬೌದ್ಧರಿಗೂ ಬ್ರಾಹ್ಮಣರಿಗೂ ವಾಗ್ಯುದ್ಧಗಳು ನಡೆದಮೇಲೆ ಬ್ರಾಹ್ಮಣರು ತಾವು ವಾಸವಾಗಿದ್ದ ದಕ್ಷಿಣ ಭಾಗವನ್ನೇ ಕಾಶೀಕ್ಷೇತ್ರವೆಂದು ಕರೆದುಕೊಂಡರು. ಉತ್ತರಕಾಶಿಯಲ್ಲಿ ಸತ್ತವರು ಮುಂದಿನ ಜನ್ಮದಲ್ಲಿ ಕತ್ತೆಯಾಗಿ ಹುಟ್ಟುವರೆಂಬ ಕಥೆಯೂ ಬೌದ್ಧೇತರರಿಂದ

ಕಲ್ಪಿತವಾಯಿತು. ಆ ಭಾಗವು ಬರುಬರುತ್ತಾ ಕ್ಷೀಣವಾಗಿದ್ದದ್ದು ಬೌದ್ಧರ ಉತ್ಸಾಹದಿಂದಲೂ ಸರಕಾರದವರ ಉತ್ತೇಜನದಿಂದಲೂ ಇತ್ತೀಚೆಗೆ ಉಜ್ಜೀವಿತವಾಗುತ್ತಿದೆ. ಕಾಶೀಕ್ಷೇತ್ರವು ವಿದ್ವಾಂಸರ ಕ್ಷೇತ್ರವಾಗಿದ್ದದ್ದರಿಂದಲೇ ಅಲ್ಲಿಗೆ ಹೋಗಿ ಭಾಷ್ಯರಚನೆಯನ್ನು ಮಾಡಿ ತಮ್ಮ ಅದ್ವೈತಸಿದ್ಧಾಂತವನ್ನು ಪ್ರಚಾರಮಾಡುವಂತೆ ಗೋವಿಂದಭಗವತ್ಪಾದರು ಶಿಷ್ಯನಿಗೆ ಅಪ್ಪಣೆಕೊಡಿಸಿರಬಹುದೆಂದು ತೋರುತ್ತದೆ. ಆದರೆ ಚಿದ್ವಿಲಾಸರ ಹೇಳಿಕೆಯಂತೆ ಆಚಾರ್ಯರು ಮೊದಲು ಬದರಿಯಲ್ಲಿ ಭಾಷ್ಯವನ್ನು ರಚಿಸಿದ ಮೇಲೆಯೇ ಕಾಶಿಗೆ ತಮ್ಮ ವಿದ್ವತ್ಪ್ರಕಟನೆಗಾಗಿ ಹೋದರೆಂದು ಕಲ್ಪಿಸಿದರೂ ಅಸಂಭಾವಿತವೆನಿಸುವದಿಲ್ಲ.

ಪದ್ಮಪಾದನೆಂಬ ಶಿಷ್ಯನ ಸ್ವೀಕಾರ

೭೫. ಶಂಕರಾಚಾರ್ಯರು ಕಾಶಿಯಲ್ಲಿ ನಿಂತನೇಲೆ ಒಮ್ಮೆ ಒಬ್ಬ ಬ್ರಾಹ್ಮಣವಟು ಅವರ ಬಳಿಗೆ ಬಂದು ನಮಸ್ಕರಿಸಿದನು. ಅವನ ವೃತ್ತಾಂತವನ್ನು ಕೇಳಲಾಗಿ 'ನಾನು ಚೋಳದೇಶದವನು; ಅಲ್ಲಿ ಪರಿಭಕ್ತರಿಗೆ ಪ್ರೋತ್ಸಾಹಕವಾದ ಕಾವೇರೀನದಿಯು ಹರಿಯುತ್ತಿರುತ್ತದೆ. ಅಲ್ಲಿಂದ ದೇಶಾಟನಮಾಡುತ್ತಾ ಬಂದು ಸಂಸಾರದಿಂದ ಪಾರಾಗಬೇಕೆಂದು ತಮ್ಮನ್ನು ಶರಣುಹೊಕ್ಕಿದೇನೆ' ಎನ್ನಲು ಆಚಾರ್ಯರು ಕೃಪಾಪೂರ್ವಕವಾಗಿ ಅವನಿಗೆ ವಿಧಿವತ್ತಾಗಿ ಸಂನ್ಯಾಸವನ್ನು ಕೊಟ್ಟರು. ಅವನೇ ಸನಂದನನೆಂಬ ಮೊದಲನೆಯ ಶಿಷ್ಯನೆಂದು ಹೇಳುತ್ತಾರೆ. ಹೀಗಿಯೇ ಇನ್ನೂ ಅನೇಕರು ಬಂದು ಆಚಾರ್ಯರ ಶಿಷ್ಯರಾದರು (ಮಾ. ಶಂ. ೬–೧೦ರಿಂದ ೧೬). ಇದು ಮಾಧವೀಯದಲ್ಲಿರುವ ಕಥೆ.

ಚಿದ್ವಿಲಾಸೀಯದಲ್ಲಿ ಈತನು ಅಹೋಬಲಕ್ಷೇತ್ರದಲ್ಲಿ ಲಕ್ಷ್ಮೀ, ಮಾಧವಾಚಾರ್ಯ--ಎಂಬ ಬ್ರಾಹ್ಮಣದಂಪತಿಗಳು ನೃಸಿಂಹನ ಪ್ರಸಾದದಿಂದ ಪಡೆದುಕೊಂಡ ವಿಷ್ಣುಶರ್ಮನೆಂಬ ಮಗನೆಂದೂ ತಂದೆತಾಯಿಗಳು ಸ್ವರ್ಗಸ್ಥರಾದಮೇಲೆ ಸ್ವಪ್ನದಲ್ಲಿ ಆದ ನರಸಿಂಹನ ಅಪ್ಪಣೆಯಂತೆ ಆಚಾರ್ಯರ ಬಳಿಗೆ ಬಂದನೆಂದೂ (ಚಿ. ಶಂ. ೧೯–೧೨ರಿಂದ ೨೪) ಇದೆ. ಈ ವಿವರವನ್ನು ಮತ್ತೆ ಯಾರೂ ಹೇಳಿದಂತೆ ಕಾಣುವದಿಲ್ಲ.

ಅಂತ್ಯಜನ ವೇಷದಿಂದ ವಿಶ್ವೇಶ್ವರನ ದರ್ಶನ

೭೬. ಆಚಾರ್ಯರು ಕಾಶಿಯಲ್ಲಿ ಯಾವ ಭಾಗದಲ್ಲಿದ್ದರೆಂಬುದುಮಾಧವೀಯದಿಂದ ತಿಳಿಯಬರುವದಿಲ್ಲ. ಚಿದ್ವಿಲಾಸೀಯದಲ್ಲಿ ಆಚಾರ್ಯರು ಪ್ರಯಾಗ, ಗಯೆ– ಇವುಗಳ ಮಾರ್ಗವಾಗಿ ಕಾಶಿಗೆ ಬಂದಮೇಲೆ 'ಸ್ನಾತ್ವೈವ ತೋಯೇ ಮಣಿಕರ್ಣಿಕಾಯಾ ವಿಶ್ವೇಶ್ವರಂ ಪ್ರತ್ಯಹಮರ್ಚತಿ ಸ್ಮ | ವಾಸಂ ಚಕಾರಾನಿಶಮೇವ ಶಿಷ್ಯೈಃ ಸಾಕಂ ಸ ಘಟ್ಟೇ ಮಣಿಕರ್ಣಿಕಾಯಾಃ॥' (ಚಿ. ೧೨–೨,೩)

ಎಂದಿರುವದರಿಂದ ಮಣಿಕರ್ಣಿಕಾಘಾಟಿನಲ್ಲಿ ಶಿಷ್ಯರೊಡನೆ ವಾಸವಾಗಿದ್ದು ಕೊಂಡು ನದೀಸ್ನಾನವನ್ನು ಮಾಡಿ ಪ್ರತಿದಿನವೂ ವಿಶ್ವೇಶ್ವರನನ್ನು ಅರ್ಚಿಸುತ್ತಿದ್ದರು–ಎಂದು ತಿಳಿಯಬೇಕಾಗಿದೆ. ಅವರ ದರ್ಶನಕ್ಕೆ ಅನೇಕರು ಬರುತ್ತಿದ್ದರು. ಒಂದು ದಿನ ಎಂದಿನಂತೆ ನದಿಗೆ ಶಿಷ್ಯಸಮೇತರಾಗಿ ಸ್ನಾನಾಹ್ನಿಕಾನುಷ್ಠಾನಕ್ಕೆ ಹೋಗುತ್ತಿರುವಲ್ಲಿ ನಾಲ್ಕು ನಾಯಿಗಳಿಂದೊಡಗೂಡಿ ಬರುತ್ತಿದ್ದ ಅಂತ್ಯಜನನ್ನು ಕಂಡು 'ದೂರ ಸರಿ!' ಎಂದರು. ಅವನು 'ಅದ್ವಿತೀಯವಾದ ಶುದ್ಧಾಸಂಗಸತ್ಯ ಚಿತ್ಸುಖರೂಪವಾದ ಅಖಂಡವಸ್ತುವೊಂದೇ ಎಂದು ವೇದಾಂತಗಳು ಹೇಳುತ್ತಿರುವವು. ಹೀಗಿರುವಲ್ಲಿ ನಿನಗೆ ಇನ್ನೂ ಭೇದಬುದ್ಧಿಯಿದೆಯಲ್ಲ!–ಇದೇ ಆಶ್ಚರ್ಯಕರವು. ದಂಡಕಮಂಡಲುಕಾಷಾಯಗಳನ್ನು ಧರಿಸಿ ಬಲವಾಗಿ ಮಾತಾಡುತ್ತಾ ಜ್ಞಾನದ ವಾಸನೆಯೂ ಇಲ್ಲದ ಕೆಲವರು ಗೃಹಸ್ಥರನ್ನು ವಂಚಿಸುತ್ತಿರುತ್ತಾರಲ್ಲವೆ? 'ದೂರ ಹೋಗು'–ಎಂಬ ಮಾತಿನಿಂದ ದೇಹವನ್ನು ದೂರಗೊಳಿಸಲಿಚ್ಛಿಸುವೆಯೊ, ದೇಹಿಯನ್ನೊ ? ಒಂದು ಅನ್ನಮಯದಿಂದ ಇನ್ನೊಂದು ಅನ್ನಮಯವು ಬೇರೆ ಎಂದು ಹೀಗೆ ಹೇಳುತ್ತಿರುವೆಯೊ, ಅಥವಾ ಒಂದು ಸಾಕ್ಷಿಗಿಂತ ಇನ್ನೊಂದು ಸಾಕ್ಷಿಯು ಬೇರೆಯೆಂದೊ ? ಪ್ರತ್ಯಗಾತ್ಮನಲ್ಲಿ ಬ್ರಾಹ್ಮಣನು, ಶ್ವಪಚನು–ಎಂಬ ಭೇದಬುದ್ಧಿಯು ಹೇಗೆ ಯುಕ್ತವಾದೀತು? ಗಂಗೆಯಲ್ಲಿ ಪ್ರತಿಬಿಂಬಿಸಿದ ಸೂರ್ಯನಿಗೂ ಹೆಂಡದಲ್ಲಿ ಪ್ರತಿಬಿಂಬಿಸಿದ ಸೂರ್ಯನಿಗೂ ಅಂತರವುಂಟೆ ? ಎಲೈ ಮುನಿವರ್ಯನೆ, ಎಲ್ಲಾ ಶರೀರಗಳಲ್ಲಿಯೂ ತಾನೊಬ್ಬನೇ ಇರುವ ಪುರಾಣಪುರುಷನನ್ನು ಕೈಬಿಟ್ಟು ನಾನು ಶುಚಿಯಾದ ದ್ವಿಜನು, ಶ್ವಪಚನೆ, ಅತ್ತ ಸರಿ–ಎಂಬುದು ಎಂಥ ಬುದ್ಧಿಯು !' ಎಂದು ಮುಂತಾಗಿ ತತ್ತ್ವದ ಮಾತುಗಳನ್ನಾಡಿಸಿದನು. ಆಗ ಶಂಕರರು 'ನೀನು ಅಂತ್ಯಜನೆಂಬ ಬುದ್ಧಿಯನ್ನು ಈಗ ಬಿಟ್ಟೆನು. ಯಾವನಿಗೆ ಎಲ್ಲವೂ ಆತ್ಮನೇ ಎಂಬ ಬುದ್ಧಿ ಇರುವದೋ ಅವನು ದ್ವಿಜನಾಗಲಿ ಶ್ವಪಚನಾಗಲಿ, ವಂದನೀಯನೇ ಎಂದು ನನ್ನ ದೃಢನಿಶ್ಚೆಯು, ಅವನೇ ನನ್ನ ಗುರು' ಎಂಬರ್ಥದ ಶ್ಲೋಕಗಳಿಂದ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಅಷ್ಟರಲ್ಲಿ ಆ ಅಂತ್ಯಜನು ಮಾಯವಾಗಿದ್ದನು; ಸಾಕ್ಷಾಚ್ಛಂದ್ರಮೌಲಿಯೇ ಎದುರಿಗೆ ನಿಂತಿದ್ದನು (ಮಾ. ಶಂ. ೬–೨೫ರಿಂದ ೩೯).

ಈ ಕಥೆಯಲ್ಲಿ ಎಷ್ಟರಮಟ್ಟಿಗೆ ನಿಜದ ಅಂಶವಿದೆಯೋ ಹೇಳುವದಕ್ಕೆ ಬರುವದಿಲ್ಲ. ಆತ್ಮಬೋಧರೂ ತಮ್ಮ ಸುಷಮಾಗ್ರಂಥದಲ್ಲಿ 'ಜಾಹ್ನವೀತೀರಮಾಸಾದ್ಯ ಬೋಧಿತೋಽನ್ತ್ಯಜರೂಪಿಣಾ | ವಿಶ್ವೇಶ್ವರೇಣ ಭಾಷ್ಯಂ ಸ ಬ್ರಹ್ಮಸೂತ್ರಸ್ಯ ನಿರ್ಮಮೇ ||' ಎಂದು ಈ ಕಥೆಯನ್ನು ಸಂಗ್ರಹಿಸಿರುತ್ತಾರೆ.

ಚಿದ್ವಿಲಾಸೀಯದಲ್ಲಿ ಈ ಕಥೆಯಿಲ್ಲ. ಅಲ್ಲಿ ಪದ್ಮಪಾದರ ಕಥೆಯನ್ನು ಹೇಳಿದ ಬಳಿಕ ಶಂಕರಾಚಾರ್ಯರು ಒಂದು ದಿನ ಸ್ನಾನಮಾಡಿಕೊಂಡು ಬಂದು

ವಿಶ್ವೇಶ್ವರನನ್ನು ಆಚಾರ್ಯನೆಂಮಾಡಿ 'ಮಹೇಶ್ವರನೆ' ಅದ್ವೈತವು ಸತ್ಯವೊ, ದ್ವೈತವು ಸತ್ಯವೊ ? ಈ ವಿದ್ವಾಂಸರ ಮುಂದೆ ಶ್ರುತಿಸಾರವನ್ನು ಬಲ್ಲ ನೀನೇ ಹೇಳಿ ಎಲ್ಲರ ಸಂಶಯವನ್ನೂ ತೊಲಗಿಸು' ಎಂದು ಕೇಳಿಕೊಳ್ಳಲು ಪಾರ್ವತೀಸಮೇತನಾದ ಶಿವನು ಲಿಂಗದಿಂದ ಹೊರಕ್ಕೆ ಬಂದು ಕಾಣಿಸಿಕೊಂಡು 'ಅದ್ವೈತವೇ ಶುದ್ಧಸತ್ಯವು, ದ್ವೈತವಲ್ಲ' ಎಂದು ಮೂರು ಬಾರಿ ಕೈಯೆತ್ತಿ ಗಟ್ಟಿಯಾಗಿ ಸಾರಿ ಅಂತರ್ಧಾನವಾದನು-(ಚಿ. ಶಂ. ೧೩-೩೮ರಿಂದ ೪೧) ಎಂದಿದೆ. **ಅನಂತಾನಂದಗಿರಿಯು** ಮಧ್ಯಾರ್ಜುನೇಶ್ವರನು ಹೀಗೆಯೇ ಅದ್ವೈತಕ್ಕೆ ತನ್ನ ಸಂಮತಿಯನ್ನು ಕೊಟ್ಟ ಕಥೆಯನ್ನು ತನ್ನ ಶಂಕರವಿಜಯದಲ್ಲಿ (ಪ್ರ. ೪, ಪು. ೧೯, ದೇ. ಪು. ೧೬)ಬರೆದಿರುತ್ತಾನೆ. ಮಾಧವೀಯವ್ಯಾಖ್ಯಾನಕಾರನಾದ **ಡಿಂಡಿಮ**ಕಾರನು (ಮೂ. ಶಂ. ೧೫-೪) ಆನಂದಗಿರಿಯ ಕಥಾಸರಣಿಯನ್ನೇ ಅನುಸರಿಸಿರುತ್ತಾನೆ. ಡಿಂಡಿಮ ವ್ಯಾಖ್ಯಾನವು ನಿರ್ಮಿತವಾದಾಗ ಚಿದ್ವಿಲಾಸೀಯವು ಇನ್ನೂ ಹುಟ್ಟಿರಲಿಲ್ಲವೆ ? ಚಿದ್ವಿಲಾಸರು ಮಧ್ಯಾರ್ಜುನನ ಐತಿಹ್ಯವನ್ನು ಹೀಗೆ ಕಾಶಿಗೆ ಸ್ಥಳಾಂತರಗೊಳಿಸಿ ಕಥೆಯನ್ನು ನಿರ್ಮಿಸಿರಬಹುದೆ ? ಇವರ ನಿಜವನ್ನು ಗ್ರಂಥಕಾಲನಿರ್ಣಯಜ್ಞರು ಶೋಧಿಸಬೇಕಾಗಿದೆ.

ಬೌದ್ಧಮತವು ಪ್ರಬಲವಾವ ಕಾಲದಲ್ಲಿ ದ್ವಿಜರಲ್ಲದವರೂ ವಿದ್ಯಾನಂತರಾಗಿ ಶಾಸ್ತ್ರಜ್ಞರಾಗುತ್ತಿದ್ದದ್ದರಿಂದ ಹೀಗೆ ಒಂದು ಸಂಭಾಷಣೆ ನಡೆದಿರಬಹುದೆಂದೂ (ಸೋ.ಶಂ.ಪು. ೬೯) ಭಗವತ್ಪಾದರು ಚಂಡಾಲನನ್ನು ಗುರು ಎಂದರೆ ಅದ್ವೈತಕ್ಕೆ ಹಾನಿ ಆಥವಾ ಅವಮಾನ ಎಂಬ ಭ್ರಾಂತಿಯಿಂದ ಆ ಚಂಡಾಲನು ಶಿವನೇ ಎಂಬ ಕಥೆಯನ್ನು ಹುಟ್ಟಿಸಿರಬಹುದೆಂದೂ (ಸೋ.ಶಂ. ಪು. ೭೬) **ಸೋಮನಾಥಯ್ಯ** ನವರು ಊಹಿಸಿರುತ್ತಾರೆ. ಆಶುಕವಿತೆಯು ಪ್ರಚುರವಾಗಿರುವ ನಮ್ಮ ದೇಶದಲ್ಲಿ ಚಂಡಾಲನಿಗೂ ಶಂಕರರಿಗೂ ಛಂದೋಬುದ್ಧವಾಗಿಯೇ ಸಂಭಾಷಣೆ ನಡೆದಿರಬಹುದೆಂಮೂ (ಸೋ.ಶಂ. ಪು. ೭೩) ಅವರ ತರ್ಕ. ಹೇಗೇ ಆಗಲಿ, ಶಂಕರಾಚಾರ್ಯಕೃತವೆಂದು ಪ್ರಸಿದ್ಧವಾಗಿರುವ **ಮನೀಷಾಪಂಚಕ**ವೆಂಬ ಶ್ಲೋಕಬದ್ಧ ಪ್ರಕರಣವಿರುವದಂತೂ ನಿಶ್ಚಯ. ಆ ಶ್ಲೋಕಗಳು ಆಚಾರ್ಯಕೃತವೆಂದು ನಮ್ಮ ದೇಶದವರು ಗಟ್ಟಿಮಾಡಿ ಹೇಳಿಕೊಂಡು ನಲಿಯುತ್ತಿರುವದೂ ನಿಶ್ಚಯ.[1] ಈ ಪ್ರಕರಣದ ಆದಿಯಲ್ಲಿ 'ಸತ್ಯಾಚಾರ್ಯಸ್ಯ ಗಮನೇ ಕದಾಚಿನ್ಮುಕ್ತಿದಾಯಕಮ್ | ಕಾಶೀಕ್ಷೇತ್ರಂ ಪ್ರತಿ ಸಹ ಗೌರ್ಯಾ ಮಾರ್ಗೇ ತು ಶಙ್ಕರಮ್ ॥ ೧ ॥ ಅನ್ತ್ಯವೇಷಧರಂ ದೃಷ್ಟ್ವಾ ಗಚ್ಛ ಗಚ್ಛೇತಿ ಚಾಬ್ರವೀತ್ | ಶಙ್ಕರಃ ಸೋಽಪಿ ಚಣ್ಡಾಲಸ್ತಂ ಪುನಃ ಪ್ರಾಹ ಶಙ್ಕರಮ್ ॥ ೨ ॥' ಎಂಬ ಎರಡು ಅವತರಣಿಕಾ

1. ಮನೀಷಾಪಂಚಕವನ್ನು ಅರ್ಥಸಮೇತವಾಗಿ ಆ. ಪ್ರ. ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಪ್ರಕರಣಗಳ ಸಂಗ್ರಹದ ಸಂಪುಟ ೨ರಲ್ಲಿ ಕೊಟ್ಟಿದೆ.

ಶ್ಲೋಕಗಳೂ ಇವೆ. ಇವರಲ್ಲಿ ಅಂತ್ಯಜನೇಷದ ಶಂಕರನು ಪಾರ್ವತೀಸಹಿತನಾಗಿಯೇ ಇದ್ದನೆಂದು ಹೇಳಿರುವದನ್ನು ಲಕ್ಷಿಸಬೇಕು : ನಾಲ್ಕು ನಾಯಿಗಳು ಆವನ ಜೊತೆಯುಲ್ಲಿದ್ದವೆಂಬ ಮಾಳಪನೀಯಕಲ್ಪನೆ ಅಲ್ಲಿಲ್ಲ. ಕಾಶೀ ಕ್ಷೇತ್ರಕ್ಕೆ ಶಂಕರಾಚಾರ್ಯರು ಹೋಗುತ್ತಿರುವಾಗ ಮಾರ್ಗದಲ್ಲಿ ಈ ಘಟನೆ ನಡೆಯಿತೆಂದು ವರ್ಣಿಸಿವೆ ಎಂದು ಬರೆದಿರುವದನ್ನು ನೋಡಿದರೆ ಈ 'ಮನೀಷಾಪಂಚಕವು' ಯಾವದಾದರೊಂದು ಹಳೆಯ ಶಂಕರವಿಜಯವಲ್ಲಿಯೇ ಇದ್ದಿತೊ ?– ಎಂಬ ಶಂಕೆಯುಂಟಾಗುತ್ತದೆ. ಚಿತ್ಸುಖಾಚಾರ್ಯರಚಿತವೆಂಬ **ಬೃಹಚ್ಛಂಕರ ವಿಜಯ**ವು ಕುಂಭಕೋಣದ ಮಠದಲ್ಲಿರುವದಾಗಿ ಹೇಳುತ್ತಾರೆ, ಅದನ್ನು ಹುಡುಕಿ ಇದರ ನಿಜವನ್ನು ಗೊತ್ತುಪಡಿಸುವದು ಗ್ರಂಥತತ್ತ್ವನ್ವೇಷಕರ ಕರ್ತವ್ಯವಾಗಿದೆ. ಇಷಂತಿರಲಿ, ಬ್ರಾಹ್ಮಣೇತರರಿಗೂ ವಿದ್ಯಾಭ್ಯಾಸವು ಇತಿಹಾಸ ಪುರಾಣಗಳ ಕಾಲದಿಂದಲೂ ಇತ್ತೆಂಬುವಕ್ಕೆ ವಿದುರ, ಧರ್ಮವ್ಯಾಧ– ಮೊದಲಾದವರ ಕಥೆಗಳು ಸಾಕ್ಷಿಯಾಗಿವೆ. ಲಿಖಿತಾಭ್ಯಾಸವಿಲ್ಲದಿದ್ದರೂ ತತ್ತ್ವವಿಚಾರದಲ್ಲಿ ಮುಂದುವರಿದು ಪರಮಾರ್ಥವನ್ನು ಅನುಭವಕ್ಕೆ ತಂದುಕೊಂಡ ಸ್ತ್ರೀಯರೂ ಶೂದ್ರಾದಿಗಳೂ ಹಿಂದಿನ ಕಾಲದಲ್ಲಿಯೂ ಇದ್ದರು. ಈಗಲೂ ಅಲ್ಲಲ್ಲಿ ಸಿಕ್ಕುತ್ತಾರೆ. ಆದ್ದರಿಂದ ಕಾಶೀಪಟ್ಟಣದಂಥ ದೊಡ್ಡ ಕ್ಷೇತ್ರದಲ್ಲಿ ವೇದಾಂತದ ತತ್ತ್ವವನ್ನು ತಿಳಿದ ಒಬ್ಬ ಅಂತ್ಯಜನೂ ಇದ್ದನೆಂಬುದಕ್ಕೆ ಯಾವ ಅಡ್ಡಿಯೂ ಕಾಣಿಸುವದಿಲ್ಲ. ಆಗ ನಡೆದ ಸಂಭಾಷಣೆಯೆಂದು ಐತಿಹ್ಯವಿದ್ದದ್ದನ್ನು ಯಾರಾವರೂ ಈ ಮನೀಷಾಪಂಚಕರೂಪದಿಂದ ಕವನಮಾಡಿದ್ದರೂ ಇರಬಹುದು. ಅಂಥ ತತ್ತ್ವಜ್ಞಾನಿಯು ವಿಶ್ವೇಶ್ವರನಂತೆಯೂ ಸದ್ಗುರುವಿನಂತೆಯೂ ಗೌರವಕ್ಕೆ ಅರ್ಹನು ಎಂದು ಆಸ್ತಿಕರಾದ ಆದ್ವೈತಿಗಳು ನಂಬಿದ್ದರೆ ಆದರಲ್ಲಿಯೂ ಆಶ್ಚರ್ಯವೇನೂ ಇಲ್ಲ.

ಮನೀಷಾಪಂಚಕದಲ್ಲಿ ಜಾತಿಭೇದನಿರಾಸವಾದವಿದೆಯೆ ?

೭೭. ಈ ಸಂದರ್ಭದಲ್ಲಿ ವಿಚಾರಮಾಡತಕ್ಕ ಮತ್ತೊಂದು ವಿಷಯವಿದೆ. ಶಂಕರಾಚಾರ್ಯರು ಚಂಡಾಲನನ್ನು ಗುರುವೆಂದು ತಿಳಿದರು– ಎಂಬ ಈ ಕಥೆಯಿಂದ ಆವರ ದೃಷ್ಟಿಯಲ್ಲಿ ಜಾತಿಭೇದವಿರಲಿಲ್ಲವೆಂದೂ ಆವರ ಅದುಯಾಯಿಗಳೂ ಇತರರೂ ಜಾತಿಭೇದವನ್ನು ಪ್ರೆಬಲಿಸಿ ಜನರ ಒಗ್ಗಟ್ಟನ್ನು ಒಡೆಯಿಸಿರುತ್ತಾರೆಂದೂ ಕೆಲವರ ಭಾವನೆಯಿದೆ. ಈ ಕಾರಣದಿಂದ ಕೀಳುಜಾತಿಯವರಿಗೂ ವಿದ್ಯಾಭ್ಯಾಸವೇ ಮುಂತಾದವುಗಳನ್ನು ಮಾಡಿಸಿ ಜಾತಿಯನ್ನು ನಿರ್ಮೂಲ ಮಾಡುವದೇ ಯುಕ್ತವೆಂದು ಈಗಿನ ಕೆಲವು ಜನನಾಯಕರುಗಳ ಅಭಿಪ್ರಾಯವಾಗಿರುತ್ತದೆ. ಈಗಿನ ಸರಕಾರವೂ ಈ ಅಭಿಪ್ರಾಯವನ್ನು ಅನುಮೋದಿಸಿ ಅಂತ್ಯಜರು, ಅಸ್ಪೃಶ್ಯರು– ಎಂಬ ಭೇದವನ್ನು ಒಪ್ಪಿ ಆಚರಿಸುವವರಿಗೆ ಶಿಕ್ಷೆ

ಯನ್ನು ವಿಧಿಸುತ್ತೇವೆಂದು ವಾಸನೆಗಳನ್ನು ನಮಾಡಿ ಅವನ್ನು ರಾಷ್ಟ್ರೀಯ ಸಂಘಟನಾ ವಲಯದಲ್ಲಿಯೂ ಸೇರಿಸಿಸುತ್ತಾರೆ. ಚಾತ್ಯವನ್ನು ಹರಿಜನರೆಂದು ಕರೆದು ಅವರಿಗೂ ದೇವಾಲಯಾದಿಗಳಲ್ಲಿ ಪ್ರವೇಶವಿರಬೇಕೆಂದು ಕಾನೂನುಮಾಡಿಸಿ ಅವರ ಮೂಲಕದಿಂದ ಸನಾತನಸಂಸ್ಕಾರಕರು ಆ ಹರಿಜನರನ್ನು ದೇವಾಲಯಗಳ ಒಳಕ್ಕೆ ತೂರಿಸುತ್ತಿರುತ್ತಾರೆ; ಜಾತ್ಯಭಿನಾನವನ್ನು ಎಬ್ಬಿಸಬೇಕೆನ್ನುವವರು ಅವನ್ನು ಪ್ರತಿಭಟಿಸುತ್ತಲೂ ಇರುತ್ತಾರೆ. ಇವರಿಂದ ಜನರ ಒಗ್ಗಟ್ಟು ಮತ್ತಷ್ಟು ನಡಿಲಾಗಿದೆ. ಸಿಳಿವಳಿಕೆಸಾಲದವರಿಗೆ ಓದುಬರಹಗಳನ್ನು ಕಲಿಸುವದೂ ಅವನ್ನು ಸುಸಂಸ್ಕೃತರನ್ನಾಗಿ ಮಾಡುವದೂ ತಪ್ಪೆಂದು ಯಾರೂ ಯಾವಾಗಲೂ ಹೇಳಿಲ್ಲ. ಆದರೆ ಆಹಾರವಿಹಾರಾದಿಗಳಲ್ಲಿ ಜನರ ದುರಭ್ಯಾಸವನ್ನು ಹಾಗೆಯೇ ಇರಗೊಟ್ಟು ಜಾತಿಗಳ ಕಲಿಬೆರಕೆಮಾಡುವದರಿಂದಲೂ ಸದಾಚಾರಗಳನ್ನು ಲೋಪಗೊಳಿಸುವದರಿಂದಲೂ ಯಾರಿಗಾದರೂ ಪ್ರಯೋಜನವಿದೆಯೆ ?—ಎಂಬು ದನ್ನು ಸುಧಾರಕರೆಂಬವರು ವಿಚಾರಮಾಡಬೇಕು. ಜಾತಿಗಳ ಸಂಖ್ಯೆಯು ಹೆಚ್ಚಿದ್ದರಿಂದ ಜನರಲ್ಲಿ ಮೇಲುಕೀಳಿನ ಭಾವನೆಯು ಬಲಿತು ಮನೋವೈಷಮ್ಯಕ್ಕೆ ಕಾರಣವಾಗಿದೆಯೆ ? ಅಥವಾ ಈಗಿನ ನಾಗರಿಕತೆಯು ದುಃಸಹವಾದ ಪೈಪೋಟಿ ಯಿಂದ ಜನರಲ್ಲಿ ದ್ವೇಷಾಸೂಯೆಗಳು ಬೆಳೆಯುತ್ತಿವೆಯೆ ?— ಎಂಬ ಪ್ರಶ್ನೆಯು ಇನ್ನೂ ಪುನೀಲನೀಯವೇ ಆಗಿರುತ್ತದೆ. ಜಾತಿಗಳೆಲ್ಲ ನಿರ್ಮೂಲನವಾದರೆ ಜನರೆಲ್ಲರೂ ಶುಚಿಯಾಗಿ ಮೇಲಿನಂತಸ್ತಿಗೆ ಏರಿ ಸಮಾನವಾದ ಜೀವನದ ಮಟ್ಟ ವನ್ನು ಪಡೆದುಕೊಂಡು ಒಬ್ಬರಲ್ಲೊಬ್ಬರು ಮೈತ್ರಿಯಿಂದ ವರ್ತಿಸುವರೆಂಬುದೂ ಸಂಶಯಗ್ರಸ್ತವೇ ಆಗಿದೆ. ಏಕೆಂದರೆ ಜಾತಿಪದ್ಧತಿಯೇ ಇಲ್ಲದ ದೇಶಗಳೇ ಈ ಲೋಕದಲ್ಲಿ ಬಹಳವಾಗಿವೆ. ಆ ದೇಶಗಳಲ್ಲಿ ಜನರೆಲ್ಲರೂ ವಿದ್ಯಾವಂತರಾಗಿ, ನೀತಿವಂತರಾಗಿ, ಒಬ್ಬರಲ್ಲೊಬ್ಬರು ಸ್ನೇಹಭಾವದಿಂದ ಇರುವರೆಂದೇನೂ ಕಾಣಿಸುತ್ತಿಲ್ಲ; ಅಲ್ಲಿರುವ ವರ್ಗಗಳ ಭೇದಗಳೂ ವರ್ಣಭೇದಗಳೂ ಆವುಗಳಿಂದಾಗಿರುವ ಒಳಜಗಳಗಳಿಗೂ ಅಂಧಾನುಕರಣೆಗೆ ಪ್ರಚೋದಕವಾಗಿರುವಂತೆಯೂ ಕಾಣುತ್ತಿವೆ.

ಈ ಸಾಮಾಜಿಕಪ್ರಶ್ನೆ ಹಾಗಿರಲಿ, ಮನೀಷಾಪಂಚಕದಲ್ಲಿ ಈ ವಿಚಾರದ ವಾಸನೆಯೂ ಇಲ್ಲವೆಂಬುದನ್ನು ಮಾತ್ರ ಇಲ್ಲಿ ಸ್ಪಷ್ಟಗೊಳಿಸುವದು ಅವಶ್ಯವಾಗಿರುತ್ತದೆ. ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿರುವ ಚೈತನ್ಯವು ಒಂದೇ, ಬ್ರಹ್ಮಾದಿಪಿಪೀಲಿಕಾಂತವಾಗಿರುವ ಪ್ರಾಣಿಗಳ ಶರೀರದಲ್ಲಿ ಆತ್ಮಚೈತನ್ಯವು ನಿಸ್ತರಂಗವಾದ ಚಿದಾನಂದಸಮುದ್ರದಂತೆ ಇರುತ್ತದೆ. ಆ ಆತ್ಮತತ್ತ್ವಕ್ಕೆ ವಿಪ್ರ, ಶ್ವಪಚ-ಮುಂತಾದ ದೇಹಸಂಬಂಧದ ವೈಲಕ್ಷಣ್ಯವು ಸ್ವಲ್ಪವೂ ಸಂಬಂಧಿಸಿಲ್ಲ; ಈ ಜ್ಞಾನವು ಯಾವನಲ್ಲಿರುವದೋ ಅತನ ಬೋಧೆಯನ್ನು ಸದ್ಗುರುಬೋಧೆಯೆಂದೇ ಎಣಿಸಬೇಕು—ಎಂಬುದು ಪ್ರಕರಣಾರ್ಥದ ಸಾರವು. ಬ್ರಾಹ್ಮಣಾದಿ

ಗಳು ಜಾತಿಭೇದವನ್ನು ಬದಿಗೊತ್ತಿ ಒಬ್ಬರಲ್ಲೊಬ್ಬರು ಭೋಜನವಿವಾಹಾದಿಗಳನ್ನು ನಡೆಯಿಸಬೇಕು, ಅನ್ಯಥಾ ನಡೆಯಿಸಬಾರದು– ಎಂಬಿವರ ಸೊಲ್ಲೂ ಆದರಲ್ಲಿಲ್ಲ. ಅದ್ವೈತವೆಂದರೆ ಜಾತಿನೀತಿಕುಲಾದಿಗಳ ಭೇದವಿಲ್ಲದ ಏಕೀಕರಣದ ಸಮಾಜವನ್ನು ಬೋಧಿಸುವ ಸುಧಾರಕರ ಮತವೆಂದು ಯಾವ ವಿವೇಕಿಯು ಹೇಗೆ ನಿಶ್ಚಯಿಸಿದನೋ ನಮಗಂತೂ ಬಗೆಹರಿಯದಾಗಿದೆ.

ಆಚಾರ್ಯರ ಭಾಷ್ಯದ ಗುರಿಯೇನು ?

೭೮. ಆಚಾರ್ಯರು ಭಯಭಕ್ತಿಗಳಿಂದ ಶಿವನನ್ನು ಸ್ತುತಿಸಿದರು. ಆ ಮಹಾದೇವನು ಸಂತುಷ್ಟನಾಗಿ 'ಅಪ್ಪ, ನೀನು ಮೇಲಿನ ಮಟ್ಟಕ್ಕೆ ಏರಿದೀಯೆ, ನಿನ್ನ ತಪೋನಿಷ್ಠೆಯನ್ನು ಪರೀಕ್ಷಿಸಿದ್ದಾಯಿತು. ಬಾದರಾಯಣನಂತೆ ನೀನೂ ನನ್ನ ಅನುಗ್ರಹಕ್ಕೆ ಪಾತ್ರನಾಗಿರುವೆ. ಬಾದರಾಯಣರು ಶ್ರುತಿಗಳನ್ನೆಲ್ಲ ವಿಂಗಡಿಸಿ ಬ್ರಹ್ಮಸೂತ್ರವನ್ನು ರಚಿಸಿ ಕುಮತಗಳನ್ನು ಖಂಡಿಸಿರುತ್ತಾರೆ. ಎಲ್ಲಿಯೋ ಎರಡುಮೂರು ವೇದವಾಕ್ಯಗಳ ಪ್ರಾಮಾಣ್ಯವನ್ನು ಇಟ್ಟುಕೊಂಡು ವಿವೇಕಿಗಳು ಒಪ್ಪದ ಕುತರ್ಕಿಸಭಾಷ್ಯಗಳನ್ನು ಕೆಲವರು ಮಾಡಿರುತ್ತಾರೆ; ನೀನು ಅವರನ್ನೆಲ್ಲ ಖಂಡಿಸುವ ಭಾಷ್ಯವನ್ನು ಮಾಡು. ಅದು ಸರ್ವಮಾನ್ಯವಾಗುವದು. ಭಾಸ್ಕರ, ನೀಲಕಂಠ, ಅಭಿನವಗುಪ್ತ, ಗುರು, ಮಂಡನ– ಮುಂತಾದ ಪಂಡಿತರನ್ನು ಜಯಿಸಿ ಅದ್ವೈತವೇ ಸರತತ್ತ್ವವೆಂಬುದನ್ನು ಖ್ಯಾತಿಗೊಳಿಸು. ಜನರ ಅಜ್ಞಾನವನ್ನು ತೊಲಗಿಸುವ ಶಿಷ್ಯರನ್ನು ಸ್ಥಾಪನೆಮಾಡಿ ಕೃತಕೃತ್ಯನಾಗಿ ನನ್ನನ್ನು ಸೇರುವೆ' ಎಂದು ನುಡಿದು ಅಂತರ್ಧಾನನಾದನು. ವಿಸ್ಮಿತರಾದ ಶಂಕರರು ನದಿಗೆ ಹೋದರು. ತಮ್ಮ ಆಹ್ನಿಕವನ್ನು ಮುಗಿಸಿ ಈಶ್ವರನನ್ನೂ ಗುರುವನ್ನೂ ಧ್ಯಾನಿಸಿ ಭಾಷ್ಯವನ್ನು ಮಾಡುವ ಸಂಕಲ್ಪವನ್ನು ಮಾಡಿದರು (ಮಾ. ಶಂ. ೬–೪೫ರಿಂದ ೫೩).

ಆಚಾರ್ಯರಿಗೆ ಶಿವನ ಸಾಕ್ಷಾತ್ಕಾರವಾಗಿರಲಿ ಆಗದೆ ಇರಲಿ, ಅವರು ಭಾಸ್ಕರ, ಅಭಿನವ, ನೀಲಕಂಠ– ಇವರನ್ನು ಜಯಿಸಿದರೆಂಬುದಕ್ಕೆ ಶಿವನ ಸಂಮತಿಯನ್ನು ಕಲ್ಪಿಸಿರುವ ಕವಿಯನ್ನು ಏನೆನ್ನಬೇಕು ? ಈ ವಿಚಾರವು ಇತಿಹಾಸಕ್ಕೆ ಪೂರ ಅಸಂಮತವಾಗಿದೆ. ಏಕೆಂದರೆ ಈ ಭಾಸ್ಕರಾದಿಗಳು ಶಂಕರಾಚಾರ್ಯರಾದ ಮೇಲೆ ಬಂದವರು. ಅವರೆಲ್ಲರೂ ತಮ್ಮ ತಮ್ಮ ದೃಷ್ಟಿಯಿಂದ ಶಂಕರರ ಅದ್ವೈತವನ್ನು ಖಂಡಿಸಿಯೂ ಇರುತ್ತಾರೆ ಎಂಬುದು ಸುವಿದಿತವಾಗಿದೆ. ಚಿದ್ವಿಲಾಸರು ಹೇಳುವಂತೆ ದ್ವೈತವು ಸತ್ಯವಲ್ಲ, ಅದ್ವೈತವೇ ಸತ್ಯ– ಎಂದು ಶಿವನು ಆಚಾರ್ಯರಿಗೆ ಪ್ರತ್ಯಕ್ಷನಾಗಿ ಮೂರುಬಾರಿ ಕೈಯೆತ್ತಿ ಸಾರಿರಬಹುದು. ಆದರೆ ಆಚಾರ್ಯರ ಭಾಷ್ಯವು ಮುಖ್ಯವಾಗಿ ದ್ವೈತಖಂಡನೆಗೇ ಬರೆದದ್ದಲ್ಲ; ದ್ವೈತದಂತೆ ಅದ್ವೈತ ಪ್ರಕ್ರಿಯಾಭೇದಗಳನ್ನೂ ಖಂಡಿಸಿ ತಮಗೆ ಒಪ್ಪಿದ ಅಸಾಧಾರಣವಾದ ಅದ್ವೈತ

ವೇದಾಂತಪ್ರಕ್ರಿಯೆಯೊಂದನ್ನೇ ಆವರು ಎತ್ತಿಹಿಡಿದು ಭಾಷ್ಯರಚನೆಯನ್ನು ಮಾಡಿರುತ್ತಾರೆ. ಇವನ್ನು ಯಥಾಸ್ಥಾನವಾಗಿ ತಿಳಿಸುವೆವು.

ಬದರೀ ಪ್ರಯಾಣ

೭೯. ಆ ಬಳಿಕ ಶಂಕರರು ಬನಾರಿಗೆ ಹೋದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಅಲ್ಲಿದ್ದ ಬ್ರಹ್ಮನಿಷ್ಠರೊಡನೆ ವಿಚಾರವಿನಿಮಯವನ್ನು ಮಾಡಿ ಸಂಕ್ಷೇಪಭಾಷ್ಯವನ್ನು ರಚಿಸಿದರು. ಆಮೇಲೆ ಭಗವದ್ಗೀತೆಗೂ ಉಪನಿಷತ್ತುಗಳಿಗೂ ಭಾಷ್ಯಗಳನ್ನು ಬರೆದರು. ಸನತ್ಸುಜಾತೀಯಕ್ಕೂ ತಾಪನೀಯಕ್ಕೂ ಭಾಷ್ಯವನ್ನು ಬರೆದ ಬಳಿಕ ಉಪದೇಶಸಾಹಸ್ರಿಯೇ ಮುಂತಾದವುಗಳನ್ನು ಬರೆದರು. ಭಕ್ತಿಯಿಂದ ತಮ್ಮನ್ನು ಭಜಿಸುತ್ತಿದ್ದ ಸನಂದನರಿಗೆ ಮೂರು ಸಲ ಆ ಗ್ರಂಥಗಳನ್ನೆಲ್ಲ ಹೇಳಿದರು. ('ತ್ರಿರಾವಾಪಾಠಯತ್ತಮ್' ಮಾ. ಶಂ. ೬–೬೮) ಆ ಸನಂದನನ ವಿಷಯಕ್ಕೆ ಇತರ ಶಿಷ್ಯರುಗಳು ಈರ್ಷ್ಯೆಯನ್ನು ತೋರಿಸಿದ್ದನ್ನು ಕಂಡು ಆತನ ಭಕ್ತಿಯನ್ನು ಪ್ರಖ್ಯಾತಿಗೊಳಿಸುವ ಒಂದು ಅದ್ಭುತವನ್ನು ಮಾಡಿ ತೋರಿಸಿದರು. ಒಮ್ಮೆ ಗಂಗಾನದಿಯ ಅಚೆಯಿದ್ದ ಸನಂದನನನ್ನು ಬೇಗ ಬಾರೆಂದು ಆವರು ಕೂಗಿ ಕರೆಯಲು ಆತನು 'ಸಂಸಾರಸಾಗರವನ್ನು ದಾಟಿಸುವ ಗುರುಪಾದಭಕ್ತಿಯು ನದಿಯನ್ನು ದಾಟಿಸಲಾರದೆ ?' –ಎಂದುಕೊಂಡು ಆ ನದಿಯನ್ನು ಹೊಕ್ಕು ಮುನ್ನಡೆದನು. ಸನಂದನನ ಪ್ರತಿಯೊಂದು ಹೆಜ್ಜೆಗೂ ಪದ್ಮಗಳು ಉದಯಿಸಿದ್ದನ್ನು ಕಂಡು ಆನಂದಾಶ್ಚರ್ಯಯುತರಾಗಿ ಆತನಿಗೆ ಪದ್ಮಪಾದ ನೆಂಬ ಹೆಸರನ್ನಿಟ್ಟರು (ಮಾ. ಶಂ. ೬–೬೦ರಿಂದ ೭೧).

ಚಿದ್ವಿಲಾಸೀಯದಂತೆ ಆಚಾರ್ಯರು ಗುರುಗಳ ಬಳಿಯಲ್ಲಿದ್ದುಕೊಂಡೇ ಬದರಿಯಲ್ಲಿ ಸೂತ್ರಭಾಷ್ಯ, ದಶೋಪನಿಷದ್ಭಾಷ್ಯಗಳು, ಗೀತಾಭಾಷ್ಯ, ವಿಷ್ಣುಸಹಸ್ರನಾಮ, ಶ್ರೀರುದ್ರಭಾಷ್ಯ, ಸೌಂದರ್ಯಲಹರಿ– ಮುಂತಾದ ಕೆಲವು ಸ್ತೋತ್ರಗಳು ಇವುಗಳನ್ನು ರಚಿಸಿದರು (ಚಿ. ಶಂ. ೧೦–೧೦ರಿಂದ ೪). ಅಲ್ಲಿಯೇ ಸನಂದನನು ಬಂದವನ್ನು (ಚಿ. ಶಂ. ೧೦–೭೨ರಿಂದ ೭೪). ಗೋವಿಂದ ಭಗವತ್ಪಾದರು ಇಲ್ಲಿಯೇ ಇರು ಎಂದು ಜೋಳುತ್ತಿರುವಲ್ಲಿ ತಾಯಿಯು ಸ್ಮರಿಸಿಕೊಂಡದ್ದರಿಂದ ಊರಿಗೆ ಹೋದರು ; ಅಲ್ಲಿಂದ ಪ್ರಯಾಗಕ್ಕೆ ಹೋದರು (ಚಿ. ಶಂ. ೧೦–೪೪). ವ್ಯಾಸಾಚಲೀಯದಲ್ಲಿ (ವ್ಯಾ. ಶಂ. ೪–೬೭) ಸೂತ್ರ ಭಾಷ್ಯವೊಂದರ ವಿಷಯವೇ ಇದೆ.

ಬಲದೇವ ಉಪಾಧ್ಯಾಯರು ಆಚಾರ್ಯರಿಂದ ಬದರಿಯಲ್ಲಿ ದ್ದಾಗ ಆದ ಬದರೀನಾಥನ ಪುನಃಪ್ರತಿಷ್ಠೆಯ ವಿಚಾರವನ್ನು (ಬಲ. ಶಂ. ಪು ೫೨) ಪರಾಮರ್ಶಿಸಿರುತ್ತಾರೆ. ಚೀನಾದೇಶದವರ ಹಾವಳಿಗೆ ಅಂಜಿ ಆ ಮೂರ್ತಿಯನ್ನು ನಾರದಕುಂಡದಲ್ಲಿ ಹಾಕಿಬಿಟ್ಟಿದ್ದರಂತೆ. ಆಚಾರ್ಯರು ಅದನ್ನು ತೆಗೆಯುವದಕ್ಕೆ

ಪ್ರಯತ್ನಪಟ್ಟರೂ ಪೂಜಾರಿಗಳು ಇದು ತೀರಕೆಳಗೆ ಅಲಕನಂದೆಗೆ ಸಂಬದ್ಧವಾಗಿರುವದರಿಂದ ಇಲ್ಲಿ ಮುಳುಗುವವರಿಗೆ ಪ್ರಾಣಾಪಾಯವಿದೆ ಎಂದು ಹೇಳಿದರೂ ಆಚಾರ್ಯರು ಅಡಕ್ಕೆ ಅಂಜದೆ ಮುಳುಗಿ ಮೂರ್ತಿಯನ್ನು ಹುಡುಕಿ ತಂದರು, ಅವರು ನೂರು ಸಲ ಮುಳುಗಿನೋಡಿದರೂ ಬಲಭಾಗ ಮುರಿದ ಮೂರ್ತಿಯೇ ಕೈಗೆ ಸಿಕ್ಕಿತಂತೆ ; ಆಶರೀರವಾಣಿಯು 'ಈ ಕಲಿಯುಗದಲ್ಲಿ ಈ ಮೂರ್ತಿಯನ್ನೇ ಪೂಜಿಸತಕ್ಕದ್ದು' ಎಂದು ನುಡಿದದ್ದರಿಂದ ಆಚಾರ್ಯರು ಅದನ್ನೇ ವೈದಿಕ ರೀತಿಯಿಂದ ಪ್ರತಿಷ್ಠೆಮಾಡಿಸಿದರಂತೆ. ಇದಕ್ಕೆ ಬದರಿಕಾಶ್ರಮಮಾಹಾತ್ಮ್ಯ ಆಧ್ಯಾಯ ೫ ಪು. ೧೫೮ ಆಧಾರವು. ಅಲ್ಲಿ 'ತತೋಽಹಂ ಯತಿರೂಪೇಣ ತೀರ್ಥಾನ್ನಾರದಸಂಜ್ಞಕಾತ್ ॥ ಉದ್ಧೃತ್ಯ ಸ್ಥಾಪಯಿಷ್ಯಾಮಿ ಹರಿಂ ಲೋಕ ಹಿತೇಚ್ಛಯಾ' ॥ ೩೪೫ ॥ ಎಂಬ ಶ್ಲೋಕವಿದೆ ಎಂದು ಉಪಾಧ್ಯಾಯರು ಬರೆದಿರುತ್ತಾರೆ.

ಬಾದರಾಯಣರೂ ಅವರ ಹಿಂದಿನ ಋಷಿಗಳೂ ತಪಸ್ಸುಮಾಡಿಕೊಂಡಿದ್ದ ಬದರಿಗೆ ಆಚಾರ್ಯರು ಹೋಗಿರಬಹುದೆಂದು ಕಲ್ಪಿಸಬಹುದು. ಆಲ್ಲಿ ಅವರಿಗೆ ಜ್ಞಾನನಿಷ್ಠರು ಸಿಕ್ಕುವ ಸಂಭವವೂ ಇತ್ತು. ಚಳಿಮಳೆ, ಕಲ್ಲುಮುಳ್ಳು, ತಗ್ಗುದಿಟ್ಟು-ಯಾವದನ್ನೂ ಲೆಕ್ಕಿಸದೆ ಸಿಕ್ಕಿದ ಹಣ್ಣುಗಳನ್ನು ತಿನ್ನುತ್ತಾ ನಿದ್ರೆ ಒಂದಲ್ಲಿ ಮಲಗುತ್ತಾ ಎಚ್ಚರವಾಗುತ್ತಲೂ ನುನ್ನಡೆಯುತ್ತಾ ಆಚಾರ್ಯರು ಹೋದರು (ಮಾ. ಶಂ. ೬-೫೭-೫೮) ಎಂತ ಮಾಧವೀಯದಲ್ಲಿ ವರ್ಣಿಸಿರುವದು ಸ್ವಭಾವೋಕ್ತಿಯೇ ಆಗಿದೆ. ಹನ್ನೆರಡನೆಯ ವಯಸ್ಸಿನಲ್ಲಿಯೇ ಅವರು ಈ ಗ್ರಂಥಗಳನ್ನು ಮಾಡಿದರೆಂದು ಮಾಧವೀಯ. ಸೂತ್ರಭಾಷ್ಯವನ್ನು ಬರೆದಾಗ ಆಚಾರ್ಯರಿಗೆ ಹದಿನಾರು ವರ್ಷವಾಗಿತ್ತಂದು ವ್ಯಾಸಾಚಲೀಯ (ವ್ಯಾ. ಶಂ. ೪-೬೫, ೬೩). ಅವರು ಬದರಿಗೆ ಹೋಗಿದ್ದಾಗ ಹನ್ನೆರಡು ವರ್ಷ, ಆಲ್ಲಿದ್ದದ್ದು ನಾಲ್ಕು ವರ್ಷ ; ಆಮೇಲೆ ಸೂತ್ರಭಾಷ್ಯವನ್ನು ಬರೆದರೆಂದು ಬಲದೇವ ಉದಾಧ್ಯಾಯರು (ಬಲ. ಶಂ. ಪು. ೫೩) ಕಲ್ಪಿಸಿದ್ದಾರೆ. ಕೆ. ಬಿ. ಪಾಠಕರವರಿಗೆ ದೊರೆತ 'ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್। ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥' ಎಂಬ ಶ್ಲೋಕವನ್ನು ಳನೆಯ ಪರಿಶಿಷ್ಟದಲ್ಲಿ ಉದಾಹರಿಸಿರುತ್ತೇವೆ. ಆಚಾರ್ಯರು ಬರೆದರೆಂದು ಶಂಕರವಿಜಯಗಳಲ್ಲಿ ಹೇಳಿರುವ ಗ್ರಂಥಗಳಲ್ಲಿ ನಿಜವಾಗಿ ಯಾವವು ಅವರಿಂದ ರಚಿತವಾಗಿರಬಹುದೆಂಬುದನ್ನು ಇಷ್ಟರಲ್ಲಿಯೆ ನಾವು ವಿಮರ್ಶೆಗೆ ತೆಗೆದುಕೊಳ್ಳುವೆವು.

ಈಗ ಪದ್ಮಪಾದರ ಕಥೆಯನ್ನು ಸ್ವಲ್ಪ ವಿಮರ್ಶಿಸೋಣ. ಮಾಧವನು ಅವರ ಪೂರ್ವಾಶ್ರಮದ ಹೆಸರನ್ನು ಹೇಳಿಲ್ಲ ; ಸನಂದನನೆಂಬುದು ಆಚಾರ್ಯರು ಕೊಟ್ಟ ಹೆಸರು. ಅವರು ಚೋಳದೇಶದವರೆಂದು ಮಾಧವೀಯ,

ಚಿಪ್ಲಿಲಾಸೀಯ, ವ್ಯಾಸಾಚಲೀಯ- ಈ ಮೂರು ಶಂಕರವಿಜಯಗಳಲ್ಲಿಯೂ ಇದ್ದಾಗ ವ್ಯಾಸಾಚಲರ ಅಭಿಪ್ರಾಯವನ್ನೇ ಸಂಗ್ರಹಿಸುವೆನೆಂದು ಹೇಳಿಕೊಂಡಿರುವ ಗೋವಿಂದನಾಥನು ಅವರನ್ನು ಕೇರಳದೇಶವರನ್ನಾಗಿ ಮಾಡಿ (ಗೋ. ೬-೧೭) ಚಿಪ್ಲಿಲಾಸರಂತೆ ಅವನ ಹೆಸರು ವಿಷ್ಣುಶರ್ಮನೆಂದಿರುತ್ತಾನೆ. ತಂದೆಯ ಪ್ರಸನ್ನನ್ನು ಸೋಮಶರ್ಮನೆಂದು ಕರೆದು ಪೂರ್ವಾಶ್ರಮದಲ್ಲಿ ಅವರು ವೈಶ್ಯ ವೃತ್ತಿಯಿಂದ ಜೀವಿಸಿ ಸಂಕಟಪಟ್ಟಂತೆ (ಗೋ. ೪-೩೮ರಿಂದ ೩೨) ಕಥೆಯನ್ನು ಕಟ್ಟುರುತ್ತಾನೆ. ಈ ಶಿಷ್ಯನು ಮೊಟ್ಟಮೊದಲು ಆಚಾರ್ಯರಬಳಿಗೆ ಬಂದು ಅವರನ್ನು ಎಡೆಬಿಡದೆ ಸೇವೆಸಾಡುತ್ತಿದ್ದದ್ದರಿಂದ ಅವರಲ್ಲಿ ಆಚಾರ್ಯರಿಗೆ ಹೆಚ್ಚಿನ ಪ್ರೇಮವುಂಟಾಯಿತೆಂಬುದು ನಿರ್ದೇಶಕ್ಕದ್ದಾಗಿದೆ. ಆದರೂ ಅವರಲ್ಲಿ ವಿಕ್ಕನವರಿಗೆ ಆಸೂಯೆಯುಂಟಾಯಿತೆಂದೂ ಅವರಿಗೆ ಭಾಷ್ಯವನ್ನು ಮೂರಾವೃತ್ತಿ ಹೇಳಿ ಕೊಟ್ಟರೆಂದೂ ತಿಳಿಸಿರುವವರಲ್ಲಿ (ಮಾ. ಶಂ. ೬-೬೨, ೬೮) ಏನೋ ರಹಸ್ಯವು ಅಡಗಿರಬಹುದೆಂದು ತೋರುತ್ತದೆ. ಇನ್ನು ಅವರಿಗೆ ಪದ್ಮಪಾದರೆಂಬ ಹೆಸರು ಹೊವಲೇ ಆಚಾರ್ಯರು ಕೊಟ್ಟಿದ್ದು ಆದಕ್ಕೆ ಹೊಂದುಗಡೆಯಾಗುವಂತೆ ಕಥೆಯು ಕಲ್ಪಿತವಾಯಿತೋ ಅಥವಾ ನಿಜವಾಗಿಯೂ ಇಂಥದ್ದೊಂದು ಅದ್ಭುತವೇ ನಡೆಯಿತೋ ನಾವು ಯಾರೂ ಹೇಳಲಾರೆವು. ಉದಯಪುರದ ಉದಯಸಾಗರವೆಂಬ ಕೆರೆಯಲ್ಲಿ ಒಂದು ಮಾರು ವಿಸ್ತಾರದ ಎಲೆಗಳುಳ್ಳ ತಾವರೆಯನ್ನು ತಾವು ನೋಡಿರುವವಾಗಿಯೂ ಆ ಎಲೆಗಳಮೇಲೆ ಹತ್ತು ವರುಷದ ಹುಡುಗನು ಕುಳಿತುಕೊಂಡರೂ ಮುಳುಗುವದಿಲ್ಲವೆಂದೂ (ಸೋ. ಶಂ ಪು. ೮೨ ಟಿಪ್ಪಣಿಯಲ್ಲಿ) ಸೋಮನಾಥಪಂಡ್ಯನವರು ಬರೆದಿರುತ್ತಾರೆ. ಆದರೆ ಅಷ್ಟು ಅಗಲವಾದ ಎಲೆಗಳ ತಾವರೆಗಳು ಗಂಗಾನದಿಯಲ್ಲಿಲ್ಲ. ಪದ್ಮಪಾದರು ಹೆಷ್ಟೆಯನ್ನಿಟ್ಟಂತೆಲ್ಲ ಕಮಲಗಳು ಹುಟ್ಟುತ್ತಿದ್ದವೆಂಬ ಕಥೆಗೆ ಇದು ಹೇಗೆತಾನೆ ಬೆಂಬಲವಿತ್ತೀತು ?

ಪಾಶುಪತಮತಖಂಡನ

೮೦. ಶಂಕರರು ಶಿಷ್ಯರಿಗೆ ಪಾಠವನ್ನು ಹೇಳಿಕೊಡುತ್ತಿರುವಲ್ಲಿ ಕೆಲವರು ಪಾಶುಪತರು ಬಂದು ಆಚಾರ್ಯರ ಮತದಲ್ಲಿ ದೋಷವನ್ನು ಎತ್ತಿಣಿಸಿದರು. ಅವರ ವಿಕಲ್ಪಗಳನ್ನು ಶ್ರುತಿದೃಷ್ಟಾಂತಗಳಿಂದ ತಿರಸ್ಕರಿಸಿದ ಮೇಲೆ ಅವರ ಗರ್ವವು ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಬಳಿಕ ಅವರ ಆಗಮವನ್ನು ಖಂಡಿಸಿದರು (ಮಾಧವೀಯ ೬-೭೨,೭೩) ಎಂದು ಪ್ರಾರಂಭಿಸಿದ ಮಾಧವ ಕವಿಯು 'ದ್ವೈತವು ಸತ್ಯವಾಗಿರುವಲ್ಲಿ ಈಶ್ವರಸಮಾನತ್ವವೆಂಬ ಮುಕ್ತಿಯು ಜೀವನಿಗೆ ಹೇಗೆ ಬಂದೀತು ? ಧ್ಯಾನದಿಂದಾಗಿದ್ದರೆ ಅದು ನಾಶವಾಗಬೇಕಲ್ಲವೆ ? ಪಶುಪತಿಯಾದ ಈಶ್ವರನ ಗುಣಗಳು ಪಶುಗಳಾದ ಜೀವರಲ್ಲಿಗೆ ಹೇಗೆ ಬಂದು ಸೇರಿಕೊಂಡಾವು ? ಗುಣಗಳು ನಿರವಯವವಲ್ಲವೆ ? ತಾವರೆಯ ವಾಸನೆಯು

ವಾಯುವಿನಲ್ಲಿ ಸೇರುವಂತೆ ಆ ಗುಣಗಳು ಜೀವರಲ್ಲಿ ಬಂದುಸೇರಿಕೊಳ್ಳುವಡಕ್ಕಿಲ್ಲ; ಏಕೆಂದರೆ ಆ ದೃಷ್ಟಾಂತವಲ್ಲಿ ಗಂಧವ ಆಪಯನಗಳು ವಾಯುವಿನಲ್ಲಿ ಸೇರಿಕೊಳ್ಳುವದರಿಂದ ವಾಯುವೂ ಗಂಧವುಳ್ಳದ್ದೆಂಬ ಬುದ್ಧಿಯನ್ನುಂಟುಮಾಡಬಹುದು. ಪ್ರಕೃತದಲ್ಲಿ ಹಾಗಿಲ್ಲ ಪರಮೇಶ್ವರಗುಣಗಳ ಕೆಲವು ಭಾಗವು ಬಂದು ಜೀವನಲ್ಲಿ ಸೇರುವದೊ, ಅಥವಾ ಎಲ್ಲಾ ಗುಣಗಳೂ ಬಂದು ಸೇರಿಕೊಳ್ಳುವವೊ? ಒಂದು ಭಾಗವೆಂದರೆ ಗುಣಗಳು ಸಾವಯವನವೆಂದು ಒಪ್ಪಬೇಕಾಗುವದು ; ಎಲ್ಲವೂ ಬಂದುಸೇರುವವೆಂದರೆ ಪರಮೇಶ್ವರನು ಆಗ ಅಜ್ಞನೆಂದೇ ಆಗುವದು' (ಮಾ. ಶಂ. ೬-೭೫, ೭೬, ೭೭) ಎಂದು ಬರೆದಿದಾನೆ.

ಈ ಪಾಶುಪತಖಂಡನೆಗೆ ಭಾಷ್ಯದ ಆಧಾರವು ಯಾವದೂ ಕಾಣಿಸುವ ದಿಲ್ಲ. ಏಕೆಂದರೆ ಕೂಪ್ರಭಾಷ್ಯದಲ್ಲಿ 'ಪತ್ಯುರನಾನುಜ್ಞಸ್ಯಾತ್' ಎಂಬುದರಿಂದ ಹಿಡಿದು 'ಅನ್ತವತ್ತ್ವಮಸರ್ವಜ್ಞತಾ ವಾ' ಎಂಬವರೆಗಿನ (ವೇ.ಸೂ. ೨-೨-೩೭ ರಿಂದ ೪೧) ಸೂತ್ರಗಳ ವಿವರಣೆಯಲ್ಲಿ ಪರಮೇಶ್ವರನು ಕೇವಲನಿಮಿತ್ತಕಾರಣ ನಾಗಿ ಪ್ರಧಾನಪುರುಷರನ್ನು ಆಳುತ್ತಾನೆ- ಎಂಬ ಪಾಶುಪತವಾದವನ್ನು ಮಾತ್ರ ದೂಷಿಸಿದೆ. ಪರಮೇಶ್ವರನಿಗೆ ರಾಗದ್ವೇಷಾದಿಗಳು ಬರುವವು, ಪ್ರಧಾನ ಪುರುಷರಿಗೂ ಈಶ್ವರನಿಗೂ ಯಾವ ಸಂಬಂಧವನ್ನೂ ತೋರಿಸುವದಕ್ಕಾಗುವ ದಿಲ್ಲ, ಪರಮೇಶ್ವರನಿಗೆ ಶರೀರವೂ ಇದೆಯೆಂದು ಒಪ್ಪಬೇಕಾಗಿಬರುತ್ತದೆ, ಅವನು ಪರಿಚ್ಛಿನ್ನನೆಂದೂ ಅಸರ್ವಜ್ಞನೆಂದೂ ಒಪ್ಪಿಕೊಳ್ಳಬೇಕಾಗುತ್ತದೆ- ಎಂಬ ದೋಷಗಳನ್ನೇ ಅಲ್ಲಿ ತೋರಿಸಿದೆ. ಬೇರೆ ಯಾವ ಭಾಷ್ಯಗಳಲ್ಲಿಯೂ ಪಾಶುಪತ ಮತದ ಪರಾಮರ್ಶವಿಲ್ಲ.

ಕಾಶೀಪಟ್ಟಣದ ಪರಾಮರ್ಶ

೮೧. ಇದೇ ಸರ್ಗದಲ್ಲಿ (೮೧ರಿಂದ ೮೩ನೆಯ ಶ್ಲೋಕವರೆಗಿನ ಗ್ರಂಥ ಭಾಗದಲ್ಲಿ) ಮಾಧವನು ತಟ್ಟನೆ ಕಾಶಿಯ ಪರಾಮರ್ಶವನ್ನು ಮಾಡಿರುವದು ಕಂಡುಬರುತ್ತದೆ. "ಆ ಹುಡುಗನ ಅಮಾನುಷಪ್ರಭಾವವನ್ನು ಕಂಡು 'ಕಾಶೀ ಪುರದವರನೇಕರು' 'ಸರ್ವತಂತ್ರಪ್ರಕಾಶಕನಾದ ಈತನಿಂದ ಭಾಸ್ಕರ, ಗುಪ್ತ, ನಿಶ್ಚ, ಮುರಾರಿ, ವಿದ್ಯೇಂದ್ರಗುರು-ಮುಂತಾದವರು ಪರಾಭವವನ್ನು ಹೊಂದಿ ದರು' ಎಂದುಕೊಳ್ಳುತ್ತಿದ್ದರು". ಇಲ್ಲಿರುವ 'ಕಾಶೀಪುರಸ್ಥಾಃ' ಎಂಬ ವಿಶೇಷಣದ ಆಧಾರದಿಂದಲೇ ಇರಬಹುದು, ಸೋಮನಾಥಯ್ಯನವರು ಆಚಾರ್ಯರು ಕಾಶಿಗೆ ಬಂದರೆಂದು (ಸೋ. ಶಂ. ಪು. ೮೩) ಕಲ್ಪಿಸಿರುತ್ತಾರೆ; ಸಿ. ಎನ್. ಕೃಷ್ಣಸ್ವಾಮಿ ಆಯ್ಯರವರು (CNKS. q28) ಆಗ ಶಂಕರರು ಕಾಶಿಯಲ್ಲಿ ಬಹಳ ಕಾಲವೂ ಬದರಿಯಲ್ಲಿ ಸ್ವಲ್ಪಕಾಲವೂ ಇದ್ದರೆಂದು ಹೇಳಿದಾರೆ. ಎನ್. ವೆಂಕಟರಾಮನ್

ರವರು ಬದರಿಯ ಮಾತನ್ನೇ ಎತ್ತಿಲ್ಲ. ಬಲದೇವ ಉಪಾಧ್ಯಾಯರು (ಪು ೫೫) ಆಚಾರ್ಯರು ಉತ್ತರಕಾಶಿಯಲ್ಲಿ ವುತ್ತಿದ್ದರೆಂದು ಕಲ್ಪಿಸಿರುತ್ತಾರೆ.

ಆಚಾರ್ಯರು ತಮ್ಮಲ್ಲಿಗೆ ಬಂದ ಕೆಲವರು ನೈಯಾಯಿಕರನ್ನು ಖಂಡಿಸಿದರು. ಹೀಗೆ ಪರಮತಿಗಳ ಆಕ್ಷೇಪಕ್ಕೆ ಆಚಾರ್ಯರು ಸಮಾಧಾನವನ್ನು ಕೊಟ್ಟಹಾಗೆಲ್ಲ ಒಬೆಹುಟ್ಟಿ ಕತ್ತರಿಸಿ ಕಾಯಿಸಿದ ಚಿನ್ನದಂತೆ ಆ ಚಾರ್ಯರ ಭಾಷ್ಯವು ಹೆಚ್ಚುಹೆಚ್ಚಾಗಿ ಹೊಳೆಯುತ್ತಿತ್ತು ಎಂದು ಮುಂದೆ ನಾಗವೀಯವಲ್ಲಿ (ಮಾ. ಶಂ. ೬-೧೦೦, ೧೦೧) ವರ್ಣಿಸಿರುತ್ತದೆ. ಮುಂದೆ ಹೇಳುವ ವ್ಯಾಸ ದರ್ಶನವು ಉತ್ತರಕಾಶಿಯಲ್ಲಿಯೇ ಆಯಿತೆಂದು ಕಲ್ಪಿಸುವದೇ ಚೆನ್ನಾಗಿ ಹೊಂದಿ ಕೊಳ್ಳುತ್ತದೆ.

ವ್ಯಾಸಸಂದರ್ಶನ :

ಆ. ಶ್ರೀಶಂಕರಾಚಾರ್ಯರು ಹೊಸದಾಗಿ ಸೂತ್ರಕ್ಕೆ ಭಾಷ್ಯವನ್ನು ಬರೆದಾಗ ಬದರಿಯಲ್ಲಾಗಲಿ ಕಾಶಿಯಲ್ಲಾಗಲಿ ಅನೇಕರು ಪಂಡಿತರು ಅವರ ವಿಷಯಕ್ಕೆ ಆಕ್ಷೇಪವನ್ನೊಡ್ಡಿರಬೇಕೆಂದು ನಿರೀಕ್ಷಿಸುವದು ಸ್ವಾಭಾವಿಕವೇ ಆಗಿದೆಯಷ್ಟೆ ? ಒಂದು ದಿನ ಮಧ್ಯಾಹ್ನಸಮಯದಲ್ಲಿ ಶಿಷ್ಯರು ಪಾಠವನ್ನು ಮುಗಿಸಿ ಆಯಾಸಗೊಂಡಿದ್ದರಿಂದ ಆಚಾರ್ಯರು ವಿಶ್ರಾಂತಿಗೆ ಸರಿಯಾಗಿ ಒಬ್ಬ ವೃದ್ಧ ಬ್ರಾಹ್ಮಣನು ಬಂದು 'ಇವರಿಗೆ ಏನು ಹೇಳಿಕೊಡುತ್ತಿದ್ದೀಯೆ ?' ಎಂದು ಕೇಳಿದನು. ಶಿಷ್ಯರು "ಇವರು ನಮ್ಮ ಗುರುಗಳು; ಸರ್ವೋಪನಿಷತ್ಸ್ವತಂತ್ರರು. ಇವರು ಶಾರೀರಕಕ್ಕೆ ಅಪ್ರಾಕೃತಭಾಷ್ಯವನ್ನು ಮಾಡಿರುತ್ತಾರೆ" ಎಂದರು. ಆಗ ಬ್ರಾಹ್ಮಣನು "ಎಲ್ಲಿ, ತಿಳಿವಿದ್ದರೆ ಯಾವದಾದರೊಂದು ಸೂತ್ರದ ಅರ್ಥವನ್ನು ಹೇಳು" ಎಂದನು. ಶಂಕರರ 'ಸೂತ್ರಾರ್ಥಜ್ಞರಿಗೆ ನಮಸ್ಕಾರ! ನಾನು ಸೂತ್ರಜ್ಞನೆಂಬ ಅಭಿಮಾನವೇನೂ ನನಗಿಲ್ಲ; ಆದರೂ ತಾವು ಏನಾದರೂ ಕೇಳಿದರೆ ಅದನ್ನು ಹೇಳುವೆನು' ಎಂದರು. ಆಗ ಬ್ರಾಹ್ಮಣನು ತೃತೀಯಾಧ್ಯಾಯದ ಎರಡನೆಯ ಸೂತ್ರದ ಅರ್ಥವನ್ನು ಹೇಳೆಂದು ಕೇಳಲು 'ಜೀವನು ಉತ್ಕ್ರಾಂತಿಯ ಕಾಲಕ್ಕೆ ಭೂತಗಳಿಂದ ಪರಿವೇಷ್ಟಿತನಾಗಿ ಹೋಗುತ್ತಾನೆ' ಎಂಬ ಅರ್ಥವನ್ನು ಹೇಳಿದರು. ಬ್ರಾಹ್ಮಣನು ಅವನ್ನು ನೂರುರೀತಿಯಿಂದ ವಿಕಲ್ಪಿಸಿ ಖಂಡಿಸಿದನು; ಅವನ್ನು ಆಚಾರ್ಯರು ಸಾವಿರಬಗೆಯಲ್ಲಿ ಖಂಡಿಸಿದರು. ಆ ವಾಗ್ಮಿಗಳಿಬ್ಬರಿಗೂ ಎಂಟು ದಿನಗಳವರೆಗೆ ವಾದವಾಯಿತು. ಆಗ ಪದ್ಮಪಾದರು 'ಇವರು ವೇದಾಂತರಹಸ್ಯವನ್ನು ಬಲ್ಲ ವ್ಯಾಸರು; ತಾವು ಸಾಕ್ಷಾಚ್ಛಂಕರನೇ ಆದ ಶಂಕರರು; ಇಂಥ ಸಂದರ್ಭದಲ್ಲಿ ಕಿಂಕರನಾದ ನಾನು ಏನು ಮಾಡಲಿ?' ಎಂದರು. ಆ ಮಾತನ್ನು ಕೇಳಿ ಆಚಾರ್ಯರು ವ್ಯಾಸರ ಸ್ತೋತ್ರವನ್ನು ಮಾಡಲು ವ್ಯಾಸರು ಪ್ರತ್ಯಕ್ಷರಾದರು. ಆಚಾರ್ಯರು ಅವರಿಗೆ ನಮಸ್ಕರಿಸಿ

ಸ್ತುತಿಸಲು ಅವರು 'ನೀನು ಭಾಷ್ಯವನ್ನು ಮಾಡಿದ್ದನ್ನು ಕೇಳಿ ಸಂತೋಷದಿಂದ ನೋಡುವದಕ್ಕೆಂದು ಬಂದೆನು. ನೀನು ನನಗೆ ಅತ್ಯಂತಪ್ರಿಯನು. ನಿನ್ನ ಭಾಷ್ಯರಚನೆಯು ಸಾಹಸವೆಂದು ತಿಳಿಯದಿರು; ಭೂಮಂಡಲದಲ್ಲೆಲ್ಲ ವೇದಾಂತವನ್ನು ಪ್ರಚಾರಮಾಡು' ಎಂದರು. ಶಂಕರಾಚಾರ್ಯರಿಗೆ ಎಂಟುವರ್ಷ ವಯಸ್ಸು; ಇನ್ನೆಂಟನ್ನು ಅವರೇ ತಪಸ್ಸಿನಿಂದ ಸಂಪಾದಿಸಿಕೊಂಡಿದ್ದರು; 'ಶಿವನ ಆಜ್ಞೆಯಿಂದ ನಿನಗೆ ಮತ್ತೂ ಹದಿನಾರುವರ್ಷಗಳು ಆಗಲಿ! ಈ ಭಾಷ್ಯವು ಸೂರ್ಯಚಂದ್ರನಕ್ಷತ್ರಗಳಿರುವವರೆಗೂ ಇರಲಿ!' ಎಂದು ಅವರನ್ನು ಆಶೀರ್ವದಿಸಿ ವ್ಯಾಸರು ಅಂತರ್ಧಾನರಾದರು (ಮೂ. ಶಂ. ೭-೧೧ರಿಂದ ೫೮).

ಇಲ್ಲಿ ಸಂಕ್ಷೇಪವಾಗಿ ನಾವು ಕೊಟ್ಟಿರುವ ವ್ಯಾಸದರ್ಶನದ ವಿಷಯಕ್ಕೆ ವಿನುರ್ಶೆಮಾಡತಕ್ಕ ವಿಷಯಗಳು ಕೆಲವು ಇವೆ :

(೧) ವ್ಯಾಸಾಚಲೀಯದಲ್ಲಿ ಈ ಕಥೆಯಿಲ್ಲ. ಅಲ್ಲಿರುವ ಕಥೆಯೆಲ್ಲ ಇಷ್ಟೆ : ಆಚಾರ್ಯರು ಗುರುಗಳನ್ನು ಬಿಟ್ಟು ತೀರ್ಥಾಟನೆಗೆಂದು ಬದರಿಗೆ ಬಂದು ಸೂತ್ರಭಾಷ್ಯವನ್ನು ರಚಿಸಿದರು (೮-೬೫ರಿಂದ ೬೭). ವ್ಯಾಸರು ಈ ಸುದ್ಧಿಯನ್ನು ಕೇಳಿ ಅಲ್ಲಿಗೆ ಬಂದರು (೭೦). ಆಚಾರ್ಯರು ಅವರನ್ನು ಸತ್ಕರಿಸಿ ಸ್ತುತಿಸಿ ಬಂದ ಕಾರಣವನ್ನು ಕೇಳಲು (೭೧ರಿಂದ ೭೭) ಸೂತ್ರಭಾಷ್ಯವನ್ನು ನೋಡುವದಕ್ಕೆ ಬಂದಿದೇನೆ ಎನ್ನಲು ಆಚಾರ್ಯರು ಅದನ್ನು ಅವರ ಕೈಗೆ ಕೊಟ್ಟರು. ವ್ಯಾಸರು ಅದನ್ನು ನೋಡಿ ಬಹಳ ಸಂತೋಷಪಟ್ಟರು (೭೮ರಿಂದ ೮೨). 'ಆದ್ವೈತಪ್ರತಿಷ್ಠೆಯನ್ನು ಮಾಡು' ಎಂದು ವ್ಯಾಸರು ಅವರಿಗೆ ಮತ್ತೆ ಹದಿನಾರುವರ್ಷ ಆಯುಸ್ಸನ್ನು ಕೊಟ್ಟರು; ಸೂತ್ರಕಾರನಷ್ಟೇ ಭಾಷ್ಯಕಾರನಿಗೂ ಗ್ರಂಥನಿರ್ಮಾಣದ ಕ್ಲೇಶವಿದೆ (೮೪) ಎಂದು ವ್ಯಾಸರು ಭಾಷ್ಯವನ್ನು ಹೊಗಳಲು ತನ್ಮ ಸೂತ್ರಸಂಬಂಧದಿಂದ ನನ್ನ ಭಾಷ್ಯಪೂ ಪ್ರಚಾರವಾಗಲಿ (೮೫) ಎಂದು ಆಚಾರ್ಯರು ಅವರಿಗೆ ವಂದಿಸಿದರು. ವ್ಯಾಸರು ಅಂತರ್ಧಾನವಾದರು. ಗೋವಿಂದನಾಥನ ಶಂಕರಾಚಾರ್ಯಚರಿತದಲ್ಲಿಯೂ ಈ ಕಥೆಯನ್ನೇ (ಗೋ. ೩-೫೪ರಿಂದ ೭೩) ಸಂಗ್ರಹಿಸಿದೆ. ಆದ್ದರಿಂದ ಮಿಕ್ಕ ಕಥೆ ವ್ಯಾಸಾಚಲರಿಗಿಂತ ಈಚೆಗೆ ಹುಟ್ಟಿರಬೇಕೆನಿಸುತ್ತದೆ.

(೨) ಚಿದ್ವಿಲಾಸೀಯದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಕಥೆಯು ಮಾಧವೀಯದಂತೆಯೇ ಇದೆ. ಆದರೆ ವಾದವು ಎಂಟು ದಿನವಾಯಿತೆಂಬುದು ಅಲ್ಲಿಲ್ಲ. ತಾವು ಉತ್ತರವನ್ನು ಕೊಟ್ಟಬಳಿಕವೂ ಪೂರ್ವಪಕ್ಷವನ್ನು ಮಾಡುತ್ತಲೇ ಇದ್ದ ಬ್ರಾಹ್ಮಣನನ್ನು ಕಂಡು 'ಪದ್ಮಪಾದನೆ, ಇವನಿಗೆ ಉತ್ತರವನ್ನು ಹೇಳು' ಎಂದು ಆಚಾರ್ಯರೆನ್ನಲು ಪದ್ಮಪಾದರು 'ಸರ್ವಜ್ಞರಾದ ನಮ್ಮ ಗುರುಗಳನ್ನು ಧಿಕ್ಕರಿಸುತ್ತಿದ್ದೀಯೆ, ಸರ್ವಜ್ಞನಂತೆ ಮಾತನಾಡುತ್ತಲೂ ಇದ್ದೀಯಲ್ಲ!' ಎಂದರು.

ಮಿಕ್ಕವರು ಕೆಲವರು ಮುಷ್ಟಿಯನ್ನು ಮಾಡಿಕೊಂಡು ಹೊರಟರು, ಮತ್ತೆ ಕೆಲವರು ಪೊಣ್ಣೆಯನ್ನು ಹುಡುಕಿದರು. ಆಚಾರ್ಯರು 'ಮುಟ್ಟಿದಮಾತ್ರಕ್ಕೆ ಬೀಳುವ ಹಾಗಿದ್ದಾನೆ, ಮುದುಕ ; ಇವನಿಗೆ ಏನೂ ತಿಳಿಯದು, ಏನಾದರೂ ಪರಟಲಿ ! ಅವರಿಂದ ನಮಗೇನು ಹಾನಿ ?' ಎಂದರು. ಆಗ ವ್ಯಾಸರು ನಗುತ್ತಾ ಪ್ರತ್ಯಕ್ಷರಾದರು. ಶಂಕರರು ಅವರನ್ನು ನಮಸ್ಕರಿಸಿದರು (ಚಿ. ಶಂ. ೧೩–೨೩ರಿಂದಳಂ). ಆಮೇಲೆ ಬ್ರಹ್ಮನು ಪ್ರತ್ಯಕ್ಷನಾಗಿ 'ಇವನು ಸಾಕ್ಷಾಚ್ಛಿವನೇ; ಜಿಲವಾದ ಆದ್ವೈತ ವನ್ನೂ ಸಂನ್ಯಾಸವನ್ನೂ ಉದ್ಧಾರಮಾಡುವದಕ್ಕೆ ಅವತರಿಸಿದಾನೆ' ಎಂದನು. ಕಾಶೀರಾಜಾದಿಗಳು ಆಶ್ಚರ್ಯದಿಂದ ನೋಡುತ್ತಿದ್ದರು (೧೪–೪). ವ್ಯಾಸರು 'ಇವನಿಗೆ ಆಯುಸ್ಸು ಮಾತ್ರ ಇಷ್ಟೇ ಇವೆ, ಭಾಷ್ಯವನ್ನು ಶಿಷ್ಯರಿಗೆ ಹೇಳುವವರು ಇನ್ನೂ ಯಾರೂ ವಿಚಕ್ಷಣರಿಲ್ಲನಲ್ಲ! ಏನುಮಾಡೋಣ ?' ಎಂದು ಕೇಳಲು ಬ್ರಹ್ಮನು 'ಶಂಕರಾಜ್ಞೆಯಿಂದ ಏನೇನಾಗಿದೆಯೋ ಅದನ್ನು ನಾನು ಬಲ್ಲೆನು ; ಅತನೇ ಲೀಲಾವಿಗ್ರಹವನ್ನು ಸ್ವೀಕರಿಸಿರುತ್ತಾನೆ. ಈತನು ತನ್ನ ಇಷ್ಟಾನು ಸಾರಮಾಡಲಿ ; (ಸ್ವಚ್ಛನ್ದಂ ವಿಹರತ್ವೇಷಃ ೪–೨೩). ನಾನಾದರೂ ವಿಷ್ಣು ವಾದರೂ ಕೊಡತಕ್ಕದ್ದೇನಿದೆ ? ಅತನಿಗೇ ಎಲ್ಲವೂ ಗೊತ್ತು' (೪–೨೩) ಎಂದು ಸುಚಿರಾಯುಸ್ಸನ್ನು ಕೊಟ್ಟನು (ದದೌ ಸುಚಿರಮಾಯುಶ್ಚ ೪–೨೪)ಎಂದು ಇದೆ. ಹದಿನಾರುವರ್ಷ ಆಯುಸ್ಸು ಹೆಚ್ಚಾಗಿ ಕೊಟ್ಟನು ಎಂಬ ಮಾತು ಅಲ್ಲಿಲ್ಲ.

(೩) ಅನಂತಾನಂದಗಿರೀಯೆಂಬಲ್ಲಿ ಹೀಗಿದೆ ; ಶಂಕರರು ವಿಸ್ತಾರವಾಗಿ ಸೂತ್ರಾರ್ಥ ಹೇಳಿದಮೇಲೆ ಆ ಮುದುಕನ ಕೆನ್ನೆಗೆ ಏಟುಕೊಟ್ಟು ಪದ್ಮಪಾದನನ್ನು 'ಈ ಮುದುಕನನ್ನು ನೆಲದಮೇಲೆ ಕೆಡವಿ, ತುದಿಗಾಲಿನಿಂದ ಆಚೆಗೆ ಹಾಕು ! (ವೃದ್ಧಸ್ಯ ಕಪೋಲತಾಡನಮಾಚಕಾರ | ಪರಂ ಚ ಪದ್ಮಪಾದಂ ನಿಜಶಿಷ್ಯಮಾಹ ಏನಂ ಪರಪಕ್ಷಿಶ್ರೇಷ್ಠಂ ವೃದ್ಧಂ ಭೂಮ್ಯುಪರಿ[1] ಅಧೋಮುಖಂ ಪಾತಯಿತ್ವಾ ಪಾದಾಗ್ರಾವಲಮ್ಬನಾದ್ದೂರಮ್ ಅಪವ್ರಜೇತಿ) (ಆ.ಶಂಪ್ರ. ೫೨, ಪು. ೨೦೬ ; ದೆಂ. ಪು. ೧೭೭) ಎಂದಿದೆ ! ಪದ್ಮಪಾದರು ಗುರುಗಳಿಗೆ ನಮಸ್ಕರಿಸಿ 'ಶಙ್ಕರಃ ಶಙ್ಕರಃ ಸಾಕ್ಷಾದ್ವ್ಯಾಸೋ ನಾರಾಯಣಃ ಸ್ವಯಮ್ | ತಯೋರ್ವಿವಾದೇ ಸಂ ಪ್ರಾಪ್ತೇ ಕಿಙ್ಕರಃ ಕಿಂ ಕರೋಮ್ಯಹಮ್ || (ಪು. ೨೦೭ ; ದೇ. ಪು. ೧೭೭) ಎಂದರು. ಶಂಕರರು ಸ್ತೋತ್ರಮಾಡಲಾಗಿ ವ್ಯಾಸರು ದರ್ಶನವನ್ನು ಕೊಟ್ಟು ಅನುಗ್ರಹಿಸಿದರು (ಪು. ೨೦೭ ; ದೇ. ೧೭೭). ಸೂತ್ರಭಾಷ್ಯವನ್ನು ನೋಡಿ ಸಂತೋಷಪಟ್ಟು 'ಹೋಗುವೆನು' ಎಂದು ಹೊರಟ ವ್ಯಾಸರನ್ನು ಕುರಿತ ಶಂಕರರು 'ಸರ್ವಜ್ಞನೆ, ಈಗ ನನ್ನ ಪ್ರಾಣೋತ್ಕ್ರಮಣವಾಗುತ್ತದೆ, ಅದನ್ನು ನೋಡಿ ಹೋಗಬೇಕು ; ತಮ್ಮ ಸಂನಿಧಿಯಲ್ಲಿ ಪ್ರಾಣ ತ್ಯಾಗ ಮಾಡಿದರೆ ಮುಕ್ತನೇ

1. ಈ ಮಾತುಗಳು ದೇ. ಪಾಠದಲ್ಲಿಲ್ಲ. 'ನಿಜಶಿಷ್ಯಮಿದಮಾಹ' ಎಂದು ಅಲ್ಲಿಯ ಪಾಠ.

ಆದಂತೆ!' ಎಂದರು. ವ್ಯಾಸರು 'ನೀನು ಹೋದಮೇಲೆ ಭಾಷ್ಯವು ಪ್ರಸಿದ್ಧವಾಗುವದು ಹೇಗೆ? ಆದ್ದರಿಂದ ನೀನು ಇಲ್ಲಿಯೇ ಇರು' ಎಂದರು. ಶಂಕರರು 'ನನಗೆ ಆಯುಸ್ಸು ಹದಿನಾರೇ ಎನ್ನಲು ಸೃಷ್ಟಿಕರ್ತನಾದ ಬ್ರಹ್ಮನನ್ನು ಮುತ್ರದಿಂದ ಎಳೆಸರು (ವ್ಯಾಸಸ್ತ್ವಾಕರ್ಷಯಾಮಾಸ ಬ್ರಹ್ಮಾಣಂ ಸೃಷ್ಟಿಕಾರಣಮ್) ಬ್ರಹ್ಮನು ಈ ಶಂಕರಾಚಾರ್ಯನೇ ಕೈಲಾಸನಾಯಕನು; ಇನ್ನು ಎಂಟು ವರ್ಷಗಳು ಭೂಮಿಯ ಮೇಲೆ ಇದ್ದು ಆಮೇಲೆ ಹೋಗುವನು (ನ ಏವ ಶಙ್ಕರಾಚಾರ್ಯಃ ಸಾಕ್ಷಾತ್ಕೈಲಾಸನಾಯಕಃ | ಯಾವದಷ್ಟಾಬ್ದಮುರ್ವ್ಯಾಂ[1] ಹಿ ಸ್ಥಿತ್ವಾ ಪಶ್ಚಾದ್ಗಮಿಷ್ಯತಿ ॥' (ಪು. ಜಖಿ-೨೦೮? ದೇ. ೧೭೮) ಈ ಬ್ರಹ್ಮವಚನವನ್ನು ಕೇಳಿ ವ್ಯಾಸರು ಗಂಗಾಂಬುವನ್ನು ತಂದು ನೂರುವರ್ಷ ಬದುಕಲಿ! – ಎಂದು ಶಂಕರರಮೇಲೆ ಪ್ರೋಕ್ಷಿಸಿದರು (ಇತಿ ಬ್ರಹ್ಮವಚಃ ಶ್ರುತ್ವಾ ವ್ಯಾಸಃ ಕಾಶೀಕೃತಾಲಯಃ। ಕರೇಣಾನೀಯ ಗಙ್ಗಾಮ್ಬು ಜೀವೇತ ಶರದಾಂ ಶತಮ್| ಇತ್ಯುಕ್ತ್ವಾ ಪ್ರೋಕ್ಷಯಾಮಾಸ ಶಙ್ಕರಾಚಾರ್ಯಮುತ್ತಮಮ್॥ (ಪ್ರ. ಜಳ; ಪು. ೨೦೯; ದೇ. ಪು. ೧೭೯)ಎಂದಿದೆ!

ಆಚಾರ್ಯರಿಗೆ ಆಯುಸ್ಸು ಮೂವತ್ತೆರಡು ಎಂಬುದಕ್ಕೆ ಪ್ರಾಚೀನ ಶಂಕರವಿಜಯ, ಬೃಹಚ್ಛಙ್ಕರವಿಜಯ– ಇವುಗಳ ಸಂಮತಿಯಿರುವದರಿಂದ ಮಾಧವೀಯವು ಅದಕ್ಕೆ ಅನುಗುಣವಾಗಿಯೇ ಇದೆ. ಆದರೆ ಚಿದ್ವಿಲಾಸರು 'ಆ ಶಿವನಿಗೆ ಇಷ್ಟವಿದ್ದಷ್ಟು ದಿನವಿರಲಿ! ಎಂದು 'ಸುಚಿರಾಯುಸ್ಸನ್ನು ಕೊಟ್ಟರು' ಎಂದೂ ಆನಂತಾನಂದಗಿರಿಯು ಬ್ರಹ್ಮನು ಎಂಟು ವರ್ಷ ಹೆಚ್ಚಾಗಿ ಎಂದರೆ ಇಪ್ಪತ್ತ್ನಾಲ್ಕು ವರ್ಷಗಳ ಆಯುಸ್ಸುಕೊಟ್ಟನು, ಆದರೆ ವ್ಯಾಸರು 'ನೂರುವರ್ಷ ಬದುಕಲಿ!' ಎಂದು ಹರಸಿದರು –ಎಂದೂ ಬರೆದಿರುವದು ವಿಚಿತ್ರವಾಗಿದೆ. ಚಿದ್ವಿಲಾಸೀಯದಲ್ಲಿ ಬ್ರಹ್ಮನು ತಾನೇ ಪ್ರತ್ಯಕ್ಷನಾದನು, ಆನಂದಗಿರಿಯಲ್ಲಿ ವ್ಯಾಸರೇ ಅವನನ್ನು ಮುಂತ್ರಶಕ್ತಿಯಿಂದ ಹಿಡಿದೆಳೆದರು!

ಇನ್ನೊಂದು ವಿಚಿತ್ರವಿಷಯವೂ ಇಲ್ಲಿದೆ. ಆಚಾರ್ಯರು ವೃದ್ಧಬ್ರಾಹ್ಮಣನನ್ನು ಬಯ್ದರಿಂದು ಚಿದ್ವಿಲಾಸೀಯದಲ್ಲಿದೆ, ಕೆನ್ನೆಗೆ ಹೊಡೆದು 'ಅವನನ್ನು ಕಾಲಿಂದ ಒದೆದು ತಳ್ಳು' ಎಂದು ವದ್ಮಪಾದರಿಗೆ ಹೇಳಿದರೆಂದು ಆನಂತಾನಂದಗಿರೀಯದಲ್ಲಿದೆ! ಅದು ನಿಜವಾದರೆ ಆಚಾರ್ಯರ ವಿನಯವನ್ನು ಏನೆಂದು ಹೇಳೋಣ!

(೪) ಶಂಕರಾಚಾರ್ಯರಿಗೂ ವೃದ್ಧಬ್ರಾಹ್ಮಣರೂಪದ ವ್ಯಾಸರಿಗೂ ಆದವಾದದಲ್ಲಿ ಪದ್ಮಪಾದರು ಹೇಳಿದ 'ಶಙ್ಕರಃ ಶಙ್ಕರಃ ಸಾಕ್ಷಾದ್' ಎಂಬ ಶ್ಲೋಕವು ಆನಂದಗಿರೀಯದಲ್ಲಿದೆಯಷ್ಟೆ? ಇದೇ ಆರ್ಥದ ಶ್ಲೋಕವೇ ಮಾಧವೀಯದಲ್ಲಿಯೂ ಇದೆ:

1. ದೇ. ಪಾಠದಲ್ಲಿ 'ಯಾವದಿಚ್ಛಾಬ್ಜಮ್' ಎಂದು ತಿದ್ದಿರುತ್ತದೆ!

ತ್ವಂ ಶಿಷ್ಯಃ ಶಿಷ್ಯ ಏವ ಸಾಕ್ಷಾದ್ವ್ಯಾಸಸ್ತು ನಾರಾಯಣ ಏವ ನೂನಮ್ ।
ಸಂಶೋಽಯಮಾವಯೋಃ ಸತತಂ ಪ್ರಸಕ್ತೇಃ ಕಿಂ ಕಿಙ್ಕರೋಽಹಂ ಕರವಾಣಿ ಸಖ್ಯಃ ॥
—(ಮೂ. ಶಂ ೭-೧೧)

ಇಲ್ಲಿ ಆಕ್ಷರಗಳ ಛಾಯೆ ಎರಡಕ್ಕೂ ಸಮಾನವಾಗಿದೆಯಾದರೂ ಆನಂತಾನಂದಗಿರಿಯಲ್ಲಿಯೇ 'ಕಿಙ್ಕರಃ ಕಿಂ ಕರೋಮ್ಯಹಮ್' ಎಂಬ ಪ್ರಾಸಬಂಧವು ಹೆಚ್ಚು ಹೊಂದುತ್ತದೆ ಎಂತ ತೋರುತ್ತದೆ. ಇದೇ ಶ್ಲೋಕವು (೧೪-೩೧) ಚಿದ್ವಿಲಾಸೀಯದಲ್ಲಿಯೂ ಇದೆ. ಆದರೆ ಆ ಶ್ಲೋಕವು ಬ್ರಹ್ಮ, ಶಂಕರಾಚಾರ್ಯರು, ವ್ಯಾಸರು- ಮೂವರನ್ನೂ ಕಂಡಾಗ ಪದ್ಮಪಾದರು ಹೇಳಿದರೆಂಬ ಸಂದರ್ಭದಲ್ಲಿ ಬಂದಿದೆಯಾದ್ದರಿಂದ ಇದು ಮೊದಲು ಆನಂತಾನಂದಗಿರೀಯದಲ್ಲಿಯೇ ಇದ್ದದ್ದೆಂದು ತೋರುತ್ತದೆ. ಮಿಕ್ಕ ಕಡೆಗಳಲ್ಲಿ ಡಿಂಡಿಮಕಾರರು ಕೊಟ್ಟಿರುವ ಅನೇಕ ವಾಕ್ಯಗಳು ಆನಂತಾನಂದಗಿರೀಯದಲ್ಲಿಯೇ ಕಂಡುಬರುವದರಿಂದ ಆ ಶಂಕರವಿಜಯವೇ ಮಾಧವೀಯಕ್ಕೆ ಮೂಲವೆಂದು ಊಹಿಸಬೇಕೆ? ಅಥವಾ ಇನ್ನೊಂದು ಆನಂದಗಿರೀಯವು ಕುಂಭಕೋಣಮಠದಲ್ಲಿದೆಯೆಂದು ಕೆಲವರು ಹೇಳುತ್ತಾರಾದ್ದರಿಂದ ಆದರ ವಾಕ್ಯಗಳು ಈ ಎರಡಕ್ಕೂ ಆಧಾರವೆಂದು ಕಲ್ಪಿಸಬೇಕೆ? ಇದು ವಿಚಾರಣೀಯವಾಗಿದೆ.

(ಜ) ವೇದಾಂತಮೀಮಾಂಸೆಯಲ್ಲಿ ಸಿದ್ಧಾಂತವಿಷಯವಾದ ಎಷ್ಟೋ ಆಮೋಘವಿಚಾರಗಳನ್ನು ಒಳಗೊಂಡಿರುವ ಸಮನ್ವಯಾದಿಸೂತ್ರಗಳನ್ನು ಬಿಟ್ಟು 'ತದನ್ತರಪ್ರತಿಪತ್ತೌ ' (ವೇ. ಸೂ. ೦-೧-೧) ಎಂಬ ನಮ್ಮಂಥವರಿಗೆ ಪರೋಕ್ಷವಾಗಿರುವ ಜೀವಗತಿಯನ್ನು ಪ್ರತಿಪಾದಿಸುವ ಸೂತ್ರವನ್ನೇಕೆ ವ್ಯಾಸರು ವಾದಕ್ಕೆ ಆರಿಸಿಕೊಂಡರು? ಅದರಲ್ಲಿ ಅವರು ಶಂಕರರ ಅಭಿಪ್ರಾಯಗಳನ್ನು 'ನೂರು ರೀತಿಗಳಿಂದ' ಖಂಡಿಸುವದಕ್ಕೇನಿತ್ತು? ಅದನ್ನು ಶಂಕರರು 'ಸಾವಿರ ಬಗೆಗಳಿಂದ' ಖಂಡಿಸಿದ್ದೇನಿರಬಹುದು? ಈ ವಿಷಯವನ್ನು ಶಂಕರವಿಜಯಕಾರರಾಗಲಿ ಡಿಂಡಿಮಟೀಕಾಕಾರನಾಗಲಿ ಹೇಳಿಲ್ಲ. ಹೀಗಿರುವದರಿಂದ ವ್ಯಾಸಶಂಕರಸಂವಾದವೆಂಬುದು ಬರಿಯ ಕಲ್ಪನಾಕಥೆಯೆ? ಭಾಷ್ಯವನ್ನು ಆಕ್ಷೇಪಿಸುವದಕ್ಕೆ ಅನೇಕರು ಪಂಡಿತರು ಬರುತ್ತಿದ್ದರೆಂಬುದಕ್ಕೆ ಮಾತ್ರ ಇದು ಪ್ರತೀಕವೆಂದು ಭಾವಿಸಬೇಕೆ? -ಎಂಬ ಪ್ರಶ್ನೆ ಏಳುತ್ತದೆ. ಶಾಂಕರಭಾಷ್ಯದ ವಿಷಯಕ್ಕೆ ಬಹಳ ವಾಕ್ಕಲಹವಾಯಿತೆಂದೂ ಅವರು ಕೆಲವು ಸಂದರ್ಭಗಳಲ್ಲಿ ಸ್ವಲ್ಪವಷ್ಟಿಗೆ ಪ್ರತಿವಾದಿಗಳ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕಾಗಿಬಂದಿರಬಹುದೆಂದೂ ಈ ಕಥೆಯಿಂದ ತರ್ಕಿಸಬಹುದೆಂತ ಸಿ. ಎನ್. ಕೃಷ್ಣಸ್ವಾಮಿ ಅಯ್ಯರವರು (CNK p.28) ಹೇಳುತ್ತಾರೆ. ಅದೃಷ್ಟವಾದ ಮೃತನ ಗತಿಯ ವಿಷಯಕ್ಕೆ ಇಷ್ಟೊಂದು ವಾಕ್ಕಲಹವಾಯಿತೇಕೆಂಬುದು ಆಗಲೂ ಅಪರಿಹೃತವಾಗಿಯೇ ಉಳಿದುಕೊಳ್ಳುತ್ತದೆ.

(೬) **ಮಾಧವ**ಕವಿಯು ಈ ಸೂತ್ರದ ಅಭಿಪ್ರಾಯವನ್ನು ವರ್ಣಿಸುವಾಗ ಸೂತ್ರಭಾಷ್ಯದ ವಾಕ್ಯಗಳನ್ನೇ ಉದಾಹರಿಸಿರುತ್ತಾನೆ. ಒಂದನೆಯ ಸೂತ್ರದ ಭಾಷ್ಯದ ಕೊನೆಯಲ್ಲಿರುವ 'ಏವಂ ಶ್ರುತ್ಯನ್ತೇ ದೇಹಾನ್ತರಪ್ರತಿಪತ್ತಿ ಪ್ರಕಾರೇ ಸತಿ ಯಾಃ ಪುರುಷಮತಿಪ್ರಭವಾಃ ಕಲ್ಪನಾಃ....ಇತ್ಯೇವಮಾದ್ಯಾಃ ಸರ್ವಾ ಏವಾನಾದರ್ತವ್ಯಾಃ ಶ್ರುತಿವಿರೋಧಾತ್' ಎಂಬ ವಾಕ್ಯವನ್ನು ಹಿಂದೆಯೇ (ಪು. ೫೫) ನಾವು ಉದಾಹರಿಸಿರುವದನ್ನು ವಾದಕರು ಇಲ್ಲಿ ಸ್ಮರಿಸಿಕೊಳ್ಳಬೇಕು ಅಲ್ಲಿ ನಾವು ಹೇಳಿಟ್ಟಿರುವಂತೆ ಬೃಹದಾರಣ್ಯಕಶ್ರುತಿಯು ಭಾಷ್ಯದ ಅಭಿಪ್ರಾಯವನ್ನು 'ಪುರುಷಮತಿಪ್ರಭವಕಲ್ಪನೆ' ಎಂದು ಇಲ್ಲಿ ನಿಂದಿಸಿರುವದೇಕೆಂಬುದನ್ನು ಯಾರೊಬ್ಬರೂ ಪರಾಮರ್ಶಿಸಿಲ್ಲ. ಆಗ ಬೃಹದಾರಣ್ಯಕಭಾಷ್ಯವು ಇನ್ನೂ ನಿರ್ಮಿತವಾಗಿರಲಿಲ್ಲವೆನ್ನಬೇಕೋ ಆ ಥ ವಾ ಈ ಎರಡು ಅಭಿಪ್ರಾಯಗಳು ಪರಸ್ಪರ ವಿರುದ್ಧವೆಂಬುದು ವ್ಯಾಖ್ಯಾನಕಾರರಿಗೆ ಹೊಳೆಯಲಿಲ್ಲವೆಂದು ಕಲ್ಪಿಸಬೇಕೋ ತಿಳಿಯದು.

೭. ಆಚಾರ್ಯ-ಕುಮಾರಿಲಸಮಾಗಮ

ಆ.

ದಿಗ್ವಿಜಯಕ್ಕೆ ಹೊರಡುವದಕ್ಕೆ ಮನಸ್ಸುಮಾಡಿದರು. ಚಿದ್ವಿಲಾಸೀಯದಂತೆ ಆಚಾರ್ಯರು ಬದರಿಯಿಂದ ಕಾಶಿಗೆ ಬಂದಾಗಲೆ ಅವರಿಗೆ ಒಬ್ಬರು ಪೀತಾಂಬರಗಳನ್ನೂ ಒಬ್ಬರು ರತ್ನಪಾದುಕೆಗಳನ್ನೂ ಒಬ್ಬರು ಚಿನ್ನದ ಕಮಂಡಲುವನ್ನೂ ಸುತ್ತಿ ಕೆಲವರು ನಾರುಬಟ್ಟೆಕಾಷಾಯವಸ್ತ್ರಗಳನ್ನೂ ಇನ್ನು ಕೆಲವರು ಏಕಾಕ್ಷರುದ್ರಾಕ್ಷಿಮಾಲೆಗಳನ್ನೂ ಮುತ್ತಿನ ಹಾರಗಳನ್ನೂ ಕೊಟ್ಟರು. ಹೀಗೆ ಜನರು ಕೊಟ್ಟದ್ದೆಲ್ಲವನ್ನೂ ಆಚಾರ್ಯರು ಚಂದ್ರಮೌಳೀಶ್ವರರತ್ನಗರ್ಭಗಣಪತಿಯವರಿಗ ಅರ್ಪಿಸುತ್ತಿದ್ದರು (ಚಿ. ಶಂ. ೧೩-೯ರಿಂದ ೧೧). ಇವರ ಸುದ್ದಿಯನ್ನು ಕೇಳಿದ **ಕಾಶೀರಾಜನು** ಬೆಲೆಯುಳ್ಳ ಕಿರೀಟವನ್ನೂ ರತ್ನಖಚಿತವಾದ ಚಿನ್ನದ ಕೇಯೂರವನ್ನೂ ಶ್ವೇತಚ್ಛತ್ರವನ್ನೂ ಪಲ್ಲಕ್ಕಿಯನ್ನೂ ಎರಡು ಚಾಮರಗಳನ್ನೂ ಒಪ್ಪಿಸಿ ಪ್ರತ್ಯಕ್ಷಚತ್ರಸಿವಾರಪಮೇತನಾಗಿ ಅವರನ್ನು ಸೇವಿಸಿದನಂತೆ (ಚಿ. ಶಂ. ೧೩-೧೪ ರಿಂದ ೧೭)). ಈ ರಾಜನ ಹೆಸರು **ರತ್ನಸಿಂಹನೆಂದಿತ್ತು** ಎಂತ ಸಿ. ಎನ್. ಕೃಷ್ಣಸ್ವಾಮಿ ಅಯ್ಯರ್‌ರು (CNKS. p. 29) ತಿಳಿಸುತ್ತಾರೆ. ನಮ್ಮಲ್ಲಿರುವ ಪುಸ್ತಕದಲ್ಲಿ ಈ ಹೆಸರು ಕಾಣಿಸಲಿಲ್ಲ. ಆಚಾರ್ಯರು ತಮ್ಮ ಬಿರುದುಬಾವಲಿಗಳೊಡನೆ ಸಂಚರಿಸುತ್ತಿದ್ದರೆಂದು ಚಿದ್ವಿಲಾಸೀಯ, ಆನಂದಗಿರೀಯಗಳಲ್ಲಿರುವದರಿಂದ ಅಗಿನ ಕಾಲದ ರಾಜರುಗಳ ಪ್ರೋತ್ಸಾಹವೂ ಶಂಕರದಿಗ್ವಿಜಯವು ಯಶಸ್ವಿಯಾಗುವದಕ್ಕೆ ಕಾರಣವಾಗಿರಬಹುದೆಂದು ಅಯ್ಯರ್‌ರವರ ಕಲ್ಪನೆ. ಆ ಕಲ್ಪನೆಗಿಂತಲೂ ಇತ್ತೀಚಿನ ಮತಾಧಿಪತಿಗಳು ಬಿರುದುಬಾವಲಿಗಳೊಡನೆ ಸಂಚರಿಸುತ್ತಿರುವದನ್ನು ಮನದಂದು ಆಚಾರ್ಯರಿಗೂ ಅಂಥ ಮಾನಮರ್ಯಾದೆಗಳು ಇರುವದು ಯುಕ್ತವೆಂದು ಆ ಶಂಕರವಿಜಯಕಾರರುಗಳು ಕಲ್ಪಿಸಿರಬಹುದೆಂದು ತರ್ಕಿಸುವದೇ ನಮಗೆ ಯುಕ್ತತರವೆನ್ನಿಸುತ್ತದೆ. ಹೇಗೂ ಆಚಾರ್ಯರೆ ವಿದ್ವತ್ತಿನಿಂದ ಅನೇಕ ಶಿಷ್ಯರುಗಳು ಅವರನ್ನು ಅನುಸರಿಸಿದ್ದು ಜನರಿಗೆ ಅವರಲ್ಲಿ ಗೌರವವನ್ನು ಹೆಚ್ಚಿಸಿರಬೇಕೆಂಬುದಕ್ಕೆ ಸಂಶಯವಿಲ್ಲ.

ಶಿವಪಾಷಂಡಿಪರಾಭವ

ಅಳ. ಆಚಾರ್ಯರು ಇನ್ನೂ ಕಾಶೀನಗರದಲ್ಲಿರುವಾಗಲೇ ಅವರನ್ನು ವಾದದಲ್ಲಿ ಜಯಿಸುವದಕ್ಕೆ ಅನೇಕ ಶಿವಪಾಷಂಡಿಗಳು ಬಂದರೆಂದೂ ಅವರನ್ನು

ಜಯಿಸಿ ಆಚಾರ್ಯರು ಲಿಂಗ, ತ್ರಿಶೂಲ, ಡಮರು– ಮುಂತಾದ ತಪ್ತಚಿಹ್ನೆಗಳುಳ್ಳವರಾಗಿದ್ದ ಅವರ ದುರಾಚಾರವನ್ನು ಬಿಡಿಸಿ ಅವ್ವೈತಪರರನ್ನಾಗಿ ಮಾಡಿದರೆಂದೂ ಚಿದ್ವಿಲಾಸೀಯದ ಗಣನೆಯ ಅಧ್ಯಾಯದಲ್ಲಿ ಬರೆದಿದೆ. ಚಿದ್ವಿಲಾಸೀಯದಲ್ಲಿಯೂ ಆನಂತಾನಂದಗಿರೀಯದಲ್ಲಿಯೂ ಹೀಗೆ ವಿವಿಧವಾದ ತಪ್ತಾಂಕನ, ವಿವಿಧತಿಲಕಗಳು, ರುದ್ರಾಕ್ಷಿ, ತುಳಸೀಮಾಲೆ– ಮುಂತಾದವುಗಳ ಧಾರಣೆಯ ಪ್ರತಿವಾದಿಗಳನ್ನು ಆಚಾರ್ಯರು ಗೆದ್ದರೆಂದು ಅಲ್ಲಲ್ಲಿ ಬರೆದಿದೆ. ಈ ವಿಷಯವು ಆನಂದಗಿರೀಯದಲ್ಲಿ ಹೇರಳವಾಗಿ ಕಂಡುಬರುತ್ತಿದೆ. ಆನಂತಾನಂದಗಿರಿಯು ಚಿದಂಬರಾಭಿನಾನಿಯೆಂದು ಆಗಲೆ ನನಗೆ ಗೊತ್ತಾಗಿದೆ. ದಕ್ಷಿಣದಲ್ಲಿ ಹೀಗೆ ತಿಲಕಧಾರಣ, ಆಯುಧಾಂಕನ– ಇವುಗಳ ಆಚಾರವು ಬಹಳವಾಗಿ ಇದ್ದಿರಬಹುದು. ಅದನ್ನು ಆಚಾರ್ಯರು ನಿಲ್ಲಿಸಿದರೆಂದು ತಿಳಿಸುವದಕ್ಕೆ ಆನಂದಗಿರಿಯು ಬಹಳ ಶ್ರಮವನ್ನು ವಹಿಸಿರುವಂತೆ ಕಾಣಿಸುತ್ತಿದೆ. ಈ ವಿಷಯವನ್ನು ಇನ್ನೊಮ್ಮೆ ಪ್ರಸ್ತಾಪಿಸಲಿರುವೆವು.

ಭಟ್ಟರನ್ನು ಕಂಡದ್ದು :

ಆಚಾ. ಶಂಕರರಿಗೆ ತಾವು ಬರೆದಿದ್ದ ಭಾಷ್ಯಕ್ಕೆ ಕುಮಾರಿಲಭಟ್ಟರಿಂದ ವಾರ್ತಿಕವನ್ನು ಬರೆಯಿಸಬೇಕೆಂಬ ಅಭಿಲಾಷೆಯುಂಟಾಯಿತು. ಆದ್ದರಿಂದ ಅವರು ದಕ್ಷಿಣದಿಕ್ಕಿನಲ್ಲಿರುವ ವಿಂಧ್ಯಾಚಲದ ಕಡೆಗೆ ಬಂದು, ಆ ಬಳಿಕ ಪ್ರಯಾಗಕ್ಕೆ ಬಂದರು. ಯಮುನಾನದಿಯಲ್ಲಿ ನಿಂದು ಕುಮರಿಲಭಟ್ಟರ ಸುದ್ದಿಯನ್ನು ಜನರಿಂದ ತಿಳಿದುಕೊಂಡು ಅವರನ್ನು ಹುಡುಕಿಕೊಂಡು ಹೊರಟರು. ಭಟ್ಟರು ತಾವು ಮಾಡಿದ ದುಷ್ಕೃತ್ಯದ ಪರಿಹಾರಕ್ಕಾಗಿ ಪ್ರಾಯಶ್ಚಿತ್ತರೂಪದಿಂದ ಒಂದು ಆರಣ್ಯದಲ್ಲಿ ಹೊಟ್ಟಿನ ಬೆಂಕಿಯನ್ನು ಹೊಗುತ್ತಿರುವರೆಂದು ತಿಳಿದುಬಂತು. ಅಲ್ಲಿಯೇ ಅವರನ್ನು ಕಂಡರು. ಕುಮಾರಿಲರು ಆದರದಿಂದ ಶಂಕರರನ್ನು ಬರಮಾಡಿಕೊಂಡರು. ಕಮಂಡಲುವಿನ ನೀರಿನಿಂದ ತುಷಾಗ್ನಿಯನ್ನು ಆರಿಸಿ ಅವರ ಅರೆಬೆಂದ ಶರೀರವನ್ನು ಉಜ್ಜೀವನಮಾಡುವದಕ್ಕೆ ಹೊರಟ ಶಂಕರರನ್ನು ತಡೆದು ಕುಮಾರಿಲಭಟ್ಟರು 'ತಾವು ಭಾಷ್ಯವನ್ನು ಮಾಡಿರುತ್ತೀರೆಂದು ಕೇಳಿದೆನು; ಅದಕ್ಕೆ ವಾರ್ತಿಕವನ್ನು ಬರೆಯಬೇಕೆಂದೂ ನನ್ನ ಅಭಿಪ್ರಾಯವಿತ್ತು. ಆದರೆ ಅದು ನನ್ನ ಆದೃಷ್ಟದಲ್ಲಿರಲಿಲ್ಲ, ಬೌದ್ಧರಿಂದ ಅಧ್ಯಯನಮಾಡಿದ ನಾನು ಆವರ ಕುಲವನ್ನೇ ನಾಶಗೊಳಿಸಿದೆನು. ಜೈಮಿನಿಯ ಮತದಲ್ಲಿರುವ ಅಭಿನಿವೇಶದಿಂದ ಕರ್ಮದಿಂದಲೇ ಮುಕ್ತಿಯೆಂಬುದನ್ನು ಸ್ಥಿರಪಡಿಸುವದಕ್ಕಾಗಿ ಪರಮೇಶ್ವರನನ್ನು ನಿರಾಕರಿಸಿದೆನು. ಈ ಎರಡು ದೋಷಗಳಿಗೆ ದೇಹಾಂತಪ್ರಾಯಶ್ಚಿತ್ತವೇ ಆಗಬೇಕು. ಇರಲಿ. ಕರ್ಮಠನಾದ ನನ್ನ ಶಿಷ್ಯ ಮಂಡನನೆನ್ನು ಜಯಿಸಿದರೆ ಎಲ್ಲರನ್ನೂ ಜಯಿಸಿದಂತೆ ಆಗುವದು' ಎಂದರು. ಆಚಾರ್ಯರು ಅವರಿಗೆ

ಅದ್ವೈತವನ್ನು ಉಪದೇಶಮಾಡಿ ಅಜ್ಞಾನವನ್ನು ಕಳೆದು ಆಕಾಶಮಾರ್ಗದಿಂದ ಮಂಡನನ ಮನೆಯಕಡೆಗೆ ಹೊರಟರು (ಮಾ. ಶಂ. ೭-೬ರಿಂದ ೧೩ರವರೆಗೆ ಮತ್ತು ೨೦ನೆಯ ಸರ್ಗದ ೧೦ನೆಯ ಶ್ಲೋಕ).

ಈ ವೃತ್ತಾಂತಸಂಗ್ರಹದಲ್ಲಿರುವ ಅಂಶಗಳನ್ನು ಒಂದೊಂದಾಗಿ ವಿಚಾರಿಸುವದು ಅವಶ್ಯವಾಗಿರುವದರಿಂದ ಆ ಕಾರ್ಯಕ್ಕೆ ಈಗ ಹೊರಡುವೆವು.

ಕುಮಾರಿಲರು ಉತ್ತರದೇಶದವರೆ ?

೬. ಕುಮಾರಿಲಭಟ್ಟರ ದೇಶವು ಯಾವದು ? –ಎಂಬ ವಿಷಯಕ್ಕೆ ಸರಿಯಾದ ಆಧಾರವು ಸಿಕ್ಕುವದಿಲ್ಲ. ಇವರು ಉಷ್ಣಿಣದೇಶದವರೆಂದು ಕೆಲವರು, ಉತ್ತರದೇಶದವರೆಂದು ಕೆಲವರು– ಹೀಗೆ ವಿಮರ್ಶಕರು ಭಿನ್ನಾಭಿಪ್ರಾಯವುಳ್ಳವರಾಗಿರುತ್ತಾರೆ. ಡಾಕ್ಟರ್ ವಿದ್ಯಾಭೂಷಣರೆಂಬವರು ಬರೆದಿರುವ ಭಾರತನ್ಯಾಯಶಾಸ್ತ್ರದ ಇತಿಹಾಸ (History of Indian Logic p 305) ಆಧಾರದಿಂದ **ಬಲದೇವ ಉಪಾಧ್ಯಾಯರು** ಸಂಗ್ರಹಿಸಿರುವ ತಿಬೆಟ್‌ದೇಶದ ತಾರಾನಾಥನೆಂಬ ಐತಿಹಾಸಿಕ ಮತ್ತು ಇತರರ ಗ್ರಂಥಗಳಲ್ಲಿ ಕಾಣುವ ಒಂದು ಐತಿಹ್ಯವನ್ನು ಇಲ್ಲಿ ಸಮಾಲೋಚಿಸುವದು ಅವಶ್ಯವಾಗಿದೆ. ಕುಮಾರಿಲನು ಧರ್ಮಕೀರ್ತಿಯ ಚಿಕ್ಕಪ್ಪನು. ದಕ್ಷಿಣಭಾರತದ ಚೂಡಾಮಣಿ ಎಂಬ ಹೆಸರಿನ ರಾಜ್ಯಕ್ಕೆ ಸೇರಿದ ತ್ರಿಮಲೆಯಲ್ಲಿ ಹುಟ್ಟಿದವನು. ಈತನು ಶ್ರೀಮಂತಗೃಹಸ್ಥನಾಗಿದ್ದು ಚೂಡಾಮಣಿರಾಜನ ಗೌರವಕ್ಕೆ ಪಾತ್ರನಾಗಿದ್ದನು. ಧರ್ಮಕೀರ್ತಿಯು **ಕೋರನಂದ**ನೆಂಬ ಬ್ರಾಹ್ಮಣನ ಮಗನು; ಬೌದ್ಧಮತದಲ್ಲಿ ಆಸ್ಥೆಯಿದ್ದದ್ದರಿಂದ ನಾಳಂದಾ ವಿದ್ಯಾಪೀಠದ ಸ್ಥವಿರಧರ್ಮಪಾಲನಲ್ಲಿ ಬೌದ್ಧಶಾಸ್ತ್ರವನ್ನು ಓದಿ ಬ್ರಾಹ್ಮಣ ದರ್ಶನದ ಪರಿಚಯಕ್ಕಾಗಿ ಕುಮಾರಿಲರಲ್ಲಿ ಪರಿಚಾರಕನಾಗಿ ನಿಂತನು; ಕುಮಾರಿಲನು ತನ್ನ ಪತ್ನಿಯ ಅಭಿಪ್ರಾಯದಂತೆ ಇತರ ಬ್ರಾಹ್ಮಣರೊಡನೆ ಇವನಿಗೂ ಅವಕಾಶವನ್ನು ಕೊಟ್ಟನು. ಕೀರ್ತಿಯು ಶಾಸ್ತ್ರಗಳನ್ನು ಕಲಿತು ಅವುಗಳಲ್ಲಿ ಪ್ರವೀಣನಾಗಿ ಅಲ್ಲಿದ್ದ ಪಂಡಿತರೊಡನೆ ವಾದಮಾಡಿ ಅವರನ್ನು ಜಯಿಸಿದ ಬಳಿಕ ಭಟ್ಟರೊಡನೆಯೂ ಶಾಸ್ತ್ರಾರ್ಥವನ್ನು ಮಾಡಿ ಅವರನ್ನು ಸೋಲಿಸಿದನು. ಇದರ ಫಲವಾಗಿ ಭಟ್ಟನು ತನ್ನ ಐನೂರು ಶಿಷ್ಯರೊಡನೆ ಬೌದ್ಧನಾದನು). (History of Indian Logic pp303-306).

ಈ ಕಥೆಗೆ ನಮ್ಮ ದೇಶದಲ್ಲಿ ಬೆಂಬಲವಿಲ್ಲದಿದ್ದರೂ ಭಟ್ಟರು ಬೌದ್ಧರ ದರ್ಶನವನ್ನು ತಿಳಿದುಕೊಳ್ಳುವದಕ್ಕೆಂದು ಬೌದ್ಧಾಚಾರ್ಯರಲ್ಲಿ ಬೌದ್ಧಭಿಕ್ಷುವಿನ ವೇಷದಲ್ಲಿದ್ದುಕೊಂಡು ಶಾಸ್ತ್ರಾಧ್ಯಯನವನ್ನು ಮಾಡಿದರೆಂಬುದು ಮೇಲೆ ನಾವು ಸಂಗ್ರಹವಾಗಿ ಹೇಳಿರುವ ಮಾಧವೀಯಶಂಕರಕಥಾವೃತ್ತಾಂತದಿಂದಲೇ ಗೊತ್ತಾಗು

ತ್ತದೆ. ಭಟ್ಟನ ಆಚಾರ್ಯನು **ಧರ್ಮಪಾಲನೇ** ಆಗಿರಬೇಕೆಂದು ಬಲದೇವ ಉಪಾಧ್ಯಾಯನ ಅಭಿಪ್ರಾಯ (ಬಲ. ಶಂ. ಪು. ೫೯). ಭಟ್ಟರು ಬೌದ್ಧರಲ್ಲಿ ಓದುತ್ತಿದ್ದಾಗ[1] ಒಂದು ದಿನ ಆ ಗುರುವು ವೈದಿಕಮಾರ್ಗವನ್ನು ನಿಂದಿಸುತ್ತಿರುವಲ್ಲಿ ಅವರ ಕಣ್ಣುಗಳಿಂದ ನೀರಿನ ತೊಟ್ಟುಗಳು ಉದುರಿದ್ದನ್ನು ಮಿಕ್ಕ ಶಿಷ್ಯರು ಕಂಡು ಅವರು ಬ್ರಾಹ್ಮಣರೆಂಬುದನ್ನು ಅರಿತುಕೊಂಡರು. ಸಮಯವನ್ನು ಸಾಧಿಸಿ ಉಪ್ಪರಿಗೆಯ ಮೇಲಿನಿಂದ ಅವರನ್ನು ಕೆಳಕ್ಕೆ ತಳ್ಳಿದರು. 'ವೇದಗಳು ಪ್ರಮಾಣವಾದರೆ ನನಗೆ ಯಾವ ಅಪಾಯವೂ ಆಗದಿರಲಿ!' ಎಂದು ಭಟ್ಟರು ಕೂಗಿಕೊಂಡರಂತೆ. 'ಪ್ರಮಾಣವಾದರೆ' ಎಂದು ಸಂಶಯವನ್ನು ಸೂಚಿಸಿದ್ದರಿಂದಲೂ ಪ್ರಚ್ಛನ್ನವೇಷದಿಂದ ಶಾಸ್ತ್ರಶ್ರವಣವನ್ನು ಮಾಡಿದ್ದರಿಂದಲೂ ಒಂದು ಕಣ್ಣು ಹೋಯಿತು (ಮಾ ಶಂ. ೭–೯ರಿಂದ ೯೯) ಎಂದು ಮಾಧವನ ವರ್ಣನೆ

ಈ ಎರಡು ಕಥೆಗಳನ್ನೂ ಒಟ್ಟುಗೂಡಿಸಿದರೆ, ಆಗಿನ ಕಾಲದಲ್ಲಿ ಬೌದ್ಧರೂ ಬ್ರಾಹ್ಮಣರೂ ಒಬ್ಬರ ಶಾಸ್ತ್ರವನ್ನೊಬ್ಬರು ಹೇಗೋ ಕಲಿತುಕೊಂಡು ಪರಸ್ಪರ ಖಂಡನೆಗಳನ್ನು ಮಾಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಇದು ಹೇಗಾದರೂ **ಕುಮಾರಿಲರು** ದಕ್ಷಿಣದವರೆಂಬುದಕ್ಕೆ ಈ ಕಥೆಯೊಂದು ಸಹಾಯಕವಾಗುತ್ತದೆ ಎನ್ನಬಹುದು ಆದರೆ **ಅನಂತಾನಂದ**ಗಿರಿಯು ಭಟ್ಟರು ಉತ್ತರದೇಶದಿಂದ ಬಂದು ದುಷ್ಟಮತಾವಲಂಬಿಗಳಾದ ಜೈನಬೌದ್ಧರುಗಳನ್ನು ಜಯಿಸಿದರು, (ಭಟ್ಟಾಚಾರ್ಯಾ-ಖ್ಯೋ ದ್ವಿಜವರಃ ಕಶ್ಚಿತ್ ಉದಗ್ದೇಶಾತ್ ಸಮಾಗತ್ಯ ದುಷ್ಟಮತಾವಲಮ್ಬಿನೋ ಬೌದ್ಧಾನ್ ಜೈನಾನ್ ಆಸಂಖ್ಯಾತಾನ್ ರಾಜಮು-ಖಾದ್ ಅನೇಕ ವಿದ್ಯಾಪ್ರಸಙ್ಗಭೇದೈರ್ನಿರ್ಜಿತ್ಯ....ನಿರ್ಭಯೋ ವರ್ತತೇ[2] ಪ್ರ. ೫೫, ಪು. ೨೧೦, ೨೧೧ ; ದೇ. ೧೮೦) ಎಂದಿರುವದರಿಂದ ಅವರು ಉತ್ತರದೇಶದವರೆಂದು ತಿಳಿಯಬೇಕಾಗುತ್ತದೆ. ಶಾಲಿಕಾನಾಥನು ಅವರನ್ನು **'ವಾರ್ತಿಕ ಕಾರವಿಶ್ರ'**ರೆಂದು ಕರೆದಿರುವದರಿಂದಲೂ ಇವರು ಉತ್ತರದೇಶದವರೆನ್ನಬೇಕು; ಅವರು ಮೈಥಿಲಬ್ರಾಹ್ಮಣರೆಂಬ ಒಂದು ಐತಿಹ್ಯವೂ ಇದೆ ಎಂದು (ಬಲ. ಶಂ. ಪು. ೫೮) **ಬಲದೇವ ಉಪಾಧ್ಯಾಯರು** ಹೇಳುತ್ತಾರೆ.

ದಕ್ಷಿಣದೇಶದಲ್ಲಿ ಜೈನಬೌದ್ಧರ ಹಾವಳಿಯು ಬಹಳವಾಗಿದ್ದದ್ದು, ಬೌದ್ಧ ವಿದ್ವಾಂಸರನೇಕರು ದಕ್ಷಿಣದ ಬ್ರಾಹ್ಮಣರಾಗಿದ್ದರೆಂಬ ಕಥೆಗಳು– ಇವುಗಳನ್ನು

---

1. ಭಟ್ಟರು ಬೌದ್ಧರಲ್ಲಿ ಶಾಸ್ತ್ರಶ್ರವಣವನ್ನು ಮಾಡಿದರೆಂದು ಮಣಿಮಂಜರಿಯಲ್ಲಿಯೂ (೫–೩೭ ರಿಂದ ೪೧) ಹೇಳಿದೆ.

2. ತೆಲುಗುಪ್ರತಿಯಲ್ಲಿ...ಗುರುತಾಮಾಡಿತುವ ಶಬ್ದಗಳು ಸ್ಫುಟವಾಗಿಲ್ಲ. ದೇ. ಪಾಠದಲ್ಲಿ 'ತೇಷಾಂ ಶೀರ್ಷಾಣಿ ಪರಶುಭಿಶ್ಛಿತ್ವಾ ಬಹುಷು ಉಲೂಖಲೇಷು ನಿಕ್ಷಿಪ್ಯ ಕಟ (?) ಭ್ರಮಣೈಶ್ಚೂರ್ಣೀಕೃತ್ಯ ಚೈವಂ ದುಷ್ಟಮತಧ್ವಂಸನಮಾಚರನ್' ಎಂದಿದೆ.

ನುನದಂಪರೆ ಭಟ್ಟರು ದಕ್ಷಿಣದೇಶದವರೆಂದು ನಂಬುವದೇ ಯುಕ್ತವೆಂದು ನಮ್ಮ ಮತ. ಇದರ ಜೊತೆಗೆ ಧರ್ಮಕೀರ್ತಿಗೆ ಸಂಮತವಾದ "ಕಲ್ಪನಾಪೋಢಮ ಭ್ರಾನ್ತಮ್" ಎಂಬ ಪ್ರತ್ಯಕ್ಷಲಕ್ಷಣವನ್ನು ಶ್ಲೋಕವಾರ್ತಿಕದಲ್ಲಿ ಖಂಡಿಸಿದೆ; ಧರ್ಮಕೀರ್ತಿಯು ಕುಮಾರಿಲಭಟ್ಟರಿಗೆ ಸಂಮತವಾದ ವೇದಪ್ರಾಮಾಣ್ಯವನ್ನು ತನ್ನ ಪ್ರಮಾಣವಾರ್ತಿಕದಲ್ಲಿ ಖಂಡಿಸಿರುತ್ತಾನೆ. ನಮಗೆ ದೊರೆತಿರುವ ಧರ್ಮಕೀರ್ತಿಯ 'ಪ್ರಮಾಣವಾರ್ತಿಕ'ದಮೇಲೆ ಪ್ರಜ್ಞಾಕರಗುಪ್ತನೆಂಬವನು ಬರೆದಿರುವ ಭಾಷ್ಯಪುಸ್ತಕದಲ್ಲಿ ತ್ರಿಪಿಟಕಾಚಾರ್ಯಮಹಾಪಂಡಿತ ರಾಹುಲಸಾಂಕೃತ್ಯಾಯನರು ಬರೆದಿರುವ ಭೂಮಿಕೆಯಲ್ಲಿ ವೇದಪ್ರಾಮಾಣ್ಯವನ್ನು ಖಂಡಿಸುವ ಈ ಶ್ಲೋಕವಿದೆ :

ಅಪೌರುಷೇಯತಾಪೀಷ್ಟಾ ಕರ್ತ್ರಾಣಾಮನುಸ್ಮೃತೇಃ ಕಿಲ।
ಸಂತ್ಯಸ್ಯಾಪ್ಯನುವಕ್ತಾರ ಇತಿ ಧಿಗ್ ವ್ಯಾಪಕಂ ತಮಃ ॥

(೨೪೨, ಪ್ರ ವಾ. ಭಾ, ಭೂ. ಪುಟ, ಜ)

ಇದರಿಂದ ಧರ್ಮಕೀರ್ತಿಯು ವೇದಾಪೌರುಷೇಯತ್ವವಾದವನ್ನು ಖಂಡನೆ ಮಾಡಿರುವದು ಗೊತ್ತಾಗುತ್ತದೆ. ಈ ಕಾರಣದಿಂದ ಧರ್ಮಕೀರ್ತಿಯೂ ಕುಮಾರಿಲರೂ ಸದುಕಾಲಿಕರೆಂಬ ಕಳೆಗೆ ಪುಷ್ಟಿಬರುತ್ತದೆ. ಕುಮಾರಿಲರಿಗೆ ಕೇವಲ ಮಹಾಯಾನವೇ ಅಲ್ಲದೆ, ಪಾಲಿಭಾಷೆಯಲ್ಲಿದ್ದ ಹೀನಯಾನದ ಬೌದ್ಧರ ಮತದ ಪರಿಚಯವೂ ಇತ್ತೆಂಬುದಕ್ಕೆ ತಂತ್ರವಾರ್ತಿಕದಲ್ಲಿ (ತಂ.ವಾ. ೧–೩–೬ ಪು. ೨೩೦, ೨೩೭) ನಿದರ್ಶನವಿದೆ.[1] ಆದ್ದರಿಂದಲೂ ಅವರು ದಕ್ಷಿಣದೇಶದವರಾಗಿರುವ ಸಂಭವವು ಹೆಚ್ಚಾಗಿದೆ. ಮ್ಲೇಚ್ಛರ ಅಪಶಬ್ದಗಳನ್ನು ಆಗ್ರಾಹ್ಯವೆಂದು ಹೇಳುವ ಪ್ರಸಕ್ತಿಯಿಂದ ಚೋರ್ (ಅನ್ನ), ಆತರ್ (ಮಾರ್ಗ), ಪಾಂಪ್ (ಹಾವು), ಮಾಲ್ (ಸ್ತ್ರೀ), ವಯಿರ್ (ಹೊಟ್ಟೆ)–ಇವನ್ನು ಚೋರ, ಅಂತರ, ಪಾಪ, ಮಾಲಾ, ವೈರಿ– ಎಂದು ತಿರುಗಿಸಿಕೊಂಡು ಆರ್ಯರು ಅರ್ಥಾಂತರ

---

1. 'ಉತ್ಪಾದಾದ್ವಾ ತಥಾಗತಾನಾಮನುತ್ಪಾದಾದ್ವಾ ಸ್ಥಿತೈವೇಯಂ ಧರ್ಮನಿತ್ಯತಾ' ಎಂಬ ಮಹಾಯಾನವಾಕ್ಯವನ್ನು ಇಲ್ಲಿ ಉದಾಹರಿಸಿದೆ. 'ಮಮು ವಿಹಿ ಭಿಕ್ಖವೇ ಕಮ್ಮಾವಜ್ಜ ಇಸೀ ಸವೇಗಾ' ತಥಾ ಉಕಖಿತ್ತೇ ಲೋಡಮ್ಮಿ ಉದ್ವೇ ಅತ್ಥಿ ಕಾರಣಮ್! ಪಡಹೇಣತ್ಥಿ ಕಾರಣಮ್। ಅಣುಭವೇ ಕಾರಣಂ ಇಮೇ ಸಂಕಡಾ ಧಮ್ಮಾ ಸಂಭವನ್ತಿ ಸಕಾರಣಾ ಅಕಾರಣಾ ವಿಣಸನ್ತಿ। (ಮಮಾಪಿ ಭಿಕ್ಷವಃ ಕರ್ಮ ವರ್ತತ ಏವ ಆ ಶರೀರ ಪಾತಾತ್। ಉತ್ಕ್ಷಿಪ್ತೇ ಲೋಷ್ಟೇ ಉತ್ಕ್ಷಿಪೇ ಅಸ್ತಿ ಕಾರಣಂ ಪತನೇ ನಾಸ್ತಿ ಕಾರಣಮ್। ಅಸ್ತ್ಯುದ್ಭವೇ ಕಾರಣನ್ ಇಮೇ ಸಂಸ್ಕೃತಾ ಧರ್ಮಾಃ ಸಂಭವನ್ತಿ ಸಕಾರಣಾ ಅಕಾರಣಾ ವಿನಶ್ಯನ್ತಿ।) ಈ ಪಾಳಿಭಾಷೆಯ ವಾಕ್ಯಗಳು ಬುದ್ಧನಿಗೂ ಶರೀರ ಪಾತದವರೆಗೂ ಕರ್ಮವುಂಟು. ವಸ್ತುಗಳ ಹುಟ್ಟಿಗೆ ಕಾರಣವಿದ್ದರೂ ನಾಶಕ್ಕೆ ಕಾರಣವಿಲ್ಲ ಎಂಬರ್ಥದಲ್ಲಿ ಬಂದಿವೆ.

ವಾಚಕವಾಗಿ ಭಾವಿಸಿಕೊಳ್ಳುತ್ತಿರುವರೆಂದು ವಿವರಿಸಿರುತ್ತಾರೆ (ತಂ .ವಾ. ೧–೩–೫,[1] ಪು, ೨೨೫–೨೨೬), ಇದು ದಕ್ಷಿಣದೇಶದವರಿಗೇ ಹೆಚ್ಚು ಸಾಧ್ಯ. ಮಿಕ್ಕ ಭಾಷೆಗಳನ್ನೂ ಅವರು ಪರಾನುರ್ಶಿಸಿರುವದು ನಿಜ. 'ತದ್ಯದಾ ದ್ರವಿಡಾದಿ ಭಾಷಾಯಾಮಿವಾದೃಶೀ ಸ್ವಚ್ಛನ್ದಕಲ್ಪನಾ, ತದಾ ಪಾರಸೀ–ಬರ್ಬರ– ಯವನ-ರೌಮಕಾದಿಭಾಷಾಸು ಕಿಂ ವಿಕಲ್ಪ್ಯ ಕಿಂ ಪ್ರತಿಪತ್ಸ್ಯನ್ತ ಇತಿ ನ ವಿದ್ಮಃ' (ತಂ. ವಾ. ೧–೩–೫, ಪು. ೨೨೬) ಎಂದಿದಾರೆ. ದ್ರಾವಿಡಾದಿಭಾಷೆಗಳಲ್ಲಿಯೇ ಹೀಗಿರುವಲ್ಲಿ ಪಾರಸೀ, ಬರ್ಬರ, ಯವನ, ರೋಮನ್–ಮುಂತಾದ ಭಾಷೆಗಳಲ್ಲಿ ಏನೇನು ಕಲ್ಪಿಸಿಕೊಂಡು ಏನೇನು ತಿಳಿಯುತ್ತಾರೋ ಅರಿಯೆವು ಎಂದು ಬರೆದಿರುವದನ್ನು ನೋಡಿದರೆ ಅವರಿಗೆ ತಮಿಳುಭಾಷೆ ಹೆಚ್ಚುಹತ್ತಿರ, ಪಾರಸ್ಯಾದಿಭಾಷೆಗಳು ದೂರ–ಎಂಬ ಭಾವನೆ ಇತ್ತೆಂದು ಕಲ್ಪಿಸುವದಕ್ಕೆ ಅವಕಾಶ ವಾಗುತ್ತದೆ. ಶಾಲಿಕಾನಾಥನು 'ವಾರ್ತಿಕಕಾರಮಿಶ್ರ' ಎಂಬ ಹೆಸರನ್ನು ಉತ್ತರದೇಶದವರ ಉಪಾಧಿಯನ್ನು ಸೂಚಿಸುವದಕ್ಕೆ ಬರೆದನೆಂಬ ವಾದವು ನಮಗೆ ಅಷ್ಟು ಒಪ್ಪಾಗಿಲ್ಲ. ಏಕೆಂದರೆ 'ಮಿಶ್ರ' ಎಂಬ ಹೆಸರು ಸಂಸ್ಕೃತದಲ್ಲಿ ಗೌರವಸೂಚಕವಾಗಿದೆ ; 'ಗುರುಚರಣಾಃ', ತಾತಪಾದಾಃ' ಎಂಬಂತೆ 'ವಾರ್ತಿಕ ಕಾರಮಿಶ್ರಾಃ' ಎಂದೂ ಗೌರವಾರ್ಥವಾಗಿ ಉಪಯೋಗಿಸುವದರಲ್ಲಿ ಯಾವ ಆತಂಕವೂ ಕಾಣುವದಿಲ್ಲ. ಯಾವದಾದರೊಂದು ಸಂಜ್ಞಾನಾಮದೊಡನೆ ಪ್ರಯೋಗಿಸಿದಾಗ ಮಾತ್ರ ಉದಾಹರಣೆಗೆ 'ವಾಚಸ್ಪತಿಮಿಶ್ರ', 'ಮಣ್ಡನಮಿಶ್ರ' ಎಂಬಲ್ಲಿ 'ರಾಮಭಟ್ಟ', 'ರಾಮಶಾಸ್ತ್ರಿ', ಎಂಬಂತೆ ಆಯಾ ದೇಶದಲ್ಲಿ ಬಳಕೆಯಲ್ಲಿರುವ ಉಪಾಧಿಯು ಸಂಕೇತವೆಂದು ಪರಿಗಣಿಸಬಹುದಾಗಿದೆ. ಆದ್ದರಿಂದ ಭಟ್ಟರು ಉತ್ತರದೇಶದವರೆನ್ನುವದಕ್ಕೆ ಇನ್ನೂ ಹೆಚ್ಚಿನ ಉಪಪತ್ತಿಯು ಬೇಕೆಂತ ಹೇಳಬೇಕಾಗಿದೆ.

ಆಚಾರ್ಯರಿಗೆ ಭಟ್ಟಪಾದರ ಸುದ್ದಿ ತಿಳಿದದ್ದು ಎಲ್ಲಿ ?

೮೭. ಮಾಧವೀಯದಲ್ಲಿ ಆಚಾರ್ಯರು ಭಟ್ಟರನ್ನು ಜಯಿಸುವದಕ್ಕೆಂದು ಮೊದಲು ಪ್ರಯಾಗಕ್ಕೆ ಬಂದರು (ಪ್ರಯಾಗಮಾಗಾತ್ ಪ್ರಥಮಂ ಜಿಗೀಷುಃ ಕುಮಾರಿಲಂ ಸಾಧಿತಕರ್ಮಜಾಲಮ್ ಮಾ. ಶಂ. ೭–೬೨) ಎಂದಿದೆಯಷ್ಟೆ ? ಚಿದ್ವಿಲಾಸೀಯ ಮತ್ತು ಆನಂತಾನಂದಗಿರೀಯ– ಇವುಗಳಲ್ಲಿ ಅವರು ದಕ್ಷಿಣದಲ್ಲಿ ಈ ಪ್ರಾಯಶ್ಚಿತ್ತವನ್ನು ಮಾಡಿಕೊಂಡರು ಎಂದಿದೆ.

ಚಿದ್ವಿಲಾಸೀಯದಲ್ಲಿ ಆಚಾರ್ಯರು ಕಾಶಿಯಲ್ಲಿದ್ದುಕೊಂಡು ದುರ್ಮತೆಗಳನ್ನು ಖಂಡಿಸುತ್ತಾ ವಾದಿಗಳನ್ನು ಅದ್ವೈತಕ್ಕೆ ತಿರುಗಿಸುತ್ತಿರುವಲ್ಲಿ ಒಬ್ಬ

1. ತಂತ್ರವಾರ್ತಿಕ (ಆನಂದಾಶ್ರಮಮುದ್ರಿತ)ದ ಪುಟಗಳು.

ಬ್ರಾಹ್ಮಣನು ಬಂದು 'ಕುಮಾರಿಲಭಟ್ಟನೆಂಬ ಶಾಸ್ತ್ರಜ್ಞನು ಬೌದ್ಧರಲ್ಲಿ ಶಿಕ್ಷಣವನ್ನು ಹೊಂದಿ ಅವರ ಮತವನ್ನು ಖಂಡಿಸುತ್ತಿರುತ್ತಾನೆ' ಎಂದು ಹೇಳಲು ಆ ಮಾತನ್ನು ಕೇಳಿದ ಆಚಾರ್ಯರು ಆ ಬ್ರಾಹ್ಮಣನೊಡನೆ **ರುದ್ಧನಗರಕ್ಕೆ** ಬಂದರು (ಚಿ. ಶಂ. ೧೫–ಳಳರಿಂದ ೫೮) ಎಂದಿದೆ.

ಆನಂತಾನಂದಗಿರೀಯದಲ್ಲಿ : ಶ್ರೀಶೈಲದಲ್ಲಿ ಆಚಾರ್ಯರು ಒಂದು ತಿಂಗಳು ಇದ್ದರು. ಒಮ್ಮೆ ರುದ್ಧನಗರದಿಂದ ಬ್ರಾಹ್ಮಣರು ಬಂದು 'ಭಟ್ಟಾಚಾರ್ಯನೆಂಬ ಒಬ್ಬ ಬ್ರಾಹ್ಮಣಶ್ರೇಷ್ಠನು ಉತ್ತರದೇಶದಿಂದ ಬಂದು ದುಷ್ಟಮತಾವಲಂಬಿಗಳಾದ ಅಗಣಿತಜೈನರನ್ನು ಅನೇಕ ವಿದ್ಯಾಪ್ರಸಂಗಗಳಿಂದ ಜಯಿಸಿ ರಾಜನ ಮೂಲಕ ದುಷ್ಟಮತಧ್ವಂಸವನ್ನು ಮಾಡುತ್ತಾ ನಿರ್ಭಯದಿಂದಿರುತ್ತಾನೆ' ಎಂದು ಹೇಳಿದರು. ಆ ಅದ್ಭುತಕರ್ಮದ ಸುದ್ದಿಯನ್ನು ಕೇಳಿದ ಆಚಾರ್ಯರು ಶಿಷ್ಯಸಮೇತರಾಗಿ ರುದ್ಧನಗರಕ್ಕೆ ಬಂದರು (ಆ. ಶಂ. ೫೫, ಪು. ೨೧೦ ; ಜೇ. ಪು. ೨೧೦) ಎಂದಿದೆ. ಹೀಗೆ ಆಚಾರ್ಯರಿಗೆ ಭಟ್ಟರ ತುಷಾಗ್ನಿಪ್ರಾಯಶ್ಚಿತ್ತ ವಿಚಾರವು ತಿಳಿದದ್ದು ವ್ಯಾಸಾಚಲಮಾಧವೀಯಗಳಂತೆ ಪ್ರಯಾಗದಲ್ಲಿ, ಚಿದ್ವಿಲಾಸೀಯದಂತೆ ಕಾಶಿಯಲ್ಲಿ, ಆನಂದಗಿರಿಯಂತೆ ಶ್ರೀಶೈಲದಲ್ಲಿ !

ಭಟ್ಟರು ಮಾಡಿದ ಯಾವ ಪಾಪಕ್ಕೆ ಪ್ರಾಯಶ್ಚಿತ್ತ ?

೮೮. ಭಟ್ಟಪಾದರು ತಾವು ಮಾಡಿದ ಪಾಪಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡುಕೊಳ್ಳುತ್ತಿರುವದಾಗಿ ಹೇಳಿದ್ದರ ವಿವರವು ಒಂದೊಂದು ಶಂಕರವಿಜಯದಲ್ಲಿ ಒಂದೊಂದು ಬಗೆಯಾಗಿದೆ. **ಮಾಧವೀಯ**ದಲ್ಲಿರುವ ಆ ವಿವರವನ್ನು ಹಿಂದೆ (೧೧೧) ತಿಳಿಸಿದ್ದೇವಷ್ಟೆ ? ಅಲ್ಲಿ ಹೇಳಿರುವದು ಭಟ್ಟರನ್ನು ಬೌದ್ಧರು ಉಪ್ಪರಿಗೆಯಿಂದ ಕೆಳಕ್ಕೆ ತಳ್ಳಿದರೆಂದು (ಪು. ೧೦೩). ಆದರೆ ಒಂದನೆಯ ಸರ್ಗದಲ್ಲಿ ಇದೇ ವಿಷಯವನ್ನು ಬೇರೊಂದು ಬಗೆಯಲ್ಲಿ ವರ್ಣಿಸಿದೆ. ಭಟ್ಟನು ಸುಧನ್ವನೆಂಬ ರಾಜನ ಬಳಿಗೆ ಬಂದು ವಾದದಲ್ಲಿ ಬೌದ್ಧರನ್ನು ಸೋಲೀಸಿದನು. ರಾಜನು ವೈದಿಕಪಕ್ಷಪಾತಿಯಾಗಿದ್ದರೂ ಬೌದ್ಧರನ್ನೇ ಕೃತ್ರಿಮಶ್ರದ್ಧೆಯಿಂದ ಹಿಂಬಾಲಿಸುತ್ತಿದ್ದನು (ಮಾ. ಶಂ ೧–೫೯). ಅವನು 'ಸೋಲುಗೆಲವುಗಳು ವಿದ್ಯೆಗೆ ಅಧೀನವಾಗಿರುವವು. ಆದ್ದರಿಂದ ನಿಮ್ಮಲ್ಲಿ ಯಾರಿಗೆ ಬೆಟ್ಟದ ಕೋಡುಗಲ್ಲಿನಿಂದ ಬಿದ್ದರೂ ಅಪಾಯವಾಗದೆ ಇರುವದೋ ಅವರ ಮತವೇ ನಿತ್ಯವೆಂದು ನಿಶ್ಚಯಿಸೋಣ' (೧–೭೩) ಎಂದನು, ಅದನ್ನು ಕೇಳಿ ಬೌದ್ಧರು ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳುತ್ತಿದ್ದರು ; ಆದರೆ ಬ್ರಾಹ್ಮಣನು 'ವೇದಗಳು ಪ್ರಮಾಣವಾದರೆ ನನಗೆ ಯಾವ ಕ್ಷತಿಯೂ ಆಗದಿರಲಿ !' ಎಂದು ಕೂಗುತ್ತಾ ಕೆಳಕ್ಕೆ ಬಿದ್ದನು ; ಯಾವ ಗಾಯವೂ ಆಗದೆ ಅರಳಿಯ ಉಂಡೆಯಂತೆ ಕೆಳಕ್ಕೆ

ಬಿದ್ದನು. ವೇದವು ತನ್ನನ್ನು ಶರಣುಹೊಕ್ಕವರ ಕಷ್ಟವನ್ನು ತೊಲಗಿಸದೇನು ? (೧-೭೪ರಿಂದ ೭೭) ಎಂದು ಇದೇ ಕವಿ ವರ್ಣಿಸಿರುವದನ್ನು ಕಂಡು ಯಾರಿಗೆತಾನೆ ಆಶ್ಚರ್ಯವಾಗುವದಿಲ್ಲ ? ಏಳನೆಯ ಸರ್ಗದಲ್ಲಿ ಬೌದ್ಧರು ಭಟ್ಟರನ್ನು ಉಪ್ಪರಿಗೆಯಿಂದ ದೂಡಿದರು ? ಒಂದನೆಯ ಸರ್ಗದಲ್ಲಿ ಆವರೇ ಬಿದ್ದರು : ಏಳನೆಯ ಸರ್ಗದಲ್ಲಿ ಒಂದು ಕಣ್ಣು ಹೋಯಿತು, ಒಂದನೆಯ ಸರ್ಗದಲ್ಲಿ ಆಪಾಯವೇನೂ ಆಗಲೇ ಇಲ್ಲ ! ಈ ವ್ಯಾಪತ್ತಿಯಿಂದಲೂ ಕವಿ ತೃಪ್ತನಾಗಿಲ್ಲ. ಬೆಟ್ಟದಿಂದ ಬಿದ್ದು ವೇದಪ್ರಾಮಾಣ್ಯವನ್ನು ಸ್ಥಾಪಿಸುವದಕ್ಕೆ ಹೊರಟ ತಪ್ಪುಹಾದಿಯನ್ನು ತುಳಿದ ಆಪಾದನೆಯನ್ನೂ ಭಟ್ಟರ ತಲೆಯಮೇಲೆಯೇ ಹೊರಿಸಿರುತ್ತಾನೆ ! ಭಟ್ಟರು ಇಂಥ ಆದ್ಭುತದರ್ಶನಗಳಿಗೆ ಬೆಲೆಕೊಡುತ್ತಾರೆಂದು ನಂಬುವದಕ್ಕೆ ಯಾವ ಆಧಾರವೂ ಇಲ್ಲ ; ಏಕೆಂದರೆ ಬುದ್ಧನು ಮಾಡಿದನೆಂಬ ಆದ್ಭುತವನ್ನು ಶ್ಲೋಕವಾರ್ತಿಕದಲ್ಲಿ (ಚೋದನಾಸೂತ್ರ ೨, ಪುಟ. ೬೫)[1] ಹಾಸ್ಯಮಾಡಿರುತ್ತಾರೆ. ಬೌದ್ಧರು 'ಇದೇನೂ ಮತನಿರ್ಣಯಕ್ಕೆ ಸರಿಯಾದ ಪ್ರಮಾಣವಲ್ಲ, ಏಕೆಂದರೆ ಮಣಿಮಂತೌಷಧಿಗಳಿಂದ ಹೀಗೆ ದೇಹರಕ್ಷಣೆಯನ್ನು ಮಾಡಿಕೊಳ್ಳಬಹುದಾಗಿದೆ' (೧-೮೦) ಎಂದು ಹೇಳಿದಮೇಲೂ ರಾಜನು ಒಂದು ಗಡಿಗೆಯಲ್ಲಿ ಸರ್ಪವನ್ನಿಟ್ಟು 'ಇದರಲ್ಲೇನಿದೆ, ಹೇಳಿರಿ ; ನಿಜವನ್ನು ಹೇಳದಿದ್ದವರನ್ನು ಕಲ್ಲುಗಾಣದಲ್ಲಿ ಅರೆಯಿಸುವೆನು' (ಮಾ. ಶಂ. ೧-೮೨, ೮೩) ಎಂದು ಹೇಳಿದ್ದು ರಾಜನು ವಿದ್ಯಾಪಕ್ಷಪಾತಿಯಲ್ಲವೆಂದೇ ನಿಶ್ಚಯಮಾಡಿಕೊಟ್ಟಂತೆ ಆಗಿದೆ.

ಈ ಕಥೆಯನ್ನು ಮುಗಿಸಿದ್ದರಲ್ಲಿ ಇನ್ನೊಂದು ಪರಮಾಶ್ಚರ್ಯದ ಘಟನೆಯನ್ನು ಕವಿ ಹೇಳಿರುತ್ತಾನೆ, ಬೌದ್ಧರು ತಪಸ್ಸುಮಾಡಿ 'ಇದರಲ್ಲಿ ಹಾವಿದೆ'

---

1. ಸಾಂನಿಧ್ಯಮಾತ್ರತಸ್ತಸ್ಯ ಪುಂಸಶ್ಚಿನ್ತಾಮಣೇರಿವ ।
ನಿಃಸರನ್ತಿ ಯಥಾಕಾಮಂ ಕುಡ್ಯಾದಿಭ್ಯೋಽಪಿ ದೇಶನಾಃ ॥
ಏವಮಾದ್ಯುಚ್ಯಮಾನಂ ತು ಶ್ರದ್ಧಧಾನಸ್ಯ ಶೋಭತೇ ।
ಕುಡ್ಯಾದಿನಿಃಸೃತತ್ವಾಚ್ಚ ನಾಶ್ವಾಸೋ ದೇಶನಾಸು ನಃ ॥
ಕಿನ್ತು ಬುದ್ಧಪ್ರಣೀತಾಃ ಸ್ಯುಃ ಕಿಮು ಕೈಶ್ಚಿದ್ದುರಾತ್ಮಭಿಃ ।
ಅದೃಶ್ಯೈರ್ವಿಪ್ರಲಮ್ಭಾರ್ಥಂ ಪಿಶಾಚಾದಿಭಿರೀರಿತಾಃ ॥

(ಶ್ಲೋ. ವಾ. ಚೋದನಾಸೂತ್ರ ೧೫--೧೪೮)

ಬುದ್ಧನ ಸಾಂನಿಧ್ಯಮಾತ್ರದಿಂದ ಚಿಂತಾಮಣಿಯಿಂದುಂಟಾಗುವಹಾಗೆ ಗೋಡೆಯೇ ಮುಂತಾದವುಗಳಿಂದಲೂ ಯಥೇಷ್ಟವಾಗಿ ಉಪದೇಶಗಳು ಹೊರಬರುತ್ತವೆ-ಎಂಬ ಬೌದ್ಧರ ಹೇಳಿಕೆಯು ಶ್ರದ್ಧೆಯುಳ್ಳನನಿಗೆ ಒಪ್ಪಾದೀತು. ಆದರೆ ಗೋಡೆಗಳಿಂದ ಬಂದ ಉಪದೇಶಗಳಲ್ಲಿ ನಮಗೆ ವಿಶ್ವಾಸವಿಲ್ಲ. ಅವು ಬುದ್ಧನೇ ಮಾಡಿದವುಗಳೊ, ಅಥವಾ ಅದೃಶ್ಯವಾದ ಕೆಲವು ದುಷ್ಟ ಪಿಶಾಚಿಗಳು ಮೋಸಮಾಡುವದಕ್ಕಾಗಿ ಹೇಳಿದ ಮಾತುಗಳೊ -ಎಂದು (ನಮಗೆ ಸಂದೇಹವಿದೆ). ಆದ್ದರಿಂದ ಆ ಉಪದೇಶಗಳಲ್ಲಿ ನಮಗೆ ನಂಬಿಕೆಯಿಲ್ಲ ಎಂದು ಶ್ಲೋಕಗಳ ಅರ್ಥ.

ಎಂದರು ; ಭಟ್ಟರು 'ಅವರಲ್ಲಿ ಸರ್ವಜ್ಞಾಮಿಯಾನ ವಿಷ್ಣುವಿದಾನೆ' (೧–೮೭) ಎಂದರು ! ನಾನು ಗುರುಗಳಾದ ಬೌದ್ಧರ ಕುಲವನ್ನೇ ನಾಶಮಾಡಿದ್ದು, ಈಶ್ವರನನ್ನು ನಿರಾಕರಿಸಿದ್ದು– ಈ ಎರಡು ತಪ್ಪುಗಳಿಗಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಿದೇನೆ' (೭–೧೦೦, ೧೦೧, ೧೦೨)–ಎಂದ ಭಟ್ಟರ ಮಾತುಗಳು ಎರಡೂ ಇದರಿಂದ ಸುಳ್ಳಾದವು: ಏಕೆಂದರೆ ಒಂದನೆಯ ಸರ್ಗದಂತೆ ಅವರು ಬೌದ್ಧರನ್ನು ವಾದದಲ್ಲಿ ಜಯಿಸಿದರೇ ಹೊರತು ಗುರುದ್ರೋಹವನ್ನು ಮಾಡಲಿಲ್ಲ, ಈಶ್ವರನನ್ನು ಒಪ್ಪಿ ವಿಷ್ಣುವು ಗಡಿಗೆಯಲ್ಲಿದಾನೆಂದರೇ ಹೊರತು ಈಶ್ವರ ನಿರಾಕರಣೆಯನ್ನು ಮಾಡಲಿಲ್ಲ ! ಭಟ್ಟರು ಈಶ್ವರನನ್ನು ನಿರಾಕರಿಸಿದರೆಂಬುದು ಮಾಧವನ ವಾಕ್ಯಕ್ಕೆ ವಿರುದ್ಧವೆಂಬುದೇ ಅಲ್ಲದೆ ವಸ್ತುಸ್ಥಿತಿಗೂ ವಿರುದ್ಧವಾಗಿದೆ. ಏಕೆಂದರೆ ಶ್ಲೋಕವಾರ್ತಿಕದಲ್ಲಿ ಅವರು ಹೀಗೆಂದು ಬರೆದಿದಾರೆ. "ಪ್ರಾಯೇಣೈವ ಹಿ ಮೀಮಾಂಸಾ ಲೋಕೇ ಲೋಕಾಯತೀಕೃತಾ | ತಾಮಾಸ್ತಿಕಪಥೇ ನೇತುಮಯಂ ಯತ್ನಃ ಕೃತೋ ಮಯಾ||" (ಶ್ಲೋ. ವಾ. ೧-೧೦) ಲೋಕದಲ್ಲಿ ಒಲುಮಟ್ಟಿಗೆ ಮೀಮಾಂಸಾಶಾಸ್ತ್ರವನ್ನು ಲೋಕಾಯತದರ್ಶನವಾಗಿಸಿಬಿಟ್ಟಿರುತ್ತಾರೆ ; ಅದನ್ನು ಆಸ್ತಿಕಮಾರ್ಗಕ್ಕೆ ತರುವದಕ್ಕೆ ಈ ಪ್ರಯತ್ನವನ್ನು ಮಾಡಿರುತ್ತೇನೆ–ಎಂದು ಶ್ಲೋಕದ ಅರ್ಥ. ಅದೇ ಗ್ರಂಥದಲ್ಲಿ ಮೊಟ್ಟಮೊದಲನೆಯ ಮಂಗಲಶ್ಲೋಕದಲ್ಲಿಯೇ 'ವಿಶುದ್ಧಜ್ಞಾನದೇಹಾಯ ತ್ರಿವೇದೀದಿವ್ಯಚಕ್ಷುಷೇ | ಶ್ರೇಯಃಪ್ರಾಪ್ತಿನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ||' (ಶ್ಲೋ. ವಾ. ೧) ಎಂದು ಅವರು ಚಂದ್ರಾರ್ಧಶೇಖರನಾದ ಈಶ್ವರನನ್ನು ಸ್ತುತಿಸಿರುತ್ತಾರೆ

ಭಟ್ಟರು ಬೌದ್ಧರನ್ನು ಕೊಲ್ಲಿಸಿದರೆ ?

೮೯. ಚಿದ್ವಿಲಾಸೀಯದಲ್ಲಿ ಬೌದ್ಧರಲ್ಲಿ ಗುರುಕುಲವಾಸಮಾಡಿದ ಕಥೆಯೇನೋ ಇದೆ. ಆದರೆ ಅಲ್ಲಿ ಉಪ್ಪರಿಗೆಯಿಂದ ತಳ್ಳಿದ ಮಾತಿಲ್ಲ. 'ನಿನ್ನ ಕಣ್ಣಿನಲ್ಲಿ ನೀರೇಕೆ ಬಂತು ?' ಎಂದು ಕೇಳಿದ್ದಕ್ಕೆ ನಿನ್ನ ಗುರುಗಳ ಯುಕ್ತಿಯನ್ನು ಕೇಳಿ ಆನಂದವಾವದ್ದಕ್ಕೆ (ಯುಕ್ತೀರಾಕರ್ಣ್ಯ ನಿರ್ಗಿರ್ತಾ ಭವದ್ದೇಶಿಕನಿರ್ಮಿತಾಃ | ಸಮುದ್ಯನ್ನಿರ್ಭರಾನನ್ದತುನ್ದಿಲಾವಶಚೇತಸಃ | ನಿಸಸ್ಮುರಶ್ರುವ್ಯಾಜೇನ ಬಹಿರಾನನ್ದಬಿನ್ದವಃ||' (ಚಿ. ಶಂ. ೧೬–೧೬, ೧೭) ಎಂದು ಭಟ್ಟರು ಸುಳ್ಳು ಹೇಳಿದರು. ಇವರನ್ನು ಬ್ರಾಹ್ಮಣರೆಂದು ತಿಳಿದ ಬೌದ್ಧರು ತಮ್ಮ ಜೊತೆಗೇ ಸೇರಿಸಿಕೊಳ್ಳದೆ ದೂರಮಾಡಲು ತಾವೇ ಹೊರಕ್ಕೆ ಬಂದರು (ವಿಜ್ಞಾಯ ತದ್ವಿನಿಷ್ಕ್ರಮ್ಯ, ಚಿ. ಶಂ ೧೬-೧೯) ; ಬೌದ್ಧರನ್ನು ವಾದದಲ್ಲಿ ಜಯಿಸಿ ರಾಜನಿಂದ ಅವರ ತಲೆಗಳನ್ನು ಕಡಿಸಿದರು– (ವಿಜ್ಞಾಪ್ಯ ತನ್ಮಹೀಶ್ವರವರ್ | ಶಿರಾಂಸಿ ಚ್ಛೇದಯಾಮಾಸ ಸೌಗತಾನಾಂ ಸಮನ್ತತಃ|| ೧೬–೨೦)–ಎಂದಿಷ್ಟೇ ಇದೆ.

ಇಲ್ಲಿ ರಾಜನಿಂದ ಬೌದ್ಧರ ತಲೆಗಳನ್ನು ಭಟ್ಟರು ಕಡಿಸಿದರೆಂದು ಬರೆದಿರುವ ದನ್ನು ಲಕ್ಷಿಸಬೇಕು. ಮಾಧವೀಯದಲ್ಲಿಯೂ ಸರ್ವಪರೀಕ್ಷೆಯಲ್ಲಿ ಕುಮಾರಿಲರಿಗೇ ಆಶರೀರವಾಣಿಯ ಬಲದಿಂದ ಜಯವಾದ ಮೇಲೆ, 'ಆಸೇತೋರಾತುಷಾರಾದ್ರೇಃ ಬೌದ್ಧಾನಾವೃದ್ಧಬಾಲಕಮ್ | ನ ಹನ್ತಿ ಯಃ ಸ ಹನ್ತವ್ಯೋ ಭೃತ್ಯೈ ನಿತ್ಯನ್ವಶಾನ್ನೃಪಃ ||' (ಮಾಂ. ಶಂ. ೧–೯೩). 'ಸೇತುವಿನಿಂದ ಹಿಮಾಚಲದವರೆಗಿರುವ ಬೌದ್ಧರನ್ನು, ಮುದುಕರು ಮಕ್ಕಳನ್ನು ಕೂಡ, ಯಾವನು ಕೊಲ್ಲುವದಿಲ್ಲವೋ ಅವನನ್ನು ಕೊಲ್ಲತಕ್ಕದ್ದು– ಎಂದು ಭೃತ್ಯರಿಗೆ ರಾಜನು ಅಪ್ಪಣೆಮಾಡಿದನು'–ಎಂದಿದೆ. ಇದರಂತೆ ಅನಂತಾನಂದಗಿರೀಯದಲ್ಲಿಯೂ 'ರಾಜಮುಖಾದನೇಕವಿದ್ಯಾಪ್ರಸಙ್ಗಪ್ರಭೇದೈರ್ನಿರ್ಜಿತ್ಯ ತೇಷಾಂ ಶೀರ್ಷಾಣಿ ಪರ್ವ (?) ಭಿಶ್ಚಿತ್ವಾ ಝಾವಾನಲೇಷು (ದಾವಾನಲೇಷು ?) ನಿಕ್ಷಿಪ್ಯ ಶಙ್ಖ(?)ಭ್ರಮಣೈ ಶ್ಚೂರ್ಣೀಕೃತ್ಯ[1] ಚೈವಂ ದುಷ್ಟಮತಧ್ವಂಸಮಾಚರನ್ ನಿರ್ಭಯೋ ವರ್ತತೇ' (ಪ್ರ. ೫೫–ಪು. ೨೧೦, ೨೧೧) ಎಂದು ತಲೆಗಳನ್ನು ಕತ್ತರಿಸಿ ಪುಡಿಮಾಡಿ ಕಾಡುಗಿಚ್ಚಿಗೆ ಹಾಕಿಸಿದನು –ಎಂದಿದೆ. ಇದು ನಿಜವಾದರೆ ರಾಜರ ಸಹಾಯದಿಂದ ಭಟ್ಟರು ಬೌದ್ಧರನ್ನು ಬಹಳವಾಗಿ ಹಿಂಸೆಮಾಡಿದರೆಂದೂ ಲಕ್ಷೋಪಲಕ್ಷಬೌದ್ಧರು ಬ್ರಾಹ್ಮಣಮತದ ಅಭಿಮಾನಿಗಳಿಂದ ಹತರಾದರೆಂದೂ ನಂಬಬೇಕಾಗುವದು. ಹೀಗೆ ಹಿಂದುಗಳ ಹಿಂಸೆಯಿಂದ ಬೌದ್ಧಮತವು ಭರತಖಂಡದಲ್ಲಿ ಬಿಲವಾಯಿತೆಂಬುದಕ್ಕೆ ಬೌದ್ಧರಲ್ಲಿಕೂಡ ಯಾವ ಪ್ರಮಾಣವೂ ಇಲ್ಲ. ಹಿಂದುಗಳು ಕಾಲಕ್ರಮದಲ್ಲಿ ತಮ್ಮ ಮತದಲ್ಲಿ ಸೇರಿಕೊಂಡಿದ್ದ ದೋಷಗಳನ್ನು ನಿವಾರಿಸಿಕೊಳ್ಳುತ್ತಲೂ ಬುದ್ಧನ ಉಪದೇಶಗಳಲ್ಲಿ ಉತ್ತಮವಾದವುಗಳನ್ನು ಸಾರಗ್ರಹಣದೃಷ್ಟಿಯಿಂದ ತಾವೂ ಆಚರಣೆಗೆ ತರುತ್ತಲೂ ಬಂದದ್ದರಿಂದಲೂ ಕೇಳುಜಾತಿಯವರನೇಕರು ಬೌದ್ಧಮತಕ್ಕೆ ಸೇರಿ ಅವರಲ್ಲಿ ದುರಾಚಾರಗಳು ಬೆಳೆದುಕೊಂಡದ್ದರಿಂದಲೂ ಈ ದೇಶದಲ್ಲಿ ಬೌದ್ಧಮತವು ಕಣ್ಮರೆಯಾಯಿತು. ಮುಂದೆ ಮುಸಲ್ಮಾನರ ಹಾವಳಿಯಿಂದಲೂ ಸ್ವಲ್ಪಮಟ್ಟಿಗೆ ಈ ದೇಶದಲ್ಲಿ ಬೌದ್ಧಮತವು ಮಸುಳಿಸಿತು– ಎಂದು ಇತಿಹಾಸದಿಂದ ತಿಳಿಯಬರುತ್ತದೆ. ಸುಧನ್ವರಾಜನು ಹಿಮಾಚಲದವರೆಗಿನ ದೇಶಗಳಿಗೆಲ್ಲ ಸಾರ್ವಭೌಮನಾಗಿದ್ದನೆಂಬುದಕ್ಕೆ ಐತಿಹಾಸಿಕ ಪ್ರಮಾಣವಿಲ್ಲ. ಆದ್ದರಿಂದ ಮಾಧವಾದಿಗಳು ಬರೆದಿರುವದು ಕಾವ್ಯದ ಅತಿಶಯೋಕ್ತಿಮಾತ್ರವೆಂದು ಭಾವಿಸಬೇಕಾಗಿದೆ.

1. ತೆಲುಗುಲಿಪಿಯು ಆಚ್ಚಿನ ಪುಸ್ತಕದಲ್ಲಿ ಅಕ್ಷರಗಳು ಸ್ಪುಟವಾಗಿಲ್ಲ. ನಮಗೆ ಕಂಡ ರೀತಿಯಲ್ಲಿ ಬರೆದುಕೊಂಡಿರುತ್ತೇವೆ, 'ಪರಶುಭಿಶ್ಚಿತ್ವಾ ಬಹುಷು ಉಲೂಖಲೇಷು ನಿಕ್ಷಿಪ್ಯ ಕಟಭ್ರಮಣೈಃ' ಎಂದು ದೇ. ಪ್ರ. ೧೮ರಲ್ಲಿರುವ ಪಾಠ.

ಆಚಾರ್ಯರು ಭಟ್ಟರನ್ನು ಯಾವ ಸ್ಥಿತಿಯಲ್ಲಿ ಕಂಡರು ?

೯೦. ಆಚಾರ್ಯರು ಬಂದಾಗ ಭಟ್ಟರು ತುಷರಾಶಿ (ಹೊಟ್ಟಿನ ರಾಶಿ) ಯಲ್ಲಿದ್ದರೆಂದೂ **ಪ್ರಭಾಕರನೇ** ಮುಂತಾದ ಶಿಷ್ಯರು[1] ಕಣ್ಣೀರಿಡುತ್ತಾ ನಿಂತಿದ್ದರೆಂದೂ (ಮೂ. ಶಂ. ೭–೭೭) **ಮಾಧವೀಯ**ದಲ್ಲಿದೆ. ಅವರ ಶರೀರವು ಆಗಲೆ ಅರ್ಧ ಸುಟ್ಟುಹೋಗಿತ್ತು (ತಥಾಪ್ಯರ್ಧವಿಗ್ಧಸ್ಯ ಜೀವನಂ ಸ್ಯಾತ್ಕ್ಷಥಂ ಪುನಃ ಚಿ. ಶಂ. ೧೬–೩೦) ಎಂದು **ಚಿದ್ವಿಲಾಸೀಯ**ದಲ್ಲಿದೆ. ಅವರು ನೂರೆಂಟು ಪಾರಿಕಾಪ್ರಮಾಣದ ಬೆರಣಿಯ ಒಟ್ಟಿನಮೇಲೆ ಹೋಮಾಗ್ನಿಯನ್ನು ಹಾಕಿ ಕ್ರಮುಕ್ರಮುವಾಗಿ ಸುಟ್ಟುಹೋಗಬೇಕೆಂದು ನಿಶ್ಚಯಿಸಿದ್ದರು (ಅಷ್ಟೋತ್ತರಶತಪಾರಿಕಾ (ಪಾರಿಕಾ)ಪ್ರಮಾಣಜಾಗ(ಕ ?)ರೀಷೋಪರಿ ಹೋಮಾಗ್ನಿನಾ ಪುನಃ ಕ್ರಮಾದ್ದಗ್ಧೇ ನಿವಸಿತವ್ಯಮ್' (ಪ್ರ. ಜಿಜ್ಞಾ–ಪು. ೨೧೧)[2] ಎಂದು **ಆನಂತಾನಂದಗಿರೀಯ**ದಲ್ಲಿದೆ.

ಈ ವಾಕ್ಯಗಳನ್ನೆಲ್ಲ ಹೊಂದಿಸಿ, ಕುಮಾರಿಲಭಟ್ಟರು ಯಾವ ಪ್ರಾಯಶ್ಚಿತ್ತವನ್ನು ಎಲ್ಲಿ ಹೇಗೆ ಮಾಡಿಕೊಂಡರು ? ಅವರು ಯಾವ ಸ್ಥಿತಿಯಲ್ಲಿದ್ದಾಗ ಆಚಾರ್ಯರು ಅವರನ್ನು ಕಂಡರು ? –ಎಂಬಿದನ್ನು ನಿರ್ಣಯಿಸುವದು ನಮ್ಮಂಥವರಿಗೆ ಸಾಧ್ಯವಲ್ಲ.

ಭಟ್ಟರಿಗೆ ಪ್ರಾಯಶ್ಚಿತ್ತವಾದದ್ದು ಎಲ್ಲಿ ?

೯೧. ಚಿದ್ವಿಲಾಸೀಯದಲ್ಲಿಯೂ ಆನಂದಗಿರೀಯದಲ್ಲಿಯೂ ಹೇಳಿರುವ **'ರುದ್ಧಪುರಿ'** ಯಾವದು ? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವದೂ ಕಷ್ಟ. **ಭದ್ರಸೇನ**ನೆಂಬ ರಾಜನು ಆಳುತ್ತಿದ್ದ **'ರುದ್ಧಪುರ'**ವೇ ಆದು ಎಂದು ಎನ್. ಕೃಷ್ಣಸ್ವಾಮಿ ಅಯ್ಯರವರ (CNKS. p. 38)ಊಹೆ. ಪೆನುಗೊಂಡೆಯ ಹತ್ತಿರವಿದ್ದ **ರೊದ್ದ** ಎಂಬ ಸ್ಥಳವೇ ಆದಾಗಿರಬಹುದು (ಸೋ. ಶಂ. ಪು. ೯೬) ಎಂದು ಸೋಮನಾಥಯ್ಯನವರ ಕಲ್ಪನೆ. ಭಟ್ಟರು ಪ್ರಾಯಶ್ಚಿತ್ತವನ್ನು ಮಾಡಿಕೊಂಡದ್ದು ಪ್ರಯಾಗದಲ್ಲಿಯೆ, ರುದ್ಧಪುರಿಯಲ್ಲಿಯೆ ? –ಎಂಬಿದನ್ನು ನಿಶ್ಚಯಿಸುವದಕ್ಕೆ ನಮಗೆ ಯಾವ ಆಧಾರವೂ ಇಲ್ಲ. ಭಟ್ಟರು ಉತ್ತರದೇಶದಿಂದ ಬಂದವರು ಎಂಬ **ಆನಂದಗಿರೀಯ** ವಚನವು ನಿಜವಾದರೆ ಅವರು ದಕ್ಷಿಣಕ್ಕೆ ಬಂದು ನೆಲಸಿ ಅಲ್ಲಿಯೇ ಬೌದ್ಧಾದಿಗಳನ್ನು ಖಂಡಿಸಿದರೆಂದು ಕಲ್ಪಿಸಬಹುದಾಗುವದು ;

---

1. ಪ್ರಭಾಕರನು ಭಟ್ಟರ ಶಿಷ್ಯನೆಂದು ನಿಶ್ಚಿತವಾಗಿಲ್ಲ, ಪ್ರಭಾಕರನು ಭಟ್ಟರಿಗಿಂತ ಹಿಂದಿನ ಕಾಲದವನೆಂದು ಕೆಲವರ ವಾದ (ಬಲ. ಶಂ. ಪು. ೬೫).

2. 'ಕಾ (ಪಾ ?)ರಿಕಾ ಪ್ರಮಾಣೋಪತ್ಯಕಾಕರೀಷೋಪರಿ....ದಗ್ಧೇನ ವಸಿತವ್ಯಮ್ ।' ಎಂದೇ ದೇ. ಪು. ೧೬೮ರ ಪಾಠ.

ತಂತ್ರವಾರ್ತಿಕದಲ್ಲಿ ಕಾಣಬರುವ ಭಟ್ಟರ ದ್ರಾವಿಡಭಾಷೆಯ ಪರಿಚಯವೂ ಆ ಕಲ್ಪನೆಗೆ ಬೆಂಬಲವನ್ನು ಕೊಡುತ್ತದೆ. ಹೇಗೂ ಇದೆಲ್ಲ ಕಲ್ಪನಾಮಾತ್ರವೇ ಎಂಬುದನ್ನು ಮರೆಯುವಂತಿಲ್ಲ. ಪ್ರಯಾಗದಲ್ಲಿ ಆತ್ಮಹತ್ಯೆಮಾಡಿಕೊಂಡರೆ ದೋಷವಿಲ್ಲವೆಂದು ಹೇಳಿಕೆಯಿರುವುದರಿಂದ ಭಟ್ಟರು ಪ್ರಯಾಗದಲ್ಲಿಯೇ ತುಷಾಗ್ನಿ ಪ್ರವೇಶವನ್ನು ಮಾಡಿರಬಹುದು ಎಂಬ ಸೋಮನಾಥಯ್ಯನವರ ಕಲ್ಪನೆ (ಸೋ. ಶಂ. ೯೬) ಸರಿಯಲ್ಲ. ಏಕೆಂದರೆ ಪ್ರಾಯಶ್ಚಿತ್ತವೆಂಬುದು ಶಾಸ್ತ್ರವಿಹಿತವಾದ್ದರಿಂದ ಅವರಲ್ಲಿ ಆತ್ಮಹತ್ಯೆಯ ಪ್ರಸಕ್ತಿಯೇ ಬರುವದಿಲ್ಲ.

ಆಚಾರ್ಯರಿಗೂ ಭಟ್ಟರಿಗೂ ನಿಜವಾಗಿ ಸಮಾಗಮವಾಯಿತೆ?

೯೨. ಶಂಕರಾಚಾರ್ಯರು ಭಟ್ಟರನ್ನು ನಿಜವಾಗಿ ಸಂಧಿಸಿದರೆ?–ಎಂಬುದೊಂದು ಸಂಶಯಗ್ರಸ್ತವಾದ ಪ್ರಶ್ನೆ. ಆಚಾರ್ಯರ ಕಾಲವು ಕ್ರಿ. ಶ. 7-8 ಎಂಬವರ ಪಕ್ಷವನ್ನು ಅನುಸರಿಸುವ ಸಿ. ಎನ್. ಕೃಷ್ಣಸ್ವಾಮಿ ಅಯ್ಯರು ಇದು ಅಸಂಭವ (CNKS. p. 39) ಎನ್ನುತ್ತಾರೆ; ಬಲದೇವ ಉಪಾಧ್ಯಾಯರು ಭಟ್ಟರೂ ಆಚಾರ್ಯರೂ ಸಮಕಾಲಿಕರಾಗಿರಬಹುದೆಂಬುದನ್ನು ಒಪ್ಪುತ್ತಾರಾದ್ದರಿಂದ ಇದು ಅಸಂಭಾವಿತವಲ್ಲ (ಬಲ. ಶಂ. ೩೮) ಎನ್ನುತ್ತಾರೆ. ಜಿನವಿಜಯವೆಂಬ ಗ್ರಂಥದಿಂದ ಆರಿಸಿದ ಕೆಲವು ಶ್ಲೋಕಗಳನ್ನು ತಿನೆಯ ಪರಿಶಿಷ್ಟದಲ್ಲಿ ಕೊಟ್ಟಿದೆ. ಅದರಲ್ಲಿ 'ಪಶ್ಚಾತ್ ಪಞ್ಚಾದಶೇ ವರ್ಷೇ ಶಙ್ಕರಸ್ಯ ಗತೇ ಸತಿ। ಭಟ್ಟಾಚಾರ್ಯಕುಮಾರಸ್ಯ ದರ್ಶನಂ ಕೃತವಾನ್ ಶಿವಃ ॥' ಎಂಬ ಶ್ಲೋಕವಿದೆ. ಆಚಾರ್ಯರು ತಮ್ಮ ೧೫ನೆಯ ವಯಸ್ಸಿನಲ್ಲಿ ಭಟ್ಟರನ್ನು ಕಂಡರು ಎಂದು ಅದರ ಅಭಿಪ್ರಾಯ. ಇಲ್ಲಿ ಒಂದು ವಿಷಯವನ್ನು ಮನದಂದುಕೊಳ್ಳುವದು ಅವಶ್ಯ. ಆಚಾರ್ಯರೂ ಅವರ ಶಿಷ್ಯರಾದ ಸುರೇಶ್ವರರೂ ಕುಮಾರಿಲರ ಅಭಿಪ್ರಾಯಗಳನ್ನು ಅಲ್ಲಲ್ಲಿ ಅನುವಾದಮಾಡಿಕೊಂಡು ಅವುಗಳಲ್ಲಿ ಕೆಲವನ್ನು ಒಪ್ಪಿರುತ್ತಾರೆ, ಕೆಲವನ್ನು ಖಂಡಿಸಿರುತ್ತಾರೆ.[1] ಆದರೆ ಕುಮಾರಿಲರ ವಾರ್ತಿಕಗಳಲ್ಲಿ ಆಚಾರ್ಯರಿಗೆ ಸಂಮತವಾಗಿರುವ ವೇದಾಂತಪ್ರಕ್ರಿಯೆಯು ಪರಾಮೃಷ್ಟವಾಗಿರುವಂತೆ ಕಾಣುವದಿಲ್ಲ. ಅವರಿಗೆ ವೇದಾಂತವು ತಿಳಿದಿರಲಿಲ್ಲವೆಂದೇನೂ ಅಭಿಪ್ರಾಯವಲ್ಲ; ಏಕೆಂದರೆ ಶಬರಸ್ವಾಮಿಗಳು ಯುಕ್ತಿಯಿಂದ ಸಾಧಿಸಿರುವ

1. ಉದಾಹರಣೆಗೆ: ಸಮನ್ವಯಾಧಿಕರಣಭಾಷ್ಯದಲ್ಲಿರುವ ಆಭಿಪ್ರಾಯಗಳಲ್ಲಿ ಕುಮಾರಿಲರ ಅಭಿಪ್ರಾಯಗಳ ಅನುವಾದವೂ ಕೆಲವಂಶದಲ್ಲಿ ಖಂಡನೆಯೂ ಕಾಣುತ್ತದೆ ಸುರೇಶ್ವರಾಚಾರ್ಯರ ವಾರ್ತಿಕದಲ್ಲಿ 'ಆಪ್ತಾಮಾಣ್ಯಂ ತ್ರಿಧಾ ಭಿನ್ನಮ್' ಎಂಬ ವಾರ್ತಿಕಗಳ ಅನುವಾದವನ್ನು ಮಾಡಿಕೊಂಡು ಮಿಥ್ಯಾಜ್ಞಾನ, ಅಜ್ಞಾನ, ಸಂಶಯ– ಇವುಗಳಲ್ಲಿ ಅಜ್ಞಾನವು ಮಾತ್ರ ಆಸತ್ತು ಎಂಬ (ಚೋದನಾಸೂತ್ರ ಶ್ಲೋ. ೫೪, ೫೫) ಭಟ್ಟರ ಮತವನ್ನು (ಬೃ. ವಾ. ೧–೪ ೪೨೧, ೪೨೨)ರಲ್ಲಿ ಖಂಡಿಸಿರುತ್ತದೆ.

ಆತ್ಮಾಸ್ತಿತ್ವವು 'ವೇದಾಂತನಿಷೇವಣದಿಂದ ಗಟ್ಟಿಯಾಗುವದು' (ದೃಢತ್ವಮೇತ ದ್ವಿಷಯೆಪ್ರಜ್ಞೋಧಃ ಪ್ರಯಾತಿ ವೇದಾನ್ತನಿಷೇವಣೇನ| ಶ್ಲೋ.ವಾ. ಆತ್ಮವಾದ ೧೪೪) ಎಂದು ಅವರು ಬರೆದಿರುತ್ತಾರೆ. ಆದರೆ ಶಾಂಕರವೇದಾಂತಪ್ರಕ್ರಿಯೆಯು ಅವರಿಗೆ ತಿಳಿದಿತ್ತೆ? –ಎಂಬುದು ಸಂಶಯಾಸ್ಪದವಾಗಿದೆ. ಅಧ್ಯಾಸ, ಅವಸ್ಥಾತ್ರಯಪ್ರಕ್ರಿಯೆ– ಮುಂತಾದ ಶಂಕರರ ಅಸಾಧಾರಣಪ್ರಕ್ರಿಯೆಗಳನ್ನು ಅವರು ಎಲ್ಲಿಯೂ ಪರಾಮರ್ಶಿಸಿರುವದಿಲ್ಲ. **ಭಟ್ಟಪಾದರು 'ಅಕಲಂಕದೇವ'**ನೆಂಬ ಜೈನಪಂಡಿತನ ಮೇಲೆ ಕೋಟೆಗಳನ್ನು ಹೇಳುವದರಿಂದಲೂ ಭರ್ತೃಹರಿರಚಿತವಾದ **ವಾಕ್ಯಪದೀಯದ** ಐದು ಶ್ಲೋಕಗಳನ್ನು ಉದಾಹರಿಸಿರುವದರಿಂದಲೂ ಆ ಇಬ್ಬರಿಗಿಂತ ಈಚಿನ ಕಾಲದವರು. ಆದರೆ ಅಕಲಂಕದೇವನ ಶಿಷ್ಯನಾದ **ಪ್ರಭಾಚಂದ್ರನು** ತಂತ್ರವಾರ್ತಿಕವನ್ನು ಉದಾಹರಿಸಿದಾನೆ. ಆದಕಾರಣ ಭಟ್ಟಪಾದರು ಪ್ರಭಾಚಂದ್ರನಿಗಿಂತ ಸ್ವಲ್ಪ ಮುಂಚಿನವರು, ಎಂದರೆ ಅಕಲಂಕದೇವನಿಗೆ ಸಮಕಾಲಿಕರು. ಈ ಅಕಲಂಕದೇವನು ರಾಷ್ಟ್ರಕೂಟವಂಶದ ೧ನೆಯ **ಕೃಷ್ಣರಾಜ**ನೆಂಬ ರಾಜನ ಕಾಲದವನು– ಎಂದು ಈ ವಿಷಯವನ್ನು ಬಹುವಾಗಿ ವಿಚಾರಿಸಿರುವ **ಕೆ. ಬಿ. ಪಾಠಕರು** ಬರೆದಿದಾರೆ– ಎಂತ **ಸೋಮನಾಥಯ್ಯ**ನವರ ಗ್ರಂಥದಿಂದ[1] (ಸೋ. ಶಂ. ಪು. ೮೬–೮೭) ತಿಳಿಯಬರುತ್ತದೆ. **ಬಲದೇವ ಉಪಾಧ್ಯಾಯರು** ಅಕಲಂಕನ ಶಿಷ್ಯನಾದ ವಿದ್ಯಾನಂದನು ತನ್ನ 'ಅಷ್ಟಾಸಾಹಸ್ರಿ'ಯಲ್ಲಿ ಸುರೇಶ್ವರರ ಬೃಹದಾರಣ್ಯಕವಾರ್ತಿಕವನ್ನು ಪರಾಮರ್ಶಿಸಿರುತ್ತಾನೆ. ಆದ್ದರಿಂದ ಶಂಕರಾಚಾರ್ಯರ ಕಾಲವು ಅವಕ್ಕಿಂತ ಸ್ವಲ್ಪ ಮೊದಲೇ ಇರಬೇಕೆಂದೂ(ಬಲ.ಶಂ.ಪು.೩೭)ಊಹಿಸಿ ಎಂಟನೆಯ ಶತಾಬ್ದಿಯ ಮಧ್ಯಭಾಗಕ್ಕಿಂತಲೂ ಪ್ರಾಚೀನವೆಂದಾಗುತ್ತದೆ –ಎಂದು ಕಲ್ಪಿಸಿರುತ್ತಾರೆ. ಹೀಗಿದ್ದರೆ ಆಚಾರ್ಯರ 'ಪಾದಪದ್ಮಯುಗಲವನ್ನು ಸೇವೆಮಾಡಿ' (ನೈ.ಸಿ. ೪-೭೪) ಗ್ರಂಥವನ್ನು ಬರೆದಿದೇನೆಂದು ಹೇಳಿಕೊಳ್ಳುವ ನೈಷ್ಕರ್ಮ್ಯಸಿದ್ಧಿಕಾರರಾದ ಸುರೇಶ್ವರರು ಆಚಾರ್ಯರ ಸಮಕಾಲಿಕರೇ ಆಗುವದರಿಂದ ಬಲದೇವ ಉಪಾಧ್ಯಾಯರ ಊಹೆಯಿಂದಲೂ ಆಚಾರ್ಯರು ಕ್ರಿ. ಶ. 750ರ ಸುಮಾರಿನಲ್ಲಿದ್ದವರೆಂದೇ ಹೇಳಬೇಕಾಗುತ್ತದೆ; ಆಗ ಅಕಲಂಕನ ಸಮಕಾಲಿಕರಾದ ಭಟ್ಟಪಾದರನ್ನು ಅವರು ಕಂಡಿರಬೇಕೆಂದು ಕಲ್ಪಿಸುವದು ಯುಕ್ತವೆ? ಧರ್ಮಕೀರ್ತಿ ಮತ್ತು ಕುಮಾರಿಲರ ಸಂಬಂಧವನ್ನು ಆಗಲೆ (ಪು. ೧೧೪) ಹೇಳಿರುತ್ತೇವೆ. ಕುಮಾರಿಲರ ಮತದಂತೆಯೇ ಆಚಾರ್ಯರು ಧರ್ಮಕೀರ್ತಿಯ ಅಭಿಪ್ರಾಯಗಳನ್ನೂ ಅನುವಾದಮಾಡಿಕೊಂಡಿರುವದರಿಂದಲೂ ಅವರಿಬ್ಬರೂ ಆಚಾರ್ಯರ ವೇದಾಂತಪ್ರಕ್ರಿಯೆಯನ್ನು ಪರಾಮರ್ಶಿ

---

1. Proceedings of the Congress of orientalists 1892 A. C. Vol P. 186. ಎಂಬ ದಾಖಲೆಯ ಆಧಾರವನ್ನು ಸೋಮನಾಥಯ್ಯನವರು ಕೊಟ್ಟಿದಾರೆ.

ಸಿರುವದು ಕಾಣಬಾರದೆ ಇರುವದರಿಂದಲೂ ಆಚಾರ್ಯರು ಭಟ್ಟರ ಸಮಕಾಲಿಕರೆಂದು ಕಲ್ಪಿಸುವದಕ್ಕೆ ಸ್ವಲ್ಪ ಹಿಂಜರಿಯಬೇಕಾಗಿದೆ. ಆಚಾರ್ಯರ ಭಾಷ್ಯವನ್ನು ನೋಡಿದಮೇಲೆ ಅವರು ಬದುಕಿರಲಿಲ್ಲವಾದ್ದರಿಂದ ಅವರ ಭಾಷ್ಯದ ಪರಾಮರ್ಶವು ಭಟ್ಟರ ಗ್ರಂಥದಲ್ಲಿಲ್ಲ– ಎಂದು ಹೇಗೋ ಸಮಾಧಾನಮಾಡಿಕೊಳ್ಳಬೇಕಾಗಿರುತದೆ.

ಹೀಗೆ ಭಟ್ಟರ ಮತ್ತು ಆಚಾರ್ಯರ ಸಮಾಗಮವು ಒಂದುಕಡೆ ಆಯಿತೆಂಬುದು ಅನಿಶ್ಚಿತವೆಂದಾದರೂ ಕುಮಾರಿಲಭಟ್ಟರು ತುಷಾಗ್ನಿಪ್ರಾಯಶ್ಚಿತ್ತವನ್ನು ಮಾಡಿಕೊಂಡರೆಂಬುದೇನೂ ಸುಳ್ಳಾಗಬೇಕಾದದ್ದಿಲ್ಲ. ಸಾಂಪ್ರದಾಯಿಕರ ಕಥನವನ್ನು ನೋಡಿದರೆ ಭಟ್ಟರು ಭಾವನಾಪರವಶಸ್ವಭಾವದವರೆಂದೇ ನಂಬಬೇಕಾಗುತ್ತದೆ. 'ನಾನು ಪಾಪವನ್ನು ಮಾಡಿದ್ದೇನೆ; ಇಂಥ ತೀವ್ರ ಪ್ರಾಯಶ್ಚಿತ್ತದ ಹೊರತು ಅದಕ್ಕೆ ಪರಿಹಾರವಿಲ್ಲ'– ಎಂದು ಅವರಿಗೆ ಮನದಟ್ಟಾಗಿದ್ದರೆ ಅವರೇನೂ ಪ್ರಾಯಶ್ಚಿತ್ತಕ್ಕೆ ಹಿಂಜರಿಯುವ ವ್ಯಕ್ತಿಯಲ್ಲ ಎಂದು ಕೃಷ್ಣಸ್ವಾಮಿ ಅಯ್ಯರ್ (CNKS. pp. 39-40) ಹೇಳಿರುವದು ನನಗೂ ಒಪ್ಪಾಗಿದೆ. ಇದರ ನಿರ್ಣಯವನ್ನು ಮಾತ್ರ ಪರಮೇಶ್ವರನೇ ಬಲ್ಲ.

೮. ಮಂಡನಪ್ರಕರಣವಿಮರ್ಶೆ

ಭಟ್ಟರು ಆಚಾರ್ಯರಿಗೆ ಏನು ಹೇಳಿದರು ?

೧೩. ಕುಮಾರಿಲಭಟ್ಟರಿಗೂ ಆಚಾರ್ಯರಿಗೂ ಆದ ಪರಸ್ಪರಸಂದರ್ಶನವು ಹೀಗೆ ವಿವಾದಗ್ರಸ್ತವಾಗಿದ್ದರೆ ಭಟ್ಟರ ಶಿಷ್ಯನೆಂಬ ಮಂಡನಮಿಶ್ರನ ವಿಚಾರವು ಇದಕ್ಕಿಂತಲೂ ತೊಡಕಿನದಾಗಿದೆ ಎನ್ನಬಹುದು.

ಸೊಟ್ಟಸೊಡಲು **ಮಾಳವೀಯ**ದಲ್ಲಿರುವ ವೃತ್ತಾಂತವನ್ನು ಸಂಗ್ರಹಿಸೋಣ. 'ಸೊಪಜೇ ನನಗೆ ತಮ್ಮ ದರ್ಶನವಾಗಿದ್ದರೆ ನಾನು ಈ ಪ್ರಾಯಶ್ಚಿತ್ತವನ್ನು ಮಾಡುತ್ತಿರಲಿಲ್ಲ ; ಶಾಬರಭಾಷ್ಯಕ್ಕೆ ವಾರ್ತಿಕವನ್ನು ಬರೆದಂತೆ ತಮ್ಮ ಭಾಷ್ಯಕ್ಕೂ ಏನಾದರೊಂದಿಷ್ಟು ಬರೆದು ಕೀರ್ತಿಯನ್ನು ಸಂಪಾದಿಸಿಕೊಳ್ಳುವ ಭಾಗ್ಯವಿಲ್ಲವಾಯಿತು' (ಮಾ. ಶಂ. ೭–೧೦೪, ೧೦೫) ಎಂದು ಭಟ್ಟಪಾದರು ಪಶ್ಚಾತ್ತಾಪವನ್ನು ಸೂಚಿಸಲು ಶಂಕರರು ಕಮುಂಡುಲುಜಲದ ಪ್ರೋಕ್ಷಣೆಯಿಂದ ನಿಮ್ಮನ್ನು ಉಜ್ಜೀವನಗೊಳಿಸುವೆನು (ಉಜ್ಜೀವಯಾಮಿ ಕರಕಾಮ್ಬುಗಣೋಕ್ಷಣೇನ ೭–೧೦೭) ಎಂದದ್ದಕ್ಕೆ 'ಅದು ಶುದ್ಧವಾದ ರೀತಿಯಾದರೂ ಲೋಕವಿರುದ್ಧವಾದ್ದರಿಂದ ಬೇಡ (೭–೧೦೯) ; ಅದ್ದರಿಂದ ನನಗೆ ತಾರಕವಾದ ಬ್ರಹ್ಮತತ್ತ್ವವನ್ನು ಉಪದೇಶಿಸಿ ಕೃತಾರ್ಥರನ್ನಾಗಿಮಾಡಿರಿ' ಎಂದು ಕೇಳಿಕೊಂಡರು (೭–೧೧೯). "ತಮಗೇನೂ ನಾನು ಹೇಳಬೇಕಾದದ್ದಿಲ್ಲ ; ಇದೇ ಮಾರ್ಗದಲ್ಲಿ **ಮಂಡನಮಿಶ್ರಶರ್ಮ**ನೆಂಬ ವಿಖ್ಯಾತವಿದ್ವಾಂಸನನ್ನು ತಾವು ಜಯಿಸಿದರೆ ಎಲ್ಲರನ್ನೂ ಜಯಿಸಿದಂತೆ. ಯಾವಾಗಲೂ (ಕರ್ಮ) ಯೋಗಮಾರ್ಗವನ್ನೇ ಹೊಗಳಿ ವಾದಿಸುತ್ತಾ **ವಿಶ್ವರೂಪ**ನೆಂದು ಹೆಸರಾಂತಿದಾನೆ. ವೈದಿಕಮಾರ್ಗದಲ್ಲಿ ತತ್ಪರನೂ ಪ್ರವೃತ್ತಿಶಾಸ್ತ್ರನಿರತನೂ ನಿವೃತ್ತಿಶಾಸ್ತ್ರನಿಮುಖನೂ ಆಗಿರುತ್ತಾನೆ. ಅವನನ್ನು ಹೇಗಾದರೂ ವಶಗೊಳಿಸಿಕೊಳ್ಳಬೇಕು. **ಉಂಬೇಕ**ನೆಂಬ ಹೆಸರಿನವನಾದ ಅತನ ಹೆಂಡತಿಯನ್ನು **ಉಂಬೇ**–ಎಂದು ಕರೆಯುತ್ತಾರೆ. ಯಾವದೋ ಕಾರಣದಿಂದ **ದೂರ್ವಾಸರಿಂದ ಶಪ್ತ**ಳಾಗಿ **ಉಭಯಭಾರತಿ**ಯಾಗಿ ಜನಿಸಿದಾಕೆ. ಅವನು ಸರ್ವಶಾಸ್ತ್ರಗಳಲ್ಲಿಯೂ ನನಗಿಂತ ಅಧಿಕನು, **ನನ್ನ** ಶಿಷ್ಯರಲ್ಲಿ ಪ್ರಿಯತಮನು. ಅತನ ಹೆಂಡತಿಯನ್ನು **ಸಾಕ್ಷ್ಯಕ್ಕೆ ಇಟ್ಟುಕೊಂಡು** ವಾದದಲ್ಲಿ ಅವನನ್ನು ಜಯಿಸಿ ಅವನಿಂದಲೇ ತಮ್ಮ ಕೃತಿಗಳಿಗೆ **ವಾರ್ತಿಕ**ವನ್ನು ಮಾಡಿಸಿಕೊಳ್ಳಿರಿ. ನನ್ನ ಭಾಗವ ವಿಶ್ವನಾಥನೇ ಆಗಿ ತಾವು ಸಮಯಕ್ಕೆ ಸರಿಯಾಗಿ ಬಂದಿದೀರಿ ಆದ್ದರಿಂದ ತಾರಕವನ್ನು ಉಪದೇಶಿಸಿ ಕೃತಾರ್ಥನನ್ನಾಗಿ ಮಾಡಿರಿ' ಎಂದರು. ಆಮೇಲೆ ಶಂಕರರು ಮಂಡನಪಂಡಿತನನ್ನು ಜಯಿಸುವದಕ್ಕೆಂದು **ಮಾಹೀಷ್ಮತಿಗೆ ಹೋದರು** (ಮಾ.ಶಂ. ೭-೧೦೦ ರಿಂದ ೧೩೧ ; ೮–೧).

ಇಲ್ಲಿ ಮಾಧವಕವಿಯು ಮಂಡನನ ವಿಷಯದಲ್ಲಿ ತನಗೆ ತಿಳಿದಿದ್ದ ವಿಷಯಗಳನ್ನೆಲ್ಲ ಕ್ರೋಢೀಕರಿಸಿ ಭಟ್ಟರಿಂದ ನುಡಿಯಿಸಿದ್ದಾನೆ. ಕಪ್ಪಕ್ಷರದಲ್ಲಿ ಟ್ಟಿರುವ ಪದಗಳ ವಿಷಯವಾಗಿ ಇಷ್ಟರಲ್ಲಿಯೇ ಚರ್ಚೆಮಾಡುವೆವು. ಮಂಡನನಿಂದ ವಾರ್ತಿಕವನ್ನು ಮಾಡಿಸಿಕೊಳ್ಳಿರಿ (ಮಾ. ಶಂ. ೭–೧೧೪) ಎಂದು ಇಲ್ಲಿ ಹೇಳಿರುವದನ್ನು ಲಕ್ಷಿಸಬೇಕು. ಶಾಬರಭಾಷ್ಯಕ್ಕೆ ಕುಮಾರಿಲರು ವಾರ್ತಿಕವನ್ನು ಬರೆದಿದ್ದಂತೆ ಸೂತ್ರಭಾಷ್ಯಕ್ಕೂ ಅವರೇ ಬರೆದಿದ್ದರೆ ಚೆನ್ನಾಗಿತ್ತೆಂದು ಸಂಕ್ಷೇಪಶಂಕರಜಯ ಕಾರನ ಅಭೀಷ್ಟವಾಗಿತ್ತೆಂದು ಇದರಿಂದ ಕಲ್ಪಿಸಬಹುದಾಗಿದೆ. ಈ ಅಭಿಪ್ರಾಯವು ಮಾಧವನದು ಮಾತ್ರವಲ್ಲ, ವ್ಯಾಸಾಚಲೀಯದಲ್ಲಿಯೂ 'ಅಷ್ಟೌ ಸಹಸ್ರಾಣಿ ವಿಭಾನ್ತಿ ವಿದ್ವನ್ ಸದ್ವಾರ್ತಿಕಾನಾಂ ಪ್ರಥಮೇಽತ್ರ ಭಾಷ್ಯೇ | ಅಹಂ ಯದಿ ಸ್ಯಾಮಗೃಹೀತದೀಕ್ಷೋ ಧ್ರುವಂ ವಿಧಾಸ್ಯೇ ಸುನಿಬನ್ಧಮಸ್ಯ' (ಮಾ. ಶಂ. ೭–೮೩ ; ವ್ಯಾ. ಶಂ. ೫–೧೪) ಎಂಬ ಶ್ಲೋಕದಿಂದ ಸ್ಫುಟವಾಗುತ್ತದೆ. ನಿಮ್ಮ ಮೊದಲನೆಯ ಅಧ್ಯಾಸಭಾಷ್ಯಕ್ಕೇ ಎಂಟು ಸಹಸ್ರವಾರ್ತಿಕಗಳನ್ನು ಬರೆಯಬಹುದೆಂದು ನನಗೆ ತೋರುತ್ತಿದೆ ; ಈ ಪ್ರಾಯಶ್ಚಿತ್ತದೀಕ್ಷೆಯನ್ನು ಕೈಕೊಳ್ಳದೆ ಇದ್ದಿದ್ದರೆ ಅವಶ್ಯವಾಗಿ ವಾರ್ತಿಕವನ್ನು ಬರೆಯುತ್ತಿದ್ದೆನು– ಎಂಬುದು ಆ ಶ್ಲೋಕದ ಅರ್ಥ.

ಜೆದ್ವಿಲಾಸೀಯದಲ್ಲಿ : 'ನಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವನ್ನು, ಶಾಸ್ತ್ರವನ್ನು ನೋಡಿ ನಿಶ್ಚಯಿಸಿಕೊಂಡಿರುತ್ತೇನೆ. ಈ ಸಮಯಕ್ಕೆ ನನ್ನ ಪುಣ್ಯದಿಂದ ತಾವು ಸರಿಯಾಗಿ ಬಂದಿರಿ; ಇಷ್ಟರಲ್ಲಿಯೇ ನಾನು ಪ್ರಾಣವನ್ನು ಬಿಡುವೆನು' ಎಂದು ಭಟ್ಟರೆಂದದ್ದಕ್ಕೆ ಆಚಾರ್ಯರು 'ನಿಮಗೆ ಗೀತಾರ್ಥದ ಭಾವವು ಒಂದಿಷ್ಟೂ ಗೊತ್ತಿಲ್ಲವಲ್ಲ! ಕೊಲ್ಲುವವರು ಯಾರು, ಕೊಲ್ಲಿಸಿಕೊಳ್ಳುವವರು ಯಾರು ? ಇದೆಲ್ಲ ಈಶ್ವರನ ಆಜ್ಞೆಯಂತೆ ನಡೆಯುತ್ತಿದೆ' (೧೬–೫೫) ಎಂದರು. ಭಟ್ಟರು ಆಶ್ಚರ್ಯದಿಂದ 'ಸರಿ, ಯಾರೋ ಒಬ್ಬ ಯತಿಗಳು ಶ್ರೇಷ್ಠವಾದ ಭಾಷ್ಯವನ್ನು ಮಾಡಿದಾರೆಂದು ಕೇಳಿದೆನು ; ಅವರು ತಾವೇ ಆಗಿರಬೇಕು, ಇದೇ ಭಾಷ್ಯವಿರಬಹುದು. ಭಾಷ್ಯಪುಸ್ತಕವನ್ನು ನೋಡಿಯಲ್ಲವೆ, ಏನಾದರೂ ಹೇಳಬಹುದು. ಅರ್ಧ ಬೆಂದಿರುವ ಶರೀರವುಳ್ಳ ನನ್ನ ಬುದ್ಧಿ ಹೇಗೆ ನಿಶ್ಚಲವಾಗಿದ್ದೀತು ? ಮತ್ತೆ ಬದುಕುವದಾದರೂ ಹೇಗೆ ? ಆದ್ದರಿಂದ ನೀವು ಕಾಶ್ಮೀರಕ್ಕೆ ಹೋಗಿರಿ ; ಅಲ್ಲಿ ಮಂಡನಮಿಶ್ರನೆಂಬ ನನ್ನ ಶಿಷ್ಯಶ್ರೇಷ್ಠನಿರುತ್ತಾನೆ. ಅವನಿಗೆ ಸ್ವಲ್ಪ ಹೆಚ್ಚು ಕಡಿಮೆ ಇಪ್ಪತ್ತುಸಲ ಜೈಮಿನೀಯಸೂತ್ರಗಳ ಅರ್ಥವನ್ನು ಹೇಳಿರುತ್ತೇನೆ. ಅವನಿಗೆ ಕರ್ಮವೇ ಬ್ರಹ್ಮವು ; ಬ್ರಹ್ಮನ ಅಂಶದಿಂದ ಹುಟ್ಟಿದವನವನು. ಅವನಿಗೆ ಸರಸವಾಣಿ ಎಂಬ ಹೆಂಡತಿಯಿರುತ್ತಾಳೆ. ಸ್ವರಸ್ಖಾಲಿತ್ಯವನ್ನು ಕೇಳಿ ನಕ್ಕ ತಪ್ಪಿಗಾಗಿ 'ಮಾನುಷಿಯಾಗು' ಎಂದು ದೂರ್ವಾಸರು ಶಾಪವನ್ನು ಕೊಟ್ಟು ಮನುಷ್ಯರೂಪನಾದ ಶಿವನನ್ನು ಕಂಡಮೇಲೆ ಶಾಪಮೋಕ್ಷವಾಗುವದೆಂದು

ಹೇಳುತ್ತಾರೆ. ಆದ್ದರಿಂದ ಆಕೆ ಭಾರತಿಯಾಗಿ ಜನಿಸಿ ಆವನ ಪತ್ನಿಯಾಗಿರುತ್ತಾಳೆ. ವಾದವನ್ನು ಮಾಡಬೇಕೆಂಬ ಇಚ್ಛೆಯಿದ್ದರೆ ನಿಮ್ಮ ವಾದೇಚ್ಛೆಯ ತಿನಿಸನ್ನು ಆಲ್ಲಿ ತೀರಿಸಿಕೊಳ್ಳಿರಿ; ಆವನನ್ನು ಜಯಿಸಿ ಅವನಿಗೆ ಸಂನ್ಯಾಸವನ್ನು ಕೊಟ್ಟು ಆವನಿಂದ ವಾರ್ತಿಕವನ್ನು ಮಾಡಿಸಿಕೊಳ್ಳಿರಿ' ಎಂದು ಹೇಳಿ ಏಳಲಾರದೆ ಮನಸ್ಸಿನಲ್ಲಿಯೇ ಭಕ್ತಿಯಿಂದ ನಮಸ್ಕರಿಸಿ ಸ್ತುತಿಸುತ್ತಾ ಆಚಾರ್ಯರನ್ನು ಕಳುಹಿಸಿಕೊಟ್ಟರು (ಚಿ. ಶಂ. ೧೬–೨೩ರಿಂದ ೩೬, ೪೧ರಿಂದ ೪೩)– ಎಂದಿದೆ.

ಮಂಡನನು **ಮಾಹಿಷ್ಮತೀನಗರ**ದಲ್ಲಿದ್ದನೆಂದು ಮಾಧವೀಯದಲ್ಲಿ (ಮಾ. ಶಂ. ೮–೧) ಸ್ಪಷ್ಟವಾಗಿದೆ; ಆದರೆ ಇಲ್ಲಿ ಆವನು **ಕಾಶ್ಮೀರ**ದಲ್ಲಿದ್ದನೆಂದಿದೆ. 'ವಾರ್ತಿಕವನ್ನು ಮಂಡನನಿಂದ ಮಾಡಿಸಿಕೊಳ್ಳಿ' ಎಂದು ಇಲ್ಲಿಯೂ ಹೇಳಿದೆ; ಆದರೆ ಆಚಾರ್ಯರ ಭಾಷ್ಯಕ್ಕೆ ತಾವು ವಾರ್ತಿಕವನ್ನು ಮಾಡಲಿಲ್ಲವೆಂಬ ಪಶ್ಚಾತ್ತಾಪವನ್ನು ಸೂಚಿಸಿದ್ದಾಗಲಿ, ಆಚಾರ್ಯರಿಂದ ತಾರಕೋಪದೇಶವನ್ನು ಪಡೆದದ್ದಾಗಲಿ, ಇಲ್ಲಿಲ್ಲ. ತಾರಕೋಪದೇಶವೃತ್ತಾಂತವು ವ್ಯಾಸಾಚಲೀಯದಲ್ಲಿಯೂ ಇಲ್ಲವಾದ್ದರಿಂದ ಆದು ಮಾಧವನ ಕಲ್ಪನೆಯೇ ಆಗಿರಬೇಕೆಂದು ತೋರುತ್ತದೆ.

ಅಸಂಗಗಿರೀಯದಲ್ಲಿ ಹೀಗಿದೆ: ಆಜ್ಞಾನದಿಂದ ಈ ಅವಸ್ಥೆಯನ್ನೇಕೆ ಪಡೆದೆ? 'ಕೊಲ್ಲುವೆನೆಂದೂ ಕೊಲ್ಲಲ್ಪಡುವೆನೆಂದೂ ತಿಳಿದವರಿಬ್ಬರೂ ಅರಿಯರು' ಎಂಬ ಸ್ಮೃತಿಯನ್ನರಿಯೆಯ?– ಎನ್ನಲು ಮೊಳಕಾಲದವರೆಗೂ ಸುಟ್ಟುಹೋಗಿದ್ದರೂ ಭಟ್ಟರು 'ಈ ಆಕಾಲದಲ್ಲಿ ಬಂದ ಹೊಸ ಬೌದ್ಧನು ಯಾರು? ಏಕೆ ಬಂದನು?' ಎಂದು ಆಸಮಾಧಾನವನ್ನು ತೋರಿಸಿದರು. ಆಚಾರ್ಯರು 'ನಾನು ಬೌದ್ಧನಲ್ಲ, ಶಂಕರಾಚಾರ್ಯನು, ಶುದ್ಧಾದ್ವೈತಮಾರ್ಗಾವಲಂಬಿ, ನಿಮ್ಮೊಡನೆ ವಾಗ್ವಾದಮಾಡುವದಕ್ಕೆ ಬಂದಿದ್ದೇನು' ಎಂದರು. ಆಗ ಭಟ್ಟರು ಹಾಗಾದರೆ **ಉತ್ತರದೇಶದಲ್ಲಿ**[1] **ನನ್ನ ತಂಗಿಯ ಗಂಡ ಮಂಡನಮಿಶ್ರನಿದಾನೆ**; ಆವನು ಸರ್ವಜ್ಞಕಲ್ಪನು, ಸಕಲವಿದ್ಯೆಗಳಿಗೂ ಪಿತಾಮಹನಂತೆ ಇದಾನೆ. ಆವನೊಡನೆ ನಿನ್ನ ನಾಲಗೆಯ ತೀಟೆಯು ಹೋಗುವವರೆಗೂ ವಾದಮಾಡಿಕೊ! ನಾನೇನೋ ಕರ್ಮಸೂತ್ರಬದ್ಧನಾಗಿ ಪರಲೋಕಯಾತ್ರೆಗೆ ಹೊರಟಿದೇನೆ' ಎಂದು ಕಣ್ಣುಮುಚ್ಚಿ ಸರ್ವಾತ್ಮಕವಾದ ಬ್ರಹ್ಮದಲ್ಲಿಟ್ಟ ಬುದ್ಧಿಯುಳ್ಳವರಾದರು (ಆ.ಶಂ. ೫೫– ಪು. ೨೧೨–೨೧೩) ಇಲ್ಲಿ **ಮಾಹಿಷ್ಮತಿಯ ಸುದ್ದಿಯಿಲ್ಲ, ಮಂಡನನು ಭಟ್ಟರ ಶಿಷ್ಯನೆಂಬ ಮಾತಿಲ್ಲ, ವಾರ್ತಿಕವಿಚಾರವೂ ಇಲ್ಲ**

ಮಂಡನವಿಶ್ವರೂಪೈಕ್ಯವಿಚಾರ:

೯೪. ಮಂಡನನೇ ವಿಶ್ವರೂಪನೆ, ಆಥವಾ ವಿಶ್ವರೂಪನು ಬೇರೊಬ್ಬ ವ್ಯಕ್ತಿಯೊ? **ಮಾಧವೀಯದಲ್ಲಿ ಮಂಡನಮಿಶ್ರನು ವಿಶ್ವರೂಪನೆಂಬ ಹೆಸರಿ**

1. ದೇವನಾಗರೀಪ್ರತಿಯಲ್ಲಿ 'ಉದಗ್ದೇಶೇಷು' ಎಂಬ ಮಾತಿಲ್ಲ. (ದೇ.ಪು. ೧೪೧).

ನಿಂದ ಭೂಮಂಡಲದಲ್ಲಿ ಪ್ರಖ್ಯಾತನಾಗಿರುತ್ತಾನೆ (ಸ ವಿಶ್ವರೂಪಃ ಪ್ರಥಿತೋ ಮಹೀತಲೇ ಮಾ. ಶಂ. ೭–೧೧೪) ಎಂದಿರುವದನ್ನು ಆಗಲೆ ಹೇಳಿರುತ್ತೇವೆ. ಆದರೆ ಈ ಎರಡು ಹೆಸರುಗಳೂ ಒಬ್ಬನಿಗೆ ಸೇರಿದವೆ ?– ಎಂಬುದು ವಿಚಾರ ಣೀಯವಾಗಿರುತ್ತದೆ.

ವ್ಯಾಸಾಚಲೀಯದಲ್ಲಿ ಕಥೆ ಹೀಗಿದೆ :

ಆಚಾರ್ಯರು ತೀರ್ಥಾಟನೆಗೆಂದು ಶಿಷ್ಯರೊಡನೆ ಹೊರಟು ಬ್ರಹ್ಮಾದಿ ಗಳು (ವ್ಯಾ. ಶಂ. ೫–೧) ಯಾಗಮಾಡಿದ ಸ್ಥಲವೆಂದು ಪ್ರಸಿದ್ಧವಾದ **ಪ್ರಯಾಗ**ಕ್ಕೆ ಬಂದರು (೬–೪) ; ಆಲ್ಲಿ ತುಷಾಗ್ನಿಯಲ್ಲಿದ್ದ ಭಟ್ಟಪಾದರನ್ನು ಕಂಡರು (೬–೧೦). ಭಟ್ಟರು ಆಚಾರ್ಯರನ್ನು ಶಿಷ್ಯರ ಮೂಲಕ ಸತ್ಕರಿಸಿ ತಾವು ಬೌದ್ಧರಲ್ಲಿ ಶಾಸ್ತ್ರಾಧ್ಯಯನಮಾಡಿದ್ದು, ಬೌದ್ಧರು ಉಪ್ಪರಿಗೆಯಿಂದ ತಮ್ಮನ್ನು ತಳ್ಳಿದ್ದು, ತಾವು ಗುರುತಿರಸ್ಕಾರಮಾಡಿದ ಅಪರಾಧಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡದ್ದು– ಇವೆಲ್ಲವನ್ನೂ (೫–೧೧ರಿಂದ ೩೩) ವಿವರಿಸಿದರು. ಆಲ್ಲಿ ಬೌದ್ಧರನ್ನು ಕೊಲ್ಲಿಸಿದ ಸುದ್ದಿಯಿಲ್ಲ' **ಮಗಧದೇಶದ**ಲ್ಲಿ ನನ್ನ ಶಿಷ್ಯನೊಬ್ಬ ನಿದ್ದಾನೆ ; ಆವನು ನಿಮ್ಮ ಭಾಷ್ಯದಮೇಲೆ ನಿಬಂಧವನ್ನು ಮಾಡುತ್ತಾನೆ (ಮಗಧೇಷು ವಸನ್ ಮಮಾಸ್ತಿ ಶಿಷ್ಯಃ ಸ ತು ತಸ್ಯೈ ಪ್ರಭವತ್ಯಸಂಶಯಮ್ (೫–೩೪) ; ಆವನು ವಿಶ್ವರೂಪನೆಂದು ಪ್ರಸಿದ್ಧನಾಗಿದಾನೆ (ಸ ವಿಶ್ವರೂಪಃ ಪ್ರಥಿತೋ ಮಹೀತಲೇ ೫–೩೫) ; ಮಹಾಗೃಹಸ್ಥನು, ವೈದಿಕಕರ್ಮತತ್ಪರನು. ಆವನಿಗೆ ನಿವೃತ್ತಿಶಾಸ್ತ್ರದಲ್ಲಿ ಆದರವಿಲ್ಲ. ಆವನನ್ನು ವಶಗೊಳಿಸಿಕೊಂಡರೆ ನಿಮ್ಮ ಮನೋರಥವು ಸಿದ್ಧವಾಗುವದು. ಆದ್ದರಿಂದ ತಾವು ತಡಮಾಡದೆ ಆಲ್ಲಿಗೆ ಹೋಗಿರಿ. (ಮಹಾಗೃಹೀ ವೈದಿಕಕರ್ಮತತ್ಪರಃ | ಪ್ರವೃತ್ತಿಶಾಸ್ತ್ರೇ ನಿರತಃ ಸ ಕರ್ಮಠಃ || ನಿವೃತ್ತಿಶಾಸ್ತ್ರೇ ನ ಕೃತಾದರಃ ಸ್ವಯಂ (ಕೇನಾಪ್ಯು) ಪಾಯೇನ ವಶಂ ಸ ನೀಯತಾಮ್ । ವಶಂ ಗತೇ ತತ್ರ ಭವೇನ್ಮನೋರಥಸ್ತ ದನ್ತಿಕಂ ಗಚ್ಛತು ಮಾ ಚಿರಂ ಭವಾನ್ ||" ವ್ಯಾ. ಶಂ. ೫–೩೫, ೩೬)– ಎಂದಿದೆ. ಇದಿಷ್ಟೂ ವಿಶ್ವರೂಪನೆಂಬ ಭಟ್ಟಶಿಷ್ಯನ ವಿಚಾರ. ಮಾಧವೀಯದ ೭-೧೧೪, ೧೧೫ ಈ ಶ್ಲೋಕಗಳೇ ವ್ಯಾಸಾಚಲೀಯದ ೫–೩೫, ೩೭ ಎಂಬು ದನ್ನು ಲಕ್ಷಿಸಬೇಕು.

ಇಲ್ಲಿಂದ ಮುಂದಕ್ಕೆ **ವ್ಯಾಸಾಚಲೀಯದಲ್ಲಿ ಮಂಡನವಿಶ್ರನ ವೃತ್ತಾಂತವು ಪ್ರಾರಂಭ :**

ತತ್ಪಾರ್ಶ್ವವತೀ ವಿದಿತಾರ್ಥಸಙ್ಗ್ರಹಃ ।
ಸ ವಃ ಷ್ಣನಾಖ್ಯೋಽಭಿಜಗಾಮ ಶಙ್ಕರಮ್ ॥

—(ವ್ಯಾ, ಶಂ. ೫–೩೭).

'ಭಟ್ಟರ ಪಕ್ಕವಲ್ಲಿದ್ದು ವಿಷಯವನ್ನೆಲ್ಲ ತಿಳಿದಿವ್ವ **ಮಂಡನ**ನೆಂಬ ಹೆಸರುಳ್ಳ ವನು ಶಂಕರಾಚಾರ್ಯರ ಬಳಿಗೆ ಬಂದನು'–ಎಂದು ಪ್ರಾರಂಭಿಸಿ ಮುಂಡನನು 'ತಮ್ಮ ವಿಷಯವನ್ನು ಈವರೆಗೆ ಕೇಳಿದ್ದೆನು, ಈಗ ತಮ್ಮ ದರ್ಶನವಾಯಿತು, ನನ್ನ ಸೇವೆಯನ್ನು ಸ್ವೀಕರಿಸಿ ನನ್ನನ್ನು ಉದ್ಧಾರವಾಡಬೇಕು'–ಎಂದು ಕೇಳಿ ಕೊಂಡನು. ಮುಂಡನನಿಗೆ ಆಚಾರ್ಯರು 'ಶ್ರುತಿಚೋದಿತವಾದ ಕರ್ಮವನ್ನೇ ಮಾಡು, ಆವರಿಂದ ಅಂತಃಕರಣಶುದ್ಧಿಯಾಗುವುದು ; ಆಮೆ ಶುದ್ಧವಾದರೆ ಕನ್ನಡಿಯಲ್ಲಿ ಮುಖವು ತೋರುವಂತೆ ಆನಂದಸ್ವರೂಪವಾದ ಬ್ರಹ್ಮವು ತೋರಿ ಕೊಳ್ಳುವುದು' (ವ್ಯಾ. ಶಂ. ೫–೪೫) ಎಂದು ಹೇಳಿ—

ತ್ಯಕ್ತ್ವಾ ಮಂಡ್ಡನ ಭೇದಗೋಚರಧಿಯಂ ಮಿಥ್ಯಾಭಿಮಾನಾತ್ಮಿಕಾ–
ಮದ್ವೈತೇ ಭವ ನಿಸ್ಪೃತೋ ಮಮ ವಚಸ್ತೀರ್ಣೋ ಭವೇ ಯಾದೃತಃ ॥
ತೀರ್ತ್ವಾ ಸಂಸೃತಿವಾರಿಧಿಂ ಪರಪದೇ ಜ್ಞಾನಪ್ಲವಾರೋಹಣಾತ್ ।
ಪಾರೇ ಸ್ಥಾಸ್ಯಸಿ ನಿರ್ವೃತಃ ಸುಖಮಯೋ ಸಂಸಾರವಾರ್ತೋಜ್ಝಿತೇ

"ಎಲೈ ಮುಂಡನನೆ, ನನ್ನ ಮಾತು ನಿನಗೆ ಸರಿಯೆಂದು ಕಂಡರೆ ಭೇದ ವಿಷಯಕವಾದ ಮಿಥ್ಯಾಭಿಮಾನರೂಪವಾದ ಬುದ್ಧಿಯನ್ನು ಬಿಟ್ಟು ಅದ್ವೈತ ದಲ್ಲಿಯೇ ನಿಸ್ಪೃಹನಾಗು. ಜ್ಞಾನವೆಂಬ ದೋಣಿಯನ್ನು ಹತ್ತುವುದರಿಂದ ಸಂಸಾರಸಾಗರವನ್ನು ದಾಟಿ ಸಂಸಾರದ ಸುದ್ದಿಯೇ ಇಲ್ಲದ ಆಚೆಯ ದಡದಲ್ಲಿ ಸುಖಮಯನಾಗಿ ಉಪರತನಾಗಿ ನಿಲ್ಲುವೆ" ಎಂದನು. 'ಈ ರೀತಿಯಲ್ಲಿ ಬ್ರಹ್ಮ ವಾದಪರವಾದ ಸದ್ವಾಕ್ಯಗಳಿಂದ ಮುಂಡನನನ್ನು ಆತ್ಮಪದದಲ್ಲಿ ಸ್ಥಿರಭಕ್ತಿ ಯುಳ್ಳವನನ್ನಾಗಿ ಮಾಡಿಬಿಟ್ಟು ಮುಂದಕ್ಕೆ ಹೋಗಲು ಮನಸ್ಸುಮಾಡಿದರು' (ವ್ಯಾ. ಶಂ. ೫–೪೭)–ಎಂದು ಐದನೆಯ ಸರ್ಗವನ್ನು ಮುಗಿಸಿದೆ. ಮಾಧವೀಯದ ಎಂಟನೆಯ ಸರ್ಗದಲ್ಲಿ

ಅಥ ಪ್ರತಸ್ಥೇ ಭಗವಾ ಪ್ರಯಾಗಾತ್ತನ್ಮಂಡನಂ ಪಂಡಿತಮಾಶು ಜೇತುಮ್ ।
ಗಚ್ಛನ್ ಖಸೃತ್ಯಾ ಪುರಮಾಲುಲೋಕೇ ಮಾಹೀಷ್ಮತೀಂ ಮಂಡ್ಡನಮಂಡ್ಡಿತಂ ಸಃ ॥೧॥

(ಆ ಬಳಿಕ ಭಗವಂತರಾದ ಆಚಾರ್ಯರು ಪ್ರಯಾಗದಿಂದ ಮುಂಡನಪಂಡಿತ ನನ್ನು ಬೇಗನೆ ಜಯಿಸಬೇಕೆಂದು ಆಕಾಶಮಾರ್ಗದಿಂದ ಹೋಗುತ್ತಾ ಮುಂಡನಾ ಲಂಕೃತವಾಗಿದ್ದ ಮಾಹೀಷ್ಮತಿಯನ್ನು ಕಂಡರು) ಎಂಬ ಶ್ಲೋಕದಿಂದ ಪ್ರಾರಂಭ ವಾಗಿರುವಂತೆಯೇ ವ್ಯಾಸಾಚಲೀಯದ ಆರನೆಯ ಸರ್ಗವೂ

ಅಥ ಪ್ರತಸ್ಥೇ ಭಗವಾನ್ ಪ್ರಯಾಗಾತ್
ದಿವ್ಯೇಕ್ಷಮಾಣೋ ಗೃಹಿವಿಶ್ವರೂಪಮ್ ।
ವಿಹಾಯಸಾ ಯೋಗಭವೇನ ಗಚ್ಛ–
ನ್ನವಾತರತ್ತಸ್ಯ ಗೃಹಾಜ್ಞಣಾನ್ತಮ್ ॥ (ವ್ಯಾ. ಶಂ. ೬–೧)

ಎಂಬ ಶ್ಲೋಕದಿಂದ ಪ್ರಾರಂಭವಾಗಿದೆ. 'ಭಗವಂತರಾದ ಆಚಾರ್ಯರು ಗೃಹಸ್ಥರಾದ ವಿಶ್ವರೂಪನನ್ನು ನೋಡಬೇಕೆಂಬ ಇಚ್ಛೆಯಿಂದ ಆಕಾಶಮಾರ್ಗವಾಗಿ ಯೋಗಬಲದಿಂದ ನಡೆಯುವವರಾಗಿ ಅತನ ಮನೆಯ ಅಂಗಳದಮುಂದೆ ಇಳಿದರು' ಎಂದು ಶ್ಲೋಕದ ಅರ್ಥ. ವ್ಯಾಸಾಚಲೀಯದಲ್ಲಿ ಪ್ರಯಾಗದಲ್ಲಿದ್ದ ಮಂಡನನೇ ಬೇರೆ, ಮಗಧಸಾಮ್ರಾಜ್ಯದಲ್ಲಿದ್ದ ವಿಶ್ವರೂಪನೇ ಬೇರೆ. ಪ್ರಕೃತವಾದ ವಾದವು ಜರುಗಿದ್ದು ಮಂಡನನೊಡನಲ್ಲ, ವಿಶ್ವರೂಪನೊಡನೆ–ಎಂಬುದು ಸ್ಪಷ್ಟವಾಗಿದೆ. ಕಥೆಯನ್ನು ಹೇಳುವದರಲ್ಲಿ ವ್ಯಾಸಾಚಲೀಯವನ್ನೇ ಅನುಸರಿಸಿರುವ ಗೋವಿಂದನಾಥನು ಮಂಡನನ ಹೆಸರನ್ನು ಎತ್ತಿಲ್ಲ. ನನ್ನ ಶಿಷ್ಯನಾದ ವಿಶ್ವರೂಪನೆಂಬುವನು ಮಗಧದಲ್ಲಿದಾನೆ ಎಂದಿಷ್ಟೇ (ಗೋ. ೫–೫೫) ಭಟ್ಟರಿಂದ ಹೇಳಿಸಿರುತ್ತಾನೆ.

ಮಾಧವಾಚಾರ್ಯನು ವರ್ಣಿಸಿರುವ **ವ್ಯಾಸಾಚಲನು** ಈ ಗ್ರಂಥದ ಕರ್ತನೊ, ಬೇರೊಬ್ಬನೊ ?– ಎಂಬ ವಿಷಯದಲ್ಲಿ ಸಂಶಯವುಂಟಾಗುವದಕ್ಕೆ ಕಾರಣವನ್ನು ಹಿಂದೆ (ಪು. ೭) ಹೇಳಿರುತ್ತೇವೆ. ಈ ನಮ್ಮ ವ್ಯಾಸಾಚಲೀಯವು ಪುರಾತನ ವ್ಯಾಸಾಚಲೀಯಕ್ಕಿಂತ ಬೇರೆಯೆಂದೂ ಈಚೆಗೆ ಯಾರೋ ಕಲ್ಪಿಸಿದ್ದರೆಂದೂ ಇಟ್ಟುಕೊಂಡರೂ ಮಂಡನ, ವಿಶ್ವರೂಪ–ಇವರಿಬ್ಬರೂ ಬೇರೆಬೇರೆಯ ವ್ಯಕ್ತಿಗಳೆಂಬ ಮತವನ್ನು ಈ ಗ್ರಂಥದ ಕಾಲದಲ್ಲಿಯೇ ಇದ್ದರೆಂಬುದನ್ನು ಅಲ್ಲಗಳೆಯುವದಕ್ಕೆ ಬರುವಂತಿಲ್ಲ. ಯಾಜ್ಞವಲ್ಕ್ಯಸ್ಮೃತಿಗೆ 'ಬಾಲಕ್ರೀಡಾ' ಎಂಬ ವ್ಯಾಖ್ಯಾನವನ್ನು ಬರೆದವರು ವಿಶ್ವರೂಪಾಚಾರ್ಯರೆಂಬ ಪ್ರಸಿದ್ಧಿಯಿದೆ. ಆ ಗ್ರಂಥದ ಶೈಲಿಗೂ ಮಂಡನನ ಶೈಲಿಗೂ ವೈಲಕ್ಷಣ್ಯವಿದೆ. ಅದ್ದರಿಂದಲೂ ಪ್ರಸಿದ್ಧ ಮಂಡನಮಿಶ್ರನೇ ವಿಶ್ವರೂಪನಾಗಿರಲಾರನೆಂದು ತೋರುತ್ತದೆ. ದಕ್ಷಿಣಾಮೂರ್ತಿಸ್ತೋತ್ರಕ್ಕೆ ಮಾನಸೋಲ್ಲಾಸವೆಂಬ ವ್ಯಾಖ್ಯಾನವನ್ನು ಬರೆದವರು ವಿಶ್ವರೂಪಾಚಾರ್ಯರೆಂದು ಆ ವಾರ್ತಿಕದ ವ್ಯಾಖ್ಯಾನಕರ್ತರು ಬರೆದಿರುತ್ತಾರೆ. (ರಾ.ತೀ. ವ್ಯಾಖ್ಯಾ. ಪುಟ ೨೫) **ಮಾನಸೋಲ್ಲಾಸವು** ಸುರೇಶ್ವರಾಚಾರ್ಯರ ಕೃತಿಯಲ್ಲವೆಂಬುವಕ್ಕೆ ಕಾರಣಗಳಿವೆಯೆಂಬುದನ್ನು ನಾವು ಅದನ್ನು ಕನ್ನಡಿಸಿರುವ ಗ್ರಂಥದ ಪೀಠಿಕೆಯಲ್ಲಿ ತೋರಿಸಿರುವೆವು. ಗೃಹಸ್ಥನಾಗಿದ್ದ ವಿಶ್ವರೂಪನು ಅದನ್ನು ಬರೆದಿರಬಹುದೆ ?–ಎಂಬುದನ್ನು ವಿಮರ್ಶಕರು ಆಲೋಚನೆಮಾಡಬೇಕಾಗಿದೆ. ದಕ್ಷಿಣಾಮೂರ್ತಿಸ್ತೋತ್ರವನ್ನು ಬರೆದವರು ಶಂಕರಾಚಾರ್ಯರೇ ಎಂಬ ಪ್ರತೀತಿಯು ಈ ದೇಶದಲ್ಲಿ ಬಲವಾಗಿದೆ; ಆದರೆ ಮಾನಸೋಲ್ಲಾಸಕಾರನು ಆಚಾರ್ಯರನ್ನು ಎಲ್ಲಿಯೂ ಹೆಸರಿಸಿಲ್ಲ, ತನ್ನ ಹೆಸರನ್ನೂ ಹೇಳಿಕೊಂಡಿಲ್ಲ. ಹೀಗಿದ್ದರೂ ಮಾನಸೋಲ್ಲಾಸವು ವಿಶ್ವರೂಪಾಚಾರ್ಯಕೃತವೆಂಬ ಕಥೆ ಹೇಗೆ ಬಂದಿತ್ತೋ ತಿಳಿಯದು. ಇನ್ನೊಂದು ವಿಚಾರ : ಸಂನ್ಯಾಸಿಗಳು ಚಾತುರ್ಮಾಸ್ಯಸಂಕಲ್ಪವನ್ನು ಮಾಡುವಾಗ 'ಆಚಾರ್ಯಪಂಚಕ'ವನ್ನು ಪೂಜೆಮಾಡುವ ಪದ್ಧತಿ

ಯಿವೆ ; ಆವರಲ್ಲಿ ಸುರೇಶ್ವರಾಚಾರ್ಯರ ಹೆಸರಿಲ್ಲ ; 'ವಿಶ್ವರೂಪಾಚಾರ್ಯ' ರೆಂಬ ಹೆಸರನ್ನೇ ಧರ್ಮಸಿಂಧ್ವಾದಿನಿಬಂಧಗಳು ಉಲ್ಲೇಖಿಸಿವೆ. ವಿಶ್ವರೂಪನು ಗೃಹಸ್ಥನಾದರೆ ಆವನನ್ನು ಆಚಾರ್ಯಪದವಿಯಲ್ಲಿಟ್ಟದ್ದು ಹೇಗೆ ಸರಿಯಾದೀತು? ಸಂನ್ಯಾಸಿಯಾಗಿದ್ದರೆ ವಿಶ್ವರೂಪಕೃತಿಗಳಲ್ಲಿ ಹಾಗೆಂಬ ಉಲ್ಲೇಖವೇಕಿಲ್ಲ ? ಮಂಡನನೇ ವಿಶ್ವರೂಪನಾಗಿದ್ದರೆ ಆ ಹೆಸರಿನಿಂದ ಮಂಡನನನ್ನು ವ್ಯಾಖ್ಯಾನ ಕಾರರಾದರೂ ಕರೆಯದಿರುವದೇಕೆ ? ಹೀಗೆ ಮಂಡನವಿಶ್ವರೂಪರು ಒಬ್ಬರೇ ಎಂದು ಒಪ್ಪುವದಕ್ಕೆ ಅನೇಕ ಆಡ್ಡಿಗಳಿರುತ್ತವೆ ; ವಿಶ್ವರೂಪನೇ ಸುರೇಶ್ವರಾ ಚಾರ್ಯರೆಂಬುದಕ್ಕೂ ಆಡ್ಡಿಗಳಿವೆ !

ಮಂಡನನೇ ಸುರೇಶ್ವರಾಚಾರ್ಯರೆಂಬ ಬಗ್ಗೆ ವಿವಾದ :

೯೫. ಮಂಡನನು ಭಟ್ಟರ ಶಿಷ್ಯನೆಂದು ಮಾಧವಕವಿ ಬರೆದಿರುತ್ತಾನೆಷ್ಟೆ ? ಇದು ನಿಜವಿರಬಹುದೆ ? ಆವನೊಡನೆ ಆಚಾರ್ಯರಿಗೆ ವಾದವಾಯಿತೆ ? ಆವನು ವಾದದಲ್ಲಿ ಜಿತನಾಡಮೇಲೆ ಸುರೇಶ್ವರಾಚಾರ್ಯರೆಂಬ ಹೆಸರಿನಿಂದ ಆಚಾರ್ಯರ ಶಿಷ್ಯನಾದನೆ ?– ಎಂಬುದು ಇನ್ನೊಂದು ಕಗ್ಗಂಟಿನ ಪ್ರಶ್ನೆಯಾಗಿದೆ.

ಮದ್ರಾಸಿನಲ್ಲಿ ಪ್ರಾಚ್ಯಲಿಖಿತಪುಸ್ತಕಗ್ರಂಥಾವಳಿಯಲ್ಲಿ (Oriental Manuscript Series No. 4) ಪ್ರಕಟವಾಗಿರುವ ಮಂಡನಕೃತ ಬ್ರಹ್ಮ ಸಿದ್ಧಿಯ ಆಂಗ್ಲ ಪೀಠಿಕೆಯಲ್ಲಿ ಈ ಪ್ರಶ್ನೆಯನ್ನು ವಿವೇಚಿಸಿರುವ ಎಸ್. ಕುಪ್ಪ ಸ್ವಾಮಿಶಾಸ್ತ್ರಿಗಳವರೂ ಮತ್ತು ಮಹಾಮಹೋಪಾಧ್ಯಾಯ ಪಿ. ವಿ. ಸುಬ್ರಹ್ಮಣ್ಯಶಾಸ್ತ್ರಿಗಳವರೂ ಈ ವಿಷಯಕ್ಕೆ ವಿರುದ್ಧಮತದವರಾಗಿರುತ್ತಾರೆ. ಮಂಡನ ಮತ್ತು ಸುರೇಶ್ವರಾಚಾರ್ಯರ ವಾದಗಳಲ್ಲಿ ಕಾಣಬರುವ ಪರಸ್ಪರ ವೈಲಕ್ಷಣ್ಯವನ್ನು ಶೃಂಗೇರಿಪೀಠದ ಆನುಜ್ಞೆಯಂತೆ ಪ್ರಕಟವಾಗಿರುವ **ಗುರುವಂಶ ಕಾವ್ಯ**ದಲ್ಲಿ ಮಂಡನಸುರೇಶ್ವರಾಚಾರ್ಯರನ್ನು ಬೇರೆಬೇರೆಯ ವ್ಯಕ್ತಿಗಳಾಗಿ ಪರಾಮರ್ಶಿಸಿರುವದನ್ನು ಆವಲಂಬಿಸಿ, ಪ್ರೊ. ಹಿರಿಯಣ್ಣನವರು ಪ್ರಕಟಿಸಿದ ಅಭಿಪ್ರಾಯವನ್ನೇ ಬೆಂಬಿಡಿದು, ಕುಪ್ಪುಸ್ವಾಮಿಶಾಸ್ತ್ರಿಗಳು ಈ ಇಬ್ಬರೂ ಬೇರೆ ಬೇರೆಯ ವ್ಯಕ್ತಿಗಳೆಂದೇ ವಾದಿಸಿರುತ್ತಾರೆ. (1) ಮಂಡನನ ಗ್ರಂಥಗಳಲ್ಲಿ ಆಚಾರ್ಯಮಂಡನಮಿಶ್ರ, ಶ್ರೀಮನ್ಮಂಡನಮಿಶ್ರ, ಮಹಾಮಹೋಪಾಧ್ಯಾಯ ಮಂಡನಮಿಶ್ರ, ಆರ್ಯಮಣ್ಡನ, ಮಣ್ಡನ–ಎಂಬ ಹೆಸರುಗಳು ಕಾಣಿಸುತ್ತಿವೆಯೇ ಹೊರತು ಆವರು ಕುಮಾರಿಲಭಟ್ಟಪಾದಶಿಷ್ಯರೆಂದು ಎಲ್ಲಿಯೂ ಹೇಳಿಲ್ಲವೆಂದು ಶಾಸ್ತ್ರಿಗಳವರು (ಬ್ರ.ಸಿ.ಪೀ. PXXV) ಬರೆದಿರುತ್ತಾರೆ (ವಿವರಣಪ್ರಮೇಯ ಸಂಗ್ರಹ, ಪರಾಶರಮಾಧವೀಯ–ಇವುಗಳಲ್ಲಿ ಬೃಹದಾರಣ್ಯಕವಾರ್ತಿಕಗಳನ್ನು ವಿಶ್ವರೂಪಾಚಾರ್ಯಕೃತವೆಂದು ಪರಾಮರ್ಶಿಸಿರುವದಾಗಿ ಶಾಸ್ತ್ರಿಗಳು ಟಿಪ್ಪಣಿ ಯೊಂದರಲ್ಲಿ ಬರೆದಿರುವದನ್ನು ನೋಡಿದರೆ ಮಾಧವಾಚಾರ್ಯರ ಕಾಲಕ್ಕೇ

ವಿಶ್ವರೂಪಸುರೇಶ್ವರರಿಬ್ಬರನ್ನೂ ಒಬ್ಬನೇ ವ್ಯಕ್ತಿ ಎಂದು ಪರಿಗಣಿಸುವ ಭ್ರಾಂತಿಯು ನೆಲೆನಿಂತಿತ್ತೆಂದು ತಿಳಿಯುತ್ತದೆ. **ನ್ಯಾಯರತ್ನಾವಳೀಕಾರರಾದ ಆನಂದಾನುಭವರು** 'ಗೃಹಸ್ಥಾವಸ್ಥಾಯಾಂ ವಿರಚಿತೇ ವಿಶ್ವರೂಪಗ್ರನ್ಥೇ ದರ್ಶಿತವಾಕ್ಯಸಂಗ್ರಹೋ ದೃಶ್ಯತೇ | ನ ಚಾಸೌ ಗ್ರನ್ಥಃ ಸಂನ್ಯಾಸಿನಾ ವಿರಚಿತಃ| ತಥಾ ಹಿ ಪರಿವ್ರಾಜಕಾಚಾರ್ಯಸುರೇಶ್ವರವಿರಚಿತೇತಿ ಗ್ರನ್ಥೇ ನಾಮ ಲಿಖೇತ್| ಲಿಖಿತಂ ತು ಭಟ್ಟವಿಶ್ವರೂಪೇಣ ವಿರಚಿತೇತಿ ||'– ಎಂದು ಬರೆದಿದಾರೆಂದೂ ಶಾಸ್ತ್ರಿಗಳು ಹೇಳುತ್ತಾರೆ. ಆನಂದಾನುಭವರ ಅಭಿಪ್ರಾಯದಲ್ಲಿ ವಿಶ್ವರೂಪನೆಂಬುದು ಸಂನ್ಯಾಸಿಯ ಹೆಸರಲ್ಲವೆಂತ ಆಯಿತು. ಇದು ಪ್ರಕೃತವಿಷಯಕ್ಕೆ ಸಂಬಂಧಿಸಿದ್ದಲ್ಲವಾದ್ದರಿಂದ ಇದನ್ನು ಕೈಬಿಡಬಹುದಾಗಿದೆ. (ಆದರೂ ಹಿಂದಿನ ಖಂಡದ ವಿಚಾರಕ್ಕೆ ಇದೊಂದು ಸಾಕ್ಷ್ಯವಾಗಿದೆಯೆಂದು ಪ್ರಸಕ್ತಾನುಪ್ರಸಕ್ತಿಯಿಂದ ಇಲ್ಲಿ ಬರೆದಿದೇವೆ). ಮಂಡನನು ಶಂಕರಾಚಾರ್ಯರ ಶಿಷ್ಯನೆಂದು ಬರೆದುಕೊಂಡಿಲ್ಲವೆಂಬುದನ್ನು ಶಾಸ್ತ್ರಿಗಳು ತೋರಿಸಿದಾರೆ ; ಈ ಗ್ರಂಥಗಳು ಆವನು ಗೃಹಸ್ಥನಾದಾಗ ಬರೆದವುಗಳೆಂದು ಇಟ್ಟುಕೊಂಡರೆ ಮಂಡಸುರೇಶ್ವರೈಕ್ಯಕ್ಕೆ ಇದೇನೂ ಬಾಧಕವಾಗುವದಿಲ್ಲ. ಆದರೆ (2) ಮಂಡನನಿಗೂ ಸುರೇಶ್ವರಾಚಾರ್ಯರಿಗೂ ಇರುವ ತತ್ತ್ವವಿಷಯಕವಾದ ಅಭಿಪ್ರಾಯಭೇದಗಳನ್ನು ಮನದಂದರೆ, ಮತ್ತು (3) ಆದ್ವೈತಗ್ರಂಥಕಾರರು ಮಂಡನಸುರೇಶ್ವರಾಚಾರ್ಯರ ವಚನಗಳನ್ನು ಬೇರೆಬೇರೆಯಾಗಿಯೇ ಆಯಾ ಗ್ರಂಥಕರ್ತರ ಹೆಸರನ್ನು ಉಲ್ಲೇಖಿಸಿ ಪರಾಮರ್ಶಿಸಿರುವದನ್ನೂ ಮನದಂದರೆ, ಮಂಡನಸುರೇಶ್ವರಾಚಾರ್ಯರು ಬೇರೆಬೇರೆಯೇ ಆಗಿರಬೇಕೆಂಬುದು ಸ್ಪಷ್ಟವಾಗುತ್ತದೆ– ಎಂದು ಶಾಸ್ತ್ರಿಗಳು ತೀರ್ಮಾನಿಸಿರುತ್ತಾರೆ. ಕುಪ್ಪಸ್ವಾಮಿಶಾಸ್ತ್ರಿಗಳಹರು ಈ ಸಂದರ್ಭದಲ್ಲಿ ಕೊಟ್ಟಿರುವ ಇನ್ನೊಂದು ಪ್ರಮಾಣವು ವಿಶೇಷವಾಗಿ ಪರಿಶೀಲನೀಯವಾಗಿರುತ್ತದೆ. (4) ಜ್ಞಾನಕರ್ಮಗಳ ಸಂಬಂಧವನ್ನು ವಿಮರ್ಶಿಸುವ ಸಂದರ್ಭದಲ್ಲಿ ಅವುಗಳೆರಡಕ್ಕೂ ವಿರೋಧವಿರುವದರಿಂದ ಅವಕ್ಕೆ ಒಂದಕ್ಕೊಂದಕ್ಕೆ ಯಾವ ಸಂಬಂಧವೂ ಇಲ್ಲ– ಎಂಬ ಶಾಂಕರಮತವನ್ನು ಅನುವಾದವಮಾಡುವದಕ್ಕೆ ಹೊರಟು (ಬ್ರ.ಸಿ. ಪು. ೩೨) ಮಂಡನನು 'ತಸ್ಮಾನ್ನಾವಗತಬ್ರಹ್ಮಾತ್ಮಭಾವಃ, ಪ್ರಾಗಿವ ಸಾಂಸಾರಿಕ ಧರ್ಮಭಾಕ್ | ಯಸ್ತು ತಥಾ, ನಾಸಾವವಗತಬ್ರಹ್ಮಾತ್ಮಭಾವ ಇತಿ ||' (ಬೃ. ಪು. ೩೪) ಎಂದು ಉಪಸಂಹಾರಮಾಡಿರುತ್ತಾನೆ. ಇದು 'ತಸ್ಮಾನ್ನಾವಗತ ಬ್ರಹ್ಮಾತ್ಮಭಾವಸ್ಯ ಯಥಾಪೂರ್ವಂ ಸಂಸಾರಿತ್ವಮ್ | ಯಸ್ಯ ತು ಯಥಾ ಪೂರ್ವಂ ಸಂಸಾರಿತ್ವಂ ನಾಸಾವವಗತಬ್ರಹ್ಮಾತ್ಮಭಾವ ಇತ್ಯನವದ್ಯಮ್||' (ಆದ್ದರಿಂದ ಬ್ರಹ್ಮಾತ್ಮಭಾವವನ್ನು ನಿಶ್ಚಯಿಸಿ ಅರಿತುಕೊಂಡಿರುವಾತನಿಗೆ ಮೊದಲಿನಂತೆ ಸಂಸಾರಿತ್ವವಿರುವದಿಲ್ಲ ; ಆದರೆ ಯಾರಿಗೆ ಮೊದಲಿನಂತೆ ಸಂಸಾರಿತ್ವವಿರುವದೋ ಆವನು ಬ್ರಹ್ಮಾತ್ಮಭಾವವನ್ನು ನಿಶ್ಚಯಿಸಿಕೊಂಡಿರುವನಲ್ಲ. ಆದ್ದರಿಂದ ಇಲ್ಲಿ

ಯಾವ ದೋಷವೂ ಇಲ್ಲ) ಎಂದು ಆಚಾರ್ಯರು ಸಮನ್ವಯಸೂತ್ರಕ್ಕೆ ಬರೆದ ಭಾಷ್ಯವಾಕ್ಯಗಳ ಪ್ರತಿಧ್ವನಿಯಂತೆ ಇರುತ್ತದೆ. ಮಂಡನನು ತನ್ನ ಜ್ಞಾನ ಕರ್ಮಸಮುಚ್ಚಯವಾದದ ಸಿದ್ಧಾಂತಕ್ಕೆ ಪೂರ್ವಪಕ್ಷವಾಗಿ ಇಲ್ಲಿ ಬರೆದುಕೊಂಡಿರುವದು ಶಂಕರಾಚಾರ್ಯರದೇ ಎಂದು ಸೂಚಿಸುವದಕ್ಕೋ ಎಂಬಂತೆ ಸಮನ್ವಯಾಧಿಕರಣಭಾಷ್ಯದಲ್ಲಿರುವ ಎಂದಿಗೂ ಮರೆಯಲಾಗದ ಈ ಎರಡು ವಾಕ್ಯಗಳನ್ನು ಪೂರ್ವಪಕ್ಷದ ಉಪಸಂಹಾರಭಾಗಕ್ಕೆ ಹೆಣೆದುಕೊಂಡಿರುತ್ತಾನೆ ಎಂದು (ಬ್ರ.ಸಿ.ಪೀ. p. xlviii) ಶಾಸ್ತ್ರಿಗಳು ಬರೆದಿರುವದನ್ನು ಎಲ್ಲರೂ ಅನುಮೋದಿಸಬೇಕಾಗಿದೆ; ಮಂಡನಸುರೇಶ್ವರಾಚಾರ್ಯರಿಗಿರುವ ತತ್ತ್ವವಿಷಯಕವಾದ ಅಭಿಪ್ರಾಯಭೇದಗಳನ್ನು ತೋರಿಸುವದು ಅಪ್ರಕೃತವೆಂದೂ ಕಂಡದ್ದರಿಂದ ಅದನ್ನು ಬಿಟ್ಟುಬಿಟ್ಟದೇವೆ. ಈ ವಿಷಯದಲ್ಲಿ ಹೆಚ್ಚಾಗಿ ತಿಳಿಯಬೇಕೆಂಬ ಇಂಗ್ಲಿಷುಪರಿಚಯವುಳ್ಳ ವಾಚಕರು ಬ್ರಹ್ಮಸಿದ್ಧಿಯ ಪೀಠಿಕೆಯನ್ನೇ ಓದಬೇಕು.

ಈವರೆಗೆ ನಾವು ತಿಳಿಸಿರುವದು ಈ ವಾದದ ಒಂದು ಪಕ್ಕ. ಈಗ ಇದರ ಇನ್ನೊಂದು ಪಕ್ಕವನ್ನು ವಾಚಕರಮುಂದೆ ಇಡಬೇಕಾಗಿದೆ. ಪಿ.ವಿ. ಸುಬ್ರಹ್ಮಣ್ಯ ಶಾಸ್ತ್ರಿಗಳವರು ಇದೇ ಬ್ರಹ್ಮಸಿದ್ಧಿಯ ಪುನ್ನುಡಿಯಲ್ಲಿ ಈ ವಿಷಯಕ್ಕೆ ಬರೆದಿರುವದರ ಸಾರವೇನೆಂದರೆ : (1) ತತ್ತ್ವದ ವಿಷಯಕ್ಕಿರುವ ಮತಭೇದಗಳು ಎಂಥವೇ ಆಗಿರಲಿ, ವ್ಯಕ್ತಿಗಳು ಬೇರೆಬೇರೆ ಎಂಬುದಕ್ಕೇನೂ ಆಧಾರವಾಗಲಾರವು. (2) ಮಂಡನನ ಹೆಸರಿನಲ್ಲಿ ಪ್ರಕಾಶಿತವಾಗಿರುವ ಗ್ರಂಥಗಳು ಪೂರ್ವಮೀಮಾಂಸಾಭಿಮಾನಿಗಳಾದ ವೇದಾಂತಿಗಳ ಪಕ್ಷವನ್ನು ಒಪ್ಪಿದ ಮಂಡನನು ಗೃಹಸ್ಥಾಶ್ರಮವಲ್ಲಿ ಬರೆದವುಗಳಿಂದಿಟ್ಟುಕೊಂಡೆ ಆಚಾರ್ಯರಿಂದ ಜಿತನಾಗಿ ಶುದ್ಧವೇದಾಂತಪ್ರಕ್ರಿಯೆಯನ್ನು ಅವಲಂಬಿಸಿದ ಸುರೇಶ್ವರಾಚಾರ್ಯರಾಗಿ ಬರೆದ ಗ್ರಂಥಗಳಲ್ಲಿ ಹಿಂದಿನ ಗ್ರಂಥಗಳಲ್ಲಿಲ್ಲದ ಕೆಲವು ವಿಶೇಷಗಳು ಇರಲೇಬೇಕಲ್ಲವೆ ? ಈ ದೃಷ್ಟಿವೈಲಕ್ಷಣ್ಯವುಕೂಡ ಶಾಂಕರಪೂರ್ವತನವೇದಾಂತಿಗಳು, ಶಾಂಕರರು, ಶಂಕರಪಶ್ಚಾತ್ತನವೇದಾಂತಿಗಳು— ಇವರ ದೃಷ್ಟಿವಿಕಾಸದಿಂದ ಆದದ್ದಾಗಿರಬೇಕೆಂದು ಸಮಾಧಾನಹೇಳುವದಕ್ಕಾಗದಷ್ಟು ಮಹತ್ತರವೂ ವಿರುದ್ಧವೂ ಆಗಿಲ್ಲ. ಮೀಮಾಂಸಕಮಂಡನನು ವಾದಜಿತನಾಗಿ ಸಂನ್ಯಾಸಿಯಾದಮೇಲೆ ಸುರೇಶ್ವರಾಚಾರ್ಯನಾದನೆಂದು ನಾಂಪ್ರದಾಯಿಕರೆಲ್ಲರೂ ಏಕಕಂಠದಿಂದ ಹೇಳುತ್ತಿದಾರೆ : (3) ಬ್ರಹ್ಮಸಿದ್ಧಿಯನ್ನೂ ಸುರೇಶ್ವರಾಚಾರ್ಯರ ಸಂಬಂಧವಾರ್ತಿಕವನ್ನೂ ಹೋಲಿಸಿದರೆ ಕೆಲವು ಸಮಾನಾರ್ಥಕಶ್ಲೋಕಗಳಿವೆ ; ಕೆಲವು ವಾಕ್ಯಗಳೂ ಸಮಾನವಾಗಿರುತ್ತವೆ. ಇವರಿಬ್ಬರೂ ಒಬ್ಬರೇ ಆಗಿದ್ದರೆ ಮಾತ್ರ ಹೀಗೆ ಸಮಾನವಾಕ್ಯಗಳಿರುವದು ಸಾಧ್ಯ. (4) ಶಂಕರರ ತರುವಾಯ ಬಂದ ಅನೇಕ ದೂರದ ಕಾಲದ ಆದ್ವೈತಿಗಳೂ ಆದ್ವೈತಪ್ರತಿಪಕ್ಷಿಗಳೂ ಮಂಡನಗ್ರಂಥವನ್ನು ಆದ್ವೈತಕ್ಕೆ ಪ್ರಮಾಣವೆಂದು ಒಪ್ಪಿರುವದು ಕಂಡುಬರುತ್ತದೆ. ಕುಪ್ಪಸ್ವಾಮಿ

ಶಾಖ್ರಿಗಳವರುಕಾಲಕ್ರಮದ ಪಟ್ಟಿಯಲ್ಲಿ ಮಂಡನನಿಗೂ ಸುರೇಶ್ವರರಿಗೂ ಬಹು ಸ್ವಲ್ಪಕಾಲದೆ (ಐದೇವರ್ಷದ) ಅಂತರವನ್ನು ಕೊಟ್ಟಿರುತ್ತಾರೆ. ಆ ಪಟ್ಟಿಯು ಸರಿಯೆಂದಾದರೆ ಸುರೇಶ್ವರರು ಮಂಡನನ ಗ್ರಂಥದಿಂದ ಅಷ್ಟೊಂದು ವಾಕ್ಯಗಳನ್ನು ಅವರ ಹೆಸರನ್ನುಕೂಡ ಹೇಳದೆ ತಮ್ಮ ಗ್ರಂಥದೊಳಕ್ಕೆ ಸೇರಿಸಿಕೊಳ್ಳುತ್ತಿದ್ದರೆಂದು ಒಪ್ಪುವದಕ್ಕೆ ಆಗುವದಿಲ್ಲ. (5) ವ್ಯಾಸಾಚಲೀಯದಲ್ಲಿ ವಿಶ್ವರೂಪನು ಸಂನ್ಯಾಸವನ್ನು ತೆಗೆದುಕೊಂಡಮೇಲೆ ವಾರ್ತಿಕವನ್ನು ಬರೆಯುವದಕ್ಕೆ ಮಿಕ್ಕ ಶಿಷ್ಯರು ಮಾಡಿದ ಆಕ್ಷೇಪಗಳನ್ನು ಪರಿಹರಿಸುವದಕ್ಕೆ ತಾನು ಮೊದಲು ಕರ್ಮಿಯಾಗಿದ್ದರೂ ಈಗ ತನ್ನ ಮತವು ಬದಲಾಯಿಸಿದೆ ಎಂದು ಹೇಳಿದಂತೆ ಬರುತ್ತದೆ. ಆದ್ದರಿಂದ ವಿಶ್ವರೂಪನ ಅಭಿಪ್ರಾಯಗಳು ಬದಲಾಯಿಸಿದ್ದರೆ ಆಶ್ಚರ್ಯವೇನೂ ಇಲ್ಲ. (6) ಗುರುವಂಶಕಾವ್ಯದಲ್ಲಿ ಹೇಳಿರುವವರು ಇಬ್ಬರೂ ಮಂಡನರೇ; ಆದರಲ್ಲಿ ಒಬ್ಬನು ಗೃಹಸ್ಥನು, ಇನ್ನೊಬ್ಬ ವಿಶ್ವರೂಪನೆಂಬ ಮಂಡನನು ಸಂನ್ಯಾಸಿಯಾಗಿ ಸುರೇಶ್ವರಾಚಾರ್ಯನಾದನು. ಮಂಡನ ಎಂಬುದು ಆಗಿನವರ ಕೆಲವರ ಬಿರುದು. (7) ಶಂಕರವಿಜಯಗಳಲ್ಲಿ ಪ್ರಾಚೀನತಮವಾದ ಆನಂಪಗಿರೀಯೆಂದಲ್ಲಿ 'ಮಂಡನ ಮಿಶ್ರ'ನೆಂಬ ಹೆಸರೇ ಇರುವದರಿಂದ ಮಂಡನನೇ ವಾದಜಿತನಾಗಿ ಸುರೇಶ್ವರನಾದನೆಂದು ಒಪ್ಪುವದು ಯುಕ್ತ.

ಮಂಡನಸುರೇಶ್ವರೈಕ್ಯವಿಷಯಕ್ಕೆ ಈ ಗ್ರಂಥಕರ್ತರ ಅಭಿಪ್ರಾಯ

೯೬. ವಾದಗ್ರಸ್ತವಿಷಯವನ್ನು ವಿಚಾರಶೀಲರಾದವರು ಒಬ್ಬೊಬ್ಬರೂ ನಿಷ್ಪಕ್ಷಪಾತಬುದ್ಧಿಯಿಂದ ವಿಮರ್ಶೆಮಾಡಿ ತಮ್ಮ ತಮ್ಮ ತೀರ್ಮಾನಕ್ಕೆ ಬರಬೇಕಾಡದ್ದೇ ಯುಕ್ತವೆಂಬುದನ್ನು ಹೇಳಬೇಕಾದದ್ದಿಲ್ಲವಷ್ಟೆ? ಆದ್ದರಿಂದ ಪ್ರಕೃತ ವಿಷಯಕ್ಕೆ ನಮ್ಮ ತೀರ್ಮಾನವನ್ನು ಸಕಾರಣವಾಗಿ ಇಲ್ಲಿ ಬರೆಯುವೆವು. ವಾಚಕರು ಯುಕ್ತವಾಗಿ ಕಂಡದ್ದನ್ನೇ ಗ್ರಹಿಸಬೇಕು. (1) ಮಂಡನಮಿಶ್ರನು ವೇದಾಂತಿಯಾಗಿದ್ದನೆಂದು ಯಾವ ಶಂಕರವಿಜಯದಲ್ಲಿಯೂ ಬರೆದಿಲ್ಲ; ಆದ್ದರಿಂದ ಅವನು ವಿಮಾಮಾಂಸಾಪಕ್ಷಪಾತಿ ಎಂಬ ಕಾರಣದಿಂದೆ ಶಂಕರವಿಜಯಕಾರರು ಅವನನ್ನು ಕರ್ಮಠನೆಂದರು ಎಂದು ನಿರ್ಣಯಿಸುವದಕ್ಕೆ ಆಧಾರವಿಲ್ಲ. ಶಂಕರವಿಜಯಗಳಲ್ಲಿ ವಿವೃತವಾಗಿರುವ ವಾದವು ಕರ್ಮಬ್ರಹ್ಮವಾದಗಳನ್ನು ಅವಲಂಬಿಸಿಯೇ ಜರುಗುತ್ತದೆ. ಮಂಡನನು ವೇದಾಂತಪ್ರಾಮಾಣ್ಯವನ್ನು ಒಪ್ಪಲೇ ಇಲ್ಲ. (2) ಗುರುವಂಶಕಾವ್ಯ, ವ್ಯಾಸಾಚಲೀಯ– ಇವೆರಡರಲ್ಲಿಯೂ ಮಂಡನವಿಶ್ವರೂಪರನ್ನು ಬೇರೆಬೇರೆಯ ವ್ಯಕ್ತಿಗಳೆಂದೇ ಭಾವಿಸಲಾಗಿದೆ; ವಿಶ್ವರೂಪನನ್ನು ಮಂಡನನೆಂದು ಕರೆದಿಲ್ಲ. (3) ಮಂಡನನೆಂಬುವು ಬರಿಯ ಬಿರುದು ಎಂದು ಭಾವಿಸುವದಕ್ಕೂ ಬರುವದಿಲ್ಲ. ಏಕೆಂದರೆ ಹಾಗಿದ್ದರೆ ಮಂಡನಮಿಶ್ರನು ತನ್ನ ಗ್ರಂಥಗಳಲ್ಲಿ 'ಆಚಾರ್ಯಮಂಡನ', 'ಮಂಡನಮಿಶ್ರ' ಎಂದು

ಮುಂತಾಗಿ ಮಂಡನನಾಮಮಾತ್ರದಿಂದ ತನ್ನನ್ನು ಕರೆಸುಕೊಳ್ಳುತ್ತಿರಲಿಲ್ಲ. (4) ಮಂಡನಸುರೇಶ್ವರರ ಗ್ರಂಥಗಳಲ್ಲಿ ವಾಕ್ಯಯುಕ್ತಿಗಳ ಸಾಮ್ಯವಿದೆ ಎಂಬುದು ನಿಜ; ಇಷ್ಟುಮಾತ್ರದಿಂದ ಈ ಇಬ್ಬರೂ ಒಂದೇ ವ್ಯಕ್ತಿ ಎಂದು ನಿರ್ಧರಿಸುವದಿಲ್ಲ. ಶಂಕರಾಚಾರ್ಯರೇ ಮುಂತಾದ ಆದ್ವೈತಿಗಳು ತಮಗೆ ಸಂಮತವಾದ ಪಕ್ಷಾಂತರಗಳ ಆದ್ವೈತಪ್ರಕ್ರಿಯೆಗಳನ್ನು ಒಪ್ಪಿ ಉಪಯೋಗಿಸಿಕೊಳ್ಳುತ್ತಲೇಬಂದಿರುತ್ತಾರೆ. ಉದಾಹರಣೆಗೆ ಮಂಡನಮಿಶ್ರನುಕೂಡ 'ಅನಾದಿರಪ್ಯಯೋಜನಾ ಅವಿದ್ಯಾ' ಎಂಬ ಅವಿದ್ಯೋಪಾದಾನಭೇದವಾದಿಗಳ ಮತವನ್ನು ತಾನೂ (ಬ್ರ. ಸಿ. ಪು. 10) ಒಪ್ಪಿಕೊಂಡಿದಾನೆ; ಪ್ರಪಂಚಸ್ಯನಿಲಯವಾದಿಗಳ ಮತವನ್ನು (ಬ್ರ. ಸಿ. ಪು. 157) ಸ್ವಲ್ಪಮಟ್ಟಿಗೆ ಮಾರ್ಪಡಿಸಿ ಉಪಯೋಗಿಸಿಕೊಂಡಿರುತ್ತಾನೆ. (5) ಸುರೇಶ್ವರರು ಮಂಡನನಿಂದ ತೆಗೆದುಕೊಂಡಿರುವ ಯುಕ್ತಿಗಳು ಇಬ್ಬರಿಗೂ ಒಪ್ಪಾಗಿರುವವುಗಳಾಗಿರುವವು; ಅವನ್ನೇ ಈ ಇಬ್ಬರಿಗಿಂತಲೂ ಹಿಂದಿನ ಯಾರಾದರೂ ಆದ್ವೈತಿಗಳು ಉಲ್ಲೇಖಿಸಿದ್ದರೋ ಅಥವಾ ಮಂಡನನೇ ಹೊಸದಾಗಿ ಅವನ್ನು ತೆಗೆದನೋ ಈಗ ನಿರ್ಧರಿಸುವದಕ್ಕೆ ಆಗುವಹಾಗಿಲ್ಲ. ಮಂಡನಮಿಶ್ರನ ಬ್ರಹ್ಮಸಿದ್ಧಿಯಲ್ಲಿ ಕಾಣುವ ಭೇದನಿರಾಸಕಯುಕ್ತಿಗಳನ್ನು ಸುರೇಶ್ವರರೂ ಈಚಿನ ವೇದಾಂತಿಗಳೂ ತಮ್ಮದೇ ಎಂಬಂತೆ ಉಪಯೋಗಿಸಿಕೊಳ್ಳುತ್ತಲೇ ಬಂದಿರುತ್ತಾರೆ; ಮಂಡನನ ಸಮುಚ್ಚಯವಾದದ ಯುಕ್ತಿಗಳನ್ನು ಖಂಡಿಸುತ್ತಲೂ ಬಂದಿರುತ್ತಾರೆ. ಇದನ್ನು ನೋಡಿದರೆ ಬೇರೆಬೇರೆಯ ಪಂಗಡದ ಆದ್ವೈತಿಗಳು ತಮ್ಮತಮ್ಮ ಪ್ರಕ್ರಿಯೆಯ ವಿಶೇಷಗಳನ್ನು ಎತ್ತಿತೋರಿಸುತ್ತಲೂ ಸಮಾನವಾದ ಆಭ್ಯುಪಗಮಗಳ ವಿಷಯದಲ್ಲಿ ಒಬ್ಬರನ್ನೊಬ್ಬರು ಅನುಮೋದಿಸುತ್ತಲೂ ಬಂದಿರುತ್ತಾರೆಂದು ಹೇಳಬೇಕಾಗುತ್ತದೆ. ಇಷ್ಟುಮಾತ್ರದಿಂದ ಗ್ರಂಥಕರ್ತೃತ್ವಕ್ಕೆ ಯಾವ ಬೆಂಬಲವೂ ಬರುವಹಾಗಿಲ್ಲ. ಕುಪ್ಪುಸ್ವಾಮಿಶಾಸ್ತ್ರಿಗಳು ಕಲ್ಪಿಸಿರುವ ಕಾಲಾನುಕ್ರಮಣಿಕೆಯು ಸರ್ವಸಂಮತವಾಗದಿದ್ದರೂ ಈ ಯುಕ್ತಿಗೆ ಎರಡಿಲ್ಲ. (6) ಆನಂತಾನಂದಗಿರಿಯ ಶಂಕರವಿಜಯವು ಸರ್ವಪ್ರಾಚೀನವೆಂದು ಒಪ್ಪುವದಕ್ಕೆ ಆಡ್ಡಿಗಳಿವೆ. ಆ ಗ್ರಂಥದಲ್ಲಿ ಪಾಠಾಂತರಗಳಿರುವದನ್ನೂ ಅದರಲ್ಲಿ ಆಗಾಗ್ಗೆ ತಮ್ಮ ತಮ್ಮ ಪಕ್ಷಕ್ಕೆ ಬೇಕಾದಂತೆ ವಿಷಯಗಳನ್ನು ಸೇರಿಸಿ ತೆಗೆಯುವ ವಾಡಿಕೆಯಿದೆ ಎಂಬುದನ್ನೂ ನಾವು ಆಗಲೆ ತೋರಿಸಿರುತ್ತೇವೆ. ಇದಲ್ಲದೆ ನಮ್ಮಲ್ಲಿರುವ ತೆಲುಗು ಪುಸ್ತಕದಲ್ಲಿ ಶಂಕರಾಚಾರ್ಯರು ಪದ್ಮಪಾದ, ಸುರೇಶ್ವರ–ಮುಂತಾದವರೊಡನೆ ಮಂಡನಮಿಶ್ರನ ಮನೆಗೆ ಹೋದರೆಂದು ಬರೆದಿದೆ (ಪದ್ಮಪಾದಸುರೇಶ್ವರಾದಿ[1] ಶಿಷ್ಯಕೃತಕರತಾಲ್ಯೈಃ, ಪ್ರ. ಶಂ. ವಿ. ೨೧೨) ! ಅದನ್ನು ಒಪ್ಪಿದರೆ ಮಂಡನನು ಸುರೇಶ್ವರಾಚಾರ್ಯರಿಗಿಂತ ಭಿನ್ನನೆಂದೇ ಆಗುವದಲ್ಲ ! ಇನ್ನೊಂದು ಆನಂದ

1. ದೇ. ಪಾಠದಲ್ಲಿ 'ಪದ್ಮಪಾದಾದಿ' ಎಂದಿಷ್ಟೇ ಇದೆ; ತೆ. ಪಾಠದ 'ತತಃ' ಇಲ್ಲ; 'ಢಕ್ಕಾಕಾಹಲಧ್ವನಿಭಿಃ' ಎಂಬುದರ ಬದಲು ಢಕ್ಕಾಶಙ್ಖತಾಲಧ್ವನಿಭಿಃ' ಎಂದು ಇದೆ.

ಆನಂದಗಿರೀಯದ ಕೈಬರಹದ ಪ್ರತಿಯು ಕುಂಭಕೋಣಮಠದಲ್ಲಿದೆಯೆಂದೂ ಆದ ರಿಂದ ಮಾಧವಶಂಕರವಿಜಯದ ಡಿಣ್ಡಿಮವ್ಯಾಖ್ಯಾನಕಾರನು ಅನೇಕ ಶ್ಲೋಕ ಗಳನ್ನು ಉದಾಹರಿಸಿಕೊಂಡಿರುತ್ತಾನೆಂದೂ ಕೆಲವರ ವಾದವಿದೆ. (NVSK. Appendix) (7) ಸ್ವಾಜೀವನಶಂಕರವಿಜಯ, ಬೃಹಚ್ಛಂಕರವಿಜಯ –ಮುಂತಾದವುಗಳನ್ನು ಆತ್ಮಬೋಧರು ಸುಷ್ಠುವಾಗ್ರಂಥದಲ್ಲಿ ಉಲ್ಲೇಖಿಸಿರು ತ್ತಾರೆ. ಅವುಗಳಲ್ಲಿಯೂ ಈ ಮುಂಡನವಿಜಯದ ಪ್ರಸ್ತಾಪವು ಇರುವ ಸಂಭವವೂ ಇದೆ. ಗುರುರತ್ನಮಾಲಿಕೆಯಲ್ಲಿಯೇ 'ಪಟುಮುಣ್ಡನಮಿಶ್ರಖಣ್ಡನಾರ್ಥಂ ಪ್ರವಿಶನ್ಪದ್ಮವನಂ ನವಂ ಜಯಾರ್ಥಮ್| ತಮಧೃಷ್ಯಗಿರಂ ವಿಧೃಷ್ಯ ವಾದ್ಯೈರ್ಯ ತಿಮಾಧಾತ್ ಸ ಚ ಪಾತು ಮಾಂ ಪ್ರಮೋದೀಃ ||' (ಗು.ರ. ೨೨) ಎಂಬಲ್ಲಿ ಮುಂಡನಮಿಶ್ರನನ್ನು ಪದ್ಮವನವೆಂಬ ಅಗ್ರಹಾರದಲ್ಲಿ[1] ಆಚಾರ್ಯರು ಜಯಿಸಿದ ರೆಂದಿದೆ. ಹೀಗಿರುವದರಿಂದ ಆಚಾರ್ಯರಿಂದೀಚೆಗೆ ಎಷ್ಟೋ ಕಾಲದ ಮೇಲೆ ರಚಿತವಾಗಿರುವ ಈ ಶಂಕರವಿಜಯಗಳ ಗ್ರಂಥಗಳಲ್ಲಿ ಆವರವರ ಕವಿಗೆ ಬಿದ್ದಿದ್ದ ಕಥೆಗಳನ್ನೇ ಅವರವರು ಬರೆದಿದಾರೆಂದು ಕಲ್ಪಿಸುವದೇ ಯುಕ್ತತರವಾಗುತ್ತದೆ. (8) ಹೇಗೇ ಆಗಲಿ, ಕುಪ್ಪುಸ್ವಾಮಿಶಾಸ್ತ್ರಿಗಳು ಹೇಳಿರುವಂತೆ ಶಂಕರಭಾಷ್ಯದ ಸಮನ್ವಯಾಧಿಕರಣಭಾಷ್ಯದವಾಕ್ಯಗಳನ್ನು ಮುಂಡನನು ಉದಾಹರಿಸಿರುವದರಿಂದ ಅವನ ಬ್ರಹ್ಮಸಿದ್ಧಿಯು ಆ ಭಾಷ್ಯವಾದ ಬಳಿಕವೇ ಬರೆದದ್ದೆಂದು ಒಪ್ಪಬೇಕಾಗತ್ತದೆ ಇದು ನಿಜವಾದರೆ ಆಚಾರ್ಯರು ಒಪ್ಪಿರುವ ವೇದಾಂತಪ್ರಕ್ರಿಯೆಗಿಂತ ವಿಲಕ್ಷಣವಾದ ತನ್ನ ಅಸಾಧಾರಣಪ್ರಕ್ರಿಯೆಯನ್ನು ಮುಂಡಿಸುವದಕ್ಕೆಂದೇ ಆ ಗ್ರಂಥವನ್ನು ಅವನುಬರೆದನೆಂದುಹೇಳಬೇಕಾಗುತ್ತದೆ.(9)ಮುಂಡನನು ವಿಭ್ರಮವಿವೇಕದಲ್ಲಾ ಗಲಿ ಬ್ರಹ್ಮಸಿದ್ಧಿಯಲ್ಲಾಗಲಿ ಆಚಾರ್ಯರ ಅಧ್ಯಾಸವಾದವನ್ನು ಪರಾಮರ್ಶಿಸಿರು ವದಿಲ್ಲ ; ವಿಪರೀತಖ್ಯಾತಿಯನ್ನು ಸ್ಥಾಪಿಸುವಷ್ಟರಿಂದಲೇ ಸಂತುಷ್ಟನಾಗಿದಾನೆ. ಅವಿದ್ಯೆಯು ಸತ್ತೂ ಅಲ್ಲ, ಅಸತ್ತೂ ಅಲ್ಲ; ಸದಸದ್ವಿಲಕ್ಷಣವಾದ್ದರಿಂದ ಅನಿರ್ವಚನೀಯ– ಎಂಬ ಹೊಸ ವಾದವನ್ನು ಹೊರಕ್ಕೆ ತಂದಿರುತ್ತಾನೆ. ಆ ವಾದವನ್ನು ಈಗಲೂ ವ್ಯಾಖ್ಯಾನಪ್ರಸ್ಥಾನದ ಆದ್ವೈತಿಗಳು ಬಳಸುತ್ತಲೇ ಇರುತ್ತಾರೆ. ವಿಧಿವಿವೇಕಭಾವನಾವಿವೇಕಗಳೆಂಬ ಗ್ರಂಥಗಳಲ್ಲಿ ಮಿಮಾಂಸಕರ ಮತವನ್ನು ಪರಿಷ್ಕರಿಸಿ ವೇದಾಂತಕ್ಕೆ ಹೊಂದಿಸಿರುತ್ತಾನೆ; ಆ ಗ್ರಂಥಗಳನ್ನು ಬ್ರಹ್ಮಸಿದ್ಧಿಯಲ್ಲಿ ಪರಾಮರ್ಶಿಸಿಯೂ ಇರುತ್ತಾನೆ. ಸುರೇಶ್ವರಾಚಾರ್ಯರು ಆ ಗ್ರಂಥಗಳಲ್ಲಿ ತಮಗೆ ಒಪ್ಪಾದಷ್ಟು ಭಾಗವನ್ನು ಇಟ್ಟುಕೊಂಡರೂ ಮುಂಡನನು ವಿವೇಚಿಸದೆ ಇರುವ ಹೊಸ ವಾದಗಳನ್ನು ವಾರ್ತಿಕಗಳಲ್ಲಿ ಪ್ರತಿಪಾದಿಸಿರುತ್ತಾರೆ. ಮುಂಡನ ಪಕ್ಷಕ್ಕೆ ಸರಿಹೋಲುವ ಅನೇಕ ವಾದಗಳನ್ನು ಖಂಡಿಸಿಯೂ ಇರುತ್ತಾರೆ.

1. ಇದು ಆತ್ಮಬೋಧರ ವ್ಯಾಖ್ಯಾನ ; ಮುಂದೆ ಈ ವಿಷಯವನ್ನು ಮತ್ತೆ ಚರ್ಚಿಸುವೆವು.

ಈ ಎಲ್ಲಾ ಕಾರಣಗಳಿಂದ ಮಂಡನನು ಭಟ್ಟರ ಶಿಷ್ಯನೆಂದಾಗಲಿ, ಅವನನ್ನು ವಾದದಲ್ಲಿ ಜಯಿಸಿ ಅವನಿಗೆ ಸಂನ್ಯಾಸವನ್ನು ಕೊಟ್ಟು ಸುರೇಶ್ವರಾಚಾರ್ಯರೆಂಬ ಹೆಸರನ್ನು ಆಚಾರ್ಯರು ಕೊಟ್ಟರೆಂಬುದು ಐತಿಹಾಸಿಕಘಟನೆ ಎಂದಾಗಲಿ, ನಂಬುವದು ಕಷ್ಟವಾಗಿರುತ್ತದೆ.

ಮಂಡನನೇ ಉಂಬೇಕನೆ ?

೯೭. ಈವರೆಗೆ ಮಾಧವೀಯದಲ್ಲಿರುವ ಮಂಡನ, ನಿಶ್ವರೂಪ ಎಂಬ ಹೆಸರುಗಳನ್ನು ಕುರಿತು ಚರ್ಚಿಸಿದ್ದಾಯಿತು. ಈಗ ಮಾಧವನು ಉಲ್ಲೇಖಿಸಿರುವ ಉಂಬೇಕನೆಂಬ ಮತ್ತೊಂದು ಹೆಸರನ್ನು ಕುರಿತು ವಿವೇಚನೆಮಾಡಬೇಕಾಗಿದೆ. ಪುರಾತತ್ತ್ವಶೋಧಕರು ಹೇಳುತ್ತಿರುವದೇನೆಂದರೆ ಭವಭೂತಿಯು ಪ್ರಖ್ಯಾತ ಮೀಮಾಂಸಕರಾದ ಕುಮಾರಿಲಭಟ್ಟರ ಶಿಷ್ಯನು ; ಅವನೇ ಉಂಬೇಕನು. ಭವಭೂತಿಯ ಮಾಲತೀಮಾಧವದ ಪ್ರಾಚೀನಪ್ರತಿಯೊಂದರಲ್ಲಿ[1] ಮೂರನೆಯ ಅಂಕದ ಕೊನೆಯ ಸಮಾಪ್ತಿವಾಕ್ಯದಲ್ಲಿ 'ಕುಮಾರಿಲಶಿಷ್ಯ(ಭವಭೂತಿ)ವಿರಚಿತ'– ಎಂದಿದೆಯಂತೆ ; ಅದರ ಆರನೆಯ ಅಂಕದ ಕೊನೆಯ ವಾಕ್ಯದಲ್ಲಿ 'ಕುಮಾರಿಲರ ಪ್ರಸಾದದಿಂದ ವಾಗ್ವೈಭವವನ್ನು ಹೊಂದಿದ ಉಮ್ಬೇಕಾಚಾರ್ಯಕೃತಿ' ಎಂದಿದೆಯಂತೆ– (ಬಲ.ಶಂ.ಪು. ೬೫,೬೬) ಉಂಬೇಕನ ಹೆಸರು ಪ್ರಾಚೀನದರ್ಶನಗ್ರಂಥಗಳಲ್ಲಿ ಕಂಡುಬರುತ್ತದೆ. ಚಿತ್ಸುಖಾಚಾರ್ಯರ ತತ್ತ್ವಪ್ರದೀಪಿಕಾಗ್ರಂಥಕ್ಕೆ ನಯನಪ್ರಸಾದಿನೀ ಎಂಬ ವ್ಯಾಖ್ಯಾನವನ್ನು ಬರೆದಿರುವ ಪ್ರತ್ಯಗ್ರೂಪಭಗವಾನ್ ಎಂಬವರು ಉಂಬೇಕನೆಂದರೆ ಭವಭೂತಿಯೇ ಎಂದು(ಪ್ರ ೨೬೫) ಬರೆದಿರುತ್ತಾರೆ. ಈ ಕಾರಣಗಳಿಂದ ಉಂಬೇಕನೆಂದರೆ ಭವಭೂತಿಯೇ ಎಂದು ಈಗಿನ ವಿಮರ್ಶಕರ ಅಭಿಪ್ರಾಯ. ಈ ತತ್ತ್ವಾನ್ವೇಷಣಕ್ರಮವು ನಿರಾಕ್ಷೇಪವಾದದ್ದೆಂದು ನಿರ್ಧರಿಸುವದಕ್ಕಾಗುವಂತಿಲ್ಲ; ಏಕೆಂದರೆ ಈ ಅನ್ವೇಷಕರು ಉದಾಹರಿಸಿರುವ ಪರಾಮರ್ಶಕ ಗ್ರಂಥಗಳ ಕರ್ತರಾದರೆ ಭಟ್ಟಪಾದರ ಸಮಕಾಲಿಕರಲ್ಲವಾದ್ದರಿಂದ ಆವರೂ ತಮಗೆ ತಿಳಿದಿದ್ದ ಜನ ಶ್ರುತಿಯನ್ನೇ ನಂಬಿ ಬರೆದಿರಬಹುದಾಗಿದೆ. ಇದು ಹೇಗೇ ಆದರೂ ಮಾಧವೀಯಶಂಕರವಿಜಯದಲ್ಲಿರುವಂತೆ ಮಂಡನಮಿಶ್ರನಿಗೆ ಉಂಬೇಕನೆಂಬ ಹೆಸರಿತ್ತೆಂದು ತಿಳಿಯುವದಕ್ಕೆ ಈ ಭವಭೂತಿಯ ವೃತ್ತಾಂತವೂ ಆಧಾರವಾಗಲಾರದೆಂಬುದಂತೂ ನಿಶ್ಚಯ.

ಹೀಗೆ ಈವರೆಗೆ ಮಾಡಿರುವ ವಿಚಾರಮಥನದಿಂದ ಭಟ್ಟರನ್ನು ಶಂಕರರು ಕಂಡದ್ದು, ಅವರು ತಾವು ವಾರ್ತಿಕವನ್ನು ಮಾಡಬೇಕಾಗಿತ್ತೆಂಬ ಅಭಿಪ್ರಾಯ

1. ಈ ಪ್ರತಿಯು 'ಶ್ರೀಶಂಕರಪಾಂಡುರಂಗಪಂಡಿತ'ರಿಗೆ ದೊರೆಯಿತೆಂದು ಬಲವೇವ ಉಪಾಧ್ಯಾಯರು ಬರೆದಿದಾರೆ ; ಆ ಗ್ರಂಥವನ್ನೇ ಶೋಧಿಸಿ ನೋಡಿದಹೊರತು ಈ ವಿಷಯಕ್ಕೆ ಹೆಚ್ಚಿನ ಅಭಿಪ್ರಾಯವನ್ನು ಕೊಡುವದಕ್ಕಾಗುವಂತಿಲ್ಲ.

ವನ್ನು ಸೂಚಿಸಿದ್ದು, ಭಟ್ಟರು ಭಾಷ್ಯವನ್ನು ಮೆಚ್ಚಿ ಪ್ರಾಯಶ್ಚಿತ್ತವನ್ನು ಕೈಕೊಳ್ಳದೆ ಇದ್ದಿದ್ದರೆ ವಾರ್ತಿಕವನ್ನು ಬರೆಯುತ್ತಿದ್ದೆನೆಂದು ಹೇಳಿದ್ದು, ತಮ್ಮ ಶಿಷ್ಯನಲ್ಲಿಗೆ ಹೋಗಿ ವಾರ್ತಿಕವನ್ನು ಬರೆಯಿಸಿಕೊಳ್ಳಿರೆಂದು ಸೂಚಿಸಿದ್ದು–ಇವೆಲ್ಲ ಸಂದೇಹದ ಕುಕ್ಷಿಯಲ್ಲಿಯೇ ಇರುತ್ತವೆ ಎಂದಾಯಿತು. ಸುರೇಶ್ವರಾಚಾರ್ಯರು ಬರೆದಿರುವ ವೇದಾಂತವಾರ್ತಿಕಗಳು ಪೂರ್ವಮೀಮಾಂಸಾಶಾಸ್ತ್ರಕ್ಕೆ ಭಟ್ಟಪಾದರು ಬರೆದಿರುವ ವಾರ್ತಿಕಗಳಿಗೇನೂ ಕಡಿಮೆಯಿಲ್ಲ ಎಂಬ ಭಾವವನ್ನು ಮಂಡಿಸುವದೆ ಶಂಕರವಿಜಯಕಾರರ ಅಭಿಪ್ರಾಯವೆಂದು ಕಾಣಿಸುತ್ತಿದೆ. ಆಷ್ಟೇ ಆದರೆ ಆ ಅಭಿಪ್ರಾಯವನ್ನು ನಾವೆಲ್ಲರೂ ಅನುಮೋದಿಸಬಹುದಾಗಿದೆ.

ಮಂಡನಮಿಶ್ರನಿದ್ದ ಸ್ಥಲದ ವಿಷಯಕ್ಕೆ ತರ್ಕಜಾಲ

೯೮. ಮಂಡನನ ಸ್ಥಲವು ಯಾವದು ?– ಎಂಬುದೂ ವಾದಗ್ರಸ್ತವಾಗಿಯೇ ಇದೆ. ಮಾಧವಕವಿಯು **ಮಾಹಿಷ್ಮತಿಗೆ ಆಚಾರ್ಯರು ಹೋದರೆಂದು** ಬರೆದ ಪದ್ಯವೇ ರೂಪಾಂತರದಲ್ಲಿ ವ್ಯಾಸಾಚಲೀಯದಲ್ಲಿದ್ದರೂ ಮಂಡನನು ಮಗಧದೇಶದಲ್ಲಿರುವಂತೆ ಭಟ್ಟರು ಹೇಳಿದ್ದಾಗಿ ಆಲ್ಲಿ ವರ್ಣಿಸಿದೆ ಎಂದು (ಪು ೧೩೭) ತಿಳಿಸಿರುತ್ತೇವೆ.

ಚಿದ್ವಿಲಾಸ, ಆನಂತಾನಂದಗಿರಿ–ಇಬ್ಬರೂ **ಬಿಜ್ಜಳಬಿಡು** ಎಂಬ ಸ್ಥಲದಲ್ಲಿ ಆಚಾರ್ಯರು ಮಂಡನನನ್ನು ಕಂಡರು ಎಂದು ಬರೆದಿದಾರೆ. ಚಿದ್ವಿಲಾಸೀಯದ ೧೭ನೆಯ ಅಧ್ಯಾಯದಲ್ಲಿ ರುದ್ಧನಗರದಿಂದ ಹೊರಟು ವಿದ್ವಾಂಸರಿಗೆ ಆಧಾರವಾದ ಕಾಶ್ಮೀರಕ್ಕೆ ಬಂದರು (ಕಾಶ್ಮೀರಂ ವಿದ್ವದಾಧಾರಂ ಶುಭಕರಮುವಾಪ ಸ॥೧೭–೨) ಎಂದು ಹೇಳಿ ಆ ದೇಶವನ್ನು ಕೆಲವು ಶ್ಲೋಕಗಳಿಂದ ವರ್ಣಿಸಿದ ಬಳಿಕ (ಸಮುಲ್ಲಸಲ್ಲತಾಲಾಸ್ಯವಿದ್ಯಾಭ್ಯಾಸೋಚಿತೈಶ್ಶ್ರಿತಂ | ವಿಜ್ವಲದ್ಬಿನ್ದುರಾಖ್ಯಾತಂ ಪುರಮಾಪ ಸ ದೇಶಿಕಃ॥ ೧೭–೧೫ ಎಂದು) **ವಿಜ್ವಲದ್ಬಿಂದು** ಎಂಬ ಪಟ್ಟಣಕ್ಕೆ ಬಂದರು ಎಂದಿದೆ. **ಆನಂತಾನಂದಗಿರೀಯದಲ್ಲಿ** ನಮ್ಮಲ್ಲಿರುವ ತೆಲುಗುಪುಸ್ತಕದಲ್ಲಿ 'ಪರಮಗುರುರ್ವಿದ್ಯಾನಿಲಯಮಿತಿ ಪ್ರಸಿದ್ಧಪುರಂ ಪ್ರಾಪ್ತಃ' (ಪರಮಗುರುಗಳು ವಿದ್ಯಾನಿಲಯವೆಂಬ ಪ್ರಸಿದ್ಧವಾದ ಪುರವನ್ನು ಸೇರಿದರು) ಎಂದಿಷ್ಟೇ ಇದೆ. **ಸೋಮನಾಥಯ್ಯನವರು** : "ಕುಬೇರದಿಜ್ಮಾರ್ಗಮವಲಮ್ಬ್ಯ ಹಸ್ತಿನಾಪುರಾದಾಗ್ನೇಯಭಾಗಸ್ಥಂ ವಿದ್ಯಾನಿಲಯಮಿತಿ ಪ್ರಸಿದ್ಧಂ ತದ್ದೇಶವಾಸಿನಸ್ತು ಬಿಜ್ಜಳಬಿಡುರಿತಿ ವದನ್ತಿ–ತತ್ಪುರಂ ಪ್ರಾಪುಃ॥" (ಸೋ. ಶಂ. ಪು. ೯೮) ಉತ್ತರದಿಕ್ಕಿನ ಮಾರ್ಗವನ್ನಾಶ್ರಯಿಸಿ ಹಸ್ತಿನಾಪುರದ ಆಗ್ನೇಯದಲ್ಲಿರುವ ವಿದ್ಯಾನಿಲಯವೆಂದು ಪ್ರಸಿದ್ಧವಾದ–ಆ ದೇಶವಾಸಿಗಳಾದರೋ ಬಿಜ್ಜಳಬಿಡು ಎಂದು ಕರೆಯುತ್ತಾರೆ–ಆ ಪುರವನ್ನು ಸೇರಿದರು–ಎಂದು ವಾಕ್ಯದ ಸರಣಿಯಿದೆ ಎಂದು

ಬರೆದಿದಾರೆ. ಬಲದೇವ ಉಪಾಧ್ಯಾಯರು ನೋಡಿರುವ ಆನಂದಗಿರೀಯದ ಪುಟ ೧೬೨ರಲ್ಲಿ 'ವಿಜ್ವಲಬಿಂದು' ಎಂದಿದೆ (ಬಲ. ಶಂ. ೭೨)ಯಂತೆ !1 (ಆನಂದ ಗಿರೀಯವು ಗ್ರಂಥಪ್ರಕಾಶಕರ ಕೈವಾಡದಿಂದ ನರಳಿದೆ ಎಂಬುದಕ್ಕೆ ಇದೂ ಒಂದು ಉದಾಹರಣೆ). ಬಿಜ್ಜಳಬಿಡು ಎಂದೇ ಇರಲಿ, ಸಂಸ್ಕೃತರೂಪಕ್ಕೆ ತಿರುಗಿಸಿದ ವಿಜ್ವಲಬ್ಬಿಂಮು ಎಂಬ ರೂಪವ ಹೆಸರೇ ಇರಲಿ, ಅದು ಮಾಹೀಷ್ಮತೀನಗರವಂತೂ ಅಲ್ಲ; ಅದು ಕಾಶ್ಮೀರದಲ್ಲಿತ್ತೆಂಮು ಚಿವ್ವಿಲಾಸ, ಹಸ್ತಿನಾಪುರಕ್ಕೆ ಆಗ್ನೇಯದಲ್ಲಿ ಇತ್ತೆಂಮು ಆನಂದಗಿರಿ– ಹೀಗೆ ಹೇಳುತ್ತಿರುವದರಿಂದ ಅದನ್ನು ಪತ್ತೆಮಾಡುವ ದು ಆಗುವಂತಿಲ್ಲ. **'ಮಣಿಮಂಜರೀಭೇದಿನಿ'** (ಸ. ೩–ಶ್ಲೋ. ೯)ರಲ್ಲಿಯೂ **ವಿದ್ಯಾಲಯ**ವೆಂದು ಹೇಳಿದೆಯಂತೆ (ಸೋ. ಶಂ. ಪು. ೯೯) .2 'ವಿಜ್ಜಡಬಿಡು' ಎಂಬಲ್ಲಿ ಗಣಿತಜ್ಯೋತಿಷಶಾಸ್ತ್ರಜ್ಞನಾದ ಭಾಸ್ಕರಾಚಾರ್ಯನು ಇದ್ದನೆಂದು ಸಿದ್ಧಾಂತಶಿರೋಮಣಿಯಲ್ಲಿರುವ—

ಆಸೀತ್ಸಹ್ಯಕುಲಾಚಲಾಶ್ರಿತಪುರೇ ತ್ರೈವಿದ್ಯವಿದ ಜ್ಜನೇ ।
ನಾನಾಸಜ್ಜನಧಾನ್ನಿ ವಿಜ್ಜಡವಿದೇ ಶಾಣ್ಡಿಲ್ಯಗೋತ್ರೋ ದ್ವಿಜಃ ॥

ಎಂಬ ಶ್ಲೋಕದಿಂದ (ಸೋ. ಶಂ. ೯೯) ತಿಳಿಯಬರುತ್ತದೆ. 'ಬಿಜ್ಜಳಬಿಡು' ಎಂಬುದು ಕನ್ನಡದ ಹೆಸರಾದರೆ ಬಿಜ್ಜಳಬೀಡು ಎಂದಾಗಿರಬೇಕು. ಆದರೆ ಆ ಸ್ಥಳವುಕೂಡ ಎಲ್ಲಿತ್ತೆಂಬುದು ಪತ್ತೆಯಿಲ್ಲವ್ದರಿಂದ ಅದರ ವಿಷಯದ ಚರ್ಚೆಯನ್ನು ಮುಂದುವರಿಸುವದು ವ್ಯರ್ಥವಾಗಿದೆ.

ಮಾಧವಾಚಾರ್ಯನು ವರ್ಣಿಸಿರುವ ಮಾಹೀಷ್ಮತಿಯು ಮಿಶ್ರನೆಂಬ ಉಪಾಧಿಯುಳ್ಳ ಮಂಡನಮಿಶ್ರನಿರುವದಕ್ಕೆ ತಕ್ಕದ್ದೇನೋ ಹೌದು. ಆವೂರನ್ನು ಈಗ ನರ್ಮದಾತೀರದಲ್ಲಿರುವ 'ಮಾಂಧಾತ'ವೆಂಬ ಹೆಸರಿನ ನಗರಿಯೆಂದು ಹೇಳ್ಲತ್ತಾರೆ. ಮಾಹೀಷ್ಮತೀ ಎಂಬ ಒಂದು ಹೊಳೆಯೂ ನರ್ಮದೆಯೊಡನೆ ಇಲ್ಲಿ ಸಂಗಮವಾಗುತ್ತದೆ. ಆ ಸಂಗಮಸ್ಥಾನದಲ್ಲಿ ಮಂಡನಮಿಶ್ರನ ದೊಡ್ಡ ಉಪ್ಪರಿಗೆ ಮನೆಯಿತ್ತು ; ಇದರ ಅವಶೇಷದ ಚೂರುಗಳು ಈಗಲೂ ಅಲ್ಲಿ ಸಿಕ್ಕುತ್ತವೆ. ಅಲ್ಲಿ ಭೂಮಿಯನ್ನು ಅಗೆದರೆ ಬೂದಿಮಣ್ಣು ಸಿಕ್ಕುತ್ತದೆಯಾದ್ದರಿಂದ ಅಲ್ಲಿ ಯಜ್ಞಯಾಗಾದಿಗಳು ಆಗಿರಬಹುದು. ಮಂಡನಮಿಶ್ರನ ಜನ್ಮವು ಮಿಥಿಲೆಯೇ ಆಗಿದ್ದು ಮಾಹೀಷ್ಮತಿಯು ಪವಿತ್ರಸ್ಥಾನವೆಂಬ ಕಾರಣದಿಂದಲೋ ಅಥವಾ ಯಾವ ನಾದರೂ ರಾಜನ ಆಶ್ರಯ ದೊರೆತದ್ದರಿಂದಲೋ ಅತನು ಅಲ್ಲಿಯೇ ನೆಲಸಿರ ಬಹುದೆಂದು **ಬಲದೇವ ಉಪಾಧ್ಯಾಯರ** ಊಹೆ (ಬಲ. ಶಂ. ೭೨). ಅತನು ಉತ್ತರದೇಶದವನಾಗಿದ್ದು ಬಿಜ್ಜಳಬೀಡು ಎಂಬಲ್ಲಿಗೆ ರಾಜಾಶ್ರಯನಿಮಿತ್ತದಿಂದ ಬಂದಿರಬಹುದೆಂದೂ ಊಹಿಸಬಹುದೆಂದು **ಸೋಮನಾಥಯ್ಯ** (ಸೋ.ಶಂ.ಪು.

1. ದೇ. ಪುಸ್ತಕದಲ್ಲಿ 'ವಿಜಿಲಬಿನ್ದುರಿತಿ ವದನ್ತಿ' ಎಂದೇ ಇದೆ.

2. ಈಗ ನಮಗೆ ಪುಸ್ತಕವು ಸಿಕ್ಕಿದೆ: 'ವಿದ್ಯಾನಿಲಯಂ ನಾಮ ಪುರಂ ವ್ರಜೇದೇ' (ಪು. ೨೬) ಎಂದು ಮೂಲಪಾಠವಿದೆ.

೧೦೧)ನವರ ತರ್ಕ. ತರ್ಕಸಾಮ್ರಾಜ್ಯದಲ್ಲಿ ಯಾವ ಕಲ್ಪನೆಗೆತಾನೆ ಪಟ್ಟಾಭಿಷೇಕವಾಗಲಾರದು ? ಇಷ್ಟೆಲ್ಲಾ ಆದರೂ ಮಂಡನಮಿಶ್ರನೊಡನೆ ಆಚಾರ್ಯರಿಗೆ ವಾದವಾಯಿತೆ?– ಎಂಬುದೇ ವಾದಗ್ರಸ್ತವಾಗಿರುವದರಿಂದ ಮಂಡನಮಿಶ್ರನ ಮಿಶ್ರೋಪಾಧಿಯಿಂದ ಮಾಡಿದ ತರ್ಕದಿಂದಾಗಲಿ ಮಾಹೀಷ್ಮತಿಯ ಅಥವಾ ಬಿಜ್ಜಳಬೀಡಿನ ಸ್ಥಾನನಿರ್ಣಯಿಪ್ರಯತ್ನದಿಂದಾಗಲಿ, ಐತಿಹಾಸಿಕರಿಗೆ ಆಗ ಬೇಕಾದದ್ದಾವರೂ ಏನಿದೆ ?

ಮಂಡನನ ಭಾರ್ಯೆ ಯಾರು ?

೯೯. ಕಲ್ಪನಾವಲ್ಲಿಯ ಇನ್ನೊಂದು ಹಬ್ಬುಗೆಯನ್ನು ನೋಡಿದಬಳಿಕ ಕಥೆಯನ್ನು ಮುಂದುವರಿಸಬೇಕಾಗಿದೆ. ಮಂಡನನ ಹೆಂಡತಿಯ ವೃತ್ತಾಂತವೇನು? (೧) **ಮಾಧವೀಯದಲ್ಲಿ** ಆಕೆಯು ಸರಸ್ವತಿಯ ಅವತಾರವೇ ; ಜನರೂ ಆಕೆಯನ್ನು ಸರಸ್ವತಿಯೆಂದೇ ಹೇಳುತ್ತಿದ್ದರು. (ಸರಸ್ವತೀತಿ ಸಾ ಖಲು ವಸ್ತು ವೃತ್ತ್ಯಾಶ್ರಯ ಲೋಕೋಽಪಿ ತಾಂ ವಕ್ತಿ ಸರಸ್ವತೀತಿ ಮಾ. ಶಂ. ೩–೯) ಹಿಂದಕ್ಕೆ ಋಷಿಗಳು ತಮ್ಮತಮ್ಮ ವೇದವನ್ನು ಬ್ರಹ್ಮನಿಂದ ಅಧ್ಯಯನಮಾಡುತ್ತಿರುವಲ್ಲ **ದುರ್ವಾಸರು** ಸ್ವರದಲ್ಲಿ ಎಲ್ಲಿಯೋ ತಪ್ಪಿದ್ದನ್ನು ಕೇಳಿ ನಕ್ಕ ಸರಸ್ವತಿಗೆ 'ಮನುಷ್ಯಳಾಗಿ ಹುಟ್ಟು !' ಎಂದು ಶಪಿಸಿದರು. ಅವರ ಕಾಲಿಗೆ ಬಿದ್ದು ಬಹುವಾಗಿ ಬೇಡಿಕೊಂಡಮೇಲೆ ಮಿಕ್ಕ ಋಷಿಗಳ ಪ್ರಾರ್ಥನೆಯಂತೆ ಮನುಷ್ಯಶರೀರನಾದ ಶಂಕರನ ದರ್ಶನವಾದಾಗ ವಿಶಾಪವಾಗುವದೆಂದು ಅನುಗ್ರಹಿಸಿದರು (ಮಾ.ಶಂ. ೩–೧೦ರಿಂದ ೧೫). ಚಿದ್ವಿಲಾಸೀಯದಂತೆ[1] ಆಕೆಯ ಹೆಸರು **ಸರಸವಾಣಿ**. ಕಥೆಯು ಮಾಧವೀಯದಂತೆಯೇ ಇದೆ. ಶೋಣಾತೀರದಲ್ಲಿದ್ದ ವಿಷ್ಣುಮಿತ್ರನ ಮಗಳೆಂದು ಜಿದ್ವಿಲಾಸ (ಚಿ.ಶಂ.೧೬–೩೭); **ಮಾಧವ** (ಮಾ.ಶಂ.೩–೧೫,೨೬, ೪೯,೫೭), **ವ್ಯಾಸಾಚಲ** (ವ್ಯಾ.೬–೧೪,೨೬,೨೯); **ಗೋವಿಂದಾನಂದ**(ಗೋ. ೫–೩೧)– ಈ ನಾಲ್ವರೂ ಹೇಳುತ್ತಾರೆ. ಆಕೆಯು ಶೋಣದ ದಡದಮೇಲಿದ್ದ ಗ್ರಾಮದಲ್ಲಿ ಬ್ರಾಹ್ಮಣನ ಮಗಳಾಗಿ ಹುಟ್ಟಿ ಮಹಾವಿದ್ಯಾವತಿಯಾಗಿದ್ದಳು. ಮಂಡನನು ಹಿಮಮಿತ್ರ(ಶ್ರ?)ನ ಮಗನೆಂಬುದು ಮಾಧವೀಯದ (ಮಾ. ಶಂ. ೩–೫೭) ಒಂದು ವಿಶೇಷ. ಮಂಡನನು ಭಟ್ಟಪಾದರಲ್ಲಿ ವಿಚಾರಾಂಸವನ್ನು ಕಲಿತುಕೊಂಡು ಪಂಡಿತನಾಗಿ ರಾಜನ ಆಸ್ಥಾನದಲ್ಲಿ ಮರ್ಯಾದೆಯನ್ನು ಹೊಂದಿ

1. 'ಶೋಣಾತೀರೇ' ಎಂಬ ಚಿದ್ವಿಲಾಸೀಯದ ಅಚ್ಚಿನ ಪಾಠವು ಸರಿಯಲ್ಲ ; ಮಾಧವಾದಿಗಳು ಅನುಸರಿಸಿದ 'ಶೋಣ' ಎಂಬುದೇ ಆ ಹೊಳೆಯ ಹೆಸರು. ಏಕೆಂದರೆ ಅದು ನದಿಯಲ್ಲ, ನದ, ಆಕೆಗೆ ಷಡಂಗಸಮೇತವಾದ ವೇದಗಳೂ ಬರುತ್ತಿದ್ದವೆಂದು ಮಾಧವನ ವ್ಯಾಸಾಚಲರಿಬ್ಬರೂ(ಷಡಙ್ಗವೇದಾನ್ ಕಾವ್ಯಾದಿಕಾನ್ ವೇತ್ತಿ ಮಾ. ಶಂ. ೩–೧೬; ವ್ಯಾ. ಶಂ. ೬–೧೫) ಹೇಳುತ್ತಾರೆ. (ಸ್ತ್ರೀಯರಿಗೂ ಆಗ್ಗೆ ವೇದಾಧ್ಯಯನವಿದ್ದಿತೆ ?)

ದ್ದನು (೩–೨೮). ಮಂಡನನೂ ಭಾರತಿಯೂ ಒಬ್ಬರ ವಿದ್ಯಾಗುಣಾದಿಗಳನ್ನೊಬ್ಬರು ಕೇಳಿ ಪರಸ್ಪರದರ್ಶನೋತ್ಸುಕರಾಗಿದ್ದರು ; ಸಮಯಬಂದಾಗ ತಾಯಿತಂದೆಗಳಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಆದರಂತೆ ಇಬ್ಬರಿಗೂ ವಿವಾಹವಾಯಿತು (ಮಾ. ಶಂ. ೩–೧೭ರಿಂದ ೭೭). ಈ ವಿವರವು ವ್ಯಾಸಾಚಲೀಯದಲ್ಲಿಯೂ (ವ್ಯಾ. ಶಂ. ೬–೧೦೨ರಿಂದ ೭೭) ಇದೆ. ಮಂಡನನನ್ನು ವ್ಯಾಸಾಚಲೀಯದಲ್ಲಿ ವಿಶ್ವರೂಪನೆಂದೇ ಕರೆದಿದೆ ; ಮಾಧವೀಯದಲ್ಲಿಯೂ ಆ ಹೆಸರು ಇದ್ದೇಇದೆಯೆಂದು ಆಗಲೆ ಹೇಳಿರುತ್ತೇವೆ. ಆದರೆ ಮಾಧವನು ಉಂಬೇಕನೆಂಬ ಹೆಸರನ್ನು ಅವನಿಗೆ ಕೊಟ್ಟು ಆದರ ಕಾರಣದಿಂದ ಅವನ ಹೆಂಡತಿಯಾದ ಭಾರತಿಗೆ 'ಉಂಬೇ' ಎಂಬ ಹೆಸರೂ ಇತ್ತೆಂದು (ಮಾ. ಶಂ. ೭–೧೧೫) ಅವನು ಬರೆದಿರುವದು ಕಲ್ಪನಾಮಾತ್ರವೆಂದು ಆಗಲೆ (ಪು. ೧೩೬) ಹೇಳಿರುತ್ತೇವೆ. ಆಕೆಯು ಶೋಣತೀರದಲ್ಲಿದ್ದ ವಿಷ್ಣುಮಿತ್ರನ ಮಗಳು ಎಂದು ಮಾಧವ, ವ್ಯಾಸಾಚಲ, ಚಿದ್ವಿಲಾಸ– ಎಲ್ಲರೂ ಬರೆಯುತ್ತಾರೆ ; ಮಧ್ಯದೇಶದಲ್ಲಿಯೇ ಶೋಣ ಮತ್ತು ನರ್ಮದಾನದಿಗಳು ಹರಿಯುವದರಿಂದ ಈ ವಿವಾಹಸಂಬಂಧವೇನೂ ಅಸಂಭಾವಿತವೆನ್ನುವದಕ್ಕಿಲ್ಲ. ಆದರೆ ಮಂಡನನಿಗೂ ಆಚಾರ್ಯರಿಗೂ ನಿಜವಾಗಿ ವಾದವಾಯಿತೆಂದು ಇಟ್ಟುಕೊಂಡೇ ಈ ಕಲ್ಪನೆಯನ್ನು ಒಪ್ಪಬೇಕಾಗಿದೆ.

೯. ಮಂಡನನೊಡನೆ ವಾದ

ಮಂಡನನ ಗೃಹ

೧೦೦. ಶಂಕರಾಚಾರ್ಯರು ಮಾಹಿಷ್ಮತೀಪುರದ ಹತ್ತಿರದಲ್ಲಿದ್ದ ಕಮಲ ವನದಲ್ಲಿ[1] (ಪ್ರಫುಲ್ಲರಾಜೀವನನೇ ಮಾ.ಶಂ. ೮–೩) ವಿಶ್ರಮಿಸಿಕೊಂಡು ಆಹ್ನಿಕ ವನ್ನು ಮುಗಿಸಿ ಮುಂದಕ್ಕೆ ನಡೆಯುತ್ತಾ ಮಂಡನನ ಮನೆಯ ದಾಸಿಯರನ್ನು ಕಂಡು 'ಮಂಡನಪಂಡಿತನ ಮನೆ ಎಲ್ಲಿದೆ?' ಎಂದು ಕೇಳಿದರು (ಮಾ. ಶಂ. ೮–೫)– ಎಂದು ಮಾಧವೀಯ. ವಿಜ್ವಲದ್ಬಿಂದುಪುರಕ್ಕೆ ಬಂದು ಒಬ್ಬ ಬ್ರಾಹ್ಮಣನನ್ನು ಕೇಳಿದರು (ಚಿ. ಶಂ. ೧೭–೧೫) ಎಂದು ಚಿದ್ವಿಲಾಸೀಯ ದಲ್ಲಿದೆ. ಆಚಾರ್ಯರು ಶಿಷ್ಯರನ್ನೆಲ್ಲ ಆ ಪಟ್ಟಣದ ಪೂರ್ವಭಾಗದ ಉದ್ಯಾನಗಳಲ್ಲಿ ನಿಲ್ಲಿಸಿ ತಾವು ಒಬ್ಬರೇ ಪುರವನ್ನು ಹೊಕ್ಕರು. ಸೂರ್ಯನು ಪಶ್ಚಿಮಕ್ಕೆ ತಿರುಗುವದರಲ್ಲಿರಲು ದಾಸಿಯರ ಸಮೂಹವನ್ನು ಕಂಡು ಮಂಡನಮಿಶ್ರನ ಮನೆ ಎಲ್ಲಿ ಎಂಬುದಾಗಿ ಕೇಳಿದರು ಎಂದು ಆನಂದಗಿರೀಯದಲ್ಲಿದೆ (ಪ್ರ. ೫೬, ಪು. ೨೧೪ ; ದೇ. ಪು. ೧೪೩).

'ಸ್ವತಃಪ್ರಮಾಣ, ಪರತಃಪ್ರಮಾಣ', 'ಕರ್ಮವೇ ಫಲವನ್ನು ಕೊಡ ತಕ್ಕದ್ದು, ಈಶ್ವರನೇ ಫಲವನ್ನು ಕೊಡುವವನು', 'ಜಗತ್ತು ನಿತ್ಯ, ಅದು ಅನಿತ್ಯ' –ಎಂದು ಬಾಗಿಲಿನ ಪಂಜರಗಳಲ್ಲಿ ಹೆಣ್ಣುಗಿಳಿಗಳು ನುಡಿಯುತ್ತಿರುವವಲ್ಲ, ಅದೇ ಮಂಡನಪಂಡಿತನ ಮನೆ– (ಮಾ. ಶಂ. ೮–೬ರಿಂದ ೮) ಎಂಬ ಉತ್ತರವನ್ನು ದಾಸಿಯರು ಕೊಟ್ಟರೆಂದು ಮಾಧವನು ವರ್ಣಿಸಿದಾನೆ. ಚಿದ್ವಿಲಾಸ ಯತಿಯು ಬ್ರಾಹ್ಮಣನ ಮುಖದಿಂದ ಕೊಟ್ಟ ಉತ್ತರವು ಹೀಗಿದೆ : ಆ ಮನೆಗೆ ವಿದ್ಯಾಲಯವೆಂದು ಹೆಸರು. ಅದು ತಾಳೆಮರದಷ್ಟು ಎತ್ತರವಾಗಿದೆ ; ಅದರ ಸುತ್ತಲೂ ಪೌಳಿಯೂ ಹೆಬ್ಬಾಗಿಲೂ ಇದೆ. ಅದಕ್ಕೆ ನೂರು ಕಲ್ಲುಕಂಬಗಳು ಇವೆ. ಗರ್ಭಾಗಾರ, ಈಶ್ವರಾಗಾರ, ಶಯ್ಯಾಗಾರ–ಇವುಗಳೂ ಇವೆ. ಮುಂದುಗಡೆಯಲ್ಲಿ ವಿಶಾಲವಾದ ಪಾಠಶಾಲೆಗಳಿವೆ. ಹತ್ತುಮೊಳ ಎತ್ತರದ ಒಂದು ದೊಡ್ಡ ಜಗುಲಿ ಯನ್ನು ನಿರ್ಮಾಣಮಾಡಿಸಿ ಅದರಮೇಲೆ ಕುಳಿತು ಶಿಷ್ಯರಿಗೆ ಆತನು ಪಾಠವನ್ನು ಹೇಳುತ್ತಿರುತ್ತಾನೆ. ಮನೆಯ ಎರಡೂ ಕಡೆಗಳಲ್ಲಿ ಬೀದಿಗಳನ್ನು ಮಾಡಿಸಿ ಅದರ ಬಾಗಿಲುಗಳಲ್ಲಿ ವೇದವೇದಾಂಗಗಳು, ಪುರಾಣಗಳು,– ಇವುಗಳನ್ನು ಕಲಿಸುತ್ತಿರು

---

1. ಪದ್ಮನವೆಂಬುದೊಂದು ಅಗ್ರಹಾರದ ಹೆಸರೆಂದು ಆತ್ಮಬೋಧರು (ಗು.ರ. ಸು. ಶ್ಲೋ. ೨೨) ಬರೆದಿದಾರೆ.

ತ್ತಾನೆ. ಸುತ್ತಲೂ ಕಟ್ಟಿರುವ ಪಂಜರಗಳಲ್ಲಿ ಗಿಳಿಗಳು ಪಂಡಿತರಂತೆ ವಾದ ಮಾಡುತ್ತಿರುತ್ತವೆ. ಪಾತಂಜಲ, ಕಾಪಿಲ, ಜೈಮಿನಿಸೂತ್ರ–ಇವುಗಳಲ್ಲಿ ಪ್ರಸಂಗ ಷನ್ನು ಮಾಡುತ್ತಿರುತ್ತವೆ ; ಋಗ್ಯಜುಸ್ಸಾಮಗಳನ್ನು ಗಾನಮಾಡುತ್ತಿರುತ್ತವೆ ; ಕಾವ್ಯಗಳನ್ನು ಪಠಿಸುತ್ತಿರುತ್ತವೆ. ಕರ್ಮವೇ ಸತ್ಯವೆಂದು ಕೆಲವು, ಆದು ಪೂರ್ವಪಕ್ಷವೆಂದು ಕೆಲವು–ಹೀಗೆ ಹೇಳುತ್ತಿರುತ್ತವೆ.

ಆನಂದಗಿರೀಯದಲ್ಲಿ ದಾಸಿಯರು ಕೊಟ್ಟ ಉತ್ತರವೂ (ಪ್ರ. ೫೬–೨೧೪, ೨೧೫ ; ದೇ.ಪು. ೧೮೩, ೧೮೪) ಹೀಗೆಯೇ ಇದೆ. ಆದರೆ ಶ್ಲೋಕಗಳು ಸ್ವಲ್ಪ ಹೆಚ್ಚಾಗಿವೆ. ಮನೆಯ ವರ್ಣನೆಯನ್ನು ಕವಿಯು ತಾನೇ ಬರೆದಿರುತ್ತಾನೆ. '(ವಿದ್ಯಾನಿಲಯ)ಪುರದ ಪಶ್ಚಿಮದಿಕ್ಕಿನಲ್ಲಿ ಮಂಡನಮಿಶ್ರನು ತಾಳೆಯ ಮರ ಪಷ್ಟು ಉನ್ನತವಾಗಿರುವ ಶಾಲೆಯನ್ನು ಮಾಡಿ ಅದರ ಮುಂದೆ ಚಚ್ಚೌಕನೆಯ ಭೂಮಿಭಾಗದಲ್ಲಿ ನೂರು ಮೊಳದ ಪ್ರಮಾಣದಲ್ಲಿ ಒಂದರ ಎದುರಿಗೊಂದು ಇರುವ ಎರಡು ವೇದಿಕೆಗಳನ್ನು ನಿರ್ಮಾಣಮಾಡಿಸಿ ಅವುಗಳ ಮೇಲುಭಾಗದಲ್ಲಿ ಕಟ್ಟಿಗೆಯಿಂದ ಮಾಡಿದ ಗಿಳಿಯಪಂಜರಗಳನ್ನು ತೂಗುಹಾಕಿಸಿಟ್ಟು ಆಲ್ಲಿ ಐನೂರರಷ್ಟು ಶಿಷ್ಯರನ್ನು– ಒಬ್ಬೊಬ್ಬರು ಒಂದೊಂದು ಶಾಸ್ತ್ರದಲ್ಲಿ– ಪಾರೀಣರನ್ನಾಗಿ ಮಾಡಿಕೊಂಡಿದ್ದನು. ನಾಲ್ಕು ಮುಖಗಳಿಂದ ಬ್ರಹ್ಮನಂತೆ, ಸಾವಿರ ಬಾಯಿಗಳಿಂದ ಶೇಷನಂತೆ, ಐದು ಮುಖಗಳಿಂದ ರುದ್ರನಂತೆ, ಆರು ದರ್ಶನಗಳಿಂದ ಷಣ್ಮುಖನಂತೆ ಇದ್ದನು ; ಸಮುದ್ರವನ್ನು ದಾಟಿ ಹಾರುವ ಶಿಷ್ಯರನ್ನು ಸಮಸ್ತದಿಕ್ಕುಗಳನ್ನೂ ಜಯಿಸುವಷ್ಟು ಸಮರ್ಥರನ್ನಾಗಿ ಮಾಡಿದನು. ಆ ಮನೆಯ ಒಳಗೆ ಸೇವಕರಿಂದಲೂ ದಾಸದಾಸೀಜನರಿಂದಲೂ ಬಾನಿಕೆರೆಕಟ್ಟಿಗಳನ್ನು ನಿರ್ಮಿಸಿ ಅವುಗಳ ಮೂಲಕ ಪಡೆದ ಆಹಾರ, ಕಾಯಿಪಲ್ಯ ಮುಂತಾದವುಗಳಿಂದಲೇ ದಿನದಿನವೂ ಸಕಲ ಶಿಷ್ಯರೊಡನೆ ಷಡ್ರಸೋಪೇತವಾದ ಅನ್ನಭಕ್ಷ್ಯಗಳಿಂದ ಪರಿತೃಪ್ತನಾಗಿರುತ್ತಿದ್ದನು'(ಆ.ಶಂ.ಪ್ರ.ಪು. ೨೧೨,೨೧೩ ದೇ.ಪು. ೧೮೨).

ವಿದ್ಯಾಲಯವೆಂಬುದು ಊರ ಹೆಸರೆಂದು ಆನಂದಗಿರಿಯೂ ಮನೆಯ ಹೆಸರೆಂದು ಚಿದ್ವಿಲಾಸಯತಿಯೂ ಹೇಳಿರುವದನ್ನು ಲಕ್ಷಿಸಬೇಕು. ಅವನ ಮನೆಯ ಮುಂದೆ ಒಂದು ಜಗುಲಿ ಇತ್ತೆಂದು ಚಿದ್ವಿಲಾಸರು, ಎರಡು ಜಗುಲಿಗಳಿದ್ದವೆಂದು ಆನಂತಾನಂದಗಿರಿ. ಒಟ್ಟಿನಲ್ಲಿ ಮಂಡನನು ಮಹಾವಿದ್ವಾಂಸನು, ಶ್ರೀಮಂತನು, ಅನೇಕ ಶಿಷ್ಯಪರಿವೃತನು– ಎಂಬುದೊಂದರಲ್ಲಿ ಮಾತ್ರವೇ ಶಂಕರವಿಜಯಕಾರರಿಗೆ ಏಕಕಂಠ್ಯವಿದೆ. **ವಾಸಾಚಲೀಯ**ದಲ್ಲಿ ಊರ ಅಥವಾ ಮನೆಯ ಹೆಸರಾಗಲಿ ವರ್ಣನೆಯಾಗಲಿ ಇಲ್ಲ. ಆತನು **ಭೂಭೃನ್ನಿಕೇತನ** (ವ್ಯಾ. ಶಂ. ೬–೨೮), ಅಥವಾ **ರಾಜಪುರ** (ವ್ಯಾ. ಶಂ. ೬–೭೭) ದಲ್ಲಿದ್ದನೆಂದು ಮಾತ್ರ ಬರೆದಿದೆ. ಭಾರತಿಯೂ ಮಂಡನನೂ ಮದುವೆಯಾದ ಬಳಿಕ **ರಾಜಗೃಹ**ಕ್ಕೆ ಹೋದರೆಂದು

(ವಧೂವರೌ ರಾಜಗೃಹಂ ಸಮಾಯತುಃ | ಮಾ. ಶಂ. ೩–೭೭, ವ್ಯಾ. ಶಂ. ೬–೭೭) ಮಾಧವಕವಿಯೂ ಬರೆದಿದಾನೆ. ಈ ಶ್ಲೋಕವು ವ್ಯಾಸಾಚಲವಾಧ ವೀಯಂಗಳಿಗೆ ಸವಾನವಾಗಿರುವದರಿಂದ ವಿಶ್ವರೂಪನು ರಾಜಗೃಹದಲ್ಲಿದ್ದನೆಂದೇ ಆರ್ಥವಾಗುತ್ತದೆ. ಹೀಗಿದ್ದರೂ 'ಮಾಹಿಷ್ಮತಿ' ಎಂಬ ಹೆಸರನ್ನು ಮಾಧವನು ಏತಕ್ಕೆ ಬರೆದನೆಂಬುದು ವಿಚಾರಣೀಯವಾಗಿದೆ. ಊರ ಹೊರಗಿನ 'ರಾಜೀವ ವನ'ದಲ್ಲಿ ಆಚಾರ್ಯರು ವಿಶ್ರಮಿಸಿಕೊಂಡರೆಂದು ಮಾಧವನು ಹೇಳಿರುತ್ತಾನೆ; ಮಂಡನಮಿಶ್ರನನ್ನು ಖಂಡಿಸಿದ್ದು 'ಪದ್ಮವನ'ವೆಂದು ಗುರುರತ್ನಮಾಲಿಕೆಯಲ್ಲಿ ಹೇಳಿದ್ದು, ಪದ್ಮವನವೆಂಬುದು ಆ ಹೆಸರಿನ ಅಗ್ರಹಾರದ್ದು ಎಂದು ಆತ್ಮಬೋಧರು ಬರೆದಿರುವದನ್ನು ಹಿಂದೆ (ಪು. ೧೩೫) ತಿಳಿಸಿರುತ್ತೇವೆ. ಒಟ್ಟಿನಲ್ಲಿ ಈ ವಿವರವೂ ಕಲ್ಪನಾಮಾತ್ರವೆಂದಾಯಿತು.

ಮಂಡನನ ಮನೆಗೆ ಆಚಾರ್ಯರು ಬಂದ ದಿನ ಮತ್ತು ಪ್ರವೇಶಿಸಿದ ರೀತಿ :

೧೦೧. ಆಚಾರ್ಯರು ಮನೆಯ ಹೊರಭಾಗಕ್ಕೆ ಬಂದರು. ಮನೆಯ ಬಾಗಿಲು ಭದ್ರವಾಗಿ ಹಾಕಿತ್ತು; ಒಳಕ್ಕೆ ಹೋಗುವದು ಆಗುವಹಾಗಿಲ್ಲವೆಂದು ತಿಳಿದು ಯೋಗಬಲದಿಂದ ಆಕಾಶಮಾರ್ಗವಾಗಿ ಆಂಗಣದೊಳಕ್ಕೆ ಬಂದರು (ಮಾ.ಶಂ.೮–೯). ಮನೆಯನ್ನು ನೋಡುತ್ತಾ ಉಪ್ಪರಿಗೆಯ ಗವಾಕ್ಷದ ಅವಕಾಶದಿಂದ ಇಳಿದು ಮಂಡನನನ್ನು ಕಂಡರು. ಆತನು ತಪೋಮಹಿಮೆಯಿಂದ ಜೈಮಿನಿಯನ್ನೂ ವ್ಯಾಸರನ್ನೂ ಶ್ರಾದ್ಧಕ್ಕೆ ನಿಮಂತ್ರಣಮಾಡಿ ಅವರ ಕಾಲುಗಳನ್ನು ತೊಳೆಯುತ್ತಿದ್ದನು. ಕೆಳಕ್ಕೆ ಇಳಿದ ಆಚಾರ್ಯರನ್ನು ಅವರಿಬ್ಬರೂ ಪ್ರತಿನಂದನ ಮಾಡಿದರು. ಮಂಡನನು ಅವರನ್ನು ಕಂಡು ಕೋಪದಿಂದ ಆಕ್ಷೇಪಿಸಿ ಮಾತನಾಡಿದನು. ಮುಂದೆ ಅವರಿಬ್ಬರಿಗೂ ವಿಲಕ್ಷಣವಾದ ವಾಗ್ವಾದವಾಯಿತು (ಮಾ. ಶಂ. ೮–೯ರಿಂದ ೧೫). ಇದು ಮಾಧವೀಯದಲ್ಲಿರುವ ವೃತ್ತಾಂತ. ಚಿದ್ವಿಲಾಸೀಯದಲ್ಲಿ ಹೀಗಿದೆ : ಆ ದಿನ ಆ ಮಂಡನನ ಮನೆಯಲ್ಲಿ ಪಿತೃಕಾರ್ಯವಿತ್ತು. ಬಾಹ್ಮಣಾರ್ಥವಾಗಿ ವ್ಯಾಸರನ್ನು ಪಿತೃಸ್ಥಾನದಲ್ಲಿ ಕೂಡಿಸಿ ಅವರಿಗೆ ಸಮವಾದ ಬ್ರಾಹ್ಮಣರಿಲ್ಲದ್ದರಿಂದ ವೈಶ್ವದೇವಸ್ಥಲದಲ್ಲಿ ಲಕ್ಷ್ಮೀನಾರಾಯಣ ಸಾಲಿಗ್ರಾಮವನ್ನು ಇರಿಸಿ ಬಾಗಿಲನ್ನು ಭದ್ರವಾಗಿ ಮುಚ್ಚಿಸಿ ಇದ್ದುಕೊಂಡಿದ್ದನು. ಶಂಕರಾಚಾರ್ಯರು ಬಾಗಿಲಿಗೆ ಆಗುಳಿಯನ್ನು ಹಾಕಿದ್ದದ್ದನ್ನು ಕಂಡು ಪಾದುಕಾಸ್ಫುಟಿಕಾಸಿದ್ಧಿಯೇ ಮುಂತಾದ ಸಕಲಸಿದ್ಧಿಗಳೂ ತಮ್ಮ ಕೈಯಲ್ಲಿಯೇ ಇದ್ದದ್ದರಿಂದ, ಪದ್ಮಪಾದರೇ ಮೊದಲಾದ ಶಿಷ್ಯರನ್ನು ಹೊರಗೆ ಬಿಟ್ಟು ಆ ಮನೆಯ ಅಂಗಳವನ್ನು ಗಗನಮಾರ್ಗದಿಂದ ಪ್ರವೇಶಿಸಿದರು. ಆಗ ಮಂಡನಮಿಶ್ರನು ಬ್ರಾಹ್ಮಣಪಾದರ್ಚನಮಾಡುತ್ತಿದ್ದು ವ್ಯಾಸರನ್ನು ಪಿತೃಸ್ಥಾನದಲ್ಲಿ ಟ್ಟು ಹಿಂತಿರುಗಿ

ನೋಡಲು ವೈಶ್ವದೇವಪ್ರವೇಶದಲ್ಲಿ ಕುಳಿತಿದ್ದ ಯತೀಶ್ವರನನ್ನು ಕಂಡು ಕೋಪದಿಂದ ಮುಂದೆ ಹೇಳುವಂತೆ ಅವರೊಡನೆ ವಾದಮಾಡಿದನು (ಚಿ.ಶಂ. ೧೭–೨೯ರಿಂದ ೩೪). ಆನಂದಗಿರೀಯದಲ್ಲಿ ಬಾಗಿಲನ್ನು ಭದ್ರಪಡಿಸಿದ್ದರಿಂದ ಪ್ರಾಣಾಯಾಮ ಬಲದಿಂದ ಒಳಕ್ಕೆ ಹೊಕ್ಕರೆಂದಿದೆ. ಆಲ್ಲಿಯೂ ಶ್ರಾದ್ಧವಿವರವು ಚಿದ್ವಿಲಾಸೀಯದಂತೆ ಇದೆ. (ಪ್ರ.– ೫೬ ಪು. ೨೧೩, ೨೧೪). ಮುಂಡನನು 'ವಿಶ್ವೇದೇವಾನು ಕಲ್ಪಸಾಲಿಗ್ರಾಮವೆ, ಸ್ವಾಗತವೆ ?'[1] ಎಂದು ದರ್ಭಾಕ್ಷತೆಗಳನ್ನು ಹಾಕುವ ಹೊತ್ತಿಗೆ ಮುಂಡಲಸಲ್ಲಿ ಶಂಕರಾಚಾರ್ಯರ ಪಾದವ್ಯಯವನ್ನು ಕಂಡು ಕೋಪ ಕೋಲಾಹಲಚಿತ್ತನಾದನು. ಅವರಿಬ್ಬರೂ ಮುಂದೆ ಹೇಳುವಂತೆ ವಾದಿಸಿದರು (ಆ. ಶಂ. ಪ್ರ. ೫೫ ; ಪು. ೨೧೫ ; ದೇ. ಪು ೧೮೪) ಎಂದಿಂದೆ.

ವ್ಯಾಸಾಚಲೀಯದಲ್ಲಿ ಶ್ರಾದ್ಧದ ಮಾತೇ ಇಲ್ಲ; ವಿಶ್ವರೂಪನು ಆಹ್ನಿಕವನ್ನು ಮಾಡಿ ಅತಿಥಿಯನ್ನು ನಿರೀಕ್ಷಿಸುತ್ತಾ ಇರಲು ಆಚಾರ್ಯರನ್ನು ಕಂಡು ಭಿಕ್ಷೆಯನ್ನು ಮನಸಾ ಸಂಕಲ್ಪಿಸಿ ಅವರ ಪಾದಕ್ಕೆ ಪುಷ್ಪಾಂಜಲಿಯನ್ನು ಹಾಕಿ ಕಾಲುತೊಳೆದು (ಪ್ರತೀಕ್ಷಮಾಣೋಽತಿಥಿಮಾತಿಥೇಯಃ | ಉದೈಕ್ಷತೈನಮ್ ವ್ಯಾ. ಶಂ ೬–೨; ಸ ಭಿಕ್ಷಾಮೇಽದೃಷ್ಟಚರಾಯ ತಸ್ಮೈ ಸಂಕಲ್ಪ್ಯ ಭಿಕ್ಷಾಂ ಪದಯೋರವನುಷ್ಯ | ಚಿಕ್ಷೇಪ ಪುಷ್ಪಾಣಿ ೬–೩) ಅವರು ಹಸ್ತದಲ್ಲಿ ಭಾರತಿಯು ಹಾಕಿದ ನೀರನ್ನು ಕುಡಿಯದೆಯೂ ಕೆಳಕ್ಕೆ ಹಾಕದೆಯೂ (ನ ಚಾಪಿಬನ್ನಾಪಿ ಮುಮೋಚ ೬–೭) ಇದ್ದರು. ಇದೇಕೆಂದು ವಿಶ್ವರೂಪನು ಕೇಳಿದ್ದಕ್ಕೆ 'ನನ್ನ ಕಾರ್ಯವನ್ನು ಮಾಡಿಕೊಟ್ಟರೆ ನಿಮ್ಮ ಮನೆಯಲ್ಲಿ ಭೋಜನಮಾಡುವೆನು, ಈ ನೀರನ್ನೂ ಕುಡಿಯುವೆನು' ಎಂದರು. 'ಶಕ್ಯವಾದರೆ ಮಾಡುವೆನು, ಅದನ್ನು ಹೇಳಿರಿ' ಎಂದ ವಿಶ್ವರೂಪನಿಗೆ 'ನಿನ್ನೊಡನೆ ವಾದಮಾಡಬೇಕೆಂದು ನನ್ನ ಮನಸ್ಸಿನಲ್ಲಿದೆ ; ಆ ಭಿಕ್ಷೆಯನ್ನು ಕೊಟ್ಟರೆ ನೀರನ್ನು ಕುಡಿಯುತ್ತೇನೆ' (ಸಾರ್ಧಂ ತ್ವಯಾ ವದಿತುಮಿಚ್ಛತಿ ಮೇ ಮನೋಽರ್ಹನ್ | ತಚ್ಚೇತ್ಪ್ರದಾಸ್ಯತಿ ಭವಾನ್ ಪ್ರಪಿಬಾಮಿ ಪಾಥಃ |') ಎಂದರು. ಆತನು 'ನೀವು ಹೇಳಿದ್ದು ಇಷ್ಟೇನೆ ? ನನಗೂ ಇದರ ಇಚ್ಛೆಯಿದೆ ; ಆದರೆ ವಾದಮಾಡುವವರೇ ಯಾರೂ ಇಲ್ಲ' ಎಂದು ವಾದಕ್ಕೆ ಆರಂಭಿಸಿದನು. (ವ್ಯಾ. ಶಂ. ೬–೮ರಿಂದ ೮೬)–ಎಂದಿದೆ. ಗೋವಿಂದನಾಥನ ಶಂಕರಾಚಾರ್ಯಚರಿತದಲ್ಲಿಯೂ ಹೀಗೇ ಇದೆ ; ಆದರೆ ಆಲ್ಲಿ ವಿಶ್ವರೂಪನೇ ಜಲವನ್ನು ಹಾಕಿದನೆಂದಿದೆ, (ಯತಿಹಸ್ತೇ ಜಲಂ ದತ್ವಾ ಭೈಕ್ಷಂ ದತ್ವಾ ಪುನರ್ಜಲಮ್ ಗೋ. ೫–೪೬) ಎಂದಿದೆ. ಭಾರತಿಯು ಜಲವನ್ನು ಕೊಟ್ಟಳೆಂದು ಇಲ್ಲ.

---

1. 'ವಿಶ್ವೇದೇವಾನುಕಲ್ಪ' ಎಂಬುದಕ್ಕೆ ಬದಲು ದೇ॥ ಪಾಠದಲ್ಲಿ 'ವಿಶ್ವೇದೇವಾನ ಸಂಕಲ್ಪ್ಯ' (ಪು. ೧೪೫) ಎಂದಿದೆ.

ಇಲ್ಲಿ (೧) **ಚಿದ್ವಿಲಾಸೀಯದಲ್ಲಿಯೂ ಆನಂದಗಿರೀಯದಲ್ಲಿಯೂ** ಆಚಾರ್ಯರು ಶಿಷ್ಯರೊಡನೆ ಬಂದಿದ್ದರೆಂದೂ ಅವರನ್ನು ಹೊರಗೇ ಬಿಟ್ಟು ತಾವೊಬ್ಬರೇ ಮುಂಡನನ ಮನೆಯೊಳಕ್ಕೆ ಬಂದರೆಂದೂ ಹೇಳಿರುವದನ್ನು ಲಕ್ಷಿಸಬೇಕು. ಮಾಧವೀಯದಲ್ಲಿ ಹಾಗೆಂದು ಬಾಯಿಬಿಟ್ಟು ಹೇಳದಿದ್ದರೂ ಶಿಷ್ಯರನ್ನು ಪ್ರಯಾಗದಲ್ಲಿ ಬಿಟ್ಟುಬಂದರೆಂದೇನೂ ಹೇಳಿಲ್ಲ. ಶಿಷ್ಯರೂ ಜೊತೆಯಲ್ಲಿದ್ದರೆ ಆವರೂ ಆಕಾಶಮಾರ್ಗದಿಂದ ಬಂದರೆ? ಅವರಿಗೆಲ್ಲ ಯೋಗದ ಈ ಸಿದ್ಧಿ ಯಾಗಿತ್ತೆ? ಆಗಿದ್ದರೆ ಯಾರಿಂದ ಹೇಗೆ ಆಯಿತು?–ಎಂಬುದನ್ನು ಯಾವ ಶಂಕರ ವಿಜಯದಲ್ಲಿಯೂ ಹೇಳಿಲ್ಲ. (೨) **ಮಾಧವೀಯದಂತೆ** ವ್ಯಾಸಜೈಮಿನಿಗಳಿಬ್ಬರನ್ನೂ ಮುಂಡನನು ತಪೋಬಲದಿಂದ ನಿಮಂತ್ರಣಮಾಡಿದ್ದನು. **ಆನಂದಗಿರೀಯದಂತೆ** ಮಂತ್ರಶಕ್ತಿಯ ಬಲದಿಂದ ವ್ಯಾಸರನ್ನು ಮಾತ್ರ ಕರೆದಿದ್ದನು; **ಚಿದ್ವಿಲಾಸೀಯದಂತೆಯೂ** ವ್ಯಾಸರೊಬ್ಬರನ್ನೇ ಕರೆದಿದ್ದನು. **ವ್ಯಾಸಾಚಲೀಯದಲ್ಲಿ** ಕರೆಯಲೇ ಇಲ್ಲ; ಅಲ್ಲಿ ಶ್ರಾದ್ಧವೇ ಇಲ್ಲ, ಬರಿಯ ಅತಿಥಿಸತ್ಕಾರ!

ಶಂಕರಾಚಾರ್ಯರು ಅನಿರೀಕ್ಷಿತವಾಗಿ ಬಂದಾಗ ಆದದ್ದೆಂಬ ಪ್ರಥಮಸಂಭಾಷಣೆ

೧೦೨. ಶಂಕರಾಚಾರ್ಯರು ಒಳಕ್ಕೆ ಬಂದಾಗ ಮುಂಡನನು ಸಿಟ್ಟಿನ ಭರದಲ್ಲಿ ಅವರೊಡನೆ ಮಾಡಿದ ವಾದದ ವಿವರವು (ಮಾ. ಶ. ೮–೧೬ರಿಂದ ೩೧)ಹೀಗಿದೆ. (ಇಲ್ಲಿ ಮುಂಡನಶಂಕರವಾಕ್ಯಗಳನ್ನು ಅನುವಾದಸಹಿತವಾಗಿ ಬರೆದಿದ್ದೇವೆ) :

(೧) ಕುತೋ ಮುಂಡೀ (ಎಲ್ಲಿಂದಲೋ, ಬೋಳ?) ಅಗಳಾನ್ಮುಂಡೀ (ಕತ್ತಿನಿಂದ ಮೇಲಕ್ಕೆ ಬೋಳ((೨) ಪನ್ಥಾಸ್ತೇ ಪೃಚ್ಛ್ಯತೇ ಮಯಾ (ನಿನ್ನ ದಾರಿಯನ್ನು ಕೇಳುತ್ತಿದೇನೆ). ಕಿಮಾಹ ಪನ್ಥಾಃ (ದಾರಿ ಏನು ಹೇಳಿತು)? (೩) ತ್ವನ್ಮಾತಾ ಮುಂಡೀತ್ಯಾಹ (ನಿನ್ನ ತಾಯಿ ಮುಂಡೆ ಎಂದಿತು), ತಥೈವ ಹಿ, ಪನ್ಥಾನಂ ತ್ವಮಪೃಚ್ಛಃ, ತ್ವಾಂ ವನ್ಧ್ಯಾಃ ಪ್ರತ್ಯಾಹ (ಸರಿ, ನೀನು ದಾರಿಯನ್ನು ಕೇಳಿದೆ; ದಿನಗೆ ದಾರಿ ಉತ್ತರಕೊಟ್ಟಿತು) (೪) ಆಹೋ ಕಿಂ ಸುರಾಪೀತಾ (ಎಲಾ, ಸುರೆಯು ಪೀತವಾಗಿದೆಯೇನು; ಹೆಂಡವನ್ನು ಕುಡಿದಿದ್ದೀಯೇನು?–ಎಂದು ಅಭಿವ್ಯಾಯ); ನೈವ, ಶ್ವೇತಾ ಯತಃ ಸ್ಮರ (ಅಲ್ಲವೇ ಅಲ್ಲ ಪೀತವಲ್ಲ, ಹಳದಿಯಲ್ಲ; ಬೆಳ್ಳಗಿದೆ, ನೆನಪಿಸಿಕೊ!) (೫) ಕಿಂ ತ್ವಂ ಜಾನಾಸಿ ತದ್ವರ್ಣಮ್ (ನಿನಗೆ ಅದರ ಬಣ್ಣವು ತಿಳಿದಿದೆಯೇನು)? ಅಹಂ ವರ್ಣಮ್, ಭವಾನ್ ರಸಮ್ (ನಾನು ಬಣ್ಣವನ್ನು ಬಲ್ಲೆ, ನೀನು ರುಚಿಯನ್ನು)! (೬) ಮತ್ತೋ ಜಾತಃ ಕಲಞ್ಜಾಶೀಃ (ಕಲಂಜವನ್ನು–ಮೃಗಮಾಂಸವನ್ನು ತಿಂದು ಮತ್ತನಾಗಿದೀಯೆ). ಸತ್ಯಂ ಬ್ರವೀತಿ (ಷಿ?) ಪಿತೃವತ್, ತ್ವತ್ತೋ ಜಾತಃ ಕಲಞ್ಜಭುಕ್ (ನಿಜವನ್ನು ಹೇಳಿದೆ, ಮತ್ತಃ ಎಂಬುದಕ್ಕೆ ನನ್ನಿಂದ ಎಂಬರ್ಥವನ್ನು ಮಾಡಿದರೆ ನಿನ್ನಿಂದ ಹುಟ್ಟಿದವನು ತಂದೆಯಂತೆ ಕಲಂಜವನ್ನು ತಿನ್ನುವವನೇ ಎಂದರ್ಥವಾಗುತ್ತದೆ.) (೭) ಕನ್ಥಾಂ ವಹಸಿ ದುರ್ಬುದ್ಧೇ ಗರ್ದಭೇನಾಪಿ ದುರ್ಭರಾಮ್। ಶಿಖಾಯಜ್ಞೋಪವೀತಾಭ್ಯಾಂ ಕಸ್ತೇ

ಭಾತೋ ಭವಿಷ್ಯತಿ (ಎಲ್ಲೆ ಮರ್ಬುದ್ಧಿಯೆ, ಕತ್ತೆಯೂ ಹೊರಲಾರದ ಕಂತೆಯನ್ನು ಹೊದ್ದಿದ್ದೀಯಲ್ಲ ಶಿಖಾಯಜ್ಞೋಪವೀತಗಳಿಂದ ನಿನಗೇನು ಭಾರವಾಗುತ್ತಿತ್ತು) ? ಕನ್ಯಾಂ ವಹಾಮಿ ಮರ್ಬುದ್ಧೇ ತವ ಪಿತ್ರಾಸಿ ದುರ್ಭರಾಮ್ । ಶಿಖಾಯಜ್ಞೋಪವೀತಾಭ್ಯಾಂ ಶ್ರುತೇರ್ಭಾರೋ ಭವಿಷ್ಯತಿ ॥ (ಬುದ್ಧಿಹೀನನೆ, ನಿನ್ನ ತಂದೆಯೂ ಹೊರಲಾರದ ಕಂತೆಯನ್ನು ಧರಿಸಿದ್ದೇನೆ . ಶಿಖಾಯಜ್ಞೋಪವೀತಗಳಿಂದ ಶ್ರುತಿಗೆ ಭಾರವಾಗುವುದು). (೮) ತ್ಯಕ್ತ್ವಾ ಪಾಣಿಗೃಹೀತಿಂ ಸಾಮುಪಕ್ರಾಮ್ಯ ಪರಿರಕ್ಷಣೇ । ಶಿಷ್ಯಪುಸ್ತಕಭಾರೇಣೋದ್ವಾಹಿತಾ ಬ್ರಹ್ಮನಿಷ್ಠತಾ । (ಹೆಂಡತಿಯನ್ನು ಕಾವಾಡಲಾರದೆ ಮುದುವೆಯಾದವಳನ್ನು ಬಿಟ್ಟು ಶಿಷ್ಯರ ಪುಸ್ತಕಭಾರವನ್ನು ಬಯುಸುವ ನಿನ್ನ ಬ್ರಹ್ಮನಿಷ್ಠೆ ಪ್ರಖ್ಯಾತವಾಯಿತು) ! ಗುರುಶುಶ್ರೂಷಣಾಲಸ್ಯಾತ್ಸಮಾವರ್ತ್ಯ ಗುರೋ ಃ ಕುಲಾತ್ । ಸ್ತ್ರಿಯಂ ಶುಶ್ರೂಷಮಾಣಸ್ಯ ವ್ಯಾಖ್ಯಾತಾ ಕರ್ಮನಿಷ್ಠತಾ ॥ (ಗುರುವನ್ನು ಶುಶ್ರೂಷೆ ಮಾಡಲಾರದೆ ಆಲಸಿಕೆಯಿಂದ ಮನೆಗೆ ಬಂದು ಹೆಂಡತಿಯ ಸೇವೆಯನ್ನು ಮಾಡುತ್ತಿರುವ ನಿನ್ನ ಕರ್ಮನಿಷ್ಠೆಯು ಪ್ರಖ್ಯಾತವಾಯಿತು) ! (೯) ಸ್ಥಿತೋಸಿ ಯೋಷಿತಾಂ ಗರ್ಭೇ ತತಶ್ಚೇವ ವಿನಿರ್ಗತಃ । ಅಹೋ ಕೃತಘ್ನತಾ ಮೂರ್ಖ ಕಥಂ ತಾ ಏವ ನಿನ್ದಸಿ ॥ (ಸ್ತ್ರೀಯರ ಗರ್ಭದಲ್ಲಿದ್ದು ಅವರಿಂದಲೇ ಬೆಳೆದು. ಅವರನ್ನೇ ನಿಂದಿಸುತ್ತಿರುವೆಯಲ್ಲ ; ಎಲಾ ಮೂರ್ಖ, ಎಂಥ ಕೃತಘ್ನತೆಯಿದು) ! ಯಾಸಾಂ ಸ್ತನ್ಯಂ ತ್ವಯಾ ಪೀತಂ ಯಾಸಾಂ ಜಾತೋಸಿ ಯೋನಿತಃ । ತಾಸು ಮೂರ್ಖತಮ ಸ್ತ್ರೀಷು ಪಶುವದ್ರಮಸೇ ಕಥಮ್ ॥ (ಯಾರ ಸ್ತನ್ಯವನ್ನು ಕುಡಿದಿರುವೆಯೋ, ಯಾರ ಯೋನಿಯಿಂದ ಹುಟ್ಟಿರುವೆಯೋ ಅವರಲ್ಲಿಯೇ ಪಶುವಿನಂತೆ ಹೇಗೆ ರಮಿಸುತ್ತೀಯೊ, ಮೂರ್ಖತಮ !) (೧೦) ವೀರಹತ್ಯಾಮವಾಪ್ತೋಸಿ ವಹ್ನೀರುದ್ವಾಸ್ಯ ಯತ್ನತಃ। (ಅಗ್ನಿಗಳನ್ನು ಯತ್ನಪೂರ್ವಕವಾಗಿ ಉದ್ವಾಸನೆಮಾಡಿದ್ದರಿಂದ ನಿನಗೆ ವೀರಹತ್ಯಾದೋಷವು ಬಂದಿದೆ) ; ಆತ್ಮಹತ್ಯಾಮವಾಪ್ತಸ್ತ್ವಮು ವಿದಿತ್ವಾ ಪರಂ ಪದಮ್ ॥ (ಪರಮಪದವನ್ನು ಅರಿತುಕೊಳ್ಳದೆ ನೀನು ಆತ್ಮಹತ್ಯಾದೋಷವನ್ನು ಪಡೆದುಕೊಂಡೆ) ! (೧೧) ದೌವಾರಿಕಾನ್ ವಞ್ಚಯಿತ್ವಾ ಕಥಂ ಸ್ತೇನವದಾಗತಃ। (ಕಾವಲುಗಾರರನ್ನು ವಂಚಿಸಿ ಕಳ್ಳನಂತೆ ಒಳಕ್ಕೆ ಹೇಗೆ ಬಂದೆ?) ಭಿಕ್ಷುಭ್ಯೋನ್ನಮದತ್ವಾ ತ್ವಂ ಸ್ತೇನವದ್ಭೋಕ್ಷ್ಯಸೇ ಕಥಮ್ ॥ (ಭಿಕ್ಷುಗಳಿಗೆ ಅನ್ನವನ್ನು ಕೊಡದೆ ಕಳ್ಳನಂತೆ ಹೇಗೆ ಊಟಮಾಡುತ್ತಿರುವೆ) ? (೧೨) ಕರ್ಮಕಾಲೇ ನ ಸಂಭಾಷ್ಯ ಅಹಂ ಮೂರ್ಖೇಣ ಸಂಪ್ರತಿ (ಕರ್ಮಕಾಲದಲ್ಲಿ ನಾನು ಮೂರ್ಖನೊಡನೆ ಸಂಭಾಷಿಸುವಪನಲ್ಲ). ಅಹೋ ಪ್ರಕಟಿತಂ ಜ್ಞಾನಂ ಯತಿಭಙ್ಗೇನ ಭಾಷಿಣಾ । ಅಹಾ ! ನ ಸಂಭಾಷ್ಯ ಅಹಮ್ ಎಂಬಲ್ಲಿ ಯತಿಭಂಗವನ್ನು ಮಾಡಿ ಮಾತನಾಡುವ ನಿನ್ನ ಜ್ಞಾನವು ಪ್ರಕಟವಾಯಿತು ! (೧೩) ಯತಿಭಙ್ಗೇ ಪ್ರವೃತ್ತಸ್ಯ ಯತಿಭಙ್ಗೇ ನ ದೋಷಭಾಕ್ ; (ಯತಿಭಂಗದಲ್ಲಿ ಪ್ರವೃತ್ತನಾದವನಿಗೆ ಯತಿಭಂಗವನ್ನು ಮಾಡಿದ ದೋಷವಿಲ್ಲ) ; ಯತಿಭಙ್ಗೇ ಪ್ರವೃತ್ತಸ್ಯ ಪಞ್ಚಮ್ಯನ್ತಂ ಸಮುಸ್ಯತಾಮ್ । (ಯತಿಭಙ್ಗೇ ಪ್ರವೃತ್ತಸ್ಯ ಎಂಬಲ್ಲಿ ಪಂಚಮ್ಯಂತಸಮಾಸವನ್ನು ಮಾಡಿಕೊ ! ಯತಿಯಿಂದ ಭಂಗ ಎಂದು ಅರ್ಥವು ಸರಿಯಾಗುವದು). (೧೪) ಕ್ವ ಬ್ರಹ್ಮ ಕ್ವ ಚ ದುರ್ಮೇಧಾಃ ಕ್ವಾಯಂ ದೋಷಃ ಕ್ವ ವಾ ಕಲಿಃ !) (ಬ್ರಹ್ಮವೆಲ್ಲಿ; ದುರ್ಬುದ್ಧಿಯಾದವನೆಲ್ಲಿ ! ಈ ದೋಷವೆಲ್ಲಿ, ಕಲಿಯೆಲ್ಲಿ !) . ಕ್ವ ಸ್ವರ್ಗಃ ಕ್ವ ದುರಾಚಾರಃ ಕ್ವಾಗ್ನಿಹೋತ್ರಂ ಕ್ವ ವಾ ಕಲಿಃ ॥ (ಸ್ವರ್ಗವೆಲ್ಲಿ, ದುರಾಚಾರವೆಲ್ಲಿ ? ಅಗ್ನಿಹೋತ್ರವೆಲ್ಲಿ, ಕಲಿಯೆಲ್ಲಿ ?)

ಈ ಮೇಲೆ ಕೊಟ್ಟಿರುವ ಸಂವಾದವು ಇದೇ ವಾಕ್ಯಗಳಿಂದಲ್ಲದಿದ್ದರೂ ಸ್ವಲ್ಪ ಹೆಚ್ಚುಕಡಿಮೆ ಈ ಅಭಿಪ್ರಾಯವೇ ಬರುವ ವಾಕ್ಯಗಳಿಂದ ಚಿದ್ವಿಲಾಸೀಯ (೧೭-೩೪ ನಿಂದ ೪೧), ಆನಂದಗಿರೀಯ (ಪ್ರ. ೫೬ ಪು. ೨೧೫, ೨೧೬ ; ದೇ. ಪು. ೧೪೪), ಸದಾನಂದ (೬–೧೩ರಿಂದ ೨೮)– ಈ ಎಲ್ಲಾ ಶಂಕರವಿಜಯ ಗಳಲ್ಲಿಯೂ ಇದೆ. ಆದ್ದರಿಂದ 'ಇದು ನಿಶ್ಚಯವೆಂದು ನಂಬಬಹುದು....ಮಂಡನ ಮಂಡಿತನು ಅಜೇಯನಾದ ವಿದ್ವಾಂಸನಾಗಿದ್ದಕಾರಣ ಆತನಿಗೆ ತಮ್ಮ ಪ್ರಜ್ಞೆಯನ್ನೂ ಧೈರ್ಯವನ್ನೂ ವ್ಯಕ್ತಪಡಿಸಬೇಕೆಂಬುದು ಒಂದು ಉದ್ದೇಶ; ಆತನ ಮನಸ್ಸಿನ ಶಾಂತತೆಯನ್ನು ನಾಶಮಾಡಿ ಅನಂತರ ಪ್ರಸಂಗಕ್ಕೆ ಎಳೆಯಬೇಕೆಂದು ಎರಡನೆಯ ಉದ್ದೇಶ. ಈ ಉದ್ದೇಶಗಳಿಂದ ಆಚಾರ್ಯರು ಹೀಗೆ ಮಾಡಿರಬಹುದು. ಪ್ರಸಂಗದಲ್ಲಿ ಪ್ರತಿಪಕ್ಷದವರ ವಾಗ್ಬಂಧನವಾಡುವದಕ್ಕೆ ಇದು ರಹಸ್ಯವಾದ ಉಪಾಯ' ಎಂದು ಸೋಮನಾಥಯ್ಯನವರು(ಸೋ.ಶಂ.ಪು.೧೧೯ಟಿಪ್ಪಣಿಯಲ್ಲಿ)ಬರೆದಿರುತ್ತಾರೆ.ನನಗೆ ಅದು ಸರಿಯೆಂದು ಕಾಣುವದಿಲ್ಲ.ಒಂದನೆಯದಾಗಿ ಮಂಡನಮಿಶ್ರನು ಮಹಾವಿದ್ವಾಂಸನಾಗಿ ಕರ್ಮನಿಷ್ಠನಾಗಿದ್ದ ಮಹಾತ್ಮನು ; ವ್ಯಾಸಜೈಮಿನಿಗಳಂಥ ಬ್ರಾಹ್ಮಣರನ್ನು ನಿಮಂತ್ರಿಸಿರುವಾತನು. ಶ್ರಾದ್ಧದ ದಿನ 'ಆಕ್ರೋಧನೈಃ ಶಾಪಪರೈಃ' ಎಂಬ ವಚನದಂತೆ ಬ್ರಾಹ್ಮಣರೂ ಯಜಮಾನನೂ ಅತ್ಯಂತಶಾಂತತೆಯಿಂದಿರಬೇಕಾಗಿರುವಲ್ಲಿ ಅವನು ಅಂತರಿಕ್ಷದಿಂದ ಯೋಗಶಕ್ತಿಯಿಂದ ಇಳಿದ ಯತಿಯನ್ನು ಹೀಗೆ ಅವಾಚ್ಯವಾದ ಕ್ರೋಧಪೂರಿತವಚನಗಳಿಂದ ನಿಂದಿಸಿದನೆಂಬುದು ಕಥಾಸಂದರ್ಭಕ್ಕೆ ಹೊಂದುವಹಾಗಿಲ್ಲ. ಆತನು ಇಷ್ಟು ಕ್ರೋಧಾವಿಷ್ಟನಾಗಿ ವಾಗ್ವಾದವನ್ನು ಮಾಡುವವರೆಗೂ ವ್ಯಾಸಜೈಮಿನಿಗಳಂಥ ಮಹಾತ್ಮರೂ ಸುಮನೆ ಇದ್ದರೆಂಬುದೂ ಅಸಂಭಾವಿತ. ಎರಡನೆಯದಾಗಿ, ಶಂಕರಾಚಾರ್ಯರು ಅನಿಮಂತ್ರಿತರಾಗಿ ವಿಶ್ವೇದೇವಸ್ಥಾನದಲ್ಲಿ ತಾವೇ ನುಗ್ಗಿ ಕುಳಿತರೆಂಬುದೂ, ಶ್ರಾದ್ಧಕಾಲದಲ್ಲಿ ಹೀಗೆ ವಿಘ್ನವನಾಚರಿಸಿದರೆಂಬುದೂ, ಹೇಗಾದರೂ ಮಾಡಿ ಪ್ರತಿವಾದಿಯ ವಾಕ್ಸ್ತಂಭವನ್ನು ಮಾಡಿ ಗೆದ್ದೆವೆಂದು ಹೇಳಿಕೊಳ್ಳುವಷ್ಟು ಕೀಳಂತಸ್ತಿನವರಾಗಿದ್ದರೆಂಬುದೂ ವಿಶ್ವಸನೀಯವಲ್ಲ ; ವೇದಾಂತದ ರಹಸ್ಯವನ್ನು ಜನರಿಗೆ ತಿಳಿಸಿಕೊಟ್ಟು ತಮ್ಮ ಭಾಷ್ಯಗಳಲ್ಲಿ 'ಶಾಂತದರ್ಪರಾಗಿರುವವರಿಗೇ ಈ ತತ್ತ್ವವು ತಿಳಿಯುತ್ತದೆಯೇ ಹೊರತು ಸ್ವಮತಾಭಿನಿವಿಷ್ಟರಾದ ತಾರ್ಕಿಕರಿಗೆ ತಿಳಿಯುವದಿಲ್ಲ' ಎಂದು ಅಲ್ಲಲ್ಲಿ ಬರೆದಿರುವ ಮಹನೀಯರಲ್ಲವೆ, ಅವರು ?ಅಂಥವರು ಮಂಡನನ ಶಾಂತಿಭಂಗವನ್ನು ಮಾಡಿ ಹೇಗೋ ಉಪಾಯದಿಂದ ಅವನನ್ನು ವಾದದಲ್ಲಿ ಸೋಲಿಸಬೇಕೆಂದು ಹವಣಿಸಿಯಾರೆ ? ಹಾಗೆ ಹವಣಿಸಿದರೆ ಅವರಿಗೂ ಅವರ ವೇದಾಂತಕ್ಕೂ ಕಲಂಕವನ್ನು ತಂದುಕೊಂಡಂತೆ ಆಗುವದಿಲ್ಲವೆ ? ಮೂರನೆಯದಾಗಿ, ಮಂಡನಮಿಶ್ರನು ಬರಿಯ ಕರ್ಮಜಡನಾದ ಮೀಮಾಂಸಕನಲ್ಲ, ಅವನೂ ವೇದಾಂತಿಯೇ ಆಗಿದ್ದನು ; ಅವನ ಗ್ರಂಥಗಳಲ್ಲಿ ಸಂನ್ಯಾಸವನ್ನು ಹಳಿದೂ ಇಲ್ಲ

–ಎಂಬುದನ್ನು ಮನಸಿಂದರಿಂತೂ ಈ ಸಂಭಾಷಣೆಯು ಜಯಿತೆಂಬುದು ಅತ್ಯಂತ ಅಸಂಭಾವಿತವೆಂದೇ ಹೇಳಬೇಕಾಗುತ್ತದೆ. ಇಪಲ್ಲದೆ ಮುಂಡನನ್ನು ಆಡಿರುವ ಉಪಹಾಸ್ಯವ ವಾಕ್ಯಗಳು ಪರಮಹಂಸವಾವ್ರಾಜಕಾಚಾರ್ಯರಾದ ಆಚಾರ್ಯರಿಗೆ ಅನ್ವಯಿಸುವಂತೆಯೇ ಇಲ್ಲ ; ಆವರು ಭಾರವಾದ ಕಂತೆಯನ್ನು ಧರಿಸಿದ್ದರು (ಪೂ. ಶಂ. ೮–೩೦) ಎಂಬಮಾಧವೋಕ್ತಿಯಾಗಲಿ ದಂಡಕಮುಂಡಲುಗಳನ್ನು ಧರಿಸಿದ್ದರು (ಚಿ.ಶಂ. ೧೭–೩೯) ಎಂಬ ಚಿದ್ವಿಲಾಸೋಕ್ತಿಯಾಗಲಿ ವಿಚಾರಸಹವಲ್ಲ. ಇದನ್ನು ಹಿಂದೆ (ಖಂ. ೬೬)ಹೇಳಿದ್ದೇವೆ. ಮುಂಡನನು ಆವರ ಯೋಗ್ಯತೆಯನ್ನು ವಿಚಾರಿಸಿಕೊಳ್ಳದೆ 'ಹೆಂಡತಿಯನ್ನು ಸಲಹಲಾರದೆ ಸಂನ್ಯಾಸಿಯಾದವರು' ಎಂದು ಹೆಳಿಯುವಷ್ಟು ಪಡ್ಡನಾಗಿರಲಿಲ್ಲ. ಹೀಗೆಯೇ ಮುಂಡನನಂಥ ಸದ್ಗೃಹಸ್ಥನಿಗೆ ಅರ್ಹವಾದ ಮಾತುಗಳನ್ನು ಆಚಾರ್ಯರು ಆಡಿದಂತೆ ಮಾಧವನು ಬರೆದಿಲ್ಲ. ಮನೆಗೆ ಬಂದ ಅತಿಥಿಯನ್ನು ಕಳ್ಳನೆಂದು ಮುಂಡನನೂ ಶ್ರಾದ್ಧದ ದಿನ ಕರ್ಮನಿಷ್ಠೆಯಲ್ಲಿಪ್ಪ ಗೃಹಸ್ಥನನ್ನು ಸ್ತೇನನೆಂದು ಶಂಕರರೂ ನಿಂದಿಸಿದರೆಂಬುದು ಉಪಹಾಸ್ಯವು. ಇವೆಲ್ಲ ಸಿಟ್ಟಿನ ಭರದಲ್ಲಿ ಆಡಿದ ಮಾತುಗಳೆಂದು ತರ್ಕಿಸುವದೂ ಯೋಗ್ಯವಲ್ಲ ; ಶಂಕರಮುಂಡನರಂಥವರು ಆ ಪವಿತ್ರಕಾಲದಲ್ಲಿ ಸಿಟ್ಟಿಗೆ ವಶರಾಗಿ ಅಂಥ ಕೆಟ್ಟ ಶಬ್ದಗಳ ಪ್ರಯೋಗಕ್ಕೆ ಮನಸ್ಸುಮಾಡುವಷ್ಟು ಕೀಳುಮಟ್ಟಕ್ಕೆ ಇಳಿದರೆಂದು ಕಲ್ಪಿಸುವದೇ ಅಯುಕ್ತವಾಗಿರುತ್ತದೆ. ವ್ಯಾಸರಂಥ ವೇದಾಂತಪ್ರಿಯರನ್ನು ಎದುರಿಗೆ ಇಟ್ಟುಕೊಂಡೇ ಮುಂಡನನು ಹೀಗೆಲ್ಲ ವಾದಿಸಿದನೆಂದು ಕಲ್ಪಿಸುವದು ಹೇಗೆತಾನೆ ಸರಿಯಾದೀತು? ಯಾವನೋ ಒಬ್ಬ ಕರ್ಮವಾದಿಯಾದ ಮೀಮಾಂಸಕನನ್ನು ಅಥವಾ ಅನೇಕ ಮೀಮಾಂಸಕರನ್ನು ಆಚಾರ್ಯರು ವಾದದಲ್ಲಿ ಗೆದ್ದಿರಬಹುದು; ಅವನನ್ನು ವೇದಾಂತದ ಕಡೆಗೆ ತಿರುಗಿಸಿರಲೂಬಹುದು. ಆದನ್ನೇ ಹೀಗೆ ಈಚಿನವರು ರೂಪಾಂತರಗೊಳಿಸಿ ಈ ಕಥೆಯನ್ನು ಕಟ್ಟಿರಬಹುದು. ಒಟ್ಟಿನಲ್ಲಿ ಈ ಮೂರು ಶಂಕರವಿಜಯಕಾರರಲ್ಲಿ ಯಾರು ಮೊದಲು ಹೇಯವಾದ ಸಂಭಾಷಣೆಯನ್ನು ಕಲ್ಪಿಸಿದರೋ ತಿಳಿಯದು. ವ್ಯಾಸಾಚಲೀಯವು ಎಷ್ಟೇ ಕೃತ್ರಿಮಗ್ರಂಥವಾಗಿರಲಿ, ವಿಶ್ವರೂಪನಿಗೂ ಆಚಾರ್ಯರಿಗೂ ತಕ್ಕ ಸ್ಥಾನವನ್ನು ಆದರಲ್ಲಿ ಕಲ್ಪಿಸಿ ಬರೆದಿದೆ ಎಂದು ಎಲ್ಲರೂ ಒಪ್ಪಬೇಕಾಗಿದೆ. ಗೋವಿಂದನಾಥನೂ (ಗೋ. ೫–೪೧ರಿಂದ೪೬) ವ್ಯಾಸಾಚಲೀಯವನ್ನೇ ಅನುಸರಿಸಿ ಶಂಕರಮುಂಡನರಿಬ್ಬರಿಗೂ ಅವರವರ ಆಶ್ರಮಕ್ಕೆ ಯೋಗ್ಯವಾದ ಸ್ಥಾನವನ್ನು ಕೊಟ್ಟೇ ವರ್ಣಿಸಿರುತ್ತಾನೆ.

ಮುಂಡನನು ವಾದಕ್ಕೆ ಒಪ್ಪಿಗೆಯನ್ನಿತ್ತದ್ದು

೧೦೩. ಈಗ ಮುಂದಿನ ಕಥಾಸರಣಿಯನ್ನು ಅನುಸರಿಸೋಣ. ಜೈಮಿನಿಗಳು ಹುಸಿನಗೆನಗುತ್ತಿರಲು ವ್ಯಾಸರು 'ಅಪ್ಪ, ನೀನ್ನು ಅನುಸರಿಸುತ್ತಿರುವದು ಸದಾಚಾರವಲ್ಲ. ಏಷಣಾತ್ಯಾಗವನ್ನು ಮಾಡಿದ ಯತಿಯನ್ನು ನಿಂದಿಸಬಾರದು ;

ಅಭ್ಯಾಗತರಾಗಿ ಬಂದಿರುವ ಇವರು ವಿಷ್ಣುವೇ ಎಂದು ಭಾವಿಸಿ ಕೂಡಲೆ ನಿಮಂತ್ರಣ ಮಾಡು ಎಂದರು. ಮಂಡನನು ಹಾಗೇ ಮಾಡಿದನು. ಆಗ ಶಂಕರರು 'ಆಯ್ಯ, ನನಗೆ ಬರಿಯ ಅನ್ನದ ಭಿಕ್ಷೆಯುಲ್ಲಿ ಆದರವಿಲ್ಲ ; ನಾನು ವಾದಭಿಕ್ಷೆಗೆ ಬಂದಿದ್ದೇನೆ; ಸೋತವನು ಗೆದ್ದವನ ಶಿಷ್ಯರಾಗಬೇಕೆಂಬ ಪಣಸಹಿತವಾಗಿ ವಿವಾದವಾಗಲಿ ! ವೇದಾಂತಮಾರ್ಗವನ್ನು ಪರಿಹರಿಸುವದಕ್ಕಿಂತ ನನಗೆ ಬೇರೆ ಯಾವದೂ ಬೇಕಿರುವದಿಲ್ಲ, ನೀನು ಅದನ್ನು ತಿರಸ್ಕರಿಸುತ್ತಿದ್ದೀಯೆ. ಆದ್ದರಿಂದ ನಿನ್ನನ್ನು ಜಯಿಸಬೇಕಾಗಿದೆ. ನೀನು ವಿವಾದನಾಡು, ಇಲ್ಲದಿದ್ದರೆ ಸೋತೆನೆಂದು ಹೇಳು' ಎಂದರು. ಅವನ್ನು ಕೇಳಿ ವಿಸ್ಮಿತನಾದ ಮಂಡನನು 'ಶ್ರುತಿಸಮ್ಮತವಾದ ಮತವನ್ನು ಬಿಟ್ಟು ಮತ್ತೆ ಯಾವ ಮಾರ್ಗವನ್ನೂ ನಾನು ಅನುಸರಿಸುವವನಲ್ಲ. ಆದಿಶೇಷನೇ ಬಂದರೂ ಸೋತೆನೆನ್ನಲಾರೆನು. ಧನ್ಯನಾದೆನು. ಜಯಮಹೋತ್ಸವಕಾಲವು ಬಂದೊದಗಿದ ಇದೇ ಸುದಿನವು. ವಾದವು ಯಾವದು, ಪಣವೇನು, ಮಧ್ಯಸ್ಥರು ಯಾರು? ಇದೆಲ್ಲ ನಿಶ್ಚಿತವಾಗಲಿ ! ನಾಳೆ ವಾದಮಾಡೋಣ. ಈಗ ಮಧ್ಯಾಹ್ನದಲ್ಲಿ ಮಾಡಬೇಕಾದ ಕರ್ಮವನ್ನು ಮಾಡುವೆನು' ಎಂದನು. ಆಗ ಶಂಕರರು 'ಹಾಗೆಯೇ ಆಗಲಿ, ವಾದಕ್ಕೆ ಈ ಮುನಿಗಳಿಬ್ಬರೂ ಸಾಕ್ಷಿಗಳಾಗಿರಲಿ!' ಎಂದರು. ಆ ಋಷಿಗಳಿಬ್ಬರೂ ಭಾರತಿಯು ಸರಸ್ವತಿಯ ಅವತಾರವೆಂದು ಗೊತ್ತಿದ್ದದ್ದರಿಂದ 'ನಿನ್ನ ಹೆಂಡತಿಯೇ ಮಧ್ಯಸ್ಥೆಯಾಗಲಿ' ಎಂದರು. ಅದರಂತೆ ಒಪ್ಪಿ ಮಂಡನನು ಆ ದಿನದ ಕರ್ಮವನ್ನು ಮಾಡಿದನು. ಭೋಜನಾನಂತರದಲ್ಲಿ ವ್ಯಾಸಜೈಮಿನಿಶಂಕರರು ಕುಳಿತಿರಲು ಮಂಡನನ ಶಿಷ್ಯರಿಬ್ಬರು ಎರಡೂ ಪಕ್ಕಗಳಲ್ಲಿ ಕುಳಿತು ಅವರಿಗೆ ಆಯಾಸಪರಿಹಾರಕ್ಕಾಗಿ ಚಾಮರದಿಂದ ಗಾಳಿಹಾಕಿದರು. ಸ್ವಲ್ಪಹೊತ್ತು ಸಂಭಾಷಣೆಯಾದಬಳಿಕ ಮುನೀಂದ್ರರಿಬ್ಬರೂ ಅಂತರ್ಧಾನವನ್ನು ಹೊಂದಿದರು. ಶಂಕರಾಚಾರ್ಯರು ನರ್ಮದಾತೀರದಲ್ಲಿದ್ದುಕೊಂಡು ರಾತ್ರಿಯನ್ನು ಕಳೆದರು (ಮಾ. ಶಂ. ೮–೩೪ರಿಂದ ೫೫). ಚಿದ್ವಿಲಾಸೀಯದಲ್ಲಿ ಶ್ರಾದ್ಧವಾದ ಕೂಡಲೆ ವಾಗ್ವಾದವಾಗಬೇಕೆಂದು ಇಬ್ಬರೂ ನಿಶ್ಚಯಿಸಿದರು. (ಶ್ರಾದ್ಧಾನನ್ತರಮೇವ ವಾಙ್ಮುಖವಿಧೌ ತೌ ನಿಶ್ಚಯಂ ಚಕ್ರತುಃ ಚಿ. ಶ. ೧೭–೪೭) ಎಂದರೆಂಬುದು ವಿಶೇಷ. ಆಸಂದಗಿರೀಯದಲ್ಲಿ ಶಂಕರರು 'ಅಭ್ಯಾಗತನಾದ್ದರಿಂದ ನಾನು ವಿಷ್ಣುವೇ' ಎಂದದ್ದನ್ನು ಕೇಳಿ 'ಪಾದ್ಯವನ್ನು ಕೊಡು !' ಎಂದು ವ್ಯಾಸರೆಂದರು (ಪು. ೨೧೬) ಎಂದಿದೆ. 'ವಾದಾರ್ಥವಾಗಿ ಬಂದಿದೇನೆ' ಎಂದ ಶಂಕರರಿಗೆ 'ಭೋಜನವಾದ ಬಳಿಕ ಹಾಗೆ ಮಾಡುವೆನು' ಎಂದು ಮಂಡನನು ಉತ್ತರವಿತ್ತನು. ಯಥಾವಿಧಿಯಾಗಿ ಪಿತೃಕರ್ಮವನ್ನು ಮಾಡಿದ ಬಳಿಕ ವಾದಪಣವನ್ನು ಹೀಗೆ ಹೂಡಿಕೊಂಡರು (ಯಥಾವಿಧಿ ಪಿತೃಕರ್ಮ ನಿರ್ವರ್ತ್ಯ ವಾದಪಣಮೇವಮಾಚಕ್ರತುಃ[1] ಪ್ರ. ೫೬, ಪು. ೨೧೬ ; ದೇ. ಪು. ೧೮೪) ಎಂದಿದೆ.

1. 'ವ್ಯಾಚಕ್ರತುಃ' ಎಂದು ದೇ॥.

ಇಲ್ಲಿ ವ್ಯಾಸರು ಸಂನ್ಯಾಸಿಗೆ ಗೌರವವನ್ನು ತೋರಿಸಬೇಕೆಂದು ವಿಷ್ಣುಸ್ಥಾನ ದಲ್ಲಿ ಅವನನ್ನು ಆರಿಸುನಂತೆ ಹೇಳಿದಕೂಡಲೆ ಮುಂಡನನು ಅವರಂತೆ ಮಾಡಿದ ನೆಂದು ಎಲ್ಲಾ ಶಂಕರವಿಜಯಗಳಲ್ಲಿಯೂ ಇದೆಯಷ್ಟೆ ? ಇದು ಕಥೆಗೆ ಹೇಗೆ ಸಂಗತವಾಗುತ್ತದೆಯೋ ನಮಗೆ ತಿಳಿಯಲಿಲ್ಲ. ಮುಂಡನನು ಸಂನ್ಯಾಸಾಶ್ರಮ ವನ್ನು ಆಗತಾನೆ ಹಳಿದಿವ್ದನು ; ವ್ಯಾಸರು ಹೇಳಿದಮಾತ್ರದಿಂದ ಅವನು ಕರ್ಮ ತ್ಯಾಗವನ್ನು ಮಾಡಿದ್ದ ಶಂಕರರು ಪೂಜ್ಯರೆಂದು ಹೇಗೆ ತಿಳಿದುಕೊಂಡನು ? ಚಿದ್ವಿಲಾಸೀಯದ ಮುಂದಿನ ಅಧ್ಯಾಯದಲ್ಲಿಯೂ ಮುಂಡನನು ಸಂನ್ಯಾಸವು ಕಲಿವರ್ಜ್ಯವೆಂದೇ ವಾದಿಸಿರುತ್ತಾನೆ (ಚಿ. ಶಂ. ೧೮–೬ರಿಂದ ೧೫). ಹೀಗಿರು ವಲ್ಲಿ ಮುಂಡನನು ಆಚಾರ್ಯರನ್ನು ವಿಷ್ಣುಸ್ಥಾನಕ್ಕೆ ಕೂಡಿಸಿದನೆಂಬುದು ಸರಿ ಯಾಗಿ ಕಾಣುವದಿಲ್ಲ

ಎರಡನೆಯದಾಗಿ 'ಉಭಯಭಾರತಿಯನ್ನು ಮಧ್ಯಸ್ಥಳನ್ನಾಗಿ ಮಾಡಿಕೊ' ಎಂದು ವ್ಯಾಸಜ್ಯೆಮಿನಿಗಳಿಬ್ಬರೂ ಹೇಳಿದರೆಂದು **ಮಾಧವನೂ** (ಮಾ.ಶ–೫೫) **ಸದಾನಂದನೂ** (ಸದಾ. ೬–೪೬) ಹೇಳಿರುತ್ತಾರೆ. **ಚಿದ್ವಿಲಾಸೀಯದಲ್ಲಿ** ಆಚಾರ್ಯರೇ 'ನಿನ್ನ ಹೆಂಡತಿ ಸಾಕ್ಷಿಯಾಗಿರಲಿ' ಎಂದರು (ಚಿ. ಶಂ. ೧೮–೩) ಎಂದಿದೆ. ಇಬ್ಬರೂ ಆಕೆಯು ಮಧ್ಯಸ್ಥಳಾಗಿರಲೆಂದು ಒಪ್ಪಿದರು (ಆ. ಶಂ.ಪ್ರ. ೫೬–ಪು. ೨೧೬, ದೇ. ಪು. ೧೮೪) ಎಂದು **ಆನಂದಗಿರೀಯ**ದಲ್ಲಿದೆ. ನಿಜವಾಗಿ ಆಕೆಯನ್ನು ಮಧ್ಯಸ್ಥಳೆಂದು ಗೊತ್ತುಮಾಡಿದವರು ಯಾರು ? ಊರಿನವರು ಈ ವಿಷಯದಲ್ಲಿ ಏನು ಹೇಳಿದರೋ ತಿಳಿಯುವಕಾಗಿಲ್ಲ, ಬೆಳಗ್ಗೆ ಶಂಕರರು ಬಂದು ಪಂಡಿತರ ಸಭೆಯನುಂದೆ ಕುಳಿತರು ; ಮುಂಡನಪಂಡಿತನು ಹೆಂಡತಿ ಯನ್ನು ಮಧ್ಯಸ್ಥೆಳಾಗಿ ಮಾಡಿಕೊಂಡು ವಾದಕ್ಕೆ ಸಿದ್ಧನಾದನು (ಮಾ. ಶಂ. ೮–೫೭, ೫೮) ಎಂದೇ **ಮಾಧವನು** ಬರೆದಿರುವದರಿಂದ ಆಕೆಯು ಮಹಾವಿದುಷಿ ಯೆಂದೂ ಆ ಕಾಲದಲ್ಲಿ ಸ್ತ್ರೀಯರೂ ಸಭೆಯಲ್ಲಿ ಗಾರ್ಗಿ ಮೊದಲಾದವರಂತೆ ಭಾಗವನ್ನು ವಹಿಸುತ್ತಿದ್ದರೆಂದೂ ಇಟ್ಟುಕೊಳ್ಳಬೇಕಾಗುತ್ತದೆ. ಇದು ಆ ಕಾಲಕ್ಕೆ ಒಪ್ಪುವ ಮಾತೆ ?–ಎಂಬುದನ್ನು ಐತಿಹಾಸಿಕರು ನಿಶ್ಚಯಿಸಬೇಕು. **ವ್ಯಾಸಾ ಚಲೀಯ**ದಲ್ಲಿ ವ್ಯಾಸರ ಸಂಬಂಧವೇನೂ ಇಲ್ಲದಿದ್ದರೂ ಮಾಧವೀಯದ ಮುಂಡನ ನಂತೆ ವಿಶ್ವರೂಪನೂ ವಾದಕ್ಕೆ ಒಪ್ಪಿದನು. ವಾದಂ ಕರಿಷ್ಯಾಮಿ (ಮಾ.೮–೪೬), ವಾದೇ ಹಿ (೮–೪೭) ; ಕಃ ಪಾರ್ಷ್ಣಿಕಃ (೮–೪೮)– ಈ ಶ್ಲೋಕಗಳು ವ್ಯಾಸಾ ಚಲೀಯದಲ್ಲಿಯೂ ಇವೆ (ವ್ಯಾ. ಶಂ. ೬–೪೬, ೪೭, ೪೮). ಆತ್ಯಲ್ಪಮೇತದ್ಭವ ತೇರಿತೆಂ ಮುನೇ । ಪಾಸ್ಯಾಮಿ ಪಾಥೋ ಯದಿ ವಾದದಿತ್ಸುತ್ | (ವ್ಯಾ. ಶಂ. ೬–೪೫) ಎಂಬ ಶ್ಲೋಕದ ಎರಡನೆಯ ಪಾದವು ಮಾತ್ರ ಆಲ್ಲಿಯ ಕಥೆಗೆ ಹೊಂದು ವಂತೆ ಬದಲಾಗಿದೆ. 'ಕಃ ಪಾರ್ಷ್ಣಿಕಃ, ಎಂಬುದು 'ಕಃ ಪ್ರಾಶ್ನಿಕಃ' ಎಂದಿದೆ ; ಆದೇ ಮಾಧವೀಯದ ಸರಿಯಾದ ಪಾಠವಾಗಿದ್ದರೂ ಇರಬಹುದು. ಮುಂದೆ

'ಬಾಷ್ಪೊ ಜಯೇ ಯದಿ' (ಮಾ.ಶಂ. ೮–೬೨ ವ್ಯಾ. ಶಂ. ೯೨ ಎಂಬ ಶ್ಲೋಕವೂ) ಎರಡಕ್ಕೂ ಸಮಾನವಾಗಿದೆ.

ಆಚಾರ್ಯರ ಮತ್ತು ಮಂಡನನ ಪ್ರತಿಜ್ಞಾವಾಕ್ಯಗಳು

೧೦೪. ಈಗ ಶಂಕರಮಂಡನರ ವಾದದ ಪ್ರತಿಜ್ಞಾವಾಕ್ಯಗಳನ್ನು ಮಾಧವನು ವಿವರಿಸಿರುವಂತೆ ಕೇಳೋಣ. ಶಂಕರರು ಹೇಳಿದ ಮಾತಿದು (ಮಾ. ಶಂ. ೮–೬೧) :

ಬ್ರಹ್ಮೈಕಂ ಪರಮಾರ್ಥನಚ್ಚಿದನುಲಂ ವಿಶ್ವಪ್ರಪಞ್ಚಾತ್ಮನಾ
ಶುಕ್ತೀ ರೂಪ್ಯಪರಾತ್ಮನೇವ ಬಹುಲಾಜ್ಞಾನಾವೃತಂ ಭಾಸತೇ ।
ತಜ್ಞಾನಾನ್ನಿಖಿಲಪ್ರಪಞ್ಚನಿಲಯಾತ್ ಸ್ವಾತ್ಮವ್ಯವಸ್ಥಾ ಪರಂ
ನಿರ್ವಾಣಂ ಜನಿಮುಕ್ತಮಭ್ಯುಪಗತಂ ಮಾನಂ ಶ್ರುತೇರ್ಮಸ್ತಕವ್ ॥

[ವ್ಯಾಸಾಚಲ ೬–೯೧ರಲ್ಲಿ ಇದೇ ಪದ್ಯವಿದೆ ; 'ಪ್ರಪಞ್ಚವಿಲಯಾತ್ ಸ್ವಾತ್ಮವ್ಯವಸ್ಥಾ' ಎಂದು ಅಲ್ಲಿ ಪಾಠ ; ಆನೇ ಮಾಧವೀಯದ ಪಾಠವಾಗಿದ್ದು 'ವ್ಯವಸ್ಥಾ' ಎಂದು ಲೇಕಖರು ಬರೆದುಕೊಂಡಿರಬಹುದು.]

"ಬ್ರಹ್ಮವೊಂದೇ ಪರಮಾರ್ಥವು, ಸಚ್ಚಿದಾತ್ಮಕವಾಗಿ ಶುದ್ಧವಾಗಿದ್ದು ಸಚ್ಚಿದಾತ್ಮಕವಾಗಿಯೂ ಶುದ್ಧವಾಗಿಯೂ ಇದ್ದರೂ ಬಹಳವಾದ ಅಜ್ಞಾನದಿಂದ ಆವೃತವಾಗಿರುವದರಿಂದ. ಶುಕ್ತಿಯು ರಜತರೂಪದಿಂದ ತೋರುವಂತೆ ಪ್ರಪಂಚ ರೂಪದಿಂದ ತೋರುತ್ತಿರುತ್ತದೆ. ಆದರ ಜ್ಞಾನದಿಂದ ಪ್ರಪಂಚವೆಲ್ಲವೂ ವಿಲಯ ವಾಗಲು ತನ್ನ ರೂಪದಲ್ಲಿ ನಿಲ್ಲುವದೇ ಪರಮಮುಕ್ತಿಯೆಂದು ಒಪ್ಪಿರುತ್ತೇನೆ. ಇದಕ್ಕೆ ವೇದಾಂತವಾಕ್ಯವೇ ಪ್ರಮಾಣವು"– ಎಂದು ಹೇಳಿ ನಾನು ವಾದದಲ್ಲಿ ಸೋತರೆ ಸಂನ್ಯಾಸವನ್ನೂ ಕಾಷಾಯವಸ್ತ್ರವನ್ನೂ ಬಿಟ್ಟು ಬಿಳಿಯ ಬಟ್ಟೆಯ ನ್ನುಟ್ಟುಕೊಳ್ಳುವೆನು. ಈ ಉಭಯಭಾರತಿಯು ಇದಕ್ಕೆ ಸಾಕ್ಷಿಯಾಗಿರಲಿ ! (ಮಾ. ಶಂ. ೮–೬೧, ೯೨) ಇವೆ.

ಆಗ ವಿಶ್ವರೂಪನು ಅಂದದ್ದೇನೆಂದರೆ :

ವೇದಾನ್ತಾ ನ ಪ್ರಮಾಣಂ ಚಿತಿವಪುಷಿ ಪದೇ ತತ್ರ ಸಂಗತ್ಯಯೋಗಾತ್
ಪೂರ್ವೋ ಭಾಗಃ ಪ್ರಮಾಣಂ ಪದಚಯಯುಗಮಿತೇ ಕಾರ್ಯವಸ್ತ್ವನ್ಯಶೇಷೇ ।

ಶಬ್ದಾನಾಂ ಕಾರ್ಯಮಾತ್ರಂ ಪ್ರತಿ ಸಮುಧಿಗತಾ ಶಕ್ತಿರಭ್ಯುನ್ನತಾನಾಂ
ಕರ್ಮಭ್ಯೋ ಮುಕ್ತಿರಿಷ್ಟಾ ತದಿಹ ತನುಭೃತಾಮಾಯುಷಃ ಸ್ಯಾತ್ಸಮಾಪ್ತೇಃ ॥

ವಾದೇ ಕೃತೇsಸ್ಮಿನ್ಯದಿ ಮೇ ಜಯಾನ್ಯಸ್ತ್ವಯೋದಿತಾತ್ ಸ್ಯಾದ್ವಿಪರೀತಭಾವಃ ।
ಯೋಯಂ ತ್ವಯಾ ಭೂದ್ಗದಿತಾ ಪ್ರಸಾಕ್ಷ್ಯಜಾನಾತಿ ಚೇತ್ ನಾ ಭವಿತಾವಧೂರ್ಮೇ

ವೇದಾಂತವಾಕ್ಯಗಳು ಚೈತನ್ಯವಸ್ತುವಿನ ವಿಷಯಕ್ಕೆ ಪ್ರಮಾಣವಲ್ಲ ; ಏಕೆಂದರೆ ಶಬ್ದಕ್ಕೆ ವಸ್ತುವಿನಲ್ಲಿ ಶಕ್ತಿಯ ಸಂಬಂಧವಿರುವದಿಲ್ಲ. ವೇದಪೂರ್ವ

ಭಾಗವೇ ಕಾರ್ಯದಲ್ಲಿ ಪ್ರಮಾಣವು ; ಶಬ್ದಗಳಿಗೆ ಕಾರ್ಯಮಾತ್ರದಲ್ಲಿ ಶಕ್ತಿ ಎಂಬುದು ಪ್ರಸಿದ್ಧವಾಗಿದೆ. ಕರ್ಮದಿಂದಲೇ ಮುಕ್ತಿ ಎಂಬುದು ನನ್ನ ಮತವು ಆದು ಜೀವರಿಗೆ ಯಾವಜ್ಜೀವನವೂ ಇರತಕ್ಕದ್ದು. ವಾದದಲ್ಲಿ ನನಗೆ ಸೋಲಾದರೆ ನೀವು ಹೇಳಿದ್ದಕ್ಕೆ ವಿಪರೀತವಾಗಲಿ, ಎಂದರೆ ನಾನು ಸಂನ್ಯಾಸಿಯಾಗಿ ಕಾಷಾಯ ವಸ್ತ್ರವನ್ನು ಧರಿಸುವೆನು. ನನ್ನ ಹೆಂಡತಿಗೆ ಈ ವಿಷಯವು ತಿಳಿದಿದ್ದರೆ ನೀವು ಹೇಳಿದಂತೆ ಅವಳೇ ಸಾಕ್ಷಿಯಾಗಬಹುದು (ಮಾ. ಶಂ. ೮–೬೪, ೬೫). ಇದೇ ಶ್ಲೋಕಗಳು ವ್ಯಾಸಾಚಲೀಯದಲ್ಲಿಯೂ (ವ್ಯಾ. ಶಂ. ೬–೯೪, ೯೫) ಇವೆ. ಈ ಪ್ರತಿಜ್ಞೆಗಳ ವಿಷಯವಲ್ಲಿ ಸ್ವಲ್ಪ ಹೇಳತಕ್ಕದ್ದಿದೆ.

(೧) ಯಾವ ವಿಷಯಕ್ಕೆ ವಿವಾದವಾಯಿತೆಂಬುದನ್ನು ಅನಂತಾನಂದ ಗಿರೀಯದಲ್ಲಿ ಹೇಳಿಲ್ಲ. 'ನಿಗಮಾದಿಸರ್ವವಿದ್ಯಾಪ್ರಸಙ್ಗೇ ಕ್ರಿಯಮಾಣೇ' (ಪು. ೨೧೬) ಎಂದಿಷ್ಟೇ ಹೇಳಿದೆ. ಜಿದ್ವಿಲಾಸೀಯದಲ್ಲಿ ಸಂನ್ಯಾಸದ ವಿಷಯಕ್ಕೆ, ಪಾತ್ರ ಮುಖ್ಯವಾದ ವಿವಾದವಾದಂತೆ ಬರೆದಿದೆ. ಮಾಧವೀಯದಲ್ಲಿ ಮೇಲೆ ಕೊಟ್ಟಿರುವಂತೆ ಸ್ಪಷ್ಟವಾದ ಪ್ರತಿಜ್ಞಾವಾಕ್ಯಗಳೂ ಇವೆ ; ಅವುಗಳ ವಿಸ್ತೃತವಾದ ವಾದವೂ ಇದೆ.

(೨) ಬ್ರಹ್ಮಜ್ಞಾನದಿಂದಲೇ ಮುಕ್ತಿ ಎಂಬುದು ಆಚಾರ್ಯರ ಮತವು ; ಕರ್ಮದಿಂದಲೇ ಮುಕ್ತಿ ಎಂಬುದು ವಿಶ್ವರೂಪನು. ಸೋತವರು ಗೆದ್ದವರ ಆಶ್ರಮವನ್ನು ಸ್ವೀಕರಿಸಬೇಕೆಂಬ ಪಣವು ಇಬ್ಬರಿಗೂ ಒಪ್ಪಾಯಿತು. ವೇದಾಂತದ ಪ್ರಕಾರ ಸಂನ್ಯಾಸಿಯಾದವನು ಕೆಳಗಿನ ಆಶ್ರಮಕ್ಕೆ ಬರುವದು ಪಾಪ (ವೇ.ಸೂ. ೩–೪–೪೦) ಮಂಡನನಂತೆ ಅಗ್ನಿಯನ್ನು ಉದ್ವಾಸನೆಮಾಡುವದೂ ವೇದವಿಹಿತವಾದ ಕರ್ಮವನ್ನು ತ್ಯಾಗಮಾಡುವದೂ ಪಾಪ. ಆದ್ದರಿಂದ ಸೋತರೆ ಇಂಥ ದುಷ್ಕೃತವನ್ನು ಮಾಡಿದವನಾಗುವೆನು– ಎಂಬ ಅಭಿಪ್ರಾಯದಿಂದ ಹೀಗೆ ಪಣವನ್ನು ತೊಟ್ಟರೆಂತ ಹೇಳಬೇಕು. ಇಬ್ಬರಿಗೂ ತನ್ನತನ್ನ ಮತವೇ ಜಯಿಸುವದೆಂಬ ಭರವಸೆಯಿತ್ತು. ಹೀಗೆ ಆಶ್ರಮಾಂತರಸ್ವೀಕಾರದ ಪಣವನ್ನು ಇವರಿಬ್ಬರೂ ಒಪ್ಪಿದರೆಂದು ಶಂಕರವಿಜಯಗಳಲ್ಲಿದೆ.

(೩) ಬ್ರಹ್ಮವು ಅಜ್ಞಾನದಿಂದ, ಶುಕ್ತಿಯು ಬೆಳ್ಳಿಯಾಗಿ ಕಾಣುವಂತೆ, ಪ್ರಪಂಚಾಕಾರವಾಗಿ ತೋರುತ್ತಿರುತ್ತದೆ ; ಆದರೆ ಜ್ಞಾನದಿಂದ ಜೀವನು ತನ್ನ ಸ್ವರೂಪದಲ್ಲಿಯೇ ನಿಲ್ಲುವದೇ ಮುಕ್ತಿ–ಎಂಬುದು ಶಾಂಕರವೇದಾಂತದಲ್ಲಿ ಪ್ರಧಾನವಾಗಿರುವ ವಾದವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಬ್ರಹ್ಮವು ಅಜ್ಞಾನಾವೃತವಾಗಿದೆ ಎಂದು ಹೇಳಿರುವದರಲ್ಲಿ ಕವಿಯ ಆಶಯವೇನೆಂಬುದು ತಿಳಿಯುವಂತಿಲ್ಲ. ಮಾಧವೀಯದ ಸಾರವಾದ ಸದಾನಂದನ ಕೃತಿಯಲ್ಲಿಯೂ ಈ ಶಬ್ದವೇ ಇದೆ. ಈ ಅಜ್ಞಾನಾವರಣದ ವಿಷಯವಾಗಿ ಮುತ್ತೊಮ್ಮೆ ಪ್ರಸ್ತಾಪಿಸುವೆವು.

(೪) ವೇದಾಂತಗಳು ಚೈತನ್ಯವಸ್ತುವಿಗೆ ಪ್ರಮಾಣವಲ್ಲ ಎಂಬ ಪ್ರತಿಜ್ಞೆಯೂ ಸರಿಯಾದದ್ದೇ. ಏಕೆಂದರೆ ಆಚಾರ್ಯರು ಸಮನ್ವಯಭಾಷ್ಯಕ್ಕೆ ಪೂರ್ವಮೀಮಾಂಸಕರ ಮತದಂತೆ ಪೂರ್ವಪಕ್ಷವನ್ನು ಒಡ್ಡುವ ಸಂದರ್ಭದಲ್ಲಿ ಉಪನಿಷದ್ವಾಕ್ಯಗಳು ಕರ್ತೃವಾದ ಆತ್ಮ, ದೇವತೆಗಳು– ಮುಂತಾದವುಗಳನ್ನು ಹೇಳುವದರಿಂದ ಕ್ರಿಯಾವಿಧಿಗೆ ಶೇಷವಾಗಿರಬಹುದು ಅಥವಾ ಉಪಾಸನಾದಿ ಕ್ರಿಯಾಂತರವನ್ನು ಹೇಳಬಹುದು ; ವಸ್ತುಮಾತ್ರದಲ್ಲಿ ಅವು ಪ್ರಮಾಣವಾಗಲಾರವು– ಎಂಬ ಪಕ್ಷವನ್ನು ಮಂಡಿಸಿರುತ್ತಾರೆ.

(೫) 'ಶಬ್ದಕ್ಕೆ ಕಾರ್ಯವಸ್ತುವನ್ನು ಹೇಳುವದರಲ್ಲಿಯೇ' – ಎಂಬ ವಾದವು ದ್ಯಾಖ್ಯಾನಗಳಲ್ಲಿದೆಯಾದರೂ ಆಚಾರ್ಯರು ಸ್ಫುಟವಾಗಿ ತಮ್ಮ ಭಾಷ್ಯಗಳಲ್ಲಿ ಎಲ್ಲಿಯೂ ಅದನ್ನು ಅನುವಾದಮಾಡಿಕೊಂಡು ವಿಮರ್ಶಿಸಿರುವಂತೆ ಕಾಣಿಸುವದಿಲ್ಲ. ಅನುಷ್ಠೇಯನಿಷ್ಠವಾದ ವಾಕ್ಯವೇ ಪ್ರಮಾಣವು, ಕಾರ್ಯವನ್ನು ಹೇಳುವ ಕ್ರಿಯಾಪದವಿಲ್ಲದಿದ್ದರೆ ಪದಗಳು ಸಂಹತವಾಗುವದಿಲ್ಲ– ಎಂಬ ಪೂರ್ವಪಕ್ಷವು ಬೃಹದಾರಣ್ಯಕಭಾಷ್ಯದಲ್ಲಿದೆ(ಬೃ. ೩–೧) ; ಶಾಸ್ತ್ರಕ್ಕೆ ಪ್ರವೃತ್ತಿ, ನಿವೃತ್ತಿ (ಮಾಡಿಸುವದು ಅಥವಾ ಬಿಡಿಸುವದು) ಇವೆರಡೇ ಪ್ರಯೋಜನಗಳು ಎಂಬ ಪೂರ್ವಪಕ್ಷವು ಬ್ರಹ್ಮಸೂತ್ರಭಾಷ್ಯ (ಸೂ. ಭಾ. ೧–೧–೪)ದಲ್ಲಿದೆ. 'ಶಬ್ದಕ್ಕೆ ಕಾರ್ಯವಸ್ತುವಿನಲ್ಲಿಯೇ ಶಕ್ತಿ' ಎಂಬ ರೂಪದ ಪೂರ್ವಪಕ್ಷವು ಎಲ್ಲಿಯೂ ಕಾಣುವದಿಲ್ಲ. ಆದ್ದರಿಂದ ವ್ಯಾಖ್ಯಾನಗ್ರಂಥಗಳ ವಾದದ ವಾಸನೆಯಿಂದಲೇ ಈ ಪೂರ್ವಪಕ್ಷವನ್ನು ಮಾಧವವ್ಯಾಸಾಚಲರು ಬರೆದಿರಬೇಕೆಂತತೋರುತ್ತದೆ. ಈ ವಿಷಯಕ್ಕೆ ಹೇಗೆ ವಾದವಾಯಿತೆಂಬುದರ ವಿವರವು ಶಂಕರವಿಜಯಗಳಲ್ಲಿ ಕಾಣಬರುವದಿಲ್ಲ.

ಮಂಡನನೊಡನೆ ಆದ ವಾದ ; ಮಾಧವೀಯದಂತೆ :

೧೦೫. ಈಗ ವಾದವಿಭಾಗಗಳನ್ನು ಕುರಿತ ವಿವರವನ್ನು ನೋಡೋಣ. ಇಲ್ಲಿನ ಶ್ಲೋಕಗಳ ಸಂಖ್ಯೆಯನ್ನು ಅಲ್ಲಲ್ಲಿಯೇ ತೋರಿಸಿದೆ. ನಡುನಡುವೆ ಕಂಸದಲ್ಲಿಟ್ಟಿರುವದು ನಮ್ಮ ಅಭಿಪ್ರಾಯ.

ಮಂಡನ : ಜೀವೇಶ್ವರೈಕ್ಯಕ್ಕೆ ಪ್ರಮಾಣವೇನು ? (೮–೭೬)

ಶಂಕರ : ಶ್ವೇತಕೇತುವೇ ಮೊದಲಾದವರಿಗೆ ಉದ್ದಾಲಕಾದಿಗಳು ಮಾಡಿದ ಉಪದೇಶವೇ ಪ್ರಮಾಣ (೮–೭೭).

[ಪ್ರತಿಜ್ಞಾವಾಕ್ಯದಲ್ಲಿ ಜೀವೇಶ್ವರೈಕ್ಯವನ್ನು ಶಂಕರರು ಹೇಳಿರಲಿಲ್ಲ ; ಬ್ರಹ್ಮವು ಅಜ್ಞಾನಾವೃತವಾಗಿ ಪ್ರಪಂಚರೂಪದಿಂದ ತೋರಿಕೊಳ್ಳುತ್ತಿದೆ– ಎಂದು ಹೇಳಿದ್ದರು. ಆದರ ಬಲದಿಂದ ಜೀವೇಶ್ವರೈಕ್ಯವೂ ಸಿದ್ಧವಾಗುವದು ನಿಜ; ಆದರೆ ಮಂಡನನು ಅಜ್ಞಾನದ ವಿಚಾರವನ್ನು ಬಿಟ್ಟು ಜೀವೇಶ್ವರೈಕ್ಯವನ್ನೇ ಏಕೆ ಆಕ್ಷೇಪಿಸಿದನು ?]

ಮಂಡನ : ತತ್ತ್ವಮಸಿ–ಮುಂತಾದವು ಹುಮ್, ಫಟ್–ಮುಂತಾದವು ಗಳಂತೆ ಜಪಕ್ಕಾಗಿ ಹೆಳಲ್ಪಟ್ಟವೆ. ಅವುಗಳಿಗೆ ಯಾವ ಅರ್ಥದಲ್ಲಿಯೂ ವಿವಕ್ಷೆಯಿಲ್ಲ (೮–೭೮).

ಶಂಕರ : ಅರ್ಥವು ಕಾಣದೆ ಇರುವ ಹುಂಫಡಾದಿಗಳು ಜಪಾರ್ಥಕವೆಂದಾಗಬಹುದು. ಅರ್ಥವು ತೋರುವಲ್ಲಿಯೇ ಹಾಗೆ ಹೇಳುವದು ಹೇಗೆ ಸರಿಯಾದೀತು ? (೭೯)

[ಈ ಪೂರ್ವಪಕ್ಷವಾಗಲಿ ಸಿದ್ಧಾಂತವಾಗಲಿ ಭಾಷ್ಯದಲ್ಲಿಲ್ಲ ; ವ್ಯಾಖ್ಯಾನಪ್ರಸ್ಥಾನಗಳಲ್ಲಿದೆ.]

ಮಂಡನ : ಜೀವೇಶ್ವರರಿಗೆ ಅಭೇದವು ಈ ವಾಕ್ಯದಿಂದ ತಟ್ಟನೆ ತೋರುತ್ತದೆಯಾದರೂ ಯಜ್ಞಾದಿಕರ್ತೃತ್ವವನ್ನು ಹೊಗಳುವದರಿಂದ ಅದು ವಿಧಿಶೇಷವೇ (೮೦).

ಶಂಕರ : 'ಆದಿತ್ಯೋ ಯೂಪಃ' ಮುಂತಾದ ಕರ್ಮಕಾಂಡವಾಕ್ಯಗಳು ಪ್ರಶಂಸಾರಪರವಾಗಿರುವದರಿಂದ ಕ್ರಿಯಾಶೇಷವಾಗಬಹುದು ; ಬೇರೆಯಾದ ಜ್ಞಾನಕಾಂಡದಲ್ಲಿರುವ ಈ ವಾಕ್ಯವು ಹೇಗೆ ವಿಧಿಶೇಷವಾದೀತು ? (೮೧).

[ಪೂರ್ವಪಕ್ಷದ ಛಾಯೆಯು ವಾಕ್ಯಗಳು ಸೂತ್ರಭಾಷ್ಯದ ನಾಲ್ಕನೆಯ ಸೂತ್ರದ ವ್ಯಾಖ್ಯಾನದಲ್ಲಿ ಕಾಣುತ್ತವೆ.]

ಮಂಡನ : ಹಾಗಾದರೆ ಈ ವಾಕ್ಯಗಳಲ್ಲಿ ಜೀವನಲ್ಲಿ ಪರಮಾತ್ಮದೃಷ್ಟಿಯನ್ನು ವಿಧಿಸಿದೆ ಎನ್ನೋಣ. ಮನಸ್ಸು, ಅನ್ನ, ಆದಿತ್ಯ, ಆಕಾಶ–ಮುಂತಾದ ಆಬ್ರಹ್ಮಗಳಲ್ಲಿ ಬ್ರಹ್ಮದೃಷ್ಟಿಯನ್ನು ವಿಧಿಸಿರುವಂತೆಯೇ ಇದು. ಇದರಿಂದ ಕರ್ಮ ಸಮೃದ್ಧಿಯಾಗುವದು (೮೨).

ಶಂಕರ : ಮಿಕ್ಕಕಡೆಗಳಲ್ಲಿ ಕಾಣುತ್ತಿರುವಂತೆ ವಿಜಾದಿವಿಧಾಯಕಶಬ್ದವಿರುವಂತೆ ಇಲ್ಲಿಲ್ಲವಲ್ಲ ! ಇದು ಹೇಗೆ ವಿಧಿಯಾದೀತು ?

[ಈ ಪೂರ್ವಪಕ್ಷವೂ ಭಾಷ್ಯದಲ್ಲಿದೆ. ಆದರೆ ಸಿದ್ಧಾಂತವನ್ನು ಈ ಮಾತಿನಲ್ಲಿ ಆಚಾರ್ಯರು ಬರೆದಿಲ್ಲ.]

ಮಂಡನ : ರಾತ್ರಿಸತ್ರವೆಂಬ ಯಾಗದಲ್ಲಿ ಪ್ರತಿಷ್ಠಾಫಲವು ಕಾಣುವದರಿಂದ ವಿಧಿಯನ್ನು ಹೇಗೆ ಮೀಮಾಂಸಕರು ಕಲ್ಪಿಸುವರೋ ಹಾಗೆ ಫಲಶ್ರುತಿಯಿರುವದರಿಂದ ವಿಧಿಯನ್ನು ಕಲ್ಪಿಸಬಹುದು (೮೪).

ಶಂಕರ : ಹಾಗಾದರೆ ಕ್ರಿಯೆಯಿಂದ ಹುಟ್ಟುವ ಮುಕ್ತಿಯು ಸ್ವರ್ಗದಂತೆ ಅನಿತ್ಯವೆಂದಾಗುವದು. ಉಪಾಸನೆ ಎಂಬಿದು ಮಾಡುವದಕ್ಕೂ ಬಿಡುವದಕ್ಕೂ ಬೇರೆಯ ರೀತಿಯಲ್ಲಿಯೇ ಮಾಡುವದಕ್ಕೂ ಒರುವದರಿಂದ ಅದೂ ಕ್ರಿಯೆಯೇ (೮೫).

[ಪೂರ್ವಪಕ್ಷದ ಅನುವಾದವು ಭಾಷ್ಯದಲ್ಲಿ ಕಾಣುವದಿಲ್ಲ. ಸಿದ್ಧಾಂತದ ಯುಕ್ತಿ ಬೀಸೋ ಅಲ್ಲಿದೆ.]

ಮುಂಡನ : ಇದು ಉಪಾಸನಾವಾಕ್ಯವೆನ್ನುವದು ಬೇಡ. ಜೀವನು ಪರಮಾತ್ಮನಿಗೆ ಸಮನಾಗುವನೆಂದು ಹೇಳುವ ವಾಕ್ಯವಾಗಲಿ ! (೮೬).

ಶಂಕರ : ಈ ವಾಕ್ಯವು ಚೇತನರೂಪದಿಂದ ಸಾಮ್ಯವನ್ನು ಹೇಳುತ್ತದೆಯೊ, ಸರ್ವಜ್ಞತ್ವಸರ್ವಾತ್ಮತ್ವಾದಿಗುಣಗಳಿಂದ ಸಾಮ್ಯವನ್ನು ಹೇಳುತ್ತದೆಯೊ? ಮೊದಲನೆಯ ಪಕ್ಷವೆಂದರೆ, ಜೀವನು ಪರಮಾತ್ಮಸ್ವರೂಪವೇ ಎಂದಾಗುವದರಿಂದ ನಿಮ್ಮ ಸಿದ್ಧಾಂತಕ್ಕೆ ವಿರೋಧವಾಗುತ್ತದೆ (೮೭).

[ಈ ಪೂರ್ವಪಕ್ಷವಾಗಲಿ ಸಿದ್ಧಾಂತವಾಗಲಿ ಭಾಷ್ಯದಲ್ಲಿಲ್ಲ. ವಿಮಾಮಾಂಸಕನಾದ ಮುಂಡನನು ಈ ಪೂರ್ವಪಕ್ಷವನ್ನು ಮಾಡುವದಕ್ಕಾಗಲಿ ಶಂಕರರು ಅದಕ್ಕೆ ಉತ್ತರವನ್ನು ಹೇಳುವದಕ್ಕಾಗಲಿ ಅವಸರದಿಲ್ಲ. ರಾಮಾನುಜಾದಿಗಳ ಸಿದ್ಧಾಂತವನ್ನು ಮನಸ್ಸಿನಲ್ಲಿಟ್ಟುಕೊಂಡು ಕವಿಯು ಈ ಪೂರ್ವಪಕ್ಷಸಿದ್ಧಾಂತಗಳನ್ನು ಸೇರಿಸಿರಬಹುದೆ ?]

ಮುಂಡನ : ಅವಿದ್ಯೆಯಿಂದ ಮೊದಲು ಕಾಣದೆ ಇದ್ದು ನಿತ್ಯತ್ವೆಮಾತ್ರದಿಂದಲೂ ಪರಮಾತ್ಮನ ಗುಣದಂಥ ಸುಖಜ್ಞಾನಾದಿಗಳಿಂದಲೂ ಸಾಮ್ಯವಾಗುವದೆಂದುಹೇಳಿದರೆ ದೋಷವಿರುವದಿಲ್ಲವಲ್ಲ ! (೮೮)

ಶಂಕರ : ಹಾಗಾದರೆ ಜೀವನುಕ್ತಿಯಲ್ಲಿ ಪರಮಾತ್ಮನೇ ಆಗುವನೆಂದೇ ಈ ವಾಕ್ಯವು ಹೇಳಲಿ ; ಆ ವಿಷಯಕ್ಕೆ ದುರಾಗ್ರಹವೇಕೆ ? ಅವಿದ್ಯೆಯ ಆವರಣದಿಂದ ಈ ಸಾಮ್ಯವು ಕಾಣಿಸುವದಿಲ್ಲವೆಂದು ನೀನೇ ಒಪ್ಪಿದ್ದೀಯಷ್ಟೆ ? (೮೯)

[ಹಿಂದಿನ ಪೂರ್ವಪಕ್ಷಸಿದ್ಧಾಂತಗಳಿಗೆ ಕೊಟ್ಟಿರುವ ಟಪ್ಪಣಿಯೇ ಈ ಪೂರ್ವಪಕ್ಷ ಸಿದ್ಧಾಂತಗಳಿಗೂ ಅನ್ವಯಿಸುತ್ತದೆ.]

ಮುಂಡನ : ಜಗತ್ಕಾರಣನಾದ ಈಶ್ವರನಿಗೆ ಚೇತನತ್ವದಿಂದ ಜೀವಸಾಮ್ಯವನ್ನು ವಾಕ್ಯವು ಹೇಳುತ್ತದೆಯೆನ್ನೋಣ! ಅದರಿಂದ ಪ್ರಧಾನಪರಮಾಣ್ವಾದಿವಾದಗಳನ್ನು ತಿರಸ್ಕರಿಸಿದಂತೆ ಆಗುವದಷ್ಟೆ ? (೯೦)

ಶಂಕರ : ಹಾಗಿದ್ದರೆ ಅಸ್ತಿ (ಅಂಥ ಚೇತನವು ಇದೆ) ಎಂಬ ಕ್ರಿಯಾಪದ ವಿರಬೇಕಾಗಿತ್ತು; ತತ್ತ್ವಮಸಿ (ಅದೇ ನೀನಾಗಿದೀಯೆ) ಎಂದಿರಬಾರದಿತ್ತು. ಇದಲ್ಲದೆ 'ತದ್ಐಕ್ಷತ ಬಹು ಸ್ಯಾಮ್' (ನಾನು ಬಹುವಾಗುವೆನು ಎಂದು ಯೋಚಿಸಿಕೊಂಡಿತು) ಎಂಬಲ್ಲಿ ಚೇತನತ್ವವು ಮೊದಲೇ ಇದ್ದಿತೆಂದು ಹೇಳಿರುವದರಿಂದ ಆದನ್ನು (ತತ್ತ್ವಮಸಿ ಎಂದು) ಮತ್ತೆ ಹೇಳಬೇಕಾದದ್ದು ಇರುವದಿಲ್ಲ ;ಅಂದರೆ ನಿನ್ನ ಈ ಪಕ್ಷಕ್ಕೆ ಪುನರುಕ್ತಿದೋಷವಿದೆ ಎಂದು ಭಾವ (೯೧).

[ಈ ಆಕ್ಷೇಪಸಮಾಧಾನಗಳು ಭಾಷದಲ್ಲಿಲ್ಲ.]

ಮಂಡನ : ಹೀಗಿದ್ದರೂ ಈ ಐಕ್ಯವು ಪ್ರತ್ಯಕ್ಷಾದಿವಿರುದ್ಧವಾಗಿರುವದರಿಂದ ಜಪಮಂತ್ರಕ್ಕಾಗಿ ಹೇಳಿದ ವಾಕ್ಯವಿದೆಂದಾಗಲಿ ! (೯೨)

ಶಂಕರ : ಪ್ರತ್ಯಕ್ಷದಿಂದ ಭೇದವು ಸಿದ್ಧವಾಗುವಂತಿದ್ದರೆ ವಿರೋಧವಾಗುವಂತಿದ್ದರೆ ವಿರೋಧವಾಗುವದೆನ್ನಬಹುದಾಗಿತ್ತು. ಸಂನಿಕರ್ಷವೇ ಇಲ್ಲದ್ದರಿಂದ ಭೇದವು ಸಿದ್ಧವಾಗುವದೇ ಇಲ್ಲ ; ವಿರೋಧವೆಲ್ಲಿ ಬಂತು ? (೯೩)

[ಭಾಷ್ಯದಲ್ಲಿ ಈ ಬಗೆಯು ಸಿದ್ಧಾಂತವಾದವಿಲ್ಲ.]

ಮಂಡನ : 'ನಾನು ಈಶ್ವರನಿಗಿಂತ ಭಿನ್ನನು' ಎಂದು ಜೀವಾತ್ಮನಲ್ಲಿ ವಿಶೇಷಣತಾಸಂಬಂಧವಿದೆ. ಆದ್ದರಿಂದ ಭೇದಕ್ಕೂ ಇಂದ್ರಿಯಕ್ಕೂ ಸಂನಿಕರ್ಷವಿಲ್ಲದಿದ್ದರೂ ಅನ್ಯೋನ್ಯಾಭಾವರೂಪವಾದ ಭೇದವು ವಿಶೇಷಣತಾರೂಪವಾದ ಸಂಬಂಧದಿಂದಲೇ ತಿಳಿಯಬರಬಹುದಲ್ಲವೆ ?

ಶಂಕರ : ಕೇವಲವಿಶೇಷಣತ್ವಕ್ಕೆ ಈ ಸಂಬಂಧವನ್ನು ಹೇಳುವದಕ್ಕಿಲ್ಲ. ಅವನ್ನೊಪ್ಪುವದಾದರೆ ಎಲ್ಲೆಲ್ಲಿ ವಿಶೇಷಣತ್ವವಿದೆಯೋ ಅಂಥ ವ್ಯವಹಿತಭೂತ ಲಾದಿಯಲ್ಲಿರುವ ಅಭಾವಕ್ಕೂ ವಿಶೇಷಣತಾಸಂಬಂಧದಿಂದ ಪ್ರತ್ಯಕ್ಷತ್ವವುಂಟೆಂದಾಗಿ ಅತಿಪ್ರಸಕ್ತಿ ಬರುವದು. ಆದ್ದರಿಂದ ಇಂದ್ರಿಯಸಂನಿಕರ್ಷವಿದ್ದಲ್ಲಿಯೇ ವಿಶೇಷಣತಾಸಂಬಂಧವು ಅಭಾವಜ್ಞಾನಕ್ಕೆ ಕಾರಣವೆನ್ನಬೇಕು. ಆದರೆ ಇಲ್ಲಿ ಆತ್ಮನಿಗೂ ಇಂದ್ರಿಯಕ್ಕೂ ಸಂನಿಕರ್ಷವಿಲ್ಲ (೯೫).

[ಈ ಪೂರ್ವಪಕ್ಷವು ತಾರ್ಕಿಕರ ಪ್ರತ್ಯಕ್ಷಪ್ರಕ್ರಿಯೆಯನ್ನನುಸರಿಸಿ ಮಾಡಿದ್ದು. ಈಚಿನ ಭೇದಧಿಕ್ಕಾರಾದಿಗ್ರಂಥಗಳಲ್ಲಿ ಇಂಥ ಪೂರ್ವಪಕ್ಷಸಿದ್ಧಾಂತಗಳು ಕಾಣಬರುತ್ತಿದೆಯಾದರೂ ಭಾಷ್ಯದಲ್ಲಿ ಇವು ಇಲ್ಲವೆಂಬುದನ್ನು ನೆನಪಿಡಬೇಕು.]

ಮಂಡನ : ಭೇದಾಶ್ರಯನಾದ ಆತ್ಮನಿಗೆ ಇಂದ್ರಿಯಸಂನಿಕರ್ಷವಿಲ್ಲವೆಂದು ಹೇಳಿದ್ದು ಸರಿಯಲ್ಲ. ಚಿತ್ತ, ಆತ್ಮ—ಎರಡೂ ದ್ರವ್ಯಗಳಾಗಿರುವದರಿಂದ ಸಂಯೋಗಾಶ್ರಯತ್ವವಿದೆ (೯೬).

ಶಂಕರ : ಆತ್ಮನು ವಿಭುವೊ, ಅಣುಪರಿಮಾಣನೊ ? ಎರಡರಲ್ಲಿಯೂ ಸಂಯೋಗಕ್ಕೆ ಕಾರಣವಿರುವದಿಲ್ಲ. ಸಂಯೋಗಿತ್ವವು ಸಾವಯವಗಳಿಗೆ ಇರುತ್ತದೆಯೇ ಹೊರತು ನಿರವಯವಗಳಿಗೆ ಇರುವದು ಲೋಕದಲ್ಲಿ ಕಂಡಿಲ್ಲ. ಮನಸ್ಸು ಇಂದ್ರಿಯವೆಂದು ಒಪ್ಪಿ ಈ ಸಮಾಧಾನವನ್ನು ಹೇಳಿದೆವು ; ನೇತ್ರಾದೀಂದ್ರಿಯಗಳಿಗೆ ಮನಸ್ಸು ಸಹಾಯಕಮಾತ್ರ, ಅದು ಇಂದ್ರಿಯವಲ್ಲ.

[ಈ ಪೂರ್ವಪಕ್ಷವೂ ಹಿಂದಿನ ಪೂರ್ವಪಕ್ಷಕ್ಕೆ ಸೇರಿದ್ದು, ತರ್ಕಶಾಸ್ತ್ರದ ಪರಿಚಯವಿಲ್ಲದವರಿಗೆ ಇದು ತಿಳಿಯುವದಿಲ್ಲ. ಈ ಪೂರ್ವಪಕ್ಷಸಿದ್ಧಾಂತಗಳಂತೂ ಭಾಷ್ಯದಲ್ಲಿಲ್ಲ, ಮನಸ್ಸು ಇಂದ್ರಿಯವಲ್ಲವೆಂಬುದು ಸೂತ್ರಭಾಷ್ಯಕ್ಕೆ (ಸೂ. ಭಾ. ೨-೪-೬,೨-೪-೧೬) ವಿರುದ್ಧ.]

ಮುಂಡನ : ಹಾಗಾದರೆ ಭೇದಪ್ರಮೆಯು ಇಂದ್ರಿಯಜನ್ಯವೆಂದು ಒಪ್ಪುವದೇ ಬೇಡ. ಅದು ಸಾಕ್ಷಿರೂಪವಾದದ್ದೇ ಎನ್ನೋಣ ! ಆ ಸಾಕ್ಷಿಪ್ರತ್ಯಕ್ಷಕ್ಕೆ ವಿರುದ್ಧವಾಗಿರುವದರಿಂದ ತತ್ತ್ವಮಸಿವಾಕ್ಯವು ಹೇಗೆತಾನೆ ಅಭೇದವನ್ನು ಹೇಳೀತು ? (೯೯).

ಶಂಕರ : ಈ ಸಾಕ್ಷಿರೂಪಪ್ರತ್ಯಕ್ಷವು ಅವಿದ್ಯಾಯುಕ್ತನಾದ ಜೀವನಿಗೂ ಮಾಯಾಯುಕ್ತನಾದ ಈಶ್ವರನಿಗೂ ಇರುವ ಭೇದವನ್ನು ತಿಳಿಸುತ್ತದೆ. ಶ್ರುತಿಯು ಕೇವಲ ಜೀವೇಶ್ವರರಿಗೆ ಅಭೇದವನ್ನು ಹೇಳುತ್ತದೆ. ಆದ್ದರಿಂದ ವಿರೋಧವಿಲ್ಲ. ಒಂದುವೇಳೆ ವಿರೋಧವೇ ಎಂದರೂ ಅಪಚ್ಛೇದನ್ಯಾಯದಿಂದ ಮುಂಚೆ ಬಂದಿದ್ದ ಪ್ರತ್ಯಕ್ಷವೇ ಆಮೇಲೆ ಪ್ರವೃತ್ತವಾದ ಶ್ರುತಿಯ ಬಾಧಕವಾಗುವದು ಯುಕ್ತ (೧೦೦, ೧೦೧).

[ಈ ಪೂರ್ವಪಕ್ಷಸಿದ್ಧಾಂತಗಳು ಭಾಷ್ಯದಲ್ಲಿಲ್ಲ. ಅಪಚ್ಛೇದನ್ಯಾಯವನ್ನು ಮುಂಡನ ಮಿಶ್ರವಾಚಸ್ಪತಿಮಿಶ್ರರು ಉಪಯೋಗಿಸಿರುತ್ತಾರಾದರೂ ಆಚಾರ್ಯರು ಉಪಯೋಗಿಸಿಲ್ಲ. ಅವರು ಪ್ರತ್ಯಕ್ಷದಿಂದ ತೋರುವ ಸುಖಿತ್ವದುಃಖಿತ್ವಾದಿಗಳು ಬುದ್ಧ್ಯಾದ್ಯುಪಾಧಿಜನ್ಯವೆಂದೂ ಕಲ್ಪಿತಾತ್ಮನ ವಿಷಯವೆಂದೂ ಕೆಲವು ಕಡೆಗಳಲ್ಲಿ ಹೇಳಿರುತ್ತಾರೆ. ಶಾಬ್ದಪ್ರತ್ಯಕ್ಷಗಳಿಗೆ ವಿರೋಧವಿವೆ ಎಂಬುದನ್ನೇ ಆಚಾರ್ಯರು ಒಪ್ಪುವದಿಲ್ಲ. ಸಾಕ್ಷಿಪ್ರತ್ಯಕ್ಷಕ್ಕೆ ಮಾಯಾಯುಕ್ತನಾದ ಈಶ್ವರನು ವಿಷಯನೆ?–ಎಂಬುದು ವಿಚಾರಣೀಯವಾಗಿದೆ.]

ಮುಂಡನ : ಈ ಜೀವನು ಬ್ರಹ್ಮನಿರೂಪಿತಭೇದವುಳ್ಳವನು, ಏಕೆಂದರೆ ಘಟಾದಿಗಳಂತೆ ಅನರ್ವಜ್ಞನಾಗಿರುತ್ತಾನೆ ; ಘಟಾದಿಗಳೇ ಇಲ್ಲಿ ದೃಷ್ಟಾಂತವು– ಎಂಬ ಅನುಮಾನದಿಂದ ಈ ವಾಕ್ಯಜ್ಞಾನಕ್ಕೆ ಬಾಧೆಯಾಗುವದಿಲ್ಲವೆ ? (೧೦೨).

ಶಂಕರ : ಇಲ್ಲಿ ಪರಮಾರ್ಥಭೇದವನ್ನು ಅನುಮಾನದಿಂದ ಸಾಧಿಸಿರುತ್ತೀರೊ ? ಕಲ್ಪಿತಭೇದವನ್ನು ಸಾಧಿಸಿರುತ್ತೀರೊ ? ಪಾರಮಾರ್ಥಿಕಭೇದವನ್ನು ಎನ್ನುವದಾದರೆ ದೃಷ್ಟಾಂತದಲ್ಲಿ ಅದು ಇರುವದಿಲ್ಲ. ಕಾಲ್ಪನಿಕಭೇದವನ್ನು ಎಂದರೆ ಅದನ್ನು ನಾವು ಒಪ್ಪಿಯೇ ಇರುತ್ತೇವಲ್ಲ ! (೧೦೩).

ಮುಂಡನ : ಸ್ವಜ್ಞಾನಾಬಾಧ್ಯಭೇದಾಶ್ರಯತ್ವವನ್ನೇ ನಾವು ಈ ಅನುಮಾನದಿಂದ ಸಾಧಿಸಿರುತ್ತೇವೆ. ಅದು ಘಟಾದಿಗಳಲ್ಲಿದೆ, ಏಕೆಂದರೆ ಘಟಾದಿಗತ ಭೇದವು ಆದರ ಜ್ಞಾನದಿಂದ ಬಾಧ್ಯವಲ್ಲ. ಆತ್ಮಜ್ಞಾನದಿಂದ ಭೇದವು ಬಾಧ್ಯವಲ್ಲವೆಂದೇನೂ ನೀವು ಒಪ್ಪಿಲ್ಲವಷ್ಟೆ ? ಆದ್ದರಿಂದ ಒಪ್ಪಿದ್ದನ್ನೇ ಸಾಧಿಸಿದಂತೆ ಆಗಲಿಲ್ಲ ; ದೃಷ್ಟಾಂತವಿಲ್ಲವೆಂಬ ದೋಷವೂ ಇಲ್ಲ (೧೦೪).

ಶಂಕರ : ಸ್ವಜ್ಞಾನದಿಂದ ಅಬಾಧ್ಯವಾದ ಭೇದವುಳ್ಳವನೆಂದು ನೀವು ಹೇಳುವಲ್ಲಿ ಸ್ವಶಬ್ದದಿಂದ ಸುಖಾದಿಗಳುಳ್ಳ ಆತ್ಮನು ವಿವಕ್ಷಿತನಾಗಿದ್ದಾನೊ, ಆದಿಲ್ಲದವನೊ ? ಮೊದಲಿನ ಅರ್ಥವಾದರೆ ನಮಗೆ ಆ ಭೇದವು ಇಷ್ಟವೇ ಆಗಿರು

ಸಮಂಜಸ ಸಿದ್ಧಸಾಧನವೇ ಆಯಿತು. ಎರಡನೆಯ ಅರ್ಥವಾದರೆ ಆಗ ಘಟಾದಿಗಳು ದೃಷ್ಟಾಂತವಾಗಲಾರವು ; ಏಕೆಂದರೆ ಘಟವು ದುಃಖಾದಿವಿರಹಿತನಾದ ಆತ್ಮನಲ್ಲಿ ಕಲ್ಪಿತವಾಗಿರುವದರಿಂದ ಆ ಆತ್ಮನ ಜ್ಞಾನದಿಂದ ಬಾಧಿತವಾಗುತ್ತದೆ. (೧೦೫, ೧೦೬).

[ಅನುಮಾನಪ್ರಮಾಣಪ್ರ ಪ್ರಪಂಚದಲ್ಲಿರೋ ಹೊರತು ಪರಮಾರ್ಥದಲ್ಲಿಲ್ಲ– ಎಂಬ ಉತ್ತರವನ್ನು ಕೊಡುವದನ್ನು ಬಿಟ್ಟು ಅನುಮಾನದಲ್ಲಿ ದೋಷವನ್ನು ಆಚಾರ್ಯರು ಏಕೆ ಹೇಳಿದರೊ !]

ಮಂಡನ : ಅಲ್ಲಯ್ಯ, ನಿರುಪಾಧಿಕಭೇದವನ್ನು ನಾನು ಸಾಧಿಸುವದಕ್ಕೆ ಹೊರಟಿದ್ದೇನೆ. ನೀನು ಔಪಾಧಿಕಭೇದವನ್ನು ಮಾತ್ರ ಒಪ್ಪಿದ್ದೀಯೆ. ದೃಷ್ಟಾಂತವಾದ ಘಟವಲ್ಲಿ ನಿರುಪಾಧಿಕಭೇದವೇ ಇದೆಯಲ್ಲವೆ ? (೧೦೬)

ಶಂಕರ : ಘಟೇಶ್ವರಭೇದವೂ ಔಪಾಧಿಕವೇ. ಅಲ್ಲಿ ಅವಿದ್ಯೆ ಎಂಬ ಉಪಾಧಿಯಿದೆ. ಆದ್ದರಿಂದ ದೃಷ್ಟಾಂತಹಾನಿದೋಷವು ಹಾಗೇ ಉಳಿದು ಕೊಳ್ಳುತ್ತದೆ. ಇಷ್ಟಲ್ಲದೆ ನೀನು ಉದಾಹರಿಸಿದ ಅನುಮಾನದಲ್ಲಿ ಘಟಕ್ಕೆ ಜಡತ್ವ ವಿದೆ, ಆತ್ಮನಲ್ಲಿಲ್ಲ. ಆತ್ಮನು ಚಿದ್ರೂಪನಾದ್ದರಿಂದ ಪರಮೇಶ್ವರಾಭಿನ್ನನು, ಪರಮೇಶ್ವರನು– ಎಂಬುದೇ ಇಲ್ಲಿ ಯುಕ್ತವಾದ ಅನುಮಾನ. ಹೀಗೆ ನಿನ್ನ ಅನುಮಾನಕ್ಕೆ ಪ್ರತಿಪಕ್ಷವೂ ಇದೆ. ಆದ್ದರಿಂದ ಹೇತುವು ಸೋಪಾಧಿಕವೂ ಸತ್ಪ್ರತಿಪಕ್ಷವೂ ಆಗಿರುತ್ತದೆ (೧೦೭).

[ಇದೂ ಅನುಮಾನವಿಚಾರವೇ. ಹಿಂದಿನ ಟಿಪ್ಪಣಿ ಇದಕ್ಕೂ ಅನ್ವಯಿಸುತ್ತದೆ.[

ಮಂಡನ : ಬ್ರಹ್ಮವು ಜೀವಪ್ರತಿಯೋಗಿಕಧರ್ಮಿಪ್ರಮಾಣಬಾಧ್ಯವಾದ ಭೇದವುಳ್ಳದ್ದು. ಏಕೆಂದರೆ ಅದು ಸಂಸಾರಿಯಲ್ಲ ; ಘಟಾದಿಗಳೇ ದೃಷ್ಟಾಂತ. ಆತ್ಮಪ್ರತಿಯೋಗಿಕವಾದ ಭೇದವು ಬ್ರಹ್ಮಜ್ಞಾನಬಾಧ್ಯವೆಂಬುದು ನಿನಗೆ ಇಷ್ಟ. ಹಾಗಿಲ್ಲವೆಂದು ಈ ಅನುಮಾನದಿಂದ ಸಾಧಿಸುತ್ತೀನಾದ್ದರಿಂದ ಸಿದ್ಧಸಾಧನವೆಂಬ ದೋಷವಿಲ್ಲ. ಘಟಾದಿಪ್ರಮೆಯಿಂದ ಜೀವಪ್ರತಿಯೋಗಿಕಭೇದವು ಬಾಧಿತ ವಾಗುವದಿಲ್ಲವಷ್ಟೆ ? ಆದ್ದರಿಂದ ದೃಷ್ಟಾಂತಹಾನಿಯೂ ಇಲ್ಲ (೧೦೮).

ಶಂಕರ : ಆ ಭೇದವು ಎಲ್ಲಾ ಧರ್ಮಿಗಳ ಪ್ರಮೆಯಿಂದ ಅಬಾಧ್ಯವೆನ್ನುತ್ತೀಯೊ, ಅಥವಾ ಯಾವದಾದರೊಂದು ಧರ್ಮಿಯ ಪ್ರಮೆಯಿಂದ ಅಬಾಧ್ಯವೆನ್ನುತ್ತೀಯೊ ? ಘಟಾದಿಯಲ್ಲಿಯೂ ಬ್ರಹ್ಮದಲ್ಲಿಯೂ ಜೀವಪ್ರತಿಯೋಗಿಕ ಭೇದವು ಒಂದೇ ಆಗಿರುವದರಿಂದಲೂ ಘಟಾದಿಪ್ರಮೆಯಿಂದ ಆ ಭೇದವು ಬಾಧ ವಾಗುವದಿಲ್ಲವೆಂದು ನಾವೂ ಒಪ್ಪುವದರಿಂದಲೂ ಸಿದ್ಧಸಾಧನದೋಷವು ಮತ್ತೂ ಬರುತ್ತದೆ. ಇದಲ್ಲದೆ ಧರ್ಮಿ ಎಂಬ ಪದಕ್ಕೆ ನಿರ್ಗುಣಬ್ರಹ್ಮವು ಅರ್ಥವೊ, ಸಗುಣಬ್ರಹ್ಮವು ಅರ್ಥವೊ ? ಸಗುಣವೆನ್ನುವಹಾಗಿಲ್ಲ ; ಏಕೆಂದರೆ ಅದರ ಜ್ಞಾನ

ದಿಂದ ಭೇದವು ಅಬಾಧ್ಯವೆಂದು ನಾವು ಒಪ್ಪಿಯೇ ಇರುತ್ತೇವೆ. ನಿರ್ಗುಣ ಬ್ರಹ್ಮವೇ ಅರ್ಥವೆನ್ನೋಣಕ್ಕಿಲ್ಲ; ಏಕೆಂದರೆ ಅದು ಪ್ರಮಿತವೆನ್ನುತ್ತೀಯೊ, ಅಪ್ರಮಿತವೆನ್ನುತ್ತೀಯೊ? ಅಪ್ರಮಿತವೆಂದರೆ ಆಶ್ರಯಾಸಿದ್ಧಿಯು ಬಂದೊದಗುತ್ತದೆ. ಪ್ರಮಿತವೆಂದರೆ ಆಗ ಧರ್ಮಿಗ್ರಾಹಕವಾನದಿಂದ ಜೀವಾಭಿನ್ನಪರಮಾತ್ಮನೇ ಸಿದ್ಧನಾಗುತ್ತಾನಷ್ಟೆ? (೧೧೧)

[ಈವರೆಗೆ ನಾವು ಕೊಟ್ಟಿರುವ ಅನುಮಾನಗಳೂ ಅವುಗಳಲ್ಲಿ ಆಚಾರ್ಯರು ಹೇಳಿರುವ ದೋಷಗಳೂ ತರ್ಕಶಾಸ್ತ್ರದ ಪರಿಚಯವಿದ್ದವರಿಗೆ ಮಾತ್ರ ತಿಳಿಯುವವಾಗಿವೆ. ಅದ್ದರಿಂದ ಅವನ್ನು ವಿವರಿಸುವ ಅಯಾಸವನ್ನು ತೆಗೆದುಕೊಳ್ಳದೆ ವ್ಯಾಕ್ಯಾನದ ಆಧಾರದಿಂದ ಸಂಭಾಷಣೆಯನ್ನು ಇವ್ವಿದ್ದು ಇದ್ದಂತೆ ಇಟ್ಟಿರುತ್ತೇನೆ. ಹೀಗೆ ಪೂರ್ವಪಕ್ಷದಲ್ಲಿ ವಿಕಲ್ಪಗಳನ್ನು ಮಾಡುವದೂ ಸಿದ್ಧಸಾಧನ, ಸತ್ಪ್ರತಿಪಕ್ಷ– ಮುಂತಾದ ಪಾರಿಭಾಷಿಕಶಬ್ದಗಳನ್ನು ಹೇರಳವಾಗಿ ಉಪಯೋಗಿಸುವದೂ ಆಚಾರ್ಯರ ಭಾಷ್ಯದಲ್ಲಿ ಇಲ್ಲವೇಇಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಕವಿಯು ಈಚನವರ ವಾದಕ್ರಮವನ್ನು ಅನುಸರಿಸಿ ಈ ಪೂರ್ವಪಕ್ಷಸಿದ್ಧಾಂತಗಳನ್ನು ಕಲ್ಪಿಸಿರುತ್ತಾನೆ. ಅಷ್ಟೆ.]

ಮಂಡನ: 'ದ್ವಾ ಸುಪರ್ಣಾ ಸಯುಜಾ ಸಖಾಯಾ' (ಋ. ೧–೨೨–೧೬೪, ಮುಂ. ೩–೧–೧) ಎಂಬ ಶ್ರುತಿಯಲ್ಲಿ ಜೀವನು ಭೋಕ್ತೃವೆಂದೂ ಈಶ್ವರನು ಅಭೋಕ್ತೃವೆಂದೂ ಹೇಳಿರುತ್ತದೆ. ಇದೇ ಅಭೇದಬಾಧಕವೆಂದಾಗಲಿ! (೧೧೨)

ಶಂಕರ: ಭೇದವು ಪ್ರತ್ಯಕ್ಷಸಿದ್ಧವಾಗಿದೆ, ಆದರ ಜ್ಞಾನಕ್ಕೆ ಫಲವನ್ನು ಹೇಳಿಲ್ಲ. ಆದ್ದರಿಂದ ಶ್ರುತಿಯು ಹೇಳುವ ಅಭೇದಕ್ಕೆ ಇದು ಬಾಧಕವಾಗಲಾರದು. ಹಾಗಿಲ್ಲದಿದ್ದರೆ ಅತತ್ಪರವಾದದ್ದೂ ಸ್ವಾರ್ಥದಲ್ಲಿ ಮಾನವಾಗಬೇಕಾದೀತು(೧೧೩).

[ಅನ್ಯಾರ್ಥವಾದ ಮುಂತಾರ್ಥವಾದಗಳೂ ಕೆಲವು ವಿಷಯದಲ್ಲಿ ಪ್ರಮಾಣವಾಗಬಹುದೆಂದು ಭಾಷ್ಯದಲ್ಲಿ ಒಪ್ಪಿದೆ. ಉದಾಹರಣೆಗೆ ದೇವತಾಧಿಕರಣಭಾಷ್ಯ ೧-೩-೩೩ನ್ನು ನೋಡಿ. ಆದರೆ 'ತತ್ತ್ವಮಸಿ' ಮುಂತಾದ ವಾಕ್ಯಗಳು ನಿರಾಕಾಂಕ್ಷವಾಗಿರುವದರಿಂದ ಅವನ್ನು ಬಾಧಿಸುವ ಶಕ್ತಿ ಭೇದಾನುವಾದಕಶ್ರುತಿಗೆ ಬರಲಾರದು– ಎಂದಿದ್ದರೆ ಭಾಷ್ಯಕಾರರ ಹೃದಯಕ್ಕೆ ಹತ್ತಿರವಾಗುತ್ತಿತ್ತು. ಸೂ.ಭಾ. ೨–೧–೧೪ಳನ್ನು ನೋಡಿ.]

ಮಂಡನ: ಸ್ಮೃತಿಪ್ರಸಿದ್ಧವಾಗಿರುವ ವಿಷಯಕ್ಕೆ ಶ್ರುತಿಯು ಮೂಲವೆಂದು ಒಪ್ಪುವಂತೆ ಪ್ರತ್ಯಕ್ಷಸಿದ್ಧವಾದ ಅರ್ಥಕ್ಕೂ ಶ್ರುತಿಯೇ ಮೂಲವೆಂದಾಗಲಿ! (೧೧೪)

ಶಂಕರ: ಸ್ಮೃತಿಯಲ್ಲಿ ವೇದಜ್ಞರಾದವರು ಹೇಳುವ ಅಪೂರ್ವಾರ್ಥಕ್ಕೆ ಶ್ರುತಿಯು ಮೂಲವಾಗಿರುತ್ತದೆ. ವೇದವಿಚಾರವೇ ಗೊತ್ತಿಲ್ಲದವರಿಗೂ ತಿಳಿದಿರುವ ಭೇದಕ್ಕೆ ಶ್ರುತಿ ಹೇಗೆ ಮೂಲವಾದೀತು? ಈ ಶ್ರುತಿಯು ಜೀವೇಶ್ವರರನ್ನು ತಿಳಿಸುತ್ತದೆ ಎಂದಿಟ್ಟುಕೊಂಡು ಈ ಉತ್ತರವನ್ನು ಹೇಳಿರುತ್ತೇನೆ. ಆದರೆ

ನಿಜವಾಗಿ ಈ ಶ್ರುತಿಯು ಸತ್ತ್ವದಿಂದ ಪುರುಷನನ್ನು ವಿವೇಚನೆಮಾಡಿ, ಪುರುಷನು ಅನಂಸಾರಿಯೆಂದೇ ಹೇಳುತ್ತಿದೆ. (೧೧೫, ೧೧೬)

[ಈ ಎರಡನೆಯ ಆರ್ಥವು ವೈಂಗಿರಹಸ್ಯಬ್ರಾಹ್ಮಣವನ್ನನುಸರಿಸಿ ಹೇಳಿದ್ದು. ಆದರೆ ಮೊದಲನೆಯ ಆರ್ಥವನ್ನು ಭಾಷ್ಯಕಾರರು ಪೂರ್ಣವಾಗಿ ನಿರಾಕರಿಸಿಲ್ಲ. ವಿಯದಧಿಕರಣ (ಸೂ. ಭಾ. ೩-೩-೪೪)ವಲ್ಲಿ 'ದ್ವಾ ಸುಪರ್ಣಾ' ಮತ್ತು 'ಋತಂ ಪಿಬಂತೌ' ಇವೆರಡೂ ಒಂದೇ ವಿದ್ಯೆಯನ್ನು ಹೇಳುತ್ತವೆ ಎಂದು ಹೇಳಿವೆ. ಮುಂಡಕಭಾಷ್ಯದಲ್ಲಿ ಇದೇ ಮಂತ್ರಕ್ಕೆ ಜೀವೇಶ್ವರಪರವಾಗಿಯೇ ಅರ್ಥವನ್ನು ಮಾಡಿದೆ]

ಮಂಡನ : ಇದು ಸತ್ತ್ವಜೀವರನ್ನೇ ಹೇಳುತ್ತದೆ ಎಂದಾದರೆ ಜಡವಾಗಿರುವ ಸತ್ತ್ವಕ್ಕೆ ಭೋಕ್ತೃತ್ವವು ಹೇಗೆ ಬಂದೀತು ? (೧೧೭)

ಶಂಕರ : ಈ ಆಕ್ಷೇಪವನ್ನು ನಮ್ಮಮೇಲೆ ಹಾಕತಕ್ಕದ್ದಲ್ಲ ; ವೈಂಗಿರಹಸ್ಯಮಂತ್ರವು ತಾನೇ 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋಽಭಿಪಶ್ಯತೀತಿ ಜ್ಞಸ್ತಾವೇತೌ ಸತ್ತ್ವಕ್ಷೇತ್ರಜ್ಞೌ||' ಎಂಬಲ್ಲಿ ಈ ಮಂತ್ರವನ್ನು ಹೀಗೆಯೇ ಸತ್ತ್ವಜೀವಪರವಾಗಿಯೇ ವಿವರಿಸಿದೆ. (೧೧೮)

ಮಂಡನ : ಸತ್ತ್ವಶಬ್ದವು ಶಾರೀರವಾಚಕವು, ಕ್ಷೇತ್ರಜ್ಞಶಬ್ದವು ಪರಮಾತ್ಮವಾಚಕವು. ಆದ್ದರಿಂದ ಆ ರಹಸ್ಯಬ್ರಾಹ್ಮಣದಂತೆಯೂ ನಾನು ಹೇಳಿದ್ದೇ ಅರ್ಥವೆಂದಾಯಿತು (೧೧೯)

ಶಂಕರ : ಆ ಬ್ರಾಹ್ಮಣದಲ್ಲಿ 'ತದೇತತ್ಸತ್ತ್ವಂ, ಯೇನ ಸ್ವಪ್ನಂ ಪಶ್ಯತಿ| ಅಥ ಯೋಽಯಂ ಶಾರೀರ ಉಪದ್ರಷ್ಟಾ ನ ಕ್ಷೇತ್ರಜ್ಞಃ || ಯಾವದರಿಂದ ಸ್ವಪ್ನವನ್ನು ಕಾಣುತ್ತಾರೋ ಅದು ಸತ್ತ್ವವು ; ಶಾರೀರನಾದ ನೋಡುವನಿದಾನಲ್ಲ, ಅವನು ಕ್ಷೇತ್ರಜ್ಞನು– ಎಂಬ ವಾಕ್ಯದಿಂದ ಸತ್ತ್ವವೆಂದರೆ ಅಂತಃಕರಣವೇ, ಕ್ಷೇತ್ರಜ್ಞನೆಂದರೆ ಶಾರೀರವೇ– ಎಂದು ಸ್ಪಷ್ಟವಾಗಿ ಹೇಳಿದೆಯಲ್ಲ ! (೧೨೦).

ಮಂಡನ : ಈ ವಾಕ್ಯದಲ್ಲಿ 'ಯೇನ' ಎಂದರೆ ಸ್ವಪ್ನವನ್ನು ಕಾಣುವ ಕರ್ತೃವಾದ ಜೀವನಿಂದ ಎಂದೇ ಅರ್ಥ. ಕ್ಷೇತ್ರಜ್ಞನು ಎಂದರೆ ಸರ್ವಜ್ಞನಾದ ಈಶ್ವರನೂ ಆಗಬಹುದು. (೧೨೧)

ಶಂಕರ : ಪಶ್ಯತಿ ಎಂಬಲ್ಲಿ ತಿಙ್ (ಕ್ರಿಯಾಪದ) ಪ್ರತ್ಯಯವು ಕರ್ತೃವನ್ನು ಹೇಳುತ್ತದೆ ; ಆದ್ದರಿಂದ 'ಯೇನ' ಎಂಬ ತೃತೀಯೆಯಿಂದ ಉಕ್ತವಾಗಿರುವದು ಕರಣವೇ ಆಗುವದು. ಇದಲ್ಲದೆ ಸ್ವಪ್ನದ್ರಷ್ಟೃವು 'ಶಾರೀರ'ನೆಂದು ಇಲ್ಲಿ ಹೇಳಿರುತ್ತದೆ ; ಆದ್ದರಿಂದ ಅವನು ಈಶ್ವರನಾಗಲಾರನು (೧೨೨).

ಮಂಡನ : ಶರೀರದಲ್ಲಿ ಇವನು ಇರುತ್ತಾನೆ ಎಂಬರ್ಥದಲ್ಲಿ ಮಹೇಶ್ವರನೂ ಶಾರೀರನಾಗಬಹುದಲ್ಲ ? (೧೨೩).

ಶಂಕರ ; ಶರೀರವನ್ನು ಬಿಟ್ಟು ಬೇರೆಯ ಕಡೆಯಲ್ಲಿಯೂ ಇರುವನು ಶಾರೀರಶಬ್ದವಾಚ್ಯನೆಂದು ಹೇಗೆ ಆದೀತು ? ಆಕಾಶವು ಶರೀರದಲ್ಲಿಯೂ ಇರುತ್ತದೆ. ಆದರೂ ಆದನ್ನು ಯಾರೂ 'ಶರೀರ'ವೆನ್ನುವದಿಲ್ಲವಷ್ಟೆ ? (೧೩೪).

ಮಂಡನ : ಇದು ಸತ್ತ್ವಕ್ಷೇತ್ರಜ್ಞರನ್ನೇ ಹೇಳುತ್ತದೆ. ಎಂದಾದರೆ 'ಅತ್ತಿ' ಎಂದು ಅಚೇತನವಾದ ಬುದ್ಧಿಯು ಭೋಕ್ತೃವೆಂದು ಹೇಳುವ ಶ್ರುತಿ ಹೇಗೆ ಪ್ರಮಾಣವಾದೀತು ? (೧೩೫)

ಶಂಕರ : ಸುಡದಿರುವ ಕಬ್ಬಿಣವೂ ಬೆಂಕಿಯ ಸಂಬಂಧದಿಂದ ದಾಹಕವು, ಸುಡುವದು– ಎನ್ನುವಹಾಗೆ ಅಚೇತನವಾದ ಬುದ್ಧಿಗೂ ಚಿತ್ತಿನ ಪ್ರವೇಶದಿಂದ ಭೋಕ್ತೃತ್ವವು ಬರಬಹುದು. (೧೩೬)

[ಮಂಡನನು ಕರ್ಮಮೀಮಾಂಸಕನಾಗಿದ್ದೂ ಜೀವೇಶ್ವರಭೇದವನ್ನು ಹೇಳುವ ವೇದಾಂತಿಯಾಗಿ ಅಥವಾ ನೈಯಾಯಿಕನಾಗಿ ವಾದಿಸಿರುತ್ತಾನೆಂಬುದನ್ನು ಇಲ್ಲಿಯೂ ಲಕ್ಷ್ಯದಲ್ಲಿಡಬೇಕು. ಪ್ರತ್ಯಕ್ಷಕ್ಕೂ ಶ್ರುತಿಯು ಮೂಲವಾಗಲಿ !-ಎಂಬ ಪೂರ್ವಪಕ್ಷವನ್ನು ಮೀಮಾಂಸಕನು ಎಂದಿಗೂ ಒಡ್ಡಲಾರನು. ಸತ್ತ್ವಕ್ಕೆ ಭೋಕ್ತೃತ್ವವೂ ಬರಬಹುದೆಂಬ ಸಿದ್ಧಾಂತವು ಆಚಾರ್ಯರ ಭಾಷ್ಯಕ್ಕೆ ವಿರುದ್ಧ. ಕೇವಲ ಕ್ಷೇತ್ರಜ್ಞನಿಗೂ ಭೋಕ್ತೃತ್ವವು ಹೊಂದುವದಿಲ್ಲ, ಅಚೇತನವಾದ ಅವಿದ್ಯಾಕಲ್ಪಿತವಾದ ಸತ್ತ್ವಕ್ಕಂತೂ ಹೊಂದುವದೇ ಇಲ್ಲ ಕ್ಷೇತ್ರಜ್ಞನಿಗೆ ಭೋಕ್ತೃತ್ವವಿಲ್ಲ, ಅವನು ಬ್ರಹ್ಮಸ್ವಭಾವನೇ ಎಂದು ತಿಳಿಸುವದಕ್ಕಾಗಿ ಸತ್ತ್ವದಲ್ಲಿ ಭೋಕ್ತೃತ್ವವನ್ನು ಅಧ್ಯಾರೋಪಮಾಡಿದೆ– ಎಂದು ಅಲ್ಲಿ (ಸೂ. ಭಾ. ೧-೨–೧೧) ಬರೆದಿದೆ.]

ಮಂಡನ : ನೆರಳುಬಿಸಿಲುಗಳಂತೆ ಜೀವೇಶ್ವರರು ಅತ್ಯಂತಭಿನ್ನರು ಎಂದು ಹೇಳುವ 'ಋತಂ ಪಿಬಂತೌ' (ಕಾ.೧–೩–೧) ಎಂಬ ಮಂತ್ರವು ಅಭೇದ ಶ್ರುತಿಗೆ ಬಾಧಕವೆಂದಾಗಲಿ ! (೧೩೭)

ಶಂಕರ : ವ್ಯವಹಾರಸಿದ್ಧವಾದ ಭೇದವನ್ನು ಅನುವಾದವಾಡಿ ಹೇಳುವ ಈ ಶ್ರುತಿ ಅಭೇದಶ್ರುತಿಗೆ ಬಾಧಕವಾಗಲಾರದು. ಶ್ರುತಿಯು ಅಪೂರ್ವಾರ್ಥವನ್ನು ಹೇಳುವ ಈ ಭೇದಶ್ರುತಿಯನ್ನೇ ಬಾಧಿಸುತ್ತದೆ ಎನ್ನಬಹುದು. (೧೩೮)

[ದ್ವಾ ಸುಪರ್ಣಾ, ಋತಂ ಪಿಬಂತೌ– ಇವೆರಡೂ ಒಂದೇ ಅರ್ಥವನ್ನು ಹೇಳುತ್ತವೆ ಎಂದು ಆಗಲೆ ತಿಳಿಸಿದ್ದಾಗಿದೆ.]

ಮಂಡನ : ಪ್ರಮಾಣಾಂತರದ ಬೆಂಬಲವುಳ್ಳ ಶ್ರುತಿಯೇ ಪ್ರಬಲ. ಆದ್ದರಿಂದ ಅದು ಅಭೇದಶ್ರುತಿಯನ್ನು ಬಾಧಿಸುತ್ತದೆ.

ಶಂಕರ : ಶ್ರುತಿಗಳಿಗೆ ಪ್ರಮಾಣಾಂತರವು ಪ್ರಾಬಲ್ಯವನ್ನುಂಟುಮಾಡಲಾರದು. ಒಂದೇ ವಿಷಯಕ್ಕೆ ಪ್ರಮಾಣಾಂತರವಿದ್ದರೆ ಶ್ರುತಿಯು ಅಧಿಗತಾರ್ಥವನ್ನೇ ಹೇಳುತ್ತದೆ ಎಂದಾಗಿ ಅದಕ್ಕೆ ದೌರ್ಬಲ್ಯವೇ ಬರುತ್ತದೆ.

[ಪ್ರಕೃತ ದ್ವಾ ಸುಪರ್ಣಾ ಶ್ರುತಿಗೆ ಪ್ರತ್ಯಕ್ಷದ ಬೆಂಬಲವಿದೆಯೆಂಬುದೇ ಸರಿಯಲ್ಲ. ಏಕೆಂದರೆ ಈಶ್ವರನು ಪ್ರತ್ಯಕ್ಷನಲ್ಲ.]

ಮುಂಡನ : ಮೂನಾಂತರದ ಬೆಂಬಲವುಳ್ಳ ಶ್ರುತಿಯು ಬಲಿಷ್ಠವಲ್ಲವೆ? ಆದು ಅಭೇದಶ್ರುತಿಯನ್ನು ಹೊಡೆಯಲಿ ! (೧೨೯).

ಶಂಕರ : ವಿದ್ವಾಂಸನೆ, ಪ್ರಮಾಣಾಂತರವು ಶ್ರುತಿಗೆ ಪ್ರಾಬಲ್ಯವನ್ನುಂಟು ಮಾಡಲಾರದು. ಗತಾರ್ಥವನ್ನೇ ಹೇಳುವದರಿಂದ ಶ್ರುತಿಗೆ ಅದು ದೌರ್ಬಲ್ಯವನ್ನೇ ಉಂಟುಮಾಡುತ್ತದೆ (೧೩೦).

[ಶ್ರುತಿಯು ಮೂನಾಂತರದಿಂದ ಪ್ರಬಲವಾಗುವದೆಂಬುದನ್ನು ಮೀಮಾಂಸಕರೂ ಒಪ್ಪುವದಿಲ್ಲ. ಅವರು ಪ್ರಮಾಣಕ್ಕೆ ಸ್ವತಃಪ್ರಾಮಾಣ್ಯವನ್ನು ಒಪ್ಪುವವರು.]

ಮಾಧವನು 'ಇತ್ಯಾದ್ಯಾ ದೃಢಯುಕ್ತೀರಸ್ಯ ಶುಶುಭೇ ದತ್ತಾನುಮೋದಾ ಗಿರಾಂ ದೇವ್ಯಾ' (ಮಾ. ಶಂ ೮–೧೩೧) ಎಂಬ ಶ್ಲೋಕದಲ್ಲಿ ಶಂಕರರ ಇವೇ ಮುಂತಾದ ದೃಢಯುಕ್ತಿಯನ್ನು ಭಾರತೀದೇವಿಯು ಅನುಮೋದಿಸಿದಳು ಎಂದಿದೆ. ಗೃಹಕಾರ್ಯಗಳಲ್ಲಿ ನಿರತಳಾಗಿರುತ್ತಿದ್ದ ಉಭಯಭಾರತಿಗೆ ಆಚಾರ್ಯರ ಯುಕ್ತಿಗಳು ಹೇಗೆ ತಿಳಿದವು ? –ಎಂಬುದೊಂದು ಪ್ರಶ್ನೆ ಇಲ್ಲಿ ಎದ್ದುಕೊಳ್ಳುತ್ತದೆ.

ಇಲ್ಲಿ 'ಇತ್ಯಾದ್ಯಾ' ಎಂಬಲ್ಲಿರುವ ಆದ್ಯಪದಕ್ಕೆ ಇನ್ನೂ ಕೆಲವನ್ನು ಸೇರಿಸಿ ಕೊಳ್ಳಬೇಕೆಂದು ತಿಂಡಿವನುಕಾರನು ಕೆಲವನ್ನು ಶ್ಲೋಕರೂಪದಲ್ಲಿ ಉದಾಹರಿಸಿರುತ್ತಾನೆ. ಹೇಗೆಂದರೆ -

ಮುಂಡನ : 'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ' ಎಂಬ ತೈತ್ತಿರೀಯಶ್ರುತಿಯು ಮುಕ್ತಜೀವನಿಗೂ ಈಶ್ವರನಿಗೂ ಭೇದವನ್ನು ಹೇಳುತ್ತದೆ.

ಶಂಕರ : ಹಾಗಲ್ಲ, ಏಕೆಂದರೆ ಅಜ್ಞಾನನಿವೃತ್ತಿಯಾಗಲು ಅನಂತ ಚಿದಾನಂದಭಾವವನ್ನು ಪಡೆದವನಾಗಿ ಆ ಸ್ವರೂಪದಲ್ಲಿರುವ ಸರ್ವಕಾಮಗಳನ್ನೂ ಪಡೆಯುತ್ತಾನೆ ಎಂದೇ ಆ ಶ್ರುತಿ ಹೇಳುತ್ತದೆ.

ಮುಂಡನ : 'ಆತ್ಮಾ ವಾ ಅರೇ ದ್ರಷ್ಟವ್ಯಃ' ಪರಮಾತ್ಮನನ್ನು ನೋಡ ಬೇಕು ಎಂದು ಪರಮಾತ್ಮನಿಗೆ ಕರ್ಮತ್ವವನ್ನೂ ಜೀವನಿಗೆ ಕರ್ತೃತ್ವವನ್ನೂ ಶ್ರುತಿ ಹೇಳುತ್ತದೆಯಲ್ಲವೆ ? ಇಲ್ಲದಿದ್ದರೆ ಶ್ರುತಿಯು ಅಪ್ರಮಾಣವಾಗುವದಲ್ಲ !

ಶಂಕರ : ಇದು ತಾತ್ತ್ವಿಕಭೇದವನ್ನು ಹೇಳುವದಿಲ್ಲ. ಏಕೆಂದರೆ ಹಾಗೆಂದರೆ ಆದ್ವೈತಶ್ರುತಿಗೆ ವಿರೋಧವಾಗುವದು. ಆದ್ದರಿಂದ ಇದು ಬ್ರಹ್ಮಪರವಾಗಿಯೇ ಪ್ರಮಾಣವಾಗಿದೆ.

ಮುಂಡನ : ಅಭೇದಶ್ರುತಿಯೇ ಕಲ್ಪಿತವಾದ ಅಭೇದವನ್ನು ಹೇಳುತ್ತದೆ ಎಂದಾಗಲಿ !

ಶಂಕರ : ಭೇದವು ವ್ಯವಹಾರಸಿದ್ಧವಾಗಿ ಕೇವಲಪ್ರಾತೀತಿಕವಾಗಿದೆ. ಅಭೇದವು ಹಾಗೆ ಸಿದ್ಧವಾಗಿಲ್ಲವಾದ್ದರಿಂದ ಹಾಗಲ್ಲ.

ಮಂಡನ : ಶ್ರುತ್ಯರ್ಥಾಪತ್ತಿಯು ಭೇದಕ್ಕೆ ಪ್ರಮಾಣವೆಂದಾಗಲಿ !

ಶಂಕರ : ಉಪಪತ್ತಿಯಿಲ್ಲದೆ ಆ ಅರ್ಥಾಪತ್ತಿಯು ಪ್ರಮಾಣವಾಗ ಲಾರದು. ಆದ್ದರಿಂದ ಅಭೇದವನ್ನು ಹೇಳುವ ಶ್ರುತಿಯೇ ಪ್ರಬಲ.

ಮಂಡನ : ಜೀವನಿಗೂ ಈಶ್ವರನಿಗೂ ಅಭೇದವಿದ್ದರೆ ಉಪಲಬ್ಧ ವಾಗಬೇಕಾಗಿತ್ತು. ಆದರೆ ಹಾಗೆ ಕಾಣಬರುವದಿಲ್ಲವಾದ್ದರಿಂದ ಅನುಪಲಬ್ಧಿ ಪ್ರಮಾಣದಿಂದ ಅಭೇದವು ಇಲ್ಲವೆಂದೇ ಆಯಿತು.

ಶಂಕರ : ಹೇಗೆ ಕತ್ತಲೆಯಿಂದ ಆವೃತವಾಗಿರುವ ಘಟವು ಕಾಣಬರುವ ದಿಲ್ಲವೋ ಹಾಗೆಯೇ ಅವಿದ್ಯೆಯಿಂದ ಆವೃತವಾಗಿರುವದರಿಂದ ಅಭೇದವು ಕಾಣಿಸುವದಿಲ್ಲ. ಆ ಭೇದವು ಅಂತ್ಯಪ್ರಮಾಣಗಮ್ಯವಲ್ಲ.

[ಡಿಂಡಿಮಕಾರನು 'ಇತ್ಯಾದಿ ದೃಢಯುಕ್ತಿಜಾತಂ ಗ್ರಾಹ್ಯಮ್' ಎನ್ನುವದರಿಂದ ಪೂರ್ಣವಿಕವಿ ಹೇಳಿರುವ ಪ್ರಾಚೀನಶಂಕರವಿಜಯದಲ್ಲಿ ಇನ್ನೂ ಇಂಥ ಯುಕ್ತಿಗಳು ಕೆಲವು ಇದ್ದವೆಂದು ಹೇಳಬೇಕಾಗಿದೆ. ಆನಂತಾನಂದಗಿರೀಯದಲ್ಲಾಗಲಿ ವ್ಯಾಸಾಚಲೀಯದಲ್ಲಾ ಗಲಿ ಈ ಡಿಂಡಿಮಗತಶ್ಲೋಕಗಳು ಕಾಣಬರುವದಿಲ್ಲವಾದ್ದರಿಂದ 'ಪ್ರಾಚೀನಶಂಕರ ವಿಜಯ'ವೆಂಬುದು ಬೇರೆಯ ಗ್ರಂಥವೇ ಆಗಿರಬೇಕೆಂದು ಇದರಿಂದ ಸಿದ್ಧವಾಗುತ್ತದೆ. ಇದಂತಿರಲಿ. ಆ ಪ್ರಾಚೀನಶಂಕರವಿಜಯದಲ್ಲಿಯೂ ಜೀವೇಶ್ವರಭೇದವನ್ನು ಕುರಿತ ವಿವಾದವೇ ಮಂಡನನಿಗೂ ಆಚಾರ್ಯರಿಗೂ ಆಯಿತೆಂದು ಸಿದ್ಧವಾಗುವದರಿಂದ ಈ 'ಕಲ್ಪನೆ ಯು ಮೂಢವನದಲ್ಲವೆಂದಾಯಿತು. ಇನ್ನೊಂದು ಮಾತು. ಇಲ್ಲಿರುವ ಯಾವ ಯುಕ್ತಿ ಯೂ ಭಾಷ್ಯದಲ್ಲಿ ಕಾಣಿಸುವದಿಲ್ಲ. ಬ್ರಹ್ಮವು ಅವಿದ್ಯೆಯಿಂದ ಆವೃತವಾಗಿರುವದರಿಂದ ಜೀವೇಶ್ವರಾಭೇದವು ಕಾಣಿಸುತ್ತಿಲ್ಲ ಎಂಬ ವಾದವು ಪ್ರತಿಜ್ಞೆಗೆ ಅನುಗುಣವಾಗಿದ್ದರೂ ಆಚಾರ್ಯರ ಭಾಷ್ಯದಲ್ಲಿ ಎಲ್ಲಿಯೂ ಇಲ್ಲವೆಂಬುದನ್ನು ಇಲ್ಲಿ ನೆನಪಿನಲ್ಲಿಡಬೇಕು. ಅವಿದ್ಯಾ ರಹಿತನಾದ ಆತ್ಮನಿಗೆ ಅವಿದ್ಯಾನಿವೃತ್ತಿ, ಅದರ ಅನಿವೃತ್ತಿ ಇವುಗಳಿಂದಲಾಗಲಿ, ಅವಿದ್ಯಾ ಶ್ರಯತ್ವ, ಅದರ ಅನಾಶ್ರಯತ್ವ – ಇವುಗಳಿಂದಲಾಗಲಿ, ಯಾವ ವಿಶೇಷವೂ ಆಗುವ ಹಾಗಿಲ್ಲ. 'ನಾನು ಏನೂ ಅರಿಯೆನು, ಮುಗ್ಧನಾಗೆದೇನೆ' ಎಂಬ ಅನುಭವದಿಂದಕೂಡ ಆತನು ಅವಿದ್ಯಾವಂತನೆಂದಾಗುವದಿಲ್ಲ. ಈ ಅನುಭವದಿಂದ ಆತ್ಮನು ಅವಿದ್ಯಾರಹಿತನೆಂದೇ ಸಿದ್ಧವಾಗುತ್ತದೆ– ಎಂದು ಬೃಹದಾರಣ್ಯಕಭಾಷ್ಯದಲ್ಲಿ ಸುಸ್ಪಷ್ಟವಾಗಿ (ಬೃ. ಭಾ. ೪–೪–೬) ಹೇಳಿರುವದಕ್ಕೆ ಇದು ವಿರುದ್ಧವೂ ಆಗಿರುತ್ತದೆ.]

ಮಂಡನನೊಡನೆ ವಾದ : ಚಿದ್ವಿಲಾಸೀಯದಂತೆ :

೧೦೬. ಈಗ ಚಿದ್ವಿಲಾಸೀಯದಂತೆ ಆಚಾರ್ಯರಿಗೂ ಮಂಡನನಿಗೂ ಆದ ವಾದದ ವಿವರವು ಹೇಗಿದೆ ಎಂಬುದನ್ನು ವಿಮರ್ಶಿಸೋಣ.

ಮಂಡನ : 'ಅಶ್ವಾಲಮ್ಭಂ ಗವಾಲಮ್ಭಂ ಸಂನ್ಯಾಸಂ ಪಲಪೈತೃಕಮು |

ದೇವರೇಣ ಸುತೋತ್ಪತ್ತಿಂ ಕಲೌ ಪಞ್ಚ ವಿವರ್ಜಯೇತ್ ॥' ಎಂಬ ಸ್ಮೃತಿಯಿದೆ. 'ಈ ನಾಲ್ಕು ಆಶ್ರಮವನ್ನು ಯಜ್ಞೋಪವೀತವಿಲ್ಲದಿದ್ದರೆ, ಎಂಥ ಉಗ್ರ ತಪಸ್ವಿಗಳಾಗಿದ್ದರೂ ಬ್ರಾಹ್ಮಣ್ಯಚ್ಯುತರಾಗುವರು. ಯಜ್ಞೋಪವೀತವು ಸರ್ವ ದ್ವಿಜರಿಗೂ ಮುಕ್ತಿಸಾಧನವು; ಯಾರು ಅದನ್ನು ಭ್ರಾಂತಿಯಿಂದ ಬಿಟ್ಟುಬಿಡುವರೋ ಅವರು ನರಕಕ್ಕೆ ಹೋಗುವರು. ಶಿಖಾಯಜ್ಞೋಪವೀತಗಳನ್ನು ಬಿಟ್ಟರೆ ಬ್ರಾಹ್ಮಣನಲ್ಲ' 'ಸಂಧ್ಯೆಯನ್ನು ಉಪಾಸನೆಮಾಡದವರು ಬ್ರಾಹ್ಮಣರು ಹೇಗೆ?' 'ವೇದೋಕ್ತವಾದ ಕರ್ಮವನ್ನು ಆಚರಿಸುವವನು ನರಕವನ್ನು ಕಾಣುವದೇ ಇಲ್ಲ.' 'ಎಲ್ಲಿಯತಿಯೆ, ಕರ್ಮದಿಂದಲೇ ಸ್ವರ್ಗ, ರಾಜ್ಯ, ಪುತ್ರ–ಮುಂತಾದವು ಲಭಿಸುವವು; ಆದ್ದರಿಂದ ವೇದಜ್ಞರಾದ ಬ್ರಾಹ್ಮಣೋತ್ತಮರು ಕರ್ಮವನ್ನು ಮಾಡುತ್ತಾರೆ.' 'ಯಾವನು ಕರ್ಮಕಾಲವನ್ನು ತಿಳಿದುಕೊಂಡಿರುವನೋ, ಕಾಲದಲ್ಲಿ ಕರ್ಮವನ್ನು ಮಾಡುವನೋ ಅವನೇ ಲೋಕದಲ್ಲಿ ಜ್ಞಾನಿಯು– ಎಂದು ವಿದ್ವಾಂಸರು ಹೇಳುತ್ತಾರೆ.' 'ಕಲಿಯಲ್ಲಿ ಸತ್ಕರ್ಮಾಚರಣೆಯಲ್ಲಿ ನಿಷ್ಠನಾದವನೇ ಜ್ಞಾನಿಯು, ಭಕ್ತನು– ಎನ್ನುವರು.' ಇವೇ ಮುಂತಾದ ವಚನಗಳಲ್ಲಿ[1] ಕಲಿಯುಗದಲ್ಲಿ ಸಂನ್ಯಾಸವು ನಿಷಿದ್ಧವಾಗಿರುತ್ತದೆ. ಆದನ್ನೇ ನೀನು ಸ್ವೀಕರಿಸಿರುತ್ತೀಯೆ, ಆದರಲ್ಲಿಯೂ ಬ್ರಹ್ಮಚಾರಿಯಾಗಿಯೇ ಸ್ವೀಕರಿಸಿರುವೆಯಲ್ಲ! (ಚಿ.ಶಂ. ೧೮–೭ರಿಂದ ೧೫).

ಶಂಕರ : ಬಾಲಕನೆ, ಮತ್ತೊಮ್ಮೆ ಪ್ರಮಾಣವಾಕ್ಯವನ್ನು ಹೇಳುವೆನು, ಕೇಳು. 'ಯಾವದ್ವರ್ಣವಿಭಾಗೋಽಸ್ತಿ ಯಾವದ್ವೇದಃ ಪ್ರವರ್ತತೇ। ಸಂನ್ಯಾಸಶ್ಚಾಗ್ನಿಹೋತ್ರಂ ಚ ತಾವದೇವ ಕಲೌ ಯುಗೇ ॥' 'ಕಲಿಯುಗದಲ್ಲಿ ಎಲ್ಲಿಯವರೆಗೆ ವರ್ಣವಿಭಾಗವಿರುವದೋ, ಎಲ್ಲಿಯವರೆಗೇ ವೇದವು ಪಾಠಿತವಾಗುತ್ತದೆಯೋ ಸಂನ್ಯಾಸವೂ ಅಗ್ನಿಹೋತ್ರವೂ ಆಲ್ಲಿಯವರೆಗೇ' 'ಮೊದಲನೆಯ, ಅಥವಾ ಎರಡನೆಯ ಅಥವಾ ವಾನಪ್ರಸ್ಥಾಶ್ರಮದಲ್ಲಿ ಯಾವಾಗ ಬುದ್ಧಿಯು ವಿರಕ್ತವಾಗುವದೋ, ಆಗಲೆ ಅವನು ಉತ್ತಮಾಶ್ರಮವನ್ನು ಸ್ವೀಕರಿಸಬೇಕು.' 'ಸಂತಾನದಿಂದುಂಟಾದ ದೋಷಗಳು ಯಾವವು ಇರುವವೋ, ಕರ್ಮದಿಂದುಂಟಾಗುವ ದೋಷಗಳು ಯಾವವಿರುವವೋ ಅವುಗಳನ್ನೆಲ್ಲ ಹೊಟ್ಟಿನ ಬೆಂಕಿಯು ಚಿನ್ನವನ್ನು ಸುಡುವಂತೆ ಸಂನ್ಯಾಸವು ಸುಟ್ಟುಹಾಕುವದು.' 'ವಿರಕ್ತನು, ಸಂಸಾರಸಾಗರದಿಂದ ಮೋಕ್ಷವನ್ನು ಇಚ್ಛಿಸುವಾತನು, ಪ್ರಥಮಾಶ್ರಮದಿಂದಲಾದರೂ ಸಂಗಗಳನ್ನು ತ್ಯಜಿಸಿ ಪರಿವ್ರಾಜಕನಾಗಬೇಕು.' 'ಬ್ರಾಹ್ಮಣನಿಗೆ ನಾಲ್ಕು ಆಶ್ರಮಗಳು ಶ್ರುತಿಚೋದಿತವಾಗಿರುತ್ತವೆಯೆನ್ನುವರು. ಕ್ಷತ್ರಿಯನಿಗೆ ಮೂರು, ವೈಶ್ಯನಿಗೆ ಎರಡು,

1. ಇಲ್ಲಿ ಕೊಟ್ಟಿರುವ ವಚನಗಳು ಯಾವ ಸ್ಮೃತಿಯಲ್ಲಿರುವವೆಂಬುದು ನಮಗೆ ನಿಶ್ಚಿತವಾಗಿ ಗೊತ್ತಾಗಿಲ್ಲ; ಇವನ್ನು ವಿಶ್ವೇಶ್ವರಸ್ಮೃತಿಯೇ ಮುಂತಾದ ನಿಬಂಧಗಳಲ್ಲಿ ಉದಾಹರಿಸಿದೆ. ಕೆಲವು ಬಿಡಿ ಉಪನಿಷತ್ತುಗಳಲ್ಲಿಯೂ ಇವು ಕಾಣುತ್ತವೆ.

ಶೂದ್ರನಿಗೆ ಒಂದು. ಜುಟ್ಟಿನಸಹಿತವಾಗಿ ವಪನಮಾಡಿಸಿಕೊಂಡು ಹೊರಗೆ ಧರಿಸಿರುವ ಸೂತ್ರವನ್ನು ಬಿಟ್ಟುಬಿಡಬೇಕು.' 'ಬ್ರಹ್ಮನೇ ಸೂತ್ರವೆನಿಸುತ್ತದೆ ; ಅಂಥ ಸೂತ್ರವನ್ನು ವಿವೇಕಿಯಾದವನು ಧರಿಸಬೇಕು. ಯಾವದು ಎಲ್ಲವನ್ನೂ ಸೂಚಿಸುತ್ತದೆಯೋ ಅದೇ ಪರಮಪದವೆನಿಸುತ್ತದೆ; ಅಂಥ ಸೂತ್ರವನ್ನರಿತವನೇ ಸೂತ್ರಜ್ಞನೆನಿಸುವನು. 'ಜೀವನ್ಮುಕ್ತಿಪಥದಲ್ಲಿರುವ ಯೋಗಿಯು ಬಹಿಃಸೂತ್ರವನ್ನು ಬಿಡಬೇಕು. ಈ ವಿಷಯವನ್ನರಿತುಕೊಂಡವರು ಜ್ಞಾನೋಪವೀತಿಗಳೆನಿಸುವರು.' ....ಹೀಗೆಶಂಕರಾಚಾರ್ಯರು ಶ್ರುತಿಸ್ಮೃತಿಪುರಾಣಾದಿವಚನಗಳನ್ನು ಹೇಳುತ್ತಿರಲು ಮಂಡನಮಿಶ್ರನು ಆಶ್ಚರ್ಯಾನ್ವಿತನಾಗಿ ಪ್ರತ್ಯುತ್ತರವನ್ನು ಹೇಳಲಾರದೆ ಇದ್ದನು. (ಚಿ. ಶಂ. ೧೪–೧೬ರಿಂದ ೩೫)

ಶಂಕರರು : 'ಎಲೆ ಮೂಢ, ಮೊದಲು ಏನೆಂದು ಸಾರಿಹೇಳಿದೆ ? ಈಗ ಏನು ನೋಡುತ್ತಿದ್ದಿ ? ಅಚೇತನವಾದ ಕರ್ಮವು ಹೇಗೆ ಫಲವನ್ನು ಕೊಟ್ಟೀತು ? ಆದರೆ ಆ ಫಲವನ್ನು ಕೊಡಪದಕ್ಕೆ ಕಾರಣವಾದ ಪರಬ್ರಹ್ಮವು ಶ್ರುತಿಸಮ್ಮತವಾಗಿರುತ್ತದೆ. ವೈದಿಕಮಾರ್ಗವನ್ನು ನಿಂದಿಸುವವನು ಪಾಪಿಷ್ಠನು, ಸಂನ್ಯಾಸಾಶ್ರಮಿಗಳನ್ನು ದೂಷಿಸುವವನು ಅವನಿಗಿಂತಲೂ ಪಾಪಿಷ್ಠನು' ಎಂದರು (ಚಿ. ಶಂ. ೧೪–೩೬ರಿಂದ ೩೮).

ಈ ಸಂಭಾಷಣೆಯಲ್ಲಿ ಮುಖ್ಯವಾಗಿ ಸಂನ್ಯಾಸಾಶ್ರಮವಿಷಯದ ಚರ್ಚೆಗೇ ಹೆಚ್ಚಿನ ಸ್ಥಾನವಿದೆ. ಆ ದ್ದ ರಿಂದಲೇ ಕರ್ಮಬ್ರಹ್ಮಜ್ಞಾನಗಳ ವಿಷಯವಾಗಿ ಪ್ರಶ್ನೋತ್ತರಗಳ ವಿಷಯಕ್ಕೆ ಇಲ್ಲಿ ಅದರಪು ತೋರುತ್ತಿಲ್ಲ. ಇಲ್ಲಿ 'ಸಂನ್ಯಾಸವು ಕಲಿವರ್ಜ್ಯವು, ಬ್ರಹ್ಮಚಾರಿಗಳಂತೂ ಅದನ್ನು ಅನುಷ್ಠಾನಮಾಡತಕ್ಕದ್ದೇ ಇಲ್ಲ' –ಎಂದು ಮಂಡನನಿಗೆ ಅಭಿನಿವೇಶಪೂರ್ವಕವಾದ ಅಭಿಪ್ರಾಯವಿರುವಂತೆ ಕಾಣುತ್ತದೆ. ಮಾಧವೀಯದಲ್ಲಿ 'ಕುತೋ ಮುಣ್ಡೀ' ಎಂದು ಪ್ರಾರಂಭಿಸಿ ವ್ಯಾಸರು ಮಂಡನನನ್ನು ಸವೋಧಾನಗೊಳಿಸುವವರೆಗಿನ ಸಿಟ್ಟಿನ ಸಂಭಾಷಣೆಯಲ್ಲಿಯೇ ಈ ವಿಚಾರವನ್ನು ಮುಗಿಸಿದಂತಾಯಿತೆಂದು ಭಾವಿಸಿ ಅದನ್ನು ವಾದಕ್ರಮದಲ್ಲಿ ಕೈಬಿಟ್ಟಿರಬಹುದು. ಆಚಾರ್ಯರು ಜ್ಞಾನಕಾಂಡವಾದ ಉಪನಿಷತ್ತುಗಳನ್ನೇ ಮುಖ್ಯಪ್ರಮಾಣವನ್ನಾಗಿ ಹಿಡಿದಿದ್ದವರು ; ಮಂಡನನು ಮಂತ್ರಬ್ರಾಹ್ಮಣಗಳನ್ನೇ ಮುಖ್ಯಪ್ರಮಾಣವಾಗಿ ಹಿಡಿದವನು. ಜ್ಞಾನಕಾಂಡದಲ್ಲಿ ಸಂನ್ಯಾಸವನ್ನು ಜ್ಞಾನಕ್ಕೆ ಅಂಗವಾಗಿ ವಿಧಿಸಿದೆ ; ಕರ್ಮಕಾಂಡದಲ್ಲಿ ಕರ್ಮವನ್ನು ವಿಧಿಸಿ ಅದರ ಪ್ರಶಂಸೆ, ಅದಕ್ಕೆ ಆಗುವ ಫಲ– ಇವುಗಳನ್ನೇ ಹೇಳಿದೆ. ಆದ್ದರಿಂದ ಆ ಇಬ್ಬರು ವಿದ್ವನ್ಮಣಿಗಳಿಗೆ ಕರ್ಮಾನುಷ್ಠಾನ, ಕರ್ಮತ್ಯಾಗಪೂರ್ವಕಜ್ಞಾನ ಸಂಪಾದನ– ಇವುಗಳ ವಿಷಯವಾಗಿಯೇ ಮುಖ್ಯವಾಗಿ ವಾದವಾಗಿರಬೇಕೆಂದು ಕಲ್ಪಿಸುವದು ಯುಕ್ತತರವಾಗಿರುತ್ತದೆ.

ಮಂಡನನ ವಾದದ ಪ್ರಾಮುಖ್ಯ

೧೦೭ ಇವೇ ವಾದಕ್ಕೆ ಮುಖ್ಯವಾದ ವಿಷಯವಾಗಿರಬೇಕೆಂಬ ಕಲ್ಪನೆಗೆ ಇನ್ನೊಂದು ಗಮನಕವಿದೆ. ಗೌತಮಬುದ್ಧನು ತನ್ನಕಾಲದಲ್ಲಿ ಕಂಡುಬಂದ ಕರ್ಮಾ ಚರಣೆಯ ಅತಿರೇಕ, ಕಾಷ್ಠತಪಸ್ಸು, ಯಜ್ಞಾದಿಗಳ ಹೆಸರಿನಲ್ಲಿ ನಿತಿವಿಹಾರ ವಿಕಿದ್ದ ಹಿಂಸೆ –ಇವುಗಳನ್ನು ಬಲವಾಗಿ ಖಂಡಿಸಿದ್ದನು. ಅನೇಕರಾಜುರುಗಳು ಆವನ ಉಪದೇತಗಳಿಗೆ ಪ್ರೋತ್ಸಾಹವನ್ನು ಕೊಟ್ಟು ತಾವೂ ಬೌದ್ಧರಾಗಿದ್ದರು. ಆವರ ಫಲವಾಗಿ ಬೌದ್ಧಭಿಕ್ಷುಗಳ ಸಂಖ್ಯೆ ಹೆಚ್ಚಿತ್ತು ; ಜನರಿಗೆ ಕರ್ಮಾದಿಗಳಲ್ಲಿ ಶ್ರದ್ಧೆ ಹಾರಿಹೋಗಿತ್ತು. ಇಂಥ ಸಂಧಿಕಾಲದಲ್ಲಿ ಕುಮಾರಿಲಭಟ್ಟರು ತಮ್ಮ ವಿಪ್ರವತ್ತಿನಿಂದ ಜನರನ್ನು ಮತ್ತೆ ವೈದಿಕಮಾರ್ಗದಕಡೆಗೆ ಹಿಂತಿರುಗಿಸುವದಕೆ ಪ್ರಯತ್ನಮಾಡಿ ರಾಜುರುಗಳ ಪ್ರೋತ್ಸಾಹವನ್ನು ಪಡೆದಿದ್ದರು. ಬೌದ್ಧರು ಮುಖ್ಯ ವಾಗಿ ವೇವದ ಅಪೌರುಷೇಯತ್ವ. ವರ್ಣಾಶ್ರಮವಿಭಾಗ, ಯಜ್ಞಯಾಗಾದಿ ಗಳ ಆಚರಣೆ– ಇವುಗಳನ್ನೆ ವಿರೋಧಿಸುತ್ತಿದ್ದವ್ದರಿಂದ ಕುಮಾರಿಲರು ವೈದಿಕ ಧರ್ಮದ ಆ ವಿಶೇಷಗಳ ಪುನರುದ್ಧಾರಕ್ಕೇ ಮನಸ್ಸುಹಾಕಿದ್ದು ಸ್ವಾಭಾವಿಕ ವಾಗಿತ್ತು. ಆವರ ವೀರಪ್ರಯತ್ನದ ಫಲವಾಗಿ ಬೌದ್ಧರ ಹಾವಳಿಯು ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಜಾತಿಕುಲಭೇವವಿಲ್ಲದೆ ಎಲ್ಲರನ್ನೂ ಬೌದ್ಧರು ತಮ್ಮ ಮತಕ್ಕೆ ಸೇರಿಸಿಕೊಂಡವ್ದರಿಂದ ಆ ಮತದ ಪಾರಿಶುದ್ಧತೆಗೆ ಕುಂದಾಯಿತು ತಂತ್ರ ಗಳು ಮೊಟ್ಟಮೊದಲು ಆವರಲ್ಲಿಯೇ ಹುಟ್ಟಿರಬಹುದು. ಆವರಲ್ಲಿ ಅನೇಕ ನಿಂದ ನೀಯಾಚಾರಗಳೂ ತಲೆದೋರಿದವು. ವೈದಿಕಧರ್ಮದ ಆಭಿಮಾನಿಗಳು ಬೌದ್ಧ ಮತದ ಉಪದೇಶಗಳ ಉತ್ತಮಭಾಗವು ತಮಗೂ ಸಂಮತವೇ ಆಗಿದ್ದದ್ದರಿಂದ ಆವುಗಳ ಗುಣಾಂಶವನ್ನು ಸ್ಮೃತಿಪುರಾಣೇತಿಹಾಸಗಳಲ್ಲಿ ಈ ಕಾಲಕ್ಕೇ ಸೇರಿಸಿಕೊಂಡಿರಬಹುದು. ಬುದ್ಧನು ದುಷ್ಟರನ್ನು ವಂಚಿಸುವದಕ್ಕೆ ಆವತರಿಸಿದ ವಿಷ್ಣುವೇ ಎಂಬ ಕಥೆಯು ಈ ಕಾಲದಲ್ಲಿಯೇ ಹುಟ್ಟಿಕೊಂಡಿರಬಹುದೆಂದು ಕಾಣ್ಯತ್ತದೆ. ಬೌದ್ಧರೂ ಭಾರತಾದಿಗ್ರಂಥಗಳಿಂದ ಕೆಲವು ಉತ್ತಮೋಪದೇಶಗಳನ್ನು ತಮ್ಮ ಗ್ರಂಥಗಳಲ್ಲಿ ಸೇರಿಸಿಕೊಂಡಿರಬಹುದು. ಬೌದ್ಧರು ಹೀಗೆ ಗ್ರಂಥಚೌರ್ಯ ವನ್ನು ಮಾಡಿದ್ದಾರೆಂಬ ಆಪಾದನೆಯೂ ನಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ರಾಜರ ಪ್ರೋತ್ಸಾಹವೂ ಕಡಿಮೆಯಾದಂತೆ ಬೌದ್ಧಮತವೂ ಈ ಹೇಳಿವ ಅನೇಕಕಾರಣಗಳಿಂದ ನಮ್ಮ ದೇಶದಲ್ಲಿ ಕ್ಷೀಣವಾಗುವದಕ್ಕೆ ಮೊದಲಾಯಿತು. ಈ ಸಮಯಕ್ಕೆ ಸರಿಯಾಗಿ ಜ್ಞಾನಕಾಂಡವನ್ನು ಎತ್ತಿಹಿಡಿಯುವ ವಿದ್ವಾಂಸರನೇಕರು ತಲೆಯೆತ್ತಿಕೊಂಡರು. ವೈದಿಕಮತದಲ್ಲಿಯೂ ವರ್ಣಾಶ್ರಮಾಚಾರ ಪದ್ಧತಿಗನುಗುಣವಾದ ಸಂನ್ಯಾಸಾಶ್ರಮವಿದ್ದದ್ದರಿಂದ ಅನೇಕರು ಬೌದ್ಧರನ್ನನು ಕರಿಸಿ ತಾವು ಅರ್ಹರಲ್ಲದಿದ್ದರೂ ಸಂನ್ಯಾಸವನ್ನು ಸ್ವೀಕರಿಸಿರಬಹುದು. ಬ್ರಾಹ್ಮಣ

ವಿದ್ವಾಂಸರು ಬೌದ್ಧರಂತೆಯೇ ತಮ್ಮ ತಮ್ಮ ವಿದ್ಯಾಲಯಗಳಲ್ಲಿ ಮತಪ್ರಚಾರಕರಾದ ತರುಣರನ್ನು ಸಿದ್ಧಗೊಳಿಸಿರಬೇಕು. ಹೀಗೆ ಕರ್ಮಠರಾದ ಮತ್ತು ಜ್ಞಾನಕಾಂಡ ಪ್ರಿಯರಾದ ವೈದಿಕರಿಗೂ ಬೌದ್ಧರಿಗೂ ಹಲವು ವಾಗ್ಯುದ್ಧಗಳು ಜರುಗುವದಕ್ಕೆ ಅವಕಾಶತಾಯಿತು. ಇಂಥ ವಿಷಮಸಮಯದಲ್ಲಿ ಆಚಾರ್ಯರು ಅವತರಿಸಿ ಬೌದ್ಧರಂತೆಯೇ ಸಂನ್ಯಾಸವನ್ನು ವಹಿಸಿ ಪರಿಶುದ್ಧವಾದ ಶೀಲಸಂಯಮಗಳ ಉದಾಹರಣೆಯಿಂದಲೂ ಕರ್ಮಕಾಂಡಜ್ಞಾನಕಾಂಡಗಳ ಏಕವಾಕ್ಯತೆಯನ್ನು ಪ್ರತಿಪಾದಿಸುವದರಿಂದಲೂ ಆಸ್ತಿಕಮತವನ್ನು ಉದ್ಧಾರಮಾಡುವ ಮಹಾಕಾರ್ಯವನ್ನು ಕೈಗೊಂಡರು. ಕೇವಲ ಕರ್ಮಠರಾದವರು 'ಬೌದ್ಧರ ಜೊತೆಗೆ ವೈದಿಕ ಮತಕ್ಕೆ ಅಡ್ಡಲಾಗಿ ವಾದಿಸುವ ನಮ್ಮವರೇ ಆದ ಭಿಕ್ಷುಗಳೂ ಹುಟ್ಟಿಕೊಂಡರಲ್ಲ!' –ಎಂದು ಆಂಜಿ ವೇದಾಂತವಾದವನ್ನು ಎದುರಿಸಿರುವ ವೀರಕರ್ಮಮಿಾಮಾಂಸೆ ವಾದವನ್ನು ಮುಂದಕ್ಕೆ ತಂದಿರಬೇಕು. ವೈದಿಕಮತವೇ ಮುಳುಗಿಹೋಗುವದೆಂಬ ಆಂಜಿಕೆಯಿಂದ ಕರ್ಮದ್ವೇಷಿಗೆ ಬೆಂಬಲವಾಗಬಹುದೆಂದು ತಾವು ನಂಬಿದ್ದ ಹಲವು ಪೂರ್ವಾಚಾರಗಳಿಗೆ ತಡೆಹಾಕುವ ಹೊಸ ಸ್ಮೃತಿಗಳನ್ನು ಕರ್ಮಪಕ್ಷಪಾತಿಗಳು ನಿರ್ಮಿಸಬೇಕಾದದ್ದು ಈಗ ಅವಶ್ಯವಾಯಿತು. ಚಿದ್ವಿಲಾಸರು ಮಂಡನನ ಮೂಲಕ ಉದಾಹರಿಸಿರುವಂಥ **ಕಲಿವರ್ಜ್ಯಪ್ರಕರಣದ** ವಾಕ್ಯಗಳು ಹಲವು ಆಗಲೇ ಧರ್ಮಶಾಸ್ತ್ರಗಳೊಳಗೆ ಸಮಾವೇಶವಾಗಿರಬಹುದೆಂದು ನಮಗೆ ತೋರುತ್ತದೆ. ಈ ಹೊಸ ಪ್ರಯತ್ನದ ಫಲವಾಗಿ ಕರ್ಮಮಾರ್ಗದ ಪೋಷಕರಾದ ವಿದ್ವಾಂಸರಿಗೂ ಜ್ಞಾನಕಾಂಡದ ವಾದಿಗಳಿಗೂ ಹಲವು ವಾದಗಳು ಜರುಗಿರಬೇಕು. ಅಂಥ ವಾದಗಳಲ್ಲಿ ಅತ್ಯಂತಪ್ರಾಚೀನವಾದ ಐತಿಹಾಸಿಕಮೂಲ್ಯವುಳ್ಳದ್ದು ಈ ಶಂಕರಮಂಡನ ವಾದ ಎಂದು ಹೇಳುವದಕ್ಕೆ ಅಡ್ಡಿಯಿಲ್ಲ. ಆಚಾರ್ಯರು ವಾದಮಾಡಿದ್ದು ಮಂಡನ ನೊಡನೆಯೋ, ಮಂಡನನಿಗಿಂತ ಅನ್ಯನಾದ ವಿಶ್ವರೂಪನೊಡನೆಯೋ ಅಥವಾ ಮತ್ತೆ ಯಾವನೋ ಒಬ್ಬ ಆಗಿನ ಪ್ರಸಿದ್ಧನಾದ ಗೃಹಸ್ಥವಿದ್ವಾಂಸನೊಡನೆಯೋ –ಎಂಬುದು ಇಲ್ಲಿ ಮುಖ್ಯವಲ್ಲ, ಶಂಕರವಿಜಯಕಾರರೆಲ್ಲ ಆಚಾರ್ಯರಿಗಿಂತ ಅನೇಕ ಶತಮಾನಗಳ ಈಚೆಗೆ ಬಂದವರಾದ್ದರಿಂದ ಅವರು ತಾವು ಯಾವದೋ ಗ್ರಂಥಗಳಲ್ಲಿ ಓದಿದ್ದ ಅಥವಾ ಜನಶ್ರುತಿಯಿಂದ ಕೇಳಿದ್ದ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ತಮ್ಮ ಶಾಸ್ತ್ರಜ್ಞಾನದ ಮಟ್ಟದಿಂದ ಊಹಿಸಿ ಈ ವಾದವನ್ನು ಬರೆದಿರಬಹುದಾದ್ದರಿಂದ ಹೀಗೆಯೇ ವಾದವು ನಡೆಯಿತೆ, ಇಲ್ಲವೆ ?– ಎಂಬುದೂ ಮುಖ್ಯವಲ್ಲ. ಕೇವಲ ಕರ್ಮಮಿಾಮಾಂಸಾದರ್ಶನಕ್ಕೆ ಗೆಲವೊ, ಅಥವಾ ಶ್ರುತಿಸ್ಮೃತಿಪುರಾಣಾದಿಗಳಿಗೆ ಏಕವಾಕ್ಯತೆಯನ್ನು ಮಾಡುವ ವೇದಾಂತಕ್ಕೆ ಗೆಲವೊ ?– ಎಂಬುದೇ ಆಗಿನ ಪ್ರಶ್ನೆಯಾಗಿತ್ತು. ಆ ವಾದವನ್ನು ನೋಡುವದಕ್ಕೆ ಹಲವು ದೇಶಗಳಿಂದ ವಿದ್ವಾಂಸರು ಬಂದು ಅಲ್ಲಿ ನೆರೆದಿರಬಹುದು.

ಲದ್ದರಿಂದಲೇ ಮಾಧವವ್ಯಾಸಾಚಲರು ವಾದವನ್ನು ಕೇಳುವದಕ್ಕೆ ಬ್ರಹ್ಮಾದಿ ಗಳೂ ವಿಮಾನಸ್ಥರಾಗಿ ಮೇಲುಗಡೆ ಇರುತ್ತಿದ್ದರು (ಮಾ ಶಂ. ೮–೭೯ ; ವ್ಯಾ. ಶಂ. ೬–೯೯) ಎಂದು ಬರೆದಿರುತ್ತಾರೆ.

ಸಂನ್ಯಾಸವಿಷಯಕ್ಕೆ ಆಚಾರ್ಯರವರ ಅಭಿಪ್ರಾಯ

೧೦೮. ಸಂನ್ಯಾಸವು ಶಾಸ್ತ್ರೋದಿತವೆ ? ಯಾವ ಬಗೆಯ ಸಂನ್ಯಾಸವು ಶಾಸ್ತ್ರೋದಿತವಾಗಿದೆ ? –ಎಂಬ ಬಗ್ಗೆ ಈಗಲೂ ಮತಭೇದವಿದೆ. ಶಂಕರಭಗವತ್ಪಾದರವರು ಪರಮಹಂಸಪಾರಿವ್ರಾಜ್ಯವನ್ನು ಶ್ರುತಿಯಲ್ಲಿ ವಿಧಿಸಿದೆ ಎಂಬ ಪಕ್ಷವನ್ನು ಒಪ್ಪುವವರು. ಆ ಕಾಲದಲ್ಲಿ ಈ ಸಂನ್ಯಾಸವು ಶಾಸ್ತ್ರಸಂಮತವಲ್ಲ ವೆಂದು ಸಾಧಿಸುವವರು ಅನೇಕರು ಇದ್ದಿರಬೇಕೆಂಬುದಕ್ಕೆ ಭಾಷ್ಯಗಳಲ್ಲಿಯೇ ಆಧಾರವಿದೆ. ಆಶ್ರಮುಗಳೆಷ್ಟು ?– ಎಂಬ ಪ್ರಶ್ನೆಯನ್ನು ಸೂತ್ರಭಾಷ್ಯದಲ್ಲಿ ವಿಮರ್ಶಿಸಿದೆ. 'ತ್ರಯೋ ಧರ್ಮಸ್ಕನ್ಧಾ)' (ಛಾಂ. ೨–೨೩–೧) ಎಂಬ ವಾಕ್ಯದಲ್ಲಿ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ– ಎಂಬ ಮೂರು ಆಶ್ರಮದವರಿಗೂ ಪುಣ್ಯಲೋಕಾಪ್ತಿರೂಪಫಲವೆಂದೂ ಬ್ರಹ್ಮಸಂಸ್ಥನಿಗೆ ಅಮೃತತ್ವ(ಮೋಕ್ಷ) ಫಲವೆಂದೂ ಹೇಳಿದೆ. ಇಲ್ಲಿ ನಾಲ್ಕು ಆಶ್ರಮಗಳನ್ನು ಹೇಳಿದೆಯಷ್ಟೆ ? ಇದು ಪರಾಮರ್ಶ ಮಾತ್ರವು, ವಿಧಿಯಲ್ಲ–ಎಂಬ ಪೂರ್ವಪಕ್ಷವು ಜೈಮಿನಿಗಳದು. ಇದು ಪರಾಮರ್ಶವಾದರೂ ಮಿಕ್ಕ ಆಶ್ರಮಗಳಂತೆ ಇದೂ ಅನುಷ್ಠೇಯವೇ ಎಂದು (ವೇ. ಸೂ. ೩–೪–೧೯) ತಿಳಿಸಿದ್ದರಿಂದಲೂ ತೃಪ್ತರಾಗದೆ ಬಾದರಾಯಣರು ಅಲ್ಲಿ ಸಂನ್ಯಾಸವನ್ನು ವಿಧಿಸಿಯೇ ಇವೆ(ವೇ ಸೂ.೩–೪–೩೦) ಎಂದು ಬರೆದಿರುತ್ತಾರೆ. ಈ ಸಂದರ್ಭದಲ್ಲಿ ಶಂಕರಾಚಾರ್ಯರ ಭಾಷ್ಯದಲ್ಲಿ ಬ್ರಹ್ಮಸಂಸ್ಥನೆಂದರೆ ಭಿಕ್ಷುವೇ ಎಂದು ಸ್ಥಾಪನೆಮಾಡಿರುತ್ತಾರೆ. ಈ ಛಾಂದೋಗ್ಯಶ್ರುತಿಯ ಭಾಷ್ಯದಲ್ಲಿಯೂ ಹೀಗೆಯೇ ವಿಚಾರಮಾಡಿ ಬ್ರಹ್ಮಸಂಸ್ಥನೆಂದರೆ ಪರಮಹಂಸಪರಿವ್ರಾಜಕನೇ ಎಂದು ನಿರ್ಣಯಿಸಿದೆ. ಕರ್ಮಬ್ರಹ್ಮನಿಷ್ಠೆಗಳಿಗೆ ವಿರೋಧವಿದೆ ಎಂಬ ಪಕ್ಷವನ್ನು ಎರಡು ಕಡೆಗಳಲ್ಲಿಯೂ ಸ್ಥಾಪಿಸಿದೆ.

ಬೃಹದಾರಣ್ಯಕಭಾಷ್ಯದಲ್ಲಿ ನಾಲ್ಕನೆಯ ಅಧ್ಯಾಯದ ಐದನೆಯ ಬ್ರಾಹ್ಮಣದ ಅಂತ್ಯದಲ್ಲಿ ಈ ವಿಚಾರದನ್ನು ವಿಸ್ತಾರವಾಗಿ ಚರ್ಚೆಗೆ ತೆಗೆದುಕೊಂಡಿರುತ್ತದೆ. ಅಲ್ಲಿ 'ಯಾವಜ್ಜೀವಮಗ್ನಿಹೋತ್ರಂ ಜುಹುಯಾತ್' (ಜುಹೋತಿ ?)ಮುಂತಾದ ಶ್ರುತಿಗಳಲ್ಲಿ ಸಾಯುವವರೆಗೂ ಕರ್ಮವನ್ನು ಮಾಡುತ್ತಲೇ ಇರಬೇಕೆಂದು ಐಕಾಶ್ರಮ್ಯ (ಗೃಹಸ್ಥಾಶ್ರಮವೊಂದೇ ಆಶ್ರಮವೆಂಬ ಪಕ್ಷ)ವನ್ನು ಬೆಂಬಲಿಸುವ (ಐಕಾಶ್ರಮ್ಯಜ್ಞಾಪಕಾನಿ) ಶ್ರುತಿಗಳೂ ಕೆಲವು ಇವೆ ; ಆಶ್ರಮಾಂತರಗಳೂ ಇವೆ ಎಂಬ ಬೇರೆಯ ವಾಕ್ಯಗಳೂ ಇವೆ. ಸಂನ್ಯಾಸದ ವಿಷಯಕ್ಕೆ ಕ್ರಮ, ವಿಕಲ್ಪ, ಯಥೇಷ್ಟಾಶ್ರಮಸೇವೆ–ಇದನ್ನು ಹೇಳುವ ಶ್ರುತಿಸ್ಮೃತಿಗಳೂ ಇವೆ. ಅವನ್ನು

ಬಲ್ಲವರ ಆಚಾರವೂ ಇವೆ (ಏನಂ ಪ್ರವ್ರಜ್ಯಾನವಿಕಲ್ಪಕ್ರನುಯಥೇಷ್ಟಾಶ್ರನುಪ್ರತಿಪತ್ತಿಪ್ರತಿಪಾದಕಾನಿ ಹಿ ಶ್ರುತಿಸ್ಮೃತಿನಾಕ್ಯಾನಿ ಶತಶಃ ಉಪಲಭ್ಯನ್ತೇ ಇತರೇತರವಿರುದ್ಧಾನಿ| ಆಚಾರಶ್ಚ ತನ್ವಿದಾಮ್|) ಎಂದು ಬರೆದಿದೆ. ಚರ್ಚೆಯ ಕೊನೆಯಲ್ಲಿ 'ವಿದುಷಸ್ತಾವತ್ ಪಾರಿವ್ರಾಜ್ಯಂ ಸಿದ್ಧಮ್। ಸಂಪ್ರದಾನಾದಿಕರ್ಮಕಾರಕಜಾತ್ಯಾದಿಶೂನ್ಯಾವಿಕ್ರಿಯಬ್ರಹ್ಮಾತ್ಮದೃಢಪ್ರತಿಪತ್ತಿಮಾತ್ರೇಣ ವಚನಮನ್ತರೇಣಾಪಿ।' ಸಂಪ್ರದಾನವೇ ಮುಂತಾದ ಕರ್ಮಕಾರಕಗಳೂ ಜಾತ್ಯಾದಿಗಳೂ ಇಲ್ಲದ ವಿಕಾರರಹಿತವಾದ ಬ್ರಹ್ಮಾತ್ಮನ ಜ್ಞಾನವು ದೃಢವಾಗಿ ಉಂಟಾದ ಮಾತ್ರದಿಂದ ಜ್ಞಾನಿಗೆ ವಚನವಿಲ್ಲದಿದ್ದರೂ ಪಾರಿವ್ರಾಜ್ಯವು ಸಿದ್ಧವಾಯಿತು– ಎಂದು ವಿದ್ವತ್ಸಂನ್ಯಾಸವನ್ನು 'ವಿವಿದಿಷೋರಪಿ ಸಿದ್ಧಂ ಪಾರಿವ್ರಾಜ್ಯಮ್' ಏತಮೇವಾತ್ಮಾನಂ ಲೋಕಮಿಚ್ಛನ್ತಃ ಪ್ರವ್ರಜನ್ತಿ ಇತಿ ವಚನಾತ್ ॥ 'ಈ ಆತ್ಮನೆಂಬ ಲೋಕವನ್ನೇ ಬಯಸುವವರು ಸಂನ್ಯಾಸವಮಾಡಬೇಕು' ಎಂಬ ವಚನವಿರುವದರಿಂದ ಜ್ಞಾನೇಚ್ಛುಗಳಿಗೂ ಪಾರಿವ್ರಾಜ್ಯವು ಸಿದ್ಧವಾಯಿತು ; 'ತಸ್ಮಾದ್ ವಿರಕ್ತಸ್ಯ ಮುಮುಕ್ಷೋ ವಿನಾಪಿ ಜ್ಞಾನೇನ ಬ್ರಹ್ಮಚರ್ಯಾದೇವ ಪ್ರವ್ರಜೇತ್ ಇತ್ಯಾದ್ಯುಪಪನ್ನಮ್ ।' ಆದ್ದರಿಂದ (ಯಮಪ್ರಧಾನವಾದ ಅನುಮಾನಿತ್ವಾದಿಗಳೂ ಮಾನಸವಾದ ಧ್ಯಾನಜ್ಞಾನವೈರಾಗ್ಯಾದಿಗಳೂ ತೀರ ಹತ್ತಿರದ ಉಪಕಾರಕಸಾಧನವಾಗಿರುವದರಿಂದ) ವಿರಕ್ತನಾದ ಮುಮುಕ್ಷುವಿಗೆ ಜ್ಞಾನವುಂಟಾಗದೆ ಇದ್ದರೂ 'ಬ್ರಹ್ಮಚರ್ಯದಿಂದಲೇ ಪ್ರವ್ರಜಿತನಾಗಬೇಕು' ಮುಂತಾದ ವಿಧಿಗಳಿರುವದರಿಂದ ಪಾರಿವ್ರಾಜ್ಯವು ಸಿದ್ಧವಾಯಿತು ಎಂದು ವಿವಿದಿಷಾಸಂನ್ಯಾಸವನ್ನು ಸಿದ್ಧಪಡಿಸಿರುತ್ತಾರೆ. ಅದೇ ಉಪನಿಷತ್ತಿನ ಮೂರನೆಯ ಅಧ್ಯಾಯದಲ್ಲಿ (ಬೃ. ೩–೫–೧) 'ವ್ಯುತ್ಥಾಯಾಥ ಭಿಕ್ಷಾಚರ್ಯಾಂ ಚರನ್ತಿ' ಎಂಬ ವಾಕ್ಯದ ಅಭಿಪ್ರಾಯವನ್ನು ವಿಚಾರಮಾಡುವ ಸಂದರ್ಭದಲ್ಲಿ "ಯದ್ಧಿ ತದೇಷಣಾಭ್ಯೋ ವ್ಯುತ್ಥಾನಲಕ್ಷಣಂ ಪಾರಿವ್ರಾಜ್ಯಂ ತದಾತ್ಮಜ್ಞಾನಾಙ್ಗಮ್ । ಆತ್ಮಜ್ಞಾನವಿರೋಧ್ಯೇಷಣಾಪರಿತ್ಯಾಗರೂಪತ್ವಾತ್ । ಅವಿದ್ಯಾವಿಷಯತ್ವಾಚ್ಚ ವಿಷಣಾಯಾಃ । ತದ್ವ್ಯತಿರೇಕೇಣ ಚ ಅಸ್ತಿ ಆಶ್ರಮರೂಪಂ ಪಾರಿವ್ರಾಜ್ಯಂ ಬ್ರಹ್ಮಲೋಕಾದಿಫಲಪ್ರಾಪ್ತಿಸಾಧನಂ ಯದ್ವಿಷಯಂ ಯಜ್ಞೋಪವೀತಾದಿಸಾಧನವಿಧಾನಂ ಲಿಙ್ಗವಿಧಾನಂ ಚ" (ಪು. ಲಗಿಖ) ವಿಷಣೆಗಳನ್ನು ಎಂದರೆ ಮನುಷ್ಯಾದಿಲೋಕಗಳ ಬಯಕೆಗಳನ್ನು ಬಿಟ್ಟೀಳುವ ಪಾರಿವ್ರಾಜ್ಯವಿದೆಯಲ್ಲ, ಅದು ಆತ್ಮಜ್ಞಾನಕ್ಕೆ ಅಂಗವು ; ಅದಕ್ಕಿಂತ ವ್ಯತಿರಿಕ್ತವಾದ ಪಾರಿವ್ರಾಜ್ಯವೂ ಇದೆ ; ಅದು ಬ್ರಹ್ಮಲೋಕವೇ ಮುಂತಾದದ್ದನ್ನು ಪಡೆಯುವದಕ್ಕೆ ಸಾಧನವು ; ಅದರ ವಿಷಯದಲ್ಲಿಯೇ ಯಜ್ಞೋಪವೀತಾದಿಸಾಧನಗಳನ್ನೂ ಲಿಂಗ(ಸಂನ್ಯಾಸಿಯ ವೇಷ)ವನ್ನೂ ವಿಧಿಸಿರುವದು– ಎಂದು ಪರಮು

ಹಂಸಪಾರಿವ್ರಾಜ್ಯ ಮತ್ತು ತ್ರಿದಂಡಿಸಂನ್ಯಾಸ– ಎಂಬ ಎರಡು ಆಶ್ರಮಗಳನ್ನು ವಿಂಗಡಿಸಿ ಎರಡೂ ಶಾಸ್ತ್ರೀಯವೆಂದು ಪ್ರತಿಪಾದಿಸಿರುತ್ತದೆ.

ಹೀಗೆಯೇ ತೈತ್ತಿರೀಯ, ಐತರೇಯ– ಮುಂತಾದ ಉಪನಿಷದ್ಭಾಷ್ಯಗಳಲ್ಲಿಯೂ ಆಚಾರ್ಯರು ಪಾರಮಹಂಸ್ಯವು ಶಾಸ್ತ್ರೀಯವೆಂಬ ಸಿದ್ಧಾಂತವನ್ನು ಪ್ರತಿಪಾದಿಸಿರುತ್ತಾರೆ.

"ಬಹುಕಿರುವರೆಗೂ ಅಗ್ನಿಹೋತ್ರವನ್ನು ಮಾಡಬೇಕು" ಎಂದು ವಿಧಿಸಿರುವ ಕರ್ಮವನ್ನು ಬಿಡುವದಕ್ಕೆ ಸಂನ್ಯಾಸವಿಧಾಯಕಶಬ್ದಗಳು ಸಾಧಕವಲ್ಲ. ಏಕೆಂದರೆ ಅಗ್ನಿಹೋತ್ರಾದಿವಿಧಿಗಳು ನಿರವಕಾಶವಾಗಿರುತ್ತವೆ; ಆದರೆ ಸಂನ್ಯಾಸವಿಧಿಗಳು ಸಾವಕಾಶವಾಗಿವೆ. ಎಂದರೆ ಅವು ಕರ್ಮವನ್ನು ಮಾಡುವದಕ್ಕೆ ಅಧಿಕಾರವಿಲ್ಲದವರ ವಿಷಯ ಎಂದು ಕಲ್ಪಿಸುವದಕ್ಕೂ ಆಗುತ್ತದೆ– ಎಂದು ಆಗಿನ ಪೂರ್ವಪಕ್ಷಿಗಳ ಅಭಿಪ್ರಾಯವಿತ್ತು. ಕುಮಾರಿಲಭಟ್ಟರ **ತಂತ್ರವಾರ್ತಿಕದ** ಹೀಗೆಂದಿದೆ: **"ತತ್ರೈವಂ ಶಕ್ಯತೇ ವಕ್ತುಂ ಯೋಽನ್ಧಪಙ್ಗ್ವಾದಯೋ ನರಾಃ। ಗೃಹಸ್ಥತ್ವಂ ನ ಶಕ್ನುವನ್ತೋ ಕರ್ತುಂ ತೇಷಾನುಯೋ ವಿಧಿಃ | ನೈಷ್ಠಿಕಬ್ರಹ್ಮಚರ್ಯಂ ವಾ ಪರಿವ್ರಾಜಕತಾಪಿ ವಾ। ತೈರವಶ್ಯಂ ಗ್ರಹೀತವ್ಯಾ ತೇನಾದಾವೇವಮುಚ್ಯತೇ" ॥** (ತಂ.ವಾ. ೧–೩–೨ ಪು. ೧೯೨) ಕುರುಡರು ಹೆಳವರೇ ಮುಂತಾದ ಅಂಗವಿಕಲರು ಗಾರ್ಹಸ್ಥ್ಯವನ್ನು ಮಾಡುವದು ಆಗಲಾರದ್ದಾದ್ದರಿಂದ ಅವರು ನೈಷ್ಠಿಕಬ್ರಹ್ಮಚರ್ಯವನ್ನೋ ಪಾರಿವ್ರಾಜ್ಯವನ್ನೋ ಅವಶ್ಯವಾಗಿ ಸ್ವೀಕರಿಸಬೇಕಾಗುತ್ತದೆ. ಆದ್ದರಿಂದ ಅವರಿಗೆ ಸಂನ್ಯಾಸವನ್ನು ಹೇಳಿದೆ –ಎಂದು ಪೂರ್ವಮೀಮಾಂಸಾವಾರ್ತಿಕಕಾರರ ಅಭಿಪ್ರಾಯ. ಆಚಾರ್ಯರು ಈ ಅಭಿಪ್ರಾಯವು ಸರಿಯಲ್ಲವೆನ್ನುತ್ತಾರೆ. ಏಕೆಂದರೆ ಅನಧಿಕೃತರಾದವರಿಗೆ 'ಸ್ನಾತಕೋವಾಽಸ್ನಾತಕೋ ವೋತ್ಸನ್ನಾಗ್ನಿರನಗ್ನಿಕೋ ವಾ' ಎಂದು ಮುಂತಾಗಿ ಬೇರೆಯಾಗಿಯೇ ಜಾಬಾಲೋಪನಿಷತ್ತಿನಲ್ಲಿ ಪಾರಿವ್ರಾಜ್ಯವನ್ನು ವಿಧಿಸಿರುತ್ತದೆ. ಆದ್ದರಿಂದ ಕರ್ಮಗಳೆಲ್ಲ ಅಜ್ಞಾನಿಗಳಾದ ಕಾಮಿಗಳಿಗಾಗಿಯೇ ವಿಹಿತವಾಗಿರುತ್ತವೆ ಎಂಬುದೇ ಸರಿಯಾದ ಸಿದ್ಧಾಂತವು. ಅಂಥ ಅಜ್ಞಾನಿಗಳಾದ ಕಾಮಿಗಳಿಗಾಗಿಯೇ ಯಾವಜ್ಜೀವಕರ್ಮವನ್ನು ವಿಧಿಸಿರುತ್ತದೆ ಎಂದು ಆಚಾರ್ಯರು ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ, ಐತರೇಯ, ಈಶಾವಾಸ್ಯ –ಮುಂತಾದ ಉಪನಿಷತ್ತುಗಳ ಭಾಷ್ಯದಲ್ಲಿಯೂ ಗೀತಾಭಾಷ್ಯ ಸೂತ್ರ ಭಾಷ್ಯದಲ್ಲಿಯೂ ಸ್ಪಷ್ಟಪಡಿಸಿರುತ್ತಾರೆ.

ಸಂನ್ಯಾಸವು ಕಲಿವರ್ಜ್ಯವೆ?

ಇಲ್ಲಿ ಇನ್ನೊಂದು ವಿಷಯವನ್ನು ಕುರಿತು ಪರಿಶೀಲಿಸುವದು ಉಳಿದಿದೆ. ಈವರೆಗೆ ವಿವರಿಸಿರುವಂತೆ (೧) ಆತ್ಮಜ್ಞಾನಿಗಳು ಅಥವಾ ಮುಮುಕ್ಷುಗಳಾದ

ಜಿಜ್ಞಾಸುಗಳು ಸ್ವೀಕರಿಸತಕ್ಕ **ಪಾರಮಹಂಸ್ಯ**, ಬ್ರಹ್ಮಲೋಕಾದಿಪ್ರಾಪಕವಾದ **ಆಶ್ರಮಸಂನ್ಯಾಸ**, ಅಂಗವಿಕಲರೇ ಮೊದಲಾದ ಕರ್ಮಾನಧಿಕಾರಿಗಳು ಸ್ವೀಕರಿಸ ಬೇಕಾದ ಪಾರಿವ್ರಾಜ್ಯ– ಈ ಮೂರೂ ಶಾಸ್ತ್ರೀಯವೆಂದು ಆಚಾರ್ಯರು ಒಪ್ಪಿರುತ್ತಾರಷ್ಟೆ ? ಅಗ್ನಿಹೋತ್ರಾದಿಕರ್ಮಗಳು ಆತ್ಮಜ್ಞಾನವಿಲ್ಲದ ಅಮುಮುಕ್ಷುಗಳಿಗೆ ವಿಹಿತವಾಗಿದೆಯೆಂದೂ ಅಗ್ನಿಯನ್ನು ಬಿಟ್ಟರೆ ಆಗುವ ವೀರಹತ್ಯಾದೋಷವು ಆಜ್ಞರ ವಿಷಯವೇ ಎಂದೂ ಆವರ ಕಟ್ಟಕಡೆಯ ಮತವಾಗಿರುತ್ತದೆ. ಈ ಪ್ರಸಂಗದಲ್ಲಿ ಸಂನ್ಯಾಸವು ಕಲಿವರ್ಜ್ಯವಲ್ಲವೆ ?– ಎಂಬ ಆಕ್ಷೇಪವನ್ನು ಚಿದ್ವಿಲಾಸೀಯದಲ್ಲಿ ಒಡ್ಡಿರುವಂತೆ ಆಚಾರ್ಯರ ಭಾಷ್ಯದಲ್ಲಿ ಎಲ್ಲಿಯೂ ಹಾಕಿಕೊಂಡಿಲ್ಲ. ಇದೇಕೆ ? ಕಲಿವರ್ಜ್ಯಪ್ರಕರಣವು ಆಚಾರ್ಯರ ಕಾಲಕ್ಕೆ ಸ್ಮೃತಿಗಳಲ್ಲಿ ಇರಲಿಲ್ಲವೆ? ಅಗ್ನಿಹೋತ್ರವುಕೂಡ ಕಲಿವರ್ಜ್ಯವೆಂದೇ ಕೆಲವರು ಹೇಳುತ್ತಿದಾರೆ. ಚಿದ್ವಿಲಾಸರು ಬರೆದಿರುವ 'ಆಶ್ವಾಲಮ್ಭಂ ಗವಾಲಮ್ಭವಮ್' (ಚಿ. ಶಂ. ೧೪–೭) ಎಂಬ ಶ್ಲೋಕದ ಪೂರ್ವಾರ್ಧವು 'ಅಗ್ನಿಹೋತ್ರಂ ಗವಾಲಮ್ಭಂ ಸಂನ್ಯಾಸಂ ಪಲಪೈತೃಕಮ್' ಎಂಬ ಪಾಠಾಂತರಯುಕ್ತವಾಗಿ ನಿರ್ಣಯಸಿಂಧುವಿನಲ್ಲಿ ಉದಾಹೃತವಾಗಿರುತ್ತದೆ. ಆಗ ಅಗ್ನಿಹೋತ್ರವೂ ಸಂನ್ಯಾಸದಂತೆ ಕಲಿವರ್ಜ್ಯವೇ –ಎಂಬ ಅನಿಷ್ಟವು ಪೂರ್ವಪಕ್ಷಕ್ಕೆ ಬಂದೊದಗುತ್ತದೆ. ಆದರೆ ಆಚಾರ್ಯರು ಹೇಳಿರುವ ಸಮಾಧಾನದಲ್ಲಿ 'ಸಂನ್ಯಾಸಶ್ಚಾಗ್ನಿಹೋತ್ರಂ ಚ ತಾವ ದೇವ ಕಲೌ ಯುಗೇ' (ಚಿ. ಶಂ. ೧೭) ಎಂದು ಹೇಳಿದ್ದರೂ– ಈ ವಿಷಯವನ್ನು ಚಿದ್ವಿಲಾಸರು ಎತ್ತಿಲ್ಲ ; ಇದೇಕೆ ? ಈ ಪಾಠಾಂತರವು ಚಿದ್ವಿಲಾಸರಿಗೆ ತಿಳಿದಿರಲಿಲ್ಲವೆಂದು ಕಲ್ಪಿಸುವದು ಸಯುಕ್ತವಾಗಲಾರದು. ನಿರ್ಣಯಸಿಂಧುಕಾರರು ಕಲಿವರ್ಜ್ಯಸಂನ್ಯಾಸವು ತ್ರಿದಂಡಸಂನ್ಯಾಸವೆಂದು (ನಿ ಸಿಂ. ಕಲಿವರ್ಜ್ಯಪ್ರಕರಣ ಪು. ೨೬೩) ಬರೆದಿರುತ್ತಾರೆ; ಆದರೆ ಆ ಅಭಿಪ್ರಾಯವೂ ಆಚಾರ್ಯರಿಗೆ ಒಪ್ಪಿನ್ನು ವದಕ್ಕೆ ಯಾವ ಆಧಾರವೂ ನಮಗೆ ಸಿಕ್ಕಿರುವದಿಲ್ಲ. ಆಚಾರ್ಯರ ಆಭಿಪ್ರಾಯವು ಈ ವಿಷಯದಲ್ಲಿ ಏನಿತ್ತೆಂಬುದನ್ನು ನಿರ್ಣಯಿಸುವದಕ್ಕೆ ನಮಗೆ ವಾಕ್ಯಗಳು ಯಾವವೂ ಇಲ್ಲ. ಧರ್ಮಶಾಸ್ತ್ರಗಳಿಗೆ ಏಕವಾಕ್ಯತೆಯನ್ನು ಮಾಡಬೇಕೆನ್ನುವವರು ಈ ವಿಷಯವನ್ನು ಪರ್ಯಾಲೋಚಿಸಬೇಕಾದದ್ದಿದೆ.

ಜೈಮಿನಿಯ ಮತವು ಆಚಾರ್ಯರ ಸಿದ್ಧಾಂತಕ್ಕೆ ವಿರುದ್ಧವಲ್ಲ

೧೦೯. ಈ ವಾದಪ್ರಕರಣವನ್ನು ನಿಲ್ಲಿಸುವ ಮುಂಚೆ ಮಂಡನನಿಗೂ ಆಚಾರ್ಯರಿಗೂ ಆದ ಮತ್ತೊಂದು ಸಂವಾದವನ್ನು ಮಾಧವೀಯದಲ್ಲಿ ವರ್ಣಿಸಿರುವಂತೆ (ಮಾ. ಶಂ. ೯–೩ರಿಂದ ೧೫) ತಿಳಿಸುವದು ಅವಶ್ಯ. ಚಿದ್ವಿಲಾಸೀಯದಲ್ಲಿ ಈ ವಿಷಯವು ಕಾಣಿಸುವದಿಲ್ಲ. ಮಂಡನಮಿಶ್ರನು ಎದ್ದು ಭಕ್ತಿಯಿಂದ ಮೂರು ಬಾರಿ ಪ್ರದಕ್ಷಿಣೆಯನ್ನು ಮಾಡಿ ನಮಸ್ಕರಿಸಿ 'ಸ್ವಾಮಿಯೆ, ನಾನು ಉತ್ತಮಾಶ್ರಮ

ನಿಂದೆಯನ್ನು ಮಾಡಿದ್ದೆಲ್ಲವನ್ನೂ ಕ್ಷಮಿಸಿ ನನ್ನ ಅಜ್ಞಾನವನ್ನು ತೊಲಗಿಸಬೇಕು. ಶುದ್ಧಾದ್ವೈತಪಥದಲ್ಲಿ ಯೇ ತತ್ಪರನಾಗಿರುವಂತೆ ನನ್ನನ್ನು ಜ್ಞಾನಿಯಾಗಿ ಮಾಡಿರಿ. ನನಗೆ ಸಂನ್ಯಾಸವನ್ನು ಕೊಟ್ಟು ಶಿಷ್ಯನನ್ನಾಗಿ ಮಾಡಿಕೊಳ್ಳಬೇಕು' ಎಂದು ಬೇಡಿ ಕೊಂಡನು (ಚಿ. ಶಂ. ೧೮–೪೪) ಎಂದಿಷ್ಟೇ ಅಲ್ಲಿ ಇರುವ ವಿವರ. ಆದರೆ **ಮಾಧವೀಯ**ದಲ್ಲಿ ಒಂದು ಹೆಚ್ಚಿನ ವಿಚಾರಣೀಯವಿಷಯವಿದೆ. ಆಚಾರ್ಯರ ಸಯುಕ್ತಿಕವಾದ ಶ್ರುತ್ಯರ್ಥನಿರ್ಣಯವನ್ನು ಕೇಳಿ ದುರಾಗ್ರಹವನ್ನು ತ್ಯಜಿಸಿದ ಮೇಲೂ ಮಂಡನನು ತನ್ನ ಒಂದು ಸಂಶಯವನ್ನು ಆಮರ ಮುಂದೆ ಇಟ್ಟನು. 'ನಿಮ್ಮಿಂದ ನಾನು ವಾದದಲ್ಲಿ ಜಿತನಾದೆನೆಂದು ನನಗೆ ವಿಷಾದವೇನೂ ಇಲ್ಲ. ಆದರೆ ಜೈಮಿನಿಯ ವಚನಗಳೂ ಖಂಡಿತವಾದವಲ್ಲ! ಸರ್ವಜ್ಞರಾದ ಜೈಮಿನಿ ಗಳು ತಮ್ಮ ಸೂತ್ರದಲ್ಲಿ ಮಿಥ್ಯಾರ್ಥವನ್ನು ಬರೆದರೇಕೆ?' (ಮಾ.ಶಂ.೯–೨೩) ಎಂದನು. ಅದಕ್ಕೆ ಸಮಾಧಾನವಾಗಿ ಆಚಾರ್ಯರು ಹೇಳಿದ್ದೇನೆಂದರೆ 'ಇದು ಜೈಮಿನಿಗಳ ತಪ್ಪಲ್ಲ. ಅವರ ಹೃದಯವನ್ನು ಅರಿಯದ ನಾವೇ ಅವರಲ್ಲಿ ಹೀಗೆ ಅಜ್ಞತೆಯನ್ನು ಆರೋಪಿಸುತ್ತಿರುವೆವು. ಜೈಮಿನಿಗಳಿಗೆ ಪರಬ್ರಹ್ಮದಲ್ಲಿ ತಾತ್ಪರ್ಯ ವಿದ್ದರೂ ವಿಷಯಾಸಕ್ತರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲವೆಂಬುದನ್ನು ಮನಗಂಡು ಜ್ಞಾನಪ್ರಾಪ್ತಿಗೆ ಸಾಧನವಾಗಿರುವ ಧರ್ಮವನ್ನೇ ಮುಖ್ಯವಾಗಿ ಅವರು ನಿರೂಪಣೆಮಾಡಿದರು. 'ತಪಸೋತಮ್' (ಬೃ. ೪–೪–೨೨) ಎಂಬ ಶ್ರುತಿ ವಾಕ್ಯದಲ್ಲಿ ವೇದಾನುವಚನ, ಯಜ್ಞ, ದಾನ, ತಪಸ್ಸು– ಇವುಗಳಿಂದ ಬ್ರಹ್ಮ ಜ್ಞಾನವಾಗುವದೆಂದು ಹೇಳಿದೆ; ಆದನ್ನನುಸರಿಸಿಯೇ ಜೈಮಿನಿಗಳು ಧರ್ಮ ತತ್ತ್ವವನ್ನು ನಿರ್ಧಾರಮಾಡಿರುತ್ತಾರೆ (೯–೬, ೭).

[ಕರ್ಮಕ್ಕೆ ಈ ವಿನಿಯೋಗವನ್ನು ಜೈಮಿನಿಗಳು ಹೇಳಿಲ್ಲ; ಕರ್ಮನಿರೂಪಣೆಮಾಡು ವದರಿಂದ ಈ ಅಭಿಪ್ರಾಯವೂ ಆರರಿಗಿತ್ತು ಎಂದು ಕಲ್ಪಿಸಿದೆ.

ಮಂಡನ: ಹಾಗಾದರೆ 'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯ ಮತದರ್ಥಾನಾಮ್' (ಜೈ. ಸೂ. ೧–೨–೧). ವೇದವು ಕ್ರಿಯಾಪರವಾಗಿರುವದ ರಿಂದ ಕ್ರಿಯಾಪರವಲ್ಲದ ವಾಕ್ಯಗಳು ವ್ಯರ್ಥ– ಎಂದು ಅವರೇಕೆ ಸೂತ್ರವನ್ನು ರಚಿಸಿರುತ್ತಾರೆ? (೯–೮)

ಶಂಕರರು: ಶ್ರುತಿಯು ಪರಂಪರೆಯಿಂದ ಆದ್ವೈತಪರವೇ ಆದರೂ ಆತ್ಮಜ್ಞಾನವನ್ನುಂಟುಮಾಡುವ ಕರ್ಮದಲ್ಲಿಯೇ ದೃಷ್ಟಿಯುಳ್ಳದ್ದಾಗಿದೆ ಎಂಬ ಕಾರಣದಿಂದ ಆ ಪ್ರಕರಣದ ವಾಕ್ಯಗಳಿಗೆ ಕ್ರಿಯಾರ್ಥಕತ್ವವನ್ನೇ ಜೈಮಿನಿಗಳು ಹೇಳಿರುತ್ತಾರೆ. (೯–೯)

[ಜೈಮಿನಿಗಳು ಶ್ರುತಿಯು ಅದ್ವೈತಪರವೇ ಎಂದು ಬಾಯಿಬಿಟ್ಟು ಹೇಳಿಲ್ಲ; ಅದ್ವೈತ ಪರವಲ್ಲವೆಂದೂ ಹೇಳಿಲ್ಲ. ಕರ್ಮಕಾಂಡವನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ಕ್ರಿಯಾರ್ಥ

ವಾಗಿರುವದರಿಂದಲೇ ಇತರ ವಾಕ್ಯಗಳೂ ಪ್ರಮಾಣ ಎಂದಿರುತ್ತಾರೆ. ಅವರು ಉಪನಿಷದ್ವಾಕ್ಯಗಳ ವಿಚಾರವನ್ನು ಮಾಡಿಯೇ ಇರುವದಿಲ್ಲ. ಕರ್ಮವು ಜ್ಞಾನಾರ್ಥವೆಂಬುದನ್ನೂ ಅವರು ಹೇಳಿಲ್ಲ.]

ಕುಮಾರಿಲಭಟ್ಟರು ತಮ್ಮ ತಂತ್ರವಾರ್ತಿಕದಲ್ಲಿ 'ಏತೇನ ಕ್ರತ್ವರ್ಥಕೆರ್ತೃಪ್ರತಿಪಾದನದ್ವಾರೇಣ ಉಪನಿಷದಾಂ ನೈರಾಕಾಙ್ಕ್ಷ್ಯಂ ವ್ಯಾಖ್ಯಾತಮ್' (ಜೈ. ಸೂ. ೧-೨-೭ ತಂ. ವಾ. ಪು. ೧೦೪) ಕರ್ಮಕ್ಕೆ ಅಂಗವಾಗಿರುವ ಕರ್ತೃರೂಪನಾದ ಆತ್ಮನನ್ನು ಹೇಳುವದರಿಂದಲೇ ಉಪನಿಷತ್ತುಗಳು ನಿರಾಕಾಂಕ್ಷವಾಗುತ್ತವೆ– ಎಂದು ಉಪನಿಷತ್ತುಗಳೂ ಕರ್ಮಾರ್ಥವೆಂದೇ ಸ್ಪಷ್ಟವಾಗಿ ಹೇಳಿರುತ್ತಾರೆ. ಇನ್ನೊಂದು ಕಡೆಯಲ್ಲಿ (ತಂ.ವಾ.೧-೪-೮ ಪು. ೨೮೮) 'ಆತ್ಮಜ್ಞಾನಂ ಹಿ ಸಂಯೋಗಪೃಥಕ್ತ್ವಾತ್ ಕ್ರತ್ವರ್ಥಪುರುಷಾರ್ಥಶ್ಚೇನ ಜ್ಞಾಯತೇ ತೇನ ವಿನಾ ಪರಲೋಕಫಲೇಷು ಪ್ರವೃತ್ತಿನಿವೃತ್ತ್ಯಭಾವಾತ್' ಆತ್ಮಜ್ಞಾನವು ಪುರುಷಾರ್ಥಕ್ಕೂ ಆಗುತ್ತದೆ ; ಏಕೆಂದರೆ ಪರಲೋಕಫಲವುಳ್ಳ ಕರ್ಮಗಳಲ್ಲಿ ಪ್ರವೃತ್ತಿನಿವೃತ್ತಿಗಳು ಆಗುವದಕ್ಕೆ ಆದು ಇದ್ದೇಇರಬೇಕು– ಎಂದೂ ಬರೆದಿದಾರೆ. ಅಲ್ಲಿ ಜ್ಞಾನಕರ್ಮಸಮುಚ್ಚಯಗಳನ್ನು ಅವರು ಹೇಳಿರುತ್ತಾರೆ.]

ಮಂಡನ : ಜೈಮಿನಿಗಳಿಗೆ ಸಚ್ಚಿದಾತ್ಮನಲ್ಲಿಯೇ ವೇದಕ್ಕೆ ತಾತ್ಪರ್ಯವೆಂಬ ಅಭಿಪ್ರಾಯವಿದ್ದರೆ ಪರಮೇಶ್ವರನನ್ನು ಅವರು ನಿರಾಕರಿಸಿದ್ದು ಹೇಗೆ ? (೯-೧೦)

ಶಂಕರರು : ಈ ಜಗತ್ತು ಕರ್ತೃಪೂರ್ವಕವಾಗಿದೆ ; ಏಕೆಂದರೆ ಘಟಾದಿಗಳಂತೆ ಇದು ಕಾರ್ಯವಾಗಿದೆ– ಎಂಬ ರೂಪದ ಅನುಮಾನದಿಂದಲೇ ಪರಮೇಶ್ವರಸಿದ್ಧಿ– ಎಂದು ಕಾಣಾದರು ಹೇಳುತ್ತಾರೆ. 'ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ' (ಬೃ. ೩-೯-೨೬) 'ನಾ ವೇದವಿನ್ಮನುತೇ ತಂ ಬೃಹನ್ತಮ್' (ತೈ. ಬ್ರಾ. ೬-೧೨-೯-೭) ಎಂಬ ಶ್ರುತಿಯು ವೇದದಿಂದಲೇ ಈಶ್ವರಸಿದ್ಧಿಯಾದೀತೇ ಹೊರತು ಮತ್ತೆ ಹೇಗೂ ಆಗಲಾರದು ಎಂದು ಹೇಳುತ್ತಿದೆ– ಎಂಬ ಕಾರಣದಿಂದ ಈಶ್ವರಸಿದ್ಧಿಗಾಗಿ ಮಾಡಿರುವ ಈ ಅನುಮಾನವನ್ನೂ ಮತ್ತು ಈಶ್ವರನೇ ಫಲದಾತೃವೆಂಬುದನ್ನೂ ಅವರು ನೂರಾರು ಯುಕ್ತಿಗಳಿಂದ ಖಂಡಿಸಿರುತ್ತಾರೆ. ನಾವು ಹೇಳಿರುವ ಉಪನಿಷನ್ಮತಕ್ಕೆ ಅವರ ಮತವು ಸ್ವಲ್ಪವೂ ವಿರುದ್ಧವಲ್ಲ. ಇದನ್ನರಿಯದೆ ಜನರು ಅವರು ನಿರೀಶ್ವರವಾದಿಗಳೆಂದು ಹೇಳುತ್ತಿದಾರೆ (೯-೧೧ರಿಂದ ೧೪).

[ಜೈಮಿನಿಗಳಾಗಲಿ ವಾರ್ತಿಕಕಾರರಾಗಲಿ ಈಶ್ವರನಿರ್ಧಾರಣೆಯನ್ನು ಮಾಡಿಲ್ಲ. ಆಚಾರ್ಯರು ಅನುಮಾನದಿಂದ ಬ್ರಹ್ಮಸಿದ್ಧಿಯಾಗಲಾರದು ಎಂದು ಹೇಳುತ್ತಾರೆ; ಬ್ರಹ್ಮವು ಇಂದ್ರಿಯಗೋಚರವಲ್ಲವೆಂಬುದೇ ಅದಕ್ಕೆ ಹೇತು, 'ತಂ ತ್ವೌಪನಿಷದಮ್? ಎಂಬ ಶ್ರುತಿಯನ್ನು ಅವರು ಉದಾಹರಿಸಿರುವದು ನಿಜವಾದರೂ ಅವರು ಹಾಗೆ ಉದಾಹರಿಸಿರುವದು ಅನುಮಾನಕ್ಕೋಸ್ಕರವಲ್ಲ ; ವೇದದ ಒಂದು ವಿತಿಷ್ಟೌಪದೇಶದಿಂದ ತಿಳಿಯಬರುವ ಆತ್ಮವಸ್ತುವನ್ನು ಮತ್ತೆ ಯಾರೂ ಪರಾಮರ್ಶಿಸಿಲ್ಲ ಎನ್ನುವದಕ್ಕೆ.]

ಹೀಗೆ ಆಚಾರ್ಯರು ಹೇಳಿದ ಉತ್ತರವನ್ನು ಕೇಳಿ ಮಂಡನನೂ ಶಾರದೆ

ಯೂ ಸಭಿಕರೂ ಸಂತೋಷಪಟ್ಟರು ಮಂಡನನು ಜೈಮಿನಿಸಿಗಳ ಮಾತಿನಿಂದಲೇ ಇವನ್ನು ಕೇಳಿ ತಿಳಿದುಕೊಳ್ಳಬೇಕೆಂದು ಅವರನ್ನು ಸ್ಮರಿಸಿದನು. ಜೈಮಿನಿಸಿಗಳು ಅಲ್ಲಿಗೆ ಬಂದು 'ಈ ಭಾಷ್ಯಕಾರರಲ್ಲಿ ಸಂಶಯವನ್ನು ಇಟ್ಟುಕೊಳ್ಳಬೇಡ. ಇವರು ಹೇಳಿದ್ದೇ ನನ್ನ ಸೂತ್ರಗಳ ಹೃದಯವು ನನ್ನ ಸೂತ್ರಗಳ ಹೃದಯವನಂತಿರಲಿ, ಸಕಲಶಾಸ್ತ್ರಗಳ ಹೃದಯವನ್ನೂ ಭೂತಭವಿಷ್ಯದ್ವರ್ತಮಾನಗಳಲ್ಲಿ ನಡೆಯುವದೆಲ್ಲ ವನ್ನೂ ಇವರೊಬ್ಬರೇ ಬಲ್ಲರು. ನಮ್ಮ ಗುರುಗಳಾದ ವ್ಯಾಸರು ಚಿದೇಕರಸ ದಲ್ಲಿಯೇ ಶ್ರುತಿಗಳಿಗೆ ತಾತ್ಪರ್ಯವೆಂದು ನಿರ್ಣಯಿಸಿರುವಲ್ಲಿ ನಾನು ಹೇಗೆತಾನೆ ಅದಕ್ಕೆ ವಿರುದ್ಧವಾದ ಹೇಳಿಯೇನು ? ಸಂಸಾರದಲ್ಲಿ ಮುಳುಗಿರುವ ಜನರನ್ನು ಉದ್ಧರಿಸಲಿಕ್ಕಾಗಿಯೇ ಅವತರಿಸಿರುವ ಪರಮಶಿವನೇ ಇವರು.

ಆದ್ಯೇ ಕೃತ್ತ್ವಮುನಿಃ ಸತಾಂ ವಿತರತಿ ಜ್ಞಾನಂ ದ್ವಿತೀಯೇ ಯುಗೇ
ದತ್ತೋ ದ್ವಾಪರನಾಮಕೇ ತು ಸುಮತಿರ್ವ್ಯಾಸಃ ಕಲೌ ಶಙ್ಕರಃ ।
ಇತ್ಯೇವಂ ಸ್ಫುಟಮೀರಿತೋಽಸ್ಯ ಮಹಿಮಾ ಶೈವೇ ಪುರಾಣೇ ಯತ
ಸ್ತಸ್ಯ ತ್ವಂ ಸುಮತೇ ಮತೇ ತ್ವವತರೇಃ ಸಂಸಾರವಾರ್ಧಿಂ ತರೇಃ ॥ ೨೨ ॥

ಕೃತುಯುಗದಲ್ಲಿ ಕಪಿಲನೂ, ತ್ರೇತೆಯಲ್ಲಿ ದತ್ತನೂ ದ್ವಾಪರದಲ್ಲಿ ಸುಬುದ್ಧಿಯಾದ ವ್ಯಾಸನೂ, ಕಲಿಯುಗದಲ್ಲಿ ಶಂಕರನೂ ಸತ್ಪುರುಷರಿಗೆ ಜ್ಞಾನವನ್ನು ಬೋಧಿಸುತ್ತಾರೆ ಎಂದು **ಶಿವಪುರಾಣದಲ್ಲಿ** ಸ್ಪಷ್ಟವಾಗಿ ಹೇಳಿರುತ್ತದೆ. ಆದ್ದರಿಂದ ನೀನು ಇವರ ಮತವನ್ನು ಆವಲಂಬಿಸು, ಸಂಸಾರವನ್ನು ದಾಟು–ಎಂದು ನುಡಿದು ಜೈಮಿನಿಸಿಗಳು ಅಂತರ್ಧಾನರಾದರು. (೯–೧೭ರಿಂದ ೨೨) **ವ್ಯಾಸಾಚಲೀಯೆ**ದಲ್ಲಿ ಶಂಕರವಿಶ್ವರೂಪರ ವಾದವನ್ನು ಪರಾಮರ್ಶಿಸಿದ್ದರೂ ವಾದದ ವಿವರವನ್ನಾಗಲಿ ಮಾಧವನು ವಿವರಿಸಿದ ಶಂಕೆಯನ್ನಾಗಲಿ ಕೊಟ್ಟಿಲ್ಲ. ವಾದಾಂತದಲ್ಲಿ ಸತ್ಯವಾದಿಯಾದ ವಿಶ್ವರೂಪನು ತನ್ನ ಸರ್ವಸ್ವವನ್ನೂ ಶಂಕರರಿಗೆ ಒಪ್ಪಿಸಿ ನಮಸ್ಕರಿಸಿದನು (ವ್ಯಾ. ಶಂ. ೬–೧೦ಸಿ) ಎಂದಿಷ್ಟನ್ನು ಮಾತ್ರ ಬರೆದಿದೆ.

ಮಂಡನನು ಆಚಾರ್ಯರ ಶಿಷ್ಯನಾದದ್ದು

೧೧೦. ಆಗ ಮಂಡನನು ಶಂಕರರಿಗೆ ನಮಸ್ಕಾರವನ್ನು ಮಾಡಿ 'ನಾನು ತಮ್ಮ ಸ್ವರೂಪವನ್ನರಿಯದೆ ಆಡಿದ ಮಾತುಗಳನ್ನು ಕ್ಷಮಿಸಬೇಕು. ಕಪಿಲ ಕಣಾದಾದಿಗಳೂ ಶ್ರುತ್ಯರ್ಥದ ವಿಷಯಕ್ಕೆ ಮೋಹವನ್ನೆಬ್ಬಿದಿರುವಲ್ಲಿ ಪರಶಿವಾಂಶರಾದ ತಾವಲ್ಲದೆ ಮತ್ತೆ ಯಾರು ಅದನ್ನು ನಿರ್ಣಯಿಸಲಾಪರು ? (೯–೩೦) ದೇವನನ್ನು ಭೇದಗೊಳಿಸಿ ಸದ್ಯೋಗಳನ್ನು (ಸೂಕ್ತಿಗಳನ್ನು) ಕೊಲ್ಲುವ ಅಭಿನವ ಯವನರಿಂದ[1] ಈ ಭೂಮಿಯೆಲ್ಲವೂ ವ್ಯಾಪ್ತವಾಗಿರುವದು ; ಆಂಥವರನ್ನು

1. ಇಲ್ಲಿ ಕವಿಯು ತನ್ನ ಕಾಲದ ಭೇದವಾದಿಗಳಾದ ವೇದಾಂತಿಗಳನ್ನು ಮಹಮದೀಯರಿಗೆ ಹೋಲಿಸಿ ಶ್ಲೇಷೋಕ್ತಿಯನ್ನು ಬರೆದಿರುತ್ತಾನೆಂದು ಕಾಣುತ್ತದೆ. ಆದರೆ ಆಚಾರ್ಯರ ಕಾಲಕ್ಕೆ ಮಹಮದೀಯರು ಇದ್ದರೆಂಬುದಕ್ಕಾಗಲಿ ಅಂಥ ವೇದಾಂತಿಗಳಿದ್ದರೆಂಬುದಕ್ಕಾಗಲಿ ಆಧಾರವಿಲ್ಲ.

ಸೇವಿಸುವವರಿಗೆ ಮುಕ್ತಿಪ್ರಸಕ್ತಿಯೆಲ್ಲಿ ? ಅಥವಾ ತಮ್ಮ ಶಿಷ್ಯರು ದಿಕ್ಕುದಿಕ್ಕುಗಳಲ್ಲಿಯೂ ಇರುವವರಿಂದ ಆ ಚಿಂತೆಯಿಂದಾದರೂ ನನಗೆ ಆಗಬೇಕಾದದ್ದೇನು ? (೯–೩೨) ನನ್ನ ಪ್ರಾಕೃತಪುಣ್ಯವಶದಿಂದ ತಾವು ನನಗೆ ಉಪದೇಶಮಾಡಿ ಸಂಸಾರದಿಂದ ಉದ್ಧರಿಸಿದಿರಿ' ಎಂದು (೯–೩೬) ಆಚಾರ್ಯರನ್ನು ಬಹುವಿಧವಾಗಿ ಸ್ತುತಿಸಿ ಹೆಂಡತಿಮಕ್ಕಳು, ಹಣ, ಮತ್ತು ಗಾರ್ಹಸ್ಥ್ಯಕರ್ಮ– ಇವೆಲ್ಲವನ್ನೂ ಬಿಟ್ಟು ತಮ್ಮ ಚರಣಗಳನ್ನೇ ಶರಣುಹೊಕ್ಕಿದ್ದೇನೆ ; ನಾನು ಏನು ಮಾಡಬೇಕೋ ಆಪ್ಪಣೆಮಾಡಿರಿ' (೯–೪೩) ಎಂದನು.

ಮುಂಡನನ ಸ್ಮರಣಮಾತ್ರದಿಂದ ಜೈಮಿನಿಗಳು ಬಂದರೆಂಬುದೂ ಅವರು ಶಂಕರಾಚಾರ್ಯರ ಅಭಿಪ್ರಾಯವೇ ತಮ್ಮ ಹೃದಯ ಎಂದರೆ ಶಂಕರವಚನವೇ ತತ್ತ್ವಜ್ಞಾನಪ್ರದಾಯಕವೆಂಬುದಕ್ಕೆ ಶಿವಪುರಾಣವನ್ನು ಪ್ರಮಾಣವಾಗಿ ಉದಾಹರಿಸಿರುವದೂ ಮಂತ್ರಸಿದ್ಧಿಯಲ್ಲಿಯೂ, ಆಚಾರ್ಯರ ಮಹಿಮೆಯನ್ನು ಪುರಾಣಗಳು ಹೊಗಳುವವೆಂಬುದರಲ್ಲಿಯೂ, ಶ್ರದ್ಧೆಯನ್ನಿಟ್ಟಿರುವ ಆಸ್ತಿಕರಿಗಾಗಿ ಕವಿಯು ಬರೆದಿರುವ ವಾಕ್ಯಗಳಾದ್ದರಿಂದ ಅವುಗಳನ್ನು ಇಲ್ಲಿ ವಿಮರ್ಶೆಮಾಡಬೇಕಾದದ್ದೇನೂ ಇರುವದಿಲ್ಲ. ಆದರೆ ಜೈಮಿನಿಗಳನ್ನೂ ವ್ಯಾಸರನ್ನೂ ಸ್ಮರಣಮಾತ್ರದಿಂದ ತಾನಿದ್ದಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳಬಲ್ಲಷ್ಟು ತಪೋಮಹಿಮೆಯುಳ್ಳ ಮುಂಡನಪಂಡಿತನು ತನ್ನ ಮತವು ಆ ಇಬ್ಬರು ಋಷಿಗಳಿಗೂ ಸಂಮತವಾಗಿದೆಯೆ, ಇಲ್ಲವೆ ?– ಎಂಬುದನ್ನು ಆಚಾರ್ಯರು ವಾದಕ್ಕೆ ಬರುವವರೆಗೂ ವಿಚಾರಿಸಿರಲಿಲ್ಲವೆಂಬುದು ವಾಚಕರಿಗೆ ಆಶ್ಚರ್ಯಜನಕವೆಂಬುದರಲ್ಲಿ ಸಂಶಯವಿಲ್ಲ. ತಮ್ಮ ಸೂತ್ರಗಳಲ್ಲಿ ಪುರಾಣವಚನಗಳನ್ನು ಎಲ್ಲಿಯೂ ಉದಾಹರಿಸದೆ ಇರುವ ಜೈಮಿನಿಗಳು ಮುಂಡನನಿಗಾಗಿ ಶಿವಪುರಾಣವಚನವನ್ನುಹೇಗೆ ಉದಾಹರಿಸಿದರೆಂಬುದು ವಿಮರ್ಶನೀಯವಾಗಿರುತ್ತದೆ.

ಜೈಮಿನಿಗಳ ಅಭಿಪ್ರಾಯವು ಹೇಗೇ ಇರಲಿ, ಬಾದರಾಯಣಸೂತ್ರಗಳನ್ನನುಸರಿಸಿ ಆಚಾರ್ಯರು ಕರ್ಮಕ್ಕೆ ಜ್ಞಾನೋತ್ಪತ್ತಿಹೇತುತ್ವವನ್ನು ಹೇಳಿರುವದು ನಿಶ್ಚಯ. ಬಾದರಾಯಣರು 'ಅತ ಏವ ಚಾಗ್ನೀನ್ಧನಾದ್ಯನಪೇಕ್ಷಾ' (ವೇ. ಸೂ. ೩–೪–೨೫) ಎಂಬ ಸೂತ್ರದಿಂದ ವಿದ್ಯೆಯೊಂದೇ ಮೋಕ್ಷಕ್ಕೆ ಕಾರಣವಾಗಿದೆ, ಅದಕ್ಕೆ ಸಹಾಯವಾಗಿ ಆಶ್ರಮಕರ್ಮಗಳೇನೂ ಬೇಕಾಗಿರುವದಿಲ್ಲ ಎಂದು ಹೇಳಿದಮೇಲೆ 'ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್ ।' (ವೇ. ಸೂ. ೩–೪–೨೬), 'ತಮೇತಮಾ' (ಬೃ. ೪–೪–೨೨) ಎಂಬ ಶ್ರುತಿಯಲ್ಲಿ ಯಜ್ಞದಾತಪಸ್ಸುಗಳು ಜ್ಞಾನೋತ್ಪತ್ತಿಗೆ ಸಾಧನವೆಂದು ಹೇಳಿರುವದರಿಂದ

ಅವೂ ಮುಮುಕ್ಷುಗಳಿಗೆ ಬೇಕು –ಎಂದು ಹೇಳಿರುತ್ತಾರೆ. ಭಾಷ್ಯಕಾರರೂ ಆದರಂತೆಯೇ ಕರ್ಮವು ಚಿತ್ತಶುದ್ಧಿಯ ದ್ವಾರದಿಂದ ವಿವಿದಿಷೆ, ಜ್ಞಾನೋತ್ಪತ್ತಿ, ಜ್ಞಾನನಿಷ್ಠಾ ಯೋಗ್ಯತೆ– ಇವುಗಳಿಗೆ ಕಾರಣವಾಗಿರುತ್ತದೆ ಎಂದೇ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಪ್ರತಿಪಾದಿಸಿರುತ್ತಾರೆ. ಜೈಮಿನಿಗಳಿಗೂ ಇದು ಸಂಮತವಾಗಿತ್ತೋ ಇಲ್ಲವೋ ಎಂಬುದನ್ನು ಅವರ ಸೂತ್ರಗಳಿಂದಲೇ ನಿರ್ಧರಿಸುವದು ಆಗುವಂತಿಲ್ಲ.

———

೧೦. ಉಭಯಭಾರತಿಯೊಡನೆ ವಾದ

ಶಂಕರಮಂಡನವಾದವು ಎಷ್ಟು ದಿನಗಳಾದಮೇಲೆ ಹೇಗೆ ಮುಗಿಯಿತು ?

೧೧೧. ಮಂಡನನೊಡನೆ ವಾದವು ಎಷ್ಟುದಿನಗಳವರೆಗೆ ನಡೆಯಿತೆಂಬುದು ನಿಶ್ಚಯವಾಗಿಲ್ಲ, ಮಾಧವೀಯದಲ್ಲಿ ದಿನಗಳ ಸಂಖ್ಯೆಯನ್ನು ಹೇಳಿಲ್ಲ. ಬುದ್ಧಿಮತಿಯಾದ ಅಂಬೆಯನ್ನು ಸಾಕ್ಷ್ಯಕ್ಕೆ ಇಟ್ಟುಕೊಂಡು ಇಬ್ಬರೂ ಒಬ್ಬರ ನ್ನೊಬ್ಬರು ಗೆಲ್ಲುವದರಲ್ಲಿಯೇ ದೃಷ್ಟಿಯುಳ್ಳವರಾಗಿ ಜಲ್ಪವನ್ನು ಮಾಡುತ್ತಿದ್ದರು ('ಅಮ್ಬಾಮುದಾರಧಿಷಣಾಮುಭಿಷಿಚ್ಯ ಸಾಕ್ಷ್ಯೇ ಜಲ್ಪಂ ವಿತೇನತುರಥೋ ಜಯ ಪತ್ತದೃಷ್ಟೀ ॥' ೮–೬೬). ಆ ಉಭಯಭಾರತಿಯು ಆವರಿಬ್ಬರ ಕೊರಳಲ್ಲಿಯೂ ಹೂಮಾಲೆಯನ್ನು ಹಾಕಿ 'ಯಾವಾಗ ಯಾರ ಮಾಲೆಯು ಬಾಡುತ್ತದೆಯೋ ಆವರಿಗೆ ಅಪಜಯವಾಯಿತೆಂದು ನಿಶ್ಚಯಿಸತಕ್ಕದು' ಎಂದು ಹೇಳಿ ಮನೆಯ ಕೆಲಸವನ್ನು ಮಾಡಿಕೊಳ್ಳುವದಕ್ಕೂ ಯತಿಗೆ ಭಿಕ್ಷೆಗೂ ಗಂಡನಿಗೆ ಭೋಜನಕ್ಕೂ ಸಜ್ಜುಗೊಳಿಸುವದರಲ್ಲಿ ಆಸಕ್ತಳಾಗಿರುತ್ತಿದ್ದಳು (೮–೬೮). ದಿನದಿನವೂ ಆವರ ವಾದವು ಪ್ರಕರ್ಷವನ್ನು ಪಡೆಯುತ್ತಿತ್ತು ; ಆಕೆಯು ಆವರಿಬ್ಬರನ್ನೂ ಭಿಕ್ಷಾಭೋಜನಗಳಿಗೆಬ್ಬಿಸುವವರೆಗೂ ವಾದಮಾಡುತ್ತಾ ಐದಾರು ದಿನಗಳಾದವು (೮–೮೨). ಆಮೇಲೆ ಹಿಂದೆ ವಿವರಿಸಿರುವಂತೆ ವಾದವಾಯಿತು. ಕೊನೆಯಲ್ಲಿ ಆಕೆಯು 'ಯತಿಪತಿಯಾದ ಶಂಕರರ ಯುಕ್ತಿಯನ್ನು ಒಪ್ಪಿ ಮಂಡನನ ಕಂಠದಲ್ಲಿದ್ದ ಮಾಲೆಯು ಮಲಿನವಾದದ್ದನ್ನು ಕಂಡು ನೀವಿಬ್ಬರೂ ಇಂದು ಭಿಕ್ಷೆಗೆ ಏಳಿರಿ' (ಭಿಕ್ಷಾರ್ಥಮುತ್ಥಲತಮ್) ಎಂದ ಹೇಳಿದಳು (೮–೧೩೨) ಎಂದಿಷ್ಟೇ ಆಲ್ಲಿ ಹೇಳಿದೆ.

ವ್ಯಾಸಾಚಲೀಯದೆ (೬–೯೭ರಿಂದ ೧೦೦ವರೆಗಿನ) ಕೆಲವು ಶ್ಲೋಕಗಳೂ ಅಕ್ಷರಶಃ ಮಾಧವೀಯದ ಶ್ಲೋಕಗಳಿಗೆ ಸಮವಾಗಿವೆ. (೯೭, ೯೮ನೆಯ ಶ್ಲೋಕಗಳಲ್ಲಿ) ಮಾಲೆ ವಿಚಾರವೂ ಇದೆ. ಆದರೆ ಆಲ್ಲಿ ವಾದವು ಆರೇ ದಿನಗಳಾದವೆಂಬುದಕ್ಕೆ ಗಮಕವಾಗಿ ಒಂದು ಶ್ಲೋಕವಿದೆ :

ಸಾ ಸಪ್ತಮೇ ದಿನ ಉಪೇತ್ಯ ಸರಸ್ವತೀ ತೌ
ಸಂವೀಕ್ಷ್ಯ ಭಿಕ್ಷಿತುಮಭೂದುಭಯೋರನೀಹಾ (ಪೀಹ ?) ।
ಉಕ್ತ್ವೇತ್ಥಮಾದರಧಿಯಾ ವಚನಂ ಸ್ವಭರ್ತು
ರನ್ತರ್ದಧೇ ಸುವದನಾ ಕಿಲ ಶಾಪಮುಕ್ತಾ (ವ್ಯಾ. ಶಂ. ೬–೧೦೨

ಈ ಶ್ಲೋಕವು ಸರಿಯಾಗಿ ಹೊಂದುಗೆಯ ಅರ್ಥವನ್ನು ಕೊಡುವದಿಲ್ಲ. ಉತ್ಪ್ರೇಕ್ಷಾರ್ಥವು ಹೀಗಿದೆ : 'ಆ ಸರಸ್ವತಿಯು ಏಳನೆಯ ದಿನ ಪತ್ತಿರಕ್ಕೆ ಬಂದು ಅವರನ್ನಿಬ್ಬರನ್ನೂ ನೋಡಿ 'ಭಿಕ್ಷೆಗೆ ಆಯಿತು' (?) ಎಂದು ಸುಮ್ಮನಾದಳು. ಹೀಗೆ ಗಂಡನಿಗೆ ಆದರದಿಂದ ಮಾತನ್ನು ಹೇಳಿದ ಬಳಿಕ ಆಕೆಯು ಶಾಪವಿ ಮುಕ್ತಳಾಗಿ ಅಂತರ್ಹಿತಳಾದಳು. ಇಲ್ಲಿ ವಾದವು ಪ್ರಾರಂಭವಾಗಿ 'ಐದಾರು ದಿನಗಳು ನಡೆದವು' ಎಂದು (ವ್ಯಾ. ಶಂ. ೬–೧೦೦) ಹಿಂದೆ ಹೇಳಿದ್ದರಲ್ಲಿ ಆರೇ ಎಂದು ನಿಶ್ಚಿತವಾಗಿ ಹೇಳದೆ ಏಳನೆಯ ದಿನಕ್ಕೆ 'ಭಿಕ್ಷೆಗೆ ಆಯಿತು' –ಎಂದಳು ಎಂಬುದು ಹೊಂದುವದಿಲ್ಲ. ಹೀಗೆಂದೇ ಹೇಳಿ ಅಂತರ್ಧಾನಳಾದಳು ಎಂಬುದು ಇನ್ನೂ ಹೊಂದಿಕೆಯಿಲ್ಲದ ಮಾತು. ಇದನ್ನು ನೋಡಿದರೆ 'ಉಭಯ ಭಾರತಿಯೊಡನೆ ಆಚಾರ್ಯರಿಗೆ ಈ ಸಂದರ್ಭದಲ್ಲಿ ವಾದವಾಗಲಿಲ್ಲ' ಎಂಬ ಪಕ್ಷಕ್ಕೆ ಅನುಕೂಲವಾಗುವಂತೆ ಯಾರೋ ಇಲ್ಲಿ ಈ ಶ್ಲೋಕವನ್ನು ಮಾಡಿ ಸೇರಿಸಿರುವರೆಂದು ತರ್ಕಿಸಬೇಕಾಗಿದೆ. ಅಥವಾ **ಮಾಧವೀಯ** (೮–೭೨)ದಲ್ಲಿಯೂ ಇದೇ ಶ್ಲೋಕವಿರುವದರಿಂದ ಭಾರತಿಯೊಡನೆ ಇಲ್ಲಿ ವಾದವಾಗಲಿಲ್ಲವೆಂದೇ ವ್ಯಾಸಾಚಲರ ಮತವಿತ್ತೆಂದೇ ಕಲ್ಪಿಸಬೇಕಾಗುವದು. **ಗೋವಿಂದನಾಥನ** ಶಂಕರಾಚಾರ್ಯಚರಿತದಲ್ಲಿ 'ಸಪ್ತಮೇಽಹನಿ ವಿಪ್ರೇಂದ್ರೌ ಮುಸ್ಮರೀನ್ದ್ರೌಣ ಧೀಮತಾ | ಪರಾಜಿತಸ್ತದಾ ವಾಣೀ ಭಾವಿಕರ್ಮೇತಿ ನಿಶ್ಚಿತಾ । ಭರ್ತುರಗ್ರೇ ನಿಧಾಯಾಶು ದಣ್ಡಾದೀನ್ ಸೌಮನಸ್ವಿನೀ | ಮುನಿಶಾಪವಿನಿರ್ಮುಕ್ತಾ ತಿರೋ ಭಾವಂ ಜಗಾಮ ಸಾ ||' (ಗೋ. ೫–೫೯,೬೦) ಗಂಡನ ಮುಂದೆ ದಂಡಾದಿಗಳ ನ್ನಿಟ್ಟು ಭಾರತಿಯು ಶಾಪಮುಕ್ತಳಾಗಿ ಅಂತರ್ಧಾನಳಾದಳು ಎಂದೂ ಇದೆ.

ಮಾಧವೀಯದಲ್ಲಿ ಮಂಡನನ ಹೆಂಡತಿಯನ್ನು 'ಅಂಬಾ' ಎಂದು ಕರೆದಿರುವದನ್ನು ಲಕ್ಷಿಸಬೇಕು. ಈ ಹೆಸರು ೬೬ನೆಯ ಶ್ಲೋಕದಲ್ಲಿಯೂ ೧೩೬ನೆಯ ಶ್ಲೋಕದಲ್ಲಿಯೂ ಬಂದಿದೆ. ಹಿಂದೆ 'ಉಂಬಾ' (೭–೧೧೬) ಎಂಬ ಹೆಸರು 'ಉಂಬೇಕ'ನ ಹೆಂಡತಿಯಾದ್ದರಿಂದ ಎಂದು ಕವಿಯು ಬರೆದಿದ್ದು ಇಲ್ಲಿ 'ಅಂಬಾ' ಎಂದೇ ಬರೆದಿರುವದೇಕೆ? ಈ ಎರಡೂ ಹೆಸರುಗಳು ಆಕೆಗಿದ್ದವೆಂದು ಕವಿಯ ಅಭಿಪ್ರಾಯವಿತ್ತೆ ? ಅಥವಾ ಇಲ್ಲಿಯೂ 'ಉಂಬಾ' ಎಂಬ ಪಾಠವನ್ನೇ ಅತನು ಸ್ವೀಕರಿಸಿದ್ದನೆ ?–ಎಂಬುದು ವ್ಯಾಖ್ಯಾನದಿಂದ ಸ್ಪಷ್ಟವಾಗಿಲ್ಲ. ಆಲ್ಲಿ 'ಅಂಬಾ ಸರಸ್ವತೀ' ಎಂದೇ ಇದೆ. ಇಬ್ಬರ ಕೊರಳಿನಲ್ಲಿಯೂ ಹೂವಿನಹಾರ ವನ್ನು ಹಾಕಿದ್ದಳು; ಆದು ಬಾಡಿದವರೇ ಸೋತವರು–ಎಂದು ಹೇಳಿ ತಾನು ಕಾರ್ಯಾಂತರದಲ್ಲಿ ವ್ಯಗ್ರಳಾಗಿದ್ದಳು– ಎಂದು ಮೊದಲು ಹೇಳಿದ್ದ ಕವಿಯು ಶಂಕರರ ಯುಕ್ತಿಯನ್ನು ಒಪ್ಪಿದಳು (ಯತಿಕ್ಷಿತಿಪತೇರನುಮೋದ್ಯ ಯುಕ್ತಿಮ್ ಮಾ. ಶಂ. ೧೩೨) ಎಂದು ಬರೆದಿರುವದು ಹೇಗೆ ಸಂಗತವಾಯಿತೆಂಬುದನ್ನು

ವ್ಯಾಖ್ಯಾನಕಾರನು ಹೇಳಿಲ್ಲ. ಆಚಾರ್ಯರ ಯುಕ್ತಿಯು ಬಲವಾಯಿತೆಂಬ ಈ ಆಂಶವನ್ನು ಕೈಬಿಟ್ಟರೆ ಉಳಿಯುವದು ಮಾಲೆಯು ಬಾಡಿದ್ದು. ಇಬ್ಬರ ಕೊರಳಲ್ಲಿಯೂ ಹಾಕಿದ ಮಾಲೆಯು ಅನೇಕ ದಿವಸಗಳವರೆಗೆ ಬಾಡದೆ ಇದ್ದದ್ದು, ಏಕಕಾಲದಲ್ಲಿ ಹಾಕಿದ ಮಾಲೆಗಳಿರಡರೊಳಗೆ ಒಂದು ಮಾತ್ರ ಮೊದಲು ಬಾಡಿದ್ದು ಹೇಗೆಂಬುದು ಆ ಕವಿಗೇ ಗೊತ್ತು. ಕುಮಾರಿಭಟ್ಟರು ಜೆಟ್ಟಿದಿಂದ ಹಾರಿ, ಅಥವಾ ಉಪ್ಪರಿಗೆಯಿಂದ ಬಿದ್ದು ಮೈಗೆ ಯಾವ ಗಾಯವೂ ಆಗದೆ ಇದ್ದದ್ದು ವೈದಿಕಮತದ ಹೆಚ್ಚುಗಾರಿಕೆಯಿಂದ ಎಂದು ವರ್ಣಿಸಿದ ಕವಿಯು ಹೂಮಾಲೆ ಬಾಡಿದ್ದು ವಾದದಲ್ಲಾದ ಆಪಜಯಕ್ಕೆ ಗುರುತೆಂದು ಹೇಳಿರುವದು ಆತನ ಕಥಾ ಸರಣಿಗೇನೋ ಹೊಂದುತ್ತದೆ.[1] ಆದರೆ ಇದು ನ್ಯಾಯವಾದ ತೀರ್ಮಾನವೆಂದು ಯುಕ್ತ್ಯನುಭವಪ್ರಧಾನರಾದ ಶಂಕರಮಂಡನರಿಬ್ಬರೂ ಒಪ್ಪಿದರೆಂದು ಹೇಗೆತಾನೆ ನಂಬಲಾದೀತು ?

ಜಿದ್ವಿಲಾಸೀಯದಲ್ಲಿ ಹೀಗಿದೆ: ಹದಿನೆಂಟು ವಿದ್ಯೆಗಳ ವಿಷಯಕ್ಕೆ ಹದಿನೆಂಟು ದಿನಗಳವರೆಗೆ ಶಂಕರರು ವಾದಮಾಡಿದರು. ವಿದ್ಯಾಸ್ವಷ್ಟಾದಶ ಸ್ವೇಷ ತತ್ಸಂಖ್ಯಾದಿವಸೈರಪಿ | ವಾಙ್ಮುಖಿಂ ಸಂಮುಖೀನಃ ಸನ್ಕರ್ತುಮೇವ ಸಮುತ್ಸುಕ (ಚಿ. ಶಂ. ೧೮-೪) ಎಂದಿದೆ. ಹದಿನೆಂಟು ವಿದ್ಯೆಗಳು ಯಾವ ವೆಂಬುದನ್ನೇನೂ ಆಲ್ಲಿ ವಿವರಿಸಿಲ್ಲ. ಕುಮಾರಿಲಭಟ್ಟರ ತಂತ್ರವಾರ್ತಿಕದಲ್ಲಿ– 'ಪರಿನಿತಾನ್ಯೇವ ಹಿ ಚಿತುರ್ದಶಾಷ್ಟಾದಶ ವಾ ವಿದ್ಯಾಸ್ಥಾನಾನಿ ಧರ್ಮಪ್ರಮಾಣ ತ್ವೇನ ಶಿಷ್ಟೈಃ ಪರಿಗೃಹೀತಾನಿ– ವೇದೋಪವೇದಾಙ್ಗೋಪಾಙ್ಗಾಷ್ಟಾದಶಧರ್ಮ ಸಂಹಿತಾಪುರಾಣಶಾಸ್ತ್ರಶಿಕ್ಷಾದಣ್ಡನೀತಿಸಂಜ್ಞಕಾನಿ' (ತಂ. ವಾ. ೧-೩-೩-೭, ಪು. ೨೦೧) ಎಂಬಲ್ಲಿ ಧರ್ಮಕ್ಕೆ ಹದಿನೆಂಟು ವಿದ್ಯಾಸ್ಥಾನಗಳು ಬೇಕೆಂದು ಹೇಳಿರುವದನ್ನು ಇಲ್ಲಿ ಪರಾಮರ್ಶಿಸಿದ್ದರೂ ಇರಬಹುದು. ಇಬ್ಬರ ವಾದಕ್ಕೂ ಸಾಕ್ಷಿಯಾಗಿದ್ದ ಸರಸವಾಣಿಯು ಆಚಾರ್ಯರ ವಾಕ್ಯವನ್ನು ಕೇಳಿ ದಿಗ್ಗನೆ ಎದ್ದು –ಪ್ರತಿದಿನವೂ ಗಂಡನನ್ನು ಭೋಜನಕ್ಕೆ, ಯತಿಯನ್ನು ಭಿಕ್ಷೆಗೆ ಕರೆಯುತಿದ್ದ ವಳು– ಈ ಹದಿನೆಂಟನೆಯ ದಿನ ಇಬ್ಬರನ್ನೂ ಭಿಕ್ಷೆಗೆ ಕರೆದಳು (ಚಿ. ಶಂ. ೧೮-೩೮ರಿಂದ ೪೧). ಇಲ್ಲಿ ಸಂನ್ಯಾಸವು ಧರ್ಮವೆ ? –ಎಂಬ ಪ್ರಶ್ನೆಯಿದ್ದದ್ದ ರಿಂದ ಹದಿನೆಂಟು ವಿದ್ಯೆಗಳಲ್ಲಿಯೂ ಚರ್ಚೆಯಾಗಿ ನಿರ್ಣಯವಾಯಿತೆಂಬ ಅಭಿಪ್ರಾಯವು ಗ್ರಂಥಕಾರರಿಗೆ ಇರಬಹುದು. ಇಲ್ಲಿ ಮಾಲೆ ಬಾಡಿದ ಕಥೆಯ ಪರಾಮರ್ಶವಿಲ್ಲ.

1. ವಾದದಲ್ಲಿ ಸೋತ ಮಂಡನಡೆ ಮನಸ್ಸಿನ ತಾಪವು ಶರೀರಕ್ಕೂ ಹತ್ತಿತೆಂದು ಕವಿಯು ಕಲ್ಪನೆಯಿರಬಹುದೆ ?

ಆನಂತಾನಂದಗಿರೀಯಲ್ಲಿ 'ನಿಗಮವೇ ಮುಂತಾದ ಸರ್ವವಿದ್ಯೆಗಳಲ್ಲಿಯೂ ಪ್ರಸಂಗವಾಯಿತು. ನೂರುದಿನಗಳ ನಂತರ ಪತಿಯ ಪಕ್ಷವು ಸ್ಖಲಿತವಾದದ್ದನ್ನು ಕೇಳಿ ಸರ್ವಜ್ಞಶಾಪ ಸರಸವಾಣಿಯು ಅಡಿಗೆಯ ಮನೆಯಿಂದ ಗಂಡನ ಬಳಿಗೆಬಂದು 'ನಾಥ ಮುಂಡನಮಿಶ್ರ, ಭಿಕ್ಷೆಗೆ ಏಳು' ಎಂದಳು (ಪ್ರ.ಜಟ, ಪು. ೨೧೬).[1]

ಚಿದ್ವಿಲಾಸೀಯ, ಆನಂತಾನಂದಗಿರಿ –ಇಬ್ಬರೂ ಮುಂಡನಸತ್ನಿಯನ್ನು ಸರಸವಾಣಿಯೆಂದೇ ಕರೆದಿರುತ್ತಾರೆ. ಆವರುಗಳು ಕೊರಳಲ್ಲಿ ಮಾಲೆಯನ್ನು ಹಾಕಿದ್ದನ್ನಾಗಲಿ ಅದುಬಾಡಿದ್ದರಿಂದ ಮುಂಡನಾಪಜಯನಿರ್ಣಯವನ್ನು ಮಾಡಿದ ಕಥೆಯನ್ನಾಗಲಿ ಬರೆದಿಲ್ಲ. ಹದಿನೆಶಟು ವಿದ್ಯೆಗಳ ವಿಷಯಕ್ಕೆ ವಾದವಾಯಿತೆಂದು ಚಿದ್ವಿಲಾಸೀಯದಲ್ಲಿ ಹೇಳಿರುವದು ಸಂನ್ಯಾಸವು ಧರ್ಮಶಾಸ್ತ್ರಸಂಮತವೆ ?– ಎಂಬುದನ್ನು ನಿರ್ಣಯಿಸುವದಕ್ಕೆ ಹೇಗೋ ಹೊಂದುಗಡೆಯಾದರೂ ಆಚಾರ್ಯರು ಪ್ರತಿಷ್ಠಾಪನೆಮಾಡುವದಕ್ಕೆ ಹೊರಟಿದ್ದ ವೇದಾಂತಸಿದ್ಧಾಂತಕ್ಕೆ ಅವುಗಳು ಅಷ್ಟು ಬೇಕಾಗಿರಲಿಲ್ಲ ; ಬೇಕಾಗಿದ್ದರೂ ಅದಕ್ಕೆ ಅಂಗವಾಗಿ ಮಾತ್ರ ಬೇಕಾಗಿದ್ದವು. ಪ್ರಧಾನವಾದ ವೇದಾಂತವಿಚಾರವನ್ನು ಚಿದ್ವಿಲಾಸಯತಿಯು ಬಿಟ್ಟದ್ದೇಕೆಂಬುದು ತಿಳಿಯುವಂತಿಲ್ಲ. ಇನ್ನು ಸರ್ವವಿದ್ಯೆಗಳ ವಿಷಯದಲ್ಲಿಯೂ ನೂರುದಿನಗಳವರೆಗು ವಾದವಾಯಿತೆಂಬ ಆನಂತಾನಂದಗಿರಿಯ ಕಥೆಯು ಪ್ರಕೃತಕ್ಕೆ ಅಸಂಬದ್ಧ ; ಮುಂದೆ ಮುಂಡನಭಾರ್ಯೆಯೊಡನೆ ಅಥವಾ ಸರಸ್ವತಿಯೊಡನೆ ಆಚಾರ್ಯರು ವಾದಮಾಡಿದರೆಂಬ ಕಥೆಗೂ ಸಂಗತವಾಗುವದಿಲ್ಲ.

ಉಭಯಭಾರತಿಯೊಡನೆ ಆದ ವಾದದ ಒಗಟುಗಳು

೧೧೨. ಮುಂಡನನು ವಾದದಲ್ಲಿ ಪರಾಜಿತನಾದ ಮೇಲೆ ಆದ ಘಟನೆಗಳು ಶಂಕರವಿಜಯಗಳ ಪ್ರಕಾರ ಇಂತಿವೆ :

ಮಾಧವೀಯ : ಗಂಡನು ಸೋತಮೇಲೆ ಭಾರತಿಯು ಆಚಾರ್ಯರನ್ನು ಕುರಿತು 'ಮಹಾಸರು ಹಿಂದೆ ನನಗೆ ಕೊಟ್ಟಿದ್ದ ಶಾಪವು ನಿಮ್ಮ ಜಯವಾಗುವವರೆಗೆ ಎಂದು ಗೊತ್ತಾಗಿತ್ತು. ಆದ್ದರಿಂದ ನಾನು ಹೊರಡುತ್ತೇನೆ' ಎಂದು ತನ್ನ ಲೋಕಕ್ಕೆ ಹೋಗಲನುವಾದಳು. ಆಗ ತಮ್ಮ ಮತವೊಂದೇ ಸರಿಯಾದದ್ದೆಂದು ತೋರಿಸಿಕೊಡುವದಕ್ಕಾಗಿ (ಸ್ವಮತೈಕ್ಯಸಿದ್ಧ್ಯರ್ಥ)–ತಾವು ಸರ್ವಜ್ಞರೆಂದು ಎಲ್ಲರಿಂದಲೂ ಸನ್ಮಾನಿಸಲ್ಪಡಬೇಕೆಂದಲ್ಲ–**ಸರಸ್ವತಿಯನ್ನು ಜಯಿಸಬೇಕೆಂದು** ಆಚಾರ್ಯರು ಆಕೆಯನ್ನು **ಅರಣ್ಯದುರ್ಗಾವಮಂತ್ರದಿಂದ** ಬಂಧಿಸಿ ನೀನು ಸರಸ್ವತಿ ಎಂಬುದನ್ನು ನಾನು ಬಲ್ಲೆ ; ನಿನ್ನ ಭಕ್ತನಾದ ನಾನು ಅನುಜ್ಞೆಯನ್ನು

1. ಇಲ್ಲಿ ದೇ.ಪಾಠದಲ್ಲಿ ಏನೋ ಹೆಚ್ಚುಕಡಿಮೆಯಾಗಿದೆ, ಅನನಶ್ಯವಾದ ಮಾತುಗಳೂ ಸೇರಿಕೊಂಡಿವೆ.

ಕೊಟ್ಟಮೇಲೆ ನೀನು ಹೋಗಬಹುದು' ಎಂದರು. (ಮಾ. ಶಂ. ೯–೧೩ರಿಂದ ೧೩ನೇ), ಮಂಡನನು ತಮ್ಮಿಂದ ವಾದದಲ್ಲಿ ಜಿತನಾಗಿ ತನ್ನ ಶಿಷ್ಯನಾಗಬೇಕೆಂದು ಬಯಸಲು ಶಂಕರರು ಅವನನ್ನು ಅನುಗ್ರಹಿಸಬೇಕೆಂಬ ಇಚ್ಛೆಯಿಂದ ಅವನ ಹೆಂಡತಿಯ ಮುಖವನ್ನು ನೋಡಲು (೯–೪೫) ಆಕೆಯು 'ನನ್ನ ಬಾಲ್ಯದಲ್ಲಿ ಒಬ್ಬ ಯತಿಯು ನನ್ನ ಭವಿಷ್ಯದ್ವೃತ್ತಾಂತವನ್ನು ಹೇಳಿದ್ದನು ; ಅದರಂತೆಯೇ ಈಗ ನಡೆದಿದೆ. ಆದರೆ ನೀವು ನನ್ನ ಗಂಡನನ್ನು ಪೂರ್ಣವಾಗಿ ಜಯಿಸಿಲ್ಲ ; ಇವನ ಅರ್ಧಾಂಗಿಯಾದ ನನ್ನನ್ನು ಜಯಿಸಿ, ಇವನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಿರಿ. ತಾವು ಜಗತ್ಕಾರಣನೂ ಸರ್ವಜ್ಞನೂ ಆದ ಪರಮಪುರುಷನೇ ಆದರೂ ನಿಮ್ಮೊಡನೆಯೇ ವಾಸವಾಡಬೇಕೆಂಬ ಕುತೂಹಲವು ನನಗೆ ಉಂಟಾಗಿದೆ, (೯–೫೬, ೫೭) ಎಂದಳು ಈ ಮಾತು ಯುಕ್ತಿಯುಕ್ತವಾದದ್ದರಿಂದ ಆಚಾರ್ಯರು ಅದಕ್ಕೆ ಒಪ್ಪಿದರು.

ಚಿದ್ವಿಲಾಸೀಯ : ಮಂಡನನು ಆಚಾರ್ಯರಿಗೆ ಪ್ರದಕ್ಷಿಣನಮಸ್ಕಾರವನ್ನು ಮಾಡಿ 'ಸಂನ್ಯಾಸವನ್ನು ನಿಂದಿಸಿ ನಾನು ಹೇಳಿದ್ದನ್ನೆಲ್ಲ ಕ್ಷಮಿಸಿ ನನಗೆ ಅದ್ವೈತಜ್ಞಾನವನ್ನು ಉಪದೇಶಿಸಬೇಕು' ಎಂದು ಬೇಡಿಕೊಂಡನು. ಅದರಂತೆ ಆಚಾರ್ಯರು ಅವನಿಗೆ ಸಂನ್ಯಾಸವನ್ನು ಕೊಟ್ಟರು. (ಚಿ. ಶಂ. ೧೮–೪೩ರಿಂದ ೪೫). ಇದೆಲ್ಲವನ್ನೂ ಕಂಡು ದುರ್ವಾಸಶಾಪಮುಕ್ತಳಾದ ವಾಣಿಯು ಶಂಕರರನ್ನು ಸ್ತುತಿಸಿ ಸತ್ಯಲೋಕಕ್ಕೆ ಹೋಗುವದಕ್ಕೆ ಉದ್ಯುಕ್ತಳಾದಳು (ಚಿ. ಶಂ. ೧೮–೪೭). ಆಗ ಆಚಾರ್ಯರು ಆಕೆಯನ್ನು **ವನದುರ್ಗಾವಿದ್ಯೆ**ಯಿಂದ ಬಂಧಿಸಿ 'ನನ್ನೊಡನೆ ಪ್ರಸಂಗವನ್ನು ಮಾಡಿ ನನ್ನನ್ನು ಜಯಿಸದೆ ಎಲ್ಲಿಗೆ ಹೋಗುತ್ತಿದೀಯೆ?' ಎಂದರು. (೧೯–೨೧ರಿಂದ೪೪). ಆಕೆ 'ಯತಿಪುಂಗವನೆ, ನಾನು ಯಾರೆಂಬುದು ನಿಮಗೆ ತಿಳಿಯಲಿಲ್ಲ, ನನ್ನನ್ನು ಪ್ರಸಂಗದಲ್ಲಿ ಜಯಿಸುವದು ನಿಮ್ಮಿಂದ ಎಂದಿಗೂ ಆಗಲಾರದು. ಆಕಾಶದಲ್ಲಿರುವ ನನಗೂ ಭೂಮಿಯ ಮೇಲಿರುವ ನಿಮಗೂ ಪ್ರಸಂಗವು ತಾನೆ ಹೇಗೆ ಆಗಬೇಕು. ? ನಿಮ್ಮ ದರ್ಶನದಿಂದ ನಾನು ದೂರ್ವಾಸರ ಶಾಪದಿಂದ ಮುಕ್ತಳಾಗಿರುವೆನು. ಆದ್ದರಿಂದ ಸತ್ಯಲೋಕಕ್ಕೆ ಹೋಗಲು ನನಗೆ ಅನುಜ್ಞೆಯನ್ನು ಕೊಡಿರಿ' ಎಂದಳು. ಮತ್ತೆ ಹೋಗುವದಕ್ಕೆ ಪ್ರಾರಂಭಿಸಿದ ಆಕೆಯನ್ನು **ವನದುರ್ಗೆಯ ಮಂತ್ರ**ದಿಂದ ಗಟ್ಟಿಯಾಗಿ ಕಟ್ಟಿಹಾಕಿ ವಾದಮಾಡುವದಕ್ಕೆ ಪ್ರಾರಂಭಿಸಿದರು (೧೯–೫೦ರಿಂದ ೧೦).

ಆನಂದಗಿರೀಯ: ಸರಸವಾಣಿಯು ಪತಿಯು ಯತ್ಯಾಶ್ರಮವನ್ನು ಗ್ರಹಿಸುವ ಹಿಂದಿನ ಕ್ಷಣದಲ್ಲಿಯೇ ಅಡಿಗೆಮನೆಯ ಗವಾಕ್ಷದ್ವಾರದಿಂದ ಗಗನಕ್ಕೆ ಹಾರಿ ಬ್ರಹ್ಮಲೋಕಕ್ಕೆ ಹೋಗುತ್ತಿರುವದನ್ನು ಕಂಡು ಪರಮಗುರುವು ಆಕೆಯನ್ನು **ವನದುರ್ಗಾಮಂತ್ರ**ದಿಂದ ದಿಗ್ಬಂಧನವನ್ನು ಮಾಡಿ 'ಎಲೈ,

ಸರಸವಾಣಿಯು, ನೀನು ಪ್ರಹ್ಮಶಕ್ತಿಯಾದರೂ ಅವನ ಅಂಶಭೂತನಾಗಿರುವ ಮಂಡನಮಿಶ್ರನ ಪತ್ನಿಯಂತೆ ಉಪಾಧಿಯಿಂದ ತೋರುತ್ತಿರುವೆ ಆದ್ದರಿಂದ ನನ್ನೊಡನೆ ಪ್ರಸಂಗವನ್ನು ಮಾಡಿಹೋಗು' ಎಂದರು. ಆಕೆಯು 'ಪತಿಯು ಸಂನ್ಯಾಸಕ್ಕಿಂತ ಮೊದಲೇ ವೈಧವ್ಯಭಯದಿಂದ ನಾನು ಕರ್ಮಫಲವನ್ನು ಕೊಡುವ ಪೃಥಿವಿಯನ್ನು ಬಿಟ್ಟುಬಿಟ್ಟೆನೆ ಆದ್ದರಿಂದ ಮತ್ತೆ ಪೃಥಿವಿಯನ್ನು ನಾನು ಮುಟ್ಟಲಾರೆನು. ಭೂಮಿಯಮೇಲಿರುವ ನಿಮ್ಮೊಡನೆ ಹೇಗೆ ಪ್ರಸಂಗ ಮಾಡಬಹುದು?' ಎಂದಳು. ಅವರು 'ತಾಯೆ, ಹೀಗಿದ್ದರೂ ನೆಲದಿಂದ ಅರು ಹಸ್ತಗಳ ಎತ್ತರದಲ್ಲಿ ಆಕಾಶದಲ್ಲಿಯೇ ಇರು. ವಾಕ್ಯಸಂಗನಾದಮೇಲೆ ಹೋಗುವೆಯಂತೆ' (ಪ್ರ. ೬೬ ಪು. ೨೧೭; ದೇ. ಪು. ೧೮೨, ೧೮೬) ಎಂದರು.

ಉಭಯಭಾರತೀವಾದದ ವಿಮರ್ಶೆ :

೧೧೩. ಈಗ ಈ ಭಾಗದ ವಿಮರ್ಶೆಗೆ ಹೊರಡೋಣ.

(೧) **ಸರಸವಾಣಿಯು ದುರ್ವಾಸಶಾಪದಿಂದ ಮನುಷ್ಯಳಾಗಿ ಹುಟ್ಟಿದಳೆಂಬ ಕಥೆಯು** ಎಲ್ಲಾ ಶಂಕರವಿಜಯಗಳಲ್ಲಿಯೂ ಇದೆಯಾದರೂ ಆಕೆಯ ಹೆಸರು 'ಸರಸವಾಣಿ' ಎಂದು ಚಿದ್ವಿಲಾಸ, ಆನಂದಗಿರಿ– ಇಬ್ಬರೂ ಹೇಳುತ್ತಾರೆ. ಅದು ಆಕೆಗೆ ತಂದೆತಾಯಿಗಳು ಇಟ್ಟ ಹೆಸರೋ ಅಥವಾ ವಿದ್ಯಾವಂತಳಾಗಿ ಸರಸವಾಗಿ ಮಾತಾಡುತ್ತಿದ್ದಳೆಂಬ ಕಾರಣದಿಂದ ಶಂಕರವಿಜಯಕಾರರು ಕಲ್ಪಿಸಿದ ಹೆಸರೋ ತಿಳಿಯುವಹಾಗಿಲ್ಲ. ಅದು ಆಕೆಯ ಅಂಕಿತನಾಮವೆಂದು ಇಟ್ಟುಕೊಂಡರೂ ಬಾಧಕವಿಲ್ಲ. ಆಕೆಯ ವಿದ್ವತ್ತನ್ನು ಮನಸ್ಸಿನಲ್ಲಿಟ್ಟುಕೊಂಡು 'ವಾಣೀ' ಎಂಬ ಹೆಸರಿನ ಆಧಾರದಿಂದ ಆಕೆಯು ಸರಸ್ವತಿಯೇ ಎಂದು ಕಲ್ಪಿಸಿರಬಹುದಾಗಿದೆ. 'ಭಾರತೀ' ಎಂಬ ಹೆಸರೂ ಅಂಥದ್ದೇ. 'ಉಭಯಭಾರತೀ' ಎಂಬ ಹೆಸರನ್ನು ಶಂಕರಮಂಡನರಿಬ್ಬರಿಗೂ ಆಕೆ ಮಧ್ಯಸ್ಥಳೆಂಬುದನ್ನು ಸೂಚಿಸುವದಕ್ಕಾಗಿ ಮಾಧವಾದಿಗಳು ಕಲ್ಪಿಸಿರಬಹುದು. ಆಮೇಲೆ ಆಕೆ ಸರ್ವಜ್ಞಳೆಂದು ತಿಳಿಸುವದಕ್ಕಾಗಿ ಸರಸ್ವತಿಯ ಅವತಾರವೇ ಎಂದು ದುರ್ವಾಸಶಾಪದ ಕಥೆಯು ಹಬ್ಬಿಕೊಂಡಿರಬಹುದು. ಮಾಧವಕವಿಯೇ ಅಲ್ಲದೆ ಇನ್ನೂ ಕೆಲವರು 'ಉಭಯಭಾರತಿ' ಎಂಬ ಹೆಸರನ್ನು ಒಪ್ಪಿದ್ದರೆಂಬುದಕ್ಕೆ ಬೇರೊಂದು ಸಾಕ್ಷಿಯಿರುತ್ತದೆ. **ಗುರುರತ್ನಮಾಲಿಕೆಯು**

ಪರಕೀಯವಪುಃ ಪ್ರವೇಶಶೈಲ್ಯಾ
ಸ್ಮರತನ್ತ್ರಾಣಿ ವಿದನ್ವಶೀ ನ ಲೌಲ್ಯಾತ್ |
ಆಕೃತಾತನುಭಾರತೀಂ ವಶೇ ಯಃ
ಸುಕೃತಂ ಮೇ ಸುತರಾಂ ಗುರುಃ ಸ ಜೀಯಾತ್ ॥ ೨೯ ॥

ಎಂಬ ಪದ್ಯವನ್ನು ವಾಖ್ಯಾನಮಾಡುವಾಗ ಸುಷಮಾಕಾರರಾದ ಆತ್ಮಬೋಧರು "ಇದಂ ಪದ್ಯಮುತ್ರತ್ಯಾಃ ಕತಿಪಯೇ ಕಾಮುರಾ (ಶ್ರೀಮದಾ)ಚಾರ್ಯವಿಜಯ ವಿದ್ಯಾಶಙ್ಕರವಿಜಯಾದಿಷು ನಿಷಣ್ಣಬುದ್ಧಯಃ 'ಆಕೃತೋಭಯಭಾರತೀಮ್' ಇತಿ ಯತ್ಕಿಞ್ಚಿತ್ಪದವ್ಯತ್ಯಯೇನ ಪಟುಮುಣ್ಡನಮಿಶ್ರೇತಿ ಪದ್ಯಸಮನನ್ತರಂ ವಪನ್ತಿ" ಈ ಪದ್ಯವನ್ನು ಇಲ್ಲಿಯ ಕೆಲವರು ಆಚಾರ್ಯವಿಜಯ, ವಿದ್ಯಾಶಂಕರ ವಿಜಯ– ಮುಂತಾದವುಗಳಲ್ಲಿ ಅಭಿಮಾನವುಳ್ಳ ಬುದ್ಧಿಯವರಾಗಿ 'ಆಕೃತೋಭಯಭಾರತೀಮ್' ಎಂದು ಸ್ವಲ್ಪ ಬದಲಾಯಿಸಿದ ಪಾಠವನ್ನಿಟ್ಟುಕೊಂಡು 'ಪಟುಮುಣ್ಡನಮಿಶ್ರ' ಎಂಬ (೨೨ನೆಯ) ಪದ್ಯವಾಪಮೇಲೆ ಪಠಿಸಿರುತ್ತಾರೆ– ಎಂದು ಬರೆದಿದಾರೆ. 'ವಿದ್ಯಾಶಂಕರವಿಜಯ' ಎಂಬುದು ಆತ್ಮಬೋಧರು ಮಾಧವೀಯಶಂಕರವಿಜಯಕ್ಕೆ ಇಟ್ಟುಕೊಂಡಿರುವ ಹೆಸರೆಂದು ಕಾಣಿಸುತ್ತದೆ. ಆವರ ಕಡೆಯವರಲ್ಲಿಯೂ ಕೆಲವರು ಗುರುರತ್ನಮಾಲಿಕಾಕಾರರು ಉಭಯಭಾರತಿ ಎಂಬ ಹೆಸರನ್ನೊಪ್ಪಿ ಮಂಡನಮಿಶ್ರನ ಪರಾಜಯವಾದಮೇಲೆಯೇ ಸರಸ್ವತಿಯನ್ನು ಆಚಾರ್ಯರು ಜಯಿಸಿದರೆಂದು ಹೇಳಿರುತ್ತಾರೆಂದು ಅಭಿಪ್ರಾಯಪಟ್ಟಿದ್ದರು. ಅದನ್ನು ಆತ್ಮಬೋಧರು ಇಲ್ಲಿ ಖಂಡಿಸಿರುತ್ತಾರೆ. ಕಾಂಚೀಪೀಠಪ ಸಂಪ್ರದಾಯದವರಲ್ಲಿಯೂ ಸರಸ್ವತಿಯನ್ನು ಜಯಿಸಿದ್ದು ಯಾವಾಗ– ಎಂಬ ವಿಷಯಕ್ಕೆ ಮತಭೇದವಿತ್ತೆಂದು ಇದರಿಂದ ಏರ್ಪಡುತ್ತದೆ. ಈ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಿಸಲಿರುವೆವು.

(೨) **ದೂರ್ವಾಸಶಾಪದ** ವಿಷಯಕ್ಕೆ ಆತ್ಮಬೋಧರು ಹೀಗೆಂದು ಬರೆದಿರುತ್ತಾರೆ : ಯೇ ತ್ವಭಿನವೋದ್ದಣ್ಡವಿದ್ಯಾರಣ್ಯಸ್ವಾಮಿಭಿರಾರಚಿತೇ ವಿದ್ಯಾಶಙ್ಕರವಿಜಯೇ ಶಿವರಹಸ್ಯವಚನತ್ವೇನ ಪ್ರತಿಪಾದಿತಾಃ 'ದೂರ್ವಾಸಃ ಶಾಪತೋ ಭೂಮೌ ಜಾತಾಂ ವಾಣೀಮ್....ಇತ್ಯಾದಯಃ ಶ್ಲೋಕಾಃ, ತೇ ನ ಕ್ವಾಪಿ ಶಿವರಹಸ್ಯಪ್ರಾಚೀನಮಾತೃಕಾಸೂಪಲಭ್ಯನ್ತ ಇತ್ಯಪ್ರಾಮಾಣಿಕಮೇವ (ಅಪ್ರಮಾಣಿಕಾ ಏವ ?) ಇತಿ ಸರ್ವಂ ಶಿವಮ್ ॥' ಅಭಿನವೋದ್ದಣ್ಡವಿದ್ಯಾರಣ್ಯಸ್ವಾಮಿಗಳಿಂದ ರಚಿತವಾದ **ವಿದ್ಯಾಶಂಕರವಿಜಯದಲ್ಲಿ** ಶಿವರಹಸ್ಯವಚನವೆಂದು ಪ್ರತಿಪಾದಿತವಾಗಿರುವ 'ದೂರ್ವಾಸಃ ಶಾಪತೋ ಭೂಮೌ ಜಾತಾಂ ವಾಣೀಮ್' ಮುಂತಾದ ಶ್ಲೋಕಗಳು ಶಿವರಹಸ್ಯದ **ಯಾವ** ಪ್ರಾಚೀನಮಾತೃಕೆಗಳಲ್ಲಿಯೂ ಕಾಣಬರುವದಿಲ್ಲವಾದ್ದರಿಂದ ಅಪ್ರಾಮಾಣಿಕವೇ– ಎಂದು ಬರೆದಿರುವ ವಾಕ್ಯವು ಆತ್ಮಬೋಧರೇ ಬರೆದಿದ್ದರೆ ? ಇಲ್ಲಿ ಪರಾಮೃಷ್ಟವಾಗಿರುವ 'ಅಭಿನವೋದ್ದಣ್ಡ ವಿದ್ಯಾರಣ್ಯಸ್ವಾಮಿಗಳು' ಯಾರು ? ಆತ್ಮಬೋಧರು ಮಾಧವಕವಿಗೇ ಹಾಗೆಂದು ಹೆಸರಿಟ್ಟುಕೊಂಡು ಕರೆದಿರುವರೆ ? ಹಾಗೆ ಕಾಣಿಸುವದಿಲ್ಲ. ಏಕೆಂದರೆ 'ಅಭಿನವೋದ್ದಣ್ಡವಿದ್ಯಾರಣ್ಯಸ್ವಾಮಿಗಳು ರಚಿಸಿರುವ ವಿದ್ಯಾಶಂಕರ

ವಿಜಯದಲ್ಲಿ' ಶಿವರಹಸ್ಯದ ಶ್ಲೋಕಗಳನ್ನು ಉದಾಹರಿಸಿದೆ ಎನ್ನುತ್ತಾರೆ; ಆದರೆ ಆ ಶ್ಲೋಕಗಳೇನೂ ಮಾಧವೀಯದಲ್ಲಿ ಕಾಣಿಸುತ್ತಿಲ್ಲ. ಆ ಶ್ಲೋಕಗಳನ್ನು ನಾವು (ಗಸೆಯು) ಪುಶಿಷ್ಟದಲ್ಲಿ ಉದಾಹರಿಸಿರುತ್ತೇವೆ. ಶ್ರೀಕಕರಾಲಸುಂದರ ರಾಮಯ್ಯನೆಂಬವರು ನಮಗೆ ಕಳುಹಿಸಿರುವ ಶ್ರೀಶೃಂಗೇರಿಮಠ (Sri Srin-geri Sarada Mutt) ಎಂಬ ಗ್ರಂಥದಲ್ಲಿ ಕೊಟ್ಟಿರುವ ಪಾಠದಲ್ಲಿ ಅವು ಇರುತ್ತವೆ. ಮದರಾಸಿನಲ್ಲಿ ಶ್ರೀಮುಖಸಂವತ್ಸರದ ಆಶ್ವಯುಜ ಬಹುಳ ಸೌಮ್ಯ ವಾಸರದ ದಿನ ತೆಲುಗು ಅಕ್ಷರಗಳಿಂದ ಅಚ್ಚಾಗಿ ಕಲ್ಯಾಣರಾಮಶಾಸ್ತ್ರಿಗಳು ಪ್ರಕಟಿಸಿರುವ ಒಂದು ಪುಸ್ತಕದಲ್ಲಿಯೂ ಅವು ಇವೆಯೆಂದು ಸೋಮನಾಥಯ್ಯನವರಿಂದ (ಸೋ. ಶಂ. ಪು. ೮) ತಿಳಿದುಬರುತ್ತದೆ. 'ಬೃಹಚ್ಛಂಕರವಿಜಯ, ಕೇರಳೀಯಶಂಕರವಿಜಯ, ಪ್ರಾಚೀನಶಂಕರವಿಜಯ, ವ್ಯಾಸಾಚಲೀಯ– ಮುಂತಾದವುಗಳಲ್ಲಿ' ಬೇರೆಯ ರೀತಿಯಲ್ಲಿಯೇ ಇದೆ ಎಂದು ಇದೇ ಶ್ಲೋಕದ ಸುಷಮಾ ವ್ಯಾಖ್ಯಾನದಲ್ಲಿ ಆತ್ಮಬೋಧರು ಬರೆದಿರುತ್ತಾರೆ. ನಮ್ಮಲ್ಲಿರುವ ವ್ಯಾಸಾಚಲೀಯದ ಕೈಬರಹದ ಪ್ರತಿಯಲ್ಲಿ ದೂರ್ವಾಸಶಾಪದ ವಿಷಯವು ಇದೆಯಾದ್ದರಿಂದ ಅದು ಆತ್ಮಬೋಧರು ಪರಾಮರ್ಶಿಸಿರುವ ವ್ಯಾಸಾಚಲೀಯವಾಗಿರಲಾರದೆಂದು ಹೇಳಬೇಕಾಗಿದೆ. ಆ ಪ್ರತಿಯು ನಿಜವಾದ ವ್ಯಾಸಾಚಲೀಯವೇ ಆಗಲಿ, ಕೃತ್ರಿಮಗ್ರಂಥವೇ ಆಗಲಿ, ಆದರಲ್ಲಿಂತೂ ಉಭಯಭಾರತಿಯೊಡನೆ ವಾದವು ನಡೆಯಿತೆಂಬ ಸೊಲ್ಲಿಲ್ಲ. ಅದಕ್ಕೆ ಬದಲಾಗಿ ಮಂಡನವಾವವಾದ ಬಳಿಕ ಆಕೆಯು ಕೂಡಲೆ ಶಾಪವಿಮುಕ್ತಳಾಗಿ ಅಂತರ್ಧಾನಳಾದಳು (ಅನ್ತರ್ದಧೇ ಸುವದನಾ ಕಿಲ ಶಾಪಮುಕ್ತಾ ವ್ಯಾ. ಶಂ. ೬–೧೦೨) ಎಂದು ಸ್ಪಷ್ಟವಾಗಿ ಹೇಳಿದೆ ಎಂದು ಆಗಲಿ (ಪು. ೧೭೬) ಹೇಳಿರುತ್ತೇವೆ. 'ಅಭಿನವೋದ್ದಂಡವಿದ್ಯಾರಣ್ಯಸ್ವಾಮಿ' ಗಳೆಂಬವರೊಬ್ಬರು ಇದ್ದು 'ವಿದ್ಯಾಶಂಕರವಿಜಯ'ವೆಂಬ ಹೆಸರಿನ ಗ್ರಂಥವನ್ನು ಬರೆದಿದ್ದರೆ? ಅದರಲ್ಲಿ ಶಿವರಹಸ್ಯದ ಶ್ಲೋಕಗಳು ಇದ್ದವೆ?– ಎಂಬುದೂ ಪರಿಶೋಧನೀಯವಾಗಿದೆ. ಕೂಡಲಿ ಶೃಂಗೇರಿಯ ಗುರುಪರಂಪರೆಯಲ್ಲಿ 'ಅಭಿನವ ವಿದ್ಯಾರಣ್ಯಸ್ವಾಮಿ'ಗಳೆಂಬವರೊಬ್ಬರು (ಶಾ. ಶ. ೧೫೬೫–೧೫೮೭) ಇದ್ದಾರೆ; ಆವರು ಶಂಕರವಿಜಯವನ್ನು ಬರೆದಿದ್ದರೊ, ಇಲ್ಲವೊ, ತಿಳಿಯದು, ಇದೆಲ್ಲ ಹೇಗಾದರೂ ಇರಲಿ. ದೂರ್ವಾಸಶಾಪವನ್ನು ಒಪ್ಪಿದ ಕಾಂಚೀಪೀಠಸಂಪ್ರದಾಯಾನುಯಾಯಿಗಳಾದ ಕೆಲವು ಗ್ರಂಥಕರ್ತರೂ ಇದ್ದರೆಂದು ಆತ್ಮಬೋಧರ ವಾಕ್ಯದಿಂದ ಅನುಮಾನಿಸುವದಕ್ಕೆ ಯಾವ ಆಡ್ಡಿಯೂ ಇರುವದಿಲ್ಲ.

(೩) **ಶಂಕರರಿಗೂ ಉಭಯಭಾರತಿಗೂ ಆದ ವಿವಾದವನ್ನು ಯಾರು ಮೊದಲು ಆರಂಭಿಸಿದರು?** –ಎಂಬುದೂ ಪರಿಶೀಲನೀಯವಾಗಿದೆ. ತಮ್ಮ ಮತವು ಸರ್ವಸಂಮತವೆಂದು ಸಿದ್ಧಪಡಿಸುವದಕ್ಕಾಗಿ ಶಂಕರಾಚಾರ್ಯರೇ

ಅಂತರಿಕ್ಷದಲ್ಲಿದ್ದ ಆಕೆಯನ್ನು ನಿರ್ಬಂಧಿಸಿದರೆಂದು (ತಾಂ ಜೇತುಮನಾ ಮುನೀನ್ದ್ರಾಃ | .... ಸ್ಥಮುತ್ಕೈಕ್ಯಸಿದ್ಧಿಶ್ಚ ೮-೧೩೫) ಎಂದು ಮಾಧವಕವಿ ಮೊದಲು ಹೇಳಿರುತ್ತಾನೆ. ಆದರೆ ಮುಂದೆ ಭಾರತಿಯು 'ಮಂಡನನ ಅರ್ಧಾಂಗಿಯಾದ ನನ್ನನ್ನು ಜಯಿಸಿಲ್ಲ; ನನ್ನನ್ನು ಜಯಿಸಿ ಇವನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಿ (ಪರಪುರರ್ಧಮಸ್ಯ ನ ಜಿತಾ ಯತಿಮನ್ನಪಿ ಮಾಂ ವಿಜಿತ್ಯ ಕುರು ಶಿಷ್ಯಮಿಮಮ್ ೯-೫೬). 'ನಿಮ್ಮೊಡನೆಯೇ ವಾದಮಾಡುವ ಕುತೂಹಲವು ನನಗಿದೆ' (ತ್ವಯೈವ ಸಹ ವಾದಕೃತೇ ಹೃದಯಂ ಬಿಭರ್ತಿ ಮಮ ತೂತ್ಕಲಿ ಕಾಮ್ ೯-೫೭) ಎಂದು ಹೇಳಿದಂತೆ ಬರೆದಿರುತ್ತಾರೆ. ಇವೆರಡರಲ್ಲಿ ಯಾವದು ನಿಜ? ಶಂಕರಾಚಾರ್ಯರೇ ಸರಸವಾಣಿಯನ್ನು ವಾದಕ್ಕೆ ಕೆಣಕಿದರೆಂದು ಚಿದ್ವಿಲಾಸೀಯದಲ್ಲಿಯೂ ಆನಂದಗಿರೀಯದಲ್ಲಿಯೂ ಇದೆಯಷ್ಟೆ? ಅದು ನಿಜವಾದರೆ ಆಚಾರ್ಯರು ವಾದಮಾಡಬೇಕಾದ ಆವಶ್ಯಕತೆಯೇನಿತ್ತೆಂಬುದು ಸ್ಪಷ್ಟವಾಗುವದಿಲ್ಲ.

(೪) ಶಂಕರಭಾರತೀಸಂವಾದವು **ಮಂಡನನ ಸಂನ್ಯಾಸಕ್ಕಿಂತ ಮೊದಲೊ, ಆನಂತರವೊ** ' ಮಾಧವೀಯದಂತೆ ಸಂನ್ಯಾಸಕ್ಕಿಂತ ಮೊದಲೇ ಎಂದು ತೋರುತ್ತದೆ. ಚಿದ್ವಿಲಾಸೀಯದಂತೆ ಸಂನ್ಯಾಸವಾದಮೇಲೆ ಈ ವಾದವಾಯಿತು. **ಆನಂದಗಿರೀಯದಂತೆ** ಮೊದಲೇ ಆಯಿತು.

(೫) **ವನದುರ್ಗಾಮಂತ್ರದಿಂದ** ಆಚಾರ್ಯರು ಸರಸ್ವತಿಯನ್ನು ಚಂಧಿಸಿದರೆಂದು ಉಪಲಬ್ಧವಾಗಿರುವ ಕಥೆಯು ಎಲ್ಲಾ ಶಂಕರವಿಜಯಗಳಲ್ಲಿದೆ. ಆಚಾರ್ಯರು ಮಂತ್ರಶಾಸ್ತ್ರವನ್ನು ಯಾವಾಗ ಯಾರಲ್ಲಿ ಅಭ್ಯಾಸಮಾಡಿದರೋ ತಿಳಿಯದು.

(೬) ಇನ್ನೊಂದು ವಿಷಯವನ್ನು ಇಲ್ಲಿ ವಾಚಕರ ಮುಂದಿಟ್ಟು ಈ ಪ್ರಕರಣದ ವಿಮರ್ಶೆಯನ್ನು ಮುಗಿಸುವೆವು. ಮಂಡನನಿಗೆ ಆಚಾರ್ಯರು ಆಶ್ರಮವನ್ನುಕೊಟ್ಟ ಬಳಿಕ **ಸುರೇಶ್ವರ**ನೆಂಬ ಹೆಸರನ್ನು ಕೊಟ್ಟರು ಎಂದು ('ತತಃ ಸಮಾದಿಶ್ಯ ಸುರೇಶ್ವರಾಖ್ಯಾಮ್' ಮಾ. ಶಂ. ೧೦-೧೦೪,'ಸುರೇಶ್ವರಾಚಾರ್ಯ ಇತಿ ಮುದಾಭಿಖ್ಯಾನುದಾತ್ತೆದಾ' ಚಿ.ಶಂ. ೧೮ ೪೬) **ಮಾಧವೀಯ, ಚಿದ್ವಿಲಾಸೀಯ**ಗಳಲ್ಲಿ ಬಾಯಿಬಿಟ್ಟು ಹೇಳಿದೆ; ಆದರೆ **ಆನಂದಗಿರೀಯ**ದಲ್ಲಿ ಮಂಡನಮಿಶ್ರನು ಪರಮಗುರುವಿನ ಚರಣಾರವಿಂದಕ್ಕೆ ನಮಸ್ಕರಿಸಿ ಆತನ ಉಪದೇಶದಿಂದ ಸಂನ್ಯಾಸಿಯಾಗಿ ಕುಬೇರದಿಕ್ಕಿಗೆ ಹೊರಟುಹೋದನು (ತೇದಾನೀಂ ಮಣ್ಡನಮಿಶ್ರಃ ಪರಮಗುರುಚರಣಾರವಿನ್ದಂ ನತ್ವಾ ತದುಪದೇಶೇನ ಸಂನ್ಯಾಸೀ ಭೂತ್ವಾ ಕುಬೇರದಿಶಮವ್ರಜತ್ ಪ್ರ.೫೬, ಪು.೨೧೬, ದೇ.ಪು. ೧೮೫)ಎಂದಿದ್ದೇ ಇದೆ; ಮಂಡನವಿಶ್ರನನ್ನು ಗೆಲ್ಲುವವಕ್ಕೆ ಹೊರಟಾಗಲೇ ಪದ್ಮಪಾದಸುರೇಶ್ವರಾದಿಗಳು ಆಚಾರ್ಯರೊಡನೆ ಇದ್ದರೆಂದು (ವನ್ದಿಮಾಗಧಕೃತಸ್ತವೈಃ, ಪದ್ಮಪಾದ

ಸುರೇಶ್ವರಾದಿ ಶ್ಯಕೃತೆಕರತಾಲ್ಬೈಃ....ಪ್ರ. ೫೬– ಪು. ೨೧೨) ಹೇಳಿದೆ. ಹಾಗಾದರೆ[1] ಮಂಡನನಿಗೆ ಆಚಾರ್ಯರು ಕೊಟ್ಟ ಆಶ್ರಮನಾಮವು ಯಾವದು ? ಆತನು ಉತ್ತರದಿಕ್ಕಿಗೆ ಹೋಗಿ ಮುಂದೆ ಏನು ಮಾಡಿದನು ? ಆನಂತರಾನಂದ ಗಿರೀಯದಂತೆ ಸುರೇಶ್ವರಾಚಾರ್ಯರು ಪೂರ್ವಾಶ್ರಮದಲ್ಲಿ ಯಾರು ?

ಭಾರತಿಯು ಕಾಮಶಾಸ್ತ್ರವಿಷಯವಾಗಿ ಕೇಳಿದ್ದು

೧೧೪. ಈಗ ಕಥೆಯನ್ನು ಮುಂದಕ್ಕೆ ಸಾಗಿಸೋಣ. ಆಚಾರ್ಯರಿಗೂ ಉಭಯಭಾರತಿಗೂ ಆದ ವಾದವ ವೃತ್ತಾಂತವನ್ನು ಸಂಗ್ರಹಿಸಿ ಆ ಮೇಲೆ ಇದನ್ನು ವಿಮರ್ಶಿಸುವದಕ್ಕೆ ಹೊರಡೋಣ.

ಮಾಧವೀಯ : ವಾದಕ್ಕೆ ಕರೆದ ಭಾರತಿಯನ್ನು ಕುರಿತು ಶಂಕರರು 'ಕೀರ್ತಿವಂತರು ಸ್ತ್ರೀಯರೊಡನೆ ವಾದಮಾಡಿಯಾರೆ ?' ಎನ್ನಲು, ಆಕೆ 'ತಮ್ಮ ಪಕ್ಷಪನ್ನು ಪ್ರತಿಭಟಿಸುವವರು ಸ್ತ್ರೀಯರಾಗಲಿ,ಪುರುಷರಾಗಲಿ, ಸ್ವಪಕ್ಷವನ್ನು ರಕ್ಷಿಸಿಕೊಳ್ಳುವದಕ್ಕಾಗಿ ವಾದಮಾಡಲೇಬೇಕಲ್ಲವೆ ? ಯಾಜ್ಞವಲ್ಕ್ಯನು ಗಾರ್ಗಿಯೊಡನೆಯೂ ಜನಕನು ಸುಲಭೆಯೊಡನೆಯೂ ವಾದಿಸಲಿಲ್ಲವೆ ? ಎಂದಳು. (೯–೫೯, ೬೦, ೬೧) ಆಕೆಯ ಮಾತು ಯುಕ್ತವಾಗಿದ್ದರಿಂದ ಆಚಾರ್ಯರು ಆಪಕ್ಕೆ ಒಪ್ಪಿದರು. ಇಬ್ಬರಿಗೂ **ಹದಿನೇಳು ದಿನ** ವಾದವಾಯಿತು (೯–೬೫). ಆಗ ಶಾರದೆಯು ಇವರನ್ನು ಮುತ್ತಿ ಯಾವ ಶಾಸ್ತ್ರದಲ್ಲಿಯೂ ಗೆಲ್ಲುವದಾಗಲಾರದೆಂದು ತಿಳಿದು ಬಾಲಸಂನ್ಯಾಸಿಯಾಗಿದ್ದ ಇವರಿಗೆ ಪರಿಚಯವಿಲ್ಲದಿದ್ದ **ಕಾಮು ಶಾಸ್ತ್ರ**ದಲ್ಲಿ ಪ್ರಶ್ನೆಮಾಡಿದಳು[2] (೯–೬೭ರಿಂದ ೬೯). ಅವುಗಳಿಗೆ ಉತ್ತರವನ್ನು ಹೇಳುವದು ಯತಿಧರ್ಮಕ್ಕೆ ಭಂಗಕಾರಕ, ಹೇಳದೆಇರುವದು ಅಸರ್ವಜ್ಞತಾ ಸೂಚಕ ; ಏನುಮಾಡಲಿ ?– ಎಂದು ಶಂಕರರು ಯೋಚಿಸಿ ಕೊನೆಗೆ **ಒಂದು ತಿಂಗಳು ಅವಧಿಯನ್ನು ಕೊಟ್ಟರೆ** ಇದಕ್ಕೆ ಉತ್ತರವನ್ನು ಹೇಳುವೆನು ಎಂದರು. ಹಾಗೇ ಆಗಲೆಂದು ಆಕೆ ಒಪ್ಪಿದ್ದರಿಂದ ಯೋಗಶಕ್ತಿಯಿಂದ ಆಕಾಶಮಾರ್ಗದಲ್ಲಿ ಹೊರಟರು (೯–೭೦ರಿಂದ ೭೩).

1. ದೇ. ಪಾಠದಲ್ಲಿ 'ಸುರೇಶ್ವರ' ಎಂಬ ಹೆಸರು ಇಲ್ಲವಾದ್ದರಿಂದ ಹಾಗಾದರೆ ಎಂದು ಬರೆದಿದೇವೆ.

2. ಭಾರತಿಯು ಕೇಳಿದ ಕಾಮಕಲೆಗಳೇ ಮುಂತಾದ ವಿಚಾರಗಳನ್ನೂ ಅವುಗಳಿಗೆ ಆಚಾರ್ಯರು ಕೊಟ್ಟಿರಬಹುದಾದ ಉತ್ತರಗಳನ್ನೂ ಇಲ್ಲಿ ಅನವಶ್ಯವೆಂದು ಬಿಟ್ಟಿರುತ್ತೇವೆ. ವಾತ್ಸ್ಯಾಯನಕಾಮಸೂತ್ರಪಞ್ಚಸಾಯಕಾದಿಗ್ರಂಥಳಲ್ಲಿ ಈ ವಿಷಯವು ಪ್ರತಿಪಾದಿತವಾಗಿರುತ್ತದೆ.

ಚಿದ್ವಿಲಾಸೀಯ : ಅವರಿಬ್ಬರಿಗೂ ಆದ ವಾದದಲ್ಲಿ ಎಂಟು ದಿನಗಳು ಕಳೆದವು. ಆಗ ವಾಣಿಯು ಕಾಮುಶಾಸ್ತ್ರದಲ್ಲಿ ಪ್ರಶ್ನೆಯನ್ನು ಹಾಕಿದಳು. ಆಚಾರ್ಯರು ಒಂದು ತಿಂಗಳ ಅವಧಿಯನ್ನು ಕೇಳಿಕೊಂಡು ಹೊರಟರು (ಚಿ. ೧೯–೧೨ರಿಂದ ೧೪).

ಆನಂದಗಿರೀಯ : ಆ ಸರಸ್ವತಿಯು ಆಚಾರ್ಯರು ಕೇಳಿಕೊಂಡಂತೆ ಆಕಾಶದಲ್ಲಿಯೇ ಇದ್ದುಕೊಂಡು ಸರ್ವಶಾಸ್ತ್ರಗಳಲ್ಲಿಯೂ, ವೇದ, ಇತಿಹಾಸ, ಪುರಾಣಗಳಲ್ಲಿಯೂ ಸಮಗ್ರವಾಗಿ ಪ್ರಸಂಗವನ್ನು ಮಾಡಿ ಆ ಯತಿಯನ್ನು ತಿರಸ್ಕರಿಸುವದಕ್ಕಾಗಿ ಆತನಿಗೆ ದುಷ್ಪ್ರವೇಶವಾದ ಕಾಮುಕಲಾಶಾಸ್ತ್ರದಲ್ಲಿ ನಾಯಿಕಾ ನಾಯಕಭೇದವನ್ನೂ ಕಲೆಗಳ ವಿವರವನ್ನೂ ಕೇಳಿದಳು. ಆವರು ಸುಮ್ಮನಾದರು (ಪ್ರ. ೫೭. ಪು. ೨೧೭, ದೇ. ಪು. ೧೪೬). ಆಗ ಸರಸವಾಣಿ ನಿಮಗೆ ತಿಳಿಯದ ಶಾಸ್ತ್ರಾಂತರವೂ ಇದೆಯಷ್ಟೆ ?' ಎಂದು ಕೇಳಲು, ಭವಿಷ್ಯಜ್ಞಾನಿಗಳಾದ ಪರಮ ಗುರುಗಳು 'ತಾಯಿಯೆ, ಇಲ್ಲಿಯೇ ಆರು ತಿಂಗಳು ಇರು ; ಬಳಿಕ ಕಲಾದಿಗಳ ವಿಷಯದಲ್ಲಿ ನಿರ್ಣಯವನ್ನು ಹೇಳುವೆನು' ಎಂದರು (ಪ್ರ. ೫೮; ಪು. ೨೧೮, ದೇ. ಪು ೧೪೬).

ಈ ಪ್ರಸಂಗವು ನಡೆಯಿತೆ ? ಎಂಬುದೇ ವಾದಗ್ರಸ್ತವಾಗಿದೆ ಎಂದು ಆಗಲೆ ಹೇಳಿರುತ್ತೇವೆ. ಒಂದುವೇಳೆ ನಡೆದಿದ್ದರೂ ವಾದವು ಎಷ್ಟು ದಿನಗಳವರೆಗೆ ಜರುಗಿತು ಎಂಬುದಕ್ಕೆ ಶಂಕರವಿಜಯಗಳಲ್ಲಿ ಐಕಮತ್ಯವಿಲ್ಲ. ಆಚಾರ್ಯರೇ ಭಾರತಿಯನ್ನು ಪ್ರಸಂಗಕ್ಕೆ ಕರೆದರೆಂಬುದು ಅಸಂಗತ ; ವೇದಾಂತಸಿದ್ಧಾಂತದ ನಿರೂಪಣೆಗೆ ಹೊರಟ ಆಚಾರ್ಯರು ಸಕಲಶಾಸ್ತ್ರಗಳ ವಿಷಯದಲ್ಲಿಯೂ ವಿವಾದ ಮಾಡುವದಕ್ಕೆ ಹೊರಟರೆಂಬುದು ಇನ್ನೂ ಅಸಂಗತ. ಸರಸ್ವತಿಯ ಅವತಾರ ವೆಂದು ಪ್ರಸಿದ್ಧಳಾಗಿದ್ದ ಭಾರತಿಯು ಅಥವಾ ಸರಸವಾಣಿಯು ಪ್ರಕೃತಚರ್ಚೆಗೆ ಸಂಬಂಧ ಪಡದ ಕಾಮುಶಾಸ್ತ್ರವನ್ನು ಕುರಿತು ಪ್ರಶ್ನೆಯನ್ನು ಪರಪುರುಷನೊಬ್ಬನಿಗೆ ಹಾಕಿದಳೆಂಬಂದಂತೂ ಅಸಂಗತವು ಮಾತ್ರವೇ ಅಲ್ಲ, ಆಕೆಯ ಯೋಗ್ಯತೆಗೂ ಕಳಂಕವನ್ನು ಹತ್ತಿಸುವಂಥದ್ದು. ಆಚಾರ್ಯರಾಗಲಿ ಸಭಿಕರಾಗಲಿ ಇಂಥ ಅಯೋಗ್ಯಪ್ರಶ್ನೆಯು ಹಾಕತಕ್ಕದ್ದಲ್ಲವೆಂದು ಏಕೆ ಹೇಳಲಿಲ್ಲವೆಂಬುದೂ ಗೊತ್ತಾಗುವದಿಲ್ಲ:ಆಚಾರ್ಯರು ತಾವು ಸರ್ವಜ್ಞರೆಂಬುದನ್ನು ತೋರ್ಪಡಿಸಿಕೊಳ್ಳುವದಕ್ಕಾಗಿ ಕಾಮುಶಾಸ್ತ್ರಪರಿಚಯಕ್ಕೆ ಒಂದು ತಿಂಗಳ ಅಥವಾ ಆರುತಿಂಗಳ ಅವಧಿಯನ್ನು ಕೇಳಿದರೆಂದು ಕಲ್ಪಿಸುವದು ಅವರು ದುರಭಿಮಾನವುಳ್ಳವರೆಂದೂ ಪವಿತ್ರಚರಿತ್ರರಲ್ಲವೆಂದೂ ಹೊರಪಡಿಸುವದಕ್ಕೆ ಸಾಧನವಾದೀತೇ ಹೊರತು ಅವರ ಯೋಗ್ಯತೆಗೆ ತಕ್ಕದ್ದಾಗಿಲ್ಲ. ಈ ಕಲ್ಪಿತಕಥೆಯು ಪರಮತದವರಿಗೆ ಆಚಾರ್ಯರು ನೀತಿಬಾಹ್ಯ ರೆಂದು ಪ್ರಕಟಿಸುವದಕ್ಕೊಂದು ಅವಕಾಶವನ್ನು ಮಾಡಿಕೊಟ್ಟೀತೇ ಹೊರತು

ಇವರಿಂದ ಆ ಮಹನೀಯರ ಯೋಗ್ಯತೆಯ ಪ್ರದರ್ಶನಕ್ಕೆ ಎಳ್ಳಷ್ಟೂ ಸಹಾಯವಾಗಲಿಲ್ಲ. ಶಂಕರದ್ವೇಷಿಯಾದ ನಾರಾಯಣಪಂಡಿತನು ಮಣಿಮಂಜರಿಯಲ್ಲಿ ಪರಕಾಯಪ್ರವೇಶವನ್ನು ಹೇಳದಿದ್ದರೂ ಭಾರತಿಯ ನಡತೆಯ ವಿಷಯಕ್ಕೆ ಆವಾಜ್ಯವಾದ ಕಥೆಯನ್ನೇ ಕಲ್ಪಿಸಿರುತ್ತಾನೆ.

ಪರಕಾಯಪ್ರವೇಶ

೧೧೫. ಮುಂದಿನ ಕಥೆಯನ್ನು ಕೇಳೋಣ. ಉಭಯಭಾರತಿಯ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವದಕ್ಕೆ ಒಂದು ಅಥವಾ ಆರು ತಿಂಗಳ ಬಿಡುವನ್ನು ಕೇಳಿಕೊಂಡು ಶಿಷ್ಯರೊಡನೆ ಆಕಾಶಮಾರ್ಗದಿಂದ ಹೊರಟ ಆಚಾರ್ಯರು (ಮಾ. ಶಂ. ೯–೭೩) ವರುಣದಿಕ್ಕಿಗೆ ಇದ್ದ **ಅಮೃತಪುರ**ವೆಂಬ ಪಟ್ಟಣವನ್ನು (ಚಿ. ಶಂ. ೧೯–೨೦, ಆ. ಶಂ. ಪ್ರ. ೫೮, ಪು. ೨೧೭, ದೇ. ೧೪೦) ಸೇರಿದರು. ಅವರೊಡನೆ ಪದ್ಮಪಾದರೇ ಮುಂತಾದ ನಾಲ್ವರೇ ಶಿಷ್ಯರಿದ್ದರು (ಚಿ. ಶಂ. ೧೮–೧೯), ಹಸ್ತಾಮಲಕ, ಪದ್ಮಪಾದ, ವಿಧಿವಿದ್, ಆನಂದಗಿರಿ– ಎಂದು ಅವರ ಹೆಸರು (ಆ. ಶಂ. ಪು. ೨೧೮). ಆ ರಾಜನ ಹೆಸರು **ಅಮರಕ** (ಮಾ. ಶಂ. ೯–೭೭) ಅಥವಾ **ಅಮರೇಶ್ವರ** (ಚಿ; ಶಂ. ೧೯–೪೦). ಆತನು ರಾತ್ರೆಯಲ್ಲಿ ಬೇಟೆಗಾಗಿ ಬಂದಿದ್ದು ಅಡವಿಯಲ್ಲಿ ಮರದ ಕೆಳಗೆ ಮೂರ್ಛೆಯನ್ನು ಹೊಂದಿ ಸತ್ತುಬಿದ್ದಿದ್ದನು (ಮಾ. ಶಂ. ೯–೭೫); ಅಥವಾ ನೂರು ಜನರ ಹೆಂಡಿರೂ ಪೌರವೃದ್ಧರೂ ಮೃತನಾದ ರಾಜನ ಶರೀರವನ್ನು ಶ್ಮಶಾನಕ್ಕೆ ತಂದು ಚಿತೆಯ ಮೇಲೆ ಏರಿಸಿದ್ದರು (ಚಿ. ಶಂ. ೧೯–೨೨, ೨೩, ಆ. ಶಂ. ಪ್ರ. ೫೮–೨೧೮, ದೇ. ಪು. ೧೪೦). ಆಗ ಆಚಾರ್ಯರು ಸನಂದನನನ್ನು ಕುರಿತು 'ನೂರು ಜನ ಹೆಂಡಿರುಳ್ಳ ಈ ಅಮರಕನು ಸತ್ತುಬಿದ್ದಿದ್ದಾನೆ; ಇವನ ಶರೀರವನ್ನು ಯೋಗ ಸಾಮರ್ಥ್ಯದಿಂದ ಹೊಕ್ಕು ಇವನ ಮಗನಿಗೆ ಪಟ್ಟವನ್ನು ಕಟ್ಟಿ ಮತ್ತೆ ಬರಬೇಕೆಂದು ಮಾಡಿರುತ್ತೇನೆ. ಈತನ ಹೆಂಡಿರನ್ನು ಸಾಕ್ಷಾತ್ತಾಗಿ ನೋಡಿಕೊಂಡು ಬರುವೆನು' ಎಂದರು. ಆಗ **ಸನಂದನನು** 'ತಾವು ಸರ್ವಜ್ಞರಾದ್ದರಿಂದ ತಮಗೆ ಎಲ್ಲವೂ ತಿಳಿದಿದ್ದರೂ ಬಿನ್ನವಿಸಿಕೊಳ್ಳುತ್ತೇನೆ. ಹಿಂದಕ್ಕೆ **ಮತ್ಸ್ಯೇಂದ್ರನು** ತನ್ನ ಶಿಷ್ಯನಾದ **ಗೋರಕ್ಷನನ್ನು** ಶರೀರರಕ್ಷಣೆಗೆ ಇಟ್ಟು ಒಬ್ಬ ರಾಜನ ಶರೀರವನ್ನು ಸೇರಿ ಪ್ರಜೆಗಳಿಗೆಲ್ಲ ಸುಖವಾಗುವಂತೆ ಮಾಡಿ ರಾಜ್ಯಭಾರವನ್ನು ಮಾಡುತ್ತಿರಲು ಮಂತ್ರಿವರ್ಯರ ಪ್ರೇರಣೆಯಂತೆ ರಾಣಿಯರು ಆತನನ್ನು ವಶಪಡಿಸಿಕೊಂಡರು; ಗೋರಕ್ಷನು ಆತನಿಗೆ ತತ್ತ್ವಬೋಧದಿಂದ ವೈರಾಗ್ಯವನ್ನು ಉಂಟುಮಾಡಿ ಹಿಂತಿರುಗಿಸಬೇಕಾಯಿತು. ಇದಲ್ಲದೆ ಇದು ಊರ್ಧ್ವರೇತಸ್ಕರಾದ ತನ್ನ ವ್ರತಕ್ಕೆ ಭಂಗವನ್ನು ಮಾಡಿ ಪಾಪವನ್ನು ತಂದೊಡ್ಡೀತು. ಇದನ್ನೆಲ್ಲ ತಾವೇ ಯೋಚಿಸಬೇಕು' ಎಂದನು. ಆಗ ಆಚಾರ್ಯರು 'ನೀನು ಹೇಳಿದ್ದೇ ಸರಿ. ಆದರೆ ಅಸಂಗನಾದ ನನಗೆ– ಕೃಷ್ಣನಿಗೆ ಗೋಪಸ್ತ್ರೀಯರ

ಸಂಗದಿಂದ ಹೇಗೋ ಹಾಗೆ ಕಾಮುವುಂಟಾಗಲಾರದು. **ವಜ್ರೋಲಿಯೋಗ**ವನ್ನು ಬಲ್ಲೆನಾದ್ದರಿಂದ ಯತಿಭಸ್ಮಭುಗವೂ ಆಗಲಾರದು. ದೇಹಾದ್ಯಾತ್ಮ ಬುದ್ಧಿಯುಳ್ಳ ಅಜ್ಞರಿಗೆ ವಿಧಿಪ್ರತಿಷೇಧಶಾಸ್ತ್ರಗಳೇ ಹೊರತು ತತ್ತ್ವಜ್ಞರಿಗಲ್ಲ; ಜ್ಞಾನಿಯು ವೇದದ ತಲೆಯಮೇಲೆ ನಿಂತಿರುವನಾದ್ದರಿಂದ ಅವನು **ವಿಧಿಕಿಂಕರ**ನಲ್ಲ. ಪರಮಾತ್ಮನಿಗಿಂತೆ ವ್ಯತಿರಿಕ್ತವಾದ ಜಗತ್ತು ಸರ್ವಥಾ ಇಲ್ಲ ಎಂಬ ಜ್ಞಾನವಿರುವವನಿಗೆ **ಕರ್ಮಲೇಪ**ವಿಲ್ಲ. ಜ್ಞಾನಿಯಾದ ಇಂದ್ರನಿಗೆ ಆಹನು ಮಾಡಿದ ಪಾಪಗಳು ಅಂಟಲಿಲ್ಲ: ಜನಕನು ಬಹುದಕ್ಷಿಣಯಜ್ಞಗಳನ್ನು ಮಾಡಿದರೂ ಆ ಪುಣ್ಯದಿಂದ ದೇಹಾಂತರವನ್ನು ಪಡೆಯಲಿಲ್ಲ, ಅಭಯವನ್ನೇ ಪಡೆದನು. ಆದ್ದರಿಂದ ಕಾಮಶಾಸ್ತ್ರಪರಿಶೀಲನೆಯಿಂದ ಯಾವ **ದೋಷ**ವೂ ಬರಲಾರದು. ಶಿಷ್ಟಾಚಾರಪರಿಪಾಲನೆಗಾಗಿ ಪರಕಾಯಪ್ರವೇಶದ ಮೂಲಕವಾಗಿ **ಈ** ಕಾರ್ಯವನ್ನು ಮಾಡುವೆನಾದ್ದರಿಂದ ಯಾವ ದೋಷವೂ ಇಲ್ಲ' ಎಂದು (ಮಾ. ಶಂ. ೯–೭೬ ರಿಂದ ೧೦೦) ಸಮಾಧಾನಪಡಿಸಿದರು. ಆಮೇಲೆ ತಮ್ಮ ಶರೀರವನ್ನು ಕಾಪಾಡಿಕೊಂಡಿರುವಂತೆ ಶಿಷ್ಯರಿಗೆ ಹೇಳಿ ಬೆಟ್ಟದಲ್ಲಿದ್ದ ಒಂದು ಗುಹೆಯಲ್ಲಿ (ಮಾ. ಶಂ. ೯–೧೦೨) ಅಥವಾ ಮರದ ಪೊಟರೆಯಲ್ಲಿ (ಚಿ. ಶಂ. ೧೯–೨೪) ಶರೀರವನ್ನು ಇಟ್ಟು ಯೋಗಬಲದಿಂದ ಬ್ರಹ್ಮರಂಧ್ರ ಮಾರ್ಗದಿಂದ ಆಪಾದಾಗ್ರವಾಗಿ ಮೆಲ್ಲಮೆಲ್ಲಗೆ ಮೃತಶರೀರವನ್ನು ಹೊಕ್ಕರು. ರಾಜನು ಬದುಕಿದ್ದನ್ನು ಕಂಡು ಎಲ್ಲರೂ ಹರ್ಷಿತರಾದರು (ಮಾ. ಶಂ. ೯–೧೦೧ ರಿಂದ ೧೦೯).

ಹೀಗೆ ಸತ್ತುಬದುಕಿದ ರಾಜನನ್ನು ಪುರೋಹಿತಾದಿಗಳು ಶಾಂತಿಯನ್ನು ಮಾಡಿಸಿ ಪುರದ ಒಳಕ್ಕೆ ಕರೆದುಕೊಂಡು ಹೋದರು. ರಾಜನು ಮಂತ್ರಿಗಳ ಸಹಾಯದಿಂದ ರಾಜ್ಯವನ್ನು ಆಳುವದಕ್ಕೆ ಮೊದಲುಮಾಡಿದನು. ಅವನ ಗುಣಗಳು ಮೊದಲಿಗಿಂತ ತೀರಭಿನ್ನವಾಗಿರುವದನ್ನೂ ರಾಜ್ಯವು ಅಭಿವೃದ್ಧಿಹೊಂದಿರುವದನ್ನೂ ಕಂಡು **ಮಂತ್ರಿಗಳು** (ಮಾ. ಶಂ. ೧೧–೯) ಈ ಶರೀರದಲ್ಲಿ ಯಾವನೋ ಮಹಾತ್ಮನು ಹೊಕ್ಕಿರಬೇಕು; ಆದ್ದರಿಂದ ಈತನು ಮತ್ತೆ ಹಿಂದಿನ ದೇಹವನ್ನು ಪ್ರವೇಶಿಸದಂತೆ ನೋಡಿಕೊಳ್ಳಬೇಕು ಎಂದುಕೊಂಡು 'ಎಲ್ಲಿ ಶವವನ್ನು ಕಂಡರೂ ಯಾವ ವಿಚಾರವನ್ನೂ ಮಾಡದೆ ಕೂಡಲೆ ಸುಟ್ಟುಬಿಡಬೇಕು' ಎಂದು ಗುಟ್ಟಾಗಿ ಆಜ್ಞೆಯನ್ನು ಮಾಡಿದರು. ಮೊದಲು ಈ ರಹಸ್ಯವನ್ನು ಕಂಡುಕೊಂಡು ಹೀಗೆ ಆಜ್ಞೆಮಾಡಿಸಿದವಳು ರಾಜನ ಜ್ಯೇಷ್ಠಪತ್ನಿ ಎಂದು ಮಿಕ್ಕ ಎರಡು ಶಂಕರವಿಜಯಗಳಲ್ಲಿದೆ (ಚಿ. ಶಂ. ೧೯–೩೮ ರಿಂದ ೪೩; ಆ. ಶಂ. ಪ್ರ. ೫೮, ದೇ. ಪು. ೧೪೭) ಹೊಸ ರಾಜನು ರಾಜ್ಯಭಾರವನ್ನು ಮಂತ್ರಿಗಳಿಗೊಪ್ಪಿಸಿ ತಾನು ವಿವಿಧವಿಷಯಸುಖಗಳನ್ನು ಅನುಭವಿಸುತ್ತಿದ್ದನು. ಆ ಸಂದರ್ಭದಲ್ಲಿ **ವಾತ್ಸ್ಯಾಯನಸೂತ್ರ**ಗಳನ್ನೂ ಅವುಗಳ ಮೇಲಿನ ಭಾಷ್ಯವನ್ನೂ ಚೆನ್ನಾಗಿ

ನೋಡಿ ತಾನೂ ಅಭಿನವಾರ್ಥಗರ್ಭಿತವಾದ ಒಂದು ನಿಬಂಧನನ್ನು ಬರೆದನು (ಮೂ. ಶಂ. ೧೦-೧೮).

ಪರಕಾಯಪ್ರವೇಶದ ಕಥೆಯ ವಿಮರ್ಶೆ

೧೧೬. **ಈ ಕಥೆ ನಿಜವಾಗಿ ನಡೆದದ್ದರ ವರ್ಣನೆಯಾಗಿದ್ದೀತೆ ?** ರಾಜನು ಬೇಟೆಗೆ ಬಂದಿದ್ದು ಮೂರ್ಛೆಹೋಗಿ ಸತ್ತು ಮರದ ಕೆಳಗೆ ಬಿದ್ದಿದ್ದ ನೆಂದು ಮಾಧವೀಯ ; ಸತ್ತಮೇಲೆ ರಾಜನ ಶರೀರವನ್ನು ಶ್ಮಶಾನಕ್ಕೆ ತಂದು ಚಿತೆಯಮೇಲೆ ಏರಿಸಿದ್ದರೆಂದು ಚಿದ್ವಿಲಾಸೀಯ, ಮತ್ತು ಆನಂದಗಿರೀಯ. ಬೆಟ್ಟದ ಗವಿಯಲ್ಲಿ ಶಂಕರರು ತನ್ನ ಶರೀರವನ್ನು ಬಿಟ್ಟದ್ದರೆಂದು ಮಾಧವೀಯ; ಮರದ ಪೊಟ್ಟರೆಯಲ್ಲಿಟ್ಟರೆಂದು ಚಿದ್ವಿಲಾಸೀಯ. ಹೀಗೆಲ್ಲ ಕಥಾವೈಲಕ್ಷಣ್ಯವಿದೆ. ಘಟನೆಯು ನಡೆದು ಬಹುಕಾಲವಾದಮೇಲೆ ಗ್ರಂಥಕರ್ತರು ತಾವು ಕೇಳಿದ್ದಂತೆ ಕಥೆಯನ್ನು ಬರೆದರೊ, ಅಥವಾ ಕಥೆಯೇ ಕಲ್ಪಿತವೊ ? ಆಚಾರ್ಯರು ಪಾದಾಂಗುಷ್ಠದಿಂದ ಮೊದಲುಮಾಡಿ ವಾಯುವನ್ನೆಳೆದುಕೊಂಡು ಬ್ರಹ್ಮರಂಧ್ರದ ಮೂಲಕ ಹೊರಕ್ಕೆ ಬಂದು ರಾಜನ ಶರೀರವನ್ನು ಬ್ರಹ್ಮರಂಧ್ರದಿಂದ ಹೊಕ್ಕು ಪಾದಾಗ್ರವವರೆಗೂ ಪ್ರವೇಶಿಸಿದರು– ಎಂದು (ಮೂ.ಶಂ. ೯–೧೦೫)ಮಾಧವಕವಿ ವರ್ಣಿಸಿರುತ್ತಾನೆ. **'ಬನ್ಧಕಾರಣಶೈಥಿಲ್ಯಾತ್ ಪ್ರಚಾರಸಂವೇದನಾಚ್ಚ ಚಿತ್ತಸ್ಯ ಪರಶರೀರಪ್ರವೇಶಃ'** (ಯೋ. ಸೂ. ೩–೩೮) ಎಂದು ವಿಭೂತಿಪಾದದಲ್ಲಿ ಯೋಗಸೂತ್ರವಿದೆ. ಈ ಸೂತ್ರವನ್ನು ಭಾಷ್ಯದಲ್ಲಿ ಹೀಗೆಂದು ವಿವರಿಸಿದೆ: "ಚಂಚಲವಾಗಿರುವ ಮನಸ್ಸು ನಿಲುಗಡೆಯಿಲ್ಲದೆಇರುವದಷ್ಟೆ ? ಅದು ಕರ್ಮಾಶಯದ ವಶದಿಂದ ಶರೀರದಲ್ಲಿ ಬದ್ಧವಾಗಿರುತ್ತದೆ: ಬಂಧವೆಂದರೆ ನಿಲುಗಡೆ. ಆ ಬಂಧಕ್ಕೆ ಕಾರಣವಾಗಿರುವ ಕರ್ಮವು ಸಮಾಧಿಬಲದಿಂದ ಸಡಿಲವಾಗುತ್ತದೆ. ಚಿತ್ತದ ಪ್ರಚಾರವನ್ನು ಅರಿತುಕೊಳ್ಳುವದು ಸಮಾಧಿಯಿಂದಲೇ ಉಂಟಾಗುತ್ತದೆ. (ಹೀಗೆ) ಕರ್ಮಬಂಧವು ನಾಶವಾಗುವದರಿಂದಲೂ ತನ್ನ ಚಿತ್ತದ ಪ್ರಚಾರವನ್ನು ಅರಿತುಕೊಳ್ಳುವದರಿಂದಲೂ ಯೋಗಿಯು ಚಿತ್ತವನ್ನು ತನ್ನ ಶರೀರದಿಂದ ಈಚಿಗೆ ಎಳೆದುಕೊಂಡು ಬೇರೆಯ ಶರೀರಗಳಲ್ಲಿ ಇಡುತ್ತಾನೆ ಹಾಗೆ ಇಟ್ಟ ಚಿತ್ತವನ್ನು ಇಂದ್ರಿಯಗಳು ಅನುಸರಿಸಿಕೊಂಡು ಹೋಗುತ್ತವೆ. ಹೇಗೆ ಜೇನುಗಳ ಮುಂದಾಳನ್ನು ಉಳಿದ ನೊಣಗಳು ಅನುಸರಿಸಿಯೇ ಹಾರುವವೋ, ಅದು ಕೂತುಕೊಂಡರೆ ತಾವೂ ಕೂತುಕೊಳ್ಳುವವೋ ಹಾಗೆ ಚಿತ್ತವು ಮತ್ತೊಂದು ಶರೀರವನ್ನು ಹೋಗಲು ಇಂದ್ರಿಯಗಳು ತಾವೂ ಅದನ್ನು ಹೋಗುವವು." ಈ ಭಾಷ್ಯವನ್ನು ಓದಿದಮೇಲೂ ನಮಗೆ ಶರೀರದಲ್ಲಿ ನಿಂತಿರುವ ಮನಸ್ಸನ್ನು ಸಡಿಲಿಸಿ ಹೊರಕ್ಕೆ ತೆಗೆಯುವ ಕ್ಕಾಗಲಿ ಮತ್ತೊಂದು ಶರೀರದೊಳಗೆ ಹೊಗಿಸುವದಕ್ಕಾಗಲಿ ಆಗುವದಿಲ್ಲ. ಹಾಗೆ ಮಾಡಬಹುದೆಂದು ಶಾಸ್ತ್ರೀಯವಾಗಿ ಮನದಟ್ಟುಮಾಡಿಕೊಡುವ ಮಹಾತ್ಮರೂ ನಮ್ಮ ಕಣ್ಣಿಗೆ ಬಿದ್ದಿಲ್ಲ. ಆದ್ದರಿಂದ ಪರಕಾಯಪ್ರವೇಶವು ಸಾಧ್ಯವೆ, ಅಲ್ಲವೆ ?–

ಎಂಬ ವಿಷಯಕ್ಕೆ ಯಾವ ನಿಶ್ಚಿತವಾದ ಅಭಿಪ್ರಾಯವನ್ನೂ ನಾವು ಕೊಡುವ ದಾಗಿಲ್ಲ. ಆಚಾರ್ಯರು ಒಂದು ಸಣ್ಣ ಕಾರ್ಯಕ್ಕಾಗಿ ಪರಕಾಯ ಪ್ರವೇಶವನ್ನು ಮಾಡಿರಬಹುದೆ? ಅವರಿಗೆ ಈ ವಿದ್ಯೆ ಯಾರಿಂದ ದೊರಕಿತು?– ಎಂಬಿವು ಮಾತ್ರ ಪರಿಶೀಲನೀಯಪ್ರಶ್ನೆಗಳಾಗಿವೆ.

ಪದ್ಮಪಾದರಿಗೂ ಆಚಾರ್ಯರಿಗೂ ಆದ ಸಂಭಾಷಣೆಯ ವಿಮರ್ಶೆ

೧೧೭. ಪರಕಾಯಪ್ರವೇಶವನ್ನು ನಿಷೇಧಿಸಿದ ಪದ್ಮಪಾದರ ಯುಕ್ತಿಗಳು ದುರ್ಬಲವೆ? ಆಚಾರ್ಯರು ಹೇಳಿದರೆಂದು ಮಾಧವಕವಿ ವರ್ಣಿಸಿರುವ ಯುಕ್ತಿಗಳು ಪ್ರಬಲವೆ?– ಎಂಬುದನ್ನು ಈಗ ಪರೀಕ್ಷಿಸೋಣ. ಪರಕಾಯ ಪ್ರವೇಶವನ್ನು ಮಾಡಬಾರದೆಂಬುದಕ್ಕೆ ಪದ್ಮಪಾದರು ಎರಡು ಕಾರಣಗಳನ್ನು ಹೇಳಿರುತ್ತಾರೆ: (೧) ಮತ್ಸ್ಯೇಂದ್ರನು ರಾಜಶರೀರವನ್ನು ಪ್ರವೇಶಿಸಿದಾಗ ಭೋಗಾಸಕ್ತನಾಗಿ ತನ್ನನ್ನು ತಾನೇ ಮರೆತಂತೆ ಈಗಲೂ ಆಗಬಹುದು– ಎಂಬ ಶಂಕೆಯೊಂದು; (೨) ಯತ್ಯಾಶ್ರಮಕ್ಕೆ ಇದರಿಂದ ಭಂಗವುಂಟಾಗಬಹುದೆಂಬುದು ಇನ್ನೊಂದು. ಮತ್ಸ್ಯೇಂದ್ರನು ಆಚಾರ್ಯರ ಕಾಲಕ್ಕಿಂತ ಹಿಂದಿನವನೊ, ಅಲ್ಲವೊ– ಎಂಬುದನ್ನು ಐತಿಹಾಸಿಕರು ನಿಶ್ಚಯಿಸಲಿ. ಪರಕಾಯಪ್ರವೇಶಕನಿಗೆ ಅವನಂತೆ ಭೋಗಾಸಕ್ತನಾಗುವ ಅಪಾಯವಿದೆ ಎಂಬುದು ನಿಶ್ಚಿತ; ಪ್ರಕೃತದಲ್ಲಿ ಹಾಗೆಯೇ ಆಯಿತೆಂದೂ ಶಂಕರವಿಜಯಕಾರರು ಹೇಳುತ್ತಾರೆ. ಇನ್ನು ಪ್ರಕೃತ ಪರಕಾಯಪ್ರವೇಶದಿಂದ ಯತಿಧರ್ಮಕ್ಕೆ ಕುಂದಿಲ್ಲ– ಎಂಬುದಕ್ಕೆ ಆಚಾರ್ಯರು ಕೊಟ್ಟರೆಂಬ ಯುಕ್ತಿಗಳನ್ನು ಈಗ ಪರಿಶೀಲಿಸೋಣ: (1) ಶ್ರೀಕೃಷ್ಣನಿಗೆ ಗೋಪಸ್ತ್ರೀಯರ ಸಂಬಂಧದಿಂದ ಹೇಗೆ ಕಾಮೋದ್ರೇಕವಾಗಲಿಲ್ಲವೋ ಹಾಗೆ ಅಸಂಗಿಯಾದ ಪುರುಷನಿಗೂ ಆಗುವದಿಲ್ಲ– ಎಂಬುದೊಂದು ಯುಕ್ತಿ. ತಾವು ಅಸಂಗಿಗಳೆಂದು ಭ್ರಾಂತರಾದ ಅಥವಾ ಅಸಂಗಿವೇಷಧಾರಿಗಳಾದ ಸಾಧು ಸಂನ್ಯಾಸಿಗಳೂ ಈ ಯುಕ್ತಿಯನ್ನು ದುರುಪಯೋಗಪಡಿಸಿಕೊಳ್ಳಬಹುದಲ್ಲವೆ? (2) ವಜ್ರೋಲಿಯೋಗವು ತಮಗೆ ವಶವಾಗಿರುವದರಿಂದ ಅವಕೀರ್ಣತ್ವ ದೋಷವು ತಮಗೆ ಬರಲಾರದು– ಎಂಬುದು ಎರಡನೆಯದು. ಹಠಯೋಗ ಪ್ರದೀಪಿಕೆಯೇ (ಹಠ. ೩–೮೪ರಿಂದ ೮೮) ಮುಂತಾದ ಗ್ರಂಥಗಳಲ್ಲಿ ಈ ಯೋಗವನ್ನು ವರ್ಣಿಸಿರುತ್ತದೆ; ಇದನ್ನು ಅನುಷ್ಠಾನಮಾಡಿದವರು ಈಗಲೂ ಅಲ್ಲಲ್ಲಿ ಇರುತ್ತಾರೆಂದೂ ಕೇಳಿರುತ್ತೇವೆ. ಆದರೆ ರೇತಃಸ್ಖಲನವಾಗದೆ ಇದ್ದಮಾತ್ರ ದಿಂದ ಸ್ತ್ರೀಸಂಬಂಧವಾದವನಿಗೆ ಊರ್ಧ್ವರೇತಸ್ಕತೆಯ ವ್ರತಭಂಗವಾಗುವದಿಲ್ಲ ವೆನ್ನಬಹುದೆ? (3) 'ಸಂಕಲ್ಪವೇ ಕಾಮುಕ್ಕೆ ಮೂಲವು, ಆದು ನನಗಿಲ್ಲ' ಎಂದು ಆಚಾರ್ಯರು ಹೇಳಿದಂತೆ (೯–೯೧) ಮಾಧವೀಯದಲ್ಲಿದೆ. ಸಂಕಲ್ಪವೇ ಇಲ್ಲದ ಆಚಾರ್ಯರು ಪರಕಾಯಪ್ರವೇಶಸಂಕಲ್ಪವನ್ನು ಹೇಗೆ ಮಾಡಿದರು? ಸತ್ಯ ಸಂಕಲ್ಪನಾದ ಪರಮೇಶ್ವರನಂತೆ ಸಂಕಲ್ಪಿಸಿರಬಹುದು– ಎಂಬುದು ಈ ಪ್ರಶ್ನೆಗೆ

ಉತ್ತರವಾಗಲಾರದು. ಏಕೆಂದರೆ ಪರಮೇಶ್ವರನಿಗೆ ಸೃಷ್ಟ್ಯಾದಿಗಳಲ್ಲಿ ಪ್ರಾಣಿ ಕರ್ಮಾಪೇಕ್ಷೆಯಿಂದ ಆಗುವ ಸಂಕಲ್ಪಕ್ಕೂ ಆಚಾರ್ಯರಿಗೆ ಒಂದು ಬೇಕು, ಒಂದು ಬೇಡ– ಎಂಬ ರೂಪದಲ್ಲಿ ಇದ ಈ ಸಂಕಲ್ಪಕ್ಕೂ ಭೇದವಿದೆ. (4) ದೇಹಾಭಿಮಾನಿ ಯಾದ ಜೀವನಿಗೆ ವಿಧಿಪ್ರತಿಷೇಧಗಳೇ ಹೊರತು ಆತ್ಮಾವ್ಯಯಬ್ರಹ್ಮಜ್ಞಾನಿಗಲ್ಲ –ಎಂಬ ಒಂದು ವಾಕ್ಯವನ್ನು ಕವಿಯು ಇಲ್ಲಿ ಆಚಾರ್ಯನ ಬಾಯಿಗೆ ಹಾಕಿರುತ್ತಾನೆ. ಜ್ಞಾನಿಯು ವಿಧಿನಿಷೇಧಕಿಂಕರನಾಗಿ ಕರ್ಮಗಳನ್ನು ಮಾಡುವದಿಲ್ಲ– ಎಂಬ ಅಭಿಪ್ರಾಯವು ಭಾಷ್ಯವಾರ್ತಿಕಗಳಲ್ಲಿ ಕಾಣಬರುವದು ನಿಜವಾದರೂ ಆತನು ಸ್ವೇಚ್ಛೆಯಿಂದ ಯಾವ ಕರ್ಮವಾದಲ್ಲಾದರೂ ಪ್ರವರ್ತಿಸಬಹುದು–ಎಂಬರ್ಥದಲ್ಲಿ ಅವನು ವೇದಕಿಂಕರನಲ್ಲವೆಂಬ ವಾದವನ್ನು ಆಚಾರ್ಯರು ಎಲ್ಲಿಯೂ ಒಡ್ಡಿರುವಂತೆ ಕಾಣಿಸುವದಿಲ್ಲ (5) ಬ್ರಹ್ಮಕ್ಕಿಂತ ವ್ಯತಿರಿಕ್ತವಾದ ಜಗತ್ತೇ ಇಲ್ಲ ಎಂಬುದನ್ನು ಅರಿತಿರುವವನಿಗೆ ಸ್ವಪ್ನಕಾಲದಲ್ಲಿ ಮಾಡಿದ ಕರ್ಮದ ಲೇಪವು ಎಚ್ಚರದಲ್ಲಾಗದಿರುವಂತೆಯೇ ಕರ್ಮಫಲದ ಲೇಪವು ಆಗುವದಿಲ್ಲ (೯–೫೫)– ಎಂಬುದು ಆಚಾರ್ಯರಿಂದ ಕವಿಯು ಹೇಳಿಸಿರುವ ಇನ್ನೊಂದು ವಾದ. ಅಜ್ಞಾನ ದಶೆಯಲ್ಲಿ ಮಾಡಿದ ಕರ್ಮಗಳು ವಿದ್ಯಾದಶೆಯಲ್ಲಿ ಬಾಧಿತವಾಗುವದರಿಂದ ಅವುಗಳ ಫಲವು ಜ್ಞಾನಿಗೆ ಅಂಟಲಾರವು– ಎಂಬುದಿಷ್ಟೇ ಈ ಯುಕ್ತಿಯಿಂದ ಸಿದ್ಧವಾದೀತೇ ಹೊರತು ಜ್ಞಾನವಾದಮೇಲೆ ಜ್ಞಾನಿಯು ನಿಷಿದ್ಧಕರ್ಮವನ್ನು ಮಾಡಿದರೂ ಅವನ ಫಲವು ಅವನಿಗೆ ಆಗುವದಿಲ್ಲ ಎಂಬುದಕ್ಕೆ ಇದು ಸರಿಯಾದ ಯುಕ್ತಿಯಾಗಲಾರದು. (6) ಜ್ಞಾನಿಯು ಅಶ್ವಮೇಧಸಹಸ್ರವನ್ನು ಮಾಡಿದರೂ ಜನಕನಂತೆ ಪುಣ್ಯಾಲಿಪ್ತನಾಗಿರುವನು, ಬ್ರಹ್ಮಹತ್ಯಾದಿಗಳನ್ನು ಮಾಡಿದರೂ ಇಂದ್ರನಂತೆ ಪಾಪಾಲಿಪ್ತನಾಗಿರುವನು (೯–೬೭) ಎಂಬುದು ಮತ್ತೊಂದು ವಾದ ಜ್ಞಾನವಾದ ಬಳಿಕವೂ ತಮ್ಮತಮ್ಮ ಸ್ಥಾನಕ್ಕೆ ಉಚಿತವಾದ ಕರ್ಮಗಳನ್ನು ವ್ಯವಹಾರದೃಷ್ಟಿಯಿಂದ ಮಾಡುತ್ತಿದ್ದರೂ ಕರ್ಮಫಲವು ಅಂಟದು –ಎಂಬುದಕ್ಕೆ ಇವು ನಿದರ್ಶನಗಳಾದಾವೇ ಹೊರತು ಸ್ವವರ್ಣಾಶ್ರಮಕ್ಕೆ ಅನುಚಿತವಾದ ಕರ್ಮವನ್ನು ಜ್ಞಾನಿಯು ಮಾಡಬಹುದೆಂಬುದಕ್ಕೆ ಇವು ಅನುಮತಿಯನ್ನು ಕೊಡಲಾರವು.(7) ಜ್ಞಾನಿಗೆ ಪಾಪಕರ್ಮದಿಂದ ಕುಂದಾಗುವದಿಲ್ಲ, ಪುಣ್ಯಕರ್ಮದಿಂದ ಹೆಚ್ಚಾಗುವದಿಲ್ಲ ; ಪಾಪವನ್ನು ಮಾಡಿದೆನಲ್ಲ. ಪುಣ್ಯವನ್ನು ಮಾಡಲಿಲ್ಲನಲ್ಲ ! ಎಂದು ಅವನು ಪಶ್ಚಾತ್ತಾಪವನು ಹೊಂದುವದಿಲ್ಲ ಎಂಬ ಶ್ರುತಿಯನ್ನು ಕವಿಯು ಉದಾಹರಿಸಿರುತ್ತಾನೆ. ಈ ಅಭಿಪ್ರಾಯವನ್ನು ಹಿಂದಿನ ಯುಕ್ತಿಗಳಿಂದಲೇ ತಳ್ಳಿಹಾಕಿದಂತೆ ಆಗಿರುತ್ತದೆ. ಜ್ಞಾನಿಯ ದೃಷ್ಟಿಯಲ್ಲಿ ಪುಣ್ಯಪಾಪಗಳೇ ಇಲ್ಲ ; ಆಕರ್ತೃತ್ವ ಬುದ್ಧಿಯಿರುವದರಿಂದ ಅವನು ಏರುಪೇರಿಲ್ಲದ ಸರ್ವಸಮವಾದ ನಿಷ್ಕರ್ಮಬ್ರಹ್ಮದಲ್ಲಿಯೇ ನಿಷ್ಠನಾಗಿರುತ್ತಾನೆ ಎಂದು ಈ ಶ್ರುತಿಯು ಜ್ಞಾನವನ್ನು ಹೊಗಳುತ್ತದೆಯೇ ಹೊರತು ಜ್ಞಾನಿಯು ಯಾವ ಕರ್ಮವನ್ನಾದರೂ ಮಾಡಬಹುದು–

ಎಂಬುದಕ್ಕೆ ಆಧಾರವಾಗುವದಿಲ್ಲ (8) 'ಈ ಶರೀರಕಕಾರಣಗಳಿಂದಲೇ ಕಾಮು ಶಾಸ್ತ್ರವನ್ನು ಪರಿಶೀಲಿಸಿದರೂ ದೋಷವಾಗುವಂತಿಲ್ಲವಾದರೂ ಶಿಷ್ಟಾಚಾರಪರಿ ಪಾಲನೆಗಾಗಿ ಶರೀರಾಂತರದಿಂದಲೇ ಮಾಡುವೆನು' (೯–೧೦೦)– ಎಂದು ಕೊನೆಯಲ್ಲಿ ಕವಿಯು ಆಚಾರ್ಯರಿಂದ ಹೇಳಿಸಿರುತ್ತಾನೆ. ನಾವು ಈವರೆಗೂ ತೋರಿಸಿ ಕೊಟ್ಟಿರುವಂತೆ ಜ್ಞಾನಿಗೆ ಅನುಚಿತಪ್ರವೃತ್ತಿಯು ಹೇಗೂ ಸಲ್ಲದಿರುವಾಗ ಶರೀರಾಂತರದಿಂದ ಅದನ್ನು ಮಾಡಿದವಮಾತ್ರದಿಂದ ಕರ್ಮವು ಅಕರ್ಮವಾಗುವ ದೆಂಬ ವಾದವನ್ನು ಎಂದಿಗೂ ಒಪ್ಪುವದಾಗುವಂತಿಲ್ಲ.

ಆಚಾರ್ಯರ ಯುಕ್ತಿಗಳೆಂದು ಮಾಧವಕವಿಯು ಉದಾಹರಿಸಿರುವವುಗಳು ಯಾವವೂ ಭಗವತ್ಪಾದರ ವೇದಾಂತಪ್ರಕ್ರಿಯೆಗೆ ಹೊಂದುವಂತಿಲ್ಲವೆಂದು ತೋರಿಸುವ ಉದ್ದೇಶದಿಂದ ಮಾತ್ರವೇ ಈ ವಿಸ್ತೃತನಿಮರ್ಶೆಯನ್ನು ಇಲ್ಲಿ ಬರೆ ದಿದೇವೆಯೇ ಹೊರತು ಪೂಜ್ಯಪಾದರಾದ ಆಚಾರ್ಯರಿಗೆ ಈ ದೋಷಗಳು ಹೊಳೆದಿರಲಿಲ್ಲವೆಂದಾಗಲಿ ಅವರು ಅನುಚಿತಕರ್ಮವನ್ನು ಮಾಡಿದರೆಂವಾಗಲಿ ಸೂಚಿಸುವದಕ್ಕಲ್ಲವೆಂದು ನಾವು ಆವರ ಪವಿತ್ರಚರಣಸ್ಮರಣಪೂರ್ವಕವಾಗಿ ಶಪಥಮಾಡಿ ಹೇಳುತ್ತೇವೆ. ದೊಡ್ಡವರ ಹೆಸರಿನಿಂದ ಅಜ್ಞರಿಗೆ ಅಡ್ಡಹಾದಿಯನ್ನು ಪುಳಿಯುವದಕ್ಕೆ ಅವಕಾಶವಾಗಬಾರದೆಂಬುದೇ ನಮ್ಮ ಭಾವವು. ಮಾಧವನು ಪದ್ಮಪಾದರ ಮೂಲಕ ಹೊರಡಿಸಿರುವ ಅಭಿಪ್ರಾಯವೇ ನಮ್ಮದು :

ವ್ರತಮಸ್ಮದೀಯಮತುಲಂ ಕ್ವ ಮಹತ್ । ಕ್ವ ಚ ಕಾಮುಶಾಸ್ತ್ರಮತಿಗರ್ಹ್ಯಮಿದಂ ।
ತದಪೀಷ್ಯತೇ ಭಗವತೈವ ಯದಿ । ಹ್ಯನವಸ್ಥಿತಂ ಜಗದಿಹೈವ ಭವೇತ್ ॥ ೬೭ ॥
ಅಧಿಮೇದಿನಿ ಪ್ರಥಯಿತುಂ ಶಿಥಿಲಂ । ಧೃತಕಜ್ಜಣಸ್ಯ ಯತಿಧರ್ಮಮಿಮಮ್ ।
ಭವತಃ ಕಿಮಸ್ತ್ಯವಿದಿತಂ ತದಪಿ । ಪ್ರಣಯಾನ್ಮಯೋದಿತಮಿದಂ ಭಗವನ್ ॥ ೬೮ ॥

'ನಿರುಪಮಾನವಾದ ನಮ್ಮಗಳ ಸಂನ್ಯಾಸಧರ್ಮವೆಲ್ಲಿ ಅತಿಗರ್ಹ್ಯವಾದ ಈ ಕಾಮು ಶಾಸ್ತ್ರವೆಲ್ಲಿ ? ಆದರೂ ಅದನ್ನು ತಾವೇ ಸ್ವೀಕರಿಸಿದರೆ ಜಗತ್ತಿನ ವ್ಯವಸ್ಥೆಯೇ ತಪ್ಪಿಬಿಟ್ಟೀತು ! ಆಗಲೆ ಶಿಥಿಲವಾಗಿರುವ ಈ ಯತಿಧರ್ಮವನ್ನು ಭೂಮಿಯ ಮೇಲೆ ಪ್ರಚಾರಮಾಡುವದಕ್ಕೆ ಬದ್ಧಕಂಕಣರಾಗಿರುವ ತಮಗೆ ತಿಳಿಯದಿರು ವದಾಗಿ ಯಾವದುತಾನೆ–ಇದೆ ? ಆದರೂ ಪೂಜ್ಯರೆ, ತಮ್ಮಲ್ಲಿರುವ ಭಕ್ತಿಯಿಂದ ಇದನ್ನು ಹೇಳಿರುತ್ತೇನೆ– ಎಂಬುದು ಶ್ಲೋಕಗಳ ಅರ್ಥ. ಆಚಾರ್ಯರು ಅಂತಃ ಪುರದ ಸ್ತ್ರೀಯರೊಡನೆ ವಿವಿಧಭೋಗಗಳನ್ನು ಅನುಭವಿಸಿದರೆಂದು ಶಂಕರವಿಜಯ ಕಾರರು ಮೂವರೂ ವಿವರಿಸಿ ವರ್ಣಿಸಿರುವರು. ಪರಮವೈರಾಗ್ಯಚಕ್ರವರ್ತಿಗಳೂ ಬ್ರಹ್ಮನಿಷ್ಠರೂ ಆದ ಯತಿಶ್ರೇಷ್ಠರ ಚರಿತ್ರೆಯನ್ನು ಹೀಗೆ ಬಣ್ಣಿಸುವದಕ್ಕೆ ಹೊರ ಟಿರುವದು ಯೋಗ್ಯರಿಗೆಲ್ಲ ಮನಃಖೇದಾವಹವೆಂದು ಯಾರಾದರೂ ಒಪ್ಪಬೇಕು. **ಶಂಕರವಿಜಯಗಳು** ಕಾವ್ಯಮಾತ್ರವೆಂಬುದರಮೇಲೆ ಅವುಗಳಲ್ಲಿರುವ ಎಷ್ಟೋ

ಅತಿಶಯೋಕ್ತಿಗಳನ್ನು ಒಪ್ಪಿದರೂ ಭಗವತ್ಪಾದರು ರಾಜನ ಶರೀರದಲ್ಲಿ ಸ್ತ್ರೀ ಸಂಪರ್ಕದಿಂದಾಗುವ ಸುಖವನ್ನು ಅನುಭವಿಸುವಾಗ 'ನಿರ್ಗಳವಾದ ಬ್ರಹ್ಮಾನಂದವನ್ನು ಅನುಭವಿಸಿದರು' (೧೦–೧೬) ಎಂದು ಮಾಧವಕವಿಯು ವರ್ಣಿಸಿರುವುದಂತೂ ಅಕ್ಷಮ್ಯವೆಂದೇ ಹೇಳಬೇಕಾಗಿದೆ. 'ವಿಷಯಾನಂದವೆಲ್ಲ ಬ್ರಹ್ಮಾನಂದದ ಲೇಶವೇ' ಎಂದು ಶ್ರುತಿಯಲ್ಲಿದೆ. ಹಾಗೆ ಶ್ರುತಿಯು ಹೇಳುವದು ವಿಷಯಗಳಲ್ಲಿ ನಿಜವಾದ ಸುಖವಿಲ್ಲದಿದ್ದರೂ ಇಷ್ಟವಿಷಯದ ಪ್ರಾಪ್ತಿಯಾದಾಗ ಅಂತಃಕರಣದಲ್ಲಿ ಪ್ರತಿಫಲಿಸುವ ಪರಮಾತ್ಮಸ್ವರೂಪಾನಂದದ ಪ್ರತಿಬಿಂಬವನ್ನೇ ವಿಷಯಾನಂದವೆಂದು ಜನರು ಭ್ರಮಿಸುತ್ತಾರೆಂಬುದನ್ನು ತಿಳಿಸುವದಕ್ಕೇ ಹೊರತು ಸ್ತ್ರೀಸಾಲಗಂಧಾದಿವಿಷಯಜನ್ಯಸುಖವು 'ನಿರ್ಗಳವಾದ ಬ್ರಹ್ಮಾನಂದ' ಎಂಬ ಅಭಿಪ್ರಾಯದಿಂದಲ್ಲ– ಎಂದು ವೇದಾಂತಜ್ಞರಲ್ಲಿ ಅರಿಕೆಮಾಡಿಕೊಳ್ಳಬೇಕಾದದ್ದೇನೂ ಇಲ್ಲವಷ್ಟೆ ?

ಸಾಲದ ಕಡಿಮೆಗೆ ಚಿದ್ವಿಲಾಸರು ಈ ವಾಕ್ಯವನ್ನು ಬರೆದಿರುತ್ತಾರೆ :

'ತಸ್ಮಾತ್ಸೀವ್ರತಿಲೋಲತಾ ತ್ರಿಪುರಜಿತ್ಪೂರ್ಣಾಕೃತೇರಪ್ಯಹೋ ।
ತದ್ಬಾಣೇಂ ಪ್ರವಿಜಿತ್ಯ ತಾಂ ವಶಯಿತುಂ ನೇತುಂ ಪುರೀಂ ಸ್ವಾಮಪಿ ॥

'ಆ ಬಾಣೆಯನ್ನು ಜಯಿಸಿ ಆಕೆಯನ್ನು ವಶಗೊಳಿಸಿಕೊಳ್ಳುವದಕ್ಕಾಗಿಯೂ ತಮ್ಮ ಪುರಕ್ಕೆ ಕರೆದುಕೊಂಡುಹೋಗುವದಕ್ಕಾಗಿಯೂ ಆ ಶಿವನ ಪೂರ್ಣಾಕೃತಿಯಾದ ಆಚಾರ್ಯರಿಗೂ ರತಿಲೋಲತ್ವವುಂಟಾಯಿತು.' (ಚಿ.ಶಂ. ೧೯–೫೨)

ಆನಂದಗಿರೀಯದಲ್ಲಿ 'ರಾಜನು ಕಾಮಲೋಲುಪನೂ ಅತ್ಯಾಶಾಬದ್ಧಬುದ್ಧಿಯೂ' (ಪ್ರ. ೫೯ ಪು. ೨೨೦; ದೇ.ಪು.೧೮೮) ಆಗಿದ್ದನೆಂದಿದೆ! ಈ ಬರಹದ ಮೇಲೆ ನಾವು ಯಾವ ಟೀಕೆಯನ್ನೂ ಮಾಡಲು ಅಸಮರ್ಥರಾಗಿರುತ್ತೇವೆ.

ಅಮರುಕಕಾವ್ಯರಚನೆ :

೧೧೮. ಆಚಾರ್ಯರು ವಾತ್ಸ್ಯಾಯನಸೂತ್ರವನ್ನೂ ಅದರ ಭಾಷ್ಯವನ್ನೂ ಚೆನ್ನಾಗಿ ನೋಡಿ ಹೊಸದೊಂದು ಕಾಮಶಾಸ್ತ್ರನಿಬಂಧವನ್ನು ಬರೆದರೆಂದು ಮಾಧವೀಯದಲ್ಲಿರುವದನ್ನು ಆಗಲೆ ತಿಳಿಸಿರುತ್ತೇವೆ. ಆನಂದಗಿರೀಯದಲ್ಲಿ 'ಅಕರೋಚ್ಛಾಸ್ತ್ರಮಮೃಗಂ ಶತಸಂಖ್ಯಾಂ ಸತೀರತೇ'[1] (ಪ್ರ. ೫೮, ೨೧೯, ೨೨೦) ನೂರು ಗ್ರಂಥಪ್ರಮಾಣವಾದ ಅಮೃತಶಾಸ್ತ್ರವನ್ನು ಮಾಡಿದರು– ಎಂದಿದೆ. ಚಿದ್ವಿಲಾಸೀಯದಲ್ಲಿ ಇದರ ಸುದ್ದಿಯಿಲ್ಲ. 'ಅಮರುಕಕಾವ್ಯ'ವೆಂದು ಪ್ರಸಿದ್ಧವಾಗಿರುವ ಗ್ರಂಥವೇ ಆಚಾರ್ಯರು ಬರೆದದ್ದೆಂದು ಅನೇಕರ

1. ದೇ. ಪಾಠದಲ್ಲಿ ಈ ಶ್ಲೋಕವಿಲ್ಲ !

ಭಾವನೆಯಿದೆ ಧ್ವನ್ಯಾಲೋಕವೇ ಮುಂತಾದ ಗ್ರಂಥಗಳ ಕರ್ತೃವಾದ **ಆನಂದವರ್ಧನನು** ಅಮರುಕಶತಕವನ್ನು ಪರಾರ್ಶಿಸಿರುತ್ತಾನೆ. ಇತನು ಅವಂತಿವರ್ಮರಾಜನ ಆಸ್ಥಾನಪಂಡಿತನಾದ್ದರಿಂದ ಇವನು ಶಾ. ಶ. ೭೭೮ರಿಂದ ೮೧೭ರಲ್ಲಿದ್ದನು. ಈ ಗ್ರಂಥವು ಆಚಾರ್ಯಕೃತವೆಂಬುದಕ್ಕೆ ಗ್ರಂಥದಲ್ಲಾಗಲಿ ವ್ಯಾಖ್ಯಾನಗಳಲ್ಲಾಗಲಿ ಯಾವ ಸಾಕ್ಷ್ಯವೂ ಇಲ್ಲ. **ವೇಮಭೂಪಾಲಕನು** ಇದಕ್ಕೆ ವ್ಯಾಖ್ಯಾನವನ್ನು ಬರೆಯುವಾಗ 'ಅಮರುಕಕವಿನಾ ರಚಿತಾಂ ಶೃಙ್ಗಾರರಸಾತ್ಮಿಕಾಂ ಶತಶ್ಲೋಕೀಮ್ | ಶ್ರುತ್ವಾ ವಿಕಸಿತಚೇತಾಸ್ತದಭಿಪ್ರಾಯಂ ಪ್ರಕಾಶತಾಂ ನೇತುಮ್ | ಮೂಲಶ್ಲೋಕಾನ್ ಸಮಾಹೃತ್ಯ ಪ್ರಕ್ಷಿಪ್ತಾನ್ ಪರಿಹೃತ್ಯ ಚ | ವಿಧತ್ತೇ ವಿದುಷಾಮಿಷ್ಟಾಂ ಟೀಕಾಂ ಶೃಙ್ಗಾರದೀಪಿಕಾಮ್ ||' ಅಮರುಕಕವಿಯ ಅಭಿಪ್ರಾಯವನ್ನು ಪ್ರಕಾಶಗೊಳಿಸುವದಕ್ಕಾಗಿ ಪ್ರಕ್ಷಿಪ್ತ ಶ್ಲೋಕಗಳನ್ನು ತೆಗೆದುಹಾಕಿ ಉಳಿದವಕ್ಕೆ ಟೀಕೆಯನ್ನು ಬರೆದಿರುತ್ತೇನೆಂದು ಹೇಳಿಕೊಂಡಿರುತ್ತಾನೆ. ಆದ್ದರಿಂದ ಇವನ ಕಾಲದಲ್ಲಿ ಈ ಗ್ರಂಥವು ಶಂಕರಕೃತಿಯೆಂಬ ಐತಿಹ್ಯವಿರಲಿಲ್ಲವೆಂದು ಹೇಳಬೇಕಾಗಿದೆ. ಉತ್ತರದೇಶದಲ್ಲಿ ಈ ಕಾವ್ಯವು ಆಚಾರ್ಯರ ಕೃತಿ ಎಂಬ ಕಥೆ ಪ್ರಚಾರದಲ್ಲಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಗ್ರಂಥವು ಭಗವತ್ಪಾದರ ಕೃತಿಯೆನ್ನುವದು ಸರಿಯಲ್ಲವೆಂದು **ಸೋಮನಾಥಯ್ಯ**ನವರು (ಸೋ. ಶಂ. ಪು. ೧೩೮–೧೪೦) ಅಭಿಪ್ರಾಯಪಟ್ಟಿದ್ದಾರೆ.

ಆಚಾರ್ಯರನ್ನು ಶಿಷ್ಯರು ಗಾನಮೂಲಕವಾಗಿ ಎಚ್ಚರಿಸಿದ್ದು

೧೧೫. ಮುಂದಿನ ಕಥೆ ಹೀಗಿದೆ : ಸರಸವಾಣಿಯಲ್ಲಿ ಆಚಾರ್ಯರು ಕೇಳಿಕೊಂಡಿದ್ದ ಗಡವು ಮುಗಿದು ಐದಾರು ದಿನಗಳಾದರೂ (ಮೂ. ಶಂ. ೧೦–೨೦) ಗುರುಗಳು ತಮ್ಮ ಶರೀರಕ್ಕೆ ಹಿಂತಿರುಗಲಿಲ್ಲ. ಅವರು ಎಲ್ಲಿ ಹೋಗಿದ್ದಾರು ? ಎಲ್ಲಿ ಹುಡುಕೋಣ ? –ಎಂದು ಶಿಷ್ಯರು ಚಿಂತಿಸುತ್ತಿರುವಲ್ಲಿ ಪದ್ಮಪಾದರು 'ದುಃಖವೇಕೆ ? ಎಲ್ಲಾ ಕಡೆಯಲ್ಲಿಯೂ ಹುಡುಕ್ಕೋಣ. ಕಾಮುಶಾಸ್ತ್ರವನ್ನು ಕಲಿಯುವದಕ್ಕೆ ಹೋಗಿರುವದರಿಂದ ಅವರು ಈ ದೊರೆಯ ಹೆಂಡಿರ ಮಧ್ಯದಲ್ಲಿಯೇ ಇರಬೇಕು ; ಆದ್ದರಿಂದ ಕೆಲವರು ಇಲ್ಲಿದ್ದು ಮಿಕ್ಕವರು ಹುಡುಕೋಣ !' ಎಂದರು. ಅವರು ಬೆಟ್ಟದಿಂದ ಬೆಟ್ಟವನ್ನೂ ದೇಶದಿಂದ ದೇಶವನ್ನೂ ದಾಟಿ ಕೊನೆಗೆ ಅಮರುಕನ ದೇಶಕ್ಕೆ ಬಂದರು (ಮೂ. ಶಂ. ೧೦–೩೮). ರಾಜನು ಸತ್ತು ಮತ್ತೆ ಬದುಕಿದನೆಂದೂ ರಾಜನು ಗಾನಲೋಲನಾಗಿ ಸ್ತ್ರೀಸಕ್ತನಾಗಿರುವನೆಂದೂ ಜನರಿಂದ ಕೇಳಿ ತಿಳಿದುಕೊಂಡು ಗಾಯಕವೇಷವನ್ನು ಹಾಕಿಕೊಂಡು ಅರಮನೆಗೆ ಬಂದರು. ಅಲ್ಲಿ ಅರಸನನ್ನು ಕಂಡು ಸಭೆಯವರನ್ನೆಲ್ಲ ಬೆರಗುಗೊಳಿಸುತ್ತಾ ಗಾನಮಾಡುವ ವ್ಯಾಜದಿಂದ ಅನ್ಯಾಪದೇಶವಾಗಿ ಹಾಡಿ ಹೇಳಿದ್ದನ್ನು ಮಾಧವನ್ನ ಮೊದಲನೆಯ ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿರುತ್ತಾನೆ :

ಭೃಙ್ಗ ತವ ಸಙ್ಗತಿಮಪಾಸ್ಯ ಗಿರಿಶೃಙ್ಗೇ
ತುಙ್ಗವಿಟಪಿನಿ ಸಙ್ಗಮಜುಷಿ ತ್ವದಙ್ಗೇ
ಸ್ವಾಙ್ಗರಚಿತಾಃ ಸಕಲುಷಾನ್ತರಙ್ಗಾಃ
ಸಙ್ಗಮಕೃತೇ ಭಜ್ಗಮುಪಯಾನ್ತಿ ಭೃಙ್ಗಾಃ ॥

'ಎಲ್ಪೆ ಭ್ರಮರವೆ, ನಿನ್ನ ಸಂಗವನ್ನು ಬಿಟ್ಟು ಬೆಟ್ಟದ ಶಿಖರದಲ್ಲಿ ಎತ್ತರವಾದ ಮರದಲ್ಲಿ ನಿನ್ನ ಶರೀರವು ತಗಲಿಕೊಂಡಿರಲು ನಿನ್ನ ಅಂಗಕ್ಕಾಗಿ ಏರ್ಪಾಡಾಗಿದ್ದ ಭೃಂಗಗಳು ನಿನ್ನ ಸಂಗಮಕ್ಕಾಗಿ ಬೇರೆಬೇರೆಯಾಗಿ ಹೋಗಿವೆ ಎಂದು ಅರ್ಥ. ಹೀಗೆ ಇನ್ನೆರಡು ಹಾಡುಗಳಾದ ಬಳಿಕ ಆತ್ಮಸ್ವರೂಪವನ್ನು ನೆನಪಿಗೆ ತರುವ ಈ ಪದ್ಯಗಳನ್ನು ಹಾಡಿದರು :

ನೇತಿನೇತ್ಯಾದಿ ನಿಗಮವಚನೈಃ ನಿಶ್ಚಣ್ವಂ ನಿಷಿಧ್ಯ ಮೂರ್ತಮೂರ್ತರಾಶಿಂ[1] [
ಯದಶಕ್ಯನಿಹ್ನವಂ ಸ್ಯಾತ್ಕ್ರೂಪತಯಾ ಜಾನನ್ತಿ ಕೋವಾಸ್ತತ್ತ್ವಮಸಿ ತತ್ತ್ವಮ್ ।

'ನೇತಿ ನೇತಿ' ಮುಂತಾದ ವೇದಾಂತವಚನದಿಂದ ಮೂರ್ತಾಮೂರ್ತರೂಪವಾದ (ಅನಾತ್ಮಭೂತ)ರಾಶಿಯನ್ನು ಅಲ್ಲಗಳೆದು, ಯಾವದನ್ನು ಅಲ್ಲಗಳೆಯುವದಕ್ಕಾಗಲಾರದಾದ್ದರಿಂದ ತಮ್ಮ ಆತ್ಮನೆಂದು ಪಂಡಿತರು ಅರಿತುಕೊಳ್ಳುವರೋ ಆ ತತ್ತ್ವವೇ ನೀನಾಗಿರುವೆ.

ಖಾದ್ಯಮುತ್ಪಾದ್ಯ ವಿಶ್ವಮನುಪ್ರವಿಶ್ಯ ಗೂಢಮುನ್ನಮಯಾದಿಕೋಶಜಾಲೇ ।
ಕವಯೋ ವಿವಿಚ್ಯ ಯುಕ್ತ್ಯವಘಾತತೋ ಯತ್ತಣ್ಡುಲಮಿವಾಪತತಿ
ತತ್ತ್ವಮಸಿ ತತ್ತ್ವಮ್ ॥

'ಆಕಾಶವೇ ಮುಂತಾದ ವಿಶ್ವವನ್ನು ಸೃಷ್ಟಿಸಿ ಒಳಹೊಕ್ಕು ಅನ್ನಮಯಾದಿಕೋಶಗಳೆಂಬ ಹೊಟ್ಟಿನ ಸಮೂಹದಲ್ಲಿ ಹುದುಗಿರುವ ಯಾವದನ್ನು ಬಲ್ಲವರು ಯುಕ್ತಿಯಿಂದ ಕುಟ್ಟಿ ವಿಂಗಡಿಸಿಕೊಂಡು ಅಕ್ಕಿಯಕಾಳಿನಂತ ಯಾವದನ್ನು ತೆಗೆದುಕೊಳ್ಳುವರೋ ಆ ತತ್ತ್ವವೇ ನೀನಾಗಿರುವೆ.

ವಿಷಮವಿಷಯೇಷು ಸಂಚಾರಿಣೋಽಕ್ಷಾಶ್ವಾನ್ದೋಷದರ್ಶನಕಶಾಭಿಘಾತತಃ
ಸ್ವೈರವ್[2] ।
ಸಂನಿವರ್ತ್ಯ ಸ್ವಾನ್ತರಶ್ಮಿಭಿರ್ಧೀರಾ ಬಧ್ನನ್ತಿ ಯತ್ರೈವ ತತ್ತ್ವಮಸಿ ತತ್ತ್ವಮ್ ॥೩॥

'ವಿಷಯವಾದ ವಿಷಯಗಳಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿರುವ ಇಂದ್ರಿಯಗಳೆಂಬ ಕುದುರೆಗಳನ್ನು ಧೀರರಾದವರು ದೋಷದರ್ಶನವೆಂಬ ಕೋರಡೆಯ ಪೆಟ್ಟಿನಿಂದ ಹಿಂತಿರುಗಿಸಿ ಹೃದಯದ ಲಗಾಮುಗಳಿಂದ ಯಾವದರಲ್ಲಿಯೇ ಕಟ್ಟಿಹಾಕುವರೋ ಆ ತತ್ತ್ವವೇ ನೀನಾಗಿರುವೆ'.

ವ್ಯಾವೃತ್ತಜಾಗ್ರದಾದಿಷ್ವನುಸ್ಯೂತಂ ತೇಭ್ಯೋಽನ್ಯದೇವ ಪುಷ್ಪೇಭ್ಯ ಇವ ಸೂತ್ರಮ್ ।
ಇತಿ ಯದಬಾಧಿತ್ರಯುಪಪೃಥಕ್ತ್ವೇನ ವಿನ್ದನ್ತಿ[3] ಸೂರಯಸ್ತತ್ತ್ವಮಸಿ ತತ್ತ್ವಮ್ ॥

---

1. 'ನೇತಿನೇತ್ಯಾದಿನಾ' ಎಂದಿದ್ದರೆ ಓದುವದಕ್ಕೆ ತಡೆಯಿರುವದಿಲ್ಲ.
2. ಆಚ್ಚಿನ ಪುಸ್ತಕದಲ್ಲಿ ಇದನ್ನು ಮುಂದಿನ ಪಾದಕ್ಕೆ ತಪ್ಪಾಗಿ ಸೇರಿಸಿದೆ.
3. ವಿದನ್ತಿ ಎಂಬುದಕ್ಕಿಂತ ವಿನ್ದನ್ತಿ ಎಂಬ ಪಾಠವೇ ಉತ್ತಮ.

'ಎಚ್ಚರನೇ ಮುಂತಾದ ಅವಸ್ಥೆಗಳಲ್ಲಿ ಅನುಸ್ಯೂತನಾಗಿರುವನು– ಹೂಗಳಲ್ಲಿ ಅನುಸ್ಯೂತವಾಗಿರುವ ನಾರು ಅವಕ್ಕಿಂತ ಬೇರೆಯಾಗಿರುವಂತೆ– ಆ ಅವಸ್ಥೆಗಳಿಗಿಂತ ಬೇರೆಯೇ ಎಂದು ಉಪಾಧಿತ್ರಯಗಳಿಗಿಂತ ಬೇರೆಯಾಗಿ ಯಾವ ತತ್ತ್ವವನ್ನು ವಿದ್ವಾಂಸರು ಆರಿತು ಪ್ರತಿಪಾದಿಸುತ್ತಾರೋ ಅದೇ ನೀನು'

ಪುರುಷ ಏವೇದಮಿತ್ಯಾದಿ ವೇದೇಷು ಸರ್ವಕಾರಣತಯಾ ಯಸ್ಯ ಸಾರ್ವಾತ್ಮ್ಯಮ್ ।
ಹಾಟಕಸ್ಯೇವ ಮುಕುಟಾದಿ ತಾದಾತ್ಮ್ಯಂ ಸ್ಫುರಸಮಾಮ್ನಾಯತೇ ತತ್ತ್ವಮಸಿ
ತತ್ತ್ವಮ್ ॥೫॥

'ಪುರುಷ ಏವೇದಂ ವಿಶ್ವಮ್' (ಇವೆಲ್ಲವೂ ಪುರುಷನೇ) ಎಂಬಿದೇ ಮುಂತಾದ ವೇದಗಳಲ್ಲಿ–ಚಿನ್ನವು ಕಿರೀಟವೇ ಮುಂತಾದವುಗಳ ರೂಪದಲ್ಲಿರುವಂತೆ–ಸರ್ವಕ್ಕೂ ಕಾರಣವಾಗಿರುವ ಯಾವುದಕ್ಕೆ ಸರ್ವಾತ್ಮತ್ವವನ್ನು ಸ್ಪಷ್ಟವಾಗಿ ಹೇಳಿವೆಯೋ ಆ ತತ್ತ್ವವೇ ನೀನು.

ಯಶ್ಚಾಹಮಮುತ್ರ ವರ್ಷಾಣಿ ಭಾಮಿ ಸೋಽಸೌ ಯೋಽಸೌ ವಿಭಾತಿ ರವಿಮಂಡಲೇ
ಸೋಽಹಮ್ ।
ಇತಿ ವೇದವಾದಿನೋ ವ್ಯತಿಹಾರತೋ ಯದ್ಧ್ಯಾಯಂತಿ। ಯತ್ಸತ್ತತಸ್ತತ್ತ್ವಮಸಿ
ತತ್ತ್ವಮ್ ॥೬॥

'ಈ ಶರೀರದಲ್ಲಿ ಯಾವ ನಾನು ತೋರುತ್ತಿರುವೆನೋ ಅದು ಅತನೇ ; ಸೂರ್ಯಮಂಡಲದಲ್ಲಿ ಯಾವನು ಪ್ರಕಾಶಿಸುತ್ತಿರುವನೋ ಅವನು ನಾನೇ–ಎಂದು ವ್ಯತಿಹಾರದಿಂದ ವೇದವಾದಿಗಳು ಧ್ಯಾನಮಾಡುತ್ತಿರುವರಲ್ಲ, ಆ ತತ್ತ್ವವೇ ನೀನು',

ವೇದಾನುವಚನಸದ್ದಾನಮುಖಧರ್ಮೈಃ ಶ್ರದ್ಧಯಾನುಷ್ಠಿತೈರ್ವಿವ್ಯಯಾ ಯುಕ್ತೈಃ ।
ವಿವಿದಿಷಂತ್ಯತ್ಯಂತನಿರ್ಮಲಾಃ ಸ್ವಾನ್ತಾ ಬ್ರಾಹ್ಮಣಾ ಯದ್ಬ್ರಹ್ಮ ತತ್ತ್ವಮಸಿ
ತತ್ತ್ವಮ್ ॥೭॥

'ಬ್ರಾಹ್ಮಣರು ವೇದಾನುವಚನ, ದಾನ– ಮುಂತಾದ ಧರ್ಮಗಳನ್ನು ಶ್ರದ್ಧೆಯಿಂದ ಉಪಾಸನಾಯುಕ್ತವಾಗಿ ಅನುಷ್ಠಾನಮಾಡುವದರಿಂದ ವಿಶುದ್ಧಹೃದಯರಾಗಿ ಯಾವ ಬ್ರಹ್ಮವನ್ನು ಅರಿಯುವದಕ್ಕೆ ಪ್ರಯತ್ನಿಸುವರೋ ಆ ತತ್ತ್ವವೇ ನೀನು'.

ಶಮದಮೋಪರಮಾದಿಸಾಧನೈರ್ಧೀರಾಃ ಸ್ವಾತ್ಮನಾತ್ಮನಿ ಯದನ್ವಿಷ್ಯ ಕೃತಕೃತ್ಯಾಃ ।
ಅಧಿಗತಾಮಿತಸಚ್ಚಿದಾನನ್ದರೂಪಾ ನ ಪುನರಿಹ ವಿದ್ಯಂತಿ ತತ್ತ್ವಮಸಿ ತತ್ತ್ವಮ್ ॥೮॥

'ವಿವೇಕಿಗಳಾದವರು ಶಮ, ದಮ, ಉಪರತಿ–ಮುಂತಾದ ಸಾಧನಗಳಿಂದ ತಮ್ಮಲ್ಲಿಯೇ ಯಾವ ಆತ್ಮನನ್ನು ಹುಡುಕಿ ಅರಿತುಕೊಂಡು ಅನಂತವಾದ ಸಚ್ಚಿದಾನಂದರೂಪರಾಗುವರೋ ಮತ್ತು ಈ ಸಂಸಾರದ ಖೇದವನ್ನು ಅನುಭವಿಸುವದಿಲ್ಲವೋ, ಆ ತತ್ತ್ವವೇ ನೀನು'.

ಹೀಗೆ ಎಂಟು ಪದ್ಯಗಳನ್ನು ಶಿಷ್ಯರು ಹಾಡಿದರೆಂದು (ಮಾ. ಶಂ. ೧೦–೯೯ ರಿಂದ ೫೫) ಮಾಧವಕವಿಯು ಬರೆದಿರುತ್ತಾನೆ. ಈ ಪದ್ಯಗಳಲ್ಲಿ ಆಚಾರ್ಯರ ವೇದಾಂತಕ್ಕೆ ಹೊಂದುಗೆಯಾಗಿಯೇ ಉಪನಿಷದರ್ಥಸಾರವನ್ನು ಸಂಗ್ರಹಿಸಿರುತ್ತದೆಯಾದರೂ ಆಚಾರ್ಯರ ಶಿಷ್ಯರು ಈ ಶ್ಲೋಕಗಳನ್ನೇ ಹಾಡಿದರೆಂದು ಒಪ್ಪುವದಕ್ಕಾಗುವದಿಲ್ಲ. ಏಕೆಂದರೆ ಚಿದ್ವಿಲಾಸೀಯದಲ್ಲಿ :

1, ,ಯದಧ್ಯಾಪಯನ್ತಿ' ಎಂಬ ಅಚ್ಚಿನ ಪಾಠವು ಸರಿಯಲ್ಲ,
2. ವಿಮಲ ಎಂಬ ಅಚ್ಚಿನ ಪಾಠವು ಛಂದಸ್ಸಿಗೆ ಹೊಂದುವದಿಲ್ಲ.

ನಿಸ್ತನುಸಿ ನೀರಜಸಿ ನಿರ್ಗಲಿತಸಕ್ತ್ಯೇ , ತೇಜಸಿ ವಿನೇಕಜುಷಿ ಭೇದಮತಿಶೂನ್ಯೇ |
ನಿರ್ವಚನಮಾನಸಗಮಾತಿಗನುಚಿಸ್ತ್ವಂ ತತ್ತ್ವಮಸಿ ತತ್ತ್ವಮಸಿ ತತ್ತ್ವಮಸಿ ರಾಜನ್

ಎಂದು ಮುಂತಾದ ಐದು ಶ್ಲೋಕಗಳನ್ನು (ಚಿ. ಶಂ. ೨೦–೨೨ರಿಂದ) ಹಾಡಿದ ರೆಂದಿದೆ. ಆನಂದಗಿರೀಯದಲ್ಲಿ 'ಯತ್ಸತ್ಯಮುಖ್ಯಶಬ್ದಾರ್ಥಾನುಕೂಲಂ ತತ್ತ್ವಮಸಿ ತತ್ತ್ವಮಸಿ ತತ್ತ್ವಮಸಿ ರಾಜನ್ | (ಪ್ರ. ೫೯– ಪು. ೨೨೨ ; ದೇ. ೧೮೮) ಎಂದು ಮುಂತಾಗಿ ಹಾಡಿದರೆಂದಿದೆ.

ಕಾಮಶಾಸ್ತ್ರವನ್ನು ಕಲಿತ ಬಳಿಕ

ಆಚಾರ್ಯರು ಏನು ಮಾಡಿದರು ?

೧೧೬. ಶಿಷ್ಯರ ಈ ಹಾಡನ್ನು ಕೇಳಿದ ರಾಜನು ಸಭೆಯಲ್ಲಿ ಮೂರ್ಛೆ ಹೋದನು. ಹಿಂದೆ ಹೇಳಿರುವ ವಿಧಾನದಿಂದಲೇ ಆಚಾರ್ಯರು ತಮ್ಮ ಶರೀರವನ್ನು ಹೊಕ್ಕು ಮೊದಲಿನಂತೆಯೇ ಎದ್ದರು. ಹಕ್ಕಿಯ ರೂಪವನ್ನು ಧರಿಸಿಕೊಂಡು ಹೋದರೆಂದು ಚಿದ್ವಿಲಾಸೀಯ (ಕಲವಿಜ್ಞಾಕೃತಿರ್ಭೂತ್ವಾ ೨೦–೬). ಅಲ್ಲಿ ಅರಸನ ಭೃತ್ಯರು ಹಾಕಿದ್ದ ಅಗ್ನಿಯಿಂದ ಆ ಶರೀರವು ಸುಟ್ಟು ಉರಿಯುತ್ತಿತ್ತು. ಆಗ ಆ ಸ್ಥಿತಿಯಿಂದ ಬಿಡುಗಡೆಹೊಂದುವಡಕ್ಕಾಗಿ ಲಕ್ಷ್ಮೀನರಸಿಂಹನನ್ನು ಆಚಾರ್ಯರು ಸ್ತುತಿಸಿದರು.

ಶ್ರೀಮತ್ಪಯೋನಿಧಿನಿಕೇತನ ಚಕ್ರಪಾಣೇ |
ಭೋಗೀಶ ಭೋಗಮಣಿರಂಜಿತಪುಣ್ಯಮೂರ್ತೇ ॥
ಯೋಗೀಶ ಶಾಶ್ವತ ಶರಣ್ಯ ಭವಾಬ್ಧಿಪೋತ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಮ್ಬಮ್ ॥

ಎಂದು ಮುಂತಾಗಿರುವ ಶ್ಲೋಕಗಳೇ ಆ ಸ್ತೋತ್ರವೆಂದು ಚಿದ್ವಿಲಾಸೀಯದಲ್ಲಿಯೂ (ಚಿ. ಶಂ. ೨೦–೧೩ರಿಂದ೨೦), ಆನಂದಗಿರೀಯದಲ್ಲಿಯೂ (ಪ್ರ. ೬೦ ಪು. ೨೨೧, ೨೨೨ ; ದೇ. ೧೮೯) ಇದೆ. ಡಿಂಡಿಮವ್ಯಾಖ್ಯಾನಕಾರನೂ ಪದ್ಧತಿಯಂತೆ ಆನಂದಗಿರೀಯವನ್ನು ಅನುಸರಿಸಿರುತ್ತಾನೆ. ಈ ಸ್ತೋತ್ರದಿಂದ ತುಷ್ಟನಾದ ನರಸಿಂಹನ ದಯೆಯಿಂದ ಬೆಂಕಿಯು ಆರಿತು ; ಶಂಕರಾಚಾರ್ಯರು ಹೊರಕ್ಕೆ ಬಂದರು (ಮಾ· ಶಂ. ೧೦–೬೦ನೇ. ನೃಸಿಂಹನು ಕೈಯನ್ನು ಕೊಟ್ಟು ಎಬ್ಬಿಸಿ ಶಂಕರರನ್ನು ಮೈದಡವಿದನು (ಚಿ. ಶರ. ೨೦–೨೧, ೨೨) ಎಂದು ಚಿದ್ವಿಲಾಸೀಯ ; ಹಾಗೆ ಮೈದಡವಿದಮೇಲೆ 'ಸರ್ವಲೋಕವನ್ನೂ ಜಯಿಸು' ಎಂದು ಆಶೀರ್ವಾದಮಾಡಿ ಅಂತರ್ಧಾನನಾದನೆಂದು (ಆ. ಶಂ. ೬೦– ಪು. ೨೨೩ ದೇ. ೧೯೦) ಆನಂದಗಿರೀಯ.

ಆಚಾರ್ಯರು ಶಿಷ್ಯರೊಡನೆ ಮಂಡನನ ಮನೆಗೆ ಬಂದರು. ಮಂಡನನ ಸತ್ಕಾರವನ್ನು ಸ್ವೀಕರಿಸಿದರು. ಆಗ ಶಾರದೆಯು 'ಸರ್ವವಿದ್ಯೆಗಳಿಗೂ ಈಶಾನನು

ನೀನು ; ನನ್ನನ್ನು ಹಾಗೆಯೇ ಜಯಿಸದೆ ಕಾಮುಶಾಸ್ತ್ರವನ್ನು **ತಿಳಿದುಕೊಳ್ಳು**ವಷ್ಟಕ್ಕೆಂದು ಏನೇನುಮಾಡಿದೆಯೋ ಅದೆಲ್ಲ ಮನುಷ್ಯರ ನಡತೆಯ ವಿಡಂಬನವು. ಚುಂಬ್ರನೇ ಮುಂತಾದವರಿಗೆ ಸೂರ್ಯನಿಂದ ಪರಿಭವವಾವರೆ ಹೇಗೆ ಅಪಕೀರ್ತಿಯಿಲ್ಲವೋ ಹಾಗೆಯೇ ನಿನ್ನಿಂದ ಜಿತರಾದ ನಮ್ಮಿಬ್ಬರಿಗೂ ಇದು ಲಜ್ಜಾವಹವಲ್ಲ. ಈಗ ನಾನು ನನ್ನ ಲೋಕಕ್ಕೆ ಹೋಗುವದಕ್ಕೆ ಅನುಮತಿಯನ್ನು ಕೊಡು' ಎಂದು ಅಂತರ್ಹಿತಳಾದ ಅಕೆಯನ್ನು ಆಚಾರ್ಯರು ಯೋಗಶಕ್ತಿಯಿಂದ ಕಂಡು "ನೀನು ಬ್ರಹ್ಮನ ರಾಣಿಯೆಂಬುದನ್ನು ಬಲ್ಲೆನು. ಆದ್ದರಿಂದ ನಾನು ಕಲ್ಪಿಸುವ ಋಶ್ಯಶೃಂಗವೇ ಮುಂತಾದ ಸ್ಥಳಗಳಲ್ಲಿ ಶಾರದೆಯೆಂಬ ಹೆಸರಿನಿಂದ ಆರ್ಚ್ಯಮಾನಳಾಗಿ ಇಷ್ಟಾರ್ಥಗಳನ್ನು ಕೊಡುತ್ತಾ ಸಂನಿಹಿತಳಾಗಿರಬೇಕು" ಎಂದು ಬೇಡಿಕೊಂಡರು. ಹಾಗೇ ಆಗಲೆಂದು ಒಪ್ಪಿ ಸರಸ್ವತಿಯು ತನ್ನ ಲೋಕಕ್ಕೆ ಹೊರಟುಹೋದಳು. ತನ್ನ ಗಂಡನು ಯತಿಯಾದ್ದರಿಂದ ವೈಧವ್ಯವು ಬರಬಾರದೆಂದು ನೆಲವನ್ನು ಮುಟ್ಟದೆ ಮೇಲೆಯೇ ಇದ್ದು ಅದೃಶ್ಯಳಾದದ್ದನ್ನು ಕಂಡು ಎಲ್ಲರೂ ವಿಸ್ಮಿತರಾದರು ಮಂಡನನೂ ಆಚಾರ್ಯರೂ ಸಂತೋಷಪಟ್ಟರು (ಮಾ. ಶಂ. ೧೦–೬೬ ರಿಂದ ೭೩)–ಎಂದು **ಮಾಧವೀಯ.**

ಚಿದ್ವಿಲಾಸೀಯ : ಶಂಕರರು ಶಿಷ್ಯರೊಡನೆ ಸರಸ್ವತಿಯಿದ್ದಲ್ಲಿಗೆ ಬಂದು "ಈಗ ನೀನು ಕೇಳುವ ಪ್ರಶ್ನೆಗೆ ಉತ್ತರವನ್ನು ಕೊಡುವೆನು" ಎಂದರು. ಆಗ ಅವರ ಮುಖದ ತೇಜಸ್ಸಿನಿಂದಲೂ ಮಾತಿನಿಂದಲೂ ಅವರಿಗೆ ಎಲ್ಲವೂ ತಿಳಿದಿದೆ ಎಂದು ಊಹಿಸಿಕೊಂಡು "ಯತಿಯೆ, ನಾನು ಜಿತಳಾದೆನು ; ನೀನು ಶಿವನೇ ಎಂದು ಬಲ್ಲೆನು. ನಾನು ಸತ್ಯಲೋಕಕ್ಕೆ ಹೋಗುವದಕ್ಕೆ ಅನುಜ್ಞೆಯನ್ನು ಕೊಡು' ಎಂದಳು. ಆಚಾರ್ಯರು ಅಕೆಯನ್ನು ಸ್ತೋತ್ರಮಾಡಿ "ನೀನು ಪ್ರಸನ್ನಳಾದರೆ ನನ್ನೊಡನೆ ಬಾ ; ಮತ್ತೇನನ್ನೂ ನಾನು ಬಯಸುವಂತಿಲ್ಲ' ಎಂದರು. ಅದಕ್ಕೆ ಒಪ್ಪಿದ ಸರಸ್ವತಿಯೊಡನೆ ಸಂತೋಷದಿಂದ ವಿಭಾಡಂಕ ಋಷಿಯ ತಪೋವನಕ್ಕೆ (ಶೃಂಗೇರಿಗೆ) ಬಂದರು (ಚಿ, ಶಂ. ೨೦–೨೯ರಿಂದ ೪೯).

ಆನಂದಗಿರೀಯ : ಆಚಾರ್ಯರು ಸರಸವಾಣಿಯ ಬಳಿಗೆ ಬಂದು ನೀನು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವೆನು– ಎನ್ನುವಷ್ಟರಲ್ಲಿಯೇ ಸರಸವಾಣಿಯು 'ನೀನು ಸರ್ವಜ್ಞನು' ಎಂದು ಒಪ್ಪಿಕೊಂಡಳು (ಪ್ರ. ೬೧) ಬಳಿಕ ಆಕೆಯನ್ನು ಮಂತ್ರಬದ್ಧಳಾಗಿ ಮಾಡಿ ವಿದ್ಯಾಪೀಠವನ್ನು ನಿರ್ಮಿಸಿ ಭಾರತೀ ಸಂಪ್ರದಾಯದಲ್ಲಿ ಶಿಷ್ಯರನ್ನಿಟ್ಟರು. ಅಂದಿನಿಂದ **ಭಾರತೀಸಂಪ್ರದಾಯದ** ನಿಷ್ಠರಾದ ಶುದ್ಧಾದ್ವೈತಗುರುಗಳು ಪರಮಗುರುಗಳಾದ ಆಚಾರ್ಯಸ್ವಾಮಿಗಳ ಕಟಾಕ್ಷದಿಂದ ಪಡೆದುಕೊಂಡ ವಿದ್ಯಾವೈಶದ್ಯವುಳ್ಳವರಾಗಿರುತ್ತಾರೆ ಎಂದು ವ್ಯವಹಾರ (ಪ್ರ. ೬೨– ಪು. ೩೨೩, ೨೨೪)– ಎಂದು ನಮ್ಮಲ್ಲಿರುವ

ತೆಲುಗಕ್ಷರದ ಪ್ರತಿಯಲ್ಲಿದೆ. ಸೋ ಮ ನಾ ಥ ಯ್ಯ ನ ವರು ಉದಾಹರಿಸಿರುವ ಆನಂದಗಿರೀಯವಾಕ್ಯವು ಹೀಗಿದೆ (ಸೋ. ಶಂ. ಪು. ೧೪೫) : "ತತಃ ಪರಂ ಸರಸವಾಣೀಂ ಮನ್ತ್ರಬದ್ಧಾಂ ಕೃತ್ವಾ ಗಗನಮಾರ್ಗಾದೇವ ಶೃಙ್ಗಗಿರಿಸಮೀಪೇ ತುಙ್ಗಭದ್ರಾತೀರೇ ಚಕ್ರಂ ನಿರ್ಮಾಯ ತೆದಗ್ರೇ ಪರದೇವತಾಂ ಸರಸವಾಣೀಂ ನಿಧಾಯ" ಮುಂತ್ರಬಲದಿಂದ ಕಟ್ಟಿ ಗಗನಮಾರ್ಗದಲ್ಲಿಯೇ ಹೊರಟು ಶೃಂಗೇರಿಯ ಸಮೀಪದಲ್ಲಿ ತುಂಗಭದ್ರಾತೀರದಲ್ಲಿ ಚಕ್ರವನ್ನು ನಿರ್ಮಾಣಮಾಡಿ ಆದರ ಮೇಲೆ ಸರಸವಾಣಿಯನ್ನಿಟ್ಟು– ಇತ್ಯಾದಿ. ಈ ವಾಕ್ಯವು ದೇವನಾಗರಿಯ ಪ್ರತಿ (ದೇ. ಪ್ರ. ೧೯೦)ರಲ್ಲಿಯೂ ಇದೆ ; 'ಏವಮ್ ಆಕಲ್ಪಂ ಸ್ಥಿರಾ ಭವ ಮದಾಶ್ರಮೇ ಇತ್ಯಾಜ್ಞಾಪ್ಯ ನಿಜಮಠಂ ಕೃತ್ವಾ[1]' ಎಂದೂ ಇದೆ ! ಆನಂತಾನಂದಗಿರೀಯವಾಕ್ಯ ಗಳು ಹೀಗೆ ಬೇರೆಬೇರೆಯ ಪುಸ್ತಕಗಳಲ್ಲಿ ಏಕೆ ಬದಲಾಯಿಸಿರುತ್ತವೆಯೋ, ಯಾವ ಯಾವದರಲ್ಲಿ ಯಾರಯಾರ ಕೈವಾಡವಾಗಿದೆಯೋ ಈಶ್ವರನೇ ಬಲ್ಲ.

ಶಂಕರವಿಜಯಸಂಗ್ರಹ (ಅಥವಾ ಕೂಷ್ಮಾಂಡಶಂಕರವಿಜಯ)ದಲ್ಲಿ ಆಚಾರ್ಯರು ತಮ್ಮೊಡನೆ ಬರಬೇಕೆಂದು ಕೇಳಿಕೊಂಡಂತೆ ವಾಣಿಯು 'ನಿನ್ನೊಡನೆ ಬಂದೇನು ; ಆದರೆ ನನ್ನನ್ನು ಹಿಂತಿರುಗಿ ನೋಡಬಾರದು ; ಹಾಗೆ ನೋಡಿದರೆ ನನ್ನ ಲೋಕಕ್ಕೆ ತೆರಳುವೆನು' ಎಂದಳು. ಪುಂಪಾಪುರದಕಡೆಗೆ ಹೋಗುತ್ತಿರುವಲ್ಲಿ ಆಕೆಯು ಬರುತ್ತಾಳೊ ಇಲ್ಲವೊ ?– ಎಂದು ಆಚಾರ್ಯರು ಹಿಂತಿರುಗಿ ನೋಡಲು ಆಕೆ ಆವರ ಆಪ್ಪಣೆಯನ್ನು ಪಡೆದುಕೊಂಡು ಬ್ರಹ್ಮಲೋಕಕ್ಕೆ ಹೊರಟುಹೋದಳು (ಶಂ. ವಿ. ಸಂ. ೬–೯ರಿಂದ ೧೨) ಎಂದಿದೆ, ಆದರೆ ಉತ್ತರದೇಶದಿಂದ ಬರುವಾಗ ಹಂಪೆಗೆ ಬರುವ ದಾರಿಯಲ್ಲಿ ಶೃಂಗೇರಿಯು ಸಿಕ್ಕುವದೇ ಇಲ್ಲವಾದ್ದರಿಂದ ಆ ಕಥೆಗೆ ಯಾವ ಬೆಲೆಯನ್ನು ಕೊಡೋಣ ?

ಈ ಕಥೆಯಾದ ಬಳಿಕ ಮುಂಡನನಿಗೆ ಸಂನ್ಯಾಸವನ್ನು ಕೊಟ್ಟು ಸುರೇಶ್ವರಾ ಚಾರ್ಯರೆಂಬ ಹೆಸರನ್ನಿಟ್ಟು ಶಂಕರಾಚಾರ್ಯರು ಮಾಡಿದ ಉಪದೇಶವು (೧೦–೬೪ರಿಂದ ೧೦೪ರವರೆಗೆ ಇದೆ. ಆಲ್ಲಿಂದ ಮುಂದಕ್ಕೆ ಸುರೇಶ್ವರಾಚಾರ್ಯರು ಕೆಲವು ದಿವಸಗಳು ನರ್ಮದೆಯ ಸುತ್ತಲೂ ಮುಗಧದೇಶದಲ್ಲಿ ವಾಸವನ್ನು ಮಾಡಿಕೊಂಡಿದ್ದರು. (ಮಾ. ಶಂ. ೧೦–೧೦೫) ಎಂದಿದೆ. ಮುಂಡನನಿಗೆ ಮೊದಲೇ ಸಂನ್ಯಾಸವಾಗಿತ್ತೆಂದೂ ಮಿಕ್ಕೆರಡು ಶಂಕರವಿಜಯಗಳಲ್ಲಿರುವದನ್ನು ಆಗಲೇ ಹೇಳಿರುತ್ತೇವೆ. ನಾಲ್ವರು ಶಿಷ್ಯರೊಡನೆಯೇ ಆಚಾರ್ಯರು ಹೋಗಿದ್ದು ಪರಕಾಯ ಪ್ರವೇಶಮಾಡಿದರೆಂದೂ ಆ ಇಬ್ಬರ ಮತ. ಮುಂಡನನು ಸಂನ್ಯಾಸಿಯಾದ ಬಳಿಕ 'ಕುಬೇರದಿಕ್ಕಿಗೆ ಹೊರಟುಹೋದನು' ಎಂದೂ (ಆ. ಶಂ. ಪು. ೨೧೬) ಮುಂಡನ

---

1. ಮಠದ ವಿಚಾರವನ್ನು ಮುಂದೆ ೧೨ನೆ ಖಂಡದಲ್ಲಿ ಮತ್ತೆ ಪ್ರಸ್ತಾಪಿಸಲಿರುವೆ.

ನನ್ನು ಗೆಲ್ಲುವದಕ್ಕೆ ಹೊರಟಾಗಲೇ ಅವರಲ್ಲಿ ಸುರೇಶ್ವರನೆಂಬ ಶಿಷ್ಯನೊಬ್ಬನು ಇದ್ದನೆಂದೂ (ಶಿ. ಶಂ ಪು. ೨೧೩) ತಿನಂದಗಿರೀಯದಲ್ಲಿರುವವನ್ನು ಆಗಲೆ (ಪು. ೧೬೪) ಹೇಳಿರುತ್ತೇವೆ.

ಆಚಾರ್ಯರು ಬೆಂಕಿಹೊತ್ತಿಕೊಂಡಿದ್ದ ಶರೀರವನ್ನು ಹೊಕ್ಕರೆ ?

೧೧೭. ಈಗ ಈ ಕಥಾಂಶವನ್ನು ವಿಮರ್ಶಿಸೋಣ : (೧) ಕಥೆಯು ವಿವರಿಸುವನ್ನು ಹೇಳುವ ಪ್ರಕಾರವು ಒಂದೊಂದು ಶಂಕರವಿಜಯದಲ್ಲಿ ಒಂದೊಂದು ಬಗೆಯಾಗಿದೆ ಎಂಬುದು ಸ್ಪಷ್ಟವಾಗಿದೆ. (೨) ವಾನರರು ಸೀತೆಯನ್ನು ಹುಡುಕಿದಂತೆ ಶಿಷ್ಯರು ಆಚಾರ್ಯರನ್ನು ಹುಡುಕಿಕೊಂಡು ಬೆಟ್ಟದಿಂದ ಬೆಟ್ಟಕ್ಕೆ ದೇಶದಿಂದ ದೇಶಕ್ಕೆ ಹೋದರೆಂದು ಮಾಧವೀಯದಲ್ಲಿರುವದು ಕಥೆಗೆ ಹೊಂದಿಕೆಯಾಗಿಲ್ಲ. ಏಕೆಂದರೆ ಅಮರುಕರಾಜನ ಶರೀರದಲ್ಲಿ ತಾವು ಪ್ರವೇಶಿಸುವೆವೆಂದು ಆಚಾರ್ಯರೇ ಬಾಯಿಬಿಟ್ಟು ಹೇಳಿದ್ದರು. (೩) ಸರಸ್ವತಿಯು ಕೊಟ್ಟಿದ್ದ ಕಾಲದ ಅವಧಿಯು ವಿಸಾರಿದ್ದರಿಂದ ಶಿಷ್ಯರು ಹುಡುಕಿಕೊಂಡು ಹೋದರು ಎಂಬ ಮಾಧವಕವಿಯ ಕಥೆಗಿಂತ ಅಮರುಕನ ಮಂತ್ರಿಯು ರಾಣಿಯ ಅಪ್ಪಣೆಯಂತೆ ಮರದ ಪೊಟ್ಟರೆಯಿಂದ ಶವವನ್ನು ಎಳೆದು ಚಿತೆಯಮೇಲೆ ಇಟ್ಟನು ಎಂಬ ಕಥೆಯು ಹೆಚ್ಚು ಸ್ವಾಭಾವಿಕವಾಗಿದೆಯಾದರೂ ಶವಕ್ಕೆ ಬೆಂಕಿಯನ್ನು ಹಾಕಿವಮೇಲೆ ಶಿಷ್ಯರು ರಾಜಸಭೆಗೆ ಹೋಗಿ ಗಾನಮಾಡಿ ಆಚಾರ್ಯರನ್ನು ಹಿಂತಿರುಗಿಸಿದರೆಂದಿರುವದು ಹೊಂದಿಕೆಯಾಗಿಲ್ಲ ; ಇಷ್ಟೆಲ್ಲ ಆಗುವವರೆಗೂ ಶವವು ಸುಡದೆ ಹಾಗೇ ಇತ್ತೆ ? —ಎಂಬ ಶಂಕೆ ತಲೆದೋರುತ್ತದೆ. ದೇಹಕ್ಕೆ ಬೆಂಕಿಹಾಕಿದ್ದನ್ನು ಕಂಡು ಶಿಷ್ಯರು ಸುಮ್ಮನಿದ್ದರೆ ? ಅವರು ಅರಸಿನಕಡೆಯ ಭೃತ್ಯರನ್ನು ಬೆಂಕಿಹಾಕದಂತೆ ಅಡ್ಡಿಮಾಡಲಿಲ್ಲವೆ ? ಅಥವಾ ರಾಜಭೃತ್ಯರು ಅವರುನ್ನು ಅಸಡ್ಡಿಮಾಡಿ ಅಲ್ಲಿಂದ ಆಟ್ಟಲಿಲ್ಲವೆ ?— ಎಂಬ ಇನ್ನೂ ಒಂದು ಶಂಕೆಯು ಎದ್ದು ಕೊಳ್ಳುತ್ತದೆ. (೪) ಹಾಡನ್ನು ಕೇಳಿ ಮೂರ್ಛಿತನಾಗಲು ಶಂಕರರು ಹಕ್ಕಿಯ ರೂಪವನ್ನು ಧರಿಸಿ ಹೋದರೇಕೆ ? ಹಿಂದೆ ರಾಜನ ಶರೀರವನ್ನು ಆಚಾರ್ಯರು ಯಾವ ರೂಪಾಂತರವನ್ನೂ ಧರಿಸದೆ ಹೊಕ್ಕಿರಲಿಲ್ಲವೆ ? ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರಕ್ಕೆ ಹೋಗುವದು ಯೋಗಿಗಳಿಗೆ ಶಕ್ಯವೆಂದೇ ಯೋಗಶಾಸ್ತ್ರದ ಪ್ರಕ್ರಿಯೆಯಾದ್ದರಿಂದ ಇದು ಅನವಶ್ಯವಾದ ಕಲ್ಪನೆಯಾಗಿರುತ್ತದೆ. (೫) ಚಿತೆಯಲ್ಲಿ ಶವಕ್ಕೆ ಬೆಂಕಿಹತ್ತಿಕೊಂಡಾಗ ಆಚಾರ್ಯರು ಅದರೊಳಗೆ ಹೊಕ್ಕು ಎದ್ದರೆ ರಾಜಭೃತ್ಯರು ಸುಮ್ಮನಿದ್ದರೆಂಬುದು ಅಸಂಭಾವಿತ. ಅವರು ದೇಹವನ್ನು ಪೂರ್ಣವಾಗಿ ಸುಟ್ಟರಬೇಕು, ಇಲ್ಲವೆ ಶವವು ಸಜೀವವಾಗಿ ಎದ್ದದ್ದನ್ನು ಕಂಡು ಅಂಜಿ ಪಲಾಯನಮಾಡಿರಬೇಕು. ಹಾಗೇನೂ ಶಂಕರವಿಜಯಕಾರರು ಹೇಳಿಲ್ಲ.

ನೃಸಿಂಹನು ಆಚಾರ್ಯರನ್ನು ಉರಿಯಿಂದ ಕಾಪಾಡಿದನೆ ?

೧೧೮. ನರಸಿಂಹನ ಕೃಪೆಯಿಂದ ಉರಿ ಆರಿದಮೇಲೆ ಆಲ್ಲಿಯವರೆಗೆ ಸುಟ್ಟಿದ್ದ ಭಾಗದಲ್ಲಿ ಸುಟ್ಟ ಗುರುತು ಶರೀರದಲ್ಲಿ ಉಳಿದಿರಬೇಕಲ್ಲವೆ ? ಶಂಕರ ವಿಜಯದಲ್ಲಿ ಆ ವಿಷಯವನ್ನೇನೂ ಹೇಳಿಲ್ಲ. ಲಕ್ಷ್ಮೀನರಸಿಂಹಕರಾವಲಂಬನ ಸ್ತೋತ್ರವು ಪ್ರಕೃತಸಂದರ್ಭದಲ್ಲಿ ಮಾಡಿದ್ದೆಂಬುದಕ್ಕೆ ಗಮನಕವಾದ ಪದವಾಗಲಿ ವಾಕ್ಯವಾಗಲಿ ಆ ಸ್ತೋತ್ರದಲ್ಲಿಲ್ಲ. ಶಂಕರವಿಜಯಕಾರರೂ ಡಿಂಡಿಮವ್ಯಾಖ್ಯಾಕಾರನೂ ಇದು ಸಂದರ್ಭಕ್ಕೆ ತಕ್ಕದಾಗಿದೆಯೆಂದು ಯಾವ ಆಧಾರದಮೇಲೆ ನಿರ್ಧಾರಮಾಡಿರುವರೋ ನಮಗಂತೂ ತಿಳಿಯದು. ಈ ಸ್ತೋತ್ರದ ಎಂಟನೆಯ ಶ್ಲೋಕದಲ್ಲಿ 'ಸಂಸಾರದಾವದಹನಾತುರಭೀಕರೋರುಜ್ವಾಲಾವಳೀಭಿರತಿದಗ್ಧ ತನೂರುಹಸ್ಯ| ತ್ವತ್ಪಾದಪದ್ಮಸರಸೀ ಶರಣಾಗತಸ್ಯ ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಮ್ಬಮ್ ||' ಸಂಸಾರವೆಂಬ ದಾವಾಗ್ನಿಯ ದೊಡ್ಡ ಜ್ವಾಲಾವಳಿಗಳಿಂದ ಅತಿಯಾಗಿ ದಗ್ಧವಾದ ತನೂರುಹನಾದ (ಮೈಗೂದಲುಳ್ಳ), ನಿನ್ನ ಪಾದಪದ್ಮಗಳ ಸರೋವರವನ್ನು ಶರಣುಹೊಂದಿದ ನನಗೆ ಎಲೈ ಲಕ್ಷ್ಮೀನೃಸಿಂಹನೆ, ನಿನ್ನ ಕೈಯ ಅವಲಂಬನವನ್ನು ಕೊಡು (ನನ್ನನ್ನು ಕೈಹಿಡಿ)– ಎಂಬರ್ಥವುಳ್ಳ ಶ್ಲೋಕವೊಂದು ಇದೆ. ಆದರೆ ಆಲ್ಲಿ ಆಚಾರ್ಯರ ಮೈಯು ಸುಡುತ್ತಿತ್ತೆಂಬುದಕ್ಕೆ ಸೂಚಕವಾದ ಶಬ್ದವೇನೂ ಕಾಣಿಸುವದಿಲ್ಲ. ಈ ಸ್ತೋತ್ರದ ಬೇರೆಯ ಪದ್ಯಗಳಲ್ಲಿ ಸಂಸಾರವನ್ನು ಘೋರವಾದ ಕಾಡು, ಆಳವಾದ ಭಾವಿ, ಸಾಗರ, ವೃಕ್ಷ, ಸರ್ಪ, ಬಲೆ, ಮುದ್ದಾನೆ –ಇವುಗಳಿಗೂ ಹೋಲಿಸಿದ ರೂಪಕಗಳನ್ನು ಕೊಟ್ಟಿದೆ. ಸಂಸಾರವನ್ನು ಹೀಗೆ ರೂಪಕಗಳಿಂದ ವರ್ಣಿಸಿದಮಾತ್ರಕ್ಕೆ ಆಚಾರ್ಯರು ಬೆಂಕಿಯಲ್ಲಿ ಬಿದ್ದಾಗ ಮಾಡಿದ ಸ್ತೋತ್ರವಿದೆಂದು ತರ್ಕಿಸುವದಕ್ಕೆ ಆಧಾರವೇನಿದೆ ? 'ಮಮ ದೇಹಿ ಕರಾವಲಮ್ಬಮ್' ನನ್ನ ಕೈಯನ್ನು ಹಿಡಿ– ಎಂದು ಪ್ರತಿಯೊಂದು ಪದ್ಯದ ಕೊನೆಯಲ್ಲಿಯೂ ಇರುವದನ್ನು ಕಂಡು ನರಸಿಂಹನು ಶಂಕರಾಚಾರ್ಯರನ್ನು ಕೈಹಿಡಿದು ಬೆಂಕಿಯ ಜ್ವಾಲೆಯಿಂದ ಈಚೆಗೆ ಎಳೆದನೇ– ಎಂಬ ಕಲ್ಪನೆಯನ್ನು ಯಾರೋ ಮಾಡಿರಬಹುದೆಂದು ತೋರುತ್ತದೆ.

ಆಚಾರ್ಯರು ಶಾರದೆಯನ್ನು ಜಯಿಸಿ ಶೃಂಗೇರಿಗೆ ಕರೆತಂದದ್ದು

೧೧೯. ಆಚಾರ್ಯರು ಮಂಡನನ ಮನೆಗೆ ಬಂದಾಗ ಸರಸ್ವತಿಯು 'ಅವಧಿಯನ್ನು ಮೀರಿ ಬಂದದ್ದೇಕೆ ?' ಎಂದು ಆಚಾರ್ಯರನ್ನು ಕೇಳಿಲ್ಲ; 'ನನ್ನ ಪ್ರಶ್ನೆಗಳಿಗೆ ಉತ್ತರವೇನು ?' ಎಂದೂ ಕೇಳಿಲ್ಲ. ಇದನ್ನು ನೋಡಿದರೆ ಆವರನ್ನು ಜಯಿಸುವದಕ್ಕೆ ಕಾಮಶಾಸ್ತ್ರದ ವಿಷಯದ ಪ್ರಶ್ನೆಯನ್ನು ಹಾಕಿದ್ದಳೊ, ಇಲ್ಲವೊ? –ಎಂಬ ಸಂಶಯವು ಎದ್ದುಕೊಳ್ಳುತ್ತದೆ. (೨) ಈಗ ಅವಳಿಗೆ ಆಚಾರ್ಯರು

ಸಾಕ್ಷಾತ್ಪರಶಿವನೇ ಎಂಬ ಅರಿವಾಯಿತು ಎಂಬುದೂ ಸರಿಯಲ್ಲ ; ಏಕೆಂದರೆ ಉಕೆಯು ಮೊದಲೇ ಹಾಗೆಂದು ತಿಳಿದಿದ್ದು ಅವರನ್ನು ವಾದಕ್ಕೆ ಕರೆದಿದ್ದಳು (ಮೂ. ಶಂ. ೯–೫೩, ೫೭) ; ಈಗೇಕೆ ವಾದವನ್ನು ಮಾಡಲಿಲ್ಲ ? (೩) ಆಚಾರ್ಯರು 'ನೀನು ಸರಸ್ವತಿಯೆಂಬುದನ್ನು ಬಲ್ಲೆ, ಅಥವಾ ಈಗ ತಿಳಿದೆನು' ಎಂದು ಹೇಳಿಕೊಂಡಿರುವುದೂ ಹೊಂದಿಕೆಯಾಗಿಲ್ಲ ; ಏಕೆಂದರೆ ಹಾಗೆಂದು ತಿಳಿದುಕೊಂಡೇ ಅವರು ವಾದಕ್ಕೆ ಒಪ್ಪಿದ್ದರು. (೪) ಈವರೆಗೆ ಶೃಂಗೇರಿಯ ಪರಾಮರ್ಶವೇ ಇರಲಿಲ್ಲ ; ಈಗ ತಟ್ಟನೆ 'ನಾನು ಸ್ಥಾಪಿಸುವ ಶೃಂಗೇರಿಯೇ ಮುಂತಾದ ಅರ್ಚನಾ ಸ್ಥಾನಗಳಲ್ಲಿ ನಿನ್ನ ಸನ್ನಿಧಿಯಿರಲಿ' ಎಂದು ಬೇಡಿಕೊಂಡದ್ದು ಹೇಗೆ ? ಅಥವಾ ಚಿದ್ವಿಲಾಸೀಯದಲ್ಲಿಯೂ ಆನಂದಗಿರೀಯದಲ್ಲಿಯೂ ಹೇಳಿರುವಂತೆ ಆಚಾರ್ಯರು ಶಾರದೆಯನ್ನು ಪ್ರಾರ್ಥಿಸಿಯಾಗಲಿ ಮಂತ್ರಶಕ್ತಿಯಿಂದ ಬಂಧಿಸಿಯಾಗಲಿ ಶೃಂಗೇರಿಗೆ ಕರೆತಂದರೆಂಬ ಕಥೆಗೆ ಅವಕಾಶವೆಲ್ಲಿದೆ ? ವ್ಯಾಸಾಚಲೀಯಾದಿಗಳಲ್ಲಿ ಈ ವಾದದ ಪ್ರಸ್ತಾಪವೇ ಇಲ್ಲವೆಂಬುದನ್ನೂ ಓದುಗರು ಇಲ್ಲಿ ನೆನಪಿನಲ್ಲಿಡಬೇಕಾಗಿದೆ.

ಐತಿಹಾಸಿಕಭಾರತಿ

೧೧೦. ಆಚಾರ್ಯರಿಗೆ ಭಾರತೀಮಂಡನರೊಡನೆ ಆವ ವಾದಕ್ಕೆ ಆಧಾರವಾಗಿ ಐತಿಹಾಸಿಕಅಂಶವೇನಾದರೂ ಇದ್ದಿರಬಹುದೆ ?– ಎಂಬುದೊಂದು ಪ್ರಶ್ನೆ. ಇದು ನಾವುನಾವು ಮಾಡುವ ಊಹೆಯನ್ನವಲಂಬಿಸಿರುತ್ತದೆಯಾದ್ದರಿಂದ ಈ ವಿಷಯಕ್ಕೆ ಐಕಮತ್ಯವಾಗುವ ಸಂಭವವಿಲ್ಲವೆಂದು ಹೇಳಬೇಕಾದದ್ದೇ ಇಲ್ಲ. ಸಿ.ಎನ್. ಕೃಷ್ಣಸ್ವಾಮಿ ಅಯ್ಯರ್‌ರವರು ಈ ವಿಷಯಕ್ಕೆ ಹೇಳುವದೇನೆಂದರೆ ಭಾರತಿಯು ವಿದ್ಯಾವತಿಯಾಗಿದ್ದದ್ದರಿಂದ ಉಕೆಯನ್ನು ಈಚಿನವರು ಸರಸ್ವತಿಯ ಅವತಾರವೆಂದು ಎಣಿಸಿದ್ದು ಸ್ವಾಭಾನಿಕವಾಗಿದೆ. ಸ್ತ್ರೀಯರಿಗೆ ವಿದ್ಯಾವತಿಯರಾಗುವದಕ್ಕೆ ಆ ಕಾಲದಲ್ಲಿ ಈಗಿರುವದಕ್ಕಿಂತ ಹೆಚ್ಚಿನ ಅವಕಾಶವಿತ್ತು. ಬೌದ್ಧರ ಕಾಲದಲ್ಲಿ ಸ್ತ್ರೀಯರೂ ಸಂನ್ಯಾಸಿನಿಯರಾಗಿ ಧರ್ಮಪ್ರಸಾರದಲ್ಲಿಕೂಡ ತೊಡಗಿದ್ದರು ; ಅವರ ಸಂಪರ್ಕದಿಂದ ಈ ವಿಷಯಕ್ಕೆ ಹಿಂದುಗಳಮೇಲೂ ಪರಿಣಾಮವಾಗಿರಬಹುದು. ಆದ್ದರಿಂದ ಶಂಕರರಿಗೂ ಉಕೆಗೂ ವಾದವಾಗಿದ್ದರೆ ಆಶ್ಚರ್ಯವಿಲ್ಲ. ಮಂಡನನು ತನ್ನ ವಿದ್ಯಾತಿಶಯದಲ್ಲಿದ್ದ ಅತಿವಿಶ್ವಾಸದಿಂದಲೇ ತಾನು ಸೋತರೆ ಭಿಕ್ಷುವಾಗುವೆನೆಂದು ಪಣತೊಟ್ಟಿದ್ದನು. ಗಂಡನು ಪರಾಜಿತನಾದದ್ದನ್ನು ಕಂಡು ಇನ್ನು ಪತಿವಿಯೋಗವು ತನಗೆ ಕಟ್ಟಿಟ್ಟ ಬುತ್ತಿಯೆಂದು ತಿಳಿದ ಮೇಲೆ ಉಕೆಯು ತಾನೂ ವೈರಾಗ್ಯದಿಂದ ಪತಿಯನ್ನೇ ಹಿಂಬಾಲಿಸಿರಬಹುದು. ಮುಂದೆ ಶೃಂಗೇರಿಯಲ್ಲಿ ಮಠವು ಸ್ಥಾಪಿತವಾಗಿ ಮಂಡನನೇ ಅದಕ್ಕೆ ಅಧ್ಯಕ್ಷನಾದ ಬಳಿಕ ಉಕೆ ಅಲ್ಲಿಗೆ ಬಂದು ತನ್ನ ಆಯುಃಶೇಷವನ್ನು ಭಗವಚ್ಚಿಂತನೆಯಲ್ಲಿಯೇ ಕಳೆದಳೆಂದು ಕಲ್ಪಿಸುವದು ಉಕೆಯ ಯೋಗ್ಯತೆಗೂ ಸ್ವಭಾವಕ್ಕೂ ಅನುಸಾರ

ವಾಗುತ್ತದೆ. ತನ್ನ ಭಾಗಕ್ಕೆ ಇನ್ನು ನೋಲೆ ಗಂಡನು ಮೃತನೇ ಆದರೂ ಅವನಂತೆ ತಾನೂ ಆಚಾರ್ಯರ ಶಿಷ್ಯಳಾಗಿ ಅವರನ್ನು ಹಿಂಬಾಲಿಸಿದ್ದು ಯುಕ್ತವೇ ಆಗುತ್ತದೆ ವಿರಕ್ತಳೂ ವಿದ್ಯಾವತಿಯೂ ಆಗಿದ್ದ ಆಕೆಯು ಸಂನಿಧಿಯು, ಅದ್ವೈತ ಪ್ರಚಾರಕ್ಕೆ ಸಹಾಯಕವಾಗಿರಬಹುದು. ಆ ಸಹಾಯವು ಎಷ್ಟರಮಟ್ಟಿಗೆ ಆಗಿರಬಹುದೆಂಬುವನ್ನು ಮಾತ್ರ ಈಗ ನಿಶ್ಚಯಿಸುವದು ಸಾಧ್ಯವಾಗುವಂತಿಲ್ಲ (CN KS. pp. 50 52).

ಕೃಷ್ಣಸ್ವಾಮಯ್ಯರ ಈ ಅಭಿಪ್ರಾಯವು ಸಾರಾಸಾರತೆಯು ನಿರ್ಧಾರಣ ಕಾರ್ಯವನ್ನು ನಾವು ವಾಚಕರಿಗೇ ಬಿಟ್ಟುಬಿಟ್ಟಿರುತ್ತೇವೆ. ಶಾರದಾಶಂಕರ ವಾದವು ಈ ಸಂದರ್ಭದಲ್ಲಿ ಅಗಲೇಇಲ್ಲವೆಂದೂ ಅದು ಕಾಂಚಿಯಲ್ಲಿ ಆಯಿತೆಂದೂ ಅಭಿಪ್ರಾಯಪಡುವ ಮತ್ತೊಂದು ಸಂಪ್ರದಾಯದ ಕಥೆಯನ್ನು ಆಗಲೆ (ಖಂ. ೧೧೩) ತಿಳಿಸಿಯೇ ಇರುತ್ತೇವೆ. ಮಂಡನವಾದದ ವಿಚಾರದಲ್ಲಿ ಬಲದೇವ ಉಪಾಧ್ಯಾಯರು ಮತ್ತೊಂದು ಬಗೆಯ ಅಭಿಪ್ರಾಯವನ್ನು (ಬಲ. ಶಂ. ಪು ೬೮) ಪ್ರಕಟಿಸಿರುತ್ತಾರೆ. ಆದ್ವೈತಿಯಾದ ಮಂಡನನೊಡನೆಯೇ ಈ ವಾದ ವಾಯಿತು. ಶಂಕರ, ಮಂಡನ– ಇಬ್ಬರೂ ಅದ್ವೈತಿಗಳೇ ಆದರೂ ಅವರಿಬ್ಬರ ಆದ್ವೈತಪ್ರಕ್ರಿಯೆಗಳಲ್ಲಿ ಬಹಳ ಭೇದವಿರುತ್ತದೆ; ಆದ್ದರಿಂದ ಶಂಕರರು ಮಂಡನನ ಪ್ರಕ್ರಿಯೆಯನ್ನು ಉಪನಿಷದ್ವಿರುದ್ಧವೆಂದು ಭಾವಿಸಿರಬಹುದು. ಮಂಡನನಂಥ ಪ್ರಬಲಪ್ರತಿಸ್ಪರ್ಧಿಯೊಬ್ಬನು ಇರುವವರೆಗೆ ತಮ್ಮ ಪ್ರಕ್ರಿಯೆಯನ್ನು ಪ್ರಚಾರಮಾಡುವದು ಸಾಧ್ಯವಾಗಲಾರದು– ಎಂದೆಣಿಸಿ ಅವರು ವಾದಮಾಡಿರಬೇಕು– ಎಂಬುದು ಉಪಾಧ್ಯಾಯರ ಊಹೆ. ಬ್ರಹ್ಮಸಿದ್ಧಿಕಾರ ಮಂಡನನೊಡನೆ ಆಚಾರ್ಯರಿಗೆ ನಿಜವಾಗಿಯೂ ವಾದವಾಯಿತೆಂದು ಇಟ್ಟುಕೊಳ್ಳುವದಾದರೆ ಈ ಕಲ್ಪನೆಯೊಂದನ್ನೇ ನಾವು ಅವಲಂಬಿಸಬೇಕಾಗುತ್ತದೆ– ಎಂಬುದು ನಿಶ್ಚಯ. ಆದರೆ ಮಂಡನನು ಶಂಕರಾಚಾರ್ಯರ ಸೂತ್ರಭಾಷ್ಯವನ್ನು ಪೂರ್ವಪಕ್ಷವಾಗಿ ಉದಾಹರಿಸಿಕೊಂಡಿರುತ್ತಾನೆಂಬ ಕುಪ್ಪುಸ್ವಾಮಿಶಾಸ್ತ್ರಿಗಳವರ ಪಕ್ಷವನ್ನು ಅಂಗೀಕರಿಸಿದರೆ ಆಗ ಇದು ಸಂಭಾವಿತವೇ ಅಲ್ಲವೆಂದಾಗುವದು. ಆದ್ದರಿಂದ ಈ ಅಭಿಪ್ರಾಯದ ವಿಷಯಕ್ಕೂ ವಾಚಕರು ತಮ್ಮತಮ್ಮ ತೀರ್ಮಾನವನ್ನೇ ಮಾಡಿಕೊಳ್ಳಬೇಕಾಗಿರುತ್ತದೆ. ಆದು ಹೇಗೇ ಆದರೂ ಉಭಯಭಾರತಿಯೊಡನೆ ವಾದವಾಯಿತೆಂಬುದು ಬಲುಮಟ್ಟಿಗೆ ಅಸಂಭಾವಿತವೆಂದೇ ನಮಗೆ ಕಾಣುತ್ತದೆ. ಏಕೆಂದರೆ ಸರಸ್ವತಿಯೊಡನೆ ವಾದವಾದದ್ದು ಬೇರೊಂದು ಸಂದರ್ಭದಲ್ಲಿ ಎಂದು ಕಾಂಚೀಸಂಪ್ರದಾಯದವರು ಹೇಳುತ್ತಿದ್ದಾರೆ; ಮಂಡನಪರಾಜಯವಾದ ದಿನವೇ ಸರಸ್ವತಿಯು ಅಂತರ್ಧಾನನಾಗಿಬಿಟ್ಟಳೆಂದು ವ್ಯಾಸಾಚಲೀಯದಲ್ಲಿರುವದನ್ನು ಆಗಲೆ (ಖಂ. ೧೧೧) ಹೇಳಿಯೂ ಇರುತ್ತೇವೆ.

೧೨. ಮಂಡನನು ಆಚಾರ್ಯರ ಶಿಷ್ಯನಾದದ್ದು

ಮಂಡನನ ಸಂನ್ಯಾಸ

೧೨೧. ಚಿದ್ವಿಲಾಸ, ಅನಂತಾನಂದಗಿರಿ– ಇಬ್ಬರೂ ಮಂಡನಸಂನ್ಯಾಸವು ಸರಸ್ವತೀಜಯಕ್ಕಿಂತ ಮೊದಲೇ ಆಯಿತೆಂದು ಹೇಳಿರುವದನ್ನು ಹಿಂದೆಯೇ ತಿಳಿಸಿರುತ್ತೇವೆ. ಮಾಧವೀಯದಲ್ಲಿ ಮಾತ್ರ ಆಚಾರ್ಯರು ಕಾಮುಶಾಸ್ತ್ರದ ಮರ್ಮವನ್ನು ಕಲಿತುಕೊಂಡುಬಂದಬಳಿಕ ಮಂಡನನಿಗೆ ಸಂನ್ಯಾಸವಾಯಿತೆಂದು ಬರೆದಿದೆ. ವ್ಯಾಸಾಚಲೀಯದಲ್ಲಿ ಭಾರತಿಯ ವಾದವೇ ಇಲ್ಲವಾದ್ದರಿಂದ ಪರಕಾಯಪ್ರವೇಶವೃತ್ತಾಂತವು ಇಲ್ಲವೆಂದು (ಖಂ. ೧೧೧) ತಿಳಿಸಿರುತ್ತೇವಷ್ಟೆ ? ಆದರೆ ವಿಶ್ವರೂಪನಿಗೆ ಆಚಾರ್ಯರು ವಾದಾನಂತರವೇ ಮಾಡಿದ ಉಪದೇಶವು ಮಾತ್ರ ಅಕ್ಷರಶಃ ಮಾಧವವ್ಯಾಸಾಚಲೀಯಗಳಿಗೆ ಸಮಾನವಾಗಿದೆ.

ಮಾಧವೀಯದಲ್ಲಿ 'ತಂ ಸವಿಸ್ಮಾಕ್ಷ್ಯ ನಭಸಶ್ಚ್ಯುತಂ ಸ ಚ ಪ್ರಾಞ್ಜಲಿಃ ಪ್ರಣತಸ್ತೂರ್ವವಿಗ್ರಹಃ । ಅರ್ಹಣಾಭಿರಭಿಪೂಜ್ಯ ತಸ್ಥಿವಾನೀಕ್ಷಣೈರನಿಮಿಷೈಃ ಪಿಬನ್ನಿವ ॥ (ಆಕಾಶದಿಂದ ಇಳಿದ ಅವರನ್ನು ಕಂಡು ಕೈಮುಗಿದು ತಲೆಬಾಗಿ ಯಥಾವಿಧಿಯಾಗಿ ಪೂಜಿಸಿ ಎವೆಯಿಕ್ಕದೆ ನೋಡುತ್ತಾ ನಿಂತನು (ಮಾ. ಶಂ. ೧೦-೬೩) ಎಂದು ಹೇಳಿದಮೇಲೂ

ಸ ವಿಶ್ವರೂಪೋ ಬತ ಸತ್ಯವಾದೀ । ಪಪಾತ ಪಾದಾಮ್ಬುಜಯೋರ್ಯತೀಶಃ ।
ಗೃಹಂ ಶರೀರಂ ಮಮ ಯಚ್ಚ ಸರ್ವಂ । ತವೇತಿ ವಾದೀ ಮುದಿತೋ ಮಹಾತ್ಮಾ ॥

ಎಂದು ಬರೆದಿದೆ. ಈ ಶ್ಲೋಕವು ವ್ಯಾಸಾಚಲೀಯದಲ್ಲಿಯೂ (ವ್ಯಾ.ಶಂ.೬-೧೦೩) ಇದೆ. ಇದು ವ್ಯಾಸಾಚಲೀಯಕ್ಕೆ ಹೊಂದುವಂತೆ ಮಾಧವೀಯಕ್ಕೆ ಹೊಂದುಗೆಯಿಲ್ಲ. ಏಕೆಂದರೆ 'ಆ ಸತ್ಯವಾದಿಯಾದ ವಿಶ್ವರೂಪನು ಯತೀಶ್ವರನ ಪಾದಗಳಿಗೆ ಬಿದ್ದನು ; ಮನೆಯೂ ಶರೀರವೂ ಮತ್ತು ನನ್ನ ಸರ್ವಸ್ವವೂ ತಮ್ಮವೇ ಎಂದು ಸಂತೋಷದಿಂದ ಆ ಮಹಾತ್ಮನು ನುಡಿದನು– ಎಂಬುದು ಶ್ಲೋಕದ ಅರ್ಥ. 'ಸತ್ಯವಾದೀ' ಎಂಬ ವಿಶೇಷಣವು ಮಾಧವೀಯಕಥಾಸಂದರ್ಭಕ್ಕೆ ಹೊಂದುಗಡೆಯಾಗಿಲ್ಲ ; ಆಚಾರ್ಯರಿಗೆ ನಮಸ್ಕಾರವನ್ನು ಮಾಡಿದನು ಎಂದು ಮೊದಲೇ ಹೇಳಿದೆ. ಈಗ ಮತ್ತೆ ಅದೇ ಅರ್ಥದ ಶ್ಲೋಕಾರ್ಧವನ್ನು ಹೇಳುವದಕ್ಕೇನು ಕಾರಣ ? ಈ ಸಂದರ್ಭದಲ್ಲಿ ಮಂಡನನೆ ಸತ್ಯವಾದಿತ್ವವೇನು ?– ಎಂಬ ಪ್ರಶ್ನೆಗಳಿಗೆ ಉತ್ತರವು ಸಿಕ್ಕುವದಿಲ್ಲ. ವ್ಯಾಸಾಚಲೀಯದಲ್ಲಾದರೆ ವಿಶ್ವರೂಪನು

ಪರಾಜಿಶನಾಪ್ತರಿಂದ ತಾನು ಮೊದಲೇ ಪ್ರತಿಜ್ಞೆಮಾಡಿದ್ದಂತೆ 'ನಿಮ್ಮ ಶಿಷ್ಯನಾದೆನು, ಸಂನ್ಯಾಸಕ್ಕೆ ಸಿದ್ಧನಾಗಿದೇನೆ' ಎಂದನು– ಎಂದು ವಿಶೇಷಣಕ್ಕೆ ಸಾರ್ಥಕ್ಯವು ಬರುತ್ತದೆ. ಆಲ್ಲಿ ವಿಶ್ವರೂಪನ ಸಂನ್ಯಾಸವೃತ್ತಾಂತವೇ ಮುಂದೆ ಇರುವದಕ್ಕೂ ಇದು ಸಂಗತವಾಗುತ್ತದೆ, ಇದಲ್ಲದೆ ಮಾಧವೀಯದಲ್ಲಿ ಈ ಪದ್ಯವಿಲ್ಲದಿದ್ದರೂ ಮುಂದಿನ 'ಪ್ರೇಯಸಾ ಪ್ರಥಮಮನುಚಿತಂ ...' (ಮಾ. ಶಂ. ೧೦–೬೫) 'ಗಂಡನು ಮೊದಲು ಪೂಜಿಸಿದಮೇಲೆ ಆಸನದಲ್ಲಿ ಕುಳಿತಿದ್ದ ಆಚಾರ್ಯರನ್ನು ಕುರಿತು ಶಾರದೆಯು ವಿನಯದಿಂದ ಇಂತೆಂದಳು' ಎಂಬರ್ಥದ ಶ್ಲೋಕವು ಹೊಂದುಗೆಯಾಗುತ್ತದೆ. ಆದ್ದರಿಂದ ವ್ಯಾಸಾಚಲೀಯದಲ್ಲಿದ್ದ ಈ ಶ್ಲೋಕವನ್ನು ಯಾರೋ ಅನವಶ್ಯವಾಗಿ ಇಲ್ಲಿ ಸೇರಿಸಿರಬಹುದೆಂದು ತೋರುತ್ತದೆ. ಆದರೆ ಮಾಧವೀಯದಲ್ಲಿರುವ

ಸಂನ್ಯಾಸಗೃಹ್ಯವಿಧಿನಾ ಸಕಲಾನಿ ಕರ್ಮಾ–
ಣ್ಯಾಹ್ನಾಯ ಶಙ್ಕರಗುರುರ್ವಿದುಷೋಽಸ್ಯ ಕುರ್ವನ್ ।
ಕರ್ಣೇ ಜಗೌ ಕಿಮಪಿ ತತ್ತ್ವಮಸೀತಿ ವಾಕ್ಯಂ
ಕರ್ಣೇಜಪಂ ನಿಖಿಲಸಂಸೃತಿಮುಚ್ಚಿಹಾನೇಃ ॥೭೮॥

ಎಂಬ ಶ್ಲೋಕವು ಇಲ್ಲಿ ಆವಶ್ಯವಾಗಿದೆ. ಇದನ್ನು ನಮ್ಮಲ್ಲಿರುವ ವ್ಯಾಸಾಚಲೀಯದಲ್ಲಿ ಯಾರೋ ಕೈಬಿಟ್ಟಿರುವಂತೆ ಕಾಣುತ್ತದೆ. ಏಕೆಂದರೆ ಸಂನ್ಯಾಸಗೃಹ್ಯಸೂತ್ರಕ್ಕನುಸಾರವಾಗಿ ಎಲ್ಲಾ ಕರ್ಮಗಳನ್ನೂ ಸರಿಯಾಗಿ ಮಾಡಿಸಿ ಆ ಮುಂಡನನಿಗೆ ಸಕಲಸಂಸಾರನಾಶವನ್ನು ಸೂಚಿಸುವ 'ತತ್ತ್ವಮಸಿ' ಎಂಬ ಒಂದಾನೊಂದು ವಾಕ್ಯವನ್ನು ಕಿವಿಯಲ್ಲಿ ಶಂಕರಗುರುಗಳು ಉಪದೇಶಿಸಿದರು– ಎಂಬುದು ಶ್ಲೋಕದ ಅರ್ಥ. ಈ ಶ್ಲೋಕವಿದ್ದರೇ ಇದರ ಮುಂದಿರುವ

ಸಂನ್ಯಾಸಪೂರ್ವಂ ವಿಧಿವದ್ಭಿಕ್ಷೇ
ಪಶ್ಚಾದುಪಾದಿಕ್ಷದಥಾತ್ಮತತ್ತ್ವಮ್ ।
ಆಚಾರ್ಯವರ್ಯಃ ಶ್ರುತಿಮಸ್ತಕಸ್ಥಂ
ತದಾದಿವಾಕ್ಯಂ ಪುನರಾಬಭಾಷೇ ॥ (ಮಾ.ಶಂ. ೧೧–೭೬, ವ್ಯಾ.ಶಂ. ೬–೧೦೪)

"ಸಂನ್ಯಾಸಪೂರ್ವಕವಾಗಿ ಯಥಾವಿಧಿಯಾಗಿ ಮುಂಡನನು ಭಿಕ್ಷಾಟನೆಮಾಡಿದನು; ಆಮೇಲೆ ಆಚಾರ್ಯಶ್ರೇಷ್ಠರು ಆ ತತ್ತ್ವವನ್ನು ಉಪದೇಶಿಸಿದರು, ತತ್ತ್ವಮಸಿ ವಾಕ್ಯವನ್ನು ಮತ್ತೆ ಅರ್ಥಸಹಿತವಾಗಿ ಹೇಳಿದರು" ಎಂಬ ಶ್ಲೋಕವು ಹೊಂದುಗಡೆಯಾಗುವದು. ಮೊದಲು ವಾಕ್ಯವನ್ನುಮಾತ್ರ ಉಪದೇಶಿಸಿದ್ದರೆ, ಆ ಬಳಿಕ ವಾಕ್ಯಾರ್ಥವನ್ನು ಹೇಳಿದರು–ಎಂಬ ಅಭಿಪ್ರಾಯವು ಹೊಂದುವದು. ಆಗ 'ಪುನರಾಬಭಾಷೇ' ಎಂಬಲ್ಲಿ ಪುನಃಶಬ್ದಕ್ಕೆ ಸ್ವಾರಸ್ಯವೂ ಬಂದಂತಾಗುವದು.

ಮೇಲೆ ಹೇಳಿದಂತೆ 'ಸ ವಿಶ್ವರೂಪೋ' ಎಂಬ ವಾಕ್ಯವನ್ನು ಈಚೆಗೆ ಯಾರೋ ಸೇರಿಸಿದರೋ ಅಥವಾ ಮಾಧವಕವಿಯೇ ಇವನ್ನು ಪ್ರಾಚೀನ ವ್ಯಾಸಾಚಲಶಂಕರಜಯ'ದಿಂದ ಸೇರಿಸಿಕೊಂಡಿದಾನೋ ಈಗ ನಿಶ್ಚಯಿಸುವಷ್ಟು ಕ್ಯಾಗುನವಿಲ್ಲ. ವ್ಯಾಸಾಚಲೀಯದ ಎಷ್ಟೋ ಶ್ಲೋಕಗಳು ಮಾಧವೀಯದಲ್ಲಿವೆ. ಪ್ರಕೃತದಲ್ಲಿಯೂ ಮುಂದೆ ಹೇಳುವ ಉಪದೇಶಶ್ಲೋಕಗಳೂ ವ್ಯಾಸಾಚಲೀಯವೇ ಆಗಿವೆ. ಹಾಗೆ ತಾನು ಉದ್ದೇಶಪೂರ್ವಕವಾಗಿಯೇ ಹಿಂದಿನವರ ಶ್ಲೋಕಗಳನ್ನು ತನ್ನ ದಾಕ್ಯವಲ್ಲಿ ಸೇರಿಸಿಕೊಂಡಿರುವದಾಗಿ ಈ ಗ್ರಂಥಕರ್ತನೇ ಬಾಯಿಬಿಟ್ಟು ಹೇಳಿರುತ್ತಾನೆ :

ಯಥಾತಿರುಚ್ಯೇ ಮಧುರೇಽಪಿ ರುಚ್ಯುತ್ಪಾದಾಯ ರುಚ್ಯಾಸ್ತರಯೋಜನಾರ್ಹಾ ।
ತಥೇಷ್ಯತಾಂ ಪ್ರಾಕ್ಕವಿಹೃದ್ಯಪದ್ಯೇಷ್ವೇಷಾಪಿ ಮತ್ಪದ್ಯನಿವೇಶಭಙ್ಗೀ [

(ಮಾ. ಶಂ. ೧–೩)

'ಹೇಗೆ ಅತಿರುಚಿಯಾಗಿರುವ ಮಧುರಪದಾರ್ಥದಲ್ಲಿಯೂ ಸವಿಯನ್ನುಂಟುಮಾಡವಕ್ಕಾಗಿ ಮತ್ತೊಂದು ರುಚಿಯನ್ನು ಸೇರಿಸುವದು ಯೋಗ್ಯವಾಗಿರುವದೋ, ಹಾಗೆಯೇ ಹಿಂದಿನ ಕವಿಗಳ ಮನೋಹರಪರವಾದ ಪದ್ಯಗಳಲ್ಲಿಯೂ ನನ್ನ ಪದ್ಯಗಳನ್ನು ಸೇರಿಸಿರುವ ರೀತಿಯನ್ನು ತಿಳಿಯಬೇಕು" ಎಂಬುದು ಶ್ಲೋಕದ ಅರ್ಥ. ಈ ದೃಷ್ಟಿಯಿಂದ ನೋಡಿದರೆ ಮಾಧವನು ಪ್ರಕೃತಶ್ಲೋಕಗಳನ್ನೆಲ್ಲ 'ಪ್ರಾಚೀನವ್ಯಾಸಾಚಲಶಂಕರವಿಜಯ'ದಿಂದ ತೆಗೆದುಕೊಂಡಿರುತ್ತಾನೆ; ಆದರೆ ಆದರಲ್ಲಿ ಶಾರದೆಯ ಪರಾಜಯದ ಕಥೆಯಿಲ್ಲದಿದ್ದ ಕಾರಣ ಈ ಎರಡು ಪದ್ಯಗಳ ಸೇರುವಿಕೆಯು ಇಲ್ಲಿ ಹೊಂದುಗೆಯಾಗಲಿಲ್ಲ–ಎನ್ನಬೇಕಾಗುತ್ತದೆ.

ತತ್ತ್ವಮಸಿವಾಕ್ಯ

೧೨೬. ಆಚಾರ್ಯರು 'ತತ್ತ್ವಮಸಿ' ಎಂಬ ಒಂದಾನೊಂದು ವಾಕ್ಯವನ್ನು ಮುಂಡನನ ಕಿವಿಯಲ್ಲಿ ಉಪದೇಶಮಾಡಿದರು– (ಕರ್ಣೇ ಜಗೌ ಕಿಮಪಿ ತತ್ತ್ವಮಸೀತಿ ವಾಕ್ಯಮ್) ಎಂಬ ಮಾತನ್ನು ಲಕ್ಷಿಸತಕ್ಕದ್ದಿದೆ ಹಿಂದೆ ಆಚಾರ್ಯರಿಗೆ ಗೋವಿಂದಭಗವತ್ಪಾದರು ನಾಲ್ಕು ವೇದಾಂತವಾಕ್ಯಗಳಿಂದ ಬ್ರಹ್ಮತತ್ತ್ವವನ್ನು ಉಪದೇಶಿಸಿದರು (ಬ್ರಹ್ಮತಾಮುಪದಿದೇಶ ಚತುರ್ಭಿರ್ವೇದ ಶೇಖರವಚೋಭಿಃ ಮಾ. ಶಂ, ೫–೧೦೩) ಎಂದು ಹೇಳಿದ ಮಾಧವನೇ ಇಲ್ಲಿ 'ತತ್ತ್ವಮಸಿ'ಎಂಬ ಒಂದೇ ವಾಕ್ಯವನ್ನು ಉಪದೇಶಿಸಿದರೆಂದು ಹೇಳಲು ಕಾರಣವೇನು ? ಮುಂದೆಯೂ ಈ ವಾಕ್ಯದ ಅರ್ಥವನ್ನೇ ವಿವರಿಸಿ ಹೇಳಿರುತ್ತದೆ. ಇದರಲ್ಲಿ ಏನೋ ರಹಸ್ಯವಿರಬೇಕೆಂದು ತೋರುತ್ತದೆ. ತತ್ತ್ವಮಸ್ಯಾದಿಮಹಾವಾಕ್ಯಗಳ ವಿಷಯವಾಗಿ ನಾವು ಹಿಂದೆ (ಖಂ. ೬೭) ಹೇಳಿರುವದನ್ನು ಇಲ್ಲಿ ಮನದಂದರೆ ಇಲ್ಲಯೂ "ತತ್ತ್ವಮಸಿ" ಎಂಬ ವಾಕ್ಯವನ್ನು ಮಂತ್ರದಂತೆ ಉಪದೇಶಿಸಿದ್ದು ಸರಿಯೆ ?–ಎಂಬ ಶಂಕೆ ಎದ್ದುಕೊಳ್ಳುವದು ನಿಶ್ಚಯ.

ತತ್ತ್ವಮಸಿವಾಕ್ಯಾರ್ಥ

೧೨೩. ಆಚಾರ್ಯರು ಸುರೇಶ್ವರಾಚಾರ್ಯರಿಗೆ ಮಾಡಿದ ಉಪದೇಶವು ಮುಖ್ಯವಾಗಿ 'ತತ್ತ್ವಮಸಿ' ವಾಕ್ಯದ ಅರ್ಥದ ವಿವರಣೆಯಾಗಿರುತ್ತದೆ. ಈ ವಿವರಣೆಯು ಮಾಧವೀಯಕ್ಕೂ ವ್ಯಾಸಾಚಲೀಯಕ್ಕೂ ಸಮಾನವಾಗಿದೆ. 'ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಪ್ರಾಣ– ಇವು ಯಾವವೂ ನೀನಲ್ಲ, ಇವುಗಳೆಲ್ಲಕ್ಕಿಂತ ವ್ಯತಿರಿಕ್ತನಾದ ಆತ್ಮನೇ. ತತ್ತ್ವಮಸಿವಾಕ್ಯದಲ್ಲಿ ತ್ವಂ ಶಬ್ದವಾಚ್ಯನಾಗಿರುವವನು ಜೀವನು; ಜಗತ್ಕಾರಣವಾದ ಬ್ರಹ್ಮವೇ ತತ್ಪದ ವಾಚ್ಯವು. ಅವೆರಡಕ್ಕೂ ಈ ವಾಕ್ಯದಲ್ಲಿ ಐಕ್ಯವನ್ನು ಹೇಳಿರುತ್ತದೆ 'ಸರ್ವಜ್ಞ, ಅಜ್ಞ–ಈ ಇಬ್ಬರಿಗೂ ಐಕ್ಯವನ್ನು ವಾಕ್ಯವು ಹೇಳುತ್ತದೆ ಎಂದು ಹೇಗೆತಾನೆ ಹೇಳಲಾದೀತು? ತಮಃಪ್ರಕಾಶಗಳಿಗೆ ಏಕತ್ವವು ಎಲ್ಲಿಯೂ ಕಂಡಿಲ್ಲವಲ್ಲ?– ಎಂದೆ ವಾಚ್ಯಾರ್ಥವನ್ನು ತೆಗೆದುಕೊಂಡರೆ ಹೀಗೆಯೇ ಸರಿ; ಆದರೆ ಆವನೇ ಈ ಮನುಷ್ಯನು– ಎಂಬ ವಾಕ್ಯದಲ್ಲಿರುವಂತೆ ವಿರುದ್ಧಾಂಶಗಳನ್ನು ಬಿಟ್ಟು ಅವಿರುದ್ಧಾಂಶಕ್ಕೆ ಏಕತ್ವವನ್ನು ಲಕ್ಷಣೆಯಿಂದ ಹೇಳುವದರಲ್ಲಿ ಯಾವ ವಿರೋಧವೂ ಇಲ್ಲ. ಆದ್ದರಿಂದ ದೇಹಾದಿಗಳಲ್ಲಿ ನಾನು ಎಂಬ ಬುದ್ಧಿಯನ್ನು ಬಿಡು. ಜಾಗ್ರದಾದ್ಯವಸ್ಥೆಗಳಲ್ಲಿ ಆತ್ಮನು ಅನುಗತನಾಗಿರುವಲ್ಲಿ ಒಂದನ್ನೊಂದು ಬಿಟ್ಟು ಹೋಗುವ ಬುದ್ಧ್ಯಾದಿಗಳು– ರಜ್ಜುವಿನ ಇದಮಂಶದಲ್ಲಿ ಕಲ್ಪಿತವಾಗಿರುವ ನೆಲದ ಬಿರುಕು, ಹಾವು, ಕೋಲು– ಮುಂತಾದವುಗಳಂತೆ ತುರೀಯನಾಗಿರುವ ನಿನ್ನಲ್ಲಿ ಕಲ್ಪಿತವಾಗಿರುತ್ತವೆ. ಅಂಥ ನಿರ್ಭಯವಾದ ನೀನೇ ಬ್ರಹ್ಮವೆಂದು ತಿಳಿದುಕೊ; ಮುನ್ನಿನಂತೆ ಭ್ರಾಂತನಾಗದಿರು. ಈ ಪ್ರತ್ಯಕ್ತತ್ವವು ಜ್ಞಾನಿಗೆ ತೀರ ಹತ್ತಿರ, ಅಜ್ಞಾನಿಗೆ ಬಲುದೂರ. ಒಳಗೂ ಹೊರಗೂ ಇರುವ ಈ ಜೈತನ್ಯವನ್ನು ಅಜ್ಞರು ಹುಡುಕುತ್ತಿರುವರಲ್ಲ! (ಮಾ. ಶಂ. ೧೦–೭೭ರಿಂದ ೯೨, ವ್ಯಾ. ಶಂ. ೭–೧೫ರಿಂದ ೧೬) ಪರಿಪಕ್ವಬುದ್ಧಿಯುಳ್ಳವನಿಗೆ ವಾಕ್ಯವು ಒಂದು ಸಲ ಶ್ರವಣಮಾಡಿದಮಾತ್ರದಿಂದ ಜ್ಞಾನವನ್ನುಂಟುಮಾಡಿಬಿಡುತ್ತದೆ; ಮುಂದಮುತಿಯಾದವನಿಗೆ ಮೆಲ್ಲುಮೆಲ್ಲಗೆ ಗುರುಪ್ರಸಾದಸೇವೆ, ಪ್ರಣವಾಭ್ಯಾಸ–ಮುಂತಾದವುಗಳಿಂದ ಮನೋಮಾಲಿನ್ಯವು ಹೋಗುತ್ತದೆ; ಆದ್ದರಿಂದ ಗುರ್ವಾಜ್ಞೆಯನ್ನು ನಡೆಯಿಸುತ್ತಿರಬೇಕು' (ಮಾ.ಶಂ. ೧೦–೯೫ರಿಂದ ೧೦೨) ಎಂದು ಆಚಾರ್ಯರು ಉಪದೇಶಿಸಿದರು. ಮಂಡನನು 'ತಮ್ಮ ಉಪದೇಶದಿಂದ ಅಜ್ಞಾನವನ್ನು ಕಳೆದುಕೊಂಡು ಧನ್ಯನಾದೆನು' ಎಂದು ಆವರ ಚರಣಗಳಿಗೆ ನಮಸ್ಕಾರಮಾಡಿದನು. ಅವರು ಅವನಿಗೆ ಸುರೇಶ್ವರನೆಂಬ ಹೆಸರನ್ನು ಇಟ್ಟು ಮುಖ್ಯಶಿಷ್ಯನನ್ನಾಗಿ ಪರಿಗ್ರಹಿಸಿಕೊಂಡರು (ಮಾ.ಶಂ. ೧೦–೧೦೩, ೧೦೪; ವ್ಯಾ.ಶಂ. ೭–೧೯, ೨೦).

ಮಾಧವನ– ಅಥವಾ ವ್ಯಾಸಾಚಲೀಯವೇ ಮೂಲವಾಗಿದ್ದರೆ ಆ ಗ್ರಂಥ ಕರ್ತೃವಿನ– ವೇದಾಂತಸಿದ್ಧಾಂತದ ಪರಿಚಯವು ಎಷ್ಟು ಹೆಚ್ಚಿನ ಮಟ್ಟದ್ದೆಂಬುದು ಇಲ್ಲಿ ನನುಗೆ ಗೊತ್ತಾಗುತ್ತದೆ. ಆತನು ಹಿಂದೆ ಶಿಷ್ಯರ ಗಾನದ ಮೂಲಕವಾಗಿ ಪರಮಾತ್ಮಸ್ವರೂಪವನ್ನು ವರ್ಣಿಸಿ 'ಅದೇ ನೀನು' ಎಂದು ತತ್ತ್ವಮಸಿವಾಕ್ಯದ ಅರ್ಥವನ್ನು ವಿವಿಧವೇದಾಂತವಾಕ್ಯಗಳ ಆಧಾರದಿಂದ ತಿಳಿಯ ಹೇಳಿದ್ದನು ; ಈಗ ತತ್ ತ್ವಂಪದಗಳ ಅರ್ಥವನ್ನು ಶೋಧನಮಾಡುವ ರೀತಿಯಿಂದ ಯುಕ್ತಿಪ್ರಧಾನವಾಗಿ ಇಲ್ಲಿ ಅದನ್ನು ತಿಳಿಸಿರುತ್ತಾನೆ. ವಾಕ್ಯಶ್ರವಣವನ್ನು ಒಂದು ಸಲ ಮಾತ್ರವಿರೂ ಉತ್ತಮಾಧಿಕಾರಿಗಳಿಗೆ ಜ್ಞಾನವಾಗಿಬಿಡುತ್ತದೆ ಎಂಬ ಆಚಾರ್ಯರ ಮತವನ್ನು ಇಲ್ಲಿ ಸ್ಫುಟವಾಗಿ ವರ್ಣಿಸಿರುತ್ತಾನೆ. 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ– ಎಂಬ ಸ್ಮೃತಿವಚನವನ್ನು ಸಾಧನವಾಗಿ ತಿಳಿಸಿರುತ್ತಾನೆ.

ತತ್ತ್ವಂಪದಗಳ ಅರ್ಥವನ್ನು ಆಚಾರ್ಯರು ಭಾಷ್ಯದಲ್ಲಿ ವಿಂಗಡಿಸಿ ಜೋಡಿರುವ ಕ್ರಮವನ್ನು ಇಲ್ಲಿ ವಾಚಕರ ಮುಂದೆ ಇಡುವದು ಆವಶ್ಯವಾಗಿರುತ್ತದೆ. ಸೂತ್ರಭಾಷ್ಯ(೪–೧–೩)ದಲ್ಲಿ ಅವರು ಹೀಗೆಂದಿರುತ್ತಾರೆ: "ತತ್ಪದದಿಂದ ಅಲೋಚನೆಮಾಡುವ ಜಗತ್ತಿನ ಜನ್ಮಾದಿಗಳಿಗೆ ಕಾರಣವಾಗಿರುವ ಪ್ರಕೃತವಾದ ಸದ್ಬ್ರಹ್ಮವು ಉಕ್ತವಾಗಿದೆ. 'ಸತ್ಯಂ ಜ್ಞಾನಮನಂತಂ ಬ್ರಹ್ಮ', 'ವಿಜ್ಞಾನಮಾನಂದಂ ಬ್ರಹ್ಮ', 'ಅದೃಷ್ಟಂ ದ್ರಷ್ಟೃ....ಅವಿಜ್ಞಾತೇಂ ವಿಜ್ಞಾತೃ', 'ಅಜಮಜರಮಮರಮ್', 'ಅಸ್ಥೂಲಮನಣ್ವಹ್ರಸ್ವಮದೀರ್ಘಮ್'– ಮುಂತಾದ ಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಬ್ರಹ್ಮವೇ ಇದು. ಇಲ್ಲಿ ಅಜಾದಿಶಬ್ದಗಳು ಜನ್ಮವೇ ಮುಂತಾದ ಭಾವವಿಕಾರಗಳನ್ನು ತೊಲಗಿಸುತ್ತವೆ ; ಅಸ್ಥೂಲಾದಿಶಬ್ದಗಳು ಸ್ಥೂಲತ್ವವೇ ಮುಂತಾದ ದೃಶ್ಯಧರ್ಮಗಳನ್ನು ತೊಲಗಿಸುತ್ತವೆ. ವಿಜ್ಞಾನಾದಿಶಬ್ದಗಳು ಅದು ಚೈತನ್ಯಪ್ರಕಾಶಸ್ವರೂಪವೆಂದು ಹೇಳುತ್ತವೆ. ಯಾವ ಸಂಸಾರಧರ್ಮವೂ ಇಲ್ಲದ–ಅನುಭವಾತ್ಮಕವಾದ ಈ ಬ್ರಹ್ಮವೆಂಬ ಹೆಸರುಳ್ಳದ್ದೇ ತತ್ಪದಾರ್ಥವೆಂದು ವೇದಾಂತಾಭಿಯುಕ್ತರಲ್ಲಿ ಪ್ರಸಿದ್ಧವಾಗಿರುತ್ತದೆ. ಹಾಗೆಯೇ ತ್ವಂಪದಾರ್ಥವೂ ಶ್ರೋತೃವಿನ ಸ್ವರೂಪವು; ಇದೇ ನನ್ನ ಆತ್ಮನೆಂದು ಸಂಭಾವಿತವಾಗಿರುವ ದೇಹಾದಿಗಳನ್ನು ಅಲ್ಲಗಳೆದು ಚೈತನ್ಯವೇ ಎಂದು ಕೊನೆಯಲ್ಲಿ ಅದನ್ನು ನಿಶ್ಚಯಿಸಲಾಗುತ್ತದೆ. ಈ ಪದಾರ್ಥಗಳು ಯಾರಿಗೆ ಅಜ್ಞಾನಸಂಶಯವಿಪರ್ಯಯಗಳೆಂಬ ಪ್ರತಿಬಂಧಕದಿಂದ ತಿಳಿಯದೆಇರುವವೋ ಅವರಿಗೆ 'ತತ್ತ್ವಮಸಿ' ಎಂಬ ವಾಕ್ಯವು ತನ್ನ ಅರ್ಥವನ್ನು ಇದ್ದದ್ದು ಇದ್ದಂತೆ ತಿಳಿಸಲಾರದು. ಏಕೆಂದರೆ ಪದಾರ್ಥಜ್ಞಾನಪೂರ್ವಕವಾಗಿಯೇ ವಾಕ್ಯಾರ್ಥಜ್ಞಾನವು ಆಗಬೇಕಾಗಿರುತ್ತದೆ. ಆದ್ದರಿಂದ ಅವರು ಪದಾರ್ಥವಿವೇಕಕ್ಕಾಗಿ ಶಾಸ್ತ್ರಯುಕ್ತ್ಯಭ್ಯಾಸವನ್ನು ಮಾಡಬೇಕು– ಆದರೆ ಯಾವ ನಿಪುಣಮತಿಗಳಿಗೆ ಅಜ್ಞಾನಸಂಶಯವಿಪರ್ಯಯಗಳೆಂಬ ಪದಾರ್ಥ

ವಿಷಯದ ಪ್ರತಿಬಂಧವು ಇರವದಿಲ್ಲವೋ ಆವರು ತತ್ತ್ವಮಸಿವಾಕ್ಯಾರ್ಥವನ್ನು ಒಮ್ಮಸಲ ಹೇಳಿದರೂ ಅನುಭವಕ್ಕೆ ತಂದುಕೊಳ್ಳುತ್ತಾರೆ. ಆಪ್ಪಿಂದ ಆವರಿಗೆ ಅವೃತ್ತಿಯು ವ್ಯರ್ಥವು."

ಈ ಭಾಷ್ಯವು ವಿಸ್ತಾರವಾಗಿದ್ದರೂ ಇಲ್ಲಿ ಇದನ್ನು ಕನ್ನಡಿಸಿ ಬರೆದಿರುವ ದೇಕೆಂದರೆ ಪದಾರ್ಥಗಳನ್ನು ಶೋಧನೆಮಾಡಿದ ಬಳಿಕ ತತ್ತ್ವಂಪದಾರ್ಥಗಳ ಐಕ್ಯಕ್ಕೆ ಯಾವ ಅಡ್ಡಿಯೂ ಇರುವದಿಲ್ಲವೆಂದು ತಿಳಿಸುವದಕ್ಕೆ. ಮಾಧವೀಯದಲ್ಲಿ ದೇಹಾದಿಗಳನ್ನು ಅನಾತ್ಮವೆಂದು ಅಲ್ಲಗಳೆದಮೇಲೂ 'ಸರ್ವಜ್ಞ, ಅಜ್ಞ– ಇವರುಗಳಿಗೆ ಐಕ್ಯವು ಹೇಗೆ?' ಎಂಬ ಶಂಕೆಯನ್ನು ತೆಗೆದಿರುವದೂ ಅಲ್ಲಿ 'ಅವನೇ ಈ ಪುರುಷನು' ಎಂಬಂತೆ ಲಕ್ಷ್ಯಾರ್ಥವನ್ನು ತೆಗೆದುಕೊಳ್ಳಬೇಕೆಂದು ಹೇಳಿರುವದೂ ಸರಿಯಾಗುವದಿಲ್ಲ. ತತ್ತ್ವಮಸಿವಾಕ್ಯದ ಪದಗಳಿಗೆ ಹೀಗೆ ಜಹದಜಹಲ್ಲಕ್ಷಣೆಯನ್ನು ಹೇಳುವ ಪದ್ಧತಿಯೂ 'ಅವನೇ ಇವನು' ಎಂಬ ವಾಕ್ಯದ ಉದಾಹರಣೆಯನ್ನು ಕೊಡುವ ಪದ್ಧತಿಯೂ ಈಚಿನ ವೇದಾಂತಪ್ರಕರಣಗಳಲ್ಲಿ ಬಹಳವಾಗಿ ರೂಢಿಯಲ್ಲಿರುವದರಿಂದ ಅದರ ವಾಸನೆಯಿಂದ ವಾಸಿತನಾಗಿರುವ ಕವಿಯು ಅನವಶ್ಯವಾದಕಡೆಯಲ್ಲಿಯೂ ಅದನ್ನು ಕೊಟ್ಟಿರುತ್ತಾನೆ.

ಆಚಾರ್ಯರು ತತ್ತ್ವಮಸಿವಾಕ್ಯಕ್ಕೆ ಇನ್ನೊಂದು ಬಗೆಯಿಂದಲೂ ಅರ್ಥವನ್ನು ಬರೆದಿರುವದುಂಟು. ಉದಾಹರಣೆಗೆ ಉಪದೇಶಸಾಹಸ್ರಿಯಲ್ಲಿ 'ಸಿದ್ಧಾದೇನಾಹಮಿತ್ಯಸ್ಮಾದ್ಯುಷ್ಮದ್ಧರ್ಮೋ ನಿಷಿಧ್ಯತೇ | ರಜ್ಜ್ವಾವಿವಾಹಿಧೀರ್ಯುಕ್ತ್ಯಾ ತತ್ತ್ವಮಸ್ಯಾದಿಶಾಸನೈಃ' (ಉಪ. ೧೪-೪) ಹಗ್ಗದಲ್ಲಿ ಹಾವು ಎಂಬ ಬುದ್ಧಿಯನ್ನು ಹೇಗೆ ಯುಕ್ತಿಯಿಂದ ಅಲ್ಲಗಳೆಯುವರೋ ಹಾಗೆಯೇ ಅಹಮ್ (ನಾನು)ಎಂಬ ಆತ್ಮವಸ್ತುವು ಸ್ವತಃಸಿದ್ಧವಾಗಿರುವಲ್ಲಿ ವಿಷಯವಾಗಿರುವ ಅಹಂಕಾರವೇ ಮುಂತಾದ ಅನಾತ್ಮಗಳನ್ನು ವಿವೇಚಿಸಿ ಯುಕ್ತಿಯಿಂದ ಅಲ್ಲಗಳೆಯುವದೇ 'ತತ್ತ್ವಮಸಿ' ಮುಂತಾದ ವಚನಗಳ ಕೃತ್ಯವು– ಎಂದು ಶ್ಲೋಕದ ಅರ್ಥ. ತ್ವಂಪದಾರ್ಥಶೋಧನೆಯಲ್ಲಿ ಈ ರಹಸ್ಯವಿದೆ ಎಂಬುದನ್ನು ಈಚಿನ ವೇದಾಂತಗ್ರಂಥಗಳಲ್ಲಿ ಹೇಳುವ ವಾಡಿಕೆಯಿಲ್ಲ. ಪ್ರಕೃತ ಮಾಧವೀಯ ವಿಚಾರಕ್ಕೆ ಇದು ಸಂಬಂಧ್ವಾಗದೆ ಇದ್ದರೂ ಆಚಾರ್ಯರ ಉಪದೇಶಕ್ರಮ ವ್ಯಾಖ್ಯಾನಪ್ರಸ್ಥಾನಗಳ ಕ್ರಮಕ್ಕೂ ಇರುವ ವೈಲಕ್ಷಣ್ಯವನ್ನು ತಿಳಿಸುವ ಪ್ರಸಕ್ತಿಯಿಂದ ಇವನ್ನು ಇಲ್ಲಿ ಹೇಳಬೇಕಾಯಿತು.

---

೧೨. ದಕ್ಷಿಣಕ್ಕೆ ಪ್ರಯಾಣ

ಕಾಪಾಲಿಕರನ್ನು ಜಯಿಸಿದ್ದು

೧೨೪. ಆಚಾರ್ಯರು ಮಂಡನನನ್ನು ವಾದದಲ್ಲಿ ಸೋಲಿಸಿದ ಬಳಿಕ ದಕ್ಷಿಣದಿಕ್ಕಿಗೆ ಹೊರಟರು. ಅಲ್ಲಿ ಮಹಾರಾಷ್ಟ್ರವೇ ಮುಂತಾದ ದೇಶಗಳಲ್ಲಿ ಗ್ರಂಥಪ್ರಚಾರವನ್ನು ಮಾಡುತ್ತಾ ಮತಾಂತರಗಳನ್ನು ಖಂಡಿಸುತ್ತಾ ಕಾಲಕ್ರಮದಲ್ಲಿ ಶ್ರೀಶೈಲಕ್ಕೆ ಬಂದರು. ಅಲ್ಲಿ ಪಾತಾಳಗಂಗೆಯಲ್ಲಿ ಸ್ನಾನಮಾಡಿ ಭ್ರಮರಾಂಬಾಸಹಿತನಾದ ಮಲ್ಲಿಕಾರ್ಜುನನ ದರ್ಶನವನ್ನು ಮಾಡಿದರು. ಅವರ ಶಿಷ್ಯರಾದ ಸುರೇಶ್ವರಾಚಾರ್ಯರೇ ಮೊದಲಾದವರು ಪಾಶುಪತ, ವೈಷ್ಣವ, ವೀರಶೈವ, ಮಾಹೇಶ್ವರ-ಮುಂತಾದ ಮತದವರನ್ನು ಖಂಡಿಸಿದರು. ಆ ಮತಾಂತರದವರಲ್ಲಿ ಕೆಲವರು ಇವರ ಶಿಷ್ಯರಾದರು; ಇನ್ನು ಕೆಲವರು ಇವರ ಸಾವನ್ನೇ ನಿರೀಕ್ಷಿಸುತ್ತಾ ಕಾಲಹರಣವನ್ನು ಮಾಡುತ್ತಿದ್ದರು (ಮಾ.ಶಂ. ೧೦-೧೦೭ರಿಂದ ೧೧೬).

ಅಲ್ಲಿ ಒಮ್ಮೆ ಉಗ್ರಭೈರವನೆಂಬ ಒಬ್ಬ ಸಾಧುವೇಷಧಾರಿಯಾದ ಭೈರವನು ಬಂದು 'ಸ್ವಾಮಿ, ತಮ್ಮಂಥ ಲೋಕೋಪಕಾರಿಗಳನ್ನು ನಾನು ಎಲ್ಲಿಯೂ ಕಾಣಲಿಲ್ಲ; ತಮ್ಮ ಸಾರ್ವಜ್ಞ್ಯ, ಸೌಶೀಲ್ಯ, ದಯಾಳುತ್ವ-ಮುಂತಾದ ಗುಣಗಳನ್ನು ಕೇಳಿಯೇ ತಮ್ಮಲ್ಲಿಗೆ ಬಂದಿರುತ್ತೇನೆ. ತಮ್ಮಿಂದ ನನಗೆ ಒಂದು ಮಹಾಕಾರ್ಯವಾಗಬೇಕಂಗಿದೆ. ಶಿವನನ್ನು ತಪಸ್ಸಿನಿಂದ ತುಷ್ಟಿಗೊಳಿಸಿ ಸಶರೀರನಾಗಿ ಕೈಲಾಸಕ್ಕೆ ಹೋಗಬೇಕೆಂಬ ನನ್ನ ಬಯಕೆಯನ್ನು ಸೂಚಿಸಿದೆನು. ಆ ಭೈರವೇಶ್ವರನು 'ಒಬ್ಬ ರಾಜನ ಶಿರಸ್ಸನ್ನಾಗಲಿ ಒಬ್ಬ ಸರ್ವಜ್ಞನ ಶಿರಸ್ಸನ್ನಾಗಲಿ ಹೋಮಮಾಡಿದರೆ ನಿನ್ನ ಇಷ್ಟಾರ್ಥವು ನೆರವೇರುವದು' ಎಂದು ಹೇಳಿರುತ್ತಾನೆ. ರಾಜನು ನನಗೆ ಸಿಕ್ಕುವದು ಕಷ್ಟ; ಸರ್ವಜ್ಞರಾದ ತಾವು ದೊರಕಿರುವದರಿಂದ ನನ್ನ ಕಾರ್ಯವು ಸಿದ್ಧಿಸುವ ಕಾಲವು ಬಂದಿದೆ. ಪರೋಪಕಾರಕ್ಕಾಗಿಯೇ ಮಹಾತ್ಮರು ದೇಹವನ್ನು ತ್ಯಾಗಮಾಡುತ್ತಾರಲ್ಲವೆ? ತಮ್ಮ ತಲೆಯನ್ನು ಕೊಟ್ಟರೆ ತಮಗೆ ಹೆಚ್ಚಿನ ಕೀರ್ತಿ ಬರುವದು. ನನಗೆ ಸಿದ್ಧಿಯ ಲಾಭವಾಗುವದು. ಶರೀರವು ನಶ್ವರವೆಂಬುದನ್ನು ತಾವು ಆಲೋಚಿಸಿ ತಮಗೆ ತಿಳಿದಂತೆ ಮಾಡಬಹುದು' ಎಂದು ಕೇಳಿಕೊಂಡನು. ಆಚಾರ್ಯರು 'ಅವಶ್ಯವಾಗಿ ಆಗಲಿ; ಆದರೆ ಇದು ನನ್ನ ಶಿಷ್ಯರಿಗೆ ತಿಳಿಯದಂತೆ ಆಗಬೇಕಾಗಿದೆ. ಆದ್ದರಿಂದ ಏಕಾಂತವಾಗಿ ಬಾ' ಎಂದರು. ಕಾಪಾಲಿಕನು ಸಮಯವನ್ನು ಸಾಧಿಸಿಕೊಂಡು ಬಂದನು.

—ಆಚಾರ್ಯರೂ ಧ್ಯಾನಾರೂಢರಾಗಿ ಹೊರಗಿನ ಭಾನವಿಲ್ಲದೆ ಕುಳಿತಿದ್ದರು. ಆದರೆ ಆವನು ಅವರ ತಲೆಯನ್ನು ಕಡಿಯುವದಕ್ಕೆ ತ್ರಿಶೂಲವನ್ನು ಎತ್ತುವ ಹೊತ್ತಿಗೆ ಸರಿಯಾಗಿ ಅಲ್ಲಿಗೆ ದೈವಿಕವಾಗಿ ಬಂದ ಪದ್ಮಪಾದರು ನೃಸಿಂಹೋಪಾಸಕರಾಗಿ ಮಂತ್ರಸಿದ್ಧರಾಗಿದ್ದದ್ದರಿಂದ ನೃಸಿಂಹಭಾವವನ್ನೇ ತಳೆದು ಹಿಂದೆ ಹಿರಣ್ಯಕಶಿಪುವಿನ ವಕ್ಷಸ್ಥಲವನ್ನು ಸೀಳಿದ್ದಂತೆ ಆ ಭೈರವನ ಎದೆಯನ್ನು ಸೀಳಿಬಿಟ್ಟರು. ಧ್ಯಾನದಿಂದ ಎಚ್ಚತ್ತ ಆಚಾರ್ಯರ್ಸ್ತೋತ್ರದಿಂದಲೇ ನರಸಿಂಹನು ಪ್ರಶಾಂತನಾದನು. ವಿಚಾರಿಸಿದ್ದರಲ್ಲಿ ಅಹೋಬಲಪರ್ವತದ ಬಳಿಯಲ್ಲಿ ಪದ್ಮಪಾದರಿಗೆ ನರಸಿಂಹನ ಪ್ರಸಾದವಾಗಿತ್ತೆಂದು ತಿಳಿಯಬಂದಿತು- ಎಂದು ಮಾಧವೀಯದ ಹನ್ನೊಂದನೆಯ ಸರ್ಗದಲ್ಲಿದೆ.

ಚಿದ್ವಿಲಾಸೀಯದಂತೆ ಆಚಾರ್ಯರು ಕಾಪಾಲಿಕರನ್ನು ಜಯಿಸಿದ್ದು ರಾವೇಶ್ವರದಲ್ಲಿ; ಅವರ ನಾಯಕನಿಗೆ ವಟುಕನಾಥ (ಚಿ. ಶಂ. ೨೭–೨೪) ನೆಂದು ಹೆಸರು. ಆಗ ಭೈರವನೇ ಪ್ರತ್ಯಕ್ಷನಾಗಿ ಆಚಾರ್ಯರ ಮತಕ್ಕೆ ಸಂಮತಿಯನ್ನು ಕೊಟ್ಟು ದುರ್ಮತಿಗಳನ್ನೆಲ್ಲ ಜಯಿಸೆಂದು ಹೇಳಿದನು (ಚಿ.ಶಂ.೨೭–೪೧, ೪೨). ಆನಂದಗಿರೀಯದಂತೆ ಆಚಾರ್ಯರು ಉಜ್ಜಯಿನಿಯಲ್ಲಿ ಕಾಪಾಲಿಕರನ್ನು ಗೆದ್ದರು ; ಅವರ ನಾಯಕನಿಗೂ ವಟುಕನಾಥನೆಂದೇ[1] ಹೆಸರು (ಆ. ಶಂ. ೨೩– ಪು. ೧೧೯, ೧೨೦ ; ದೇ. ೨೩– ಪು. ೧೦೫–೧೦೮).

ಕಾಪಾಲಿಕರನ್ನು ಆಚಾರ್ಯರು ಖಂಡಿಸಿದರೆ ?– ಎಂಬುದನ್ನು ನಿಶ್ಚಯಿಸುವದಕ್ಕೆ ನಮಗೆ ಸರಿಯಾದ ಇತಿಹಾಸದ ಆಧಾರವು ಯಾವದೂ ಇಲ್ಲ. ಶ್ರೀಶೈಲದಲ್ಲಿರುವ ಮಲ್ಲಿಕಾರ್ಜುನಲಿಂಗವು ಪ್ರಖ್ಯಾತವಾದ ದ್ವಾದಶಲಿಂಗಗಳಲ್ಲಿ ಒಂದು. ಅಲ್ಲಿ ಕಾಪಾಲಿಕರೂ ಬೌದ್ಧರೂ ತಾಂತ್ರಿಕರೂ ಇದ್ದರು ; ನಾಗಾರ್ಜುನನು ಅಲ್ಲಿಯೇ ಸಿದ್ಧಿಗಳನ್ನು ಪಡೆದುಕೊಂಡನಂತೆ. ಈ ಪರ್ವತದ ಎರಡೂ ಪಾರ್ಶ್ವಗಳಲ್ಲಿದ್ದದ್ದರಿಂದ 'ಪೂರ್ವಶೈಲೀಯ', 'ಅಪರಶೈಲೀಯ' ಎಂಬ ಬೌದ್ಧರ ಎರಡು ನಿಕಾಯ (ತೆಂಡ)ಗಳು ಉಂಟಾಗಿದ್ದವಂತೆ. ಕ್ರಿ.ಶ. 639ರಲ್ಲಿ ಚಾಲುಕ್ಯ ರಾಜನಾದ ಎರಡನೆಯ ಪುಲಿಕೇಶಿಯ ಮಗ ನಾಗವರ್ಧನನು ಕಪಾಲೇಶ್ವರನ ಪೂಜೆಗಾಗಿ ಅನೇಕ ಉಂಬಳಿಗಳನ್ನು ದಾನಮಾಡಿದ್ದನಂತೆ ಎಂಬರ್ಥದ ಶಿಲಾಶಾಸನವು ದೊರಕಿದೆ ಎಂದು ಬಲದೇವ ಉಪಾಧ್ಯಾಯರು (ಪು. ೯೦, ೯೧) ಹೇಳುತ್ತಾರೆ. 'ಕಡಿ' ಎಂಬ ಹೆಸರಿನ ಮಹಾರಾಷ್ಟ್ರ ಬ್ರಾಹ್ಮಣರು ಯಾತ್ರಿಕರನ್ನು ಪುಷ್ಟಿಕರವಾದ ಆಹಾರದಾನದಿಂದ ಕೊಬ್ಬಿಸಿ ನವರಾತ್ರಿಯಲ್ಲಿ ದೇವಿಗೆ ಬಲಿದಾನಕೊಡುತ್ತಾರೆಂಬ ಕಿಂವದಂತಿಯಿದೆಯೆಂದೂ ಈ ಕರಡಿಬ್ರಾಹ್ಮಣರಲ್ಲಿ ಒಬ್ಬನೇ ಪ್ರಕೃತದ ಉಗ್ರಭೈರವನಾಗಿರಬಹುದೆಂದೂ ಕೃಷ್ಣಸ್ವಾಮಿ ಅಯ್ಯ

1. ದೇ. ಪಾಠ ಪುಟ ೧೦೬ರಲ್ಲಿ ಕಾಪಾಲಿಕರ ನಾಯಕನ ಹೆಸರನ್ನು ವಟುಕ ಎಂದು ಹೇಳಿದೆ.

ಕನ್ನಡ (CNKS p. 56) ಊಹಿಸಿರುತ್ತಾರೆ. ಆದರೆ ಇದೂ ಕಲ್ಪನಾರಾಜ್ಯಕ್ಕೆ ಸೇರಿದ್ದೇ. ಭೈರವನಿಗೂ ದೇವೀ ಉಪಾಸಕರಿಗೂ ಇರುವ ಸಂಬಂಧವಿಷಯಕ್ಕೆ ನಮಗೆ ಯಾವ ಆಧಾರವೂ ದೊರೆತಿಲ್ಲ. ಪಾಶುಪತ, ವೈಷ್ಣವ, ವೀರಶೈವ, ಸೂಫೇಶ್ವರ– ಈ ಮತದವರನ್ನು ಶಂಕರರ ಶಿಷ್ಯರು ವಾದದಲ್ಲಿ ಪರಾಜಯಗೊಳಿಸಿದರೆಂದು ಮಾಧವೀಯದಲ್ಲಿದೆಯಷ್ಟೆ ? ಸೂತ್ರಭಾಷ್ಯದಲ್ಲಿ ವೀರಶೈವರನ್ನು ಬಿಟ್ಟು ಮಿಕ್ಕವರ ಪರಾಮರ್ಶವಿರುವದು ಕಂಡುಬರುತ್ತಿದೆ. ವೀರಶೈವರಲ್ಲಿ ಒಂದು ಪಂಗಡದವರು ತಮ್ಮ ಮತದ ಸ್ಥಾಪಕರಾದ ರೇಣುಕಸಿದ್ಧರು ಶಂಕರರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆಂಬ ಕಥೆಯನ್ನು ಹುಟ್ಟಿಸಿಕೊಂಡಿರುವದನ್ನು ಈ ಹಿಂದೆಯೇ (೭೨) ತಿಳಿಸಿರುತ್ತೇವೆ. ಆದರೂ ಶಂಕರಾಚಾರ್ಯರ ಅಥವಾ ಸುರೇಶ್ವರಾಚಾರ್ಯರ ಗ್ರಂಥಗಳಲ್ಲಿ ವೀರಶೈವಮತದ ಪರಾಮರ್ಶಗಂಧವೂ ಕಾಣಿಸುತ್ತಿಲ್ಲ. ಕಾಪಾಲಿಕರ ಮತದ ಪರಾಮರ್ಶವಂತೂ ಅಲ್ಲಿ ಇಲ್ಲವೇ ಇಲ್ಲ. ಹೀಗಿರುವದರಿಂದ ಆಚಾರ್ಯರು ಆ ಮತದವರನ್ನು ವಾದದಲ್ಲಿ ಜಯಿಸಿದರೆಂಬುದು ಯಥಾರ್ಥವೋ, ಮಾಧವಕವಿಯ ಕಲ್ಪನಾಮಾತ್ರವೋ ಹೇಳುವದಕ್ಕೆ ಬರುವಂತಿಲ್ಲ. ಕಾಪಾಲಿಕನ ಕಥೆಗೆ ಪದ್ಮಪಾದರ ನರಸಿಂಹಾವೇಶದ ಕಥಾನಕವನ್ನು ಗಂಟುಹಾಕಿರುವದನ್ನು ನೋಡಿದರೆ ಕಲ್ಪನಾಚತುರನಾದ ಮಾಧವನು ಈ ಆದ್ಭುತವೊಂದು ಆಚಾರ್ಯರ ಕಥೆಯಲ್ಲಿದ್ದರೆ ಅವರಿಗೆ ಕೀರ್ತಿದಾಯಕವೆಂದು ಎಣಿಸಿರಬಹುದೆಂದು ಹೇಳುವದಕ್ಕೂ ಬರುವಂತಿದೆ. ಈ ಕಥೆಯನ್ನು ತ್ರಿಸಂಧ್ಯದಲ್ಲಿಯೂ ಓದುವವರಿಗೆ ಅಪಮೃತ್ಯುನಾಶ, ಐಹಿಕಭೋಗಗಳು, ಅಂತ್ಯದಲ್ಲಿ ಮುಕ್ತಿ–ಎಂಬ ಫಲಗಳಾಗುವವೆಂದು ಆತನು ಫಲಶ್ರುತಿಯನ್ನೂ (ಮಾ. ಶಂ. ೧೧–೬೪) ಹೇಳಿರುತ್ತಾನೆ.

ಹಸ್ತಮಲಕಲಾಭ

೧೩೫. ಶ್ರೀಶೈಲದಿಂದ ಆಚಾರ್ಯರು ಗೋಕರ್ಣಕ್ಕೆ ಬಂದರು. ಅಲ್ಲಿ ಮಹಾಬಲೇಶ್ವರನನ್ನು ಸ್ತೋತ್ರಮಾಡಿ ಮೂರು ದಿನವಿದ್ದು ಹರಿಶಂಕರಕ್ಕೆ ಬಂದರು. ಅಲ್ಲಿ ಆಚಾರ್ಯರು ಮಾಡಿರುವ ಶಿವವಿಷ್ಣು–ಇಬ್ಬರಿಗೂ ಅನ್ವಯಿಸುವಂತಿರುವ ಕೆಲವು ಶ್ಲೋಕಗಳನ್ನು (ಮಾ. ಶಂ. ೧೨–೨೦ರಿಂದ ೧೯) ಮಾಧವನು ಕೊಟ್ಟಿರುತ್ತಾನೆ. ಅಲ್ಲಿಂದ ಮುಂದಕ್ಕೆ ಆಚಾರ್ಯರು ಮೂಕಾಂಬಿಕಾಸ್ಥಾನಕ್ಕೆ ಹೊರಟರು. ದಾರಿಯಲ್ಲಿ ದ್ವಿಜದಂಪತಿಗಳು ತಮಗಿದ್ದ ಒಂದೇ ಮಗು ಸತ್ತದ್ದಕ್ಕಾಗಿ ಶೋಕಿಸುತ್ತಿದ್ದರು. ಆಕಾಶವಾಣಿಯಿಂದ ಪ್ರೇರಿತರಾದ ಶಂಕರರು ಆ ಮಗುವನ್ನು ಬದುಕಿಸಿದರಂತೆ (೧೨–೨೪). ಮೂಕಾಂಬಿಕಾ ದೇವಾಲಯವನ್ನು ಸೇರಿ ದೇವಿಯನ್ನು ಸ್ತೋತ್ರಮಾಡಿ ಕೆಲವು ದಿನಗಳಾದ ಬಳಿಕ ಅಲ್ಲಿರುವ ಶ್ರೀಬಲಿ ಎಂಬ ಅಗ್ರಹಾರಕ್ಕೆ ಬಂದರು. ಅಲ್ಲಿ ಎರಡು ಸಾವಿರ ಅಗ್ನಿಹೋತ್ರಿಗಳಿದ್ದರಂತೆ.

ಆವಮೊಳಗೆ **ಪ್ರಭಾಕರ**ನೆಂಬ ಬ್ರಾಹ್ಮಣನಿದ್ದನು ಐಹಿಕಸಂಪತ್ತೆಲ್ಲವೂ ಇದ್ದರೂ ತನಗಿದ್ದ ಒಬ್ಬನೇ ಮಗನು ಹುಟ್ಟಿದಂದಿನಿಂದ ಮೂಕನಾಗಿದ್ದುದರಿಂದ ಆ ಬ್ರಾಹ್ಮಣನು ಶೋಕಾಕ್ರಾಂತನಾಗಿದ್ದನು. ಆಚಾರ್ಯರು ಶಿಷ್ಯಸಮೇತರಾಗಿ ಅಲ್ಲಿಗೆ ಬಂದದ್ದನ್ನು ಕೇಳಿ ಮಗನನ್ನು ಅವರ ಬಳಿಗೆ ಕರೆದುಕೊಂಡು ಬಂದು ಅವರ ಕಾಲಿಗೆ ಬೀಳಿಸಿದನು. ಶಂಕರರು ದಯೆಯಿಂದ ಅವನನ್ನು ಎಬ್ಬಿಸಿದರು. ತಂದೆಯು ಮಗನ ಸ್ಥಿತಿಯನ್ನು ವಿವರಿಸಿ ಹೇಳಿದನು. ಆಚಾರ್ಯರು 'ನೀನು ಯಾರಪ್ಪ ? ಏಕೆ ಜಡನಂತೆ ಆಚರಿಸುತ್ತಿದ್ದೀಯೆ ?' ಎಂದು ಕೇಳಲು 'ಗುರುವೆ, ನಾನು ಜಡನಲ್ಲ, ನನ್ನ ಸಂನಿಧಿಯಲ್ಲಿ ಜಡವು ತನ್ನ ವ್ಯಾಪಾರವನ್ನು ಮಾಡುತ್ತಿರುವದು. ಷಡೂರ್ಮಿಗಳೂ ಷಡ್ವಿಕಾರಗಳೂ ಇಲ್ಲದ ಆನಂದಸ್ವರೂಪವಾದ ಪರತತ್ತ್ವವೇ ನಾನು' (ಮಾ. ಶಂ. ೧೨-೫೫) ಎಂದು ಹನ್ನೆರಡು ಶ್ಲೋಕಗಳಿಂದ ಆತ್ಮತತ್ತ್ವದ ಸ್ವರೂಪವನ್ನು ವಿವರಿಸಿದನು.

ನಿಮಿತ್ತಂ ಮನಶ್ಚಕ್ಷುರಾದಿಪ್ರವೃತ್ತೌ
ನಿರಸ್ತಾಖಿಲೋಪಾಧಿರಾಕಾಶಕಲ್ಪಃ
ರವಿರ್ಯೋ.ಕಚೇಷ್ಟಾನಿಮಿತ್ತಂ ಯಥಾ ಯಃ
ಸ ನಿತ್ಯೋಪಲಬ್ಧಿಸ್ವರೂಪೋಽಹಮಾತ್ಮಾ ॥

'ಯಾವ ಉಪಾಧಿಯೂ ಇಲ್ಲದ ಆಕಾಶಕಲ್ಪನಾಗಿರುವ ಯಾವನು— ಸೂರ್ಯನು ಜನರ ವ್ಯವಹಾರಕ್ಕೆ ನಿಮಿತ್ತವಾಗಿರುವಂತೆ— ಮನಸ್ಸು, ಚಕ್ಷುಸ್ಸು-ಮುಂತಾದವುಗಳ ಪ್ರವೃತ್ತಿಗೆ ನಿಮಿತ್ತನಾಗಿರುವನೋ ಆ ನಿತ್ಯಚೈತನ್ಯಸ್ವರೂಪನಾದ ಆತ್ಮನೇ ನಾನು' ಎಂದು ಮುಂತಾದ 'ಸ ನಿತ್ಯೋಪಲಬ್ಧಿಸ್ವರೂಪೋಽಹಮಾತ್ಮಾ' ಎಂಬ ಪಲ್ಲವಿಯುಳ್ಳ ಹನ್ನೆರಡು ಶ್ಲೋಕಗಳು **'ಹಸ್ತಾಮಲಕೀಯ'** ಎಂಬ ಹೆಸರಿನ ಪ್ರಕರಣವೆಂದು ಪ್ರಸಿದ್ಧವಾಗಿರುತ್ತವೆ. ಪರಮಾತ್ಮತತ್ತ್ವವನ್ನು ಅಂಗೈನಲ್ಲಿಯಂತೆ ಇವು ತಿಳಿಸುವದರಿಂದ ಇವನ್ನು ಹೇಳಿದ ಆ ಮಹಾತ್ಮನಿಗೂ ಆ ಹೆಸರಾಯಿತು. ಆಚಾರ್ಯರು 'ಅಪ್ಪ, ಇವನು ಪೂರ್ವಜನ್ಮದಲ್ಲಿ ಯೋಗಿಯಾಗಿದ್ದು ಈಗ ನಿಮ್ಮ ಮಗನಾಗಿ ಹುಟ್ಟಿರುತ್ತಾನೆ. ಸಂಸಾರದಲ್ಲಿ ಅತ್ಯಂತ ವಿರಕ್ತನಾಗಿರುವದರಿಂದಲೇ ಹೀಗೆ ಮಾತನಾಡದೆ ಇರುತ್ತಾನೆ. ಇವನಿಂದ ನಿಮಗೇನೂ ಪ್ರಯೋಜನವಾಗಲಾರದು' ಎಂದು ತಂದೆತಾಯಿಗಳನ್ನು ಸಮಾಧಾನಗೊಳಿಸಿ ಅವರನ್ನು ಮನೆಗೆ ಕಳುಹಿಸಿಕೊಟ್ಟರು. **ಹಸ್ತಾಮಲಕರು** ಆಚಾರ್ಯರ ಶಿಷ್ಯಮಂಡಲಿಯಲ್ಲಿ ಸೇರಿಕೊಂಡರು.

ಆಚಾರ್ಯರು ಶ್ರೀಶೈಲದಿಂದ ಗೋಕರ್ಣಕ್ಕೆ ಯಾವ ಮಾರ್ಗದಿಂದ ಬಂದರೆಂಬುದನ್ನು ಮಾಧವೀಯದಲ್ಲಿ ಹೇಳಿರುವದಿಲ್ಲ. ದಾರಿಯಲ್ಲಿ ಹರಿಶಂಕರ, ಮೂಕಾಂಬಿಕಾಸ್ಥಾನ—ಇವನ್ನು ಸೇವಿಸಿದರೆಂದು ಮತ್ತೆ ಯಾವ ಶಂಕರವಿಜಯದಲ್ಲಿ

ಯೂ ವರ್ಣಿಸಿರುವದು ಕಾಣಿಸುವದಿಲ್ಲ. ವ್ಯಾಸಾಚಲೀಯದಲ್ಲಿ ಆಚಾರ್ಯರು ಗೋಕರ್ಣಕ್ಕೆ ಹೋಗುತ್ತಿದ್ದಾಗ ಹಸ್ತಾಮಲಕರು ಸಿಕ್ಕಿದಂತೆ ಬರೆದಿದೆ.

ಶ್ರೀಗೋಕರ್ಣಂ ಯಾತುಕಾಮಃ ಕದಾಚಿ–
ಚ್ಛ್ರೀವಲ್ಲ್ಯಾಖ್ಯಂ ಗ್ರಾಮಮಯರ್ಯಂ ಜಗಾಮ ।
ತಿಷ್ಠೆರ್ಜುಷ್ಟಂ ವೇದವಿದ್ಭಿರ್ಮಹದ್ಭಿಃ
ಶ್ರೀಮಾನ್ ಪೂಜ್ಯೋ ದೇಶಿಕೇನ್ದ್ರೋಽಸ್ಮದೀಯಃ ॥ (೧೨–೧)

ಇಲ್ಲಿ ಅಗ್ರಹಾರದ ಹೆಸರು (ಮಾಧವೀಯದಂತೆ ಅಗ್ರಹಾರಕಂ ಶ್ರೀಬಲಿ ಸಂಜ್ಞಮ್ ಮಾ. ೧೨–೦೯) ಶ್ರೀವಲ್ಲೀ ಎಂದಿರುವದನ್ನು ಲಕ್ಷಿಸಬೇಕು ; ಶ್ರೀಬಲಿ ಎಂಬ ಹೆಸರು ಇದರ ರೂಪಾಂತರವೋ, ಅಥವಾ ಗ್ರಾಮಕ್ಕೆ ಶ್ರೀವಲ್ಲೀ. ಶ್ರೀಬಲಿ – ಎಂಬ ಹೆಸರುಗಳಿದ್ದವೋ ಗೊತ್ತಾಗುವಂತಿಲ್ಲ. ಹಸ್ತಾಮಲಕನು ಆಚಾರ್ಯರಿಗೆ ಹೇಳಿದ "ನಾಹಂ ಜಡಃ" ಎಂಬ ಶ್ಲೋಕವು ಮಾಧವೀಯದಂತೆ ಇಲ್ಲಿಯೂ (ವ್ಯಾ. ಶಂ. ೧೨-೨೨) ಇದೆ. ಕಥಾಭಾಗದಲ್ಲಿ ವ್ಯಾಸಾಚಲೀಯವನ್ನೇ ಹಿಂಬಾಲಿಸುವ ಗೋವಿಂದನಾಥನು (ಶ್ರೀ. ಶಂ. ಚ. ೬-೮೮) "ಗೋಕರ್ಣಂ ಯಾತು ಕಾಮಃ ಸನ್ನೇಕದಾ ದೇಶಿಕೇಶ್ವರಃ | ಮಾರ್ಗೇ ಶಿವವಿಹಾರಾಖ್ಯಂ ಗ್ರಾಮಂ ಪ್ರಾಪದನುತ್ತಮಮ್ ॥" ಎಂದು ಆ ಊರಿಗೆ ಶಿವವಿಹಾರ ಎಂಬ ಬೇರೊಂದು ಹೆಸರನ್ನೇಕೆ ಕೊಟ್ಟನೋ ತಿಳಿಯಲಿಲ್ಲ. ಮಿಕ್ಕ ಕಥಾಭಾಗವು ಮಾಧವೀಯದಂತೆಯೇ ವ್ಯಾಸಾಚಲೀಯದಲ್ಲಿದೆ.

ಚಿದ್ವಿಲಾಸೀಯದಲ್ಲಿ ಗೋಕರ್ಣಯಾತ್ರೆಯು ಬೇರೊಂದು ಸಂದರ್ಭದಲ್ಲಿ ಬಂದಿದೆ. ಹಸ್ತಾಮಲಕವೃತ್ತಾಂತವು ಪ್ರಯಾಗದಲ್ಲಿ ನಡೆದಂತೆ ಅಲ್ಲಿ ವರ್ಣಿಸಿದೆ. ಹುಡುಗನ ತಂದೆಯ ಹೆಸರು ಅಲ್ಲಿ ದಿವಾಕರಾಧ್ವರಿ; ಮಾಧವೀಯದಲ್ಲಿರುವಂತೆ ಪ್ರಭಾಕರನಲ್ಲ. ಹೆಸರು ಗೊತ್ತಾಗದೆಇದ್ದದ್ದರಿಂದ ತೇಜಸ್ವಿಯಾದ ಬ್ರಾಹ್ಮಣನೆಂದು ತಿಳಿಸುವ ಹೆಸರೊಂದನ್ನು ಶಂಕರವಿಜಯಕಾರರುಗಳು ಆರಿಸಿಕೊಂಡಿರಬಹುದು. ಮಾಧವೀಯದ "ತತ್ರ ದ್ವಿಜಃ ಕಶ್ಚನ ಶಾಸ್ತ್ರವೇದೀ ಪ್ರಭಾಕರಾಖ್ಯಃ" (೧೨-೪೩) ಎಂಬ ಶ್ಲೋಕವು ವ್ಯಾಸಾಚಲೀಯದಲ್ಲಿಲ್ಲವಾದ್ದರಿಂದ ಆ ಗ್ರಂಥದಲ್ಲಿ ತಂದೆಯ ಹೆಸರು ಗೊತ್ತಾಗುವಂತಿಲ್ಲ ; ಗೋವಿಂದನಾಥನೂ ಅವನ ಹೆಸರನ್ನು ಹೇಳಿಲ್ಲ. ಪ್ರಸಿದ್ಧವಾಗಿರುವ ಹಸ್ತಾಮಲಕೀಯದ ಪ್ರಾರಂಭದಲ್ಲಿ ಕಾಣುವ

ಕಸ್ತ್ವಂ ಶಿಶೋ ಕಸ್ಯ ಕುತೋಽಸಿ ಗನ್ತಾ
ಕಿಂ ನಾಮ ತೇ ತ್ವಂ ಕುತ ಆಗತೋಽಸಿ ।
ಏತದ್ವದ ತ್ವಂ ಮಮ ಸುಪ್ರಸಿದ್ಧಂ[1]
ಮತ್ಪ್ರೀತಯೇ ಪ್ರೀತಿವಿವರ್ಧನೋಽಸಿ ॥

1. ' ಮಮ ಸುಪ್ರಸಿದ್ಧವಮ್' ಎಂಬ ಪಾದವು 'ಏತನ್ಮಯೋಕ್ತಂ ವದ ಚಾರ್ಭಕ ತ್ವವಮ್' ಎಂಬ ಪಾತಾಂತರವಾಗಿ ಈಗ ಕಾಣುತ್ತಿದೆ.

ಎಂಬ ಶ್ಲೋಕವೂ ಚಿದ್ವಿಲಾಸೀಯದಲ್ಲಿ ಕಾಣುತ್ತದೆ. "ಕಸ್ತ್ವಂ ಶಿಶೋ ಕಸ್ಯ ಸುತಃ ಕುತೋ ವೇತ್ಯಸ್ಮಾಭಿರಾಚಷ್ಟ ಕಿಲೈಷ ಪೃಷ್ಟಃ" (ಮಾ. ಶಂ ೧೩-೨೮) ಎಂಬ ಶ್ಲೋಕವನ್ನು ನೋಡಿದರೆ ಮಾಧವನಿಗೂ ಈ ಶ್ಲೋಕದ ಪರಿಚಯವಿತ್ತೆಂಬ ಊಹಿಸಬಹುದಾಗುತ್ತದೆ. ಪ್ರಕರಣದ ಮುಂದಿನ ಶ್ಲೋಕವು ಎಂದರೆ "ನಾಹಂ ಮನುಷ್ಯೋ ನ ಚ ದೇವಯಕ್ಷೌ" ಎಂದು ಮುಂತಾಗಿರುವುದೂ ಚಿದ್ವಿಲಾಸೀಯದಲ್ಲಿದೆ. 'ನಿಮಿತ್ತಂ ಮನ ಇತ್ಯಾದಿಪದ್ಯೈರ್ದಾತ್ರ್ವದಶಭಿಸ್ತಥಾ'(ಚಿ.ಶಂ.೧೧-೩೦) ಎಂದು ಪ್ರಕರಣದ ಪ್ರತೀಕೆಯನ್ನು ಇಲ್ಲಿ ಕೊಡಲಾಗಿದೆ. ಈ ಪ್ರಕರಣದಲ್ಲಿ ಹನ್ನೆರಡು ಶ್ಲೋಕಗಳಿದ್ದವೆಂಬುದು ಶಂಕರವಿಜಯಕಾರರಿಗೆಲ್ಲ ತಿಳಿದಿತ್ತೆಂಬುದಕ್ಕೆ ಆಧಾರವಿದೆ. ಈ ಪ್ರಕರಣದ ಕರ್ತೃ ಯಾರೆಂಬುದು ಇವರು ಯಾರಿಗೂ ತಿಳಿದಿರಲಿಲ್ಲವೆಂಪೂ ಹೇಳಬೇಕಾಗಿದೆ. ಏಕೆಂದರೆ ಮೊದಲನೆಯ ಎರಡು ಶ್ಲೋಕಗಳಲ್ಲಿರುವ ಪ್ರಶ್ನೋತ್ತರಗಳು ಮುಂದೆ ಹನ್ನೆರಡು ಶ್ಲೋಕಗಳು ಬರುವವೆಂಬ ನಿರೀಕ್ಷಣೆಯನ್ನೇನೂ ಎಬ್ಬಿಸುವಂತಿಲ್ಲ. ಏಕೆಂದರೆ 'ಮಗು ನೀನು ಯಾರು ? ಎಲ್ಲಿಗೆ ಹೋಗುವನಿರುವೆ?' ಎಂದು ಮುಂತಾಗಿರುವ ಪ್ರಶ್ನೆಯನ್ನು ಹಾಕಿದವರ ಎದುರಿಗೆ ಹುಡುಗನೊಬ್ಬನೇ ಮಾತನಾಡದೆ ಹೋಗುತ್ತಿದ್ದನೆಂದು ಕಲ್ಪಿಸುವದಕ್ಕೂ ಎಡೆಯಿದೆ. ಉತ್ತರವ ಶ್ಲೋಕದಲ್ಲಿ 'ನಾಹಂ ಮನುಷ್ಯೋ....ನಿಜಬೋಧರೂಪಃ' ಎಂಬ ಉತ್ತರವಿರುವದರಿಂದ ನಾನು ಮನುಷ್ಯಾದಿಗಳಲ್ಲಿ ಯಾರೂ ಅಲ್ಲ; ಏಕೆಂದರೆ ಆತ್ಮಚೈತನ್ಯಸ್ವರೂಪನಾಗಿರುತ್ತೇನೆ- ಎಂದಿದೆ. ಮುಂದಿನ ಶ್ಲೋಕದಲ್ಲಿರುವ 'ನಿತ್ಯೋಪಲಬ್ಧಿಸ್ವರೂಪೋಽಹಮ್' ಎಂಬ ಮಾತಿಲ್ಲ. ಇನ್ನೊಂದು ವಿಷಯ; ಮುಂದೆ ಆಚಾರ್ಯರೇ ಈ ವೃತ್ತಾಂತವನ್ನು ಪರಾಮರ್ಶಿಸುವ ಸಂದರ್ಭವು ಬಂದಾಗ ಹಸ್ತಾಮಲಕನು ಜ್ಞಾನದ ಪ್ರದರ್ಶನವನ್ನು ಮಾಡಿದ್ದನ್ನು ಕಂಡು ತಂದೆಯು ಹರ್ಷಿತನಾಗಿ 'ಆಜನ್ಮನಃ ಸಂಸೃತಿಪಾಶಮುಕ್ತಃ ಶಿಷ್ಯೋಽಸ್ತ್ವಯಂ ವಿಶ್ವಗುರೋಸ್ತವೈವ' (ಮಾ. ಶಂ. ೧೩-೩೧). 'ಹುಟ್ಟಿದಂದಿನಿಂದ ಸಂಸಾರಪಾಶಮುಕ್ತನಾಗಿರುವ ಇವನು ಜಗದ್ಗುರುವಾದ ತಮಗೇ ಶಿಷ್ಯನಾಗಿರಲಿ!' ಎಂದು ಹೇಳಿದಂತೆ ಬರೆದಿರುತ್ತಾನೆ. ಆದರೆ ಇಲ್ಲಿ ಆಚಾರ್ಯರೇ ವಸ್ತುಂ ನ ಯೋಗ್ಯೋ ಭವತಾ ಸಹಾಯಂ ನ ತೇಽಮುನಾರ್ಥೋ ಜಡಿಮಾಸ್ಪದೇನ'(೧೩-೫೯)ಈತನು ನಿನ್ನೊಡನೆ ಇರುವದಕ್ಕೆ ತಕ್ಕವನಲ್ಲ; ಜಡನಾಗಿರುವ- ಇವನಿಂದ ನಿನಗೆ ಆಗ ಬೇಕಾದದ್ದೇನು?- ಮುಂದೆ ಮುಂತಾಗಿ ಹೇಳಿ 'ಆ ಬ್ರಾಹ್ಮಣಬಾಲಕನನ್ನು ಕರೆದುಕೊಂಡು ತಮ್ಮ ಇಚ್ಛಾನುಸಾರವಾಗಿ ಹೊರಟುಹೋದರು' (ದ್ವಿಜಾತ್ಮಜಂ ಯಯೌ ಗೃಹೀತ್ವಾ ೧೩-೬೨) ಎಂದು ಬರೆದಿದಾನೆ! ಸಾಲದ ಕಡಿಮೆಗೆ 'ಹಸ್ತಾಮಲಕಸ್ತೋತ್ರಭಾಷ್ಯಂ' ಎಂಬ ಹೆಸರಿನಿಂದ ಆಚಾರ್ಯರು ಒಂದು ಭಾಷ್ಯವನ್ನೂ ಬರೆದಂತೆಯೂ ಪ್ರಸಿದ್ಧಿಯಿದೆ! ಇದನ್ನು **ಶ್ರೀರಂಗಂ ವಾಣೀವಿಲಾಸ ಪ್ರೆಸ್ಸಿನವರು** (೧೬ನೆಯ ಖಂಡ ಪು. ೧೬೩-೧೮೩) ಶಂಕರಗ್ರಂಥಾವಳಿಯಲ್ಲಿ ಸೇರಿಸಿ

ಬಿಟ್ಟರುತ್ತಾರೆ ! ಶಂಕರವಿಜಯಗಳು ಆಚಾರ್ಯರ ಅಮೃತಮಹಿಮೆಯನ್ನು ಪ್ರಚಾರಮಾಡಬೇಕೆಂಬ ಅಭಿನಿವೇಶದಿಂದ ಬರೆದವುಗಳಾದ್ದರಿಂದ ಈ ಬಗೆಯ ಪೂರ್ವಾಪರವಿರೋಧಗಳು ಅವುಗಳಲ್ಲಿ ಕಂಡುಬಂದರೆ ಆಶ್ಚರ್ಯಪಡಬೇಕಾದ ದ್ದೇನೂ ಇಲ್ಲ. ಆದರೆ ಆಚಾರ್ಯರು ತಮ್ಮ ಶಿಷ್ಯನ ಪ್ರಕರಣವೊಂದಕ್ಕೆ ಭಾಷ್ಯ ವನ್ನು ಬರೆದರೆಂದು ಈಗಲೂ ನಂಬುವವರ ಶ್ರದ್ಧೆಯನ್ನು ಏನೆಂದು ಕರೆಯೋಣ ?

೧೩. ಶೃಂಗೇರಿ

ಆಚಾರ್ಯರು ಶೃಂಗೇರಿಗೆ ಯಾವಾಗ, ಏಕೆ ಬಂದರು

೧೩೬. ಮಾಧವೀಯದಂತೆಯೇ ಸಾಮಾನ್ಯವಾದ ಕಥೆಯನ್ನು ಸಾಗಿಸಿಕೊಂಡು ಉಳಿದ ಶಂಕರವಿಜಯಗಳಲ್ಲಿ ಕಾಣಬರುವ ಕಥಾಕ್ರಮವೈಲಕ್ಷಣ್ಯವನ್ನೂ ತಿಳಿಸುತ್ತಾ ಹೋಗುವದೇ ಈ ಗ್ರಂಥದ ಶೈಲಿಯಾಗಿದೆಯಷ್ಟೆ ? ಅದನ್ನನುಸರಿಸಿ ಕಥೆಯನ್ನು ಮುಂದುವರಿಸುವೆವು. ಆಚಾರ್ಯರು ಶೃಂಗೇರೀಪೀಠವನ್ನು ಸ್ಥಾಪಿಸಿದ್ದು ದಕ್ಷಿಣಪ್ರಯಾಣದಲ್ಲಿ ನಡೆದ ಅನೇಕ ಘಟನೆಗಳಲ್ಲಿ ಒಂದಾವರೂ ಆ ಪೀಠಕ್ಕಿರುವ ಪ್ರಾಮುಖ್ಯದ ದೃಷ್ಟಿಯಿಂದ ಅದನ್ನೇ ಒಂದು ಸ್ವತಂತ್ರಘಟ್ಟವಾಗಿ ವಿಂಗಡಿಸುವದು ಯೋಗ್ಯವೆಂದೆಣಿಸಿ ಹಾಗೆ ಮಾಡಿರುತ್ತೇವೆ.

ಶೃಂಗೇರಿಯು ಆಚಾರ್ಯರ ಜನ್ಮಸ್ಥಲವಲ್ಲ, ಅವರ ಗುರುಗಳಾಗಲಿ ಪರಮ ಗುರುಗಳಾಗಲಿ ಇದ್ದ ಸ್ಥಲವೂ ಅಲ್ಲ ಆದರೂ ಆಚಾರ್ಯರು ತಮ್ಮ ಮಠವನ್ನು ಅಲ್ಲಿ ಏಕೆ ಸ್ಥಾಪನೆಮಾಡಿದರು ?– ಎಂಬುದು ತಿಳಿಯುವಂತಿಲ್ಲ. ಮಾಧವೀಯದಲ್ಲಿ ಆಚಾರ್ಯರು ಸರಸ್ವತಿಯನ್ನು ಪ್ರಾರ್ಥಿಸಿಕೊಂಡಾಗ–

ತಸ್ಮಾದಸ್ಮತ್ಪ್ರಲ್ಪಿತೇಷ್ವರ್ಚ್ಯಮಾನಾ
ಸ್ಥಾನೇಷು ತ್ವಂ ಶಾರದಾಖ್ಯಾ ದಿಶಸ್ತೀ।
ಇಷ್ಟಾನರ್ಥಾನ್ಸೃಷ್ಯಶೃಙ್ಗಾದಿಕೇಷು
ಕ್ಷೇತ್ರೇಷ್ವಾಸ್ಸ್ವ ಪ್ರಾಪ್ತಸತ್ಸಂನಿಧಾನಾ ॥ (ಮಾ. ಶಂ. ೧೮–೭೧)

'ನಾನು ಕಲ್ಪಿಸುವ ಋಷ್ಯಶೃಂಗಾದಿಕ್ಷೇತ್ರಗಳಲ್ಲಿ ಶಾರದೆ ಎಂಬ ಹೆಸರಿನಿಂದ ಅರ್ಚಿಸಿದವರ ಇಷ್ಟಾರ್ಥಗಳನ್ನು ಕೊಡುತ್ತಾ ಇರಬೇಕು' ಎಂದು ಕೇಳಿಕೊಂಡರು. ಈ ಹಿಂದೆ ಋಷ್ಯಶೃಂಗವೆಂಬ ಹೆಸರೇ ಈವರೆಗೆ ಪರಾಮೃಷ್ಟವಾಗಿರಲಿಲ್ಲ. ತಟ್ಟನೆ ಈ ಹೆಸರು ಆಚಾರ್ಯರ ಮನಸ್ಸಿಗೆ ಹೇಗೆ ಹೊಳೆಯಿತು ? ಇದನ್ನು ಮಾಧವನು ಹೇಳಿರುವದಿಲ್ಲ. ಶೃಂಗೇರಿಗೆ ಬಂದ ಸಂದರ್ಭವನ್ನು ತಿಳಿಸುವಾಗ 'ಶೃಙ್ಗಗಿರಿಂ ಪ್ರತಸ್ಥೇ' (ಶೃಂಗೇರಿಗೆ ಹೊರಟರು) ಎಂದು ಮೊದಲುಮಾಡಿ,

ಯತ್ರಾಧುನಾಪ್ಯುತ್ತಮಮೃಷ್ಯಶೃಙ್ಗ-
ಸ್ತಪಶ್ಚರತ್ಯಾತ್ಮಭೃದನ್ತರಜ್ಞಃ।
ಸಂಸ್ಪರ್ಶಮಾತ್ರೇಣ ವಿಶೀರ್ಣಭದ್ರಾ
ವಿದ್ಯೋತತೇ ಯತ್ರ ಚ ತುಙ್ಗಭದ್ರಾ ॥ (ಮಾ.ಶಂ. ೧೨–೬೪)

"ಅಲ್ಲಿ ಋಷ್ಯಶೃಂಗರು ಉತ್ತಮತಪಸ್ಸನ್ನು ಮಾಡುತ್ತಾ ಆತ್ಮಾನುಸಂಧಾನವನ್ನು ಮಾಡುತ್ತಿರುವರು. ಸ್ಪರ್ಶಮಾತ್ರದಿಂದ ಮುಂಗಲನನ್ನುಂಟುಮಾಡುವ ತುಂಗಭದ್ರೆಯೂ (?) ಅಲ್ಲಿ ಕಂಗೊಳಿಸುತ್ತಿರುವಳು" ಎಂದಿಷ್ಟೇ ಹೇಳಿರುತ್ತಾನೆ.

ಚಿದ್ವಿಲಾಸೀಯ (೨೦ನೆಯ ಅಧ್ಯಾಯ)ದಲ್ಲಿ : ಶಂಕರಾಚಾರ್ಯರು ಸರಸ್ವತಿಯನ್ನು ತಮ್ಮೊಡನೆ ಬರಬೇಕೆಂದು ಪ್ರಾರ್ಥಿಸಿಕೊಂಡು, ಈತಿಬಾಧೆಗಳಿಲ್ಲದೆ ಯಾವಾಗಲೂ ಸಸ್ಯಸಂಪೂರ್ಣವಾಗಿಯೂ ಸರ್ವಲಕ್ಷಣಲಕ್ಷಿತವಾಗಿಯೂ ನಿರ್ವೈರಪ್ರಾಣಿಗಳಿಂದ ತುಂಬಿರುವದಾಗಿಯೂ ರಮ್ಯವಾದ ನದಿಯಿಂದ ಆವೃತವಾಗಿಯೂ ದಿವ್ಯತಪೋವನಗಳಿಂದ ತುಂಬಿರುವದಾಗಿಯೂ ಹೆಜ್ಜೆಹೆಜ್ಜೆಗೂ ನೀರಿನ ಕಾಲುನೆಗಳಿರುವದಾಗಿಯೂ ದುರ್ಭಿಕ್ಷವನ್ನೇ ಕಾಣದಿರುವದಾಗಿಯೂ ಇದ್ದುಕೊಂಡು ಸರಸ್ವತೀಪ್ರತಿಷ್ಠಾಪನೆಗೆ ಯೋಗ್ಯವಾದ ಒಂದು ಸ್ಥಲವು ಬೇಕೆಂದು ಹುಡುಕುತ್ತಾ ಪದ್ಮಪಾದ, ಸುರೇಶ್ವರ, ಹಸ್ತಾಮಲಕ, ತೋಟಕ– ಇವರುಗಳೊಡನೆಯೂ ಸರಸ್ವತೀದೇವಿಯೊಡನೆಯೂ ಏಭಾಂಡಕರ ತಪೋವನಕ್ಕೆ ಬಂದರು (ಚಿ. ಶಂ. ೨೦-೪೪ರಿಂದ೫೧) ಎಂದು ತಿಳಿಸಿದ ಬಳಿಕ ಶೃಂಗೇರಿಯ ಸಂನಿವೇಶವನ್ನೂ ಮಹಿಮೆಯನ್ನೂ ಬಗೆಬಗೆಯಾಗಿ ಹೊಗಳಿ ಮಾರ್ಗದಲ್ಲಿ **ತುಂಗಭದ್ರಾ ನದಿಯಲ್ಲಿ** ಸ್ನಾನಕ್ಕೆಂದು ಆಚಾರ್ಯರು ಇಳಿಯುತ್ತಿರುವಲ್ಲಿ ಹೆಣ್ಣುಕಪ್ಪೆಯೊಂದು ಹಡೆಯುವ ಸ್ಥಿತಿಯಲ್ಲಿ ಬಲವಾದ ಬಿಸಿಲಿನ ತಾಪವನ್ನು **ತಾಳ**ಲಾರದೆ ಇರಲು (ಶಾಲೂರೀಮತಿಗರ್ಭಭಾರವಿಷಹಾಂ ಸದ್ಯಃ ಪ್ರಸೂತ್ಯುನ್ಮುಖೀಂ ತೀವ್ರೋದಗ್ರದಿವಾಕರಾತಪಪರಿಕ್ಲಾನ್ತಾಮ್) ಅದಕ್ಕೆ ಒಂದು ಹೆಣ್ಣುಹಾವು **ತ**ನ್ನ ಹೆಡೆಯನ್ನು ಬಿಚ್ಚಿ ನೆರಳುಮಾಡುತ್ತಿದ್ದದ್ದನ್ನು ಕಂಡರು. (ಭುಜಜಿಹ್ಮೀಂ ಫಣಾಮಾಸ್ತೀರ್ಯಾತಪವಾರಣಾಯ ಪರಿತಃ ಪಾನ್ತ್ಯೀಂ ದೃಶಾಲೋಕತ ೨೧–೨೩) ಎಂದು ಆಲ್ಲಯ ಪ್ರಾಣಿಗಳು ವೈರತ್ಯಾಗವನ್ನು ಮಾಡಿದ್ದ ಅದ್ಭುತದೃಶ್ಯಗಳಲ್ಲಿ ಒಂದನ್ನು ವರ್ಣಿಸಿರುತ್ತದೆ; ಮುಂದೆ **ಮತ್ತೊ**ಂದು ಸಲ **ಈ** ಕಥೆಯನ್ನು ಪರಾಮರ್ಶಿಸುವಾಗ ಚಿದ್ವಿಲಾಸರು ಕಪ್ಪೆಗೆ ನೆರಳನ್ನೊದಗಿಸಿದ್ದ ಹಾವು ಗಂಡು ಎಂದು ಹೇಳಿರುತ್ತಾರೆ ! (ವರ್ಷಾಭ್ವೀಂ ಗುರ್ವಿಣೀಂ ಯತ್ರ ಪಾತಿ ಸ್ಮ ಫಣೆರಾಡಪಿ ೨೪-೧೪). **ಬಲದೇವೋಪಾಧ್ಯಾಯರ** ಪ್ರಕಾರ **ಈ** ಅದ್ಭುತವನ್ನು ಶಂಕರರು ಕಂಡದ್ದು ಕ್ರಮಸಂನ್ಯಾಸಕ್ಕೆಂದು ಗುರುವನ್ನು ಹುಡಿಕಿಕೊಂಡ್ಯ ಹೋಗುತ್ತಿದ್ದಾಗಿನ ದಾರಿಯಲ್ಲಿ (ಬಲ. ಶಂ. ಪು. ೪೮) ; ಅಲ್ಲಿ ಅವರು ಕಥೆಯ ವಿವರವನ್ನು ಸ್ವಲ್ಪ ಬೇರೆಯಾಗಿ ಕೊಟ್ಟಿರುತ್ತಾರೆ. ಅದಕ್ಕೆ ಅವರಿಗೆ ಯಾವ ಆಧಾರವಿತ್ತೋ ತಿಳಿಯದು.

ಕೂಷ್ಮಾಂಡಶಂಕರವಿಜಯವೆಂಬ ಗ್ರಂಥದಲ್ಲಿ : ಸರಸವಾಣಿಯು ಶಂಕರರ ಹಿಂದೆಯೇ ಬರುವದಕ್ಕೆ ಒಪ್ಪಿದಳು. ಆದರೆ ಆಚಾರ್ಯರು ತನ್ನನ್ನು

ನಡುವೆ ಹಿಂತಿರುಗಿ ನೋಡಬಾರದೆಂದು ಒಂದು ಕಟ್ಟುಪಾಡನ್ನು ಮಾಡಿಕೊಂಡಿದ್ದಳು. ಪಂಪಾಪುರಕ್ಕೆ ಹೋಗುತ್ತಿರುವ ದಾರಿಯಲ್ಲಿ ಶಂಕರರು ಆಕೆ ಬರುತ್ತಿದ್ದಾಳೋ ಇಲ್ಲವೋ– ಎಂದು ಹಿಂತಿರುಗಿ ನೋಡಲು ಮೊದಲು ಒಪ್ಪಿದ್ದ ಸಮಯಧರ್ಮವನ್ನು ಮೀರಿದ್ದರಿಂದ ಸರಸವಾಣಿಯು ಅದೃಶ್ಯಳಾಗಿ ಅವರ ಅಪ್ಪಣೆಯನ್ನು ಪಡೆದು ಬ್ರಹ್ಮಲೋಕಕ್ಕೆ ಹೋಗಿಬಿಟ್ಟಳು. (ತಥೇತ್ಯುಕ್ತ್ವಾ ಪುರೋ ಗಚ್ಛನ್ ಗುರುಃ ಪಮ್ಪಾಪುರಂ ಪ್ರತಿ | ಆಯಾತಿ ವಾ ನ ವೈತೀತಿ ಪಶ್ಚಾದ್ಭಾಗಂ ಪ್ರದೃಷ್ಟವಾನ್ | ತದಾಗತ್ಯ ಗುರುಂ ಗನ್ತುಮನುಜ್ಞಾಂ ದಾತುಮರ್ಹಸಿ | ಇತ್ಯುಕ್ತ್ವಾ ತು ತದಾಽದೃಶ್ಯಾ ಬ್ರಹ್ಮಲೋಕಮವಾಪ ಸಾ || ಕೂ. ಶಂ. ೫–೯ರಿಂದ೧೧) ಎಂದು ಬರೆದಿದೆ.

ಸೋಮನಾಥಯ್ಯನವರು, ಹೆಣ್ಣು ಕಪ್ಪೆಗಳು ಮರಿಗಳನ್ನು ಹೆರುವದಿಲ್ಲ, ತತ್ತಿಯನ್ನಿಡುತ್ತವೆ– ಎಂಬ ಜಂತುಸ್ವಭಾವವು ಚಿದ್ವಿಲಾಸರಿಗೂ ಉತ್ತರದೇಶದ ಮುಂಡನವಿಶ್ರನ ಊರಿನಿಂದ ಹಂಪೆಗೆ ಬರುವ ದಾರಿಯಲ್ಲಿ ಶೃಂಗೇರಿ ಸಿಕ್ಕುವದಿಲ್ಲವೆಂಬುದು ಕೂಷ್ಮಾಂಡಶಂಕರವಿಜಯಕಾರನಿಗೂ ತಿಳಿದಿರಲಿಲ್ಲವೆಂಬ ಆಕ್ಷೇಪವನ್ನು (ಸೋ. ಶಂ. ೧೫೭,೧೫೯) ಎತ್ತಿರುತ್ತಾರೆ. ಆದರೆ ಕಲ್ಪನಾಕಥೆಗಳನ್ನು ರಚಿಸುವ ಕವಿಗಳ ಗ್ರಂಥಗಳನ್ನು ಸೂಕ್ಷ್ಮವಿಮರ್ಶೆಗೆ ಗುರಿಮಾಡುವದರಿಂದ ಲಾಭವಾದರೂ ಏನು ?

ದೀರ್ಘಕಾಲಪ್ರವಾಸದಲ್ಲಿದ್ದ ಆಚಾರ್ಯರು ಈ ಸಮಯದಲ್ಲಿ ವಾರ್ಧಕದಿಂದಲೂ ವಿಧವಾಧರ್ಮಪರಿಪಾಲನೆಯಿಂದಲೂ ಪುತ್ರನ ಅಗಲುವಿಕೆಯ ದುಃಖದಿಂದಲೂ ತಮ್ಮ ತಾಯಿಯು ಬಹಳ ಕೃಶಳಾಗಿದ್ದಾಳೆಂದು ತಿಳಿದು ಆಕೆಯ ಸಮೀಪದಲ್ಲಿರುವದು ಉಚಿತವೆಂದು ದಕ್ಷಿಣಕ್ಕೆ ಬಂದರು. ಆದರೆ ಇವರು ಸಂನ್ಯಾಸವನ್ನು ತೆಗೆದುಕೊಂಡದ್ದನ್ನು ಒಪ್ಪದೆಯೂ ಇವರ ಕೀರ್ತಿಯನ್ನು ಕೇಳಿ ಮನುಷ್ಯಸ್ವಭಾವವಾದ ಅಸೂಯೆಯಿಂದಲೂ ಬಂಧುಗಳುತಮ್ಮ ಊರಿನಲ್ಲಿ ನಿಂತರೆ ಮನಶ್ಶಾಂತಿಯಾಗಲಾರದೆಂದು ಊಹಿಸಿ ತಮ್ಮ ಊರಿಗೆ ಬಹುದೂರವಿಲ್ಲದ ಹೊರಗಿನ ಪ್ರಾಂತದಲ್ಲಿ ವಾಸಮಾಡುವದು ಒಳ್ಳೆಯದೆಂದು ಎಣಿಸಿರಬಹುದು. ಶೃಂಗೇರಿಯು ಅವರ ಊರಿಗೆ ಮೂವತ್ತು ಗಾವುದಕ್ಕಿಂತ ಹೆಚ್ಚು ಇರಲಿಲ್ಲ. ಶೃಂಗೇರಿಯ ಪ್ರಾಂತದ ದೊರೆಗಳೂ[1] ಅವರಲ್ಲಿ ಭಕ್ತಿಯುಳ್ಳವರಾಗಿದ್ದದ್ದರಿಂದ ಮಠವನ್ನು ಕಟ್ಟಿಸಿಕೊಳ್ಳುವದಕ್ಕೆ ಪ್ರೋತ್ಸಾಹಿಸಿಯೂ ಇರಬಹುದು– ಎಂದು **ಸೋಮನಾಥಯ್ಯನವರು** (ಸೋ. ಶಂ. ಪು. ೧೫೯–೧೬೦) ತರ್ಕಿಸಿರುತ್ತಾರೆ.

1. ವೀರಸೇನ ಎಂಬ ಹೆಸರಿನ ರಾಜನನ್ನು ಚಿದ್ವಿಲಾಸೀಯದಲ್ಲಿ (೨೯–೪೭) ಉಲ್ಲೇಖಿಸಿದೆ, ಆ ಹೆಸರಿನ ರಾಜನು ಅಲ್ಲಿ ಇದ್ದನೆ ? –ಎಂಬುದನ್ನು ಐತಿಹಾಸಿಕರು ನಿರ್ಣಯಿಸಬೇಕಾಗಿದೆ.

ಇನ್ನೆಲ್ಲವೂ ತರ್ಕಮಾತ್ರವಾಗಿರುವದರಿಂದ ನಿಜವೆಂದಾಗಲಿ ನಿಜವಲ್ಲವೆಂದಾಗಲಿ ನಿಶ್ಚಯಿಸಲು ನಾವು ಅಶಕ್ತರಾಗಿದ್ದೇವೆ. ಚಿನ್ಮಿಲಾಸೀಯದಲ್ಲಿ ಆಚಾರ್ಯರು ಇನ್ನೂ ಗೋವಿಂದಭಗವತ್ಪಾದರ ಬಳಿಯಲ್ಲಿರುವಾಗಲೇ ಅವರ ತಾಯಿಯು ಸ್ಮರಣವಶದಿಂದ ಊರಿಗೆ ಹೋಗಿ ಆಕೆಗೆ ಉಪದೇಶಮಾಡಿ ವೈಕುಂಠಪ್ರಾಪ್ತಿಗೆ ಸಹಾಯಕರಾದರು (ಚಿ.ಶಂ. ೧೦-೪೭) ಎಂದಿದೆ. ಆ ಕಾಲಕ್ರಮವನ್ನು ಒಪ್ಪುವವರ ಪಕ್ಷದಲ್ಲಿ ಈ ತರ್ಕವು ಹೊಂದುಗೆಯಾಗುವದಿಲ್ಲ. ಆಚಾರ್ಯರು ತಮ್ಮ ಬಳಿಗೆ ಬಂದಿದ್ದ ಚೋಳದೇಶದ ಬ್ರಾಹ್ಮಣಕುಮಾರನಿಗೆ ಸಂನ್ಯಾಸವನ್ನು ಕೊಡುವ ಹೊತ್ತಿಗೇ ತಾಯಿಯು ಅವರನ್ನು ಸ್ಮರಣೆಮಾಡಿದಳೆಂದು ನಮ್ಮಲ್ಲಿರುವ ವ್ಯಾಸಾಚಲೀಯ (ವ್ಯಾ. ಶಂ. ೪-೯೩)ದಲ್ಲಿದೆ. ಆದಕ್ಕೂ ಈ ಊಹೆಯು ಹೊಂದುಗೆಯಾಗುವದಿಲ್ಲ. ಶಂಕರರು ಗುರುಗಳ ಬಳಿಯಲ್ಲಿದ್ದಾಗ, ಅಥವಾ ಮೊಟ್ಟಮೊದಲನೆಯ ಶಿಷ್ಯನನ್ನು ಪರಿಗ್ರಹಿಸಿದಾಗಲೇ ಅವರ ಕೀರ್ತಿಯು ದಕ್ಷಿಣ ದೇಶದ ರಾಜರುಗಳ ಕಿವಿಗೆ ಬಿದ್ದಿತ್ತೆಂದು ಹೇಗೆತಾನೆ ಊಹಿಸಲಾದೀತು ?

ಆಚಾರ್ಯರು ಉತ್ತರಕಾಶಿಯಲ್ಲಿದ್ದುಕೊಂಡು ಭಾಷ್ಯಗಳನ್ನು ಬರೆದಿದ್ದರೂ ಅವುಗಳ ಪ್ರಚಾರಕ್ಕೆ ಹೆಚ್ಚು ಅವಕಾಶವಾಗಿರಲಿಲ್ಲ. ಈಗ ಅವರಿಗೆ ಅವಕಾಶ ದೊರಕಿತು (ಬ. ಶಂ. ೯೫) ಎಂದು ಬಲದೇವಉಪಾಧ್ಯಾಯರು ಬರೆದಿರುವದರಲ್ಲಿ ಹೆಚ್ಚು ನಿಜದ ಅಂಶವಿರುವಂತೆ ಕಾಣುತ್ತದೆ. ಆಚಾರ್ಯರು ವೇದಾಂತ ಪ್ರಚಾರಕ್ಕೆಂದೇ ದಕ್ಷಿಣಕ್ಕೆ ಬಂದಿರಬೇಕು. ಆದರೆ ನಿಂತದ್ದೇಕೆ ?– ಎಂಬುದಕ್ಕೆ ಉತ್ತರವೇನೂ ನಮಗೆ ಇದರಿಂದ ಗೊತ್ತಾಗುವಂತಿಲ್ಲ.

ಶಾರದಾಪ್ರತಿಷ್ಠೆ

೧೨೭. ಶೃಂಗೇರಿಯಲ್ಲಿ ಆಚಾರ್ಯರು ದೊಡ್ಡ ದೇವಾಲಯವನ್ನು ರಚಿಸಿ ಶಾರದಾಪ್ರತಿಷ್ಠೆಯನ್ನು ಮಾಡಿದರು. ಸರಸ್ವತಿಯು ತಾನು ವಾಗ್ದಾನಮಾಡಿದ್ದಂತೆಯೇ ಇಂದಿನವರೆಗೂ "ಶಾರದಾಂಬಾ" ಎಂಬ ಹೆಸರಿನಿಂದ ಶೃಂಗೇರಿಪುರದಲ್ಲಿದ್ದುಕೊಂಡು ಅಭೀಷ್ಟವರಗಳನ್ನು ಕೊಡುತ್ತಾ ಇರುತ್ತಾಳೆ– ಎಂದು ಮಾಧವನು ಎರಡು ಶ್ಲೋಕಗಳಲ್ಲಿ ಈ ವಿಷಯವನ್ನು ಮುಗಿಸಿರುತ್ತಾನೆ.

ಪ್ರಕಲ್ಪ್ಯ ತತ್ರೇನ್ದ್ರವಿಮಾನಕಲ್ಪಂ । ಪ್ರಾಸಾದಮಾವಿಷ್ಕೃತಸರ್ವಶಿಲ್ಪವ್ ।
ಪ್ರವರ್ತಯಾಮಾಸ ಸ ದೇವತಾಯಾಃ । ಪೂಜಾಮಜಾದ್ಯೈರಪಿ ಪೂಜಿತಾಯಾಃ ॥
ಯಾ ಶಾರದಾವ್ಪೇತ್ಯಭಿಧಾಂ ವಹನ್ತೀ । ಕೃತಾಂ ಪ್ರತಿಜ್ಞಾಂ ಪ್ರತಿಪಾಲಯನ್ತೀ ।
ಆವ್ಯಾಪಿ ಶೃಂಗೇರಿಪುರೇ ವಸನ್ತೀ । ಪ್ರದ್ಯೋತತೇಽಭೀಷ್ಟವರಾನ್ ದಿಶನ್ತೀ ॥೬೯॥

(ಮಾ. ಶಂ. ೧೨-೬೮, ೬೯)

ಇಲ್ಲಿ ಕವಿಯು 'ಶೃಂಗೇರಿಪುರೇ' ಎಂದು ಬರೆದಿರುವದರಿಂದ ಅವನ ಕಾಲಕ್ಕೆ ಆಗಲಿ 'ಶೃಂಗೇರಿ' ಎಂಬ ಹೆಸರು ಪ್ರಚಾರದಲ್ಲಿತ್ತೆಂದು ಗೊತ್ತಾಗುತ್ತದೆ.

ಚಿದ್ವಿಲಾಸೀಯದ ಇಪ್ಪತ್ತೊಂಬನೆಯ ಅಧ್ಯಾಯದಲ್ಲಿ **ತುಂಗಭದ್ರಾ ನದಿಯ ಮಹಿಮೆ**ಯನ್ನು ವರ್ಣಿಸಿ, ಮೇಲೆ ಪ್ರಾಣುತ್ಸರ್ಜಿಸಿರುವ ಕಪ್ಪೆ ಹಾವುಗಳ ಸ್ನೇಹವ ಅಮ್ಬುತವನ್ನು ಕಂಡ ಆಚಾರ್ಯರು ವಾಗ್ದೇವೀಪ್ರತಿಷ್ಠೆಗೆ ಅದೇ ಸರಿಯಾದ ಸ್ಥಲವೆಂದು ಸಂಕಲ್ಪಿಸಿದ ವೃತ್ತಾಂತವಿದೆ. ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ತುಂಗಾನದಿಯ ಬಳಿಯಲ್ಲಿರುವ **ಅಶ್ವಮುಗಳ ವರ್ಣನೆ**ಯಿದೆ. ಇಪ್ಪತ್ತನೂರನೆಯ ಅಧ್ಯಾಯದಲ್ಲಿ **ಋಷ್ಯಶೃಂಗರ ವೃತ್ತಾಂತ**ವಿದೆ. ಇಪ್ಪತ್ತ ನಾಲ್ಕನೆಯ ಅಧ್ಯಾಯದಲ್ಲಿ ಕ್ಷೇತ್ರದ ಮಹಿಮೆಯನ್ನು ಮನಗಂಡ ಶಂಕರರು ಅಲ್ಲಿದ್ದ ಕರ್ಮನಿಷ್ಠರಾದ ಗೃಹಸ್ಥರೂ ತಮ್ಮ ಶಿಷ್ಯರುಗಳೂ ಪ್ರಾರ್ಥನೆಮಾಡಿದಂತೆ ಶಾರದಾಪ್ರತಿಷ್ಠೆಯನ್ನು ಮಾಡೋಣವೆ?—ಎಂದು ಯೋಚಿಸುತ್ತಿರುವಲ್ಲಿ ಆಕಾಶ ವಾಣಿಯೂ ಇದೇ ಪ್ರತಿಷ್ಠೆಗೆ ಸರಿಯಾದ ಕ್ಷೇತ್ರ ಎಂದು ನುಡಿಯಿತು—ಎಂದಿದೆ. ಆಚಾರ್ಯರು ತಾವು ಕಂಡಿದ್ದ ಅಮ್ಬುತದರ್ಶನದ ಸ್ಥಲದಲ್ಲಿಯೇ ಉತ್ಕೃಷ್ಟವಾದ ದೇವಾಲಯವನ್ನು ಕಟ್ಟಿಸಿ ಸುಮುಹೂರ್ತದಲ್ಲಿ ಮಂತ್ರಶಾಸ್ತ್ರವಿಧಾನದಿಂದ **ಶ್ರೀಚಕ್ರವನ್ನೂ** (೪—೨೧) ಶಾರದಾಪ್ರತಿಷ್ಠೆಯನ್ನೂ ಮಾಡಿಸಿದರು; ದಿಗ್ಬಂಧನವನ್ನು ಮಾಡಿಸಿ ಯಥಾಸ್ಥಾನದಲ್ಲಿ ಉಚಿತವಾದ ದೇವತೆಗಳನ್ನು ಪ್ರತಿಷ್ಠಾಪನೆಮಾಡಿಸಿದರು; **ಶರನ್ನವರಾತ್ರೆಯ** ಉತ್ಸವವನ್ನು (೨೭) ಮಾಡಿಸಿದರು; ಅವರ ಬಳಿಯಲ್ಲಿ ವಿಶಾಲವಾದ **ಶ್ರೀಮಠ**ವನ್ನು ಸ್ಥಾಪಿಸಿ ವಿದ್ಯಾಪೀಠವನ್ನು ಏರ್ಪಡಿಸಿದರು (೩೨); ಪೂರ್ವಕ್ಕೆ ಭೈರವ, ಉತ್ತರಕ್ಕೆ ಕಾಳಿಕಾದೇವಿ, ದಕ್ಷಿಣದಲ್ಲಿ ಮಹಾದುರ್ಗಿ. ಪಶ್ಚಿಮಕ್ಕೆ ಮಾರುತಿ—ಹೀಗೆ ಸುತ್ತಲೂ ದುಷ್ಟನಿಗ್ರಹಕ್ಕಾಗಿ ಪ್ರತಿಷ್ಠೆಮಾಡಿಸಿದರು (೩೪—೪೫, ೪೬)—ಎಂದು ವಿವರಿಸಿದೆ.

ಶಾರದಾಮಠಗಳ ಸ್ಥಾಪನೆ

೧೨೮. **ಮಾಧವೀಯದಲ್ಲಿ** ಶೃಂಗೇರಿಯ ಮಹಿಮೆಯನ್ನು ಹೊಗಳಿರುವದು, ಶಾರದಾಪೂಜೆಯು ನಡೆಯುವಂತೆ ಸಂಪ್ರದಾಯಪ್ರವರ್ತಕರಾದದ್ದು—ಇವೆರಡು ವಿಷಯಗಳು ಇವೆಯೇ ಹೊರತು ಅಲ್ಲಿ ಮಠದ ಸ್ಥಾಪನೆಯಾದದನ್ನು ಪರಾಮರ್ಶಿಸಿರುವದಿಲ್ಲ, **ಡಿಂಡಿಮವ್ಯಾಖ್ಯಾನ**ದಲ್ಲಿ 'ಅತ್ರ ಪ್ರಾಜ್ಞೈಃ ಮಠಂ ಕೃತ್ವಾ ತತ್ರ ವಿದ್ಯಾಪೀಠನಿರ್ಮಾಣಂ ಕೃತ್ವಾ ಭಾರತೀಸಂಪ್ರದಾಯಂ ನಿಜಶಿಷ್ಯಂ ಚಕಾರ। ಯಸ್ತ್ವದ್ವೈತಮತೇ ಸ್ಥಿತ್ವಾ ಭಾರತೀಪೀಠನಿನ್ದಕಃ। ಸ ಯಾತಿ ನರಕಂ ಘೋರಂ ಯಾವದಾಭೂತಸಂಪ್ಲವಮ್॥ ಕಞ್ಚಿಚ್ಛಿಷ್ಯಂ ಸುರೇಶ್ವರಾಖ್ಯಂ ಪೀಠಾಧ್ಯಕ್ಷಮಕರೋತ್ ಇತಿ।' (ಮಾ. ಶಂ. ೧೨—೬೮) ಎಂಬ ವಾಕ್ಯಗಳಿವೆ. **ಆನಂದಗಿರೀಯದಲ್ಲಿರುವ** ವಾಕ್ಯದ ಒಂದಂಶವನ್ನು ಹಿಂದೆ (೧೧೬ನೆಯ ಖಂಡದಲ್ಲಿ) ಕೊಟ್ಟಿರುತ್ತೇವೆ. 'ತತಃ ಪರಂ ಸರಸವಾಣೀಂ ಮನ್ತ್ರಬದ್ಧಾಂ ಕೃತ್ವಾ ಗಗನಮಾರ್ಗಾದೇವ ಶೃಙ್ಗಗಿರಿಸಮೀಪೇ ತುಙ್ಗಭದ್ರಾತೀರೇ ಚಕ್ರಂ

ತವಗ್ರೇ ಪರದೇವತಾಂ ಸರಸವಾಣೀಂ ನಿಧಾಯ ತತ್ರ ವಿದ್ಯಾಪೀಠನಿರ್ಮಾಣಂ ಕೃತ್ವಾ ಭಾರತೀಸಂಪ್ರದಾಯಂ ನಿಜಶಿಷ್ಯೇಷು ಆಚಕಾರ | ತದಾರಭ್ಯ ಶುದ್ಧಾದ್ವೈತ ಗುರವೋ ಭಾರತೀಸಂಪ್ರದಾಯನಿಷ್ಠಾಃ ಪರಮಗುರೋಶ್ಚಾರ್ಯಸ್ವಾಮಿನಃ ಕಟಾಕ್ಷಲಬ್ಧವಿದ್ಯಾವೈಶದ್ಯಾ ಇತಿ ವ್ಯವಹಾರಃ | ಯಸ್ತ್ವದ್ವೈತಮತೇ ಸ್ಥಿತ್ವಾ ಭಾರತೀಪೀಠನಿಂದಕಃ || ಸ ಯಾತಿ ನರಕಂ ಘೋರಂ ಯಾವದಾಭೂತಸಂಪ್ಲವಮ್ |" (ಆ. ಶಂ. ೬೨ ಪು. ೨೨೩ರಿಂದ ೨೩೦, ದೇ. ಪು. ೧೯೧) ಎಂದು ಪೂರ್ಣವಾಕ್ಯ. ಮುಂದಿನ ಪ್ರಕರಣದಲ್ಲಿ 'ತತ್ರೈವ ಪರಮಗುರುಃ ದ್ವಾದಶಾಬ್ದಂ ವಿದ್ಯಾಪೀಠೇ ಸ್ಥಿತ್ವಾ ಬಹುಶಿಷ್ಯೇಭ್ಯಃ ಶುದ್ಧಾದ್ವೈತವಿದ್ಯಾಯಾಃ ಸಮ್ಯಗ್ಗುರೂಪದೇಶಂ('ಸಮ್ಯಗುಪದೇಶಂ' ದೇ.)ಕೃತ್ವಾ ತದನನ್ತರಂ ಪದ್ಮಪಾದಾಖ್ಯಂ ಕಞ್ಚಿಚ್ಛಿಷ್ಯಂ (ದೇ. ಕಞ್ಚಿಚ್ಛಿಷ್ಯಂ ಸುರೇಶ್ವರಾಖ್ಯಮ್) ಪೀಠಾಧ್ಯಕ್ಷಂ ಕೃತ್ವಾ ಸ್ವಯಂ ನಿಶ್ಚಕ್ರಾಮ' (ಆ.ಶಂ. ೬೩ ಪು. ೨೨೫: ದೇ.ಪು. ೧೯೧–೧೯೨)ಎಂದಿದೆ.[1] ವಾಕ್ಯಗಳ ಈ ಅಭಿಪ್ರಾಯವೇ ಡಿಂಡಿಮವ್ಯಾಖ್ಯಾನದಲ್ಲಿದೆ. ಈ ಸಂದರ್ಭದಲ್ಲಿ ಅದ್ವೈತರಾಜ್ಯಲಕ್ಷ್ಮೀಟೀಕೆಯ ವ್ಯಾಖ್ಯಾನದ ಟಿಪ್ಪಣಿಯು ಕಂಡುಬರುವದಿಲ್ಲ. ಇದನ್ನು ನೋಡಿದರೆ ವ್ಯಾಖ್ಯಾನಕಾರನು ಆನಂದಗಿರೀಯದಲ್ಲಿರುವ ಕಥೆಯಂತೆ ಆಚಾರ್ಯರು ಮಠವನ್ನು ಸ್ಥಾಪಿಸಿ ಭಾರತೀಸಂಪ್ರದಾಯವನ್ನು ಏರ್ಪಡಿಸಿ ಅಲ್ಲಿಗೆ ಸುರೇಶ್ವರಾಚಾರ್ಯರನ್ನು ಪೀಠಾಧಿಪತಿಗಳನ್ನಾಗಿ ಮಾಡಿದರು– ಎಂದು ಅಭಿಪ್ರಾಯವನ್ನು ಕೊಟ್ಟಿರುವಂತೆ ಕಾಣಿಸುತ್ತಿದೆ.

ಚಿದ್ವಿಲಾಸೀಯದಲ್ಲಿ (೨೪) ಈ ವಿಷಯವನ್ನು ಇನ್ನಷ್ಟು ವಿಸ್ತಾರವಾಗಿ ಕೊಟ್ಟಿದೆ :

ಶ್ರೀಮಠಂ ತತ್ರ ನಿರ್ಮಾಯ ವಿದ್ಯಾಪೀಠಮಚೀಕ್ಲೃಪತ್ |
ಚತುರ್ಹ್ಯೇಕಂ ವಾವದೂಕಂ ಸುರೇಶಾಚಾರ್ಯಮಗ್ರಿಮಮ್ ||
ಬ್ರಹ್ಮವಿದ್ಯಾವರಿಷ್ಠಂ ತಂ ತತ್ಪೀಠೇ ವಿನಿವೇಶ್ಯ ಸಃ |
ಆಜಿಜ್ಞಪತ್ಸುರೇಶಾರ್ಯಮಿತ್ಥಂ ದೇಶಿಕಪುಙ್ಗವಃ ||
ಯಸ್ತ್ವದ್ವೈತಮತೇ ಸ್ಥಿತ್ವಾ ಭಾರತೀಪೀಠನಿನ್ದಕಃ |
ಸ ಯಾತಿ ನರಕಂ ಘೋರಂ ಯಾವದಾಭೂತಸಂಪ್ಲವಮ್ ||
ಆಸೇತುಹಿಮವಚ್ಛೈಲಂ ಸದಾಚಾರಾನ್ ವಿಚಾರಯ |
ಯತ್ರ ಸ್ಖಲತಿ ಯಃ ಕೋ ವಾ ವಿಪ್ರಸ್ತಂ ಶಿಕ್ಷಯಾಧಿಕಮ್ ||
ಸಂಪ್ರದಾಯಾನ್ ದಶೈವೈತಾನ್ ಶಿಷ್ಯೇಷ್ವಾರಚಯ ಸ್ವತಃ |
ತೀರ್ಥಾಶ್ರಮವನಾರಣ್ಯಗಿರಿಪರ್ವತಸಾಗರಾಃ ||
ಸರಸ್ವತೀ ಭಾರತೀ ಚ ಪುರೀತ್ಯೇತೇ ದಶೈವ ಹಿ ||

---

1. ಇಲ್ಲಿ ಕಂಸದಲ್ಲಿಟ್ಟಿರುವದು ದೇ. ಪಾಠ. ಇಲ್ಲಿರುವ ಸುರೇಶ್ವರಪದ್ಮಪಾದರ ವಿಷಯಗಳನ್ನು ಮುಂದೆ ಪರಾಮರ್ಶಿಸುವೆವು.

ಶಿವಾತ್ ಕ್ರಮಾತ್ಸಮಾಯಾತಂ ಚನ್ದ್ರಮೌಳೀಶ್ವರಂ ಪರಮ್ ।
ರತ್ನಗರ್ಭಂ ಗಣಪತಿಂ ಪೂಜಯೇತಿ ದದೌ ಮುದಾ ॥ (೩೨ರಿಂದ ೩೬)

(1) ಮಠವನ್ನು ನಿರ್ಮಿಸಿದ್ದು (2) ಸುರೇಶ್ವರರನ್ನು ಅಲ್ಲಿ ಪೀಠಾಧಿಪತಿಗಳನ್ನಾಗಿ ಇಟ್ಟದ್ದು (3) ಭಾರತೀಸಂಪ್ರದಾಯಸ್ಥಾಪನೆ (4)ಸದಾಚಾರವಿಚಾರಣೆಗೆ ಪೀಠಾಧಿಪರನ್ನು ಗೊತ್ತುಮಾಡಿದ್ದು (5) ತೀರ್ಥಾಶ್ರಮಾದಿದಶಸಂಪ್ರದಾಯಗಳನ್ನು ಪ್ರವರ್ತನೆಮಾಡಿದ್ದು (6) ಚಂದ್ರಮೌಳೀಶ್ವರಗಣಪತಿಗಳ ಪೂಜೆಯನ್ನು ಮಾಡಬೇಕೆಂದದ್ದು – ಇಷ್ಟು ವಿಷಯಗಳೂ ಇಲ್ಲಿವೆ. ಇವುಗಳನ್ನೆಲ್ಲ ವಿವರವಾಗಿ ವಿಮರ್ಶಿಸಿಮಾಡತಕ್ಕ ಸಂದರ್ಭವು ಇದಲ್ಲ. ಸದ್ಯಕ್ಕೆ ಮಠವನ್ನು ನಿರ್ಮಿಸಿದ್ದು, ಸುರೇಶ್ವರರನ್ನು ಪೀಠದಲ್ಲಿ ನಿಲ್ಲಿಸಿದ್ದು –ಆನಂದಗಿರೀಯದಂತೆ ಇಲ್ಲಿಯೂ ಇದೆ ಎಂಬುದನ್ನು ನಾವು ಲಕ್ಷಿಸಬೇಕಾಗಿದೆ. **ಶೃಂಗೇರಿ**ಯಲ್ಲಿ ಮಠಸ್ಥಾಪನೆಯ ವಿಚಾರವು **ಮಣಿಮಂಜರೀಭೇದಿನೀ** (ವಿದ್ಯಾಪೀಠಮಥಾಕಲಯ್ಯ ಭಗವಾಂತ್ಸದ್ಭಾರತೀಯಂ ಮುದಾ ೩–೩೧), **ಭಗವತ್ಪಾದಾಭ್ಯುದಯ** (ಶಾರದಾಮಠ ಇತ್ಯೇವ ನಾಮ ಚಕ್ರೇ ೮–೩೭) –ಮುಂತಾದ ಈಚಿನ ಶಂಕರ ಚರಿತ್ರೆಗಳಲ್ಲಿಯೂ ಇದೆಯೆಂಬುದನ್ನು ಹೇಳಬೇಕಾಗಿಲ್ಲ.

ಹೀಗಿದ್ದರೂ ಈ ಮಠಸ್ಥಾಪನೆಯ ವೃತ್ತಾಂತವು ಮಾಧವೀಯದಲ್ಲಿಲ್ಲ. ಮಾಧವಾನುಸಾರಿ ಎಂದು ಕೆಲವರು ನಂಬಿರುವ **ಶಂಕರಕಥಾಸುಧಾನಿಧಿ**ಯಲ್ಲಿ:

ಭಾರತೀ ಸಮುವಲೋಕ್ಯ ಮಣ್ಡನಂ
ಮುಣ್ಡನಂ ಯತಿಮತಾನುವರ್ತಿನಮ್ !
ತಜ್ಜಯೇನ ಯತಿದೃಷ್ಟಿವರ್ತ್ಮಗಾ
ನೋ ಭವೇಯಮಿತಿ ಸಾ ತಿರೋದಧೇ ॥ (ಶಂ.ಕ.ಸು. ೫–೧)

ಮುಂಡನನು ಯತಿಯಾಗಲು ಯತಿದೃಷ್ಟಿಗೋಚರನಾದೇನೆಂಬ ಭಯದಿಂದ ಅದೃಶ್ಯಳಾದಳು ಎಂದೂ ಅಶರೀರವಾಣಿಯಿಂದ 'ನೀನು ಸ್ಮರಿಸಿದಲ್ಲಿ ನಾನು ಸಂನಿಹಿತಳಾಗಿರುವೆನು' ಎಂದು ಹೇಳಿದಳೆಂದೂ ಬರೆದಿದೆ. ಮುಂದೆ ಆಚಾರ್ಯರು ಶೃಂಗೇರಿಗೆ ಬಂದಾಗ ಅವರ ಸ್ಮರಣೆಯಿಂದ ಪ್ರಸನ್ನಳಾಗಿ ಇಲ್ಲಿ ನಿತ್ಯವೂ ನನ್ನ ಪೂಜೆಯನ್ನೇ ಮಾಡು (ವಿಧೇಯಾ ಮುದ್ಯೈವ ಪೂಜಾ ನಿತ್ಯಂ ಯತೀನ್ದ್ರೇತಿ ಪುನಃಪುನಸ್ತವ್ ೫–೨೫) ಎಂದು ಬಾರಿಬಾರಿಗೂ ಹೇಳಲು ಅದರಂತೆ ಆಲ್ಲಿ ರಮ್ಯವಾದ **ಮಠ**ವನ್ನು ನಿರ್ಮಿಸಿದರೆಂದು ಬರೆದಿದೆ. (ವಾಚಂ ತದೀಯಾಂ ಬಹು ಮನ್ಯಮಾನಸ್ತಥೇತಿ ನಿರ್ಮಾಯ ಮಠಂ ಸುರಮ್ಯಮ್) ಎಂದು ಕವಿಯು ತನ್ನದೇ ಒಂದು ಕಲ್ಪನೆಯನ್ನು ಪ್ರಕಟಿಸಿರುತ್ತಾನೆ.

ಈಗ ಶಾರದಾಪೀಠಸ್ಥಾಪನೆಯ ವಿಷಯಕ್ಕೆ ಸ್ವಲ್ಪ ವಿಮರ್ಶಿಮಾಡುವ ಕಾಲವು ಒದಗಿದೆ. ಇಲ್ಲಿ ಪರಿಶೀಲಿಸಬೇಕಾದ ಮುಖ್ಯವಿಷಯಗಳು ಯಾವವೆಂದರೆ:

(೧) ಆಚಾರ್ಯರು ಶೃಂಗೇರಿಯಲ್ಲಿ ಮಠವನ್ನು ಸ್ಥಾಪಿಸಿದರೆಂದು ಅನೇಕ ಶಂಕರವಿಜಯಗಳಲ್ಲಿ ಹೇಳಿದೆಯಾದರೂ ಆ ಬಗ್ಗೆ ಶಾಸನಗಳೂ ಆಧಾರವೂ ಇಲ್ಲವಾದಿಲ್ಲ. ಶಾ.ಶ. ೧೨೬೮ನೆಯ ಪಾರ್ಥಿವಸಂವತ್ಸರದ ? ಬಹುಳ ಗುರುವಾರ ದಲ್ಲೂ ಶ್ರೀ ವೀರಹುಹರ ಒಡೆಯರು ಮುಂತಾದವರು ಕೊಟ್ಟ ಶಾಸನದಲ್ಲಿ 'ಭಾರತೀತೀರ್ಥ ಶ್ರೀಪಾದಂಗಳವರೂ ಅವರ ಶಿಷ್ಯಾದಿಗಳೂ ಆ ಶೃಂಗೇರಿಯ ತೀರ್ಥವಾಸದಲ್ಲು, ಅನುಷ್ಠಾನಮಾಡಿಹದಕ್ಕೆ'[1] ಎಂದು ಬರೆದಿದೆಯಂತೆ (ಸೋ.ಶಂ. ಪು. ೧೬೧)[1] ಆದರಲ್ಲಿ ಶಾರದಾಪೀಠದ ಪ್ರಸ್ತಾಪವೇಕಿಲ್ಲ ?—ಎಂಬುದು ಆಲೋಚನೀಯವಾಗಿದೆ.

(೨) ಶಂಕರವಿಜಯಗಳಲ್ಲಿ ಮಂತ್ರಶಾಸ್ತ್ರದ ಪರಾಮರ್ಶವು ಕಾಣಬರುತ್ತಿದೆ. ಮಂತ್ರಶಕ್ತಿಯಿಂದ ದೇವತೆಗಳನ್ನು ಆಹ್ವಾನಿಸುವದು, ಅವರನ್ನು ದಿಗ್ಬಂಧನ ಮಾಡುವದು–ಮುಂತಾದ ಅದ್ಭುತಗಳೂ ಅಲ್ಲಲ್ಲಿ ಪ್ರಸ್ತಾಪಿತವಾಗಿವೆ. ಪ್ರಕೃತವಾದ ಶೃಂಗೇರಿಯಲ್ಲಿ ಆಚಾರ್ಯರು ಶಾರದಾದೇವಿಯನ್ನು 'ಮಂತ್ರಶಾಸ್ತ್ರವಿಧಾನದಿಂದ ಬರೆದ ಶ್ರೀಚಕ್ರದ ಮೇಲೆ ಸ್ಥಾಪಿಸಿದರೆಂದು' (ಶ್ರೀಚಕ್ರಂ ತತ್ರ ಸಲ್ಲಿಖ್ಯ ಮನ್ತ್ರಶಾಸ್ತ್ರವಿಧಾನತಃ....) ಎಂದು ಚಿದ್ವಿಲಾಸರು ಅದರ ವಿವರಸಮೇತ (೨೪-೨೧ ರಿಂದ ೨೩) ವರ್ಣಿಸಿರುತ್ತಾರೆ. ಮಾಧವನೂ ಹನ್ನೆರಡನೆಯ ಸರ್ಗದಲ್ಲಿ ಆಚಾರ್ಯರು ಮೂಕಾಂಬಿಕೆಯನ್ನು ಸ್ತೋತ್ರಮಾಡಿದಂತೆ ವರ್ಣಿಸಿರುವಲ್ಲಿ (೧೨-೨೭ರಿಂದ ೩೭ರವರೆಗೆ) ಮುಂತ್ರಶಾಸ್ತ್ರದ ಪರಿಚಯವನ್ನು ಆಚಾರ್ಯರಿಗೆ ಕೂಡಿಸಿ ಬರೆದಿರುತ್ತಾನೆ. ಆಚಾರ್ಯರಿಗೆ ಮುಂತ್ರಶಾಸ್ತ್ರವು ಯಾರಲ್ಲಿ ಯಾವಾಗ ಆಯಿತೆಂಬ ವಿವರವನ್ನು ಮಾತ್ರ ಕೊಟ್ಟಿರುವದಿಲ್ಲ. ಇದರ ರಹಸ್ಯವೇನು ?

(೩) ಶೃಂಗೇರಿಯ ಪೀಠದ ವಿಷಯಕ್ಕೆ ಚಿದ್ವಿಲಾಸರು ನಾಲ್ಕು ಅಧ್ಯಾಯಗಳಷ್ಟು (ಇಡಿಯ ಗ್ರಂಥದ ಎಂಟನೆಯಂಶದಷ್ಟು) ಸ್ಥಾನವನ್ನು ಕಲ್ಪಿಸಿಟ್ಟಿರುತ್ತಾರೆ. ಆದರೆ ಮಾಧವೀಯದಲ್ಲೇಕೆ ಅದರ ಪ್ರಸ್ತಾಪವಿಲ್ಲ ?

ಇದನ್ನೂ ಮಿಕ್ಕ ವಿವರಗಳನ್ನೂ ಮಠಗಳ ಪ್ರಸ್ತಾಪವನ್ನು ಮಾಡುವಾಗ ಮತ್ತೆ ವಿಚಾರಕ್ಕೆ ತೆಗೆದುಕೊಳ್ಳುವೆವು.

ತೋಟಕಾಚಾರ್ಯರ ಶಿಷ್ಯವೃತ್ತಿ

೧೨೯. ಆಚಾರ್ಯರು ಶೃಂಗೇರಿಯಲ್ಲಿದ್ದಷ್ಟು ಕಾಲವೂ ದೇವಿಗೆ ಪೂಜೆಗೆ ಏರ್ಪಡಿಸಿದ್ದೇ ಅಲ್ಲದೆ ತಮ್ಮ ಭಾಷ್ಯಗ್ರಂಥಗಳನ್ನು ಶಿಷ್ಯರಿಗೆ ಪಾಠಹೇಳುತ್ತಾ

1. ಈಚೆಗೆ 'ಶೃಂಗೇರೀ ಶ್ರೀಮಠೀಯಪ್ರಾಕ್ತನಲೇಖನಮಾಲಾಸಂಗ್ರಹ' ವೆಂಬ ಪುಸ್ತಕವೊಂದು ನಮಗೆ ದೊರೆತಿದೆ. ಅದರಲ್ಲಿ ಪ್ರಕಟವಾಗಿರುವ ಮೊದಲನೆಯ ಶಾಸನವಿದು. ಶಾ. ಶ. ೧೩೭೭ರಲ್ಲಿ ಬರೆದ ಶಾಸನದಲ್ಲಿ 'ಈ ಮಠದ ಪರಿಚರಿಯಕ್ಕೆ' ಎಂಬ ಮಾತು ನಮಗೆ ಕಂಡುಬಂದಿದೆ.

ಕಾಲವನ್ನು ಕಳೆಯುತ್ತಿದ್ದರು. ಆಗ ಒಬ್ಬ ಶಿಷ್ಯನು ಆಚಾರ್ಯರನ್ನು ಎಡೆಬಿಡದೆ ಸೇವಿಸುತ್ತಿದ್ದನು. ಓಮ್ಮೆ ಅವನು ಆಚಾರ್ಯರ ಶಾಟಿಗಳನ್ನು ಒಗೆದುಕೊಂಡು ಬರುವದಕ್ಕೆ ಹೋಗಿದ್ದನು. ಶಿಷ್ಯರು ಶಾಂತಿಪಾಠವನ್ನು ಹೇಳುವದಕ್ಕೆ ಪ್ರಾರಂಭಿಸಲು 'ಗಿರಿಯೂ ಬರಲಿ' ಎಂದರು. 'ಅವನೇನೂ ಅಂಥ ಬುದ್ಧಿವಂತನಲ್ಲ, ಶಾಸ್ತ್ರಕ್ಕೆ ಅಧಿಕಾರಿಯೂ ಅಲ್ಲ; ಅವನಿಗಾಗಿ ಏತಕ್ಕೆ ಕಾಯಬೇಕು?' ಎಂದು ಪದ್ಮಪಾದರು ಎನ್ನಲು ಅವರ ಗರ್ವವನ್ನು ಪರಿಹಾರಮಾಡಬೇಕೆಂಬ ಮತ್ತು ಆಶ್ರಿತನಾಗಿದ್ದ ಗಿರಿಯಲ್ಲಿ ಕರುಣೆಯನ್ನು ತೋರಿಸಬೇಕೆಂಬ ಇಚ್ಛೆಯಿಂದ ಆಚಾರ್ಯರು ಅವನಿಗೆ 'ಹದಿನಾಲ್ಕು ವಿದ್ಯೆಗಳನ್ನು' ಮನಸ್ಸಿನಿಂದಲೇ ಉಪದೇಶಮಾಡಿದರು (ತಸ್ಯ ಗರ್ವಮುಪಜಹರ್ತುಮುಖರ್ವಂ ಸ್ವಾಶ್ರಯೇಷು ಕರುಣಾತಿಶಯಾಚ್ಚ | ವ್ಯಾದಿದೇಶ ಸ ಚತುರ್ದಶವಿದ್ಯಾಃ ಸದ್ಯ ಏವ ಮನಸಾ ಗಿರಿನಾಮ್ನೇ || ೧೨-೭೮)—ಗುರ್ವನುಗ್ರಹದಿಂದ ಆತನು ಬಂದಕೂಡಲೆ ಆಚಾರ್ಯರನ್ನು ಹೊಗಳುವ ವೇದಾಂತಸಿದ್ಧಾಂತ ಪ್ರಧಾನವಾದ ಕೆಲವು ತೋಟಕವೃತ್ತಶ್ಲೋಕಗಳಿಂದ ಅವರನ್ನು ಸ್ತುತಿಸಿದನು. ಆ ಪ್ರಕರಣವೂ ತೋಟಕವೆಂಬ ಹೆಸರಿನಿಂದಲೇ ಪ್ರಸಿದ್ಧವಾಗಿದೆ. ಆ ಶಿಷ್ಯನೂ ಅಂದಿನಿಂದ ತೋಟಕಾಚಾರ್ಯನೆಂಬ ಹೆಸರಿನಿಂದಲೇ ಪ್ರಖ್ಯಾತನಾದನು; ಪದ್ಮಪಾದರಿಗೆ ಸಮಾನವಾದ ಪ್ರತಿಭೆಯುಳ್ಳವನಾಗಿ ಮುಖ್ಯಶಿಷ್ಯಸ್ಥಾನವನ್ನು ಪಡೆದುಕೊಂಡನು (ಪೂರ್ಣ. ಶಂ. ೧೨-೭೦ರಿಂದ ೮೬).

ವ್ಯಾಸಾಚಲೀಯದಲ್ಲಿ ತೋಟಕಾಚಾರ್ಯರು ಆಚಾರ್ಯರಿಗೆ ಭಗಂದರ ರೋಗವು ಬಂದಿದ್ದಾಗ ಸೇವೆಗೆ ನಿಂತಿದ್ದರೆಂದು (ವ್ಯಾ. ಶಂ. ೯-೪೪ರಿಂದ೭೭) ವರ್ಣಿಸಿದೆ. ಅಲ್ಲಿ ಪೂರ್ಣವೀಯವ ಅನೇಕ ಪದ್ಯಗಳು ಕಾಣುತ್ತವೆ; ಆದರೆ ಉಳಿದ ಶಿಷ್ಯರುಗಳ ಅಸೂಯೆಯಾಗಲಿ, ಶಾಂತಿಪಾಠದ ಪ್ರಕರಣವಾಗಲಿ ಇಲ್ಲ. ಬಹಳವುಟ್ಟಿಗೆ ವ್ಯಾಸಾಚಲೀಯವನ್ನೇ ಅನುಸರಿಸಿರುವ ಗೋವಿಂದನಾಥನು ಹಸ್ತಾಮಲಕನ ಲಾಭವಾದ ಬಳಿಕವೇ ತೋಟಕಾಚಾರ್ಯರ ಕಥೆಯನ್ನು ವರ್ಣಿಸಿರುತ್ತಾನೆ; ಅಲ್ಲಿ ಭಗಂದರದ ಸಂದರ್ಭವು ಪರಾಮೃಷ್ಟವಾಗಿರುವದಿಲ್ಲ.

ಚಿದ್ವಿಲಾಸೀಯದಲ್ಲಿ ಆಚಾರ್ಯರಿಗೆ ವ್ಯಾಸದರ್ಶನವಾಗುವ ಮುಂಚೆಯೇ ಕಾಶಿಯಲ್ಲಿ ತೋಟಕಾಚಾರ್ಯರ ಪರಿಚಯವಾದಂತೆ ಬರೆದಿದೆ. ಕಾಶಿಯಲ್ಲಿ ವಿಶ್ವನಾಥಾಧ್ವರಿಯ ಮಗನಾದ ಕಲಾನಾಥನೆಂಬಾತನು ಆಚಾರ್ಯರು ಅಲ್ಲಿಗೆ ಬಂದಿದ್ದಾರೆಂಬುದನ್ನು ತಿಳಿದು ತೋಟಕವೃತ್ತದಿಂದ,

ವಿದಿತಾಖಿಲಶಾಸ್ತ್ರಸುಧಾಜಲಧೇ | ಮಹಿತೋಪನಿಷತ್ಕಥಿತಾರ್ಥನಿಧೇ |
ಹೃದಯೇ ಕಲಯೇ ವಿಮಲಂ ಚರಣಂ | ಭವ ಶಙ್ಕರದೇಶಿಕ ಮೇ ಶರಣಮ್ ||

ಎಂದು ಮೊದಲಾಗಿರುವ ಎಂಟು ಪದ್ಯಗಳನ್ನು ಹೇಳಿಕೊಂಡು ಆಚಾರ್ಯರ ಪಾದಕ್ಕೆ ಬಿದ್ದನು. ಅಲ್ಲಿಂದ ಮುಂದಕ್ಕೆ ಆಚಾರ್ಯರ ಸೇವೆಯನ್ನು ಮಾಡುತ್ತಾ

ಉಳಿದ ಮುಖ್ಯಶಿಷ್ಯರ ಸಮಾನಪದವಿಗೆ ಏರಬೇಕೆಂಬ ಅಭಿಲಾಷೆಯುಳ್ಳವನಾಗಿದ್ದನು. ಆಚಾರ್ಯರು ಅವನನ್ನು ಕರೆದು ಕರುಣಾಕಟಾಕ್ಷದಿಂದ ನೋಡಿ ಅವನಿಗೆ ಅಸಾಧಾರಣಕೌಶಲವನ್ನು ಅನುಗ್ರಹಿಸಿದರು. ಅವನು ತನಗೆ ಸಂನ್ಯಾಸವನ್ನು ಕೊಡಬೇಕೆಂದು ಕೇಳಿಕೊಂಡಪ್ರಕಾರ ಆಶ್ರಮವನ್ನು ಕೊಟ್ಟು ಆಚಾರ್ಯರು "ನಿನ್ನ ಮುಖದಿಂದ ತೋಟಕವೃತ್ತವು ಬಂದಿರುವ ಕಾರಣ ನಿನಗೆ ತೋಟಕಾಚಾರ್ಯನೆಂದೇ ಹೆಸರಾಗಲಿ!" ಎಂದು ಆಶೀರ್ವದಿಸಿದರು (ಚಿ. ಶಂ. ೧೩-೧೦೦ದಿಂದ ೨೦). ಆನಂದಗಿರೀಯದಲ್ಲಿ ಈ ಕಥೆಯಿರುವಂತೆ ಕಾಣಿಸಲಿಲ್ಲ.

ತೋಟಕಾಖ್ಯಾನದ ವಿಮರ್ಶೆ

೧೩೦. ಈ ಕಥೆಯ ವಿಷಯದಲ್ಲಿ ವಿಮರ್ಶೆಮಾತಿಕ್ಕೆ ವಿಷಯಗಳು ಯಾವವೆಂದರೆ :

(೧) ತೋಟಕಾಚಾರ್ಯರ ಪೂರ್ವಾಶ್ರಮದ ಹೆಸರು ಯಾವದು? ಎಂಬುದು ಅನಿಶ್ಚಿತವಾಗಿದೆ. ಗಿರಿ ಎಂದು ಮಾಧವೀಯದಲ್ಲಿದೆ; ಇದನ್ನು 'ಆನಂದಗಿರಿ' ಎಂದು ಈಗ ಕೆಲವರು ಭ್ರಾಂತಿಯಿಂದ ಮಾರ್ಪಡಿಸಿಕೊಂಡಿರುತ್ತಾರೆ. ಕಲಾನಾಥ ಎಂದು ಚಿದ್ವಿಲಾಸೀಯದಲ್ಲಿದೆ. ಇದೆಲ್ಲ ಯಾವದಾದರೊಂದು ಹೆಸರು ಇರಬೇಕೆಂದು ಕಲ್ಪಿಸಿದ್ದೇ ಹೊರತು ಮತ್ತೇನೂ ಆಲ್ಲವೆಂಬುದು ಸ್ಪಷ್ಟ.

(೨) **ತೋಟಕವೃತ್ತದಲ್ಲಿರುವ** ಈ ಪದ್ಯಗಳು ಯಾವದೋ ಒಂದು ಕ್ರಮವದಲ್ಲಿ ಶಂಕರವಿಜಯಗಳಿಗಿಂತ ಮೊದಲೇ ಇದ್ದಿರಬೇಕು. ಶಂಕರವಿಜಯಕಾರರು ಅವನ್ನು ಒಬ್ಬ ಶಿಷ್ಯರಿಗೆ ಸಂಬಂಧಿಸಿ ಬರೆದಿರಬಹುದು– ಎಂದು ಹೇಳಬೇಕಾಗಿದೆ. **ಡಿಣ್ಡಿಮಕಾರನು** : 'ಭಗವನ್ನುದಧೌ ಮೃತಿಜನ್ಮಜಲೇ' ಎಂಬುದನ್ನು ಹಿಡಿದು 'ಯತ ಏವಮತೋಽಸಿ ಸದೈವ ಸದಾ' ಎಂಬವರೆಗಿನ ಐದು ಪದ್ಯಗಳನ್ನು ಬರೆದು "ಇತ್ಯಾದಿಭಿರ್ಗುರುಶಿಷ್ಯಸಂವಾದೇನ ಪರತತ್ತ್ವವ್ಯಞ್ಜಕೈಃ .... ತೋಟಕವೃತ್ತೈಃ ಸಹ ದೇಶಿಕವರಂ ಶ್ರೀಶಙ್ಕರಂ ಪ್ರತ್ಯಾಗತವಾನ್ ಇತ್ಯರ್ಥಃ' (ಇವೇ ಮುಂತಾದ ಗುರುಶಿಷ್ಯಸಂವಾದದಿಂದ ಪರತತ್ತ್ವವನ್ನು ಹೊರಗೆಡಹುವ ತೋಟಕವೃತ್ತಗಳೊಡನೆ ಗುರುಶ್ರೇಷ್ಠರಾದ ಶ್ರೀಶಂಕರರ ಬಳಿಗೆ ಬಂದನು) ಎಂದು ಬರೆದಿರುವದರಿಂದ ಆತನ ಕಾಲದಲ್ಲಿ ಈ ಐದು ಪದ್ಯಗಳಾದಮೇಲೆಯೇ "ವಿದಿತಾಖಿಲಶಾಸ್ತ್ರಸುಧಾಜಲಧೇ" ಮುಂತಾದ ಪದ್ಯಗಳಿದ್ದವೆಂದು ಕಲ್ಪಿಸಬೇಕಾಗುತ್ತದೆ. ಆದರೆ ಚಿದ್ವಿಲಾಸೀಯದಲ್ಲಿ ಸ್ಪಷ್ಟವಾಗಿ "ವಿದಿತಾಖಿಲಶಾಸ್ತ್ರಸುಧಾಜಲಧೇ" ಎಂದೇ ಪ್ರಾರಂಭವಾಗಿ ಎಂಟು ಪದ್ಯಗಳನ್ನು ಬರೆದಿದೆ. ಮಿಕ್ಕ ಪದ್ಯಗಳು ಇದ್ದವೆಂಬುದಕ್ಕೆ ಅಲ್ಲಿ ಯಾವ ಗುರುತೂ ಇಲ್ಲ. **ಸೋಮನಾಥಯ್ಯನವರು** ಬರೆದುಕೊಂಡಿರುವ ಈ ಪ್ರಕರಣಪಾಠದಲ್ಲಿ "ವಿದಿತಾಖಿಲ" ಎಂದು ಮುಂತಾದ ಎಂಟು ಶ್ಲೋಕಗಳಾದ ಮೇಲೆಯೇ "ಭಗವನ್ನುದಧೌ" ಮುಂತಾದ ಐದು ಪದ್ಯಗಳಿವೆ.

ಆವರು ಯಾವ ಮೂಲವನ್ನು ಅನುಸರಿಸಿ ಬರೆದರೋ ತಿಳಿಯುವಂತಿಲ್ಲ. ಆನಂದಾಶ್ರಮದಲ್ಲಿ ಪ್ರಕಟವಾಗಿರುವ **ಮಾಧವೀಯ**ದಲ್ಲಿ ಸಂಪಾದಕರು ಒಂದು ಟಿಪ್ಪಣಿಯನ್ನು ಹಾಕಿದಾರೆ : "ಆಗ್ರಿಮಂ ಪದ್ಯದ್ವಯಂ ಪುಸ್ತಕೇ "ಭಗವನ್ನುಪ ದಧ್ಮೌ" ಇತ್ಯಾದಿ ಶ್ಲೋಕಪಞ್ಚಕಾತ್ ಪ್ರಾಗಧಿಕಂ ದೃಶ್ಯತೇ—

ಸಕಲಂ ಮನಸಾ ಕ್ರಿಯಯಾ ಜನಿತಂ ಸಮವೇಕ್ಷ್ಯ ವಿನಾಶಿತಯಾ ತು ಜಗತ್ ।
ನಿರವದ್ಯತ ಕಶ್ಚಿದತೋ ನಿಖಿಲಾದವಿನಾಶಿಕೃತೇ ಯತಿತವ್ಯಮಿತಿ ॥ ೧ ॥

ಪ್ರತ್ರಿಪಿತ್ಸುರಸಾವವಿನಾಶಿಪದಂ ಯತಿಧರ್ಮರತೋ ಯತಿಮೇವ ಗುರುಮ್ ।
ವಿದಿತಾತ್ಮಕಲಂ ಸಮುಪೇತ್ಯ ಕವಿಃ ಪ್ರಣಿಪತ್ಯ ನಿವೇದಿತವಾನ್ ಸ್ವಮತಮ್ ॥ ೨ ॥

ಈ ಟಿಪ್ಪಣಿಯಂತೆ ವಾಖ್ಯಾನದಲ್ಲಿ ಕೊಟ್ಟಿರುವ ಐದು ಪದ್ಯಗಳಿಗಿಂತ ಮುಂಜೆ ಈ ಎರಡು ಪದ್ಯಗಳಿರುವ ಪಾಠಾಂತರವೂ ಇತ್ತು. ಕ್ರಿಯಾಜನ್ಯವಾದದ್ದೆಲ್ಲವೂ ವಿನಾಶಿಯೇ ಎಂದು ಮನಸ್ಸಿನಿಂದ ನಿಶ್ಚಯಿಸಿ ಎಲ್ಲಿದರ ವಿಷಯಕ್ಕೆ ವಿರಕ್ತನಾಗಿ ಅವಿನಾಶಿಯಾದದ್ದನ್ನು ಪಡೆಯುವದಕ್ಕೇ ಪ್ರಯತ್ನಿಸಬೇಕೆಂದು ಹೊರಟ ಸಂನ್ಯಾಸಿಯೊಬ್ಬನು ಯತಿಗಳಾದ ಗುರುಗಳ ಬಳಿಯಲ್ಲಿ ತನ್ನ ಅಭಿಪ್ರಾಯವನ್ನು ನಮಸ್ಕಾರಪೂರ್ವಕವಾಗಿ ಬಿನ್ನವಿಸಿಕೊಂಡನು– ಎಂಬುದು ಆ ಪದ್ಯಗಳ ಅಭಿಪ್ರಾಯ. ಈ ಪದ್ಯಗಳು ನಿಜವಾಗಿಯೂ ಪ್ರಕೃತಶ್ಲೋಕಗಳ ಮೊದಲು ಇದ್ದದ್ದು ನಿಜವಾದರೆ ಒಬ್ಬಾನೊಬ್ಬ ವಿರಕ್ತನಾದ ಮುಮುಕ್ಷುವು ಗುರುವಿನ ಬಳಿಗೆ ಹೋಗಿ ತತ್ತ್ವವನ್ನು ಕೇಳಿದಂತೆ ಬರೆದ ಪ್ರಕರಣವಿದು. ಅದರಲ್ಲಿ ಗುರುಶಿಷ್ಯಸಂವಾದವೂ ಇರುವದರಿಂದ ಇದನ್ನು ತೋಟಕಾಚಾರ್ಯರಿಗೆ ಶಂಕರವಿಜಯಕಾರರು ಗಂಟು ಹಾಕಿದರೆಂದು ಕಲ್ಪಿಸಬೇಕಾಗುತ್ತದೆ. ಇದರ ವಿಷಯಕ್ಕೆ ಪಾಚಕರೇ ತಮ್ಮ ತಮ್ಮ ತೀರ್ಮಾನವನ್ನು ಮಾಡಿಕೊಳ್ಳಬೇಕಾಗಿದೆ. ಈ ಹಸ್ತಾಮಲಕತೋಟಕ ವೃತ್ತಾಂತಗಳು ಪದ್ಮಪಾದಸುರೇಶ್ವರಕಥೆಗಳಂತೆಯೇ ಶಂಕರವಿಜಯಕಾರರ ಕಲ್ಪನಾಪ್ರಪಂಚಕ್ಕೇ ಸೇರಿದವುಗಳು ; ಆದ್ದರಿಂದಲೇ ಈ ವಿಷಯದ ವೃತ್ತಾಂತ ಕಥನಗಳಲ್ಲಿ ಹೊಂದಿಕೆಯಿಲ್ಲದೆಹೋಗಿದೆ ಎಂತ ನಮಗಂತೂ ತೋರುತ್ತದೆ.

ಮುಖ್ಯತಾರ್ಥವೇನೆಂದರೆ, ಆಚಾರ್ಯರಿಗೆ ನಾಲ್ಕು ಜನ ಪ್ರಮುಖಶಿಷ್ಯರೆಂಬುದು ನಿಶ್ಚಿತ ; ಅವರು ಒಳ್ಳೆಯ ಪ್ರತಿಭಾವಂತರಾಗಿ ಆಚಾರ್ಯರ ಅನುಗ್ರಹಕ್ಕೆ ಪಾತ್ರರಾಗಿದ್ದರೆಂಬುದೂ ನಿಶ್ಚಿತ. **ಮಾಧವೀಯ**ದಲ್ಲಿ ಕಾಣುವ ಈ ಮುಂದಿನ ಉತ್ಪ್ರೇಕ್ಷೆಯ ಪದ್ಯಕ್ಕೆ ಅವರು ನಿಜವಾಗಿಯೂ ಲಕ್ಷ್ಯರಾಗಿದ್ದರೆಂಬುದಕ್ಕೆ ಯಾವ ಸಂಶಯವೂ ಇಲ್ಲ :

ಪುಮರ್ಥಾಶ್ಚತ್ವಾರಃ ಕಿಮುತ ನಿಗಮಾ ಋಕ್ಪ್ರಭೃತಯಃ
ಪ್ರಭೇದಾ ವಾ ಮುಕ್ತೇರ್ವಿಮಲತರಸಾಲೋಕ್ಯಮುಖರಾಃ ।
ಮುಖಾನ್ಯಾಹೋ ಧಾತುಶ್ಚಿರಮಿತಿ ವಿಮೃಶ್ಯಾಥ ವಿಬುಧಾ
ವಿದುಃ ಶಿಷ್ಯಾನ್ ಹಸ್ತಾಮಲಕಮುಖರಾನ್ ಶಙ್ಕರಗುರೋಃ ॥

ಹಸ್ತಾಮಲಕರೇ ಮೊದಲಾದ ಶಂಕರಗುರುವಿನ ನಾಲ್ವರು ಶಿಷ್ಯರನ್ನು ಕಂಡು–ಇವರೇನು ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳೊ, ಅಥವಾ ಋಗಾದಿಚತುರ್ವೇದಗಳೊ, ಅಥವಾ ಸಾಲೋಕ್ಯಸಾಮೀಪ್ಯಸಾರೂಪ್ಯಸಾಯುಜ್ಯಗಳೆಂಬ ಮುಕ್ತಿವಿಶೇಷಗಳೊ, ಅಥವಾ ಬ್ರಹ್ಮನ ನಾಲ್ಕು ಮುಖಗಳೊ !–ಎಂದು ಪಂಡಿತರು ಬಹುಕಾಲ ವಿಮರ್ಶಿಸುತ್ತಿದ್ದರು' ಎಂಬುದು ಪದ್ಯದ ಅಭಿಪ್ರಾಯ.

(೩) **ಶಾಂತಿಪಾಠವು ಯಾವಾಗ, ಹೇಗೆ ಆಚರಣೆಗೆ ಬಂತು ?** ಗಿರಿಯು ಬರುವದಕ್ಕೆ ಮುಂಚೆ 'ಶಾಂತಿಪಾಠ'ವನ್ನು ಹೇಳುವದಕ್ಕೆ ಮೊದಲುಮಾಡಿದರು–ಎಂದು ಮಾಧವನು ತಟ್ಟನೆ ಹೇಳಿಬಿಟ್ಟಿರುತ್ತಾನೆ. ಹಿಂದೆ ಗೋವಿಂದಭಗವತ್ಪಾದರಾಗಲಿ ಆಚಾರ್ಯರಾಗಲಿ ಉಪನಿಷದರ್ಥವನ್ನು ಅಥವಾ ಸೂತ್ರಾರ್ಥವನ್ನು ವಿವರಿಸುವ ಮುಂಚೆ ಶಾಂತಿಪಾಠವನ್ನು ಈ ಅನುಕ್ರಮದಲ್ಲಿ ಹೇಳಬೇಕೆಂದು ಉಪದೇಶಮಾಡಿರುವದು ಕಾಣಬರುವದಿಲ್ಲ. ಉಪನಿಷತ್ತುಗಳ ಆದಿಯಲ್ಲಿ, ನಡುವೆ, ಅಥವಾ ಅಂತ್ಯದಲ್ಲಿ ಈ ಪಾಠಗಳು ಅಲ್ಲಲ್ಲಿ ಕಂಡುಬರುತ್ತವೆ: ಭಾಷ್ಯಕಾರರೂ ಅಲ್ಲಲ್ಲಿಯೇ ಇವಕ್ಕೆ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಇವುಗಳನ್ನೆಲ್ಲ ಒಟ್ಟುಗೂಡಿಸಿ ಒಂದಾನೊಂದು ಕ್ರಮದಲ್ಲಿ ಪಠಿಸಬೇಕೆಂದು ಆಚಾರ್ಯರೂ ಎಲ್ಲಿಯೂ ಬರೆದಿರುವದಿಲ್ಲ ; ಸ್ಮೃತ್ಯಾದಿಗಳಲ್ಲಿಯೂ ಶಾಂತಿಪಾಠವು ವಿಹಿತವಾಗಿರುವಂತೆ ಕಾಣುವದಿಲ್ಲ. ಶಾಂತಿಗಳ ಪಾಠಕ್ರಮವೂ ಬೇರೆಬೇರೆಯ ಕಡೆಗಳಲ್ಲಿ ಬೇರೆಬೇರೆಯಾಗಿರುವದು ಕಂಡುಬರುತ್ತದೆ. ಮಾಧವನ ಕಾಲಕ್ಕೆ ಶಾಂತಿಪಾಠವನ್ನು ಹೇಳಿಕೊಂಡು ಭಾಷ್ಯವನ್ನು ಓದುವ ಕ್ರಮವು ಆಚರಣೆಗೆ ಬಂದಿತ್ತೆಂದು ಮಾತ್ರ ನಾವು ಕಲ್ಪಿಸಬಹುದು. ಇದು ಶಿಷ್ಟಾಚಾರವಾಗಿರುವದರಿಂದ ನಾವೂ ಇದನ್ನು ಅನುಸರಿಸತಕ್ಕದ್ದು– ಎಂದು ಹೇಳಬಹುದು. ಅಷ್ಟೆ. ಆದರೆ ಇದು ಸಂಸ್ಕಾರವೆ ? ಎಂಬುದು ಮಾತ್ರ ಇನ್ನೂ ನಿರ್ಧಾರಣೀಯಪ್ರಶ್ನೆಯೇ ಆಗಿರುತ್ತದೆ. ಆತ್ಮವಿದ್ಯೆಯನ್ನು ಹೇಳುವಾಗ ಉಪಸತ್ತಿಯೂ ಉಪನಯನವೂ ಆವಶ್ಯವೆಂದು ಸೂತ್ರಭಾಷ್ಯದಲ್ಲಿ ಆಚಾರ್ಯರು (ಪ್ರ. ೧–೧, ಛಾಂ. ೫–೧೧–೭, ೭–೧–೧. ಮುಂತಾದ) ಉಪನಿಷತ್ತುಗಳ ಆಧಾರದಿಂದ ಬರೆದಿರುತ್ತಾರೆ. ಆ ಸಂಸ್ಕಾರದಲ್ಲಿ ಶಾಂತಿಪಾಠವು ಸೇರಿದೆಯೆಂದು ಸ್ಮೃತ್ಯಾದಿಗಳಿಂದ ಸಿದ್ಧವಾಗುವದೆ?–ಎಂಬುದನ್ನು ಅಧ್ಯಯನಸಂಪ್ರದಾಯವನ್ನು ಬಲ್ಲವರು ಪರಿಶೀಲಿಸಿ ನಿಶ್ಚಯಿಸಬೇಕಾಗಿದೆ.

ಪದ್ಮಪಾದಾದಿಶಿಷ್ಯರುಗಳಲ್ಲಿ ಸ್ಪರ್ಧೆ :

೧೩೧. ಒಮ್ಮೆ ಸುರೇಶ್ವರರು ಗುರುಗಳಿಗೆ ನಮಸ್ಕಾರವನ್ನು ಮಾಡಿ ಗಂಭೀರಭಾವದ ಶಾರೀರಕಕ್ಕೆ ಒಂದು ಸ್ಫುಟವೃತ್ತಿಯನ್ನು ಮಾಡಬೇಕೆಂದು ಮನಸ್ಸು ಮಾಡಿ 'ಗುರುವೆ, ನಾನು ಏನುಮಾಡಬೇಕೋ ಅದನ್ನು ಅಪ್ಪಣೆಕೊಡಿಸಿರಿ ; ಬದುಕಿದ್ದಕ್ಕೆ ಗುರುಗಳಲ್ಲಿ ಭಕ್ತಿಯಿರುವದೇ ಸಾರ್ಥಕ್ಯವಲ್ಲವೆ ?' ಎಂದರು.

ಆಚಾರ್ಯರು ನನ್ನ ಭಾಷ್ಯಕ್ಕೆ ವಾರ್ತಿಕವನ್ನು ಮಾಡು ಎಂದರು. ಈ ವಿಷಯವನ್ನು ತಿಳಿದ ಪದ್ಮಪಾದಶಿಷ್ಯರಾದ ಚಿತ್ಸುಖಾಚಾರ್ಯರೇ ಮೊದಲಾದವರು ರಹಸ್ಯವಾಗಿ ಆಚಾರ್ಯರನ್ನು ಒಬ್ಬೊಬ್ಬರಾಗಿ ಕಂಡು ಇಂತೆಂದರು ; ಇವನು ವಿದ್ವಾಂಸನು, ಕರ್ಮನಿಷ್ಠನು, ಈಶ್ವರನನ್ನೇ ನಿರಾಕರಿಸಿದವನು, ಕರ್ಮವೇ ಸ್ವಯಂಫಲದಾತೃವೆಂದವನು. ಇಂಥವನು ಭಾಷ್ಯದಮೇವೆ ಯಾವದಾದರೊಂದು ನಿಬಂಧವನ್ನು ಬರೆದರೆ ಅದನ್ನು ಕರ್ಮಪರವಾಗಿಯೇ ಮಾಡಿಬಿಡುತ್ತಾನೆ. ಇವನು ಸಂನ್ಯಾಸವನ್ನು ಬುದ್ಧಿಪೂರ್ವಕವಾಗಿ ಮಾಡಲಿಲ್ಲ ; ವಾದದಲ್ಲಿ ಜಿತನಾಗಿ ಸಂನ್ಯಾಸಿಯಾಗಿರುತ್ತಾನೆ. ಆದ್ದರಿಂದ ಇವನು ವೃತ್ತಿಯನ್ನು ಮಾಡುವದು ಬೇಡ. ಇನ್ನು ಯಾರಿಗಾದರೂ ಈ ಕೆಲಸವನ್ನು ಹೇಳಿರಿ. (೧) ಪದ್ಮಪಾದರು ತಮ್ಮಲ್ಲಿ ಹೆಚ್ಚಿನ ಭಕ್ತಿಯುಳ್ಳವರು ; ಅಥವಾ (೨) ಈ ಆನಂದಗಿರಿಗಳು ತಮ್ಮ ಅಭಿಪ್ರಾಯಕ್ಕನುಗುಣವಾಗಿ ವ್ಯಾಖ್ಯಾನಮಾಡುವಂಥ ಸಾಮರ್ಥ್ಯವನ್ನು ಸರಸ್ವತಿಯ ಅನುಗ್ರಹದಿಂದ ಪಡೆದುಕೊಂಡಿರುತ್ತಾರೆ. ಆವರಾದರೂ ವಾರ್ತಿಕವನ್ನು ಮಾಡಲಿ !' ಎಂದರು. ಆ ಸಂದರ್ಭದಲ್ಲಿ ಹತ್ತಿರಕ್ಕೆ ಬಂದ ಪದ್ಮಪಾದರು 'ಹಸ್ತಾಮಲಕರೂ ಈ ವೃತ್ತಿಯನ್ನು ಮಾಡಲು ಶಕ್ತರು' ಎಂದರು. ಸುರೇಶ್ವರರು ವಾರ್ತಿಕವನ್ನು ಮಾಡುವದು ಮಿಕ್ಕ ಶಿಷ್ಯರಿಗೆ ಇಷ್ಟವಿಲ್ಲವೆಂಬುದು ಆಚಾರ್ಯರಿಗೆ ಮನವರಿಕೆಯಾಯಿತು. 'ಹಸ್ತಾಮಲಕನು ಮೊದಲಿನಿಂದಲೂ ಅಂತರ್ಮುಖನಾಗಿರುವದರಿಂದ ಗ್ರಂಥರಚನೆಯಲ್ಲಿ ಪ್ರವೃತ್ತನಾಗಲಾರನು. ಸುರೇಶ್ವರನು ಮಾಡುವದು ನಿಮ್ಮಗಳಿಗೆ ಇಷ್ಟವಿಲ್ಲದ್ದರಿಂದ ಬಹುಜನಕ್ಕೆ ಅಸಂಮತವಾದದ್ದನ್ನು ಮಾಡಿಸುವದಕ್ಕೆ ನನಗೂ ಮನಸ್ಸು ಬರುವದಿಲ್ಲ !' ಎಂದರು. ಶಿಷ್ಯರು 'ಈ ಸನಂದನನೇ ಮಾಡಲಿ !' ಎನ್ನಲು ಆಚಾರ್ಯರು 'ಒಳ್ಳೆಯದು, ಸನಂದನನು ಭಾಷ್ಯದಮೇಲೆ ಒಂದು ನಿಬಂಧವನ್ನು ಬರೆಯಲಿ, ವಾರ್ತಿಕವನ್ನು ಬರೆಯುವದು ಬೇಡ, ಏಕೆಂದರೆ ಮತ್ತೊಬ್ಬರು ಅದನ್ನು ಬರೆಯಲು ಪ್ರತಿಜ್ಞೆಮಾಡಿದ್ದಾಗಿದೆ' ಎಂದರು. ರಹಸ್ಯವಾಗಿ ಸುರೇಶ್ವರನನ್ನು ಕರೆದು 'ಅಪ್ಪ, ನೀನು ಭಾಷ್ಯವಾರ್ತಿಕವನ್ನು ಮಾಡಬೇಡ ; ನಿನಗೆ ಗಾರ್ಹಸ್ಥ್ಯಧರ್ಮದಲ್ಲಿ ತಾತ್ಪರ್ಯವಿದೆ ಎಂದು ಭಾವಿಸಿರುವ ನಮ್ಮ ಮಿಕ್ಕ ಶಿಷ್ಯರು ಅದಕ್ಕೆ ಒಪ್ಪಿಗೆಕೊಡುತ್ತಿಲ್ಲ' ಎಂದು ವಿಷಯವೆಲ್ಲವನ್ನೂ ತಿಳಿಸಿ 'ನೀನು ಸ್ವತಂತ್ರವಾಗಿಯೇ ವೇದಾಂತಗ್ರಂಥವೊಂದನ್ನು ಬರೆ' ಎಂದರು. ಆತನು 'ನೈಷ್ಕರ್ಮ್ಯಸಿದ್ಧಿ' ಎಂಬ ಗ್ರಂಥವನ್ನು ರಚಿಸಿದನು. ನಿಷ್ಕರ್ಮತತ್ತ್ವಪರವಾಗಿರುವ ಆ ಗ್ರಂಥವನ್ನು ಮೊದಲಿನಿಂದ ಕೊನೆಯವರೆಗೂ ನೋಡಿ ಸಂತುಷ್ಟಚಿತ್ತರಾದ ಗುರುಗಳು ಮಿಕ್ಕವರಿಗೂ ಅದನ್ನು ಕೋರಿಸಲು 'ಈತನಂಥ ತತ್ತ್ವಜ್ಞಾನಿಯು ಇನ್ನೊಬ್ಬನಿಲ್ಲ' ಎಂದು ಅವರಿಗೆಲ್ಲ ನಂಬಿಕೆಯಾಯಿತು. ಅದನ್ನು ಈಗಲೂ ಸಂನ್ಯಾಸಿಗಳು ಶ್ರವಣಮಾಡುತ್ತಾರೆ.

ಸುರೇಶ್ವರಾಚಾರ್ಯರು 'ನನ್ನ ವಾರ್ತಿಕರಚನೆಗೆ ವಿಘ್ನವನ್ನು ಮಾಡಿದರಲ್ಲವೆ? ಆದ್ದರಿಂದ ಇನ್ನೊಬ್ಬರು ಅದನ್ನು ರಚಿಸಿದರೂ ಅದು ಪ್ರಚಾರಕ್ಕೆ ಬರುವದು ಬೇಡ!' ಎಂದು ಶಾಪವನ್ನು ಕೊಟ್ಟರು.

ಹೀಗೆ ನೈಷ್ಕರ್ಮ್ಯಸಿದ್ಧಿಯನ್ನು ರಚಿಸಿದ ಬಳಿಕ "ನಾನು ಖ್ಯಾತಿಲಾಭ ಪೂಜೆಗಳಿಗಾಗಿ ಈ ಗ್ರಂಥವನ್ನು ಮಾಡಲಿಲ್ಲ; ಗುರುಗಳ ಆಜ್ಞೆಯನ್ನು ವಿಚಾರಬಾರದೆಂದು ರಚಿಸಿದೆನು. ನಾನು ಹಿಂದೆ ಗೃಹಸ್ಥನಾಗಿದ್ದಮಾತ್ರದಿಂದ ಈಗಲೂ ನನ್ನಲ್ಲಿ ಅದೇ ಸ್ವಭಾವವು ಇದ್ದೀತೆ? ಗುರುಗಳು ಮಾಡಿದ ತತ್ತ್ವೋಪದೇಶದಿಂದ ನಾನು ಸಂನ್ಯಾಸಿಯಾದೆನೇ ಹೊರತು ವಾದದಲ್ಲಿ ಸೋತದ್ದರಿಂದಲ್ಲ. ಹಿಂದೆ ನೈಯಾಯಿಕಾದಿಗ್ರಂಥಗಳನ್ನು ಮಾಡಿದ್ದೆನು. ಇನ್ನು ಮೇಲೆ ಗುರುಸೇವೆಯಲ್ಲಿಯೇ ಕಾಲವನ್ನು ಕಳೆಯುವೆನು" ಎಂದು ಸುಮ್ಮನಾದರು. ಆಚಾರ್ಯರು ಮೆಲ್ಲಗೆ ಅವರನ್ನು ಸಮಾಧಾನಪಡಿಸಿ "ನನ್ನ ಶಾಖೆಯಾದ ತೈತ್ತಿರೀಯದ ಉಪನಿಷತ್ತಿಗೆ ಒಂದು ವಾರ್ತಿಕವನ್ನೂ ನಿನ್ನ ಶಾಖೆಯಾದ ಕಾಣ್ವದ ಬೃಹದಾರಣ್ಯಕೋಪನಿಷತ್ತಿಗೆ ಒಂದು ವಾರ್ತಿಕವನ್ನೂ ಮಾಡು; ಇದಕ್ಕೆ ನನ್ನ ಮಾತೇ ಕೊನೆ, ಮಿಕ್ಕವರ ಮಾತನ್ನು ಲಕ್ಷ್ಯದಲ್ಲಿಡಬೇಡ" ಎಂದರು ಅದರಂತೆ ಸುರೇಶ್ವರರು ಆ ಎರಡು ವಾರ್ತಿಕಗಳನ್ನೂ ರಚಿಸಿದರು. ಗುರುಗಳ ಆನುಜ್ಞೆಯಿಂದ ಸನಂದನರು ಸೂತ್ರಭಾಷ್ಯಕ್ಕೆ ಟೀಕೆಯನ್ನು ಬರೆದರು. ಆ ಟೀಕೆಯ ಪೂರ್ವಭಾಗವು ಪಂಚಪಾದಿಕೆಯೆಂದೂ ಮುಂದಿನ ಭಾಗವು ವೃತ್ತಿಯೆಂದೂ ಪ್ರಸಿದ್ಧವಾಯಿತು. ಆಚಾರ್ಯರು ರಹಸ್ಯದಲ್ಲಿ ಸುರೇಶ್ವರರಿಗೆ 'ಅಪ್ಪ, ಈ ಸನಂದನನ ಗ್ರಂಥದಲ್ಲಿ ಐದೇ ಪಾದಗಳು ಪ್ರಸಿದ್ಧವಾಗಿರುವವು. ಆದರಲ್ಲಿಯೂ ನಾಲ್ಕು ಸೂತ್ರಗಳೇ ಬಲುಪುಟ್ಟಗೆ ಪ್ರಚುರವಾಗುವವು. ಪ್ರಾರಬ್ಧಕರ್ಮಪರಿಪಾಕದಿಂದ ನೀನು ಮತ್ತೆ ವಾಚಸ್ಪತಿಯಾಗಿ ಭೂಮಿಯಲ್ಲಿ ಹುಟ್ಟಿ ನನ್ನ ಭಾಷ್ಯಕ್ಕೆ ಭವ್ಯವಾದ ಟೀಕೆಯನ್ನು ಮಾಡುವೆ' ಎಂದು ಹೇಳಿದರು. ಆನಂದಗಿರಿಯೇ ಮೊದಲಾದ ಶಿಷ್ಯರಿಗೆ "ನೀವೂ ಆದ್ವೈತಪರವಾದ ನಿಬಂಧವನ್ನು ಮಾಡಿರಿ" ಎಂದು ಆಜ್ಞೆಮಾಡಿದರು. ಅವರೂ ಅದರಂತೆ ಅನೇಕ ನಿಬಂಧಗಳನ್ನು ಮಾಡಿದರು (ಮಾ. ಶಂ. ೧೨–೧೩ರಿಂದ ೭೫).

ಸ್ವಲ್ಪ ಹೆಚ್ಚುಕಡಿಮೆಯಾಗಿ ಇದೇ ಅಭಿಪ್ರಾಯವು ವ್ಯಾಸಾಚಲೀಯ (ವ್ಯಾ. ಶಂ. ೭–೨೮ರಿಂದ ೮೦)ದಲ್ಲಿಯೂ ಇದೆ. ಅದರೆ ಅಲ್ಲಿ "ಆನಂದಗಿರಿ ಹಸ್ತಾಮಲಕರ" ಪರಾಮರ್ಶವಿಲ್ಲ.

ವ್ಯಾಖ್ಯಾನಪ್ರಸ್ಥಾನಗಳು ಹೊರಟದ್ದು ಹೇಗೆ?

೧೩೨. ಈ ಮೇಲೆ ವರ್ಣಿಸಿರುವ ವ್ಯಾಖ್ಯಾನಪ್ರಸ್ಥಾನದ ಬೆಳೆವಣಿಗೆಯ

ವೃತ್ತಾಂತದಲ್ಲಿ ಕಾಣಬರುವ ಕೆಲವು ಅಂಶಗಳನ್ನು ಒಂದೊಂದಾಗಿ ವಿಮರ್ಶಿಸೋಣ:

ಒಂದನೆಯದಾಗಿ ಸುರೇಶ್ವರಾಚಾರ್ಯರು ವಾರ್ತಿಕವನ್ನು ಮಾಡಬೇಕೆಂದು ಬಯಸಿದರೆಂದೂ ಆಚಾರ್ಯರು ಅದಕ್ಕೆ ಅನುಜ್ಞೆಯನ್ನು ಕೊಟ್ಟರೆಂದೂ ನಂಬವದು ಕಷ್ಟವಾಗಿದೆ. ಏಕೆಂದರೆ ವಾರ್ತಿಕದಲ್ಲಿ ಗುರುಗಳ ಅಪ್ಪಣೆಯಂತೆ ತಾವು ಸೂತ್ರಭಾಷ್ಯವನ್ನು ಬಿಟ್ಟು ಎರಡು ಉಪನಿಷತ್ತುಗಳಿಗೆ ಮಾತ್ರ ವಾರ್ತಿಕವನ್ನು ಬರೆದಿರುವದಾಗಿ ಎಲ್ಲಿಯೂ ಸುರೇಶ್ವರರು ಹೇಳಿಕೊಂಡಿಲ್ಲ. ಶಾಬರಭಾಷ್ಯಕ್ಕೆ ಶ್ಲೋಕವಾರ್ತಿಕ ವಂತು ತಂತ್ರವಾರ್ತಿಕ– ಎಂಬ ಎರಡು ವಾರ್ತಿಕಗಳನ್ನು ಕುಮಾರಿಲಭಟ್ಟರು ಬರೆದಿರುತ್ತಾರೆ ; ಅವನ್ನು ಅವರು ಭಾಷ್ಯಕಾರರ ಜೀವಿತಕಾಲದಲ್ಲಿ ಬರೆದಿಲ್ಲ. ಭಾಷ್ಯಕ್ಕೆ ಅನೇಕರು ವ್ಯಾಖ್ಯಾನವನ್ನು ಬರೆದಿದ್ದರಾದರೂ ಅವು ವಿಮಾಮಾಂಸಾಭಾಷ್ಯಕ್ಕೆ ಅಷ್ಟು ಅನುಗುಣವಾಗಿಲ್ಲವೆಂದು ಅವರಿಗೆ ತೋರಿತ್ತು ; ಇದಲ್ಲದೆ ಭಾಷ್ಯಕಾರರ ಅಭಿಪ್ರಾಯಗಳೆಲ್ಲವೂ ಅವರಿಗೆ ಸಂಮತವಾಗಿರಲಿಲ್ಲ. ಆದ್ದರಿಂದ ಅವರು ವಿಸ್ತಾರವಾದ ವ್ಯಾಖ್ಯಾನಗಳನ್ನು ತಮ್ಮ ಕಾಲಕ್ಕೆ ಸರಿಹೋಗುವಂತೆ ಬರೆದು, ಪ್ರಕಟಿಸಿದರು. 'ವಾರ್ತಿಕ'ವೆಂದರೇ ಉಕ್ತಾನುಕ್ತದುರುಕ್ತಗಳನ್ನು ತಿಳಿಸುವದು, ಸರಿಯಾಗಿ ಹೇಳಿದ್ದನ್ನು ವಿವರಿಸುವದು, ಹೇಳದೆ ಇರುವದನ್ನು ಸೇರಿಸುವದು, ಸರಿಯಲ್ಲವೆಂದು ತನಗೆ ತೋರಿದ್ದನ್ನು ತಿಳಿಸುವದು. ಆದ್ದರಿಂದ ಕುಮಾರಿಲಭಟ್ಟರು ವಿಮಾಮಾಂಸಾಶಾಸ್ತ್ರಕ್ಕೆ ವಾರ್ತಿಕವನ್ನು ಬರೆದದ್ದು ಸರಿಯಾಯಿತು. ಆದರೆ ಆಚಾರ್ಯರು ತಮ್ಮ ಶಿಷ್ಯನನ್ನು ಕರೆದು ನನ್ನ ಗ್ರಂಥಕ್ಕೆ ವಾರ್ತಿಕವನ್ನು ಬರೆಯಬೇಕೆಂದು ಹೇಳುವದಾಗಲಿ, ಶಿಷ್ಯನು "ನಾನು ತಮ್ಮ ಗ್ರಂಥಕ್ಕೆ ವಾರ್ತಿಕವನ್ನು ಬರೆಯುವೆನು" ಎಂದು ಕೇಳಿಕೊಳ್ಳುವದಾಗಲಿ ಉಚಿತವಾಗಲಾರದು. ಹೀಗಿರುವದರಿಂದ ಆಚಾರ್ಯರು ಮುಕ್ತರಾದ ಬಳಿಕವೇ ಸುರೇಶ್ವರಾಚಾರ್ಯರು ಈ ಎರಡು ವಾರ್ತಿಕಗಳನ್ನೂ ಬರೆದರೆಂದು ಕಲ್ಪಿಸುವದೇ ನ್ಯಾಯ್ಯಪ್ರಾಪ್ತವಾಗುತ್ತದೆ. ಅವರು ಬೃಹದಾರಣ್ಯಕ ಭಾಷ್ಯಕ್ಕೂ ತೈತ್ತಿರೀಯಭಾಷ್ಯಕ್ಕೂ ಬರೆದಿರುವ ವಾರ್ತಿಕಗಳಲ್ಲಿ ಕೆಲವು ಕಡೆಗಳಲ್ಲಿ ಆಚಾರ್ಯಮತವನ್ನು ಖಂಡಿಸಿ ಬರೆದಿರುತ್ತಾರೆ. ಆಚಾರ್ಯರು ಬದುಕಿರುವ ಕಾಲಕ್ಕೇ ಅವನ್ನು ಬರೆದಿದ್ದರೆ ಅವಕ್ಕೆ ಆಚಾರ್ಯರ ಅನುಮತಿಯನ್ನು ತೆಗೆದು ಕೊಂಡಿರುವೆನೆಂದು ಅವರಾಗಲಿ, ಅಥವಾ ಶಿಷ್ಯನು ಹೇಳಿದ್ದೇ ನನ್ನ ಕೊನೆಯ ತೀರ್ಮಾನವೆಂದು ಆಚಾರ್ಯರಾಗಲಿ, ಸ್ಪಷ್ಟಪಡಿಸಬೇಕಾಗಿತ್ತು. ಹಾಗೇನೂ ಆಗಿರುವದಿಲ್ಲ. ಸುರೇಶ್ವರರ ವಾರ್ತಿಕವು ಕುಮಾರಿಲಶ್ಲೋಕವಾರ್ತಿಕಕ್ಕೇನೂ ಕಡಿಮೆಯಿಲ್ಲವೆಂದು ತಿಳಿಸುವದಕ್ಕೆ ಭಟ್ಟಪಾದರಿಂದ ಆಚಾರ್ಯರು ವಾರ್ತಿಕವನ್ನು ಬರೆಯಿಸುವದಕ್ಕೆ ಹವಣಿಸಿದರೆಂದೂ ಸುರೇಶ್ವರಾಚಾರ್ಯರನವರಿಗೆ ಅವ

ಕಾಶವು ಸಿಕ್ಕಿದ್ದರೆ ಸೂತ್ರಭಾಷ್ಯಕ್ಕೂ ವಾರ್ತಿಕವನ್ನು ಬರೆಯುತ್ತಿದ್ದರೆಂದೂ ಬಗೆದು ಯಾರೋ ಈ ಕಥೆಗಳನ್ನು ಹುಟ್ಟಿಸಿರಬೇಕೆಂದು ತೋರುತ್ತದೆ.

ಎರಡನೆಯದಾಗಿ ಸೂತ್ರಭಾಷ್ಯಕ್ಕೆ ಸುರೇಶ್ವರರು ವಾರ್ತಿಕವನ್ನು ಬರೆಯ ಬೇಕೆಂದಿದ್ದರಿಂಬುದಕ್ಕೆ ಸಾಧಾರಪ್ರಮಾಣವೇನೂ ಇಲ್ಲ. ಸೂತ್ರವು ಅವರ ಕಣ್ಣಿಗೆ ಬಿದ್ದಿರಲಿಲ್ಲವೆಂದಾಗಲಿ ಅಥವಾ ಅದು ಇನ್ನೂ ಕಡಿಮೆಯ ಜೆಲೆಯದೆಂದು ಅವರ ಅಭಿಪ್ರಾಯವಿತ್ತೆಂದಾಗಲಿ ಎಣಿಸುವದಕ್ಕೆ ಬರುವದಿಲ್ಲ. ಏಕೆಂದರೆ ಅವರು ಸೂತ್ರಗಳನ್ನೂ ತಮ್ಮ ಗ್ರಂಥದಲ್ಲಿ ಪ್ರಮಾಣವಾಗಿ ಉದಾಹರಿಸಿರುತ್ತಾರೆ. ಇದಲ್ಲದೆ ಸೂತ್ರಭಾಷ್ಯಕ್ಕೂ ಬೃಹದಾರಣ್ಯಕಭಾಷ್ಯಕ್ಕೂ ಕೆಲವು ಅಭಿಪ್ರಾಯಭೇದಗಳಿವೆಯೆಂಬುದನ್ನು ನಾವು (೦ ೨೪) ಆಗಲೆ ತಿಳಿಸಿರುತ್ತೆವೆ. ಆ ಸಂದರ್ಭಗಳಲ್ಲಿ ವಾರ್ತಿಕಕಾರರು ಈ ಮತಭೇದಕ್ಕೆ ಕಾರಣವನ್ನಾಗಲಿ, ಅಥವಾ ಆಯಾ ವಿಷಯಕ್ಕೆ ತಮ್ಮ ಸ್ವಂತ ಅಭಿಪ್ರಾಯವನ್ನಾಗಲಿ ತಿಳಿಸಿರುವದಿಲ್ಲ. ಇದೇಕೆಂಬುದನ್ನು ತತ್ತ್ವಾನ್ವೇಷಕರು ಪರಿಶೋಧಿಸಬೇಕಾಗಿದೆ. ಸೂತ್ರಭಾಷ್ಯದಲ್ಲಿ ಹೀಗೆಂದು ಬರೆದಿದೆ ಎಂದು ಅವರು ಎಲ್ಲಿಯೂ ಉದಾಹರಿಸಿಲ್ಲ. ಈ ಪರಿಸ್ಥಿತಿಯಲ್ಲಿ ಸೂತ್ರಭಾಷ್ಯಕ್ಕೆ ವಾರ್ತಿಕವನ್ನು ಬರೆಯಬೇಂಬ ಅಭಿಲಾಷೆ ಅವರಿಗೆ ಇತ್ತೆಂದು ಕಲ್ಪಿಸುವದು ಹೇಗೆ ಸರಿಯಾದೀತು ?

ಮೂರನೆಯದಾಗಿ ಪದ್ಮಪಾದರು ಆಚಾರ್ಯರಿಗೆ ಮೊಟ್ಟಮೊದಲು ದೊರಕಿದ ಶಿಷ್ಯರು ; ಅವರ ವಿಷಯದಲ್ಲಿ ಆಚಾರ್ಯರಿಗಿದ್ದ ಪ್ರೇಮವನ್ನು ಕಂಡು ಬೇರೆಯ ಶಿಷ್ಯರು ಅಸೂಯೆಪಡುತ್ತಿದ್ದರು– ಎಂದು ಶಂಕರವಿಜಯಗಳು ಹೇಳುತ್ತಿವೆ. ಅಂಥವರಿಗೆ, ಅಥವಾ ಅವರ ಕಡೆಯವರಿಗೆ, ಸುರೇಶ್ವರಾಚಾರ್ಯರ ಮೇಲೆ ಅಸೂಯೆ ಬಂತೆಂದಾಗಲಿ, ಸುರೇಶ್ವರರು ತತ್ತ್ವವನ್ನು ಸರಿಯಾಗಿ ತಿಳಿದುಕೊಂಡು ತುರೀಯಾಶ್ರಮವನ್ನು ಸ್ವೀಕರಿಸಲಿಲ್ಲವೆಂದು ತಿಳಿಯುವಷ್ಟು ವಿವೇಕಶೂನ್ಯತೆಯಿತ್ತೆಂದಾಗಲಿ ಕಲ್ಪಿಸುವದು ಸರಿಯಾಗಿ ಕಾಣುವದಿಲ್ಲ.

ನಾಲ್ಕನೆಯದಾಗಿ ಸುರೇಶ್ವರರನ್ನು 'ನೂತ್ನ ಭಿಕ್ಷು'ವೆಂದು ಈ ಕಥಾಭಾಗದಲ್ಲಿ (ಮಾ. ಶಂ. ೧೩–೪೪) ಕರೆದಿರುವದು ಹೊಂದುವದಿಲ್ಲ. ಏಕೆಂದರೆ ಅವರಿಂದೀಚೆಗೆ 'ಹಸ್ತಾಮಲಕ', 'ತೋಟಕಾಚಾರ್ಯ' –ಇವರು ಭಿಕ್ಷುಗಳಾಗಿದ್ದರು. ವ್ಯಾಸಾಚಲೀಯ (ವ್ಯಾ. ಶಂ. ೭–೪೯)ರಲ್ಲಿ ಇದೇ ಪದ್ಯವಿದೆ. ಅದರಂತೆ ಪದ್ಮಪಾದರಾಡಮೆಲೆ ಸುರೇಶ್ವರಾಚಾರ್ಯರೊಬ್ಬರೇ ಹೊಸದಾಗಿ, ಬಂದ ಮುಖ್ಯಶಿಷ್ಯರಾದ್ದರಿಂದ ಈ ವಿಶೇಷಣವು ಹೊಂದುತ್ತದೆ. ಮಾಧವೀಯವು ಆ ವ್ಯಾಸಾಚಲೀಯ (ಅಥವಾ ಅದು ಕೃತ್ರಿಮವೆಂದಾದರೆ ಮತ್ತೊಂದು ವ್ಯಾಸಾಚಲೀಯದ) ಕಥೆಯನ್ನು ಮಾರ್ಪಡಿಸಿ ಕಲ್ಪಿಸಿದ ಕಥೆಯಿದೆಂದು ಭಾವಿಸಬೇಕೆ? ಇದು ಆಲೋಚನೀಯವಾಗಿದೆ.

ಐದನೆಯದಾಗಿ ಆನಂದಗಿರಿಯು ಸರಸ್ವತಿಯ ಅನುಗ್ರಹದಿಂದ ಭಾಷ್ಯಕ್ಕೆ ವ್ಯಾಖ್ಯಾನವನ್ನಾಡುವ ಸಾಮರ್ಥ್ಯವನ್ನು ಪಡೆದಿರುತ್ತಾನೆ (ಮಾ ಶಂ. ೧೫–೨೦) ಎಂದಿರುವ ಕಥೆಗೆ ಮೂಲವು ಯಾವದು ? ಆ ಆನಂದಗಿರಿ ಹೇಗೆ ಶಂಕರ ಶಿಷ್ಯನಾದನೆಂಬುದನ್ನು ಯಾರೂ ಹೇಳಿಲ್ಲ. 'ಉದ್ವೀಕ್ಷ್ಯತಾಂ ಶಾಙ್ಕರವಾಕ್ಯ ಸಾರಃ' (ಮಾ. ಶಂ. ೧–೨) ಎಂಬ ಶ್ಲೋಕದ ವ್ಯಾಖ್ಯಾನದಲ್ಲಿ ಅದೈವೃತರಾಜ್ಯ ಲಕ್ಷ್ಮೀ ಟೀಕಾಕಾರನು 'ಶಙ್ಕರಸ್ಯ ಭಗವತೋ ಭಾಷ್ಯಕಾರಸ್ಯ ಅಯಂ ಶಾಙ್ಕರಃ ಆನನ್ದಗಿರ್ಯಭಿಧಃ । ತಸ್ಯ ತತ್ಶಿಷ್ಯಸ್ಯ ವಾಕ್ಯಸಾರಃ |' ಎಂದು ಬರೆದಿರುವದನ್ನು ಆಗಲೆ (ಪು.೧೦) ತಿಳಿಸಿರುತ್ತೇವೆ. ಅಲ್ಲಿಯೂ ಆಚಾರ್ಯರ ಪ್ರಶಿಷ್ಯರು ಆನಂದಗಿರಿ ಎಂದಿದೆ ; ನೇರಾದ ಶಿಷ್ಯರೆಂದಿಲ್ಲ. ಭಾಷ್ಯಗಳಿಗೆ ಆನಂದಗಿರೀಯವೆಂದು ಪ್ರಸಿದ್ಧವಾಗಿರುವ ಟೀಕೆಗಳು ಆಚಾರ್ಯರ ಸಾಕ್ಷಾಚ್ಛಿಷ್ಯರು ಬರೆದವುಗಳೆಂಬ ವಾಙ್ಮಯಕಲ್ಪನೆ ಕೆಲವರಲ್ಲಿ ಈಗಲೂ ಇದೆ. ಆ ಕಲ್ಪನೆಗೆ ಮಾಧವ ಕವಿಯೂ ವಶನಾಗಿದ್ದನೆ ? ಇದನ್ನು ಇನ್ನಷ್ಟು ಒಳಹೊಕ್ಕು ಪರಿಶೀಲಿಸಬೇಕಾಗಿದೆ. ಶಂಕರವಿಜಯವನ್ನು ಬರೆದಿರುವ ಅನಂತಾನಂದಗಿರಿಯನ್ನಂತೂ ಇಲ್ಲಿ ಲೆಕ್ಕಕ್ಕೆ ಹಿಡಿಯುವದಕ್ಕೆ ಬಾಯಿಹಾಗೆಯೇ ಇಲ್ಲವಷ್ಟೆ ?

ಇವರಂತೆ ಚಿತ್ಸುಖರು ಪದ್ಮಪಾದರ ಸತೀರ್ಥ್ಯರು (ಎಂದು ಆಥಾಮ್ಬು ಜಾಙ್ಘ್ರೀರ್ದಯಿತಾಃ ಸತೀರ್ಥ್ಯಾಸ್ತಂ ಚಿತ್ಸುಖಾದ್ಯಾಃ ೧೩–೫) ಎಂದಿರುವದನ್ನು ಚೆನ್ನಾಗಿ ಪರೀಕ್ಷಿಸತಕ್ಕದ್ದಿದೆ. ಆಚಾರ್ಯರಿಗೆ ಚಿತ್ಸುಖರೆಂಬ ಶಿಷ್ಯರೊಬ್ಬರು ಇದ್ದರೆ ? ಆತ್ಮಬೋಧಾಚಾರ್ಯರು ಗುರುರತ್ನಮಾಲಿಕೆಯ ೧೮ನೆಯ ಶ್ಲೋಕದ ಸುಷಮಾವ್ಯಾಖ್ಯಾನದಲ್ಲಿ 'ಅಹುರನುಕ್ಷಣಮುಪಚರಿತಾಚಾರ್ಯ ಚರಣಾಃ, ಸರ್ವವೃತ್ತಾನ್ತಸಾಕ್ಷಿಣಃ, ಸಹಜನವದೇವಾಗ್ರಹಾರೋತ್ಪನ್ನಾಃ ಅಜೀವನಮಿರಹಯುಜಃ ಶ್ರೀಸರ್ವಜ್ಞಚಿತ್ಸುಖಾಚಾರ್ಯಾಃ ಸ್ವಕೃತಬೃಹಚ್ಛಙ್ಕರ ವಿಜಯೇ', 'ಪ್ರತಿಕ್ಷಣವೂ ಆಚಾರ್ಯರನ್ನು ಉಪಚರಿಸುತ್ತಾ ಸರ್ವವೃತ್ತಾಂತವನ್ನೂ ಕಂಡವರೂ, ಒಡಹುಟ್ಟಿದವರಂತೆ ಒಂದೇ ಆಗ್ರಹಾರದಲ್ಲಿ ಹುಟ್ಟಿದವರೂ, ಬದುಕಿರುವವರೆಗೂ ಅವರನ್ನು ಬಿಟ್ಟಗಲದವರೂ ಆದ ಶ್ರೀಸರ್ವಜ್ಞಚಿತ್ಸುಖಾಚಾರ್ಯರು ತಾವು ಮಾಡಿರುವ ಬೃಹಚ್ಛಂಕರವಿಜಯದಲ್ಲಿಹೀಗೆಂದಿರುತ್ತಾರೆ, ಎಂದು ಬರೆದಿರುತ್ತಾರೆ. ಬೃಹಚ್ಛಂಕರವಿಜಯವು ನಿಜವಾಗಿಯೂ ಒಂದು ಗ್ರಂಥವಾಗಿ ರಚಿತವಾಗಿದ್ದರೆ ಕುಂಭಕೋಣಮಠದಲ್ಲಿ ಇರುವ ಸಂಭವವಿದೆಯಾದ್ದರಿಂದ ಯಾರಾದರೂ ಅದನ್ನು ಶೋಧಿಸಿ ಪರಿಶ್ರಮಿಸಿದರೆ ಆತ್ಮಬೋಧರು ಬರೆದಿರುವ ಈ ವಿಶೇಷಣಗಳು ಆ ಚಿತ್ಸುಖಾಚಾರ್ಯರಿಗೆ ಎಷ್ಟರಮಟ್ಟಿಗೆ ಹೊಂದುವವೆಂಬದನ್ನು ನಿರ್ಧರಿಸಬಹುದಾಗುವದು. ಅಲ್ಲಿಯವರೆಗೆ ಸುಪ್ರಸಿದ್ಧ 'ತತ್ತ್ವದೀಪಿಕಾ'ಕಾರರಾದ ಚಿತ್ಸುಖಾಚಾರ್ಯರು ಮಾತ್ರ ಶಂಕರರ ನೇರಾದ ಶಿಷ್ಯರಲ್ಲವೆಂದು ಹೇಳಿ

ಕೃಪ್ತರಾಗಬೇಕಾಗಿದೆ. ಏಕೆಂದರೆ ಅವರು 'ಜ್ಞಾನೋತ್ತಮರ ಶಿಷ್ಯ'ರೆಂದು ಅಪ್ರಯೋಜಕ ಪ್ರದೀಪಿಕೆಯಿಂದ ಗೊತ್ತಾಗುತ್ತದೆ. ಆ ಗ್ರಂಥದಲ್ಲಿ ಇತ್ತೀಚಿನ ಶ್ರೀಧರಾಚಾರ್ಯ ಕೃತವಾದ ನ್ಯಾಯಕಂದಲಿಯನ್ನು ಮತ್ತೆಮತ್ತೆ ಪರಾಮರ್ಶಿಸಿದೆ.

ಆರನೆಯದಾಗಿ ಆಚಾರ್ಯರು ವಾರ್ತಿಕವನ್ನು ಪದ್ಮಪಾದರು ಬರೆಯಬಾರದು' ಎಂದು ಹೇಳಿ ಸುರೇಶ್ವರರಿಂದ ನೈಷ್ಕರ್ಮ್ಯಸಿದ್ಧಿಗ್ರಂಥವನ್ನು ಸ್ವತಂತ್ರವಾಗಿ ಬರೆಯಿಸಿ ಅವನ್ನು ನೋಡಿದವರೆಲ್ಲರಿಗೂ ಸುರೇಶ್ವರರು ವೇದಾಂತತತ್ತ್ವವನ್ನು ಚೆನ್ನಾಗಿ ತಿಳಿದವರೆಂದು ಎಲ್ಲರಿಗೂ ಒಪ್ಪಾದಮೇಲಾದರೂ ಅವರಿಂದ ವಾರ್ತಿಕವನ್ನೇಕೆ ಬರೆಯಿಸಲಿಲ್ಲ ? –ಎಂಬ ಪ್ರಶ್ನೆಗೆ ಮಾಧವವ್ಯಾಸಾಚಲರಿಬ್ಬರಲ್ಲಿ ಯಾರೊಬ್ಬರೂ ಉತ್ತರವನ್ನು ಹೇಳಿಲ್ಲ.

ಏಳನೆಯದಾಗಿ ಸುರೇಶ್ವರಾಚಾರ್ಯರು 'ಮತ್ತೊಬ್ಬರು ವಾರ್ತಿಕವನ್ನು ಬರೆದರೂ ಅದು ಪ್ರಚಾರವಾಗುವದು ಬೇಡ' ಎಂದು ಶಾಪವನ್ನು ಕೊಟ್ಟರೆಂತ ಕಲ್ಪಿಸಿರುವದು ಸಂಯಮೀಂದ್ರರಾದ ಅವರಿಗೆ ಆತ್ಮಶ್ಲಾಘನೆ, ಪರರಲ್ಲಿ ಅಸೂಯೆ, ಆಚಾರ್ಯರ ಗ್ರಂಥಪ್ರಚಾರಕ್ಕೆ ವಿಘ್ನವನ್ನು ಮಾಡುವಷ್ಟು ಕೀಳ್ತರದ ಬುದ್ಧಿ– ಇವೆಲ್ಲವನ್ನೂ ಆರೋಪಿಸಿದಂತೆ ಆಗಿರುತ್ತದೆ. ಇದು ಆ ಮಹಾತ್ಮರಿಗೆ ಒಪ್ಪುವ ಸ್ವಭಾವಕಥನವಲ್ಲ.

ಎಂಟನೆಯದಾಗಿ ಪದ್ಮಪಾದರು ಗುರುಗಳ ಅನುಜ್ಞೆಯಿಂದ ಭಾಷ್ಯದ ಮೇಲೆ ನಿಬಂಧವನ್ನು ಬರೆದರೆಂದೂ ಅದರ ಪೂರ್ವಭಾಗಕ್ಕೆ ಪಂಚಪಾದಿಕೆಯೆಂದೂ ಉತ್ತರಭಾಗಕ್ಕೆ ವೃತ್ತಿಯೆಂದು ಹೆಸರೆಂದೂ ವರ್ಣಿಸಿರುವದು ಸಂಶಯಕ್ಕೆಡೆಯನ್ನುಂಟುಮಾಡುತ್ತದೆ. ಒಂದೇ ಟೀಕೆಗೆ ಈ ಎರಡು ಹೆಸರುಗಳು ಏಕೆ ಹೇಗೆ ಬಂದವೆಂಬುದನ್ನು ಶಂಕರವಿಜಯಕಾರರುಗಳು ಸ್ಪಷ್ಟಪಡಿಸಿಲ್ಲ. ಆಚಾರ್ಯರು 'ಇದರಲ್ಲಿ ಐದೇ ಪಾದಗಳು ಪ್ರಸಿದ್ಧವಾಗುವವು ; ಅದರಲ್ಲಿಯೂ ನಾಲ್ಕು ಸೂತ್ರಗಳೇ ಹೆಚ್ಚು ಪ್ರಚಾರವಾಗುವವು' ಎಂದು ಭವಿಷ್ಯವನ್ನು ಹೇಳಿದರೆಂದಿರುವದು ಮತ್ತಷ್ಟು ಸಂಶಯವನ್ನು ತಂದೊಡ್ಡುತ್ತದೆ. ಈಗ ಭಾಷ್ಯದ ಮೇಲೆ ಒಂದು ಟೀಕೆಯೇನೋ ಪಂಚಪಾದಿಕೆ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ ; ಆದರೆ ಈಗ್ಗೆ ನಮಗೆ ಸಿಕ್ಕಿರುವದು ನಾಲ್ಕೇ ಸೂತ್ರಗಳ ಟೀಕೆ. ಅದು ಪದ್ಮಪಾದ ಕೃತವೆಂದೂ ವಿದ್ವಾಂಸರಲ್ಲಿ ಪ್ರಸಿದ್ಧವಾಗಿದೆ. ಆದರೆ ಗ್ರಂಥಕಾರರು ತಾವು ಗುರುಗಳ ಅಪ್ಪಣೆಯಿಂದ ಆ ಗ್ರಂಥವನ್ನು ಬರೆದೆವೆಂದು ಹೇಳಿಕೊಂಡಿಲ್ಲ. 'ವ್ಯಾಖ್ಯಾಸ್ಯೇ ಪಞ್ಚಪಾದಿಕಾಮ್' (ವಿವರಣ), 'ವಿಭಜೇ ಪಞ್ಚಪಾದಿಕಾಮ್' (ಪ್ರಬೋಧಪರಿಶೋಧಿನೀ), 'ವ್ಯಾಕುರ್ವೇ ಪಞ್ಚಪಾದಿಕಾಮ್' (ವೇದಾಂತರತ್ನಕೋಶ)– ಹೀಗೆ ಪಂಚಪಾದಿಕೆ ಎಂಬ ಹೆಸರಿನಿಂದ ವ್ಯಾಖ್ಯಾನಕಾರರು ಕರೆದಿದ್ದರೂ ಅವರಿಗೆ ನಾಲ್ಕು ಸೂತ್ರಗಳು ಮಾತ್ರವೇ ಸಿಕ್ಕಿರುತ್ತವೆ. ವ್ಯಾಖ್ಯಾನ

ಕಾರರ ಸಂಜ್ಞೆಯನ್ನು ಆಧಾರವಾಗಿಟ್ಟುಕೊಂಡೇ ಮಾಧವಕವಿಯು ಈ ಕಥೆಯನ್ನೇಕೆ ಕಲ್ಪಿಸಿರಬಾರದು?–ಎಂಬ ಪ್ರಶ್ನೆಯೂ ತಲೆಯೆತ್ತಿಕೊಳ್ಳುತ್ತದೆ. ಈ ಗ್ರಂಥದ ಈಕ್ಷಿತ್ಯಧಿಕರಣದ ಸ್ವಲ್ಪಭಾಗವನ್ನು ಎತ್ತಿ ವಿವರಿಸಿರುವ ಒಂದಾನೊಂದು ಅಜ್ಞಾತ ಕರ್ತೃಕವ್ಯಾಖ್ಯಾನವು ಮದರಾಸ್ ಸರಕಾರದ ಪ್ರಾಚೀನಗ್ರಂಥಕೋಶಾಲಯದಲ್ಲಿ (R 3224 ನೇ ಅಂಕದ್ದು) ಇರುವದಾಗಿ ಪ್ರೊ॥ಲಕಂ ಸು. ಶ್ರೀರಾಮಶಾಸ್ತ್ರಿಗಳು ಪ್ರಕಾಶಿಸಿರುವ ಪಂಚಪಾದಿಕೆಯ ಪೀಠಿಕೆ (ಪು. ೯)ಯಲ್ಲಿದೆ. ಆದೇ ಗ್ರಂಥದಲ್ಲಿ ವಾಚಸ್ಪತಿಮಿಶ್ರರು ತಮ್ಮ ಭಾಮತೀವ್ಯಾಖ್ಯಾನದಲ್ಲಿ ಖಂಡಿಸಿರುವ ಕೆಲವು ಅಭಿಪ್ರಾಯಗಳನ್ನು 'ಪಞ್ಚಪಾದೀ'ಕಾರರವೆಂದು ಕಲ್ಪತರುಕಾರರು ಬರೆದಿರುತ್ತಾರೆಂದು ಅದೇ ಶ್ರೀರಾಮಶಾಸ್ತ್ರಿಗಳವರು(ಪು. ೮)ಬರೆದಿರುತ್ತಾರೆ. ಆದರೆ ಕಲ್ಪತರುಕಾರರು ಹೇಳುವ 'ಪಞ್ಚಪಾದೀ' ಎಂಬುದು ಪ್ರಕೃತಪಂಚಪಾದಿಕೆಯೇ ಎಂಬುದಕ್ಕೆ ನಮಗೆ ಯಾವ ಆಧಾರವೂ ದೊರೆತಿಲ್ಲ. ಕಲ್ಪತರುಕಾರರು 'ಪಂಚಪಾದಿಕಾ' ಎಂಬ ಹೆಸರನ್ನೇ ಬಳಸಿಲ್ಲವಾದರಿಂದ ಈ ಎರಡು ಗ್ರಂಥಗಳೂ ಒಂದರ ಹೆಸರುಗಳೇ ಎಂದು ನಿಶ್ಚಯಿಸುವದು ಕಷ್ಟವಾಗಿರುತ್ತದೆ, ಪಂಚಪಾದಿಕಾಕಾರರು 'ಈ ವಿಷಯವನ್ನು ಸುಗತಮತಪರೀಕ್ಷೆಯಲ್ಲಿ ವಿವರಿಸುವೆವು' (ಸುಗತಮತ ಪರೀಕ್ಷಾಯಾಂ ನಿಪುಣತರಂ ಪ್ರಪಞ್ಚಯಿಷ್ಯಾಮಃ), ಇದು ಹೇಗೆಂಬುದನ್ನು 'ಏಕ ಆತ್ಮನಃ ಶರೀರೇ ಭಾವಾತ್' ಎಂಬಧಿಕರಣದ ಆರಂಭದಲ್ಲಿ ತೋರಿಸಿಕೊಡುವೆವು (ದರ್ಶಯಿಷ್ಯಾಮಃ),'ವಾಕ್ಯಾಭಾಸತ್ವವನ್ನು ಆಯಾ ಅಧಿಕರಣದಲ್ಲಿ ಸಿದ್ಧಾಂತವಾಡಿ ತೋರಿಸಿಕೊಡುವೆವು' (ಪ್ರದರ್ಶಯಿಷ್ಯಾಮಃ)–ಎಂದು ಪೂರ್ಣ ಗ್ರಂಥಕ್ಕೇ ವ್ಯಾಖ್ಯಾನವನ್ನು ತಾವು ಮಾಡುವದಾಗಿ ಪ್ರತಿಜ್ಞೆಮಾಡಿರುತ್ತಾರೆ; ಆದ್ದರಿಂದ ಪಂಚಪಾದಿಕೆ– ಎಂದರೆ ಐದು ಪಾದಗಳು ಅಥವಾ ಭಾಗಗಳು ಇದರಲ್ಲಿವೆ ಎಂದರ್ಥ. ಪದಚ್ಛೇದ, ಪದಾರ್ಥೋಕ್ತಿ, ವಿಗ್ರಹ, ವಾಕ್ಯಯೋಜನೆ. ಆಕ್ಷೇಪಕ್ಕೆ ಸಮಾಧಾನ– ಎಂಬ ಐದು ಭಾಗಗಳಿರುವದರಿಂದ ಈ ಹೆಸರು ಬಂದಿದೆ (ಪೋ.ಪಂ ಭೂ ಪು. ೫, ೬) ; ಅಥವಾ ವಿಸ್ತಾರವಾದ (ಪಞ್ಚ), ಜ್ಞಾನ(ಪಾದ) ವನ್ನು ತಿಳಿಸಿಕೊಡುವದರಿಂದ ಪಂಚಪಾದಿಕೆ ಎಂದೂ ಈ ಹೆಸರಿಗೆ ವ್ಯುತ್ಪತ್ತಿಯನ್ನು ಹೇಳಬಹುದು– ಎಂದು ಶ್ರೀರಾಮಶಾಸ್ತ್ರಿಗಳು ಕಲ್ಪಿಸಿರುತ್ತಾರೆ! ಇದೆಲ್ಲ ಕೇವಲ ವ್ಯಾಖ್ಯಾನಕೌಶಲಪ್ರದರ್ಶನವೆಂದು ಹೇಳದೆ ಗತ್ಯಂತರವಿಲ್ಲ. ಐದನೆಯ ಸೂತ್ರದ ಮೇಲೆಯೂ ಈ ವ್ಯಾಖ್ಯಾನದ ಭಾಗವು ಉದಲಬ್ಧವಾಗಿರುವದು ನಿಜವಾದರೂ ಗ್ರಂಥವು ಸಂಪೂರ್ಣವಾಗಿದೆ ಎಂಬುದಕ್ಕೆ ನಮಗೆ ಆಧಾರವು ಸಾಲದು. ಕಾರಣಾಂತರದಿಂದ ಈ ಗ್ರಂಥವು ಪರಿಪೂರ್ಣವಾಗದೆ ಯಾವದೋ ಕಾರಣದಿಂದ ಈ ಗ್ರಂಥವನ್ನು ಪಂಚಪಾದಿಕಾ ಎಂದು ಕರೆಯುವ ಸಂಪ್ರದಾಯವು ಬೇರೂರಿಕೊಂಡಮೇಲೆ ಇಂಥ ಕಥೆಗಳು ಹುಟ್ಟಿದವೆಂದೇ ಹೇಳಬೇಕಾಗುತ್ತದೆ.

ವೃತ್ತಿ ಎಂಬುದು ಯಾವದೊಂದು ಗ್ರಂಥದ ಸಂಜ್ಞಾನಾಮವಲ್ಲವೆಂಬುದು ಸ್ಪಷ್ಟವಾಗಿದೆ. ಉಪನಿಷತ್ತುಗಳ ಭಾಷ್ಯಗಳನ್ನು ಶಂಕರಭಗವತ್ಪಾದರವರೇ 'ವೃತ್ತಿ' ಎಂದು ಕರೆದುಕೊಂಡಿರುವದು (ಉದಾ: ಕ. ಭಾ. ಬೃ. ಭಾ.) ಕಂಡು ಬಂದಿದೆ. ಭಗವತ್ಪಾದರ ಭಾಷ್ಯದ ಹಿಂದೆಯೇ ಅನೇಕ ಭಾಷ್ಯಗಳಿದ್ದಿರಬಹುದೆಂಬುದಕ್ಕೆ ಆಯಾ ಭಾಷ್ಯಗಳ ಅಭಿಪ್ರಾಯವನ್ನು ಆಚಾರ್ಯರು ಖಂಡಿಸಿರುವದೇ ಗಮನಕವಾಗಿಗುತ್ತದೆ. ಆ ಅಭಿಪ್ರಾಯಗಳನ್ನೂ 'ವೃತ್ತಿಕಾರರ ಮತ'ವೆಂತ ಭಾಷ್ಯಟೀಕಾಕಾರರು ಬರೆದೂ ಇರುತ್ತಾರೆ. ಪಂಚಪಾದಿಕೆಯಲ್ಲಿಯೇ (ಪಂ. ಪಾ· ವರ್ಣಕ ೨ ಪು. ೪೨, ವರ್ಣಕ ೩, ಪು. ೪೮) ಇಂಥ ಬೇರೆಬೇರೆಯ 'ವೃತ್ತಿಕಾರ'ರುಗಳಿಂದ ಕೆಲವು ವಾಕ್ಯಗಳನ್ನೂ ಉದಾಹರಿಸಿಯೂ ಇರುತ್ತದೆ. ಆದ್ದರಿಂದ ಪಂಚಪಾದಿಕೆಗೆ ಏಕೆ ಈ ಹೆಸರು ಬಂತೆಂದಾಗಲಿ, ಆದರ ಉತ್ತರಭಾಗಕ್ಕೆ 'ವೃತ್ತಿ' ಎಂಬ ಹೆಸರು ಇತ್ತೆಂದಾಗಲಿ ಕಲ್ಪಿಸುವದಕ್ಕೆ ನಮಗೆ ಯಾವ ಪ್ರಮಾಣವೂ ಈವರೆಗೆ ದೊರೆತಿಲ್ಲ ಪಂಚಪಾದಿಕೆಯು ಏಕೆ ನಾಲ್ಕು ಸೂತ್ರಗಳಲ್ಲಿಯೇ ಸಮಾಪ್ತವಾಗಿರಬೇಕೆಂಬುದನ್ನು ಶೋಧಿಸಿ ತಿಳಿಯಲಾರದವರು ಇಂಥ ಕಥೆಯನ್ನು ಕಟ್ಟಿರಬೇಕೆಂಬುದೇ ನಿಶ್ಚಯ.

ಒಂಬತ್ತನೆಯದಾಗಿ ಆಚಾರ್ಯರು ಸುರೇಶ್ವರರಿಗೆ 'ನೀನು ಮುಂದೆ ವಾಚಸ್ಪತಿಯಾಗಿ ಹುಟ್ಟಿ ಭವ್ಯವಾದ ಟೀಕೆಯನ್ನು ಮಾಡುವೆ' ಎಂದು ಭವಿಷ್ಯವನ್ನು ನುಡಿದರೆಂಬುದೂ ಇದೆಲ್ಲ ಮಾಧವಕವಿಯ ಕಲ್ಪನೆ ಎಂಬುದಕ್ಕೆ ಪುಷ್ಟಿಯನ್ನು ಕೊಡುತ್ತದೆ ಎನ್ನಬಹುದು. ವಾಚಸ್ಪತಿಮಿಶ್ರರು ಪೂರ್ಣವಾದ ಟೀಕೆಯನ್ನು ಬರೆದಿರುವದನ್ನೂ ಪಂಚಪಾದಿಕೆಯು ವಿಚ್ಛಿನ್ನವಾಗಿರುವದನ್ನೂ ಕಂಡ ಆ ಕವಿ ಇಂಥ ಕಲ್ಪನೆಗೆ ತನ್ನ ಮನದಲ್ಲಿ ಇಂಬುಗೊಟ್ಟಿರಬೇಕೆಂದು ತೋರುತ್ತದೆ. ವಾಚಸ್ಪತಿಯು 'ವಾರ್ತಿಕ'ವನ್ನೇ ಬರೆಯುವನೆಂದೇಕೆ ಆಚಾರ್ಯರು ಹೇಳಲಿಲ್ಲ? ಅಥವಾ ಭಾಮತಿಯೇ ವಾರ್ತಿಕವೆಂದು ಕವಿಯ ಅಭಿಪ್ರಾಯವೆ ? (ಹಾಗೂ ಆಗಬಹುದೆಂದು ಕಲ್ಪತರುಕಾರರು 'ತರ್ಹಿ ವಾರ್ತಿಕತ್ವಮಸ್ತು ನ ಹಿ ವಾರ್ತಿಕಸ್ಯ ಶೃಙ್ಗಮಸ್ತಿ' ವಾರ್ತಿಕವೇ ಆಗಲಿ, ವಾರ್ತಿಕಕ್ಕೇನೂ ಕೋಡಿಲ್ಲವಷ್ಟೆ ? —ಎಂದು ಸೂ. ಭಾ. ೨-೪-೧೯ರಲ್ಲಿ ಹೇಳಿಯೂ ಇರುತ್ತಾರೆ). ಹೇಗೇ ಆದರೂ ಸುರೇಶ್ವರಾಚಾರ್ಯರ ಆ ಪರರೂಪವು ವಾಚಸ್ಪತಿಮಿಶ್ರರು ಎಂಬುದಂತೂ ಆಚಾರ್ಯರ ಭವಿಷ್ಯದ್ಘಟನೋಹಾಪ್ರತಿಭೆಗೆ ಕೀರ್ತಿಯನ್ನು ತಂದುಕೊಡುವಂತಿಲ್ಲ. ಏಕೆಂದರೆ ಭಾಮತಿಯ ಅಭಿಪ್ರಾಯಕ್ಕೂ ವಾರ್ತಿಕದ ಆಶಯಕ್ಕೂ ಹೊಂದಿಕೆಯಿರುವದಿಲ್ಲ. ವಾಚಸ್ಪತಿಮಿಶ್ರನು ಮಂಡನಮಿಶ್ರನ ಅನೇಕ ಅಭಿಪ್ರಾಯಗಳನ್ನು ಭಾಷ್ಯಕಾರರ ಅಭಿಪ್ರಾಯವೆಂಬ ಭಾವವುಂಟಾಗುವ ಹಾಗೆ ತನ್ನ ಟೀಕೆಯಲ್ಲಿ ಹೆಣೆದುಕೊಂಡಿರುತ್ತಾನೆ. ಆನಂದಗಿರಿಯುಕೂಡ ಒಂದು ಕಡೆಯಲ್ಲಿ 'ಮಣ್ಡನ

ಪೃಷ್ಠಸೇವೀ' ಮುಂಡನನ ಬೆನ್ನಂಟಿದವನು ಎಂದು ಆತನನ್ನು ಹಾಸ್ಯಮಾಡಿರುತ್ತಾನೆ. ಸುರೇಶ್ವರಾಚಾರ್ಯರೂ ತಮ್ಮ ವಾರ್ತಿಕದಲ್ಲಿ ಮುಂಡನಮಿಶ್ರನ ಅಭಿಪ್ರಾಯಗಳನ್ನು ಸೇರಿಸಿಕೊಂಡಿರುತ್ತಾರಾದರೂ ಶಾಂಕರಪ್ರಕ್ರಿಯೆಗೆ ವಿರುದ್ಧವಾಗಿರುವ ಮುಂಡನವಾದವನ್ನು ಸುಸ್ಪಷ್ಟವಾಗಿ ಖಂಡಿಸಿರುತ್ತಾರೆ. ಆಂತು ಹೇಗೆಹೇಗೆ ನೋಡಿದರೂ ಈ 'ವಾರ್ತಿಕಪುಚಕಾವಿಕೆಗಳ ಸಂಬಂಧದ ಕಥೆಯು' ಕಲ್ಪನಾಮಾತ್ರವೆಂದೇ ನನಗೆ ಮನವಟ್ಟಾಗಿಬಿಟ್ಟಿದೆ.

ಪಂಚಪಾದಿಕೆಯು ಸುಟ್ಟುಹೋದ ಕಥೆಯು ಸಂಭಾವನೀಯವೆ?

೧೩೧. ಮಾಧವೀಯದಲ್ಲಿ ವರ್ಣಿಸಿರುವ ಈ ಶಿಷ್ಯಸ್ಪರ್ಧೆಯ ಕಥೆಯು ನಿಜವಾಗಲಿ, ಆಗದಿರಲಿ, ಆಚಾರ್ಯರು ದಕ್ಷಿಣಕ್ಕೆ ಬಂದಮೇಲೆ ಅದ್ವೈತ ಸಿದ್ಧಾಂತದ ಪ್ರಚಾರಕ್ಕೆ ಏರ್ಪಾಡುಮಾಡಿರಬೇಕು; ಆವರ ಶಿಷ್ಯರುಗಳೂ ಈ ಕೆಲಸದಲ್ಲಿ ಉತ್ಸಾಹವನ್ನು ಮೂಡಿಸಿರಬೇಕು–ಎಂಬುದಂತೂ ಸರ್ವರೂ ಒಪ್ಪತಕ್ಕ ದಾಗಿದೆ.

ಈಗ ಪದ್ಮಪಾದರ ಕಥೆಯನ್ನು ಶಂಕರವಿಜಯಗಳಲ್ಲಿ ಮುಂದುವರಿಸಿರುವ ಪ್ರಕಾರವನ್ನು ಸಂಕ್ಷೇಪವಾಗಿ ತಿಳಿಯುವದಕ್ಕೆ ಪ್ರಯತ್ನಿಸೋಣ. ಪದ್ಮಪಾದಾಚಾರ್ಯರು ಗುರುಗಳನ್ನು ಒಪ್ಪಿಸಿ ಆವರ ಅನುಜ್ಞೆಯನ್ನು ಪಡೆದು ತೀರ್ಥಯಾತ್ರೆಗೆ ಹೊರಟರು (ಮಾ.ಶಂ. ೧೪–೧೫ನೆಯ ಪ್ರಕರಣ). ಗುರುಗಳು ಶೃಂಗೇರಿಯಲ್ಲಿ ಕೆಲವು ಕಾಲವಿದ್ದು ಮಾತೃಪೃತ್ತಾಂತವನ್ನು ಯೋಗಶಕ್ತಿಯ ಬಲದಿಂದ ತಿಳಿದುಕೊಂಡು ಆಕಾಶಮಾರ್ಗದಿಂದ ತಾಯಿಯಿದ್ದಲ್ಲಿಗೆ ಹೋದರು. ಆಲ್ಲಿ ನಡೆದದ್ದರ ವಿವರವನ್ನು ಮುಂದೆ ತಿಳಿಸುವೆವು.

ಪದ್ಮಪಾದರು ಗುರುಗಳ ಅಪ್ಪಣೆಯನ್ನು ಪಡೆದುಕೊಂಡು ಉತ್ತರದ ತೀರ್ಥಗಳನ್ನು ಸೇವಿಸಿದ ಬಳಿಕ ದಕ್ಷಿಣಕ್ಕೆ ಬಂದು ಕಾಳಹಸ್ತೀಶ್ವರ, ಕಾಂಚಿಯ ಏಕಾಮ್ರೇಶ್ವರ, ಕಲ್ಲಾಲೇಶ– ಇವರ ದರ್ಶನವನ್ನು ಮಾಡಿಕೊಂಡು ಶಿವಗಂಗಾತೀರ್ಥದಲ್ಲಿ ಸ್ನಾನವನ್ನು ಮಾಡಿ, ರಾಮಸೇತುವಿಗೆಂದು ಹೋಗುವ ದಾರಿಯಲ್ಲಿ ಸಿಕ್ಕಿದ ಸೋದರಮಾವನ ಮನೆಗೆ ಬಂದರು. ಆಲ್ಲಿದ್ದ ಬಂಧುಗಳ ಪ್ರಾರ್ಥನೆಯಂತೆ ಕೆಲವು ದಿನಗಳು ಇದ್ದರು. ಸೋದರಮಾವನು ಆವರು ಬರೆದಿದ್ದ ಟೀಕೆಯನ್ನು ನೋಡಿ ಗ್ರಂಥಕಾರರ ಮತಾಂತರಖಂಡನೆಯು ಚಾತುರ್ಯವನ್ನು ನೋಡಿ ಸಂತೋಷಭರಿತನಾದರೂ ತನ್ನದಾದ ಪ್ರಭಾಕರಮತವನ್ನು ನಿರಾಕರಿಸಿದ್ದದ್ದನ್ನು ಕಂಡು ಮಾತ್ಸರ್ಯದಿಂದಲೂ ಕೂಡಿದವನಾಗಿ ಚೆನ್ನಾಗಿದೆ ಎಂದಿಷ್ಟೇ ಹೇಳಿದನು. ಪದ್ಮಪಾದರು ಸೇತುವನ್ನು ನೋಡುವದಕ್ಕೆ ಹೋಗಿ ಬರುವವರೆಗೂ ಈ ಪುಸ್ತಕವು ನಿನ್ನಲ್ಲಿರಲಿ ಎಂದು (೧೧೧) ಅದನ್ನು ಬಿಟ್ಟು

ಹೊರಟರು. ಅವರು ಹೋದಬಳಿಕ ಮಾವನು ತನ್ನ ಪಕ್ಷವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂಬ ಅಭಿಮಾನದಿಂದ ಪುಸ್ತಕವನ್ನು ಒಂದು ಮನೆಯಲ್ಲಿಟ್ಟು ಯಾರಿಗೂ ಸಂಶಯವುಂಟಾಗದಂತೆ ಮನೆಗೇ ಬೆಂಕಿಯನ್ನು ಹತ್ತಿಸಿದನು(೧೧೫). ಮುಂದಿನ ಯಾತ್ರೆಯನ್ನು ಮುಗಿಸಿಕೊಂಡು ಹಿಂದಿರುಗಿದ ಪದ್ಮಪಾದರು ಪುಸ್ತಕವು ನಾಶವಾದ ವಾರ್ತೆಯನ್ನು ಕೇಳಿ ಬಹಳ ವ್ಯಸನಪಟ್ಟರು. ಮುಂದಕ್ಕೆ ಹೊರಟು ಕೇರಳಕ್ಕೆ ಆಚಾರ್ಯರು ಬಂದಿರುವರೆಂಬುದನ್ನು ಕೇಳಿ ಅಲ್ಲಿಗೆ ಬಂದು ಆಚಾರ್ಯರಿಗೆ ನಡೆದದ್ದಿಲ್ಲವನ್ನೂ ತಿಳಿಸಿದರು. ಪಂಚಪಾದಿಕೆಯು ನಾಶವಾದ ರೀತಿಯನ್ನು ತಿಳಿಸಿ 'ಈಗ ಮತ್ತೆ ಬರೆಯಬೇಕೆಂದರೂ ಹಿಂದಿನ ಯುಕ್ತಿಗಳು ಹೊಳೆಯುತ್ತಿಲ್ಲ, ಏನು ಮಾಡಲಿ!' ಎಂದು ಶೋಕಿಸಿದರು. ಆಚಾರ್ಯರು ಅವರನ್ನು ಸಮಾಧಾನಗೊಳಿಸಿ 'ಇದು ನನಗೆ ಮೊದಲೇ ಗೊತ್ತಿತ್ತು, ಸುರೇಶ್ವರನಿಗೆ ಇದನ್ನು ತಿಳಿಸಿಯೂ ಇದ್ದೆ (೧೬೭) ಶೃಂಗೇರಿಯಲ್ಲಿ ಕೇಳಿದ್ದ ಪಂಚಪಾದೀಭಾಗವು ನನಗೆ ನೆನಪಿದೆ. ಹೇಳುತ್ತೇನೆ, ಬರೆದುಕೊ!'– ಎಂದು ಹಿಂದಿನ ಅನುಪೂರ್ವಿಯಿಂದಲೇ ಬರೆಯಿಸಿದರು. ಪದ್ಮಪಾದರು ಪರಮಾನಂದಭರಿತರಾದರು (೧೪–೧೬ಲರಿಂದ ೧೭೦).

ಈಗ ಈ ಕಥೆಯ ತತ್ತ್ವವೇನಿರಬಹುದೆಂಬುದನ್ನು ಸ್ವಲ್ಪ ವಿಮರ್ಶಿಸಿ ನೋಡೋಣ. ಪದ್ಮಪಾದರನ್ನು ಮಾವನೂ ಬಂಧುಗಳೂ ಸ್ವಾಗತಿಸಿದರೆಂಬುದೇನೂ ಅಸಂಭಾವನೀಯವಲ್ಲ. ಆದರೆ ಆದರಲ್ಲಿ **ಪ್ರಾಭಾಕರಮತದ ಖಂಡನೆಯು** ಇದ್ದದ್ದರಿಂದ ಮಾವನು ಆದನ್ನಿಟ್ಟ ಮನೆಗೆ ಬೆಂಕಿಹೊತ್ತಿಸಿಕೊಂಡನೆಂಬುದು ಸ್ವಲ್ಪ ಸಂಶಯನೀಯ. ಈ ಕಥೆಯು ವ್ಯಾಸಾಚಲೀಯದಲ್ಲಿಯೂ ಸ್ವಲ್ಪಹೆಚ್ಚುಕಡಿಮೆ ಹೀಗೆಯೇ ಇದೆ (ವ್ಯಾ. ಶಂ. ೭–೬ಲರಿಂದ ೮–೩೫ರವರೆಗೆ). ಈ ಕಥೆಯನ್ನು ಯಾರಿಂದಲೋ ಕೇಳಿ ಮಾಧವವ್ಯಾಸಾಚಲರಿಬ್ಬರೂ ಬರೆದಿದ್ದಾರೆಂಬುದಕ್ಕೆ ಅವರೇ ಹೇಳಿಕೆಯಿರುವ ಸಾಕ್ಷ್ಯವೂ ಇದೆ ಏಕೆಂದರೆ ಇಬ್ಬರೂ ಹೀಗೆಂದು ಬರೆದುಕೊಂಡಿದ್ದಾರೆ :

ಐತಿಹ್ಯಮಾತ್ರಿತ್ಯ ವದಂತಿ ಜೈವಂ
ತದೇವ ಮೂಲಂ ಮಮ ಭಾಷಣೇಽಪಿ ।
ಯಾವನ್ಮೃತಂ ತಾವದಿಹಾಸ್ಯ ಕರ್ತುಃ
ಪಾಪಂ ತತಃ ಸ್ಯಾದ್ದ್ವಿಗುಣಂ ಪ್ರವಕ್ತುಃ ॥
(ಮಾ. ಶಂ. ೧೪–೧೧೬, ವ್ಯಾ. ಶಂ. ೮–೭೬

'ಐತಿಹ್ಯಮಾತ್ರವನ್ನು ಆಶ್ರಯಿಸಿ ಜನರು ಹೀಗೆನ್ನುತ್ತಿದಾರೆ : ನನ್ನ ಹೇಳಿಕೆಗೂ ಅದೇ ಮೂಲವು. ಪಾಪವನ್ನು ಮಾಡಿದವನಿಗೆ ಎಷ್ಟು ಪಾಪವೋ ಅದನ್ನು ಮತ್ತೊಬ್ಬರಲ್ಲಿ ಹೇಳಿದವನಿಗೆ ಅದರ

ಎರಡರಷ್ಟು ಹಾಸು' ಎಂದು ಇಬ್ಬರೂ ತಮ್ಮ ಹೊಣೆಗಾರಿಕೆಯನ್ನು ತಪ್ಪಿಸಿ ಕೊಂಡಿರುತ್ತಾರೆ. ಇನ್ನೊಂದು ಮಾತನ್ನು ಇಬ್ಬರೂ ಸಮಾನವಾಗಿ ಆಡಿರುತ್ತಾರೆ

ವೃಷ್ಟ್ವಾ ಬುದ್ಧಿಂ ಮಾತುಲಸ್ತಸ್ಯ ಭೂಯೋ
ಭೀತಃ ಪ್ರಾಸ್ಯತ್ಯೋಜಸೇ ತಸ್ಯಸೋಷ್ಣವಾ
ಕಿಞ್ಚಾದ್ ಪ್ರನ್ನಂ ಪೂರ್ವವನ್ನಾಕ್ಷಮಿಷ್ಣ
ಟೀಕಾಂ ಕರ್ತುಂ ಕೇವಲೇವಂ ಬ್ರುವನ್ತಿ ॥

(ಮಾ. ಶಂ. ೨೪–೧೨೨, ವ್ಯಾ. ಶಂ. ೯–೩೩).

'ಪ್ರಸ್ತುತವು ಹೋದರೂ ನನ್ನ ಬುದ್ಧಿಯೇನೋ ಉಳಿದಿದೆಯಲ್ಲ' ಎಂದು ಟೀಕೆಯನ್ನು ಬರೆಯಲು ಪ್ರಾರಂಭಿಸಿದ ಆತನ ಬುದ್ಧಿಯನ್ನು ಕಂಡು ಮತ್ತಷ್ಟು ಅಂಜಿದ ಸೋದರಮಾವನು ಅವನ ಬುದ್ಧಿಯನ್ನು ಮೊಂಕುಮಾಡುವ ಯಾವದೋ ಮದ್ದನ್ನು ಅವನ ಊಟದ ಅನ್ನದಲ್ಲಿ ಹಾಕಿದನು. ಆದ್ದರಿಂದ ಮೊದಲಿನಂತೆ ಆತನು ಟೀಕೆಯನ್ನು ಮಾಡಲಾರದಾದನು ಎಂದು ಕೆಲವರು ಹೇಳುತ್ತಾರೆ. ವ್ಯಾಸಾಚಲೀಯದಲ್ಲಿ ಆಚಾರ್ಯರು ಗ್ರಂಥದಲ್ಲಿ ಐದು ಪಾದಗಳನ್ನು ಮತ್ತೆ ಬರೆಯಿಸಿದರೆಂಬ ಸುದ್ದಿಯಿಲ್ಲ. ಪದ್ಮಪಾದರು ಕೇರಳದಲ್ಲಿ ಆಚಾರ್ಯರನ್ನು ಸಂಧಿಸಿದ ಸುದ್ದಿಯೇ ಅಲ್ಲಿಲ್ಲ! ಅಲ್ಲಿ ಉಗ್ರಭೈರವನನ್ನು ಪದ್ಮಪಾದರು ಸಂಧಿಸಿದ್ದೂ (೯–೫೫ರಿಂದ ೬೩) ತೋಟಕಾಚಾರ್ಯನ ವೃತ್ತಾಂತವೂ (೯–೪೪ರಿಂದ ೯೬) ಇದೆ. ನಮ್ಮಲ್ಲಿರುವ ಕೈಶ್ರುತಿಯು ವ್ಯಾಸಾಚಲೀಯವು ಕೃತ್ರಿಮವಾಗಲಿ ಆಗದಿರಲಿ, ಪದ್ಮಪಾದರ ಗ್ರಂಥವು ಸುಟ್ಟುಹೋದ ಕಥೆಯು ಅವರಿಬ್ಬರಿಗಿಂತ ಪೂರ್ವದಲ್ಲಿಯೇ ಜನರಲ್ಲಿ ಪ್ರಚಾರವಾಗಿತ್ತೆಂಬುದು ಖಂಡಿತ.

ಆದರೆ ಆಚಾರ್ಯರು **ಪಂಚಪಾದಿಕೆ**ಯನ್ನು ಮತ್ತೆ ನೆನಪಿನಿಂದ ಹೇಳಿ ಬರೆಯಿಸಿದರೆಂಬ ಕಥೆಯು ಪಾಧವಕವಿಗೇ ಸಲ್ಲತಕ್ಕದ್ದು. ಹಾಗೆ ಕಲ್ಪಿಸುವದರಲ್ಲಿ ಆಚಾರ್ಯರು ಮಹಾಮೇಧಾಶಕ್ತಿಯುಳ್ಳವರೆಂದು ತಿಳಿಸುವದೇ ಆತನ ಉದ್ದೇಶ. ಹಾಗೆಂದು ಆತನು (ಮಾ ಶಂ. ೧೪–೧೬೯) ಹೇಳಿಯೂ ಇರುತ್ತಾನೆ. ಇದೇ ಸಂದರ್ಭದಲ್ಲಿ ನಮಗೆ ತಿಳಿಯಬರುವ ಮತ್ತೊಂದು ವಿಷಯವೂ ಇದೆ. ಅದೇನೆಂದರೆ ಆಚಾರ್ಯರು

ಪೂರ್ವಂ ಶೃಙ್ಗೇರ್ಯಾಕ್ಷಧರೇ ಪುತ್ಸಮೀಪೇ
ಪ್ರೀಮ್ಣಾ ಯಾಸೌ ವಾಚಿತಾ ಪಂಚಪಾದೀ ।
ಸಾ ಮೇ ಚಿತ್ತಾನ್ನಾಪಯಾತ್ಯದ್ಯ ಶೋಕೋ
ಯಾತಾಚ್ಛೀಘ್ರಂ ತಾಂ ಲಿಖೇತ್ಯಾಖ್ಯದಾರ್ಯಃ ॥ (೧೪–೧೬೮)

'ಹಿಂದೆ ಶೃಂಗೇರಿಯಲ್ಲಿ ನನ್ನ ಬಳಿಯಲ್ಲಿ 'ಪಂಚಪಾದಿ'ಯನ್ನು ಓದಿದ್ದೆಯಲ್ಲ, ಅದು ನನ್ನ ಚಿತ್ತದಿಂದ ದೂರವಾಗಿಹೋಗಿಲ್ಲ; ಶೋಕಮಾಡದಿರು, ಅದನ್ನು ಬೇಗನೆ ಬರೆದುಕೊ' ಎಂದು ಹೇಳಿದ್ದರಲ್ಲಿ 'ಪಂಚಪಾದಿ' ಎಂಬ

ಪೆಸರಿದೆ. ಮುಂದಿನ ಶ್ಲೋಕವಲ್ಲಿಯೂ 'ಆಶ್ವಾಸ್ಯೇತ್ಥಂ ಭಾಷ್ಯಕೃತ್ಪಂಚಪಾದೀ ಮಾಚಖ್ಯೌ' ಎಂದು ಪಂಚಪಾದೀಶಬ್ದವನ್ನೇ ಉಪಯೋಗಿಸಿರುತ್ತಾನೆ. ಶ್ರೀರಾಮಶಾಸ್ತ್ರಿಗಳು (ಪು. ೩೩೪) ಪರಾಮರ್ಶಿಸಿರುವ ಕಲ್ಪತರುವಾಕ್ಯಗಳಲ್ಲಿ 'ಪಂಚಪಾದೀ' ಎಂದೇ ಇರುವದನ್ನೇ ನೋಡಿಯೇ ಮಾಧವನು ಹೀಗೆ ಕಥೆಯನ್ನು ಕಲ್ಪಿಸಿರಬಹುದೆ ?– ಎಂಬ ಶಂಕೆಯೊಂದು ಎದ್ದುಕೊಳ್ಳುತ್ತದೆ. ಇದು ಹೇಗೇ ಆಗಿರಲಿ, ಕಲ್ಪತರುಕಾರರು ವೈಶ್ವಾನರಾಧಿಕರಣದಲ್ಲಿಯೂ ದಹರಾಧಿಕರಣದಲ್ಲಿಯೂ 'ಪಂಚ್ಚಪಾದೀ' ಎಂಬ ಹೆಸರನ್ನೇ ಮೂರು ಸಲವೂ ಪ್ರಯೋಗಿಸಿರುತ್ತಾರೆ. 'ಪಂಚಪಾದಿಕಾ' ಎಂಬ ಹೆಸರನ್ನು ಎಲ್ಲಿಯೂ ಎತ್ತಿಲ್ಲ. ಪರಿಮಲಕಾರರು ಈ ವಿಷಯದಲ್ಲಿ ಏನನ್ನೂ ಹೇಳಿಲ್ಲ ಕಲ್ಪತರುಕಾರರು ಪಂಚಪಾದಿಕೆಗೆ 'ವಿವರಣ'ವೆಂಬ ಟೀಕೆಯನ್ನು ಬರೆದರೆಂಬ ಶ್ರೀರಾಮಶಾಸ್ತ್ರಿಗಳ ಕಲ್ಪನೆಯು ಸಮಂಜಸವಾತನ್ನುಕೂಡ ಹೇಳಿಲ್ಲ. ಆದ್ದರಿಂದ ಪಂಚಪಾದಿಯೇ ಪ್ರಕೃತಗ್ರಂಥವೆಂದೂ, ಅದು ಪದ್ಮಪಾದಕೃತವೆಂದೂ, ಅದಕ್ಕೆ 'ಪಂಚಪಾದಿಕೆ' ಎಂಬ ಹೆಸರು ಶಂಕರ ವಿಷಯ ಕಥೆಯಲ್ಲಿ ಹೇಳಿದ ಕಾರಣದಿಂದ ಬಂತೆಂದೂ, ಉತ್ತರಭಾಗವೂ ಒಂದಿದೆಯೆಂದೂ, ಅದಕ್ಕೆ 'ವೃತ್ತಿ' ಎಂದು ಹೆಸರೆಂದೂ ಹೇಳುವದು ನಿರಾಧಾರಕಲ್ಪನಾ ಪರಂಪರೆಯೇ ಎಂದು ಇವರಿಂದಲೂ ನಿಶ್ಚಿತವಾಗುತ್ತದೆ.

ಆಚಾರ್ಯರು ಮಹಾಮೇಧಾವಿಗಳೆಂದು ಹೊಗಳುವದಕ್ಕಾಗಿ ಮಾಧವನು ಕಲ್ಪಿಸಿರುವ ಮತ್ತೊಂದು ಕಥೆಯನ್ನು ಈ ಗುಂಪಿಗೇ ಸೇರಿಸಬೇಕಾಗಿದೆ. ಕವಿತಾ ಕುಶಲನಾದ ಕೇರಳರಾಜ್ಯದ ರಾಜಶೇಖರನು ಆಚಾರ್ಯರನ್ನು ಕಾಣುವದಕ್ಕೆ ಬಂದಾಗ 'ನಿಮ್ಮ ನಾಟಕತ್ರಯವು ಪ್ರಸಿದ್ಧವಾಯಿತಷ್ಟೆ ?' ಎಂದು ಕೇಳಲು ಅವನು ಅಕಸ್ಮಾತ್ತಾಗಿ ಅವು ಬೆಂಕಿಯಲ್ಲಿ ಸುಟ್ಟುಹೋದವೆಂದು ಹೇಳಿದನು ; ಆಗ ಅವನ್ನು ಶಂಕರಾಚಾರ್ಯರವರು ಮತ್ತೆ ಹೇಳಿ ಬರೆಯಿಸಿ ಅವನನ್ನು ಬೆರಗು ಮಾಡಿದರು (ಮಾ. ಶಂ. ೧೪–೧೭ರಿಂದ ೧೭೩) ಎಂಬುದು ಶಂಕರವಿಜಯದಲ್ಲಿರುವ ಕಥೆ. ಹಿಂದೆ ತಾವು ಬ್ರಹ್ಮಚಾರಿಗಳಾಗಿದ್ದಾಗ ಈ ರಾಜನ ಮೂರು ನಾಟಕಗಳನ್ನು ನೋಡಿಕೊಟ್ಟಿದ್ದರೆಂಬ ಕಥೆಯನ್ನು (ಪು. ೫೯) ವಾಚಕರು ನೆನಪಿಗೆ ತಂದುಕೊಳ್ಳಬೇಕು. ಅಷ್ಟು ವರ್ಷಗಳ ಹಿಂದೆ ಒಬ್ಬರಲ್ಲಿ ತಾವು ಒಮ್ಮೆ ನೋಡಿದ ನಾಟಕಗಳ ನೆನಪೇ ಅಚ್ಚಳಿಯದೆ ಇರುವಾಗ ಶೃಂಗೇರಿಯಲ್ಲಿ ಇತ್ತೀಚೆಗೆ ನೋಡಿದ್ದ ಪದ್ಮಪಾದರ ಗ್ರಂಥದ ನೆನಪು ಇರುವದೇನಾಶ್ಚರ್ಯ ?–ಎಂಬುದು ಮಾಧವಕವಿಯ ಆಶಯವಿರಬೇಕು. ಆದರೆ ಆಚಾರ್ಯರಿಗೆ ಐದು ಪಾದಗಳ ಭಾಗವನ್ನು ಮಾತ್ರ ಪದ್ಮಪಾದರು ಓದಿಹೇಳಿದ್ದೇಕೆ ? 'ವೃತ್ತಿ'ಯ ಭಾಗವನ್ನೇಕೆ ಓದಿ ಹೇಳಲಿಲ್ಲ ?–ಎಂಬ ಪ್ರಶ್ನೆಗೆ ಉತ್ತರವನ್ನು ಕಲ್ಪಿಸುವದನ್ನು ಕವಿ ಇಲ್ಲಿ ಮರೆತಿರುತ್ತಾನೆ. ರಾಜಶೇಖರನ ನಾಟಕಗಳು ಯಾವವು ?– ಎಂಬುದನ್ನೂ ಅವನು ಹೇಳಿಲ್ಲ. ಬಾಲರಾಮಾಯಣ, ಬಾಲಭಾರತ, ಕರ್ಪೂರಮಂಜರೀ

–ಇವೇ ಆ ನಾಟಕಗಳೆಂದು ಕೇರಳದ ವಿದ್ವಾಂಸರ ನಂಬಿಕೆಯಿದೆಯಂತೆ. ಆದರೆ ರಾಜಶೇಖರಕವಿಯು ಯಾಯಾವರಬ್ರಾಹ್ಮಣ ; ವಿದರ್ಭದೇಶದಲ್ಲಿ ಅವನ ಮನೆ ಯಿತ್ತು, ಕಾನ್ಯಕುಬ್ಜನಗರವೇ ಅವನಿಗೆ ಕರ್ಮಕ್ಷೇತ್ರವಾಗಿತ್ತು ; ಈ ಕಾರಣದಿಂದ ಕೇರಳೀಯ ಕಲ್ಪನೆಯು ಅಸಂಗತವು ಎಂದು ಬಲದೇವ ಉಪಾಧ್ಯಾಯರು (ಪ್ರ. ೧೦೪ ಟಿಪ್ಪಣಿ) ಬರೆದಿರುತ್ತಾರೆ. ಆಚಾರ್ಯರ ಕಾಲಕ್ಕೆ ಕೇರಳದೇಶದಲ್ಲಿ ಈ ಹೆಸರಿನ ಕವಿಯೊಬ್ಬನು ರಾಜನಾಗಿದ್ದನೆಂದು ಇತಿಹಾಸದಿಂದ ಸಿದ್ಧವಾಗುವ ವರೆಗೆ ನಾಟಕತ್ರಯದ ಉಜ್ಜೀವನದ ಕಥೆಯೂ ಕವಿಕಲ್ಪನಾಮಾತ್ರವೆಂ ಎಂದು ಪೇಳಬೇಕಾಗಿದೆ.

೧೪. ಆಚಾರ್ಯರ ಮಾತೃಭಕ್ತಿ

ತಾಯಿಗೆ ಸದ್ಗತಿಯನ್ನು ಕೊಡಿಸಿದ್ದು

೧೩೪. ಈಗ ಆಚಾರ್ಯರ ಕೇರಳಯಾತ್ರೆಯ ವಿವರವನ್ನು ಮಾಪ ಪೀಯೆಡಂತೆ ಸಂಗ್ರಹಿಸೋಣ : ಆಕಾಶಮಾರ್ಗದಿಂದ ತಾಯಿಯ ಬಳಿಗೆ ಬಂದ ಶಂಕರರು ಆಕೆಯನ್ನು ಸಮಾಧಾನಪಡಿಸಿದರು. ಆಕೆಯು ಸಂತುಷ್ಟಾಂತರಂಗ ಳಾಗಿ 'ಅಪ್ಪ, ನೀನು ಬಂದದ್ದು ಒಳ್ಳೆಯದಾಯಿತು. ಇನ್ನು ನಾನು ಈ ಶರೀರ ವನ್ನು ಧರಿಸಿರಲಾರೆನು. ಶಾಸ್ತ್ರೋಕ್ತವಾಗಿ ನನಗೆ ಸಂಸ್ಕಾರವನ್ನು ಮಾಡಿ ನನ್ನನ್ನು ಪುಣ್ಯಲೋಕಕ್ಕೆ ಕಳುಹಿಸು' ಎಂದಳು. ಆಚಾರ್ಯರು ಆಕೆಗೆ ಒಳ್ಳೆಯದಾಗಲೆಂದು ನಿರ್ಗುಣನಿರ್ವಿಶೇಷಬ್ರಹ್ಮತತ್ತ್ವವನ್ನು ಉಪದೇಶಿಸಿದರು. ಆದರೆ ಅವಳ ಮನಸ್ಸಿಗೆ ಅದು ಹಿಡಿಯಲಿಲ್ಲ. ಆಗ ಆಚಾರ್ಯರು 'ಅನಾದ್ಯನ್ತ ಮಾಮ್ಯಂ ಪರಂ ತತ್ತ್ವಮರ್ಥಂ ಚಿದಾಕಾರಮೇಕಂ ತುರೀಯಂ ತ್ವಮೇ-ಯಸ್ ॥ ಹರಿಬ್ರಹ್ಮಮೃಗ್ಯಂ ಪರಬ್ರಹ್ಮರೂಪಂ ಮನೋವಾಗತೀತಂ ಮಹಃಶೈವ ಮಾಡೇ ॥' ಮುಂತಾದ ಹದಿನಾಲ್ಕು ಶ್ಲೋಕಗಳ ಶಿವಭುಜಂಗಪ್ರಯಾತ ಸ್ತೋತ್ರದಿಂದ (ವೃತ್ತಿಶ್ಚರ್ಚಾಜಜಶ್ಲೋಪಪದ್ಯೈಃ ೧೪–೩೭) ಶಿವನನ್ನು ಸ್ತುತಿ ಸಿದರು. ಆತನು ಪ್ರಸನ್ನನಾಗಿ ತನ್ನ ದೂತರನ್ನು ಕಳುಹಿಸಿದನು. ಶೂಲ ಪಿನಾಕಪಾಣಿಗಳಾದ ಅವರೊಡನೆ ಶಿವಲೋಕಕ್ಕೆ ಹೋಗಲಾರೆನೆಂದು ತಾಯಿ ಹೇಳಿದ್ದರಿಂದ ಅವರನ್ನು ವಿನಯದಿಂದ ಕಳುಹಿಸಿಕೊಟ್ಟು ಆಚಾರ್ಯರು ವಿಷ್ಣು ವನ್ನು ಸ್ತೋತ್ರಮಾಡಿದರು. ಆ ಸ್ತೋತ್ರವು ಯಾವದೆಂಬುದು ಸ್ಪಷ್ಟವಾಗಿ ಗೊತ್ತಾಗುವಂತಿಲ್ಲ. ಶ್ರೀವಿಷ್ಣುವಿನ ವರ್ಣನೆಯನ್ನು ಮಾಧವನು ಹೀಗೆ ಮಾಡಿರುತ್ತಾನೆ :

ಭುಜಗಾಧಿಪಭೋಗತಲ್ಪಭಾಜಂ ಕಮಲಾಜ್ಯಸ್ಥಲಕಲ್ಪಿತಾಜಘ್ರಿಪದ್ಮವ್ ।
ಅಖಿವೀಜಿತಮಾದರೇಣ ನೀಲಾಪಸುಧಾಭ್ಯಾಂ ಚಲಮಾನಚಾಮರಾಭ್ಯಾಮ್ [೫೯]
ವಿಹಿತಾಞ್ಜಲಿನಾ ನಿಷೇವ್ಯಮಾಣಂ ವಿನತಾನನ್ದಕೃತಾಗ್ರತೋ ರಥೇನ ।
ಧೃತಮೂರ್ತಿಭಿರಸ್ತ್ರದೇವತಾಭಿಃ ಪರಿತಃ ಪಞ್ಚಭಿರಞ್ಜಿತೋಪಕರ್ಣಮ್ [೬೦]
ಮಹನೀಯತಮಾಲಕೋಮಲಾಙ್ಗಂ ಮಕುಟೇ ರತ್ನಚಯಂ ಮಹಾರ್ಹಯುಕ್ತಮ್ ।
ಶಿಖಿಕೇತರಭಾಸುಶೀಲಿತಾಗ್ರಂ ಹರಿನೀಲೋಪಲಭೂಧರಂ ಹಸನ್ತಮ್ [೬೧]

ಯಾವ ಸ್ತೋತ್ರವು ಇದಕ್ಕೆ ಮೂಲವಾಗಿದೆಯೋ ತಿಳಿಯದು. ಹೀಗೆ ಶಂಕರರು ವರ್ಣಿಸಿದ ವಿಷ್ಣುಮೂರ್ತಿಯನ್ನು ಚಿತ್ತದಲ್ಲಿ ಧರಿಸಿಕೊಂಡೇ ಯೋಗಿಯಂತೆ ತಾಯಿಯು ಅಂತ್ಯಕಾಲದಲ್ಲಿ ಆತನನ್ನೇ ಭಾವಿಸುತ್ತಾ ದೇಹವನ್ನು ತ್ಯಜಿಸಿದಳು. ಆಗ ವಿಷ್ಣುದೂತರು ವಿಮಾನವನ್ನು ತೆಗೆದುಕೊಂಡುಬಂದರು. ಅವರೊಡನೆ ಆಕೆಯು ದೇವಯಾನಮಾರ್ಗದಿಂದ ಪರಮಪದವನ್ನೈದಿದಳು (ಪೂ. ಶಂ. ೧೪–೪೨ರಿಂದ ೪೫),

ನ್ಯಾಸಾಚಲೀಯದಲ್ಲಿ ಸನಂದನನು ಶಿಷ್ಯನಾದೊಡನೆ ಆಚಾರ್ಯರು ಕೇರಳಕ್ಕೆ ಬಂದರು. ಅವರು ಉಪದೇಶಿಸಿದ ನಿರ್ಗುಣವಿದ್ಯೆ ಆಕೆಗೆ ತಿಳಿಯಲಿಲ್ಲ; ಆದ್ದರಿಂದ ವಿಷ್ಣುವಿನ ಸಾಕಾರರೂಪವನ್ನು ಉಪದೇಶಿಸಿದರು; ಅದನ್ನೇ ಧ್ಯಾನಿಸುತ್ತಾ ಆ ತಾಯಿ ಶರೀರವನ್ನು ತ್ಯಜಿಸಿದಳು (ವ್ಯಾ. ಶಂ. ೪–೪೪ರಿಂದ ೬೯) –ಎಂದಿಷ್ಟೇ ಇದೆ. ಅಲ್ಲಿ ಶಿವದೂತರ ಭಯಂಕರಾಕಾರದ ಪ್ರಸ್ತಾಪವಿಲ್ಲ.

ಚಿದ್ವಿಲಾಸೀಯದಂತೆ ಆಚಾರ್ಯರು ಗೋವಿಂದಭಗವತ್ಪಾದರ ಬಳಿಯಿಂದಲೇ ಕೇರಳಕ್ಕೆ ಬಂದು ಮಾತೃಸಂಸ್ಕಾರವನ್ನು ಮಾಡಿದರೆಂದು ಹಿಂದೆ (ಪು.೧೦೦) ಬೇಳರುತ್ತೇವೆ. ಅಲ್ಲಿ ನಿರ್ಗುಣವಿದ್ಯೆಯ ಸುದ್ದಿಯಿಲ್ಲ; ಶಿವಭುಜಂಗಪ್ರಯಾತದಿಂದ ಶಿವನನ್ನು ಸ್ತುತಿಸಿದ್ದನ್ನು ಹೇಳಿದೆ. ವಿಷ್ಣುವನ್ನು ವಿಷ್ಣುಭುಜಂಗಪ್ರಯಾತದಿಂದ ಸ್ತುತಿಸಿದರೆಂದೂ ವಿಷ್ಣುದೂತರೊಡನೆ ಆರ್ಯಾಂಬಿಕೆಯು ವೈಕುಂಠಕ್ಕೆ ತೆರಳಿದಳೆಂದೂ (ಚಿ.ಶಂ. ೧೦–೪೩ರಿಂದ ೪೭) ಹೇಳಿದೆ.

ಈ ಮಾತೃಸೇವೆಯ ವಿಚಾರವನ್ನು ಕುರಿತು ವಿಮರ್ಶಿಸಬೇಕಾದ ವಿಷಯಗಳಿವು :

(೧) ಆಚಾರ್ಯರಿಗೆ ಮಾತೃವಿಯೋಗವಾದದ್ದು ಯಾವಾಗ? ಈ ವಿಷಯಕ್ಕೆ ಶಂಕರವಿಜಯಗಳಲ್ಲಿ ಏಕಕಂಠ್ಯವಿಲ್ಲವೆಂದು ಆಗಲೆ ಹೇಳಿಟ್ಟಿದ್ದೇವೆ. ಶಂಕರರ ಕೆಲಸವು ಪರಿಪಕ್ವವಾದ ಕಾಲಕ್ಕೆ ಆಕೆಯ ದೇಹತ್ಯಾಗವಾದರೆ ಕಥೆಗೆ ಚೆನ್ನಾಗಿ ಒಪ್ಪೀತೆಂದು ಮಾಧವಕವಿ ಕಲ್ಪಿಸಿರಬೇಕೆಂದು ಕಾಣುತ್ತದೆ.

(೨) ಶಂಕರಾಚಾರ್ಯರು ತಾಯಿಗೆ ನಿರ್ಗುಣತತ್ತ್ವವನ್ನು ಉಪದೇಶಿಸಿದರೆ? ಆಚಾರ್ಯರು ನಿರ್ಗುಣವಾದ ಅದ್ವಿತೀಯತತ್ತ್ವವೇ ಪರಮಾರ್ಥ

ಮೊಮ್ಮ ಜೋಳೆಯನ್ನೇ ಎತ್ತಿಹಿಡಿಯುವವರಾಗಿದ್ದರೆಂಬುದು ನಿಜ; ಆವರೆ ಆವರು ಎಲ್ಲರಿಗೂ ಆತ್ಮತತ್ತ್ವವನ್ನೇ ಜೋಳಿಸಬೇಕೆಂದು ಪಟ್ಟುಹಿಡಿದವರಲ್ಲ. ಏಕೆಂದರೆ ಗೀತಾಭಾಷ್ಯದಲ್ಲಿ ಹನ್ನೆರಡನೆಯ ಅಧ್ಯಾಯದ ವ್ಯಾಖ್ಯಾನದಲ್ಲಿ ಈ ವಾಕ್ಯವು ಕಾಣುತ್ತದೆ.

ಯಸ್ಮಾಚ್ಚಾರ್ಜುನಸ್ಯ ಅತ್ಯನ್ತಮೇವ ಹಿತೈಷೀ ಭಗವಾನ್, ತಸ್ಯ ಸಮ್ಯಗ್ದರ್ಶನಾ
ನಾಗಸ್ಪತಂ ಕರ್ಮಯೋಗಂ ಭೀಷದೃಷ್ಟಿನಿವೃತ್ತಯೇವ ಉಪದಿಶತಿ ॥
(ಗೀ. ಭಾ. ೧೨-೧೩ರ ಅವತರಣಿಕೆ)

'ಅರ್ಜುನನ ವಿಷಯದಲ್ಲಿ ಅತ್ಯಂತಹಿತೈಷಿಯಾಗಿದ್ದದ್ದರಿಂದ ಭಗವಂತನು ಅವನಿಗೆ ಸಮ್ಯಗ್ದರ್ಶನದ ಸಂಬಂಧವಿಲ್ಲದ ಭೀಷದೃಷ್ಟಿಯುಳ್ಳ ಕರ್ಮಯೋಗವನ್ನೇ ಹೇಳಿರುತ್ತಾನೆ. ಈ ವಾಕ್ಯವನ್ನು ನೋಡಿದರೆ ಯಾವ ತತ್ತ್ವೋಪದೇಶದ ಲಾಭವೂ ಇಲ್ಲದ ವೃದ್ಧಳಾದ ತಾಯಿಗೆ ಅವರು ನಿರ್ವಿಶೇಷತತ್ತ್ವವನ್ನು ಉಪದೇಶಿಸುವುದಕ್ಕೆ ಹೋದರೆಂಬುದು ಹೇಗೆ ಸಂಭಾವಿತವಾದೀತು?

(೩) ಶಿವಭುಜಂಗಪ್ರಯಾತದಿಂದ ಆಚಾರ್ಯರು ಶಿವನನ್ನು ಸ್ತೋತ್ರ ಮಾಡಿದರೆಂದು ಕರ್ಣಾಕರ್ಣಿಕೆಯಾಗಿ ಕೇಳಿದ್ದ ಸುದ್ದಿಯನ್ನೇ ಮಾಧವನೂ ವರ್ಣಿಸಿರಬೇಕೆಂಬುದು ನಿಶ್ಚಯ. ಏಕೆಂದರೆ ಆ ಸ್ತೋತ್ರದಲ್ಲಿ ಮೊಟ್ಟಮೊದಲನೆಯ ಪದ್ಯವೇ 'ನಿರ್ಗುಣಪದ'ವಾಗಿದೆ. ನಿರ್ಗುಣತತ್ತ್ವವು ಮನಸ್ಸಿಗೆ ಹಿಡಿಯುವಹಾಗಿಲ್ಲವೆಂದು ತಾಯಿ ಹೇಳಿರುವಾಗ ಆ ಶ್ಲೋಕದಿಂದ ಆಚಾರ್ಯರು ಮೊದಲುಮಾಡಿರಲಾರರು. ಈ ಸ್ತೋತ್ರವು ಆಚಾರ್ಯರದ್ದೇ ಎಂಬ ದೃಢಭಾವನೆಯುಳ್ಳವರಲ್ಲಿ ಕೆಲವರು ಪಲ್ಲವಸೇನಾನಿಯಾದ 'ಪರಂಜ್ಯೋತಿ' (ಶಿರುತ್ತೊಂಡರ್) ಎಂಬಾತನ ಪರಾಮರ್ಶವು 'ಸುತದ್ರೋಹಿಣಃ' ಎಂಬ ವಿಶೇಷಣದಲ್ಲಿದೆ ಎಂಬುದರಮೇಲೆ ಆಚಾರ್ಯರ ಕಾಲವು ಏಳನೆಯ ಶತಮಾನದಿಂದೀಚೆಗೆ ಇರಬೇಕೆಂದು ಕಲ್ಪಿಸುತ್ತಿದಾರೆ! ಆವರೆ ಇದು ಆಚಾರ್ಯರದ್ದೆಂದೂ ಅದರಲ್ಲಿ ಈ ಪರಾಮರ್ಶವಿದೆಯೆಂದೂ ಅವರಿಗೆ ಯಾವ ದಿವ್ಯದೃಷ್ಟಿಯಿಂದ ನಿರ್ಣಯವಾಯಿತೊ!

(೪) ಆಚಾರ್ಯರ ತಾಯಿತಂದೆಗಳು ಶಿವಭಕ್ತಿಯಿಂದಲೇ ಪುತ್ರವಂತರಾದರು ಎಂದು ವರ್ಣಿಸಿದ ಕವಿಯೇ ಇಲ್ಲಿ ಶಿವಲೋಕವು ಭಯಂಕರವೆಂಬ ಭಾವನೆಯು ಬರುವಂತೆ ಏತಕ್ಕೆ ವರ್ಣಿಸಿದನೆಂಬುದನ್ನು ಹೇಳುವದಕ್ಕಾಗುವದಿಲ್ಲ. ಶಿವದೂತರು 'ಶೂಲಪಿನಾಕಪಾಣಿ'ಗಳಾದರೂ ಭಕ್ತರಿಗೆ ಆಂಜಿಕೆಯನ್ನು ಮಾಡುವ ರೂಪದಿಂದ ಪ್ರಾಣಪ್ರಯಾಣಸಮಯದಲ್ಲಿ ಭಕ್ತರಿಗೆ ಕಾಣಿಸಿಕೊಂಡಾರೇನು?

(೫) ವಿಷ್ಣುವನ್ನು ಸ್ತೋತ್ರಮಾಡಿದ್ದರಿಂದ ವಿಷ್ಣುದೂತರು ಬರಲು ಅವರೊಡನೆ ತಾಯಿ ಸಂತೋಷಪೂರ್ವಕವಾಗಿ ವೈಕುಂಠಕ್ಕೆ ತೆರಳಿದಳು–ಎಂದಿರುವ ಕಥೆಗೆ ಯಾವುದೋ ಒಂದು ದಂತಕಥೆಯು ಆಧಾರವಿರಬೇಕೆಂದು ತೋರುತ್ತದೆ. ಹಾಗಿಲ್ಲದಿದ್ದರೆ ಮಾಧವ, ವ್ಯಾಸಾಚಲ, ಚಿದ್ವಿಲಾಸ–ಈ ಮೂವರೂ ಈ ಪ್ರಸಂಗದಲ್ಲಿವಿಷ್ಣುಸ್ತೋತ್ರವನ್ನು ತೆರಲಾರರು. ಅದರಲ್ಲಿಯೂ ಲಿಂಗಪೂಜೆಯನ್ನು ಶಂಕರರ ಕೊರಳಿಗೆ ಕಟ್ಟಿರುವ ಚಿದ್ವಿಲಾಸರು ಹಾಗೆಂದು ಹೇಳುವದಕ್ಕೆ ಏನಾದರೂ ಕಾರಣವಿರಲೇಬೇಕು. ಇದನ್ನು ವಿಮರ್ಶಕರು ನಿರ್ಣಯಿಸಬೇಕಾಗಿದೆ.

(೬) ವಿಷ್ಣುದೂತರೊಡನೆ ಹೋದ ತಾಯಿಯು ದೇವಯಾನದಿಂದ ಹೋದ ಕ್ರಮವನ್ನು ವರ್ಣಿಸಿದಾಗ ಮಾಧವಕವಿಯು

ಇಯಮುರ್ಚಿರಹರ್ನಳಕ್ಷಪಕ್ಷಾನ್
ಷಡುದಙ್ಮಾಸಮಹಾಬಲಾರ್ಕಜನ್ಯಾನ್ ।
ಜವಲಾವರುಣೇದ್ರಧಾತೃಲೋಕಾನ್
ಕ್ರಮಶೋಽತೀತ್ಯ ಪರಂ ಪದಂ ಪ್ರಪೇದೇ ॥೪೮॥

'ಅಗ್ನಿ, ಅಹಸ್ಸು, ಶುಕ್ಲಪಕ್ಷ, ಉತ್ತರಾಯಣ, ಸಂವತ್ಸರ, ವಾಯು, ಸೂರ್ಯ, ಚಂದ್ರ, ಬ್ರಹ್ಮ– ಈ ಲೋಕಗಳನ್ನು ಕ್ರಮದಿಂದ ದಾಟಿ ಪರಮಪದವನ್ನು ಪಡೆದಳು' ಎಂದು ಬರೆದಿರುತ್ತಾನೆ. ಇಲ್ಲಿರುವ ದೇವಯಾನಕ್ರಮವು ಸೂತ್ರ ಭಾಷ್ಯದಲ್ಲಿ ನಾಲ್ಕನೆಯ ಅಧ್ಯಾಯದ ಮೂರನೆಯ ಪಾದದಲ್ಲಿ ಚಿಂತಿತವಾಗಿದೆ. ಭಾಷ್ಯಕಾರರು ಅಲ್ಲಿ ಸೂತ್ರದಲ್ಲಿ "ವಾಯುಮಬ್ದಾತ್" (ವೇ.ಸೂ. ೪–೩–೨) ಎಂದಿದ್ದರೂ ಬೃಹದಾರಣ್ಯಕದಲ್ಲಿ 'ಮಾನವೇಭ್ಯೋ ದೇವಲೋಕಂ ದೇವಲೋಕಾದಾದಿತ್ಯಮ್' (ಬೃ. ೬–೨–೧೫) ಎಂದು ಬರೆದಿರುವದರಿಂದ ದೇವಲೋಕವಾದಮೇಲೆ ವಾಯುವನ್ನು ಸೇರುತ್ತಾನೆ ಎಂದು ನಿರ್ಣಯಿಸಿರುತ್ತಾರೆ. ಆದ್ದರಿಂದ 'ದೇವಲೋಕ'ವೆಂಬುದು ಇಲ್ಲಿ ಬಿಟ್ಟುಹೋಗಿದೆಯೆಂಬುದೊಂದು ವಿಶೇಷ. ಅದಕ್ಕಿಂತಲೂ ಧಾತೃಲೋಕ (ಬ್ರಹ್ಮಲೋಕ)ವನ್ನು ದಾಟಿ ಪರಮಪದವನ್ನು ಪಡೆದಳು ಎಂದು ಬರೆದಿರುವದರಿಂದ ಆರ್ಯಾಂಬೆಯು ಪರಬ್ರಹ್ಮಸಾಯುಜ್ಯವನ್ನೇ ಪಡೆದಳು ಎಂದಿರುವದು ಸ್ವವಚನವಿರುದ್ಧವಾಗಿದೆ. ಏಕೆಂದರೆ ಸಾಕಾರ ವಿಷ್ಣುವನ್ನು ಭಜಿಸುವವರಿಗೆ ಜ್ಞಾನವಾಗದೆ ಪರಬ್ರಹ್ಮಪ್ರಾಪ್ತಿಯಾಗದೆಂಬುದು ಆಚಾರ್ಯರ ಸಿದ್ಧಾಂತ (ಸೂ. ಭಾ. ೪–೪–೨೨). ಹೀಗಿರುವಲ್ಲಿ ನಿರ್ಗುಣ ವಿದ್ಯೆಯು ತನ್ನ ಮನಸ್ಸಿಗೆ ಹಿಡಿಯಲಿಲ್ಲವೆಂದು ಹೇಳುವ ಆರ್ಯಾಂಬೆಗೆ ಸಗುಣ ವಿದ್ಯಾಮಾತ್ರದಿಂದ ಪರಬ್ರಹ್ಮಪ್ರಾಪ್ತಿಯಾಯಿತೆಂದು ಬರೆದಿರುವದು ಹೇಗೂ ಸಂಗತವಾಗಲಾರದು. ಆರ್ಯಾಂಬೆಗೆ ಜ್ಞಾನಕ್ಕೆ ಅಧಿಕಾರವಿತ್ತು, ಅಥವಾ ಇರಲಿಲ್ಲ; ಇರದಿದ್ದರೆ ಆಕೆ ಬ್ರಹ್ಮಲೋಕವನ್ನು ಮೀರಿದ ಪರಬ್ರಹ್ಮವನ್ನೇ

ಪಡೆವಳೆಂದು ಹೇಳುವದು ಸಂಗತವಲ್ಲ ಸಗುಣಬ್ರಹ್ಮನನ್ನೇ ಉಪಾಸನೆಮಾಡಿ ಬ್ರಹ್ಮಲೋಕವನ್ನು ವಿಮಾನ ಪುರುಷನನ್ನು ಪಡೆದುಕೊಂಡಳೆಂದು ಹೇಳುವದು ಹೇಗೆತಾನೆ ಸರಿಯಾಹೀತು ?

೧೩೫ ಆಚಾರ್ಯರು ತಾಯಿಯ ಅಂತ್ಯಕರ್ಮವನ್ನು ತಾನೇ ಮಾಡಬೇಕೆಂದು ಹೊರಟಾಗ ಆವಾಗೆ ನಿಮಗೆ ಈ ಕರ್ಮದಲ್ಲಿ ಅಧಿಕಾರವಿಲ್ಲೆಯದು ?—ಎಂದು ಬಂಧುಗಳು ಅವರನ್ನು ನಿಂದಿಸಿದರು (೧೪–೪೬) ಬೆಂಕಿಯನ್ನು ಕೇಳಿದರೂ ಅವರು ಕೊಡಲಿಲ್ಲ ; ಆಗ ಅವರಿಗೆ ಕೋಪವು ಬಂದು ಅವರನ್ನೆಲ್ಲ ಶಪಿಸಿದರು (೪೭). ಒಣಗಿದ ಕಟ್ಟಿಗೆಗಳನ್ನು ಕೂಡಿಹಾಕಿ ಮನೆಯ ಅಂಗಳದಲ್ಲಿ ಅಕೆಯ (?) ಬಲದೋಳನ್ನು ಕಡದು ತೆಗೆದ ಬೆಂಕಿಯಿಂದಲೇ ಅಕೆಯನ್ನು ಸುಟ್ಟರು (೪೮). ಇನ್ನುಮೇಲೆ ನೀವು ವೇದಬಹಿಷ್ಕೃತರಾಗಿರಿ, ನಿಮ್ಮಲ್ಲಿ ಸಂನ್ಯಾಸಿದಳಿಗೆ ಭಿಕ್ಷೆಯಾಗುವದು ಬೇಡ. ಇಲ್ಲಿಂದ ಮುಂದಕ್ಕೆ ಮನೆಯ ಅಂಗಳದ ಮೂಲೆಯಲ್ಲಿಯೇ ನಿಮಗೆ ಶ್ಮಶಾನವಾಗಲಿ !—ಎಂದು ಶಪಿಸಿದರು. ಅಂದಿನಿಂದ ಹಾಗೆಯೇ ನಡೆಯುತ್ತಿದೆ. ದೊಡ್ಡವರ ವಿಷಯದಲ್ಲಿ ತಿಳಿಯದೆ ತಿಳಿದೂ ಮಾಡಿದ ಅಪರಾಧವು ಎಂದಿಗಾದರೂ ಒಳ್ಳೆಯದನ್ನು ಮಾಡೀತೆ ? (ಳಿಂದ ಜಗ) ಎಂದು ಮಾಧವನು ಬರೆದಿರುತ್ತಾನೆ.

ಬೆಂಕಿಯನ್ನು ಕೊಡದೆ ಇದ್ದ ಅಪರಾಧಕ್ಕಾಗಿಯೇ ಹೀಗೆ ಆಚಾರ್ಯರು ಬಂಧುಗಳನ್ನು ಶಪಿಸಿದರೆಂದು ಹೇಳಿದೆ ; ಅವರು ಕರ್ಮಕ್ಕೆ ಅಡ್ಡಿಮಾಡಿದರೆಂದು ಅಲ್ಲಿ ಕಂಠೋಕ್ತವಾಗಿ ಹೇಳಿಲ್ಲ.

ಚಿದ್ವಿಲಾಸವಲ್ಲಿಯೋ ಎಂದರೆ ತಾಯಿಯು ಸಾಯುವ ಅವಸ್ಥೆಯಲ್ಲಿದ್ದಾಗ ಬ್ರಾಹ್ಮಣರನ್ನು ಕರೆದರು. ಅವರು ಬರಲಿಲ್ಲವಾದ್ದರಿಂದ ಯತಿದೂಷಕರಾದ ಅವರನ್ನು ಇನ್ನುಮೇಲೆ ನೀವು ಜ್ಞಾನವರ್ಜಿತರಾಗಿರಿ! ಅನಾಚಾರದಲ್ಲಿಯೇ ನಿರತರಾಗಿರಿ ! ಕೃಷಿ, ವ್ಯಾಪಾರ–ಇವುಗಳನ್ನೇ ಮಾಡುತ್ತಿರಿ ! ನಿಮ್ಮ ದೇಶವು ಯತಿಗಳಿಗೆ ವಾಸಯೋಗ್ಯವಾಗುವದು ಬೇಡ ! ಯಾರಾದರೂ ಯತಿಗಳು ಇಲ್ಲಿಗೆ ಬಂದರೆ ಪತಿತರಾಗಲಿ ! (ಚಿ.ಶಂ. ೧೦–೬೦ರಿಂದ ೪೨) ಎಂದಿದೆ ; ಚೂರ್ಣೀ ನದಿಯನ್ನು ತಾಯಿಯ ಮನೆಯ ಬಳಿ ಹರಿಯುವಂತೆ ತಿರುಗಿಸಿದ್ದು, ಈ ಮಾತೃಸೇವೆಯನ್ನು ಮಾಡಿದ್ದು–ಎಲ್ಲವೂ ಆಚಾರ್ಯರು ಗೋವಿಂದಭಗವತ್ಪಾದರ ಬಳಿಯಲ್ಲಿರುವಾಗಲೇ (ಇತ್ಯಾದಿ ಕಥೆಯತ್ಯೇವ ಗೋವಿನ್ದಭಗವದ್ಪೂಜ್ಯಾ ೧೦–೩೫) ಎಂಬುದು ಚಿದ್ವಿಲಾಸರ ಮತ.

ಆಚಾರ್ಯರು ಕೊಟ್ಟ ಶಾಪವು ಫಲಕಾರಿಯಾದದ್ದಕ್ಕೆ ಒಂದು ನಿಮಿತ್ತವನ್ನು ಮಾಧವನು ಕಲ್ಪಿಸಿರುತ್ತಾನೆ ; ಕೇರಳರಾಜನಾದ ರಾಜಶೇಖರನು ತನ್ನ ನಾಟಕತ್ರಯವನ್ನು ಉಜ್ಜೀವನಮಾಡಿಕೊಟು ಆಚಾರ್ಯರಿಗೆ ನಮಸ್ಕಾರವನ್ನು

ಮಾಡಿ 'ನಾನು ಮಾಡತಕ್ಕವ್ವೀನಾವರೂ ಇವ್ವರೆ ಆರ್ಟಣೆಮಾಡಬೇಕು!' ಎಂದು ಬೇಡಿಕೊಳ್ಳಲು ಆವರು 'ನಾನು ತಾಲಡಿಯ ನಿವಾಸಿಗಳಿಗೆ ಈರೀತಿ ಶಾಪವನ್ನು ಕೊಟ್ಟಿರುತ್ತೀನೆ ; ಇವಕ್ಕನುಸಾರವಾಗಿ ನೀನೂ ಮಾಡು ಎಂದು ಹೇಳಿದರಂತೆ (ಮಾ. ಶಂ. ೧೪–೧೭೩, ೧೭೪).

ಈಗ ಈ ಅಂತ್ಯಕರ್ಮದ ಕಥೆಯನ್ನು ಸ್ವಲ್ಪ ವಿಮರ್ಶಿಸಬಹುದಾಗಿದೆ :

(೧) ಶಾಪದ ಕಥೆ ನಿಜವಿರಬಹುದೆ ? ಕಾಲಟಿಯ ಅಗ್ರಹಾರದವರು ಆಚಾರ್ಯರನ್ನು ಅಂತ್ಯಕ್ರಿಯೆಗಳನ್ನು ಮಾಡದಂತೆ ಅಡ್ಡಿಮಾಡಿದರೆಂಬುದು ಅವಿಶ್ವಾಸನೀಯವಲ್ಲ. ಸಂನ್ಯಾಸಿಗಳಿಗೆ ಯಾವ ಕರ್ಮದಲ್ಲಿಯೂ ಅಧಿಕಾರವಿಲ್ಲ ವೆಂದು ಶಾಸ್ತ್ರದಲ್ಲಿ ಹೇಳಿರುವದರಿಂದ ಶಾಸ್ತ್ರಶ್ರದ್ಧಾಳುಗಳಾದ ಬ್ರಾಹ್ಮಣರು ಹಾಗೆ ಅಡ್ಡಿಯನ್ನು ಮಾಡಿರಬಹುದು ; ಆಚಾರ್ಯರು ತಾಯಿಗೆ ಕೊಟ್ಟ ವಾಗ್ದಾನದಂತೆ ಆ ಕರ್ಮವನ್ನು ಮಾಡಿರಲೂಬಹುದು. ಆಚಾರ್ಯರೇ ತನ್ನ ಅಂತ್ಯಕರ್ಮವನ್ನು ಮಾಡಬೇಕೆಂದು ತಾಯಿ ಹತವನ್ನು ತೊಟ್ಟು ಹೇಳಿದ್ದಳೆ?– ಎಂಬುದು ನಿಶ್ಚಿತವಾಗಿಯೂ ತಿಳಯದು. ಶಂಕರವಿಜಯಕಾರರು ಹಾಗೆಂದು ಹೇಳಿರುವದು ಮುಂದೆ ಬರಲಿರುವ ಶಾಪದ ಕಥೆಗೆ ಅನುಗುಣವಾಗಿರಲೆಂದು ಮಾಡಿದ ಕಲ್ಪನೆಯಾಗಿದ್ದರೂ ಇರಬಹುದು. ಇರುವ ಒಬ್ಬನೇ ಮಗನು ಸಂನ್ಯಾಸಿಯಾದರೆ ನನ್ನ ಪೋಷಣೆಗೆ ಗತಿ ಯಾರು ? ಅಂತ್ಯಕ್ರಿಯೆಯನ್ನು ಮಾಡುವವರು ಯಾರು ?– ಎಂದು ಆಕೆ ಪರಿತಾಪವನ್ನು ಸೂಚಿಸಿರಬಹುದು. ಪಿತ್ರಾರ್ಜಿತಧನವನ್ನು ಬಂಧುಗಳಿಗೆ ಕೊಟ್ಟು ಆವರಿಗೆ ನಿನ್ನ ಪೋಷಣೆಯ ಭಾರವನ್ನು ಒಪ್ಪಿಸುತ್ತೀನೆ ; ನೀನು ಸಾಯುವ ಹೊತ್ತಿಗೆ ಹೇಗಾದರೂ ನಾನು ಬಂದು ನಿನ್ನ ಅಂತ್ಯಕ್ರಿಯೆಯನ್ನು ಸಾಂಗವಾಗಿ ನೆರವೇರಿಸುವೆನು– ಎಂದು ಆಚಾರ್ಯರು ವಾಗ್ದಾನಮಾಡಿದ್ದರೆ ಅದೇನೂ ಅಸ್ವಾಭಾವಿಕವಲ್ಲ. ಆದರೆ ಅವರು ಬಹುಕಾಲದಮೇಲೆ ಸಂನ್ಯಾಸಿಗಳಾಗಿ ಬಂದಾಗ ಆವರಿಗೆ ಬಂಧುಗಳ ಸಹಾಯವು ದೊರಕದಿಹಗಲೂಬಹುದು. ಆ ಕಥೆಯನ್ನೇ ಬೆಳೆಯಿಸಿ ಶಾಪದ ಕಥೆಯು ಹುಟ್ಟಿಕೊಂಡಿರಬಹುದೆಂದು ಕಾಣುತ್ತದೆ.

(೨) ಆಚಾರ್ಯರು ತಾವೇ ಅಂತ್ಯಕರ್ಮವನ್ನು ಮಾಡಿದರೆ ? ಇದನ್ನು ನಿಶ್ಚಯಿಸಿ ಹೇಳುವದು ಕಷ್ಟ. ಬಲತೋಳನ್ನು ಕಡೆದು ಅಗ್ನಿಯನ್ನು ತೆಗೆದುಕೊಂಡರೆಂದು ಬರೆದಿರುವದು ಆಚಾರ್ಯರ ಮಹಿಮೆಯನ್ನು ಹೊಗಳುವದಕ್ಕೆಂದು ಕಲ್ಪಿಸಿದ್ದಾಗಿರಬಹುದು. ಶವದ ಬಲದೋಳನ್ನು ಕಡೆದರೆ ಅಗ್ನಿಯು ಹುಟ್ಟುವದೆ?– ಇದನ್ನು ವ್ಯಾಖ್ಯಾನಕಾರರು ವಿಚಾರಮಾಡಿಲ್ಲ. ಕಲಿವರ್ಜ್ಯಗಳಲ್ಲಿ ಸೇರಿದ್ದ ಸಂನ್ಯಾಸವನ್ನು ಸ್ವೀಕರಿಸಿ ಉದ್ಧಾರಮಾಡಿದಂತೆಯೇ ಧರ್ಮಶಾಸ್ತ್ರಗಳನ್ನು ಧಿಕ್ಕರಿಸಿ ತಾಯಿಯ ಕ್ರಿಯೆಗಳನ್ನು ಮಾಡಿದರು. ಸಮಸ್ತಧರ್ಮಶಾಸ್ತ್ರಗಳೂ

ಸಮಸ್ತದೇಶಕಾಲಗಳಲ್ಲಿಯೂ ಪ್ರಮಾಣವೆಂದು ಅಂಗೀಕರಿಸುವದು ಅನುಚಿತ ಎಂಬ ಅಭಿಪ್ರಾಯವನ್ನು **ಸೋಮನಾಥಯ್ಯನವರು** (ಸೋ. ಶಂ ಪ್ರ. ೧೬೩) ಹೊರಗೆಡಹಿದ್ದಾರೆ. ಆಚಾರ್ಯರು ಕಲಿವರ್ಜ್ಯವಿಚಾರವನ್ನು ಭಾಷ್ಯಗಳಲ್ಲಿ ಎಲ್ಲಿಯೂ ಪ್ರಸ್ತಾಪಿಸಿಲ್ಲವೆಂದು ಆಗಲೆ (ಪ್ರ. ೧೬೬) ನೋಡಿದೆವೆ. ಧರ್ಮಶಾಸ್ತ್ರಗಳಿಗೆ ದೇಶಕಾಲಗಳ ಅಪೇಕ್ಷೆಯಿಂದ ಸಂಕೋಚವನ್ನು ಒಪ್ಪದರೂ ಸಂನ್ಯಾಸಿಯು ಕರ್ಮವನ್ನೂ ಮಾಡಬಹುದೆ ?–ಎಂಬುವಕ್ಕೆ ಅದು ಸಾಧಕವೂ ಅಲ್ಲ, ಬಾಧಕವೂ ಅಲ್ಲ. ವೇದಾಧ್ಯಯನವಿರುವವರೆಗೂ ಸಂನ್ಯಾಸಾದಿಗಳನ್ನು ಆಚರಿಸಬಹುದೆಂಬ ಧರ್ಮಶಾಸ್ತ್ರವಚನಗಳೂ ಇರುವದರಿಂದ ಸಂನ್ಯಾಸದ ವಿಷಯಕ್ಕೆ ಹೇಳುವು ದಾದ ಯುಕ್ತಿಗಳು ಸಂನ್ಯಾಸಿಗಳು ಕರ್ಮವನ್ನು ಮಾಡಬಹುದೆಂಬುದಕ್ಕೆ ಸಾಧಕವಾಗಲಾರವು. ಹೀಗಿರುವದರಿಂದ ಈ ವಿಷಯವು ಇನ್ನಷ್ಟು ವಿಶೀಲನೆಯನ್ನು ಅಪೇಕ್ಷಿಸುತ್ತದೆ ಎಂದು ಹೇಳಬೇಕಾಗಿದೆ.

(೩) **ಆಚಾರ್ಯರು ಶಾಪವನ್ನು ಕೊಟ್ಟರೆ ? ಅದಕ್ಕೆ ರಾಜನ ಸಹಾಯವನ್ನು ಪಡೆದರೆ ?** ಕೇರಳದಲ್ಲಿ ಕಾಣಬರುವ ಕೆಲವು ಆಚಾರಗಳು ಇತರ ದೇಶಗಳ ಆಚಾರಗಳಿಗಿಂತ ವಿಲಕ್ಷಣವಾಗಿರುವದನ್ನು ಕಂಡು ಅದಕ್ಕೆ ಶಂಕರಶಾಪವನ್ನು ಯಾರೋ ಗಂಟುಹಾಕಿರಬಹುದೆಂದು ತೋರುತ್ತದೆ. ಶವಗಳನ್ನು ಅಂಗಳದಲ್ಲಿ ಸುಡುವ ಪದ್ಧತಿಯು ವಿಸ್ತಾರವಾದ ಬಯಲಿನಲ್ಲಿಯೇ ವಾಸ ಮಾಡುತ್ತಿರುವ ಜನರಿಂದ ಆ ದೇಶದಲ್ಲಿ ಬಹುಕಾಲದಿಂದ ಆಚರಣೆಯಲ್ಲಿರಬಹುದಾಗಿದೆ. ಕಾಲಮಹಿಮೆಯಿಂದ ಆಧ್ಯಯನಾದಿಗಳು ತಪ್ಪಿಹೋಗುವದು ಕೇರಳಕ್ಕೇನೂ ವಿಶಿಷ್ಟವಲ್ಲ. ನಮ್ಮ ರಾಜರುಗಳು ಕೆಲವು ಧಾರ್ಮಿಕಸಾಮೂಹಿಕ ಆಚಾರಗಳ ವಿಷಯದಲ್ಲಿ ಕೈಹಾಕಿ ಶಾಸನಗಳಮೂಲಕ ಆಗಿಂದಾಗ್ಗೆ ಶಾಸನವನ್ನು ಮಾಡಿದ್ದುಂಟಾದರೂ ರಾಜಶೇಖರನೆಂಬ ರಾಜನು ಇದ್ದಿದ್ದರೆ– ಅವನು ಇದ್ದದ್ದೇ ವಿವಾದಗ್ರಸ್ತವೆಂದು ಆಗಲೆ ಹೇಳಿರುತ್ತೇವೆ– ಅವನು ಆಚಾರ್ಯರ ಆಪ್ಪಣೆಯನ್ನು ಪಾಲಿಸುವಷ್ಟುಮಟ್ಟಿಗೆ ಅವರ ಕೀರ್ತಿಯು ಆ ದೇಶದಲ್ಲಿಯೂ ಹಬ್ಬಿತ್ತು ಎಂದು ಪ್ರಮಾಣಾಂತರಗಳಿಂದ ಸಿದ್ಧವಾಗುವವರೆಗೆ ಶಾಪಾನುಸಾರವಾಗಿ ರಾಜನು ಶಾಸನವನ್ನು ಮಾಡಿದನೆಂದಾಗಲಿ ಶಾಂತಮೂರ್ತಿಗಳಾದ ಆಚಾರ್ಯರು ತಾವೂ ಶಾಸ್ತ್ರವನ್ನು ಧಿಕ್ಕರಿಸಿ ಅದನ್ನು ಆಕ್ಷೇಪಿಸಿದ ಬ್ರಾಹ್ಮಣರಿಗೆ ಶಾಪವನ್ನೂ ಕೊಟ್ಟರೆಂದಾಗಲಿ ನಂಬುವದು ಕಷ್ಟವಾಗಿರುತ್ತದೆ. **ಮಾಧವ**ಕವಿಯು ಆಚಾರ್ಯರು ಇಂಥ ಅಶಾಸ್ತ್ರೀಯಾಚರಣೆಯನ್ನು ಏಕೆ ಮಾಡಿದರೆಂದು ಶಂಕಿಸಿಯಾರೆಂದು–

ಯಮ್ಯಶ್ಯಶಾಸ್ತ್ರೀಯಮತಯಪಾ ವಿಭಾತಿ ತೇಜಸ್ವಿನಾಂ ಕರ್ಮ ತಥಾಪ್ಯನಿನ್ದ್ಯಮ್ ।
ವಿನಿನ್ದ್ಯಕೃತ್ಯಂ ಕಿಲ ಭಾರ್ಗವಸ್ಯ ದದೂ ಸ್ಮ ಪುತ್ರಾನ್ ಕಿತಿಚಿದ್ ವ್ಯಕಾಯ ॥

(ಮಾ. ಶಂ. ೧೪–೫೩)

'ತೇಜಸ್ವಿಗಳಾದವರ ಕರ್ಮವು ಅಶಾಸ್ತ್ರೀಯವೆಂದು ತೋರಿದರೂ ಅದು ನಿಂದ್ಯವಲ್ಲ. ಪರಶುರಾಮನು ತಾಯಿಯನ್ನು ಕೊಂದನಲ್ಲವೆ ? ಕೆಲವರು ಮುನಿಗಳು ತಮ್ಮ ಮಕ್ಕಳನ್ನೇ ತೋಳಕ್ಕೆಕೊಟ್ಟರಂತಲ್ಲ !' ಎಂದು ಆಚಾರ್ಯರ ಕೃತ್ಯವನ್ನು ಮಂಡನಮಾಡಿರುತ್ತಾನೆ. ಅಂತೂ ಈ ಅಂತ್ಯಕರ್ಮ ಮತ್ತು ಆಚಾರ್ಯರು ಕೊಟ್ಟ ಶಾಪ– ಇವೆರಡೂ ಇನ್ನೂ ಪರಿಶೀಲನೀಯವೇ ಆಗಿ ಉಳಿದಿವೆ ಎನ್ನುವದು ಯುಕ್ತ.

ಒಟ್ಟಿನಲ್ಲಿ ಆಚಾರ್ಯರು ತಾಯಿಯ ಅಂತ್ಯಕಾಲಕ್ಕೆ ಸರಿಯಾಗಿ ದೂರದೇಶದಿಂದ ಬಂದೊದಗಿದರು ಎಂಬುದಕ್ಕೆ ಎಲ್ಲರ ಸಂಮತಿಯಿದೆ. ಅವರ ನಿರುಪಮ ಮಾತೃಭಕ್ತಿಗೆ ಇದೊಂದು ನಿದರ್ಶನವೆಂಬುದರಲ್ಲಿ ಸಂಶಯವಿಲ್ಲ.

೧೫. ಆಚಾರ್ಯರ ದಿಗ್ವಿಜಯ

ಶೃಂಗೇರಿಯಿಂದ ಕಾಂಚಿಗೆ

೧೩೬. ಈಗ ಆಚಾರ್ಯರು ತಮ್ಮ ಮತವನ್ನು ಭರತಖಂಡದಲ್ಲೆಲ್ಲ ಹರಡುವ ಸಂಕಲ್ಪವುಳ್ಳವರಾದರು (ಮಾ. ಶಂ. ೧೪–೧೫). ಸಾವಿರ ಶಿಷ್ಯರೊಡನೆಯೂ ಸುಧನ್ವರಾಜನೊಡನೆಯೂ ಮೊದಲು ರಾಮಸೇತುವಿಗೆ (ರಾಮೇಶ್ವರಕ್ಕೆ) ಹೋದರು. ಅಲ್ಲಿ ಶಾಕ್ತರೊಡನೆ ವಿವಾದವಾಯಿತು. ಅಲ್ಲಿಯ ಜನರನ್ನು ಕರ್ಮಮಾರ್ಗಕ್ಕೆ ತಿರುಗಿಸಿ, ರಾಮನಾಥನನ್ನು ಆರ್ಚಿಸಿದ ಬಳಿಕ ಪಾಂಡ್ಯರನ್ನೂ, ಚೋಳರನ್ನೂ ದ್ರವಿಡರನ್ನೂ ವಶಗೊಳಿಸಿಕೊಂಡು ಹಸ್ತಿಗಿರಿಯ ಒಡ್ಡ್ಯಾಣದಂತಿದ್ದ ಕಾಂಚಿಗೆ ಹೋದರು (ಮಾ. ಶಂ. ೧೫–೧೭ರಿಂದ ೪). ಅಲ್ಲಿ 'ಪರ ವಿದ್ಯಾಚರಣಾನುಸಾರಿಯಾದ' (?) ಚಿತ್ರವುಳ್ಳ ದೇವಾಲಯವನ್ನು ನೂಡಿಸಿ ತಾಂತ್ರಿಕರನ್ನು ಹೊರಡಿಸಿ ಭಗವತೀ ಕಾಮಾಕ್ಷಿಗೆ ಶ್ರುತಿಸಮ್ಮತವಾದ ಪೂಜೆಯನ್ನು ಏರ್ಪಡಿಸಿದರು (ಮಾ. ಶಂ. ೧೫–೫).

ಚಿದ್ವಿಲಾಸೀಯದಂತೆ : ಶಂಕರಾಚಾರ್ಯರು ವರಾಹಪರ್ವತದಲ್ಲಿದ್ದ ತೀರ್ಥಗಳನ್ನು ನೋಡಿ, ತುಂಗಭದ್ರೆಯ ಮೂಲವನ್ನು ದರ್ಶನಮಾಡಿಕೊಂಡು ನರಸಿಂಹಪರ್ವತದಲ್ಲಿ ನಾರಸಿಂಹನನ್ನು ಸಾಕ್ಷಾತ್ಕರಿಸಿಕೊಂಡು ಆ ಪರ್ವತದ ಕೆಳಗೆ ಋಷ್ಯಶೃಂಗಮಹೇಶ್ವರನನ್ನು ದರ್ಶನಮಾಡಿಕೊಂಡು ಆತನ ಆಜ್ಞೆಯನ್ನು ಪಡೆದುಕೊಂಡು ವರದರಾಜನ ರಾಜಧಾನಿಯೊಂದ ಕಾಂಚಿಗೆ ಬಂದರು. ಬ್ರಹ್ಮನು ವಿಷ್ಣುವನ್ನು ಕುರಿತು ಯಾಗಮಾಡಲು ವಿಷ್ಣುವು ಯಜ್ಞಕುಂಡದಿಂದ ಹೊರಕ್ಕೆ ಬಂದು ದರ್ಶನವನ್ನು ಕೊಟ್ಟ ಸ್ಥಲವದು. ಒಂದು ಗುಹೆಯಲ್ಲಿ ಸಗುಣನಿರ್ಗುಣರೂಪಳಾದ ರುದ್ರಶಕ್ತಿ ಇರುತ್ತಾಳೆ. ಅಲ್ಲಿ ಒಂದು ಪಟ್ಟಣವನ್ನು ನಿರ್ಮಾಣಮಾಡಿಸಬೇಕೆಂದು ಆಚಾರ್ಯರು ಬಯಸಿದರು. ಅಲ್ಲಿಯ ರಾಜಸೇನನೆಂಬ ರಾಜನು ಆಚಾರ್ಯರ ಇಚ್ಛೆಯಂತೆ ಏಕಾಮ್ರೇಶ್ವರ ದೇವಾಲಯವನ್ನು ಕಾಮಾಕ್ಷಿಯ ಪಾರ್ಶ್ವದಲ್ಲಿಯೇ ನಿರ್ಮಿಸಿ ಶಿವಕಾಂಚಿಯನ್ನೂ ವರದರಾಜನ ದೇವಾಲಯದ ಸಮೇತವಾದ ವಿಷ್ಣುಕಾಂಚಿಯನ್ನೂ ಎಂಟೇದಿನಗಳಲ್ಲಿ ನಿರ್ಮಾಣಮಾಡಿಸಿದನು (೨೫–೧೯ರಿಂದ ೧೧ ; ೨೮ರಿಂದ ೩೧)' ಆಚಾರ್ಯರು ಶ್ರೀಚಕ್ರವನ್ನು ತಾವೇ ಬರೆದರು, ಚಕ್ರದ ಹಿಂದೆ ಕಾಮಾಕ್ಷಿಯನ್ನು ಪ್ರತಿಷ್ಠೆಮಾಡಿಸಿ ಏಕಾಮ್ರೇಶ್ವರ, ವರದರಾಜ– ಇವರ ಪೂಜೆಗೆ ಏರ್ಪಾಡುಮಾಡಿಸಿದರು (ಚಿ. ಶಂ. ೨೫–೪೪ರಿಂದ ೫೫).

ಆನಂದಗಿರೀಯದಂತೆ : ಅಹೋಬಿಲವೆಂಬ ನರಸಿಂಹನ ಆವಿರ್ಭಾವ ಸ್ಥಲಕ್ಕೆ ಹೋಗಿ ಅಲ್ಲಿ ನೃಸಿಂಹನನ್ನು ಸ್ತೋತ್ರಮಾಡಿ, ಅಲ್ಲಿಂದ ವೇಂಕಟಗಿರಿಗೆ ಹೋಗಿ ಅಲ್ಲಿದ್ದ ಆರ್ಚಕರನ್ನು ಆದ್ವೈತಪರರನ್ನಾಗಿ ಮಾಡಿ ಅಲ್ಲಿಂದ ಕಾಂಚಿಗೆ ಹೋದರು. ಆಲ್ಲಿ ಪೃಥಿವೀಮೂರ್ತಿಯಿಂದ ಆವಿರ್ಭೂತವಾದ ಲಿಂಗದ ರೂಪದಿಂದ ಏಕಾಮ್ರೇಶನು ಇರುತ್ತಾನೆ. ಅಲ್ಲಿ ಒಂದು ತಿಂಗಳವರೆಗೆ ಇದ್ದು ಶಂಕು ಪ್ರತಿಷ್ಠಾಪೂರ್ವಕವಾಗಿ **ಶಿವಕಂಚಿ** ಎಂಬ ಪಟ್ಟಣವನ್ನು ನಿರ್ಮಿಸಿ ಅದರ ಮೂಡಲಲ್ಲಿ ಬ್ರಹ್ಮನು ಮಾಡಿದ ಯಜ್ಞದಲ್ಲಿ ಯಜ್ಞಕುಂಡದಿಂದ ಎದ್ದ ವರದರಾಜನ ಬಳಿಯಲ್ಲಿ ವಿಷ್ಣುಕಂಚಿಯನ್ನು ಕಟ್ಟಿಸಿದರು. ಆ ದೇವರುಗಳ ಸೇವಾರ್ಥವಾಗಿ ಭಕ್ತರಾದ ಬ್ರಾಹ್ಮಣಾದಿಗಳನ್ನು ನಿಯಮಿಸಿ ಅವರನ್ನು ಶುದ್ಧಾದ್ವೈತಾನುವರ್ತಿಗಳನ್ನಾಗಿ ಮಾಡಿ ಸರ್ವವೇದಾಂತತಾತ್ಪರ್ಯನಿಷ್ಠರಾಗಿ ಸುಖವಾಗಿದ್ದರು. (ತ. ಶಂ. ೬೩, ಪು. ೨೨೫ ; ದೇ. ಪು. ೧೯೨) ಕಾಮಾಕ್ಷಿವಿಚಾರವು ಇಲ್ಲಿ ೬೪ನೆಯ ಪ್ರಕರಣದಲ್ಲಿಯೂ ಶ್ರೀಚಕ್ರವಿಚಾರವು ೬೫ನೆಯ ಪ್ರಕರಣದಲ್ಲಿಯೂ ಇದೆ.

ಕಾಂಚಿಯವರೆಗಿನ ಯಾತ್ರೆಯ ವಿಮರ್ಶೆ

೧೩೭. ಇಲ್ಲಿಯವರೆಗಿನ ಯಾತ್ರೆಯ ವಿವರವು ಶಂಕರವಿಜಯಗಳಲ್ಲಿ ಒಂದೇ ರೀತಿಯಲ್ಲಿ ವರ್ಣಿತವಾಗಿಲ್ಲ. (೧) ಆಚಾರ್ಯರು **ಸುಧನ್ವರಾಜ**ನೊಡನೆಯೂ ಸಾವಿರ ಶಿಷ್ಯರೊಡನೆಯೂ (ಮಾ. ಶಂ. ೧೫-೧) ದಿಗ್ವಿಜಯಕ್ಕೆ ಹೊರಟರು –ಎಂದು ಮಾಧವನು ಹೇಳಿರುವದು ಮತ್ತೆ ಯಾವ ಶಂಕರವಿಜಯದಲ್ಲಿಯೂ ಇಲ್ಲ. (೨) ರಾಮಸೇತುವಿನಲ್ಲಿ **ಶಾಕ್ತೇಯರೊಡನೆ ವಾದ**ಮಾಡಿದರೆಂಬುದೂ ನಿಶ್ಚಿತವಲ್ಲ. (೩) ಕಾಂಚಿಯಲ್ಲಿರುವದು **ಏಕಾಮ್ರ**ನೋ ಏಕಾಂಬರನೋ ನಿಶ್ಚಯವಾಗಿ ತಿಳಿಯದು[1] ; ಏಕಾಂಬರಶಬ್ದದ ಅಪಭ್ರಂಶವೇ 'ಏಕಾಮ್ರ' ನಾಗಿರಬೇಕೆಂದು **ಸೋಮನಾಥಯ್ಯ**ನವರು (ಸೋ. ಶಂ. ಪು. ೧೭೭) ಊಹಿಸಿರುತ್ತಾರೆ. ಏಕಾಮ್ರೇಶ್ವರನ ದೇವಾಲಯದಲ್ಲಿರುವ ಒಂದು ಮಾವಿನ ಮರವು ವೇದವೃಕ್ಷವೆಂದೂ ಆ ಗಿಡದಲ್ಲಿ ಪ್ರತಿದಿನವೂ ಸ್ವಾಮಿಯ ನೈವೇದ್ಯಕ್ಕೆ ಒಂದೊಂದು ಹಣ್ಣು ಸಿಕ್ಕುತ್ತಿದ್ದ ಕಾರಣದಿಂದ ಆ ಲಿಂಗಕ್ಕೆ ಏಕಾಮ್ರೇಶ್ವರನೆಂಬ ಹೆಸರಾಯಿತೆಂದೂ ಒಂದು ಐತಿಹ್ಯವಿದೆಯಂತೆ ! (ಸೋ. ಶಂ. ಪು. ೧೭೭).

ಕಾಂಚೀಪಟ್ಟಣವು ಹಸ್ತಿಗಿರಿಯ ಕಾಂಚಿ ಎಂದು ಮಾಧವನು (ಮಾ. ಶಂ. ೧೫-೪) ವರ್ಣಿಸಿರುವದು ರೂಪಕಕ್ಕೂ ಪ್ರಾಸಕ್ಕೂ ಹೊಂದಿಕೆಯಾಗಿರಬಹು

1. ತೆಲುಗು ಪುಸಕ್ತದಲ್ಲಿ 'ಏಕಾಮ್ರೇಶ'ನೆಂದಿದೆ (ಪು. ೨೨೫) ದೇ॥ಪಾಠದಲ್ಲಿ 'ಆಂಬರೇಶ' (ಪು. ೧೩೨) ಎಂದಿನೆ. ಸೋಮನಾಥಯ್ಯನವರ ಪುಸ್ತಕ ಪಾಠ ಪು ಏಕಾಮ್ಬರೇಶ' (!)

ವಾದರೂ ಅಲ್ಲಿ ಯಾವ ಪರ್ವತವೂ ಇಲ್ಲ. ವರದರಾಜಸ್ವಾಮಿಯು ಹಸ್ತಿಗಿರಿ ಅಥವಾ ಕರಿಗಿರಿ ಎಂಬ ಪರ್ವತದಮೇಲೆ ಇದೆ ಎಂದು ವೈಷ್ಣವರು ಹೇಳುತ್ತಿರುವದನ್ನು ಕೇಳಿ ಕವಿಯು ಹೀಗೆಂದು ಬರೆದಿರಬಹುದೆಂತ ಸೋಮನಾಥಯ್ಯನವರ ಊಹೆ (ಸೋ. ಶಂ. ೧೭೬). ಶಿವಕಾಂಚಿಯಲ್ಲಿ ಕಾಮಾಕ್ಷೀಪೂಜೆಯು ಇಂದಿನ ವರೆಗೂ ನಡೆಯುತ್ತಿರುವದರಿಂದ ಆಚಾರ್ಯರು ಅಲ್ಲಿ ನಡೆಯುತ್ತಿದ್ದ ತಾಂತ್ರಿಕ ಪೂಜೆಯನ್ನು ನಿರ್ಮೂಲೀಕರಿಸಿದರೆಂಬುದನ್ನು ನಾವು ನಂಬಬಹುದು.

(೫) ಚಿದ್ವಿಲಾಸರಿಗೆ ಶ್ರೀಚಕ್ರದಲ್ಲಿ ಬಹಳ ಆಕ್ಕರೆ. ಕಾಂಚಿ ವಿಷಯದಲ್ಲಿಯೂ ಅದನ್ನು ವರ್ಣಿಸುವಾಗ ಅದರ ವಿವರವನ್ನು ಎಂಟು ಶ್ಲೋಕಗಳಿಂದ ಕೊಟ್ಟು 'ತಸ್ಮಾನ್ಮುಮುಕ್ಷುಭಿಃ ಕಾರ್ಯಂ ಶ್ರೀಚಕ್ರಾರ್ಚನಮನ್ವಹಮ್| ಶಿವಶಕ್ತ್ಯೈಕ್ಯರೂಪತ್ವಾನ್ನಿರ್ಮಿತಂ ದೇಶಿಕೇನ ತತ್ ||' (ಚಿ. ಶಂ. ೫೫–೪೩) 'ಆದ್ದರಿಂದ ಮುಮುಕ್ಷುಗಳು ಪ್ರತಿದಿನವೂ ಶ್ರೀಚಕ್ರಾರ್ಚನವನ್ನು ಮಾಡಬೇಕು. ಶಿವಶಕ್ತಿಗಳ ಏಕರೂಪತ್ವವನ್ನು ತಿಳಿಸುವದರಿಂದ ಅದನ್ನು ಗುರುಗಳು ನಿರ್ಮಿಸಿರುತ್ತಾರೆ' ಎಂದೂ ಹೇಳಿರುತ್ತಾರೆ. ಆ ಪ್ರಾಂತದಲ್ಲಿ ಶಿವ, ಶಕ್ತಿ– ಈ ಇಬ್ಬರ ಭೇದದ ವಿಷಯಕ್ಕೆ ಹೊಡೆದಾಟವಿದ್ದ ಆಚಾರ್ಯರೋ, ಅವರಿಂದೀಚಿನ ಯಾರೋ ಒಬ್ಬರೋ ಶಿವ, ಶಕ್ತಿ– ಇಬ್ಬರೂ ಒಂದೇ ಎಂದು ಉಪದೇಶಿಸಿ ಜಗಳವನ್ನು ನಿಲ್ಲಿಸಿರಬೇಕೆಂದು ಇದರಿಂದ ಕಲ್ಪಿಸಬಹುದು. ಆನಂದಗಿರೀಯದಲ್ಲಿ ಕಾಮಾಕ್ಷಿ ಎಂದರೆ 'ಭಗವತೀ ಚಿದ್ರೂಪಿಣೀ ಬ್ರಹ್ಮವಿದ್ಯಾ ರುದ್ರ ಶಕ್ತಿಃ' (ಪು. ೨೨೯; ದೇ. ಪು. ೧೯೪), 'ಶೈವಾನಾಮಪಿ ಶಾಕ್ತಾನಾಂ ಚಕ್ರಾಣಾಂ ಚ ಪರಸ್ಪರಮ್ | ಅವಿನಾಭಾವಸಂಬನ್ಧಂ ಯೋ ಜಾನಾತಿ ಸ ಸರ್ವವಿತ್' (ಪು. ೨೩೦ ; 'ಚಕ್ರವಿತ್' ದೇ. ಪು. ೧೯೬) ಎಂದಿದೆ. ಈ ಶ್ಲೋಕವನ್ನು ಚಿದ್ವಿಲಾಸರೂ (ಚಿ. ಶಂ. ೫೫–೪೦) ಉದಾಹರಿಸಿರುತ್ತಾರಾದ್ದರಿಂದ ಅವರು ಆನಂದಗಿರೀಯದಿಂದ ಅದನ್ನು ತೆಗೆದುಕೊಂಡಿರಬೇಕು ; ಅಥವಾ ಇಬ್ಬರೂ ಬೇರೊಂದು ಗ್ರಂಥದಿಂದಲೂ ತೆಗೆದುಕೊಂಡಿರಬಹುದು. ಮಾಧವಕವಿಯೂ ಹತ್ನೆರಡನೆಯ ಸರ್ಗದಲ್ಲಿ ಆಚಾರ್ಯರು ಮೂಕಾಂಬಿಕಾಸ್ತೋತ್ರವನ್ನು ಮಾಡಿದರೆಂದು ವರ್ಣಿಸುವ ಸಂದರ್ಭದಲ್ಲಿ 'ಶ್ರೀಚಕ್ರಷಟ್ಚಕ್ರಕಯೋಃ ಪುರೋಽಥ ಶ್ರೀಚಕ್ರಮನ್ವೀರಪಿ ಚಿನ್ತಿತೈಕ್ಯಮ್' ಎಂದು ಶ್ರೀಚಕ್ರವನ್ನು ಪರಾಮರ್ಶಿಸಿರುತ್ತಾನೆ. ವ್ಯಾಖ್ಯಾನಕಾರನಂತೂ ಆನಂದಗಿರಿಯಿಂದ ಧಾರಾಳವಾಗಿ ಉದಾಹರಿಸುವ ಸ್ವಭಾವದವನಾದ್ದರಿಂದ ಎಂಟು ಶ್ಲೋಕಗಳನ್ನು ಹಾಕಿದಾನೆ ; ಅವುಗಳಲ್ಲಿ 'ಶೈವಾನಾಮಪಿ ಶಾಕ್ತಾನಾಮ್' ಎಂಬ ಪ್ರಕೃತಶ್ಲೋಕವೂ ಇದ್ದೇ ಇದೆ.

(೬) ಆಚಾರ್ಯರು ಆನಂದಗಿರಿಚಿದ್ವಿಲಾಸರು ಹೇಳುವಂತೆ ಶಿವಕಂಚಿ, ವಿಷ್ಣುಕಂಚಿ– ಎಂಬ ಪುರಿಗಳನ್ನು ನಿರ್ಮಿಸಿದರೆ ? ಕಂಚಿಯು ದಕ್ಷಿಣದಲ್ಲೊಂದು

ಮಹಾವಿದ್ಯಾಸ್ಥಾನವಾಗಿದ್ದು ಬ್ರಾಹ್ಮಣರಿಗೂ ಬೌದ್ಧರಿಗೂ, ಬೌದ್ಧರಿಗೂ ಜೈನರಿಗೂ, ಜೈನರಿಗೂ ಬ್ರಾಹ್ಮಣರಿಗೂ, ಆದ್ವೈತಿಗಳಿಗೂ ವಿಶಿಷ್ಟಾದ್ವೈತಿಗಳಿಗೂ, ತೆಂಕಲೆಯವರಿಗೂ ವಡಕಲೆಯವರಿಗೂ ವಾಗ್ವಾದಗಳು ಬಿಡದೆ ನಡೆದಿರುವ ಸ್ಥಳ. ಇಲ್ಲಿರುವ ದೇವಸ್ಥಾನಗಳು ಪಲ್ಲವರಿಂದ ಕಟ್ಟಲ್ಪಟ್ಟವೆಂಬುದಕ್ಕೆ ಗುರುತು ಗಳಿವೆಯಂತೆ. ಇಲ್ಲಿ ಹಿಂದಕ್ಕೆ ಜೈನಮತವು ಹರಡಿತ್ತೆಂಬುದಕ್ಕೆ ಗುರುತಾಗಿ ಊರಸುತ್ತಲಿನ ಬಯಲಿನಲ್ಲಿ ಲಿಂಗಗಳು ಪಾಣಿಪಟ್ಟಗಳು, ಬಸವಣ್ಣಗಳು– ಇವುಗಳ ಅವಶೇಷಗಳು ಹೇರಳವಾಗಿ ಕಾಣಬರುತ್ತಿರುವದೇ ಸಾಕ್ಷಿ. ಶಿವಕಂಚಿ (ದೊಡ್ಡಕಂಚಿ), ವಿಷ್ಣುಕಂಚಿ (ಚಿಕ್ಕಕಂಚಿ)–ಇವು ಒಂದಕ್ಕೊಂದು ನಾಲ್ಕು ಮೈಲಿ ಗಳ ಅಂತರದಲ್ಲಿವೆ. ಇವುಗಳ ನಡುವೆ ಒಂದು ಕಾಡು ಇತ್ತು; ಈಗಿರುವ ಹಡ್ಸನ್ ಪೇಟೆಯು ನಿರ್ಮಿತವಾಗಿ ಸುಮಾರು ನೂರೈವತ್ತು ವರ್ಷಗಳಾಗಿರಬಹುದು. ಶಿವ ಕಂಚಿಯಕಡೆಗೇ ಊರು ದೊಡ್ಡಪಟ್ಟಣವಾಗಿದ್ದಿರಬೇಕು. ಶಿವಕಂಚಿಯಲ್ಲಿ ಸಿಕ್ಕುವ ಶಾಸನಗಳಲ್ಲಿ 'ಕಂಚಿ' ಎಂಬ ಸಾಮಾನ್ಯನಾಮವೇ ಇದೆ ; 'ಶಿವಕಂಚಿ' ಎಂಬ ವಿಶೇಷಣಯುಕ್ತನಾಮವು ಕಾಣಬರುವದಿಲ್ಲ; ವಿಷ್ಣುಕಂಚಿಯಬಳಿ ಸಿಕ್ಕುವ ಶಾಸನ ಗಳಲ್ಲಿ ಕಂಚಿ ಎಂಬ ಹೆಸರೇ ಕಾಣಬರುವದಿಲ್ಲ ; ಈ ಸ್ಥಳಕ್ಕೆ ಹಿಂದಕ್ಕೆ 'ತಿರುವತ್ತಿ ಯೂರು' ಎಂಬ ಹೆಸರು ಇತ್ತೆಂದು ತಿಳಿಯಬಂದಿದೆ. ಶಾ. ಶ. ೧೪೯೬ರವರೆಗೂ ಆ ಹೆಸರೇ ಇದ್ದಂತೆ ಕಾಣುತ್ತದೆ. ವರದರಾಜಸ್ವಾಮಿಯ ದೇವಾಲಯದ ಮಹಾ ದ್ವಾರವು ಪಶ್ಚಿಮಮುಖವಾಗಿದ್ದು ಇದರಮೆಲೆ ಒಂದು ಚಿಕ್ಕ ಗೋಪುರವಿದೆ. ಗರ್ಭಗೃಹವೂ ಸ್ವಾಮಿಯ ವಿಗ್ರಹವೂ ಎತ್ತರವಾದ ಜಗಲಿಯಮೇಲೆ ಪೂರ್ವಾಭಿ ಮುಖವಾಗಿದೆ. ಇವುಗಳ ಎದುರಿಗೆ ಪೂರ್ವದಿಕ್ಕಿನ ಹೊರಗಿನ ಪ್ರಾಂತದ ಮಹಾ ದ್ವಾರದ ಗೋಪುರವು ಅತ್ಯುನ್ನತವಾಗಿದೆ ; ಅದಕ್ಕೆ 'ಪುಣ್ಯಕೋಟಿ' ವಿಮಾನ ವೆಂದು ಹೆಸರು. ಸುತ್ತಲೂ ಗೋಡೆಗಳನ್ನು ಹಾಕಿ ಕಟ್ಟಿರುವ ಆ ಜಗಲಿಯ ಒಳಗೆ 'ಹಸ್ತಿಗಿರಿ' ಎಂಬ ಬೆಟ್ಟವು (?) ಇದೆ ಎಂದೂ ಹೇಳುತ್ತಾರೆ ; ಈ ದೇವಸ್ಥಾನವನ್ನು ಕಟ್ಟಿದಾಗ ಪೂರ್ವಾಭಿಮುಖವಾಗಿಯೇ ಇದ್ದು ತಿರುವತ್ತಿಯೂ ರೆಂಬ ಗ್ರಾಮವು ದೇವಸ್ಥಾನದ ಪೂರ್ವದಿಕ್ಕಿನಲ್ಲಿ ಇದ್ದಿರಬಹುದೆಂದೂ ಆ ವೂರು ಹಾಳಾದಮೇಲೆ ದೇವರಪೂಜೆಯು ನಿಂತುಹೋಗಿರಬಹುದೆಂದೂ ಮುಂದಕ್ಕೆ ಶ್ರೀವೈಷ್ಣವರು ಪಾಳುಬಿದ್ದಿದ್ದ ಗುಡಿಯನ್ನು ಜೀರ್ಣೋದ್ಧಾರಮಾಡಿ ಮೇಲಿನ ಅಂತರಾಳಗರ್ಭಾಗಾರವನ್ನು ಗೋಡೆಗಳಿಂದ ಮುಚ್ಚಿ ಅವುಗಳಮೇಲೆ ಹೊಸ ಗರ್ಭಗೃಹವನ್ನು ಕಟ್ಟಿ ಶ್ರೀವರದರಾಜಸ್ವಾಮಿಯನ್ನು ಪ್ರತಿಷ್ಠೆಮಾಡಿಸಿರಬಹು ದೆಂದೂ ಈಚೆಗೆ ಪಶ್ಚಿಮದಿಕ್ಕಿನಲ್ಲಿ ಹೊಸ ಊರು ಹುಟ್ಟಿಕೊಳ್ಳಲಾಗಿ ಮಹಾ ದ್ವಾರವು ಊರಿನ ಒಳಗೆ ಇಲ್ಲದೆ ಹೊರಗೆ ಇದ್ದದ್ದರಿಂದ ಊರಿನವರು ಗುಡಿ ಯೊಳಕ್ಕೆ ಹೋಗುವದಕ್ಕೆ ಅನುಕೂಲವಾಗುವಂತೆ ಪಶ್ಚಿಮದ ಗೋಡೆಯನ್ನೊಡೆದು

ದ್ವಾರವನ್ನಾಡಿ ಅಲ್ಲೊಂದು ಮಹಾದ್ವಾರವನ್ನು ಕಟ್ಟಿ ಅದರಮೇಲೆ ಒಂದು ಗೋಪ್ರರವನ್ನು ಕಟ್ಟಿರಬಹುದೆಂದೂ ಇತ್ತೀಚೆಗೆ ಶ್ರೀರಾಮಾನುಜಾಚಾರ್ಯರಿಂದ ಮುಂದಕ್ಕೆ ಉಚ್ಚ್ರಾಯಸ್ಥಿತಿಗೆ ಬಂದು ಊರು ಕಂಚಿಗೆ ಸಮೀಪದಲ್ಲಿದ್ದದ್ದರಿಂದ ಚಿಕ್ಕ ಕಂಚಿಯೆಂದೂ ವಿಷ್ಣುದೇವಸ್ಥಾನವೂ ಶ್ರೀವೈಷ್ಣವರೂ ಪ್ರಬಲವಾಗಿದ್ದದ್ದರಿಂದ ವಿಷ್ಣುಕಂಚಿಯೆಂದೂ ಹೆಸರಿಟ್ಟಿರಬಹುದೆಂದೂ ತಿರು– ಅತ್ತಿ– ಊರು ಎಂಬ ಹೆಸರನ್ನು ಸಂಸ್ಕೃತಕ್ಕೆ ತಿರುಗಿಸಿ ಶ್ರೀಹಸ್ತಿಗಿರಿ ಎಂಬ ನಾಮಧೇಯವನ್ನಿಟ್ಟಿರಬಹುದೆಂದೂ ಸೋಮನಾಥಯ್ಯನವರು (ಸೋ. ಶಂ. ಪು.೧೬೧) Topographical Notes on Kanchi by the late S. M. Natesha Sastriar (1886)–ಎಂಬ ಇಂಗ್ಲಿಷುಗ್ರಂಥದ ಆಧಾರದಿಂದ ಬರೆದಿರುತ್ತಾರೆ. ಕಂಚಿಗಳೆರಡನ್ನೂ ನಾವೂ ಸ್ವತಃ ನೋಡಿರುತ್ತೇವೆ; ವಿಷ್ಣುಕಂಚಿಯು ದೇವ ಸ್ಥಾನವು ವಿಲಕ್ಷಣವಾಗಿ ನಿರ್ಮಿತವಾಗುವದಕ್ಕೆ ಕಾರಣವೇನೆಂಬುದು ಮಾತ್ರ ನಮಗೆ ಸೋಮನಾಥಯ್ಯನವರಿಂದಲೇ ತಿಳಿದುಬಂದದ್ದು.

ಈ ಮೇಲಿನ ವಿವರಣೆಯಿಂದ ಆನಂದಗಿರಿ, ಚಿದ್ವಿಲಾಸ– ಇವರಿಬ್ಬರೂ ವಿಷ್ಣುಕಂಚಿ ಎಂಬ ಹೆಸರು ರೂಢಿಗೆ ಬಂದ ಬಳಿಕವೇ ತಮ್ಮ ಶಂಕರವಿಜಯ ಗಳನ್ನು ರಚಿಸಿರಬೇಕೆಂದು ಸೋಮನಾಥಯ್ಯನವರು (ಸೋ.ಶಂ.ಪು. ೧೪೭) ಕಲ್ಪಿಸಿರುವದು ನಮಗೂ ವಿಶ್ವಸನೀಯವಾಗಿ ತೋರುತ್ತದೆ.

ಆಚಾರ್ಯರು ವೇಂಕಟಗಿರಿಗೆ ಹೋದದ್ದು

೧೩೮. ತಮ್ಮ ಚರಣಸೇವೆಗೆಂದು ಬಂದ ಆಂಧ್ರರನ್ನು ಅನುಗ್ರಹಿಸಿ ವೇಂಕಟಾಚಲೇಶ್ವರನನ್ನು ನಮಸ್ಕರಿಸಿ ಆಚಾರ್ಯರು ವಿದರ್ಭರಾಜಧಾನಿಗೆ ಹೋದರು (ಮಾ. ಶಂ. ೧೫–೬) ಎಂದು ಮಾಧವಕವಿಯ ವರ್ಣನೆ.

ಚಿದ್ವಿಲಾಸೀಯದಲ್ಲಿ ಹೀಗಿದೆ : ಸಶಿಷ್ಯರಾಗಿ ವೇಂಕಟೇಶನನ್ನು ನೋಡುವದಕ್ಕೆಂದು ಹೊರಟ ಆಚಾರ್ಯರು ಗೋವಿಂದರಾಜೇಶ್ವರನನ್ನು ನಮಸ್ಕರಿಸಿ ಜೆಟ್ಟವನ್ನು ಹತ್ತಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ, ವೇಂಕಂಟೇಶ್ವರನನ್ನು ದರ್ಶನಮಾಡಿ ಸ್ತುತಿಸಿ ಅಲ್ಲಿರುವ ಅರ್ಚಕರು ಶ್ರೌತಮಾರ್ಗವನ್ನು ಬಿಟ್ಟು ವೈಖಾನಸಾಗಮಾಚಾರದವರಾದ್ದರಿಂದ ಅವರನ್ನು ಶುದ್ಧಾದ್ವೈತಪರರಾಗಿ ಮಾಡಿದರು.[1]

1. ವೈಖಾನಸರು ಅದ್ವೈತಿಗಳೇ– ಎಂಬುದು ಆವರ ಧರ್ಮಸೂತ್ರಗ್ರಂಥಗಳಿಂದ ಗೊತ್ತಾಗುತ್ತದೆ "ವೈಖಾನಸರ ಧ್ಯೇಯ" ಎಂಬ ಲೇಖನದಲ್ಲಿ ಈ ವಿಚಾರವನ್ನು ವಿಶದವಾಗಿ ವಿವರಿಸಿದೆ. ಆಧ್ಯಾತ್ಮಪ್ರಕಾಶಪತ್ರಿಕೆಯು ೧೦ನೇ ಸಂಪುಟ ೫ನೇ ಸಂಚಿಕೆಯ (ಪುಟ೬೩) ನ್ನು ನೋಡಿರಿ.

ಆನಂದಗಿರಿಯು ಈ ಮೊದಲೇ ಆಚಾರ್ಯರು ವೇಂಕಟಗಿರಿಗೆ ಹೋಗಿದ್ದಂತೆ ವರ್ಣಿಸಿರುವಪನ್ನು ಹಿಂದೆ (ಪು. ೩೩೬ರಲ್ಲಿ) ತಿಳಿಸಿರುತ್ತೇವೆ. ಆಲ್ಲಿಂದ ಆಚಾರ್ಯರು ಕಾಂಚಿಗೆ ಹೋದರೆಂದು ಆತನು ಹೇಳುತ್ತಾನೆ.

(೧) ಆನಂದಗಿರಿಯು ಪರಾಮರ್ಶಿಸಿದ ವೇಂಕಟಗಿರಿಯು ವೇಂಕಟಾಚಲವೇ ಆಗಿದ್ದರೆ ಆತನಿಗೆ ಸ್ಥಲವು ಎಲ್ಲಿತ್ತೆಂಬುದು ನಿರ್ದಿಷ್ಟವಾಗಿ ತಿಳಿದಿರಲಿಲ್ಲ ವೆಂದು ಹೇಳಬೇಕಾಗುತ್ತದೆ.

(೨) ತಿರುಪತಿಯಲ್ಲಿರುವ ದೇವರು ವೇಂಕಟೇರಮಣನೆಂದು ಈಗ ಪ್ರಸಿದ್ಧವಾಗಿದ್ದರೂ ಹಿಂದೆ ಹಾಗೆ ಇರಲಿಲ್ಲ. ತಿರುಪತಿಯ ಬೆಟ್ಟವನ್ನು ಶೇಷಾದ್ರಿ ಎಂಮ ಪುರಾಣಗಳಲ್ಲಿ ಕರೆದಿದೆ. ಶೇಷಾದ್ರಿಯಲ್ಲಿ ಕಪಿಲೇಶಕ್ಷೇತ್ರವಿದೆ[1] ಎಂದು ಸ್ಕಾಂದಾದಿಶೈವಪುರಾಣಗಳಿಂದ ತಿಳಿದುಬರುತ್ತದೆ. ಆ ಬೆಟ್ಟದಮೇಲಿದ್ದ ಒಂದು ವಿಗ್ರಹವು ಜೈನಮತವು ಪ್ರಬಲವಾಗಿದ್ದಾಗ ಜಿನಮುನಿಯೆಂದೂ ಶೈವರ ಕಾಲದಲ್ಲಿ ಭೈರವನೆಂದೂ ಪ್ರಸಿದ್ಧವಾಗಿತ್ತೆಂದು ಐತಿಹ್ಯ. ತ್ರಿರಾಮಾನುಜರಕಾಲದಲ್ಲಿ ಆದು ಯಾವ ದೇವರೆಂಬ ಬಗ್ಗೆ ಜೈನರಿಗೂ ವೈಷ್ಣವರಿಗೂ ಮತಭೇದವಿದ್ದ ದ್ದರಿಂದ ಶಂಖಚಕ್ರಗಳು, ತ್ರಿಶೂಲಡಮರುಗಳು– ಇವುಗಳನ್ನು ಚಿನ್ನದಿಂದ ಮಾಡಿ ರಾತ್ರೆ ಆ ದೇವರ ಬಳಿ ಇಟ್ಟು ದೇವಾಲಯದ ಕದಗಳನ್ನು ಮುಚ್ಚಿಸಿ ಬೀಗಮುದ್ರೆ ಮಾಡಿ ಬೆಳಗ್ಗೆ ನೋಡಿದಾಗ ಮೂರ್ತಿಯು ಯಾವ ಆಯುಧಗಳನ್ನು ಧರಿಸಿರುವದೋ ಆ ದೇವರೆಂದು ತಿಳಿಯುವದು; ಯಾವದನ್ನೂ ಧರಿಸದೆ ಇದ್ದರೆ ಜಿನಮುನಿಯೆಂದು ಭಾವಿಸುವದು –ಎಂಬ ವ್ಯವಸ್ಥೆಯನ್ನು ರಾಮಾನುಜಾಚಾರ್ಯರು ಹೇಳಿದರಂತೆ. ಮಾರನೆಯ ದಿನ ನೋಡಿದ್ದರಲ್ಲಿ ದೇವರು ಶಂಖಚಕ್ರಗಳನ್ನು ಧರಿಸಿದ್ದರಿಂದ ಆದು ವಿಷ್ಣುಪ್ರತಿಮೆಯೆಂದು ನಿರ್ಣಯವಾಗಿದೆಯಂತೆ(ಸೋ.ಶಂ. ಪು. ೧೮೩–೧೮೪). ಈಗಲೂ ಮೂರ್ತಿಯು ಹೇಗಿದೆ ಎಂಬುದನ್ನು ನೋಡುವದಕ್ಕೆ ಜನರಿಗೆ ಅವಕಾಶವಿಲ್ಲದ್ದರಿಂದ 'ಲೋಗುಟ್ಟು ಪೆರುಮಾಳಕ್ಕೇ ತೆಲುಸಾನು' (ಒಳಗುಟ್ಟು ದೇವರಿಗೇ ಗೊತ್ತು) ಎಂಬ ಗಾದೆ ಹುಟ್ಟಿದೆ. ಇತಿಹಾಸವು ಹೀಗಿರುವಲ್ಲಿ, ರಾಮಾನುಜರಿಗಿಂತ ಎಷ್ಟೋ ಶತಮಾನಗಳ ಹಿಂದೆ ಇದ್ದ ಶಂಕರಭಗವತ್ಪಾದರು ವೆಂಕಟೇರಮಣಸ್ವಾಮಿಯ ಅರ್ಚಕರನ್ನು ಆದ್ವೈತಿಗಳಾಗಿ ಮಾಡಿದ

---

1. ಬೆಟ್ಟದಕೆಳಗೆ 'ಕಪಿಲತೀರ್ಥ'ವಿದೆ, ಕಪಿಲೇಶ್ವರನೆಂಬ ಹೆಸರಿನ ಲಿಂಗವು ಎಲ್ಲಿದೆಯೊ ? ಸ್ಕಾಂದಮಹಾಪುರಾಣ ವೈಷ್ಣವಖಂಡ ಆಧ್ಯಾಯ ೯ರಲ್ಲಿ ರಂಗದಾಸನೆಂಬ ಪಾಂಡ್ಯದೇಶದ ಶೂದ್ರನೊಬ್ಬನು ಶೇಷಾದ್ರಿಯಲ್ಲಿ ಕಪಿಲೇಶಕ್ಷೇತ್ರದಲ್ಲಿ ಶ್ರೀನಿವಾಸನ ಸೇವೆ ಮಾಡಿದನೆಂದಿದೆ :

ಶನೈಃ ಸಂಪ್ರಾಪ್ಯ ಶೇಷಾದ್ರಿಂ ನಿರ್ಝರಂ ಸಂದದರ್ಶ ಹ [
ತತ್ಸವಿಾಪಂ ಸಮಾಸಾದ್ಯ ಕಪಿಲಾಪೂಜಿತಂ ಶಿವಮ್ ॥ ಎಂತ ವರ್ಣಿಸಿದೆ.

ರೆಂಬ ಕಥೆಯು ನಿಜವಾಗಿರಲಾರದು. ವೈಖಾನಸರ ಸೂತ್ರದಿಂದ ಅವರು ಆದ್ವೈತಿಗಳೇ ಆಗಿವ್ವ ವೈಷ್ಣವರೆಂದು ತಿಳಿಯಬರುತ್ತದೆ. ಈ ನಿಜವನ್ನು ತಿಳಿಯದೆ ವೈಖಾನಸರು ನಾಮನನ್ನು ಹಾಕಿಕೊಳ್ಳುವದನ್ನು ಕಂಡು ಅವರು ದ್ವೈತಿಗಳಾಗಿದ್ದರೆಂಮ ಭ್ರಮಿಸಿ ಚಿದ್ವಿಲಾಸರು ಹೀಗೆ ಬರೆದಿರಬಹುದೆಂದು ಕಾಣುತ್ತದೆ.

(೩) ಆಚಾರ್ಯರು **ಗೋವಿಂದರಾಜೇಶ್ವರನನ್ನು** ನಮಸ್ಕರಿಸಿದರೆಂಬ ಹೇಳಿಕೆಯೂ ಹೀಗೆಯೇ ಅವಿಶ್ವಸನೀಯವಾಗಿದೆ. ಗೋವಿಂದರಾಜನ ವಿಗ್ರಹವು ಮೊದಲು ಚಿದಂಬರದಲ್ಲಿ ಕನಕಸಭಾಪತಿಯ ದೇವಾಲಯದ ಪ್ರಾಕಾರದಲ್ಲಿತ್ತೆಂದು **ವಾಣಿಕ್ಕವಾಚಕರ್** ಎಂಬ ಶಿವಭಕ್ತನ ಕೃತಿಗಳಿಂದ ತಿಳಿದುಬಂದಿದೆ. ಶೈವವೈಷ್ಣವರಿಗೆ ಮತಾಭಿಮಾನದಿಂದ ದ್ವೇಷವು ಪ್ರಬಲಿಸಿದಾಗ ಗೋವಿಂದರಾಜ ಮಂದಿರವನ್ನು ಕೆತ್ತುಹಾಕಿ 'ವಿಗ್ರಹವನ್ನು ವಿಷ್ಣುವಿನ ಸ್ಥಾನಕ್ಕೆ ಕಳುಹಿಸಿದರು' ಅಂದರೆ ಸಮುದ್ರದಲ್ಲಿ ಹಾಕಿಬಿಟ್ಟರು. ಆದು ಶ್ರೀರಾಮಾನುಜರ ಕಾಲಕ್ಕೆ ಸಿಕ್ಕಿದ ಕಾರಣ ಆದನ್ನು ತಿರುಪತಿಯಲ್ಲಿ ಪ್ರತಿಷ್ಠಿಸಲಾಯಿತು –ಎಂದು **ಸೋಮನಾಥಯ್ಯಂಗಾರರು** (ಸೋ.ಶಂ. ಪು. ೧೪೫)–"Sri Ramanujacharya's Life" by S. Krishnaswamy Iyengar M.A , pp 47–49 ಎಂಬ ಗ್ರಂಥದ ಆಧಾರದಿಂದ– ಬರೆದಿರುತ್ತಾರೆ. ಆದೇ ಅಯ್ಯಂಗಾರ್ಯರವರು ಬರೆದಿರುವ 'ದಕ್ಷಿಣಭಾರತದ ಚರಿತ್ರೆ' ಎಂಬ ಇಂಗ್ಲಿಷುಪುಸ್ತಕದಲ್ಲಿಯೂ ಈ ವಿಷಯವನ್ನು ನಾವು ನೋಡಿದ ನೆನಪಿದೆ. ಇತಿಹಾಸವು ಹೀಗಿರುವಲ್ಲಿ ಶಂಕರರು ಗೋವಿಂದರಾಜನನ್ನು ಹೇಗೆತಾನೆ ನಮಸ್ಕರಿಸಿದ್ದಾರು ?

ಕರ್ಣಾಟಕದಲ್ಲಿ ಕಾಪಾಲಿಕರನ್ನು ಜಯಿಸಿದ್ದು

೮೫. ಆಚಾರ್ಯರು ತಿರುಪತಿಯಿಂದ ವಿದರ್ಭರಾಜಧಾನಿಗೆ ಹೋದರಷ್ಟೆ? ಅಲ್ಲಿಂದ ಮುಂದಕ್ಕೆ **ಕರ್ಣಾಟಕದೇಶದಲ್ಲಿ** ಪ್ರಬಲರಾಗಿದ್ದ **ಕಾಪಾಲಿಕರನ್ನು** ಜಯಿಸುವದಕ್ಕೆ ಹೊರಟರು. ವಿದರ್ಭರಾಜನು 'ಅಲ್ಲಿ ಕಾಪಾಲಿಕರು ಬಹಳ ಜನರಿದಾರೆ; ಅವರು ತಮ್ಮ ಕೀರ್ತಿಯನ್ನು ಎಂದಿಗೂ ಸಹಿಸಲಾರರು, ಶ್ರುತಿಯಲ್ಲಿ ಅವರಿಗೆ ಈರ್ಷ್ಯೆಯಿದೆ. ಅಲ್ಲಿ ಒದಗಬಹುದಾದ ಅಪಾಯದ ವಿಷಯಕ್ಕೆ ಎಚ್ಚರವಾಗಿರಿ'– ಎಂದು ಎಚ್ಚರಿಸಿದನು. ಸುಧನ್ವನು 'ನಾನಿರುವಲ್ಲಿ ತಮಗೆ ಯಾವ ಅಂಜಿಕೆಯೂ ಇಲ್ಲ' ಎಂದು ಭರವಸೆಕೊಟ್ಟು ಆಚಾರ್ಯರ ಹಿಂದೆಯೇ ಹೊರಟನು. ಅಲ್ಲಿ **ಕ್ರಕಚನೆಂಬ** ಕಾಪಾಲಿಯು ಚಿತಾಭಸ್ಮಲೇಪ, ಕಪಾಲಧಾರಣೆ, ತ್ರಿಶೂಲ– ಇವುಗಳಿಂದ ಭೂಷಿತನಾಗಿ ಬಂದು ತನ್ನ ಅಶುಭಾಚಾರದ ಮತೆದ ಹೆಚ್ಚುಗಾರಿಕೆಯನ್ನು ಆಚಾರ್ಯರ ಮುಂದೆ ಕೊಚ್ಚಿಕೊಂಡನು. ಸುಧನ್ವನು ಆ ಭಂಡನನ್ನು ಅಧಿಕಾರಿಗಳ ಮೂಲಕ ಸಭೆಯಿಂದ ಹೊರಕ್ಕೆ ತಳ್ಳಿಸಿದನು.

ಆಮೇಲೆ ಆಚಾರ್ಯರನ್ನು ಕೊಲ್ಲುವದಕ್ಕೆಂದು ಅವನು ತನ್ನ ದಂಡನ್ನೇ ತೆಗೆದು ಕೊಂಡುಬಂದನು. ಸುಧನ್ವನು ಯುದ್ಧಕ್ಕೆ ಸಿದ್ಧನಾದನು. ಮೇಲೆ ಬಿದ್ದ ಕ್ರಕಚನ ದಂಡಿಗೆ ಆಂಜಿ ವಿಪ್ರರು ಆಚಾರ್ಯರಿಗೆ ಶರಣುಬಂದರು. ಆಚಾರ್ಯರು ಹುಂಕಾರಮಾತ್ರದಿಂದಲೇ ಅವರನ್ನೆಲ್ಲ ಬೂದಿಗೈದರು ; ಕ್ರಕಚನು ಆಚಾರ್ಯರ ಬಳಿಗೆ ಬಂದು 'ಎಲಾ, ಕುನುತಾನುಯಾಯಿಯೆ, ನಿನ್ನ ಕರ್ಮದ ಫಲವನ್ನು ಅನುಭವಿಸು !' ಎಂದು ಕಣ್ಣುಮುಚ್ಚಿಕೊಂಡು ಹೆಂಡವನ್ನು ತುಂಬಿದ ಕಪಾಲ ವನ್ನು ಕೈಯಲ್ಲಿಟ್ಟುಕೊಂಡು ಕಪಾಲಿಯನು ಧ್ಯಾನಿಸಲು ಭೈರವನು ಪ್ರತ್ಯಕ್ಷನಾಗಿ 'ಶಂಕರಾಚಾರ್ಯರೂಪದಿಂದಿರುವ ನನ್ನ ವಿಷಯದಲ್ಲಿಯೇ ಇಂಥ ಅಪರಾಧ ವನ್ನು ಮಾಡುತ್ತಿರುವೆಯಲ್ಲ !' ಎಂದು ಅವನ ರುಂಡವನ್ನು ಹಾರಿಸಿದನು (ಮಾ. ಶಂ. ೧೫–೬೦ರಿಂದ ೨೬).

ಈ ಕಥೆ ಮಿಕ್ಕ ಶಂಕರವಿಜಯಗಳಲ್ಲಿಲ್ಲ. (೧) ಮಾಧವಕವಿಯ ಕಾಲಕ್ಕೆ ಕಾಪಾಲಿಕರು ಹೆಚ್ಚಿಕೊಂಡಿದ್ದರೊ, ಅಥವಾ ಅವರ ಹಾವಳಿಯ ವಿಷಯವಾಗಿ ಅತನು ಬಹುವಾಗಿ ಕೇಳಿದ್ದನೋ, ಯಾವದೋ ಕಾರಣದಿಂದ ಹಿಂದೊಂದು ಸಲ ಶ್ರೀಶೈಲದಲ್ಲಿ ಕಾಪಾಲಿಕರಿಗೆ ಪ್ರತೀಕಾರವನ್ನು ಮಾಡಿದ ಕಥೆಯನ್ನು ಹೇಳಿದಷ್ಟ ರಿಂದ ತೃಪ್ತನಾಗದೆ ಅವನು ಮತ್ತೊಮ್ಮೆ ಈ ಕಥೆಯನ್ನು ಹೇಳಿದ್ದಾನೆ.

(೨) **ಸುಧನ್ವರಾಜನು** ಯಾರೆಂಬುದೇ ತಿಳಿಯುವಂತಿಲ್ಲವೆಂದು ಹಿಂದೆ (ಪು. ೧೧೯) ತಿಳಿಸಿರುತ್ತೇವೆ. ಅವನು ಭಟ್ಟರ ಕಾಲದಿಂದ ಆಚಾರ್ಯರ ದಿಗ್ವಿಜಯ ಕಾಲದವರೆಗೂ ವೈದಿಕಮತಾನುಯಾಯಿಯಾಗಿದ್ದದ್ದು ಹೇಗೆ ? ಅವನಿಗೆ ವೇದಾಂತದಲ್ಲಿ ಯಾವಾಗ ಹೇಗೆ ಅಭಿರುಚಿಯುಂಟಾಯಿತು ?–ಎಂಬುದ ನ್ನಾಗಲಿ, ಆಚಾರ್ಯರ ಹಿಂದೆ ಅವನೂ ದಿಗ್ವಿಜಯಕ್ಕೆ ಬಂದನೆಂಬುದನ್ನಾಗಲಿ ಕವಿ ಹೇಳಿಲ್ಲ.

(೩) **ವಿದರ್ಭದೇಶವು** ಯಾವದು ? ಇದು ಈಗಿನ ಬೀರಾರ್ ಪ್ರದೇಶವೆ? ಅಲ್ಲಿಂದ ಆಚಾರ್ಯರು ಉತ್ತರಕ್ಕೆ ಹೋದರೊ, ದಕ್ಷಿಣಕ್ಕೆ ಬಂದರೊ? ಕರ್ನಾಟಕವು ಆಗ ಎಲ್ಲಿಯವರೆಗೆ ಹಬ್ಬಿತ್ತು ?– ಇವುಗಳನ್ನು ಇತಿಹಾಸದ ಆಧಾರದಿಂದ ಗೊತ್ತುಮಾಡಿದಮೇಲೆಯೇ **ಕಾಪಾಲಿಕಪ್ರಕರಣದ** ನಿಜವನ್ನು ನಿಶ್ಚಯಿಸಬಹುದಾಗುತ್ತದೆ. **ಚಿದ್ವಿಲಾಸರು** ಸ್ವಲ್ಪ ಹೆಚ್ಚುಕಡಿಮೆಯಾಗಿ ಇದೇ ಕಥೆಯನ್ನು **ರಾಮೇಶ್ವರದಲ್ಲಿ** ನಡೆದಂತೆ ವರ್ಣಿಸಿರುತ್ತಾರೆ. **ಮಧ್ಯಾರ್ಜುನ** ದಿಂದ ಅಲ್ಲಿಗೆ ಬಂದ ಆಚಾರ್ಯರನ್ನು **ಕಾಪಾಲಿಕರು** ಸಂಧಿಸಿದರು. ಅಲ್ಲಿ **ಭೋಜಸಿಂಹನೆಂಬ** ರಾಜನು ಆಚಾರ್ಯರ ಹಿಂದೆ ಇದ್ದನು. ಸ್ವೇಚ್ಛೆಯಾಗಿ ಮಾತನಾಡುತ್ತಿದ್ದ **ಕಾಪಾಲಿಕಶಿಷ್ಯರನ್ನೂ ಗುರುವನ್ನೂ** ಹೊಡೆದನು. **ಕಾಪಾಲಿಕ**

ಗುರುವು ಭೈರವನನ್ನು ಸ್ಮರಿಸಲಾಗಿ ಆ ದೇವನು ಪ್ರತ್ಯಕ್ಷನಾಗಿ ಶಂಕರರ ಸ್ತೋತ್ರವನ್ನು ಕೇಳಿ ಸಂತುಷ್ಟನಾಗಿ 'ನೀನು ಪೂಜ್ಯನು ; ನೀನು ಇಲ್ಲಿಗೆ ಬಂದಿರುವೆ ಎಂಬುದನ್ನು ತಿಳಿದೇ ನಾನು ಇಲ್ಲಿಗೆ ಬಂದಿದೇನೆ. ಇವರನ್ನು ಪಂಡಿಸು !' ಎಂದು ನುಡಿದು ಅಂತರ್ಧಾನವನ್ನು ಹೊಂದಿದನು. ಆಚಾರ್ಯರು 'ನಿಷ್ಪ್ರಾಧಮರೆ, ಸರ್ವಕರ್ಮಬಹಿಷ್ಕೃತರಾಗಿರಿ !' ಎಂದು ಶಪಿಸಿದರು (ಚಿ. ಶಂ. ೨೭ನೆಯ ಅಧ್ಯಾಯ)– ಎಂದು ಬರೆದಿರುತ್ತಾರೆ. ಮಾಧವನ ಕಥೆ ನಿಜವೊ ? ಚಿದ್ವಿಲಾಸರ ಕಥೆ ನಿಜವೋ ? ರಾಮೇಶ್ವರವಲ್ಲಿ ಆಚಾರ್ಯರು ಜಯಿಸಿದ್ದು ಮಾಧವನು ಹೇಳಿರುವಂತೆ ಶಾಕ್ತರನ್ನೊ, ಚಿದ್ವಿಲಾಸರು ಹೇಳಿರುವಂತೆ ಕಾಪಾಲಿಕರನ್ನೊ ? ಕಾಪಾಲಿಕರ ಗುರು ಕ್ರಕಚನೊ, ವಟುಕನಾಥನೊ ? ಅವನನ್ನು ಮಾಧವನು ಹೇಳಿದಂತೆ ಭೈರವನು ಕೊಂದನೊ, ಅಥವಾ ಅವನ ಅನುಮತಿಯಿಂದ ಆಚಾರ್ಯರೇ ಶಪಿಸಿದರೊ ?

ಗೋಕರ್ಣದಲ್ಲಿ ನೀಲಕಂಠಾಚಾರ್ಯನನ್ನು ಗೆದ್ದದ್ದು

೧೪೦. ಹೀಗೆಯೇ ಅಯಾ ದೇಶಗಳಲ್ಲಿ ಪಾಷಂಡಿಗಳಾಗಿದ್ದ ದ್ವಿಜರನ್ನು ಖಂಡಿಸಿ ಆಚಾರ್ಯರು ಪಶ್ಚಿಮಸಮುದ್ರತೀರವನ್ನು ಸೇರಿ ಗೋಕರ್ಣಕ್ಕೆ ಬಂದರು. ಅಲ್ಲಿ ಸಮುದ್ರಸ್ನಾನವನ್ನು ಮಾಡಿ ಭುಜಂಗಪ್ರಯಾತಗಳಿಂದ ಶಿವನನ್ನು ಸ್ತೋತ್ರಮಾಡಿದರು. ಇವರು ಬಂದ ಶಿಷ್ಯರಿಗೆ ವೇದಾಂತವನ್ನು ಹೇಳುತ್ತಾರೆಂಬ ಸುದ್ದಿಯನ್ನು ತಿಳಿದು ಹರದತ್ತನು ತಮ್ಮ ಗುರುವಾದ ನೀಲಕಂಠಾಚಾರ್ಯನಿಗೆ ಭಟ್ಟಮುಂಡನಾದಿಗಳನ್ನು ಜಯಿಸಿದ ಶಂಕರಾಚಾರ್ಯರು ಬರುತ್ತಿದಾರೆಂದು ತಿಳಿಸಿದನು. ಇದನ್ನು ಕೇಳಿದ ನೀಲಕಂಠನು ನಗುತ್ತಾ 'ಸಮುದ್ರವನ್ನು ಒಣಗಿಸ ಬಹುದು, ಸೂರ್ಯನನ್ನು ಆಕಾಶದಿಂದ ಕೆಡಹಬಹುದು, ಆಕಾಶವನ್ನು ಬಟ್ಟೆಯಂತೆ ಸುತ್ತಬಹುದು, ನನ್ನನ್ನು ಮಾತ್ರ ಈತನು ವಾದದಲ್ಲಿ ಗೆಲ್ಲಲಾರನು' ಎಂದನು. ಆಚಾರ್ಯರ ಬಳಿಗೆ ಅತನು ಬಂದಾಗ ಸುರೇಶ್ವರಾಚಾರ್ಯರು ವಾದಮಾಡುವದಕ್ಕಾರಂಭಿಸಿದರು. ಆಮೇಲೆ ನೀಲಕಂಠಾಚಾರ್ಯರಿಗೂ ಶಂಕರಾಚಾರ್ಯರಿಗೂ ವಾದವಾಯಿತು. ವಾದದಲ್ಲಿ ಜಿತನಾದ ನೀಲಕಂಠನು ಆಚಾರ್ಯರಿಗೆ ಶಿಷ್ಯನಾಗಿ ಶರಣುಬಂದನು. ಅದನ್ನು ಕೇಳಿ ಉದಯನಕವಿಯೇ ಮುಂತಾದವರು ನಡುಗಿದರು (ಮಾ. ಶಂ. ೧೫–೩೧ರಿಂದ ೭೨).

ಈಗ ಈ ಕಥೆಯ ಬೆಲೆಯನ್ನು ನೋಡೋಣ : (೧) ಆಚಾರ್ಯರು ಗೋಕರ್ಣಕ್ಕೆ ಹೋದ ಕಥೆಯು ಚಿದ್ವಿಲಾಸೀಯದಲ್ಲಿಯೂ (ಚಿ.ಶಂ.೨೯–೩೦) ಇದೆ. ಅಲ್ಲಿ ಅವರು ಶಿವನನ್ನು ಭುಜಂಗಪ್ರಯಾತದ ಶ್ಲೋಕಗಳಿಂದ ಸ್ತೋತ್ರ ಮಾಡಿದ ಸುದ್ದಿಯಾಗಲಿ ನೀಲಕಂಠಾಚಾರ್ಯನನ್ನು ಜಯಿಸಿದ್ದರ ಪರಾಮರ್ಶ

ವಾಗಲಿ ಇಲ್ಲ. ಆಚಾರ್ಯರು ತಮ್ಮ ತಾಯಿಗಾಗಿ ಶಿವಭುಜಂಗಪ್ರಯಾತವನ್ನು ಮಾಡಿದರೆಂದು ಹೇಳಿದ್ದ ಮಾಧವನು ಮತ್ತೊಮ್ಮೆ ಇಲ್ಲಿ ಆ ವೃತ್ತವನ್ನೇಕೆ ತಂದನು ? ಅಥವಾ ಭುಜಂಗಪ್ರಯಾತದ ಶಿವಸ್ತೋತ್ರಗಳು ಎರಡು ಇವೆ ಎಂದು ಅತನ ಕಲ್ಪನೆಯಿರಬಹುದೆ ?

(೨) ಆಚಾರ್ಯರ ಕಾಲಕ್ಕೆ ವಿಶಿಷ್ಟಾದ್ವೈತಮತವು ಇದ್ದಿತೆಂಬುದಕ್ಕೆ ಯಾವ ಹೊರಗಿನ ಆಧಾರಪ್ರಮಾಣವಾಗಲಿ ಭಾಷ್ಯದಲ್ಲಿರುವ ಆಂತರಿಕಪ್ರಮಾಣವಾಗಲಿ ಇಲ್ಲ. ಅವರಿಗೆ ಪ್ರತಿವಾದಿಗಳಾಗಿದ್ದವರೆಲ್ಲರೂ ಅದ್ವೈತಿವೇದಾಂತಿಗಳೇ, ಬೇರೆಯ ವೇದಾಂತಿಗಳ ಪರಾಮರ್ಶವೇ ಅವರ ಗ್ರಂಥಗಳಲ್ಲಿಲ್ಲ. ಬೃಹದಾರಣ್ಯಕಭಾಷ್ಯದಲ್ಲಿ ಈ ವಾಕ್ಯವಿದೆ : 'ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತೇ ಇತ್ಯವಿಪ್ರತಿಪತ್ತಿಃ ಸರ್ವೇಷಾಮುಪನಿಷದ್ವಾದಿನಮ್'(ಬೃ.ಭಾ.೨-೧-೨೦)'ಎಲ್ಲಾ ಉಪನಿಷತ್ತುಗಳಲ್ಲಿಯೂ ವಿಜ್ಞಾನಾತ್ಮನಿಗೂ ಪರಮಾತ್ಮನಿಗೂ ಏಕತ್ವವನ್ನೇ ತಿಳಿಸಿದೆ ಎಂಬುದಕ್ಕೆ ಉಪನಿಷದ್ವಾದಿಗಳಲ್ಲಿ ಯಾರಿಗೂ ಮತಭೇದವಿಲ್ಲ' ಎಂದು ಬರೆದಿರುವ ಶಂಕರರು ವಿಶಿಷ್ಟಾದ್ವೈತಿಯೊಡನೆ ವಾದಮಾಡಿದರೆಂದು ಕಲ್ಪಿಸುವದು ಎಂಥ ಸಾಹಸ !

(೩) ನೀಲಕಂಠಾಚಾರ್ಯರು ಸೂತ್ರಕ್ಕೆ ಭಾಷ್ಯವನ್ನು ಬರೆದಿರುವದು ನಿಜ. ಆದರೆ ಅವರು ರಾಮಾನುಜಾಚಾರ್ಯರ ಬಳಿಕವೇ ಭಾಷ್ಯವನ್ನು ರಚಿಸಿದರೆಂದು ನಂಬುವದಕ್ಕೆ ಕಾರಣವಿದೆ. ಅವರು ರಾಮಾನುಜರ ಗ್ರಂಥದಲ್ಲಿರುವ ವಿಷಯಗಳನ್ನು ಕದ್ದಿರುವರೆಂದು ಕೆಲವರು ಶ್ರೀವೈಷ್ಣವರು ಹೇಳಿಕೊಳ್ಳುತ್ತಿದ್ದಾರೆ. ನೀಲಕಂಠಭಾಷ್ಯಕ್ಕೆ "ಶಿವಾರ್ಕಮಣಿದೀಪಿಕೆ" ಎಂಬ ವ್ಯಾಖ್ಯಾನನನ್ನು ಬರೆದಿರುವ ಅಪ್ಪಯ್ಯದೀಕ್ಷಿತರು ರಾಮಾನುಜಭಾಷ್ಯಕ್ಕೂ ಈ ಹೊಸ ಭಾಷ್ಯಕ್ಕೂ ಇರುವ ವೈಲಕ್ಷಣ್ಯವನ್ನು ತೋರಿಸುವದಕ್ಕೆ ಹೊರಟಿದಾರೆ. ರಾಮಾನುಜರು ಈ ಭಾಷ್ಯವನ್ನು ವಿಮರ್ಶೆಗೆ ತೆಗೆದುಕೊಂಡೂ ಇಲ್ಲ. ಹೀಗಿರುವದರಿಂದಲೂ ಆಚಾರ್ಯರು ಈ ಹೊಸ ಭಾಷ್ಯಕಾರರೊಡನೆ ವಾದಮಾಡಿರಲಾರರೆಂದೇ ಆಗುತ್ತದೆ.

(೪) ನೀಲಕಂಠಭಾಷ್ಯವು ರಾಮಾನುಜಭಾಷ್ಯದಂತೆ ವಿಸ್ತಾರವಾಗಿಲ್ಲ. ಸಿದ್ಧಾಂತವನ್ನು ಸಂಗ್ರಹಿಸಿ ಹೇಳುವದೇ ಹೊರತು ಪರಮತಗಳನ್ನು ತರ್ಕದಿಂದ ಖಂಡಿಸುವದಕ್ಕೆ ಹೋಗಿಲ್ಲ. ಹೀಗಿರುವಲ್ಲಿ ನೀಲಕಂಠಾಚಾರ್ಯರು ಮಾಧವನು ಹೇಳಿರುವಂತೆ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುವಷ್ಟು ವಾದಪ್ರಿಯರೆಂಬುದನ್ನು ನಂಬುವದಕ್ಕಾಗಲಿ ಇಲ್ಲಿ ಮಾಧವನು ವಿಸ್ತರಿಸಿ ಹೇಳಿರುವ ಯುಕ್ತಿಗಳನ್ನು ಅದ್ವೈತಕ್ಕೆ ವಿರುದ್ಧವಾಗಿ ಒಡ್ಡಿದರೆಂದು ನಂಬುವದಕ್ಕಾಗಲಿ ಆಗುವಂತಿಲ್ಲ. ಆಚಾರ್ಯರ ಭಾಷ್ಯದಲ್ಲಾಗಲಿ ಸುರೇಶ್ವರರ ವಾರ್ತಿಕದಲ್ಲಾಗಲಿ ವಿಶಿಷ್ಟಾದ್ವೈತದ

ಪಾಮರ್ಶವೇ ಇಲ್ಲದಿರುವಾಗ ಆವರಿಬ್ಬರೂ ಈ ಆಚಾರ್ಯನೊಡನೆ ವಾದ ಮಾಡಿದರೆಂಬುವನ್ನು ಹೇಗೆತಾನೆ ನಂಬುವಕ್ಕಾದೀತು ?

(ಜ) **ಹರದತ್ತನು** ಪ್ರಸಿದ್ಧ ಶೈವಾಚಾರ್ಯನೆಂಬುದೇನೊ ನಿಜ ಆದರೆ ಆತನಿಗಾಗಲಿ ನೀಲಕಂಠಾಚಾರ್ಯರಿಗಾಗಲಿ ಗೋಕರ್ಣದ ಸಂಬಂಧವಿದ್ದಿತೆ ? ಆತನು ನೀಲಕಂಠಶಿವಾಚಾರ್ಯರ ಶಿಷ್ಯನೆಂಬುದಕ್ಕೆ ಮಾಧವನ ಮತವಲ್ಲದೆ ಮತ್ತೆ ಯಾವದಾದರೂ ಆಧಾರವಿದೆಯೆ ?–ಎಂಬುದೂ ವಿಚಾರಣೀಯವಾಗಿದೆ.

ದ್ವಾರಕೆ, ಉಜ್ಜಯಿನಿ

೧೪೧. ಆಚಾರ್ಯರು ಗೋಕರ್ಣದಿಂದ ಮುಂದಕ್ಕೆ ಹೊರಟು **ಸೌರಾಷ್ಟ್ರ**ವೇ ಮುಂತಾದ ದೇಶಗಳಲ್ಲಿ ತಮ್ಮ ಭಾಷ್ಯವನ್ನು ಪ್ರಚಾರಮಾಡುತ್ತಾ **ದ್ವಾರಕೆ**ಗೆ ಹೋದರು. ಆಲ್ಲಿ **ಪಂಚಭೇದ**ಗಳನ್ನು ಹೇಳುತ್ತಿದ್ದ **ಪಾಂಚರಾತ್ರ**ರನ್ನು ಜಯಿಸಿದರು. ಹೀಗೆ **ವೈಷ್ಣವ, ಶೈವ, ಶಾಕ್ತ, ಸೌರ**–ಮುಂತಾದವರೆಲ್ಲರನ್ನೂ ವಶಗೊಳಿಸಿಕೊಂಡು **ಉಜ್ಜಯಿನಿ**ಗೆ ಹೋದರು. ಅಲ್ಲಿ ಭೇದಾಭೇದವಾದಿಯಾದ **ಭಟ್ಟಭಾಸ್ಕರ**ನನ್ನು ವಾದದಲ್ಲಿ ಜಯಿಸಿ **ಬಾಣ, ಮಯೂರ, ದಂಡಿ**–ಮುಂತಾದವರನ್ನು ಜಯಿಸಿದರು (ಮಾ.ಶಂ. ೧೭–೭೩ರ-ದ ೧೪೧).

(೧) ಈಗ ಈ ಹೇಳಿಕೆಯನ್ನು ವಿಮರ್ಶಿಸಬಹುದು ; ದ್ವಾರಕೆಯಲ್ಲಿ ಆಚಾರ್ಯರು ಮಠವನ್ನು ಸ್ಥಾಪಿಸಿದರೆಂದೇನೂ ಮಾಧವನು ಬರೆದಿಲ್ಲ ; ಶೃಂಗೇರಿಯ ವಿಷಯದಲ್ಲಿ ಆತನು ಮಠವನ್ನು ಪ್ರಸ್ತಾಪಿಸಿಲ್ಲವೆಂದು ಆಗಲೆ ಹೇಳಿದೇವೆ. ಚಿದ್ವಿಲಾಸರು ಅಲ್ಲಿ ಆಚಾರ್ಯರು ಒಂದು ಮಠವನ್ನು ಸ್ಥಾಪಿಸಿ **ಹಸ್ತಾಮಲಕ**ರನ್ನು ಅಧ್ಯಕ್ಷರನ್ನಾಗಿ ಮಾಡಿದರೆಂದು ಬರೆದಿದಾರೆ (ಚಿ. ಶಂ. ೩೧–೫). ಆವರು ಶೃಂಗೇರಿಯ ಪೀಠದಲ್ಲಿ ಸುರೇಶ್ವರಾಚಾರ್ಯರನ್ನು ನಿಲ್ಲಿಸಿದ್ದರೆಂದೂ ಚಿದ್ವಿಲಾಸರ ಹೇಳಿಕೆ (ಚಿ. ಶಂ. ೨೪–೩೩).

ಚಿದ್ವಿಲಾಸರು ರಾಮೇಶ್ವರದಿಂದ ಆಚಾರ್ಯರು **ವಕ್ಕಲಿಂಡಪುರಿ**ಗೆ ಬಂದು ಗಾಣಾಪತ್ಯರನ್ನು ಜಯಿಸಿದರೆಂದು ಬರೆದಿದಾರೆ (ಚಿ. ಶಂ. ೨೪). ಆಲ್ಲಿಂದ **ಮಧುರೆ**ಗೆ ಹೋಗಿ ಮೀನಾಕ್ಷೀಸುಂದರೇಶರ ದರ್ಶನವನ್ನು ಆಚಾರ್ಯರು ಮಾಡಿದರೆಂದು ಅವರ ಮತ (ಚಿ. ಶಂ. ೨೪–೨೧, ೨೨). ಆಲ್ಲಿಂದ ಮುಂದಕ್ಕೆ ಅನಂತಶಯನಕ್ಕೆ ಹೋದರೆಂದೂ ಆಲ್ಲಿ ಭಕ್ತ, ಭಾಗವತ, ವೈಷ್ಣವ, ಪಾಂಚರಾತ್ರ ವೈಖಾನಸ ಮತ್ತು ಕರ್ಮಹೀನ– ಎಂಬ ಪ್ರಭೇದವುಳ್ಳ ವೈಷ್ಣವರನ್ನು ಜಯಿಸಿದರೆಂದೂ **ಆನಂದಗಿರಿಯು** (ಪ್ರ. ೬ರಿಂದ ೧೦) ಹೇಳಿದಂತೆಯೇ ಚಿದ್ವಿಲಾಸರೂ

(ಚಿ. ಶಂ. ೨೪–೩೦ರಿಂದ ೪೯) ಹೇಳಿರುತ್ತಾರೆ.[1] ಮುಂದೆ **ವಾಸುಕಿಕ್ಷೇತ್ರ**ದಲ್ಲಿ **ಕಾರ್ತಿಕೇಯ**ನನ್ನು ಅರ್ಚನವಮಾಡಿದರಂತೆ (ಚಿ. ಶಂ. ೨೯–೫೫). **ಆಮೇಲೆ ಮೃಡಪುರಿ**ಯಲ್ಲಿ ಬೌದ್ಧರನ್ನು ವಾದದಲ್ಲಿ ಜಯಿಸಿದರಂತೆ(ಚಿ ಶಂ. ೩೯–೯೦ರಿಂದ ೨೯). ಅಲ್ಲಿಂದ ಮುಂದಕ್ಕೆ **ಗೋಕರ್ಣ**ಕ್ಕೆ ಬಂದರು. ಮುಂದಕ್ಕೆ **ಶ್ರೀಶೈಲ**ಕ್ಕೆ ಬಂದರು. ಜೋಗುಳಾಂಬಾ, ಬಗಳಾಂಬಾ, ಜ್ವಾಲಾಮುಖೀ, ನೃಸಿಂಹೇಶ, ಪಾಂಡುರಂಗೇಶ– ಇವರ ದರ್ಶನವಾದಮೇಲೆ **ಜಗನ್ನಾಥ**ಕ್ಕೆ ಬಂದರು. ಅಲ್ಲೊಂದು **ಮಠವನ್ನು ಮಾಡಿ ಪದ್ಮಪಾದರನ್ನು** ಪೀಠಾಧಿಪತಿಗಳನ್ನಾಗಿ ಮಾಡಿದರು (ಚಿ. ಶಂ. ೩೦–೧೦, ೧೧). ಹಸ್ತಾಮಲಕತೋಟಕರೊಡನೆ **ಉಜ್ಜಯಿನಿ**ಗೆ ಬಂದರು. ಅಲ್ಲಿ ಮಹಾಕಾಲೇಶ್ವರನ ದರ್ಶನವನ್ನು ಮಾಡಿಕೊಂಡು ಅಲ್ಲಿ **ಶಾಕ್ತಮಾರ್ಗದವರ**ನ್ನು ವಾದದಲ್ಲಿ ಜಯಿಸಿ ಅದ್ವೈತಿಗಳನ್ನಾಗಿ ಮಾಡಿದರು. ಅಲ್ಲಿಂದ ಕ್ರಮದಿಂದ **ದ್ವಾರ**ಗೆ **ಬಂದರು.** ಅಲ್ಲಿ ಒಂದು ಮಠವನ್ನು ಸ್ಥಾಪಿಸಿ **ಹಸ್ತಾಮಲಕರ**ನ್ನು ಪೀಠದಲ್ಲಿ ನಿಲ್ಲಿಸಿದರು (ಚಿ. ಶಂ. ೩೯–೧೫ರಿಂದ ೫೫, ೩೧–೩೮ರಿಂದ ೬).[2]

(೨) ಚಿದ್ವಿಲಾಸರು ಕೊಟ್ಟಿರುವ ಈ ದಿಗ್ವಿಜಯವನ್ನು ಹೋಲಿಸಿದರೆ ನಮಗೆ ತಿಳಿಯಬರುವದೇನೆಂದರೆ : ಚಿದ್ವಿಲಾಸರ ಕ್ರಮದಲ್ಲಿ ಆಚಾರ್ಯರು ಉಜ್ಜಯಿನಿಯಿಂದ ದ್ವಾರಕೆಗೆ ಹೋದರು ; ಮಾಧವೀಯದಲ್ಲಿ ಮೊದಲು ದ್ವಾರಕೆಗೆ ಹೋಗಿ ಈ ಬಳಿಕ ಉಜ್ಜಯಿನಿಗೆ ಬಂದರು. ಚಿದ್ವಿಲಾಸರು ಉಜ್ಜಯಿನಿಯಲ್ಲಿ ಆಚಾರ್ಯರು ಶಾಕ್ತರನ್ನು ಜಯಿಸಿದರೆಂದು ಹೇಳುತ್ತಾರೆ ; ಮಾಧವನು ಶಾಕ್ತರನ್ನು ಸೇತುವಿನಲ್ಲಿ ಜಯಿಸಿದಂತೆ ಹೇಳಿ ಉಜ್ಜಯಿನಿಯಲ್ಲಿ ಭಟ್ಟಭಾಸ್ಕರರನ್ನು ಜಯಿಸಿದರೆಂದು ಹೇಳಿದಾನೆ. ಆನಂದಗಿರಿಯು ಇಲ್ಲಿ ಕಾಪಾಲಿಕರನ್ನು ಆಚಾರ್ಯರು ಗೆದ್ದರೆಂದು ಹೇಳಿದಾನೆ (ಪ್ರ. ೨೩); ಆದರೆ ಚಿದ್ವಿಲಾಸರು ರಾಮೇಶ್ವರದಲ್ಲಿ ಕಾಪಾಲಿಕರನ್ನು ಆಚಾರ್ಯರಿಂದ ಜಿತರನ್ನಾಗಿ ಮಾಡಿ (ಖಂ. ೧೩೩) ಇಲ್ಲಿಗೆ ಶಾಕ್ತೇಯರನ್ನು ವರ್ಗಾಯಿಸಿದಾರೆ ! ಚಿದ್ವಿಲಾಸರು ಕಾಪಾಲಿಕರ ವೃತ್ತಾಂತವನ್ನು ಬಹುಮಟ್ಟಿಗೆ ಆನಂದಗಿರಿಯನ್ನೇ ಅನುಸರಿಸಿ ಬರೆದಿರುತ್ತಾರೆಂಬುದನ್ನು ನಾವು ಲಕ್ಷಿಸಬಹುದಾಗಿದೆ.

1. ಚಿದ್ವಿಲಾಸರು ಅದ್ವೈತಿಗಳಾದರೂ ತಮ್ಮ ವಾದದಲ್ಲಿ ಶಿವಪಾರಮ್ಯವನ್ನೇ ಮುಖ್ಯವಾಗಿ ಎತ್ತಿಹಿಡಿದಿದಾರೆ. ಇದರಿಂದ ಅವರ ಗ್ರಂಥದ ಕಾಲದ ವಿಷಯಕ್ಕೆ ಏನಾದರೂ ಸಾಧನವು ಹೊರಕಬಹುದೆಂದು ಇಲ್ಲಿ ಅದನ್ನು ಸೂಚಿಸಿರುತ್ತೇವೆ.

2. ಆನಂದಗಿರೀಯದಲ್ಲಿ ಪ್ರ. ೫೫ರಲ್ಲಿ ದ್ವಾರಕೆಯ ಪರಾಮರ್ಶವಿದೆ. 'ದ್ವಾರಕಾದಿದಿವ್ಯಸ್ಥಲವಿಲೋಕನವಶಾತ್' ಎಂದಿಷ್ಟೇ(ಪು. ೨೧೦) ಇದೆ. ಅಲ್ಲಿ ಮಠದ ಪರಾಮರ್ಶವಿಲ್ಲ.

(೩) ದ್ವಾರಕೆಗೆ ಹೋಗುವಾಗ ನರ್ಮದೆಯನ್ನು ದಾಟಬೇಕಾಗಿತ್ತು. ಅಲ್ಲಿದೆ ಆಚಾರ್ಯರು ಹೋದಾಗ ಗೋವಿಂದಭಗವತ್ಪಾದರು ಅವರಿಗೆ ಸಿಕ್ಕಿದರೆ, ಇಲ್ಲವೆ? ಅಥವಾ ಆಗಲಿ ಅವರು ಸಿದ್ಧಿಯನ್ನು ಹೊಂದಿದ್ದರೆ?—ಇದನ್ನು ಯಾರೂ ತಿಳಿಸಿಲ್ಲ.

(೪) ಪಾಂಚರಾತ್ರರನ್ನು ಜಯಿಸಿದ ಕಥೆ ಚಿದ್ವಿಲಾಸೀಯದಲ್ಲಿ (ಚಿ. ಶಂ ೨೮) ಆಗಲಿ ಬಂದುಬಿಟ್ಟಿರುವದರಿಂದಲೊ, ಏನೊ, ದ್ವಾರಕೆಯಲ್ಲಿ ಅವರ ಪರಾಮರ್ಶವನ್ನು ಮಾಡಿಲ್ಲ ಮಾಧವನು ಕಂಠೋಕ್ತನಾಗಿ ಅವರನ್ನು ಅಲ್ಲಿ ಆಚಾರ್ಯರು ಜಯಿಸಿದ ವೃತ್ತಾಂತವನ್ನು ವಿವರಿಸಿ ಬರೆದಿರುತ್ತಾನೆ. ದ್ವಾರಕೆಯು ಶ್ರೀಕೃಷ್ಣನ ಸ್ಥಾನವಾದ್ದರಿಂದ ಅಲ್ಲಿ ಪಾಂಚರಾತ್ರರು ಇದ್ದಿರಬಹುದೆಂದು ಊಹಿಸಬಹುದು. ಆದರೆ 'ಶತಶಃ ಸಮುವೇತ್ಯ ಪಾಞ್ಚರಾತ್ರಾಸ್ತ್ವ ಮೃತಂ ಪಞ್ಚಭಿದಾಂ ವದನ್ತಃ' (ಮಾ. ಶಂ. ೧೫–೭೫) ಪಂಚಭೇದವನ್ನು ಹೇಳುವ ಪಾಂಚರಾತ್ರರು ಆಚಾರ್ಯರಿಂದ ಭಗ್ನರಾದರು ಎಂಬುದು ಮಾತ್ರ ವಸ್ತುಸ್ಥಿಗೆ ಹೊಂದುವಂತಿಲ್ಲ. ಏಕೆಂದರೆ ಭಾರತದಲ್ಲಿರುವ ನಾರಾಯಣೀಯದಲ್ಲಿರುವ ಪಾಂಚರಾತ್ರಮತದ ವರ್ಣನೆಯಲ್ಲಿ ಪಂಚಭೇದದ ಪರಾಮರ್ಶವಿಲ್ಲ. ಅಲ್ಲಿ 'ನಿರ್ಗುಣಾ ನಿರ್ಗುಣಾ ಭೂತ್ವಾ. ಪ್ರವಿಶನ್ತಿ ಸನಾತನಮ್' (೫೫೦–೭೨) ಎಂದಿದೆ. ಭಕ್ತರು ನಿರ್ಗುಣರಾಗಿ ನಿರ್ಗುಣನಾದ ಭಗವಂತನನ್ನೇ ಸೇರಿಕೊಳ್ಳುತ್ತಾರೆ– ಎಂದು ಸ್ಪಷ್ಟವಾಗಿ ಹೇಳಿರುವ ಮತವು 'ಪಂಚಭೇದಮತ'ವಾಗಲಾರದಷ್ಟೆ? ಶ್ರೀಶಂಕರಭಗವತ್ಪಾದರವರು ಸೂತ್ರಭಾಷ್ಯದಲ್ಲಿ ಭಾಗವತಮತವನ್ನು ಅನುವಾದಮಾಡುವಾಗಲೂ ಭಗವಂತನಾದ ವಾಸುದೇವನೇ, ಪರಮಾರ್ಥತತ್ತ್ವವು; ಯಾವಜ್ಜೀವವೂ ಆತನನ್ನು ಆರಾಧನೆಮಾಡಿದವರು ಆತನ ಸಾಯುಜ್ಯವನ್ನು ಹೊಂದುತ್ತಾರೆ ಎಂದೇ ಹೇಳಿದೆ. ಆದ್ದರಿಂದ ಪಂಚಭೇದಗಳನ್ನು ಒಪ್ಪುವ ಪಾಂಚರಾತ್ರರು ತಲೆದೋರಿಕೊಂಡಮೇಲೆಯೇ ಮಾಧವೀಯಶಂಕರ ವಿಜಯವು ಉತ್ಪನ್ನವಾಗಿರಬೇಕೆಂದು ಇದರಿಂದ ಸಿದ್ಧವಾಗುತ್ತದೆ. ಅನಂತಾನಂದಗಿರಿಯು ಉದಾಹರಿಸಿರುವ 'ಭಕ್ತಾ ಭಾಗವತಾಶ್ಚೈವ ವೈಷ್ಣವಾಚಾರ ಚಕ್ರಿಣಃ। ವೈಖಾನಸಾಃ ಕರ್ಮಹೀನಾಃ ಷಡ್ವಿಧಾಶ್ಚೈನ ವೈಷ್ಣವಾಃ ॥' (ಪ್ರ. ೬. ಪು. ೪೫ ; (ದೇ. ಪು. ೪೭) ಎಂಬ ಶ್ಲೋಕದ ಅರ್ಥವನ್ನು ಚಿದ್ವಿಲಾಸರೂ ಅನುವಾದ ಮಾಡಿಕೊಂಡಿರುವದರಿಂದ ಇವರಿಬ್ಬರೂ ಭಾಗವತಮತದಲ್ಲಿ ಒಳಪಂಗಡಗಳು ಒಡೆದುಕೊಂಡಮೇಲೆಯೇ ತಮ್ಮ ಶಂಕರವಿಜಯಗಳನ್ನು ಬರೆದರೆಂಬುದು ಸ್ಪಷ್ಟ.

(೫) ಉಜ್ಜಯಿನಿಯಲ್ಲಿ ಆಚಾರ್ಯರು ಭಟ್ಟಭಾಸ್ಕರನನ್ನು ಜಯಿಸಿದ ರೆಂಬ ಕಥೆಯು ನೀಲಕಂಠಾಚಾರ್ಯನನ್ನು ಜಯಿಸಿದರೆಂಬುದರ ಜಾತಿಗೇ ಸೇರ

ತಕ್ಕದ್ದಾಗಿದೆ. ಏಕೆಂದರೆ ವೇದಭಾಷ್ಯಕರ್ತನಾದ ಭಟ್ಟಭಾಸ್ಕರನು ಭೇದಾಭೇದ ವಾದಿಯಾದ ಭಾಸ್ಕರಾಚಾರ್ಯನಿಗಿಂತ ಬೇರೆಯೆಂಬುದೇ ಕವಿಗೆ ತಿಳಿದಿಲ್ಲ. ಭಾಸ್ಕರಾಚಾರ್ಯನು ಆಚಾರ್ಯರಿಗಿಂತ ಈಚಿನವನಾದ್ದರಿಂದ ಆವರ ಭಾಷ್ಯ ವನ್ನಲ್ಲದೆ ಪಂಚಪಾದಿಕೆಯನ್ನೂ ಅಲ್ಲಲ್ಲಿ ಖಂಡಿಸಿರುತ್ತಾನೆ. ಈ ಭಾಸ್ಕರಾ ಚಾರ್ಯನ ಅಭಿಪ್ರಾಯಗಳ ಖಂಡನೆಯು ಸೂತ್ರಭಾಷ್ಯಟೀಕೆಯಾದ ಭಾಮತಿ ಯಲ್ಲಿ ಕಂಡುಬರುತ್ತಿರುವರಿಂದ ಈತನು ಆಚಾರ್ಯರಿಗೂ ಭಾಮತೀಕಾಂನಾದ ವಾಚಸ್ಪತಿಮಿಶ್ರನಿಗೂ ನಡುವಣ ಕಾಲದಲ್ಲಿ ಇದ್ದಿರಬೇಕೆಂದಾಗುತ್ತದೆ. ಹೀಗಿರು ವಲ್ಲಿ ಈತನೊಡನೆ ಆಚಾರ್ಯರಿಗೆ ವಾದವಾಯಿತೆಂಬುದು ಹೇಗೆ ವಿಶ್ವಸನೀಯ ವಾದೀತು ? ಹೀಗೆ ಅವಿಶ್ವಸನೀಯವಾದ ಘಟನೆಗಳೆಂಬುದರ ಕಾರಣದಿಂದಲೇ ಸಾವು ನೀಲಕಂಠನ ಅಥವಾ ಭಾಸ್ಕರಾಚಾರ್ಯನ ಪೂರ್ವಪಕ್ಷಗಳೆಂದು ಮಾಧ ವನು ವರ್ಣಿಸಿರುವ ಯುಕ್ತಿಗಳನ್ನಾಗಲಿ ಅವಕ್ಕೆ ಆಚಾರ್ಯರು ಹೇಳಿದರೆಂದು ಕಲ್ಪಿಸಿರುವ ಪ್ರತ್ಯುತ್ತರಗಳನ್ನಾಗಲಿ ಇಲ್ಲಿ ವಿವರಿಸಿಲ್ಲ.

(ಜ) ಬಾಣ ಮಯೂರ, ದಂಡಿ–ಇವರೆಲ್ಲ ಆಚಾರ್ಯರ ಸಮಕಾಲಿಕ ರೆಂಬ ಕಲ್ಪತೆಯೂ (ಮಾ ಶಂ. ೧೫–೧೪೧) ಹೀಗೆಯೇ ಇತಿಹಾಸಕ್ಕೆ ವಿರುದ್ಧ ವಾಗಿರುವದರಿಂದ ಆವರ ವಿಷಯಕ್ಕೆ ಏನನ್ನೂ ಹೇಳಬೇಕಾಗಿಲ್ಲ. ಅವರಿಗೆ ಆಚಾರ್ಯರ ಭಾಷ್ಯದ ಶ್ರವಣವನ್ನು ಮಾಡಬೇಕೆಂಬ ಕುತೂಹಲವುಂಟಾಯಿತು (ನಿಜಭಾಷ್ಯಶ್ರವಣೋತ್ಸುಕಾಂಶ್ಚಕಾರ) ಎಂದು ಮಾಧವನು ಹೇಳಿರುವದಕ್ಕೆ ಯಾವ ಆಧಾರವಿದೆಯೋ ಅವನಿಗೇ ಗೊತ್ತು.

ಬಾಹ್ಲಿಕದಲ್ಲಿ ಆರ್ಹತರ ಮತ್ತು ನೈಮಿಷದಲ್ಲಿ ಇತರರ ಸೋಲು

೧೪೨. ಆಚಾರ್ಯರು ಬಾಹ್ಲಿಕದೇಶದಲ್ಲಿ ಶಿಷ್ಯರಿಗೆ ಭಾಷ್ಯವನ್ನು ಹೇಳು ತ್ತಿರುವಲ್ಲಿ ಕೆಲವರು ಆರ್ಹತರು ಅಲ್ಲಿಗೆ ಬಂದು ವಾದದಲ್ಲಿ ಜಿತರಾದರು (ಮಾ. ಶಂ. ೧೫–೧೪೨ರಿಂದ ೧೫೫) ಎಂದು ಮಾಧವೀಯ. ಉಜ್ಜಯಿನಿ ಯಿಂದ ಭಾರತದ ವಾಯುವ್ಯಭಾಗದಲ್ಲಿರುವ ಭಾಕ್ಟ್ರಿಯಕ್ಕೆ ನೇರಾಗಿ ಹೋದರೆ? –ಎಂಬುದೊಂದು ವಿಮರ್ಶನೀಯವಿಷಯ. ಆರ್ಹತಮತದ ಖಂಡನೆಯನ್ನು ಚಿದ್ವಿಲಾಸರು ಮೈಡಪುರಿಯಲ್ಲಿ ಮಾಡಿಸಿದ್ದಾರೆ. ಅಲ್ಲಿ ಆರ್ಹತರಿಗೂ ಸೌಗತ ರಿಗೂ ಭೇದವೇ ಇಲ್ಲವೆಂಬಂತೆ ಅವರು ಬರೆದಿರುವದಲ್ಲದೆ ಬೌದ್ಧರ ಅಥವಾ ಜೈನರ ನಿಜವಾದ ಯಾವ ಮತವನ್ನೂ ಅವರು ತೋರಿಸಿಲ್ಲ (ಚಿ. ಶಂ. ೨೯–೯ ರಿಂದ೨೯) ಅವರನ್ನು ಶಿಷ್ಯರ ಪಾದರಕ್ಷೆಯೇ ಮುಂತಾದದ್ದನ್ನು ನೋಡಿಕೊಂಡಿರು ವದಕ್ಕೆ ಆಚಾರ್ಯರು ನಿಯಮಿಸಿದರೆಂದು (೨೯) ಅಲ್ಲಿಹೇಳಿರುವದಂತೂ ಗರ್ಹ್ಯ

ವಾಗಿದೆ. ಪ್ರಕೃತಪಲ್ಲಿ ಮಾಧವನು ಆರ್ಹತಮತವನ್ನೇನೋ ಸರಿಯಾಗಿ ಅನುವಾದಮಾಡಿಕೊಂಡಿರುತ್ತಾನೆ ಆದರೆ ಉಪಸಂಹಾರಶ್ಲೋಕದಲ್ಲಿ

ಇತಿ ಮಾಧ್ಯಮಿಕೇಷು ಭಗ್ನದರ್ಪೋ
ಸ್ಥಾಪ್ಯ ಭಾಷ್ಯಾಣಿ ಸ ನೈಮಿಶೇ ವಿತತ್ಯ ।
ವರದಾನ್ ಭರತಾಂಶ್ಚ ಶೂರಸೇನಾನ್
ಕುರುಪಾಞ್ಚಾಲಮುಖಾನ್ ಬಹೂನಜೈಷೀತ್ ॥ (೧೫-೧೬)

'ಹೀಗೆ ಮಾಧ್ಯಮಿಕರ ಭಂಗವಾದಮೇಲೆ ಆಚಾರ್ಯರು ನೈಮಿಷದಲ್ಲಿಯೂ ಭಾಷ್ಯಗಳನ್ನು ಹರಡಿದರು. ವರದರು, ಭರತರು, ಶೂರಸೇನರು. ಕುರು ಪಂಚಾಲರು– ಮೊದಲಾದ ಅನೇಕರನ್ನು ಜಯಿಸಿದನು' ಎಂದು ಬರೆದಿರುವದು ವಿಚಿತ್ರವಾಗಿದೆ. ಏಕೆಂದರೆ ಆರ್ಹತರು ಮಾಧ್ಯಮಿಕರಲ್ಲ ; ಮಾಧ್ಯಮಿಕರೆಂದರೆ ಬೌದ್ಧರ ಶೂನ್ಯವಾದಿಗಳು (!)

'ವರದರೇ ಮೊದಲಾದವರು ಯಾರು ? ಅವರ ಮತವೇನು ?' ಎಂಬುದೇನನ್ನೂ ಹೇಳದೆ ಸುಮ್ಮನೆ 'ಬಹುಜನರನ್ನು ಜಯಿಸಿದನು' ಎಂದಿರುವದನ್ನು ನೋಡಿದರೆ ಆಚಾರ್ಯರು ಭರತಖಂಡದ ಮೂಲೆಮೂಲೆಗಳಲ್ಲಿಯೂ ಸಂಚರಿಸಿ ಎಲ್ಲರನ್ನೂ ಜಯಿಸಿದರು– ಎಂಬ ವರ್ಣನೆಯಿಲ್ಲದಿದ್ದರೆ ಕಾವ್ಯವು ಸುಂದರವಾಗಿ ತೋರಲಾರದು ಎಂಬುದೊಂದೇ ಮಾಧವನ ಉದ್ದೇಶವೆಂದು ಹೇಳಬೇಕಾಗುತ್ತದೆ. ಇದರ ಮುಂದಿರುವ

ಪಟುಯುಕ್ತಿನಿಕೃತ್ತಸರ್ವಶಾಸ್ತ್ರಂ
ಗುರುಭಟ್ಟೋದಯನಾದಿಕೈರಜಯ್ಯಮ್
ಸ ಹಿ ಖಣ್ಡನಕಾರಮೂಢದರ್ಪಂ
ಬಹುಧಾ ವ್ಯುದ್ಯ ವಶಂವದಂ ಚಕಾರ ॥ (ಮಾ. ಶಂ. ೧೫-೧೫೭)

ಎಂಬ ವಾಕ್ಯವೂ ಈ ಉದ್ದೇಶದಿಂದಲೇ ಬರೆದದ್ದಾಗಿರಬೇಕು. ಏಕೆಂದರೆ ಗುರು, ಭಟ್ಟ, ಉದಯನ– ಇವರಿಂದಲೂ ಜಯಿಸಲು ಖಂಡನಕಾರನು ಅಶಕ್ಯನಾಗಿದ್ದನು– ಎಂದು ಹೇಳುವದಕ್ಕೆ, ಮೊದಲು ಅವರೆಲ್ಲ ಸಮಕಾಲಿಕರೇ ಅಲ್ಲ. ಒಂದು ವೇಳೆ ಅವರ ಸಿದ್ಧಾಂತವನ್ನವಲಂಬಿಸಿದವರು ಅವನನ್ನು ಗೆಲ್ಲಲಾರದೆಹೋಗಿದ್ದರೆಂಬ ಅಭಿಪ್ರಾಯವನ್ನು ಈ ವಾಕ್ಯಕ್ಕೆ ಕಲ್ಪಿಸಿದರೂ ಆಚಾರ್ಯರು ಅವನೊಡನೆ 'ಬಹಳವಾಗಿ ವಾದಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು' ಎಂಬುದಂತೂ ಅಪಹಾಸ್ಯವಾದ ಮಾತು. ಏಕೆಂದರೆ ಖಂಡನಖಂಡಖಾದ್ಯದ ಕರ್ತೃವಾದ ಶ್ರೀಹರ್ಷನು ಆಚಾರ್ಯರಿಂದ ಈಚಿನವನು; ಅವರಲ್ಲಿ ಭಕ್ತಿಯುಳ್ಳವನಾಗಿದ್ದು ಅವರ ಸಿದ್ಧಾಂತವನ್ನು ಸ್ಥಾಪಿಸುವ ಒಂದಾನೊಂದು ಯುಕ್ತಿಯನ್ನು ತೋರಿಸುವದಕ್ಕೆಂದೇ ಗ್ರಂಥ

ವನ್ನು ಬರೆದಾತನು ಖಂಡನಖಂಡಖಾದ್ಯನನ್ನು ಕಣ್ಣೆತ್ತಿ ನೋಡದೆಯೇ, ಕೇಳಿಕೆಯ ಮಾತಿನ ಮೇಲೆ ಖಂಡನಕಾರನನ್ನು ಆಚಾರ್ಯರು ಜಯಿಸಿದರೆಂದು ಬರೆದಿರುವ ಈ ಮಾಧವನು ವಿದ್ಯಾರಣ್ಯರಾಗಿರಲಾರನೆಂಬುದಕ್ಕೆ ಇದೊಂದು ಬಲವಾದ ಪ್ರಮಾಣವಾಗಿದೆ.

ಕಾಮರೂಪದಲ್ಲಿ ಅಭಿನವಗುಪ್ತ

೧೪೩. ಆಮೇಲೆ ಆಚಾರ್ಯರು ಕಾಮರೂಪದೇಶಕ್ಕೆ ಹೋದರು. ಅಭಿನವಗುಪ್ತನೆಂಬ ಶಾಕ್ತಭಾಷ್ಯಕಾರನನ್ನು ಜಯಿಸಿದರು. ಇವರನ್ನು ಮತ್ತೆ ಹೇಗೂ ಗೆಲ್ಲುವದು ಅಸಾಧ್ಯವೆಂದು ತಿಳಿದ ಅತನು ಹೊರಗೆ ನೋಡುವದಕ್ಕೆ ಆಚಾರ್ಯರ ಶಿಷ್ಯನಂತೆಯೇ ನಟಿಸುತ್ತಿದ್ದನು. ವಿದೇಹ, ಕೋಸಲ, ಅಂಗ, ವಂಗ– ಇವುಗಳಲ್ಲೆಲ್ಲ ಆಚಾರ್ಯರ ಯಶಸ್ಸು ಹರಡಿತು. ಆಮೇಲೆ ಅವರು ಮುರಾರಿಮಿಶ್ರ, ಉದಯನ, ಧರ್ಮಗುಪ್ತ–ಇವರನ್ನು ಗೆದ್ದು ಗೌಡದೇಶ ದಲ್ಲಿಯೂ ತಮ್ಮ ಕೀರ್ತಿಯನ್ನು ಹಬ್ಬಿಸಿದರು. ಈ ರೀತಿಯಲ್ಲಿ ಸಕಲದಿಕ್ಕು ಗಳಲ್ಲಿಯೂ ವೈಭವಾರ್ತೆಯು ಇಲ್ಲದಂತೆ ಮಾಡಿ ಸರ್ವಸಂಶಯಗಳನ್ನೂ ನಿವೃತ್ತಿ ಮಾಡುತ್ತಾ ಇರುತ್ತಿದ್ದರು (ಮಾ. ಶಂ. ೧೫–೧೫೮ರಿಂದ ಸರ್ಗಾಂತ್ಯವನರೆಗಿನ ಸಾರ).

ಆಚಾರ್ಯರು ಎಲ್ಲರನ್ನೂ ಜಯಿಸಿದರೆಂದು ತಿಳಿಸುವದೇ ಗ್ರಂಥಕರ್ತೃವಿನ ಉದ್ದೇಶವೆಂಬುದು ಸ್ಪಷ್ಟ. ಆದ್ದರಿಂದ ಅತನು ಆಚಾರ್ಯರ ಕಾಲಕ್ಕೆ ಇದ್ದವರು, ಇಲ್ಲದಿದ್ದವರು–ಎಂಬ ವಿವೇಚನೆಯಿಲ್ಲದೆ, ಎಲ್ಲರನ್ನೂ ಸೇರಿಸುತ್ತಾ ಬಂದಿರುತ್ತಾನೆ. ಕಾಮರೂಪವೆಂಬುದು ಅಸ್ಸಾಮಿನ ಮುಖ್ಯನಗರ ; ಅಲ್ಲಿ ತಾಂತ್ರಿಕರಿರುವದು ನಿಜವಾದರೂ ಅಭಿನವಗುಪ್ತನು ಆ ದೇಶದವನಲ್ಲ. ಅವನು ಕಾಶ್ಮೀರದೇಶದಲ್ಲಿ ಪ್ರತ್ಯಭಿಜ್ಞಾದರ್ಶನದ ಗ್ರಂಥಗಳನ್ನು ಬರೆದ ಒಬ್ಬ ಸುಪ್ರಸಿದ್ಧನಾದ ಆಚಾರ್ಯನು. ತಂತ್ರಾಲೋಕ, ಈಶ್ವರಪ್ರತ್ಯಭಿಜ್ಞಾವಿಮರ್ಶಿನೀ, ಪರಮಾರ್ಥ ಸಾರ–ಮುಂತಾದ ಅನೇಕ ಗ್ರಂಥಗಳನ್ನು ಬರೆದು ಸುಪ್ರಸಿದ್ಧನಾಗಿರುವ ಪ್ರಖ್ಯಾತ ಶೈವಾಚಾರ್ಯನನ್ನು ಇದುವರೆಗೂ ಯಾರ ಕೈಗೂ ಸಿಕ್ಕದೆ ಇರುವ 'ಶಾಕ್ತಭಾಷ್ಯ' ವನ್ನು ಬರೆದವನೆಂದು ಹೇಳಿರುವದೂ ಆಚಾರ್ಯರಿಂದ ನಾಲ್ಕೈದು ಶತಮಾನ ಗಳಷ್ಟು ಈಚೆಗೆ ಇದ್ದ ಅವನನ್ನು ಆಚಾರ್ಯರ ಸಮಕಾಲಿಕನನ್ನಾಗಿ ಮಾಡಿರು ವದೂ– ಈ ಕವಿಯ ಸಾಹಸ !

ದಿಗ್ವಿಜಯದ ಉಪಸಂಹಾರ

೧೪೪. ಆಚಾರ್ಯರು ಸರ್ವದಿಕ್ಕುಗಳಲ್ಲಿಯೂ ಸರ್ವಮತಪ್ರವರ್ತಕರು ಗಳನ್ನೂ ಅಥವಾ ಸರ್ವಮತಗಳ ಅನುಯಾಯಿಗಳನ್ನೂ ಗೆದ್ದರೆಂದು ಜಯಭೇರಿ

ಯನ್ನು ಹೊಡೆಯುವದೇ ಶಂಕರವಿಜಯಕಾರರುಗಳ ಹೆಗ್ಗುರಿಯಾದ್ದರಿಂದ ಕಾಲ್ಪನಿಕವಾದ ಎಷ್ಟೋ ಸ್ಥಳಗಳನ್ನು ಆಸರು ಸಂಚರಿಸಿದಂತೆಯೂ ಅಸಮಕಾಲಿಕರಾದ ಎಷ್ಟೋ ವಾದಿಗಳನ್ನು ಜಯಿಸಿದಂತೆಯೂ ಕಲ್ಪಿಸಿರುವದು ಸ್ವಾಭಾವಿಕವಾಗಿದೆ. ಈವರೆಗೆ ನಾವು ಮುಖ್ಯವಾಗಿ ಮಾಧವೀಯಾನುಸಾರವಾಗಿಯೇ ಆಚಾರ್ಯರು ಸಂದರ್ಶಿಸಿದ ಸ್ಥಳಗಳನ್ನೂ ವಾದದಲ್ಲಿ ಸೋಲಿಸಿದ ಇತರಮತೀಯರನ್ನೂ ವಿವರಿಸುತ್ತಾ ಬಂದಿರುವದು ಪ್ರತಿಪಾದನೆಯ ಸೌಕರ್ಯಕ್ಕಾಗಿ ಮಾತ್ರ.

ಚಿದ್ವಿಲಾಸೀಯೆಪ ಮತ್ತು ಆನಂದಗಿರೀಯೆ ದಿಗ್ವಿಜಯಕ್ರಮವನ್ನು ಸ್ವಲ್ಪಮಟ್ಟಿಗೆ ಹಿಂದೆ ತಿಳಿಸಿರುತ್ತೇವೆ (ಪು. ೨೪೬, ೨೪೮, ೨೫೧, ೨೫೫, ೨೫೭, ೨೫೮). ಆ ವಿವರದಲ್ಲಿ ಚಿದಂಬರದಲ್ಲಿ ಸೌರಮತವನ್ನು ಖಂಡಿಸಿದ್ದು (ಚೆ.೨೬–೧೧ರಿಂದ೨೮), **ಮಧ್ಯಾರ್ಜುನ**ದಲ್ಲಿ, ದೇವಿ, ಗಣಪತಿ, ಶಿವ, ಸೂರ್ಯ ವಿಷ್ಣು–ಈ ದೇವತೆಗಳ ಆರ್ಚಕರನ್ನು ಆದ್ವೈತಿಗಳಾಗಿ ಪರಿವರ್ತಿಸಿದ್ದು, ರಾಮೇಶ್ವರನಿಗೆ ಗಂಗಾಭಿಷೇಕವನ್ನು ಮಾಡಿಸಿದ್ದು, **ವಿಷ್ಣುಶರ್ಮ, ಪದ್ಮನಾಭ, ಕೃಷ್ಣದ್ವೈಪಾಯನ, ವ್ಯಾಸದಾಸ, ವರಾಹಾಚಾರ್ಯ**–ಮುಂತಾದ ವೈಷ್ಣವರನ್ನೂ ಉಜ್ಜಯಿನಿಯಲ್ಲಿ '**ತ್ರಿಪುರಾಂಬಾಕುಮಾರ**', '**ಬಿಂದುಭುಕ್**' **ಪೂರ್ಣಬೋಧಕ, ಪೂರ್ಣಾನಂದ, ವೀರಶಾಕ್ತ, ಶುದ್ಧವಿದ್ಯಾಕಲಾನಿಧಿ**–ಎಂಬ ಶಾಕ್ತರನ್ನು ಜಯಿಸಿದ್ದು–ಇಂಥ ವಿವರಗಳನ್ನು ನಾವು ಅಲ್ಲಿ ಬಿಟ್ಟುಬಿಟ್ಟಿರುತ್ತೇವೆ. ಆಚಾರ್ಯರು ದ್ವಾರವತಿಯನ್ನು ಬಿಟ್ಟಮೇಲೆ **ಮಧುರೆ, ಗೋಕುಲ ಪೌಂಡರೀಕಕ್ಷೇತ್ರ, ಕುರುಕ್ಷೇತ್ರ**–ಇವುಗಳನ್ನು ನೋಡಿದರು–ಎಂದಿದೆ.

ಈ ದಿಗ್ವಿಜಯವಿವರಣೆಯಲ್ಲಿ ಕಾಣುವ ಮುಖ್ಯವಿಷಯಗಳೇನೆಂದರೆ : (೧) ಮುಖ್ಯವಾಗಿ ಆಚಾರ್ಯರು ತೀರ್ಥಯಾತ್ರಾಕ್ರಮದಿಂದಲೇ ಸಂಚರಿಸಿದರು. (೨) ಅಷ್ಟಪೀಠಗಳಲ್ಲಿಯೂ ಮಠಸ್ಥಾಪನೆಯಾಯಿತೆಂದು ಹೇಳುವ **ಮಠಾಮ್ನಾಯ**ಗಳು ಪ್ರಚಾರದಲ್ಲಿದ್ದಂತೆ ಕಾಣುತ್ತದೆ. (೩) ಶರೀರಗಳನ್ನು ತಪ್ತಲೋಹಗಳಿಂದ ಸುಟ್ಟುಕೊಳ್ಳುತ್ತಿದ್ದವರನ್ನು ಆ ಆಚಾರಗಳಿಂದ ತಪ್ಪಿಸಿ ಶುದ್ಧವೈದಿಕಮಾರ್ಗಕ್ಕೆ ತಿರುಗಿಸಿದ್ದು ಆಚಾರ್ಯರ ಒಂದು ಮುಖ್ಯಕಾರ್ಯಕ್ರಮ. (೪) ಇತರ ಮತದ್ವೇಷವು ಕಾಣದಿದ್ದರೂ ಚಿದ್ವಿಲಾಸರಲ್ಲಿ ಶಿವಾದ್ವೈತದಲ್ಲಿ ಅಭಿಮಾನವು ಹೆಚ್ಚು.

ಅನಂತಾನಂದಗಿರಿಯು ವಿವರಿಸುವ ಎಷ್ಟೋ ಹೆಸರುಗಳನ್ನು ಚಿದ್ವಿಲಾಸರು ಆರಿಸಿಕೊಂಡಿರುತ್ತಾರೆಂದು ಕಾಣಬರುತ್ತದೆ. ಕಲ್ಪನಾಕುಶಲನಾದ **ಆತನು** ಶೈದರು, ಶಿವಮೈತೈಕದೇಶಿ, ವೈಷ್ಣವ, ಪಾಂಚರಾತ್ರ, ವೈಖಾನಸ, ಕರ್ಮಹೀನ–ಇವರನ್ನೂ ವೈಷ್ಣವ, ಹೈರಣ್ಯಗರ್ಭ, ಸೌರ, ಅಗ್ನಿವಾದಿ, ಮಹತ

ಗಣಪತಿ, ಹರಿದ್ರಾಗಣಪತಿ, ಉಚ್ಛಿಷ್ಟಗಣಪತಿ, ನವನೀತಸ್ವರ್ಣಸಂತಾನಗಣಪತಿ –ಎಂಬ ಗಣಪತ್ಯಾರಾಧಕರನ್ನೂ ಶಕ್ತಿ, ಮಹಾಲಕ್ಷ್ಮಿ, ವಾಗ್ದೇವತಾ, ವಾಮಾಚಾರ–ಮುಂತಾದ ಶಾಕ್ತೇಯರನ್ನೂ ಕಾಪಾಲಿಕ, ಚಾರ್ವಾಕ, ಸೌಗತ, ಜೈನ, ಬೌದ್ಧ, ಮಲ್ಲಾರಿ, ವಿಷ್ವಕ್ಸೇನ, ಮನ್ಮಥ, ಕುಬೇರ, ಯಮ, ವರುಣ, ಶೂನ್ಯ, ವರಾಹ, ಲೋಕ, ಗುಣ, ಸಾಂಖ್ಯ, ಯೋಗ, ಅಣು, ಚಂದ್ರ, ಘೌಮ, ಕ್ಷಪಣಕ, ಪಿತೃ, ಶೇಷಗರುಡ, ಸಿದ್ಧ, ಗಾಂಧರ್ವ, ಭೂತ, ಭೇತಾಳ–ಎಂಬ ಮತಗಳನ್ನೂ ಆಚಾರ್ಯರು ಗೆದ್ದಂತೆ ಬರೆದಿರುತ್ತಾನೆ! ಇವುಗಳ ಹೆಸರುಗಳು ಕೆಲವು ಪರ್ಯಾಯನಾಗಿವೆ. ಆಚಾರ್ಯರ ಕಾಲಕ್ಕೆ ವಿವಿಧಮತಗಳೂ ಆಚಾರಗಳೂ ಲೋಕದಲ್ಲಿ ಹರಡಿಕೊಂಡಿದ್ದವೆಂದು ತಿಳಿಸುವದಕ್ಕೆ ಇವುಗಳಲ್ಲಿ ಕೆಲವನ್ನು ಗ್ರಂಥಕರ್ತನು ತಾನೇ ಕಲ್ಪಿಸಿಕೊಂಡಿದಾನೆಂದರೂ ಸಲ್ಲುವಂತಿದೆ.

ಷಣ್ಮತಸ್ಥಾಪನೆ :

೧೪೫. ಆಚಾರ್ಯರು **ಮಾಯಾಪುರಿಯಲ್ಲಿದ್ದಾಗ, ಪರವಾದಿದವಾನಲ, ವಟುಕನಾಥ, ಮಹಾಧುಂಡಿಗಣೇಶ್ವರ,** ದಿವಾಕರಾಚಾರ್ಯ, ಬಿಂದು ಮಾಧವ–ಇವರೆಲ್ಲರೂ ಗುರುಗಳನ್ನು ನಮಸ್ಕರಿಸಿ 'ತಾವು ಆದ್ವೈತವೇ ವೇದ ವೇದಾಂತಸಂಮತವು, ಮಿಕ್ಕದ್ದೆಲ್ಲವೂ ಅಸಾರವು–ಎಂದು ಸಾಧಿಸಿಬಿಟ್ಟಿರುತ್ತೀರಿ ; ಆದರೆ ಕಲಿಯುಗದಲ್ಲಿ ಮಲಿನಬುದ್ಧಿಯುಳ್ಳ ಜನರಿಗೆ ಹೇಗೆತಾನೆ ಆದ್ವೈತದಲ್ಲಿ ಪ್ರವೇಶವಾದೀತು ? ಆದ್ದರಿಂದ ಶೈವ, ಶಾಕ್ತ, ವೈಷ್ಣವ, ಸೌರ, ಗಾಣಾಪತ್ಯ, ಕಾಪಾಲ–ಎಂಬ ಆರು ಮತಗಳನ್ನು ತಾವು ಪ್ರಖ್ಯಾತಿಗೆ ತರಬೇಕು' – ಎಂದು ಬೇಡಿಕೊಂಡರು. ಆಚಾರ್ಯರು ನಿಮಗೆ ಯಾರುಯಾರಿಗೆ ಯಾವ ಯಾವ ಮತದಲ್ಲಿ ಅಭಿಲಾಷೆಯಿರುತ್ತದೆಯೋ, ಆಯಾ ಮತವನ್ನು ಪ್ರತಿಪಾದಿಸಿರಿ ; ಶರೀರಕ್ಕೆ ಅಂಕನವನ್ನು ಮಾಡಿಕೊಳ್ಳುವದು, ತಪ್ತಲೋಹಗಳಿಂದ ಶರೀರವನ್ನು ಸುಟ್ಟುಕೊಳ್ಳುವದು– ಇಂಥ ಶ್ರುತಿಸ್ಮೃತಿವಿರುದ್ಧವಾದ ಆಚಾರಗಳನ್ನು ಬಿಟ್ಟು **ಷಣ್ಮತವನ್ನು** ಪ್ರಕಾಶಗೊಳಿಸಿರಿ–ಎಂದು ಹೇಳಿದರು. ಆದರಂತೆ ಆ ಶಿಷ್ಯರು ದಿಗ್ವಿಜಯಕ್ಕೆ ಹೊರಟರು (ಚಿ ಶಂ. ೩೧–೧೮ರಿಂದ ೨೩). ಇದು **ಚಿದ್ವಿಲಾಸರ ಕಥೆ.**

ಆನಂದಗಿರೀಯೆದ ವರ್ಣನೆ ಹೇಗೆಂದರೆ : ಶುದ್ಧಾದ್ವೈತದಲ್ಲಿ ಅಧಿಕಾರಿಗಳಲ್ಲದವರು ವಿಶೃಂಖಲಪ್ರವೃತ್ತಿಯುಳ್ಳವರಾದಾರು ಎಂದು ಲೋಕರಕ್ಷಣಾರ್ಥವಾಗಿ ವರ್ಣಾಶ್ರಮಪರಿಪಾಲನೆಯನ್ನು ಮಾಡಬೇಕೆಂದು ಜೀವೇಶ್ವರಭೇದವುಳ್ಳ ಮತಕಲ್ಪನೆಯನ್ನು ಮಾಡಬೇಕೆಂದು ಪ್ರಾರಂಭಿಸಿ (೧) **ಪರಮತಕಾಲಾನಲ** ನೆಂಬ ಶಿಷ್ಯನನ್ನು ಕುರಿತು 'ನಿನಗೆ ಯಾವ ಮತವು ಪ್ರಿಯವು ?'– ಎಂದು ಕೇಳಿ

ದರು. ಆತನು 'ಅದ್ವೈತದಲ್ಲಿಯೇ ನನಗೆ ಮನಸ್ಸು ನಿಂತಿದೆಯಾದರೂ ಶಿಷ್ಯೋಪಾಸನೆಯಲ್ಲಿ ನನಗೆ ಭಕ್ತಿಯಿದೆ' ಎಂದನು. ಆಚಾರ್ಯರು 'ಅದ್ವೈತಕ್ಕೆ ಅನಧಿಕಾರಿಗಳಾದವರಿಗೆ ಇದೂ ಆಗಬಹುದು' ಎಂದರು. ಆ ಶಿಷ್ಯನು ಭರತ ಖಂಡದಲ್ಲಿ ಶಿವಪಂಚಾಕ್ಷರೀಮುಂತ್ರೋಪದೇಶಪೂರ್ವಕವಾಗಿ ಶೈವಮತವನ್ನು ಪ್ರಚಾರಮಾಡಿದನು. (ಆ. ಪ್ರ. ೬೭). ಬಳಿಕ **ಲಕ್ಷ್ಮಣ, ಹಸ್ತಾಮಲಕ** ಎಂಬ ಶಿಷ್ಯರ ಆಶಯವನ್ನು ತಿಳಿದು ಅವರಿಗೆ ಸಂನ್ಯಾಸವನ್ನು ಕೊಟ್ಟು ಅವರು(?) ವಿಧವಾದ ಭೇದವುಳ್ಳ, ಸಕಲಮನುಜಮೋಹಕರವಾದ (!) ಹತ್ತು ಮುದ್ರೆಗಳ ಗುರುತುಳ್ಳ (ದ್ವಿಸಪ್ತಮುದ್ರಾಲಿಙ್ಗಮ್) ನಾರಾಯಣಾಷ್ಟಾಕ್ಷರಮುಂತ್ರೋಪದೇಶಮೂಲಕವಾದ ವೃಷ್ಟಿಸೃಷ್ಟಿದೋಷವರ್ಜಿತವಾದ (?) ಮತವನ್ನು ಕಲ್ಪಿಸಿದರು. ಹೀಗೆ ಆರು ವಿಧವಾದ (?) ಜ್ಞಾನಕರ್ಮವಿಭೇದದಿಂದ (ದೇ. ನಾ. ಕರ್ಮ ವಿಭೇದೇನ ಪ್ರ. ೫೦೬) **ವೈಷ್ಣವ**ಮತವನ್ನು ಮಾಡಿ ದಿಗ್ವಿಜಯಮಾಡಿರಿ !' ಎಂದರು. ಅವರು ಹಾಗೇ ಮಾಡಿದರು (ಆ. ಪ್ರ. ೬೯). ಹೀಗೆಯೇ **ತ್ರಿಪುರಕುಮಾರನ** ಮೂಲಕ **ಶಾಕ್ತ**ಮತವನ್ನೂ (ಆ. ಪ್ರ. ೭೦), **ಗಿರಿಜಾಕುಮಾರನ** ಮೂಲಕ **ಗಾಣಾಪತ್ಯ**ವನ್ನೂ (ಆ. ಪ್ರ. ೭೧) ಪ್ರಚಾರಮಾಡಿ **ವಟುಕನಾಥ**ನೆಂಬ ಶಿಷ್ಯನ ಅಭಿಪ್ರಾಯದಂತೆ **ಕಾಪಾಲಿಕ**ಮತಕ್ಕೆ ಅವಕಾಶವನ್ನು ಕಲ್ಪಿಸಿದರು (ಆ. ಪ್ರ. ೭೨). **ಇಂದ್ರಸಂಪ್ರದಾಯನರ್ತಿಯಾದ ಸುರೇಶ್ವರನ ವರಾಲಕ ಮೋಕ್ಷಲಿಂಗವನ್ನು** ಚಿದಂಬರಕ್ಕೆ ಕಳುಹಿಸಿದರು (ಆ. ಪ್ರ. ೭೪).

ಇಲ್ಲಿ ಎರಡು ಶಂಕರವಿಜಯಗಳಲ್ಲಿಯೂ ಹೇಳಿರುವ ಷಣ್ಮತಪ್ರವರ್ತಕ ಶಿಷ್ಯರ ಹೆಸರುಗಳು ಬೇರೆಬೇರೆಯಿವೆ. ಚಿದ್ವಿಲಾಸೀಯದಲ್ಲಿ ಶಿಷ್ಯರೇ ಆಚಾರ್ಯರನ್ನು ಹೀಗೆ ಮತಪ್ರವರ್ತನೆಮಾಡಬೇಕೆಂದು ಬೇಡಿಕೊಂಡರು. ಆನಂದಗಿರೀಯದಲ್ಲಿ ಆಚಾರ್ಯರೇ ಹೀಗೆ ಮಾಡುವದು ಅವಶ್ಯವೆಂದು ತಿಳಿದರು– ಎಂಬ ವೃತ್ತಾಂತಕಥನವೈಲಕ್ಷಣ್ಯವನ್ನು ವಾಚಕರು ಲಕ್ಷಿಸಬೇಕು.

ಈ ಮತಸ್ಥಾಪನೆಯ ವಿಷಯಕ್ಕೆ ನೆನಪಿಡತಕ್ಕ ವಿಷಯಗಳಿವು : (೧) ಆಚಾರ್ಯರು ಅದ್ವೈತವೇ ಪರಮಸಿದ್ಧಾಂತವೆಂದು ಎಣಿಸಿದರೂ ವ್ಯವಹಾರದಲ್ಲಿ ಜೀವೇಶ್ವರಭೇದವನ್ನೊಳಗೊಂಡ ಉಪಾಸನೆಯನ್ನು ಮಾಡುವದು ಶಾಸ್ತ್ರೀಯವೇ, ಶ್ರೇಯಸ್ಕರವೇ ಎಂದು ಗೀತಾಭಾಷ್ಯದಲ್ಲಿಯೂ ಸೂತ್ರಭಾಷ್ಯದಲ್ಲಿಯೂ (ಗೀ. ಭಾ. ೧೨–೧೦ ಅವತರಣಿಕೆ ಸೂ. ಭಾ. ಆನಂದಮಯಾಧಿಕರಣದ ಅವತರಣಿಕೆ) ಹೇಳಿರುತ್ತಾರೆ. ಆದ್ದರಿಂದ ಅವರು ಶೈವಾದಿಮತಗಳಿಗೆ ಅವಕಾಶವನ್ನು ಕಲ್ಪಿಸಿದರೆಂಬುದು ಅಸಂಭಾವಿತವಲ್ಲ. ಅದರೆ ಅವರು ಇವನ್ನು ಹೊಸದಾಗಿ ಸ್ಥಾಪಿಸಬೇಕಾದದ್ದೇನೂ ಇರಲಿಲ್ಲ. (೨) ಷಣ್ಮತಸ್ಥಾಪಕರಾದ

ಶಿಷ್ಯರ ಹೆಸರು ಜೇರೆಬೇರೆಯಾಗಿವೆ : ಆವು ಮತ್ತೆ ಯಾವ ಸಂದರ್ಭದಲ್ಲಿಯೂ ಬಂದಿಲ್ಲ. ಆದ್ದರಿಂದ ಇವು ಚಿದ್ವಿಲಾಸ ಮತ್ತು ಆನಂದಗಿರಿ ಇವರ ಕಲ್ಪನೆಯೇ ಆಗಿರಬೇಕು. (೩) 'ಷಣ್ಮತಸ್ಥಾಪನಾಚಾರ್ಯ' ಎಂಬ ಬಿರುದನ್ನು ಮತ ವವರು ಉಪಯೋಗಿಸಿಕೊಳ್ಳುತ್ತಿರುವದನ್ನು ನೋಡಿ ಯಾರೋ ಈ ಮತಪ್ರವರ್ತ ನೆಯ ಕಥೆಯನ್ನು ಈಚೆಗೆ ಕಟ್ಟಿದ್ದರೂ ಕಟ್ಟಿರಬಹುದು. (೪) ಚಿದ್ವಿಲಾಸರು ಶರೀರಾಂಕನಾದಿಗಳನ್ನು ಬಿಟ್ಟು ಉಪಾಸನೆಮಾಡುವವನ್ನು ಪ್ರಚಾರಮಾಡುವಂತೆ ಆಚಾರ್ಯರು ಹೇಳಿದರು– ಎಂಬುದು ಈಚಿನ ಶಂಕರಾನುಯಾಯಿಗಳಾದ ಬ್ರಾಹ್ಮಣಾದಿಗಳ ಆಚಾರವನ್ನು ನೋಡಿ ಕಲ್ಪಿಸಿದ ಕಥೆಯಾಗಿರಬಹುದು. ಆನಂದ ಗಿರಿಯು ಅಂಕನಾದಿಗಳ ಸಮೇತವಾದ (!) ಮತಗಳನ್ನು ಶಂಕರಶಿಷ್ಯರು ಪ್ರಚಾರ ಮಾಡಿದರೆಂದು ಹೇಳಿರುವದು ಸ್ವಭಾವಕ್ಕೆ ಹೊಂದುವಂತಿಲ್ಲ. ರಾಮಾನುಜ ಮಧ್ವಾಚಾರ್ಯರೇ ಮುಂತಾದವರೂ ಆಚಾರ್ಯರ ಮತವನ್ನೇ ಬೋಧಿಸಿರು ತ್ತಾರೆ–ಎಂಬ ಧ್ವನಿ ಬರುವಂತೆ, ಕೀಳುಭಾವನೆಯಿಂದ, ಈ ಕಥೆ ಕಲ್ಪಿತವಾಗಿದ್ದರೂ ಇರಬಹುದು. (೫) ಆಚಾರ್ಯರು ಮಾಯಾಪುರಿಯಲ್ಲಿದ್ದಾಗ ಈ ಮತಪ್ರಚಾರ ವು ಪ್ರಾರಂಭವಾಯಿತೆಂದು ಚಿದ್ವಿಲಾಸರೂ ಕಾಂಚಿಯಲ್ಲಿದ್ದಾಗ ಆಯಿತೆಂದು ಆನಂದಗಿರಿಯೂ ಬರೆದಿರುವದರಿಂದ ಈ ಕಥೆಯೆಲ್ಲವೂ ಕಲ್ಪನೆಯೇ ಆಗಿರಬಹು ದೆಂಬುದಕ್ಕೆ ಇನ್ನಷ್ಟು ಪುಷ್ಟಿ ಬರುತ್ತದೆ. ಆನಂದಗಿರಿಗೆ ಕಾಂಚಿಯ ಬಗ್ಗೆ ಹೆಚ್ಚಿನ ಅಭಿಮಾನವಿದೆಯೆ ?–ಎಂಬುದನ್ನು ಮತ್ತೆ ಪರಿಶೀಲಿಸುವೆವು.

೧೬. ಸರ್ವಜ್ಞ ಪೀಠಾರೋಹಣ, ತಿರೋಧಾನ

ಭಗಂಧರರೋಗಪರಿಹಾರ

೧೪೬. ಆಚಾರ್ಯರ ದಿಗ್ವಿಜಯವನ್ನು ವಿಸ್ತಾರವಾಗಿ ವರ್ಣಿಸಿದ ಬಳಿಕ **ಮಾಧವನು** ಅವರ ಅಂತರ್ಧಾನಕ್ಕೆ ಪೀಠಿಕೆಯೋ ಎಂಬಂತೆ ಅವರಿಗೆ ಭಗಂಧರ ರೋಗವು ಬಂದ ಪ್ರಯತ್ನವನ್ನು ವರ್ಣಿಸಿರುತ್ತಾನೆ. ಆಚಾರ್ಯರಿಂದ ಪರಾಜಿತನಾದ ಅಭಿನವಗುಪ್ತನು ಅಭಿಚಾರಕ್ರಿಯೆಯನ್ನು ಮಾಡಲು ಅದರ ಫಲವಾಗಿ ಆಚಾರ್ಯರಿಗೆ ಆ ರೋಗವು ಬಂದಿತು. ಆ ಕಾಲಕ್ಕೆ ತೋಟಕಾಚಾರ್ಯರು ಜೀವಿಕೆಯಿಲ್ಲದೆ ಆವರ ಬಟ್ಟೆಯನ್ನು ಒಗೆಯುವದೇ ಮುಂತಾದ ರೀತಿಯಿಂದ ಪರಿಚರ್ಯೆಯನ್ನು ಮಾಡುತ್ತಿದ್ದರು. ಶಿಷ್ಯರು 'ಶರೀರಾಭಿಮಾನವಿಲ್ಲದ ತಾವು ಇದನ್ನು ಉಪೇಕ್ಷೆಮಾಡಬಹುದಾದರೂ ನಮಗೆ ಇದನ್ನು ಕಂಡು ಸ್ಯಥೆಯಾಗುತ್ತದೆ. ಆದ್ದರಿಂದ ಇದಕ್ಕೇನಾದರೂ ಔಷಧಿಮಾಡಿಸಬೇಕು' ಎಂದು ನಿರ್ಬಂಧ ಮಾಡಿ ದಕ್ಷರಾದ ವೈದ್ಯರನ್ನು ಹುಡುಕಿ ಕರೆತಂದರು. ಯಾರಿಂದಲೂ ಅದನ್ನು ವಾಸಿಮಾಡುವದು ಆಗಲಿಲ್ಲ ಕೊನೆಗೆ ಶಿವನ ಆಪ್ಪಣೆಯಿಂದ **ಅಶ್ವಿನೀದೇವತೆಗಳು** ಮನುಷ್ಯವೇಷದಿಂದ ಬಂದು 'ಇದು ಮತ್ತೊಬ್ಬರ ಮಾಟದಿಂದ ಆದದ್ದಾದ್ದರಿಂದ ಇದಕ್ಕೆ ಚಿಕಿತ್ಸೆಯಿಲ್ಲ' ಎಂದು ಹೇಳಿ ಹೊರಟುಹೋದರು. ಇದನ್ನು ಕೇಳಿ ಖತಿಗೊಂಡ **ಪದ್ಮಪಾದರು** ಗುರುಗಳು ಬೇಡವೆಂದರೂ ಕೇಳದೆ ಪ್ರತಿಮಂತ್ರವನ್ನು ಜಪಿಸಿದರು. ಆದರಿಂದ ಅಭಿನವಗುಪ್ತನು ಅದೇ ರೋಗದಿಂದ ಸತ್ತನು (ಮಾ. ಶಂ. ೧೬–೧೨ರಿಂದ೩೨).

ಈ ಕಥೆ ವ್ಯಾಸಾಚಲೀಯದಲ್ಲಿಯೂ ಇದೆ. ಅಲ್ಲಿ ಅಭಿನವಗುಪ್ತನ ಕಥೆಯಲ್ಲ. ಅಶ್ವಿನೀದೇವತೆಗಳನ್ನು ಆಚಾರ್ಯರು ಪ್ರಾರ್ಥಿಸಿದ ಪ್ರಕಾರ ಅವರು ಬಂದು ಆ ರೋಗವನ್ನು ವಾಸಿಮಾಡಿದರು. ಅಲ್ಲಿ ಹತ್ತನೆಯ ಸರ್ಗದಲ್ಲಿ ಶಿಷ್ಯರು ವೈದ್ಯರನ್ನು ಹುಡುಕಿದ ಸಂದರ್ಭವನ್ನು ನಿಮಿತ್ತಮಾಡಿಕೊಂಡು ಅನವಶ್ಯವಾಗಿ ಜೇರೆಯ ವರ್ಣನೆಯನ್ನು ಸೇರಿಸಿ ಸರ್ಗವನ್ನು ಬೆಳೆಯಿಸಿದೆ. ಕವಿಯು ಅಷ್ಟರಿಂದಲೂ ತೃಪ್ತನಾಗದೆ ಮುಂದಿನ ಸರ್ಗದಲ್ಲಿಯೂ ಎಪ್ಪತ್ತೈದು ಪದ್ಯಗಳನ್ನು ಖುತು ವರ್ಣನೆಗೇ ವಿನಿಯೋಗಿಸಿ ವೈದ್ಯರೆಲ್ಲ ಹತಾಶರಾದ ಬಳಿಕ ಅಶ್ವಿನೀದೇವತೆಗಳನ್ನು ಕರೆಯಿಸಿರುತ್ತಾನೆ (!) ಆಗ ಆಚಾರ್ಯರಿಗೆ ಇವರು ಅಶ್ವಿನೀದೇವತೆಗಳೆಂದು ತಿಳಿಯಿತು.

'ಮುಮುದಿರೇ ಯತಯೋ ಗುರುಮಾತ್ಮನಃ
ಗತಗದಂ ಪಗಿದೃಶ್ಯ....'

ಗರುಗಳು ಸ್ವಾಸ್ಥ್ಯವನ್ನು ಹೊಂದಿವ್ದನ್ನು ಕಂಡು ಶಿಷ್ಯರೆಲ್ಲ ಸಂತೋಷಪಟ್ಟರು ಎಂದು (೧೫೨ನೆಯ ಪದ್ಯದಲ್ಲಿ) ಪರಿಸಮಾಪ್ತಿಗೊಳಿಸಿರುತ್ತಾನೆ. ಈ ಸರ್ಗದ ಸಮಾಪ್ತಿವಾಕ್ಯದಲ್ಲಿ ವ್ಯಾಸಾಚಲನ ಪಂಕ್ತಿಯಿಲ್ಲವೆಂಬುದೊಂದು ವಿಶೇಷ.

(೧) ಚಿದ್ವಿಲಾಸೀಯದಲ್ಲಾಗಲಿ ಅನಂಘಗಿರೀಯದಲ್ಲಾಗಲಿ ಈ ಕಥೆ ಕಾಣುವದಿಲ್ಲ. ಆದರೂ ವ್ಯಾಸಾಚಲೀಯದಲ್ಲಿಯೂ ಇದು ಇರುವದರಿಂದ ಆಚಾರ್ಯರಿಗೆ ಜೀವನದ ಕೊನೆಯಲ್ಲಿ ಈ ರೋಗವು ಬಂದಿತ್ತೆಂಬ ಸುದ್ದಿಯನ್ನು ಕರ್ಣಾಕರ್ಣಿಕೆಯಿಂದ ಕೇಳಿಯೇ ಈ ವಾರ್ತೆಯನ್ನು ಮಾಧವವ್ಯಾಸಾಚಲರು ಕಲ್ಪಿಸಿರಬಹುದುದಾಗಿದೆ. (೨) ಕಾಲಕಾಲಕ್ಕೆ ಆಹಾರನಿದ್ರೆಗಳಿಲ್ಲದೆ ದೇಹಶ್ರಮ, ಬುದ್ಧಿಕ್ಷೋಭಗಳು ಹೆಚ್ಚಾಗಿ ಮಲಬಂಧವಾಗಿರುವವರಿಗೆ ಈ ರೋಗವು ಬರುವ ಪಂತೆ. ಆದ್ದರಿಂದ ಈ ರೋಗವು ಪವಿತ್ರಚರಿತ್ರರಾದ ಆಚಾರ್ಯರಿಗೆ ಏಕೆ ಬಂದಿರ ಬಹುದು ?—ಎಂದು ಕೆಲವರು ಶಂಕಿಸುವದು ಸರಿಯಲ್ಲ. ವೈದ್ಯಶಾಸ್ತ್ರದಲ್ಲಿ ೀಳಿರುವಂತೆ ಇಪರಲ್ಲಿ ಅನೇಕಪ್ರಭೇದಗಳಿರುವವು; ಈ ರೋಗ ವಾಸಿಯಾಗುವದು ಕಷ್ಟ. ಆಚಾರ್ಯರಿಗೆ ಈ ರೋಗವು ನಿರ್ಮೂಲವಾಗದೆ ಆದರಿಂದಲೇ ಅವರ ಆಯುಸ್ಸು ಹ್ರಸ್ವವಾಯಿತೆಂದು ಕಾಣುತ್ತದೆ ಎಂಬರ್ಥವು ಬರುವಂತೆ (ಸೋ.ಶಂ. ಪು. ೧೮೮ರಿಂದ೧೯೦) **ಸೋಮನಾಥಯ್ಯನವರು** ಬರೆದಿರುತ್ತಾರೆ. ಇದು ಸಾಮಾನ್ಯವಾಗಿ ಪರಿಹಾರವಾಗುವದಲ್ಲವೆಂಬ ಕಾರಣದಿಂದಲೇ ಶಂಕರವಿಜಯ ಗಳಲ್ಲಿ ಅಶ್ವಿನೀದೇವತೆಗಳನ್ನು ಆಹ್ವಾನಿಸಿರಬಹುದು. ಆದರೆ ಈ ರೋಗದ ಕಥೆಯು ಎಲ್ಲಾ ಶಂಕರವಿಜಯಗಳಲ್ಲಿಯೂ ಇಲ್ಲದ್ದರಿಂದಲೂ, ಇರುವ ಎರಡು ಗ್ರಂಥಗಳಲ್ಲಿ ಒಂದರಲ್ಲಿ ಆದು ಚಿಕಿತ್ಸೆಯಿಂದ ಪರಿಹಾರವಾಗಲಿಲ್ಲವೆಂದೂ ಮತ್ತೊಂದರಲ್ಲಿ ಪರಿಹಾರವಾಯಿತೆಂದೂ ಬರೆದಿರುವರಿಂದಲೂ ಈ ವಿಷಯವನ್ನು ಉಪೇಕ್ಷೆಮಾಡಬೇಕಾಗಿದೆ.

(೩) **ತೋಟಕರು** ಪ್ರತಿದಿನವೂ ಜುಗುಪ್ಸೆಯಿಲ್ಲದೆ ಆಚಾರ್ಯರ ಬಟ್ಟೆ ಒಗೆಯುವದು ಮುಂತಾದ ಸೇವೆಯನ್ನು ಮಾಡುತ್ತಿದ್ದರೆಂದು (ಮಾ. ಶಂ.೧೬-೩) ಬರೆದಿರುವದಕ್ಕೆ ವ್ಯಾಸಾಚಲೀಯವೇ ಆಧಾರವೋ ಅಥವಾ 'ಪ್ರಾಚೀನಶಂಕರ ಜಯ' ದಲ್ಲಿಯೂ ಈ ಕಥೆಯಿತ್ತೋ ಈಗ ನಿಶ್ಚಯಿಸುವದಕ್ಕೆ ಬರುವದಿಲ್ಲ.

ಗೌಡಪಾದದರ್ಶನ

೧೪೭. ಶಂಕರಾಚಾರ್ಯರು ಗಂಗಾತೀರದಲ್ಲಿ ಧ್ಯಾನಮಾಡುತ್ತಿರುವಾಗ ಜಪಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡು ಶ್ರೀಗೌಡಪಾದರು ಬರುತ್ತಿರು ವದನ್ನು ಕಂಡರು. ಆಚಾರ್ಯರು ಅವರ ಪಾದಗಳನ್ನು ಅರ್ಚಿಸಿ ಕೈಮುಗಿದು ಕೊಂಡು ನಿಂತರು. ಗೋವಿಂದನು ಹೇಳಿಕೊಟ್ಟ ವಿದ್ಯೆಯನ್ನು ಅರಿತುಕೊಂಡೆಯ?

ಸಚ್ಚಿದಾನಂದರೂಪತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡಿರುವೆಯಷ್ಟೆ ? ನಿನ್ನ ಶಿಷ್ಯರು ಶಾಂತಿದಾಂತ್ಯಾದಿಗಳಿರಿದ ಕೂಡಿ ನಿನ್ನನ್ನು ಶುಶ್ರೂಷೆಮಾಡಿಕೊಂಡಿರುವರೆ ? ನಿನ್ನ ನಿತ್ಯಶತ್ರುಗಳನ್ನು ಜಯಿಸಿಕೊಂಡಿರುವೆಯ ? ಶಾಂತಿಯೇ ಮುಂತಾವ ಸದ್ಗುಣ ಗಳನ್ನು ಪಡೆದುಕೊಂಡಿರುವೆಯಷ್ಟೆ ? ಅಷ್ಟಾಂಗಯೋಗವನ್ನು ಸಾಧಿಸಿಕೊಂಡಿ ದ್ದೀಯೊ ?' ಎಂದು ಅವರು ಪ್ರೇಮದಿಂದ ಕೇಳಿದರು. ಆಚಾರ್ಯರು 'ತಾವು ಹೇಳಿದ್ದೆಲ್ಲವೂ ಅವಶ್ಯವಾಗಿ ಆಗುತ್ತದೆ; ತಮ್ಮ ಕೃಪಾದೃಷ್ಟಿಗೆ ಪಾತ್ರನಾದ ನನಗೆ ಯಾವದುತಾನೆ ದುರ್ಲಭ ?' ಎಂದರು. ಶ್ರೀಗೌಡಪಾದರು 'ನನ್ನ ಕಾರಿಕೆಗಳಿಗೆ ಭಾಷ್ಯವನ್ನು ಮಾಡಿದ್ದೀಯೆಂದು ಗೋವಿಂದನಿಂದ ಕೇಳಿ ನಿನಗೆ ದೃಷ್ಟಿಗೋಚರ ನಾಗಿದೇನೆ' ಎಂದರು. ಆಚಾರ್ಯರು ಕಾರಿಕಾಭಾಷ್ಯವನ್ನು ತೋರಿಸಿದರು. ಗೌಡಪಾದರು ಬಹಳ ಸಂತೋಷಪಟ್ಟು, "ನನ್ನ ಕಾರಿಕೆಗಳ ಆಶಯವನ್ನು ಸರಿ ಯಾಗಿ ಗ್ರಹಿಸಿಕೊಂಡಿದೀಯೆ, ವರವನ್ನು ಬೇಡು !" ಎನ್ನಲು ಆಚಾರ್ಯರು "ತಮ್ಮನ್ನು ನೋಡಿದಮೇಲೆ ನನಗೆ ಇನ್ನೇನು ಬೇಕು ? ಆದರೂ ನನಗೆ ಯಾವಾ ಗಲೂ ಜ್ಞೈತನ್ಯತತ್ತ್ವದ ವಿಷಯದಲ್ಲಿಯೇ ಚಿಂತನೆಯಿರುವಂತೆ ಅನುಗ್ರಹಿಸಿರಿ" ಎಂದು ಬೇಡಿಕೊಂಡರು. ಹಾಗೇ ಆಗಲೆಂದು ಅನುಗ್ರಹಿಸಿ ಗೌಡಪಾದರು ಅಲ್ಲಿಯೇ ಅಂತರ್ಧಾನರಾದರು (ಮಾ. ಶಂ. ೧೭–೩೩ರಿಂದ೪೩).

(೧) ಈ ಕಥೆ ಮತ್ತೆ ಯಾವ ಶಂಕರವಿಜಯದಲ್ಲಿಯೂ ಇಲ್ಲ. ಗೋವಿಂದ ಭಗವತ್ಪಾದರು ಆಚಾರ್ಯರಿಗೆ ಉಪದೇಶಮಾಡಿದ ಮೇಲೆ ಅವರಿಗೂ ಗೌಡಪಾದ ರಿಗೂ ಸಮಾಗಮವಾದದ್ದು ಈ ಗ್ರಂಥದಲ್ಲಿ, ಮತ್ತೆಲ್ಲಿಯೂ ಉಕ್ತವಾಗಿಲ್ಲ. ಇದೆಲ್ಲ ನಿಜವಿರಬಹುದೆ ? ಅಥವಾ ಇದು ಆಚಾರ್ಯರು ಗೌಡಪಾದರ ಕೃಪೆಗೂ ಪಾತ್ರರಾದರು –ಎಂದು ತಿಳಿಸುವದಕ್ಕೆ ಕಲ್ಪಿಸಿದ ಕಥೆಯೆ? ವಿಮರ್ಶಿಸಬೇಕು.

(೨) ಗೌಡಪಾದರು ಆಚಾರ್ಯರನ್ನು 'ಅಷ್ಟಾಂಗಯೋಗವನ್ನು ಸಾಧಿಸಿದ್ದಿಯೋ ?' ಎಂದು ಕೇಳಿರುವದು ಅವರ ಕಾರಿಕೆಗೆ ಅನುಗುಣವಾಗಿಲ್ಲ. ಏಕೆಂದರೆ ಕಾರಿಕೆಯಲ್ಲಿ ಆತ್ಮಸತ್ಯಾನುಬೋಧ, ಮನೋನಿಗ್ರಹ– ಎಂಬ ಎರಡೇ ಸಾಧನಗಳನ್ನು ಹೇಳಿದೆ. ಆಚಾರ್ಯರೂ ಪಾತಂಜಲಯೋಗದ ಪ್ರಕ್ರಿಯೆಯನ್ನು ಖಂಡಿಸಿ ವೈದಿಕಯೋಗದಿಂದಲೇ ಪರಮಾತ್ಮಪ್ರಾಪ್ತಿಯಾಗುವದೆಂದು ಸೂತ್ರ ಭಾಷ್ಯದಲ್ಲಿ ಹೇಳಿರುತ್ತಾರೆ.

೧೪೮. ಒಮ್ಮೆ ಆಚಾರ್ಯರು ಗಂಗೆಯಲ್ಲಿ ಶಿಷ್ಯರೊಡನೆ ನಿತ್ಯಕರ್ಮಾನು ಷ್ಠಾನವನ್ನು ಮಾಡಿಕೊಂಡು ಧ್ಯಾನಮಗ್ನರಾಗಬೇಕೆಂದಿರುವಲ್ಲಿ ಈ ಮಾತು ಕಿವಿಗೆ ಬಿದ್ದಿತು : "ಪೃಥಿವಿಯಲ್ಲೆಲ್ಲ ಜಂಬುದ್ವೀಪವು ಪ್ರಶಸ್ತವಾದದ್ದು. ಅದರಲ್ಲಿ ಭಾರತವು ಶ್ರೇಷ್ಠವು ; ಅದರಲ್ಲಿಯೂ ಶಾರದಾದೇವಿಯಿಂದ ಕಾಶ್ಮೀರವು ಅತ್ಯಂತಪ್ರಶಸ್ತವಾದದ್ದು ; ಆ ದೇವಿಯ ಆಲಯಕ್ಕೆ ನಾಲ್ಕು ಬಾಗಿಲುಗಳು; ಆಲ್ಲಿ

ಒಂದು ಪೀಠವಿದೆ. ಆದನ್ನು ಸರ್ವಜ್ಞನಾದವನು ಮಾತ್ರ ಏರಬಹುದು, ಮಿಕ್ಕವರಿಗೆ ಅಲ್ಲಿ ಪ್ರವೇಶವಿಲ್ಲ. ಆ ದೇವಾಲಯದ ಪೂರ್ವಪಶ್ಚಿಮೋತ್ತರದ ಬಾಗಿಲುಗಳನ್ನು ಆಗಲೆ ಬೇರೆಬೇರೆ ದೇಶದವರು ತೆರೆಯಿಸಿದ್ದಾರೆ. ಆದರೆ ದಕ್ಷಿಣದ ಬಾಗಿಲನ್ನು ತೆರೆಯಿಸುವಷ್ಟಕ್ಕೆ ದಕ್ಷಿಣದೇಶದವರು ಯಾರೂ ಶಕ್ತರಾಗಿಲ್ಲ."

ಇದರ ನಿಜವನ್ನರಿತು ಆ ಬಾಗಿಲನ್ನು ತೆರೆಯಿಸಬೇಕೆಂದು ಆಚಾರ್ಯರು ಕಾಶ್ಮೀರಕ್ಕೆ ಹೊರಟರು. ಶಿಷ್ಯರಿಂದ ವಿದ್ವತ್ತನ್ನು ಘೋಷಿಸುತ್ತಾ ಆಚಾರ್ಯರು ಶಾರದಾಲಯದ ದಕ್ಷಿಣದ್ವಾರವಿದ್ದಲ್ಲಿಗೆ ಬಂದರು. ಆಲ್ಲಿ ವಾದಿಗಳು ಆವರನ್ನು ಬಾಗಿಲನ್ನು ತೆರೆಯದಂತೆ ಅಡ್ಡಿಮಾಡಿ ಮೊದಲು **ಕಾಣಾದಮತಾನುಸಾರಿ** ಯಾದವನು, ಬಳಿಕ **ನೈಯಾಯಿಕನು**, ಆಮೇಲೆ ಸಾಂಖ್ಯನು, ಆಮೇಲೆ ಬೌದ್ಧನು, ಆಮೇಲೆ ದಿಗಂಬರ **ಜೈನನು**, ಅವನೂ ಆದಮೇಲೆ **ಜೈಮಿನೀ**ಯನು– ಹೀಗೆ ವಾದಿಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಆಚಾರ್ಯರು ಉತ್ತರವನ್ನು ಕೊಡಲು ಅವರು ದಾರಿಯನ್ನು ಬಿಟ್ಟರು. **ಈಗ ಸನಂದನನ** ಹಸ್ತಾವಲಂಬನದಿಂದ ಆಚಾರ್ಯರು ಸರ್ವಜ್ಞಪೀಠವನ್ನು ಹತ್ತುವದಕ್ಕೆ ಪ್ರಾರಂಭಿಸಲು, ಶಾರದೆಯು ಆಶರೀರವಾಣಿಯಿಂದ 'ನೀನು ವಿಶ್ವರೂಪನನ್ನು ಜಯಿಸಿರುವದರಿಂದ ಸರ್ವಜ್ಞನೇ ಸರಿಯಾದರೂ, ನೀನು ಪರಿಶುದ್ಧನೆ ? ಎಂಬ ವಿಷಯವು ವಿಚಾರಣೀಯವಾಗಿದೆ. ಆದ್ದರಿಂದ ಪೀಠವನ್ನು ಹತ್ತಬೇಡ. ನೀನು ಸ್ತ್ರೀಸಂಗವನ್ನು ಮಾಡಿ ಕಲಾರಹಸ್ಯವನ್ನು ಕಲಿತುಕೊಂಡಿರುವುದರಿಂದ ನಿನಗೆ ಪಾರಿಶುದ್ಧ್ಯವು ಹೇಗೆ ಬಂದಿತು ?' ಎಂದಳು. ಆಗ ಶಂಕರರು 'ನಾನು ಈ ಶರೀರದಲ್ಲಿ ಪಾಪವನ್ನು ಮಾಡಿಲ್ಲ. ದೇಹಾಂತರಕರ್ಮದಿಂದ ದೇಹಾಂತರಕ್ಕೆ ಲೇಪವಿಲ್ಲವಷ್ಟೆ ?' ಎಂದು ಆಕೆಯನ್ನು ನಿರುತ್ತರಳನ್ನಾಗಿ ಮಾಡಿ ಸರ್ವಜ್ಞಪೀಠವನ್ನು ಹತ್ತಿದರು (ವ್ಯಾ. ಶಂ. ೧೬–೫೪ರಿಂದ೬೭).

ಈ ಕಥೆಯು ವ್ಯಾಸಾಚಲೀಯದಲ್ಲಿಯೂ ಇದೆ (ವ್ಯಾ. ಶಂ. ೧೨–೩೦ರಿಂದ ೭೮). ಅಲ್ಲಿ ವಾದಿಗಳೇ ಅಲ್ಲದೆ ಸರಸ್ವತಿಯೊಡನೆಯೂ ಆಚಾರ್ಯರಿಗೆ ವಾದವಾಯಿತು ; ಸರಸ್ವತಿಯು ವಿದ್ವಾಂಸರು ಹಾಕಿದ ತೆರೆಯ ಮರೆಯಲ್ಲಿದ್ದುಕೊಂಡು (ವ್ಯಾ. ಶಂ. ೧೨–೫೬) ವಾತ್ಸ್ಯಾಯನತಂತ್ರದಲ್ಲಿ ಪ್ರಶ್ನೆಯನ್ನು ಹಾಕಿದಳು. **ಏಳು ದಿನ ಗಡುವನ್ನು ತೆಗೆದುಕೊಂಡು** (ವ್ಯಾ. ಶಂ. ೧೨–೬೦) ಹಿಂದೆ ಮಾಧವೀಯದಲ್ಲಿ ವರ್ಣಿಸಿರುವಂತೆ ಪರಕಾಯಪ್ರವೇಶವನ್ನು ಮಾಡಿ ಎಂಟನೆಯ ದಿನ ಬಂದು ಪ್ರಶ್ನೆಗಳಿಗೆಲ್ಲ ಉತ್ತರವನ್ನು ಹೇಳಿದರು (ವ್ಯಾ. ಶಂ. ೧೨–೭೨,೭೩). ಆಗ ಶಾರದೆಯು 'ನೀವು ಶುದ್ಧರಲ್ಲ' ಎಂಬ ಶಂಕೆಯನ್ನು ತೆಗೆಯಲು ಆಚಾರ್ಯರು ಮಾಧವೀಯದಲ್ಲಿರುವ ಉತ್ತರವನ್ನೇ ಹೇಳಿದರು.

ಸರ್ವಜ್ಞಪೀಠಾರೋಹಣದ ವೃತ್ತವು ಎಷ್ಟರಮಟ್ಟಿಗೆ ನಿಜ ? –ಎಂಬು ದನ್ನು ಈಗ ವಿಮರ್ಶಿಸೋಣ : (೧) ಆಚಾರ್ಯರು ಸಾಕ್ಷಾಚ್ಛಂಕರರೇ ಎಂದು ಮಂಡನಮಿಶ್ರನ ವಾದಾಂತ್ಯವತ ಕಲಾಶಾಸ್ತ್ರದ ವಿಷಯಕ್ಕೆ ಪರೀಕ್ಷೆಮಾಡಿದ ಸರಸ್ವತಿಯು ಒಪ್ಪಿಕೊಂಡಿದ್ದಳು (೧೯೭,೧೯೮); ಆಗ ಶಂಕರರು ಅಪರಿಶುದ್ಧರೆಂಬ ಶಂಕೆಯೇನೂ ಬರಲಿಲ್ಲ. ಆದರೂ ಈಗ ಆದೇ ಸರಸ್ವತಿಯೇ ಹೀಗೆ ಶಂಕೆಯನ್ನು ಮಾಡಿದಳೆಂಬುದು ಸರಿಯಾಗಿ ಕಾಣುವದಿಲ್ಲ. ಮಂಡನಮಿಶ್ರನನ್ನು ಶಿಷ್ಯನೆನ್ನಾಗಿ ಮಾಡಿಕೊಂಡದ್ದರಿಂದ ನೀನು ಸರ್ವಜ್ಞನೇ ಎಂಬುದನ್ನೇನೋ ಒಪ್ಪಿದಾಳೆ; 'ನೀನು ಶಿವನೇ' ಎಂದು ಆಕೆ ಹಿಂದೆ ಆಡಿದ್ದವೂತು ಈಗ ಏನಾಯಿತು ?

(೨) ವ್ಯಾಸಾಚಲೀಯದಲ್ಲಿ ಈಗಲೇ ಸರಸ್ವತಿಯೊಡನೆ ಮೊದಲನೆಯ ಸಲಕ್ಕೆ ವಾದವಾಯಿತೆಂದು ಹೇಳಿರುವದೂ ಹಿಂದಿನ ಕಥೆಗೆ ಅಷ್ಟು ಹೊಂದುಗಡೆಯಾಗುವದಿಲ್ಲ. ಪತಿಯು ಸೋತಾಗ ಶಾಪವಿಮುಕ್ತಳಾಗಿ ಅಂತರ್ಧಾನಳಾದ ಸರ್ವಜ್ಞಳಾದ ಶಾರದೆಗೆ ಇವರು ಶಿವನೇ ಎಂಬುದು ತಿಳಿಯದಾಯಿತೆ ?

(೩) ಕಾಶ್ಮೀರದಲ್ಲಿ ಅನೇಕ ವಿದ್ವಾಂಸರು ಹುಟ್ಟಿದ್ದ ಕಾರಣದಿಂದ ದೇಶಾಭಿಮಾನಿದೇವತೆ ಶಾರದೆ ಎಂಬ ಪ್ರಥೆ ಹಬ್ಬಿಕೊಂಡಿದ್ದದ್ದು ಯುಕ್ತವೇ ಸರಿ. ಆದರೆ ಅಲ್ಲಿ **ಸರ್ವಜ್ಞತಾಪರೀಕ್ಷೆಯ** ಪೀಠವು ಹೇಗೆ ನಿರ್ಮಾಣವಾಯಿತು ? ಆ ದೇಶವೇನೂ ಭರತಖಂಡಕ್ಕೆ ಮಧ್ಯಭಾಗವಲ್ಲವಷ್ಟೆ ?

(೪) ಕಾಶ್ಮೀರದೇಶದ ಇತಿಹಾಸವನ್ನು ಶಾ. ಶ. ೧೦೭೦ರವರೆಗೂ "**ರಾಜತರಂಗಿಣಿ**" ಎಂಬ ಗ್ರಂಥದಲ್ಲಿ ವರ್ಣಿಸಿರುವ **ಕಲ್ಹಣನು** ಸರ್ವಜ್ಞಪೀಠದ ವಿಷಯವನ್ನೇ ಪ್ರಸ್ತಾಪಿಸಿಲ್ಲವೇಕೆ ?

(೫) **ದರದದೇಶಕ್ಕೆ** ಆಚಾರ್ಯರು ದಿಗ್ವಿಜಯಕ್ಕೆ ಹೋದ ಕಥೆಯನ್ನು (ಮಾ. ಶಂ. ೧೫–೧೫೬) ಮಾಧವನು ಹಿಂದೆಯೇ ಹೇಳಿರುತ್ತಾನೆ. ಕಾಶ್ಮೀರಕ್ಕೆ ಉತ್ತರದಲ್ಲಿರುವ ದರದಸ್ಥಾನಕ್ಕೆ ಹೋದಾಗ ಆಚಾರ್ಯರಿಗೆ ಈ ಪೀಠದ ಸುದ್ದಿ ಏಕೆ ಕಿವಿಗೆ ಬೀಳಲಿಲ್ಲ ? ಬಿದ್ದಿದ್ದರೆ ಅವರು ಪೀಠಾರೋಹಣಕ್ಕೆ ಆಗಲಿ ಏಕೆ ಪ್ರಯತ್ನಿಸಲಿಲ್ಲ ?

(೬) ಕಾಶ್ಮೀರದ ಪೂರ್ವ, ಪಶ್ಚಿಮ, ಉತ್ತರ– ಈ ದಿಕ್ಕುಗಳಲ್ಲಿ ಯಾವ ವೈದಿಕಸಂಪ್ರದಾಯದವರೂ ಇರಲಿಲ್ಲ. ಹೀಗಿರುವಲ್ಲಿ ಆ ದೇಶದವರು ಬಾಗಿಲು ತೆರೆಯಿಸಿ ಸರ್ವಜ್ಞಪೀಠವನ್ನೇರಿದರೆಂಬ ಕಥೆ ಹೇಗೆ ಹೊಂದಿಕೆಯಾದೀತು ?

(೭) ಆಚಾರ್ಯರು ದೇಹಾಂತರದಲ್ಲಿ ತಾವು ಮಾಡಿದ ಕರ್ಮವು ತಮಗೆ ದೇಹಾಂತರದಲ್ಲಿ ಅಂಟಲಾರದೆಂದು ಹೇಳಿದ್ದು ಹೇಗೂ ಸರಿಯಾದ ಉತ್ತರವಾಗ

ಲಾರದು. ಕರ್ಮದ ಫಲವು ಜನ್ಮಾಂತರದಲ್ಲಿಯೂ ಲೋಕಾಂತರವಲ್ಲಿಯೂ ಆಗುವದೆಂದು ಶಾಸ್ತ್ರಾಧಾರದಮೇಲೆ ವ್ಯವಹಾರದೃಷ್ಟಿಯಿಂದ ಅನುಮೋದಿಸಿರುವ ಆಚಾರ್ಯರು ಒಂದೇ ಜನ್ಮದಲ್ಲಿ ದೇಹವೊಂದರಿಂದ ಮಾಡಿದ ಕರ್ಮದ ಆಂಟು ತಮಗೆ ಈ ದೇಹದಲ್ಲಿ ಆಗಲಾರದೆಂದು ವಾದಿಸಬಹುದೆಂದು ಒಪ್ಪಿರಬಹುದೆ ? ವಾರದಾದೇವಿಯಾದರೂ ಆ ಉತ್ತರವು ಸರಿಯೆಂದು ಒಪ್ಪಿರಬಹುದೆ ? ಈ ವಿಷಯವನ್ನು ಪರಕಾಯಪ್ರವೇಶದ ಸಂದರ್ಭದಲ್ಲಿಯೇ ಚರ್ಚಿಸಿರುವೆವಾದ್ದರಿಂದ ಪ್ರಸಂಗವಶದಿಂದ ಮತ್ತೆ ವಾಚಕರ ನೆನಪಿಗೆ ತಂದಿರುತ್ತೇವೆ.

ಸರ್ವಜ್ಞಪೀಠಾರೋಹಣ

೧೪೯. ಸರ್ವಜ್ಞಪೀಠವೃತ್ತಾಂತದ ಪ್ರಸಂಗದಿಂದ ಇದೇ ವಿಷಯಕ್ಕೆ ಗ್ರಂಥಾಂತರದಲ್ಲಿ ಏನು ಹೇಳಿವೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸುವದು ಯೋಗ್ಯವಾಗಿದೆ.

(೧) ಚಿದ್ವಿಲಾಸೀಯದಲ್ಲಿ ಆಚಾರ್ಯರು ಕಾಂಚಿಯಲ್ಲಿ ದೇವತಾ ಪೂಜೆಗೆ ಏರ್ಪಾಡುಮಾಡಿದ ಬಳಿಕ 'ಸರ್ವಜ್ಞಪೀಠವನ್ನು ಏರಬೇಕೆಂದಿರುವಲ್ಲಿ 'ಎಲೈ ಯತಿಯೆ, ನೀನು ಸರ್ವವಿದ್ಯೆಗಳಲ್ಲಿಯೂ ವಿದ್ವಾಂಸರೊಡನೆ ಪ್ರಸಂಗವನ್ನು ಮಾಡಿ ಅವರನ್ನು ಜಯಿಸಿದಮೇಲೆ ಪೀಠವನ್ನು ಏರುವದು ಉಚಿತವಲ್ಲವೆ? ಎಂದು ಅಶರೀರವಾಣಿಯಾದದ್ದನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತು. (೨೫–೪೯). ಆಲ್ಲಿಗೆ ತಾಮ್ರಪರ್ಣೀತೀರವಾಸಿಗಳಾದ ದ್ವೈತಿವಿದ್ವಾಂಸರು ಬಂದು ಅವರಿಂದ ವಾದಜಿತರಾದರು. ಬಳಿಕ ಆಚಾರ್ಯರು ಪೀಠವನ್ನೇರಿದರು. (ಚಿ. ೪೫–೪೯ ರಿಂದ ೬೯). ಚಿದ್ವಿಲಾಸರು ಶೃಂಗೇರಿಯ ವಿಷಯಕ್ಕೆ ನಾಲ್ಕು ಅಧ್ಯಾಯಗಳನ್ನು ಬರೆದಿದ್ದಾರೆಂದು ಹಿಂದೆ (ಪು. ೨೨೩) ತಿಳಿಸಿರುತ್ತೇವೆ. ಆ ಪೀಠದ ವಿಷಯಕ್ಕೆ ಅಷ್ಟೊಂದು ಅಭಿಮಾನವಿದ್ದ ಅವರುಕೂಡ ಕಾಶ್ಮೀರದ ಸರ್ವಜ್ಞಪೀಠದ ವಿಷಯವಾಗಿ ಏನೂ ಹೇಳದೆ ಕಾಂಚಿಯಲ್ಲಿ ಆ ಪೀಠವಿತ್ತೆಂದು ಹೇಳಿರುವದನ್ನು ನೋಡಿದರೆ ಅವರ ಕಾಲಕ್ಕೆ ಕಾಂಚೀಪೀಠಕ್ಕೆ ಸರ್ವಜ್ಞಪೀಠವೆಂಬ ಪ್ರಥೆಯಿತ್ತೆಂದು ನಂಬಬೇಕಾಗುತ್ತದೆಯಲ್ಲವೆ ?

(೨) ಆನಂದಗಿರೀಯದಲ್ಲಿಯೂ ಆಹ್ವಾನಬಲದಿಂದ ಕಾಂಚಿಗೆ ಬಂದ ಆಚಾರ್ಯರು ತಾಮ್ರಪರ್ಣೀತೀರವಾಸಿಗಳೊಡನೆ ವಾದಮಾಡಿ ಅವರನ್ನು ಆದ್ವೈತಿಗಳಾಗಿ ಮಾಡಿದರು (ಆ.ಶಂ.ಪ್ರ. ೬೩–ಪು. ೨೨೮ ; ಯೇ. ಪು. ೧೯೪) ಆದರೆ ಆಲ್ಲಿ ಸರ್ವಜ್ಞಪೀಠದ ವಿಚಾರವಿಲ್ಲ.

(೩) ಆತ್ಮಬೋಧರು ಬರೆದಿರುವ ಗುರುರತ್ನಮಾಲಿಕೆಯ ವ್ಯಾಖ್ಯಾನದಲ್ಲಿ : ಅಸಾವತ್ರ ಪಾಠಸ್ತೂಚಿತಃ | ಸರ್ವಜ್ಞಪೀಠಾರೋಹಣ ಏವ ತದ್ವಿಜ

ಯಸ್ಯ ಶಿವರಹಸ್ಯಬೃಹಚ್ಚಙ್ಕರವಿಜಯಕೇರಳೀಯಶಙ್ಕರವಿಜಯಪ್ರಾಚೀನಶಙ್ಕರವಿಜಯವ್ಯಾಸಾಚಲೀಯಾದಿಷು ನಿರೂಪಿತತ್ವಾತ್| 'ಪರಕೀಯವಪುಃ ಪ್ರವೇಶಶೈಲಾಖ್ಯಃ' (ಗು. ರ. ೩೯) ಇತ್ಯಾದಿ ಶ್ಲೋಕವು ಇಲ್ಲಿಯೇ ಇರುವದು ಯುಕ್ತ ; ಏಕೆಂದರೆ 'ಸರ್ವಜ್ಞಪೀಠಾರೋಹಣವಾದಮೇಲೆಯೇ ಸರಸ್ವತೀವಿಜಯವನ್ನು ಶಿವರಹಸ್ಯಾದಿಗಳಲ್ಲಿ ಹೇಳಿದೆ' ಎಂದು ಬರೆದಿದಾರೆ. ಆವರು ಉದಾಹರಿಸಿರುವ ವಾಕ್ಯಗಳೊಳಗೆ (1) **ಶಿವರಹಸ್ಯವಾಕ್ಯವು** ನಮಗೆ ಸಿಕ್ಕಿಲ್ಲ ; (2) ನಮ್ಮ ವ್ಯಾಸಾಚಲೀಯದಲ್ಲಿ ಕಾಶ್ಮೀರವು ಪರಾಮೃಷ್ಟವಾಗಿರುವದರಿಂದ ಆತ್ಮಬೋಧರಿಗೆ ಸಮ್ಮತವಾದ ವ್ಯಾಸಾಚಲೀಯವು ಮತ್ತೊಂದಿತ್ತೆಂದಾಗುತ್ತದೆ. (3) ಪ್ರಾಚೀನಶಂಕರವಿಜಯದಲ್ಲಿ ಆತ್ಮಬೋಧರು–

ಸರ್ವಜ್ಞಪೀಠಮಾರುಹ್ಯ ತತಸ್ತದಗ್ರೇ
ಮಿಶ್ರಾನ್ ವಿಜಯ್ಯ ಸಹಸೋಪನತಾನ್ ಪ್ರಯಾಗಾತ್ |
ಆಘ್ಯಾಸ್ತ ಕಾಞ್ಚ್ಯನುಭಿಮಣ್ಡಿತಕಾಮಕೋಟಿ
ಪೀಠೋ ಮಠಂ ನಿಜಮುದಾಪ್ಯ ಸ ಶಾರದಾಖ್ಯಾಮ್ ॥ (ಗು.ವ.ಸು, ೩೯)

ಎಂಬ ಶ್ಲೋಕವನ್ನು ಉದಾಹರಿಸಿದೆ. ಪ್ರಯಾಗದಿಂದ ಬಂದ ಮಿಶ್ರರನ್ನು ಜಯಿಸಿ ಸರ್ವಜ್ಞಪೀಠವನ್ನೇ ಕಾಂಚಿಯ ಕಾಮಕೋಟಿಪೀಠದಲ್ಲಿಯೇ "ತಮ್ಮ ಮಠದಲ್ಲಿ" ಆವರಿದ್ದರು–ಎಂದು ಶ್ಲೋಕದ ಅಭಿಪ್ರಾಯ. ಇಲ್ಲಿ ಆಚಾರ್ಯರು ಜಯಿಸಿದ್ದು ತಾಮ್ರಪರ್ಣಿಯವರನ್ನಲ್ಲವೆಂದಿರುವದರಿಂದ ಇದು ಚಿದ್ವಿಲಾಸೀಯಕ್ಕಾಗಲಿ ಮಾಧವೀಯಕ್ಕಾಗಲಿ ಮೂಲವಲ್ಲವೆಂದಾಯಿತು.

ಹೇಗೇ ಆಗಲಿ, ಆತ್ಮಬೋಧರ ಅಭಿಪ್ರಾಯದಲ್ಲಿ ಸರ್ವಜ್ಞಪೀಠವು ಕಾಂಚಿಯಲ್ಲಿಯೇ ಇತ್ತು ; ಶಂಕರವಿಜಯಕಾರರುಗಳಲ್ಲಿ ಕಾಶ್ಮೀರಸರ್ವಜ್ಞಪೀಠವಾದಿಗಳು, ಕಾಂಚೀಸರ್ವಜ್ಞಪೀಠವಾದಿಗಳು– ಎಂದು ಎರಡು ಪಂಗಡಗಳಾಗಿವೆ– ಎಂದಾಯಿತು. 'ಕಾಶ್ಮೀರವು ಶಾರದಾಸ್ಥಾನವೆಂಬ ಪ್ರಸಿದ್ಧಿಯ ಆಧಾರದಮೇಲೆ ಮೊದಲನೆಯ ಪಂಗಡದವರೂ 'ಕಾಂಚಿಯು ಸರ್ವಜ್ಞಪೀಠ'ವೆಂಬ ಪ್ರಸಿದ್ಧಿಯ ಆಧಾರದಮೇಲೆ ಎರಡನೆಯ ಪಂಗಡದವರೂ ಕಲ್ಪಿಸಿಕೊಂಡಿರುವ ಕಥೆಗಳಿವು ಎಂಬುದು ಸ್ಪಷ್ಟವಾಗಿದೆ. ಕಾಂಚಿಯಲ್ಲಿ ಸರ್ವಜ್ಞಾತ್ಮರೇ ಮೊದಲನೆಯ ಪೀಠಾಧಿಪರೆಂದು ಆ ಮಠದ ಸಂಪ್ರದಾಯದವರ ಹೇಳಿಕೆ. ಆ ಕಾರಣದಿಂದಲೇ ಆ ಪೀಠಕ್ಕೆ 'ಸರ್ವಜ್ಞಪೀಠ'ವೆಂಬ ಹೆಸರು ಬಂದಿರಬಹುದೆ ?– ಎಂಬುದನ್ನು ವಿಮರ್ಶಕರು ಪರಿಶೀಲಿಸಬೇಕಾಗಿದೆ. ಆಚಾರ್ಯರು ತಾವು ಎಲ್ಲಾ ಶಾಸ್ತ್ರಗಳನ್ನೂ ಎಲ್ಲಾ ವಿದ್ಯೆಗಳನ್ನೂ ಬಲ್ಲವರು ಎಂಬರ್ಥದಲ್ಲಿ ತಾವು ಸರ್ವಜ್ಞರೆಂದು ತೋರಿಸುವದಕ್ಕೆ ಬಂದಿರಲಿಲ್ಲ; ಯಾವದೊಂದನ್ನು ಆರಿತುಕೊಂಡರೆ ಎಲ್ಲವನ್ನೂ ಅರಿತಂತಾಗುವದೋ ಆ ಬ್ರಹ್ಮದ ವಿದ್ಯೆಯನ್ನು ಪ್ರಚಾರಮಾಡುವದಕ್ಕೆ ಹೊರ

ಟನವು. ಹೀಗಿರುವಲ್ಲ ಅವರು ಸರ್ವಶಾಸ್ತ್ರಗಳನ್ನೂ ಬಲ್ಲವರು ಎಂಬರ್ಥದಲ್ಲಿ ತಾವು ಸರ್ವಜ್ಞರೆಂದು ಕಾಣಾವನೆಯಾಯಿಕಾದಿಗಳಿಗೆ ತೋರಿಸಿಕೊಟ್ಟು ಕಾಶ್ಮೀರದ ಸರ್ವಜ್ಞಪೀಠವನ್ನು ಏರಬೇಕಾದ ಆವಶ್ಯಕತೆ ಏನಿತ್ತು ? ಅಥವಾ ತಾಮ್ರಪರ್ಣೀತೀರದವರನ್ನಾಗಲಿ, ಆನಿರೀಕ್ಷಿತೆವಾಗಿ ಬಂದೊದಗಿದ ಮಿಶ್ರರನ್ನಾಗಲಿ, ಜಯಿಸಿದಮಾತ್ರದಿಂದ ಸರ್ವಜ್ಞರೆನಿಸಿಕೊಂಡು ಕಾಂಚಿಯ ಸರ್ವಜ್ಞಪೀಠವನ್ನೇರುವ ಆವಶ್ಯಕತೆಯಾದರೂ ಏನಿತ್ತು ? ಇದನ್ನು ಯಾವ ಶಂಕರ ವಿಜಯಕಾರರೂ ಉಪಪಾದಿಸಿರುವದಿಲ್ಲ.

ಆಚಾರ್ಯರು ಸ್ವಸ್ಥಾನಕ್ಕೆ ತೆರಳಿದ್ದು

೧೪೫. ಹೀಗೆ ತಮ್ಮ ಮತವೇ ಸರ್ವಶ್ರೇಷ್ಠವೆಂದು ತಿಳಿಸಿಕೊಡುವದಕ್ಕಾಗಿ ಸರ್ವಜ್ಞಪೀಠವನ್ನೇರಿ 'ಋಷ್ಯಶೃಂಗಾಶ್ರಮಾದಿಗಳಲ್ಲಿ' ಕೆಲವರನ್ನಿಟ್ಟು ಆಚಾರ್ಯರು ಬದರಿಗೆ ಹೋದರು. ಆಲ್ಲಿ ಸಾಂತಜಲದರ್ಶನದಲ್ಲಿ ತಾತ್ಪರ್ಯವುಳ್ಳ ಕೆಲವರನ್ನು ಆವರು ಜಯಿಸಿ ಆ ದರ್ಶನದಿಂದ ತಪ್ಪಿಸಿ ತಮ್ಮ ಸೂತ್ರಭಾಷ್ಯವನ್ನು ಹೇಳುತ್ತಾ ಕೆಲವು ದಿನಗಳು ಅಲ್ಲಿದ್ದರು. ಇಲ್ಲಿಗೆ ಆವರಿಗೆ ಮೂವತ್ತೆರಡು ವರ್ಷಗಳಾದವು. ಅಲ್ಲಿಂದ ಮುಂದಕ್ಕೆ ಆವರು **ಕೇದಾರ**ಕ್ಕೆ ತೆರಳಿದರು. ಅಲ್ಲಿ ಅತಿಶೀತದಿಂದ ವ್ಯಥೆಪಡುತ್ತಿದ್ದ ಶಿಷ್ಯರಿಗಾಗಿ ಶಿವನನ್ನು ಪ್ರಾರ್ಥಿಸಲು ಆ ಮಹಾದೇವನು ತನ್ನ ಪಾದಕಮಲದಿಂದ ಉಷ್ಣೋದಕಪ್ರವಾಹವನ್ನು ಬಿಟ್ಟನು; ಆ ನದಿಯು ಈಗಲೂ ಹರಿಯುತ್ತಿದೆ. ಹೀಗೆ ದೇವತಾಕಾರ್ಯವನ್ನು ಮಾಡಿಕೊಟ್ಟ ಶ್ರೀಶಂಕರಯತೀಶ್ವರರನ್ನು ಕೈಲಾಸಕ್ಕೆ ಕರೆದುಕೊಂಡುಹೋಗುವದಕ್ಕೆ ಬ್ರಹ್ಮೇಂದ್ರಾದಿದೇವತೆಗಳೂ ಋಷಿಗಳೂ ಸಿದ್ಧರೂ ಬಂದರು. ಸಂನಿಹಿತನಾದ ನಂದಿಯ ಮೇಲೆ **ಪದ್ಮಪಾದರ** ಹಸ್ತಾವಲಂಬನವನ್ನು ಸ್ವೀಕರಿಸಿ ಶಂಕರರು ಸ್ವಧಾಮಕ್ಕೆ ತೆರಳಿದರು. (ಮೋ. ಶಂ. ೧೬–೯ರಿಂದ ೧೦೭ರ ಸಾರ).

ಚಿನ್ವಿಲಾಸೀಯದಲ್ಲಿ ಆಚಾರ್ಯರು ಬದರಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ ಗುರುಪಾದಸೇವೆಯೊಂದು ಹೊರತು ಮತ್ತೇತಕ್ಕೂ ಮನವೊಲಿಯದೆ ಇದ್ದ **ತೋಟಕಾಚಾರ್ಯರನ್ನು** ಬಲಾತ್ಕಾರಪೂರ್ವಕವಾಗಿ ಆಧ್ಯಕ್ಷರನ್ನಾಗಿ ಮಾಡಿ ರತ್ನಸಿಂಗರಾಜನಿಗೆ ಆದಿಲ್ಲವನ್ನೂ ತಿಳಿಸಿ ಮುಪ್ಪಿನಿಂದ (?) ಶರೀರವು ಕೃಶವಾಗಿ **ನಾರಾಯಣನನ್ನು** ಪ್ರಾರ್ಥಿಸಿದಂತೆ ಭಗವಂತನು ಉಷ್ಣೋದಕಸರಸ್ಸನ್ನು ಕೊಟ್ಟನು. ಆ ಸರೋವರದಲ್ಲಿ ಸ್ನಾನಮಾಡುತ್ತಾ ನಾರಾಯಣಸ್ಮರಣೆಮಾಡುತ್ತಾ ಅಲ್ಲಿ ಇರುತ್ತಿದ್ದರು. ಆ ಕಾಲಕ್ಕೆ **ದತ್ತಾತ್ರೇಯ**ಮಹಾಮುನಿಗಳೂ ನಾರಾಯಣದರ್ಶನಕ್ಕಾಗಿ ಬಂದು ಶಂಕರವೃತ್ತಾಂತವನ್ನು ಕೇಳಿ ಅವರೊಡನೆ ಸಂಭಾಷಣೆಮಾಡಿ **ನಾರದರ** ಪ್ರಾರ್ಥನೆಯಂತೆ ಶಿವನೇ ಈ ನಿಮ್ಮ ರೂ

ಅನತಿಸಿರುವನೆಂಬುದನ್ನು ನಾನು ಬಲ್ಲೆ ಎಂದರು. ಆಚಾರ್ಯರು ತಮ್ಮ ಭಾಷ್ಯಗಳನ್ನು ಅವರಿಗೆ ತೋರಿಸಿದರು. ದತ್ತಾತ್ರೇಯರು ಸೂತ್ರಭಾಷ್ಯವನ್ನೆಲ್ಲ ನೋಡಿ ಹೊಗಳಿದರು. ಅವರ ಕೈಯನ್ನು ಹಿಡಿದುಕೊಂಡು ಮಹಾದ್ವಾರವನ್ನು ಹೊಕ್ಕು ಕ್ರಮಕ್ರಮವಾಗಿ ಪ್ರಮಥರು, ಪಾರ್ವತಿ, ಗಣಪತಿ, ಷಣ್ಮುಖ-ಇವರನ್ನು ಇಪ್ಪ ಕೈಲಾಸಕ್ಕೆ ಹೋದರು (ಚಿ. ಶಂ. ೩೧–೩೪ರಿಂದ ೪೯).

ಗುರುವಂಶಕಾವ್ಯದಲ್ಲಿ : ಆಚಾರ್ಯರು ನೇಪಾಲಕ್ಕೆ ಹೋಗಿ ಸಿದ್ಧೇಶ್ವರಿಯರ ದರ್ಶನವನ್ನು ಮಾಡಿಕೊಂಡು ತಮ್ಮ ಕಾರ್ಯವೆಲ್ಲವೂ ಪರಿಸಮಾಪ್ತವಾದ್ದರಿಂದ **ದಂಡಕಮಂಡಲು**ಗಳನ್ನು ತ್ಯಾಗಮಾಡಿದರು. ದಂಡವು ಒಂದು ಮರವಾಯಿತು ; ಕಮಂಡಲುವು ನದಿಯಾಯಿತು ; ಬಳಿಕ ದತ್ತಾತ್ರೇಯರ ಸ್ಥಾನವನ್ನು ಸೇರಿದರು.

ದತ್ತಾತ್ರೇಯಂ ಭುವನವಿನುತಂ ವೀಕ್ಷ್ಯ ಸತ್ಕಾರ್ಯಗಾದೀನ್
ವೃತ್ತಂ ಸ್ವೀಯಂ ಸಕಲಮಪಿ ತಾನ್ ಪ್ರೇಷಿತಾನ್ ದಿಕ್ಷು ಶಿಷ್ಯಾನ್ ।
ಸೋಽಪಿ ಶ್ರುತ್ವಾ ಮುನಿಪತಿರದಾದಾಶಿಷೋ ವಿಶ್ವರೂಪಾ
ಚಾರ್ಯಾದಿಭ್ಯಃ ಸುಖಮುವಸತಾಂ ತತ್ರ ತೌ ಭಾಷಮಾಣೌ ॥ ೬೦ ॥

'ದತ್ತಾತ್ರೇಯಮುನಿಯನ್ನು ಕಂಡು ನಮಸ್ಕರಿಸಿ ತಾವು ಮಾಡಿದ್ದೆಲ್ಲವನ್ನೂ, ತಾವು ದಿಕ್ಕುದಿಕ್ಕುಗಳಿಗೆ ಶಿಷ್ಯರನ್ನು ಕಳುಹಿಸಿದ್ದನ್ನೂ ತಿಳಿಸಿದರು. ಆ ಮುನಿ ಇವನ್ನು ಕೇಳಿ ವಿಶ್ವರೂಪಾಚಾರ್ಯನೇ ಮುಂತಾದವರಿಗೆ ಆಶೀರ್ವಾದವನ್ನು ಮಾಡಿದರು. ಅವರಿಬ್ಬರೂ ಸಂಭಾಷಣೆಮಾಡುತ್ತಾ ಸುಖವಾಗಿದ್ದರು' ಎಂದಿದೆ.

ಆನಂದಗಿರೀಯದಲ್ಲಿ : ತಮ್ಮ ಲೋಕಕ್ಕೆ ಹೋಗಬೇಕೆಂಬ ಇಚ್ಛೆಯಿಂದ ಮುಕ್ತಿಸ್ಥಲವಾದ ಕಾಂಚೀನಗರದಲ್ಲಿ ಒಮ್ಮೆ ಕುಳಿತು ಸ್ಥೂಲಶರೀರವನ್ನು ಸೂಕ್ಷ್ಮದಲ್ಲಿ ಮರೆಮಾಡಿಸಿ ಸದ್ರೂಪರಾಗಿ ಸೂಕ್ಷ್ಮವನ್ನು ಕಾರಣದಲ್ಲಿ ವಿಲಯಮಾಡಿ ಚಿನ್ಮಾತ್ರರಾಗಿ ಅಂಗುಷ್ಠಪುರುಷರಾಗಿ ಆಮೇಲೆ ಪರಿಪೂರ್ಣವಾದ ಅಖಂಡಮಂಡಲಾಕಾರಾನಂದವನ್ನು ಸೇರಿ ಸರ್ವಜಗದ್ವ್ಯಾಪಕವಾದ ಚೈತನ್ಯರಾಗಿ ಆ ರೂಪದಿಂದ ಈಗಲೂ ಇರುತ್ತಾರೆಂದಿದೆ (ಪ್ರ. ೭೪ ಪು. ೨೫೫ ; ದೇ ಪು. ೨೧೬).

ಆತ್ಮಜೋದರು ಉದಾಹರಿಸಿರುವ ಪ್ರಾಚೀನಶಂಕರವಿಜಯದಲ್ಲಿ

ಕಾಮಾಕ್ಷ್ಯಾಃ ಸವಿಧೇ ಸ ಜಾತು ನಿವಸನ್ ಉನ್ಮುಕ್ತ ಲೋಕಸ್ಪೃಹೋ ।
ದೇಹಂ ಸ್ವಂ ವ್ಯಹಹಾಯ ದೇಹ್ಯನುಗಮಂ ಧಾಮಂರ ಪ್ರಪೇದೇ ಪರಮ್ ॥

(ಗು. ರ. ೩೩ರ ವ್ಯಾಖ್ಯಾನ)

ಕಾಮಾಕ್ಷಿಯ ಬಳಿಯಲ್ಲಿದ್ದುಕೊಂಡು ಲೋಕೈಷಣೆಯನ್ನು ಬಿಟ್ಟು ದೇಹವನ್ನು ಅಲ್ಲಿಯೇ ಇಟ್ಟು ದೇಹಿಗಳಿಗೆ ಪಡೆಯಲಸಹವಾದ ಪರಂಧಾಮವನ್ನು ಸೇರಿದರು.

ಆತ್ಮಬೋಧರು ಉದಾಹರಿಸಿರುವ ಕೇರಳೀಯ ಶಂಕರವಿಜಯದಲ್ಲಿ: "ಒಮ್ಮೆ ಆ ಜಗದ್ಗುರುಗಳು ಕಾಮಾಕ್ಷಿಯ ಬಳಿಯಲ್ಲಿ ಇದ್ದುಕೊಂಡು ದೇಹವನ್ನು ಅಲ್ಲಿಯೇ ಬಿಟ್ಟು ದೇಹಿಗಳು ಸೇರುವದಕ್ಕೆ ಕಷ್ಟವಾದ ಅಖಂಡಜ್ಯೋತಿಯೂ ಆನಂದವೂ ಅಕ್ಷರವೂ ಆದ ಪರಮಪದವನ್ನು ಸೇರಿದರು. ಆದೇ ಶಂಕರಾಚಾರ್ಯರು ಸತ್ಪುರುಷರಿಗೆ ಮುಕ್ತಿಯನ್ನು ಕೊಡುತ್ತಾ ಮೂರ್ತಿಮತ್ತಾದ ಚೈತನ್ಯದಂತೆ ಅಲ್ಲಿಯೇ ಇರುತ್ತಾರೆ (ಆದೇ ಶ್ಲೋಕದ ವ್ಯಾಖ್ಯಾನದಲ್ಲಿ).

ಗೋವಿಂದನಾಥಕೃತ ಶಂಕರಾಚಾರ್ಯಚರಿತ್ರದಲ್ಲಿ (ಒಂಬತ್ತನೆಯ ಅಧ್ಯಾಯದ ಸಾರ):

ಕಾಮಾಕ್ಷ್ಯಾ ನಾಮ ವಾಗ್ದೇವ್ಯಾಃ ಸ್ಥಾನಂ ತತ್ಪರಮಾಪ್ತವಾನ್ ।
ತತ್ರ ತ್ಯಸರ್ವವಿದ್ವದ್ಭಿಃ ಪೂಜ್ಯಮಾನಂ ದಿನೇದಿನೇ ॥ ೩ ॥
ಸರ್ವಜ್ಞಪೀಠಮಾರೋಢುಮಿಯೇಷ ಯತಿಪುಙ್ಗವಃ ।
ವಾದಿಭಿಃ ಕರ್ಮಕಾಣ್ಡಜ್ಞೈಃ ಕಾಣಾದಾದಿಭಿರಪ್ಯಯಮ್ ॥ ೪ ॥
ಸ್ವೇ ಸ್ವೇ ಶಾಸ್ತ್ರೇ ರಹಸ್ಯಂ ಯತ್ ತತ್ಪೃಷ್ಟಃ ಶಙ್ಕರೋ ಮಹಾನ್ ।
ಯಥಾವದುತ್ತರಂ ಸರ್ವಂ ಸಮುದೀರ್ಯ ಮಹಾಮತಿಃ ॥ ೫ ॥

ಎಂದು ವಾದಿಗಳಿಗೆಲ್ಲ ಉತ್ತರವನ್ನು ಹೇಳಿ ಕಾಂಚಿಯ ಸರ್ವಜ್ಞಪೀಠವನ್ನು ಏರುವದಕ್ಕೆ ಸಿದ್ಧರಾಗಲು ಅಶರೀರವಾಣಿಯನ್ನು ಕೇಳಿ ಏಳು ದಿನದ ಗಡುವನ್ನು ತೆಗೆದುಕೊಂಡು ಪರಕಾಯಪ್ರವೇಶವನ್ನು ಮಾಡಿ ಬಂದು ಸರಸ್ವತಿಯ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಕೊಟ್ಟು ಪೀಠವನ್ನೇರಿ ಕಾಂಚಿಯಿಂದ ಹೊರಟರು. ಕ್ಷೇತ್ರಗಳನ್ನು ಸುತ್ತಿಕೊಂಡು ವೃಷಾಚಲಕ್ಕೆ ಬಂದರು.

ತತ್ರ ದಕ್ಷಿಣಕೈಲಾಸೇ ನಿವಸನ್ನೇಕದಾ ಗುರುಃ ॥ ೧೪ ॥
ಜ್ಞಾತ್ವಾ ನಿಜಶರೀರಾನ್ತಂ ಸಹ ಶಿಷ್ಯೈಃ ಪ್ರಸನ್ನಧೀಃ ।
ಕಾಸಾರೇ ಪಶ್ಚಿಮೇ ಸ್ನಾತ್ವಾ ನತ್ವಾ ತತ್ರತ್ಯಮೀಶ್ವರಮ್ ।

ಆ ದಕ್ಷಿಣಕೈಲಾಸದಲ್ಲಿದ್ದಾಗ ಒಮ್ಮೆ ತಮ್ಮ ಶರೀರಾಂತದ ಕಾಲವು ಒದಗಿದೆ ಎಂಬುದನ್ನರಿತು ಪಶ್ಚಿಮಸರೋವರದಲ್ಲಿ ಸ್ನಾನವನ್ನು ಮಾಡಿ ಈಶ್ವರನಿಗೆ ನಮಸ್ಕರಿಸಿ, ಮೂಲಸ್ಥಾನಕ್ಕೆ ಪ್ರದಕ್ಷಿಣೆಯನ್ನು ಮಾಡಿ ಒಳಹೊಕ್ಕು ಕೃಷ್ಣನನ್ನು ನಮಸ್ಕರಿಸಿ ನಂದಿಗೆ ನಮಸ್ಕಾರಮಾಡಿ ಭಾರ್ಗವರಾಮ, ಸಿಂಹೋದರ –ಇವರನ್ನು ನಮಸ್ಕರಿಸಿ ಉತ್ತರೇಶ, ಪಾರ್ವತಿ, ಹರಿಹರ– ಇವರನ್ನು ನಮಿಸಿ ಅಲ್ಲಿ ಬಹಳ ಸ್ತೋತ್ರಗಳನ್ನು ವಿರಚಿಸಿ ಹೇಳಿ

ಇಷ್ಟೈಃ ಸಹ ಮಹಾಯೋಗೀ ಪ್ರಣೇತೇ ಕುತ್ರಚಿದ್ಗುರುಃ ॥ ೩೨ ॥
ನಿವಿಷ್ಟಃ ಸುಪ್ರಸನ್ನಾತ್ಮಾ ಸರ್ವಮಾಪಾದಮೂರ್ಧಜಮ್ ।
ಯಥಾವಚ್ಚಿನ್ತಯಾನಾಸ ವೈಷ್ಣವಂ ರೂಪಮಾದರಾತ್ ॥ ೩೩ ॥

ಒಂದು ಕಡೆಯಲ್ಲಿ ಕುಳಿತು ಆಪಾದತಲಮಸ್ತಕವಾಗಿ ವೈಷ್ಣವರೂಪವನ್ನು ಚಿಂತಿಸಿದರು. ಸ್ರಗ್ಧರಾವೃತ್ತದಿಂದ ಸ್ತೋತ್ರವಮಾಡಿದರು; ದೇವತೆಗಳು ಕುಸುಮ ವೃಷ್ಟಿಯನ್ನು ಸುರಿಸಿದರು.

ಪೀಶಕೇಸ್ತೋತ್ರಂ ಮಹಾಯೋಗೀ ಸ್ತೋತ್ರಂ ಕುರ್ವನ್ ಸ ವೈಷ್ಣವಮ್।
ವಿವೇಶ ಪರಮಾನನ್ದಂ ಭಾನುಬಿಮ್ಬಾನ್ತರಸ್ಥಿತಮ್ ॥ ೩೪

ಹೀಗೆ ವಿಷ್ಣುಸ್ತೋತ್ರವನ್ನು ಪಾಡುತ್ತಾ ಆ ಮಹಾಯೋಗಿಗಳು ಸೂರ್ಯಬಿಂಬದ ಒಳಗೆ ಇರುವ ಪರಮಾನಂದವನ್ನು ಹೊಕ್ಕರು!

ವ್ಯಾಸಾಚಲೀಯದಲ್ಲಿ

ಏವಂ ನಿರುತ್ತರಪದಾಂ ಸ ವಿಧಾಯ ದೇವೀಂ
ಸರ್ವಜ್ಞಪೀಠಮಧಿರುಹ್ಯ ನನನ್ದ ಸಭ್ಯಃ ।
ಮೂತ್ರಾ ಗಿರಾಮುಪಿ ತಥಾ ಪುರುಷೈಶ್ಚ ಸರ್ವೈಃ
ಸಂಭಾವಿತೋ ರುಚಿರದೇಶಮಯಂ ಜಗಾಮ ॥ ೩೫ ॥

ಎಂಬ ಶ್ಲೋಕವು ಹನ್ನೆರಡನೆಯ ಸರ್ಗದಲ್ಲಿದೆ. ಸರ್ವಜ್ಞಪೀಠವನ್ನೇರಿದ ಬಳಿಕ ಸರಸ್ವತಿಯಿಂದಲೂ ಸಭ್ಯರಿಂದಲೂ ಸಂಭಾವಿತರಾಗಿ ತಮಗೆ ಇಷ್ಟವಾದ ಕಡೆಗೆ ಹೊರಟುಹೋದರು ಎಂದು ಆದರೆ ಅರ್ಥ. ಆದರೆ ಆತ್ಮಬೋಧರು ಉದಾಹರಿಸಿರುವ ಇದೇ ಶ್ಲೋಕವು

ಏವಂ ನಿರುತ್ತರಪದಾಂ ಸ ವಿಧಾಯ ದೇವೀಂ
ಸರ್ವಜ್ಞಪೀಠಮಧಿರುಹ್ಯ ಮುದೇ ಸ್ವಕ್ಲೃಪ್ತೇ ।
ಮೂತ್ರಾ ಗಿರಾಮುಪಿ ತಥಾ ಪುರುಷೈಶ್ಚ ಸರ್ವೈಃ
ಸಂಭಾವಿತೋ ಕಮುಪಿ ಕಾಲಮುವಾಸ ಕಾಞ್ಚ್ಯಾಮ್ ॥
(ಗು. ರ. ೨೨, ಹೆ. ವ್ಯಾಖ್ಯಾ)

ಎಂದಿದೆ. 'ಎಲ್ಲರಿಂದಲೂ ಸಂಭಾವಿತರಾಗಿ ಸ್ವಲ್ಪಕಾಲಪವಳೆಗೆ ಕಾಂಚಿಯಲ್ಲಿದ್ದರು' ಎಂದರ್ಥ. ಅವರು ಹೇಳುವ ವ್ಯಾಸಾಚಲೀಯವೂ ಇದೇ ಆಗಿಪ್ಪರೆ ಈ ಶ್ಲೋಕವನ್ನು ಯಾರೋ ಒಬ್ಬರು ತಮ್ಮ ಅಭಿಪ್ರಾಯಕ್ಕನುಗುಣವಾಗಿ ತಿದ್ದಿರುತ್ತಾರೆಂದು ಹೇಳಬೇಕಾಗುತ್ತದೆ.

ಒಟ್ಟಿನಲ್ಲಿ ಹೇಳುವದಾದರೆ, ಆಚಾರ್ಯರು ಎಲ್ಲಿ ಹೇಗೆ ತಿರೋಧಾನವಾದರು ಎಂಬುದೂ ಯಾರಿಗೂ ತಿಳಿಯದು. ಈ ವಿಷಯದಲ್ಲಿ ಕಟ್ಟುಕಥೆಗಳಿಗೇನೂ ಕಡಿಮೆಯಿಲ್ಲ. ಇಲ್ಲಿ ಒಂದೆರಡನ್ನು ಸಂಗ್ರಹಿಸಲಾಗಿದೆ : ಆಚಾರ್ಯರು ದಿಗ್ವಿಜಯಕ್ಕೆ ಹೋಗುವಾಗ ವಾದಕಾಲದಲ್ಲಿ ಎಣ್ಣೆ ಕೊಪ್ಪರಿಗೆಯನ್ನಿಟ್ಟು ಅದನ್ನು ಕಾಯಿಸುತ್ತಿದ್ದರಂತೆ. ಪ್ರತಿವಾದಿಗಳಾದ ಬೌದ್ಧರನ್ನು 'ನೀವು ವಾದದಲ್ಲಿ ಸೋತರೆ ನಿಮ್ಮನ್ನು ಈ ಕೊಪ್ಪರಿಗೆಯಲ್ಲಿ ಹಾಕುವೆವು' ಎಂಬ ಸಮಯಬಂಧಕ್ಕೆ ಒಪ್ಪಿಸುತ್ತಿದ್ದರಂತೆ. ಒಮ್ಮೆ ಮದಾಚೀನ (ತಿಬೆತ್)ದಲ್ಲಿ ಶಾಸ್ತ್ರಾರ್ಥವಾದಾಗ ತಾಂತ್ರಿಕಬೌದ್ಧರನ್ನು ಗೆದ್ದಮೇಲೆ ಶಿಷ್ಯ ಆನಂದಗಿರಿಯು 'ಪೂಜ್ಯರೆ, ಇನ್ನು ಕೊಪ್ಪರಿಗೆಯನ್ನು ಕಾಯಿಸುವದು ಬೇಡ. ಜಗತ್ತು ನಿರವಧಿಕವಾಗಿದೆ. ತಾವು ಎಲ್ಲಿಯವರೆಗೆ ಹೀಗೆ ವಾದಮಾಡುತ್ತಾ ಇರುವದಕ್ಕಾದೀತು ?' ಎಂದನಂತೆ. ಗುರುಗಳು ಅದಕ್ಕೆ ಒಪ್ಪಿ ಆ ಕೊಪ್ಪರಿಗೆಯನ್ನು ಅಲ್ಲಿಯೇ ದಬ್ಬುಹಾಕಿ ಹಿಂತಿರುಗಿದರಂತೆ. ಆ ಸ್ಥಾನವನ್ನು ಈಗಲೂ 'ಶಂಕರಕಟಾಹ'ವೆಂದು ಕರೆಯುತ್ತಿದಾರಂತೆ! ನೇಪಾಲತಿಬ್ಬೆತ್ತುಗಳಲ್ಲಿ ಇನ್ನೊಂದು ಕಿಂವದಂತಿ ಪ್ರಚಲಿತವಾಗಿದೆಯಂತೆ. ಒಬ್ಬ ಲಾಮನು(ಬೌದ್ಧ ಮಠಾಧಿಪತಿಯು) ಆಚಾರ್ಯರನ್ನು ವಾದದಲ್ಲಿ ಸೋಲಿಸಲು ಅವರು ಒಪ್ಪಿದ್ದ ಪ್ರಕಾರ ಈ ಕೊಪ್ಪರಿಗೆಯಲ್ಲಿ ಬಿದ್ದರು– ಎಂದು ಕೆಲವರು ; ಒಬ್ಬ ಲಾಮನು ತಾಂತ್ರಿಕಪ್ರಯೋಗದಿಂದ ಆಚಾರ್ಯರನ್ನು ಅಲ್ಲಿ ಕೊಂದನೆಂದು ಕೆಲವರ ಹೇಳಿಕೆ. (ಬಲ. ಪು. ೧೨೭ Prof. Venkatesan– The Last days of Shankaracharya, Journal of Research Madras, Vol. I) ಕಥೆಗೆ ಕಾಲಿಲ್ಲವಷ್ಟೆ ?

ಆಂತೂ ಆಚಾರ್ಯರು ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಬ್ರಹ್ಮೀಭೂತರಾದರೆಂಬುದು ನಿಶ್ಚಿತ. ಎಲ್ಲಿ, ಹೇಗೆ ?–ಎಂಬ ವಿಶೇಷಪ್ರಕಾರವು ದೇವರಿಗೇ ಗೊತ್ತು. ಸದ್ಯಕ್ಕೆ ಕೇದಾರನಾಥದಲ್ಲಿ ಆಚಾರ್ಯರು ಅದೃಶ್ಯರಾದ ಸ್ಥಾನದಲ್ಲಿ ಆಚಾರ್ಯರ ಒಂದಾನೊಂದು ಸಮಾಧಿ ಇದೆಯಂತೆ. ಅದು ನಿಜವಾಗಿ ಸಮಾಧಿಯಲ್ಲವೆಂದೂ ಅಲ್ಲಿ ಹೊಸ ಸ್ಮಾರಕವಾದ ಕಟ್ಟಡವನ್ನು ನಿರ್ಮಾಣಮಾಡಬೇಕೆಂದೂ ಆ ಸ್ಮಾರಕವು ಈಗಿನ ಸಮಾಧಿಯ ಬಳಿಯಲ್ಲಿರದೆ ದೇವಸ್ಥಾನದ ಬಳಿಯಲ್ಲಿರತಕ್ಕದ್ದೆಂದೂ ಉತ್ತರಪ್ರದೇಶದ ಪ್ರಧಾನಮಂತ್ರಿಗಳಾದ ಶ್ರೀ॥ ಸಂಪೂರ್ಣಾನಂದರು ದ್ವಾರಕಾಪೀಠಾಧಿಪರ ಸಂಮತಿಯಿಂದ ಏರ್ಪಾಡುಮಾಡುತ್ತಿದಾರೆ. ತಾವೂ ಮತ್ತು ಎಲ್ಲಾ ಜೀವರೂ ದೇಶಕಾಲವಸ್ತುಪರಿಚ್ಛೇದಶೂನ್ಯವಾದ ಜನನಮರಣ ರಹಿತವಾದ ಬ್ರಹ್ಮವೇ–ಎಂಬ ವೇದಾಂತಾರ್ಥವನ್ನು ಲೋಕಕ್ಕೆ ಬೋಧಿಸಿರುವ ಆಚಾರ್ಯರು ಕಾಂಚಿ, ತ್ರಿಚೂರು ಅಥವಾ ಕೇದಾರ– ಯಾವ ದೇಶಕ್ಕೂ ವಿಾಸಲಾಗುವಂತಿಲ್ಲವಾದರೂ ಭರತಖಂಡಕ್ಕೆ ಉತ್ತರದಲ್ಲಿ ಲೋಕೋ

ತ್ತರಕ್ಷೇತ್ರವಾದ ಕೇದಾರದಲ್ಲಿ ಅವರ ಸ್ಮಾರಕವೊಂದು ಇರುವದು ಯೋಗ್ಯವೇ ಆಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಆಚಾರ್ಯರ ತಿರೋಧಾನಕಾಲ :

೧೫೧. ಆಚಾರ್ಯರ ಜನ್ಮಕಾಲದ ವಿಷಯಕ್ಕೆ ಹೇಗೋಹಾಗೆಯೇ ತಿರೋಧಾನಕಾಲದ ವಿಷಯಕ್ಕೂ ಮತಭೇದಗಳುಂಟು. ಈ ವಿಷಯಕ್ಕೆ ಮಠದವರ ಅಭಿಪ್ರಾಯವಿಶೇಷಗಳು ಕೆಲವನ್ನು ಹಿಂದೆ (ಪು. ೨೦, ೨೧, ೨೩) ಕೊಟ್ಟಿರುತ್ತೇವೆ. 'ಆಚಾರ್ಯರ ಜನ್ಮಕಾಲಕ್ಕೆ ಮೂವತ್ತೆರಡು ವರ್ಷಗಳ ತರುವಾಯ ಅವರು ಪರಂಧಾಮಕ್ಕೆ ತೆರಳಿದರೆಂದು ಇಟ್ಟುಕೊಂಡು ಅವರವರು ಈ ತಿರೋಧಾನಕಾಲವನ್ನು ನಿಶ್ಚಯಿಸಿರುತ್ತಾರೆ. ಹೆಚ್ಚಿಗೆಯ ವಿಷಯಗಳನ್ನು (೪ನೆಯ) ಪರಿಶಿಷ್ಟದಿಂದ ತಿಳಿಯಬಹುದು. ನಮ್ಮ ದೇಶದ ಪ್ರಾಚೀನ ಇತಿಹಾಸದಲ್ಲಿ ಕಾಲದ ನಿರ್ಣಯವು ಯಾವಾಗಲೂ ವಿವಾದಗ್ರಸ್ತವೇ ಆಗಿರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಇನ್ನೇನೂ ಬರೆಯದೆ "ಕಾಲಾಯ ತಸ್ಮೈ ನಮಃ" ಎಂದು ಈ ವಿಚಾರವನ್ನು ಇಷ್ಟಕ್ಕೇ ನಿಲ್ಲಿಸುವೆವು.

---

೧೭. ಆಚಾರ್ಯರಿಂದಾಗಿರುವ ಲೋಕೋಪಕಾರ

ಹಿಂದಿನ ಗ್ರಂಥದ ಸಾರ

೧೫೨. ಆವಿರ್ಭಾವದಿಂದ ಮೊದಲುಮಾಡಿ ತಿರೋಧಾನದವರೆಗಿನ ಚರಿತ್ರೆಯನ್ನು ಶಂಕರವಿಜಯಗಳ ಆಧಾರದಿಂದಲೂ ವಿಮರ್ಶಕರುಗಳ ಊಹಾಪೋಹಗಳ ಆವಲಂಬನೆಯಿಂದಲೂ– ನಮಗೆ ತಿಳಿದಮಟ್ಟಿಗೆ ವಿವರಿಸಿದ್ದಾಗಿದೆ. ಆಚಾರ್ಯರ ಚರಿತ್ರೆಯಲ್ಲಿ ಸರ್ವಸಂಮತವಾಗಿರುವ ಅಂಶಗಳು ಇಷ್ಟು : ಅವರು ಕೇರಳದಲ್ಲಿ ಜನಿಸಿದರೆಂಬುದೇ ಸಂಭಾವನೀಯವಾಗಿದೆ. ಬಾಲ್ಯದಲ್ಲಿಯೇ ಪಿತೃವಿಯೋಗವಾಯಿತು. ಉಪನಯನವಾದ ಸ್ವಲ್ಪ ಕಾಲದೊಳಗಾಗಿಯೇ ಪ್ರೈಷೋಚ್ಚಾರಣವನ್ನು ಮಾಡಿ ಉತ್ತರಕ್ಕೆ ಹೋಗಿ ಗೋವಿಂದಭಗವತ್ಪಾದರಲ್ಲಿ ಕ್ರಮಸಂನ್ಯಾಸವನ್ನು ತೆಗೆದುಕೊಂಡು ಅವರ ಉಪದೇಶವನ್ನು ಪಡೆದುಕೊಂಡು ಭಾಷ್ಯಾದಿಗ್ರಂಥಗಳನ್ನು ರಚಿಸಿದರು. ಆಗಿನ ಕಾಲದ ವಿದ್ವಾಂಸರಿಗೆಲ್ಲ ಒಪ್ಪಾಗುವಂತೆ ತಮ್ಮ ಸಿದ್ಧಾಂತವನ್ನು ಬೋಧಿಸಿದರು. ದೇಶದಲ್ಲೆಲ್ಲ ಸಂಚಾರವನ್ನು ಮಾಡಿ ತಮಗೆ ಸಮ್ಮತವಾದ ಸಂಪ್ರದಾಯದ ಅದ್ವೈತಸಿದ್ಧಾಂತವನ್ನು ನೆಲೆಗೊಳಿಸಿದರು. ಅನೇಕರು ಅವರ ಶಿಷ್ಯರಾದರು. ಅವರೂ ಅವರ ಶಿಷ್ಯಪರಂಪರೆಯವರೂ ಬರೆದ ವೇದಾಂತಗ್ರಂಥಗಳೂ ಅವರ ಹೆಸರಿನಲ್ಲಿ ಸ್ಥಾಪಿತವಾದ ಮಠಗಳೂ ಇಂದಿಗೂ ಪ್ರಸಿದ್ಧವಾಗಿವೆ. ಭರತಖಂಡದಲ್ಲಿಯೇ ಅಲ್ಲದೆ ಪಾಶ್ಚಾತ್ಯದೇಶಗಳಲ್ಲಿಯೂ ಅವರನ್ನು ಮಹಾತತ್ತ್ವವಿಶಾರದರು, ಸದಾಚಾರಸ್ಥಾಪಕರು, ಭಕ್ತಶ್ರೇಷ್ಠರು ಕವಿಗಳು–ಎಂದು ಈಗಲೂ ಗೌರವಿಸುತ್ತಾರೆ. ಅವರನ್ನು ಪ್ರಾತಃಸ್ಮರಣೀಯರೆಂದೆ ಭಾವಿಸುವ ಭಾರತದೇಶನಿವಾಸಿಗಳು ಅಸಂಖ್ಯಾತರಾಗಿ ಈಗಲೂ ಇರುತ್ತಾರೆ.

ಆಚಾಯರೂ ಬೌದ್ಧಮತವೂ

೧೫೩. ಈಗ ಈ ಮಹನೀಯರು ಮಾಡಿರುವ ಲೋಕೋಪಕಾರವನ್ನು ಕುರಿತು ಸ್ವಲ್ಪಮಟ್ಟಿಗೆ ಪರಿಶೀಲನೆಮಾಡುವ ಕಾಲವು ಬಂದೊದಗಿದೆ. ಆಚಾರ್ಯರು ಉದಯಿಸಿದಾಗ ಈ ದೇಶದ ಸ್ಥಿತಿ ಹೇಗಿತ್ತು ? ಅವರು ಮತವಿಚಾರದಲ್ಲಿಯೂ ಸಮಾಜದಲ್ಲಿಯೂ ಮಾಡಿದ ಮಾರ್ಪಾಡುಗಳು ಯಾವವು ? ಎಂಬ ವಿಷಯಕ್ಕೆ ವಿದ್ವಾಂಸರುಗಳಲ್ಲಿ ಒಂದೇ ಬಗೆಯ ಅಭಿಪ್ರಾಯವಿಲ್ಲ. ಅವರ ಸಂನ್ಯಾಸಾಶ್ರಮವು ಬೌದ್ಧರ ಅನುಕರಣೆ ಎಂದು ಕೆಲವರ ಅಭಿಪ್ರಾಯವಿದೆ ; ನಮ್ಮ ಪುರಾಣೇತಿಹಾಸಗಳು ಬೌದ್ಧರ ಪ್ರಾಬಲ್ಯವನ್ನು ಅಡಗಿಸುವದಕ್ಕೆ ಹುಟ್ಟಿದ

ವೆಂದೂ ಹಿಂದುಗಳ ಈಚಿನ ಕೆಲಕೆಲವು ಆಚಾರಗಳು ಬೌದ್ಧರಿಂದಲೇ ಬಂದ ವೆಂದೂ ಕೆಲವರು ಹೇಳುತ್ತಿದಾರೆ. ಈ ಅಭಿಪ್ರಾಯಗಳಲ್ಲಿ ನಿಜದ ಅಂಶವೂ ಇರಲಾರದೆಂದು ನಾವು ಹೇಳುವದಿಲ್ಲ. ಆದರೆ ಇವುಗಳು ಯಾವವೂ ಶಂಕರಭಗವತ್ಪಾದರ ಸೃಷ್ಟಿಯಲ್ಲವೆಂದು ನಾವು ನೆನಪಿನಲ್ಲಿಡಬೇಕು. ಸಂನ್ಯಾಸಾಶ್ರಮವು ಶ್ರುತ್ಯುಕ್ತವಾಗಿ ಅನಾದಿಕಾಲದಿಂದಲೂ ಇದ್ದೇಇತ್ತು ; ಜ್ಞಾನಮಾರ್ಗವನ್ನು ಬೋಧಿಸುವದಕ್ಕೆ ಈಚಿನವರು ಅದನ್ನು ವ್ಯವಸ್ಥೆಗೊಳಿಸಿರಬಹುದು. ಅಷ್ಟೇ ಹೊರತು ಆದು ಬೌದ್ಧಮತದಿಂದ ಬಂದದ್ದಲ್ಲವೆಂಬುದು ನಿಸ್ಸಂದಿಗ್ಧವಾಗಿದೆ. ಸರಿಯಾಗಿ ನೋಡಿದರೆ ಬೌದ್ಧರ 'ಭಿಕ್ಷು'ವರ್ಗವು ಏರ್ಪಾಡಾದದ್ದೇ ವೈದಿಕ ಸಂನ್ಯಾಸಕ್ರಮದ ಅನುಕರಣೆಯಿಂದ ಎನ್ನುವದಕ್ಕೂ ಅವಕಾಶವಿದೆ. ಬೌದ್ಧರು ವರ್ಣಾಶ್ರಮಪದ್ಧತಿ, ವೇದೋಕ್ತಕರ್ಮ– ಮುಂತಾದವುಗಳನ್ನು ಹಳಿಯುತ್ತ ಇದ್ದದ್ದರಿಂದ ಅಪ್ರಿಯರಾಗಿದ್ದರೇ ಹೊರತು ಬುದ್ಧನು ಬೋಧಿಸುತ್ತಿದ್ದ **ಪಂಚಶೀಲ**ಗಳು ಎಂದಿಗೂ ಜನರಿಗೆ ಬೇಡದವಾಗಿರಲಿಲ್ಲ, ವೇದದಲ್ಲಿಯೂ **ಉಪನಿಷತ್ತು**ಗಳಲ್ಲಿಯೂ ದುಶ್ಚರಿತತ್ಯಾಗವೂ ಶಾಂತಿದಾಂತ್ಯಾದಿಗಳ ಆವಶ್ಯಕತೆಯೂ ಪೂಜ್ಯಬುದ್ಧಿಪೂರ್ವಕವಾಗಿಯೇ ಉಪದಿಷ್ಟವಾಗಿವೆ. ಪುರಾಣೇತಿಹಾಸಗಳಲ್ಲಿ ಈಚಿನ ಬೌದ್ಧರಲ್ಲಿ ಪ್ರವಿಷ್ಟವಾಗಿದ್ದ ಕೆಲವು ಅನಾಚಾರಗಳನ್ನು ಕಿತ್ತು ಹಾಕುವ ಪ್ರಯತ್ನವು ನಡೆದಿರಬಹುದು ; ಅವರ ಸಂಪರ್ಕದಿಂದ ಜನರು ಧರ್ಮಭ್ರಷ್ಟರಾಗದಂತೆ ಕರ್ಮಶ್ರದ್ಧೆ, ಸತ್ಸಂಗ, ಭಕ್ತಿ– ಮುಂತಾದವುಗಳನ್ನು ಅವುಗಳಲ್ಲಿ ಒತ್ತಿ ಹೇಳಿರಬಹುದು. ಆದರೆ ಪುರಾಣಗಳೆಲ್ಲವೂ ಪೂರ್ಣವಾಗಿ ಬೌದ್ಧರ ಕಾಲದಿಂದಿಚೆಗೇ ಬಂದವುಗಳೆಂದು ಹೇಳುವದು ಅಷ್ಟು ಸುಲಭಸಾಧ್ಯವಲ್ಲ. ಹೇಗೇ ಆಗಲಿ, ಇತಿಹಾಸಪುರಾಣಗಳೂ ಭಗವದ್ಗೀತೆಯೂ ಬ್ರಹ್ಮಸೂತ್ರವೂ ಜನರಲ್ಲಿ ಬಳಕೆಯಾದಮೇಲೆಯೇ ಆಚಾರ್ಯರ ಆವಿರ್ಭಾವವಾಯಿತೆಂಬುದು ನಿರ್ವಿವಾದ. ಕುಮಾರಿಲಭಟ್ಟರ ಗ್ರಂಥಗಳಲ್ಲಿ ಬೌದ್ಧಮತದ ನೇರಾದ ಖಂಡನೆಯು ಕಾಣುವಂತೆ ಶಂಕರರ ಗ್ರಂಥಗಳಲ್ಲಿ ಕಾಣಬರುತ್ತಿಲ್ಲ ; ಆ ಖಂಡನೆಗೆ ಅವರ ಗ್ರಂಥಗಳಲ್ಲಿ ಅಷ್ಟು ಪ್ರಾಧಾನ್ಯವೂ ಇಲ್ಲ.

ಷಣ್ಮತಸ್ಥಾಪನೆ

೧೫೪. ಆಚಾರ್ಯರವರು **ಷಣ್ಮತಸ್ಥಾಪಕರು** ಎಂಬ ನಂಬಿಕೆಯು ಅನೇಕರಲ್ಲಿದೆ. ಶಂಕರವಿಜಯಗಳಲ್ಲಿಯೂ ಆ ನಂಬಿಕೆಗೆ ಬೆಂಬಲವಿದೆ. ಚಿದ್ವಿಲಾಸ, ಆನಂದಗಿರಿ, ಕೂಷ್ಮಾಂಡಶಂಕರವಿಜಯಕಾರ– ಇವರು ಹೀಗೆಂದು ಬಾಯಿಬಿಟ್ಟು ಹೇಳಿಯೂ ಇರುತ್ತಾರೆ. ಕೆಲವು ಮಠಗಳ ಬಿರುದಾವಳಿಯಲ್ಲಿ 'ಷಣ್ಮತಸ್ಥಾಪನಾಚಾರ್ಯ' ಎಂಬ ಬಿರುದು ಕಾಣಬರುತ್ತಿದೆ. ಆದರಲ್ಲಿಯೂ ಆಚಾರ್ಯರು ಶೈವಮತಕ್ಕೆ ಹೆಚ್ಚಿಗೆಯ ಪ್ರಾಶಸ್ತ್ಯವನ್ನು ಕೊಟ್ಟರೆಂಬ ನಂಬಿಕೆಯು

ಅನೇಕರಲ್ಲಿದೆ. ದಕ್ಷಿಣದೇಶದಲ್ಲಿರುವ ಶಂಕರಾನುಯಾಯಿಗಳು ಬಲುಮಟ್ಟಿಗೆ ಶೈವಾಚಾರಗಳನ್ನಿಟ್ಟುಕೊಂಡಿರುವದೇ ಕಾಣಬರುತ್ತಿದೆಯಾದ್ದರಿಂದ ಈ ನಂಬಿಕೆಯು ಈ ಕಡೆಯವರಿಗೆ ಬಲುಬೇಗನೆ ಒಗ್ಗುತ್ತದೆ. ಶಂಕರವಿಜಯಗಳಲ್ಲಿ ಆಚಾರ್ಯರು ಶಿವನ ಅವತಾರವೆಂದು ವರ್ಣಿಸಿರುವದೂ ಆಚಾರ್ಯಸ್ಥಾಪಿತವೆಂದು ಪ್ರಸಿದ್ಧವಾಗಿರುವ ಮಠಗಳಲ್ಲಿ ಲಿಂಗಪೂಜೆಗೆ ಪ್ರಾಶಸ್ತ್ಯವಿರುವದೂ ಈ ನಂಬಿಕೆಗೆ ಪುಷ್ಟಿಯನ್ನು ಕೊಡುತ್ತವೆ. ಆದರೆ ಆಚಾರ್ಯರ ಪ್ರಧಾನಗ್ರಂಥಗಳಾದ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಶೈವವೈಷ್ಣವಾದಿಮತಗಳ ಸಾಮರಸ್ಯ ವಿಚಾರವಾಗಲಿ, ಅವುಗಳ ತಾರತಮ್ಯವು ಪರಾಮೃಷ್ಟವಾಗಿರುವ ವಾಸನೆಯಾಗಲಿ, ಕಾಣುವದಿಲ್ಲ. ಆಚಾರ್ಯರಾಗಲಿ, ಅವರ ಸಾಕ್ಷಾಚ್ಛಿಷ್ಯರಾದ ಸುರೇಶ್ವರರಾಗಲಿ, ಶೈವರೆಂಬುದಕ್ಕೆ ಯಾವ ಆಧಾರವೂ ಇಲ್ಲ; ಅದಕ್ಕೆ ಬದಲು ಅವರು ನಾರಾಯಣನೆಂಬ ಹೆಸರನ್ನೇ ಪರಮೇಶ್ವರನಿಗೆ ಬಳಸಿರುವದು ಕಂಡುಬರುತ್ತಿದೆ. ಅವರು ಯಾವ ಶೈವಪುರಾಣದಿಂದಲೂ ಪ್ರಮಾಣವಚನಗಳನ್ನು ಆರಿಸಿಕೊಂಡಿರುವದು ಕಾಣಬರುವದಿಲ್ಲ ಶಾಂಕರಸಂಪ್ರದಾಯದ ಸಂನ್ಯಾಸಿಗಳು ಇಂದಿಗೂ 'ನಾರಾಯಣಸ್ಮರಣೆ'ಯನ್ನೇ ಮಾಡುತ್ತಿದ್ದಾರೆ. ಇದಲ್ಲದೆ ಆಚಾರ್ಯರು ಅದ್ವೈತಸಿದ್ಧಾಂತದಲ್ಲಿ ಆದರವನ್ನು ತೋರಿಸುತ್ತಿರುವಂತೆ ಶಿವವಿಷ್ಣುಗಳ ಸಾಮ್ಯವನ್ನು ಅವಧಾರಣೆಮಾಡುವದರಲ್ಲಿ ಎಲ್ಲಿಯೂ ಹೆಚ್ಚಿನ ಆದರವನ್ನು ತೋರಿಸುತ್ತಿರುವದು ಕಂಡುಬಂದಿಲ್ಲ; ಷಣ್ಮತಗಳ ಪರಾಮರ್ಶವಂತೂ ಭಾಷ್ಯಗ್ರಂಥಗಳಲ್ಲಿ ಎಲ್ಲಿಯೂ ಕಂಡುಬಂದಿರುವದಿಲ್ಲ. ಆಚಾರ್ಯರ ಶಿಷ್ಯರಾದ ಸುರೇಶ್ವರರೂ ಹೀಗೆಯೇ; ಅವರಿಗೂ ಅದ್ವೈತದಲ್ಲಿ ತಾತ್ಪರ್ಯವಿದೆಯೇ ಹೊರತು ಮತಗಳ ಸಾಮರಸ್ಯವನ್ನು ತೋರಿಸುವದರಲ್ಲಿ ತಾತ್ಪರ್ಯವಿರುವಂತೆ ಕಾಣಿಸುವದಿಲ್ಲ. ಆದ್ದರಿಂದ ಶಾಂಕರಮಠಗಳಲ್ಲಿ ಪ್ರಖ್ಯಾತರಾಗಿದ್ದ ಅನೇಕ 'ಶಂಕರಾಚಾರ್ಯ'ರುಗಳಲ್ಲಿ ಯಾರೋ ಒಬ್ಬರು ಅಥವಾ ಅನೇಕರು ಈ ಕಾರ್ಯದಲ್ಲಿ ಕಾಲೋಚಿತವಾಗಿ ತೊಡಗಿದ್ದೇ 'ಶಂಕರಾಚಾರ್ಯರು ಷಣ್ಮತಸ್ಥಾಪನಾಚಾರ್ಯ'ರೆಂಬ ಪ್ರಥೆಗೆ ಕಾರಣವಾಗಿರಬೇಕೆಂದು ಕಲ್ಪಿಸುವದು ಯುಕ್ತವೆಂತ ಕಾಣುತ್ತದೆ.

ಮತಸೂಚಕಮುದ್ರಾಧಾರಣನಿಷೇಧ

೧೫೫. ಬೇರೆಬೇರೆಯ ಮತದವರು ತಮ್ಮತಮ್ಮ ಮತಾಚಾರದ ಗುರುತುಗಳ ನಾಮವನ್ನು ಮೈಗೆ ಬಳಿದುಕೊಳ್ಳುವದು, ಮತ್ತು ಕಾಯಿಸಿದ ಲೋಹಗಳಿಂದ ಅಂಥ ಗುರುತುಗಳಾಗುವಂತೆ ಮೈಯನ್ನು ಸುಟ್ಟುಕೊಳ್ಳುವದು– ಇವನ್ನು ಅನುಕರಿಸುತ್ತಿದ್ದದ್ದನ್ನು ಆಚಾರ್ಯರು ನಿಲ್ಲಿಸಿದರೆ?– ಎಂಬುದು ಮತ್ತೊಂದು ವಿಚಾರಣೀಯವಿಷಯ. ಶಂಕರವಿಜಯಗಳಲ್ಲಿ– ಅದರಲ್ಲಿಯೂ ಮುಖ್ಯವಾಗಿ ಆನಂದಗಿರೀಯಚಿದ್ವಿಲಾಸೀಯಗಳಲ್ಲಿ– ಈ ಮತಚಿಹ್ನಧಾರಣೆಯ ಹಾವಳಿ

ಯನ್ನು ಬಹುವಾಗಿ ವರ್ಣಿಸಿ ಆಚಾರ್ಯರು ಆದನ್ನು ತಮ್ಮ ಉಪದೇಶಬಲದಿಂದ ನಿಲ್ಲಿಸಿದರೆಂದು ತಿಳಿಸಿದೆ. ಆಚಾರ್ಯರ ಭಾಷ್ಯಗ್ರಂಥಗಳಲ್ಲಿ ಈ ಮತಚಿಹ್ನೆಗಳ ಪರಾಮರ್ಶದ ವಾಸನೆಯುಕೂಡ ಕಾಣುವದಿಲ್ಲ. ಆಚಾರ್ಯರ ಕಾಲಕ್ಕೆ ಈ ಆಚರಣೆಯು ಅಷ್ಟು ಬಲವಾಗಿ ಇದ್ದಿತೆ ?–ಎಂಬುದನ್ನು ಪ್ರಮಾಣಾಂತರದಿಂದ ನಾವು ನಿಶ್ಚಯಿಸಿಕೊಳ್ಳಬೇಕಾಗಿದೆ. ಒಂದುವೇಳೆ ಅದು ಆಗ ಇದ್ದರೂ ಆಚಾರ್ಯರು ಅದಕ್ಕೆ ವಿರೋಧಿಗಳಾಗಿದ್ದರೆಂಬುದಕ್ಕೆ ಯಾವ ಪ್ರಮಾಣವೂ ನಮಗೆ ಸಿಕ್ಕಿರುವದಿಲ್ಲ. ಹೀಗಿರುವದರಿಂದ ಶಂಕರವಿಜಯಗಳ ರಚನೆಯ ಕಾಲಕ್ಕೆ ಈ ಅಂಕನವನ್ನು ಪ್ರಚಾರಗೊಳಿಸುತ್ತಿದ್ದ ಮತಗಳು ಪ್ರಬಲವಾಗಿದ್ದದ್ದರಿಂದ ಈ ಪದ್ಧತಿಯು ಆಚಾರ್ಯರಿಗೆ ಅನಭಿಮತವೆಂದು ಹೀಗೆ ಶಂಕರವಿಜಯಕಾರರು ಬರೆದಿರುವರೇನೊ, ಎಂದು ಶಂಕಿಸಬೇಕಾಗಿದೆ.

ಶಾಕ್ತಾದಿಮತಗಳ ಸುಧಾರಣೆ

೧೫೬. ಆಚಾರ್ಯರು ಶಾಕ್ತರ, ಗಾಣಾಪತ್ಯರ ಮತ್ತು ಕಾಪಾಲಿಕರ ದುರಾಚಾರಗಳನ್ನು ನಿಲ್ಲಿಸಿದರೆ ? ಆ ಕಾರ್ಯಕ್ಕೆ ತಮ್ಮ ಕಾಲದ ಬೇರೆಬೇರೆಯ ರಾಜರುಗಳ ನೆರವನ್ನು ತೆಗೆದುಕೊಂಡರೆ?–ಎಂಬುದು ಇನ್ನೊಂದು ವಿಮರ್ಶನೀಯ ವಿಷಯ. ವಾಮಾಚಾರವನ್ನು, ಅನುಸರಿಸುವವರು ಈಗಲೂ ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ. ವೇದಾಂತವೆಂಬ ಹೆಸರಿಗೆ ಸಂಬಂಧಿಸಿ ಭಂಗಿಸೇದುವದು, ಮದ್ಯ ಪಾನಾದಿಗಳನ್ನು ಆಚರಣೆಯಲ್ಲಿಟ್ಟುಕೊಳ್ಳುವದು– ಇಂಥ ತಾಮಸಾಚಾರಗಳು ಈಗಲೂ ಅಲ್ಲಲ್ಲಿ ಕೆಲವರಲ್ಲಿ ಇವೆ. ಆಚಾರ್ಯರ ಕಾಲದಲ್ಲಿಯೂ ಅಂಥವರು ಇದ್ದರೆ ಆಶ್ಚರ್ಯವೇನೂ ಇಲ್ಲ. ಆದರೆ ಆ ದುರಾಚಾರದವರ ಹಾವಳಿ ಆಚಾರ್ಯರ ಕಾಲಕ್ಕೆ ಅಷ್ಟು ಪ್ರಬಲವಾಗಿತ್ತೆಂದಾಗಲಿ, ಅದನ್ನು ಅಡಗಿಸುವದಕ್ಕೆ ಆಚಾರ್ಯರು ಬೇರೆಬೇರೆಯ ದೊರೆಗಳ ಸಹಾಯವನ್ನು ಉಪಯೋಗಿಸಿಕೊಂಡರೆಂದಾಗಲಿ. ನಂಬುವದು ಕಷ್ಟವಾಗಿದೆ. ಶಾಕ್ತಗಾಣಾಪತ್ಯಕಾಪಾಲಿಕರ ಮತಗಳನ್ನು ಪ್ರಸ್ಥಾನ ತ್ರಯಭಾಷ್ಯಗಳಲ್ಲಿ ಪರಾಮರ್ಶಿಸಿರುವದು ಕಂಡುಬರುವದಿಲ್ಲ. ಗೀತಾಭಾಷ್ಯದಲ್ಲಿ 'ಭೂತಾನಿ ವಿನಾಯಕಮಾತೃಗಣಚತುರ್ಭಗಿನ್ಯಾದೀನಿ ಯಾನಿ ಭೂತೇಜ್ಯಾಃ'(೯–೨೫) ಎಂದೂ 'ಭೂತಗಣಾಂಶ್ಚ ಸಪ್ತಮಾತೃಕಾದೀಂಶ್ಚ ಅನ್ಯೇ ಯಜಂತೇ ತಾಮಸಾ ಜನಾಃ' (೧೭–೪) ಎಂಬ ವಾಕ್ಯಗಳೂ ಕಾಣುವದರಿಂದ ಆಚಾರ್ಯರು ಗಾಣಾಪತ್ಯಶಾಕ್ತಮತಗಳನ್ನು ತಾಮಸವೆಂದು ಎಣಿಸಿದ್ದರೆಂದು ಊಹಿಸುವದಕ್ಕೆ ಅವಕಾಶವಿದೆಯಾದರೂ ಆ ಮತದ ಸಿದ್ಧಾಂತಗಳನ್ನು ಖಂಡನೆಗೆ ಅರ್ಹವಾದವೆಂದಾಗಲಿ, ಅವರ ದುರಾಚಾರಗಳನ್ನು ಅಡಗಿಸುವದಕ್ಕೆ ಹೆಚ್ಚಿನ ಪ್ರಯತ್ನವು ಬೇಕೆಂದು ಎಣಿಸಿದ್ದರೆಂದಾಗಲಿ, ಹೇಳುವದಕ್ಕೆ ಬರುವದಿಲ್ಲ. ಕಾಪಾ

ಲಿಕರ ಹೆಸರಂತೂ ಆಚಾರ್ಯರ ಭಾಷ್ಯಗಳಲ್ಲಿ ಕಣ್ಣಿಗೇ ಬೀಳುತ್ತಿಲ್ಲ. ಆದ್ದರಿಂದ ಆಚಾರ್ಯರು ಈ ಮತದವರೊಡನೆ ವಾದಮಾಡಿದ್ದು, ಅವರ ಆಚಾರಗಳನ್ನು ತಿದ್ದುವದಕ್ಕೆ ಪ್ರಯತ್ನಿಸಿದ್ದು, ಅಥವಾ ಅವರೊಡನೆ ಹೋರಾಡುವದಕ್ಕೆ ರಾಜರ ನೆರವನ್ನು ಅಪೇಕ್ಷಿಸಿದ್ದು– ಇದೆಲ್ಲ ಶಂಕರವಿಜಯಕಾರರುಗಳ ಕಲ್ಪನೆಯೇ ಆಗಿರಬೇಕು ; ಅಥವಾ ಮತ್ತೆ ಯಾರೋ ಒಬ್ಬ ಶಂಕರಾಚಾರ್ಯರ ಕಾರ್ಯವಿಶೇಷವನ್ನು ಇವರಿಗೆ ಗಂಟುಹಾಕಿದ್ದು ಎಂದು ಕಲ್ಪಿಸಬೇಕಾಗಿದೆ. ಸುಧನ್ವ, ವೀರಸೇನ, ರಾಜಸೇನ, ಭೋಜಸಿಂಗ, ರತ್ನಸಿಂಗ– ಈ ಹೆಸರಿನ ರಾಜರುಗಳು ಇದ್ದರೆ ? ಅವರಿದ್ದ ಕಾಲವು ಯಾವದು ?– ಎಂಬುದನ್ನು ಇತಿಹಾಸದಿಂದ ಗೊತ್ತುಪಡಿಸಿದ ಮೇಲೆಯೇ ಅವರುಗಳಿಂದ ಆಚಾರ್ಯರಿಗೆ ಎಷ್ಟರಮಟ್ಟಿನ ಸಹಾಯವು ಯಾವ ವಿಷಯಕ್ಕೆ ಆಯಿತು ?– ಎಂಬುದನ್ನು ನಿಶ್ಚಯಿಸುವದಕ್ಕೆ ಪ್ರಯತ್ನಿಸಬಹುದಾಗಿದೆ.

ಸಮಾಜಸುಧಾರಣೆ :

೧೫೭. ಶಂಕರಾಚಾರ್ಯರು ಬದುಕಿದ್ದ ಸ್ವಲ್ಪಕಾಲದಲ್ಲಿ ಅವರು ಮಾಡಿದರೆಂದು ಅವರ ಹೆಸರಿಗೆ ಕಥೆಗಾರರು ಗಂಟುಹಾಕಿರುವ ಎಲ್ಲಾ ಸುಧಾರಣೆಗಳನ್ನೂ ಅವರೇ ಮಾಡದೆ ಇರಬಹುದು. ಅವರು 'ಹೀಗೆ ಮಾಡತಕ್ಕದ್ದು ಎಂದು ಗೊತ್ತುಮಾಡಿಕೊಟ್ಟ ಯೋಜನೆಯ ಕ್ರಮವನ್ನು ಅನುಸರಿಸಿ ಅವರ ಅನುಯಾಯಿಗಳು ಅನೇಕ ಸಮಾಜಸಂಸ್ಕರಣಗಳನ್ನು ಮಾಡಿರಬಹುದು' ಎಂದು ಕೃಷ್ಣಸ್ವಾಮಿ ಅಯ್ಯರವರು (CNKS p. 81) ಬರೆದಿರುತ್ತಾರೆ. ಇದೂ ಅಸಂಭಾವಿತವಲ್ಲ. ಆದರೆ ತಮ್ಮ ವಿಶಿಷ್ಟಪ್ರಸ್ಥಾನವನ್ನು ಪ್ರತಿಪಾದಿಸುವ ಅದ್ವೈತ ಗ್ರಂಥಗಳನ್ನು ಬರೆದದ್ದು, ಮತ್ತು ಭರತಖಂಡದಲ್ಲೆಲ್ಲ ಸಂಚರಿಸಿ ತಮ್ಮ ವೇದಾಂತ ಪ್ರಕ್ರಿಯೆಗೆ ಆ ಕಾಲದ ವಿದ್ವಾಂಸರ ಸಂಮತಿಯನ್ನು ಸಂಪಾದಿಸಿಕೊಂಡದ್ದು– ಈ ಎರಡಲ್ಲದೆ, ಯಾವದಾದರೂ ಸುಧಾರಣೆಯಲ್ಲಿ ಅವರು ಪ್ರವೃತ್ತರಾಗಿದ್ದರೆಂಬುದಕ್ಕೆ ನಮಗೆ ಗೊತ್ತಾದ ಆಧಾರಗಳು ದೊರೆಯುವವರೆಗೆ ಈ ಕಲ್ಪನೆಗೂ ಅವಕಾಶವಿರುವದಿಲ್ಲವೆಂದು ನಮ್ಮ ಮತ. ಅದ್ವೈತವನ್ನು ಜನರಿಗೆ ಬೋಧಿಸಿ ಅವರು ಅಂತರ್ಧಾನವಾದಮೇಲೆ ಅವರ ಶಿಷ್ಯರುಗಳೊಳಗೆ ಒಬ್ಬೊಬ್ಬರು ಒಂದೊಂದು ಕಡೆಯಲ್ಲಿದ್ದು ದುರ್ಮತಗಳನ್ನು ತಾವೇ ಖಂಡಿಸಿ ಜನರಲ್ಲಿ ಪ್ರಚಾರದಲ್ಲಿದ್ದ ದುರಾಚಾರಗಳನ್ನು ತೆಗೆದುಹಾಕುವದಕ್ಕೂ ಪ್ರಯತ್ನಪಟ್ಟಿರಬಹುದಾಗಿದೆ. ಪರಮಾತ್ಮನೊಬ್ಬನೇ ನಾನಾರೂಪಗಳಿಂದ ಪೂಜಿತನಾಗಿರುತ್ತಾನೆಂಬ ಉದಾತ್ತ ಭಾವನೆಯಿಂದ ಪ್ರೇರಿತರಾದ ಮಹನೀಯರು ಇಂಥ ಸುಧಾರಣೆಗಳನ್ನು ಮಾಡಿ ಜನರನ್ನು ಒಳ್ಳೆಯ ಮಾರ್ಗಕ್ಕೆ ತಂದಿದ್ದರೆ ಆಶ್ಚರ್ಯವೇನು ?

ಆಚಾರ್ಯರ ಮಹಾಕಾರ್ಯಗಳ ಬಗ್ಗೆ ಕಲ್ಪನೆ

೧೩೮. ಆಚಾರ್ಯರು ಅನೇಕರನ್ನು ವಾದದಲ್ಲಿ ಜಯಿಸಿದ್ದು ನಿಜವಾಗಿರಬೇಕು. ಬೌದ್ಧರು ಈ ದೇಶದಲ್ಲಿ ಪ್ರಬಲವಾದಂದಿನಿಂದ ಜನರನ್ನು ಮತಾಂತರಗೊಳಿಸುವದು, ಗ್ರಂಥಗಳಲ್ಲಿ ಪರಮತಗಳನ್ನು ಖಂಡಿಸುವದು, ಅಲ್ಲಲ್ಲಿ ವಾದಗೋಷ್ಠಿಗಳನ್ನು ಏರ್ಪಡಿಸುವದು– ಇವು ಪ್ರಚಾರವಾಗಿಬಿಟ್ಟಿದ್ದವು. ವೈದಿಕರು ಕುಮಾರಿಲಭಟ್ಟರ ಕಾಲದಿಂದಲೂ ತಮ್ಮ ಮತದ ಸಂರಕ್ಷಣೆಗಾಗಿಯೂ ಆ ಮತವನ್ನು ಜನಾನುರಾಗಕ್ಕೆ ಪಾತ್ರವಾಗಿಮಾಡಿಕೊಳ್ಳುವದಕ್ಕಾಗಿಯೂ ರಾಜಾಶ್ರಯವನ್ನೂ ಶ್ರೀಮಂತರ ಸಹಾಯವನ್ನೂ ಬಯಸಿರಬಹುದು. ಭಟ್ಟರ ವಾರ್ತಿಕಗಳನ್ನು ನೋಡುವವರಿಗೆ ಇದೆಲ್ಲ ನಿಜವಿರ ಹುದೆಂಬ ಕಲ್ಪನೆಯುಂಟಾಗುತ್ತದೆ. ಅದರಂತೆ ಆಚಾರ್ಯರು ತಮ್ಮ ಸಿದ್ಧಾಂತದ ಪ್ರಚಾರಕ್ಕಾಗಿ ಅನೇಕರನ್ನು ತಾವೂ ವಾದದಲ್ಲಿ ಜಯಿಸಿ ಪ್ರಸಿದ್ಧರಾಗಿದ್ದ ಪ್ರತಿವಾದಿಗಳನ್ನು ಅಥವಾ ಮುಮುಕ್ಷುಗಳನ್ನು ಸಂನ್ಯಾಸಿಗಳಾಗಿ ಮಾಡಿ ಅದ್ವೈತಗ್ರಂಥರಚನೆಗೂ ಸಿದ್ಧಾಂತ ಪ್ರಚಾರಕ್ಕೂ ಪ್ರೋತ್ಸಾಹವನ್ನು ಕೊಟ್ಟಿರಬಹುದು. ಇಂಥ ಸಂನ್ಯಾಸಿಗಳ ಗ್ರಂಥಗಳೇ ಈಗ ನಮಗೆ ದೊರಕುತ್ತಿರುವ ಅಮೂಲ್ಯ ಅದ್ವೈತಗ್ರಂಥಗಳೆಂದು ನಾವು ಭಾವಿಸಬಹುದಾಗಿದೆ.

ಶಂಕರಾಚಾರ್ಯರ ಶಿಷ್ಯರಾದ ಸಂನ್ಯಾಸಿಗಳು ಒಂದೇ ದೇಶದವರಲ್ಲ. ಅವರುಗಳು ಬರೆದ ಗ್ರಂಥಗಳನ್ನು ಶಂಕರಾಚಾರ್ಯಕೃತವೆಂದು ಅನೇಕರು ಭ್ರಾಂತಿಯಿಂದ ಕಲ್ಪಿಸಿರುವ ಸಂಭವವಿದೆ. ಇದಲ್ಲದೆ, ಪರಮಹಂಸಪರಿವ್ರಾಜಕರಾಗಿ ನಿಂತಲ್ಲಿ ನಿಲ್ಲದೆ ಅನೇಕ ಶಿಷ್ಯರೊಡನೆ ಸಂಚರಿಸುತ್ತಾ ಕೆಲವು ದಿವಸಗಳಲ್ಲಿ, ವಿಶೇಷವಾಗಿ ಚಾತುರ್ಮಾಸ್ಯಕಾಲಗಳಲ್ಲಿ, ಅವರು ಶ್ರುತಿಸ್ಮೃತಿಗಳ ಆಧಾರದಿಂದ ಮಾಡಿದ ಉಪದೇಶಗಳನ್ನು ಅವರ ಶಿಷ್ಯರುಗಳು ಬರೆದುಕೊಂಡು ತಮ್ಮ ಶಿಷ್ಯ ಪ್ರಶಿಷ್ಯರುಗಳ ಮೂಲಕ ಪ್ರಚಾರಮಾಡಿರಬಹುದು. ಕಾಲಕ್ರಮದಲ್ಲಿ ಈ ಶಿಷ್ಯರುಗಳು ಬೇರೆಬೇರೆಯ ಪ್ರಾಂತಗಳಲ್ಲಿ ನಿಂತು ಸ್ವಸಿದ್ಧಾಂತರಕ್ಷಣೆಗಾಗಿಯೋ ಬೌದ್ಧರ ಅನುಕರಣೆಯಿಂದಲೋ ಮಠಗಳನ್ನು ಅಲ್ಲಲ್ಲಿ ಸ್ಥಾಪಿಸಿಕೊಂಡಿರಬಹುದು. ಅಲ್ಲಿನ ರಾಜರುಗಳು ಅವಕ್ಕೆ ಮಾನ್ಯಗಳನ್ನೂ ಬಿರುದುಬಾವಲಿಗಳನ್ನೂ ಕೊಟ್ಟು ಗೌರವಿಸಿರಬಹುದು-ಎಂದು ಎನ್.ವೆಂಕಟರಾಮನ್‌ರವರು(NVSS pp.36.37) ಕಲ್ಪಿಸಿರುತ್ತಾರೆ. ಅದು ಸಂಭಾವಿತವೆಂದೇ ನಮಗೆ ತೋರುತ್ತಿದೆ. ಆದ್ದರಿಂದಲೇ ಆಚಾರ್ಯರು ನಿಜವಾಗಿ ಬರೆದ ಗ್ರಂಥಗಳು ಯಾವವು ? ಅವರೇ ಸ್ಥಾಪಿಸಿರುವ ಮಠಗಳು ಯಾವವು ?–ಎಂಬುದನ್ನು ನಿರ್ಣಯಿಸುವದು ಈಗ ಕಷ್ಟಕರವಾಗಿರುತ್ತದೆ. ಗ್ರಂಥಗಳ ವಿಷಯವನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸುವೆವು. ಮಠಗಳ ವಿಷಯವನ್ನು ಇನ್ನೊಂದು ಅಧ್ಯಾಯಕ್ಕೆ ಇಟ್ಟುಕೊಳ್ಳಲಾಗಿದೆ.

೧೮. ಆಚಾರ್ಯರ ಮುಖ್ಯಗ್ರಂಥಗಳು

ಭಗವತ್ಪಾದರ ಗ್ರಂಥಗಳಿಗಿರುವ ಪ್ರಧಾನಸ್ಥಾನ

೧೫೯. ಶಂಕರಭಗವತ್ಪಾದರವರು ಮಾಡಿರುವ ಲೋಕೋಪಕಾರವು ಇಂದಿನವರೆಗೂ ಉಳಿದಿದ್ದರೆ, ಅದು ಅವರು ಅನುಗ್ರಹಿಸಿರುವ ಗ್ರಂಥಗಳಿಂದ ಎಂದು ಯಾರಾದರೂ ಧೈರ್ಯವಾಗಿ ಹೇಳಬಹುದು. ಅವರ ಭಾಷ್ಯಗಳ ಅರ್ಥವು ಎಲ್ಲರಿಗೂ ಅಭಿಪ್ರಾಯವಾಗದೆ ಇರಬಹುದು; ಅವರು ಬರೆದಿರುವ ಪ್ರಕರಣಗಳಲ್ಲಿ ಕೆಲವು ದುರವಗಾಹವಾಗಿರಬಹುದು. ಆದರೆ ಅವರ ಹೆಸರಿನಲ್ಲಿರುವ ಅನೇಕ ಚಿಕ್ಕಚಿಕ್ಕ ಪ್ರಕರಣಗಳೂ ಸ್ತೋತ್ರಗಳೂ ದೇಶದ ಮೂಲೆಮೂಲೆಗೂ ಹರಡಿವೆ. ಅವುಗಳನ್ನು ಭಾರತದೇಶದಲ್ಲಿ ಲಕ್ಷಗಟ್ಟಲೆ ಜನರು ಕಂಠಪಾಠಮಾಡಿ ಹೇಳಿಕೊಂಡು ನಲಿಯುತ್ತಿದಾರೆ. ಈಗ ನಮ್ಮ ಸೌಭಾಗ್ಯದಿಂದ ಆಚಾರ್ಯರ ಗ್ರಂಥಗಳು ಇಂಗ್ಲಿಷು ಮುಂತಾದ ಪಾಶ್ಚಾತ್ಯಭಾಷೆಗಳಿಗೇ ಅಲ್ಲದೆ ದೇಶಭಾಷೆಗಳಿಗೂ ಪರಿವರ್ತನೆಯಾಗಿವೆ.

ಆಚಾರ್ಯರ ಚರಿತ್ರೆಯಲ್ಲಿ ನಡೆದವೆಂದು ಜನರು ನಂಬಿರುವ ಅದ್ಭುತಗಳು, ಅವರು ಅಲ್ಲಲ್ಲಿ ಬೇರೆಬೇರೆಯ ನಿಮಿತ್ತಗಳಿಂದ ಉಪದೇಶಮಾಡಿದರೆಂದು ಜನರು ನಂಬಿರುಪ ಚಿಕ್ಕಚಿಕ್ಕ ಪ್ರಕರಣಗಳು, ಅವರ ಹೆಸರಿನಲ್ಲಿ ಪ್ರಚಾರವಾಗಿರುವ ಬೇರೆಬೇರೆಯು ದೇವತಾಸ್ತೋತ್ರಗಳು, ಅವರಿಂದ ಸ್ಥಾಪನೆಯಾಗಿರುವವೆಂದು ಪ್ರಸಿದ್ಧವಾಗಿರುವ ಮಠಗಳ ಅಧಿಪತಿಗಳು ದೇಶದಲ್ಲಿ ಸಂಚರಿಸಿ ಜನರಿಗೆ ಈಗಲೂ ಮಾಡುತ್ತಿರುವ ಉಪದೇಶಗಳು, ಅವರ ಹೆಸರಿನಲ್ಲಿ ಬೇರೆಬೇರೆಯ ಮಠಾಮ್ನಾಯ ಪ್ರಭೇದಗಳನ್ನನುಸರಿಸುವ ಬಿಡಿಸಂನ್ಯಾಸಿಗಳು ಜನರ ಮುಂದಿಡುತ್ತಿರುವ ಜ್ಞಾನ ವೈರಾಗ್ಯಾದಿಗಳ ಆದರ್ಶಗಳು - ಇವುಗಳು ಭಾರತದೇಶದಲ್ಲಿ ಅನೇಕರ ಹೃದಯದಲ್ಲಿ ಅವರ ನೆನಪನ್ನು ಪ್ರತಿಷ್ಠೆಮಾಡಿರುತ್ತವೆ. ಪ್ರತಿವರ್ಷವೂ ಅಲ್ಲಲ್ಲಿ ನಡೆಯುತ್ತಿರುವ ಆಚಾರ್ಯರ ಜಯಂತಿ, ಆರಾಧನೆ-ಇವುಗಳು ಜನರ ಮನಸ್ಸಿನಲ್ಲಿ ಅವರ ನೆನಪು ಅಚ್ಚಳಿಯದಂತೆ ಅಂಕಿತವಾಗಿರುವಂತೆ ಮಾಡಿರುತ್ತವೆ. ಶಂಕರಭಗವತ್ಪಾದರೆಂದರೆ ಬ್ರಹ್ಮಚರ್ಯದಿಂದಲೇ ಸಂನ್ಯಾಸಿಗಳಾಗಿ ದೇಶವನ್ನೆಲ್ಲ ಸಂಚರಿಸಿ ಜನರಿಗೆ ಉಪಕಾರವನ್ನು ಮಾಡಿದ ಆದರ್ಶಪರಮಹಂಸಪರಿವ್ರಾಜಕಾಚಾರ್ಯರು, ಮಹಾ ತತ್ತ್ವಜ್ಞಾನಿಗಳು, ಜಗದ್ಗುರುಗಳು, ದುರಾಚಾರನಿಗ್ರಹಕರ್ತರು, ಷಣ್ಮತಸ್ಥಾಪಕರು, ಮಹಾಭಕ್ತರು, ಉತ್ತಮಕವಿಗಳು. ಲೋಕೋಪಕಾರಕ್ಕಾಗಿಯೇ ಅವತರಿಸಿ ಯಾವಜ್ಜೀವವೂ ಅದಕ್ಕಾಗಿಯೇ ದುಡಿದ ಮಹಾತ್ಮರು- ಎಂದು ನಮ್ಮ ದೇಶದವರೇಅಲ್ಲದೆ ಪಾಶ್ಚಾತ್ಯರಲ್ಲಿಯು ಅನೇಕರು ನಂಬಿರುತ್ತಾರೆ.

ಇಂಥ ಜಗದ್ವಿಖ್ಯಾತರಾದ ಆಚಾರ್ಯರ ಚರಿತ್ರೆಯನ್ನು ಬರೆಯುವ ಕೆಲಸವು ಕೆಲವು ಕವಿಗಳ ಪಾಲಿಗೆ ಮಾತ್ರ ವಿಾಸಲಾದದ್ದು ಶೋಚನೀಯವಾಗಿವೆ ; ಆದ ರಿಂದ ಆಚಾರ್ಯರ ನಿಜವಾದ ಚರಿತ್ರೆ ಯಾವದೆಂಬುದನ್ನು ನಿರ್ಣಯಿಸುವದು ಬಹಳ ಕಷ್ಟದ ಕೆಲಸವಾಗಿರುತ್ತದೆ.

ಈ ಪರಿಸ್ಥಿತಿಯಲ್ಲಿ ಆಚಾರ್ಯರ ಲೋಕೋತ್ತರವಾದ ಭಾಷ್ಯಗ್ರಂಥ ಗಳಿಂದಲೇ ಭರತಖಂಡದ ಇತಿಹಾಸದಲ್ಲಿ ಅವರ ಸ್ಥಾನವನ್ನು ಗೊತ್ತುಪಡಿಸ ಬೇಕಾಗಿಬಂದಿದೆ. ಶಂಕರಾಚಾರ್ಯರೆಂಬ ಹೆಸರು ಜನಸಾಮಾನ್ಯರ ನೆನಪಿನಲ್ಲಿ ಅವರ ಮಾಹಾತ್ಮ್ಯೆಯ ಸಂಬಂಧದಿಂದ ಹೆಚ್ಚಿನ ಪ್ರಮಾಣದಲ್ಲಿ ಉಳಿದುಕೊಂಡಿರ ಬಹುದು. ಆದರೆ ವಿಚಾರಶೀಲರ ಜಗತ್ತಿನಲ್ಲಿ ಆಚಾರ್ಯರ ಗ್ರಂಥಗಳೇ ಈಗಲೂ ಅವರ ದಿಗ್ವಿಜಯಸ್ತಂಭಗಳಾಗಿ ಉಳಿದಿರುತ್ತವೆ. ನಮ್ಮ ದೇಶದ ವೇದಾಂತ ವಿದ್ವಾಂಸರುಗಳು ಈಗಲೂ ಅವುಗಳ ಪಠನಪಾಠನವಾಕ್ಯಾರ್ಥಗಳಲ್ಲಿ ಪ್ಯಾಪೃತ ರಾಗಿರುತ್ತಾರೆ. ಅವುಗಳ ಮೆಚ್ಚಿಕೆ, ವಿವರಣೆ, ಅಥವಾ ಗುಣದೋಷಪರಿಶೀಲನೆ ಇವುಗಳಿಗೆ ಕೈಹಾಕದ ತತ್ತ್ವಜಿಜ್ಞಾಸುಗಳೇ ಈಗಿನ ಭೂಮಂಡಲದಲ್ಲಿಲ್ಲವೆಂದು ಹೇಳಬಹುದಾದಷ್ಟು ಪ್ರಾಮುಖ್ಯವು ಆಚಾರ್ಯರ ಗ್ರಂಥಗಳಿಗೆ ಬಂದುಬಿಟ್ಟಿದೆ. ಆದರೆ ಇಲ್ಲಿ ಅತ್ಯಂತದೌರ್ಭಾಗ್ಯದ ಸ್ಥಿತಿಯೇನೆಂದರೆ, ಆಚಾರ್ಯರ ಗ್ರಂಥಗಳು ಯಾವವು ?—ಎಂಬುದನ್ನು ನಿಷ್ಕೃಷ್ಟವಾಗಿ ತಿಳಿಯುವದಕ್ಕೆ ಇರುವ ಅಡಚಣೆ. ಆಚಾರ್ಯರ ಹೆಸರಿನಲ್ಲಿ ನೂರಾರು ಗ್ರಂಥಗಳು ಪ್ರಚಾರದಲ್ಲಿರುತ್ತವೆ. ಆಚಾರ್ಯರು ಪ್ರತಿಷ್ಠೆಮಾಡಿರುವವುಗಳೆಂದು ಪ್ರಸಿದ್ಧವಾಗಿರುವ ಪೀಠಾಧಿಪತಿ ಗಳನ್ನೂ ಶಂಕರಾಚಾರ್ಯರೆಂದೇ ಕರೆಯುವದು ರೂಢಿಗೆ ಬಂದಿದೆ ; ಅಂಥ ಕೆಲವರು ಪೀಠಾಧಿಪತಿಗಳಿಗೆ ಶಂಕರಾಚಾರ್ಯರೆಂದೇ ಹೆಸರು ಇದ್ದದ್ದಾಗಿ ತಿಳಿಯು ಬಂದಿದೆ. ಆಚಾರ್ಯರ ಭಾಷ್ಯಗ್ರಂಥಗಳಲ್ಲಿ ಯಾವದೊಂದರಲ್ಲಿಯೂ ಮತ್ತೊಂ ದರ ಪರಾಮರ್ಶವು ಇಲ್ಲದಿರುವದರಿಂದ ಇಂಥದ್ದೊಂದು ಗ್ರಂಥವೆಂದು ಅವರೇ ಹೇಳಿಕೊಂಡಿದಾರೆಂಬ ಆಂತರಿಕಪ್ರಮಾಣವನ್ನು ಇಲ್ಲಿ ಉಪಯೋಗಿಸುವದಕ್ಕೆ ಬರುವಂತಿಲ್ಲ. ಗ್ರಂಥದ ಭಾಷೆಯು ಮತ್ತು ಶೈಲಿಯು ಅಂತರಂಗಪರೀಕ್ಷೆಯೊಂದು ಇಲ್ಲಿ ಸಾಧನವಾಗಿ ಉಳಿದುಕೊಂಡಿದೆ. ಅದು ಹೇಗೆಂದರೆ, ಆಚಾರ್ಯರು ಅತ್ಯಂತಪ್ರೌಢವಿಚಾರಗಳನ್ನು ಅತ್ಯಂತಸುಗಮವಾದ ಶೈಲಿಯಿಂದ ಬರೆಯುವ ಪದ್ಧತಿಯನ್ನಿಟ್ಟುಕೊಂಡಿರುತ್ತಾರೆ. ಆದ್ದರಿಂದ ನವೀನತರ್ಕಬದ್ಧವಾಗಿರುವ ಕಠಿನಶೈಲಿಯ ಗ್ರಂಥಗಳೂ ದೀರ್ಘಸಮಾಸಗಳನ್ನು ಅತ್ಯಂತ ಅಪ್ರಸಿದ್ಧಶಬ್ದಗಳ ನ್ನೂ ಪ್ರಚುರವಾಗಿ ಉಪಯೋಗಿಸುವ ಗ್ರಂಥಗಳೂ ಅವರ ಕೃತಿಯಲ್ಲವೆಂದು ನಿರ್ಣಯಿಸಬಹುದಾಗಿದೆ. ಆದರೆ ಬರಿಯ ಶೈಲಿಯ ಸಾಮ್ಯದಿಂದಲೇ ಗ್ರಂಥವು ಆಚಾರ್ಯಕರ್ತೃಕವೆಂದು, ಅಥವಾ ಅವರದ್ದಲ್ಲವೆಂದು, ತೀರ್ಮಾನಿಸುವದೂ

ಕಟ್ಟಕಡೆಯ ಮಾತೆಂದು ಹೇಳುವದಕ್ಕೆ ಬರುವದಿಲ್ಲ. ಆದ್ದರಿಂದ ಯಾವದಾದ ರೊಂದು ಗ್ರಂಥವು ಆಚಾರ್ಯರದು ಎಂದು ಪ್ರಸಿದ್ಧವಾಗಿರುವಲ್ಲಿ ಆದರಲ್ಲಿರುವ ವಿಚಾರಕ್ರಮವೂ ಪ್ರತಿಪಾದ್ಯವಿಷಯವೂ ನಿರ್ವಿವಾದವಾಗಿ ಆಚಾರ್ಯರವೆಂದು ಪ್ರಸಿದ್ಧವಾಗಿರುವ ಗ್ರಂಥಗಳ ವಿಚಾರಕ್ರಮಕ್ಕೂ ಪ್ರತಿಪಾದ್ಯವಿಷಯಕ್ಕೂ ಅವಿರುದ್ಧವಾಗಿದ್ದು ಶೈಲಿಯ ಸಾಮ್ಯವೂ ನಿಸ್ಸಂಗ್ಧವಾಗಿದ್ದು, ಮತ್ತೆ ಯಾವ ಬಾಧಕಪ್ರಮಾಣವೂ ಇಲ್ಲದಿರುವಾಗ ಅದು ಅವರ ಕೃತಿಯೆಂದೇ ನಾವು ನಂಬ ಬಹುದೆಂಬ ನಿಯಮವನ್ನು ಇಟ್ಟುಕೊಳ್ಳಬಹುದು. ಈ ದೃಷ್ಟಿಯನ್ನವಲಂಬಿಸಿ ಇಲ್ಲಿ ನಮ್ಮ ಅಭಿಪ್ರಾಯವನ್ನು ಸಂಗ್ರಹವಾಗಿ ಪ್ರಕಟಿಸುವೆವು. ಇದರ ಸಾರಾ ಸಾರತೆಯನ್ನು ನಿರ್ಣಯಿಸುವ ಭಾರವು ಗುಣದೋಷಜ್ಞರಾದ ಪಂಡಿತರಮೇಲೆ ಇರುತ್ತದೆ.

ಪ್ರಸ್ಥಾನತ್ರಯಭಾಷ್ಯಗಳು

೧೬೦. ಆಚಾರ್ಯರ ಹೆಸರಿನಲ್ಲಿರುವ ಗ್ರಂಥಗಳನ್ನು (೧) ಭಾಷ್ಯಗಳು, (೨) ಪ್ರಕರಣಗಳು, (೩) ಸ್ತೋತ್ರಗಳು– ಎಂದು ಮೂರು ಭಾಗಗಳಾಗಿ ವಿಂಗಡಿಸ ಬಹುದು: ಭಾಷ್ಯಗಳನ್ನು **ಶ್ರುತಿಪ್ರಸ್ಥಾನ** ಎಂದರೆ ಉಪನಿಷತ್ತುಗಳ ಅರ್ಥವನ್ನು ಪ್ರತಿಪಾದಿಸುವದಕ್ಕೆ ಹೊರಟಿರುವ ಭಾಷ್ಯಗಳು,**ಸ್ಮೃತಿಪ್ರಸ್ಥಾನ** ಎಂದರೆ ಗೀತಾ ಸ್ಮೃತಿಯ ಅರ್ಥವನ್ನು ಪ್ರತಿಪಾದಿಸುವ ಭಾಷ್ಯ, ಮತ್ತು **ಸೂತ್ರಪ್ರಸ್ಥಾನ** ಎಂದರೆ **ಶ್ರುತಿಸ್ಮೃತಿಗಳ** ತಾತ್ಪರ್ಯವನ್ನು ನ್ಯಾಯದಿಂದ ನಿರ್ಣಯಿಸಿರುವ ಬಾದರಾಯಣೀಯವೇದಾಂತಸೂತ್ರಗಳ ಅಭಿಪ್ರಾಯವನ್ನು ವಿವರಿಸುವ ಭಾಷ್ಯ –ಎಂದು ಮೂರು ಪಂಗಡಗಳಾಗಿ ವಿಂಗಡಿಸಬಹುದು. ಉಪನಿಷತ್ತುಗಳಿಗೆ ವೇದಾಂತಗಳೆಂಬ ಮತ್ತೊಂದು ಹೆಸರೂ ಪಂಡಿತರಲ್ಲಿ ಬಳಕೆಯಲ್ಲಿದೆ ; ವೇದಾಂತ ಸಿದ್ಧಾಂತಕ್ಕೆ ಉಪನಿಷತ್ತುಗಳೇ ಮುಖ್ಯವಾದ ಆಧಾರ. ಗೀತೆಯು ಭಗವಂತನಾದ ಶ್ರೀಕೃಷ್ಣನು ಹೇಳಿದ್ದೆಂದು ವ್ಯಾಸರು ಬರೆದಿರುವ ಗ್ರಂಥವಾದ್ದರಿಂದ ಅದು ಸ್ಮೃತಿಯು, ಶ್ರುತ್ಯರ್ಥವನ್ನು ನೆನಪಿನಲ್ಲಿಟ್ಟುಕೊಂಡು ಬರೆದ ಪೌರುಷೇಯ ಗ್ರಂಥವು. ಸ್ಮೃತಿಗಳಿಗೆ ಶ್ರುತಿಯೇ ಮೂಲಪ್ರಮಾಣವಾಗಿರುವದರಿಂದ ಪರಮ ಪ್ರಾಮಾಣ್ಯವು ಶ್ರುತಿಗಳಿಗೇ ಸೇರಿದ್ದಾಗಿದೆ. ಇನ್ನು ಸೂತ್ರಗಳು ಶ್ರುತ್ಯರ್ಥವನ್ನು ನಿರ್ಣಯಿಸುವದಕ್ಕೆಂದೇ ಬಾದರಾಯಣರು ಬರೆದವುಗಳಾದ್ದರಿಂದ ಅವೂ ಪೌರು ಷೇಯವೇ ಆಗಿರುತ್ತವೆ ; ಮೂಲಗ್ರಂಥಗಳಾದ ಉಪನಿಷತ್ತುಗಳನ್ನೂ ಭಗವದ್ಗೀತೆ ಯನ್ನೂ ಆಧಾರವಾಗಿ ಇಟ್ಟುಕೊಂಡೇ ಸೂತ್ರಗಳು ವಿಷಯವನ್ನು ವಿಚಾರ ಮಾಡುವದರಿಂದ ಅವೂ ವೇದಾಂತದರ್ಶನಕ್ಕೆ ಸ್ವತಂತ್ರಪ್ರಮಾಣವಲ್ಲ. ಹೀಗಿದ್ದರೂ ಯುಕ್ತಿಯಿಂದ ವೇದಾಂತಾರ್ಥವನ್ನು ಗೊತ್ತುಪಡಿಸುವದಕ್ಕೆ ಹೊರಟಿರುವದರಿಂದ

ತತ್ತ್ವಪರಿಶೀಲಕರ ದೃಷ್ಟಿಯಿಂದ ಸೂತ್ರಗಳಿಗೇ ಹೆಚ್ಚಿನ ಸ್ಥಾನವಿರುತ್ತದೆ; ಏಕೆಂದರೆ ಶ್ರುತಿಸ್ಮೃತಿಗಳ ತಾತ್ಪರ್ಯವನ್ನು ನಾವು ಸರಿಯಾಗಿ ತಿಳಿದುಕೊಂಡೆವೋ, ಇಲ್ಲವೋ ? –ಎಂಬುದನ್ನು ಸೂತ್ರಗಳ ಒರೆಗಲ್ಲಿಗೆ ತಿಕ್ಕಿಯೇ ನೋಡಬೇಕಾಗಿದೆ. ಆದ್ದರಿಂದ ಸೂತ್ರಭಾಷ್ಯ, ಉಪನಿಷದ್ಭಾಷ್ಯ. ಗೀತಾಭಾಷ್ಯ– ಈ ಕ್ರಮದಲ್ಲಿಯೇ ಆಚಾರ್ಯರ ಗ್ರಂಥಗಳನ್ನು ನಾವು ವಿಚಾರಕ್ಕೆ ತೆಗೆದುಕೊಳ್ಳುವೆವು.

ಬ್ರಹ್ಮಸೂತ್ರಭಾಷ್ಯ

೧೬೧. ಆಚಾರ್ಯರು ಸೂತ್ರಭಾಷ್ಯಕ್ಕೇ ಎಲ್ಲಕ್ಕಿಂತಲೂ ಹೆಚ್ಚಿನ ಬೆಲೆಯನ್ನು ಕಟ್ಟಿದ್ದರೆಂದು ಶಂಕರವಿಜಯಗಳೆಲ್ಲವೂ ಸಾರುತ್ತವೆ. ವಿಶ್ವೇಶ್ವರನ ಪ್ರೇರಣೆಯಿಂದ (ಮಾ.ಶಂ. ೬–೪೪), ಅಥವಾ ಗೋವಿಂದಭಗವತ್ಪಾದರ ಪ್ರೇರಣೆಯಿಂದ (ಚಿ. ಶಂ. ೯–೫೦) ಆಚಾರ್ಯರು ಆ ಗ್ರಂಥವನ್ನು ಬರೆದರು. ಆಚಾರ್ಯರು ಆ ಗ್ರಂಥವನ್ನು ಬಾದರಾಯಣರು ಸೂತ್ರವನ್ನು ಬರೆದ ಬದರಿಯಲ್ಲಿಯೇ ಬರೆದರೆಂದೂ (ಬಲ. ಶಂ. ಪು. ೫೩) ಕೆಲವರ ಅಭಿಪ್ರಾಯ. ಬಾದರಾಯಣ, ವ್ಯಾಸ– ಇವೆರಡೂ ಒಬ್ಬ ವ್ಯಕ್ತಿಯ ಹೆಸರಾರಾಲಾರದೆಂದು ಆಧುನಿಕ ವಿದ್ವಾಂಸರು ಕೆಲವರ ಮತವಿದೆ ; ಸೂತ್ರಭಾಷ್ಯದಲ್ಲಿ ಸೂತ್ರಕಾರರನ್ನು ಬಾದರಾಯಣರೆಂದೇ ಪರಾಮರ್ಶಿಸಿದೆ. ಭಾರತವನ್ನೂ ಗೀತೆಯನ್ನೂ ಬರೆದಿರುವವರನ್ನು ವ್ಯಾಸರೆಂದೇ ಕರೆದಿದೆ. ಆದ್ದರಿಂದ ಕೃಷ್ಣದ್ವೈಪಾಯನವ್ಯಾಸರಿಗಿಂತ ಬಾದರಾಯಣರು ಬೇರೆ ಎಂದು ಅವರ ಮತ. ಆಚಾರ್ಯರ ಗ್ರಂಥಗಳ ನಿರ್ಣಯಕ್ಕೆ ಇದೇನೂ ಮುಖ್ಯವಲ್ಲವಾದ್ದರಿಂದ ಈ ಪ್ರಶ್ನೆಯನ್ನು ಇಲ್ಲಿಗೇ ಬಿಡೋಣ. 'ಬ್ರಹ್ಮಸೂತ್ರಪದೈಶ್ಚೈವ' (ಗೀ. ೧೩–೪) ಎಂಬ ಗೀತಾವಾಕ್ಯದಲ್ಲಿ ಬ್ರಹ್ಮಸೂತ್ರದ ಪರಾಮರ್ಶವಿದೆಯಾದ್ದರಿಂದ ಸೂತ್ರಗಳನ್ನು ಬಾದರಾಯಣರು ಮೊದಲೇ ಬರೆದಿರಬೇಕು ಎಂದು ಕೆಲವರು ಪ್ರಕಟಿಸಿರುವ ಅಭಿಪ್ರಾಯವು ಗೀತಾಭಾಷ್ಯವನ್ನು ಬರೆದ ಆಚಾರ್ಯರಿಗೆ ಒಪ್ಪಿಲ್ಲವೆಂಬುದು ಸ್ಪಷ್ಟವೇ ಆಗಿದೆ ; ಏಕೆಂದರೆ ಅಲ್ಲಿ ಬ್ರಹ್ಮಸೂತ್ರಗಳು ಎಂದರೆ 'ಆತ್ಮೇತ್ಯೇವೋಪಾಸೀತ' ಮುಂತಾದವುಗಳೆಂದು ಭಾಷ್ಯದಲ್ಲಿ ಬರೆದಿದೆ, ಸೂತ್ರಗಳನ್ನು ಪರಾಮರ್ಶಿಸಿಲ್ಲ. ಇದಲ್ಲದೆ ವೇದಾಂತಸೂತ್ರಗಳಿಗೆ ಬ್ರಹ್ಮಸೂತ್ರಗಳು ಎಂಬ ಹೆಸರನ್ನು ಆಚಾರ್ಯರಾಗಲಿ ಸುರೇಶ್ವರಾಚಾರ್ಯರಾಗಲಿ ಬಳಸಿರುವದಿಲ್ಲ. ಸೂತ್ರಭಾಷ್ಯವನ್ನು ಬರೆದಿರುವ ಶಂಕರಭಗವತ್ಪಾದರು "ಏವಮಯಮನಾದಿರನನ್ತೋ ನೈಸರ್ಗಿಕೋಽಧ್ಯಾಸೋ ಮಿಥ್ಯಾಪ್ರತ್ಯಯರೂಪಃ ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ । ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ । ಯಥಾಚಾಯಮರ್ಥಃ ಸರ್ವೇಷಾಂ ವೇದಾನ್ತಾನಾಂ, ತಥಾ ವಯಮಸ್ಯಾಂ ಶಾರೀರಕ

ವಿಮಾವಮಾಂಸಾಯಾಂ ಪ್ರದರ್ಶಯಿಷ್ಯಾಮಃ ||" ಮಿಥ್ಯಾಪ್ರತ್ಯಯ ರೂಪವಾದ ಅಧ್ಯಾಸವು ಕರ್ತೃತ್ವಭೋಕ್ತೃತ್ವಕ್ಕೆ ಪ್ರವರ್ತಕವು; ಈ ಅನರ್ಥ ಹೇತುವನ್ನು ನಾಶಗೊಳಿಸಿ ಆತ್ಮೈಕತ್ವವಿದ್ಯೆಯನ್ನು ಪಡೆಯಿಸುವದಕ್ಕಾಗಿ ವೇದಾಂತಗಳೆಲ್ಲವೂ ಆರಂಭವಾಗಿರುತ್ತವೆ. ಇದು ಹೇಗೆಂಬುದನ್ನು ನಾವು ಈ ಶಾರೀರಕವಿಮಾವಮಾಂಸೆಯಲ್ಲಿ ತೋರಿಸಿಕೊಡುವೆವು ಎಂದು ಬರೆದಿರುತ್ತಾರೆ. ಬ್ರಹ್ಮಸೂತ್ರಗ್ರಂಥದ ಮೊದಲನೆಯಸೂತ್ರದಲ್ಲಿ ವೇದಾಂತಶಾಸ್ತ್ರವನ್ನು ವೇದಾಂತ ವಿಮಾವಮಾಂಸಾಶಾಸ್ತ್ರವೆಂದು ಕರೆದಿರುತ್ತಾರೆ. ಈ ವಾಕ್ಯದಲ್ಲಿ ಸೂತ್ರಗಳ ಒಟ್ಟು ತಾತ್ಪರ್ಯವನ್ನು ಹಿಂಡಿಟ್ಟಿರುತ್ತದೆ ಎನ್ನಬಹುದು. ಇಲ್ಲಿರುವ ಮುಖ್ಯಾಂಶಕ್ಕೆ ವಿರುದ್ಧವಾಗಿರುವ ಅಭಿಪ್ರಾಯವನ್ನು ಹೊರಡಿಸುವ ಗ್ರಂಥವು ಆಚಾರ್ಯರ ಗ್ರಂಥವಲ್ಲ ಎಂಬ ತತ್ತ್ವವನ್ನು ನಾವು ಇಲ್ಲಿ ಅವಲಂಬಿಸಿರುತ್ತೇವೆ.

ಉಪನಿಷದ್ಭಾಷ್ಯಗಳು

೧೬೨. ಆಚಾರ್ಯರ ಹೆಸರಿನಲ್ಲಿರುವ ದಶೋಪನಿಷತ್ತುಗಳನ್ನು ಪಠನ ಪಾಠನಕ್ಕೆ ಎಲ್ಲರೂ ಉಪಯೋಗಿಸುತ್ತಿರುತ್ತಾರೆ. ಇವುಗಳ ಜೊತೆಗೆ ಶ್ವೇತಾಶ್ವತರ, ನೃಸಿಂಹತಾಪನಿಗಳೂ ಅವರ ಕೃತಿಯೇ ಎಂದು ಹಲವರ ನಂಬಿಕೆ (ಪು. ೧೦೦).

ಈ ಭಾಷ್ಯಗಳೆಲ್ಲ ಆಚಾರ್ಯರ, ಸೂತ್ರಭಾಷ್ಯವನ್ನು ಬರೆದಿರುವ ಆಚಾರ್ಯರ, ಕೃತಿಗಳೆ?– ಎಂಬುದನ್ನು ವಿಚಾರಮಾಡುವದು ಒಳ್ಳೆಯದು. ಆದ್ದರಿಂದ ಇವುಗಳಲ್ಲಿ ಕೆಲವನ್ನು ಕುರಿತು ಒಂದೆರಡು ವಾಕ್ಯಗಳನ್ನು ಬರೆಯುವೆವು. ಈಶಾವಾಸ್ಯದ(ವಾಜಸನೇಯಶಾಖೆಯವರ ಸಂಹಿತೋಪನಿಷತ್ತಿನ)ಎಂಟನೆಯ ಮಂತ್ರದಲ್ಲಿ "ಶುದ್ಧಂ ನಿರ್ಮಲಮ್, ಅವಿದ್ಯಾಮಲರಹಿತಮ್ ಇತಿ ಕಾರಣಶರೀರಪ್ರತಿಷೇಧಃ" ಶುದ್ಧವೆಂದರೆ ಅವಿದ್ಯಾಮಲವಿಲ್ಲದ್ದು; ಇದರಿಂದ ಕಾರಣಶರೀರವನ್ನು ಅಲ್ಲಗಳೆದಿದೆ– ಎಂದು ಬರೆದಿದೆ. ಸೂತ್ರಭಾಷ್ಯದಲ್ಲಿಯಾಗಲಿ ಉಳಿದ ಉಪನಿಷತ್ತುಗಳಲ್ಲಾಗಲಿ 'ಅವಿದ್ಯೆ'ಯನ್ನು ಕಾರಣಶರೀರವೆಂದು ಕರೆದಿರುವದು ಎಲ್ಲಿಯೂ ಕಾಣಿಸುವದಿಲ್ಲ. ಹನ್ನೆರಡನೆಯ ಮಂತ್ರದ ಭಾಷ್ಯದಲ್ಲಿ 'ಅಸಂಭೂತಿಃ ಪ್ರಕೃತಿಃ ಕಾರಣಮ್ ಅವಿದ್ಯಾ ಅವ್ಯಾಕೃತಾಖ್ಯಾ' ಅಸಂಭೂತಿ ಎಂದರೆ ಪ್ರಕೃತಿಯು, ಕಾರಣವು ಅವ್ಯಾಕೃತವೆಂಬ ಹೆಸರಿನ ಅವಿದ್ಯೆ– ಎಂದು ಬರೆದಿದೆ. ಅವ್ಯಾಕೃತವನ್ನು ಕಾರಣಾವಿದ್ಯೆ ಎಂದು ಬರೆದಿರುವದು ಮತ್ತೆ ಯಾವ ಭಾಷ್ಯದಲ್ಲಿಯೂ ಕಾಣುವದಿಲ್ಲ. ಕಾರಣಶರೀರವನ್ನು ಅಂಗೀಕರಿಸುವದೂ ಅವ್ಯಾಕೃತವನ್ನು ಕಾರಣಾವಿದ್ಯೆ ಅಥವಾ ಮೂಲಾವಿದ್ಯೆ– ಎಂದು ಕರೆಯುವದೂ ವ್ಯಾಖ್ಯಾನ ಪ್ರಸ್ಥಾನೆಗಳಲ್ಲಿ ರೂಢಿಯಿದೆ. ಈ ವಿಷಯವನ್ನು ಮುಂದೆ ನಾವು ವಿಸ್ತಾರವಾಗಿ

ವಿಮರ್ಶೆಮಾಡಲಿರುವೆವು. ಪ್ರಕೃತಭಾಷ್ಯವಾಕ್ಯಗಳನ್ನು ಮಿಕ್ಕ ಭಾಷ್ಯಗಳ ಅಭಿಪ್ರಾಯಕ್ಕೆ ಹೊಂದುಗಡೆಯಾಗುವಂತೆ ಹೇಗೋ ಕಷ್ಟದಿಂದ ವ್ಯಾಖ್ಯಾನ ಮಾಡಬಹುದಾದರೂ ಮಿಕ್ಕ ಭಾಷ್ಯಗ್ರಂಥಗಳಲ್ಲಿ ಎಲ್ಲಿಯೂ ಇಲ್ಲದ ಈ ಬಗೆಯ ಪರಿಭಾಷೆಯನ್ನು ಇದೊಂದೇ ಗ್ರಂಥದಲ್ಲಿ ಏತಕ್ಕೆ ಅನುಸರಿಸಿದೆ ಎಂಬುದು ವಿಚಾರಣೀಯವಾಗಿದೆ.

ಕೇನೋಪನಿಷತ್ತಿಗೆ ವ್ಯಾಖ್ಯಾನಕಾರರು ಪದಭಾಷ್ಯ, ವಾಕ್ಯಭಾಷ್ಯ– ಎಂದು ಕರೆದಿರುವ ಎರಡು ಭಾಷ್ಯಗಳಿವೆ. ವಾಕ್ಯಭಾಷ್ಯದಲ್ಲಿ ಕೊಟ್ಟಿರುವ ಅವತರಣಿಕಾವಾಕ್ಯಗಳು ಪದಭಾಷ್ಯದ ವಾಕ್ಯಗಳಿಗಿಂತ ವಿಲಕ್ಷಣವಾಗಿವೆ. 'ಶ್ರೋತ್ರಸ್ಯ ಶ್ರೋತ್ರೇಮ್ ಇತ್ಯಾದಿ ಪ್ರತಿವಚನಂ ನಿರ್ವಿಶೇಷಸ್ಯ ನಿಮಿತ್ತ ತ್ವಾರ್ಥಮ್', 'ಯದಿ ಮನ್ಯಸೇ ಸುವೇದೇತಿ ಶಿಷ್ಯಬುದ್ಧಿವಿಶಾಲನಾ ಗೃಹೀತ ಸ್ಮರತಾಯೈ' –ಈ ಬಗೆಯ ಅವತರಣಿಕಾವಾಕ್ಯಗಳು ಮಿಕ್ಕ ಭಾಷ್ಯಗಳಲ್ಲಿ ಕಾಣ ಬರುವದಿಲ್ಲ. ಪದಭಾಷ್ಯದಲ್ಲಿ ಒಪ್ಪಿರುವದಕ್ಕಿಂತ ಬೇರೆಯ ಉಪನಿಷತ್ಪಾಠವನ್ನು ವಾಕ್ಯಭಾಷ್ಯದಲ್ಲಿ ಹಿಡಿದಿದೆ. ಕೆಲವು ಸಂದರ್ಭಗಳಲ್ಲಿ ಈ ಎರಡು ಭಾಷ್ಯಗಳ ವಿಷಯಪ್ರತಿಪಾದನೆಯು ಪರಸ್ಪರವಿರುದ್ಧವಾಗಿದೆ. ಉದಾಹರಣೆ 'ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಮೇತಿ' (ಕೇ. ೪–೭) ಎಂಬ ವಾಕ್ಯದ ಭಾಷ್ಯಗಳನ್ನು ನೋಡಿ. ಅಬ್ರೂಮ ಎಂದರೆ ಹೇಳಿದ್ದೇವೆ ಎಂದು ಪದಭಾಷ್ಯದಲ್ಲಿದೆ ; 'ಹೇಳುವೆವು' ಎಂದರ್ಥವೆಂದು ವಾಕ್ಯಭಾಷ್ಯ. ಇಂಥ ಅನೇಕ ಕಾರಣಗಳಿಂದ ಕೇನವಾಕ್ಯ ಭಾಷ್ಯವು ಆಚಾರ್ಯರದ್ದಾಗಿರಲಾರದೆಂಬುದಕ್ಕೆ ಎಡೆಯನ್ನು ಕೊಡುತ್ತದೆ.

ತೈತ್ತಿರೀಯಬೃಹದಾರಣ್ಯಕಗಳಿರಡೂ ಒಂದು ಅಸಾಧಾರಶೈಲಿಯನ್ನು ಅವಲಂಬಿಸಿರುತ್ತವೆ. 'ಗತ್ಯೈಶ್ವರ್ಯಾದಿಶ್ರುತಿವಿರೋಧ ಇತಿ ಚೇತ್ | ಅಥಾಪಿ ಸ್ಯಾತ್, ಯದ್ಯಪ್ಯಾಪ್ತ್ಯೋ ಮೋಕ್ಷಃ ತದಾ ಗತಿಶ್ರುತೀನಾಂ ಚ ಕೋಪಃ ಸ್ಯಾತ್ ಇತಿ ಚೇತ್ ||' (ತೈ. ಶೀಕ್ಷಾ. ಉಪಸಂಹಾರ) ; ನಿರೋಧಸ್ತರ್ಹಿ ಅರ್ಥಾನ್ತರಮ್ ಇತಿ ಚೇತ್ | ಅಥಾಪಿ ಸ್ಯಾತ್ ಚಿತ್ತವೃತ್ತಿನಿರೋಧಸ್ಯ ವೇದವಾಕ್ಯಜನಿತಾತ್ಮ ವಿಜ್ಞಾನಾತ್ ಅರ್ಥಾನ್ತರತ್ವಾತ್, ತನ್ಮಾನ್ತರೇಷು ಚ ಕರ್ತವ್ಯತಯಾ ಅವಗತ ತ್ವಾತ್ ವಿಧೇಯತ್ವಮ್ ಇತಿ ಚೇತ್ ||' (ಬೃ. ಭಾ. ೧–೪–೭). ಹೇಗೆ ಚೇತ್ ಎಂಬ ಅವ್ಯಯವನ್ನು ಕೊನೆಗಿಟ್ಟಿರುವ ಪೂರ್ವಪಕ್ಷದ ಸಂಗ್ರಹವಾಕ್ಯವನ್ನು ಮತ್ತೊಮ್ಮೆ ಚೇದಂತವಾದ ವಾಕ್ಯದಿಂದ ವಿವರಿಸುವದು ಈ ಎರಡು ಭಾಷ್ಯಗಳಲ್ಲಿ ಮಾತ್ರ[1] ಕಾಣಿಸುತ್ತಿದೆ ; ಮಿಕ್ಕ ಭಾಷ್ಯಗಳಲ್ಲಿ ಅದು ಎದ್ದು ಕಾಣಿಸುವದಿಲ್ಲ.

1. ಗೀತಾಭಾಷ್ಯದಲ್ಲಿ ಇಂಥ ಒಂದು ಉದಾಹರಣೆಯು ನಮಗೆ ಸಿಕ್ಕಿದೆ. 'ಮೋಕ್ಷ್ಯ ಸೈವ ಇತಿ ಚೇತ್। ಸ ಕರ್ಮಣಾಂ ಕೃತಾನಾಮ್ ಈಶ್ವರೇ ನ್ಯಾಸೋ ಮೋಕ್ಷ್ಯಸೈವ ನ ಫಲಾನ್ತರಾಯ ಯೋಗಸಹಿತಃ। ಯೋಗಾಚ್ಚ ವಿಭ್ರಷ್ಟಃ, ಇತ್ಯತಃ ತಂ ಪ್ರತಿ ನಾಶಾಶಙ್ಕಾ ಯುಕ್ತೈವ ಇತಿ ಚೇತ್' ॥ (ಗೀ. ಭಾ. ೬–೧).

ಬೃಹದಾರಣ್ಯಕಭಾಷ್ಯಕ್ಕೂ ಸೂತ್ರಭಾಷ್ಯಕ್ಕೂ ಇರುವ ಕೆಲವು ಅಭಿಪ್ರಾಯ ಭೇದಗಳನ್ನು ಹಿಂದೆಯೇ (ಪು. ೨೪–೨೫)ರಲ್ಲಿ ತಿಳಿಸಿರುತ್ತೇವೆ. ಈ ಎರಡು ವೈಲಕ್ಷಣ್ಯಗಳಲ್ಲದೆ ಮತ್ತೆ ಯಾವದಾದರೂ ಈ ಭಾಷ್ಯಗಳೆರಡರಲ್ಲಿಯೂ ಇದೆಯೆ? –ಎಂಬುದನ್ನು ವಿದ್ವಾಂಸರು ಪರಿಶೀಲಿಸತಕ್ಕದ್ದಿದೆ.

ಹೀಗೆಯೇ ಛಾಂದೋಗ್ಯೋಪನಿಷದ್ಭಾಷ್ಯಕ್ಕೂ ಸೂತ್ರಭಾಷ್ಯಕ್ಕೂ ಸಣ್ಣಪುಟ್ಟವಿಷಯಗಳಲ್ಲಿ ಮತಭೇದವು ಕಾಣಿಸುತ್ತಿದೆ. ಉದಾಹರಣೆಗೆ "ಯಸ್ತ್ವೇವಂ ಪ್ರಾದೇಶಮಾತ್ರಮ್" (ಛಾಂ. ೫–೧೪–೧) ಎಂದಿರುವ ವೈಶ್ವಾನರವಿದ್ಯಾವಾಕ್ಯದಲ್ಲಿರುವ 'ಪ್ರಾದೇಶಮಾತ್ರಮ್' ಎಂಬ ವಿಶೇಷಣಕ್ಕೆ ಬರೆಯುವಾಗ 'ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ' (ವೇ. ಸೂ. ೧–೨–೩೧) ಎಂಬ ಸೂತ್ರದ ಭಾಷ್ಯದಲ್ಲಿ "ಇದೇ ಪ್ರಕರಣದಲ್ಲಿ ವಾಜಸನೇಯಿಬ್ರಾಹ್ಮಣದಲ್ಲಿ ದ್ಯುಲೋಕವೇ ಮುಂತಾಗಿ ಪೃಥಿವೀಪರ್ಯಂತವಾಗಿರುವ ವೈಶ್ವಾನರಾವಯವಗಳನ್ನು ಅಧ್ಯಾತ್ಮವಾಗಿ ಮೂರ್ಧಾದಿಯಾಗಿ ಚುಬುಕದವರೆಗಿನ ದೇಹಾವಯವಗಳಲ್ಲಿ ಸಂಪಾದನೆಮಾಡಿ ಪರಮೇಶ್ವರನಿಗೆ ಪ್ರಾದೇಶಮಾತ್ರ ಸಂಪತ್ತಿಯನ್ನು ತಿಳಿಸಿರುತ್ತೆದೆ' (ಸಮಾನಪ್ರಕರಣಂ ವಾಜಸನೇಯಿಬ್ರಾಹ್ಮಣಂ ದ್ಯುಪ್ರಭೃತೀನ್ ಪೃಥಿವೀಪರ್ಯನ್ತಾನ್ ತ್ರೈಲೋಕ್ಯಾತ್ಮನೋ ವೈಶ್ವಾನರಸ್ಯ ಅವಯವಾನ್ ಅಧ್ಯಾತ್ಮಮೂರ್ಧಪ್ರಭೃತಿಷು ಚುಬುಕಪರ್ಯನ್ತೇಷು ದೇಹಾವಯವೇಷು ಸಂಪಾದಯತ್ ಪ್ರಾದೇಶಮಾತ್ರಸಂಪತ್ತಿಂ ಪರಮೇಶ್ವರಸ್ಯ ದರ್ಶಯತಿ....) ಎಂದು ಬರೆದಿದೆ. ಆದರೆ ಆದೇ ಮಂತ್ರದ ಛಾಂದೋಗ್ಯಭಾಷ್ಯದಲ್ಲಿ 'ಶಾಖಾಂತರದಲ್ಲಾದರೋ ಮೂರ್ಧಾದಿಚುಬುಕಾಂತಪ್ರತಿಷ್ಠಿತನಾಗಿರುವದರಿಂದ ಪ್ರಾದೇಶಮಾತ್ರನೆಂದು ಕಲ್ಪಿಸಿರುತ್ತಾರೆ : ಆದರೆ ಇಲ್ಲಿ ಆ ಅಭಿಪ್ರಾಯವಿಲ್ಲ' (ಶಾಖಾನ್ತರೇ ಮೂರ್ಧಾದಿಶ್ಚಿಬುಕಪ್ರತಿಷ್ಠ ಇತಿ ಪ್ರಾದೇಶಮಾತ್ರಂ ಕಲ್ಪಯನ್ತಿ | ಇಹ ತು ನ ತಥಾಭಿಪ್ರೇತಃ) ಎಂದು ಬರೆದಿದೆ.

ಹೀಗೆ ಸಣ್ಣಸಣ್ಣ ಅಭಿಪ್ರಾಯಭೇದಗಳು ಕಾಣಿಸುತ್ತಿದ್ದರೂ ಸಿದ್ಧಾಂತದ ವಿಷಯಕ್ಕೆ ಪ್ರಸಿದ್ಧವಾದ ಹತ್ತು ಉಪನಿಷದ್ಭಾಷ್ಯಗಳಿಗೂ ಸೂತ್ರಭಾಷ್ಯಕ್ಕೂ ಯಾವ ಬಲವಾದ ವಿರೋಧವೂ ಕಾಣಿಸುತ್ತಿಲ್ಲ.[1]

ಆದರೆ ಶ್ವೇತಾಶ್ವತರ, ನೃಸಿಂಹತಾಪನೀಯ– ಈ ಉಪನಿಷತ್ತುಗಳ ವಿಷಯವು ಹೀಗಿಲ್ಲ. ಆ ಉಪನಿಷತ್ತುಗಳ ಭಾಷ್ಯರಚನೆಯ ಶೈಲಿಯೂ ಮತ್ತು

1. ಮಾಂಡೂಕ್ಯೋಪನಿಷದ್ಭಾಷ್ಯವೂ ಶಾಂಕರಮತಕ್ಕೆ ವಿರುದ್ಧವಾದ ಅಭಿಪ್ರಾಯುಗಳನ್ನೊಳಗೊಂಡಿದೆಯೆಂದೂ ಅದರಲ್ಲಿ ಕೆಲವು ವ್ಯಾಕರಣವಿರುದ್ಧಪ್ರಯೋಗಗಳೂ ಇವೆಯೆಂದೂ ಕೆಲವರು ಅಭಿಪ್ರಾಯಪಟ್ಟಿರುತ್ತಾರೆ. ಇದು ಸರಿಯಲ್ಲವೆಂದು ನಮ್ಮ ಮುತ. 'ಮಾಂಡೂಕ್ಯರಹಸ್ಯವಿವೃತಿಃ' ಎಂಬ ಗ್ರಂಥದಲ್ಲಿ ಆ ಉಪನಿಷದ್ಭಾಷ್ಯದಲ್ಲಿರುವ ಅಭಿಪ್ರಾಯುಗಳು ಶಾಂಕರಮತಕ್ಕೆ ಭಿನ್ನವಲ್ಲವೆಂದು ನಾವು ತೋರಿಸಿಕೊಟ್ಟಿರುತ್ತೇವೆ.

ವ್ಯಾಖ್ಯಾನಕ್ರಮವೂ ಸೂತ್ರಭಾಷ್ಯಕ್ಕಿಂತಲೂ ದಶೋಪನಿಷದ್ಭಾಷ್ಯಗಳಿಗಿಂತಲೂ ಅತಿಭಿನ್ನವಾಗಿರುತ್ತವೆ. ಶ್ವೇತಾಶ್ವತರಭಾಷ್ಯದಲ್ಲಿರುವ ಅವತರಣಿಕೆಯು ಅನವಶ್ಯನಾಗಿ ವಿಸ್ತೃತವಾಗಿದೆ. ಇದರಲ್ಲಿ ವಿಷ್ಣುಪುರಾಣ, ಲಿಂಗಪುರಾಣ, ಯೋಗವಾಸಿಷ್ಠ, ಶಿವಧರ್ಮೋತ್ತರ, ವಿಷ್ಣುಧರ್ಮೋತ್ತರ, ವಾಯುಪುರಾಣಾದಿಗಳ ದೀರ್ಘದೀರ್ಘಭಾಗಗಳನ್ನು ಉದಾಹರಿಸಿದೆ. ಒಂದುಕಡೆ (೧-೮ರ ವ್ಯಾವ್ಯಾನದಲ್ಲಿ) 'ಶಾಕಟಿಕೈಃ ಗೌತಮಸಾಂಖ್ಯಾಚಾರ್ಯೈಃ' ಎಂದು ಗೌಡಪಾದಾಚಾರ್ಯರನ್ನು ಹೆಸರಿಟ್ಟು ಕರೆದಿದೆ. ಈ ಕ್ರಮಗಳು ಯಾವವೂ ಮಿಕ್ಕ ಭಾಷ್ಯಗಳಲ್ಲಿಲ್ಲ. ಇವೇ ಮುಂತಾದ ಕಾರಣಗಳಿಂದ ಇದು ಆಚಾರ್ಯರ ಭಾಷ್ಯವಲ್ಲವೆನ್ನಬೇಕಾಗಿದೆ.

ನೃಸಿಂಹತಾಪನೀಯಭಾಷ್ಯವೂ ಆಚಾರ್ಯರದ್ದಾಗಿರಲಾರದೆಂಬುದಕ್ಕೆ ಕಾರಣಗಳಿವೆ. ಅದರಲ್ಲಿ ತಾಂತ್ರಿಕವಿಚಾರಗಳೇ ಹೇರಳವಾಗಿ ಬರುತ್ತವೆ. 'ಪ್ರಪಂಚಸಾರ'ದಿಂದ ಕೆಲವು ಶ್ಲೋಕಗಳನ್ನು ಇಲ್ಲಿ ಉದಾಹರಿಸಿದೆ. ಇದು ಮಿಕ್ಕ ಭಾಷ್ಯಗಳಲ್ಲಿಲ್ಲವಾದ್ದರಿಂದ ಇದು ಆಚಾರ್ಯರ ಕೃತಿಯಾಗಿರಲಾರದೆಂದು ಹಲವರು ಅಭಿಪ್ರಾಯಪಡುತ್ತಾರೆ [1]

ಒಟ್ಟಿನಮೇಲೆ ಉಪನಿಷತ್ಪ್ರಸ್ಥಾನದ ಭಾಷ್ಯಗಳಿಗೂ ಸೂತ್ರಪ್ರಸ್ಥಾನದ ಭಾಷ್ಯಕ್ಕೂ ಪ್ರತಿಪಾದ್ಯವಿಷಯದಲ್ಲಿ ಅಷ್ಟೇನೂ ಭೇದವು ಕಾಣಿಸುವದಿಲ್ಲವೆನ್ನಬಹುದು.

ಗೀತಾಭಾಷ್ಯ

೧೬೨. ಗೀತಾಭಾಷ್ಯದಲ್ಲಿಯೂ ಮಿಕ್ಕ ಭಾಷ್ಯಗಳಿಗಿಂತ ಶೈಲಿಯಲ್ಲಾಗಲಿ ವಿಷಯಪ್ರತಿಪಾದನೆಯಲ್ಲಾಗಲಿ ವೈಲಕ್ಷಣ್ಯವು ಕಾಣಿಸುತ್ತಿಲ್ಲ. ಜ್ಞಾನಕರ್ಮಸಮುಚ್ಚಯವಾದವನ್ನು ಖಂಡಿಸುವದು, ಕೇವಲ ಕರ್ಮವು ಅಭ್ಯುದಯಕ್ಕೆ ಕಾರಣವಾದರೂ ಫಲಾಕಾಂಕ್ಷೆಯಿಲ್ಲದೆ ಪರಮೇಶ್ವರಪ್ರೀತಿಗಾಗಿ ಅನುಷ್ಠಾನಮಾಡಿದರೆ ಚಿತ್ತಶುದ್ಧಿಯ ದ್ವಾರದಿಂದ ಅದ್ವೈತಾತ್ಮಜ್ಞಾನೋತ್ಪತ್ತಿ, ಜ್ಞಾನನಿಷ್ಠಾಯೋಗ್ಯತೆ- ಇವಕ್ಕೆ ಕಾರಣವಾಗಿರುತ್ತದೆ ಎಂದು ತೋರಿಸುವದು, ಸರ್ವ

---

1. ಈ ಕಾರಣದಿಂದಲೊ, ಅಥವಾ ತಮ್ಮ ಕಾಲದಲ್ಲಿ ಶ್ವೇತಾಶ್ವತರ ಭಾಷ್ಯವು ಶಂಕರಾಚಾರ್ಯರದ್ದೇ ಎಂದು ಪ್ರಸಿದ್ಧವಾಗಿದ್ದರಿಂದಲೊ, ಏನೊ, ಶ್ರೀರಾಮಾನುಜಾಚಾರ್ಯರು ಇಲ್ಲಿ ಉದಾಹರಿಸಿರುವ ಪುರಾಣವಾಕ್ಯಗಳ ಅರ್ಥವನ್ನು ವಿಮರ್ಶಿಸಿ ಅವೂ ಅದ್ವೈತಕ್ಕೆ ಅನುಗುಣವಾಗಿಲ್ಲವೆಂಬುದನ್ನು ತೋರಿಸಿಕೊಡುವದಕ್ಕೆ ಪ್ರಯತ್ನಿಸಿರುತ್ತಾರೆ ಅವರು ಸುಪ್ರಸಿದ್ಧವಾದ ಅಧ್ಯಾಸಭಾಷ್ಯವನ್ನು ಸಮಾಲೋಚನೆಗೆ ತೆಗೆದುಕೊಂಡೇ ಇಲ್ಲ ಇದೇಕೆಂಬುದನ್ನು ಪುರಾತತ್ತ್ವಶೋಧಕರು ವಿಚಾರಮಾಡಬೇಕಾಗಿದೆ; ಪ್ರಕೃತಕ್ಕೆ ಈ ವಿಚಾರವು ಅನವಶ್ಯವಾದ್ದರಿಂದ ನಾವು ಅದನ್ನು ಇಲ್ಲಿಗೇ ಕೈಬಿಟ್ಟಿರುತ್ತೇವೆ.

ಕರ್ಮಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯಿಂದ ಸಂಸಾರಾನರ್ಥನಿವಾರಣೆ– ಇವೇ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಎಲ್ಲೆಲ್ಲಿಯೂ ಮುಖ್ಯವಾಗಿ ಪ್ರತಿಪಾದಿತವಾಗಿರುವ ಸಮಾನವಿಷಯಗಳು.

ಗೀತೆಯಲ್ಲಿ ಮಾತ್ರವೇ ಭಕ್ತಿ ಎಂಬ ಶಬ್ದವು ಕಾಣುತ್ತದೆ ಎಂಬುದೊಂದು ವಿಶೇಷವು. ಆರ್ತಾದಿರೂಪಭೇದದಿಂದ ಗೌಣಭಕ್ತಿಯೆಂದೂ ಜ್ಞಾನನಿಷ್ಠಾರೂಪದಿಂದ ಪರಭಕ್ತಿಯೆಂದೂ ಎರಡು ಬಗೆಯಾಗಿದೆ.... ಎಂದು ಭಾಷ್ಯಕಾರರು ಇಲ್ಲಿ ವರ್ಣಿಸಿರುತ್ತಾರೆ. ಮಿಕ್ಕೆರಡು ಪ್ರಸ್ಥಾನಗಳ ಭಾಷ್ಯಗಳಲ್ಲಿ ಈ ಶಬ್ದವು ಬರುವದಿಲ್ಲವೇಕೆ ? ಪರಭಕ್ತಿಯೆಂದರೆ ಜ್ಞಾನನಿಷ್ಠೆಯೆಂದೇ ಏತಕ್ಕೆ ಕಲ್ಪಿಸಬೇಕು?–ಎಂಬೀ ಪ್ರಶ್ನೆಗಳನ್ನು ಆಚಾರ್ಯರು ಇಲ್ಲಿ ಏತಕ್ಕೆ ಚರ್ಚಿಸಿಲ್ಲವೆಂಬುದು ತಿಳಿಯುವಂತಿಲ್ಲ. ಹೇಗೇ ಆಗಲಿ, ಮಿಕ್ಕೆರಡು ಪ್ರಸ್ಥಾನಗಳಿಗೆ ವಿರುದ್ಧವಾಗಿ ಇಲ್ಲಿ ಏನನ್ನೂ ಪ್ರತಿಪಾದಿಸಿಲ್ಲ. ಅದಕ್ಕೆ ಬದಲು ಸೂತ್ರಕ್ಕೂ ಉಪನಿಷತ್ತಿಗೂ ಹೊಂದುಗಡೆಯಾಗಿಯೇ ಗೀತಾವಿವರಣೆಯನ್ನು ಮಾಡುವದಕ್ಕೇ ಪ್ರಯತ್ನಿಸಿರುತ್ತದೆ. 'ಸರ್ವದ್ವಾರಾಣಿ ಸಂಯಮ್ಯ' (ಗೀ. ೮–೧೨), 'ಅಗ್ನಿರ್ಜ್ಯೋತಿಃ' (೮–೨೪)– ಇವುಗಳನ್ನು ವ್ಯಾಖ್ಯಾನಮಾಡುವಾಗ ಉಪನಿಷತ್ಪ್ರಸ್ಥಾನಕ್ಕೂ ಸೂತ್ರಪ್ರಸ್ಥಾನಕ್ಕೂ ಉಪಾಸನೆಯ ವಿಷಯದಲ್ಲಿ ಹೊಂದುಗಡೆಯಾಗುವಂತೆಯೇ ಗೀತೋಪದೇಶವನ್ನು ವಿವರಿಸುವದಕ್ಕೆ ಪ್ರಯತ್ನಿಸಿರುವದನ್ನು ಇಲ್ಲಿ ಉದಾಹರಣೆಯಾಗಿ ಕೊಡಬಹುದು. ಹದಿಮೂರನೆಯ ಅಧ್ಯಾಯದಲ್ಲಿ 'ಕ್ಷೇತ್ರಕ್ಷೇತ್ರಜ್ಞಸಂಯೋಗಾತ್' (೧೩–೨೬) ಎಂಬ ಶ್ಲೋಕದ ವ್ಯಾಖ್ಯಾನದಲ್ಲಿ ಕ್ಷೇತ್ರಕ್ಷೇತ್ರಜ್ಞಸಂಯೋಗವೆಂದರೆ ಅವೆರಡರ ಇತರೇತರತದ್ಧರ್ಮಾಧ್ಯಾಸವೇ ಎಂದು ಸೂತ್ರಭಾಷ್ಯದ ಉಪೋದ್ಘಾತದಂತೆ ಸಮಾನಶಬ್ದಗಳಿಂದಲೇ ವರ್ಣಿಸಿರುವದನ್ನು ಜ್ಞಾನದ ವಿಷಯಕ್ಕೆ ಏಕವಾಕ್ಯತಾಕಲ್ಪನೆಗೆ ಉದಾಹರಣೆಯಾಗಿ ಹೇಳಬಹುದು.[1]

ಇತರ ಭಾಷ್ಯಗಳು

೧೬೩. **ಕೌಷೀತಕಿ, ಮೈತ್ರಾಯಣೀಯ, ಕೈವಲ್ಯ, ಮಹಾನಾರಾಯಣ**–ಈ ಉಪನೀಷತ್ತುಗಳಿಗೂ ಆಚಾರ್ಯರ ಹೆಸರಿನಲ್ಲಿ ಭಾಷ್ಯಗಳಿರುವದಾಗಿ ಕೇಳುತ್ತೇವೆ. ಆದರೆ ಅವು ಆಚಾರ್ಯಕೃತವೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಐತರೇಯದ ಮೊದಲನೆ ಮೂರು ಅಧ್ಯಾಯಗಳ (ಏಷ ಪನ್ಥಾಃ ಎಂಬಲ್ಲಿಂದ ಮೊದಲಾಗಿರುವ ಭಾಗದ) ಭಾಷ್ಯವೊಂದು ಆಚಾರ್ಯಕೃತವೆಂದು ಒಬ್ಬರು ಈ ಗ್ರಂಥಕರ್ತರಿಗೆ ಕೊಟ್ಟಿರುತ್ತಾರೆ. ಅದು ಶೈಲಿಯಲ್ಲಿ ಶಾಂಕರಭಾಷ್ಯಗಳಂತೆಯೇ

1. ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನು ಮೂಲ, ಅನುವಾದ, ಟಿಪ್ಪಣಿ, ಶಬ್ದಾನುಕ್ರಮಣಿಕೆ, ಪೀಠಿಕೆ– ಮುಂತಾದ ಸಾಕಲ್ಯಗಳೊಡನೆ ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ ಪ್ರಕಟಿಸಲಾಗಿದೆ. ಪ್ರಸ್ಥಾನತ್ರಯಭಾಷ್ಯಗಳ ಏಕವಾಕ್ಯತೆಯನ್ನು ವಿಮರ್ಶಿಸುವ ಕುತೂಹಲವುಳ್ಳವರು ಆ ಗ್ರಂಥಗಳನ್ನು ನೋಡಬೇಕು.

ಇದೆ. ಆದರೆ ನಿಜವಾಗಿ ಅದು ಆಚಾರ್ಯಕೃತವೆ ?-ಎಂಬುದನ್ನು ವಿದ್ವಾಂಸರು ಪರಿಶೀಲಿಸಬೇಕಾಗಿದೆ.

ವಿಷ್ಣುಸಹಸ್ರನಾಮಭಾಷ್ಯ, ಸನತ್ಸುಜಾತೀಯಭಾಷ್ಯ– ಇವೆರಡೂ ಶ್ವೇತಾಶ್ವತರಭಾಷ್ಯಕರ್ತರವೇ ಆಗಿರಬೇಕೆಂಬುದಕ್ಕೆ ಗ್ರಂಥಾರಂಭದಲ್ಲಿ ಬರೆದಿರುವ ಭಾಷ್ಯಭಾಗದ ಶೈಲಿಯೂ ಉದಾಹರಿಸಿರುವ ಪುರಾಣವಾಕ್ಯಾದಿಗಳೂ ಸಾಕಾದಷ್ಟು ಆಧಾರವಾಗಿವೆ. ಇವು ಎಂದಿಗೂ ಆಚಾರ್ಯಕೃತವಾಗಿರಲಾರವು ಎಂಬುದಕ್ಕೆ ಶ್ವೇತಾಶ್ವತರವಿಮರ್ಶೆಯಲ್ಲಿ ಹೇಳಿರುವ ಕಾರಣಗಳೇ ಇಲ್ಲಿಯೂ ಸಾಧಕವಾಗಿರುತ್ತವೆ. ಆದರೂ ಇವೆರಶೂ ಆಚಾರ್ಯಕೃತವೆಂದೇ ಅನೇಕರ ನಂಬಿಕೆಯಿದೆ ಎಂಬುದನ್ನು ನೆನಪಿನಲ್ಲಿಡಬೇಕು.

ಹಸ್ತಾಮಲಕಸ್ತೋತ್ರಭಾಷ್ಯ, ಅಧ್ಯಾತ್ಮಪಟಲಭಾಷ್ಯ, ಸಂಧ್ಯಾಭಾಷ್ಯ, ಗಾಯತ್ರೀಭಾಷ್ಯ –ಇವು ಆಚಾರ್ಯರವಾಗಿರಲಾರವೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಲಲಿತಾತ್ರಿಶತೀಭಾಷ್ಯ : ಇದು ಆಚಾರ್ಯರದ್ದೆಂಬುದಕ್ಕೆ ಸಂದೇಹವಿದೆ. ಮುಂದೆ ತಾಂತ್ರಿಕಗ್ರಂಥಗಳ ವಿಷಯವಾಗಿ ಬರೆಯುವಾಗ ಇದರ ವಿಷಯವನ್ನು ಮತ್ತೆ ಪ್ರಸ್ತಾಪಿಸುವೆವು.

ಕೆಲವು ಟೀಕೆಗಳನ್ನು ಆಚಾರ್ಯಕೃತವೆಂದು ಜನರು ಹೇಳಿಕೊಳ್ಳುವದುಂಟು. ಅವುಗಳ ಸ್ವರೂಪವನ್ನು ನೋಡಿದಮಾತ್ರದಿಂದಲೇ ಅವು ಎಂದಿಗೂ ಆಚಾರ್ಯಕೃತವಲ್ಲದವೆಂದು ಗೊತ್ತಾಗುವಂತಿರುವದರಿಂದ ನಾವು ಅವನ್ನು ಹೆಸರಿಸಿಲ್ಲ. ಚಿದ್ವಿಲಾಸರು ಹೇಳಿರುವ (ಪು. ೧೦೦) **ಶ್ರೀರುದ್ರಭಾಷ್ಯ**ವೂ ಈ ಗಂಪಿಗೇ ಸೇರಿದ್ದು. ಅವರು ಉಲ್ಲೇಖಿಸಿರುವ **ಸೌಂದರ್ಯಲಹರಿ**ಯನು ತಂತ್ರಗ್ರಂಥಗಳ ವಿಚಾರವನ್ನು ಮಾಡುವಾಗ ಮತ್ತೆ ಪ್ರಸ್ತಾಪಿಸುವೆವು.

ಸೂತಸಂಹಿತಾದಿಗ್ರಂಥಗಳನ್ನು ಆಚಾರ್ಯರು ನೋಡಿದ್ದರೆ ?

೧೬೪. ಆಚಾರ್ಯರು **ಸೂತಸಂಹಿತೆ**ಯನ್ನು ಹದಿನೆಂಟು ಸಲ ಪಠಿಸಿ ತಮ್ಮ ಭಾಷ್ಯವನ್ನು ಬರೆದರು– ಎಂಬರ್ಥವುಳ್ಳ ಶ್ಲೋಕವೊಂದು ಪ್ರಚಾರದಲ್ಲಿದೆ. ಸೂತಸಂಹಿತೆಯಲ್ಲಿ ಕರ್ಮ, ಉಪಾಸನೆ, ಜ್ಞಾನ– ಈ ಮೂರು ವಿಷಯಗಳನ್ನು ಕುರಿತ ವಿಸ್ತಾರವಾದ ವಸ್ತುಪ್ರತಿಪಾದನೆ ಇರುವದರಿಂದ ಈ ಗ್ರಂಥವು ಆಚಾರ್ಯರು ಪಠಿಸಿರುವದಕ್ಕೆ ತಕ್ಕಷ್ಟು ಉತ್ತಮವಾದದ್ದು ಎಂದು ಹೊಗಳುವದಕ್ಕೆ ಯಾರೋ ಈ ಶ್ಲೋಕವನ್ನು ರಚಿಸಿರಬೇಕೆಂದು ತೋರುತ್ತದೆ. ಹಾಗಿಲ್ಲದಿದ್ದರೆ ಅನೇಕರ ಹೆಸರುಗಳನ್ನು ಉಲ್ಲೇಖಿಸಿರುವ ಸೂತಸಂಹಿತಾವ್ಯಾಖ್ಯಾನಕಾರನಾದ ಮಾಧವಮಂತ್ರಿಯು ಆಚಾರ್ಯರೂ ಈ ಗ್ರಂಥದಿಂದ ಪ್ರಯೋಜನವನ್ನು ಪಡೆದ

ರೆಂದು ಉಲ್ಲೇಖಿಸದೆ ಎಂದಿಗೂ ಬಿಡುತ್ತಿರಲಿಲ್ಲ. ಹೀಗೆಯೇ ಸೂತಸಂಹಿತಾಭಾಷ್ಯವನ್ನೂ ವಿಷ್ಣುಭಾಗವತಭಾಷ್ಯವನ್ನೂ ಆಚಾರ್ಯರು ಬರೆದಿದ್ದಾರೆಂಬ ನಂಬಿಕೆಗಳೂ, ಹಾಗೆ ಬರೆದಿದ್ದರೆ ಚೆನ್ನಾಗಿತ್ತು, ಆ ಗ್ರಂಥಗಳು ಅವರ ಭಾಷ್ಯಕ್ಕೆ ಅರ್ಹವಾದವುಗಳು' ಎಂಬ ಭಕ್ತಿವಂತಜನರ ಅಭಿಲಾಷಾಸೂಚಕಗಳಿಂದು ಮಾತ್ರ ಹೇಳಬಹುದು. ಸೂತಸಂಹಿತೆ, ವಾಸಿಷ್ಠರಾಮಾಯಣ, ಆಧ್ಯಾತ್ಮರಾಮಾಯಣ, ವಿಷ್ಣುಭಾಗವತ–ಮುಂತಾದ ಕೆಲವು ಗ್ರಂಥಗಳಲ್ಲಿ ಆದ್ವೈತವು ತುಂಬಿತುಳುಕುತ್ತಿದ್ದರೂ ಆಚಾರ್ಯರು ಆ ಗ್ರಂಥಗಳಿಂದ ಒಂದು ವಾಕ್ಯವನ್ನೂ ತಮ್ಮ ಭಾಷ್ಯಗಳಲ್ಲಿ ಉದಾಹರಿಸದೆ ಇರುವದಕ್ಕೆ ಏನಾದರೂ ಒಂದು ಕಾರಣ ವಿರಬೇಕಲ್ಲವೆ ? ಇದರ ತತ್ತ್ವವನ್ನು ವಿಮರ್ಶಕರು ಸಮಾಲೋಚನೆಮಾಡಬೇಕಾಗಿದೆ.

ಆಚಾರ್ಯರು ಬ್ರಹ್ಮಸೂತ್ರದ ಸಮನ್ವಯಸೂತ್ರದ ಕೊನೆಯಲ್ಲಿ ಉದಾಹರಿಸಿರುವ 'ಗೌಣನಿಥ್ಯಾತ್ಮನೋಽಸತ್ತ್ವೇ' ಮುಂತಾದ ಮೂರು ಶ್ಲೋಕಗಳು **ಸುಂದರಪಾಂಡ್ಯನವು** ಎಂದು ಸೂತಸಂಹಿತೆಯ ವ್ಯಾಖ್ಯಾಕಾರನು ತಿಳಿಸಿರುತ್ತಾನೆ. ಸುಂದರಪಾಂಡ್ಯನು ತಂತ್ರವಾರ್ತಿಕದಲ್ಲಿ ಪರಾಮೃಷ್ಟನಾಗಿರುವದರಿಂದ ಅತನೊಬ್ಬ ಆಚಾರ್ಯರ ಸಂಪ್ರದಾಯದ ವೇದಾಂತಿ ಎಂದು ಅನೇಕರು ಭಾವಿಸಿರುತ್ತಾರೆ(J.O.R. Vol: No. 1 pp 1. 15). ಆಚಾರ್ಯರ ಭಾಷ್ಯಕ್ಕೆ ಅತ್ಯಂತ ಪುರಾತನವ್ಯಾಖ್ಯಾನವೆಂದು ನಮಗೆ ಸಿಕ್ಕಿರುವ **ಪಂಚಪಾದಿಕೆ**ಯಲ್ಲಿ 'ಪ್ರಸಿದ್ಧಮೇತದ್‌ಬ್ರಹ್ಮವಿದಾಮಿತಿ ಪೂರ್ವೋಕ್ತಂನ್ಯಾಯಂ ಸಂಕ್ಷೇಪತಃಶ್ಲೋಕೈಃ ಸಂಗೃಹ್ಣಾತಿ' ಎಂದಿದೆ ; ಸುಂದರಪಾಂಡ್ಯನ ಪರಾಮರ್ಶವಿಲ್ಲ. ಈಚೆಗೆ ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರೆದಿರುವ ವಾಚಸ್ಪತಿಮಿಶ್ರನ ಭಾಮತಿಯಲ್ಲಿಯೂ ಸುಂದರಪಾಂಡ್ಯನ ಹೆಸರನ್ನು ಹೇಳಿಲ್ಲ; **'ಬ್ರಹ್ಮವಿದಾಂ ಗಾಥಾಮ್ ಉದಾಹರತಿ'** (ಬ್ರಹ್ಮಜ್ಞಾನಿಗಳ ಉಕ್ತಿಯನ್ನು ಉದಾಹರಿಸಿರುತ್ತಾನೆಂದಿಷ್ಟೇ ಇದೆ. ಆ ವ್ಯಾಖ್ಯಾನಕ್ಕೆ ಉಪವ್ಯಾಖ್ಯಾನವನ್ನು ಬರೆದಿರುವ **ಕಲ್ಪತರು**ಕಾರರು ಸುಂದರಪಾಂಡ್ಯನ ಕೆಲವು ವಾಕ್ಯಗಳನ್ನು ಅಲ್ಲಲ್ಲಿ ಉದಾಹರಿಸಿರುತ್ತಾರೆ ; ಆದರೂ ಅವರು ಪ್ರಕೃತ ಶ್ಲೋಕಗಳನ್ನು ಸುಂದರಪಾಂಡ್ಯನವೆಂದು ಹೇಳಿಲ್ಲ. ಮತ್ತೆ ಯಾವ ಭಾಷ್ಯವ್ಯಾಖ್ಯಾನದಲ್ಲಿಯೂ ಈತನ ಹೆಸರಿಲ್ಲ. ಇದನ್ನು ನೋಡಿದರೆ ವ್ಯಾಖ್ಯಾನಕಾರರ ಕಾಲಕ್ಕೂ ಈ ಶ್ಲೋಕಗಳು ಯಾವವೆಂಬುದು ನಿಃಸಂದಿಗ್ಧವಾಗಿ ತಿಳಿದಿರಲಿಲ್ಲವೆಂದು ಊಹಿಸಿದರೆ ತಪ್ಪಾಗಲಾರದು. ಇದೂ ಅಲ್ಲದೆ ಆಚಾರ್ಯರು ತಮ್ಮ ಭಾಷ್ಯದಲ್ಲಿ ಯಾವ ಶೈವ ಗ್ರಂಥದಿಂದಲೂ ವಾಕ್ಯಗಳನ್ನು ಉದಾಹರಿಸಿರುವದು ಕಂಡುಬರುವದಿಲ್ಲ. ಆದ್ದರಿಂದ ಒಂದುವೇಳೆ ಸುಂದರಪಾಂಡ್ಯನ ಗ್ರಂಥದಲ್ಲಿ ಇರುವದಾಗಿ ತಿಳಿದರೂ ಅವು ಅತನವೇ ಆಗಿದ್ದವೋ ಅಥವಾ ಅತನು ಮತ್ತೊಬ್ಬರಿಂದ ತೆಗೆದುಕೊಂಡವು

ಗಳೋ ಎಂದು ನಿಷ್ಕೃಷ್ಟವಾಗಿ ಹೇಳುವದಕ್ಕೆ ಬರುವಂತಿಲ್ಲ. ಈ ಪರಿಸ್ಥಿತಿಯಲ್ಲಿ ಆಚಾರ್ಯರು ಸುಂದರಪಾಂಡ್ಯನ ಸಂಪ್ರದಾಯದವರೆಂದು ನಿರ್ಣಯಿಸುವದು ಎಂದಿಗೂ ಯುಕ್ತವಾಗಲಾರದು. ಆಚಾರ್ಯರ ಸಂಪ್ರದಾಯವು ಯಾವದು ಎಂಬುದನ್ನು ನಾವು ಮುತ್ತೊಂದು ಅಧ್ಯಾಯದಲ್ಲಿ ವಿಚಾರಮಾಡಲಿರುವೆವು. ಆಗ ಇದನ್ನು ಪುನರಾಲೋಚನೆಮಾಡೋಣ. ಇದು ಹೇಗೇ ಇರಲಿ, ಸೂತ್ರಭಾಷ್ಯಕ್ಕೂ ಸೂತಸಂಹಿತೆಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ನಾವು ನಂಬುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಸೂತಸಂಹಿತೆಯ ಬ್ರಹ್ಮಗೀತೆಯಲ್ಲಿ ಕೊಟ್ಟಿರುವ ಉಪನಿಷದ್ವ್ಯಾಖ್ಯಾನವು ಕೆಲವು ಕಡೆಗಳಲ್ಲಿ ಆಚಾರ್ಯಭಾಷ್ಯದಲ್ಲಿರುವದಕ್ಕಿಂತ ಭಿನ್ನವಾಗಿರುವದೂ ಈ ನಂಬಿಕೆಗೆ ಪುಷ್ಟಿಯನ್ನು ಕೊಡುತ್ತದೆ.

---

೧೯. ಆಚಾರ್ಯರ ಉಪದೇಶ

ಆಚಾರ್ಯರ ಉಪದೇಶದ ನಿರ್ಣಯಕ್ಕೆ ಆಧಾರ

೧೬೫. ಆಚಾರ್ಯರ ಹೆಸರಿನಲ್ಲಿ ಪ್ರಚಾರದಲ್ಲಿರುವ ಎಲ್ಲಾ ಪ್ರಕರಣಗಳೂ ಸ್ತೋತ್ರಗಳೂ ಅವರ ಕೃತಿಗಳೆ, ಅಲ್ಲವೆ ? ಎಂಬಿದನ್ನು ನಿರ್ಣಯಿಸುವ ಮುಂಚೆ ಅವರ ಭಾಷ್ಯಗ್ರಂಥಗಳಿಂದ ಹೊರಡುವ ಉಪದೇಶದ ಸಾರವನ್ನು ನಿಷ್ಕರ್ಷಿಸುವದು ಅವಶ್ಯ. ಏಕೆಂದರೆ ಪ್ರಸ್ಥಾನತ್ರಯಭಾಷ್ಯಗಳಿಂದ ಸಿದ್ಧವಾಗುವ ಉಪದೇಶಕ್ಕೆ ವಿರುದ್ಧವೆಂದು ಕಂಡುಬರುವ ಉಪದೇಶಗಳನ್ನೊಳಗೊಂಡ ಯಾವ ಗ್ರಂಥವೂ ಅವರದಲ್ಲ–ಎಂಬ ನಿರ್ಣಯವು ಆದರ ಮೇಲಿಂದ ತೇಲುತ್ತದೆ. ಪ್ರಸ್ಥಾನ ತ್ರಯದ ಅಭಿಪ್ರಾಯವನ್ನು ಆದಮುಟ್ಟಿಗೂ ಸಾಕ್ಷಾತ್ತಾಗಿ ಭಾಷ್ಯಗಳ ಆಧಾರ ದಿಂದಲೇ ಗೊತ್ತುಪಡಿಸುವದು ಯುಕ್ತವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ನಮ್ಮ ಸೌಭಾಗ್ಯದಿಂದ ಭಾಷ್ಯಕಾರರು ಲಲಿತವಾದ ಶೈಲಿಯಿಂದ ತಮ್ಮ ಅಭಿ ಪ್ರಾಯವನ್ನು ಬೇರೆಬೇರೆಯ ಪ್ರಕ್ರಿಯೆಗಳಿಂದ ವಿವರಿಸಿ ಸ್ಪಷ್ಟಗೊಳಿಸಿರುವದರಿಂದ ಅವರ ಮತದ ನಿರ್ಣಯಕ್ಕೆ ವ್ಯಾಖ್ಯಾನಗಳ ಸಹಾಯವೇನೂ ಅಷ್ಟಾಗಿ ಬೇಕಿರು ವದಿಲ್ಲ; ಒಂದುವೇಳೆ ಆಚಾರ್ಯರು ತಮ್ಮ ಮತವನ್ನು ಅತಿಸಂಕ್ಷಿಪ್ತವಾಗಿ, ದುರ್ಗಮವಾದ ಶೈಲಿಯಿಂದ ತಿಳಿಸಿದ್ದರೂ ವ್ಯಾಖ್ಯಾನಗಳು ನಮಗೆ ಅಷ್ಟೇನೂ ಸಹಾಯಕವಾಗುತ್ತಿರಲಿಲ್ಲವೆಂಬುದನ್ನು ನಾವು ನೆನಪಿನಲ್ಲಿಡಬೇಕು. ಏಕೆಂದರೆ ಈ ವ್ಯಾಖ್ಯಾನಗಳು ಒಂದಕ್ಕೊಂದು ವಿರುದ್ಧವಾದ ಅರ್ಥಗಳನ್ನೇ ಆಚಾರ್ಯರ ಅಭಿ ಪ್ರಾಯವೆಂದು ವರ್ಣಿಸುತ್ತಿವೆ; ಮತ್ತು ಒಂದು ವ್ಯಾಖ್ಯಾನಪ್ರಸ್ಥಾನವು ಮತ್ತೊಂದು ಪ್ರಸ್ಥಾನವನ್ನು ಖಂಡಿಸುತ್ತಲೂ ಹೋಗಿದೆ. ಇದನ್ನು ಇಷ್ಟರಲ್ಲಿಯೇ ವಿಶದ ಗೊಳಿಸುವೆವು. **ಈಗ ನಾವು ಇಲ್ಲಿ ಸಂಗ್ರಹಿಸಿರುವ ಆಚಾರ್ಯರ ಉಪ ದೇಶವು ಅವರ ಪ್ರಸ್ಥಾನತ್ರಯಭಾಷ್ಯಗಳ ಆಧಾರದಿಂದಲೆ ಬರೆದದ್ದಾಗಿದೆ** ಎಂಬುದನ್ನು ವಾಚಕರು ನೆನಪಿನಲ್ಲಿಡಬೇಕು.

ಇನ್ನೊಂದು ಮಾತು. ಆಧುನಿಕರೀತಿಯಿಂದ ವಿದ್ಯಾಭ್ಯಾಸವನ್ನು ಮಾಡಿ ರುವ ವಿಮರ್ಶಕರೂ ಆಚಾರ್ಯರ ಅಭಿಪ್ರಾಯವನ್ನು ತಿಳಿಸಿಕೊಡುವದಕ್ಕೆ ಇಂಗ್ಲಿಷಿನಲ್ಲಿ ಅಥವಾ ಬೇರೆಯ ಭಾಷೆಗಳಲ್ಲಿ ಬರೆದಿರುವ ಕೆಲವು ಗ್ರಂಥಗಳಲ್ಲಿ ಆಚಾರ್ಯರ ಭಾಷ್ಯಗಳು, ಪ್ರಕರಣಗಳು, ಮತ್ತು ಭಾಷ್ಯವ್ಯಾಖ್ಯಾನಗಳು– ಇವೆಲ್ಲ ಒಂದೇ ತಾತ್ಪರ್ಯವುಳ್ಳವೆಂಬ ಮತವನ್ನು ಅವಲಂಬಿಸಿಯೇ ವಿಷಯ ಸಮಾಲೋಚನೆಯನ್ನು ಮಾಡಿರುವದು ಕಂಡುಬರುತ್ತದೆ. ಮತ್ತೆ ಕೆಲವು ಇಂಥ ಗ್ರಂಥಗಳಲ್ಲಿ ಬರ್ಕ್ಲೆ, ಕ್ಯಾಂಟ್– ಮುಂತಾದ ಪಾಶ್ಚಾತ್ಯತತ್ತ್ವಶಾಸ್ತ್ರಜ್ಞರ ಅಭಿಪ್ರಾಯಗಳನ್ನೂ ವೇದಾಂತಕ್ಕೆ ಗಂಟುಹಾಕುವ ಪ್ರಯತ್ನವನ್ನು ಮಾಡಿರು ತ್ತದೆ. ಆದ್ದರಿಂದ ನಾವು ಈಗ ಕೊಡುವ ಆಚಾರ್ಯರ ಸಿದ್ಧಾಂತಸಾಧನಗಳ

ಉಪದೇಶಸಂಗ್ರಹವು ಅಂಥ ಗ್ರಂಥಗಳಲ್ಲಿರುವ ಪ್ರತಿಪಾದನೆಗೆ ಎಲ್ಲಿಯಾದರೂ ಭಿನ್ನವಾಗಿ ಅಥವಾ ವಿರುದ್ಧವಾಗಿ ಕಂಡುಬಂದರೆ, ನಾವು ಕೇವಲ ಶಾಂಕರಭಾಷ್ಯಗಳನ್ನೇ ಅನುಸರಿಸಿರುವದೂ[1] ಮಿಕ್ಕವರು ಶಂಕರಾಚಾರ್ಯರವೆಂದು ನಿರ್ಣಯ ಮಾಡದೆ ಅವರ ಹೆಸರಿನಲ್ಲಿರುವ ಗ್ರಂಥಗಳೆಲ್ಲವನ್ನೂ ಸಮಾನಪ್ರಮಾಣವಾಗಿ ಹಿಡಿದಿರುವದೂ ಕಾರಣವೆಂದು ವಾಚಕರು ತಿಳಿಯಬೇಕು.

ಶಾಂಕರಸಿದ್ಧಾಂತದ ರೂಪರೇಖೆ

೧೬೧. ಆಚಾರ್ಯರ ಸಿದ್ಧಾಂತದಲ್ಲಿ ಮುಖ್ಯವಾದ ಅಂಶಗಳನ್ನು ಇಲ್ಲಿ ಸಂಗ್ರಹಿಸಿ ತಿಳಿಸುವೆವು :–

(೧) ನಮ್ಮೆಲ್ಲರ ಪರಮಾರ್ಥಸ್ವರೂಪವಾಗಿ ಒಬ್ಬನೇ ಆತ್ಮನಿರುತ್ತಾನೆ. ಆ ಆತ್ಮನು ಸ್ವಯಂಸಿದ್ಧನು. ಅವನನ್ನು ಯಾವ ಪ್ರಮಾಣದಿಂದಲೂ ಸಾಧಿಸಬೇಕಾದ ಅವಶ್ಯಕತೆಯಿರುವದಿಲ್ಲ. ಅವನು ಇಲ್ಲವೆಂದು ಅಲ್ಲಗಳೆಯುವದೂ ಸಾಧ್ಯವಲ್ಲ; ಏಕೆಂದರೆ ಪ್ರಮಾಣಗಳಿಂದ ಸಿದ್ಧಮಾಡುವವನ, ಅಥವಾ ಅವನು ಇಲ್ಲವೆಂದು ನಿರಾಕರಿಸುವದಕ್ಕೆ ಹೋಗುವವನ, ಪರಮಾರ್ಥಸ್ವರೂಪವೇ ಆತ್ಮನು.

[ನ ಹಿ ಆತ್ಮಾ ಅಗನ್ತುಕಃ ಕಸ್ಯಚಿತ್ । ಸ್ವಯಂಸಿದ್ಧತ್ವಾತ್ । ನ ಹ್ಯಾತ್ಮಾ ಆತ್ಮನಃ ಪ್ರಮಾಣಮಪೇಕ್ಷ್ಯ ಸಿಧ್ಯತಿ । ತಸ್ಯ ಹಿ ಪ್ರತ್ಯಕ್ಷಾದೀನಿ ಪ್ರಮಾಣಾನ್ಯಪ್ರಸಿದ್ಧಪ್ರಮೇಯಸಿದ್ಧಯೇ ಉಪಾದೀಯನ್ತೇ ।....ನ ಚೇದೃಶಸ್ಯ ನಿರಾಕರಣಂ ಸಂಭವತಿ । ಅಗನ್ತುಕಂ ಹಿ ವಸ್ತು ನಿರಾಕ್ರಿಯತೇ ನ ಸ್ವರೂಪಮ್ । ಯ ಏವ ಹಿ ನಿರಾಕರ್ತಾ ತದೇವ ತಸ್ಯ ಸ್ವರೂಪಮ್ ॥ ಸೂ. ಭಾ. ೨–೩–೭]

(೨) ಈ ಆತ್ಮನು ಸತ್ಯಸ್ವರೂಪನು, ಏಕೆಂದರೆ ತನ್ನ ಸ್ವರೂಪವನ್ನು ಎಂದಿಗೂ ವ್ಯಭಿಚರಿಸುವವನಲ್ಲ. ಮಿಕ್ಕದ್ದೆಲ್ಲವೂ ಯಾವದೊಂದು ನಿಶ್ಚಿತವಾದ ಸ್ವರೂಪವಿಲ್ಲದೆ ಇರುವದರಿಂದ ಅನೃತ, ಮಿಥ್ಯೆ.

[ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ನ ವ್ಯಭಿಚರತಿ ತತ್ ಸತ್ಯಮ್ । ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ವ್ಯಭಿಚರತ್ ಅನೃತಮಿತ್ಯುಚ್ಯತೇ । ಅತೋ ವಿಕಾರೋಽನೃತಮ್॥ ತೈ. ೨–೧]

ಇವನು ಜ್ಞಾನಸ್ವರೂಪನು. ಇಲ್ಲಿ ಜ್ಞಾನವೆಂದರೆ ಘಟಾದಿಪದಾರ್ಥಗಳ ವಿಷಯದಲ್ಲಿ ಹುಟ್ಟಿ ಹೋಗುತ್ತಿರುವ ಅರಿವಲ್ಲ; ನಾವುಗಳು ಘಟಜ್ಞಾನವು

1. ಶ್ರೀಶಂಕರಭಗವತ್ಪಾದರವರ ಸರ್ವಸಂಮತೋಪದೇಶಗಳು, ಶಾಂಕರವೇದಾಂತ ಪ್ರಕ್ರಿಯೆ, ಪರಿಶುದ್ಧವೇದಾಂತಸಾರ, ಅನುಭವಪರ್ಯಂತವಾದ ಆತ್ಮವಿಚಾರ, ಶಂಕರ ವೇದಾಂತಸಾರ, ಶಾಸ್ತ್ರಾನುಭಾನುನನ-ಈ ಗ್ರಂಥಗಳಲ್ಲಿ ಆಚಾರ್ಯರ ಪ್ರಕ್ರಿಯೆಯನ್ನೂ ಸಪ್ರಮಾಣವಾಗಿ ವಿವರಿಸಿದೆ.

ಉಂಟಾಯಿತು, ಹೋಯಿತು– ಎನ್ನುತ್ತಿರುವದು ಅಂತಃಕರಣದ ಒಂದು ವೃತ್ತಿ, ವಿಷಯದ ರೂಪವನ್ನು ಪಡೆಯುತ್ತಿರುವ ಅಂತಃಕರಣದ ಪರಿಣಾಮ. ಸೂರ್ಯನ ಬೆಳಕು ಅವನ ಸ್ವರೂಪವೇ ಆಗಿರುವಂತೆ ಆತ್ಮನ ಜ್ಞಾನವು ಅವರ ಸ್ವರೂಪವೇ ಆಗಿರುತ್ತದೆ; ಆತ್ಮಜ್ಞಾನಕ್ಕೆ ವಿಷಯವಾಗಿಯೇ ಅದರಿಂದ ವ್ಯಾಪ್ತವಾಗಿಯೇ ವೃತ್ತಿಗಳು ಹುಟ್ಟಿಹೋಗುತ್ತಿರುವದರಿಂದ, ಬಿಸಿಲಿಗೆ ಹೊಳೆಯುವ ತವರದ ತಗಡಿನಂತೆ, ಅವೂ ಜ್ಞಾನದಂತೆ ಹೊಳೆಯುತ್ತಿರುವವು; ಆದ್ದರಿಂದ ಅವನ್ನೇ ಜನರು ಭ್ರಾಂತಿಯಿಂದ ಆತ್ಮನ ಜ್ಞಾನವೆಂದು ವ್ಯವಹರಿಸುತ್ತಿರುವರು. ನಿಜವಾದ ಜ್ಞಾನವು ಚಿದ್ರೂಪನಾದ ಆತ್ಮನ ಸ್ವರೂಪವೇ.

[ಆತ್ಮನಃ ಸ್ವರೂಪಂ ಜ್ಞಪ್ತಿಃ, ನ ತತೋ ವ್ಯತಿರಿಚ್ಯತೇ। ಅತೋ ನಿತ್ಯೈವ । ತಥಾಪಿ ಬುದ್ಧೇರುಪಾಧಿಲಕ್ಷಣಾಯಾಃ, ಚಕ್ಷುರಾದಿ ದ್ವಾರೈರ್ವಿಷಯಾಕಾರೇಣ ಪರಿಣಾಮಿನ್ಯಾ ಯೇ ಶಬ್ದಾದ್ಯಾಕಾರಾವಭಾಸಾಃ, ತೇ ಆತ್ಮವಿಜ್ಞಾನಸ್ಯ ವಿಷಯಭೂತಾ ಉತ್ಪದ್ಯಮಾನಾ ಏವ ಆತ್ಮವಿಜ್ಞಾನೇನ ವ್ಯಾಪ್ತಾ ಉತ್ಪದ್ಯನ್ತೇ। ತಸ್ಮಾದಾತ್ಮವಿಜ್ಞಾನಾವಭಾಸಾಶ್ಚ ತೇ ವಿಜ್ಞಾನಶಬ್ದವಾಚ್ಯಾಶ್ಚ ಧಾತ್ವರ್ಥಭೂತಾ ಆತ್ಮನ ಏವ ಧರ್ಮಾ ವಿಕ್ರಿಯಾರೂಪಾ ಇತ್ಯವಿವೇಕಿಭಿಃ ಪರಿಕಲ್ಪ್ಯನ್ತೇ ॥ ತೈ. ಭಾ, ೨–೧]

(೩) ಹೀಗೆ ಸತ್ಯವಾಗಿರುವ ಚಿದ್ರೂಪನಾಗಿರುವ ಆತ್ಮನನ್ನೂ ಆ ಜ್ಞಾನಕ್ಕೆ ವಿಷಯವಾಗಿ ಅನೃತವಾಗಿರುವ ಅನಾತ್ಮವನ್ನೂ ಒಂದರಲ್ಲೊಂದನ್ನು ಕಯೆಬೆರಕೆ ಮಾಡಿಕೊಂಡು ಅವುಗಳಲ್ಲೊಂದರ ಧರ್ಮವನ್ನು ಇನ್ನೊಂದರ ಧರ್ಮವೆಂದು ಬಗೆಯುತ್ತಾ ಜನರು ಆವುಗಳನ್ನು ವಿಂಗಡಿಸಿಕೊಳ್ಳಲರಿಯದೆ ಅವಿಚಾರ ಸ್ವಭಾವದಿಂದ ಅನೃತವಾದ ದೇಹೇಂದ್ರಿಯಾದಿಗಳೇ ತಾವೆಂದೂ ದೇಹಕ್ಕಿಂತ ಹೊರಗಿರುವ ಪುತ್ರವಿತ್ತಾದಿಗಳು ತಮ್ಮವೆಂದೂ ವ್ಯವಹರಿಸುತ್ತಿರುವರು.

[ಅನ್ಯೋನ್ಯಸ್ಮಿನ್ನ ನ್ಯೋನ್ಯಾತ್ಮಕತಾಮ್, ಅನ್ಯೋನ್ಯಧರ್ಮಾಂಶ್ಚ ಅಧ್ಯಸ್ಯ ಇತರೇತರಾವಿವೇಕೇನ, ಅತ್ಯನ್ತವಿವಿಕ್ತಯೋರ್ಧರ್ಮಧರ್ಮಿಣೋರ್ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ 'ಅಹಮಿದಮ್', ಮಮೇದಮ್' ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ ॥ ಸೂ. ಭಾ. ಅಧ್ಯಾಸವಿವರಣ ; ಗೀ. ಭಾ. ೧೩–೨೬]

ಆತ್ಮಾನಾತ್ಮಗಳನ್ನು ಹೀಗೆ ಕಲೆಬೆರಕೆಮಾಡಿಕೊಂಡಿರುವ ಅಧ್ಯಾಸಕ್ಕೆ ಅವಿದ್ಯೆ ಎಂದು ಹೆಸರು ; ಅದನ್ನಾಶ್ರಯಿಸಿಯೇ ಎಲ್ಲಾ ಲೌಕಿಕವೈದಿಕವ್ಯವಹಾರಗಳೂ ವಿಧಿಪ್ರತಿಷೇಧಮೋಕ್ಷಶಾಸ್ತ್ರಗಳೂ ಹೊರಟಿರುವವು.

[ತಮೇತಮನುವಿದ್ಯಾಖ್ಯಮಾತ್ಮಾನಾತ್ಮನೋರಿತರೇತರಾಭ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ, ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧ ಮೋಕ್ಷಪರಾಣಿ ॥ ಅಧ್ಯಾಸಭಾಷ್ಯ.]

(೪) ಈ ಅಧ್ಯಾಸವೆಂಬ ತಪ್ಪುತಿಳಿವಳಿಕೆಯು ಜನರಲ್ಲಿ ಅನಾದಿಯಾಗಿ ಅನಂತವಾಗಿದ್ದುಕೊಂಡು ಕರ್ತೃತ್ವಭೋಕ್ತೃತ್ವವನ್ನುಂಟುಮಾಡುತ್ತಾ ಇರುವದು ಸರ್ವಜನರ ಅನುಭವದಲ್ಲಿಯೂ ಇದೆ.

[ಏವಮಯಮನಾದಿರನನ್ತೋ ನೈಸರ್ಗಿಕೋಽಧ್ಯಾಸೋ ಮಿಥ್ಯಾ ಪ್ರತ್ಯಯರೂಪಃ ಕರ್ತೃಭೋಕ್ತೃತ್ವಪ್ರವರ್ತಕಃ ಸರ್ವಲೋಕ ಪ್ರತ್ಯಕ್ಷಃ ॥ ಅಧ್ಯಾಶಭಾಷ್ಯ.]

(೫) ಈ ಅಧ್ಯಾಸರೂಪವಾದ ಅವಿದ್ಯೆಯಿಂದಲೇ ಆತ್ಮನಲ್ಲಿ ಪ್ರಮಾತೃತ್ವವು ಸ್ವಾಭಾವಿಕವಾಗಿರುವಂತೆ ತೋರುತ್ತದೆ. ಹೇಗೆಂದರೆ ದೇಹವನ್ನು ತಾನೆಂದೂ ಇಂದ್ರಿಯಾದಿಗಳನ್ನು ತನ್ನವೆಂದೂ ತಿಳಿದುಕೊಂಡಲ್ಲದೆ ತಾನು ಪ್ರಮಾತೃ (ಅರಿಯುವವನು) ಎನಿಸಿಕೊಳ್ಳುವವಕ್ಕೆ ಆಗುವಂತಿಲ್ಲ; ಹಾಗೆಂದು ಭಾವಿಸಿಕೊಂಡಹೊರತು ಯಾವನೂ ಪ್ರಮಾಣಗಳಿಂದ ಪ್ರಮೇಯಗಳನ್ನು ಅರಿತುಕೊಂಡು ಅವುಗಳ ಪ್ರಾಪ್ತಿಪರಿಹಾರಕ್ಕಾಗಿ ಪ್ರಯತ್ನಿಸಲಾರನು. ಆದ್ದರಿಂದ ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರದ ಅನರ್ಥಕ್ಕೆ ಈ ಅವಿದ್ಯೆಯೇ ಕಾರಣವೆಂದು ಗೊತ್ತಾಗುತ್ತದೆ.

[ನ ಹಿ ಇನ್ದ್ರಿಯಾಣಿ ಅನುಪಾದಾಯ ಪ್ರತ್ಯಕ್ಷಾದಿವ್ಯವಹಾರಃ ಸಂಭವತಿ । ನ ಚ ಅಧಿಷ್ಠಾನಮನ್ತರೇಣ ಇನ್ದ್ರಿಯಾಣಾಂ ವ್ಯವಹಾರಃ ಸಂಭವತಿ । ನ ಚ ಅನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ ವ್ಯಾಪ್ರಿಯತೇ । ನ ಚ ಏತಸ್ಮಿನ್ ಸರ್ವಸ್ಮಿನ್ ಅಸತಿ ಅಸಙ್ಗಸ್ಯಾತ್ಮನಃ ಪ್ರಮಾತೃತ್ವಮುಪಪದ್ಯತೇ ॥ ನ ಚ ಪ್ರಮಾತೃತ್ವಮನ್ತರೇಣ ಪ್ರಮಾಣಪ್ರವೃತ್ತಿರಸ್ತಿ ಃ ತಸ್ಮಾದವಿದ್ಯಾವದ್ವಿಷಯಾಣ್ಯೇವ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚ ॥ ....ಆಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ ॥ ಅ. ಭಾ.]

(೬) ಮೇಲೆ ಹೇಳಿರುವಂತೆ ಅವಿದ್ಯಾವಸ್ಥೆಯಲ್ಲಿ ನಾನು ಅರಿಯುವವನು ಕರ್ಮವನ್ನು ಮಾಡುವವನು, ಫಲವನ್ನು ಅನುಭವಿಸುವವನು' ಎಂಬ ರೂಪದಿಂದ ನಮಗೆಲ್ಲ ಪ್ರಸಿದ್ಧವಾಗಿರುವ ಆತ್ಮನು, ಅಹಂಕರ್ತೃ, ಅಹಂಪ್ರತ್ಯಯ್ನು ವಿಷಯನು ಎನಿಸಿಕೊಳ್ಳುತ್ತಾನೆ. ಅವನಿಗಿಂದ ವ್ಯತಿರಿಕ್ತನಾಗಿ ಅವನನು

ನೇರಾಗಿ ನೋಡುತ್ತಿರುವ (ಸಾಕ್ಷಿಯಾದ) ನಮ್ಮೆಲ್ಲರ ಆತ್ಮನಾದ ಪರಮಾತ್ಮನನ್ನು ಉಪನಿಷತ್ತುಗಳಿಂದ ಮಾತ್ರವೇ ತಿಳಿದುಕೊಳ್ಳಬಹುದು; ಆ ಸಾಕ್ಷಿಯನ್ನು ಉಪನಿಷತ್ತಿನಲ್ಲಿ ಹೊರತು ವೇದದ ಕರ್ಮಕಾಂಡದಲ್ಲಾಗಲಿ, ತರ್ಕಶಾಸ್ತ್ರದಲ್ಲಾಗಲಿ ಯಾರೂ ಹೇಳಿರುವದಿಲ್ಲ. ಆದ್ದರಿಂದ ಆ ಸಾಕ್ಷಿಯನ್ನು ಔಪನಿಷದ ಪುರುಷ ಎನ್ನುವರು. ಸತ್ಯಾನೃತರೂಪವಾದ ಆತ್ಮಾನಾತ್ಮರ ಪರಸ್ಪರಾಧ್ಯಾಸದಿಂದ ನಾನು ಎಂದು ತೋರುತ್ತಿರುವ ರೂಪವನ್ನು ಕಾಣು ಎಂದು ವ್ಯವಹರಿಸುವದೇ ಅವಿದ್ಯೆ; ಅದಕ್ಕೆ ವಿಪರೀತವಾಗಿ ಪರಮಾತ್ಮಸ್ವರೂಪವನ್ನು ತಿಳಿದು ಅನಾತ್ಮವೆಲ್ಲವೂ ಮಿಥ್ಯೆಯೆಂಬ ನಿಶ್ಚಯಿಸಿಕೊಳ್ಳುವದೇ ವಿದ್ಯೆ. ವಿದ್ಯೆಯು ಹುಟ್ಟಿದಲು ಅವಿದ್ಯೆ ಹೋಗುವದು, ಅದರಿಂದ ಸಂಸಾರವ್ಯವಹಾರರೂಪವಾದ ಅವಿದ್ಯೆಯೂ ತೊಲಗುವದು.

[ನ ಹಿ ಅಹಂಪ್ರತ್ಯಯವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ ಸಮ ಏಕಃ ಕೂಟಿಸ್ಥೇ ಪುರುಷಃ ವಿಧಿಕಾಣ್ಡೇ ತರ್ಕಸಮಯೇ ವಾ ಕೇನಚಿದಧಿಗತಃ ಸರ್ವಸ್ಯ ಆತ್ಮಾ । .... 'ತಂ ತ್ವೌಪನಿಷನಂ ಪುರುಷಂ ಪೃಚ್ಛಾವಿ' (ಬೃ. ೩-೯-೨೭) ಇತಿ ಔಪನಿಷದತ್ವವಿಶೇಷಣಂ ಪುರುಷಸ್ಯ ಉಪನಿಷತ್ಸು ಪ್ರಾಧಾನ್ಯೇನ ಪ್ರತಿಪಾದ್ಯಮಾನತ್ವೇ ಉಪಪದ್ಯತೇ ॥ ಸೂ. ಭಾ. ೧-೧-೪. ತಮೇತಮ್ ಏವಂಲಕ್ಷಣಮ್ ಅಧ್ಯಾಸಂ ಪಣ್ಡಿತಾ ಅವಿದ್ಯೇತಿ ಮನ್ಯನ್ತೇ ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮ್ ಅಹುಃ ॥ ಅ. ಭಾ.]

(೭) ಸರ್ವರಿಗೂ ಆತ್ಮನಾದ ಬ್ರಹ್ಮವನ್ನೇ ಜಗತ್ತಿನ ಜನ್ಮಸ್ಥಿತಿಲಯಗಳಿಗೆ ಕಾರಣವೆಂದು ಶ್ರುತಿಯಲ್ಲಿ ಹೇಳಿರುತ್ತದೆ ಎಂದು ತಿಳಿಸುವದಕ್ಕಾಗಿ ಬ್ರಹ್ಮವನ್ನು ಅಲ್ಲಲ್ಲಿ ಆತ್ಮನೆಂದೇ ಕರೆದಿರುತ್ತದೆ. ಸಂಸಾರಾನರ್ಥಹೇತುವಾದ ಅವಿದ್ಯೆಯನ್ನು ತೊಲಗಿಸುವದಕ್ಕಾಗಿಯೇ 'ನೀನು ಆ ಆತ್ಮನು', 'ನಾನು ಬ್ರಹ್ಮವಾಗಿದೇನೆ'—ಎಂದು ಮುಂತಾಗಿ ಬ್ರಹ್ಮಾತ್ಮೈಕತ್ವವನ್ನು ಬೋಧಿಸಿರುತ್ತದೆ. ಬ್ರಹ್ಮಕ್ಕಿಂತ ವ್ಯತಿರಿಕ್ತವಾದ ಸಂಸಾರಿಯಾದ ಆತ್ಮನು ಇರುವದೇ ಇಲ್ಲ ಆದ್ದರಿಂದ ಅದ್ವಿತೀಯವಾದ ಬ್ರಹ್ಮವೇ ನಾನು ಎಂದು ಅರಿತುಕೊಳ್ಳಬೇಕು. ಇದರಿಂದಲೇ ಅವಿದ್ಯೆಯು ತೊಲಗುತ್ತದೆ.

[ಸರ್ವಶ್ರುತಿಷು ಚ ಬ್ರಹ್ಮಣ್ಯಾತ್ಮಶಬ್ದಪ್ರಯೋಗಾತ್, ಆತ್ಮಶಬ್ದಸ್ಯ ಪ್ರತ್ಯಗಾತ್ಮಾಭಿಧಾಯಕತ್ವಾತ್, "ಏಷ ಸರ್ವಭೂತಾನ್ತರಾತ್ಮಾ' ಇತಿ ಚ ಶ್ರುತೇಃ ಪರಮಾತ್ಮವ್ಯತಿರೇಕೇಣ ಸಂಸಾರಿಣೋಽ

ಭಾವಾತ್, 'ಏತಮೇವಾನ್ವಿತೀಯವು', 'ಬ್ರಹ್ಮೈವೇದವು', 'ಅತ್ಮೈವೇದವು' ಇತ್ಯಾದಿಶ್ರುತಿಭ್ಯೋ ಯುಕ್ತಮೇವ ಅಹು ಬ್ರಹ್ಮಾಸ್ಮೀತ್ಯವಧಾರಯಿತುವು ॥ ಬೃ. ೨–೧–೨೦.

"ತಸ್ಮಾದ್ವಾ ಏತಸ್ಮಾದಾತ್ಮನಃ" ಇತಿ ಬ್ರಹ್ಮಣ್ಯೇವ ಆತ್ಮಶಬ್ದ ಪ್ರಯೋಗಾತ್ ವೇದಿತುರಾತ್ಮೈವ ಬ್ರಹ್ಮ ॥ ತೈ. ಭಾ. ೨–೧.

ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿ ಪತ್ತಯೇ ಸರ್ವೇ ವೇದಾನ್ತಾ ಅರಭ್ಯನ್ತೇ ॥ ಅ. ಭಾ.

ಯಥಾಶಾಸ್ತ್ರಮ್ ಕ್ಷೇತ್ರಕ್ಷೇತ್ರಜ್ಞಲಕ್ಷಣಭೇದಪರಿಜ್ಞಾನ ಪೂರ್ವಕಂ ಪ್ರಾಗ್ದರ್ಶಿತರೂಪಾತ್ ಕ್ಷೇತ್ರಾತ್ ಮುಞ್ಜಾದಿವ ಇಷೀಕಾಂ ಯಥೋಕ್ತಲಕ್ಷಣಂ ಕ್ಷೇತ್ರಜ್ಞಂ ಪ್ರವಿಭಜ್ಯ 'ನ ಸತ್ತನ್ನಾಸದುಚ್ಯತೇ' (೧೩–೧೨) ಇತ್ಯನೇನ ನಿರಸ್ತಸರ್ವೋಪಾಧಿ ವಿಶೇಷಂ ಜ್ಞೇಯಂ ಬ್ರಹ್ಮ ಸ್ವರೂಪೇಣ ಯಃ ಪಶ್ಯತಿ ಕ್ಷೇತ್ರಂ ಚ ಮಾಯೋಪನಿರ್ಮಿತಹಸ್ತಿ ಸ್ವಪ್ನದೃಶ್ಯವಸ್ತು ಗನ್ಧರ್ವನಗರಾದಿವತ್ ಅಸದೇವ ಸದಿವ ಅವಭಾಸತೇ ಇತ್ಯೇವಂ ನಿಶ್ಚಿತವಿಜ್ಞಾನೋ ಯಃ, ತಸ್ಯ ಯಥೋಕ್ತಸಮ್ಯಗ್ದರ್ಶನವಿರೋಧಾತ್ ಅಪಗಚ್ಛತಿ ಮಿಥ್ಯಾಜ್ಞಾನಮ್ ॥ ಗೀ. ೧೩–೨೬]

(೮) ಮೋಕ್ಷಶಾಸ್ತ್ರವಾದ ಉಪನಿಷತ್ತುಗಳೂ ಮೇಲೆ (೩) ಹೇಳಿರುವಂತೆ ಅವಿದ್ಯಾಪುರಃಸರವಾಗಿಯೇ ಹೊಟೆರುತ್ತವೆ. ಆದರೂ ಅವೇ ಬ್ರಹ್ಮರೂಪವಾದ ಆತ್ಮನನ್ನು ತಿಳಿಸಿಕೊಡುವದಕ್ಕೆ ಪ್ರಮಾಣವಾಗಿರುತ್ತವೆ. ಉಪನಿಷದುಪದೇಶ ದಿಂದಾದ ಜ್ಞಾನವು ಆತ್ಮನ ಪ್ರಮಾತೃತ್ವವನ್ನೇ ಅಲ್ಲಗಳೆದುಬಿಡುವದರಿಂದ ಆ ಜ್ಞಾನವುಂಟಾದ ಬಳಿಕ ಪ್ರಮಾಣವ್ಯವಹಾರವೇ ಉಳಿಯುವದಿಲ್ಲ. ಕನಸಿನ ಜ್ಞಾನವು ಎಚ್ಚರವಾದಕೂಡಲೆ ಅಪ್ರಮಾಣವಾಗಿಬಿಡುವಂತೆಯೇ ಇದನ್ನು ತಿಳಿಯಬೇಕು. ಈ ಕಾರಣದಿಂದ ಉಪನಿಷತ್ತನ್ನು ಅಂತ್ಯಪ್ರಮಾಣವೆನ್ನುತ್ತಾರೆ. ಉಪನಿಷದ್ರೂಪವಾದ ಶಾಸ್ತ್ರವು ಬ್ರಹ್ಮವನ್ನು ವಿಷಯೀಕರಿಸಿ ತಿಳಿಸುವದಿಲ್ಲ. ಅದರಿಂದ ಹುಟ್ಟುವ ಜ್ಞಾನವೂ ಬ್ರಹ್ಮವನ್ನು ವಿಷಯೀಕರಿಸುವದಿಲ್ಲ. ಏಕೆಂದರೆ ನಮ್ಮ ಆತ್ಮರೂಪವಾಗಿರುವ ಬ್ರಹ್ಮವು ಮನಸ್ಸನ್ನೂ ವಾಕ್ಯಗಳನ್ನೂ ಬೆಳಗುವ ನಿತ್ಯವಿಷಯಿಯಾಗಿರುತ್ತದೆ. ಆತ್ಮನ ಧರ್ಮವಲ್ಲದ್ದನ್ನು ಅಲ್ಲಗಳೆಯುವದೇ ಶಾಸ್ತ್ರಪ್ರಮಾಣದ ಕೃತ್ಯ ; ಆ ನಿಷೇಧಜ್ಞಾನವುಂಟಾದರೆ ಸ್ವತಃಸಿದ್ಧನಾಗಿರುವ ಆತ್ಮನು ತಾನೇ ಬೆಳಗುತ್ತಾನೆ. ಹೀಗೆ ಆತದ್ಧರ್ಮವನ್ನು ಅಲ್ಲಗಳೆದು ಆತ್ಮವಸ್ತುವನ್ನು ತಿಳಿಸುವ ಕ್ರಮಕ್ಕೆ ಆಗವು ಎಂದು ಹೆಸರು.

[ಶಾಸ್ತ್ರಾದೇವ ಪ್ರಮಾಣಾತ್ ಜಗತೋ ಜನ್ಮಾದಿಕಾರಣಂ ಬ್ರಹ್ಮ ಅಧಿಗಮ್ಯತೇ । ಸೂ. ಭಾ. ೧–೧–೩.

ಶಾಸ್ತ್ರಂ ತು ಅನ್ಯಂ ಪ್ರಮಾಣಮ್ ಅಶದ್ಧರ್ಮಾಧ್ಯಾರೋಪಣ ಮಾತ್ರನಿವರ್ತಕತ್ವೇನ ಪ್ರಾಮಾಣ್ಯಮ್ ಆತ್ಮನಃ ಪ್ರತಿಪದ್ಯತೇ, ನ ತ್ವಜ್ಞಾತಾರ್ಥಜ್ಞಾಪಕತ್ವೇನ ॥ ಗೀ. ಭಾ. ೨–೧೮.

ನ ಹಿ ಆತ್ಮಸ್ವರೂಪಾಧಿಗಮೇ ಸತಿ ಪುನಃ ಪ್ರಮಾಣಪ್ರಮೇಯ ವ್ಯವಹಾರಃ ಸಂಭವತಿ । ಪ್ರಮಾತೃತ್ವಂ ಹಿ ಆತ್ಮನೋ ನಿವರ್ತಯತಿ ಅನ್ಯಂ ಪ್ರಮಾಣಮ್ । ನಿವರ್ತಯದೇವ ಚ ಅಪ್ರಮಾಣೋ ಭವತಿ ಸ್ವಪ್ನಕಾಲಪ್ರಮಾಣಮಿವ ಪ್ರಬೋಧೇ॥ ಗೀ. ಭಾ. ೨–೨೯.

ನ ಹಿ ಶಾಸ್ತ್ರಮಿದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ । ಕಂ ತರ್ಹಿ ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಮುಪನಯತಿ ॥ ಸೂ. ಭಾ. ೧–೧–೪.

ಸತ್ಯಮೇವಮ್, ಪ್ರತ್ಯಕ್ಷಾದಿಭಿಃ ಪ್ರಮಾಣೈರ್ನ ಪರಃ ಪ್ರತ್ಯಾಯಯಿತುಂ ಶಕ್ಯಃ । ಆಗಮೇನ ತು ಶಕ್ಯತ ಏವ ಪ್ರತ್ಯಾಯಯಿತುಮ್ । ತದುಪದೇಶಾರ್ಥದ್ವಾರಮ್ ಆಹ– ಅನ್ಯದೇವ ತದ್ವಿದಿತಾದಥೋ ಅವಿದಿತಾದಧೀತಿ ॥ ಕೇ. ಭಾ. ೧–೪.

ಯದ್ಯೇವಂ ದ್ವೈತಾಭಾವೇ ಶಾಸ್ತ್ರವ್ಯಾಪಾರೋ ನಾದ್ವೈತೇ । ವಿರೋಧಾತ್ ॥ ಗೌ. ಕಾ. ಭಾ. ೨–೩೨.]

(೯) ಈವರೆಗೆ ವರ್ಣಿಸಿರುವಂತೆ ಅಧ್ಯಾಸರೂಪವಾದ ಅವಿದ್ಯೆಯನ್ನು ಮುಂದುಮಾಡಿಕೊಂಡೇ ಮಿಕ್ಕ ಪ್ರಮಾಣಗಳಂತೆ ಶಾಸ್ತ್ರವೂ ಹೊರಟಿರುವದರಿಂದ ಶಾಸ್ತ್ರದಲ್ಲಿ ಉಪದೇಶಕ್ಕಾಗಿ ಕಲ್ಪಿಸಿರುವ ವಿದ್ಯಾವಿದ್ಯಾವ್ಯವಹಾರವೂ ಶಾಸ್ತ್ರಶಿಷ್ಯ ಗುರುವ್ಯವಹಾರವೂ ಅವಿದ್ಯಾಭೂಮಿಯಲ್ಲಿಯೇ ಇರುತ್ತವೆ– ಎಂಬುದನ್ನು ನೆನಪಿಟ್ಟವರಿಗೆ 'ಅವಿದ್ಯೆಯೆಲ್ಲಿಂದ ಬಂತು ? ವಿದ್ಯಾವಿದ್ಯಾವಿಭಾಗಗಳನ್ನೂ ಶಾಸ್ತ್ರ ಶಿಷ್ಯಾದಿವಿಭಾಗವನ್ನು ನಿಜವೆಂದು ಇಟ್ಟುಕೊಂಡರೆ ಅದ್ವೈತಕ್ಕೆ ಹಾನಿಯಲ್ಲವೆ ?' ಎಂಬ ಶಂಕೆಗಳು ಹುಟ್ಟುವದಿಲ್ಲ. ಉಪದೇಶಕ್ಕಾಗಿ ಇಂಥ ವಿಭಾಗಗಳನ್ನು ಕಲ್ಪಿಸಿಕೊಂಡು ತತ್ತ್ವವನ್ನುಹೇಳಿಕೊಡುವಕ್ರಮಕ್ಕೆ ಅಧ್ಯಾರೋಪಾಪವಾದನ್ಯಾಯವೆಂದು ಹೆಸರು. ಇಲ್ಲಿ ಆಧ್ಯಾರೋಪದೃಷ್ಟಿಯಿಂದ ಉಪದೇಶಕ್ಕಾಗಿ ಕಲ್ಪಿಸಿ ಇಟ್ಟುಕೊಂಡದ್ದು, ಆಪವಾದದೃಷ್ಟಿಯಿಂದ ಇಲ್ಲವಾಗಿಬಿಡುತ್ತದೆ ; ಆದ್ದರಿಂದ ವಿಭಾಗವು ಇಲ್ಲವೆಂಬುದೇ ಪರಮಾರ್ಥ. ದೃಗ್ದೃಶ್ಯವಿವೇಕ, ಸೃಷ್ಟಿಪ್ರಕ್ರಿಯೆ,

ಪಂಚಕೋಶವಿವೇಕ, ಅವಸ್ಥಾತ್ರಯಪರೀಕ್ಷೆ – ಮುಂತಾದವುಗಳೆಲ್ಲ ಅಧ್ಯಾರೋಪದೃಷ್ಟಿಯಿಂದ ಆತ್ಮನನ್ನು ಪ್ರಮಾತೃವೆಂದಿಟ್ಟುಕೊಂಡು ಹೇಳಿದವುಗಳೇ ಎಂಬುದನ್ನು ನೆನೆಪಿನಲ್ಲಿಡಬೇಕು. ಅಧ್ಯಾರೋಪವೆಂದರೆ ಲೋಕಸಿದ್ಧವಾದ ವಿಭಾಗವನ್ನು ಇಟ್ಟುಕೊಂಡು ವಿಚಾರಕ್ಕೆ ಹೊರಡುವದು, ಅಪವಾದವೆಂದರೆ ಅದು ನಿಜವಾಗಿಲ್ಲವೆಂದು ತೋರಿಸಿಕೊಡುವದು. ವಸ್ತುಸ್ಥಿತಿಯನ್ನೇ, ಹೇಳಬೇಕಾಗಿಬಂದಾಗ ಪರಮಾರ್ಥವನ್ನು ಹೀಗಲ್ಲ, ಹೀಗಲ್ಲ –ಎಂದೇ ತಿಳಿಸಬೇಕಾಗುವದು; ಅದಕ್ಕಿಂತ ಬೇರೆಯು ಮಾರ್ಗವೇ ಇರುವದಿಲ್ಲ.

[ಯಥಾ ಬುದ್ಧ್ಯಾದ್ಯಾಹೃತಸ್ಯ ಶಬ್ದಾದ್ಯರ್ಥಸ್ಯ ಅವಿಕ್ರಿಯ ಏವ ಸನ್ ಬುದ್ಧಿವೃತ್ತ್ಯವಿವೇಕವಿಜ್ಞಾನೇನ ಅವಿದ್ಯಯಾ ಉಪಲಬ್ಧಾ ಆತ್ಮಾ ಕಲ್ಪ್ಯತೇ, ಏವಮೇವ ಆತ್ಮನಾತ್ಮವಿವೇಕವಿಜ್ಞಾನೇನ ಬುದ್ಧಿವೃತ್ತ್ಯಾ ವಿದ್ಯಯಾ ಅಸತ್ಯರೂಪಯೈವ ಪರಮಾರ್ಥತೋಽವಿಕ್ರಿಯ ಏವ ಆತ್ಮಾ ವಿದ್ವಾನ್ ಉಚ್ಯತೇ॥ ಗೀ. ಭಾ. ೨–೨೧.

ಕಸ್ಯ ಪುನರಯಮುಪ್ರಬೋಧ ಇತಿ ಚೇತ್ । ಯಸ್ತ್ವಂ ಪೃಚ್ಛಸಿ ತಸ್ಯ ತ ಇತಿ ವದಾಮಃ । ನನ್ನಹವಿಾಶ್ವರ ಏವೋಕ್ತಃ ಶ್ರುತ್ಯಾ । ಯದ್ಯೇವಂ ಪ್ರತಿಬುದ್ಧೋಽಸಿ ನಾಸ್ತಿ ಕಸ್ಯಚಿದಪ್ರಬೋಧಃ । ಯೋಽಪಿ ದೋಷಶ್ಚೋದ್ಯತೇ ಕೈಶ್ಚಿತ್ ಅವಿದ್ಯಯಾ ಕಿಲ ಆತ್ಮನಃ ಸದ್ವಿತೀಯತ್ವಾತ್ ಅದ್ವೈತಾನುಪಪತ್ತಿರಿತಿ ಸೋಽಪ್ಯೇತೇನ ಪ್ರತ್ಯುಕ್ತಃ॥ ಸೂ. ಭಾ. ೪–೧–೩.

ನನು ಶಾಸ್ತಾ, ಶಾಸ್ತ್ರಂ, ಶಿಷ್ಯಃ ಇತಿ ವಿಕಲ್ಪಃ ಕಥಂ ನಿವೃತ್ತ ಇತಿ? ಉಚ್ಯತೇ....ಯಥಾಯಂ ಪ್ರಪಞ್ಚೋ ಮಾಯಾಮಾತ್ರಜ್ಜುಸರ್ಪವತ್, ತಥಾಯಂ ಶಿಷ್ಯಾದಿಭೇದವಿಕಲ್ಪೋಽಪಿ ಪ್ರಾಕ್ ಪ್ರತಿಬೋಧಾದೇವ ಉಪದೇಶನಿಮಿತ್ತಃ । ಅತಃ ಉಪದೇಶಾದಯಂ ವಾದಃ ಶಿಷ್ಯಃ. ಶಾಸ್ತಾ, ಶಾಸ್ತ್ರಮ್ ಇತಿ । ಉಪದೇಶಕಾರ್ಯೋ ತು ಜ್ಞಾನೇ ನಿರ್ವೃತ್ತೇ ಜ್ಞಾತೇ ಪರಮಾರ್ಥತತ್ತ್ವೇ ದ್ವೈತಂ ನ ವಿದ್ಯತೇ॥ ಗೌ. ಕಾ. ಭಾ. ೧–೧೪.

ಪ್ರಸಿದ್ಧಂ ತು ಭೇದಮನೂದ್ಯ ಬನ್ಧಮೋಕ್ಷವ್ಯವಸ್ಥಾ ಪ್ರತಿಪಾದ್ಯತೇ । ಭೇದಸ್ತು ಉಪಾಧಿನಿಮಿತ್ತೋ ಮಿಥ್ಯಾಜ್ಞಾನ ಕಲ್ಪಿತೋ ನ ಪಾರಮಾರ್ಥಿಕಃ॥ ಸೂ. ಭಾ. ೧–೪–೧೦.

ತಥಾ ಚ ಸಂಪ್ರದಾಯವಿದಾಂ ವಚನಮ್ 'ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ' ಇತಿ॥ಗೀ.ಭಾ.೧೩–೧೩.

ಉತ್ಪತ್ತಿಪ್ರಲಯಯೋರಭಾವಾತ್ ಬದ್ಧಾದಯೋ ನ ಸನ್ತೀ ತ್ಯೇಷಾ ಪರಮಾರ್ಥತಾ ॥ ಗೌ.ಕಾ.ಭಾ. ೨–೩೨.
ಯಸ್ಮಾತ್ ಇತಿ ನ ಇತಿ ನ– ಇತ್ಯೇತಸ್ಮಾತ್....ಅನ್ಯತ್ ಪರಂ ನಿರ್ದೇಶನಂ ನಾಸ್ತಿ, ತಸ್ಮಾದಯಮೇವ ನಿರ್ದೇಶೋ ಬ್ರಹ್ಮಣಃ ॥ ಬೃ. ಭಾ. ೨–೩–೬].

(೧೦) ಅವಿದ್ಯಾದೃಷ್ಟಿಯಿಂದ ಜನರಿಗೆ ತೋರುವ ನಾಮರೂಪಗಳು ಆತ್ಮನೇ ಎಂದಾಗಲಿ ಆತ್ಮನಿಗಿಂತ ಬೇರೆಯೆಂದಾಗಲಿ ಹೇಳುವದಕ್ಕೆ ಬರುವದಿಲ್ಲ. ಆದ್ದರಿಂದಲೇ ಆಚಾರ್ಯರು ನೀರಿಗಿಂತ ನೊರೆಯು ಬೇರೆಯೆಂದಾಗಲಿ ಆ ನೀರೇ ಎಂದಾಗಲಿ ಹೇಳುವದಕ್ಕೆ ಬಾರದಿರುವಂತೆ ಅವು 'ತತ್ತ್ವಾನ್ಯತ್ವಾಭ್ಯಾಮ್ ಅನಿರ್ವಚನೀಯ', ಅದೇ ಎಂದಾಗಲಿ ಬೇರೆಯೆಂದಾಗಲಿ ಹೇಳುವದಕ್ಕೆ ಬಾರದೆ ಇರುವಂಥವು, ಎಂದಿರುತ್ತಾರೆ. ನೊರೆಯು ನಿಜವಾಗಿ ನೀರೇ ಆಗಿರುವಂತೆ ಆ ನಾಮರೂಪಗಳು ನಿಜವಾಗಿ ಪರಮಾತ್ಮನೇ ಆಗಿರುತ್ತವೆ. ಅವಿದ್ಯೆಯಿಂದ ಕಲ್ಪಿತವಾಗಿರುವ ಇವನ್ನು ಅವ್ಯಾಕೃತ, ಮಾಯೆ, ಶಕ್ತಿ, ಪ್ರಕೃತಿ, ಅವ್ಯಕ್ತ, ಅಕ್ಷರ, ಆಕಾಶ, ಬೀಜ –ಮುಂತಾದ ಹೆಸರುಗಳಿಂದ ಶ್ರುತಿಸ್ಮೃತಿಗಳಲ್ಲಿ ಕರೆದಿದೆ. ಮಾಯೆ ಎಂದರೆ ಅವಿದ್ಯೆಯೇ ಅಲ್ಲ, ಅವಿದ್ಯೆಯಿಂದ ಕಲ್ಪಿತವಾದ ತೋರಿಕೆಯ ನಾಮರೂಪ. ಆಚಾರ್ಯರು ಮಾಯೆಯನ್ನು ಹೀಗೆ ಅನಿರ್ವಚನೀಯವೆಂದ ಮಾತ್ರದಿಂದ ಇದರ ಸ್ವರೂಪವನ್ನು ತಾವು ಹೇಳಲಾರೆವೆಂದಿದಾರೆಂದು ಕಲ್ಪಿಸ ಬಾರದು; ಏಕೆಂದರೆ ಮಾಯೆಯ ಪರಮಾರ್ಥಸ್ವರೂಪವು ಪರಮಾತ್ಮನೇ ಎಂದು ಅವರು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತಾರೆ.

[ಸರ್ವಜ್ಞಸ್ಯ ಈಶ್ವರಸ್ಯ ಆತ್ಮಭೂತೇ ಇವ ಅವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ ಸಂಸಾರ ಪ್ರಪಞ್ಚಬೀಜಭೂತೇ ಸರ್ವಜ್ಞಸ್ಯ. ಈಶ್ವರಸ್ಯ ಮಾಯಾ, ಶಕ್ತಿಃ, ಪ್ರಕೃತಿಃ ಇತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ ॥
ಸೂ. ಭಾ. ೨–೧–೧೪.

ಅವಿದ್ಯಾತ್ಮಿಕಾ ಹಿ ಬೀಜಶಕ್ತಿಃ, ಅವ್ಯಕ್ತಶಬ್ದನಿರ್ದೇಶ್ಯಾ ಪರಮೇಶ್ವರಾಶ್ರಯಾ ಮಾಯಾಮಯೀ ಮಹಾಸುಪ್ತಿಃ, ಯಸ್ಯಾಂ ಸ್ವರೂಪಪ್ರತಿಬೋಧರಹಿತಾಃ ಶೇರತೇ ಸಂಸಾರಿಣೋ ಜೀವಾಃ। ತದೇತದವ್ಯಕ್ತಂ ಕ್ವಚಿತ್ ಆಕಾಶಶಬ್ದನಿರ್ದಿಷ್ಟಮ್....ಕ್ವಚಿದಕ್ಷರ ಶಬ್ದೋದಿತಮ್.... ಕ್ವಚಿನ್ಮಾಯೇತಿ ಸೂಚಿತಮ್ ॥
ಸೂ. ಭಾ. ೧–೪–೩.

ಯದಾ ತು ಪರಮಾರ್ಥದೃಷ್ಟ್ಯಾ ಪರಮಾರ್ಥತತ್ತ್ವತ್ ಶ್ರುತ್ಯನುಸಾರಿಭಿರನ್ಯತ್ವೇನ ನಿರೂಪ್ಯಮಾಣೇ ನಾಮರೂಪೇ ಮೃದಾದಿವಿಕಾರವತ್ ವಸ್ತ್ವನ್ತರೇ ತತ್ತ್ವತೋ ನ ಸ್ತಃ ಸಲಿಲ ಫೇನಘಟಾದಿವಿಕಾರವದೇವ, ತದಾ ತದಪೇಕ್ಷ್ಯ 'ಏಕಮೇವಾದ್ವಿತೀಯಮ್', 'ನೇಹ ನಾನಾಸ್ತಿ ಕಿಞ್ಚನ' ಇತ್ಯಾದಿಪರಮಾರ್ಥದರ್ಶನಗೋಚರತ್ವಂ ಪ್ರತಿಪದ್ಯತೇ। ಯದಾ ತು ಸ್ವಾಭಾವಿಕ್ಯಾ ಅವಿದ್ಯಯಾ ಬ್ರಹ್ಮಸ್ವರೂಪಂ ರಜ್ಜು ಶುಕ್ತಿ ಕಾಗಗನಸ್ವರೂಪವದೇವ ಸ್ವೇನ ರೂಪೇಣ ವರ್ತಮಾನಂ ಕೇನಚಿದಸ್ಪೃಷ್ಟಸ್ವಭಾವಮಪಿ ಸತ್, ನಾಮರೂಪಕೃತಕಾರ್ಯಕರಣೋಪಾಧಿಭ್ಯೋ ವಿವೇಕೇನ ನಾವಧಾರ್ಯತೇ, ನಾಮರೂಪೋಪಾಧಿದೃಷ್ಟಿರೇವ ಚ ಭವತಿ ಸ್ವಾಭಾವಿಕೀ, ತದಾ ಸರ್ವೋಽಯಂ ವಸ್ತ್ವನ್ತರಾಸ್ತಿತ್ವ ವ್ಯವಹಾರಃ ॥ ಬೃ. ೩–೫–೧.]

(೧೧) ಬ್ರಹ್ಮಜ್ಞಾನವು ಅನುಭವದಲ್ಲಿ ಕೊನೆಗಾಣತಕ್ಕದ್ದಾಗಿದೆಯಾದ್ದರಿಂದ ಅದಕ್ಕೆ ಬರಿಯ ಶ್ರುತ್ಯಾದಿಗಳನ್ನೇ, ಶ್ರುತ್ಯಾದಿಗಳಿಂಬಿಷ್ಟೇ ಕಾರಣದಿಂದ ಪ್ರಮಾಣವಾಗಿ ಇಲ್ಲಿ ಹೇಳಿರುವದಿಲ್ಲ. 'ತತ್ತ್ವಮಸಿ' ಅದೇ ನೀನು– ಮುಂತಾದ ವೇದಾಂತವಾಕ್ಯಗಳಿಂದ ಅನುಭವಪರ್ಯಂತವಾದ ಅರಿವು ಆಗಿಬಿಡುವದರಿಂದ ಇಲ್ಲಿ ಸಂಶಯಪಡುವದಕ್ಕೆ ಕಾರಣವೂ ಇಲ್ಲ. ಆದ್ದರಿಂದಲೇ ಇಲ್ಲಿ ಅನುಭವಾಂಗವಾಗಿ ತರ್ಕವನ್ನು ಹೇಳಿರುತ್ತದೆ. ಬ್ರಹ್ಮದ ಜಗಜ್ಜನ್ಮಾದಿಕಾರಣತ್ವವಿವರಣೆಗೆ ಒಪ್ಪಿ ಅವಸ್ಥಾತ್ರಯಪರೀಕ್ಷೆ–ಮುಂತಾದ ರೂಪದಿಂದ ಶ್ರುತಿಯಲ್ಲಿ ಹೇಳಿಕೊಟ್ಟಿರುವ ಈ ತರ್ಕವೂ ಅನುಭವಕ್ಕೇ ಅಂಗವಾಗಿರುತ್ತದೆ. ಹೇಗೆಂದರೆ ಬ್ರಹ್ಮದಿಂದ ಜಗತ್ತು ಹುಟ್ಟಿ ಅದರಲ್ಲಿಯೇ ಇದ್ದು ಅದರಲ್ಲಿಯೇ ಲಯವಾಗುತ್ತಿರುವದರಿಂದ ಬ್ರಹ್ಮಕ್ಕಿಂತ ಅದು ಬೇರೆಯಲ್ಲ ; ಸ್ವಪ್ನಜಾಗರಿತಗಳು ಒಂದಿದ್ದಾಗ ಮತ್ತೊಂದು ಎಲ್ಲಿಯೂ ಇಲ್ಲದೆ ಇರುವದರಿಂದಲೂ ಆತ್ಮನು ಅವುಗಳ ಸಂಪರ್ಕವಿಲ್ಲದವನು ; ಸುಷುಪ್ತಿಯಲ್ಲಿ ಪ್ರಪಂಚವನ್ನೆಲ್ಲ ಬಿಟ್ಟು ಸದ್ರೂಪವಾದ ಬ್ರಹ್ಮದಲ್ಲಿಯೇ ಸೇರಿಕೊಳ್ಳುವದರಿಂದ ಜೀವನು ಪ್ರಪಂಚರಹಿತವಾದ ಬ್ರಹ್ಮಸ್ವರೂಪನೇ –ಎಂಬೀ ಬಗೆಯ ತರ್ಕವು ಈ ಅನುಭವವನ್ನು ತಂದುಕೊಡುತ್ತದೆ. ಇಷ್ಟೇಹೊರತು ಇಲ್ಲಿ ಪುರುಷಬುದ್ಧಿಯಿಂದ ಊಹಾರೂಪವಾಗಿ ಕಲ್ಪಿಸುವ ಕೇವಲ ತರ್ಕವು ಯಾವ ಪ್ರಯೋಜನಕ್ಕೂ ಬರುವದಿಲ್ಲ.

[ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್, ಕಿಂ ತು ಶ್ರುತ್ಯಾದಯೋಽನುಭವಾದ

ಯಶ್ಚ ಯಥಾಸಂಭವಮಿಹ ಪ್ರಮಾಣಮ್ | ಅನುಭವಾವಸಾನ
ತ್ವಾತ್, ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ||
ಸೂ. ಭಾ. ೧-೧-೨.

ಕರ್ಮಫಲೇ ಹಿ ಸ್ವರ್ಗಾದೌ ಅನುಭವಾನಾರೂಢೇ ಸ್ಯಾದಾಶಙ್ಕಾ
-ಭವೇದ್ವಾ ನ ವಾ ಇತಿ | ಅನುಭವಾರೂಢಂ ತು ಜ್ಞಾನಫಲಮ್
'ಯತ್ಸಾಕ್ಷಾದಪರೋಕ್ಷಾತ್ ಬ್ರಹ್ಮ' (ಬೃ. ಭಾ. ೩-೫-೧) ಇತಿ
ಶ್ರುತೇಃ | 'ತತ್ತ್ವಮಸಿ' ಇತಿ ಚ ಸಿದ್ಧವದುಪದೇಶಾತ್ ||
ಸೂ. ಭಾ. ೩-೩-೩೨.

ನಾನೇನ ವಿಷೇಣ ಶುಷ್ಕತರ್ಕಸ್ಯ ಅತ್ರ ಆತ್ಮಲಾಭಃ ಸಂಭವತಿ |
ಶ್ರುತ್ಯನುಗೃಹೀತ ಏವ ಹ್ಯತ್ರ ತರ್ಕೋಽನುಭವಾಙ್ಗತ್ವೇನ
ಆಶ್ರೀಯತೇ | ಸ್ವಪ್ನಾನ್ತಬುದ್ಧಾನ್ತಯೋರುಭಯೋರಿತರೇತರ
ವ್ಯಭಿಚಾರಾದಾತ್ಮನೋಽನನ್ವಾಗತತ್ವಮ್, ಸಂಪ್ರಸಾದೇ ಚ
ಪ್ರಪಞ್ಚಪರಿತ್ಯಾಗೇನ ಸದಾತ್ಮನಾ ಸಂಪತ್ತೇರ್ನಿಷ್ಪ್ರಪಞ್ಚಸದಾತ್ಮ
ತ್ವಮ್ | ಪ್ರಪಞ್ಚಸ್ಯ ಬ್ರಹ್ಮಪ್ರಭವತ್ವಾತ್ ಕಾರ್ಯಕಾರಣಾ
ನನ್ಯತ್ವನ್ಯಾಯೇನ ಬ್ರಹ್ಮಾವ್ಯತಿರೇಕ ಇತ್ಯೇವಂಜಾತೀಯಕಃ ||
ಸೂ. ಭಾ. ೨-೧-೬.]

ಸಾಧನವಿವೇಕ

೮೬೭. ಬ್ರಹ್ಮವು ಎರಡನೆಯದು ಯಾವದೊಂದರ ಸಂಬಂಧವೂ ಇಲ್ಲದೆ ನಿರ್ವಿಶೇಷವೇ ಆಗಿದ್ದರೂ ಶ್ರುತಿಯಲ್ಲಿ ಅಧ್ಯಾರೋಪದೃಷ್ಟಿಯಿಂದ ಕೆಲವು ಉಪಾಧಿಗಳನ್ನು ಉಪಾಯವಾಗಿಟ್ಟುಕೊಂಡು ಅದರ ಸ್ವರೂಪವನ್ನು ತಿಳಿಸಿರುತ್ತದೆ ಎಂದು ಹೇಳಿದೆವಷ್ಟೆ ? ಅವಿದ್ಯಾಕಲ್ಪಿತವಾದ ನಾಮರೂಪಗಳ ವ್ಯಾಕೃತ (ಬಿಡಿಬಿಡಿಯಾದ ರೂಪ) ಮತ್ತು ಅವ್ಯಾಕೃತ (ವಿಂಗಡವಾಗದೆ ಅವ್ಯಕ್ತವಾಗಿರುವ ರೂಪ) ಎಂಬ ಭೇದವುಳ್ಳ ನಾಮರೂಪಲಕ್ಷಣವಾದ ರೂಪವಿಶೇಷವನ್ನು ಒಪ್ಪಿ ಈಶ್ವರನಿಗೆ ಜಗಜ್ಜನ್ಮಾದಿಕಾರಣತ್ವವನ್ನು ಶ್ರುತಿಯಲ್ಲಿ ಹೇಳಿರುತ್ತದೆ. ಹೀಗೆ ತಿಳಿಸುವದಕ್ಕೆ ಉಪಾಯವಾಗಿ ನಾಮರೂಪಲಕ್ಷಣವಾದ ಉಪಾಧಿಗಳನ್ನು ಹೇಳಿದ್ದರೂ ಅವು ಆತ್ಮತತ್ತ್ವಕ್ಕೆ ಸೇರಿದವೆಂಬ ವಿವಕ್ಷೆಯೇನೂ ಇರುವದಿಲ್ಲ. ತತ್ತ್ವವನ್ನು ತಿಳಿಯುವದಕ್ಕೆಂದು ಶ್ರವಣಮನನನಿದಿಧ್ಯಾಸನಗಳನ್ನು ಮಾಡುವ ಪ್ರಮಾತೃ ಅಥವಾ ಜಿಜ್ಞಾಸು, ಮತ್ತು ಜಿಜ್ಞಾಸ್ಯವಾದ ಬ್ರಹ್ಮ-ಇವುಗಳಿಗೆ ಭೇದವನ್ನು ಅಧ್ಯಾರೋಪ ದೃಷ್ಟಿಯಿಂದ ಒಪ್ಪಿದರೂ ತತ್ತ್ವವನ್ನು ತಿಳಿದಬಳಿಕ, ಆ ಪ್ರಮಾತೃವೇ ಬ್ರಹ್ಮವಾಗಿಬಿಡುತ್ತಾನೆ. ಆದರೆ ಜೀವೇಶ್ವರಭೇದವನ್ನು ಹೇಳುವಾಗಲೂ ಮತ್ತು

ಕ್ರಿಯಾಕಾರಕಫಲಗಳ ಸಂಬಂಧವನ್ನು ಹೇಳುವಾಗಲೂ ನಾಮರೂಪಕೃತವಾದ ಉಪಾಧಿಗಳ ಧರ್ಮವನ್ನು ಆತ್ಮನಿಗೆ ಇರುವಂತೆ ಇಟ್ಟುಕೊಂಡೇ ಇರುತ್ತನೆ. ಈ ಉಪಾಧಿ ವಿಶಿಷ್ಟರೂಪವನ್ನೊಪ್ಪಿಯೇ ಕರ್ಮವನ್ನೂ ಉಪಾಸನೆಯನ್ನೂ ಶಾಸ್ತ್ರ ದಲ್ಲಿ ವಿಧಿಸಿರುತ್ತದೆ.

[ಅವಿದ್ಯಾಕಲ್ಪಿತೇನ ಚ ನಾಮರೂಪಲಕ್ಷಣೇನ ರೂಪಭೇದೇನ ವ್ಯಾಕೃತಾವ್ಯಾಕೃತಾತ್ಮಕೇನ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇನ ಬ್ರಹ್ಮ ಪರಿಣಾಮಾದಿಸರ್ವವ್ಯವಹಾರಾಸ್ಪದತ್ವಂ ಪ್ರತಿಪದ್ಯತೇ । ಪಾರಮಾರ್ಥಿಕೇನ ಚ ರೂಪೇಣ ಸರ್ವವ್ಯವಹಾರಾತೀತಮ್ ಅಪರಿಣತಮ್ ಅವತಿಷ್ಠತೇ ವಾಚಾರಮ್ಭಣಮಾತ್ರತ್ವಾಚ್ಚ ಅವಿದ್ಯಾಕಲ್ಪಿತಸ್ಯ ರೂಪಭೇದಸ್ಯೇತಿ ನ ನಿರವಯವತ್ವಂ ಬ್ರಹ್ಮಣಃ ಕುಪ್ಯತಿ । ನ ಚೇಯಂ ಪರಿಣಾಮಶ್ರುತಿಃ ಪರಿಣಾಮಪ್ರತಿಪಾದನಾರ್ಥಾ । ತತ್ಪ್ರತಿಪತ್ತೌ ಫಲಾನವಗಮಾತ್ । ಸರ್ವವ್ಯವಹಾರಹೀನಬ್ರಹ್ಮಾತ್ಮಭಾವಪ್ರತಿಪಾದನಾರ್ಥಾ ತ್ವೇಷಾ । ತತ್ಪ್ರತಿಪತ್ತೌ ಫಲಾವಗಮಾತ್ ॥ ಸೂ. ಭಾ- ೨-೧-೨೭.
ಅವಿದ್ಯಾಕೃತನಾಮರೂಪೋಪಾಧ್ಯನುರೋಧೀ ಈಶ್ವರೋ ಭವತಿ ಯೋ ಯಮೇವ ಘಟಕರಕಾದ್ಯುಪಾಧ್ಯನುರೋಧಿ । ಸ ಚ ಸ್ವಾತ್ಮಭೂತಾನೇವ ಘಟಾಕಾಶಸ್ಥಾನೀಯಾನ್ ಅವಿದ್ಯಾಪ್ರತ್ಯುಪಸ್ಥಾಪಿತನಾಮರೂಪಕೃಶಕಾರ್ಯಕರಣಸಂಘಾತಾನುರೋಧಿನೋ ಜೀವಾಖ್ಯಾನ್ ವಿಜ್ಞಾನಾತ್ಮನಃ ಪ್ರತಿ ಈಷ್ಟೇ ವ್ಯವಹಾರವಿಷಯೇ ॥ ಸೂ. ಭಾ. ೨-೧-೧೪.

ಏಕಮಪಿ ಬ್ರಹ್ಮ ಅಪೇಕ್ಷಿತೋಪಾಧಿಸಂಬನ್ಧಂ ನಿರಸ್ತೋಪಾಧಿಸಂಬನ್ಧಂ ಚ ಉಪಾಸ್ಯತ್ವೇನ ಜ್ಞೇಯತ್ವೇನ ಚ ವೇದಾನ್ತೇಷು ಉಪದಿಶ್ಯತೇ ॥ ಸೂ. ಭಾ. ೧-೧-೧೨.

ಅನ್ವೇಷ್ಟವ್ಯಾತ್ಮವಿಜ್ಞಾನಾತ್ ಪ್ರಾಕ್ಪ್ರಮಾತೃತ್ವಮಾತ್ಮನಃ ।
ಅನ್ವಿಷ್ಟಃ ಸ್ಯಾತ್ ಪ್ರಮಾತೈವ ಪಾಪ್ಮದೋಷಾದಿವರ್ಜಿತಃ ॥
ಸೂ. ಭಾ. ೧-೧-೪.

ಯಥಾಪ್ರಾಪ್ತಮೇವ ಕಾರಕಾಸ್ತಿತ್ವಮ್ ಉಪಾದಾಯ ಉಪಾತ್ತದುರಿತಕ್ಷಯಾರ್ಥಂ ಕರ್ಮಾಣಿ ವಿದಧತ್ ಶಾಸ್ತ್ರಂ ಮುಮುಕ್ಷೂಣಾಂ ಫಲಾರ್ಥಿನಾಂ ಚ ಫಲಸಾಧನಂ ನ ಕಾರಕಾಸ್ತಿತ್ವೇ ವ್ಯಾಪ್ರಿಯತೇ ॥ ತೈ. ಶೀಕ್ಷಾ. ಉಪಸಂಹಾರ.

ತತ್ರ ಅವಿದ್ಯಾವಸ್ಥಾಯಾಂ ಬ್ರಹ್ಮಣಃ ಉಪಾಸ್ಯೋಪಾಸಕಾದಿ ಲಕ್ಷಣಃ ಸರ್ವೋ ವ್ಯವಹಾರಃ ॥ ಸೂ. ಭಾ. ೧-೧-೧೨.]

ಸಾಧನಫಲಗಳು

೧೬೮. (೧) ವರ್ಣಾಶ್ರಮಗಳಿಗೆ ವಿಹಿತನಾಗಿರುವ ಕರ್ಮಗಳನ್ನು ಆಯಾ ವರ್ಣಾಶ್ರಮದವರು ಮಾಡುತ್ತಿದ್ದರೆ ಆಯಾ ಕರ್ಮಕ್ಕೆ ಹೇಳುವ ಸ್ವರ್ಗಾದಿಫಲಗಳು ಆಗುವವು. ಆ ಫಲಗಳನ್ನು ಭೋಗಿಸಿ ಮುಗಿದಮೇಲೆ ಆವರವರಿಗೆ ಫಲೋನ್ಮುಖವಾದ ಶೇಷಕರ್ಮಕ್ಕೆ ತಕ್ಕಂತೆ ಜನ್ಮಗಳ ಪ್ರಾಪ್ತಿಯಾಗುವದು. ಕರ್ಮಗಳನ್ನೂ ಫಲವನ್ನು ಬಯಸದೆ ಈಶ್ವರಾರ್ಚನೆಗೆಂದು ಮಾಡಿದರೆ ಚಿತ್ತಶುದ್ಧಿಯ ಮೂಲಕ ಜ್ಞಾನನಿಷ್ಠೆಗೆ ಬೇಕಾದ ಯೋಗ್ಯತೆಯನ್ನು ಪಡೆದುಕೊಳ್ಳುತ್ತಾರೆ. ಆ ಮೂಲಕ ಅವು ಮೋಕ್ಷಕ್ಕೆ ಕಾರಣವಾಗುತ್ತವೆ.

[ಏತೇಷಾಂ ಜಾತಿವಿಹಿತಾನಾಂ ಕರ್ಮಣಾಂ ಸಮ್ಯಗನುಷ್ಠಿತಾನಾಂ ಸರ್ಗಪ್ರಾಪ್ತಿಃ ಫಲಂ ಸ್ವಭಾವತಃ । "ವರ್ಣಾಃ ಆಶ್ರಮಾಶ್ಚ ಸ್ವಕರ್ಮನಿಷ್ಠಾಃ ಪ್ರೇತ್ಯ ಕರ್ಮಫಲಮ್ ಅನುಭೂಯೆ ತತಃ ಶೇಷೇಣ ವಿಶಿಷ್ಟದೇಶಜಾತಿಕುಲಧರ್ಮಾಯುಃಶ್ರುತವೃತ್ತವಿತ್ತ ಸುಖಮೇಧಸೋ ಜನ್ಮ ಪ್ರತಿಪದ್ಯನ್ತೇ" ಇತ್ಯಾದಿಸ್ಮೃತಿಭ್ಯಃ ॥ ಗೀ. ೧೮-೪೫.

ಅಭ್ಯುದಯಾರ್ಥೋಽಪಿ ಯಃ ಪ್ರವೃತ್ತಿಲಕ್ಷಣೋ ಧರ್ಮೋ ವರ್ಣಾನ್ ಆಶ್ರಮಾಂಶ್ಚ ಉದ್ದಿಶ್ಯ ವಿಹಿತಃ ಸ ದೇವಾದಿಸ್ಥಾನ ಪ್ರಾಪ್ತಿಹೇತುರಪಿ ಸನ್ ಈಶ್ವರಾರ್ಪಣಬುದ್ಧ್ಯಾ ಅನುಷ್ಠೀಯಮಾನಃ ಸತ್ತ್ವಶುದ್ಧಯೇ ಭವತಿ ಫಲಾಭಿಸಂಧಿವರ್ಜಿತಃ । ಶುದ್ಧ ಸತ್ತ್ವಸ್ಯ ಚ ಜ್ಞಾನನಿಷ್ಠಾಯೋಗ್ಯತಾಪ್ರಾಪ್ತಿದ್ವಾರೇಣ ಜ್ಞಾನೋತ್ಪತ್ತಿಹೇತುತ್ವೇನ ಚ ನಿಃಶ್ರೇಯಸಹೇತುತ್ವಮಪಿ ಪ್ರತಿಪದ್ಯತೇ ॥ ಗೀತಾ. ಅವತರಣಿಕೆ.]

(೨) ಕರ್ಮಿಗಳಿಗೆ ಕರ್ಮಫಲವಾಗಿ ಚಂದ್ರ(ಪಿತೃ)ಲೋಕಪ್ರಾಪ್ತಿಯಾಗಿ ಅಲ್ಲಿ ಭೋಗವು ಕ್ಷಯಿಸಿದಾಗಮೇಲೆ ಈ ಲೋಕಕ್ಕೆ ಮರಳಿ ಬಂದು ಹುಟ್ಟುವದೆಂಬ ಫಲವಾಗುವದು. ಭಗವಂತನನ್ನು ಉಪಾಸನೆಮಾಡಿದವರಿಗೆ ದೇವಯಾನ ಮಾರ್ಗದಿಂದ ಬ್ರಹ್ಮಲೋಕಪ್ರಾಪ್ತಿಯೂ ಅಲ್ಲಿ ಜ್ಞಾನವಾದರೆ ಬ್ರಹ್ಮನೊಡನೆ ಕಲ್ಪಾಂತದಲ್ಲಿ ಪರಬ್ರಹ್ಮಸಾಯುಜ್ಯವೂ ಆಗುವದು ಇದು ಕ್ರಮಮುಕ್ತಿ. ಕರ್ಮದಿಂದ ಚಿತ್ತಶುದ್ಧಿಯನ್ನು ಪಡೆದು ಜ್ಞಾನಕ್ಕಾಗಿ ಶ್ರವಣಮನನನಿದಿಧ್ಯಾಸನ

ಗಳನ್ನು ಮಾಡಿದವರಿಗೆ ನಿದಿಧ್ಯಾಸನ (ಧ್ಯಾನಯೋಗ)ದ ಫಲವಾಗಿ ಬ್ರಹ್ಮಾತ್ಮೈಕತ್ವ ದರ್ಶನದ ಮೂಲಕ ಸದ್ಯೋಮುಕ್ತಿಯಾಗುವದು, ಎಂದರೆ ಇಲ್ಲಿಯೇ ಅವರು ಬ್ರಹ್ಮದಲ್ಲಿ ಬೆರತುಹೋಗುವರು. ವ್ಯವಹಾರದೃಷ್ಟಿಯಿಂದ ಜ್ಞಾನಿಗಳಿಗೆ ಸಂಚಿತಾಗಾಮಿಕರ್ಮಗಳು ಮಾತ್ರ ನಾಶವಾಗುವವು. ಪ್ರಾರಬ್ಧಕರ್ಮವು ಫಲವನ್ನು ಕೊಟ್ಟುಬಿಟ್ಟಿರುವದರಿಂದ ಆ ಕರ್ಮವೇಗಕ್ಷಯವಾಗಿ ಈ ಶರೀರವು ಬಿದ್ದು ಹೋಗುವವರೆಗೂ ಅದರ ಫಲವನ್ನು ಅನುಭವಿಸಿದ ಬಳಿಕ ಜ್ಞಾನಿಗಳು ಪರಮಾತ್ಮನಲ್ಲಿ ಸೇರಿಹೋಗುವರು ; ಮತ್ತೆ ಅವರಿಗೆ ಕರ್ಮಿಗಳಂತೆ ಜನ್ಮವಾಗುವದಿಲ್ಲ. ಪರಮಾರ್ಥದೃಷ್ಟಿಯಿಂದ ನೋಡಿದರೆ ತತ್ತ್ವಜ್ಞಾನಿಯು 'ಹಿಂದೆ, ಈಗ, ಮುಂದೆ-ಎಂದಿಗೂ ನನಗೆ ಕರ್ಮದ ಸಂಬಂಧವಿಲ್ಲ' ಎಂದೇ ನಿಶ್ಚಯಿಸಿರುತ್ತಾನಾದ್ದರಿಂದ ಜ್ಞಾನಕ್ಕೆ ಸರ್ವಕರ್ಮನಾಶವೂ ಸದ್ಯೋಮುಕ್ತಿಯೂ ಫಲವಾಗುವದು.

[ಧೂಮೋ ರಾತ್ರಿಃ ಧೂಮಾಭಿಮಾನಿನೀ ರಾತ್ರ್ಯಭಿಮಾನಿನೀ ಚ ದೇವತಾ | ತಥಾ ಕೃಷ್ಣಃ ಕೃಷ್ಣಪಕ್ಷದೇವತಾ | ಷಣ್ಮಾಸಾ ದಕ್ಷಿಣಾಯನಮ್ ಇತಿ ಚ ಪೂರ್ವವತ್ ದೇವತೈವ | ತತ್ರ ಚಾನ್ದ್ರಮಸಿ ಭವಂ ಚಾನ್ದ್ರಮಸಂ ಜ್ಯೋತಿಃ ಫಲಮ್ ಇಷ್ಟಾದಿಕಾರೀ ಯೋಗೀ ಕರ್ಮಾಣೀ ಪ್ರಾಪ್ಯ ಭುಕ್ತ್ವಾ ತತ್ಕ್ಷಯಾತ್ ಯಾತ್ ಇಹ ಪುನಃ ನಿವರ್ತತೇ || ಗೀ. ೮-೨೫.

ದೇವಯಾನೇನ ಪಥಾ ಯೇ ಬ್ರಹ್ಮಲೋಕಂ ಶಾಸ್ತ್ರೋಕ್ತ ವಿಶೇಷಣಂ ಗಚ್ಛನ್ತಿ ತೇ ತಂ ಪ್ರಾಪ್ಯ ನ ಚನ್ದ್ರಲೋಕಾದಿವ ಭುಕ್ತಭೋಗಾ ಆವರ್ತನ್ತೇ || ಸೂ. ಭಾ. ೪-೪-೨೨.

ಕಾರ್ಯಬ್ರಹ್ಮಲೋಕಪ್ರಲಯಪ್ರತ್ಯುಪಸ್ಥಾನೇ ಸತಿ ತತ್ರೈವೋತ್ಪನ್ನಸಮ್ಯಗ್ದರ್ಶನಾಃ ಸನ್ತಸ್ತದಧ್ಯಕ್ಷೇಣ ಸಹ ಆತಃಪರಂ ಪರಿಶುದ್ಧಂ ವಿಷ್ಣೋಃ ಪರಮಂ ಪದಂ ಪ್ರತಿಪದ್ಯನ್ತೇ | ಇತ್ಥಂ ಕ್ರಮಮುಕ್ತಿರನಾವೃತ್ತ್ಯಾದಿಶ್ರುತ್ಯಭಿಧಾನೇಭ್ಯೋಽಭ್ಯುಪಗನ್ತವ್ಯಾ ಸೂ. ಭಾ. ೪-೩-೧೦.

ಸರ್ವಭೂತಸ್ಥಂ ಸರ್ವೇಷು ಭೂತೇಷು ಸ್ಥಿತಂ ಸ್ವಮ್ ಆತ್ಮಾನಂ ಸರ್ವಭೂತಾನಿ ಚ ಆತ್ಮನಿ ಬ್ರಹ್ಮಾದೀನಿ ಸ್ತಮ್ಬಪರ್ಯನ್ತಾನಿ ಚ ಸರ್ವಭೂತಾನಿ ಆತ್ಮನಿ ವಿಕತಾಂ ಗತಾನಿ ಈಕ್ಷತೇ ಪಶ್ಯತಿ ಯೋಗಯುಕ್ತಾತ್ಮಾ ಸಮಾಹಿತಾನ್ತಃಕರಣಃ | ಸರ್ವತ್ರ ಸಮದರ್ಶನಃ | ಸರ್ವೇಷು ಬ್ರಹ್ಮಾದಿಸ್ಥಾವರಾನ್ತೇಷು ವಿಷಮೇಷು ಸರ್ವಭೂತೇಷು ಸಮಂ ನಿರ್ವಿಶೇಷಂ ಬ್ರಹ್ಮಾತ್ಮೈಕತ್ವವಿಷಯಂ

ದರ್ಶನಾದಿಜ್ಞಾನಂ ಯಸ್ಯ ಸ ಸರ್ವತ್ರಸಮುದರ್ಶನಃ ॥
ಗೀ. ೬–೨೯.

ತಂ ಪುರಾಣಮ್ ಪುರಾತನಮ್ ಅಧ್ಯಾತ್ಮಯೋಗಾಧಿಗಮೇನ ವಿಷಯೇಭ್ಯಃ ಪ್ರತಿಸಂಹೃತ್ಯ ಚೇತಸ ಆತ್ಮನಿ ಸಮಾಧಾನಮ್ ಅಧ್ಯಾತ್ಮಯೋಗಃ । ತಸ್ಯ ಆಧಿಗಮಃ । ತೇನ–ಮತ್ವಾ ದೇವಮ್ ಆತ್ಮಾನಂ ಧೀರೋ ಹರ್ಷಶೋಕೌ ಆತ್ಮನಃ ಉತ್ಕರ್ಷಾಪಕರ್ಷಯೋರಭಾವಾತ್ ಜಹಾತಿ ॥ ಕಾ. ಭಾ. ೧–೨–೧೨.

ತಸ್ಮಿನ್ ಮಾರ್ಗೇ ಪ್ರಯೋತಾ ಮೃತಾಃ ಗಚ್ಛನ್ತಿ ಬ್ರಹ್ಮ ಬ್ರಹ್ಮ ವಿದೋ ಬ್ರಹ್ಮೋಪಾಸಕಾಃ ಬ್ರಹ್ಮೋಪಾಸನಾಪರಾ ಜನಾಃ । 'ಕ್ರಮೇಣ' ಇತಿ ವಾಕ್ಯಶೇಷಃ । ನ ಹಿ ಸದ್ಯೋಮುಕ್ತಿಭಾಜಾಂ ಸಮ್ಯಗ್ದರ್ಶನನಿಷ್ಠಾನಾಂ ಗತಿರಾಗತಿರ್ವಾ ಕ್ವಚಿದಸ್ತಿ । ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ (ಬೃ. ೪–೪–೬) ಇತಿ ಶ್ರುತೇಃ; ಬ್ರಹ್ಮ ಸಲ್ಲೀನಪ್ರಾಣಾ ಏವ ತೇ ಬ್ರಹ್ಮಮಯಾ ಬ್ರಹ್ಮಭೂತಾ ಏವ ತೇ॥
ಗೀ. ಭಾ. ೮–೨೪.

ನ ತಾವದನಾರಬ್ಧಕಾರ್ಯಂ ಕರ್ಮಾಶಯಮ್ ಜ್ಞಾನೋತ್ಪತ್ತಿರುಪಪದ್ಯತೇ ಆಶ್ರಿತೇ ಚ ತಸ್ಮಿನ್ ಕುಲಾಲಚಕ್ರವತ್ ಪ್ರವೃತ್ತವೇಗಸ್ಯ ಾನ್ತರಾಲೇ ಪ್ರತಿಬನ್ಧಾಸಂಭವಾತ್, ಭವತಿ ವೇಗಕ್ಷಯಃ ಪ್ರತಿಪಾಲನಮ್ ॥ ಸೂ. ಭಾ. ೪–೧–೧೫.

ಪೂರ್ವಸಿದ್ಧಕರ್ತೃತ್ವಭೋಕ್ತೃತ್ವವಿಪರೀತಂ ಹಿ ತ್ರಿಷ್ವಪಿ ಕಾಲೇಷು ಅಕರ್ತೃತ್ವಾಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ, ನೇತಃಪೂರ್ವಮಪಿ ಕರ್ತಾ ಭೋಕ್ತಾ ವಾ ಅಹಮಾಸಂ ನೇದಾನೀಮ್ ನಾಪಿ ಭವಿಷ್ಯತ್ಕಾಲೇ ಇತಿ ಬ್ರಹ್ಮವಿದವಗಚ್ಛತಿ ॥
ಸೂ. ಭಾ. ೪–೧–೧೩.]

(೩) ಪರಮೇಶ್ವರನು ಜನ್ಮರಹಿತನೂ ಅವ್ಯಯನೂ ಆದರೂ ತನ್ನ ತ್ರಿಗುಣಾತ್ಮಕಮಾಯೆಯನ್ನು ವಶದಲ್ಲಿಟ್ಟುಕೊಂಡು ದೇಹವುಳ್ಳವನಂತೆಯೂ ಹುಟ್ಟಿದವನಂತೆಯೂ ಕಾಣಿಸಿಕೊಂಡು ಲೋಕಾನುಗ್ರಹವನ್ನು ಮಾಡುತ್ತಾನೆ. ಇದು ಅವನಿಗೆ ಮಿಕ್ಕ ಜೀವರಿಗೆ ಆಗುವಂಥ ಜನ್ಮವಲ್ಲ. ಅಪಾಂತರತಮಸ್ಸು ಮುಂತಾದ ಕೆಲವರು ಜ್ಞಾನವಾದಮೇಲೂ ಪರಮೇಶ್ವರನಿಂದ ನಿಯುಕ್ತರಾಗಿ ತಮ್ಮತಮ್ಮ ಅಧಿಕಾರವಿರುವವರೆಗೂ ಬದುಕಿರುತ್ತಾರೆ; ಅವರು ತಮ್ಮ ಪ್ರಾರಬ್ಧಕರ್ಮವು ಮುಗಿಯದೆ ಇರುವದರಿಂದ ಅನೇಕ ಶರೀರಗಳನ್ನು ಸ್ವತಂತ್ರ

ರಾಗಿಯೇ ಪಡೆಯುತ್ತಾರಾದ್ದರಿಂದ, 'ಮುಕ್ತರಿಗೂ ಆವೃತ್ತಿಯಾಗಲಿ!'–ಎಂದು ಶಂಕಿಸುವದಕ್ಕೆ ಬರುವದಿಲ್ಲ. ಇನ್ನು ಕೆಲವರು ಮಹರ್ಷಿಗಳು ಸಗುಣವಿದ್ಯೆಯಲ್ಲಿ ಆಸಕ್ತರಾಗಿದ್ದು ಜನ್ಮಾಂತರವನ್ನು ಪಡೆದು, ಆ ಫಲಷಲ್ಲಿ ವೈರಾಗ್ಯವನ್ನು ಹೊಂದಿ ಪರಮಾತ್ಮಜ್ಞಾನದಿಂದ ಮುಕ್ತರಾಗುತ್ತಾರೆ. ಆ ದ್ದರಿಂದ ಅವರ ಉದಾಹರಣೆಯೂ ಜ್ಞಾನಕ್ಕೆ ಸದ್ಯೋಮುಕ್ತಿಯುಂಟೊ, ಇಲ್ಲವೊ ?–ಎಂಬ ಶಂಕೆಗೆ ಅವಕಾಶವನ್ನು ಕೊಡುವದಿಲ್ಲ.

[ಸ ಚ ಭಗವಾನ್ ಜ್ಞಾನೈಶ್ವರ್ಯಶಕ್ತಿಬಲವೀರ್ಯತೇಜೋಭಿಃ ಸದಾ ಸಂಪನ್ನಃ ತ್ರಿಗುಣಾತ್ಮಿಕಾಂ ವೈಷ್ಣವೀಂ ಮಾಯಾಂ ಮೂಲ ಪ್ರಕೃತಿಂ (?) ವಶೀಕೃತ್ಯ ಅಜೋಽವ್ಯಯೋ ಭೂತಾನಾಮ್ ಈಶ್ವರೋ ನಿತ್ಯಶುದ್ಧಬುದ್ಧಮುಕ್ತಸ್ವಭಾವೋಽಪಿ ಸನ್ ಸ್ವ ಮಾಯಯೈವ ದೇಹವಾನಿವ ಜಾತ ಇವ ಚ ಲೋಕಾನುಗ್ರಹಂ ಕುರ್ವನ್ ಲಕ್ಷ್ಯತೇ ॥ ಗೀ. ಅವತರಣಿಕೆ.

ಏವಮ್ ಅಪಾನ್ತರತಮಃಪ್ರಭೃತಯೋಽಪಿ ಈಶ್ವರಾಃ ಪರಮೇಶ್ವರೇಣ ತೇಷು ತೇಷು ಅಧಿಕಾರೇಷು ನಿಯುಕ್ತಾಃ ಸನ್ತಃ ಸಶ್ಯಪಿ ಸಮ್ಯಗ್ದರ್ಶನೇ ಕೈವಲ್ಯಹೇತೌ ಅಕ್ಷೀಣಕರ್ಮಾಣಃ, ಯಾವದಧಿಕಾರಮ್ ಅವತಿಷ್ಠನ್ತೇ | ತದವಸಾನೇ ಚ ಅಪವೃಜ್ಯನ್ತೇ ಇತ್ಯವಿಶುದ್ಧಮ್ ॥ ಸೂ. ಭಾ. ೩–೩–೩೨.

ಜ್ಞಾನಾನ್ತರೇಷು ಚ ಐಶ್ವರ್ಯಾದಿಫಲೇಷು ಆಸಕ್ತಾಃ ಸ್ಯುರ್ಮಹರ್ಷಯಃ | ತೇ ಪಶ್ಚಾತ್ ಐಶ್ವರ್ಯಕ್ಷಯೆದರ್ಶನೇನ ನಿರ್ವಿಣ್ಣಾಃ ಪರಮಾತ್ಮಜ್ಞಾನೇ ಪರಿನಿಷ್ಠಿತಾಃ ಕೈವಲ್ಯಂ ಪ್ರಾಪುಃ ಇತ್ಯುಪಪದ್ಯತೇ ॥ ಸೂ. ಭಾ ೩-೩-೩೨.]

(೪) ಮುಕ್ತಿಗೆ ಸಾಧನವೇನು ? –ಎಂಬ ಪ್ರಶ್ನೆಗೆ ಆಚಾರ್ಯರು ಕೊಟ್ಟಿರುವ ಉತ್ತರವಿದು : ಸ್ವವರ್ಣಾಶ್ರಮಾಚಾರಧರ್ಮವನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡುವದು, ಸಾಧನಚತುಷ್ಟಯಸಂಪತ್ತಿ, ಸರ್ವಕರ್ಮಸಂನ್ಯಾಸಪೂರ್ವಕವಾಗಿ ಶ್ರವಣಮನನನಿರಂತರಪರಮಾತ್ಮಧ್ಯಾನ– ಇವು ಒಂಹಕ್ಕಿಂತ ಒಂದು ಹೆಚ್ಚುಹೆಚ್ಚು ಆಂತರಂಗಸಾಧನವಾಗಿರುತ್ತವೆ. ಇದರಿಂದ ಜ್ಞಾನೋತ್ಪತ್ತಿಯಾಗಿ ಮೋಕ್ಷವು ಲಭಿಸುತ್ತದೆ. ಇದೆಲ್ಲ ಅಧ್ಯಾರೋಪದೃಷ್ಟಿಯಿಡಲೇ ಹೇಳಿದ್ದು. ಪರಮಾರ್ಥದೃಷ್ಟಿಯಿಂದಲಾದರೆ ಸಾಧನ, ಬಂಧ, ಮುಕ್ತಿ– ಎಲ್ಲವೂ ಅಪರಮಾರ್ಥವೇ, ಬ್ರಹ್ಮವೊಂದೇ ಸತ್ಯ.

[ತಸ್ಮಾತ್, ಯಜ್ಞಾದೀನಿ ಶಮದಮಾದೀನಿ ಚ ಯಥಾಶ್ರಮಂ ಸರ್ವಾಣ್ಯೇವ ಆಶ್ರಮಕರ್ಮಾಣಿ ವಿದ್ಯೋತ್ಪತ್ತೌ ಅಪೇಕ್ಷಿ

ತವ್ಯಾನಿ । ತತ್ರಾಪಿ ಏವಂವಿತ್ ಇತಿ ವಿದ್ಯಾಸಂಯೋಗಾತ್ ಪ್ರತ್ಯಾಸನ್ನಾನಿ ವಿದ್ಯಾಸಾಧನಾನಿ ಶವಾದೀನಿ, ವಿವಿದಿಷಾಸಂಯೋಗಾತ್ತು ಬಾಹ್ಯತರಾಣಿ ಯಜ್ಞಾದೀನಿ ಇತಿ ವಿವೇಕ್ತವ್ಯಮ್ ॥
ಸೂ. ಭಾ. ೩-೪-೨೭.

ತಸ್ಮಾತ್, ವಿದ್ಯಾಸಂಯುಕ್ತಂ ನಿತ್ಯಮ್ ಅಗ್ನಿಹೋತ್ರಾದಿ ವಿದ್ಯಾವಿಹೀನಂ ಚ ಉಭಯಮಪಿ ಮುಮುಕ್ಷೂಣಾಂ ಮೋಕ್ಷಪ್ರಯೋಜನೋದ್ದೇಶೇನ ಇಹಜನ್ಮನಿ ಜನ್ಮಾನ್ತರೇ ಚ ಪ್ರಾಗ್ ಜ್ಞಾನೋತ್ಪತ್ತೇಃ ಕೃತಂ ಯತ್ ತದ್ ಯಥಾಸಾಮರ್ಥ್ಯಂ ಬ್ರಹ್ಮಾಧಿಗಮಪ್ರತಿಬನ್ಧಕಾರಣೋಪಾತ್ತದುರಿತಕ್ಷಯಹೇತುತ್ವದ್ವಾರೇಣ ಬ್ರಹ್ಮಾಧಿಗಮಕಾರಣತ್ವಂ ಪ್ರತಿಪದ್ಯಮಾನಂ ಶ್ರವಣಮನನ ಶ್ರದ್ಧಾತಾತ್ಪರ್ಯಾದ್ಯನ್ತರಙ್ಗ ಕಾರಣಾಪೇಕ್ಷಂ ಬ್ರಹ್ಮವಿದ್ಯಯಾ ಸಹ ಏಕಕಾರ್ಯಂ ಭವತೀತಿ ಸ್ಥಿತಮ್ ॥
ಸೂ. ಭಾ. ೪-೨-೧೮.

ಬ್ರಹ್ಮಜ್ಞಾನಪರಿಪಾಕಾಙ್ಗತ್ವಾಚ್ಚ ಪಾರಿವ್ರಾಜ್ಯಸ್ಯ ॥
ಸೂ. ಭಾ. ೩-೪-೨೦.]

೨೧. ಆಚಾರ್ಯರ ವೇದಾಂತಸಂಪ್ರದಾಯ

ಆಚಾರ್ಯರ ಸಂಪ್ರದಾಯದ ಪೂರ್ವಾಚಾರ್ಯರುಗಳು

೧೫೩. ಆಚಾರ್ಯರು ಅದ್ವೈತಸಿದ್ಧಾಂತವನ್ನು ಹೊಸದಾಗಿ ಸ್ಥಾಪನೆ ಮಾಡಿದರೆ?–ಎಂದರೆ ಇಲ್ಲವೆಂದು ಎಲ್ಲರೂ ಒಕ್ಕೊರಲಿನಿಂದ ಸಾರಿರುತ್ತಾರೆ. ಆಚಾರ್ಯರ ಹಿಂದೆ ಗೋವಿಂದಭಗವತ್ಪಾದರೂ ಗೌಡಪಾದರೂ ಇದ್ದರು. ಗೌಡಪಾದರು ಮಾಂಡೂಕ್ಯೋಪನಿಷತ್ತಿನ ಮೇಲೆ ಬರೆದಿರುವ ನಾಲ್ಕು ಪ್ರಕರಣಗಳ ರೂಪವಾದ ಕಾರಿಕೆಗಳು-ಇಂದಿಗೂ ಆಚಾರ್ಯರ ಅದ್ವೈತಕ್ಕೆ ಆಧಾರವಾಗಿರುವ ಅತ್ಯಂತ ಪ್ರಾಚೀನವಾದ ಆಕರಗ್ರಂಥವೆಂದು ಎಲ್ಲರೂ ಮನ್ನಿಸಿರುತ್ತಾರೆ. ಸೂತ್ರ ಭಾಷ್ಯದಲ್ಲಿ ಗೌಡಪಾದರನ್ನು 'ಹಾಗೆಂದು ಸಂಪ್ರದಾಯವನ್ನು ಬಲ್ಲವರು ಹೇಳಿಯೂ ಇರುತ್ತಾರೆ' (ತಥಾ ಚ ಸಂಪ್ರದಾಯವಿದೋ ವದನ್ತಿ ಸೂ. ಭಾ. ೧–೪–೧೪), 'ಈ ವಿಷಯದಲ್ಲಿ ವೇದಾಂತಾರ್ಥದ ಸಂಪ್ರದಾಯವನ್ನು ಬಲ್ಲ ಆಚಾರ್ಯರಿಂದ ಹೀಗೆಂದು ಉಕ್ತವಾಗಿದೆ' (ಅತ್ರೋಕ್ತಂ ವೇದಾನ್ತಾರ್ಥಸಂಪ್ರದಾಯವಿದ್ಭಿರಾಚಾರ್ಯೈಃ ಸೂ ಭಾ. ೨–೧–೯) ಎಂದು ಗೌರವಿಸಿರುವದು ಕಂಡುಬರುತ್ತದೆ.

ಇದರ ಜೊತೆಗೆ ಆಚಾರ್ಯರು ಇಂಥವರೆಂದು ನಿಶ್ಚಿತವಾಗಿ ಗೊತ್ತಾಗದ ಕೆಲವು ಆಚಾರ್ಯರುಗಳ ಸಂಮತಿಯನ್ನು ತಮ್ಮ ಭಾಷ್ಯಗಳಲ್ಲಿ ಅಲ್ಲಲ್ಲಿ ಉದಾಹರಿಸಿರುತ್ತಾರೆ. ಉದಾಹರಣೆಗೆ ಗೀತಾಭಾಷ್ಯದಲ್ಲಿ ಈ ವಾಕ್ಯಗಳಿವೆ. 'ಅದ್ದರಿಂದ ಸಂಪ್ರದಾಯವನ್ನರಿಯುವದನು ಸರ್ವಶಾಸ್ತ್ರಗಳನ್ನೂ ಬಲ್ಲವನಾದರೂ ಅವನನ್ನು ಮೂರ್ಖನಂತೆಯೇ ಉಪೇಕ್ಷಿಸಬೇಕು' (ತಸ್ಮಾದಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ ಗೀ. ಭಾ ೧೩–೨), 'ಗುರುಸಂಪ್ರದಾಯವಿಲ್ಲದವರಿಗೆ ಹೀಗೇ ಸರಿ' (ಸತ್ಯಮೇವಂ ಗುರುಸಂಪ್ರದಾಯರಹಿತಾನಾಮ್ ಗೀ. ಭಾ. ೧೮–೫೦), 'ಅದ್ದರಿಂದಲೇ ಅಧ್ಯಾರೋಪಾಪವಾದಗಳಿಂದ ನಿಷ್ಪ್ರಪಂಚವಾದದ್ದನ್ನು ಬಿತ್ತರಿಸಲಾಗುತ್ತದೆ' ಎಂದು ಸಂಪ್ರದಾಯವನ್ನು ಬಲ್ಲವರ ವಚನವಿದೆ (ತಥಾ ಹಿ ಸಂಪ್ರದಾಯವಿದಾಂ ವಚನಮ್–ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತ ಇತಿ॥ ಗೀ. ಭಾ. ೧೩–೧೩) ಎಂಬ ವಾಕ್ಯಗಳಿವೆ. ಬೃಹದಾರಣ್ಯಕಭಾಷ್ಯದಲ್ಲಿ 'ಇಲ್ಲಿ ಸಂಪ್ರದಾಯವನ್ನು ಬಲ್ಲವರು ಒಂದು ಕಥೆಯನ್ನು ಹೇಳಿರುತ್ತಾರೆ' (ಅತ್ರ ಚ ಸಂಪ್ರದಾಯವಿದ ಆಖ್ಯಾಯಿಕಾಮಾಚಕ್ಷತೇ ಬೃ ಭಾ. ೨-೧-೨೦), ಬ್ರಹ್ಮಸೂತ್ರದಲ್ಲಿ ಸಮನ್ವಯ ಸೂತ್ರಭಾಷ್ಯದ ಕೊನೆಯಲ್ಲಿ ಕೆಲವು ಅದ್ವೈತಸಂಪ್ರದಾಯದ ಶ್ಲೋಕಗಳನ್ನು ಉದಾಹರಿಸಿದೆಯೆಂದೂ ಆ ಶ್ಲೋಕಗಳು ಸುಂದರಪಾಂಡ್ಯನವೆಂದು ಕೆಲವರ ಹೇಳಿಕೆಯಿದೆ ಎಂದೂ ಹಿಂದೆ* (ಪು.೨೫೫) ಹೇಳಿರುತ್ತೇವೆ. ಈ ಎಲ್ಲಾ ಕಾರಣ

* ಗ್ರಂಥಕರ್ತರ ಲಕ್ಷ್ಯಕ್ಕೆ ಬರದೆಯೇ ಈವರೆಗಿನ ಖಂಡಸಂಖ್ಯೆಗಳು ತಪ್ಪಾಗಿ ಅಚ್ಚಾಗಿಬ್ಬವೆ; ಆದ್ದರಿಂದ ಇನ್ನು ಮುಂದೆ ಖಂಡಸಂಖ್ಯೆಯ ಬದಲು ಪುಟಸಂಖ್ಯೆಯನ್ನು ಕೊಡಲಾಗುತ್ತದೆ. ಈ ವಿಷಯಕ್ಕೆ ಶುದ್ಧಾಶುದ್ಧಪತ್ರಿಕೆಯನ್ನು ನೋಡಿರಿ.

ಗಳಿಂದ ಆಚಾರ್ಯರ ವೇದಾಂತಪ್ರಕ್ರಿಯೆಯು ಅವರ ಸ್ವತಃಕಲ್ಪನೆಯಲ್ಲವೆಂದೂ ಆ ಸಂಪ್ರದಾಯದವರು ಹಿಂದೆಯೇ ಅನೇಕ ಆಚಾರ್ಯರು ಆಗಿಹೋಗಿದ್ದರೆಂದೂ ನಾವು ಧಾರಾಳವಾಗಿ ನಂಬಬಹುದಾಗಿದೆ.

ದ್ರವಿಡಾಚಾರ್ಯ, ಬ್ರಹ್ಮನಂದಿ, ಉಪವರ್ಷ

೧೫೪. ಆಚಾರ್ಯರು ಹೆಸರಿಸದೆ ಉದಾಹರಿಸಿರುವ ಪೂರ್ವಾಚಾರ್ಯರುಗಳಲ್ಲಿ ದ್ರವಿಡಾಚಾರ್ಯರು ಒಬ್ಬರು. ಮಾಂಡೂಕ್ಯೋಪನಿಷತ್ತಿನ ಭಾಷ್ಯದಲ್ಲಿ 'ಸಿದ್ಧಂ ತು ನಿವರ್ತಕತ್ವಾತ್ ಇತಿ ಆಗಮವಿದಾಂ ಸೂತ್ರಮ್' (ಆತ್ಮನಲ್ಲಿ ಅಧ್ಯಾರೋಪವಾಗಿರುವ ಧರ್ಮಗಳನ್ನು ನಿವೃತ್ತಿಮಾಡುವದರಿಂದಲೇ ಶಾಸ್ತ್ರಕ್ಕೆ ಪ್ರಾಮಾಣ್ಯವು ಎಂದು ಆಗಮವನ್ನು ಬಲ್ಲವರ ಸೂತ್ರವಿದೆ)– ಎಂದು ಬರೆದಿರುತ್ತದೆ. ಇಲ್ಲಿ ಪರಾಮೃಷ್ಟರಾಗಿರುವ ಆಚಾರ್ಯರು ದ್ರವಿಡಾಚಾರ್ಯರೆಂದು ಟೀಕಾಕಾರ ಆನಂದಗಿರಿಯು ಬರೆದಿರುತ್ತಾನೆ. ಸೃಷ್ಟಿಯನ್ನು ಹೇಳುವದು ಆತ್ಮೈಕತ್ವವನ್ನು ತಿಳಿಸಿಕೊಡುವದಕ್ಕೆ ಎಂದು ಸಂಪ್ರದಾಯವನ್ನು ಬಲ್ಲವರ ವಚನವಿದೆ ಎಂದು ಬೃಹದಾರಣ್ಯಕಭಾಷ್ಯದಲ್ಲಿರುವದನ್ನು ಆಗಲೆ ತಿಳಿಸಿರುತ್ತೇವಷ್ಟೆ ? ಅದೂ ದ್ರವಿಡಾಚಾರ್ಯರ ವಾಕ್ಯವೆಂದು ಟೀಕಾಕಾರ ಆನಂದಗಿರಿ ಹೇಳಿರುತ್ತಾನೆ. ಈ ದ್ರವಿಡಾಚಾರ್ಯರು ಛಾಂದೋಗ್ಯದಮೇಲೆ ಒಂದು ವಿಸ್ತಾರವಾದ ಭಾಷ್ಯವನ್ನು ಬರೆದಿದ್ದರೆಂದು ಭಾಷ್ಯಟೀಕಾಕಾರನು ತಿಳಿಸಿರುತ್ತಾನೆ. ಈ ದ್ರವಿಡಾಚಾರ್ಯರು ಯಾರೆಂಬುದು ಗೊತ್ತಾಗಿ ತಿಳಿದಿಲ್ಲ ; ವಿಶಿಷ್ಟಾದ್ವೈತಿಗಳು ಹೇಳುವ ದ್ರವಿಡಾಚಾರ್ಯರು ಇವರಲ್ಲ– ಎಂಬುದಕ್ಕೆ ಪ್ರಮಾಣವಿದೆ. ಏಕೆಂದರೆ ದ್ರವಿಡಾಚಾರ್ಯರು ಸಗುಣಬ್ರಹ್ಮವಾದಿಗಳು, ಆಚಾರ್ಯರು ಉದಾಹರಿಸಿರುವ ದ್ರವಿಡಾಚಾರ್ಯರು ಅದ್ವೈತಿಗಳು.

ಬ್ರಹ್ಮನಂದಿ ಎಂಬ ವಾಕ್ಯಕಾರನು ಛಾಂದೋಗ್ಯಾಭಿಪ್ರಾಯವನ್ನು ವಿವರಿಸಿದ್ದನಂತೆ. ಈತನೂ ಅದ್ವೈತಿಯೇ, ವಿವರ್ತವಾದಿಯೇ– ಎಂಬುದು ಸಂಕ್ಷೇಪಶಾರೀರಕದ (೩–೨೧೭) ಮೇಲೆ ವ್ಯಾಖ್ಯಾನವನ್ನು ಬರೆದಿರುವ ಮಧುಸೂದನಸರಸ್ವತಿಗಳು ಉದಾಹರಿಸಿರುವ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಅದ್ದರಿಂದ ಭಾಸ್ಕರರು 'ಪರಿಣಾಮಮಸ್ತು ಸ್ಯಾದ್ಧಧ್ಯಾದಿವತ್' ಎಂದು ಉದಾಹರಿಸಿರುವ ವಾಕ್ಯಕಾರನಿಗಿಂತಲೂ ರಾಮಾನುಜಾಚಾರ್ಯರು ವೇದಾರ್ಥಸಂಗ್ರಹದಲ್ಲಿ ಪರಾಮರ್ಶಿಸಿರುವ ವಿಶಿಷ್ಟಾದ್ವೈತಿ ಟಂಕನೆಂಬ ವಾಕ್ಯಕಾರನಿಗಿಂತಲೂ ಈತನು ಭಿನ್ನನು ಎಂದೇ ತಿಳಿಯಬೇಕಾಗಿದೆ.

ಸೂತ್ರಭಾಷ್ಯದಲ್ಲಿ 'ಅತ ಏವ ಚ ಭಗವತಾ ಉಪವರ್ಷೇಣ ಪ್ರಥಮೇ ತನ್ತ್ರೇ ಆತ್ಮಾಸ್ತಿತ್ವಾಭಿಧಾನಪ್ರಸಕ್ತೌ ಶಾರೀರಕೇ ವಕ್ಷ್ಯಾಮಃ ಇತಿ ಉದ್ಧಾರಃ

ಕೃತಃ (ಆದ್ದರಿಂದಲೇ ಭಗವಂತನಾದ ಉಪವರ್ಷನು ಪ್ರಥಮತಂತ್ರವಾದ ವಿಚಾರಮೀಮಾಂಸದಲ್ಲಿ **ಆತ್ಮನಿ**ವಾನೆಂದು ಹೇಳುವ ಪ್ರಸಂಗ ಬಂದಾಗ ಶಾರೀರಕ ದಲ್ಲಿ ಹೇಳುವೆವು ಎಂದು ಬಿಟ್ಟಿರುತ್ತಾರೆ (ಸೂ. ಭಾ. ೩–೩.೫೩) –ಎಂಬ ವಾಕ್ಯ ವಿದೆ. ಇದರಿಂದ **ಉಪವರ್ಷ**ರೆಂಬವರು ಪೂರ್ವೋತ್ತರವಿಚಾರಮೀಮಾಂಸಗಳೆರಡಕ್ಕೂ ವಿವರಣೆಯನ್ನು ಬರೆದ ವೃತ್ತಿಕಾರರೆಂದೂ ಅವರು ಆಚಾರ್ಯರ ಸಂಪ್ರದಾಯದ ಆದ್ಯೈತಕ್ಕೆ ಸೇರಿದವರೆಂದೂ ತಿಳಿದುಬರುತ್ತದೆ. **ಶಬರಸ್ವಾಮಿ**ಗಳೂ ಇವರನ್ನು (ಜೈ. ಸೂ. ೧–೧–೫) 'ಭಗವಾನ್ ಉಪವರ್ಷಃ' ಎಂದೇ ಬರೆದಿರುವದರಿಂದ ಈ ಆಚಾರ್ಯರು ಬಹಳ ಹಿಂದಿನವರೆಂದು ಒಪ್ಪಬೇಕಾಗುತ್ತದೆ. ಇವರೇ 'ಬೋಧಾಯನ'ರೆಂಬ ವಿಶಿಷ್ಟಾದ್ವೈ ತಸಂಪ್ರದಾಯದ ವೃತ್ತಿಕಾರರೆಂಬ ಕೆಲವರ ನಂಬಿಕೆಗೆ ಆಧಾರವಿಲ್ಲ ; ಏಕೆಂದರೆ ಹಾಗಿದ್ದರೆ ಶಂಕರಾಚಾರ್ಯರು ಇವರನ್ನು ಭಗವಾನ್ ಎಂಬ ಗೌರವಯುಕ್ತವಿಶೇಷಣದಿಂದ ಎಂದಿಗೂ ಕರೆಯುತ್ತಿರಲಿಲ್ಲ.

ಆಚಾರ್ಯರ ಹಿಂದಿನ ಸಂಪ್ರದಾಯಾಂತರದ ವೃತ್ತಿಕಾರರುಗಳು

೧೫೫. ಶಂಕರಭಗವತ್ಪಾದರಿಗಿಂತ ಹಿಂದೆಯೇ ಬೇರೆಬೇರೆಯ ಸಂಪ್ರದಾಯದ ಆದ್ಯೈತಿಗಳು ತಮ್ಮತಮ್ಮ ವೃತ್ತಿಗಳನ್ನು ಬರೆದಿದ್ದರೆಂಬುದಕ್ಕೆ ಪ್ರಸ್ಥಾನತ್ರಯಭಾಷ್ಯಗಳಲ್ಲಿಯೇ ಆಧಾರವಿದೆ. ಉದಾಹರಣೆಗೆ (೧) **ಸಮನ್ವಯ ಸೂತ್ರಭಾಷ್ಯ**ದಲ್ಲಿ ಉಪಾಸನಾವಿಧಿಗೆ ಶೇಷವಾಗಿರುವ ಬ್ರಹ್ಮವನ್ನು ಶಾಸ್ತ್ರ ಪ್ರಮಾಣವು ತಿಳಿಸಿಕೊಡುತ್ತದೆ ಎಂಬವರ ಪಕ್ಷವನ್ನು ಖಂಡಿಸಿದೆ. (೨) **ಆನಂದಮಯಾಧಿಕರಣ**ದಲ್ಲಿ (೧–೧–೧೯) ಆನಂದಮಯನು ಪರಮಾತ್ಮನೇ ಎಂಬ ವೃತ್ತಿಕಾರರ ಮತವನ್ನು ಖಂಡಿಸಿದೆ. (೩) **ಉಭಯಲಿಂಗಾಧಿಕರಣಭಾಷ್ಯ**ದಲ್ಲಿ (೩–೨–೨೧) ಬ್ರಹ್ಮವು ಪ್ರತ್ಯಸ್ತಮಿತಾಶೇಷಪ್ರಪಂಚವಾದ ಒಂದೇ ಆಕಾರವುಳ್ಳದ್ದೊ ಅಥವಾ ಪ್ರಪಂಚದಂತೆ ಅನೇಕಾಕಾರವುಳ್ಳದ್ದೊ ? –ಎಂದು ವಿಮರ್ಶಿಸುವ ಒಂದು ಅಧಿಕರಣ : ಬ್ರಹ್ಮವು ಸಲ್ಲಕ್ಷಣವೊ, ಬೋಧಲಕ್ಷಣವೊ, ಅಥವಾ ಸದ್ಬೋಧಲಕ್ಷಣವೊ ? –ಎಂದು ವಿಮರ್ಶಿಸುವ ಮತ್ತೊಂದು ಅಧಿಕರಣ –ಹೀಗೆ **ಎರಡು ಅಧಿಕರಣಗಳನ್ನು ಕಲ್ಪಿಸಿರುವ ವೃತ್ತಿಕಾರರ ಮತದ ಖಂಡನೆ** ಯಿದೆ. ಅಲ್ಲಿಯೇ **ಪ್ರಪಂಚವಿಲಯ**ವಾದಿಗಳ ಮತವನ್ನು ಖಂಡಿಸಿರುತ್ತದೆ. (೪) **ಆವೃತ್ತ್ಯಧಿಕರಣ**ದಲ್ಲಿ (೪.೧–೨) ಒಂದು ಸಲ ಮಾಡಿದ ಶಾಸ್ತ್ರಶ್ರವಣಮಾತ್ರದಿಂದ ಬ್ರಹ್ಮಾತ್ಮಜ್ಞಾನವಾಗಲಾರದಾದ್ದರಿಂದ **ಶಾಸ್ತ್ರ**ಯುಕ್ತಿಗಳ ಅಭ್ಯಾಸವನ್ನು ಮಾಡಬೇಕು–ಎಂದು ವಾದಿಸುತ್ತಿದ್ದ **ಪ್ರಸಂಖ್ಯಾನವಾದಿ**ಗಳ ಮತವನ್ನು ಖಂಡಿಸಿದೆ. (೫) **ಕಾರ್ಯಾಧಿಕರಣ**ದಲ್ಲಿ (೪–೩–೧೪) ದೇವಯಾನಮಾರ್ಗದಿಂದ ಹೋಗುವವರನ್ನು ಅಮಾನವಪುರುಷನು ಪರಬ್ರಹ್ಮದ ಬಳಿಗೆ ಕರೆದು ಕೊಂಡು ಹೋಗುತ್ತಾನೆಂಬವರ ಪಕ್ಷವನ್ನು ಖಂಡಿಸಿದೆ. (೬) **ತದನನ್ಯತ್ವಾಧಿ**

ಕರಣಭಾಷ್ಯದಲ್ಲಿ (೨-೧-೧೪) ಭೇದಾಭೇದವಾದಿಗಳ ಮತವನ್ನು ಖಂಡಿಸಿದೆ ; ಆ ಮತವನ್ನು ಬೃಹದಾರಣ್ಯಕಾದಿಭಾಷ್ಯಗಳಲ್ಲಿಯೂ ಖಂಡಿಸಿದೆ.

ಈ ಮೇಲೆ ಹೇಳಿದ ಪೂರ್ವಪಕ್ಷಿಗಳೆಲ್ಲರೂ ಮೋಕ್ಷದಲ್ಲಿ ಅದ್ವೈತಬ್ರಹ್ಮವನ್ನೇ ಜೀವನು ಪಡೆಯುತ್ತಾನೆ ಎನ್ನುವವರಾಗಿದ್ದರು. ಆಚಾರ್ಯರು, ಮೋಕ್ಷದಲ್ಲಿಯೂ ಜೀವನು ಬ್ರಹ್ಮಕ್ಕಿಂತ ವ್ಯತಿರಿಕ್ತನಾಗಿಯೇ ಇರುತ್ತಾನೆನ್ನುವ ವೇದಾಂತಿಗಳನ್ನು ಪರಾಮರ್ಶಿಸಿಯೆಃ ಇಲ್ಲ-ಎಂಬುದನ್ನು ಲಕ್ಷಿಸಬೇಕಾಗಿದೆ. ಬೃಹದಾರಣ್ಯಕದಲ್ಲಿ ಮತ್ತೆಮತ್ತೆ ಖಂಡನೆಗೆ ತೆಗೆದು ಕೊಂಡಿರುವ ಭರ್ತೃಪ್ರಪಂಚರು ದ್ವೈತಾದ್ವೈತಿಗಳಾಗಿದ್ದರೂ ಮೋಕ್ಷದಲ್ಲಿ ಅದ್ವೈತವನ್ನೇ ಒಪ್ಪಿದ್ದರು ಇಷ್ಟೇ ಅಲ್ಲ. 'ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತ ಇತ್ಯ ವಿಪ್ರತಿಪತ್ತಿಃ ಸರ್ವೇಷಾಮುಪನಿಷದ್ವಾದಿನಾಮ್' (ಬೃ. ಭಾ. ೪-೧-೨೦) ಎಂಬ ವಾಕ್ಯವೊಂದು ಬೃಹದಾರಣ್ಯಕಭಾಷ್ಯದಲ್ಲಿ ಕಂಡುಬರುತ್ತದೆ. ಆಚಾರ್ಯರ ಕಾಲಕ್ಕಿದ್ದ ಉಪನಿಷದ್ವಾದಿಗಳೆಲ್ಲರೂ ಜೀವೇಶ್ವರೈಕ್ಯವನ್ನೇ ಒಪ್ಪುತ್ತಿದ್ದರೆಂದೇ ಇದರಿಂದ ಏರ್ಪಡುತ್ತದೆ.

ಈವರೆಗೆ ಹೇಳಿರುವ ಎಲ್ಲಾ ಕಾರಣಗಳಿಂದ ಆಚಾರ್ಯರು ಹೊಸದಾಗಿ ಅದ್ವೈತವನ್ನು ಪ್ರತಿಷ್ಠಾಪನೆಮಾಡುವದಕ್ಕೆ ಹೊರಟವರಲ್ಲ ; ವೇದಾಂತವಾಕ್ಯ ಜನ್ಯಜ್ಞಾನಮಾತ್ರದಿಂದ ಸದ್ಯೋಮುಕ್ತಿಯಾಗುವದೆಂದೂ ಅವಿದ್ಯಾನಿವೃತ್ತಿಮಾತ್ರದಿಂದ ಬದುಕಿರುವಾಗಲೇ ಮುಕ್ತಿಯಾಗುವದೆಂದೂ ಸಂಸಾರಿಯಾಗಿರುವ ಜೀವನು ಬಂಧದಶೆಯಲ್ಲಿಯೂ ನಿಜವಾಗಿ ಪರಮಾತ್ಮನೇ ಆಗಿದ್ದರೂ ಅದನ್ನರಿಯದೆ ಅವಿದ್ಯಾಮಾತ್ರದಿಂದ ತಾನು ಬದ್ಧನೆಂದು ಭಾವಿಸಿಕೊಂಡಿರುತ್ತಾನೆಂದೂ-ಹೇಳುವ ಒಂದಾನೊಂದು ವಿಶಿಷ್ಟಸಂಪ್ರದಾಯದ ಅದ್ವೈತವನ್ನು ಸ್ಥಾಪಿಸಿ ಪ್ರಸ್ಥಾನತ್ರಯದಲ್ಲಿರುವ ಸಿದ್ಧಾಂತಸಾಧನವಾಕ್ಯಗಳಿಗೆ ಏಕವಾಕ್ಯತೆಯನ್ನುಂಟುಮಾಡುವದಕ್ಕೆಂದೇ ಅವರು ಶ್ರಮಿಸಿರುತ್ತಾರೆಂದು ಹೇಳಬೇಕಾಗಿದೆ. ಈ ದೃಷ್ಟಿಯಿಂದಲೇ ನಾವು ಅದ್ವೈತವೇದಾಂತದ ವ್ಯಾಖ್ಯಾನಪ್ರಸ್ಥಾನಗಳನ್ನೂ ಆಚಾರ್ಯರ ಹೆಸರಿನಲ್ಲಿ ಪ್ರಚಾರಕ್ಕೆ ಬಂದಿರುವ ಪ್ರಕರಣಗಳನ್ನೂ ಸ್ತೋತ್ರಾದಿಗಳನ್ನೂ ಸಮಾಲೋಚನೆಮಾಡಬೇಕಾದೆ.

---

೨೧. ಅದ್ವೈತವ್ಯಾಖ್ಯಾನಪ್ರಸ್ಥಾನಗಳು

ವಾರ್ತಿಕಪ್ರಸ್ಥಾನ

೧೫೬. ಮಂಡನಮಿಶ್ರನೂ ಸುರೇಶ್ವರಾಚಾರ್ಯರೂ ಒಂದೇ ವ್ಯಕ್ತಿ– ಎಂಬ ವಿಷಯಕ್ಕೆ ಇರುವ ಮತಭೇದವನ್ನೂ ಆ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನೂ ಹಿಂದೆ (ಪು. ೧೩೦ರಿಂದ ೧೩೬) ತಿಳಿಸಿರುತ್ತೇವೆ. ಸುರೇಶ್ವರಾಚಾರ್ಯರು ಮಂಡನನ ಹಲವು ಅಭಿಪ್ರಾಯಗಳನ್ನು ಸ್ವೀಕರಿಸಿದ್ದರೂ ಅತನು ವಿವೇಚಿಸದೆ ಇರುವ ಹಲವು ವಾದಗಳನ್ನು ಅವರು ಪ್ರತಿಪಾದಿಸಿರುತ್ತಾರೆಂಬುದನ್ನು ಅಲ್ಲಿ ಹೇಳಿರುತ್ತೇವೆ. ಸುರೇಶ್ವರಾಚಾರ್ಯರು ವೇದಾಂತಸೂತ್ರಗಳಮೇಲೆ ವಾರ್ತಿಕವನ್ನು ಬರೆಯವಡಕ್ಕೆ ಪ್ರಯತ್ನಿಸಿದ್ದು, ಅದಕ್ಕೆ ಆಚಾರ್ಯರ ಮಿಕ್ಕ ಶಿಷ್ಯರಿಂದ ಅಡ್ಡಿಯಾದದ್ದು, ಅಮೇಲೆ ಆಚಾರ್ಯರ ಅಪ್ಪಣೆಯಂತೆ ಸುರೇಶ್ವರರು ಎರಡು ವಾರ್ತಿಕಗಳನ್ನು ಬರೆದದ್ದು– ಇದನ್ನು (ಪು. ೨೨೭ರಿಂದ ೨೨೯) ತಿಳಿಸಿದ್ದಾಗಿದೆ. ಈ ವಾರ್ತಿಕಗಳಲ್ಲಿರುವ ಪ್ರಕ್ರಿಯೆಯನ್ನೇ ನಾವು ವಾರ್ತಿಕಪ್ರಸ್ಥಾನ ಎಂದು ಕರೆದಿರುರುವದು. ನೈಷ್ಕರ್ಮ್ಯಸಿದ್ಧಿಯೂ ಈ ಪ್ರಸ್ಥಾನಕ್ಕೇ ಸೇರಿದ ಗ್ರಂಥವು. ಈ ಪ್ರಸ್ಥಾನದ ಮುಖ್ಯೋಪದೇಶಗಳನ್ನು ನಾವು ಈ ಮುಂದೆ ಸಂಗ್ರಹಿಸುವೆವು.

ವಾಕ್ಯಾರ್ಥಜ್ಞಾನದಿಂದಲೇ ಆತ್ಮಜ್ಞಾನ

೧೫೭. ಭಾಷ್ಯಕಾರರು ಉತ್ತಮಾಧಿಕಾರಿಗಳಿಗೆ ವೇದಾಂತವಾಕ್ಯಶ್ರವಣಮಾತ್ರದಿಂದಲೇ ಬ್ರಹ್ಮಾತ್ಮಜ್ಞಾನವು ಆಗಬಹುದೆಂದು ಹೇಳಿರುವದನ್ನು ಸುರೇಶ್ವರರು ಮತ್ತೊಮ್ಮೆ ನೈಷ್ಕರ್ಮ್ಯಸಿದ್ಧಿಯಲ್ಲಿ ಸ್ಪಷ್ಟಪಡಿಸಿರುತ್ತಾರೆ. ಬ್ರಹ್ಮಸಿದ್ಧಿಯಲ್ಲಿ (ಪು. 35) ಆತ್ಮಜ್ಞಾನವು ವಾಕ್ಯಮಾತ್ರದಿಂದ ಆಗಲಾರದು, ಕರ್ಮಜ್ಞಾನಸಮುಚ್ಚಯವು ಮೋಕ್ಷಕ್ಕೆ ಅವಶ್ಯ– ಎಂಬ ಎರಡು ಶಾಂಕರಭಾಷ್ಯವಿರುದ್ಧಾಭಿಪ್ರಾಯಗಳನ್ನು ಪ್ರತಿಪಾದಿಸಿರುತ್ತದೆ. ನೈಷ್ಕರ್ಮ್ಯಸಿದ್ಧಿಯಲ್ಲಿ ಈ ಎರಡು ವಾದಗಳನ್ನು ಖಂಡಿಸುವದನ್ನೇ ಗುರಿಯಾಗಿಟ್ಟುಕೊಂಡಿದೆ ಎಂದು ಹೇಳಿದರೂ ತಪ್ಪಾಗದು. ಗೌಡಪಾದಕಾರಿಕೆ, ಆಚಾರ್ಯರ ಉಪದೇಶಸಾಹಸ್ರಿ– ಈ ಎರಡರ ಪ್ರಮಾಣಗಳನ್ನು ತಮ್ಮ ಅಭಿಪ್ರಾಯಕ್ಕೆ ಪ್ರಮಾಣವಾಗಿ ಕೊಟ್ಟು ತಮ್ಮ ಪ್ರಕ್ರಿಯೆಯು ಸಂಪ್ರದಾಯಾಗತವೆಂಬುದನ್ನು ಸುರೇಶ್ವರರು ದೃಢಪಡಿಸಿಕೊಂಡಿರುತ್ತಾರೆ.

ವಾರ್ತಿಕಪ್ರಸ್ಥಾನದಲ್ಲಿ ಅವಿದ್ಯೆ

೧೫೮. ವಾರ್ತಿಕಪ್ರಸ್ಥಾನದಲ್ಲಿ ಅವಿದ್ಯೆ ಎಂದರೆ ಆತ್ಮನನ್ನು ಆರಿಯದ್ದೇ (ಐಕಾತ್ಮ್ಯಪ್ರತಿಪತ್ತಿಃ ನೈ.ಸಿ. ೧೭ ತತ್ಪ್ರತಿಷೇಧಾತ್ಮಕಮಜ್ಞಾನಮ್ ನೈ. ಸಿ. ೩–೧, ನ ಜಾನಾಮೀತ್ಯವಿದ್ಯಾ ತೈ.ವಾ. ೨–೧–೧೭೬). ಇದು ಮಿಥ್ಯಾಜ್ಞಾನಕ್ಕೆ

ಕಾರಣವು ; ಮಿಥ್ಯಾಜ್ಞಾನಕ್ಕಿಂತ ಬೇರೆಯಾದ ಅಜ್ಞಾನವಿಲ್ಲವೆಂಬ ಮತವು ಸುರೇಶ್ವರರಿಗೆ ಒಪ್ಪಿಲ್ಲ (ಬೃ. ವಾ. ೧-೪-೪೨೦). ಮಿಥ್ಯಾಜ್ಞಾನವಾಗಲಿ ಸಂಶಯವಾಗಲಿ ಈ ಅಜ್ಞಾನಕ್ಕಿಂತ ಬೇರೆಯಲ್ಲ (ಬೃ. ವಾ. ೧-೪-೪೪೦)- ಎಂಬುದು ಸುರೇಶ್ವರರ ಮತ. ಆಚಾರ್ಯರು ಸೂತ್ರಭಾಷ್ಯದಲ್ಲಿ ಹೇಳಿರುವ ಅನ್ಯೋನ್ಯಾಧ್ಯಾಸವನ್ನು ಏತಕ್ಕೆ ಸುರೇಶ್ವರರು ಸ್ಪಷ್ಟೋಕ್ತಿಗಳಿಂದ ವಿವರಿಸ ಲಿಲ್ಲವೋ ನಮಗೆ ತಿಳಿಯದು. ಭ್ರಾಂತಿಗೆ ವಿಷಯವಾದ ಶುಕ್ತಿರಜತಾದಿಗಳು ಎಲ್ಲಿಯೂ ಇಲ್ಲ ಎಂಬುದನ್ನು (ಬೃ. ವಾ. ೧-೪-೬೭೫, ೨೭೬) ಅವರು ಸ್ಪಷ್ಟ ಪಡಿಸಿರುವದರಿಂದ ಮಿಥ್ಯಾರಜತೋತ್ಪತ್ತಿಯನ್ನಾಗಲಿ ಅದಕ್ಕೆ ಉಪಾದಾನ ಕಾರಣವಾದ ಅವಿದ್ಯೆಯನ್ನಾಗಲಿ ಅವರು ಒಪ್ಪಿಲ್ಲವೆಂದು ಧೈರ್ಯವಾಗಿ ಹೇಳ ಬಹುದು. ಅವಿದ್ಯೆಯಿಂದ ತೋರುವ ಅನಾತ್ಮವೂ ಒಂದರ್ಥದಲ್ಲಿ 'ಅವಿದ್ಯೆ' ಎಂದು ಸುರೇಶ್ವರರು (ತೈ. ವಾ. ೨-೧೭೮, ಬೃ. ವಾ. ೪-೪-೪೯೬) ಹೇಳಿರು ತ್ತಾರೆ. ಅವಿದ್ಯೆಗಿಂತ ಬೇರೆಯಾದ ಸ್ವಂತರೂಪವು ಅನಾತ್ಮಕ್ಕಿಲ್ಲದ್ದರಿಂದ ಅದನ್ನು ಅವಿದ್ಯೆಯೆಂದು ಕರೆಯಬಹುದು (ತೈ. ವಾ. ೨-೧೭೯) ಎಂದು ಅವರ ಮತ. ಅಜ್ಞಾನದಿಂದ ಪ್ರಪಂಚವಾಗಿರುತ್ತದೆ ಎಂದರೆ ಅಜ್ಞಾತಬ್ರಹ್ಮದಿಂದ ಆಗಿರುತ್ತದೆ ಎಂದರ್ಥ ; ಅಭಾವದಿಂದಲೇನೂ ಆದು ಉಂಟಾಗಿಲ್ಲ (ನೈ. ಸಿ. ೩-೭) ಎಂದು ಅವರು ಬರೆದಿರುವ ರಿಂದ ಅವರಿಗೆ ಮೂಲಾವಿದ್ಯಾವಾದದಲ್ಲಿಯೂ ಅಭಿಮಾನ ವಿಲ್ಲ. ಹೀಗಿದ್ದರೂ ಈಗಿನ ಕೆಲವರು "ದ್ವೈತೇಂದ್ರಜಾಲಕ್ಕೆ ಅವಿದ್ಯೆಯು ಉಪಾದಾನ" (ಬೃ. ವಾ. ೧-೪-೩೭೧) ಎಂದು ಮುಂತಾಗಿ ಅವರು ಬರೆದಿರುವ ವಾಕ್ಯಗಳ ಬಲದಿಂದ ಮೂಲಾವಿದ್ಯಾವಾದವನ್ನು ಅವರ ತಲೆಗೂ ಕಟ್ಟಿರುತ್ತಾರೆ. ಈ ವಿಷಯವನ್ನು ವಿವರಣಪ್ರಸ್ಥಾನದ ವಿಮರ್ಶೆಯನ್ನು ಬರೆಯುವಾಗ ನಾವು ಇನ್ನಷ್ಟು ಸ್ಪಷ್ಟಪಡಿಸುವೆವು. ಆತ್ಮನೇ ಅವಿದ್ಯೆಗೆ ಆಶ್ರಯನೂ ವಿಷಯನೂ ಆಗಿರುತ್ತಾನೆಂದು ಭಾಷ್ಯಕಾರರಂತೆಯೇ ಅವರು ಹೇಳಿರುವರಲ್ಲದೆ, ಅವಿದ್ಯೆಯು ಅನುಭವಮಾತ್ರಗಮ್ಯವೆಂದು ತಿಳಿಸುವದರಿಂದ ಅವಿದ್ಯೆಗೆ ಮತ್ತೆಯಾವ ಪ್ರಮಾ ಣವೂ ಇಲ್ಲವೆಂಬುದನ್ನು ಸ್ಪಷ್ಟಪಡಿಸಿರುತ್ತಾರ. ಆತ್ಮಾವಿದ್ಯೆಗಿಂತ ವ್ಯತಿರಿಕ್ತವಾದ ಅನಾತ್ಮವಿಷಯಕವಾದ ಅವಿದ್ಯೆಯೊಂದುಂಟೆಂಬ ವಾದವನ್ನು ಅವರು ಸ್ಪಷ್ಟವಾಗಿ (ಬೃ. ವಾ. ೨-೪-೨೦೦) ಖಂಡಿಸಿರುತ್ತಾರೆ.

ಪಂಚಕೋಶವಿವೇಕ, ಅವಸ್ಥಾತ್ರಯವಿಮರ್ಶೆ

೧೫೯. ಪಂಚಕೋಶಗಳನ್ನು ಪರಿಶೀಲಿಸುವಾಗ ಸಮಷ್ಟಿರೂಪದಿಂದ ನೋಡುವದು, ಕಾರ್ಯಾತ್ಮನನ್ನು ಕಾರಣಾತ್ಮನಲ್ಲಿ ಲಯವಾಡುವದು- ಹೀಗೆ ಕಾರ್ಯಕಾರಣವಿಲಕ್ಷಣವಾದ ಬ್ರಹ್ಮವನ್ನು ಅರಿತುಕೊಳ್ಳಬಹುದೆಂಬುದನ್ನು ಸುರೇಶ್ವರರು ತೈತ್ತಿರೀಯವಾರ್ತಿಕದಲ್ಲಿ ಸ್ಪಷ್ಟಪಡಿಸಿರುತ್ತಾರೆ.

ಅವಸ್ಥಾತ್ರಯಪರೀಕ್ಷೆಯನ್ನು ಪ್ರತ್ಯಗ್ದೃಷ್ಟಿಯ ಆವಲಂಬನೆಗೆ ಸಹಕಾರಿಯಾಗಿ ಉಪಯೋಗಿಸಿರುವದೊಂದು ವಾರ್ತಿಕದಲ್ಲಿ ವಿಶೇಷ. ಈ ದೃಷ್ಟಿಯಿಂದ ನೋಡಿದಾಗ ಮೂರು ಅವಸ್ಥೆಗಳೂ ಆತ್ಮನಲ್ಲಿಲ್ಲವೇ ಇಲ್ಲ, ಅವು ಆತ್ಮಸ್ವರೂಪವೇ (ಬೃ. ವಾ. ೨-೧-೨೬೪). ಸುಷುಪ್ತಿ ಎಂದು ಜನರು ಕರೆಯುತ್ತಿರುವ ಅವಸ್ಥೆಯು ಅವಿದ್ಯಾರಹಿತ, ನಿರ್ಭೇದ, ಕೇವಲ ಆತ್ಮಸ್ವರೂಪ (ಬೃ. ವಾ. ೪-೩-೧೫೧೭ ರಿಂದ ೧೫೨೦, ತೈ. ವಾ. ೨-೪೬೬). ತನ್ನಿನಿದ್ರೆಯಲ್ಲಿ ನಾನು ಏನನ್ನೂ ಅರಿಯುಲಿಲ್ಲ ಎಂಬುದು ಸ್ಮರಣೆಯಲ್ಲ, ವಿಕಲ್ಪಮಾತ್ರವು; ಅದು ಆತ್ಮಾನುಭವದ ಬಲದಿಂದಲೇ ನಮಗೆ ಬಿಗುತ್ತಿರುವದು (ಬೃ. ವಾ. ೧-೪-೨೯೯, ೩೦೦; ೩-೪-೧೭೩). ಹೀಗೆ ಅವಸ್ಥಾತ್ರಯಪರೀಕ್ಷೆಯಿಂದ ವಾರ್ತಿಕಕಾರರು ಅನುಭವಾನುಸಾರಿಯಾವ ಹಲವು ಉತ್ತಮತೀರ್ಮಾನಗಳನ್ನು ಮಾಡಿರುತ್ತಾರೆ.

ಮೋಕ್ಷದ್ವಯವಾದಖಂಡನೆ

೧೬೦. ಶರೀರವಿರುವಾಗ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳುವದು, ಸತ್ತಬಳಿಕ ಬ್ರಹ್ಮದಲ್ಲಿ ಲಯವಾಗುವದು – ಎಂದು ಎರಡು ಬಗೆಯ ಮೋಕ್ಷಗಳಿರುವವೆಂಬ ಭರ್ತೃಪ್ರಪಂಚರ ವಾದವನ್ನು ವಾರ್ತಿಕಕಾರರು (ಬೃ. ವಾ. ೪-೨,೧೦೨) ಖಂಡಿಸಿರುತ್ತಾರೆ. ಈ ಕಾರಣದಿಂದ ಜೀವನ್ಮುಕ್ತಿ, ವಿದೇಹಮುಕ್ತಿ- ಎಂಬ ಮುಕ್ತಿಭೇದಗಳನ್ನು ಈಗಿನ ವೇದಾಂತಿಗಳು ಕೆಲವರು ಒಪ್ಪಿರುವದು ಅವರಿಗೆ ಅಭಿಮತವಲ್ಲವೆಂದೇ ಹೇಳಬೇಕಾಗಿದೆ. ವಾಕ್ಯಜ್ಞಾನದಿಂದ ಮಾತ್ರವೇ ಅಜ್ಞಾನನಿವೃತ್ತಿಯಾಗುವದಿಲ್ಲ, ಅದರ ಅಭ್ಯಾಸದಿಂದ ಉಂಟಾದ ಸಾಕ್ಷಾತ್ಕಾರದಿಂದಲೇ ಮೋಕ್ಷ ಎಂಬವರ ವಾದವನ್ನು (ಬೃ. ವಾ. ೪-೪-೮೧೧ರಿಂದ ೮೨೯) ಅವರು ಖಂಡಿಸಿರುತ್ತಾರೆ.

ಮೋಕ್ಷಸಾಧನ

೧೬೧. ಜ್ಞಾನವೇ ಮೋಕ್ಷಕ್ಕೆ ಸಾಧನವೆಂದು ಆಚಾರ್ಯರಂತೆಯೇ ವಾರ್ತಿಕಕಾರರು ಹೇಳಿ, ಹಾಗೆ ಒಪ್ಪದೆ, ಜ್ಞಾನವಾದ ಬಳಿಕವೂ ಮಾಡತಕ್ಕದ್ದು ಉಳಿದಿರುತ್ತದೆ ಎಂಬ ವಾದಿಗಳ ಮತವನ್ನು ಅವರು ತೀಕ್ಷ್ಣವಾದ ಯುಕ್ತಿಗಳಿಂದ ಖಂಡಿಸಿರುತ್ತಾರೆ. ಸಂಬಂಧವಾರ್ತಿಕದಲ್ಲಿಯೂ ಬೃಹದಾರಣ್ಯಕಭಾಷ್ಯವಾರ್ತಿಕದ ಬೇರೆಯ ಕಡೆಗಳಲ್ಲಿಯೂ ಹಿಂದಿನ ಆದ್ವೈತಪ್ರಕ್ರಿಯೆಗಳನ್ನು ಅವರು ವಿಸ್ತಾರವಾಗಿ ಖಂಡಿಸಿರುವರಿಂದ ಆಚಾರ್ಯರ ಪ್ರಕ್ರಿಯೆಯೊಂದೇ ಆದ್ವೈತಸಿದ್ಧಿಗೆ ನಿರ್ದಿಷ್ಟವಾದ ಸಾಧನವೆಂಬುದು ಅವರ ಅಭಿಪ್ರಾಯವಾಗಿತ್ತೆಂದು ತಾವು ಧಾರಾಳವಾಗಿ ಸಂಬಬಹುದಾಗಿದೆ. ಶ್ರವಣಮನನಗಳನ್ನು ವಿಧಿಸಿದೆ ಎಂಬುದನ್ನು ಮಾತ್ರ ಅವರು ಒಪ್ಪಿರುತ್ತಾರೆ. ನಿದಿಧ್ಯಾಸನವೆಂದರೆ ಶ್ರವಣಮನನ

ಗಳಿಂದಾದ ಸ್ವಾಯತ್ತವಾದ ಜ್ಞಾನವೇ ಎಂಬುದು ಅವರ ಮತ (ಬೃ. ವಾ.೨.೪.೨೧೩ರಿಂದ ೨೨೧). ಆಚಾರ್ಯರು ನಿದಿಧ್ಯಾಸನವನ್ನು ಸಾಧನವಾಗಿ (ಸೂ. ಭಾ. ೪–೧–೧) ಹೇಳಿರುವದನ್ನು ಅವರು ಏತಕ್ಕೆ ಒಪ್ಪಲಿಲ್ಲವೋ ನಮಗೆ ತಿಳಿಯದು.

ವಾರ್ತಿಕಪ್ರಸ್ಥಾನವಿಚಾರದ ಉಪಸಂಹಾರ

೧೬೨. ಒಟ್ಟಿನಲ್ಲಿ ಸುರೇಶ್ವರಾಚಾರ್ಯರು ಆಚಾರ್ಯರ ಮತವನ್ನೇ ಸ್ಪಷ್ಟಗೊಳಿಸಿ ಬಲಪಡಿಸಿರುತ್ತಾರೆ ಎಂದು ಹೇಳಬಹುದು. ಬ್ರಹ್ಮಸಿದ್ಧಿಕಾರನಾದ ಮಂಡನನ ಹಲವು ಯುಕ್ತಿಗಳನ್ನು ಅವರು ಸ್ವೀಕರಿಸಿರುತ್ತಾರಾದರೂ ಭಾಷ್ಯಪ್ರಕ್ರಿಯೆಗೆ ವಿರುದ್ಧವಾದ ಎಲ್ಲಾ ವಾದಗಳನ್ನೂ ಕಟ್ಟುನಿಟ್ಟಾಗಿ ಖಂಡಿಸಿರುತ್ತಾರೆ. ವಾರ್ತಿಕಪ್ರಸ್ಥಾನದ ವಿಚಾರವನ್ನು ಇನ್ನೂ ಹೆಚ್ಚಾಗಿ ತಿಳಿಯಬೇಕೆನ್ನುವವರು 'ವೇದಾಂತವಿಚಾರದ ಇತಿಹಾಸ' ಮತ್ತು 'ನೈಷ್ಕರ್ಮ್ಯಸಿದ್ಧಿಯ ಅನುವಾದ'[1] – ಇವುಗಳನ್ನು ನೋಡಬೇಕು.

ಪಂಚಪಾದಿಕಾ ಮತ್ತು ವಿವರಣ– ಇವುಗಳ ಪ್ರಸ್ಥಾನ

೧೬೩. ಪದ್ಮಪಾದಾಚಾರ್ಯರು ಸನಂದನನೆಂಬ ಹೆಸರಿನಿಂದ ಆಚಾರ್ಯರಿಂದ ಆಶ್ರಮಸ್ವೀಕಾರಮಾಡಿದ್ದು, ಅವರಿಗೆ ಪದ್ಮಪಾದರೆಂಬ ಹೆಸರು ಬಂದದ್ದಕ್ಕೆ ಕಾರಣ–ಇವನ್ನು ಅವರ ಚರಿತ್ರೆಯಲ್ಲಿ (ಪು. ೧೦೧) ತಿಳಿಸಿರುತ್ತೇವೆ. ಅವರೇ ಭಾಷ್ಯಕ್ಕೆ ವಾರ್ತಿಕವನ್ನು ಬರೆಯಬೇಕೆಂದು ಆಚಾರ್ಯರ ಶಿಷ್ಯರು ಬಿನ್ನವಿಸಿದ್ದು, ಆಚಾರ್ಯರು ಟೀಕೆಯನ್ನು ಮಾತ್ರ ಬರೆಯಲಿ ಎಂದದ್ದು, ಅದು ಕಾರಣಾಂತರದಿಂದ ಸುಟ್ಟುಹೋದದ್ದು, ಅದರ ಭಾಗವು ಮಾತ್ರ ಪಂಚಪಾದಿಕೆ ಎಂಬ ಹೆಸರಿನಿಂದ ಪ್ರಸಿದ್ಧವಾದದ್ದು– ಈ ಕಥೆಯನ್ನು ಹಿಂದೆ (ಪು.೨೨೭ರಿಂದ ೨೨೯) ಸಂಗ್ರಹಿಸಿರುತ್ತೇವೆ. ಹೆಸರು ಪಂಚಪಾದಿಕೆ ಎಂದಿದ್ದರೂ ಗ್ರಂಥವು ಶಾರೀರಕದ ನಾಲ್ಕೇ ಸೂತ್ರಗಳ ಭಾಷ್ಯದ ಟೀಕೆಯಾಗಿರುತ್ತದೆಯೆಂದೂ ಅಲ್ಲಿ ತಿಳಿಸಿರುತ್ತೇವೆ. ಪ್ರಕಾಶಾತ್ಮರೆಂಬವರು ಈ ಪಂಚಪಾದಿಕೆಗೆ ವಿವರಣವನ್ನು ಬರೆದಿರುತ್ತಾರೆ. ಪಂಚಪಾದಿಕೆಗೂ ವಿವರಣಕ್ಕೂ ಕೆಲವು ಅಂಶಗಳಲ್ಲಿ ಮತಭೇದವು ತೋರುತ್ತಿದ್ದರೂ ಒಟ್ಟಿನಲ್ಲಿ ಪಂಚಪಾದಿಕೆಯಲ್ಲಿ ಪ್ರತಿಪಾದಿತವಾಗಿರುವ ವಿಷಯಗಳನ್ನು ವಿವರಿಸುವದೇ ಪ್ರಕಾಶಾತ್ಮರ ಗುರಿಯಾಗಿರುವದರಿಂದ ಈ ಎರಡು ಗ್ರಂಥಗಳನ್ನೂ ಒಂದೇ ಅಭಿಪ್ರಾಯದವೆಂದು ಹಿಡಿದು ಈ ಪ್ರಕ್ರಿಯೆಯನ್ನು ವಿವರಣ ಪ್ರಸ್ಥಾನವೆಂದೇ ಕರೆಯುವದು ವಾಡಿಕೆಯಲ್ಲಿದೆ.

1. ಇವು ಆಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಾಶಿತವಾಗಿವೆ; ನೈಷ್ಕರ್ಮ್ಯಸಿದ್ಧಿಗೆ 'ಕ್ಲೇಶಾಪಹಾರಿಣೀ' ಎಂಬ ವಿಸ್ತಾರವಾದ ಸಂಸ್ಕೃತವ್ಯಾಖ್ಯಾನವೂ ಈ ಗ್ರಂಥಕರ್ತರಿಂದ ಬರೆದು ಸಿದ್ಧವಾಗಿದೆ.

ವಿವರಣಪ್ರಸ್ಥಾನದ ಮುಖ್ಯವಿಷಯಗಳು

೧೬೪. ಪಂಚಪಾದಿಕೆ ಮತ್ತು ವಿವರಣ– ಇವೆರಡೂ ಶ್ರೀ ಶಂಕರ ಭಗವತ್ಪಾದರ ಸೂತ್ರಭಾಷ್ಯದ ಅಭಿಪ್ರಾಯವನ್ನು ವಿವರಿಸುವದಕ್ಕೆಂದೇ ಹೊರ ಟ್ಟಿದ್ದರೂ ಅವುಗಳಲ್ಲಿ ಕೆಲವು ಹೊಸ ಅಭಿಪ್ರಾಯಗಳನ್ನು ಹೊರಕ್ಕೆ ತರಲಾಗಿದೆ. ಅವುಗಳನ್ನು ಅತಿಸಂಕ್ಷೇಪವಾಗಿ ಇಲ್ಲಿ ವಾಚಕರ ಮುಂದೆ ಇಡುವೆವು.

ಭಾಷ್ಯಕಾರರು ಸತ್ಯವಾದ ಅದ್ವಿತೀಯಾತ್ಮ, ಅನೃತವಾದ ಅನಾತ್ಮ– ಇವೆರಡನ್ನೂ ಒಂದರಲ್ಲೊಂದನ್ನು ಕಲಬೆರಕೆಮಾಡಿಕೊಂಡು ಒಂದರ ಧರ್ಮವನ್ನು ಮತ್ತೊಂದರಲ್ಲಿ ಜನರು ಅಧ್ಯಾಸಮಾಡುತ್ತಿರುವದರಿಂದಲೇ ಅವರಿಗೆ ಪ್ರಮಾತೃತ್ವವೂ ಕರ್ತೃತ್ವಭೋಕ್ತೃತ್ವಗಳೂ ಕಾಣುತ್ತಿರುವವೆಂದು ಸುಸ್ಪಷ್ಟವಾಗಿ ಸೂತ್ರ ಭಾಷ್ಯದ ಉಪೋದ್ಘಾತದಲ್ಲಿ ಬರೆದಿರುತ್ತಾರೆ. ಆದರೆ **ಪಂಚಪಾದಿಕಾಕಾರರು**

೧. 'ಲೋಕವ್ಯವಹಾರವು ಮಿಥ್ಯಾಜ್ಞಾನನಿಮಿತ್ತವಾಗಿದೆ' ಎಂಬ ಭಾಷ್ಯ ವಾಕ್ಯವನ್ನು ಮಿಥ್ಯಾ **ಎಂದರೆ ಅನಿರ್ವಚನೀಯವಾದ ಅಜ್ಞಾನವು, ಎಂಬ**ರ **ಜಡಸ್ವರೂಪವಾದ ಅವಿದ್ಯಾಶಕ್ತಿಯು** ಅಧ್ಯಾಸರೂಪವಾದ ವ್ಯವಹಾರಕ್ಕೆ **ಉಪಾದಾನಕಾರಣವು** ಎಂದು (ಪಂ. ಪು. ೪) ವ್ಯಾಖ್ಯಾನಮಾಡಿರುತ್ತಾರೆ. **ವಿವರಣಕಾರರು** ಅದನ್ನು ಒಪ್ಪಿ ಈ ಅಜ್ಞಾನವು ಅಧ್ಯಾಸಕ್ಕೆ ಉಪಾದಾನವು ಹೇಗೆಂಬುದಕ್ಕೆ ಯುಕ್ತಿಯನ್ನು ಕೊಟ್ಟಿರುತ್ತಾರೆ (ವಿ. ೧೧)

೨. ಈ ಮಿಥ್ಯಾಜ್ಞಾನರೂಪವಾದ **ಅವಿದ್ಯಾಶಕ್ತಿಯು** ಹೊರಗಿನ ವಸ್ತುಗಳನ್ನು ಬೇರೆಯಾಗಿ ಕಾಣುವದಕ್ಕೆ ಮಾತ್ರ ಕಾರಣವಾಗಿದೆ; ಆತ್ಮನು ಬ್ರಹ್ಮಸ್ವರೂಪನಾಗಿದ್ದರೂ ಹಾಗೆ ಕಾಣದಂತೆ ಅಡ್ಡಿಮಾಡಿ ಅಹಂಕಾರವೇ ಮುಂತಾದ ಬೇರೆ ರೂಪದಲ್ಲಿ ಕಾಣುವಂತೆಯೂ ಮಾಡುತ್ತದೆ ಎಂದು **ಪಂಚಪಾದಿಕಾಕಾರರು** (ಪಂ. ಪು. ೪–೫) ವಾದಿಸಿರುತ್ತಾರೆ. ಆತ್ಮಾಶ್ರಯವೂ ಆತ್ಮವಿಷಯಕವೂ ಆಗಿರುವ ಈ ಅಜ್ಞಾನವು ಶುಕ್ತಿರಜತಾದ್ಯುಪಾದಾನವೂ ಆಗಿದೆ ಎಂದು **ವಿವರಣಕಾರರು** (ವಿ. ಪು. ೧೨) ಹೇಳಿರುತ್ತಾರೆ.

೩. ಅವಿದ್ಯಾಶಕ್ತಿಯನ್ನು ಒಪ್ಪದಿದ್ದರೆ ಮಿಥ್ಯಾರ್ಥವು ಕಾಣಿಸಲಾರದು ಎಂದು **ಪಂಚಪಾದಿಕಾಕಾರರು**(ಪಂ.ಪು. ೪) ಹೇಳಿರುವಲ್ಲಿ ಭಾವರೂಪಾಜ್ಞಾನವಾದ ಆ **ಮೂಲಾವಿದ್ಯೆಗೆ** ಪ್ರತ್ಯಕ್ಷ, ಅನುಮಾನ, ಅರ್ಥಾಪತ್ತಿ – **ಎಂಬ** ಪ್ರಮಾಣಗಳನ್ನೂ ವಿವರಣಕಾರರು (ವಿ. ಪು. ೧೨–೧೪) ಕೊಟ್ಟಿರುತ್ತಾರೆ.

೪. ಅವಿದ್ಯಾಶಕ್ತಿಯು ಸುಷುಪ್ತಿಯಲ್ಲಿ ಸಂಸ್ಕಾರಶೇಷವಾಗಿ ನಿದ್ರೆಯಲ್ಲಿದ್ದುಕೊಂಡು ಎಚ್ಚರದಲ್ಲಿ ಮತ್ತೆ ಅಹಂಕಾರಾದಿರೂಪದಿಂದ ತೋರಿಕೊಳ್ಳುತ್ತದೆ (ಪಂ. ೪, ೨೦) ಎಂದು ಪಂಚಪಾದಿಕಾಕಾರರು ಹೇಳಿರುವಲ್ಲಿ ಅಗ್ರಹಣ, ಮಿಥ್ಯಾಜ್ಞಾನ, ಅದರ ಸಂಸ್ಕಾರ– ಈ ಮೂರಕ್ಕಿಂತ ಬೇರೆಯಾದ ಅವಿದ್ಯೆಯು ಸುಷುಪ್ತಿಯಲ್ಲಿರುತ್ತದೆ (ವಿ. ಪು. ೧೬) ಎಂದು **ವಿವರಣಾಚಾರ್ಯರು** ಯುಕ್ತಿ

ಯಿಂದ ಸಾಧಿಸಿರುತ್ತಾರೆ. ನಾಮರೂಪ, ಅವ್ಯಾಕೃತ, ಅವಿದ್ಯೆ, ಮಾಯೆ, ಪ್ರಕೃತಿ, ಅಗ್ರಹಣ, ಅವ್ಯಕ್ತ, ತಮಸ್ಸು, ಕಾರಣ, ಲಯಶಕ್ತಿ, ಮಹಾಸುಪ್ತಿ, ನಿದ್ರೆ, ಅಕ್ಷರ, ಆಕಾಶ– ಎಂದು ಬೇರೆಬೇರೆಯ ಹೆಸರುಗಳಿಂದ ಕರೆಯಲ್ಪಡವ್ಯ ಅವಿದ್ಯೆಯೇ ಚೈತನ್ಯಕ್ಕೆ ಸ್ವಭಾವದಿಂದಿರುವ ಬ್ರಹ್ಮಸ್ವರೂಪವನ್ನು ಮುಚ್ಚಿ ಹಾಕಿ ಜೀವತ್ವವನ್ನುಂಟುಮಾಡುತ್ತದೆ ಎಂದು ಪಂಚಪಾದಿಕೆಯಲ್ಲಿ (ಪಂ. ಪು ೨೦) ಹೇಳಿರುತ್ತದೆ. ವಿವರಣಾಚಾರ್ಯರು ಮಾಯಾವಿದ್ಯೆಗಳು ಒಂದೇ ಪದಾರ್ಥದ ಹೆಸರೆಂದು ಯುಕ್ತಿಯನ್ನು ಕೊಟ್ಟು ಮಿಕ್ಕ ಕೆಲವು ಗ್ರಂಥಕಾರರ ಸಮ್ಮತಿಯನ್ನೂ (ವಿ. ಪು. ೩೧ರಿಂದ ೩೨) ಉದಾಹರಿಸಿರುತ್ತಾರೆ. ಈ ವಾದವು ಮಾಯೆಯು ಅವಿದ್ಯಾಕಲ್ಪಿತವೆಂದು ಹೇಳುವ ಭಾಷ್ಯಕ್ಕೆ (ಪು. ೩೦೪) ವಿರುದ್ಧವೆಂಬುದು ಸ್ಪಷ್ಟವಾಗಿಯೇ ಇದೆ.

೫. ಶ್ರವಣಮನನನಿದಿಧ್ಯಾಸನಗಳು ಅರ್ಥವಾದಗಳೆಂದೂ ಬಹಿರ್ಮುಖತ್ವವನ್ನು ತಡೆಗಟ್ಟುವ ವಿಧಿಕಾರ್ಯದ ಲೇಶವಿರುವದರಿಂದ ವಿಧಿಗಳಂತೆ ಕಾಣುತ್ತಿರುವವೆಂದೂ ಪಂಚಪಾದಿಕೆಯಲ್ಲಿ (ಪಂ. ಪು. ೯೩) ಸ್ಪಷ್ಟವಾಗಿ ಹೇಳಿದ್ದರೂ ವಿವರಣಕಾರರು ಶ್ರವಣವಿಧಿಯನ್ನು ವಿಚಾರಮಾಡುವದಕ್ಕೆಂದೇ ಶಾರೀರಕ ಮೀಮಾಂಸಾಶಾಸ್ತ್ರವು ಪ್ರಾರಂಭವಾಗಿದೆ (ವಿ.ಪು. ೧–೨) ಎಂತ ಹೇಳಿರುವದಲ್ಲದೆ ಶ್ರವಣಕ್ಕೆ ಮನನನಿದಿಧ್ಯಾಸನಗಳು ಅಂಗವೇ ಎಂಬುದನ್ನು ಯುಕ್ತಿಯಿಂದಲೂ ಸಾಧಿಸಿರುತ್ತಾರೆ (ವಿ.ಪು. ೧೦೪) , ಅಪರೋಕ್ಷಜ್ಞಾನವಾದಮೇಲೂ ಪರೋಕ್ಷತಾ ಭ್ರಾಂತಿಯಾಗಬಹುದೆಂಬ ಪಂಚಪಾದಿಕಾಕಾರರ ಅಭಿಪ್ರಾಯವನ್ನು(ಪಂ.ಪು.೩೯) ಒಪ್ಪಿ ಮನನನಿದಿಧ್ಯಾಸನಗಳಿಗೆ ಪ್ರತಿಬಂಧಕವಾದ ಚಿತ್ತದೋಷವನ್ನು ತೆಗೆದು ಹಾಕುವ ಕೆಲಸವನ್ನೇ ಕೊಟ್ಟಿರುತ್ತಾರೆ. ಪಂಚಪಾದಿಕಾಕಾರರೂ ಶ್ರವಣವಿಧಿಯನ್ನೇ ಒಪ್ಪಿದಂತೆ ಕಲ್ಪಿಸಿಕೊಂಡು ವಿಧಿಗಳಾಗಿದ್ದರೂ ಇವು ಸ್ತುತಿಗಳೆಂದು ಹೇಳಿದ್ದಾರೆ ಎಂದು (ವಿ. ಪು. ೨೦೩) ತಿಳಿಸಿರುತ್ತಾರೆ.

೬. ಬ್ರಹ್ಮಜ್ಞಾನದಿಂದ ಅವಿದ್ಯೆಯು ಹೋದಮೇಲೂ ಅವಿದ್ಯೆಯ ಸಂಸ್ಕಾರವು ಉಳಿದುಕೊಂಡಿದ್ದು ಅಹಂಕಾರಗ್ರಂಥಿಗೆ ಕಾರಣವಾಗಿರಬಹುದು (ಪಂ. ಪು. ೪೮) ಎಂದು ಪಂಚಪಾದಿಕೆಯ ಹೇಳಿಕೆ. ವಿವರಣಕಾರರು ಈ ಪಕ್ಷಕ್ಕೆ ಯುಕ್ತಿಯನ್ನು ಕೊಟ್ಟಿರುವರಲ್ಲದೆ, ಅವಿದ್ಯಾಲೇಶವೇ ಇಲ್ಲಿ ಹೇಳಿರುವ ಸಂಸ್ಕಾರವೆಂಬ ಮತ್ತೊಂದು ಪಕ್ಷವನ್ನು (ವಿ. ಪು. ೧೦೬) ಇಷ್ಟಸಿದ್ಧಿಯನ್ನಾಶ್ರಯಿಸಿ ಇಲ್ಲಿ ಕೊಟ್ಟಿರುತ್ತಾರೆ ; ಹೀಗೆ ಜೀವನ್ಮುಕ್ತಿಗೆ ಅವಿದ್ಯೆಯನ್ನು ಒಪ್ಪಿ ವಿದೇಹಮುಕ್ತಿಗೇ ಪ್ರಾಧಾನ್ಯವನ್ನು ಕಲ್ಪಿಸಿರುತ್ತಾರೆ.

ಈ ಮೇಲೆ ಭಾಷ್ಯಕ್ಕೆ ಬಿಡುವ ವಿವರಣಪ್ರಸ್ಥಾನದ ಮುಖ್ಯವಾದ ಗಳನ್ನು ಸಂಗ್ರಹಿಸಿರುತ್ತೇವೆ. ಇಲ್ಲಿ ಹಿಡಿದಿರುವ ಮೂಲಾವಿದ್ಯಾವಾದವು

ಭಾಷ್ಯಕ್ಕೆ ವಿರುದ್ಧವೆಂಬುದನ್ನು ವಾಚಕರು ಈ ಸಂಗ್ರಹದಿಂದ ತಿಳಿದಿರಬಹುದು.[1]

ಭಾಮತೀಪ್ರಸ್ಥಾನ

೧೬೫. ವಾಚಸ್ಪತಿಮಿಶ್ರನೆಂಬಾತನು ರಚಿಸಿರುವ 'ಭಾಮತೀ' ಎಂಬ ಭಾಷ್ಯಟೀಕೆಯಲ್ಲಿ ಅಡಗಿರುವ– ಮತ್ತು ಅದರ ವ್ಯಾಖ್ಯಾನಕಾರರು ಬೆಳೆಯಿಸಿರುವ–ಪ್ರಕ್ರಿಯೆಯು ಭಾಮತೀಪ್ರಸ್ಥಾನವೆನಿಸಿಕೊಂಡಿದೆ. ಪಂಚಪಾದಿಕೆಯ ಕೆಲವು ಯುಕ್ತಿಗಳು ಭಾಮತಿಯಲ್ಲಿಯೂ ಕಾಣುತ್ತಿದ್ದರೂ ಮುಖ್ಯವಾಗಿ ಮಂಡನ ಮಿಶ್ರನ ಬ್ರಹ್ಮಸಿದ್ಧಿಯನ್ನು ಅನುಸರಿಸಿ ಭಾಷ್ಯಕ್ಕೆ ಟೀಕೆಯನ್ನು ಬರೆದು–ಕೊಂಚಮಟ್ಟಿಗೆ ಶಂಕರಮಂಡನರಿಬ್ಬರಿಗೂ ಹೊಂದುಗಡೆಮಾಡುವ ಹೊಸ ಪ್ರಕ್ರಿಯೆಯೊಂದನ್ನು ವಾಚಸ್ಪತಿಮಿಶ್ರನು ತೆಗೆದಿರುತ್ತಾನೆ. ಮಂಡನಮಿಶ್ರನು ಆಚಾರ್ಯರೊಡನೆ ವಾದವನ್ನು ಮಾಡಿ ಸೋತಬಳಿಕ ಸುರೇಶ್ವರಾಚಾರ್ಯನೆಂಬ ಹೆಸರನ್ನು ಪಡೆದನೆಂಬ ಕಥೆಯು ಅವಿಶ್ವಸನೀಯವೆಂಬುದನ್ನು ಹಿಂದೆ (ಪು. ೧೩೩) ಸಕಾರಣವಾಗಿ ವಿವರಿಸಿರುತ್ತೇವೆ. ಸುರೇಶ್ವರಾಚಾರ್ಯರು ಸೂತ್ರಭಾಷ್ಯದಮೇಲೆ ವಾರ್ತಿಕವನ್ನು ಬರೆಯಬೇಕೆಂದು ಸಂಕಲ್ಪಿಸಿದ್ದು, ಅದಕ್ಕೆ ಅಡ್ಡಿಯಾದ ಘಟನೆಯ ಸಂದರ್ಭ, 'ನೀನು ಮುಂದೆ ವಾಚಸ್ಪತಿಯಾಗಿ ಭಾಷ್ಯಕ್ಕೆ ಭವ್ಯವಾದ ಟೀಕೆಯನ್ನು ಮಾಡುವೆ' ಎಂದು ಆಚಾರ್ಯರು ಅವರನ್ನು ಸಮಾಧಾನಗೊಳಿಸಿದ ಪ್ರಕಾರ– ಇವುಗಳನ್ನು ವಿಮರ್ಶೆಮಾಡಿ ಇದೂ ವಿಶ್ವಸನೀಯವಲ್ಲವೆಂಬುದನ್ನು ಹಿಂದೆ (ಪು: ೨೩೫) ತೋರಿಸಿರುತ್ತೇವೆ. ಈಗ ಸುರೇಶ್ವರಾಚಾರ್ಯರ ವಾರ್ತಿಕ ಪ್ರಸ್ಥಾನವನ್ನು ಓದಿದ ವಾಚಕರಿಗೆ ಮುಂದೆ ಕೊಡುವ ಭಾಮತೀಪ್ರಸ್ಥಾನದ ಸಾರವನ್ನು ಓದಿದಬಳಿಕ ನಮ್ಮ ಅಭಿಪ್ರಾಯವು ಸಾಧಾರವೆಂಬುದು ಹೊಳೆದೀತೆಂದು ನಮ್ಮ ನಂಬಿಕೆ.

೧೬೬. ಈ ಪ್ರಸ್ಥಾನದಲ್ಲಿ ಕಾರಣಾವಿದ್ಯೆ, ಕಾರ್ಯಾವಿದ್ಯೆ ಎಂದು ಎರಡು ಅನಿರ್ವಾಚ್ಯವಾದ ಅವಿದ್ಯೆಗಳನ್ನೊಪ್ಪಿದೆ ಎಂಬುದು ಮಂಗಳಶ್ಲೋಕದಲ್ಲಿಯೇ ಸ್ಫುಟವಾಗಿರುತ್ತದೆ. ಕಾರ್ಯಕಾರಣಾವಿದ್ಯಾದ್ವಯವೆಂಬ ಮಾತು ಮತ್ತೆ ಮತ್ತೆ (ಭಾ. ೪೫, ೫೪, ೫೫, ೧೨೧ .....) ಮುಂತಾದ ಅನೇಕ

1. ಈ ವಿಷಯದಲ್ಲಿ ಇನ್ನೂ ಹೆಚ್ಚಿಗೆ ತಿಳಿಯಬೇಕೆನ್ನುವವರು ಆಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ ಪ್ರಕಟವಾಗಿರುವ 'ಶಂಕರಸಿದ್ಧಾಂತ', 'ವೇದಾಂತವಿಚಾರದ ಇತಿಹಾಸ' ಎಂಬ ಕನ್ನಡಗ್ರಂಥಗಳನ್ನೂ 'ಮೂಲಾವಿದ್ಯಾನಿರಾಸಃ', 'ಸುಗಮಾ', 'ಮಾಣ್ಡೂಕ್ಯರಹಸ್ಯವಿವೃತಿಃ' ಮುಂತಾದ ಸಂಸ್ಕೃತಗ್ರಂಥಗಳನ್ನೂ ಓದಬೇಕು, ಪ್ರಸ್ಥಾನತ್ರಯಭಾಷ್ಯಗಳ ಕನ್ನಡಾನುವಾದದ ಪೀಠಿಕೆಗಳಲ್ಲಿಯೂ ಹೆಚ್ಚು ವಿಷಯಗಳು ತಕ್ಕಮಟ್ಟಿಗೆ ಸಿಕ್ಕುವವು.

ಗಳಲ್ಲಿ ಬಂದಿರುವದರಿಂದ ಮಂಡನಮಿಶ್ರನು ಒಪ್ಪಿರುವ ಅಗ್ರಹಣ, ಅನ್ಯಥಾ ಗ್ರಹಣ– ಎಂಬೀ ಎರಡೇ ಈ ಅವಿದ್ಯೆಗಳೆಂಬುದು ಯುಕ್ತವಾಗಿಯೂ ಕಾಣುತ್ತದೆ. ಆದರೆ ಕಲ್ಪತರುವ್ಯಾಖ್ಯಾನದಲ್ಲಿ ಅನಾದಿಯಾದ ಭಾವಾವಿದ್ಯೆಯೊಂದು, ಪೂರ್ವಾಪೂರ್ವಭ್ರಮೆಯ ಸಂಸ್ಕಾರವು ಇನ್ನೊಂದು – ಇವೆರಡೇ ಭಾಮತೀ ಪ್ರಸ್ಥಾನದಲ್ಲಿ ಒಪ್ಪಿರುವ ಅವಿದ್ಯೆಗಳೆಂದು (ಕ. ತ. ಪು. ೩) ಬರೆದಿದೆ. ಅವಿದ್ಯಾದ್ವಯ ಮತ್ತು 'ಅವಿದ್ಯಾತತ್ಸಂಸ್ಕಾರ' ಎಂಬ ಮಾತು ಅಲ್ಲಲ್ಲಿ ಭಾಮತೀಗ್ರಂಥದಲ್ಲಿ ಸಿಕ್ಕುವದರಿಂದ 'ಸಂಸ್ಕಾರವೇ ಅವಿದ್ಯೆ' ಎಂಬ ಕಲ್ಪತರುವಾಕ್ಯವನ್ನು ಪ್ರಮಾಣೀಕರಿಸುವದಕ್ಕೆ ಇಲ್ಲವಾದರೂ 'ಅವಿದ್ಯಾಪ್ರತ್ಯುಪಸ್ಥಾಪಿತನಾಮರೂಪ-ಮಾಯಾವಶೇನ' ಎಂಬ (ಸೂ. ಭಾ. ೨–೨–೨) ಭಾಷ್ಯವಾಕ್ಯವನ್ನು ವಿವರಿಸುವಾಗ 'ಕಾರಣಭೂತಯಾ ಲಯಲಕ್ಷಣಯಾ ಅವಿದ್ಯಯಾ ಪ್ರಾಕ್ಸೃಗ್ಯೋಪಚಿತೇನ ಚ ವಿಕ್ಷೇಪಸಂಸ್ಕಾರೇಣ ಯತ್ ಪ್ರತ್ಯುಪಸ್ಥಾಪಿತಂ ನಾಮರೂಪಂ ತದೇವ ಮಾಯಾ' (ಭಾ. ಪು. ೬೪೪) ಕಾರಣವಾಗಿರುವ ಲಯಸ್ವರೂಪವಾದ ಅವಿದ್ಯೆಯಿಂದಲೂ ಸೃಷ್ಟಿಗೆ ಪೂರ್ವದಲ್ಲಿರುವ ವಿಕ್ಷೇಪ ಸಂಸ್ಕಾರದಿಂದಲೂ ತಂದೊಡ್ಡಲ್ಪಟ್ಟಿರುವ ನಾಮರೂಪವೇ ಮಾಯೆ – ಎಂದು ಸ್ಪಷ್ಟವಾಗಿ ಬರೆದಿರುವದರಿಂದ ಕಾರಣಾವಿದ್ಯೆ, ಲಯಲಕ್ಷಣಾವಿದ್ಯೆ – ಇವೆರಡೂ ಒಂದೇ ಎಂದಂತೆ ಆಗಿದೆ. ಮಹಾಪ್ರಲಯದಲ್ಲಿ ಅಂತಃಕರಣಾದಿಗಳು 'ತಮ್ಮ ಕಾರಣವಾದ ಅನಿರ್ವಾಚ್ಯಾವಿದ್ಯೆಯಲ್ಲಿ ಲಯವಾಗಿ ಸೂಕ್ಷ್ಮವಾದ ಶಕ್ತಿರೂಪದಿಂದ ಕರ್ಮವಿಕ್ಷೇಪಕವಾದ ಅವಿದ್ಯಾವಾಸನೆಗಳಿಂದೊಡಗೂಡಿರುತ್ತವೆ (ಭಾ.ಪು. ೩೩೩)' ಎಂದು ಹೇಳಿರುವದನ್ನು ಆಧಾರವಾಗಿಟ್ಟುಕೊಂಡು 'ಭ್ರಮೆಗಿಂತಲೂ ಸಂಸ್ಕಾರಕ್ಕಿಂತಲೂ ಅನ್ಯವಾದ ಭಾವರೂಪಾವಿದ್ಯೆಯನ್ನು ಇಲ್ಲಿ ಒಪ್ಪಿರುತ್ತದೆ' ಎಂದು ಕಲ್ಪತರುಕಾರರು ಹೇಳಿರುವದನ್ನು ತಿರಸ್ಕರಿಸುವದಕ್ಕೆ ಬರುವಂತಿಲ್ಲ. ಅವಿದ್ಯೆಯು ಜೀವರುಗಳಿಗೆಲ್ಲ ಸಮಾನವಾದ ಒಂದೇ ಇಲ್ಲ, ಒಬ್ಬೊಬ್ಬ ಜೀವನಿಗೊಂದೊಂದು ಅವಿದ್ಯೆ (ಪು. ೩೭೭); ಇದು ಅನೇಕವಾಗಿಯೇ ಇದ್ದರೂ ಎಲ್ಲವೂ ಅವಿದ್ಯೆಯೇ ಎಂಬ ಕಾರಣದಿಂದ 'ಅವ್ಯಕ್ತ', 'ಅವ್ಯಾಕೃತ' ಎಂದು ಕರೆಯುತ್ತಾರೆ(ಭಾ.೩೭೮) ಎಂದು ಸ್ಪಷ್ಟವಾಗಿ ಭಾಮತೀಕಾರರು ಬರೆದಿರುವದರಿಂದ ಅವರ ಮತದಲ್ಲಿಯೂ ಅವಿದ್ಯೆಯೆಂದರೆ ಮೂಲಾವಿದ್ಯೆಯೆಂದೇ ಫಲಿತವಾಗುತ್ತದೆ. ಅದು ಅನೇಕವೆಂಬುದೊಂದು ಅವರಲ್ಲಿ ವಿಶೇಷ. ಅಂತೂ ಈ ಮತವೂ ಭಾಷ್ಯಕ್ಕೆ ವಿರುದ್ಧವೆಂದೇ ಆಯಿತು.

ಭಾಮತೀವಿವರಣಪ್ರಸ್ಥಾನಗಳ ವೈಲಕ್ಷಣ್ಯ

೧೬೭. ಭಾಮತೀವಿವರಣಗಳು ಭಾಷ್ಯಾಭಿಪ್ರಾಯವನ್ನೇ ವಿವರಿಸುವದಕ್ಕೆ ಹೊರಟಿದ್ದರೂ ಇವೆರಡಕ್ಕೂ ಕೆಲವು ಮುಖ್ಯವಿಷಯಗಳಲ್ಲಿ ಮತಭೇದವಿರುತ್ತದೆ.

ಪರಮಲಕ್ಷ್ಯವಾದ ಅದ್ವೈತದಲ್ಲಿ ಇಬ್ಬರಿಗೂ ಮತಭೇದವಿಲ್ಲದ್ದರಿಂದ ಈ ಭೇದವು ಅದ್ವೈತಕ್ಕೆ ಹಾನಿಯನ್ನು ತರುವದಿಲ್ಲ--ಎಂದು ಈಗಿನ ವೇದಾಂತಿಗಳು ಸಮಾಧಾನವನ್ನು ಹೇಳುತ್ತಾರೆ. ಆದರೆ ಈ ಪ್ರಸ್ಥಾನಗಳೆರಡನ್ನೂ ಒಂದಕ್ಕೊಂದು ವಿರುದ್ಧವಾಗಿಯೇ ಇರುವದರಿಂದಲೂ, ಇವಕ್ಕೆ ಏಕವಾಕ್ಯತೆಯನ್ನೂ ಮಾಡುವದಕ್ಕೆ ಬರುವಂತೆಯೇ ಇಲ್ಲವಾದ್ದರಿಂದಲೂ ಇವೆರಡೂ ಭಾಷ್ಯಾಭಿಪ್ರಾಯವನ್ನೇ ಹೇಳುತ್ತವೆ ಎಂಬುದು ವಿಚಾರಸಹವಲ್ಲವೆಂದೇ ತೀರ್ಮಾನಿಸಬೇಕಾಗಿದೆ. ವಾಚಕರ ಸೌಕರ್ಯಕ್ಕಾಗಿ ಈ ಎರಡು ಪ್ರಸ್ಥಾನಗಳ ಮುಖ್ಯಮತಭೇದಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿರುತ್ತೇನೆ. ಇದನ್ನು ನಾವು ಶಾಸ್ತ್ರರತ್ನಾಕರ ಪೋಲಕವು ಸು. ಶ್ರೀರಾಮುಶಾಸ್ತ್ರಿಗಳ ಪಂಚಪಾದಿಕಾ ಭೂಮಿಕೆ (ಪೋ. ಪಂ. ಭೂ. ಪು. ೧೧೬ರಿಂದ ೧೩೫) ಯಿಂದ ತೆಗೆದುಕೊಂಡಿರುತ್ತೇವೆ.

೧. ಕರ್ಮಗಳಿಂದ ವಿವಿದಿಷೆ – ತತ್ತ್ವವನ್ನು ತಿಳಿಯಬೇಕೆಂಬ ಇಚ್ಛೆ– ಉಂಟಾಗುವದೆಂದು ಭಾಮತೀಪ್ರಸ್ಥಾನ; ಅವುಗಳಿಂದ ವಿದ್ಯೆ– ಜ್ಞಾನವೇ – ಆಗುವದೆಂದು ವಿವರಣ. ೨. ಬ್ರಹ್ಮಸಾಕ್ಷಾತ್ಕಾರಕ್ಕೆ ಮನಸ್ಸೇ ಕರಣವು ಎಂದು ಭಾಮತಿ; ಶಬ್ದವೇ ಅದಕ್ಕೆ ಕರಣವೆಂದು ವಿವರಣ. ೩. ಶ್ರವಣಾದಿಗಳು ವಿಧಿಸ್ವರೂಪವಾಗಿರುವ ವೇದಾಂತವಾಕ್ಯಗಳಿಂದ ಉಕ್ತವಾಗಿವೆ ಎಂಬುದು ವಾಚಸ್ಪತಿಯ ಮತ; ಶ್ರವಣಾದಿಗಳು ವಿಹಿತವಾಗಿವೆ, ವಿಧಿಪ್ರಯುಕ್ತವಾಗಿಯೇ ಬ್ರಹ್ಮಜಿಜ್ಞಾಸೆಯು ಉಂಟಾಗುತ್ತದೆ ಎಂದು ವಿವರಣ. ೪. ಶ್ರವಣಮನನ ನಿದಿಧ್ಯಾಸನಗಳಲ್ಲಿ ನಿದಿಧ್ಯಾಸವೇ ಅಂಗಿಯೆಂದು ಭಾಮತಿ; ಶ್ರವಣವೇ ಅಂಗಿ– ಉಳಿದೆರಡೂ ಅಂಗಗಳು ಎಂದು ವಿವರಣ. ೫. ಜೀವನು ಅಜ್ಞಾನಾಂತಃಕರಣಾದಿಗಳಿಂದ ಅವಚ್ಛಿನ್ನನಾಗಿರುತ್ತಾನೆಂದು ಭಾಮತಿ; ಅವುಗಳಲ್ಲಿ ಪ್ರತಿಬಿಂಬಿತನಾಗಿರುತ್ತಾನೆಂದು ವಿವರಣ. ೬. ಅವಿದ್ಯೆಗೆ ಆಶ್ರಯನು ಜೀವನು, ವಿಷಯವು ಬ್ರಹ್ಮ – ಎಂಬುದು ವಾಚಸ್ಪತಿಮತ; ಅದಕ್ಕೆ ಆಶ್ರಯವೂ ವಿಷಯವೂ ಒಂದೇ ಎಂದು ವಿವರಣ. ೭. ಅವಿದ್ಯೆಯು ಒಬ್ಬೊಬ್ಬ ಜೀವರಿಗೂ ಒಂದೊಂದು ಎಂಬುದು ಭಾಮತಿಗೆ ಒಪ್ಪು; ಅವಿದ್ಯೆಯು ಅನೇಕವಲ್ಲ, ಒಂದೇ ಎಂಬುದು ವಿವರಣಕ್ಕೆ ಸಂಮತ. ೮. ಅಖಂಡಾಕಾರವೃತ್ತಿಗೆ ಉಪಹಿತಬ್ರಹ್ಮವು ವಿಷಯವು ಎಂದು ಭಾಮತೀಕಾರರ ಮತ; ಶುದ್ಧಬ್ರಹ್ಮವೇ ವೃತ್ತಿಗೆ ವಿಷಯವೆಂದು ವಿವರಣಕಾರರ ಮತ. ೯. ಸಾಧನಚತುಷ್ಟಯದಲ್ಲಿ ಹೇಳಿರುವ ವಿವೇಕವು ಸತ್ಯಾಸತ್ಯವಿವೇಕವೇ ಎಂದು ಭಾಮತಿ; ಅದು ಸತ್ಯಾಸತ್ಯವಿವೇಕವಲ್ಲ, ನಿತ್ಯಾನಿತ್ಯವಿವೇಕವೇ ವಿಂದು ವಿವರಣ. ೧೦. ಸ್ವಾಧ್ಯಾಯವನ್ನು ಅಧ್ಯಯನ ಮಾಡಬೇಕು ಎಂಬ ಶ್ರುತಿಯಲ್ಲಿ ಅರ್ಥಜ್ಞಾನವೂ ಸೇರಿದೆ ಎಂದು ಭಾಮತಿ; ಕೇವಲ ಅಕ್ಷರಾವಾಪ್ತಿಯನ್ನು ಹೇಳುತ್ತದೆ ಎಂದು ವಿವರಣ.

ಈ ಹತ್ತು ವಿಷಯಗಳಿಗಿಂತ ಬೇರೆಯ ಕೆಲವು ವಿಷಯಗಳಲ್ಲಿಯೂ ಮತಭೇದವಿವೆ. ಹೀಗಿದ್ದರೂ ಈ ಎರಡು ಪ್ರಕ್ರಿಯೆಗಳೂ ಒಂದೇ ಸಿದ್ಧಾಂತವನ್ನು ಹೇಳುವದರಿಂದ ಇವೆರಡಕ್ಕೂ ವಿರೋಧವಿಲ್ಲ ಎಂದು ಈಗಿನ ವೇದಾಂತಿಗಳನೇಕರ ಅಭಿಪ್ರಾಯ. ಆದರೆ ಸಂಬಂಧವಾರ್ತಿಕದಲ್ಲಿ ಅದ್ವೈತಸಿದ್ಧಾಂತವನ್ನೊಪ್ಪಿದ್ದ ಪ್ರಾಚೀನವೇದಾತಿಗಳ ಅನೇಕ ಪ್ರಕ್ರಿಯೆಗಳನ್ನು ಸುರೇಶ್ವರಾಚಾರ್ಯರು ಖಂಡಿಸಿರುತ್ತಾರೆ; ಭಾಷ್ಯಕಾರರೂ ಕೆಲವು ಅದ್ವೈತಪ್ರಕ್ರಿಯೆಗಳನ್ನು ತಮ್ಮ ಭಾಷ್ಯಗಳಲ್ಲಿ ಖಂಡನೆಗೆ ತೆಗೆದುಕೊಂಡಿರುತ್ತಾರೆಂದು ಹಿಂದೆಯೇ (ಪು. ೩೧೪–೩೧೫) ತಿಳಿಸಿರುತ್ತೇವೆ. ಆದ್ದರಿಂದ ಗುರಿಯು ಒಂದೇ ಆದಮಾತ್ರದಿಂದ ಪ್ರಕ್ರಿಯೆಗಳಿಗೆ ವಿರೋಧವಿಲ್ಲವೆಂಬುದನ್ನು ಒಪ್ಪಲಾಗುವದಿಲ್ಲ. ಇದೂ ಅಲ್ಲದೆ ಭಾಮತೀಕಾರರೂ ವಿವರಣಾಚಾರ್ಯರೂ ಭಾಸ್ಕರಮತವನ್ನು ಖಂಡಿಸುವದರಲ್ಲಿ ಐಕಮತ್ಯವುಳ್ಳವರಾಗಿರುತ್ತಾರಾದರೂ ಅವರಿಬ್ಬರಿಗೂ, ಈ ಎರಡು ಪ್ರಸ್ಥಾನಗಳನ್ನೂ ಅನುಸರಿಸುವ ಈಚಿನ ಅದ್ವೈತಗ್ರಂಥಕರ್ತರುಗಳಿಗೂ, ಪರಸ್ಪರಖಂಡನಗಳು ನಡೆದೇ ಇರುವದು ಪ್ರತ್ಯಕ್ಷವಾಗಿರುತ್ತದೆ. ಆದ್ದರಿಂದ ಈ ಪ್ರಸ್ಥಾನಗಳು ಆಚಾರ್ಯರ ಅಭಿಪ್ರಾಯವನ್ನೇ ತಿಳಿಸುತ್ತವೆ ಎಂಬುದಕ್ಕೆ ಇಬ್ಬರಿಗೂ ಕೊನೆಯಲ್ಲಿ ಅದ್ವೈತದಲ್ಲಿಯೇ ಪರಮತಾತ್ಪರ್ಯವಿದೆ ಎಂಬುದಿಷ್ಟೇ ಎಂದಿಗೂ ಪ್ರಮಾಣವಾಗಲಾರದು.

೧೬೮. ವಾರ್ತಿಕಪ್ರಸ್ಥಾನವನ್ನೂ ವಿವರಣಪ್ರಸ್ಥಾನವನ್ನೂ ಭಾಮತೀಪ್ರಸ್ಥಾನವನ್ನೂ ವಿವರವಾಗಿ 'ವೇದಾಂತವಿಚಾರದ ಇತಿಹಾಸ'ದಲ್ಲಿ ತಕ್ಕಮಟ್ಟಿಗೆ ವಿವರಿಸಿರುತ್ತದೆ. ಅವುಗಳನ್ನು ನೋಡಿದವರಿಗೆ ಪಂಚಪಾದಿಕಾಕರ್ತರಾದ ಪದ್ಮಪಾದರೂ ವಾರ್ತಿಕಕರ್ತರಾದ ಸುರೇಶ್ವರರೂ ಒಬ್ಬರೇ ಆಚಾರ್ಯರ ಶಿಷ್ಯರೆಂದು ನಿರ್ಣಯಿಸುವದು ಕಷ್ಟವಾಗುತ್ತದೆ. ಪದ್ಮಪಾದರಿಗೂ ಸುರೇಶ್ವರರಿಗೂ ಮತವೈಷಮ್ಯವನ್ನು ಗಂಟುಹಾಕಿರುವ ಶಂಕರವಿಜಯಕಾರರಿಗೆ ಈ ಇಬ್ಬರಲ್ಲಿ ಯಾರು ಶಂಕರಾಚಾರ್ಯರ ಪ್ರಿಯತರಶಿಷ್ಯರೆಂಬ ಬಗ್ಗೆ ನಿರ್ಣಯವಾಗದೆ ತಮ್ಮ ಕಾಲಕ್ಕೆ ಪ್ರಚಲಿತವಾಗಿದ್ದ ದಂತಕಥೆಗಳನ್ನೇ ಅವರೂ ವರ್ಣಿಸಿರುತ್ತಾರೆಂದು ಹೇಳಬೇಕಾಗಿದೆ. ವಾರ್ತಿಕಪ್ರಸ್ಥಾನಕ್ಕೂ ಭಾಮತೀಪ್ರಸ್ಥಾನಕ್ಕೂ ಅನೇಕ ವಿಷಯಗಳಲ್ಲಿ ವೈಮತ್ಯವೇ ಇರುವದರಿಂದ ಸುರೇಶ್ವರರೇ ವಾಚಸ್ಪತಿಯಾಗಿ ಹುಟ್ಟಿದರೆಂದು ಮಾಧವೀಯದಲ್ಲಿ ಕಲ್ಪಿಸಿರುವದು ಕಲ್ಪನಾಮಾತ್ರವೇ ಎಂದೂ ಸಿದ್ಧವಾಗುತ್ತದೆ. ವಾರ್ತಿಕಗಳನ್ನು ಪೂರ್ಣವಾಗಿ ಅಭ್ಯಾಸಮಾಡುವದು ಈಗ ಕಡಿಮೆ ; ಪಂಚಪಾದಿಕೆಯನ್ನು ಓದುವವರೂ ಬಹಳ ಕಡಿಮೆ. ಆದರೂ ವಿವರಣಪ್ರಸ್ಥಾನವೇ ಒಲುಮಟ್ಟಿಗೆ ಪ್ರಚಲಿತವೇದಾಂತವಿಚಾರಕ್ರಮದಲ್ಲಿ ಪ್ರಬಲವಾಗಿದೆ ಎಂದು ಹೇಳಿದರೆ ತಪ್ಪಾಗದು. ಭಾಮತೀಪ್ರಸ್ಥಾನವನ್ನು ಅಭ್ಯಾಸಮಾಡುವವರೂ ತಕ್ಕಮಟ್ಟಿನ ಸಂಖ್ಯೆಯಲ್ಲಿ ಸಿಕ್ಕುತ್ತಾರಾದರೂ ಈ

ಎರಡು ಪ್ರಸ್ಥಾನಗಳಿಗೂ ಹೇಗೋ ಏಕವಾಕ್ಯತೆಯನ್ನು ಮಾಡಿಕೊಂಡು ಎರಡೂ ಪರಮಾರ್ಥದೃಷ್ಟಿಯಿಂದ ಒಂದೇ ವಿಷಯದಲ್ಲಿ ತಾತ್ಪರ್ಯವುಳ್ಳವಾಗಿವೆ ಎಂದು ಒಳ ಭೇದಗಳ ಕಡೆಗೆ ಅಷ್ಟು ಲಕ್ಷ್ಯವನ್ನು ಕೊಡದೆ ಇರುವವರೇ ಈಗ ಬಹಳವಾಗಿರುತ್ತಾರೆ. ವ್ಯಾಖ್ಯಾನಪ್ರಸ್ಥಾನಗಳ ಪರಸ್ಪರವೈಲಕ್ಷಣ್ಯವನ್ನು ನಾವು ಇಲ್ಲಿ ಪ್ರಸ್ತಾಪಿಸಿರುವದು ನಿಜವಾಗಿ ಆಚಾರ್ಯರ ಗ್ರಂಥಗಳು ಯಾವವು ?— ಎಂದು ನಿಶ್ಚಯಿಸಬೇಕೆನ್ನುವವರಿಗೆ ಸಹಾಯಕವಾಗಿರಲೆಂಬ ಉದ್ದೇಶದಿಂದಲೇ ಹೊರತು ಈ ಪ್ರಸ್ಥಾನದ ಗ್ರಂಥಗಳಲ್ಲಿ ಉಪಾದೇಯವಾದ ವಿಷಯಗಳೇ ಇಲ್ಲವೆಂಬ ಅಭಿಪ್ರಾಯದಿಂದಲ್ಲವೆಂಬುದನ್ನು ಓದುಗರು ನೆನಪಿನಲ್ಲಿಡಬೇಕು.

———

೨೨. ಆಚಾರ್ಯಕೃತ ಪ್ರಕರಣಗಳು

ಪ್ರಕರಣಗಳ ವಿಭಾಗಕರಣ

೧೬೯. ಶಾಸ್ತ್ರದ ಒಂದಂಶಕ್ಕೆ ಸಂಬಂಧಪಟ್ಟು, ಶಾಸ್ತ್ರದಲ್ಲಿ ವಿಶದವಾಗಿ ಹೇಳದೆ ಇರುವ ಯಾವದಾದರೊಂದು ಮುಖ್ಯವಿಷಯವನ್ನು ವಿವರಿಸುವದಕ್ಕೆ ಹೊರಟಿರುವ ಚಿಕ್ಕ ಗ್ರಂಥಗಳಿಗೆ ಪ್ರಕರಣಗಳು ಎಂದು ಹೆಸರು. ಆಚಾರ್ಯರ ಹೆಸರಿನಲ್ಲಿ ಇಂಥ ಅನೇಕ ಪ್ರಕರಣಗಳು ಪ್ರಚಾರದಲ್ಲಿರುತ್ತವೆ. ಇವುಗಳಲ್ಲಿ ನಿಜವಾಗಿ ಆಚಾರ್ಯರವು ಯಾವವು ?–ಎಂಬುದನ್ನು ನಿರ್ಣಯಿಸುವದು ಕಷ್ಟವಾಗಿದೆ. ದೊಡ್ಡವರ ಹೆಸರಿನಲ್ಲಿದ್ದರೆ ಜಿಜ್ಞಾಸುಗಳು ಆದರದಿಂದ ಓದುವರೆಂಬ ಕಾರಣದಿಂದ ಅನೇಕರು ಇಂಥ ಗ್ರಂಥಗಳಿಗೆ ಆಚಾರ್ಯರ ಹೆಸರನ್ನು ಕೊಟ್ಟಿರುತ್ತಾರೆ. ಈ ವಿಷಯದಲ್ಲಿ ನಾವು ವಿಮರ್ಶಿಸಿ ಮಾಡಿಕೊಂಡಿರುವ ತೀರ್ಮಾನಗಳನ್ನು ಇಲ್ಲಿ ಬರೆಯುತ್ತೇವೆ. ಇದನ್ನು ಪ್ರತಿಯೊಬ್ಬರೂ ಸ್ವಂತವಾಗಿ ವಿಚಾರ ಮಾಡಿಯೇ ನಿಶ್ಚಯಿಸಬೇಕಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ.

ಪ್ರಕರಣಗಳಲ್ಲಿ ಕೆಲವನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟಿಸಲಾಗಿದೆ. ಅವನ್ನು ಮೊದಲು ಬರೆದು ಮಿಕ್ಕವನ್ನು ಆ ಮೇಲೆ ವಿಮರ್ಶಿಸುವೆವು. ಆಯಾ ಗ್ರಂಥಗಳ ಪೀಠಿಕೆಯಲ್ಲಿ ಕೊಟ್ಟಿರುವ ಗ್ರಂಥಕರ್ತೃವಿನ ನಿರ್ಣಯದ ವಿಚಾರವನ್ನು ವಾಚಕರು ಓದಿಕೊಳ್ಳುವದಕ್ಕೆ ಇದರಿಂದ ಸಹಾಯವಾದೀತೆಂದು ನಂಬಲಾಗಿದೆ.

ಕಾರ್ಯಾಲಯದಲ್ಲಿ ಪ್ರಕಟಿತವಾದ ಪ್ರಕರಣಗಳು

೧೭೦. ಈ ಕೆಳಗಿನ ಪ್ರಕರಣಗಳು ಈವರೆಗೆ ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ ಹೊರಕ್ಕೆ ಬಂದಿವೆ :

(೧,೩) **ಉಪದೇಶಸಾಹಸ್ರೀ :** ಇದು ಗದ್ಯಬಂಧ, ಪದ್ಯಬಂಧ–ಎಂದು ಎರಡು ವಿಭಾಗವಾಗಿ ಪ್ರಕಟವಾಗಿದೆ. ಗದ್ಯದಲ್ಲಿ ಶ್ರವಣಮನನನಿದಿಧ್ಯಾಸನಗಳ ಕ್ರಮವನ್ನು ವಿಸ್ತಾರವಾಗಿ ಹೇಳಿದೆ. ಶೈಲಿಯು ಪೌಢವಾಗಿದೆ; ಭಾಷ್ಯಕ್ಕೆ ಎಲ್ಲಿಯೂ ವಿರುದ್ಧವಾಗಿಲ್ಲ. ಪದ್ಯಭಾಗದಲ್ಲಿ ಹತ್ತೊಂಬತ್ತು ಉಪಪ್ರಕರಣಗಳಿವೆ. ಈ ಗ್ರಂಥದ ಹಲವು ಶ್ಲೋಕಗಳನ್ನು ಸುರೇಶ್ವರಾಚಾರ್ಯರು ನೈಷ್ಕರ್ಮ್ಯಸಿದ್ಧಿಯಲ್ಲಿಯೂ ವಾರ್ತಿಕಗಳಲ್ಲಿಯೂ ಬಳಸಿಕೊಂಡಿರುತ್ತಾರೆ. ಗ್ರಂಥವು ಆಚಾರ್ಯರದ್ದೆಂದು ನಿಸ್ಸಂದೇಹವಾಗಿ ಹೇಳಬಹುದು.

(೩,೪) **ವಿವೇಕಚೂಡಾಮಣಿ, ಮಹಾವಾಕ್ಯದರ್ಪಣ :** ವಿವೇಕಚೂಡಾಮಣಿಯು ಭಗವತ್ಪಾದರದ್ದೇ ಎಂದು ಪ್ರಸಿದ್ಧವಾಗಿದೆ. ಇದರ ಶೈಲಿಯು ಲಲಿತವಾಗಿದ್ದು ವಿಷಯಪ್ರತಿಪಾದನವು ಮನೋಮೋಹಕವಾಗಿದೆ. 'ಮಹಾವಾಕ್ಯ

ದರ್ಪಣ'ಕ್ಕೂ ವಿವೇಕಚೂಡಾಮಣಿಗೂ ವಿಷಯಪ್ರತಿಪಾದನೆಯಲ್ಲಿಯೂ ಶೈಲಿಯಲ್ಲಿಯೂ ಹೋಲಿಕೆಯಿದೆ. ಇವೆರಡೂ 'ಗೀತಾತಾತ್ಪರ್ಯಬೋಧಿನಿ' ಯನ್ನು ಬರೆದ ಶಂಕರಾನಂದರ ಕೃತಿಗಳೇ ಎಂಬುದನ್ನು ನಾವು ಸಕಾರಣವಾಗಿ ಗ್ರಂಥಭೂಮಿಕೆಗಳಲ್ಲಿ ತೋಸಿರಿಕೊಟ್ಟಿರುತ್ತೇವೆ.

(೫) **ಅಪರೋಕ್ಷಾನುಭೂತಿ :** ಆತ್ಮತತ್ತ್ವವನ್ನು ನೇರಾಗಿ ಇಲ್ಲಿಯೇ ಈಗಲೇ ಅನುಭವಕ್ಕೆ ತಂದುಕೊಳ್ಳುವ ಬಗೆಯನ್ನು ತಿಳಿಸುವ ಪ್ರಕರಣ. ಇದು ಆಚಾರ್ಯರ ಗ್ರಂಥವಾಗಿರಲಾರದೆಂಬುದಕ್ಕೆ ಕಾರಣಗಳನ್ನು ಭೂಮಿಕೆಯಲ್ಲಿ ಕೊಟ್ಟಿದೆ. ಆ ಚಾರ್ಯರು ಪ್ರಸ್ಥಾನತ್ರಯಭಾಷ್ಯದಲ್ಲಿ ಬಳಸದೆ ಇರುವ ಪಾರಿಭಾಷಿಕಶಬ್ದಗಳೂ ಇಲ್ಲಿ ಕೆಲವು ಇವೆ. ಗ್ರಂಥದಲ್ಲಿ ತತ್ತ್ವಪ್ರತಿಪಾದನೆಯು ಬಹುಸುಂದರವಾಗಿದೆ.

(೬) **ಅದ್ವೈತಾನುಭೂತಿ :** ಇದರಲ್ಲಿ ಕೆಲವು ದೃಷ್ಟಾಂತೆಗಳನ್ನು ಉಪಯೋಗಿಸಿರುವ ರೀತಿ, ಕೆಲವು ಹೊಸ ಪಾರಿಭಾಷಿಕಶಬ್ದಗಳು– ಇವುಗಳಿಂದ ಇದು ಆಚಾರ್ಯರದ್ದಾಗಿರಲಾರದೆನ್ನಬೇಕು.

(೭) **ಸ್ವಾತ್ಮನಿರೂಪಣ :** ಇದರಲ್ಲಿ ಸದಾಶಿವಬ್ರಹ್ಮೇಂದ್ರರ 'ಆದ್ವೈತತಾರಾವಳಿ'ಯು ಆರ್ಯಗಳೆಲ್ಲವೂ ಅಡಕವಾಗಿರುವದರಿಂದಲೂ ಭಾಷ್ಯಕ್ಕೂ ಶಾಂಕರ ವೇದಾಂತಪ್ರಕ್ರಿಯೆಗೂ ವಿರುದ್ಧವಾದ ಅಂಶಗಳು ಕೆಲವು ಇರುವದರಿಂದಲೂ ಇದು ಆಚಾರ್ಯರದ್ದಲ್ಲವೆನ್ನಬೇಕಾಗಿದೆ.

(೮) **ಮನೀಷಾಪಂಚಕ :** ಇದು ಯಾವದೋ ಶಂಕರವಿಜಯದಿಂದ ತೆಗೆದುಕೊಂಡ ಪ್ರಕರಣವಾಗಿರಬೇಕೆಂದು ನಮ್ಮ ಊಹೆ. ಭಗವತ್ಪಾದರ ಚರಿತ್ರೆಯನ್ನೂ (ಪು. ೯೬.೯೭) ಅನಂತರ ಪರಿಶಿಷ್ಟವನ್ನೂ ನೋಡಿ.

(೯) **ನಿರ್ವಾಣಷಟ್ಕ :** ಇದಕ್ಕೆ 'ಆತ್ಮಷಟ್ಕ'ವೆಂದೂ ಹೆಸರುಂಟು. ಮನೀಷಾಪಂಚಕ'ದಂತೆ ಜನಾನುರಾಗಕ್ಕೆ ಪಾತ್ರವಾಗಿದೆ. ಇದರ ಕೆಲವು ಶಬ್ದಗಳು ಭಾಷ್ಯದಲ್ಲಿ ಪ್ರಚುರವಾಗಿ ಪ್ರಯೋಗವಾಗಿಲ್ಲ.

(೧೦) **ಬ್ರಹ್ಮಾನುಚಿಂತನ :** ತತ್ತ್ವಾನುಸಂಧಾನಕ್ಕೆ ಸಹಾಯಕವಾದ ಗ್ರಂಥ. ನಾನು ಬ್ರಹ್ಮವೇ ಎಂದು ಭಾವಿಸಬೇಕು, ಅದಾಗದಿದ್ದರೆ ಈ ವಾಕ್ಯವನ್ನೇ ಅಭ್ಯಾಸಮಾಡಬೇಕು ಎಂದು (೧೪) ಹೇಳಿರುವದರಿಂದ ಈ ಗ್ರಂಥವು ಆಚಾರ್ಯರದ್ದಲ್ಲ.

(೧೧) **ಸದಾಚಾರಾನುಸಂಧಾನ :** ಗ್ರಂಥವು ಆಚಾರ್ಯರದ್ದಾಗಿರಲಾರದೆಂಬುದಕ್ಕೆ ಮೂಲದ ವಿಷಯಪ್ರತಿಪಾದನೆಯಿಂದಲೂ ಇಲ್ಲಿ ಬಳಸಿರುವ ಶಬ್ದಗಳಿಂದಲೂ ವ್ಯಕ್ತವಾಗುತ್ತದೆ.

(೧೨) **ದಶಶ್ಲೋಕೀ :** ಮಧುಸೂದನಸರಸ್ವತಿಗಳ 'ಸಿದ್ಧಾಂತಬಿಂದು' ಮತ್ತು ಅದರ ಮೇಲೆ ಗೌಡಬ್ರಹ್ಮಾನಂದರು ಬರೆದಿರುವ 'ನ್ಯಾಯರತ್ನಾವಳಿ' ಇವುಗಳಿಂದ ಗ್ರಂಥಕ್ಕೆ ಹೆಚ್ಚಿನ ಪ್ರಾಶಸ್ತ್ಯವು ಬಂದಿದೆ. ಗ್ರಂಥವು ಆಚಾರ್ಯರದ್ದೆಂದು ನಿಶ್ಚಯಿಸುವದಕ್ಕೆ ಆಧಾರವು ಸಿಕ್ಕಿಲ್ಲ; ಇದರ ಕೆಲವು ಶಬ್ದಗಳು ಭಾಷ್ಯದಲ್ಲಿ ಪ್ರಚುರವಾಗಿಲ್ಲ.

(೧೩) **ವಾಕ್ಯವೃತ್ತಿ ಮತ್ತು ಲಘುವಾಕ್ಯವೃತ್ತಿ :** ವಾಕ್ಯವೃತ್ತಿಯನ್ನು ಪಂಚದಶಿಯಲ್ಲಿ ಪ್ರಮಾಣವಾಗಿ ಉದಾಹರಿಸಿರುತ್ತದೆ. 'ಶ್ರೀವಲ್ಲಭಂ ವಿಮಲಬೋಧಘನಂ ನಮಾಮಿ' ಎಂಬ ಮಂಗಲಶ್ಲೋಕವು ಆಚಾರ್ಯರದ್ದಲ್ಲವೆಂದು ಹೇಳುತ್ತಾರೆ. ಲಘುವಾಕ್ಯವೃತ್ತಿಯಲ್ಲಿ ಮಹಾವಾಕ್ಯದ ವಿಚಾರವೇ ಇಲ್ಲ!

(೧೪) **ದೃಗ್ದೃಶ್ಯವಿವೇಕ :** ಇದಕ್ಕೆ 'ವಾಕ್ಯಸುಧಾ' ಎಂಬ ಅನ್ವರ್ಥವಲ್ಲದ ಹೆಸರೂ ಉಂಟು. ಗ್ರಂಥವು ಆಚಾರ್ಯರ ಅಭಿಪ್ರಾಯಗಳಿಗಿಂತ ವಿಲಕ್ಷಣವಾದ ಪ್ರಸ್ಥಾನವನ್ನು ಅಲ್ಲಲ್ಲಿ ಸ್ವೀಕರಿಸಿದೆ ಎಂಬುದನ್ನು ಪೀಠಿಕೆಯಲ್ಲಿ ತಿಳಿಸಲಾಗಿದೆ. ವಾಣೀವಿಲಾಸಮುದ್ರಣಾಲಯದ ಪ್ರಕಟನೆಯಲ್ಲಿ ಇದರ ಹೆಸರಿಲ್ಲ. ಇದು ಆಚಾರ್ಯಕೃತ, ವಿದ್ಯಾರಣ್ಯಕೃತ– ಎಂದು ಮುಂತಾಗಿ ಮತ ವಿಕಲ್ಪಗಳೂ ಇವೆ.

(೧೫) **ಸವಾರ್ತಿಕಪಂಚೀಕರಣ :** ಪಂಚೀಕರಣವೇನೂ ಗ್ರಂಥದ ಮುಖ್ಯವಿಷಯವಲ್ಲ. ಓಂಕಾರದ ಮೂಲಕ ಸಮಾಧಿಯನ್ನು ಪಡೆಯುವ ಬಗೆಯನ್ನು ತಿಳಿಸುವದೇ ಇದರ ಉದ್ದೇಶ. ವಾರ್ತಿಕಕ್ಕೂ ಮೂಲಕ್ಕೂ ಹೊಂದುಗಡೆಯಿಲ್ಲ. ಗ್ರಂಥವು ಆಚಾರ್ಯರದ್ದಾಗಿರಬಹುದೆ?– ಎಂಬುದು ಸಂಶಯಗ್ರಸ್ತ.

(೧೬) **ಸ್ವಾತ್ಮಪ್ರಕಾಶಿಕಾ :** ಭಾಷ್ಯವಿರುದ್ಧವಾದ ಅಭಿಪ್ರಾಯಗಳೂ ಇದರಲ್ಲಿವೆ.

(೧೭) **ಮೋಹಮುದ್ಗರ :** ಇದನ್ನು ' ಭಜಗೋವಿಂದಸ್ತೋತ್ರ' ವೆಂದೂ ಕರೆಯುತ್ತಾರೆ.

(೧೮) **ಅದ್ವೈತಪಂಚರತ್ನ :** 'ಆತ್ಮಪಂಚಕ'ವೆಂದೂ ಇದಕ್ಕೆ ಹೆಸರು. ಅದ್ವೈತದ ಸಿದ್ಧಾಂತವನ್ನು ಸಂಗ್ರಹಿಸಿ ತಿಳಿಸುವ ಐದು ಶ್ಲೋಕಗಳಿವೆ.

(೧೯) **ಆತ್ಮಬೋಧ :** ಇಲ್ಲಿ 'ಅನಿರ್ವಾಚ್ಯವಾದ ಅನಾದ್ಯವಿದ್ಯೆ' ಎಂಬ ಶಬ್ದವಿರುವದರಿಂದ ಇದು ಆಚಾರ್ಯರ ಕೃತಿಯಲ್ಲ. ಆತ್ಮತತ್ತ್ವವನ್ನು ಸುಂದರವಾಗಿ ತಿಳಿಸುತ್ತದೆ.

(೨೦) ಜೀವನ್ಮುಕ್ತಾನಂದಲಹರಿ : 'ಗುರುವಿನ ದೀಕ್ಷೆ'ಯನ್ನು ಹೊಂದಿ ಅಜ್ಞಾನವನ್ನು ಕಳೆದುಕೊಂಡವನು ಮೋಹವನ್ನು ಹೊಂದುವದಿಲ್ಲ– ಎಂಬರ್ಥದ ಚರಣವು ಪ್ರತಿಯೊಂದು ಶ್ಲೋಕದಲ್ಲಿಯೂ ಇದೆ. ಮಹಾವಾಕ್ಯಗಳ ಅರ್ಥದ ಜ್ಞಾನಾಭ್ಯಾಸವನ್ನು (೧೬) ಹೇಳಿರುವದರಿಂದ ಆಚಾರ್ಯರದ್ದಲ್ಲ.

(೨೧) ಯತಿಪಂಚಕ ಅಥವಾ ಕೌಪೀನಪಂಚಕ : ಇದರಲ್ಲಿ ಪಂಚಾಕ್ಷರೀಮಂತ್ರವನ್ನು ಸಂನ್ಯಾಸಿಗಳು ಜಪಿಸುತ್ತಿರುವರೆಂದು ಹೇಳಿರುವದರಿಂದ ಆಚಾರ್ಯರದ್ದಾಗಿರಲಾರದು.

(೨೨) ಮಾಯಾಪಂಚಕ : ಪಾರಿಭಾಷಿಕಶಬ್ದಗಳನ್ನು ನೋಡಿದರೆ ಆಚಾರ್ಯರದ್ದಲ್ಲವೆನಿಸುತ್ತದೆ.

(೨೩) ನಿರ್ವಾಣಮಂಜರಿ : ಹನ್ನೆರಡು ಶ್ಲೋಕಗಳ ಪ್ರಕರಣ. ಕೆಲವು ಪಾಠಗಳಲ್ಲಿ ಶ್ಲೋಕಸಂಖ್ಯೆ ಕಡಿಮೆ ಇದೆ. ಪಲ್ಲವಿಯಲ್ಲಿ 'ಶಿವೋಽಹಮ್' ಎಂದು ಮತ್ತೆಮತ್ತೆ ಬರುತ್ತದೆ

(೨೪) ಬ್ರಹ್ಮಜ್ಞಾನಾವಳೀಮಾಲೆ : ಈ ಪ್ರಕರಣದಲ್ಲಿಯೂ ಹಿಂದಿನ ಪ್ರಕರಣದಲ್ಲಿಯೂ ಭಾಷ್ಯದಲ್ಲಿ ಬಳಕೆಯಲ್ಲಿಲ್ಲದ ಅನೇಕ ಶಬ್ದಗಳ ಪ್ರಯೋಗವಿದೆ.

(೨೫) ಆನಾತ್ಮಶ್ರೀವಿಗರ್ಹಣ : ಇದೂ ಹಿಂದಿನ ಪ್ರಕಾರದಂತೆಯೇ.

(೨೬) ತತ್ತ್ವೋಪದೇಶ : ಇದು ಆಚಾರ್ಯರದ್ದಲ್ಲವೆಂದೇ ತೋರುತ್ತಿದೆ. ಭಾಷ್ಯದಲ್ಲಿ ಪ್ರಚಾರವಿಲ್ಲದ ಶಬ್ದಗಳ ಪ್ರಯೋಗ, ಜಹಲ್ಲಕ್ಷಣೆಯೇ ಮುಂತಾದವುಗಳನ್ನು ತತ್ತ್ವಮಸಿವಾಕ್ಯಾರ್ಥದ ವಿವರಣೆಗೆ ಉಪಯೋಗಿಸಿರುವದು– ಇವು ಸಂಶಯಕ್ಕೆ ಎಡೆಯನ್ನುಂಟುಮಾಡುತ್ತದೆ.

(೨೭) ಪ್ರೌಢಾನುಭೂತಿ : ಇದರಲ್ಲಿ (೫೨) ಶ್ರವಣಮನನನಿದಿಧ್ಯಾಸನಗಳಾದಮೇಲೆ ಸಮಾಧಿಯು ಅವಶ್ಯವೆಂಬ ಬೋಧೆಯಿದೆ. ಆಚಾರ್ಯರದ್ದಲ್ಲ.

(೨೮) ಉಪದೇಶಪಂಚಕ · ಸಾಧನಸೋಪಾನವನ್ನು ವಿವರಿಸುವ ಗ್ರಂಥ. ಇದರ ವಾಕ್ಯವೊಂದನ್ನು –ಶ್ರೀಶಂಕರಾನಂದರು ತಮ್ಮ 'ಗೀತಾತಾತ್ಪರ್ಯಬೋಧಿನಿ'ಯಲ್ಲಿ ಉದಾಹರಿಸಿರುತ್ತಾರೆ. ಆದ್ದರಿಂದ ಇದು ಅವರಿಗಿಂತ ಪ್ರಾಚೀನವೆನ್ನಬೇಕು. ಆಚಾರ್ಯರದ್ದೆ?– ಎಂಬುದು ಮಾತ್ರ ನಿಶ್ಚಿತವಲ್ಲ.

(೨೯) ಸ್ವರೂಪಾನುಸಂಧಾನ : 'ವಿಜ್ಞಾನನೌಕೆ'ಯೆಂದೂ ಇದಮ್ಮು ಕರೆಯುವದುಂಟು. ಕೊನೆಯ ಶ್ಲೋಕದಲ್ಲಿ ಇದನ್ನು 'ಸ್ತುತಿ'ಯೆಂದು ಕರೆದಿದೆ. ಸಮಾಧಿಯಲ್ಲಿಯೇ ಪೂರ್ಣತತ್ತ್ವದ ದರ್ಶನವಾಗುವದೆಂದು ಇಲ್ಲಿ ಹೇಳಿದೆ.

(೩೦) **ಧನ್ಯಾಷ್ಟಕ :** ಬ್ರಹ್ಮಜ್ಞಾನದಿಂದ ಧನ್ಯರಾದವರ ವರ್ಣನೆಯಿರುವ ಎಂಟು ಶ್ಲೋಕಗಳಿವೆ. ಇವರ ಜೀವಿತಕಾಲದ ಕೆಲವು ಕ್ಷಣಗಳಲ್ಲಿ ಹನ್ನೆರಡು ಶ್ಲೋಕಗಳಿರುವದುಂಟು.

(೩೧) **ಲಕ್ಷ್ಮೀನರಸಿಂಹಪಂಚರತ್ನ :** ಇದರಲ್ಲಿ ಪರಮಾತ್ಮನನ್ನು ಲಕ್ಷ್ಮೀನರಸಿಂಹನೆಂಬ ಹೆಸರಿನಿಂದ ಕರೆದಿದೆ. ಅತನನ್ನು ಭಜಿಸುವಂತೆ ಚಿತ್ತಕ್ಕೆ ಉಪದೇಶಿಸಿದ ಐದು ಶ್ಲೋಕಗಳಿವೆ.

ಇನ್ನೂ ಪ್ರಕಟವಾಗದಿರುವ ಪ್ರಕರಣಗಳು

೧೭೧. ಈ ಕೆಳಗಿನ ಪ್ರಕರಣಗಳು ಕಾರ್ಯಾಲಯದಲ್ಲಿ ಇನ್ನುಮುಂದೆ ಪ್ರಕಾಶವಾಗಲಿರುವವು. ಇವುಗಳನ್ನು ಶ್ರೀರಂಗದ ವಾಣೀವಿಲಾಸಮುದ್ರಣಾಲಯದಲ್ಲಿ ಪ್ರಕಟಿಸಿರುತ್ತಾರೆ.

(೧) **ಶತಶ್ಲೋಕೀ :** ಇದರಲ್ಲಿ ಉದ್ದುದ್ದನೆಯ ವೃತ್ತಗಳ ಶ್ಲೋಕಗಳಿಂದ ವೇದಾಂತಸಿದ್ಧಾಂತವನ್ನು ನಿಶ್ಚಯಗೊಳಿಸಿರುತ್ತಡೆ. ಇವರ ಪ್ರತಿಪಾದನಕ್ರಮವನ್ನೂ ಭಾಷಾಶೈಲಿಯನ್ನೂ ದೃಷ್ಟಾಂತಾದಿಗಳನ್ನೂ ನೋಡಿದರೆ ಇದು ಆಚಾರ್ಯರದ್ದಾಗಿರಲಾರದೆಂದೆನಿಸುತ್ತದೆ.

(೨) **ಸರ್ವವೇದಾಂತಸಿದ್ಧಾಂತಸಾರಸಂಗ್ರಹ :** ಇದು ೧೦೦೬ ಶ್ಲೋಕಗಳಿಂದೊಡಗೂಡಿರುವ ದೊಡ್ಡ ಪ್ರಕರಣ. ಗುರುಶಿಷ್ಯಸಂವಾದರೂಪವಾಗಿರುವ ಇದನ್ನೂ ವಿವೇಕಚೂಡಾಮಣಿಯನ್ನು ಬರೆದಿರುವ ಶಂಕರಾನಂದರೇ ಬರೆದಿರಬೇಕೆನ್ನಿಸುವದು. ಏಕೆಂದರೆ ವಿಷಯಪ್ರತಿಪಾದನೆಯು ಅದೇ ಪ್ರಕಾರದಲ್ಲಿರುತ್ತದೆ; ಇದರಲ್ಲಿಯೂ 'ಗೋವಿಂದ'ನಮಸ್ಕಾರವಿದೆ. ಆದರೆ ವಿವೇಕಚೂಡಾಮಣಿಯ ಪ್ರಕ್ರಿಯೆಗೂ ಪ್ರತಿಪಾದನೆಯ ಕ್ರಮಕ್ಕೂ ವೈಲಕ್ಷಣ್ಯವಿದ್ದು ಮಹಾವಾಕ್ಯದರ್ಪಣದಷ್ಟು ಇದು ಚೂಡಾಮಣಿಗೆ ಹತ್ತಿರವಿರುವದಿಲ್ಲ. ವಿದ್ವಾಂಸರು ಇನ್ನಷ್ಟು ಈ ಗ್ರಂಥವನ್ನು ಒಳಹೊಕ್ಕು ಪರಿಶೀಲಿಸುವದು ಅವಶ್ಯ.

(೩) **ಸರ್ವಸಿದ್ಧಾಂತಸಾರಸಂಗ್ರಹ :** ಇದನ್ನು ಮದರಾಸಿನಲ್ಲಿ ಸ್ವೋ|| ರಂಗಾಚಾರ್ಯರೆಂಬವರು ಪ್ರಕಟಿಸಿದರು. ಇದನ್ನು ಮಾಧವಾಚಾರ್ಯರು ತಮ್ಮ 'ಸರ್ವದರ್ಶನಸಂಗ್ರಹ'ದಲ್ಲಿ ಪರಾಮರ್ಶಿಸಿಲ್ಲ. ಇಲ್ಲಿ ವೇದವ್ಯಾಸಪಕ್ಷ ಮತ್ತು ವೇದಾಂತಪಕ್ಷ– ಎಂದು ಎರಡು ಮತಗಳನ್ನು ಪ್ರತಿಪಾದಿಸಿರುತ್ತದೆ. ಗೋವಿಂದಯೋಗಿಯು ವೇದಾಂತಸೂತ್ರಗಳಿಗೆ ಭಾಷ್ಯವನ್ನು ಬರೆದಂತೆ ಸೂಚಿಸಿದೆ. ಇನ್ನೂ ಅನೇಕ ಕಾರಣಗಳಿಂದ ಇದು ಆಚಾರ್ಯಕೃತವಲ್ಲವೆನ್ನಬೇಕಾಗಿದೆ. ಇದು ವಾಣೀವಿಲಾಸಪ್ರಕಟಿತಗ್ರಂಥಗಳಲ್ಲಿ ಸೇರಿಲ್ಲ.

(೪) **ಪ್ರಬೋಧಸುಧಾಕರ :** ಇದರಲ್ಲಿ ೧೯ ಉಪಪ್ರಕರಣಗಳಿವೆ. ಮಂಗಲಶ್ಲೋಕದಲ್ಲಿ 'ವನ್ದೇ ಶ್ರೀಯಾದವಾಧೀಶಮ್' ಎಂದಿದೆ. ಗ್ರಂಥಕರ್ತನು ಕೃಷ್ಣಭಕ್ತನೆಂದು ಕಾಣುತ್ತದೆ.

(೫) **ಪ್ರಶ್ನೋತ್ತರರತ್ನಮಾಲಿಕಾ :** ಇದು ಲಲಿತವಾದ ಬಂಧದ ೬೭ ಶ್ಲೋಕಗಳುಳ್ಳದ್ದು. ಇದು ಶಂಕರಾನಂದರ ಕೃತಿಯೆಂದು ಕೆಲವರು ಹೇಳುತ್ತಾರೆ.

(೬) **ಯೋಗತಾರಾವಳಿ :** ಇದರಲ್ಲಿ ನಾದಾನುಸಂಧಾನ, ಸಮಾಧಿ, ಜಾಲಂಧರಾದಿಬಂಧಗಳು– ಮುಂತಾದ ವಿಷಯಗಳಿವೆ. ಆಚಾರ್ಯರದ್ದಲ್ಲ.

(೭) **ಏಕಶ್ಲೋಕೀ :** ಇದು ಒಂದು ಸ್ವತಂತ್ರಗ್ರಂಥವೆಂಬಂತೆ ವಾಣೀ ವಿಲಾಸಗ್ರಂಥಾವಳಿಯಲ್ಲಿ ತೋರಿಸಿದ್ದರೂ ಆಚಾರ್ಯರ ಹೆಸರಿನಲ್ಲಿ ಇರುವ ಮತ್ತೊಂದು ಪ್ರಕರಣದ ಭಾಗವಾಗಿರುವಂತೆ ನೋಡಿದ ನೆನಪಿದೆ.

(**ಸೂಚನೆ :** (೧) ಏಕಶ್ಲೋಕಿ (೨) ಶತಶ್ಲೋಕಿ (೩) ಸರ್ವಸಿದ್ಧಾಂತ ಸಂಗ್ರಹ (೪) ಯೋಗತಾರಾವಳಿ–ಇವುಗಳನ್ನು ಬಿಟ್ಟು ಉಳಿದೆಲ್ಲ ಪ್ರಕರಣ ಗ್ರಂಥಗಳೂ ಈಚೆಗೆ ಕಾರ್ಯಾಲಯದಲ್ಲಿ ಪ್ರಕಟವಾಗಿವೆ.)

---

೨೩. ಆಚಾರ್ಯರ ಹೆಸರಿನಲ್ಲಿರುವ ಸ್ತೋತ್ರಗಳು

೧೭೨. ಆಚಾರ್ಯರು ಆದ್ವೈತಿಗಳೇ ಆಗಿದ್ದರೂ ಸಗುಣೋಪಾಸನೆಗೆ ವಿರೋಧಿಗಳಲ್ಲ. ಉತ್ತಮಾಧಿಕಾರಿಗಳಲ್ಲದವರು ಉಪಾಸನೆಯನ್ನು ಮಾಡಲೆಂದೇ ಶ್ರುತಿಯಲ್ಲಿ ಅದನ್ನು ಹೇಳಿದೆ ಎಂಬುದು ಅವರ ಅಭಿಪ್ರಾಯ. ಕರ್ಮವಾಸನೆಯುಳ್ಳವರಿಗೆ ಕರ್ಮಸಮೃದ್ಧಿಗಾಗಿ ಉಪಯೋಗವಾಗಲೆಂದು ಕರ್ಮಾಂಗವಾದ ಉಪಾಸನೆಗಳನ್ನೂ ಮಧ್ಯಮಾಧಿಕಾರಿಗಳಿಗೆ ಸತ್ತ್ವಶುದ್ಧಿಯ ಮೂಲಕವಾಗಿ ಆದ್ವೈತಜ್ಞಾನಕ್ಕೆ ಉಪಕಾರಕವಾಗಲೆಂದು ಮತ್ತೆ ಕೆಲವು ಉಪಾಸನೆಗಳನ್ನೂ ಶ್ರುತಿಯಲ್ಲಿ ಹೇಳಿದೆ. ಉಪಾಸನೆಗಳಿಗೆ ಅಭ್ಯುದಯವೂ ಅಪರಬ್ರಹ್ಮದ ಉಪಾಸನೆಯಿಂದ ಕ್ಷೈವಲ್ಯಕ್ಕೆ ಸವಿಾಪವಾದ ಫಲವೂ ಆಗುವವು –ಎಂದು ಛಾಂದೋಗ್ಯ ಭಾಷ್ಯದಲ್ಲಿದೆ. ಹೀಗಿದ್ದರೂ ಆಚಾರ್ಯರ ಹೆಸರಿನಲ್ಲಿರುವ ಅನೇಕ ಸ್ತೋತ್ರಗಳು ಅವರೇ ಮಾಡಿದವೋ, ಅಥವಾ ಮತ್ತೆ ಯಾರಾದರೂ ಮಠಾಧಿಪರಾದ ಶಂಕರಾಚಾರ್ಯ ಬಿರುದಾಂಕಿತರು ಮಾಡಿದವೋ– ಹೇಳುವದಕ್ಕೆ ಬರುವದಿಲ್ಲ. ಆಚಾರ್ಯರು ಅರ್ಚಾ(ಪ್ರತಿಮಾ)ಪೂಜೆಯನ್ನೇನೂ ತಿರಸ್ಕರಿಸಿಲ್ಲ; ಆದರೂ ಈಗ ಪ್ರಚಲಿತವಾಗಿರುವ ವಿವಿಧದೇವತಾಸ್ತೋತ್ರಗಳನ್ನೆಲ್ಲ ಅವರೇ ಮಾಡಿದರೆಂದು ನಿರ್ಧರಿಸುವದು ಕಷ್ಟವಾಗಿದೆ.

ಸ್ತೋತ್ರಗಳ ವರ್ಗೀಕರಣ

೧೭೩. ಆಚಾರ್ಯಕೃತಸ್ತೋತ್ರಗಳನ್ನು ಶ್ರೀರಂಗದ ವಾಣೀವಿಲಾಸ ಮುದ್ರಣಾಲಯದವರು ಪ್ರಕಾಶಗೊಳಿಸಿರುತ್ತಾರೆ. ಅವುಗಳು ಈ ಕೆಳಗೆ ಕಂಡಂತೆ ಇವೆ:

೧. ಗಣೇಶಸ್ತೋತ್ರಗಳು : (೧) ಗಣೇಶಪಂಚರತ್ನ, (೨) ಗಣೇಶಭುಜಂಗ.

೨. ಸುಬ್ರಹ್ಮಣ್ಯಸ್ತೋತ್ರಗಳು : (೩) ಸುಬ್ರಹ್ಮಣ್ಯಭುಜಂಗ.

೩. ಶಿವಸ್ತೋತ್ರಗಳು : (೪) ಶಿವಭುಜಂಗ, (೫) ಶಿವಾನಂದಲಹರೀ, (೬) ಶಿವಪಾದಾದಿಕೇಶಾಂತವರ್ಣನ. (೭) ಶಿವಕೇಶಾದಿಪಾದಾಂತವರ್ಣನ, (೮) ವೇದಸಾರಶಿವಸ್ತೋತ್ರ, (೯) ಶಿವಾಪರಾಧಕ್ಷಮಾಪಣ, (೧೦) ಸುವರ್ಣಮಾಲಾಸ್ತುತಿ, (೧೧) ದಶಶ್ಲೋಕೀಸ್ತುತಿ, (?) (೧೨) ದಕ್ಷಿಣಾಮೂರ್ತಿವರ್ಣಮಾಲಾ, (೧೩) ದಕ್ಷಿಣಾಮೂರ್ತ್ಯಷ್ಟಕ, (೧೪) ದಕ್ಷಿಣಾಮೂರ್ತಿಸ್ತೋತ್ರ, (೧೫) ಕಾಲಭೈರವಾಷ್ಟಕ, (೧೬) ಶಿವಪಂಚಾಕ್ಷರ

ನಕ್ಷತ್ರಮಾಲಾ, (೧೭) ದ್ವಾದಶಲಿಂಗ, (೧೮) ಅರ್ಧನಾರೀಶ್ವರ, (೧೯) ಮೃತ್ಯುಂಜಯಮಾನಸಿಕಪೂಜಾ, (೨೦) ಶಿವನಾಮಾವಳಿ, (೨೧) ಶಿವಪಂಚಾಕ್ಷರ, (೨೨) ಉಮಾಮಹೇಶ್ವರ.

೪. ದೇವೀಸ್ತೋತ್ರಗಳು : (೨೩) ಸೌಂದರ್ಯಲಹರೀ, (೨೪) ದೇವೀ ಭುಜಂಗ, (೨೫) ಆನಂದಲಹರೀ, (೨೬) ತ್ರಿಪುರಸುಂದರೀವೇದಪಾದ ಸ್ತೋತ್ರ, (೨೭) ತ್ರಿಪುರಸುಂದರೀಮಾನಸಪೂಜಾ, (೨೮) ದೇವೀ ಚತುಷ್ಷಷ್ಟ್ಯುಪಚಾರಪೂಜಾ, (೨೯) ತ್ರಿಪುರಸುಂದರ್ಯಷ್ಟಕ, (೩೦) ಲಲಿತಾಪಂಚರತ್ನ, (೩೧) ಕಲ್ಯಾಣವೃಷ್ಟಿಸ್ತವ, (೩೨) ನವರತ್ನ ಮಾಲಿಕಾ, (೩೩) ಮಾತೃಮಾತೃಕಾಪುಷ್ಪಮಾಲಾಸ್ತವ, (೩೪) ಗೌರೀ ದಶಕ, (೩೫) ಭವಾನೀಭುಜಂಗ, (೩೬) ಕನಕಧಾರಾಸ್ತುತಿ, (೩೭)ಅನ್ನ ಪೂರ್ಣಾಷ್ಟಕ, (೩೮) ವಿಮಾನಾಕ್ಷೀಪಂಚರತ್ನ, (೩೯) ಭ್ರಮರಾಂಬಾ ಷ್ಟಕ, (೪೦) ಶಾರದಾಭುಜಂಗಪ್ರಯಾತ.

೫. ವಿಷ್ಣುಸ್ತೋತ್ರಗಳು : (೪೧) ರಾಮಭುಜಂಗಪ್ರಯಾತ, (೪೨) ಲಕ್ಷ್ಮೀ ನರಸಿಂಹಪಂಚರತ್ನ ಮತ್ತು ಕರುಣಾರಸ, (೪೩) ವಿಷ್ಣುಭುಜಂಗ ಪ್ರಯಾತ, (೪೪) ವಿಷ್ಣುಪಾದಾದಿಕೇಶಾಂತಸ್ತೋತ್ರ, (೪೫) ಪಾಂಡು ರಂಗಾಷ್ಟಕ, (೪೬) ಅಚ್ಯುತಾಷ್ಟಕ, (೪೭) ಕೃಷ್ಣಾಷ್ಟಕ, (೪೮) ಹರಿ ಸ್ತುತಿ, (೪೯) ಗೋವಿಂದಾಷ್ಟಕ, (೫೦) ಭಗವನ್ಮಾನಸಪೂಜಾ, (೫೧) ಜಗನ್ನಾಥಾಷ್ಟಕ, (೫೨) ಷಟ್ಪದೀಸ್ತೋತ್ರ.

೬. ಹನುಮತ್‌ಸ್ತೋತ್ರ : (೫೩) ಹನುಮತ್ಪಂಚರತ್ನ.

೭. ನದ್ಯಾದಿಸ್ತೋತ್ರಗಳು : (೫೪) ನರ್ಮದಾಷ್ಟಕ, (೫೫–೫೬) ಯಮುನಾಷ್ಟಕ (ಎರಡು ಪ್ರಕಾರ), (೫೭) ಗಂಗಾಷ್ಟಕ, (೫೮) ಮಣಿಕರ್ಣಿಕಾಷ್ಟಕ, (೫೯) ಕಾಶೀಪಂಚಕ, (೬೦) ಗುರ್ವಷ್ಟಕ.

೮. ಇತರ : (೬೧) ಪ್ರಾತಃಸ್ಮರಣ, (೬೨) ನಿರ್ಗುಣಮಾನಸಪೂಜಾ.

ಸ್ತೋತ್ರಗಳ ವಿಷಯಕ್ಕೆ ವಿದ್ವಾಂಸರ ಅಭಿಪ್ರಾಯ

೧೭೩. ಶಂಕರಾಚಾರ್ಯರ ಹೆಸರಿನಿಂದ ಕನಿಷ್ಠಪಕ್ಷ ೨೪೦ ಸ್ತೋತ್ರಗಳು ಹಸ್ತಲಿಖಿತಪುಸ್ತಕಗಳಲ್ಲಿವೆ. ಇವುಗಳ ಶೈಲಿ ಮತ್ತು ವಿಷಯ– ಇವನ್ನು ಪರೀಕ್ಷಿಸಿದಸೆ ಅಧಿಕಾಂಶವು ಕೃತ್ರಿಮವಾಗಿಯೇ ಇದೆ. ಆದ್ದರಿಂದ ಇವು ಶಂಕರಕೃತ ವೆಂಬುದು ಸಂದೇಹಾಸ್ಪದ. ಕನಿಷ್ಠಪಕ್ಷ ಹದಿನೈದು ಭುಜಂಗಪ್ರಯಾತಗಳಿವೆ. ಅವು ಗಣೇಶ, ಗಂಡಕೀ, ದಕ್ಷಿಣಾಮೂರ್ತಿ, ದತ್ತ, ದೇವೀ, ನರಸಿಂಹ, ಭವಾನೀ, ರಾಮ, ವಿಷ್ಣು, ಸಾಂಬ, ಶಿವ, ಸುಬ್ರಹ್ಮಣ್ಯ, ಹನುಮಂತ– ಮುಂತಾದ ದೇವತೆ

ಗಳ ಸ್ತೋತ್ರವಾಗಿವೆ. ಇವುಗಳ ಮೇಲೆ ಯಾವ ಪ್ರಾಚೀನವ್ಯಾಖ್ಯಾನಗಳೂ ಇಲ್ಲ. ಶಿವಭುಜಂಗಪ್ರಯಾತವನ್ನು ಬಿಟ್ಟರೆ (?) ಮಿಕ್ಕವು ಶಂಕರಕೃತವೆಂದು ಹೇಳುವದು ಕಷ್ಟ. ಇವುಗಳಲ್ಲದೆ ಮೂವತ್ತೈದು ಅಷ್ಟಕಗಳಿವೆ; ಅವು ಅಚ್ಯುತ, ಅನ್ನಪೂರ್ಣ, ಅಂಬಾ, ಅರ್ಧನಾರೀಶ್ವರ, ಕಾಲಭೈರವ, ಕೃಷ್ಣ, ಗಂಗಾ, ಗಣೇಶ, ಗೋವಿಂದ, ಚಿದಾನಂದ, ಜಗನ್ನಾಥ, ತ್ರಿಪುರಸುಂದರೀ, ದಕ್ಷಿಣಾಮೂರ್ತಿ, ನರ್ಮದಾ, ಪಾಂಡುರಂಗ, ಬಾಲಕೃಷ್ಣ, ಬಿಂದುಮಾಧವ, ಭವಾನೀ, ಭೈರವ, ಭ್ರಮರಾಂಬ, ಮಣಿಕರ್ಣಿಕೆ, ಯಮುನಾ, ರಾಘವ, ರಾಮ, ಲಿಂಗ, ಶಾರದಾಂಬಾ, ಶಿವ, ಶ್ರೀಚಕ್ರ, ಸಹಜಾ, ಹಾಲಾಸ್ಯ– ಮುಂತಾದ ದೇವತೆಗಳ ಸ್ತೋತ್ರಗಳು (ಬಲ. ಶಂ. ಪು.೧೩೪). ಬಲದೇವ ಉಪಾಧ್ಯಾಯರ ಅಭಿಪ್ರಾಯದಲ್ಲಿ ದಕ್ಷಿಣಾಮೂರ್ತಿಸ್ತೋತ್ರ ಮತ್ತು ಗೋಪಾಲಾಷ್ಟಕ –ಇವೆರಡಕ್ಕೂ ಪ್ರಾಚೀನವ್ಯಾಖ್ಯಾನಗಳಿರುವದರಿಂದ ಇವು ನಿಶ್ಚಿತವಾಗಿ ಆಚಾರ್ಯರ ರಚನೆಗಳೇ; ಷಟ್ಪದೀ ಮತ್ತು ದಶಶ್ಲೋಕೀ ಇವು ನಿಃಸಂದೇಹವಾಗಿ ಆಚಾರ್ಯರವೆಂದು ನಮಗೆನ್ನುತ್ತಾರೆ. ಇದರಂತೆ ಆನಂದಲಹರೀ, ಗೋವಿಂದಾಷ್ಟಕ, ಹರಿವಿಹಾಡೇ– ಇವೂ ಆಚಾರ್ಯರವೇ ಎಂದು ಅಭಿಪ್ರಾಯಪಟ್ಟಿರುತ್ತಾರೆ (ಬಲ.ಶಂ.ಪು. ೧೩೫–೧೩೬). ಈ ವಿಷಯಕ್ಕೆ ವಿದ್ವಾಂಸರ ಶೋಧನೆಯು ಅವಶ್ಯವಾಗಿದೆ ಎಂದು ನಮಗೆ ತೋರುತ್ತಿದೆ.

೨೪. ಶಂಕರಾಚಾರ್ಯರೂ ತಂತ್ರಶಾಸ್ತ್ರವೂ

ಆಚಾರ್ಯರು ತಂತ್ರಗ್ರಂಥಗಳನ್ನು ಬರೆದಿದ್ದಾರೆಯೆ ?

೧೭೪. ಆಚಾರ್ಯರು ಶಾಕ್ತತಂತ್ರಗ್ರಂಥಗಳನ್ನು ಬರೆದಿದಾರೆಯಿ ?– ಎಂಬುದೊಂದು ಬಿಡಿಸಲಾಗದ ಸಮಸ್ಯೆಯಾಗಿದೆ. ಅವರು ತುಂಗಾನದಿಯ ಎಡ ದಡದ ಮೇಲೆ ಶ್ರೀಚಕ್ರದ ಮೇಲೆ(ಪು. ೨೨೦, KRTTW 14) ಬ್ರಹ್ಮವಿದ್ಯಾ ರೂಪಿಣಿಯಾದ ಶಾರದಾದೇವಿಯನ್ನು ಪ್ರತಿಷ್ಠಿಸಿರುತ್ತಾರೆಂದು ಅನೇಕರ ನಂಬಿಕೆ ಯಿದೆ. ಕಾಂಚಿಯಲ್ಲಿ ಶ್ರೀಚಕ್ರವನ್ನು ಬರೆದು ಕಾಮಾಕ್ಷಿಯನ್ನು ಪ್ರತಿಷ್ಠೆ ಮಾಡಿ ಸಿದ ವಿಚಾರವನ್ನು ಹಿಂದೆ (ಪು. ೨೪೭) ಕೊಟ್ಟಿರುತ್ತೇವೆ. ಶ್ರೀಚಕ್ರವು ಶಿವಶಕ್ತಿ ಯರ ಐಕ್ಯವನ್ನು ಸೂಚಿಸುತ್ತದೆ ಎಂದು ಚಿದ್ವಿಲಾಸರು ಅಭಿಪ್ರಾಯಪಟ್ಟಿರುತ್ತಾ ರೆಂದೂ (ಪು. ೨೪೯) ಹೇಳಿರುತ್ತೇವೆ. ಆನಂದಲಹರೀ, ಸೌಂದರ್ಯಲಹರೀ– ಈ ಗ್ರಂಥಗಳು ಆಚಾರ್ಯರೇ ಬರೆದವು ಎಂದು ಪ್ರಸಿದ್ಧಿ. ಕೈಲಾಸದಿಂದ ಆಚಾರ್ಯರು ಶಿವನಿಂದ ಪಡೆದುಕೊಂಡು ಇದನ್ನು ತಂದರೆಂದೂ ನಂಬಿಕೆ ಇದೆ (ಬಲ. ಶಂ, ೧೩೫.) ಈಗ್ಗೆ ಒಂದೊಂದು ಮಠದಲ್ಲಿಯೂ ಒಂದೊಂದು 'ಶಕ್ತಿ' ಯನ್ನು ಪೂಜೆಮಾಡುವ ಪದ್ಧತಿಯೂ ಇದೆ. ಈ ಎಲ್ಲಾ ಕಾರಣಗಳಿಂದ ಆಚಾರ್ಯರು ತಂತ್ರಗ್ರಂಥಗಳನ್ನು ಬರೆದಿರಬಹುದೆಂಬುದು ಸಂಭಾವಿತ ವಾಗುತ್ತದೆ.

ಆಚಾರ್ಯರಿಗೆ ಗೃಹಸ್ಥಶಿಷ್ಯರೂ ಇದ್ದರೆ ?

೧೭೫. ಆಚಾರ್ಯರ ಮಠಾಧಿಪತಿಶಿಷ್ಯಪರಂಪರೆಯನ್ನು ಮುಂದೆ ವಿವ ರ್ಶಿಸುವೆವು. ಸದ್ಯಕ್ಕೆ ಅವರಿಗೆ ಗೃಹಸ್ಥಶಿಷ್ಯಪರಂಪರೆಯೂ ಇದ್ದಿತೆ? –ಎಂಬು ದನ್ನು ಪರಿಶೀಲಿಸಬೇಕಾಗಿದೆ. 'ಶ್ರೀವಿದ್ಯಾರ್ಣವ' ಎಂಬ ಗ್ರಂಥದಲ್ಲಿ 'ಶಂಕರಾ ಚಾರ್ಯಶಿಷ್ಯಾಶ್ಚ ಚತುರ್ದಶ ದೃಢವ್ರತಾಃ | ದೇವ್ಯಾತ್ಮಾನೋ ದೃಢಾತ್ಮಾನೋ ನಿಗ್ರಹಾನುಗ್ರಹಕ್ಷಮಾಃ ||' (೧–೬೦) ಎಂಬ ಶ್ಲೋಕವಿದೆಯಂತೆ. ಆಚಾರ್ಯ ರಿಗೆ ೧೪ ಶಿಷ್ಯರು ; ಪದ್ಮಪಾದ, ಬೋಧ, ಗೀರ್ವಾಣ, ಆನಂದತೀರ್ಥ, ಶಂಕರ, ಸುಂದರ, ವಿಷ್ಣುಶರ್ಮ, ಲಕ್ಷ್ಮಣ, ಮಲ್ಲಿಕಾರ್ಜುನ, ತ್ರಿವಿಕ್ರಮ, ಶ್ರೀಧರ, ಕಪರ್ದಿ, ಕೇಶವ, ದಾಮೋದರ– ಇವರೆಲ್ಲರೂ ದೇವಿಯ ಉಪಾಸಕರು, ಪರಮ ಸಿದ್ಧರು. ಇವರಿಗೆ ಪ್ರಶಿಷ್ಯರೂ ಅನೇಕರಿದ್ದರು. ವಿಷ್ಣುಶರ್ಮನ ಪ್ರಧಾನ ಶಿಷ್ಯನು ಪ್ರಗಲ್ಭಾಚಾರ್ಯ ; ಈತನ ಶಿಷ್ಯನಾದ ವಿದ್ಯಾರ್ಣವಯತಿಯೇ ವಿದ್ಯಾರ್ಣವಕರ್ತ. ವಿದ್ಯಾರ್ಣವಕಾರನು 'ಕಾಮರಾಜವಿದ್ಯೆ'ಯಲ್ಲಿ ಹೀಗೆಂದು ಬರೆದಿದ್ದಾನಂತೆ :

ಸಂಪ್ರದಾಯೋ ಹಿ ನಾನ್ಯೋಽಸ್ತಿ ಲೋಕೇ ಶ್ರೀಶಂಕರಾದ್ ಬಹಿಃ ।
ವಾದಿಶಕ್ತಿಮತೇ ತನ್ತ್ರಂ ತನ್ತ್ರರಾಜಂ ಸುದುರ್ಲಭಮ್ ॥ ೯೮ ॥
ಮಾತೃಕಾರ್ಣವಸಂಜ್ಞಂ ತು ತ್ರಿಪುರಾರ್ಣವಸಂಜ್ಞಕಮ್ ।
ಯೋಗಿನೀಹೃದಯಂ ಚೈವ ಖ್ಯಾತಂ ಗ್ರನ್ಥಚತುಷ್ಟಯಮ್ ॥ ೯೯ ॥

ಬಲದೇವ ಉಪಾಧ್ಯಾಯರ ಗ್ರಂಥ (ಪು. ೧೬೧–೧೬೨)ದಿಂದ ಈ ಮೇಲಿನ ಅಂಶವನ್ನು ತೆಗೆದುಕೊಂಡಿರುತ್ತೇವೆ. **'ಮಹಾನುಶಾಸನ'**ವೆಂಬ ಗ್ರಂಥವು ಆಚಾರ್ಯಕೃತವೆಂದು ಪ್ರಸಿದ್ಧವಾಗಿದೆ ; ಅದನ್ನು ಮಠಗಳ ವಿಚಾರದಲ್ಲಿ ಪರಿಶೀಲಿಸುವೆವು. ಅದರಲ್ಲಿ ಮಠಾಧಿಪತಿಯು ಶುಚಿಯೂ ಜಿತೇಂದ್ರಿಯನೂ ವೇದವೇದಾಂತವಿಶಾರದನೂ ಯೋಗಜ್ಞನೂ ಶಾಸ್ತ್ರಜ್ಞನೂ ಆಗಿರಬೇಕು ; ಹಾಗಿಲ್ಲದಿದ್ದರೆ ಮುನೀಷಿಗಳು ಅವನನ್ನು ನಿಗ್ರಹಿಸಬೇಕು (೧೦) –ಎಂಬರ್ಥದ ಶ್ಲೋಕವಿದೆ. ಅಲ್ಲಿ ಮುನೀಷಿಗಳು ಎಂಬುದಕ್ಕೆ ಗೃಹಸ್ಥಶಿಷ್ಯರು ಎಂಬರ್ಥವನ್ನು ವ್ಯಾಖ್ಯಾನಕಾರರು ಕೊಟ್ಟಿದಾರಂತೆ. ಪೀಠದ ಲೌಕಿಕವ್ಯವಹಾರಿಕ ರೀತಿನೀತಿಗಳನ್ನು ನೋಡುಪ ಭಾರವು ಇಂದಿಗೂ ಗೃಹಸ್ಥಶಿಷ್ಯರಿಗೇ ಇದೆ. ಆದರೆ ಹಿಂದೆ ಗೃಹಸ್ಥಶಿಷ್ಯರೇ ಕಾರ್ಯಕರ್ತರಾಗಿದ್ದರು. ಆಚಾರ್ಯರವರು ಶ್ರೀವಿದ್ಯೆಯ ಉಪಾಸಕರಾಗಿದ್ದರು ; ಆ ವಿದ್ಯೆಯ ಪರಂಪರೆಯಲ್ಲಿ ಗೃಹಸ್ಥಶಿಷ್ಯರೂ ಅನೇಕರಿರುತ್ತಾರೆ. ಮೇಲೆ ಹೇಳಿದ **ಸುಂದರಾಚಾರ್ಯರ** ಶಿಷ್ಯರು ಗೃಹಸ್ಥರು, ಸಂನ್ಯಾಸಿಗಳು, ಪೀಠನಾಯಕರು– ಎಂದು ಮೂರು ಬಗೆಯಾಗಿದ್ದರು. ಅವರಿಂದಲೇ ಸುಪ್ರಸಿದ್ಧ ಭಾಸ್ಕರರಾಯರಿಗೆ ಶ್ರೀವಿದ್ಯೆ ಬಂತು. ಈ ಗುರುಪರಂಪರೆಯೂ ಅವಿಚ್ಛಿನ್ನವಾಗಿದೆ– ಎಂದು **ಸಾಹಿತ್ಯಾಚಾರ್ಯ, ಪಂಡಿತ, ನಾರಾಯಣಶಾಸ್ತ್ರಿ**ಗಳಿಸ್ತೆ– ಇವರ ವಚನದ ಪ್ರಮಾಣದಿಂದ **ಬಲದೇವ ಉಪಾಧ್ಯಾಯರು** (ಪು. ೧೬೩, ೧೬೪) ಬರೆದಿರುತ್ತಾರೆ.

ಇದೇ ವಿಷಯಕ್ಕೆ **ಕೆ. ಆರ್. ವೆಂಕಟರಾಮನ್**ರವರು ಮತ್ತೊಂದು ಬಗೆಯ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ : ರಾಜೇಂದ್ರಲಾಲ್ ಮಿತ್ರರು ಬಿಹಾರಿನ ಮುಸ್‌ಫರ್‌ಪುರ್ ಜಿಲ್ಲೆಯ ಸೀತಾಮಢಿಯಲ್ಲಿ ಕಂಡುಹಿಡಿದಿರುವ **ಗದ್ಯವಲ್ಲರಿ** ಎಂಬ ನ್ಯಾಸಜಪಾದಿಸಹಿತ ಶ್ರೀವಿದ್ಯಾಪರಗ್ರಂಥದಲ್ಲಿ ಒಂದು ಗುರು ಪರಂಪರೆಯನ್ನು ಬರೆದಿದೆಯಂತೆ. ಆದರಲ್ಲಿ ಶಿವವಿಷ್ಣುಬ್ರಹ್ಮವಶಿಷ್ಠಶಕ್ತಿಪರಾಶರ ವ್ಯಾಸಶುಕರಾದ ಬಳಿಕ ಗೌಡಪಾದರೇ ಮುಂತಾಗಿ ವಿದ್ಯಾರಣ್ಯರವರೆಗಿನ– ಶೃಂಗೇರಿಯ ಶಾರದಾಪೀಠದ– ಗುರುಗಳನ್ನೇ ಅನುಕ್ರಮದಿಂದ ಹೇಳಿ ಶ್ರೀಮೂಲ **ಯಾನಂದದೇವತೀರ್ಥಸರಸ್ವತಿ** ಎಂಬ ವಿದ್ಯಾರಣ್ಯಶಿಷ್ಯರನ್ನು ಆನಂದ **ಚಿತ್ಪ್ರತಿಬಿಂಬರವರೆಗೆ** ಹೇಳಿ ಅವರ ಶಿಷ್ಯರು ಶ್ರೀನಿಜಾತ್ಮಪ್ರಕಾಶಾನಂದನಾಥ **ಮುಲ್ಲಿಕಾರ್ಜುನಯೋಗೀಂದ್ರ**ರೆಂದು ತಿಳಿಸಿದೆಯಂತೆ (KRTTW PP. 42–43). ಈ ಗುರುಪರಂಪರೆಯು ನಿಜವೆಂದಾದರೆ ಬಲದೇವ ಉಪಾಧ್ಯಾಯರು

ತಿಳಿಸಿರುವ ಗೃಹಸ್ಥಶಿಷ್ಯಪರಂಪರೆಯ ಗತಿ ಏನೆಂಬುದನ್ನು ನಾವು ವಿಚಾರಿಸ ಬೇಕಾಗುವದು.

ಆಚಾರ್ಯರ ಗುರುಪರಂಪರೆಯಲ್ಲಿ ಶ್ರೀವಿದ್ಯೆಯಿತ್ತೆ ?

೧೭೬. ಶ್ರೀಗೌಡಪಾದರು, ಶ್ರೀಶಂಕರರು-ಮುಂತಾದವರು ವಿವರಿಸಿರುವ ಶ್ರೀವಿದ್ಯೆಯು ಉಪನಿಷತ್ತಿನ ಬ್ರಹ್ಮವಿದ್ಯೆಗಿಂತ ಭಿನ್ನವಲ್ಲವೆಂಬುದಕ್ಕೆ ಈ ಬಗೆಯ ಗ್ರಂಥಗಳೇ ಸಾಕ್ಷಿ ಎಂದು ಕೆ. ಆರ್. ವೆಂಕಟರಾಮನ್ ರವರು (KRTTW P. 43) ಬರೆದಿದಾರೆ. ಆಚಾರ್ಯರು ಶ್ರೀವಿದ್ಯೆಯ ಉಪಾಸಕರೇ ಆಗಿದ್ದರೆಂಬುದು ಪ್ರಸಿದ್ಧವಾಗಿದೆ- ಎಂದು ಬಲದೇವ ಉಪಾಧ್ಯಾಯರು. (ಬಲ. ಶಂ. ಪು. ೧೬೩). ಸೌಂದರ್ಯಲಹರಿಯ ಕರ್ತರು ಯಾರೆಂಬ ವಿಷಯಕ್ಕೆ ಟೀಕಾಕಾರರಲ್ಲಿ ಮತಭೇದವಿದ್ದರೂ ಲಕ್ಷ್ಮೀಧರ, ಭಾಸ್ಕರರಾಯ, ಕೈವಲ್ಯಾಶ್ರಮ- ಮುಂತಾದ ಟೀಕಾಕಾರರು ಆ ಗ್ರಂಥವು ಭಗವತ್ಪಾದರದ್ದೇ ಎಂದು ಅಂಗೀಕರಿಸಿರುತ್ತಾರೆ ; ಈ ಸೌಂದರ್ಯಲಹರಿಯಲ್ಲಿ (ಶ್ಲೋಕ ೭೫ ರಲ್ಲಿ) 'ದ್ರವಿಡಶಿಶು' ಎಂಬ ಪರಾಮರ್ಶವಿದೆ ; ಆ ಶಿಶುವಿಗೆ ಭಗವತಿಯು ತಾನೇ ಸ್ತನಪಾನವನ್ನು ಮಾಡಿಸಿದ್ದಳಂತೆ. (ತವ ಸ್ತನ್ಯಂ ಮನ್ಯೇ ....ದಯಾವತ್ಯಾ ದತ್ತಂ ದ್ರವಿಡಶಿಶುರಾಸ್ವಾದ್ಯ ತವ ಯತ್) ಆ ಶಿಶು 'ಜ್ಞಾನಸಂಬಂಧರ್' ಎಂಬ ಶೈವಾಚಾರ್ಯನೆಂದೂ ಕೆಲವರು ಹೇಳುತ್ತಾರೆ.[1] ಅವರು ನಮ್ಮ ಆಚಾರ್ಯರೇ ಎಂದು ಪುತ್ತೆ ಕೆಲವರ ಮತ ! ಈ ದ್ರವಿಡಶಿಶುವಾದ ಜ್ಞಾನಸಂಬಂಧರ ಕಾಲದಿಂದ ಆಚಾರ್ಯರ ಕಾಲವನ್ನು ನಿರ್ಣಯಿಸುವದಕ್ಕೆ ಹೋಗಿರುವವರೂ ಉಂಟು (ಬಲ. ಶಂ. ಪು. ೧೪೫). ಆದರೆ ಸೌಂದರ್ಯಲಹರಿಯು ಆಚಾರ್ಯರದ್ದೇ ಎಂದು ನಿರ್ಣಯವಾದಮೇಲಷ್ಟೆ, ಈ ವಾದಕ್ಕೆ ಅವಕಾಶ? ಹೀಗೆಯೇ ಪ್ರಪಂಚಸಾರವು ಶಂಕರಾಚಾರ್ಯಕೃತವೆಂದೂ ಅದರ ವಿವರಣವ್ಯಾಖ್ಯಾನವು ಪದ್ಮಪಾದಾಚಾರ್ಯರದೆಂದೂ ಪ್ರಸಿದ್ಧಿಯಿದೆ. ಪ್ರಪಂಚಸಾರವು ಪ್ರಪಂಚಾಗಮವೆಂಬ ಗ್ರಂಥದ ಸಾರವೆಂದು ಕೆಲವರ ಮತ (ಬಲ. ಶಂ. ಪು. ೧೪೬). ಆಚಾರ್ಯರು ವೇದಾಂತಸೂತ್ರ ೧-೩-೩೫ರಲ್ಲಿ ಉದಾಹರಿಸಿರುವ ಯೋಗಮಾಹಾತ್ಮ್ಯ ಪ್ರತಿಪಾದನದ ಶ್ವೇತಾಶ್ವತರ (ಶ್ವೇ. ೨-೧೪)ರ ವಿವರವನ್ನು ಮಾಡುವಾಗ ಕಲ್ಪತರುಕಾರರಾದ ಅಮಲಾನಂದರು ಪ್ರಪಂಚಸಾರದಶ್ಲೋಕವನ್ನು ಆಚಾರ್ಯಕೃತವೆಂದು ಉದಾಹರಿಸಿರುತ್ತಾರೆ ; ನೃಸಿಂಹಪೂರ್ವತಾಪಿನಿಯಲ್ಲಿ ಭಾಷ್ಯಕಾರರು ಪ್ರಪಂಚಸಾರವು ತಮ್ಮ ಗ್ರಂಥವೇ ಎಂದು ಒಪ್ಪಿರುತ್ತಾರೆ. ಈ ಕಾರಣಗಳಿಂದ ಪ್ರಪಂಚಸಾರವು ಆಚಾರ್ಯರದೆಂದೇ ಹಿಡಿಯುವದು ಯುಕ್ತ

1. ಜ್ಞಾನಸಂಬಂಧರೇ ಬರೆದಿರುವ ಒಂದು ತಮಿಳುಗ್ರಂಥದಲ್ಲಿ "ನಿನ್ನ ಸ್ತನ್ಯವು ಯಾವ ಮಾನವನಿಗೂ ದೊರೆತದ್ದಿಲ್ಲ" ಎಂದಿದೆಯಂತೆ !

ಎಂತ ಬಲದೇವ ಉಪಾಧ್ಯಾಯರು (ಬು. ಶಂ. ಪು. ೧೪೬, ೧೪೭) ಅಭಿಪ್ರಾಯಪಡುತ್ತಾರೆ.

ಆದರೂ ಗೌಡಪಾದರೂ ಶ್ರೀಶಂಕರರೂ ಶ್ರೀವಿದ್ಯೆಯನ್ನು ಉಪಾಸನೆ ಮಾಡುತ್ತಿದ್ದರೆಂಬುದಕ್ಕೆ ನಮಗೆ ಇನ್ನೂ ಸಾಕಾಷ್ಟು ಆಧಾರವು ಸಿಕ್ಕಿಲ್ಲವೆಂದೇ ಹೇಳಬೇಕಾಗಿದೆ. ಗೌಡಪಾದಕಾರಿಕೆಯಲ್ಲಾಗಲಿ ಆಚಾರ್ಯರ ಪ್ರಸ್ಥಾನತ್ರಯ ಭಾಷ್ಯದಲ್ಲಾಗಲಿ ತಾಂತ್ರಿಕವಿಚಾರಗಳ ಪರಾಮರ್ಶವೇ ಇರುವದಿಲ್ಲ. ಅವರು ಶಾಕ್ತೇಯಮತವನ್ನು ಖಂಡನೆಗಾಗಲಿ ಮಂಡನೆಗಾಗಲಿ ಹೆಸರಿಸಿಲ್ಲವೆಂಬುದು ಆಶ್ಚರ್ಯಗರ್ಭಿತವಾಗಿದೆ. ಆಚಾರ್ಯರು ಗೀತಾಭಾಷ್ಯದಲ್ಲಿ ಭೂತೇಜ್ಯರು ಎಂದರೆ ವಿನಾಯಕ, ಮಾತೃಗಣ ಚತುರ್ಭಗಿನ್ಯಾದಿಗಳನ್ನು ಪೂಜಿಸುವವರು (ಗೀ. ಭಾ. ೯–೨೫) ಎಂದಿದೆ. ಸಪ್ತಮಾತೃಕೆಯರೇ ಮುಂತಾದ ಭೂತಗಣಗಳನ್ನು 'ತಾಮಸರು ಪೂಜಿಸುತ್ತಾರೆ' (ಗೀ. ಭಾ. ೧೭–೪) ಎಂದು ಈ ವಾಕ್ಯಗಳಲ್ಲಿ ಮಾತೃಕಾದಿಪೂಜೆಗಳನ್ನು ಕಡೆಗಣಿಸಿ ಬರೆದಿರುತ್ತದೆ. ಇದನ್ನು ಹಿಂದೆ (ಪು. ೨೬೨) ತಿಳಿಸಿರುತ್ತೇವೆ. ಶಾಕ್ತಪೂಜೆಯ ವಿಚಾರವು ಮತ್ತೆಲ್ಲಿಯೂ ಭಾಷ್ಯದಲ್ಲಿ ಬಂದಿರುವದಿಲ್ಲ. ಶ್ರೀವಿದ್ಯೆಯು ಬ್ರಹ್ಮವಿದ್ಯೆಗೆ ಸವಿಾಪವಾಗಿದ್ದು ಆಚಾರ್ಯರೂ ಶ್ರೀವಿದ್ಯೋಪಾಸಕರೇ ಆಗಿದ್ದಿದ್ದರೆ ಅವರು ಎಂದಿಗೂ ಹೀಗೆ ಇಂಥ ಮುಖ್ಯ ವಿಚಾರವನ್ನು ಇಷ್ಟು ಅನಾದರದಿಂದ ನೋಡುತ್ತಿರಲಿಲ್ಲ– ಎಂಬುದು ಕೆಲವರ ಅಭಿಸ್ರಾಯ. ಆಚಾರ್ಯರ ಪೀಠಾಧಿಪತಿಗಳ ಪರಂಪರೆಯಲ್ಲಿ ಶ್ರೀವಿದ್ಯೆಯಿದೆ ಎಂಬ ಕಾರಣದಿಂದಲೂ ಸೌಂದರ್ಯಲಹರಿ ಮತ್ತು ಪ್ರಪಂಚಸಾರಗಳ ಗ್ರಂಥಗಳು ಶಂಕರಾಚಾರ್ಯರದ್ದೆಂದು ಕರೆದಿರುವ ಕಾರಣದಿಂದಲೂ ಮತ್ತೆ ಯಾರೋ ಶಂಕರಾಚಾರ್ಯರು ಬರೆದ ಈ ಗ್ರಂಥಗಳನ್ನು ಆಚಾರ್ಯರದ್ದೆಂದು ಈಚಿನವರು ಭ್ರಮಿಸಿರಬೇಕೆಂದೇ ನಮಗೆ ತೋರುತ್ತಿದೆ. ಪಂಚಪಾದಿಕೆಯನ್ನು ಬರೆದಿರುವವರು ಪದ್ಮಪಾದರೆ, ಅಲ್ಲವೆ ?–ಎಂಬುದೇ ವಾದಗ್ರಸ್ತವಾಗಿದೆ; ಒಂದುವೇಳೆ ಅದು ಪದ್ಮಪಾದರ ಕೃತಿಯೇ ಆಗಿದ್ದರೂ ಪ್ರ ಪಂ ಚ ಸಾ ರ ದ ವ್ಯಾಖ್ಯಾನವನ್ನು ಬರೆದ ಪದ್ಮಪಾದರೂ ಅವರೇ ಎಂಬುದಕ್ಕೆ ನಮಗೆ ಈವರೆಗೆ ಯಾವ ಪ್ರಮಾಣವೂ ಸಿಕ್ಕಿರುವದಿಲ್ಲ. ಸರ್ ಜಾನ್ ವುಡ್ರಾಫ್ ಎಂಬವರು ಆರ್ಥರ್ ಅವೆಲಾನ್ (Atthur Avalon) ಎಂಬ ಹೆಸರಿನಿಂದ ಪ್ರಕಟಿಸಿರುವ ಪ್ರಪಂಚಸಾರದ ಭೂಮಿಕೆಯಲ್ಲಿಯೂ (ಪ್ರ. ಸಾ. ಭೂಮಿಕೆ ೧೭) ಶಂಕರಾಚಾರ್ಯರೆಂಬ ಹೆಸರಿನವರು ಅನೇಕತಾಂತ್ರಿಕರಿದ್ದರೆಂದೂ ದೊಡ್ಡವರ ಹೆಸರಿನಲ್ಲಿ ಬರೆದರೆ ಪ್ರಖ್ಯಾತವಾಗುವದೆಂದು ಯಾರಾದರೂ ಆಚಾರ್ಯರ ಹೆಸರಿನಲ್ಲಿ ಗ್ರಂಥವನ್ನು ಬರೆದಿರಲೂಬಹುದೆಂದೂ ಬರೆದವರು ಆ ಗ್ರಂಥದ ಎರಡನೆಯ ಸಂಸ್ಕರಣದ ಭೂಮಿಕೆಯಲ್ಲಿ (ಪು. 71) ಅಮಲಾನಂದ, ರಾಘವಭಟ್ಟ, ಭಾಸ್ಕರರಾಯ, ಸೂತಸಂಹಿತೆಯ ವ್ಯಾಖ್ಯಾತೃ ಮಾಧವಾಚಾರ್ಯ– ಇವರನ್ನು

ಪ್ರಮಾಣವಾಗಿ ಹಿಡಿದು ಗ್ರಂಥವು ಶಂಕರಾಚಾರ್ಯರದ್ದೇ ಆಗಿರಬೇಕೆಂದು ಬರೆದಿರುತ್ತಾರೆ. ಆದರೆ ಈ ಗ್ರಂಥಕರ್ತೃಗಳೆಲ್ಲ ಆಚಾರ್ಯರಿಗಿಂತ ಬಹಳ ಈಚಿನವರೆಂಬುದನ್ನು ಅವರು ಕಡೆಗಣಿಸಿರುತ್ತಾರೆ.

ಡಿಂಡಿಮವೆಂಬ ವ್ಯಾಖ್ಯಾನವನ್ನು ಬರೆದಾತನ ಕಾಲದಲ್ಲಿ ಸೌಂದರ್ಯಲಹರಿಯು ಶಿವಕೃತವೆಂದು ಪ್ರಸಿದ್ಧವಾಗಿತ್ತು ; ಅದು ಶ್ರೀಶಂಕರಾಚಾರ್ಯರದ್ದೇ ಎಂಬ ಸಂಪ್ರದಾಯವೂ ಇತ್ತು : ಅದು ಲಲಿತಾದೇವಿಯ ಕೃತಿಯೆಂದೇ ಮತ್ತೊಂದು ಸಂಪ್ರದಾಯವಿತ್ತು. ಸುಧಾವಿದ್ಯೋತಿನೀ ಎಂಬ ವ್ಯಾಖ್ಯಾನವನ್ನು ಬರೆದ ಮತ್ತೊಬ್ಬ ವ್ಯಾಖ್ಯಾನಕಾರನು ದ್ರವಿಡರ ಅರಸನಾದ ಪ್ರವರಸೇನನು ಬರೆದದ್ದು ಅದು ಎಂದೂ ಹೇಳಿರುತ್ತಾನೆ. 'ಶಂಕರಾಚಾರ್ಯರು ಶಾಕ್ತಮತವನ್ನು ಪರಿಶುದ್ಧಗೊಳಿಸಿರುವರಾದ್ದರಿಂದಲೂ ಆದ್ವೈತಮಠಗಳಲ್ಲಿ ಶಾಕ್ತಪೂಜೆಯು ಇನ್ನೂ ನಡೆಯುತ್ತಿರುವದರಿಂದಲೂ, ದೇವಿಗೂ ಜೀವನಿಗೂ ಐಕ್ಯವನ್ನೂ (ಶ್ಲೋಕ ೨೨), ವೇದಾಂತವನ್ನೂ (ಶ್ಲೋಕ ೮೪) ಪರಾಮರ್ಶಮಾಡಿರುವದರಿಂದಲೂ ಈ ಸ್ತೋತ್ರಶೈಲಿಯ ವಿನುರ್ಶೆಯಿಂದಲೂ ಸಮಯಕೌಲಮಾರ್ಗಳ ಏಕವಾಕ್ಯತೆಗೆ ಇಲ್ಲಿ ಮಾಡಿರುವ ಪ್ರಯತ್ನದಿಂದಲೂ ಲಕ್ಷ್ಮೀಧರಾದಿಗಳು ಇದನ್ನು ಆಚಾರ್ಯರದ್ದೇ ಎಂದು ಹೇಳಿರುವದರಿಂದ ನಾನು ಇದು ಶಂಕರಾಚಾರ್ಯರದ್ದೆಂದೇ ನಂಬುವ ಕಡೆಗೆ ಒಲಿಯುತ್ತಿದೇನೆ' (ಪು.11) ಎಂದು ಮಹದೇವಶಾಸ್ತ್ರಿಗಳು ಸ್ತೋತ್ರದ ಪೀಠಿಕೆಯಲ್ಲಿ ಹೇಳಿರುವ ಯುಕ್ತಿಗಳು ಯಾವವೂ ನಿರ್ಣಯವಾಗಿ ನಮಗೆ ಕಾಣಿಸುತ್ತಿಲ್ಲ. ಏಕೆಂದರೆ ಜೀವ ಪರಮಾತ್ಮೈಕ್ಯವನ್ನು ಆಚಾರ್ಯರೇನೂ ಮೊದಲುಬಾರಿಗೆ ಹೇಳಿದವರಲ್ಲ ; ವೇದಾಂತವೆಂಬ ಸಾಮಾನ್ಯನಾಮವು ಆಚಾರ್ಯರನ್ನು ಪರಾಮರ್ಶಿಸುವದೆಂದು ಹೇಳುವದಕ್ಕೆ ಬರುವದಿಲ್ಲ ; ಸಮಯಕೌಲಮಾರ್ಗಗಳ ಸಮನ್ವಯವನ್ನು ಮಾಡಿದ ಆಚಾರ್ಯರು ಈಚಿನ ಯಾರೋ ಒಬ್ಬ ತಾಂತ್ರಿಕಾಚಾರ್ಯರಾಗಿರಬಹುದಾಗಿದೆ ; ಆದ್ಯಶಂಕರಾಚಾರ್ಯರೇ ಹಾಗೆ ಮಾಡಿದರೆಂಬುದಕ್ಕೆ ನಮಗೆ ಯಾವ ಪ್ರಮಾಣವೂ ಇಲ್ಲ. ವ್ಯಾಖ್ಯಾನಕಾರರು ಕೆಲವರು ಇದು ಶಂಕರಾಚಾರ್ಯರದ್ದೇ ಎಂದು ಹೇಳಿದ್ದ ಈ ವಿಷಯಕ್ಕೆ ಮತಭೇದವಿದೆ ಎಂಬುದನ್ನು ಮಹಾದೇವಶಾಸ್ತ್ರಿಗಳೇ ತಿಳಿಸಿಕೊಟ್ಟಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಶಂಕರನಾಮಧೇಯಮಾತ್ರದಿಂದಲೇ ಆಚಾರ್ಯರು ತಾಂತ್ರಿಕಗ್ರಂಥಗಳನ್ನು ಬರೆದರೆಂದಾಗಲಿ, ಅವರು ಬ್ರಹ್ಮವಿದ್ಯೆಯೂ ತಾಂತ್ರಿಕವಿದ್ಯೆಯೂ ಒಂದೇ ಎಂದು ಒಪ್ಪಿದ್ದರೆಂದಾಗಲಿ, ನಿರ್ಣಯಿಸಿ ಹೇಳುವದು ನಮಗೆ ಅಷ್ಟು ಯುಕ್ತಿಯುಕ್ತವೆಂದು ತೋರುವದಿಲ್ಲವೆಂದೇ ಸದ್ಯಕ್ಕೆ ಹೇಳಬೇಕಾಗಿದೆ.

೨೫. ಆಚಾರ್ಯರು ಸ್ಥಾಪಿಸಿರುವ ಮಠಗಳು

ಮಠವಿಚಾರದಲ್ಲಿರುವ ಕ್ಲೇಶ

೧೭೭. ಆಚಾರ್ಯರು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿದರೆಂದು ಪ್ರಸಿದ್ಧವಾಗಿರುತ್ತದೆ. ಅಲ್ಲಿಯ ಮಠಾಧಿಪತಿಗಳು ಶಂಕರಾಚಾರ್ಯರ ಪ್ರತಿನಿಧಿಗಳೆಂಬ ಕಾರಣದಿಂದ ಅವರನ್ನೂ ಶಂಕರಾಚಾರ್ಯರೆಂದೇ ಕರೆಯುತ್ತಿದಾರೆ. ಹೀಗಿದ್ದರೂ ಆಚಾರ್ಯರು ಯಾವ ಮಠವನ್ನು ಮೊದಲು ಸ್ಥಾಪಿಸಿದರು ? ಅವರೇ ಸ್ಥಾಪಿಸಿರುವ ಮಠಗಳು ಎಷ್ಟು ? ಈಚೆಗೆ ಆಗಿರುವ ಶಾಖಾಮಠಗಳು ಆಥವಾ ಸ್ವತಂತ್ರವಾಗಿರುವ ಮಠಗಳು ಯಾವವು–ಎಂಬಿದನ್ನು ನಿಶ್ಚಯಿಸುವದು ಬಲುಕಷ್ಟವಾಗಿರುತ್ತದೆ. ಸಾಲದಕಡಿಮೆಗೆ ಮಠಗಳ ಅಧಿಪತಿಗಳೂ ಈ ಶೋಧನಕಾರ್ಯಕ್ಕೆ ಸಾಕಾದಷ್ಟು ಸಹಾಯವನ್ನು ನೀಡುತ್ತಿಲ್ಲವಾಗಿ ನಮಗೆ ಬೇಕಾದ ವಿಷಯಗಳೆಲ್ಲ ಸಿಕ್ಕುವಹಾಗಿಲ್ಲ. ಮಠಗಳ ಅನುಯಾಯಿಗಳಿಂದ ಪರಸ್ಪರಸ್ಪರ್ಧೆಯಿಂದ ಪ್ರಸಿದ್ಧವಾಗಿರುವ ವಾಙ್ಮಯಕ್ಕೇನೂ ಕಡಿಮೆಯಿಲ್ಲ. ಈ ಕಾರಣದಿಂದಲೂ ಮಠಗಳ ವಿಷಯವನ್ನು ನಿಶ್ಚಿತರೀತಿಯಿಂದ ತಿಳಿಸುವದು ಆಗುವಂತಿಲ್ಲ. ಈ ಕಾರಣಗಳಿಂದ ನಾವು ಮಠಗಳ ವಿವರವನ್ನು ಹೆಚ್ಚಾಗಿ ಕೊಡದೆ ಆಚಾರ್ಯರ ಚರಿತ್ರೆಗೆ ಸಂಬಂಧಪಟ್ಟಂತೆ ಓದುಗರು ಆವಶ್ಯವಾಗಿ ತಿಳಿದಿರಬೇಕಾದಷ್ಟು ವಿಷಯಗಳನ್ನು ಅತಿಸಂಕ್ಷೇಪವಾಗಿ ಕೊಡುವೆವು.

ಮಠಾಮ್ನಾಯಗಳು

೧೭೮. ಆಚಾರ್ಯರು ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಠಗಳನ್ನು ಸ್ಥಾಪಿಸಿ ಅವುಗಳಲ್ಲಿ ತಮ್ಮ ನಾಲ್ವರು ಶಿಷ್ಯರನ್ನು ಮಠಾಧಿಪತಿಗಳನ್ನಾಗಿ ನಿಯಮಿಸಿದರೆಂದೂ ಮಠಾಮ್ನಾಯವೆಂಬ ಗ್ರಂಥವನ್ನು ಬರೆದು ಅವರ ಆಚಾರ ವಿಚಾರಗಳ ನಿಯಮಗಳನ್ನೂ ಕ್ಷೇತ್ರವನ್ನೂ ಗೊತ್ತುಪಡಿಸಿಕೊಟ್ಟರೆಂದೂ ಪ್ರಸಿದ್ಧಿಯಿದೆ. ಆದರೆ ನಷ್ಟ ದೌರ್ಭಾಗ್ಯದಿಂದ ಮಠಾಮ್ನಾಯವೆಂಬ ಹೆಸರಿನ ಅನೇಕ ಗ್ರಂಥಗಳಿವೆ ; ಅವುಗಳ ಪಾಠವೂ ಭಿನ್ನಭಿನ್ನವಾಗಿರುವದರಿಂದ ಆಚಾರ್ಯರು ಆ ಹೆಸರಿನ ಗ್ರಂಥಗಳನ್ನು ಬರೆದರೊ ಇಲ್ಲವೊ, ಅವರೇ ಈ ಮಠಗಳ ಕ್ಷೇತ್ರಾದಿಗಳ ನಿರ್ಣಯವನ್ನು ಮಾಡಿದರೊ ಇಲ್ಲವೊ ?–ನಿಷ್ಕೃಷ್ಟವಾಗಿ ಹೇಳುವದಕ್ಕೆ ಬರುವದಿಲ್ಲ. ಉದಾಹರಣಾರ್ಥವಾಗಿ ನಮಗೆ ಸಿಕ್ಕಿರುವ ಮಠಾಮ್ನಾಯಗಳು ಕೆಲವನ್ನು (ಕನೆಯ) ಪರಿಶಿಷ್ಟದಲ್ಲಿ ಕೊಟ್ಟಿರುವೆವು. ಅವುಗಳನ್ನು ನೋಡಿದರೆ ಈ ಪ್ರಶ್ನೆಯು ಎಷ್ಟರಮಟ್ಟಿಗೆ ಬಿಡಿಸಲಾರದ ಕಗ್ಗಂಟಾಗಿದೆ ಎಂಬುದು ಪಾಠಕರಿಗೆ ಮನದಟ್ಟಾಗುವದರಲ್ಲಿ ಸಂಶಯವಿಲ್ಲ.

ಮಠಾಮ್ನಾಯಗಳ ಸ್ಥಿತಿ

೧೭೯. ನಾವು ಕೊಟ್ಟಿರುವ ಉದಾಹರಣೆಗಳಿಂದ ಮಠಾಮ್ನಾಯಗಳೆಂಬಿವು ಆಯಾ ಮಠದವರು ಬೇರೆಬೇರೆಯ ಕಾಲಗಳಲ್ಲಿ ತಮ್ಮ ತಮ್ಮ ಸಂಪ್ರದಾಯಕ್ಕೆ ಅನುಗುಣವಾಗಿ ಬರೆಯಿಸಿಕೊಂಡಿರುವ ಗ್ರಂಥಗಳೇ ಎಂದು ಕಲ್ಪಿಸುವದಕ್ಕೆ ಅವಕಾಶವಿದೆ. ಅವು ಆಚಾರ್ಯಕೃತವೆಂದು ಹೇಳುವದಕ್ಕೆ ಬರುವಂತೆಯೇ ಇಲ್ಲ. ಆಚಾರ್ಯರು ಈ ಮಠಗಳನ್ನು ಸ್ಥಾಪಿಸಿ ಮಠಾಧಿಪತಿಗಳಿಗೆ 'ಮಹಾನು ಶಾಸನ'ವೊಂದನ್ನು ಅನುಗ್ರಹಿಸಿದರೆಂದು ಜನರಲ್ಲಿ ಪ್ರತೀತಿಯಿದೆ. ಈ ಮಹಾನುಶಾಸನವನ್ನೊಳಗೊಂಡ ಮಠಾಮ್ನಾಯಸೇತುವೆಂಬ ಗ್ರಂಥವೊಂದನ್ನು (ಶಕೆ ೧೮೧೮ರಲ್ಲಿ) ಮದ್ರಾಸ್ ಕಲಾರತ್ನಾಕರ ಮುದ್ರಾಕ್ಷರಶಾಲೆಯಲ್ಲಿ ಅಚ್ಚುಮಾಡಿಸಿ ಕಾಂಚೀಮಠದ ಏಜಂಟರು 'ಕುಪ್ಪುಸ್ವಾಮಯ್ಯರ್'ರೆಂಬವರು ಪ್ರಚುರಪಡಿಸಿರುತ್ತಾರೆ. ಅದನ್ನು (೯ನೆಯ) ಪರಿಶಿಷ್ಟದಲ್ಲಿ ಹಾಕಿರುತ್ತೇವೆ. ಅದನ್ನು ಬಲದೇವ ಉಪಾಧ್ಯಾಯರು ಮಹಾನುಶಾಸನವೆಂಬ ಹೆಸರಿನಿಂದ ತಮ್ಮ ಗ್ರಂಥದಲ್ಲಿ (ಪು. ೨೦೯) ಹಾಕಿರುತ್ತಾರೆ. ನವಭಾರತೀಕಾರ್ಯಾಲಯದಲ್ಲಿ (1957) 'ಮಠಾಮ್ನಾಯ ತಥಾ ಮಹಾನುಶಾಸನ' ಎಂಬ ಹೆಸರಿನಿಂದ ಅದೇ ಪ್ರಕಟಿತವಾಗಿದೆ. ಇವೆರಡಕ್ಕೂ ಮೂಲವಾಗಿರುವ ಸೇತು ವಿಗೂ ಇವೆರಡರ ಪಾಠಕ್ಕೂ ಇರುವ ತಾರತಮ್ಯವನ್ನು ವಾಚಕರು ನೋಡಿದರೆ ಮಹಾನುಶಾಸನವೂ ಸರ್ವಸಾಮಾನ್ಯವಾಗಿರದೆ ಪಾಠಾಂತರಗಳಿಗೆಡೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಆ ಸೇತುವನ್ನೂ (೯ನೆಯ) ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ.

ಬಲದೇವ ಉಪಾಧ್ಯಾಯರು (ಬಲ.ಶಂ.ಪು. ೧೭೬) ಉದಾಹರಿಸಿರುವ ಮಠಾಮ್ನಾಯವೊಂದರ ಭಾಗವನ್ನು ಆ ಪರಿಶಿಷ್ಟದಲ್ಲಿ ಹಾಕಿರುತ್ತೇವೆ. ಅದರಲ್ಲಿ ಪದ್ಮಪಾದರನ್ನು 'ಮಾಧವನ ಮಗ'ನೆಂದು ಹೇಳಿರುವದನ್ನು ಲಕ್ಷಿಸಬೇಕು. ಹಿಂದೆ ಹೇಳಿದ ಪದ್ಮಪಾದರ ವರ್ಣನೆಗೆ (ಪು. ೧೦೧) ಅದನ್ನು ಹೋಲಿಸ ಬೇಕಾಗಿದೆ. ಪದ್ಮಪಾದರನ್ನು ಶೃಂಗೇರಿಗೆ ಕೆಲವರು, ದ್ವಾರಕೆಗೆ ಕೆಲವರು, ಗೋವರ್ಧನಕ್ಕೆ ಕೆಲವರು–ಹೀಗೆ ಸ್ಥಲಾಂತರಗೊಳಿಸಿರುವದರಲ್ಲಿ ಏನೋ ರಹಸ್ಯ ವಡಗಿರಬೇಕು. ಬಲದೇವ ಉಪಾಧ್ಯಾಯರು ದ್ವಾರಕೆಗೆ ಹಸ್ತಾಮಲಕರನ್ನು ಹಾಕಿರುತ್ತಾರೆ. ಅವರಿಗೆ ದ್ವಾರಕೆಯ ಶಾರದಾಪೀಠಪರಂಪರೆಯನ್ನು ರಾಜ ರಾಜೇಶ್ವರಾಶ್ರಮರೆಂಬವರು ಒದಗಿಸಿಕೊಟ್ಟಂತೆ ಕಾಣುತ್ತದೆ. ಆದ್ದರಿಂದಲೇ ಅವರು ಹೊಸದಾಗಿ ಸರಕಾರದವರಿಂದ ನಿಯಮಿತವಾದ ಸ್ವಾಮಿಗಳು ನಿಜವಾದ ಅಧಿಪತಿಗಳಲ್ಲವೆಂಬ ಧ್ವನಿ ಬರುವಹಾಗೆ (ಪು. ೧೭೭) ಬರೆದಿರುತ್ತಾರೆ. ಆದರೂ ಅವರು ಆ ಪೀಠದ ಪ್ರಥಮಾಧಿಪತಿಗಳು ಸುರೇಶ್ವರಾಚಾರ್ಯರೆಂದು ಅಲ್ಲಿ

ಬರೆದುಬಿಟ್ಟಿದಾರೆ. ಇದರ ಗುಟ್ಟೇನೊ ಅವರಿಗೇ ಗೊತ್ತು ! ಪದ್ಮಪಾದರು ಯಾವ ಮಠಕ್ಕಾದರೂ ನಿಜವಾಗಿ ಅಧಿಪತಿಗಳಾಗಿದ್ದರೆ ? –ಎಂಬುದನ್ನು ಶೋಧಕರು ಇನ್ನಷ್ಟು ಬಿಡಿಸಿ ನೋಡಬೇಕಾಗಿದೆ. ಇದು ಹೇಗೇ ಇರಲಿ, ಮಠಾಮ್ನಾಯಗಳ ಈಗಿನ ಅವ್ಯವಸ್ಥಿತಸ್ಥಿತಿಯಲ್ಲಿ ಅವುಗಳಿಗೆ ಏಕವಾಕ್ಯತೆಯನ್ನು ಕಲ್ಪಿಸುವದು ಕಪ್ಪೆಗಳನ್ನು ತಕ್ಕಡಿಯಲ್ಲಿಟ್ಟು ತೂಗುವ ಪ್ರಯತ್ನವೇ ಸರಿ ಎಂದು ನಮಗೆನಿಸಿದೆ.

ಶೃಂಗೇರೀಮಠದ ಗುರುಪರಂಪರೆ

೧೬೦. ಮಠಗಳು ನಾಲ್ಕೇ ಎಂದು ಬಹಳ ಆಮ್ನಾಯಗಳೂ, ಐದೆಂದು ಕಾಂಚೀಸಂಪ್ರದಾಯದ ಸೇತುವೂ, ಹೇಳುತ್ತಿದ್ದರೂ ಜನರಿಗೆ ಅಷ್ಟಾಗಿ ತಿಳಿಯದ ಹೆಸರಿನ ಹಲವು ಮಠಗಳೂ ಇವೆ. ಈಗ್ಗೆ ಹೆಚ್ಚಾಗಿ ಜನರಿಗೆ ಗ್ರಂಥಗಳ ಮೂಲಕ ಪರಿಚಿತವಾಗಿರುವ ಶೃಂಗೇರಿ, ಕಾಂಚಿ– ಇವುಗಳ ವಿಷಯವನ್ನು ಪ್ರಧಾನವಾಗಿ ಉಲ್ಲೇಖಿಸಿ ಮಿಕ್ಕವುಗಳ ವಿಚಾರವನ್ನು ಬಳಿಕ ಕೈಕೊಳ್ಳುವೆವು.

ಆಚಾರ್ಯರ ಚರಿತ್ರೆಗೆ ಮಠಗಳ ಗುರುಪರಂಪರೆಯೇನೂ ಅಷ್ಟು ಪ್ರಧಾನವಲ್ಲ. ಆದರೂ ಮಠಗಳಲ್ಲಿ ಇತಿಹಾಸಪ್ರಸಿದ್ಧರಾದ ಅದ್ವೈತಾಚಾರ್ಯರು ಯಾರಾದರೂ ಆ ಮಠಗಳಲ್ಲಿದ್ದರೆ ಅಷ್ಟನ್ನು ಸ್ವಲ್ಪನುಟ್ಟಿಗಾದರೂ ನಾವು ಮನದಂದುಕೊಳ್ಳುವದು ಅವಶ್ಯ. ಈ ಕೆಲಸವೂ ಅಷ್ಟು ಸುಲಭವಲ್ಲ. ಉದಾಹರಣೆಗೆ ಶೃಂಗೇರೀಮಠದ ಪರಂಪರೆಯ ಪಟ್ಟಗಳು ನಾಲ್ಕು ಇವೆ ಎಂದು ಬೋಡಸ್[1] (ಪ್ರ. ೯೧) ಬರೆದಿರುತ್ತಾರೆ. ಆ ಗುರುಪರಂಪರೆಯ ವಿಸ್ತಾರವಾದ ಇತಿಹಾಸವು ಸದ್ಯಕ್ಕೆ ಕೆ. ಆರ್. ವೆಂಕಟರಾಮನ್ನಯ್ಯರವರ 'The Throne of Transcendental Wisdom' ಎಂಬ ಇಂಗ್ಲಿಷು ಪುಸ್ತಕದಲ್ಲಿದೆಯಾದ್ದರಿಂದ ಅವರು ಅನುಸರಿಸಿದ ಕ್ರಮವನ್ನೇ ನಾವು ಹಿಂಬಾಲಿಸುವೆವು.

ಈ ಪರಂಪರೆಯಲ್ಲಿ ಮೊದಲಿನ ಹನ್ನೆರಡು ಗುರುಗಳೊಳಗೆ ಶುಕರವರೆಗಿನವರು ಋಷಿಗಳ ಗುಂಪಿನಲ್ಲಿ ಸೇರಿರುತ್ತಾರೆ; ಆಚಾರ್ಯರ ಇತಿಹಾಸವನ್ನು ವಿವೇಚಿಸುವದಕ್ಕೆಂದೇ ಈ ಗ್ರಂಥವು ಹೊರಟಿರುವದರಿಂದ ಅಪರುಗಳನ್ನು ಇಲ್ಲಿ ಕೈಬಿಡಬಹುದು. ಸುರೇಶ್ವರರನ್ನು ಶೃಂಗೇರಿಯವರು, ಕಾಂಚೀಪರಂಪರೆಯವರು, ದ್ವಾರಕಾಪೀಠದವರು –ಎಲ್ಲರೂ ತಮ್ಮತಮ್ಮ ಪೀಠದಲ್ಲಿದ್ದರೆಂದು ಹೇಳಿಕೊಳ್ಳುತ್ತಿರುವದರಿಂದ ಅವರದೂ ಲೆಕ್ಕಕ್ಕೆ ಬರುವಂತಿಲ್ಲ. ಶೃಂಗೇರಿಯವರು ಹೇಳುತ್ತಿರುವಂತೆ ಅವರು ಎಂಟುನೂರು ವರ್ಷಗಳವರೆಗೂ ಪೀಠಾಧಿಪರಾಗಿದ್ದರೆಂಬುದನ್ನು ಈಗಿನವರು ನಂಬುವಂತಿಲ್ಲವಾದ್ದರಿಂದ ಅವರನ್ನೂ ಬಿಟ್ಟುಬಿಡಬಹುದು. ಗುರುಗಳ

---

1. ಬೋಡಸ್‌ರವರು ಕೊಟ್ಟಿರುವ ಪಟ್ಟಗಳನ್ನು ೯ನೆಯ ಪರಿಶಿಷ್ಟದಲ್ಲಿ ಕಾಣಬಹುದು.

ಕಾಲಕ್ರಮವನ್ನು ವೆಂಕಟರಾಮನ್‌ರವರು ಕೊಟ್ಟಿರುತ್ತಾರಾದರೂ ನಿತ್ಯಬೋಧ ಘನಾಚಾರ್ಯರನ್ನು ಹಿಡಿದು ನೃಸಿಂಹತೀರ್ಥರವರೆಗಿನವರಿಗೆ ಅವರೂ ಕಾಲವನ್ನು ಕೊಟ್ಟಿಲ್ಲ.

ಬೋಡಸ್ ಮುಂತಾದವರು ಕಾಲವನ್ನು ಕೊಟ್ಟಿರುತ್ತಾರಾದರೂ ಅದರ ವಿವರಣೆಯು ವಾಚಕರಿಗೆ ಅಷ್ಟು ಬೇಕಾಗಿರಲಾರದೆಂದು ಇಲ್ಲಿ ನಾವು ಆ ಕಾಲದ ವಿಚಾರವನ್ನೇ ಬಿಟ್ಟುಬಿಟ್ಟಿರುತ್ತೇವೆ. ಚರ್ಚೆಗೆ ವಿಷಯವಾದ ಸಂದರ್ಭದಲ್ಲಿ ಮಾತ್ರವೇ ಕಾಲಮಾನವನ್ನು ಲೆಕ್ಕಕ್ಕೆ ಹಿಡಿದಿರುತ್ತೇವೆ. ಇದೇ ಕಾರಣದಿಂದ ನಾವು ಎಲ್ಲಾ ಪೀಠಾಧಿಪರ ಹೆಸರುಗಳನ್ನೂ ಇಲ್ಲಿ ಕೊಟ್ಟಿಲ್ಲ

ಶೃಂಗೇರೀಪೀಠದ ಕೆಲವು ಮುಖ್ಯಗುರುಗಳ ಹೆಸರುಗಳು

೧೪೧. (೩) ನಿತ್ಯಬೋಧಘನಾಚಾರ್ಯ. ಸುರೇಶ್ವರರ ತರುವಾಯ ಬಂದಿರುವ ಹೆಸರು ಇವರದಾದ್ದರಿಂದ ಇವರನ್ನು ಕೆಲವರು ಸಂಕ್ಷೇಪಶಾರೀರಕವನ್ನು ಬರೆದ ಸರ್ವಜ್ಞಾತ್ಮಮುನಿಗಳೆಂದು ಕಲ್ಪಿಸಿರುತ್ತಾರೆ. ಸರ್ವಜ್ಞಾತ್ಮರ ಗುರುಗಳು ಸುರೇಶ್ವರರಲ್ಲವೆಂದು ಈಗ ಗೊತ್ತಾಗಿದೆ.

(೪) ಜ್ಞಾನಘನ. ಇವರು 'ತತ್ತ್ವಶುದ್ಧಿ' ಎಂಬ ಗ್ರಂಥವನ್ನು ಬರೆದಿದಾರಂತೆ.

(೫) ಜ್ಞಾನೋತ್ತಮಶಿವಾಚಾರ್ಯ. ಇವರ ಶಿಷ್ಯರು ಸುಪ್ರಸಿದ್ಧರಾದ 'ತತ್ತ್ವದೀಪಿಕಾ'ಕರ್ತರಾದ ಚಿತ್ಸುಖರ ಗುರುಗಳು. ನೈಷ್ಕರ್ಮ್ಯಸಿದ್ಧಿ, ಇಷ್ಟಸಿದ್ಧಿ-ಗಳಿಗೆ ವ್ಯಾಖ್ಯಾನವನ್ನು ಬರೆದವರು ಇವರಲ್ಲವೆಂದು ವಿದ್ವಾಂಸರು ನಿಶ್ಚಯಿಸಿರುತ್ತಾರೆ. ಶಾರದಮ್ಮನವರ ಹಳೆಯ ದೇವಸ್ಥಾನಕ್ಕೂ ತುಂಗಾನದಿಗೂ ನಡುವೆ ಕೆಲವು ಸಮಾಧಿಗಳು ಅಥವಾ ಕಲ್ಲಾಮಂಟಪಗಳು ಇರುತ್ತವೆ. ವಿಶೇಷದಿನಗಳಲ್ಲಿ ಮಠದ ಆಚಾರ್ಯರುಗಳು– ಈ ಪವಿತ್ರಸ್ಥಾನಗಳಿಗೆ ಹೋಗಿ ಪೂಜಾದಿಗಳನ್ನು ಮಾಡುವ ಪದ್ಧತಿಯುಂಟಂತೆ; ಆದರೆ ಜ್ಞಾನೋತ್ತಮರ ಸಮಾಧಿಯನ್ನು ಹೀಗೆ ಪೂಜಿಸುವ ವಾಡಿಕೆಯು ನಿಂತುಹೋಗಿದೆಯಂತೆ. ಅವರು ಗೌಡಸಾರಸ್ವತರೆಂಬುದೇ ಇದಕ್ಕೆ ಕಾರಣವೆಂದು ಜಿ. ಶ್ರೀನಿವಾಸಯ್ಯರ್‌ರವರು 'ಗೌಡೇಶ್ವರ ಜ್ಞಾನೋತ್ತಮಶಿವಾಚಾರ್ಯ' ಎಂಬ ಇಂಗ್ಲಿಷ್ ಪುಸ್ತಿಕೆಯಲ್ಲಿ (GGS P. 11) ಬರೆದಿರುತ್ತಾರೆ; ಗೌಡ, ಮಧ್ಯದೇಶ, ಕಾಶ್ಮೀರ, ಪಶ್ಚಿಮಭಾರತ–ಪ್ರಾಂತಗಳಿಂದ ಅನೇಕ ಬ್ರಾಹ್ಮಣರು ಬಂದು ದಕ್ಷಿಣದೇಶದಲ್ಲಿ ನಿಂತರು. ರಾಜರಾಜ, ರಾಜೇಂದ್ರಚೋಳ–ಎಂಬ ಅರಸರು ಅವರಿಗೆ ಭೂದಾನಮಾಡಿದ್ದರು. ಅವರಲ್ಲಿ ಕೆಲವರು ವೇದಾಂತಾನುಯಾಯಿಗಳಾದ ಶೈವಾಚಾರ್ಯರೂ ಇದ್ದರು– ಎಂದು ಕೆ. ಆರ್. ವೆಂಕಟರಾಮನ್ನರು (KRTTW p .24)

ಬರೆದಿದಾರೆ. ಇದು ನಿಜವಾದರೆ ಜಾನೋತ್ತಮಶಿವಾಚಾರ್ಯರ ಕಾಲದಿಂದಲೇ ಶೃಂಗೇರಿಯಲ್ಲಿ "ಲಿಂಗಪೂಜೆ"ಯು ಪ್ರಾರಂಭವಾಗಿರಬಹುದೆಂದು ಐತಿಹಾಸಿಕ ದೃಷ್ಟಿಯಿಂದ ಕಲ್ಪಿಸುವದಕ್ಕೆ ಅವಕಾಶವಿರುತ್ತದೆ.

(೬–೯) ಜ್ಞಾನಗಿರಿ, ಸಿಂಹಗಿರಿ, ಈಶ್ವರತೀರ್ಥ, ನೃ(ನರ?) ಸಿಂಹ ತೀರ್ಥ– ಮಧ್ವಾಚಾರ್ಯರನ್ನು ಜಯಿಸಿದವರು ವಾದಪ್ರಿಯರಾಗಿದ್ದ ಈ ನಾಲ್ವರಲ್ಲಿ ಕೊನೆಯವರೋ ಅವರ ಮುಂದಿನವರೋ ಆಗಿರಬೇಕೆಂದು ವೆಂಕಟ ರಾಮನ್ನರ ಕಲ್ಪನೆ (KRTTWp. 36). ಮಠಗಳು ಹಲವು ಈ ಕಾಲಕ್ಕೆ ಹುಟ್ಟಿದವಂತೆ ; ವೇದಾಂತದ ಅಭ್ಯಾಸಕ್ಕೆ ಪ್ರೋತಾಹವಾಯಿತು.

(೧೦) ವಿದ್ಯಾಶಂಕರ ಅಥವಾ ವಿದ್ಯಾತೀರ್ಥ. ಏಕಶಿಲನಗರ (ಓರಗಲ್ಲು) ದಿಂದ ಬಂದ ಬ್ರಾಹ್ಮಣಸಹೋದರರಿಬ್ಬರಿಗೆ ಇವರು ಸಂನ್ಯಾಸವನ್ನು ಕೊಟ್ಟು ಭಾರತೀಕೃಷ್ಣತೀರ್ಥ (ಭಾರತೀತೀರ್ಥ), ವಿದ್ಯಾರಣ್ಯ– ಎಂಬ ಯೋಗಪಟ್ಟ ಗಳನ್ನು ಕೊಟ್ಟರಂತೆ. ಭಾರತೀತೀರ್ಥರು ಸ್ವಾಮಿಗಳಾಗಿ ಶೃಂಗೇರಿಯಲ್ಲಿದ್ದಾಗ ವಿದ್ಯಾರಣ್ಯರು ಸಂಚಾರದಲ್ಲಿರುತ್ತಿದ್ದರಂತೆ. ಸಿಂಹಗಿರಿಯಲ್ಲಿರುವ ಚತುರ್ಮೂರ್ತಿ ವಿದ್ಯೇಶ್ವರವಿಗ್ರಹ[1]ವನ್ನು ನಿರ್ಮಾಣಮಾಡಿಸಿ ವಿದ್ಯಾಶಂಕರರು ನೆಲಮಾಳಿಗೆ ಯಲ್ಲಿ ಹನ್ನೆರಡು ವರ್ಷಗಳು ಯೋಗವನ್ನು ಮಾಡಿದಮೇಲೆ ತಮ್ಮ ಶರೀರವು ಈ ವಿಗ್ರಹದ ರೂಪವನ್ನು ತಳೆಯುವದು ಎಂದು ಭವಿಷ್ಯವನ್ನು ನುಡಿದಿದ್ದರಂತೆ. ಸೇವಕರು ಕುತೂಹಲದಿಂದ ಮೂರು ವರ್ಷಗಳಾದ ಬಳಿಕ ನೆಲಮಾಳಿಗೆಯ ಬಾಗಿಲು ತೆರೆದುನೋಡಲು ವಿಗ್ರಹದ ಮೇಲುಗಡೆಯ ಲಿಂಗವು ಮಾತ್ರ ಉಳಿದಿತ್ತು. ಭಾರತೀತೀರ್ಥರು ಲಿಂಗಪ್ರತಿಷ್ಠೆಮಾಡಿಸಿ ಅದರ ಮೇಲುಗಡೆ ಒಂದು ದೇವಾಲಯವನ್ನು ಕಟ್ಟಿಸಿದರು. ವಿದ್ಯಾಶಂಕರರ ಪ್ರಭಾವವು ಈಗಲೂ ಆ ಬಳಿ ಕಾಣಬರುತ್ತಿದೆ. ಇಂದಿಗೂ ಈ ಮಠದ ಮುದ್ರೆಯಲ್ಲಿ 'ಶ್ರೀವಿದ್ಯಾ ಶಂಕ'– ಎಂದೇ ಉಲ್ಲೇಖವಿರುತ್ತದೆ. ಈ ವಿದ್ಯಾತೀರ್ಥರು ಕಾಂಚೀಪೀಠ ದಲ್ಲಿಯೂ ಇದ್ದರು ಎಂದು ಕೆಲವರ ಮತ.

(೧೧–೧೨) ಭಾರತೀಕೃಷ್ಣತೀರ್ಥ, ವಿದ್ಯಾರಣ್ಯ. ವಿದ್ಯಾರಣ್ಯರು ಯಾರೆಂಬ ಬಗ್ಗೆ ವಿವಾದವಿದೆ :

---

1. ಮುಂಭಾಗದಲ್ಲಿ ಭಾರತೀತೀರ್ಥವಿದ್ಯಾರಣ್ಯರೊಡಗೂಡಿ ವಿದ್ಯಾತೀರ್ಥರು ಸಿದ್ಧಾಸನದಲ್ಲಿ ಉತ್ತರಾಭಿಮುಖವಾಗಿರುವಂತೆ ಪೂರ್ವಭಾಗದಲ್ಲಿ ಬ್ರಹ್ಮ, ದಕ್ಷಿಣದಲ್ಲಿ ವಿಷ್ಣು, ಪಶ್ಚಿಮದಲ್ಲಿ ಪಂಚಮುಖಶಿವ, ಮೇಲುಗಡೆ ಲಕ್ಷ್ಮೀನರಸಿಂಹ, ಅದರ ಮೇಲೆ ಲಿಂಗ– ಹೀಗೆ ವಿಗ್ರಹವಿದೆ. (ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀಸ್ವಾಮಿಗಳ ಚರಿತ್ರೆ– ಶ್ರೀಕಂಠಶಾಸ್ತ್ರಿಗಳು ಬರೆದದ್ದು.)

(a) ತಿಥಿದೀಪಿಕೆ, ಪ್ರಯೋಗಪಾರಿಜಾತ, ವೀರಮಿತ್ರೋದಯ, ವ್ಯಾಸ ಸೂತ್ರವೃತ್ತಿ, ಆಂಧ್ರಭಾಷಾವ್ಯಾಕರಣ (ಮಾಧವನ ಸೋದರಳಿಯ ಬರೆದದ್ದು), ಪ್ರಯೋಗರತ್ನಮಾಲಿಕೆ– ಈ ಗ್ರಂಥಗಳಲ್ಲಿರುವ ಪರಾಮರ್ಶೆಗಳಿಂದಲೂ 1386 ರಲ್ಲಿ ಬರೆದ ಒಂದು ತ್ರಾಮಶಾಸನದಲ್ಲಿ ವೇದಭಾಷ್ಯಪ್ರವರ್ತಕರಾದ ಮೂವರು ಪಂಡಿತರಿಗೆ ವಿದ್ಯಾರಣ್ಯರ ಸಮಕ್ಷದಲ್ಲಿ ಅಗ್ರಹಾರದಾನಮಾಡಿದಂತೆ ಇರುವದರಿಂದಲೂ ಮಾಧವನೇ ವಿದ್ಯಾರಣ್ಯ– ಎಂದು (ಬಲ. ಶಂ. ಪು. ೧೭೩ರಿಂದ ೧೭೪) ಬಲದೇವ ಉಪಾಧ್ಯಾಯರೆನ್ನುತ್ತಾರೆ.

ಶ್ರೀ॥ ಡಿ.ವಿ. ಗುಂಡಪ್ಪನವರು ಬರೆದಿರುವ 'ವಿದ್ಯಾರಣ್ಯಸಮಕಾಲೀನರು' ಎಂಬ ಗ್ರಂಥದಲ್ಲಿ 'ಸರ್ವದರ್ಶನಸಂಗ್ರಹ'ವನ್ನು ಬರೆದ ಮಾಧವನೇ ವಿದ್ಯಾರಣ್ಯರು' ಎಂಬುದನ್ನು, ಕೆಲವು ಯುಕ್ತಿಗಳನ್ನು ಕೊಟ್ಟು, ಪರಿಪೋಷಿಸಿದೆ.

(d) ಕೆ. ಆರ್. ವೆಂಕಟರಾಮನ್ನಯ್ಯರವರ ಅಭಿಪ್ರಾಯವೇನೆಂದರೆ (KRTTW pp. 33–37) ಆ ಕಾಲಕ್ಕೆ ಮಾಧವನೆಂಬ ಹೆಸರಿನವರು ಅನೇಕರಿದ್ದರು. (1) ಪೂಡರಸ ಒಡೆಯರ್ ಎಂಬ ಅಡ್ಡಹೆಸರಿನ ಮಾಧವ ಮಂತ್ರಿಯೊಬ್ಬ. ಅತನು ಸೂತಸಂಹಿತೆಗೆ ವ್ಯಾಖ್ಯಾನವನ್ನು ಬರೆದಿದಾನೆ. ಬುಕ್ಕನು ಈತನ ಮೂಲಕ ಶೃಂಗೇರಿಗೆ ದಾನಗಳನ್ನು ಮಾಡುತ್ತಿದ್ದನು. (2) ಮಾಧವ, ಸಾಯಣ, ಭೋಗನಾಥ– ಎಂಬೀ ಅಣ್ಣತಮ್ಮಂದಿರು ಶ್ರೀಮತೀ ಮಾಯಣರ ಮಕ್ಕಳು, ಈ ಸಾಯಣನ ಮಗನಾದ ಮಾಧವನು ಅಥವಾ ಮಾಯಣ್ಣನು ಸರ್ವದರ್ಶನಸಂಗ್ರಹಕರ್ತನು.[1] ಮಾಯಣ್ಣನ ಮಗ ಮಾಧವಾಚಾರ್ಯನು ಪರಾಶರಸ್ಮೃತಿವ್ಯಾಖ್ಯೆ, ವ್ಯವಹಾರಮಾಧವೀಯ, ಕಾಲಮಾಧವೀಯ, ಜೀವನ್ಮುಕ್ತಿವಿವೇಕ (?), ಜೈಮಿನೀಯ ನ್ಯಾಯಮಾಲಾ ವಿಸ್ತರ– ಇವುಗಳ ಕರ್ತನು. ಸಾಯಣನ ಕೃತಿಗಳು : ವೇದಭಾಷ್ಯ, ಧಾತು ವೃತ್ತಿ ಮುಂತಾದವು. ಮಾಧವನು ಕಾಂಡತ್ರಯದ ವಿಮಾಮಾಂಸಾಶಾಸ್ತ್ರಜ್ಞ, ಪ್ರತಿ ಪಸಂತಸೋಮಯಾಜಿ– ಎಂದು ತನ್ನನ್ನು ಹೇಳಿಕೊಂಡಿರುತ್ತಾನೆ; ಸಾಯಣನೂ ಅವನನ್ನು ಅನಂತಭೋಗಸಂಪನ್ನ, ಪುಹಾಯಜ್ಞಗಳನ್ನು ಮಾಡಿದವನು ಎಂದು ಹೊಗಳಿರುತ್ತಾನೆ. ಹದಿನಾಲ್ಕನೆಯ ಅಥವಾ ಮುಂದಿನ ಕೆಲವು ಶತಮಾನಗಳ ಯಾವ ಶಾಸನದಲ್ಲಿಯೂ ಮಾಧವವಿದ್ಯಾರಣ್ಯೈಕ್ಯವನ್ನು ಉಲ್ಲೇಖಿಸಿಲ್ಲ. ಆದ್ದರಿಂದ ಮಾಧವನು ಗೃಹಸ್ಥನಾಗಿಯೇ ಉಳಿದಿದ್ದನು.

1. 'ಸಾಯಣದುಗ್ಧಾಬ್ಧಿಕೌಸ್ತುಭ'ನೆಂದು ಗ್ರಂಥಕರ್ತನು ಹೇಳಿಕೊಂಡಿರುವದ್ದು ಸಾಯಣಕುಲಜನು– ಎಂಬರ್ಥದಲ್ಲಿ ಎಂದು ಶ್ರೀ॥ ಡಿ. ವಿ. ಗುಂಡಪ್ಪನವರ ವಾದ; ಆದರೆ ಕ್ಷೀರಾಬ್ಧಿಯಲ್ಲಿ ಕೌಸ್ತುಭವು ನೀರಾಗಿ ಹುಟ್ಟಿತು, ಪರಂಪರೆಯಿಂದಲ್ಲ. ಆದ್ದರಿಂದ ಅವನು ಸಾಯಣನ ಮಗನೇ ಎಂಬವರಿಗೆ ಅಲ್ಲಿ ಆಧಾರವಿರುವಂತೆ ತೋರುತ್ತದೆ.

ಮಾಧವವಿದ್ಯಾರಣ್ಯೈಕ್ಯವನ್ನು ಒಪ್ಪಿರುವ ಶೋಧಕರು 1370ರಲ್ಲಿ ಅಥವಾ 1377ರಲ್ಲಿ ಭಾರತೀತೀರ್ಥರ ವಿದೇಹಮುಕ್ತಿಯು (1380) ಮುಂಚೆ ಸಂನ್ಯಾಸ ಸ್ವೀಕಾರವೆಂದು ಒಪ್ಪಿರುತ್ತಾರೆ. ಶಾಸನಗಳನ್ನು ನೋಡಿದರೆ, ಹರಿಹರ, ಬುಕ್ಕ, ಹರಿಹರ (ದ್ವಿತೀಯ)– ಈ ಮೂವರೂ ವಿದ್ಯಾರಣ್ಯರನ್ನು ಸಂನ್ಯಾಸಿಗಳೆಂದೇ ಎಣಿಸಿದ್ದರೆಂದು ಗೊತ್ತಾಗುತ್ತದೆ. ಫೆರಿಷ್ಟ, ಬುಕಾನನ್–ಮೊದಲಾದವರು ಹರಿಹರ ಬುಕ್ಕರು ಒಬ್ಬ ಸಂನ್ಯಾಸಿಯ ಪ್ರಭಾವಕ್ಕೊಳಗಾಗಿದ್ದರೆಂದೇ ಹೇಳಿರುತ್ತಾರೆ. ಶ್ರೀ ವಿದ್ಯಾರಣ್ಯರು ವೇದಭಾಷ್ಯ, ಧಾತುವೃತ್ತಿ–ಮುಂತಾದವುಗಳನ್ನು ಮಾಧವಸಾಯಣರಿಗೆ ಕೊಟ್ಟು ಇವನ್ನು ಪರಿಪೂರ್ತಿಗೊಳಿಸಿ ನಿಮ್ಮ ಹೆಸರಿನಲ್ಲಿ ಪ್ರಕಟಿಸಿಕೊಳ್ಳಿರಿ– ಎಂದು ಅಪ್ಪಣೆಕೊಡಿಸಿದರೆಂಬ ಗುರುವಂಶಕಾವ್ಯವಚನವೇ ಇಲ್ಲಿ ಯುಕ್ತಿಯುಕ್ತವೆಂದು ಹೇಳಬೇಕು.

ಈ ವಾದವು ಇನ್ನಷ್ಟು ವಿಚಾರಣೀಯವಾಗಿದೆ ಎನ್ನುವದಕ್ಕೆ ಸಂಶಯವಿಲ್ಲ. ಭಾರತೀತೀರ್ಥರೂ ವಿದ್ಯಾರಣ್ಯರೂ ಬರೆದಿರುವ ನ್ಯೈಯಾಸಿಕನ್ಯಾಯಮಾಲಾ, ಪಂಚದಶಿ– ಮುಂತಾದ ಗ್ರಂಥಗಳು ಅತ್ಯಂತಪ್ರಸಿದ್ಧವಾಗಿದ್ದರೂ ಅವರ ವ್ಯಕ್ತಿಗತ ವಿಚಾರಗಳು ಇಷ್ಟು ಸಂಶಯಾಸ್ಪದವಾಗಿರುವದು ಯುಕ್ತವಲ್ಲ. ಭಾರತೀತೀರ್ಥರು ನೂರಿಪ್ಪತ್ತುಜನ ವಿದ್ವಾಂಸರಿಗೆ ವೃತ್ತಿಗಳನ್ನು ಹಂಚಿಕೊಟ್ಟರಂತೆ.[1] ಹರಿಹರನೇ ಮುಂತಾದ ರಾಜರುಗಳು ಕೊಟ್ಟ ಪ್ರೋತ್ಸಾಹದಿಂದ ಶೃಂಗೇರಿಯ ಪೀಠವು ಸಂಸ್ಥಾನವಾಗಿ ಬೆಳೆಯಿತು ಇವುಗಳ ವಿವರವನ್ನು ವೆಂಕಟರಾಮನ್ ಅವರು ಕೊಟ್ಟಿರುವದನ್ನು (pp. 45–48) ಇಂಗ್ಲಿಷುಬಲ್ಲವರು ಅವಶ್ಯವಾಗಿ ಓದಬೇಕು.

ವಿಜಯನಗರದ ರಾಜ್ಯವು ವಿದ್ಯಾರಣ್ಯರ ಆಶೀರ್ವಾದದಿಂದಲೇ ಸ್ಥಾಪಿತವಾಗಿ ಬೆಳೆಯಿತು. ಅವರ ಅನುಜ್ಞೆಯಿಂದ ತುಂಗಭದ್ರಾತೀರದಲ್ಲಿ ಅನೆಗೊಂದಿಗೆ ಅಭಿಮುಖವಾಗಿ ವಿದ್ಯಾನಗರವೆಂಬ ಪಟ್ಟಣವನ್ನು ಅವರ ಹೆಸರಿನಲ್ಲಿ ಹರಿಹರಬುಕ್ಕರು ಸ್ಥಾಪಿಸಿದರು. ಶಾ. 1238 (ಧಾತು ವೈಶಾಖ ಶುಕ್ಲದಲ್ಲು, 18-4-1336) ಶ್ರೀಚಕ್ರಪ ಆಕಾರದಲ್ಲಿ ಆ ನಗರವು ಸ್ಥಾಪಿತವಾಯಿತಂತೆ. ಅದಕ್ಕೆ ವಿಜಯನಗರವೆಂಬುದು ಈಚೆಗೆ ಬಂದ ಹೆಸರು. ಚಕ್ರವರ್ತಿಗೆ ವಿಜಯದ ಮೇಲೆ ವಿಜಯವು ದೊರೆತದ್ದರ ಸ್ಮಾರಕವಾಗಿ ತಮ್ಮ ರಾಜಚಿಹ್ನೆಗಳನ್ನೆಲ್ಲ

1. ಬುಕ್ಕರಾಯನು ಕೊಟ್ಟ ದಾನವನ್ನು ಅವರು ಈ ಕಾರ್ಯಕ್ಕೆ ಉಪಯೋಗಿಸಿಕೊಂಡರು. ರಾಯನು 'ವಿದ್ಯಾಶಂಕರ ತೀರ್ಥಶ್ರೀಪಾದರುಗಳ ದರ್ಶನ' ಮಾಡಿದನೆಂಬ ಶಾಸನವನ್ನು ಕೆಲವರು ಸಾಕ್ಷ್ಯತ್ತಾಗಿ ಅವರನ್ನೇ ಕಂಡನೆಂದು ತಪ್ಪಾಗಿ ಅರ್ಥಮಾಡಿಕೊಂಡಿರುತ್ತಾರೆ. ನಿಜವಾಗಿ ಅವನಿಗೆ ಆದದ್ದು ವಿದ್ಯಾಶಂಕರಲಿಂಗದರ್ಶನ (KRTTW p. 43).

ವಿದ್ಯಾರಣ್ಯರಿಗೆ[1] ಅರ್ಪಿಸಿದನು; ಅಲ್ಲಿಂದ ಮುಂದಕ್ಕೆ ಶೃಂಗೇರೀ ಜಗದ್ಗುರು ಗಳಿಗೆ 'ಕರ್ಣಾಟಕಸಿಂಹಾಸನ ಸ್ಥಾಪನಾಚಾರ್ಯ' ಎಂಬ ಬಿರುದು ಬಂದಿತು. ವಿದ್ಯಾಶಂಕರ– ಭಾರತೀತೀರ್ಥ– ವಿದ್ಯಾರಣ್ಯರ ಕಾಲದಲ್ಲಿ ಶಾರದಾಪೀಠವು ಅತ್ಯುನ್ನತಿಯನ್ನು ಪಡೆದ ಸಂಸ್ಥಾನವಾಯಿತು (KRTTW p. 32).

ಶೃಂಗೇರಿಯ ಪೀಠಕ್ಕೆ ವಿಜಯನಗರದ ರಾಜ್ಯವು ನಾಶವಾದ ಬಳಿಕವೂ ಕೆಳದಿ ಅರಸರು, ಮುಸಲ್ಮಾನ ನವಾಬರು, ಮಹಾರಾಷ್ಟ್ರದ ಅಧಿಕಾರಿಗಳು, ಮೈಸೂರು ರಾಜರುಗಳು ಎಲ್ಲರೂ ಸಮಾನವಾಗಿ ಗೌರವವನ್ನು ತೋರಿಸುತ್ತಾ ಬಂದಿರುತ್ತಾರೆ. ರಾಜಕೀಯಕಾರಣಗಳಿಂದ ಮಠವನ್ನು ಮುಸಲಮಾನರೇ ಅಲ್ಲದೆ ಮಹಾರಾಷ್ಟ್ರದ ಪೇಷ್ವೆಗಳ ಕಡೆಯವರೂ ಮುತ್ತಿ ನಷ್ಟವನ್ನು ಮಾಡಿದ ರಾದರೂ ಒಟ್ಟಿನಲ್ಲಿ ಈ ಪೀಠಕ್ಕೆ ಭರತಖಂಡದ ಎಲ್ಲಾ ರಾಜ್ಯಗಳಿಂದಲೂ ಮಾನ್ಯತೆ ದೊರೆಯುತ್ತಾಬಂದಿದೆ ಎನ್ನಬಹುದು. ಈ ವಿವರವನ್ನು ಕೆ. ಆರ್. ವೆಂಕಟರಾಮನ್ನರವರ ಗ್ರಂಥದಿಂದ ವಿಸ್ತಾರವಾಗಿ ತಿಳಿಯಬಹುದು. ಈ ವೃತ್ತಾಂತದ ಸಾರವನ್ನು ಇಲ್ಲಿ ಅತಿಸಂಕ್ಷಿಪ್ತವಾಗಿ ಕೊಟ್ಟಿರುತ್ತದೆ.

ಈ ಗುರುಪರಂಪರೆಯಲ್ಲಿ ೧೬ನೆಯವರಾದ ಶ್ರೀಶಂಕರಾನಂದಭಾರತಿ ಗಳ ಶಿಷ್ಯರುಗಳಲ್ಲೊಬ್ಬನಾದ ಮಾಧವಭಾರತಿ ಎಂಬುವರು ಗೋಕರ್ಣದಲ್ಲಿ ಒಂದು ಮಠವನ್ನು ಸ್ಥಾಪಿಸಿದರೆಂದು ಕೆ. ಆರ್ ವೆಂಕಟರಾಮನ್‌ರವರು (KRTTW p. 52) ಬರೆದಿರುತ್ತಾರೆ. ಆದರೆ ಈ ವಿಷಯವು ವಾದಗ್ರಸ್ತ ವೆಂದು ತೋರುತ್ತದೆ. ಆ ವಿಚಾರವನ್ನು ಪರಿಶಿಷ್ಟ (೯)ದಲ್ಲಿ ಪ್ರಸ್ತಾಪಿಸುವೆವು. ಈ ಶಂಕರಾನಂದರ ಶಿಷ್ಯರುಗಳಿಗೆ ಬೇರೆಬೇರೆಯು ಮಾನ್ಯಗಳು ಲಭಿಸಿರುವದಾಗಿ ತಿಳಿಯಬರುತ್ತದೆ. ಕ್ರಿ. ಶ. 1 99ರೊಳಗೆ ಶೃಂಗೇರಿಸಂಸ್ಥಾನವು ವಿಸ್ತೃತವಾಗಿ ಪೀಠಾಧಿಪತಿಗಳು ಅನೇಕ ಬಿರುದುಬಾವಲಿಗಳನ್ನು ರಾಜರುಗಳಿಂದ ಪಡೆದು ಕೊಂಡಿದ್ದರು. ಅನೇಕ ಉಪಮಠಗಳನ್ನು ಸ್ಥಾಪಿಸಿದ್ದರು. ಶ್ರೀ ಅಭಿನವ ನೃಸಿಂಹಭಾರತೀಸ್ವಾಮಿಗಳ ಕಾಲದಲ್ಲಿ ಶಿವಗಂಗೆಯ ಮಠವು ಸ್ಥಾಪಿತ ವಾಯಿತು. ಆವನೀಮಠವೂ (?) ಇವರ ಕಾಲದಲ್ಲಿಯೇ ಸ್ಥಾಪಿತವಾಗಿರ

---

1. ಶಂಕರವಿಜಯವನ್ನು ಬರೆದಾತನೇ ವಿದ್ಯಾರಣ್ಯರೆಂಬ ಹೆಸರಿನಿಂದ ಸಂನ್ಯಾಸಿ ಯಾಗಿ ಪ್ರಸಿದ್ಧನಾದನೆಂಬ ಮಠದಲ್ಲಿ ಕೆಲವರು ತೋರಿಸುವ ದೋಷಗಳನ್ನು ಹಿಂದೆ(ಪು.೪) ನಾವು ಸಂಗ್ರಹಿಸಿಕೊಟ್ಟಿರುತ್ತೇವೆ. ನವಕಾಳಿದಾಸನೆಂಬ ಬಿರುದನ್ನು ಪಡೆದಿದ್ದ ಭಾಗವತ ಚಂಪೂಕಾರನೇ ಈ ಮಾಧವನೆಂದು ಅನೇಕರ ಮತವಿದೆ. ಆದರೆ ಅಭಿನವಪದಪೂರ್ವಃ ಕಾಳಿದಾಸಃ, ಪ್ರಗಲ್ಭಸ್ತ್ರಿನಯನದಯಿತಾಯಾಃ ಪ್ರೇಮಮಡಿನ್ಭಸ್ತ್ಯತೀಯಃ' (೧–೭) ಎಂದು ಚಂಪೂಕರ್ತನು ತನ್ನನ್ನು ಹೊಗಳಿಕೊಂಡಿರುವದನ್ನು ನೋಡಿದರೆ ಮಾಧವನು ಅವನೇ ಎನ್ನುವದಕ್ಕೆ ಬರುವಂತಿಲ್ಲ; ಏಕೆಂದರೆ ಮಾಧವನು ಗೌರಿಯ ಭಕ್ತನೆಂದು ತನ್ನನ್ನು ಕರೆದುಕೊಂಡಿಲ್ಲ.

ಬಹುದೆಂದು ಊಹಿಸಲಾಗಿದೆ. ಹರಿಹರಪುರ, ತೀರ್ಥಮತ್ತೂರು, ಮತ್ತು ಕೂಡಲಿಮಠ—ಇವುಗಳೂ ಹದಿನಾಲ್ಕನೆಯ ಶತಮಾನಗಳಲ್ಲಿ ಶೃಂಗೇರಿಗುರುಗಳ ಪ್ರೋತ್ಸಾಹದಿಂದ ಸ್ಥಾಪಿತವಾದವೆಂದು ವೆಂಕಟರಾಮನ್‌ರವರ ಹೇಳಿಕೆ (KRTTW p. 44). ಆದರೆ ಕೂಡಲಿಮಠದವರು ಇವನ್ನು ಒಪ್ಪುತ್ತಿಲ್ಲ. ಈ ವಿಷಯಕ್ಕೆ (೯ನೆಯ) ಪರಿಶಿಷ್ಟವನ್ನು ನೋಡಿರಿ.

ಶೃಂಗೇರೀಸಂಸ್ಥಾನವು ಬೆಳೆದಂತೆಲ್ಲ ಶಾರದಾಪೀಠದ ವ್ಯಯೋಜನವು ಮಹಾಜನರಿಗೆ ಹೆಚ್ಚುಹೆಚ್ಚಾಗಿ ದೊರೆಯುತ್ತಾ ಬಂತು; ಶಾರದಾಮಠವೂ ಉಪಮಠಗಳೂ ಯತಿಗಳು, ಸಾಧಕರು, ವಿದ್ವಾಂಸರು ಮೊದಲಾದವರ ನೆರವಿಗೂ ದೇವಸ್ಥಾನಗಳು, ಅನ್ನಸತ್ರಗಳು—ಮುಂತಾದ ದಾನಧರ್ಮಗಳಿಗೂ ನೆಲೆವೀಡಾದವು. ೧೭ನೆಯ ಮತ್ತು ೧೮ನೆಯ ಶತಮಾನದ ಆದಿಭಾಗದಲ್ಲಿ ರಾಜಕೀಯವಿಪ್ಲವಗಳು ಬಹಳವಾಗಿ ಆಗುತ್ತಿದ್ದರೂ— ಈ ಕಾರಣದಿಂದ ಶೃಂಗೇರಿಯ ಪೀಠಾಧಿಪತಿಗಳು ನಾಸಿಕದಲ್ಲಿ ಹತ್ತುವರ್ಷಗಳವರೆಗೆ ಇರಬೇಕಾಗಿಬಂದರೂ—ಕರ್ನಾಟಕದ ರಾಜರುಗಳ ಪ್ರೋತ್ಸಾಹವು ಶೃಂಗೇರೀಪೀಠಕ್ಕೆ ಒದಗಿತ್ತು. ಈ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಕರ್ನಾಟಕದ ವೀರಶೈವರು, ತಮಿಳುನಾಡಿನ ಸಿದ್ಧಾಂತಿಗಳು—ಈ ಶೈವರ, ಮತ್ತು ವಿಶಿಷ್ಟಾದ್ವೈತದ್ವೈತಸಿದ್ಧಾಂತಗಳನ್ನವಲಂಬಿಸಿದ ವೈಷ್ಣವರ, ಮಠಗಳು ತುಂಬಿಕೊಂಡಿದ್ದವು. ಈ ಮಠಗಳೆಲ್ಲ ಪರಸ್ಪರಸ್ಪರ್ಧೆಯಿಂದ ವಾದವಿವಾದಗಳನ್ನು ಮಾಡುತ್ತಲಿದ್ದರೂ ಜನರಲ್ಲಿ ಉತ್ತಮವಾದ ನಡತೆಯೂ ಈಶ್ವರನಲ್ಲಿ ಶ್ರದ್ಧಾಭಕ್ತಿಗಳೂ ಉಂಟಾಗುವಂತೆ ಪ್ರೋತ್ಸಾಹಿಸುತ್ತಿದ್ದವು.

ಶೃಂಗೇರೀಪೀಠದಲ್ಲಿ ಆಗಿಹೋದ ಮಠಾಧಿಪತಿಗಳ ಚರಿತ್ರೆಯನ್ನೆಲ್ಲ ವಿವರಿಸುವದು ಈ ಗ್ರಂಥದ ಉದ್ದೇಶಕ್ಕೆ ಸೇರಿದ್ದಲ್ಲ. ಈ ಪೀಠವು ಅನೇಕ ರಾಜರುಗಳ ಪ್ರೋತ್ಸಾಹದಿಂದ ಅಭಿವೃದ್ಧಿಯನ್ನು ಹೊಂದಿದ ಬಗೆಯನ್ನು ವರ್ಣಿಸುವದರಿಂದ ಆಚಾರ್ಯರ ಚರಿತ್ರೆಗೆ ಪೋಷಣೆಯೇನೂ ದೊರೆಯುವಂತಿಲ್ಲ. ಕ್ರಿ.ಶ. 1910 ನೆಯ ಫೆಬ್ರುವರಿ 21 (ಸೌಮ್ಯಸಂವತ್ಸರದ ಮಾಘ ಶುಕ್ಲ ೧೨)ರಲ್ಲಿ ಶ್ರೀ ಸಚ್ಚಿದಾನಂದಶಿವಾಭಿನವನೃಸಿಂಹಭಾರತಿಸ್ವಾಮಿಗಳವರು ಶ್ರೀಶಂಕರಾಚಾರ್ಯರ ಮತ್ತು ಶ್ರೀಶಾರದಾಂಬೆಯ ಪ್ರತಿಷ್ಠೆಯನ್ನು ಮಾಡಿದ್ದೊಂದು ವಿಷಯವು ಇಲ್ಲಿ ಅವಶ್ಯವಾಗಿ ಪ್ರಸ್ತಾಪಿಸತಕ್ಕದ್ದಾಗಿದೆ. ಜ್ಞಾನಭಕ್ತಿವೈರಾಗ್ಯಗಳಿಂದಲೂ ಯೋಗಾಭ್ಯಾಸದಿಂದಲೂ ಶ್ರೀಶಂಕರರ ಅಪರಾವತಾರವೆಂದು ಅನೇಕರು ನಂಬುವಷ್ಟು ಉಚ್ಚಸ್ಥಾನಕ್ಕೇರಿದ್ದ ಈ ಸ್ವಾಮಿಗಳವರ ಚರಿತ್ರೆಯು ವಿವರವಾಗಿ ಓದುವದಕ್ಕೆ ಅರ್ಹವಾಗಿರುತ್ತದೆ. ಇವರಲ್ಲಿ ಅನೇಕ ಸುಪ್ರಸಿದ್ಧ ಸಂನ್ಯಾಸಿಗಳು ಶಿಷ್ಯವೃತ್ತಿಯನ್ನು ಮಾಡಿಕೊಂಡಿದ್ದರು. ಶ್ರೀರಂಗದ ವಾಣೀವಿಲಾಸವುದ್ರಣಾಲಯದಲ್ಲಿ ಈ ಜಗದ್ಗುರುಗಳ ಅಪ್ಪಣೆಯಂತೆ ಶಂಕರಭಗವ

ತ್ಪಾದರ ಹೆಸರಿನಲ್ಲಿರುವ ಗ್ರಂಥಗಳನ್ನೆಲ್ಲ ಪ್ರಕಟಿಸಲಾಯಿತು. ಇವರ ತರುವಾಯ ಶ್ರೀಚಂದ್ರಶೇಖರಭಾರತೀಸ್ವಾಮಿಗಳವರು ಪೀಠಾಧಿಪತಿಗಳಾದರು ; ಈಗ್ಗೆ ಶ್ರೀ ಅಭಿನವವಿದ್ಯಾತೀರ್ಥಸ್ವಾಮಿಗಳವರು ಪೀಠದಲ್ಲಿರುತ್ತಾರೆ.

ಕಾಂಚೀಕಾಮಕೋಟಿಪೀಠದ ಗುರುಪರಂಪರೆ

೧೮೨. ಕಾಂಚೀಪೀಠವು ಹೆಸರಿಗೆ ತಕ್ಕಂತೆ ಕಂಚಿಯಲ್ಲಿ ಸ್ಥಾಪಿತವಾಗಿದ್ದು ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಕಾರಣಾಂತರಗಳಿಂದ ತಂಜಾವೂರು ಜಿಲ್ಲೆಯಲ್ಲಿರುವ ಕುಂಭಕೋಣಕ್ಕೆ ಬಂದಿತು. ಆಲ್ಲಿಯ ಪೀಠಾಧಿಪತಿಗಳ ವಿಷಯವನ್ನು 'ಪುಣ್ಯಶ್ಲೋಕಮಂಜರಿ' (ಕಾಂಚೀಪೀಠದ ೫೦ನೆಯ ಗುರುಗಳು ಬರೆದದ್ದು); 'ಗುರುರತ್ನಮಾಲೆ' (೫೫ನೆಯ ಗುರುಗಳಾದ ಪರಮಶಿವೇಂದ್ರರ ಶಿಷ್ಯರು ಸದಾಶಿವಬ್ರಹ್ಮೇಂದ್ರರು ಬರೆದದ್ದು). ಸುಷಮಾ (ಗುರುರತ್ನಮಾಲಿಕೆಯಮೇಲೆ ೬೧ನೆಯ ಗುರುಗಳಾದ ಮಹಾದೇವೇಂದ್ರರ ಶಿಷ್ಯರಾದ ಆತ್ಮಬೋಧರು ಬರೆದದ್ದು)–ಈ ಗ್ರಂಥಗಳ ಆಧಾರವಿದೆ. ಪುಣ್ಯಶ್ಲೋಕಮಂಜರಿಯಲ್ಲಿ ಗುರುಗಳು ಸಮಾಧಿಸ್ಥರಾದ ಸಂವತ್ಸರ, ಪಕ್ಷ, ತಿಥಿಗಳನ್ನು ಕೊಟ್ಟಿರುವದರಿಂದ ಇವುಗಳು ವಿಶ್ವಾಸಾರ್ಹವೆಂದು ಎನ್. ವೆಂಕಟರಾಮನ್‌ರವರು (NVSSK) ಬರೆದಿರುತ್ತಾರೆ ; ಅದರಲ್ಲಿಯೂ ಕೊನೆಕೊನೆಯ ಭಾಗಕ್ಕೆ ವಿದ್ಯಾಘನರ ವಿದೇಹಮುಕ್ತಿಯ ಕಾಲದಿಂದ ಮುಂದೆ ಈ ಗ್ರಂಥಗಳಲ್ಲಿರುವ ಕಾಲಮಾನವು ಹೆಚ್ಚು ವಿಶ್ವಾಸಾರ್ಹವೆಂತ ಅವರ ನಂಬಿಕೆ. ಶ್ರೀಭಗವತ್ಪಾದಾಚಾರ್ಯರು ಕಾಂಚಿಯಲ್ಲಲ್ಲಿಯೇ ಸಿದ್ಧಿಯನ್ನು ಹೊಂದಿದರು ಎಂದು ಈ ಮಠದವರು ಹೇಳುತ್ತಾರೆ. ಕಾಂಚಿಯಲ್ಲಿಯೇ ಸರ್ವಜ್ಞಪೀಠವನಿತ್ತೆಂದು ಆವರ ಮತ. ಇಲ್ಲಿ ಆಚಾರ್ಯರು ಶ್ರೀಚಕ್ರವನ್ನು ಸ್ಥಾಪಿಸಿದರೆಂಬುದಕ್ಕೆ ಬಹುಜನತೆ ಸಮ್ಮತಿಯಿದೆ. ಕಾಂಚೀಮಠವೇ ಮೂಲಮಠವೆಂಬವರೆಗೂ ಆ ಮಠದವರ ಅಭಿಪ್ರಾಯವು ಹೋಗುತ್ತದೆ ಈ ವಿಷಯಕ್ಕೆ ಪ್ರತಿವಾದಿಗಳು ಏನು ಹೇಳುತ್ತಾರೆಂಬುದನ್ನು ಪರಿಶಿಷ್ಟದಲ್ಲಿ ಕೊಡುವೆವು. ಸದ್ಯಕ್ಕೆ ಎನ್. ವೆಂಕಟರಾಮನ್‌ರವರು ಬರೆದಿರುವಂತೆ ಈ ಪೀಠದ ಕೆಲವು ಮುಖ್ಯಗುರುಗಳ ಹೆಸರನ್ನು ಇಲ್ಲಿ ಉಲ್ಲೇಖಿಸಿದೆ.

ಕಾಮಕೋಟಿಪೀಠದ ಮುಖ್ಯಗುರುಗಳು

೧೮೩. ಶ್ರೀಶಂಕರಾಚಾರ್ಯ ಮತ್ತು ಸುರೇಶ್ವರಾಚಾರ್ಯರನ್ನು ಬಿಟ್ಟರೆ ಮುಂದಕ್ಕೆ ೬೬ ಗುರುಗಳು ಈ ಪೀಠದಲ್ಲಿ ಅಧಿಪತಿಗಳಾಗಿರುತ್ತಾರೆ. ವೆಂಕಟರಾಮನ್‌ರವರನ್ನು ಅನುಸರಿಸಿ ನಾವೂ ಸರ್ವಜ್ಞಾತ್ಮರಿಂದ ಗುರುಪರಂಪರೆಯನ್ನು ಎಣಿಸಿ ಮುಖ್ಯರಾದವರ ಹೆಸರುಗಳನ್ನು ಮಾತ್ರ ಇಲ್ಲಿ ಕೊಡುತ್ತೇವೆ. ಹೆಚ್ಚು ವಿವರಕ್ಕೆ ಅವರ ಇಂಗ್ಲಿಷು ಪುಸ್ತಕವನ್ನಾಗಲಿ ಅಥವಾ ಸಂಸ್ಕೃತಪುಣ್ಯಶ್ಲೋಕಮಂಜರಿಯನ್ನಾಗಲಿ ನೋಡಬೇಕು.

(೧) ಸರ್ವಜ್ಞಾತ್ಮ : ಶಂಕರಾಚಾರ್ಯರೊಡನೆ ವಾದಿಸಿದ ಇವರ ಮಹಿಮೆಯನ್ನು ಕಂಡು ಆಚಾರ್ಯರು ಏಳನೆಯ ವರ್ಷದಲ್ಲಿಯೇ ಇವರನ್ನು ಪೀಠಾಧಿಪತಿಗಳನ್ನಾಗಿ ಮಾಡಿ ಸುರೇಶ್ವರರನ್ನು ಮೇಲುವಿಚಾರಣೆಗೆ ಮಠದಲ್ಲಿಟ್ಟರಂತೆ (NVSSK.p 50), ಸರ್ವಜ್ಞಾತ್ಮರು ಸುರೇಶ್ವರಾಚಾರ್ಯರ ಶಿಷ್ಯರಲ್ಲವೆಂದು ಈಗ ಗೊತ್ತಾಗಿದೆ ; ಅವರ ಗುರುಗಳಾದ ದೇವೇಶ್ವರರು ದೇವಾನಂದರ ಶಿಷ್ಯರು ; ದಕ್ಷಿಣ ತಿರುವಾಂಕೂರಿನ ರಾಜನಾದ ಮನುಕುಲಾದಿತ್ಯನ ಕಾಲದಲ್ಲಿ ಸಂಕ್ಷೇಪಶಾರೀರಕವು ಮುಗಿಯಿತೆಂದು ಗ್ರಂಥದ ಅಂತ್ಯದಲ್ಲಿರುವ ಒಂದು ಶ್ಲೋಕದಿಂದ ತಿಳಿಯಬರುತ್ತದೆ. ಆದ್ದರಿಂದ ಸುರೇಶ್ವರರು ಇವರ ಕಾಲದಲ್ಲಿ ಕಾಂಚಿಯಲ್ಲಿದ್ದರೆಂಬುದಕ್ಕೆ ಆಧಾರವು ಸಾಲದೆಂದು ಹೇಳಬೇಕಾಗಿದೆ.

(೩) ಜ್ಞಾನಾನಂದ : ನೈಷ್ಕರ್ಮ್ಯಸಿದ್ಧಿಯಮೇಲೆ "ಚಂದ್ರಿಕೆ" ಎಂಬ ವ್ಯಾಖ್ಯಾನವನ್ನು ಬರೆದ ಜ್ಞಾನೋತ್ತಮರು ಇವರೇ ಎಂದು ವೆಂಕಟರಾಮನ್ನರ ನಂಬಿಕೆ. ಶೃಂಗೇರೀಪರಂಪರೆಯಲ್ಲಿ ೫೩ನೆಯ ಗುರುಗಳೇ ಚಂದ್ರಿಕಾಕರ್ತರೆಂದು ಜಿ. ಶ್ರೀನಿವಾಸಯ್ಯರ್‌ರವರು ಬರೆದಿದಾರೆ. (GGS. p. 11) ನಿಜವು ಯಾವದೊ !

(೪) ಆನಂದಜ್ಞಾನ : ಆಚಾರ್ಯರ ಭಾಷ್ಯಗಳಿಗೆ ಟೀಕೆಯನ್ನು ಬರೆದಿರುವ ಆನಂದಗಿರಿಗಳೇ ಇವರೆಂದು ಎನ್. ವೆಂಕಟರಾಮನ್‌ರವರ ಮತ. ಆದರೆ ಆನಂದಜ್ಞಾನ ಅಥವಾ ಆನಂದಗಿರಿ ಎಂಬ ಹೆಸರಿನ ಟೀಕಾಕರ್ತರು ಅನೇಕರಿದ್ದರೆಂದು ನಮ್ಮ ಅಭಿಪ್ರಾಯವಿದೆ. ಸಂಸ್ಕೃತದಲ್ಲಿ ಬರೆದಿರುವ ಉಪನಿಷತ್ತುಗಳ ಟಿಪ್ಪಣಿಗಳಲ್ಲಿ ಇದನ್ನು ನಾವು ಸ್ಪಷ್ಟಪಡಿಸಿರುತ್ತೇವೆ.

(೫) ಕೃಪಾಶಂಕರ : ಇವರೇ ಷಣ್ಮತಸ್ಥಾಪನಾಚಾರ್ಯರೆಂದು ವೆಂಕಟರಾಮನ್‌ರವರ ಕಲ್ಪನೆ

(೧೪) ಮೂಕಶಂಕರ : ಜನ್ಮದಿಂದಲೂ ಮೂಕರಾಗಿದ್ದು ಇವರಿಗೆ ವಿದ್ಯಾಘನರ ಅನುಗ್ರಹದಿಂದ ಮಾತು ಬಂದಿತಂತೆ. ಇವರಿಗೆ ಕಾಶ್ಮೀರದ ಮಾತೃಗುಪ್ತ, ಪ್ರವರಸೇನ– ಇವರು ಭಕ್ತರಾಗಿದ್ದರಂತೆ. 'ಮೂಕಪಂಚಾಶತೀ' ಮತ್ತು 'ಪ್ರಾಚೀನಶಂಕರವಿಜಯ' ಇವುಗಳನ್ನು ರಚಿಸಿದವರು ಈ ಗುರುಗಳಂತೆ. ಆತ್ಮಬೋಧರು ಆ ಶಂಕರವಿಜಯದಿಂದ ಹಲವು ಶ್ಲೋಕಗಳನ್ನು ಉದಾಹರಿಸಿದುತ್ತಾರೆ ; ಅವುಗಳನ್ನು ನೋಡಿದರೆ ಕಾಂಚೀಮಠವು ಬಗ್ಗೆ ಉತ್ತಮಸ್ಥಿತಿಯಲ್ಲಿದ್ದ ಸಂಸ್ಥೆಯಾಗಿದ್ದಿತೆಂದು ಹೇಳಬೇಕಾಗುವದು. ಈ ಮೂಕಶಂಕರರು ಇದ್ದ ಕಾಲವು (ಕಲಿ೫೫೭) ಅವುಗಳಿಂದ ತಿಳಿಯಬರುವದಲ್ಲದೆ ಕಾಂಚೀಸಂಪ್ರದಾಯದಂತೆ ಅವರ ಕಾಲದಲ್ಲಿ ನಡೆದ ಮುಖ್ಯಘಟನೆಗಳನ್ನೂ ಪರಾಮರ್ಶಿಸುತ್ತದೆ– ಎಂದು ವೆಂಕಟರಾಮನ್‌ರವರು (NVSSK. p. 74) ಬರೆದಿರುತ್ತಾರೆ.

(೩೬) **ಧೀರ (ಅಥವಾ ಅಭಿನವ) ಶಂಕರ:** ಇವರು ಚಿದಂಬರದಲ್ಲಿದ್ದ ವಿಶ್ವಜಿತ್ತಿನ ಮಕ್ಕಳು. ಇದು ವಾಕ್ಪತಿಭಟ್ಟನ **'ಶಂಕರೇಂದ್ರವಿಲಾಸ'**ದಿಂದ ತಿಳಿಯಬರುತ್ತದೆ. ಇವರ ವಿಷಯಕ್ಕೆ ವಿವರವನ್ನು ಹಿಂದೆ (ಪು. ೪೦) ಬರೆದಿದೆ.

(೪೫) **ತೃತೀಯ ಚಂದ್ರಶೇಖರ ಅಥವಾ ಚಂದ್ರಚೂಡ:** ಇವರಿಗೆ 'ಶ್ರೀಕಂಠಚರಿತ'ವನ್ನು ಬರೆದ **ಮಂಖ**, 'ಪ್ರಬೋಧಚಂದ್ರೋದಯ'ವನ್ನು ಬರೆದ **ಕೃಷ್ಣಮಿಶ್ರ**, 'ಪ್ರಸನ್ನರಾಘವ'ವೇ ಮುಂತಾದ ಗ್ರಂಥಗಳನ್ನು ಬರೆದ **ಜಯದೇವ** ಮುಂತಾದವರು ಭಕ್ತರಾಗಿದ್ದರಂತೆ.

(೪೬) **ಅದ್ವೈತಾನಂದಬೋಧ:** ಇವರಿಗೆ ಚಿನ್ಮಿಲಾಸರೆಂದೂ ಹೆಸರು. 'ಖಂಡನಖಂಡನಖಾದ್ಯ'ದ ಕರ್ತೃವಾದ **ಶ್ರೀಹರ್ಷನನ್ನೂ** ತಂತ್ರಶಾಸ್ತ್ರದ ಹಲವು ಗ್ರಂಥಗಳನ್ನು ಬರೆದಿದ್ದ **ಅಭಿನವಗುಪ್ತನನ್ನೂ** ವಾದದಲ್ಲಿ ಜಯಿಸಿದವರಾದ ಇವರು **'ಬ್ರಹ್ಮವಿದ್ಯಾಭರಣ, ಶಾಂತಿವಿವರಣ, ಗುರುಪ್ರದೀಪ'** ಎಂಬ ಗ್ರಂಥಗಳನ್ನು ರಚಿಸಿದರು.

(೪೯) **ವಿದ್ಯಾತೀರ್ಥ :** ಇವರು ವೇದಭಾಷ್ಯವನ್ನು ಬರೆದ **ಸಾಯಣನ** ಗುರುಗಳು. ಮುಂದೆ ವಿದ್ಯಾರಣ್ಯರೆಂದು ಪ್ರಸಿದ್ಧರಾದ **ಮಾಧವ**, ಮತ್ತು ಶೃಂಗೇರಿ ಮಠವು ಉಜ್ಜೀವನವಾದ ಮೇಲೆ ಪ್ರಥಮಪೀಠಾಧಿಪರಾದ **ಭಾರತೀಕೃಷ್ಣ** – ಇವರಿಗೂ ಗುರುಗಳು. **ಮಾಧ್ವರ** ಮತಪ್ರಚಾರವನ್ನೂ **ರೋಮನ್ ಕ್ಯಾಥೊಲಿಕರು** ಪೋರ್ಚುಗೀಸ್ ಇಂಡಿಯದಲ್ಲಿ ಮಾಡುತ್ತಿದ್ದ ಹಾವಳಿಯನ್ನೂ ತಡೆಗಟ್ಟುವದಕ್ಕಾಗಿ ವಿದ್ಯಾತೀರ್ಥರು ಎಂಟು ಮಠಗಳನ್ನು ಸ್ಥಾಪಿಸಿ ತಮ್ಮ ಎಂಟು ಜನ ಶಿಷ್ಯರನ್ನು ಅವುಗಳಿಗೆ ಅಧಿಪತಿಗಳನ್ನಾಗಿ ನಿಯಮಿಸಿದರು ; ವಿದ್ಯಾರಣ್ಯರನ್ನು ವಿಜಯನಗರ ಚಕ್ರಾಧಿಪತ್ಯದ ರಾಜಧಾನಿಯ ಬಳಿಯಲ್ಲಿದ್ದ ವಿರೂಪಾಕ್ಷಿಮಠಕ್ಕೆ ಅಧಿಪತಿಗಳನ್ನಾಗಿ ಮಾಡಿದರು. ಕಾಂಚೀಮಠದಲ್ಲಿ ೭೩ ವರ್ಷಗಳಿದ್ದು ವಿದ್ಯಾತೀರ್ಥರು ತಪಸ್ಸುಮಾಡುವದಕ್ಕೆಂದು ಹಿಮಾಲಯಕ್ಕೆ ಹೋದರು. ವಿದ್ಯಾತೀರ್ಥರು ಸ್ಥಾಪಿಸಿದರೆಂದು ಹೇಳಲಾಗಿರುವ ಎಂಟು ಮಠಗಳೊಳಗೆ ವಿರೂಪಾಕ್ಷಿ, ಪುಷ್ಪಗಿರಿ– ಈ ಎರಡು ಮಠಗಳು ಮಾತ್ರ ಇರುತ್ತವೆ.

ಈ ಮಠಗಳೆಲ್ಲ ಮಠಗಳ ಮುದ್ರೆಯಲ್ಲಿ 'ವಿದ್ಯಾರಣ್ಯ' ಅಥವಾ 'ವಿದ್ಯಾಶಂಕರ' ಎಂಬ ಹೆಸರುಗಳನ್ನಿಟ್ಟುಕೊಂಡಿವೆ; ಈ ಎರಡು ಹೆಸರುಗಳೂ ಒಬ್ಬರದೇ. ಶೃಂಗೇರೀಮಠದ ಗುರುಪರಂಪರೆಯಲ್ಲಿ ಮಠದ ೯ನೆಯವರಾದ ವಿದ್ಯಾಶಂಕರರು ಬೇರೆ. ಅವರು ನಿರ್ಮಲ ಎಂಬಲ್ಲಿ 491ರಲ್ಲಿ ಮುಕ್ತರಾದರು.

ಈ ಮೇಲೆ ಬರೆದ ವಿವರವು ಎನ್. ವೆಂಕಟರಾಮನ್‌ರು ಬರೆದಂತೆ ಕೊಟ್ಟಿದ್ದು. ಈ ವಿಷಯದಲ್ಲಿ ಹಿಂದೆ (ಪು. ೩೪೫–೩೪೬) ಶೃಂಗೇರೀಮಠದ

ವಿಷಯಕ್ಕೆ ಬರೆದಿರುವದನ್ನೂ ಪರಿಶಿಷ್ಟ (೯) ರಲ್ಲಿ ಕೊಟ್ಟಿರುವ ವಿಷಯಗಳನ್ನೂ ಓದಿದರೆ ವಿಚಾರವು ಬಹಳ ವಾದಗ್ರಸ್ತವೆಂಬುದು ಸ್ಪಷ್ಟವಾಗುವದು.

(೫೦) **ಶಂಕರಾನಂದ :** ಇವರು ವಿದ್ಯಾರಣ್ಯರಿಗೆ ಹೊಸ ಮಠಗಳನ್ನು ಸ್ಥಾಪಿಸುವದಕ್ಕೆ ಸಹಾಯವನ್ನು ಮಾಡಿದರು. ಕೆಲವು ಉಪನಿಷತ್ತುಗಳಿಗೆ 'ದೀಪಿಕೆ'ಗಳನ್ನೂ ಭಗವದ್ಗೀತೆಗೆ 'ತಾತ್ಪರ್ಯದೀಪಿಕೆ' ಎಂಬ ವ್ಯಾಖ್ಯಾನವನ್ನೂ 'ಆತ್ಮಪುರಾಣ'ವೆಂಬ ಗ್ರಂಥವನ್ನೂ ಬರೆದಿರುತ್ತಾರೆ. ಬೃಹದಾರಣ್ಯಕೋಪನಿಷತ್ತಿಗೆ ಇವರು ಬರೆದಿರುವ 'ದೀಪಿಕೆ'ಯಲ್ಲಿರುವ ಒಂದಾನೊಂದು ಶ್ಲೋಕದ ಆಧಾರದಿಂದ ವಿದ್ಯಾತೀರ್ಥರು ಕಾಂಚೀಪೀಠಕ್ಕೆ ಗುರುಗಳಾಗಿದ್ದರೆಂಬುದು ನಿಃಸಂಶಯವೆಂದು ಎನ್. ವೆಂಕಟರಾಮನ್‌ರವರು ಬರೆದಿರುತ್ತಾರೆ. ಆದರೆ ಇದುಕೂಡ ವಾದ ಗ್ರಸ್ತವಾಗಿರುತ್ತದೆ. ಪರಿಶಿಷ್ಟ (೯)ನ್ನು ನೋಡಿರಿ.

(೫೨) **ಮಹಾದೇವ** (ಚತುರ್ಥ. ಇವರು ವ್ಯಾಸಾಚಲದಲ್ಲಿದ್ದದ್ದರಿಂದ ಇವರಿಗೆ ವ್ಯಾಸಾಚಲರೆಂದೂ ಹೆಸರು. ವ್ಯಾಸಾಚಲೀಯವೆಂಬ ಶಂಕರವಿಜಯವನ್ನು ಇವರು ಬರೆದರು. ಹಿಂದೆ (ಪು.೫) ಈ ವಿಷಯವನ್ನು ಪ್ರಸ್ತಾಪಿಸಿದೆ. ಇವರಿಗೂ ಮುಂದಿನ ಕೆಲವರು ಪೀಠಾಧಿಪತಿಗಳಿಗೂ ರಾಜರು ಕೊಟ್ಟ ಉಂಬಳಿಗಳ ವಿಷಯಕ್ಕೆ ತ್ರಾಮುಶಾಸನಗಳಿವೆ. ಶಾಸನಗಳ ವಿಷಯಕ್ಕೆ ಪರಿಶಿಷ್ಟ (೯)ನನ್ನು ನೋಡಿ.

(೫೩) **ಪರಮಶಿವ :** (ದ್ವಿತೀಯ). ಇವರು 'ಆತ್ಮವಿದ್ಯಾವಿಲಾಸ'ವನ್ನು ಬರೆದಿರುವ ಸದಾಶಿವಬ್ರಹ್ಮೇಂದ್ರರ ಗುರುಗಳು. ಸದಾಶಿವಬ್ರಹ್ಮರು "ಗುರುರತ್ನಮಾಲಿಕೆ"ಯನ್ನು ಬರೆದಿರುತ್ತಾರೆ. ಈ ಗ್ರಂಥದ ವಿಷಯಕ್ಕೆ ಹಿಂದೆ (ಪು. ೧೩೦ರಲ್ಲಿ) ಬರೆದಿದೆ.

(೬೬) **ಆತ್ಮಬೋಧರು, ವಿಶ್ವಾಧಿಕರು :** ಇವರು 'ರುದ್ರಭಾಷ್ಯ'ವನ್ನು ಬರೆದಿರುತ್ತಾರೆ. ಇವರು 'ಗುರುರತ್ನಮಾಲಿಕೆ'ಯನ್ನು ಬರೆಯಿಸುವದಕ್ಕೆ ಪ್ರಚೋದಕರಂತೆ.

(೫೯) **ಮಹಾದೇವ** (ಪಂಚಮ). ಇವರು ದೊಡ್ಡಯೋಗಿಗಳು. ಆತ್ಮಬೋಧರು ಇವರ ಕಾಲದಲ್ಲಿ ಗುರುರತ್ನಮಾಲಿಕೆಯ ಮೇಲಿನ ಸುಷುಮಾ ವ್ಯಾಖ್ಯಾನವನ್ನು ಬರೆದರು.

(೬೦) **ಚಂದ್ರಶೇಖರ** (ಚತುರ್ಥ). ಕಾಮಕೋಟಿಯ ಪೀಠವು ಕಂಚಿಯನ್ನು ಖಿಟ್ಟೀಬಿಟ್ಟು ಕುಂಭಕೋಣಕ್ಕೆ ಬಂದುಬಿಟ್ಟದ್ದು ಇವರ ಕಾಲದಲ್ಲಿ. ಕಾಮಾಕ್ಷೀವಿಗ್ರಹವು ಮೊದಲು ಒಡೆಯರ ಪಾಳ್ಯಕ್ಕೆ ಬಂದು, ಆಮೇಲೆ ತಂಜಾವೂರಿಗೆ ಹೋಗಿ ಅಲ್ಲಿಯೇ ನಿಂತುಬಿಟ್ಟಿದೆ. ರಾಜ ಪ್ರತಾಪಸಿಂಹನ

(1770–1763) ಕಾಲಕ್ಕೆ ತಂಜಾವೂರಿಗೆ ಬಂದು ಮಠವು ಕಾವೇರಿತೀರದಲ್ಲಿದೆ ಯೆಂಬ ಕಾರಣದಿಂದ ಕುಂಭಕೋಣಕ್ಕೆ ಬಂದು ಈವರೆಗೂ ಅಲ್ಲಿಯೇ ನಿಂತಿದೆ.

(೬೬) ಜಗದ್ಗುರು ಶ್ರೀಚಂದ್ರಶೇಖರೇಂದ್ರಸರಸ್ವತೀಸ್ವಾಮಿಗಳವರು ಈಗ ಪೀಠದಲ್ಲಿರುತ್ತಾರೆ. ಅವರು ಶ್ರೀಜಯೇಂದ್ರಸರಸ್ವತೀಸ್ವಾಮಿಗಳವರನ್ನು ಶಿಷ್ಯಸ್ವಾಮಿಗಳಾಗಿ ಮಾಡಿಕೊಂಡಿರುತ್ತಾರೆ. ಈ ಸ್ವಾಮಿಗಳ ಮಹಿಮೆಯಿಂದ ಮಠದ ಪ್ರಖ್ಯಾತಿಯು ಹೆಚ್ಚುತ್ತಲಿದೆ.

ಇಲ್ಲಿಯವರೆಗೆ ಬರೆದಿರುವನ್ನು ಎನ್. ವೆಂಕಟರಾಮನ್‌ರವರ ಇಂಗ್ಲಿಷು ಗ್ರಂಥದ ಆಧಾರದಿಂದಲೇ ನಾವು ಬರೆದುಕೊಂಡಿರುತ್ತೇವೆ. ಈ ವಿಷಯದಲ್ಲಿರುವ ಭಿನ್ನಾಭಿಪ್ರಾಯಗಳಿಗೆ ವಾಚಕರು ಪರಿಶಿಷ್ಟವನ್ನು ನೋಡಬೇಕು.

ದ್ವಾರಕಾ, ಗೋವರ್ಧನ, ಜ್ಯೋತಿರ್ಮಠ ಮುಂತಾದ ಮಠಗಳು

೧೪೪. ಆಚಾರ್ಯರು ಸ್ಥಾಪಿಸಿರುವನೆಂದು ಪ್ರಸಿದ್ಧವಾಗಿರುವ ಮಿಕ್ಕ ಮಠಗಳ ವಿಷಯಕ್ಕೆ ಗುರುಪರಂಪರೆಯ ಪಟ್ಟಿಗಳಿದ್ದರೂ ಅವುಗಳಲ್ಲಿ ಪ್ರಸಿದ್ಧವಾಗಿ ನಡೆದಿರುವ ಐತಿಹಾಸಿಕಘಟನೆಗಳು ಯಾವವೂ ಇರುವದಿಲ್ಲ. ಶಂಕರಚರಿತ್ರೆಗೆ ಸಂಬಂಧಪಡಿಸಬಹುದಾದ ಹೆಚ್ಚಿನ ವಿಷಯಗಳಂತೂ ನಮಗೆ ಸಿಕ್ಕದೆ ಇರುವದರಿಂದ ಅವುಗಳ ವಿಷಯವನ್ನು ಇಲ್ಲಿ ಬರೆಯಲಾಗಲಿಲ್ಲ ಹೆಚ್ಚಿನ ವಿಷಯಕ್ಕೆ ಪರಿಶಿಷ್ಟವನ್ನು ನೋಡಿರಿ.

ಮಠಗಳ ವಿಚಾರದ ಉಪಸಂಹಾರ

೧೪೫. ಆಚಾರ್ಯರು ಸ್ಥಾಪಿಸಿದರೆಂದು ಪ್ರಖ್ಯಾತವಾಗಿರುವ ಮಠಗಳ ಅಧಿಪತಿಗಳು ಕೆಲವು ವರ್ಷಗಳಿಂದೀಚೆಗೆ. ಮಠದ ಮಹಾಕಾರ್ಯಗಳನ್ನು ಉಜ್ಜ್ವಲಗೊಳಿಸುವಕ್ಕಾಗಲಿ, ಆದ್ವೈತಸಿದ್ಧಾಂತವನ್ನು ಮುಮುಕ್ಷುಗಳಿಗೆ ಬೋಧಿಸುವದಕ್ಕಾಗಲಿ ಆದ್ವೈತಗ್ರಂಥಗಳ ಪ್ರಕಾಶಕ್ಕಾಗಲಿ ಯಾವ ಪ್ರಯತ್ನವನ್ನೂ ಮಾಡದೆ ಸುಮ್ಮನೆ ತಮ್ಮತಮ್ಮ ಪೀಠದ ಪ್ರತಿಷ್ಠೆಗಳಿಗೆ ಮಾತ್ರವೇ ಲಕ್ಷ್ಯವನ್ನೂ ಕೊಡುತ್ತಾ ಬಂದದ್ದರ ಫಲವಾಗಿ ಶಿಷ್ಯಜನರಲ್ಲಿ ಮಠಗಳ ವಿಷಯಕ್ಕೆ ಔದಾಸೀನ್ಯವೂ ಸರಕಾರದವರಿಗೆ ಮಠಗಳ ಆಸ್ತಿಗಳ ಮತ್ತು ಉತ್ಪತ್ತಿಯ ಬಗೆ ವಕ್ರದೃಷ್ಟಿಯೂ ಉಂಟಾಗುವದಕ್ಕೆ ಕಾರಣವಾಯಿತು. ಶ್ರೀ ಭಗವಂತನ ದಯದಿಂದ ಈಗೀಗಿನ ಮಠಾಧಿಪತಿಗಳು ವಿದ್ಯಾಪ್ರಚಾರವೆ ಮುಂತಾದ ಸಾರ್ವಜನಿಕಕಾರ್ಯಗಳಲ್ಲಿಯೂ ಜನರಿಗೆ ಆಚಾರ್ಯರಲ್ಲಿ ಶ್ರದ್ಧಾಭಕ್ತಿಗಳನ್ನು ಉಂಟುಮಾಡುವದರಲ್ಲಿಯೂ ಅದರವನ್ನು ತೋರಿಸುತ್ತಲಿದಾರೆ. ಸಕಲಗುರುಗಳಿಗೂ ಗುರುಗಳಾದ ಶ್ರೀಶಂಕರಭಗವತ್ಪಾದರವರ ಕರುಣಾಕಟಾಕ್ಷವು ಮಠಗಳ ಮೇಲೆ ಬಿದ್ದು ಶಿಷ್ಯರುಗಳಿಗೆಲ್ಲ ತಮ್ಮತಮ್ಮ ಮಠದಲ್ಲಿಯೂ ಭಗವತ್ಪಾದರವರ ಉಪದೇಶದಲ್ಲಿಯೂ ಶ್ರದ್ಧಾಭಕ್ತಿಗಳು ಹೆಚ್ಚುವಂತಾಗಲೆಂದು ಹಾರೈಸೋಣ.

೨೬. ಉಪಸಂಹಾರ

೧೪೬. ಶ್ರೀಮನ್ನಾರಾಯಣನ ಅನುಗ್ರಹದಿಂದಲೂ ಶ್ರೀಶಂಕರಭಗವತ್ಪಾದಾಚಾರ್ಯರವರ ಕೃಪಾಕಟಾಕ್ಷದ ಬಲದಿಂದಲೂ ಆಚಾರ್ಯರ ವೃತ್ತಾಂತದ ಈ ಸಾರಸರ್ವಸ್ವವು ಸಮಾಪ್ತಿಯಾಯಿತು; ಎಂದರೆ ನಮಗೆ ಸಿಕ್ಕಿದಷ್ಟು ಕಥೆಗಳ, ಮತ್ತು ಅವುಗಳನು ಕುರಿತು ಬೇರೆಬೇರೆಯ ಭಾಷೆಗಳಲ್ಲಿ ಹಲವರು ಬರೆದಿರುವ ಗ್ರಂಥಗಳ, ಆಧಾರದಿಂದ ವಿಷಯಗಳನ್ನು ಸಂಗ್ರಹಿಸಿ ಜೋಡಿಸಿ ವಿಮರ್ಶಕ ದೃಷ್ಟಿಯಿಂದ ವಿಚಾರಮಾಡಿ ನೋಡಿ ನಮ್ಮ ಅಭಿಪ್ರಾಯವನ್ನು ಒಂದು ರೂಪಕ್ಕೆ ಇಳಿಸಿಕೊಂಡು ಬರೆದದ್ದಾಯಿತು.

ಈ ಚರಿತ್ರೆಯಿಂದ ಓದುಗರಿಗೆ ಎಷ್ಟರಮಟ್ಟಿಗೆ ಪ್ರಯೋಜನವಾಗಿದಿಯೋ ಅವರೇ ನೋಡಿಕೊಳ್ಳಬೇಕು. ನಮಗಂತೂ ವಿಷಯವನ್ನು ಪೂರ್ಣಭಕ್ತಿಯಿಂದ ಸಂಗ್ರಹಿಸಿ ಪಕ್ಷಪಾತವಿಲ್ಲದ ನಿರ್ಣಯಕ್ಕೆ ಬಂದು, ತಿಳಿದದ್ದನ್ನು ನಿರ್ಭೀತಿಯಿಂದ ಬರೆದಿದೇವೆಂಬ ತೃಪ್ತಿಯುಂಟಾಗಿರುತ್ತದೆ. ಆಚಾರ್ಯರ ವಿಷಯಕ್ಕೆ ಬರೆದಿರುವ ಗ್ರಂಥಗಳೆಲ್ಲವೂ ಅವರು ಈ ಲೋಕವನ್ನು ಬಿಟ್ಟು ಪರಂಧಾಮಕ್ಕೆ ತೆರಳಿದಮೇಲೆ ಹಲವು ಶತವರ್ಷಗಳ ಈಚೆಗೆ ಹೇಳಿಂದ ಕೇಳಿಂದ– ಎಂಬ ದಂತಕಥೆಗಳಿಂದಲೂ ಕಲ್ಪನಾಕಥೆಗಳಿಂದಲೂ ಅಲ್ಪಸ್ವಲ್ಪವಾಗಿ ಸಾಂಪ್ರದಾಯಿಕವಾಗಿ ದೊರೆತ ಸಂಗತಿಗಳಿಂದಲೂ ಆಯಾ ಗ್ರಂಥಕರ್ತೃಗಳು ಬರೆದ ಕಾವ್ಯಗಳಾಗಿರುತ್ತವೆ. ಆದ್ದರಿಂದ ಅವುಗಳನ್ನು ಇತಿಹಾಸಗ್ರಂಥಗಳೆಂದು ನಂಬುವದಕ್ಕೆ ಆಗುವಂತಿಲ್ಲ. ಇದರ ಜೊತೆಗೆ ಬೇರೆಬೇರೆಯ ಮಠಗಳ ಸಂಪ್ರದಾಯದ ಹೆಚ್ಚುಗಾರಿಕೆಯನ್ನು ತೋರಿಸಬೇಕೆಂಬ ಅಂಧಶ್ರದ್ಧಾವಂತರು ಬರೆಯಿಸಿದ ಅಥವಾ ಬರೆದ ಗ್ರಂಥಗಳೂ ಅವುಗಳೊಳಗೆ ಕೆಲವು ಇವೆ.. ಆದ್ದರಿಂದ ಆಚಾರ್ಯರ ಚರಿತ್ರೆಯ ವಿಷಯಕ್ಕೆ ನಮಗೆ ತಿಳಿದಿರುವದು ಬಹು ಸ್ವಲ್ಪ ಎಂದು ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ.

ಆಚಾರ್ಯರು ಬರೆದಿರುವ ಅತ್ಯಮೋಘಭಾಷ್ಯಗ್ರಂಥಗಳಲ್ಲಿ ಜೀವಿತವಾಗಿ ಇಂದಿಗೂ ಜನರಿಗೆ ಜೀವನ್ಮುಕ್ತಿಯ ದಿಗ್ದರ್ಶನವನ್ನು ಮಾಡುತ್ತಿರುವ ವಿಚಾರಗಳನ್ನು ಅಷ್ಟಾಗಿ ಗಣಿಸದೆ, ಪ್ರಚಾರದಲ್ಲಿರುವ ವೇದಾಂತೋಪದೇಶವನ್ನು ತುಂಬಿ ಅವೇ ಆಚಾರ್ಯರ ಅಭಿಪ್ರಾಯಗಳೆಂದು ಸಾರುವ ಧಾರ್ಷ್ಟ್ಯವನ್ನೂ ಕೆಲವರು ಮಾಡಿರುತ್ತಾರೆ. ಆಚಾರ್ಯರು ಸ್ಪಷ್ಟವಾಗಿ ಬರೆದಿರುವ ಆಚಾರವಿಚಾರಗಳ ವಿಷಯಕ್ಕೆ ನಾವು ಯಾವದೊಂದು ಶಂಕರವಿಜಯವನ್ನೂ ಪ್ರಮಾಣವಾಗಿ ಹಿಡಿಯದೆ, ಭಾಷ್ಯಗಳ ಆಧಾರದಿಂದಲೇ ಅವರ ಅಭಿಪ್ರಾಯಗಳನ್ನು ವಿವರಿಸಿ, ಅದಕ್ಕೆ ವಿರುದ್ಧವಾಗಿರುವ ಅಭಿಪ್ರಾಯಗಳನ್ನು ಸ್ಪಷ್ಟೋಕ್ತಿಗಳಿಂದ ಖಂಡಿಸುತ್ತಾ ಬಂದಿರುತ್ತೇವೆ.

ಚರಿತ್ರೆ, ಉಪದೇಶ– ಈ ಎರಡು ವಿಭಾಗಗಳಲ್ಲಿಯೂ ನಮ್ಮ ನಿಶ್ಚಿತೋಕ್ತಿಗಳು ಕಟುವಾಗಿ ಕಂಡದ್ದರಿಂದ ಕೆಲವರು ಔದಾಸೀನ್ಯವನ್ನೂ ಮತ್ತೆ ಕೆಲವರು ಅಸಮಾಧಾನವನ್ನೂ ತೋರಿಸುವರೆಂಬುದು ನಿರೀಕ್ಷಿಸತಕ್ಕದ್ದೇ ಆಗಿದೆ. ಆದರೆ ಅದೇನೂ ನಮಗೆ ಮುಖ್ಯವಲ್ಲ. ಆಚಾರ್ಯರ ವಿಷಯದಲ್ಲಿ ಶಂಕರವಿಜಯಗಳನ್ನು ಓದುವವರು ಅವುಗಳು ಇತಿಹಾಸಪುರಾಣಗಳಿಗೆ ಸರಿಗಟ್ಟುವ ಧರ್ಮಗ್ರಂಥಗಳೆಂದು ವಿಶ್ವಾಸವಿಡದೆ ಕಾವ್ಯಗಳೆಂದು ಮಾತ್ರ ಓದಿ, ಸಾರಗ್ರಹಣವನ್ನು ಮಾಡುವದಕ್ಕೆ ಈ ಚರಿತ್ರೆಯು ಒಂದಿಷ್ಟಾದರೂ ಸಹಾಯವಾದರೆ ನಾವು ಧನ್ಯರು. ಆಚಾರ್ಯರ ಅಮೋಘವಾದ ಅನುಗ್ರಹವೆನಿಸಿರುವ ಔಪನಿಷದದರ್ಶನದ ಬೆಲೆಯನ್ನೂ ಜ್ಞಾನಭಕ್ತಿವೈರಾಗ್ಯಾದಿಗಳ ವೀರ್ಯವನ್ನೂ ಓದುಗರು ಒಂದಿಷ್ಟಾದರೂ ಮನಗಂಡರೆ ನಾವು ಧನ್ಯರು.

ಆಚಾರ್ಯರು ದಕ್ಷಿಣದಲ್ಲಿ ಸದ್ವಂಶದಲ್ಲಿ ಹುಟ್ಟಿ ಚಿಕ್ಕವಯಸ್ಸಿನಲ್ಲಿಯೇ ಪರಮಹಂಸಪರಿವ್ರಾಜಕರಾಗಿ ಗುರೂಪದೇಶದಿಂದ ತಮಗೆ ದೊರೆತ ಅದ್ವೈತ ಸಿದ್ಧಾಂತದ ಕೆಚ್ಚನ್ನು ತೋರಿಸುವದಕ್ಕಾಗಿ ಭಾಷ್ಯಗಳನ್ನು ಬರೆದು ಕಾಲುನಡಗೆಯಿಂದ ಭರತಖಂಡದಲ್ಲೆಲ್ಲ ಸಂಚರಿಸಿ ವೈದಿಕಧರ್ಮದ ಉಜ್ಜೀವನಕ್ಕೆ ಅಸಮಾನ ಸಂಪ್ರದಾಯಕರ್ತೃಗಳೆನಿಸಿರುತ್ತಾರೆ. ನಿಜವಾದ ಅವರ ಇತಿಹಾಸವು ವಿವರವಾಗಿ ನಮಗೆ ದೊರೆಯದೆ ಇದ್ದರೂ ತಮ್ಮ ಹೆಸರು ಕಿವಿಗೆ ಬಿದ್ದಮಾತ್ರದಿಂದ ಶ್ರದ್ಧಾಗೌರವಗಳೂ ಭಕ್ತಿಗಳೂ ಉಜ್ಜ್ವಲವಾಗುವಂಥ ಪಾಪಹರವಾದ ಕೀರ್ತಿಯನ್ನು ನಾಲ್ಕುದಿಕ್ಕಿನಲ್ಲಿಯೂ ಹರಿಡಿರುತ್ತಾರೆ. ಆ ಮಹನೀಯರು ಸ್ಥಾಪಿಸಿರುವ ಪೀಠಗಳೆಂದು ಪ್ರಖ್ಯಾತಿಯನ್ನು ಹೊಂದಿರುವ ಮಠಗಳಿಗೆ ಸಲ್ಲುತ್ತಿರುವ ಗೌರವಗಳೆಲ್ಲವೂ, ಅವರಿಗೇ ಮೂಲತಃ ಸಲ್ಲತಕ್ಕವಾಗಿರುತ್ತವೆ. ಜಗತ್ತಿನಲ್ಲಿ ಇಂದಿಗೂ ಶಾಂತಿಯು ದೊರಕಿ, ಭೂಲೋಕವು ವೈಕುಂಠವೆನಿಸಬೇಕಾದರೆ, ಅವರು ಉಪದೇಶಿಸಿರುವ ಅನುಭವಾನುಸಾರಿಯಾದ ಅದ್ವೈತದ ತಿಳಿವಳಿಕೆಯನ್ನು ಪ್ರಚಾರಮಾಡುವದೊಂದೇ ಪರಮೋಪಾಯವಾಗಿರುತ್ತದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈಗಿನ ಮಠಗಳೂ ಅಧ್ಯಾತ್ಮಸಂಸ್ಥೆಗಳೂ ಸಾಧುಸಂನ್ಯಾಸಿಗಳೂ ಈ ಮಹಾಕಾರ್ಯಕ್ಕೆ ಕಟ್ಟುಬದ್ಧರಾಗುವಂತೆ ಅವರ ಅನುಗ್ರಹವಾಗಲೆಂದು ಪ್ರಾರ್ಥಿಸಿ ಅನಂತದಂಡಪ್ರಣಾಮಗಳನ್ನು ಮಾಡಿ ಈ ಬರೆವಣಿಗೆಯನ್ನು ಸಮಾಪ್ತಿಗೊಳಿಸುವೆವು.

ಓಂ ನಮಃ ಶಂಕರಾಯ, ಓಂ ನಮೋ ನಾರಾಯಣಾಯ !

ಪರಿಶಿಷ್ಟಗಳು

೧. ಶಂಕರಪರಾಮರ್ಶಕಪುರಾಣಗಳು

(ಚರಿತ್ರೆ. ಪು. ೧೪)

(ಅ) ಶಿವರಹಸ್ಯ

ಈ ಗ್ರಂಥವು ಈಗ "ಶ್ರೀಜಯಚಾಮರಾಜೇಂದ್ರಗ್ರಂಥರತ್ನಮಾಲೆ"ಯಲ್ಲಿ ಮೈಸೂರಿನಲ್ಲಿ ಪ್ರಕಟವಾಗಿದೆ. ಶಂಕರವಿಜಯದ ವ್ಯಾಖ್ಯಾನಕಾರರಾದ ಅಚ್ಯುತರಾಯ ಮೊದಲಕರವರು ಇದರ ಶ್ಲೋಕಗಳನ್ನು ಉದಾಹರಿಸಿರುತ್ತಾರೆ. ನಿರ್ಣಯಸಿಂಧುವಿನಲ್ಲಿ (ಪು ೧೫೪, ೧೫೪, ೧೭೩) ಇದನ್ನು ಅಲ್ಲಲ್ಲಿ ಪ್ರಮಾಣವಾಗಿ ಉದಾಹರಿಸಿದೆ.

ಸ್ಕಂದ ಉವಾಚ–

ತದಾ ಗಿರಿಜಯಾ ಪೃಷ್ಟಸ್ತ್ರಿಕಾಲಜ್ಞಸ್ತ್ರಿಲೋಚನಃ ।
ಭವಿಷ್ಯಚ್ಛಿವಭಕ್ತಾನಾಂ ಭಕ್ತಿಂ ಸಂವೀಕ್ಷ್ಯ ವಿಸ್ಮಯನ್[1] ॥ ೧ ॥
ಮುನೀಶ್ವರಾನ್ದೇವಲಯನ್ ದೇವೋ ಬಭಾಷೇ ವಚನಂ ಮುನೇ ।
ಶೃಣು ತ್ವ[2] ಮೇಭಿರ್ಗಣಪೈರ್ಮುನೀಶ್ವರೈಶ್ಚ ಸುರೈಸ್ತಥಾ ॥ ೨ ॥
ಪ್ರಭಾವಂ ಶಿವಭಕ್ತಾನಾಂ ಭವಿಷ್ಯಾಣಾಂ ಕಲಾವಪಿ ।

೧-೨. ಸ್ಕಂದನಿಂತೆಂದನು : ಎಲೈ ಮುನಿಯೆ,[3] ಆಗ ಗಿರಿಜೆಯು ಕೇಳಲು ತ್ರಿಕಾಲಜ್ಞನಾದ ಮುಕ್ಕಣ್ಣದೇವನು, ಮುಂದೆ ಬರಲಿರುವ ಶಿವಭಕ್ತರ ಭಕ್ತಿಯನ್ನು ಕಂಡು ಅಚ್ಚರಿಪಡುತ್ತಾ ತಲೆದೂಗುತ್ತಾ ಈ ವಚನವನ್ನು ಹೇಳಿದನು : ಈ ಗಣಾಧಿಪರೊಡನೆಯೂ ಮುನೀಶ್ವರರೊಡನೆಯೂ ದೇವತೆಗಳೊಡನೆಯೂ ಕಲಿಯುಗದಲ್ಲಿಕೂಡ ಮುಂದೆ ಬರಲಿರುವ ಶಿವಭಕ್ತರ ಪ್ರಭಾವವನ್ನು ನೀನು ಕೇಳು.

ಈಶ್ವರ ಉವಾಚ–

ಶೃಣು ದೇವಿ ಭವಿಷ್ಯಾಣಾಂ[4] ಭಕ್ತಾನಾಂ ಚರಿತಂ ಕಲೌ ॥ ೩ ॥
ವದಾಮಿ ಸಂಗ್ರಹೇಣೈವ[5] ಶ್ರವಣಾದ್[6] ಭಕ್ತಿವರ್ಧನಮ್ ।

---

1. 'ವಿಸ್ಮಯನ್' ಎಂದು ಆರ್ಷಪ್ರಯೋಗ. 'ವಿಸ್ಮಯೇ' ಎಂಬ ಪಾಠವನ್ನು ಮಾಧವೀಯಟೀಕಾಕಾರನು ಒಪ್ಪಿ ಆಶ್ಚರ್ಯವುಂಡಾಗಲು ಎಂಬರ್ಥವನ್ನು ತೆಗೆದಿರುತ್ತಾನೆ.
2. 'ಶೃಣುಧ್ವಮ್' ಎಂಬುದಕ್ಕಿಂತ ಇದು ಮೇಲು.
3. ಸ್ಕಂದನು ಒಬ್ಬ ಋಷಿಗೆ ಹೇಳುತ್ತಿದಾನೆ.
4. 'ಭವಿಷ್ಯತ್ಸದ್ಭಕ್ತಾನಾಂ' ಪಾ॥
5. 'ಸಂಗ್ರಹೇಣಾಹವತ್' ಪಾ॥
6. 'ಶೃಣ್ವತಾಂ' ಪಾ॥

ಗೋಪನೀಯಂ ಪ್ರಯತ್ನೇನ ನಾಖ್ಯೇಯಂ ಯಸ್ಯ ಕಸ್ಯಚಿತ್ ॥ ೪ ॥
ಪಾಪಘ್ನಂ ಪುಣ್ಯದಾಯಿಷ್ಯಂ ಶ್ರೋತೃಣಾಂ ಮುಜ್ಜ್ವಲಾವಹಮ್ ।

೩–೪. ದೇವಿಯೆ, ಕಲಿಯಲ್ಲಿ ಬರಲಿರುವ ಭಕ್ತರ ಚರಿತೆಯನ್ನು ಹೇಳುವೆನ ಕೇಳು. ಇದು ಕೇಳಿದಮಾತ್ರದಿಂದ ಭಕ್ತಿಯನ್ನು ಹೆಚ್ಚಿಸತಕ್ಕದ್ದು; ಪ್ರಯತ್ನ ಪೂರ್ವಕವಾಗಿ ಗುಟ್ಟುಮಾಡಿಡತಕ್ಕದ್ದು; ಯಾರಿಗೆಂದರೆ ಅವರಿಗೆ ಹೇಳತಕ್ಕದ್ದಲ್ಲ, ಪಾಪವನ್ನು ಕಳೆಯತಕ್ಕದ್ದು, ಪುಣ್ಯಕರವಾದದ್ದು, ಆಯುಸ್ಸನ್ನು ಕೊಡತಕ್ಕದ್ದು, ಕೇಳುವದರಿಗೆ ಮಂಗಳವನ್ನುಂಟುಮಾಡತಕ್ಕದ್ದು.

ಪಾಪಕರ್ಮೈಕನಿರತಾನ್ ವಿರತಾನ್ ಸರ್ವಕರ್ಮಸು[1] ॥ ೫ ॥
ವರ್ಣಾಶ್ರಮಪರಿಭ್ರಷ್ಟಾನ್ ಧರ್ಮಪ್ರಸ್ರವಣಾನ್[2] ಜನಾನ್ ।
ಕಲ್ಯಬ್ಧೌ ಮಜ್ಜಮಾನಾಂಸ್ತಾನ್ ದೃಷ್ಟ್ವಾನುಕ್ರೋಶತೋಮ್ಬಿಕೇ ॥
ಮದಂಶಜಾತಂ ದೇವೇಶಿ ಕಲಾವಪಿ ತಪೋಧನಮ್ ।
ಕೇರಲೇಷು ತದಾ[3] ವಿಪ್ರಂ ಜನಯಾಮಿ ಮಹೇಶ್ವರಿ ॥ ೬ ॥

೫–೬. ಪಾಪಕರ್ಮದಲ್ಲಿ ನಿರತರಾಗಿ, ಸರ್ವಕರ್ಮಗಳಲ್ಲಿಯೂ ವಿರಕ್ತರಾಗಿ, ವರ್ಣಾಶ್ರಮಗಳಿಂದ ತೀರ ಭ್ರಷ್ಟರಾಗಿ, ಧರ್ಮದಿಂದ ಜಾರುತ್ತಿರುವ ಜನಗಳು ಕಲಿಸಮುದ್ರದಲ್ಲಿ ಮುಳುಗುತ್ತಿರುವದನ್ನು ಕಂಡು ಕನಿಕರದಿಂದ, ಎಲೌ ಅಂಬಿಕೆ, ದೇವೇಶಿ, ಮಹೇಶ್ವರಿ, ನನ್ನ ಅಂಶದಿಂದ[4] ಕೇರಳದಲ್ಲಿ ಒಬ್ಬ ತಪೋಧನನಾದ ವಿಪ್ರನನ್ನು ಆಗ ಹುಟ್ಟಿಸುವೆನು.

ತಸ್ಯೈವ ಚರಿತಂ ತೇಽದ್ಯ ವಕ್ಷ್ಯಾಮಿ ಶೃಣು ಶೈಲಜೇ ।
ಕಲ್ಯಾದಿಮೇ[5] ಮಹಾದೇವಿ ಸಹಸ್ರದ್ವಿತಯಾತ್ ಪರಮ್ ॥ ೭ ॥
ಸಾರಸ್ವತಾಸ್ತಥಾ ಗೌಡಾ ವಿಂಶ್ಯಾಃ ಕರ್ಣಾಟಿಜಿನೋ[6] ದ್ವಿಜಾಃ ।
ಆಮುಷ್ಯಾನಾಶನಾ ದೇವಿ ಹ್ಯಾರ್ಯಾವರ್ತಾನು[7] ವಾಸಿನಃ ॥ ೮ ॥
ಔತ್ತರಾ ವಿನ್ಧ್ಯನಿಲಯಾ ಭವಿಷ್ಯನ್ತಿ ಮಹೀತಲೇ ।

೭–೯. ಪಾರ್ವತಿಯೆ, ಅವನ ಚರಿತ್ರೆಯನ್ನು ನಿನಗೆ ಈಗ ಹೇಳುವೆನು, ಕೇಳು. ಮಹಾದೇವಿಯೆ, ಕಲಿಯ ಆದಿಭಾಗದಲ್ಲಿ ಎರಡು ಸಾವಿರ ವರ್ಷಗಳಾದ

---

1. 'ಧರ್ಮಕರ್ಮಸು' ಪಾ॥
2. 'ವರ್ಣಪ್ರಸ್ರವಣಾನ್', 'ಅಧರ್ಮಪ್ರವಣಾನ್' (ಅಧರ್ಮಕ್ಕೆ ಒಲಿಯುವ).
3. 'ತಥಾ'
4. 'ನನ್ನ ಅಂಶದಿಂದ' ಎಂಬುದು ೭, ೧೪, ೧೫, ೩೭, ೩೯– ಈ ಶ್ಲೋಕಗಳಲ್ಲಿದ್ದೆ 'ಶಂಕರ ಏವ ಸಾಕ್ಷಾತ್' ಮಾ. ಶಂ. (ಚ. ಪು. ೧೦೮) ಎಂಬುದಕ್ಕೆ ಇದು ವಿರುದ್ಧ.
5. 'ಕಲಾವಿಮೇ' 6. 'ಕರ್ಣಾಟಿಜನಾ', 'ಕರ್ಣಾಜಿನಾ'
7. 'ಹಿ' ಎಂಬುದಿಲ್ಲದೆ 'ಆರ್ಯಾವರ್ತಾ...' ಪಾ॥

ಬಳಿಕ ಸಾರಸ್ವತರೂ ಗೌಡರೂ ಕಾರ್ಣಾಟಿನ (ಕರ್ಣಾಜಿನ ?)ರೂ ಆದ ದ್ವಿಜರು ಹಸಿಯ ವಿಾನನ್ನು ತಿನ್ನುವವರಾಗಿ, ಎಲೌ ದೇವಿಯೆ, ಆರ್ಯಾವರ್ತದಲ್ಲಿರುವ ಉತ್ತರದಿಕ್ಕಿನವರೂ ವಿಂಧ್ಯವಾಸಿಗಳೂ ಭೂಮಿಯಮೇಲೆ ಜನಿಸುವರು.

ಶಬ್ದಾರ್ಥಜ್ಞಾನಕುಶಲಾಸ್ತರ್ಕಕರ್ಕಶಬುದ್ಧಯಃ ॥ ೧೦ ॥
ಜೈನಾ ಬೌದ್ಧಾ ಬುದ್ಧಿಯುಕ್ತಾ[1] ವಿಾವಾಂಸಾನಿರತಾಃ ಕಲೌ ।
ವೇದಬೋಧಿತವಾಕ್ಯಾನಾಮನ್ಯಥೈವ ಪ್ರರೋಚಕಾಃ ॥ ೧೧ ॥
ಪ್ರತ್ಯಕ್ಷವಾದಕುಶಲಾಃ ಶಲ್ಯಭೂತಾಃ ಕಲೌ ಯುಗೇ ।
ವಿಶ್ರಾಃ ಶಾಸ್ತ್ರಮಹಾಶಸ್ತ್ರೈರದ್ವೈತಚ್ಛೇದಿನೋಽನ್ವಿಕೇ ॥ ೧೨ ॥
ಕರ್ಮೈವ ಪರಮಂ ಶ್ರೇಯೋ ನೈವೇಶಃ ಫಲದಾಯಕಃ ।
ಇತಿ ಯುಕ್ತಿಪರಾಮೃಷ್ಟವಾಕ್ಯೈರುದ್ಘೋಷಯಂತಿ ಚ ॥ ೧೩ ॥
ತೇನ ಘೋರಕುಲಾಚಾರಾಃ ಕರ್ಮಸಾರಾ ಭವಂತಿ ಚ[2] ॥ ೧೩ ॥

೧೦–೧೩. ಶಬ್ದಾರ್ಥಜ್ಞಾನದಲ್ಲಿ ಕುಶಲರಾಗಿ, ತರ್ಕದಿಂದ ಕರ್ಕಶವಾದ ಬುದ್ಧಿಯುಳ್ಳವರಾಗಿ, ಜೈನರು, ಬೌದ್ಧರು, ಮತ್ತು ವಿಾವಯಂಸಕರು[3]– ಇಂಥ ಪಂಡಿತರು ಕಲಿಯಲ್ಲಿ ಹುಟ್ಟುವರು. ವೇದದಲ್ಲಿರುವ (ಜ್ಞಾನ)ವಾಕ್ಯಗಳಿಗೆ[4] ಬೇರೆ ರೀತಿಯ ಅರ್ಥವನ್ನು ಹೇಳಿ ರುಚಿಯನ್ನು ಹುಟ್ಟಿಸುತ್ತಾ[5] ತಿವೆಯೆ ಪ್ರತ್ಯಕ್ಷವಾದದಲ್ಲಿ ಕುಶಲರಾಗಿ, ಕಲಿಯಲ್ಲಿ ಕಂಟಕರಾಗಿ ವಿಶ್ರರು,[6] ಶಾಸ್ತ್ರವೆಂಬ ಮಹಾ ಶಸ್ತ್ರಗಳಿಂದ ಅದ್ವೈತವನ್ನು ಕತ್ತರಿಸುತ್ತಾ, ಎಲೌ ಅಂಬಿಕೆಯೆ, ಕರ್ಮವೇ ಎಲ್ಲಕ್ಕಿಂತ ಹೆಚ್ಚಿನ ಶ್ರೇಯಸ್ಸು, ಫಲವನ್ನು ಕೊಡುವ ಈಶ್ವರನು ಇಲ್ಲವೇ ಇಲ್ಲ– ಎಂದು ಯುಕ್ತಿಪೂರ್ವಕವಾಕ್ಯಗಳಿಂದ ಜನರಿಗೆ ಬೋಧನೆಮಾಡುತ್ತಲೂ ಇರುವರು. ಅದರಿಂದ ಘೋರವಾದ ಕುಲಾಚಾರವುಳ್ಳವರಾಗಿ ಕರ್ಮವೇ (ವೇದದ) ಸಾರವೆನ್ನುವವರಾಗುವರು.

ತೇಷಾಮುತ್ಪಾಟನಾರ್ಥಾಯ[7] ಸೃಜಾವಿಾಶೇ ಮದಂಶತಃ ॥ ೧೩ ॥
ಕೇರಳೇಶ ಶಲಗ್ರಾಮೇ ವಿಪ್ರಪತ್ನ್ಯಾಂ ಮದಂಶತಃ ।
ಭವಿಷ್ಯತಿ ಮಹಾದೇವಿ ಶಙ್ಕರಾಖ್ಯೋ ದ್ವಿಜೋತ್ತಮಃ ॥ ೧೫ ॥
ಉಪನೀತಸ್ತದಾ ಮಾತ್ರಾ ವೇದಾನ್ ಸಾಙ್ಗಾನ್ ಗ್ರಹೀಷ್ಯತಿ ॥ ೧೫ ॥

---

1. 'ಬುದ್ಧಿಯುತಾ' 2. 'ಕರ್ಮಭಾರಾ ಭವಂತ್ಯಥಾ' ಮಾಧವೀಯ ಟೀಕಾಪಾಠ
3, ವೇದಾಂತಿಗಳನ್ನು ಇಲ್ಲಿ ಹೇಳಿಲ್ಲ.
4. ಬೋಧಿತ' (?)– ಎಂಬುದರ ಅರ್ಥವಿದು.
5. ಕರ್ಮವಿಧಿಗೆ ಇವು ಅರ್ಥವಾದಗಳೆನ್ನುತ್ತಾ.
6. ಇವು ಮಂಡನವಿಶ್ರರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದೆ . ಹಿಂದೆನೆಯ ಶ್ಲೋಕದಲ್ಲಿಯೂ ಬಂದಿದೆ. 7. 'ಉದ್ಘಾಟನಾರ್ಥಾಯ'

೧೪–೧೫. ಅವರನ್ನು ನಾಶಗೊಳಿಸುವದಕ್ಕಾಗಿ, ಎಲೌ ಈಶ್ವರಿಯೆ, ನನ್ನ ಅಂಶದಿಂದ ಸೃಷ್ಟಿಸುವೆನು. ಕೇರಲದಲ್ಲಿ ಶಶಲಗ್ರಾಮದಲ್ಲಿ[1] ಬ್ರಾಹ್ಮಣಪತ್ನಿಯಲ್ಲಿ ನನ್ನ ಅಂಶದಿಂದ ಮಹಾದೇವಿಯೆ, ಶಂಕರನೆಂಬ ದ್ವಿಜೋತ್ತಮನು ಹುಟ್ಟುವನು. ಆಗ ತಾಯಿಯಿಂದ ಉಪನೀತನಾಗಿ[2] ಸಾಂಗವೇದಗಳನ್ನು ಗ್ರಹಿಸುತ್ತಾನೆ.

ಆಬ್ದಾವಧಿ ತತಃ ಶಬ್ದೇ ವಿಹೃತ್ಯ[3] ಸ ತು ತರ್ಕಜಾಮ್ ॥ ೧೬ ॥
ಮತಿಂ ವಿಮಾಮಾಂಸಮಾನೊಽಸೌ ಕೃತ್ವಾ ಶಾಸ್ತ್ರೇಷು ನಿಶ್ಚಯಮ್ ।
ವಾದಿಮತ್ತದ್ವಿಪವರಾನ್ ಶಙ್ಕರೋತ್ತಮಕೇಸರೀ ॥ ೧೭ ॥
ಭಿನತ್ತ್ಯೇವ ತದಾ ಬುದ್ಧಾನ್[4] ಸಿದ್ಧವಿದ್ಯಾನಪಿ ದ್ರುತಮ್ ।
ಜೈನಾನ್ ವಿಜಿಗ್ಯೇ[5] ತರಸಾ ತಥಾಽನ್ಯಾನ್ ಕುಮತಾನುಗಾತ್ ॥ ೧೮ ॥

೧೬–೧೮. ಒಂದು ವರ್ಷದವರೆಗೆ ಶಬ್ದಶಾಸ್ತ್ರದಲ್ಲಿ ವಿಹರಿಸಿ ಆವನು ತರ್ಕಜನ್ಯಮತಿಯನ್ನು ವಿಮಾಮಾಂಸಮಾಡಲೆಳಸಿ, ಶಾಸ್ತ್ರಗಳಲ್ಲಿ ನಿಶ್ಚಯವನ್ನು ಮಾಡಿಕೊಂಡು, ಶಂಕರನೆಂಬ ಆ ಉತ್ತಮಸಿಂಹವು ವಾದಿಗಳೆಂಬ ಮದ್ದಾನೆಗಳಾದ ಬೌದ್ಧರನ್ನು ಆವರು ಸಿದ್ಧವಿದ್ಯರಾಗಿದ್ದರೂ ಸೀಳುವನು. ಜೈನರನ್ನೂ ಮತ್ತು ಕುಮತಗಳನ್ನನುಸರಿಸುವ ಇತರರನ್ನೂ ಬೇಗನೆ ಜಯಿಸುವನು.

ತದಾ ಮಾತರಮಾಮನ್ತ್ರ್ಯ ಪರಿವ್ರಾಟ್ಸ್ಯ ಭವಿಷ್ಯತಿ ।
ಪರಿವ್ರಾಜಕರೂಪೇಣ ಮಿಶ್ರಾನಾಶ್ರಮದೂಷಕಾನ್ ॥ ೧೯ ॥
ದಣ್ಡಹಸ್ತಸ್ತಥಾ ಕುಣ್ಡೀ[6] ಕಾಷಾಯವಸನೋಜ್ಜ್ವಲಃ
ಭಸ್ಮದಿಗ್ಧತ್ರಿಪುಣ್ಡ್ರಾಙ್ಕೋ ರುದ್ರಾಕ್ಷಾಭರಣೋಜ್ಜ್ವಲಃ ॥ ೨೦ ॥
ತಾರರುದ್ರಾರ್ಥ[7] ಪಾರೀಣಃ ಶಿವಲಿಙ್ಗಾರ್ಚನಪ್ರಿಯಃ ।
ಸ್ವಶಿಷ್ಯೈಃ ಸ್ತಾದೃಶೈರ್ಘುಷ್ಯನ್ ಭಾಷ್ಯವಾಕ್ಯಾನಿ ಸೋಽವ್ಯಕೇ ॥ ೨೧ ॥
ಮದ್ದತ್ತವಿದ್ಯಯಾ ಭಿಕ್ಷುರ್ವಿರಾಜತಿ[8] ಶಶಾಙ್ಕವತ್ ॥

೧೯–೨೧. ಆಮೇಲೆ ತಾಯಿಯ ಅನುಮತಿಯನ್ನು ಪಡೆದುಕೊಂಡು ಆತನು ಪರಿವ್ರಾಜಕನಾಗುವನು. ಪರಿವ್ರಾಜಕರೂಪದಿಂದ ಆಶ್ರಮವನ್ನು ನಿಂದೆ ಮಾಡಿದ ಮಿಶ್ರರನ್ನು[9] ಭಸ್ಮವನ್ನು ಬಳಿದ ತ್ರಿಪುಣ್ಡ್ರಾಂಕಿತನಾಗಿ[10] ರುದ್ರಾಕ್ಷಾಭರಣದಿಂದ ಹೊಳೆಯುತ್ತಾ[11] ತಾರಕರುದ್ರಾರ್ಥಗಳಲ್ಲಿ ಪಾರೀಣನಾಗಿ ಶಿವ

---

1. ಚ. ಪು. ೩೨. 2. ಇದು ವಾದಗ್ರಸ್ತ. ಚ. ಪು. ೫೧,
3. 'ವಿಹೃತೇ'
4. 'ಮಹಾವಿದ್ಯಾನ್' ಎಂಬ ಟೀಕಾಪಾಠಕ್ಕಿಂತ ಮೇಲು ; ಮುಂದೆ 'ಜೈನರು' ಬಂದಿದಾರೆ. 5. ಭೂತವಾದರೂ ಭವಿಷ್ಯಾರ್ಥ. 6. 'ಕುಂಭೀ'
7. 'ರುದ್ರಾಕ್ಷಪಾರೀಣಃ' 8. ಆತ್ಮನೇಪದವಿರಬೇಕು ; ಆರ್ಷ.
9. ಮಿಶ್ರಪದವು ಮತ್ತೆ ಬಂದಿದೆ. 10–11. ಆಚಾರ್ಯರು ಶೈವರ? ಚ.ಪು. ೯೧.

ಲಿಂಗಾರ್ಚನೆಯಲ್ಲಿ ಪ್ರೀತಿಯಿಟ್ಟವನಾಗಿ[1] ಅಂಥ ಸ್ವಶಿಷ್ಯನಿಂದೊಡಗೂಡಿ ಭಾಷ್ಯ ವಾಕ್ಯಗಳನ್ನು ಘೋಷಿಸುತ್ತಾ ಎಲೌ ಅಂಬಿಕೆಯೆ, ನಾನು ಕೊಟ್ಟ ವಿದ್ಯೆಯಿಂದ[2] ಆ ಭಿಕ್ಷುವು ಚಂದ್ರನಂತೆ ಪ್ರಕಾಶಿಸುತ್ತಿರುವನು.

ಸೋ*ದ್ವೈತೋಚ್ಛೇದಕಾನ್ ಪಾಪಾನುಚ್ಛಿದ್ಯಾಕ್ಷಿಪ್ಯ ತರ್ಕತಃ ॥೨೨॥
ಸ್ವಮತಾನುಗತಾನ್ ದೇವಿ ಕರೋತ್ಯೇವ ನಿರರ್ಗಳಮ್ ।
ತಥಾಪಿ ಪ್ರತ್ಯಯಸ್ತೇಷಾಂ ನೈವಾಸೀಚ್ಛ್ರುತಿದರ್ಶನೇ[3] ॥೨೩॥
ವಿಶ್ರಾಃ ಶಾಸ್ತ್ರಾರ್ಥಕುಶಲಾಸ್ತರ್ಕಕರ್ಕಶಬುದ್ಧಯಃ ।
ತೇಷಾಮುದ್ಬೋಧನಾರ್ಥಾಯ ಶಿಷ್ಯೇ[4] ಭಾಷ್ಯಂ ವದಿಷ್ಯತಿ ॥೨೪॥
ಭಾಷ್ಯಗುಪ್ಯಮಹಾವಾಕ್ಯೈಸ್ತಿಷ್ಯಜಾತಾನ್ ಹನಿಷ್ಯತಿ ॥೨೪॥

೨೨–೨೪. ಆತನು ಆದ್ವೈತವನ್ನು ನಾಶಗೊಳಿಸುವ ಪಾಪಿಗಳನ್ನು ತರ್ಕದಿಂದ ಆಕ್ಷೇಪಿಸಿ ನಾಶಮಾಡಿ ಯಾವ ಅಡ್ಡಿಯೂ ಇಲ್ಲದೆ, ದೇವಿಯೆ, ಸ್ವಮತಾನುಯಾಯಿಗಳನ್ನಾಗಿ ಮಾಡುವನು. ಆದರೂ ಅವರಿಗೆ ಶ್ರುತಿದರ್ಶನದಲ್ಲಿ ನಂಬಿಕೆಯುಂಟಾಗಲಿಲ್ಲ.[5] ವಿಶ್ರರು[6] ಶಾಸ್ತ್ರಾರ್ಥದಲ್ಲಿ ಕುಶಲರು; ತರ್ಕಕರ್ಕಶಬುದ್ಧಿಗಳು; ಅವರಿಗೆ ಬೋಧನಮಾಡುವದಕ್ಕಾಗಿ ಕಲಿಯುಗದಲ್ಲಿ (ಯತಿಯು) ಭಾಷ್ಯವನ್ನು ಮಾಡುವನು. ಭಾಷ್ಯದಲ್ಲಿ ಘೋಷಿಸಿರುವ ಮಹಾವಾಕ್ಯಗಳಿಂದ[7] ಕಲಿಯಲ್ಲಿ ಹುಟ್ಟಿದ (ಮತ)ದವರನ್ನು ನಾಶಗೊಳಿಸುವನು.

ವ್ಯಾಸೋಪದಿಷ್ಟಸೂತ್ರಾಣಾಂ ದ್ವೈತವಾಕ್ಯಾತ್ಮನಾಂ ಶಿವೇ ॥೨೫॥
ಅದ್ವೈತಮೇವ ಸೂತ್ರಾರ್ಥಂ ಪ್ರಾಮಾಣ್ಯೇನ ಕರಿಷ್ಯತಿ ।
ಅವಿಮುಕ್ತೇ ಸಮಾಸೀನಂ ವ್ಯಾಸಂ ವಾಕ್ಯೈರ್ವಿಜಿತ್ಯ ಚ ॥
ಶಙ್ಕರಂ ಸ್ತೌತಿ ಹೃಷ್ಟಾತ್ಮಾ ಶಙ್ಕರಾಖ್ಯೋಽಥ ಮುಸ್ಕರೀ ॥೨೬॥

೨೫–೨೬. ವ್ಯಾಸೋಪದಿಷ್ಟವಾದ ದ್ವೈತವಾಕ್ಯರೂಪಗಳಾಗಿರುವ[8] ಸೂತ್ರ

---

1. ಚ. ಪು. ಲಲ,

2. ಇದರ ಅಭಿಪ್ರಾಯವೇನೆಂಬುದು ತಿಳಿಯಲಿಲ್ಲ. ಈಶ್ವರನಿಂದ ನೇರವಾಗಿ ಯಾವ ವಿದ್ಯೆ ಆಚಾರ್ಯರಿಗೆ ಬಂತು ?

3. ಈ ಶ್ಲೋಕದಮೇಲೆ 'ಸೂತ ಉವಾಚ' ಎಂದು ಮೂಲದಲ್ಲಿದೆ; ಏಕೋ ತಿಳಿಯಲಿಲ್ಲ, 4. 'ಯತಿರ್ಭಾಷ್ಯಮ್'

5. ಭವಿಷ್ಯದರ್ಥದಲ್ಲಿ ಭೂತಕಾಲದ ಕ್ರಿಯಾಪದ.

6. ಮೂರನೆಯ ಸಲಕ್ಕೆ ಇದೇ ಶಬ್ದ ಬಂದಿದೆ.

8. ತತ್ತ್ವಮಸ್ಯಾದಿ ವಾಕ್ಯಗಳೆಂಬ ಅಭಿಪ್ರಾಯವಿರಬಹುದೆ ? ಚರಿತ್ರೆಯ ಲಂನೆಯ ಪುಟವನ್ನು ನೋಡಿ.

6. ದ್ವೈತಪರವಾದ ಎಂಬರ್ಥವೂ ಇದೆ; ಪ್ರಕೃತಕ್ಕೆ ಹೊಂದದು,

ಗಳಿಗೆ, ಎಲೌ ಶಿವೆಯೆ, ಆದ್ವೈತವೇ[1] ಸೂತ್ರಾರ್ಥವೆಂದು ಪ್ರಮಾಣಯುಕ್ತವಾಗಿ ಅರ್ಥವನ್ನು ಮಾಡುವನು. ಅವಿಮುಕ್ತಕ್ಷೇತ್ರದಲ್ಲಿರುವ ವ್ಯಾಸರನ್ನು ವಾಕ್ಯಗಳಿಂದ ಜಯಿಸಿ ಆ ಬಳಿಕ[2] ಶಂಕರನೆಂಬ ಯತಿಯು ಶಂಕರರನ್ನು ಸ್ತುತಿಸುತ್ತಾನೆ.

ಶಙ್ಕರ ಉವಾಚ–

ಸತ್ಯಂ ಸತ್ಯಂ ನೇಹ ನಾನಾಸ್ತಿ ಕಿಞ್ಚ–
ದೀಶಾವಾಸ್ಯಂ ಬ್ರಹ್ಮ ಸತ್ಯಂ ಜಗದ್ಧಿ ।
ಬ್ರಹ್ಮೈವೇದಂ ಬ್ರಹ್ಮ ಪಶ್ಚಾತ್ಪುರಸ್ತಾ–
ದೇಕೋ ರುದ್ರೋ ನ ದ್ವಿತೀಯಾಯ[3] ತಸ್ಥೌ ॥೨೮[4]॥

೨೮. ಶಂಕರನಿಂತೆಂದನು : ಸತ್ಯವಾಗಿ ಸತ್ಯವಿದು ; ಇದರಲ್ಲಿ ಒಂದಿಷ್ಟಾದರೂ ನಾನಾತ್ವವಿಲ್ಲ. ಜಗತ್ತು ಈಶಾವಾಸ್ಯಸತ್ಯವಾದ ಬ್ರಹ್ಮವೇ. ಇದು ಬ್ರಹ್ಮವೇ, ಹಿಂದಕ್ಕೂ ಮುಂದಕ್ಕೂ ಬ್ರಹ್ಮವೇ. ಎರಡನೆಯದಕ್ಕೆ ಅವಕಾಶವಿಲ್ಲದಂತೆ ಒಬ್ಬನೇ ರುದ್ರನಿರುತ್ತಾನೆ.

ಏಕೋ ದೇವಃ ಸರ್ವಭೂತೇಷು ಗೂಢೋ
ನಾನಾಕಾರೋದ್ಭಾಸಿ ಭಾನೈಸ್ತ್ವಮಾತ್ಮಾ ।
ಪೂರ್ಣಾಽಪೂರ್ಣೋ ನಾಮರೂಪೈರ್ವಿಹೀನೋ
ವಿಶ್ವಾತೀತೋ ವಿಶ್ವರೂಪೋ[5] ಮಹೇಶಃ ॥೨೯॥

೨೯. ಒಬ್ಬ ದೇವನೇ ಸರ್ವಭೂತಗಳಲ್ಲಿಯೂ ಅಡಗಿರುತ್ತಾನೆ. ಆತ್ಮನಾದ ನೀನೇ ಭಾನಗಳಿಂದ ನಾನಾಕಾರವಾಗಿ ತೋರುತ್ತಿರುವೆ. ಪೂರ್ಣನು, ಅಪೂರ್ಣನು, ನಾಮರೂಪಗಳಿಂದ ರಹಿತನಾದವನು ; ವಿಶ್ವಾತೀತನು, ವಿಶ್ವರೂಪನಾದ ಮಹೇಶ್ವರನು.

ಭವ್ಯಂ ಭವ್ಯಂ ವರ್ತಮಾನಂ ತ್ವಮೀಶೇ[6]
ಸಾಮಾನ್ಯಂ ವೈ ದೇಶಕಾಲಾದಿಹೀನಃ ।
ಸೋ ತೇ[7] ಮೂರ್ತಿರ್ವೇದವೇದ್ಯಸ್ತ್ವಸಙ್ಗಃ
ಸಙ್ಗೀವ ತ್ವಂ ಲಿಙ್ಗಸಂಸ್ಥೋ ವಿಭಾಸಿ ॥೩೦॥

---

1. ಆಚಾರ್ಯರ ಹಿಂದೆ ಆದ್ವೈತವು ಇತ್ತೆಂಬ ಸೂಚನೆ ಇಲ್ಲಿಲ್ಲ. ಚರಿತ್ರೆಯ ಪುಟ ೩೧೪ ನೋಡಿ.

2. ವ್ಯಾಸದರ್ಶನವಾದಬಳಿಕ; ಆದರೆ ಚರಿತ್ರೆಯ ೯೪, ೧೦೪ನೆಯ ಪುಟಗಳನ್ನು ನೋಡಿರಿ.

3. 'ದ್ವಿತೀಯೋಽವತಸ್ಥೌ' (?) 4. 'ವಿಶ್ವನಾಥೋ' 5. 'ತ್ವಯೀಶೇ'

6. 'ನಾತೋ'

೨೦. ಭೂತಭವಿಷ್ಯದ್ವರ್ತಮಾನಗಳನ್ನು ನೀನೇ ಆಳುತ್ತಿರುವೆ. ದೇಶ ಕಾಲಾದಿಗಳಲ್ಲದ ಸಾಮಾನ್ಯವು ನೀನು. ನಿನಗೆ ಮೂರ್ತಿಯಿಲ್ಲ, ವೇದವೇದ್ಯನೂ ಅಸಂಗನೂ ಆಗಿದ್ದು ಲಿಂಗದಲ್ಲಿರುವಾಗ[1] ಸಂಗಿಯಂತೆ ಕಾಣುವೆ.

ತ್ವದ್ಭಾಸಾ ವೈ ಸೋಮಸೂರ್ಯಾನಲೇನ್ದ್ರಾ
ಭೀಷ್ಮೇಣೋದೇತ್ಯೇಷ ಸೂರ್ಯಶ್ಚ ದೇವಃ ।
ತ್ವಂ ವೇದಾದೌ ಸ್ವರ ಏಕೋ[2] ಮಹೇಶೋ
ವೇದಾನ್ತಾನಾಂ ಸಾರವಾಕ್ಯಾರ್ಥವೇದ್ಯಃ ॥ ೩೧ ॥

೩೧. ನಿನ್ನ ಬೆಳಕಿನಿಂದಲೇ ಚಂದ್ರ, ಸೂರ್ಯ, ಅಗ್ನಿ, ಇಂದ್ರ– ಇವರು. ನಿನ್ನ ಅಂಜಿಕೆಯಿಂದಲೇ ಈ ಸೂರ್ಯದೇವನೂ ಉದಯಿಸುತ್ತಿರುವನು. ನೀನೇ ವೇದದ ಆದಿಯಲ್ಲಿರುವ ಸ್ವರವು ; ಮಹೇಶನು. ವೇದಾಂತಗಳ ಸಾರವಾಕ್ಯಾರ್ಥವು,[3] ವೇದ್ಯನು.

ವೇದ್ಯೋ ವೈದ್ಯಃ[4] ಸರ್ವವೇದಾತ್ಮವಿದ್ಯೋ[5]
ಭಿದ್ದೇಽಽದ್ದೃಷ್ಟ್ಯಾ ದ್ಯೋತವದ್[6] ಹೃತ್ತಮೋಽದ್ಯ ।
ಓಂಕಾರಾರ್ಥಃ ಪುರುಷಸ್ತ್ವಂ[7] ಋತಂ ಚ
ಸತ್ಯಜ್ಞಾನಾನನ್ದಭೂಮಾಸಿ ಸೋಮ ॥ ೩೨ ॥

೩೨. ವೇದ್ಯನು, ತಿಳಿದವನು, ಸರ್ವವೇದರೂಪವಾದ ಆತ್ಮವಿದ್ಯಾ ಸ್ವರೂಪನು, ನಿನ್ನ ದೃಷ್ಟಿಯಿಂದ ಹೃದಯದ ತಮಸ್ಸು ನಾಶವಾಗುವದು. ಓಂಕಾರದ ಅರ್ಥವಾದ ಪುರುಷನು, ಋತವೂ ನೀನು, ಎಲೈ ಉಮಾಸಹಿತನೆ, ಸತ್ಯಜ್ಞಾನಾನಂದಭೂಮನೇ ನೀನು.

ಬದ್ಧೋ ಮುಕ್ತೋ ನಾಸಿ ಸಙ್ಗೀ ತ್ವಸಙ್ಗೀ[8]
ಪ್ರಾಣಪ್ರಾಣೋ ಮನಸಸ್ತ್ವಂ ಪುನಶ್ಚ ।
ತ್ವತ್ತೋ ವಾಚೋ ಮನಸಾ ಸಂನಿವೃತ್ತಾ
ಸ್ತ್ವಾನನ್ದಜ್ಞಾನಿನೋ ಬದ್ಧಭಾವಾಃ[10] ॥ ೩೩ ॥

---

1. ಲಿಂಗದೇಹದಲ್ಲಿರುವಾಗ ಎಂಕಲೆ (?) 2, ಛಂದಸ್ಸು ಸರಿಯೆ ?]

3. ಸಾರವಾಕ್ಯವೆಂದರೆ ಮಹಾವಾಕ್ಯವೆಂದೋ, ಅಥವಾ ವಸ್ತುಬೋಧಕವಾಕ್ಯ ವೆಂದೋ ಅರ್ಥವಿರಬೇಕೆಂತ ಕಾಣುತ್ತದೆ.

4. 'ವೇದ್ಯೋಽಭೇದ್ಯಃ' 5. 'ಸರ್ವಭೂತಾತ್ಮವಿದ್ಯೋ'

6. 'ಭಿದ್ಯದ್ದೃಷ್ಟ್ಯಾ ತವ ಮೋ' 7. 'ಪೂರುಷಃ' ಎಂದಿದ್ದರೆ ಚೆನ್ನಾಗಿತ್ತು.

8. 'ಸಙ್ಗೀಽಪ್ಯಸಙ್ಗೀ', ಸಙ್ಗೀ ಹ್ಯಸಙ್ಗೀ'

9. 'ತ್ವಯ್ಯಾನನ್ದಜ್ಞಾನೇ' ಎಂದಿದ್ದರೆ ಛಂದಸ್ಸೂ ಅನ್ವಯವೂ ಸರಿಯಾಗಿರು ತ್ತಿತ್ತೆಂದು ತೋರುತ್ತದೆ. 10. 'ಬುದ್ಧಭಾವಾಃ'

೩೩. ಬದ್ಧನಲ್ಲ, ಮುಕ್ತನಲ್ಲ, ಸಂಗಿಯಲ್ಲ, ಅಸಂಗನು (?) ಪ್ರಾಣಕ್ಕೆ ಪ್ರಾಣನು, ಮನಸ್ಸಿಗೆ ಮನಸ್ಸು, ನಿನ್ನಿಂದ ವಾಕ್ಯುಗಳು ಮನಸ್ಸಿನೊಡನೆ ಹಿಂತಿರುಗುತ್ತವೆ ನಿನ್ನ ಆನಂದವನ್ನು ತಿಳಿದವರು ಭಾವಯುಕ್ತರಾಗುವರು.

ತ್ವತ್ತೋ ಜಾತಂ ಭೂತಜಾತಂ ಮಹೇಶ
ತ್ವಯಾ ಜೀವತ್ಯೇವಮೇವಂ ವಿಚಿತ್ರಮ್ ।
ತ್ವಯ್ಯೇವಾನ್ತೇ[1] ಸಂವಿಶತ್ಯೇವ ವಿಶ್ವಂ
ತ್ವಾಂ ವೈ ಕೋ ವಾ ಸ್ತೌತಿ[2] ತಂ ಸ್ತವ್ಯವಿಶಾಲಮ್ ॥ ೩೪ ॥
ಕಿಞ್ಚಿಜ್ಞಾಜ್ಞಾತ್ವಾ ಸರ್ವಭಾಸ್ಯೇವ (?)[3] ಬುದ್ಧ್ಯಾ ।
ತ್ವಾಮಾತ್ಮಾನಂ ವೇದ್ಮಿ[4] ದೇವಂ ಮಹೇಶಮ್ ॥ ೩೫ ॥

೩೪–೩೫. ಮಹೇಶನೆ, ನಿನ್ನಿಂದಲೇ ಭೂತಸಮೂಹವು ಹುಟ್ಟಿದೆ. ನಿನ್ನಿಂದಲೇ ಹೀಗೆ ವಿಚಿತ್ರವಾಗಿರುವ ಇದು ಜೀವಿಸಿಕೊಂಡಿದೆ. ನಿನ್ನಲ್ಲಿಯೇ ಕೊನೆಯಲ್ಲಿ ಎಲ್ಲವೂ ಪ್ರವೇಶಿಸುವದು. ಅಂಥ ಸ್ತವ್ಯನಾದ ಈಶನನ್ನು ಯಾವನು ಸರಿಯಾಗಿ ಹೊಗಳಿಯಾನು ? ಸರ್ವಾವಭಾಸವಾದಂತೆ ಇರುವ ಬುದ್ಧಿಯಿಂದ ಒಂದಿಷ್ಟು ತಿಳಿದು ನಿನ್ನನ್ನು ಪರಮಾತ್ಮನಾದ ದೇವನೆಂದೇ, ಮಹೇಶ್ವರನೆಂದೇ ತಿಳಿದಿದ್ದೇನೆ.

ಈಶ್ವರ ಉವಾಚ–
ಇತಿ ಶಙ್ಕರವಾಕ್ಯೇನ ವಿಶ್ವೇಶಾಖ್ಯಾದಹಂ ತದಾ ।
ಪ್ರಾದುರ್ಬಭೂವ ಲಿಙ್ಗಾತ್ತ್ವತ್ತದಲಿಙ್ಗತ್ತೋಽಪಿ ಮಹೇಶ್ವರಿ ॥ ೩೬ ॥

೩೬. ಈ ಶಂಕರವಾಕ್ಯವನ್ನು ಕೇಳಿ ನಾನು ಅಲಿಂಗನಾದರೂ 'ವಿಶ್ವೇಶ' ನೆಂಬ ನನ್ನ ಲಿಂಗದಿಂದ ಹೊರತೋರಿಕೊಂಡೆನು.[5]

ತ್ರಿಪುಣ್ಡ್ರವಿಲಸತ್ಫಾಲಶ್ಚನ್ದ್ರಾರ್ಧಕೃತಶೇಖರಃ ।
ನಾಗಾಜಿನೋತ್ತರಾಸಙ್ಗತ್ತೋ ನೀಲಕಣ್ಠಸ್ತ್ರಿಲೋಚನಃ ॥ ೩೭ ॥

---

1. 'ತ್ವಾಮೇವಾನ್ತೇ'
2. 'ಸ್ತುಪತೇ' ಎಂದು ತಪ್ಪುಪಾಠ. 3, 'ಸರ್ಪಭಾಸೇವ' ಎಂದಿರಬೇಕೆ ?
4. 'ವೇತ್ತಿ'. ಈವರೆಗಿನ ಸ್ತೋತ್ರದಲ್ಲಿ ಬೇರೆಬೇರೆಯ ಶ್ರುತಿಗಳ ಅರ್ಥವನ್ನು ಸಂಗ್ರಹಿಸಿದೆ.
5. ಈ ವಿಷಯವು ಮಾಧವೀಯದಲ್ಲಿಲ್ಲ ; ಚಿದ್ವಿಲಾಸೀಯದಲ್ಲಿದೆ, ಡಗಿತ್ರೆ ಪು. ೯೪–೯೬.

ವರಕಾಕೋದರಾನದ್ಧ (?)[1] ರಾಜದ್ಧಾರಸ್ತ್ವಯೊನ್ಮುಯಾ |
ತಮುಬ್ರುವಂ ಮುಹಾದೇವಿ ಪ್ರಣತಂ ಯತಿನಾಂ ವರಮ್ ॥ ೩೮ ॥
ಶಿಷ್ಯೈಶ್ಚತುರ್ಭಿಃ ಸಂಯುಕ್ತಂ ಭಸ್ಮರುದ್ರಾಕ್ಷಭೂಷಣಮ್ ॥ ೩೯ ॥

೩೫–೩೯. ತ್ರಿಪುಂಡ್ರದಿಂದ ಹೊಳೆಯುತ್ತಿರುವ ಹಣೆಯುಳ್ಳವನೂ ಅರ್ಧ ಚಂದ್ರನನ್ನು ತಲೆಯಮೇಲೆ ಧರಿಸಿದವನೂ, ಗಜಚರ್ಮದ ಹೊದಿಕೆಯುಳ್ಳವನೂ ನೀಲಕಂಠನೂ ಮುಕ್ಕಣ್ಣನೂ ಶ್ರೇಷ್ಠವಾದ ಹಾವಿನಿಂದ ಕಟ್ಟಿದ ಹೊಳೆಯುವ (ರುಂಡವ) ಹಾರವುಳ್ಳವನೂ ಆವ ನಾನು ಅಂಬಿಕಾದೇವಿಯಾದ ನಿನ್ನೊಡನೆ, ಶಿಷ್ಯರು ನಾಲ್ವರೊಡನೆ ಕೂಡಿದ್ದ[2] ಭಸ್ಮರುದ್ರಾಕ್ಷಭೂಷಣನಾದ ನವುಸ್ಮರಿಸಿದ ಆ ಯತಿಶ್ರೇಷ್ಠನನ್ನು ಕುರಿತು ಇಂತೆಂದೆನು[3] :

ಈಶ್ವರ ಉವಾಚ–

ಮದಂಶತಸ್ತ್ವಂ ಜಾತೋಽಸಿ ಭುವಿ ಚಾದ್ವೈತಸಿದ್ಧಯೇ |
ಪಾಪವಿಶಾಶ್ರಿತೈರ್ವಾರ್ಗೈರ್ಜೈನದುರ್ಬುದ್ಧಿಬೋಧಕೈಃ[5] ॥ ೪೦ ॥
ಭಿನ್ನೇ ವೈದಿಕಸಂಸಿದ್ಧೇ[6] ಅದ್ವೈತೇ ದ್ವೈತವಾಕ್ಯತಃ |
ತದ್ಭೇದಗಿರಿವಜ್ರಸ್ತ್ವಂ ಸಞ್ಜಾತೋಽಸಿ ಮದಂಶತಃ ॥ ೪೧ ॥

೪೦–೪೧. ನೀನು ನನ್ನ ಅಂಶದಿಂದ[7] ಅದ್ವೈತಸಿದ್ಧಿಗಾಗಿ ನೆಲದಮೇಲೆ ಹುಟ್ಟಿರುವೆ. ಪಾಪಿಗಳಾದ ವಿಶ್ರರು[8] ಆಶ್ರಯಿಸಿರುವ ಮಾರ್ಗಗಳಿಂದಲೂ ಜೈನರ ದುರ್ಬುದ್ಧಿಯ ಬೋಧನೆಯಿಂದಲೂ ದ್ವೈತವಾಕ್ಯದಿಂದ ವೈದಿಕರಿಗೆ (ವೇದದಿಂದ) ಸಂಸಿದ್ಧವಾದ ಅದ್ವೈತವು ನಾಶವಾಗಲು[9] ಆ ಭೇದವೆಂಬ ಬೆಟ್ಟಕ್ಕೆ ವಜ್ರಾಯುಧದಂತಿರುವ ನೀನು ನನ್ನಂಶದಿಂದ[7] ಹುಟ್ಟಿರುವೆ.

[ದೂರ್ವಾಸಃ ಶಾಪತೋ ಭೂಮೌ ಜಾತಾಂ ವಾಣೀಂ ವಿಜಿತ್ಯ ತಾಮ್ |
ಅಗಸ್ತ್ಯಚರಿತೇ ದೇಶೇ ತುಙ್ಗಾತೀರೇ ಸುನಿರ್ಮಲೇ ॥

---

1. ಹಾವಿಗೆ ರುಂಡಮಾಲೆಗಳನ್ನು ಕಟ್ಟತ್ತೆಂದು ಅರ್ಥವೊ, ಕಟ್ಟಿಕೊಂಡ ಹಾವಿಗೆ ತಗಲುವಂತೆ ರುಂಡದ ಹಾರವಿತ್ತೆಂದು ಅರ್ಥವೊ ?

2. ಈಶ್ವರದರ್ಶನವಾದಾಗ ನಾಲ್ವರು ಶಿಷ್ಯರಿದ್ದರೆಂಬುದು ಶಂಕರವಿಜಯಗಳಿಗೆ ಹೊಂದುವದಿಲ್ಲ. 3. ಇಲ್ಲಿಂದ ಮುಂದಕ್ಕೆ ಭೂತಕಾಲಕ್ರಿಯಾಪದಗಳೇ.

4. ಇದು ಕೆಲವು ಪಾಠಗಳಲ್ಲಿ ಇಲ್ಲಿಲ್ಲ. 5. ಯೋಧಕೈಃ

6. 'ವೇದೈಕಸಂಸಿದ್ಧೇ'

7, ಶಿವನ ಅಂಶವೆಂಬ ಮಾತು ಮತ್ತೆ ಮತ್ತೆ ಬಂದಿದೆ.

8. ವಿಶ್ರಶಬ್ದವು ಮತ್ತೆ ಬಂದಿದೆ.

9. ಆಚಾರ್ಯರಿಗಿಂತ ಹಿಂದೆ ಅದ್ವೈತವಿತ್ತೆಂಬ ಸೂಚನೆಯೆಂದು ಇದನ್ನು ಭಾವಿಸಬಹುದೆ ?

ಪುಣ್ಯಕ್ಷೇತ್ರೇ ದ್ವಿಜವರ ಸ್ಥಾಪಯಿತ್ವಾ ಸುಪೂಜಯ ।
ಯತ್ರಾಸ್ತೇ ಋಷ್ಯಶೃಙ್ಗಸ್ಯ ಮಹರ್ಷೇರಾಶ್ರಮೋ ಮಹಾನ್
ಕಲಾವಪಿ ತತೋಽದ್ವೈತಮಾರ್ಗಃ ಖ್ಯಾತೋ ಭವಿಷ್ಯತಿ ॥[1]
ದ್ವಾತ್ರಿಂಶತ್ಪರಮಾಯುಸ್ತೇ ಶೀಘ್ರಂ ಕೈಲಾಸಮಾವಸ ॥ ೪೨ ॥

೪೨. ದೂರ್ವಾಸರ ಶಾಪದಿಂದ ಭೂಮಿಯಮೇಲೆ ಹುಟ್ಟಿದ ಸರಸ್ವತಿಯನ್ನು ಜಯಿಸಿ ಆಕೆಯನ್ನು ಅಗಸ್ತ್ಯರು ಸಂಚರಿಸುತ್ತಿದ್ದ ದೇಶದಲ್ಲಿ ಸುನಿರ್ಮಲವಾದ ತುಂಗಾತೀರದಲ್ಲಿ[2] ಪುಣ್ಯಕ್ಷೇತ್ರದಲ್ಲಿ ಸ್ಥಾಪಿಸಿ ಎಲೈ ದ್ವಿಜವರನೆ, ಚೆನ್ನಾಗಿ ಪೂಜೆಮಾಡು ಅಲ್ಲಿ ಋಷ್ಯಶೃಂಗನೆಂಬ ಋಷಿಯ ಮಹಾ ಆಶ್ರಮವಿದೆ. ಹಾಗೆ ಸ್ಥಾಪಿಸಿ ಪೂಜಿಸುವದರಿಂದ ಕಲಿಯುಗದಲ್ಲಿಯೂ ಅದ್ವೈತಮಾರ್ಗವು ಪ್ರಖ್ಯಾತವಾಗುತ್ತದೆ[3] ನಿನಗೆ ಮೂವತ್ತೆರಡೇ[4] ಪರಮಾಯುಸ್ಸು ; ಬೇಗನೆ ಕೈಲಾಸಕ್ಕೆ ಬಂದು ನಿಲ್ಲು.[5]

ವಿತಸ್ತ್ಯಾಂ ತೀರ್ಥಹಾಣಿ ತ್ವಂ ಪಞ್ಚಲಿಙ್ಗಂ ಸುಪೂಜಯ ।
ಭಸ್ಮರುದ್ರಾಕ್ಷಸಂಪನ್ನಃ ಪಞ್ಚಾಕ್ಷರಪರಾಯಣಃ ॥ ೪೩ ॥
ಶತರುದ್ರಾವರ್ತನೈಶ್ಚ ತಾರೇಣ ಭಸಿತೇನ ಚ ।
ಬಿಲ್ವಪತ್ರೈಶ್ಚ ಕುಸುಮೈರ್ನೈವೇದ್ಯೈರ್ವಿವಿಧೈರಪಿ ।
ತ್ರಿವಾರಂ ಸಾವಧಾನೇನ ಗಚ್ಛೇ ಸರ್ವಜಯಾಯ ಚ ॥ ೪೪ ॥
ತ್ವದರ್ಥೇ ಕೈಲಾಸಾಚಲವರ ಸುಪಾಲೀಗತಮಹಾ
ಸಮುದ್ಯಚ್ಚನ್ದ್ರಾಭಂ ಸ್ಫಟಿಕಧವಲಂ ಲಿಙ್ಗಮತುಲಮ್ ।

---

1. ಕಂಸದಲ್ಲಿಟ್ಟಿರುವಷ್ಟು ಭಾಗವು ಕೆಲವು ಪಾಠಗಳಲ್ಲಿಲ್ಲ ; ಇವಿರುವ ಪಾಠಗಳಲ್ಲಿ ಇವುಗಳ ಮುಂದೆ 'ದ್ವಾತ್ರಿಂಶತಾ'

2. ಮಾಧವೀಯದಲ್ಲಿ 'ತುಂಗಭದ್ರಾ' ಎಂದಿದೆ ; ಶೃಂಗೇರೀಪೀಠದ ವಿಚಾರದಲ್ಲಿ ಇದನ್ನು ಪ್ರಸ್ತಾಪಿಸುವೆವು.

3. 'ಕಲಿಯುಗದಲ್ಲಿಯೂ' ಎಂದದ್ದರಿಂದ ಈ ಯುಗದಲ್ಲಿ ಇದಕ್ಕಿಂತ ಮೊದಲು ಇರಲಿಲ್ಲವೆಂಬ ಧ್ವನಿ ಬರುತ್ತದೆ. ಇಲ್ಲಿಯವರೆಗಿನ (ಕಂಸದಲ್ಲಿರುವ) ಭಾಗವು ಆಪ್ರಮಾಣವೆಂದು ಆಶ್ಮಬೋಧರು ಬರೆದಿದ್ದಾರೆ ; ಚರಿತ್ರೆ, ಪುಟ ೧೮೨–೧೮೩ ನೋಡಿರಿ. ಆದ್ದರಿಂದ ಇದು 'ಭಟ್ಟನಾರಾಯಣಶಾಸ್ತ್ರಿ'ಗಳೆಂಬವರು ಕಲ್ಪಿಸಿದ್ದೆಂಬ ಕೆಲವರ ಮತವು (ಶಾಂ.ಪೀ, ತ. ಭೂ. ಪು. ೧೮) ಸರಿಯಲ್ಲವೆಂದಾಯಿತು.

4. ಆಯುಸ್ಸಿನ ವಿಷಯಕ್ಕೆ ಚರಿತ್ರೆಯ ಪುಟ ೧೦೫–೧೦೭ ನೋಡಿರಿ.

5. 'ಕೈಲಾಸಕ್ಕೆ ಹೊರಡು' ಎಂದಿದ್ದರೂ ಮುಂದೆ ಕಂಚಿಯಲ್ಲಿ ಸಿದ್ಧಿಹೊಂದಿದರು ಎಂದು ಹೇಳಿದ್ದು ಹೇಗೊ? ಗೋವಿಂದನಾಥನು 'ಭಾನುಬಿಂಬದಲ್ಲಿರುವ ಪರಮಾನಂದವನ್ನು ಹೊಕ್ಕರು' (ಚರಿತ್ರೆ. ಪುಟ. ೨೭೬) ಎಂದಿದಾನೆ.

ಸವಮಾನೀತಂ[1] ಸೋಽಽದ್ಯತವಿಮಲವಾಲ್ಯರ್ಚನಪರಂ ।
ಕಲೌ ಲಿಙ್ಗಾರ್ಚಾಯಾಂ ಭವತಿ ಹಿ ವಿಮುಕ್ತಿಃ ಪರತರಯಾ[2] ॥೪೫॥

೪೫–೪೬. ಈ ಪಂಚಲಿಂಗವನ್ನು[3] ತೆಗೆದುಕೊ. ಭಸ್ಮರುದ್ರಾಕ್ಷಸಂಪನ್ನನಾಗಿ ಶತರುದ್ರೀಯವನ್ನೂ ಆವರ್ತನೆಮಾಡುತ್ತಾ ತಾರ (ಓಂಕಾರ)ಪೂರ್ವಕವಾಗಿ ಭಸ್ಮದಿಂದಲೂ ಬಿಲ್ವಪತ್ರಗಳಿಂದಲೂ ಹೂಗಳಿಂದಲೂ ನೈವೇದ್ಯಗಳಿಂದಲೂ ಮೂರು ಬಾರಿ[4] ಸಾವಧಾನವಾಗಿ ಪೂಜಿಸು. ಸರ್ವವನ್ನೂ ಜಯಿಸುವದಕ್ಕೆ ಹೊರಡು ![5] ನಿನಗಾಗಿ ತಂದಿರುವ ಕೈಲಾಸಪರ್ವತದ ಶ್ರೇಷ್ಠವಾದ ಶಿಖರದ ಮೇಲೆ ಉದಯಿಸುವ ಚಂದ್ರನ ಬೆಳಕಿರುವ ಸ್ಫಟಿಕದಂತೆ ಬೆಳ್ಳಗಿರುವ ಉದಯಿಸುವ ಚಂದ್ರನಂತೆ ನಿರ್ಮಲವಾಗಿರುವ ಈ ಲಿಂಗಸಮೂಹವನ್ನು ಅರ್ಚಿಸು. ಕಲಿಯುಗದಲ್ಲಿ ಲಿಂಗಾರ್ಚನೆಮಾಡಿದರೆ ಹೆಚ್ಚಿನ ಮುಕ್ತಿಯಾಗುವದಷ್ಟೆ ?

ಸ ಶಙ್ಕರೋ[6] ಮಾಂ ಪ್ರಣನಾಮ ಮುಸ್ಕರೀ
ಮುಮುಸ್ಕರಂ ತಸ್ಕರವರ್ಯಮಾರ್ಯೇ ।
ಸಂಗೃಹ್ಯ ಲಿಙ್ಗಾನಿ ಜಗಾಮ ವೇಗಾದ್
ಭೂವ್ಯಾಂ ಸ ಬುದ್ಧಾರ್ಹತವಿಶ್ರಜೈನಾನ್ ॥೪೬॥

೪೬. ಆ ಶಂಕರಯತಿಯು ಸುಖಕರನೂ ತಸ್ಕರವರ್ಯನೂ[7] ಆದ ನನ್ನನ್ನು ನಮಸ್ಕರಿಸಿದನು. ಲಿಂಗಗಳನ್ನು ತೆಗೆದುಕೊಂಡು ವೇಗದಿಂದ ಭೂಮಿಯ ಮೇಲಿದ್ದ ಬುದ್ಧ, ಅರ್ಹತ, ಜೈನ, ವಿಶ್ರ–ಇವರ ಬಳಿಗೆ ಹೋದನು.[8]

ತದ್ಯೋಗಭೋಗವರಮುಕ್ತಿಸುಖೋಕ್ಷಯೋಗ–
ಲಿಙ್ಗಾರ್ಚನಾತ್ ಪ್ರಾಪ್ತಜಯಃ ಸ್ವಕಾಶ್ರಮೇ ।[9]

---

1. 'ಸಮಾಸೀನಃ? ಎಂದು ಪಾ[2. 'ಪರತರಾ' ಪಾ॥

3. ಐದು ಲಿಂಗಗಳನ್ನು ಶಿವನು ಕೊಟ್ಟನೆಂದು ಇಲ್ಲಿದೆ. ಆನಂದಗಿರೀಯದಲ್ಲಿ (ಪ್ರ. ೫೫ ಪು. ೨೨೯. ದೇ. ಪಾಠದಲ್ಲಿಲ್ಲ !) ಆಚಾರ್ಯರೇ ಕೈಲಾಸಕ್ಕೆ ಯೋಗಬಲದಿಂದ ಹೋಗಿ ಅವನ್ನು ತಂದರೆಂದಿದೆ. ಚಿದ್ವಿಲಾಸೀಯದಲ್ಲಿ ಗೋವಿಂದಭಗವತ್ಪಾದರು ಅವರಿಗೆ ಕೊಟ್ಟರೆಂದಿದೆ.

4. ಈಗ ಮಠಗಳಲ್ಲಿ ಮೂರು ಬಾರಿ ಪೂಜೆಯಿರುವಂತೆ ಕಾಣಲಿಲ್ಲ.

5, ಲಿಂಗಾರ್ಚನೆಯ ಬಲದಿಂದ ವಾದಿಗಳನ್ನು ಜಯಿಸಿದ ಆಚಾರ್ಯರು ಸಾಲಗ್ರಾಮವನ್ನು ಉಪಾಹರಿಸಿರುವಂತೆ ಲಿಂಗವನ್ನು ಒಂದುಸಲವೂ ಏಕೆ ಉದಾಹರಿಸಲಿಲ್ಲವೊ ॥ (ಚರಿತ್ರೆ. ಪುಟ ೯೦–೯೧). 6. 'ವತಜ್ಞರೋ' ಎಂದು ಪಾ॥

7. 'ತಸ್ಕರಾವಾಂ ಪತಯೇ' ಎಂಬುದರ ಪರಾಮರ್ಶನೆ ?

8. ಬೌದ್ಧ, ಜೈನ, ವಿಶ್ರ– ಈ ಹೆಸರುಗಳು ಮುತ್ತೆಮುತ್ತೆ ಬಂದಿರುವದರಿಂದ ಇವರೆಲ್ಲರ ಪ್ರಾಬಲ್ಯಕಾಲವನ್ನು ಐತಿಹಾಸಿಕರು ತೋಧಿಸಬೇಕಾಗಿದೆ.

9, 'ಸ ಕಾಮಮಾ'

ತಾನ್ ವೈ ವಿಜಿತ್ಯ ತರಸಾಽಕ್ಷಿತಶಾಸ್ತ್ರವಾದೈ-
ರ್ಮಿಶ್ರಾನ್ ಸ ಕಾಞ್ಚ್ಯಾಮನಘ ಸಿದ್ಧಿಮಾಪ[1] ॥೪೭॥

೪೭. ಯೋಗ, ಭೋಗ, ವರ, ಮುಕ್ತಿ, ಸುಖೋಕ್ಷ-ಇವುಗಳನ್ನು ಕೊಡುವ ಲಿಂಗಗಳ[2] ಅರ್ಚನೆಯಿಂದ ಜಯವನ್ನು ಹೊಂದಿ 'ತನ್ನ ಆಶ್ರಮು ದಲ್ಲಿ' (?) ಬೇಗನೆ ಅಕ್ಷಿತವಾದ ಶಾಸ್ತ್ರಗಳಿಂದ 'ಮಿಶ್ರ'ರನ್ನು ಗೆದ್ದಬಳಿಕ ಅವನು ಕಾಂಚಿಯಲ್ಲಿ ಸಿದ್ಧಿಯನ್ನು ಹೊಂದಿದನು.[3]

[4][ಕಾಞ್ಚ್ಯಾಂ ತಪಃಸಿದ್ಧಿಮವಾಪ್ಯ ದಣ್ಡೀ
ಚಣ್ಡೀಶರೂಪೋ ಜಗದಾಕಲಯ್ಯ ।
ಬ್ರಹ್ಮೈಕ(")ವಿದ್ಯಾಂ ರಚಯನ್ ಸಭಾಷ್ಯಂ
ಶಾರೀರಕಂ ನಾಮು ಜಗಾದ ನೋದಾತ್ ॥೧॥

೧. ಕಾಂಚಿಯಲ್ಲಿ ತಪಃಸಿದ್ಧಿಯನ್ನು[5] ಹೊಂದಿ ಆ ಚಂಡೀಶ್ವರರೂಪ ನಾದ ದಂಡಿಯು[6] ಜಗತ್ತನ್ನು ನೋಡಿ (?) ಬ್ರಹ್ಮೈಕವಿದ್ಯೆಯನ್ನು[7]-ಶಾರೀರಕ ಭಾಷ್ಯವನ್ನು-ರಚಿಸಿ ಹೇಳಿದನು.

ವ್ಯಾಸೇನ ಸಂಭಾಷ್ಯ ಸಮೇತ್ಯ ಕಾಶೀಂ
ತನ್ಮಣ್ಡನಾರ್ಯಂ ಪರಿಖಣ್ಡ್ಯ ವಾಣೀಮ್ ।
ಜೇತುಂ ಶರೀರಾನ್ತರಮೇತ್ಯ ಕಾಮು-
ಕಲಾಂ ಜಗಾಹೇ ಪ್ರಮದಾವರಾಭ್ಯಃ

೨. ಕಾಶಿಗೆ ಹೋಗಿ[8] ವ್ಯಾಸರೊಡನೆ ಸಂಭಾಷಣೆಮಾಡಿ[9] ಆ ಮಂಡನ ನಾರ್ಯನನ್ನು[10] ಖಂಡಿಸಿ ವಾಣಿಯನ್ನು ಜಯಿಸುವದಕ್ಕೆಂದು ಶರೀರಾಂತರ ವನ್ನು ಸೇರಿ[11] ಉತ್ತಮಸ್ತ್ರೀಯರಿಂದ ಕಾಮುಕಲೆಯನ್ನು ಕಲಿತನು.[12]

---

1. 'ತತೋ ಲೋಕಮವಾಪ ಶೈವಮ್', ,ತತೋ ನೈಜಮವಾಪ ಲೋಕಮ್' -ಎಂಬ ಪಾಠಗಳೂ ಇವೆ. ಕಾಂಚಿಯವರು ಇಲ್ಲಿರುವ ಪಾಠವನ್ನು ಒಪ್ಪಿರುತ್ತಾರೆ.

ಈ ಲಿಂಗಗಳ ವಿಷಯಕ್ಕೆ ಇದೇ ಪರಿಶಿಷ್ಟದ ಕೊನೆಯನ್ನು ನೋಡಿ.

3. ಕಾಂಚಿಯಲ್ಲಿ ಆಚಾರ್ಯರ 'ಆಶ್ರಮು'ವಿತ್ತೆಂದಾಯಿತು. ಅಲ್ಲಿ ಸಿದ್ಧಿಯನ್ನು ಹೊಂದಿದರು ಎಂದರೆ ದೇಹವನ್ನಿಟ್ಟರು ಎಂದು ಕಾಂಚೀಸಂಪ್ರದಾಯದವರ ಪಾಠ.

4. ಕಂಸದಲ್ಲಿಟ್ಟಿರುವ ಭಾಗವನ್ನು ಎಲ್ಲಾ ಮಠದವರೂ ಒಪ್ಪುವದಿಲ್ಲ; ಆದ್ದರಿಂದ ಶ್ಲೋಕಗಳಿಗೆ ಬೇರೆಯ ಅನುಕ್ರಮಸಂಖ್ಯೆಯನ್ನು ಕೊಟ್ಟಿದೆ. ಉಪಸಂಹಾರ ವಾಕ್ಯವನ್ನು ನೋಡಿ.

5. ಸಿದ್ಧಿಶಬ್ದಕ್ಕೆ ಶೃಂಗೇರೀಸಂಪ್ರದಾಯದವರು ಕೊಟ್ಟ ಅರ್ಥವಿದು.

6. ಆಚಾರ್ಯರಿಗೆ ದಂಡವಿತ್ತೆ ? ಚರಿತ್ರೆ ೭೯-ಅಂನೆಯ ಪುಟವನ್ನು ನೋಡಿ.

7. ಭಾಷ್ಯಗಳಲ್ಲಿ ಈ ಹೆಸರು ಬಂದಿಲ್ಲ.

8-9 ಇದು ೨೬ನೆಯ ಶ್ಲೋಕದ ಅಭಿಪ್ರಾಯಕ್ಕೆ ವಿರುದ್ಧ.

10. ಚರಿತ್ರೆಯ ೮-೯ನೆಯ ಅಧ್ಯಾಯ, 11. ೧೦ನೆಯ ಅಧ್ಯಾಯ ಪು. ೧೪೯.

12. ಚರಿತ್ರೆಯ ಪುಟ ೧೯೩ ನೋಡಿರಿ.

ಪುನಃ ಸ್ವಕಂ ದೇಹಮುವಾಸ್ಯ ತೂರ್ಣಂ
ಪೂರ್ಣಂ ನಿಜಂ ಕಾಮಮುಥಾಕಲಯ್ಯ ।
ವಾಣೇಂ ಸ ಜಿತ್ವೈವ ತು ತಾಂ ಮಠೇ
ಶೃಂ ಶೃಜಿ ೃರಿಕಾಖ್ಯೇ ಪುಣೆವೇಶ್ಯ ತುಷ್ಟಃ[1] ॥ ೩ ॥

೩. ಮತ್ತೆ ಬೇಗನೆ ತನ್ನ ದೇಹವನ್ನು ಸೇರಿ ತನ್ನ ಇಚ್ಛೆಯು ಪೂರ್ಣವಾಯಿತೆಂದು ತಿಳಿದು ವಾಣಿಯನ್ನು ಗೆದ್ದೇ ಆಕೆಯನ್ನು ಶೃಂಗೇರಿಯ ತನ್ನ ಮಠದಲ್ಲಿಟ್ಟು[2] ಸಂತುಷ್ಟನಾದನು.

ಕಾಪಾಲಿಕಂ ತಂ ಕ್ರಕಚಂ ಮಹೋಗ್ರಂ
ಕರ್ಣಾಟದೇಶೇ ನಿಖಿಲಂ ವಿಜಿತ್ಯ ।
ಗೋಕರ್ಣಮಾಸಾದ್ಯ ತವಿಶವಿಡ್ಯಂ
ಸ್ತುತ್ವಾ ಮಹಾರಾಷ್ಟ್ರಪದಂ ಪ್ರಪೇದೇ ॥ ೪ ॥

೪. ಕ್ರಕಚನೆಂಬ ಮಹೋಗ್ರಕಾಪಾಲಿಕನನ್ನು[3] ಕರ್ಣಾಟಕದೇಶದಲ್ಲಿ ಸಂಪೂರ್ಣವಾಗಿ ಗೆದ್ದು ಗೋಕರ್ಣಕ್ಕೆ ಹೋಗಿ ಈಡ್ಯನಾದ ಈಶ್ವರನನ್ನು ಸ್ತುತಿಸಿ ಮಹಾರಾಷ್ಟ್ರದೇಶಕ್ಕೆ ಹೋದನು.

ತತ್ರ ಸ್ಥಿತಾನ್ ಭಾಸ್ಕರಭಟ್ಟಮುಖ್ಯಾನ್
ತಂ ನೀಲಕಣ್ಠಂ ಚ ತೃಣೇಕರಿಷ್ಯನ್ ।
ಕಾಶ್ಮೀರಮಾಸಾದ್ಯ ಸ ಶಾರದಾಯಾಃ
ಸರ್ವಜ್ಞಪೀಠಂ ಪದಮಾರುರುಕ್ಷನ್ ॥ ೫ ॥

ತತ್ರ ಸ್ಥಿತಾನ್ ಸಂಪ್ರತಿ ಸರ್ವಪಣ್ಡಿತಾನ್
ಚಾರ್ವಾಕಮುಖ್ಯಾನ್ ವಿಪುಲಾನ್ ವಿಜಿತ್ಯ ।
ಸ ದಕ್ಷಿಣದ್ವಾರಕವಾಟಭೇದಂ
ಕೃತ್ವಾ ಸ ದೇವ್ಯಾ ವಿನಿಶಜ್ಯ ಮಾನಃ ॥ ೬ ॥
ಶಙ್ಕಾಂ ನಿರಾಕೃತ್ಯ ನಿವಿಶ್ಯ ಪೀಠೇ
ಶತೋ ಬದೆರ್ಯಾಶ್ರಮಮಾಪ ದಣ್ಡೀ ॥ ೭ ॥

೫–೭. ಅಲ್ಲಿದ್ದ ಭಾಸ್ಕರಭಟ್ಟನೇ ಮುಂತಾದವರನ್ನೂ ನೀಲಕಂಠನನ್ನೂ ತೃಣೀಕರಿಸಿ[4] ಕಾಶ್ಮೀರವನ್ನು ಸೇರಿ ಶಾರದೆಯ ಸರ್ವಜ್ಞಪೀಠವನ್ನು ಹತ್ತ

1. 'ತಿಷ್ಠತಿ' ಎಂದು ಶಾ॥

2. ಕಂಸದಲ್ಲಿರುವ ವಾಕ್ಯಸಂದರ್ಭಕ್ಕೆ ಹೊಂದುವದಕ್ಕೆ ತನ್ನ ಮಠವೆಂದರೆ ಶೃಂಗೇರೀಮಠವೆಂದೇ ಅರ್ಥ; ಆದರೆ ಮಾಧವೀಯದಲ್ಲಿ ಈ ಮಠದ ಪ್ರಸ್ತಾಪವಿಲ್ಲ. ಚರಿತ್ರೆಯ ೨೨೦–೨೨೧ ಪುಟಗಳನ್ನು ನೋಡಿರಿ.

3. ಕಾಪಾಲಿಕನ ಜಯದ ವಿಷಯಕ್ಕೆ ಚರಿತ್ರೆಯ ಪುಟ ೨೫೬–೨೫೪ನ್ನು ನೋಡಿರಿ.

4. ಇದಕ್ಕೂ ಮಾಧವೀಯಕ್ಕೂ ಹೋಲಿಕೆಯಿದೆ.

ಬೇಕೆಂದು ಅಲ್ಲಿದ್ದ ಚಾರ್ವಾಕರೇ ಮೊದಲಾದ ಸರ್ವಪಂಡಿತರನ್ನೂ ಜಯಿಸಿ ಶಾರದಾದೇವಿಯ ದಕ್ಷಿಣದ್ವಾರವನ್ನು ತೆರೆಯಿಸಿ ದೇವಿಯ ಶಂಕೆಯನ್ನು ನಿರಾಕರಿಸಿ ಪೀಠದಲ್ಲಿ ಕುಳಿತು, ಆ ಬಳಿಕ ದಂಡಿಯು ಬದರ್ಯಾಶ್ರಮವನ್ನು ಸೇರಿದನು.

ನಾರಾಯಣಂ ತತ್ರ ತಪಜ್ಜಲೌಘಂ
ಕುಣ್ಡಂ ಪ್ರಶೀತಸ್ಯ ನಿವಾರಣಾಯ ॥ ೭ ॥
ಧ್ಯಾತ್ವಾ ಶಿವಂ ತತ್ರ ನಿವಿಶ್ಯ ತಸ್ಥೌ
ಕೈಲಾಸದೇಶಾದ್ ವೃಷಭಶ್ಚ ದೇವಾಃ ।
ಸಮೇತ್ಯ ಸಂಸ್ತುತ್ಯ ಯದಾಯುಷಸ್ತೇ
ಕಾಲೋಽಗಮತ್ತ್ವಂ ವೃಷಭೇಽಧಿರೋಹ[1] ॥ ೮ ॥
ಇತಿ ಪ್ರಚೀರ್ಣಂ(?) ಪ್ರಭುರಾತ್ಮನಿ ಸ್ವೇ
ವಿಚಿನ್ತ್ಯ ಶಿಷ್ಯಾನ್ ನಿಜಗಾದ ಮೋದಾತ್ ॥ ೯ ॥

೭–೯. ಅಲ್ಲಿ ನಾ ರಾ ಯ ಣ ನ ನ್ನು ತಪ್ತಜಲಕುಂಡವನ್ನು– ಶೀತ ನಿವಾರಣೆಗಾಗಿ, ಧ್ಯಾನಿಸಿಕೊಂಡು ಕುಳಿತುಕೊಂಡಿದ್ದನು. ಕೈಲಾಸದೇಶದಿಂದ ವೃಷಭವೂ ದೇವತೆಗಳೂ ಬಂದು ಸ್ತೋತ್ರಮಾಡಿ, "ನಿನ್ನ ಆಯುಸ್ಸಿನ ಕಾಲವು ಆಗಿಹೋಯಿತಾದ್ದರಿಂದ ವೃಷಭವನ್ನು ಏರು" ಎಂದು ಕೇಳಿಕೊಳ್ಳಲು ಆ ಪ್ರಭುವು ತನ್ನಲ್ಲಿಯೇ ಆಲೋಚನೆಮಾಡಿ ಶಿಷ್ಯರನ್ನು ಕುರಿತು ಸಂತೋಷದಿಂದ ಇಂತೆಂದನು :

ಯೂಯಂ ಚತುರ್ದಿಕ್ಷು ಮಠೇಷು ಲಿಙ್ಗೈಃ ।
ಸಾಕಂ ವಸನ್ತ್ವಿತ್ಯುಪದಿಶ್ಯ ಹರ್ಷಾತ್ ॥ ೧೦ ॥
ವಿವೇಶ ಪೃಷ್ಠಂ ವೃಷಭಸ್ಯ ಹಸ್ತಂ
ಸಂಗೃಹ್ಯ ವೈರಿಞ್ಚಮಥಾಸ್ಯ ದತ್ತಮ್ ।
ಸರ್ವೈಶ್ಚ ದೇವೈರಭಿನನ್ದ್ಯಮಾನಃ
ಸ ಶಙ್ಕರಸ್ತನ್ನಿಜಗಾಮ ದೇವಃ ॥ ೧೧ ॥
ವಿವೇಶ ಕೈಲಾಸನಿವೇಶಮುಚ್ಚಂ
ಸಚ್ಛಬ್ದವೈನ್ದಾರಕವೈನ್ದಪೂರ್ಣಮ್ ।
ತದಾದಿ ತಚ್ಛಙ್ಕರಭಾಷ್ಯಮೇತದ್
ಭೂಮೌ ಜನಂ ಮುಕ್ತಿಪದಂ ದದಾತಿ ॥ ೧೨ ॥

೧೦–೧೨. ನೀವು ನಾಲ್ಕುದಿಕ್ಕುಗಳಲ್ಲಿಯೂ ಮಠಗಳಲ್ಲಿ ಲಿಂಗಗಳೊಡನೆ ಇರಬೇಕು– ಎಂದು ಉಪದೇಶಿಸಿ ಹರ್ಷದಿಂದ ಬ್ರಹ್ಮನು ಕೊಟ್ಟ ಹಸ್ತಾವಲಂಬನ

---

೧. ಕಂಸದಲ್ಲಿರುವ ಈ ಗ್ರಂಥದ ಭಾಗವು ಅಷ್ಟು ವ್ಯಾಕರಣಬದ್ಧವಾಗಿ ಅರ್ಥವು ಹೊಂದುಗಡೆಯಾಗುವಂತೆ ಕಾಣಿಸುವದಿಲ್ಲ.

ದಿಂದ ವೃಷಭದಮೇಲೆ ಕುಳಿತನು. ಎಲ್ಲಾ ದೇವತೆಗಳಿಂದಲೂ ಅಭಿನಂದಿತನಾಗಿ ಆ ಶಂಕರ್ದೇವನು ಅಲ್ಲಿಗೆ ಹೋದನು. ನಿರ್ಮಲವಾದ, ಮತ್ತು ಉತ್ತಮವಾದ ಮಾತುಗನ್ನಾಡುವ (?) ದೇವತೆಗಳಿಂದ ತುಂಬಿದ ಕೈಲಾಸಪ್ರದೇಶವನ್ನು ಹೊಕ್ಕನು. ಅಂದಿನಿಂದ ಈ ಶಾಂಕರಭಾಷ್ಯವು ಭೂಮಿಯಮೇಲೆ ಜನರಿಗೆ ಮುಕ್ತಿಪದವನ್ನು ಕೊಡುತ್ತಿದೆ.

ಏತತ್ತೇಽಭಿಹಿತಂ ದೇವಿ ಮುಖ್ಯಂ ಮುಕ್ತಿಪದಾವಹಮ್ ।
ಶಾಙ್ಕರಂ ಚರಿತಂ ಲೋಕೇ ಭವಿಷ್ಯತಿ ನ ಸಂಶಯಃ ॥ ೧೨ ॥
ಇತಿ ಶ್ರುತ್ವಾ ಮಹೇಶಾನಾಚ್ಚರಿತಂ ಶಙ್ಕರಸ್ಯ ಸಾ ।
ಪುಲಕಾಙ್ಕುರಸಂಹೃಷ್ಟಾ ಪ್ರಣನಾಮ ಮಹೇಶ್ವರಮ್ ॥ ೧೩ ॥

೧೨–೧೩. ದೇವಿಯೆ, ನಿನಗೆ ಹೇಳಿದ ಮುಖ್ಯವಾದ ಈ ಶಂಕರಚರಿತೆಯು ಲೋಕದಲ್ಲಿ ಮುಕ್ತಿಪದವನ್ನು ಕೊಡುವದೆಂಬುದಕ್ಕೆ ಸಂಶಯವಿಲ್ಲ. ಹೀಗೆಂದು ಮಹೇಶ್ವರನಿಂದ ಶಂಕರಚರಿತೆಯನ್ನು ಕೇಳಿದ ಆ ದೇವಿಯು ರೋಮಾಂಚದಿಂದ ಹೃಷ್ಟಳಾಗಿ ಮಹೇಶ್ವರನನ್ನು ನಮಸ್ಕರಿಸಿದಳು.]

ಕಂಸದಲ್ಲಿರುವ ಭಾಗವು ಅಚ್ಚಿನ ಪುಸ್ತಕಗಳಲ್ಲಿದೆ ಎಂದು ಕಕೆರಾಲ ಎಸ್. ಸುಂದರರಾಮಯ್ಯನವರು 1958ನೆಯ ಇಸವಿಯಲ್ಲಿ ಶ್ರೀರಂಗಂ ಮುದ್ರಣಾಲಯದಲ್ಲಿ ಅಚ್ಚುಹಾಕಿಸಿದ ಪುಸ್ತಕದ ಪರಿಶಿಷ್ಟದಲ್ಲಿ ಬರೆದಿರುತ್ತಾರೆ. ಇದರಲ್ಲಿ ಬಲುಮಟ್ಟಿಗೆ ಮಾಧವೀಯಶಂಕರವಿಜಯದಲ್ಲಿರುವ ವಿಷಯಗಳೇ ಪ್ರಧಾನವಾಗಿ ಕಾಣುತ್ತವೆ. ಇಲ್ಲಿಯೂ ಭಾಸ್ಕರಭಟ್ಟ, ನೀಲಕಂಠ –ಮೊದಲಾದವರನ್ನು ಆಚಾರ್ಯರ ಸಮಕಾಲಿಕರನ್ನಾಗಿ ಮಾಡಿದೆ. ಚರಿತ್ರೆಯ ೨೫೫, ೨೫೭ನೆಯ ಪುಟಗಳನ್ನು ನೋಡಿ. ಕಾಂಚೀಪೀಠದವರಿಗೂ ಶೃಂಗೇರೀಮಠದವರಿಗೂ ಆದ ವಾದದ ಫಲವಾಗಿ ಇಂಥ ಅಧಿಕಪಾಠಗಳು ಸೇರಿಕೊಂಡಿವೆ ಎಂಬುದು ಸ್ಪಷ್ಟ. ಕೆಲವು ಪುಸ್ತಕಗಳಲ್ಲಿ ಈ ವಿಜ್ಞಾಪನೆಯಿದೆಯಂತೆ :

ವಿಜ್ಞಾಪನಾ

ಏತದ್ದೇಶೀಯೇಷು ಕೇಷುಚಿತ್ಪುಸ್ತಕೇಷು 'ಕಾಞ್ಚ್ಯಾಮೇಷ ಸಿದ್ಧಿಮಾಪ' ಇತಿ ಶ್ಲೋಕ ಏವ ಅಧ್ಯಾಯೋಪರಿಸರಮಾಪ್ತಿರ್ದೃಶ್ಯತೇ । ಉತ್ತರದೇಶೀಯೇಷು ಪುಸ್ತಕೇಷು 'ಪ್ರಣನಾಮ ಮಹೇಶ್ವರಮ್' ಇತಿ ಶ್ಲೋಕಾನ್ತ ಅಧ್ಯಾಯೋಪರಿಸರಮಾಪ್ತಿರ್ದೃಶ್ಯತೇ । ಶ್ರೀಚಿತ್ಸುಖಾಚಾರ್ಯರ್ಮಾಧವೀಯಾದಿಕೃತಶಙ್ಕರವಿಜಯೇಷು ದಕ್ಷಿಣೋತ್ತರಸಾಧಾರಣಮಿತಿ ಸೃತ್ಯೈವ ಕಥಾಸಂದರ್ಭಸ್ಯ ಪ್ರದರ್ಶಿತತ್ವೇನ ಏತಾದೃಶ ದಾಕ್ಷಿಣಾತ್ಯಪಾಠ ಏವ ಜ್ಯಾಯಾನ್ । ಏತದ್ದೇಶೀಯೇಷು ಕೇಷುಚಿತ್ ಪುಸ್ತಕೇಷು

'ಕಾಞ್ಚ್ಯಾಂ ತಪಃಸಿದ್ಧಿಮವಾಪ್ಯ ದಣ್ಡೀ' ಇತಿ ಉತ್ತರಗ್ರನ್ಥಭಾಗಃ (ಭಾರತೇ ಕೃಷ್ಣಾರ್ಜುನಯೋಃ ಶ್ರೀಕೃಷ್ಣಸ್ಯ ಮಹಾದೇವಪ್ರಸಾದೋದ್ದೇಶ್ಯಕಕೈಲಾಸಯಾತ್ರಾಪ್ರತಿಪಾದಕೋ ಗ್ರನ್ಥಭಾಗೋ ಯಥಾ ಕೈಶ್ಚಿದುದ್ಧೃತಃ, ತಥಾ) ಸ್ವಾಭಿಸ್ರಾಯವಿರೋಧಿತ್ವಾತ್ ಕೈಶ್ಚಿದ್ಗ್ರನ್ಥೈಃ ಯೈರುದ್ಧೃತ ಇತಿ ನಿಶ್ಚಿತ್ಯ ಔತ್ತರೀಯಪಾಠಾನುಸಾರೇಣೈವ ಮುದ್ರಿತೋಽಯಂ ಗ್ರನ್ಥಃ ||

ಮೇಲೆ ಕೊಟ್ಟಿರುವ ಸಂಸ್ಕೃತಭಾಗದ ಅಭಿಪ್ರಾಯವೇನೆಂದರೆ : 'ಉತ್ತರ ದೇಶದ ಕೆಲವು ಪಾಠಗಳಲ್ಲಿದ್ದರೂ ಕಂಸದಲ್ಲಿರುವ ಭಾಗವನ್ನು ತಮ್ಮ ಮತಕ್ಕೆ ವಿರೋಧವೆಂದು ಕೆಲವರು ಬಿಟ್ಟುಬಿಟ್ಟಿರುತ್ತಾರೆ. ನಾವು ಅದನ್ನು ಸೇರಿಸಿರುತ್ತೇವೆ.' ಆದರೆ ಈ ಪಾಠವು ಉತ್ತರದೇಶದ ಪಾಠದಲ್ಲಿಯೂ ಇಲ್ಲ ; ಪಂಡಿತ ಲಕ್ಷ್ಮಣ ಶಾಸ್ತ್ರಿಗಳಲ್ಲಿರತಕ್ಕ ಕೈಬರಹದ ಪುಸ್ತಕ ಮತ್ತು ಕಾಶಿಯ ರಾಜಕೀಯಾಗಾರದಲ್ಲಿರುವ ಪುಸ್ತಕ– ಇವುಗಳಲ್ಲಾಗಲಿ, ಆನಂದಾಶ್ರಮದಲ್ಲಿ ಪ್ರಕಟವಾಗಿರುವ ಶಂಕರ ವಿಜಯದ ವ್ಯಾಖ್ಯಾನದಲ್ಲಿಯಾಗಲಿ, ಮೈಸೂರು ರಾಜಕೀಯಪುಸ್ತಕಾಲಯದಲ್ಲಿರುವ ಕೈಬರಹದ ಪುಸ್ತಕದಲ್ಲಾಗಲಿ ಇಲ್ಲ ; 'ಕಾಞ್ಚ್ಯಾಮಥ ಸಿದ್ಧಿಮಾಪ' ಎಂಬಲ್ಲಿಗೇ ಶಿವರಹಸ್ಯದ ಅಧ್ಯಾಯವು ಸಮಾಪ್ತವಾಗಿದೆ– ಎಂದು "ಶ್ರೀಶಂಕರ ಪೀಠ ತತ್ತ್ವದರ್ಶನ"ದ ಭೂಮಿಕೆಯಲ್ಲಿದೆ (ಪು. ೧೨ಂದ ೨೦). ನಿಜವನ್ನು ಇನ್ನೂ ಶೋಧಿಸಿ ತಿಳಿಯಬೇಕಾಗಿರುತ್ತದೆ.

'ತದ್ಯೋಗಭೋಗ' ಎಂಬ (೪೭) ಶ್ಲೋಕದಲ್ಲಿ ಹೇಳಿರುವ ಲಿಂಗಗಳ ವಿಚಾರವು ಆನಂದಗಿರೀಯದಲ್ಲಿದೆ. ಕೇದಾರದಲ್ಲಿ ಮುಕ್ತಿಲಿಂಗ (ಪ್ರ. ೫೫ ಪು. ೨೦೯, ದೇ. ಇಲ್ಲ) ; ನೀಲಕಂಠದಲ್ಲಿ ವರಲಿಂಗ (ಪು. ೫೫, ಪು. ೨೧೦, ದೇ. ಇಲ್ಲ) ; ಶೃಂಗೇರಿಯಲ್ಲಿ ಭೋಗಲಿಂಗ ಪ್ರ. ೬೩, ಪು ೧೨೫ ; ದೇ. ಇಲ್ಲ); ಕಂಚಿಯಲ್ಲಿ ಯೋಗಲಿಂಗ (ಪ್ರ. ೬೫, ಪು. ೨೩೧, ದೇ. ಇಲ್ಲ); ಚಿದಂಬರದಲ್ಲಿ ಮೋಕ್ಷಲಿಂಗ (ಪ್ರ. ೪೪, ಪು. ೨೫೫, ದೇ. ಇಲ್ಲ) ಎಂದು ತೆಲುಗುಪುಸ್ತಕದಲ್ಲಿ ಸುಸ್ಪಷ್ಟವಾಗಿದ್ದರೂ ಲಿಂಗಗಳ ವಿವರವು ದೇವನಾಗರೀಪ್ರತಿಯಲ್ಲಿಲ್ಲದಿರುವದಕ್ಕೆ ಏನೋ ಕಾರಣವಿರಬೇಕು. ದೇವನಾಗರೀಪ್ರತಿಯು ತೆಲುಗುಪ್ರತಿಗಿಂತ ಅಲ್ಲಲ್ಲಿ ಭಿನ್ನವಾಗಿರುವದಕ್ಕೆ ಕಾರಣವೇನೆಂಬುದನ್ನು ತಿಳಿಯುವದು ಅವಶ್ಯ. ಮೊದಲಿನ ತೆಲುಗುಪ್ರತಿಯಲ್ಲಿ ಇಲ್ಲದ್ದರಿಂದ ದೇವನಾಗರಿಯಲ್ಲಿ ಪ್ರಕಟಿಸಿದವರಿಗೆ ಅದು ತಿಳಿಯದೆಹೋಗಿರಬಹುದು ; ಅಥವಾ ದೇವನಾಗರಿಯಲ್ಲಿ ಮುದ್ರಿಸುವಾಗ ಅದರ ಆವಶ್ಯಕತೆಯಿಲ್ಲವೆಂದು ಬೇಕೆಂತಲೇ ಯಾರೋ ಬಿಟ್ಟಿರಬಹುದು. ನಿಜವನ್ನು ದೇವರೇ ಬಲ್ಲ "ಗಂಗಾದಿತೀರ್ಥವಿಜಯಯಾತ್ರಾ" ಎಂಬ (ಕಾಂಚೀಪೀಠಾಧ್ಯಕ್ಷರ ಯಾತ್ರೆಯ ವಿವರದ) ಪುಸ್ತಕದಲ್ಲಿ ಪರಿಶಿಷ್ಟದಲ್ಲಿ ಕೊಟ್ಟಿರುವ

ಶಿವಸಂಹಿತೆಯ ಟಿಪ್ಪಣಿಗಳಲ್ಲಿರುವ ಆನಂದಗಿರೀಯಪಾಠದಲ್ಲಿ ತೆಲುಗುಪುಸ್ತಕದಂತೆಯೇ ಇದೆ !

ಮೇಲೆ ಉದಾಹರಿಸಿರುವ 'ವಿಜ್ಞಾಪನಾ'ದಲ್ಲಿ ಆಧ್ಯಾಯಸಮಾಪ್ತಿದೃಶ್ಯತೇ' ಎನ್ನುವವರೆಗಿನ ಭಾಗವು ಶ್ರೀಮುಖಸಂವತ್ಸರಾಶ್ವಯುಜ ಬಹುಳ ೧೦ ಸೌಮ್ಯವಾಸರ ಮದ್ರಾಸಿನಲ್ಲಿ ತೆಲುಗುಅಕ್ಷರಗಳಿಂದ ಅಚ್ಚುಹಾಕಿಸಿದ ವೇ॥ ಕಲ್ಯಾಣರಾಮಶಾಸ್ತ್ರಿಯವರು ಪ್ರಕಟಿಸಿರುವ "ಶಿವರಹಸ್ಯ"ದ ಕೊನೆಯಲ್ಲಿದೆ ಎಂದು ಸೋಮನಾಥಯ್ಯನವರು (ಸೋ. ಶಂ. ಪು. ೭) ಬರೆದಿರುತ್ತಾರೆ. ಇದರ ಮುಂದಿನ ಭಾಗದಲ್ಲಿ 'ಚಿತ್ಸುಖಾಚಾರ್ಯರ್, ಮಾಧವಾರ್ಯರ್– ಮುಂತಾದವರು ಮಾಡಿರುವ ಶಂಕರವಿಜಯಗಳಲ್ಲಿರುವ ಕಥೆಯು ಉತ್ತರದ ಪಾಠಕ್ಕೆ ಅನುಗುಣವಾಗಿಯೇ ಇದೆ' ಎಂದು ಬರೆದಿರುವದು ಯುಕ್ತಿಯುಕ್ತವಾಗಿದೆ. ಆದರೆ ಈ ಭಾಗವನ್ನು ಚಿತ್ಸುಖಾಚಾರ್ಯರ್ (?) ಮತ್ತು ಮಾಧವೀಯರ– ಇವುಗಳಿಗನುಗುಣವಾಗುವಂತೆ ಯಾರೋ ಸೇರಿಸಿರಬಹುದು–ಎಂಬವಾದಕ್ಕೂ ಅವಕಾಶವನ್ನು ಕೊಡುವಂತಿದೆ.

ಅಂತು ಶಿವರಹಸ್ಯದ ರಹಸ್ಯವು ದುರ್ಭೇದ್ಯವಾಗಿಯೇ ಇದೆ. ಈ ಭಾಗವು ಎಲ್ಲ ಕೈಬರಹಪ್ರತಿಗಳಲ್ಲಿಯೂ ಇದೆಯೆ ? ಅಲ್ಲಿಯ ಪಾಠವು ಹೇಗಿದೆ "– ಎಂಬುದನ್ನು ಶೋಧಿಸುವದು ಅವಶ್ಯ. ಎಷ್ಟೇ ಆಗಲಿ, ಇದು ಭವಿಷ್ಯತ್ಕಾಲದ ವಿಷಯದ ಪುರಾಣಭಾಗವೆಂದು ನಾವು ಚರಿತ್ರೆಯ ೧೪ನೆಯ ಪುಟದಲ್ಲಿ ಬರೆದಿರುವದನ್ನು ವಾಚಕರು ಮರೆಯದೆ ಇರಬೇಕು.

(ಅ) ಮಾರ್ಕಂಡ್ಡೇಯಸಂಹಿತಾ

(ಚರಿತ್ರೆ. ಪುಟ. ೧೪)

ಶ್ರೀಶಙ್ಕರಗುರುಚರಣಸ್ಮರಣ
ಮಭೀಷ್ಟಾರ್ಥಕರಣಮಖಿಲಾಮ್ (?)[1] ।
ಸಂಭವತು ಸರ್ವದಾ ಮಮ ಸಮರಸ
ಸುಖಭಾಗ್ಯದಾನನಿಪುಣತರಮ್ ॥೧॥

ಶ್ರೀಶಙ್ಕರಾಚಾರ್ಯಪದಾರವಿನ್ದ
ಸೇವಾ ಹಿ ಸರ್ವೇಪ್ಸಿತಕಲ್ಪವಲ್ಲೀ ।
ಲಭ್ಯೇತ ಜನ್ಮಾನ್ತರಪುಣ್ಯಯೋಗಾತ್
ಸುಜನ್ಮಭಿಃ ಶುದ್ಧಮನೋಭಿಷಙ್ಕೈಃ ॥೨॥

---

1. ಪ್ರಾರಂಭದ ೫ ಶ್ಲೋಕಗಳಿಗೆ ಅನುಕ್ರಮಸಂಖ್ಯೆಯಿಲ್ಲ ' ಏಕೆಂಬುದು ತಿಳಿಯಲಿಲ್ಲ. ಶ್ಲೋಕಗಳಲ್ಲಿ ಅಲ್ಲಲ್ಲಿ ಏನೋ ಹೆಚ್ಚುಕಡಿಮೆಯಾದಂತೆ ಕಾಣುತ್ತದೆ.

ಶಙ್ಕರಗುರುಚರಣಾವ್ಜಯುಗಮಖಿಲ
ಜಗನ್ಮಙ್ಗಲಂ ಮನಸ್ಯನಿಶಮ್ ।
ಕಲಯಾನಿ ಕಲಿಮಲಾಪಹಮಮಿತ
ಸುಖದಾಯಕಂ ಬುಧೇನ್ದ್ರಾಣಾಮ್ ॥೩॥

ಲೋಕಾನುಗ್ರಹತತ್ಪರಃ ಪರಶಿವಃ ಸಂಸ್ಪಾರ್ಥಿತೋ ಬ್ರಹ್ಮಣಾ
ಚಾರ್ವಾಕಾದಿಮತಪ್ರಭೇದನಿಪುಣಾಂ ಬುದ್ಧಿಂ ಸದಾ ಧಾರಯನ್ ।
ಕಾಲಟ್ಯಾಖ್ಯಪುರೋತ್ತಮೇ ಶಿವಗುರುರ್ವಿದ್ಯಾಧಿನಾಥಶ್ಚ ಯ
ಸ್ತತ್ಪತ್ನ್ಯಾಂ ಶಿವತಾರಕೇ ಸಮುದಿತಃ ಶ್ರೀಶಙ್ಕರಾಖ್ಯಾಂ ವಹನ್ ॥೪॥
ಜ್ಞಾತ್ವಾ ಪಞ್ಚಮಹಾಯನೇ ಚ ನಿಖಿಲಂ ಶಾಸ್ತ್ರಾರ್ಥತತ್ತ್ವಂ ಸುಖಾ
ದಶ್ವಿನ್ಯಾಹ್ವಯತಾರಕೇ ಯತಿವರೋ ಭೂತ್ವಾ ನದೀಮಧ್ಯಗಃ ।
ಶ್ರೀಗೋವಿನ್ದಗುರುಪ್ರಸಾದಸಹಿತಯಾರ್ಬುಧ್ಯಾ(?) ಮುಹುರ್ವಿದ್ವಿಷೋ
ಜಿಗ್ಯೇ(?) ತಿಲ್ಲವನೇ(?) ಪ್ರಶಸ್ತತರಧೀಃ ಶ್ರೀಶಙ್ಕರಾಖ್ಯಃ ಸುಧೀಃ ॥೫॥

ಪರಿತಪ್ತ[1] ಪಞ್ಚಲೋಹಸ್ಮೃತಿ
ನಾನೇನಾ(?) ತಿಷ್ಠಿಸ್ಮಿತಾನ್ ।
ಪರಿಹೃತ್ಯ ಪರಮಯೋಗೀ ಪರನೈ-
ಕಾನ್ತಾನಿ(?) ಸುಖಮುಗಾದಖಿಲಮ್ ॥೦॥

ನೇಪಾಳೇಶ್ವರಮಾಕಲಯ್ಯ[2] ತದನು ಶ್ರೀನೀಲಕಣ್ಠೇಶ್ವರಂ
ಹೈಮಂ ಶೈಲಮುಪಾರಪುಣ್ಯಬದರೀಕೇದಾರಮಾರಾದಗಾತ್ ।
ಶ್ರೀಶೈಲಂ ಕನಕಾಚಲಂ ಶುಭಮಹಾಕೈಲಾಸಮಾಸೇದಿವಾನ್
ಲೋಕಾನುಗ್ರಹಕಾವ್ಯಯೋ ನಿರುಪಮಶ್ಶ್ರೀಶಙ್ಕರಾರ್ಯೋ ಗುರುಃ
ನೇಪಾಳೇಶ್ವರಪಞ್ಚವಕ್ತ್ರಕಮಲಾನೋದಾತಿಭಾರೋಲ್ಲಸ-
ತ್ಪಞ್ಜದ್ವಾರಶುಭಾಲಯೇ ನಿವಸಿತಂ ಕೃತ್ವಾಥ ಯೋಗೀಶ್ವರಃ ।

1, "ಪರಿತೃಪ್ತ" ಎಂಬುದಕ್ಕಿಂತ ಈ ಪಾಠವು ಮೇಲೆಂತ ಕಾಣುತ್ತದೆ,

2, ನೇಪಾಳವಾಜನಾದ ಶಂಕರನೆಂಬಾತನ ವ್ಯಾರ್ಥನೆಯಂತೆ ಆಚಾರ್ಯರು ಅಲ್ಲಿಗೆ ಹೋದರಂತೆ. ಅಲ್ಲಿ ಆಗ ಸೂರ್ಯವಂಶದ ವೃಷದೇವನೆಂಬಾತನಿದ್ದನೆಂದೂ ತನ್ನ ಮಗನು ಆಚಾರ್ಯರ ಆಗಮನಕಾಲಕ್ಕೆ ಹುಟ್ಟಿದ್ದರಿಂದ ಶಂಕರನೆಂದೇ ಅವನಿಗೆ ನಾಮ ಕರಣವಾಯಿತೆಂದೂ ಕೆಲವರು ಹೇಳುತ್ತಾರೆ. (ಬಲ. ಶಂ. ಪು. ೦೧೮), ಇಲ್ಲಿ ಪಶುಪತೀ ಶ್ವರದೇವಾಲಯಕ್ಕೆ ನಂಬ್ರೂದಿಯವರು ಪೂಜಾರಿಗಳಂತೆ. ನೇಪಾಳದ ರಾಜರು ಪ್ರತಿ ವರ್ಷವೂ ಕಾಂಚೀಪೀಠಕ್ಕೆ ಕಾಣಿಕೆಕೊಡುತ್ತಾರೆಂದು ಕೆಲವರು ಆ ಪೀಠದ ಅಭಿಮಾನಿ ಗಳು ಬರೆದದ್ದನ್ನು ಆರ್. ಕೃಷ್ಣಸ್ವಾಮಿ ಅಯ್ಯರು (P. 17.) ತಮ್ಮ ಪುಸ್ತಕದಲ್ಲಿ (K. M. C,) ಅಲ್ಲಗಳೆದಿದ್ದಾರೆ.

ವಾಞ್ಛಾಸಿದ್ಧಿಮವಾಪ್ಯ ವಿಶ್ವಜನಕಂ ಶ್ರೀನೀಲಕಣ್ಠೇಶ್ವರಂ
ಪ್ರಾಪ್ಯ ಪ್ರೌಢತಪಶ್ಚ ಚಾರ ಚ ತತಃ ಶ್ರೀಮೇರುಶೈಲಂ[1] ಯಯೌ ॥
ತತ್ರ ಸ್ವರ್ಣಶಿಲೋಚ್ಚಸಾನುಶಿಖರಪ್ರತ್ಯನ್ತಶೈಲಾನ್ (?) ಗುಹಾಃ (?)
ವೇದಾನ್ತಾಗಮಸಪ್ತಕೋಟಿಸುಮಹಾಮನ್ತ್ರಾನ್[3] ಮಹಾಘೌಪಹಾನ್
ಸಂಭಾವ್ಯಾತಿರಹಂ ಪುರಶ್ಚರಣಯಾ ಲಬ್ಧ್ವಾಷ್ಟಸಿದ್ಧೀಸ್ತತಃ
ಕೃತ್ವಾ ಮೇರುನುತಿಂ(?) ಮಹಾರ್ಥಜನಿಕಾಂ ಕೈಲಾಸಶೈಲಂ ಯಯೌ

ಗತ್ವಾ ಶೈಲಾಸಶೈಲಂ ಜಗದಖಿಲಗುರುಃ
ಶಙ್ಕರಾಚಾರ್ಯಯೋಗೀ ।
ದೃಷ್ಟ್ವಾ ಸಾವ್ಯಂ ಶಿವಂ ತಂ ಸ್ವಯಮಿತಿ
ಸುಚಿರಂ ಚಿನ್ತಯನ್ನನ್ತರಙ್ಗೇ ।
ಲಬ್ಧ್ವಾ ಪಞ್ಚಾತ್ಮಲಿಙ್ಗಾನ್ಯ[3]ಮಲತರ–
ಶುಭಾಲಿಙ್ಗಾನ್ಯಙ್ಗಭಾಜಾಮ್ ।
ಭೂತ್ಯೈ ಸೌನ್ದರ್ಯಸಾರಂ[4] ಹಿಮಗಿರಿ–
ದುಹಿತುಃ ಪ್ರಾಪಯನ್ ಗಾಮುಪಾಸೀತ್ ॥೫॥

ಕಾಞ್ಚ್ಯಾಂ ಶ್ರೀಕಾಮಕೋಟಿಂ[5]
ಕಲಿಮಲಶಮನೀಂ ಕಲ್ಪಯಿತ್ವಾ ಸುರೇಶೇ[6] ।
ಶ್ರೀವಿದ್ಯಾರಾಜ[7] ಪೀಠಾರ್ಚನಮಹಿತ–
ಮಹಾರಾಜ್ಯಸಾಮ್ರಾಜ್ಯಲಕ್ಷ್ಮೀಮವಾಪ್ ।
ಸಂವೇಶ್ಯಾತ್ಮೀಯಶಿಷ್ಯೇ ಸಕಲಭುವನ–
ಸಂಸ್ಫೋದಹೇತೋರ್ಮಹಾತ್ಮಾ ।
ಚಿದ್ರೂಪಸ್ವಾನುಭೂತಿಂ ಭಜತಿ ಭವ
ಮಹಾಂಭೋಧಿಸಂತಾರಣಾಯ ॥೬॥

---

1. ಆಚಾರ್ಯರು ಮೇರುಪರ್ವತಕ್ಕೆ ಹೋದದ್ದು ತುಳರವಿಜಯಗಳಲ್ಲಿಲ್ಲ.
2, ಮುಂತ್ರಪುರಶ್ಚರಣೆಯಿಂದ ಅಷ್ಟಸಿದ್ಧಿಗಳನ್ನು ಪಡೆದ ವೃತ್ತಾಂತ ಇಲ್ಲಿ ಮಾತ್ರ ಇದೆ. ವಿಜಯಗಳಲ್ಲಿಲ್ಲ,
3. ಅನಂಡಗಿರೀಯಡಲ್ಲಿರುವ ಪಂಚಲಿಂಗಗಳ ವೃತ್ತಾಂತಕ್ಕೆ ಇದು ಮೂಲವೆ ?
4. ಸೌಂದರ್ಯಲಹರಿಯೆ ? ಚರಿತ್ರೆ ಪುಟ ೩೮೦.
5, ಕಾಮಕೋಟ ಎಂಬ ಹೆಸರು ಇಲ್ಲಿ ಸ್ಪಷ್ಟವಾಗಿದೆ.
6, ಸ್ಫುತೇಶ್ವರರನ್ನು ಸರ್ವಜ್ಞಾತ್ಮರ ರಕ್ಷಣೆಗೆ ಇಟ್ಟರೆಂದು ಸುಷಮಾ (ಗು. ರೆ. 22).
7, ಶ್ರೀವಿದ್ಯೆಗೆ ಮತಗಳಲ್ಲಿ ಹೆಚ್ಚಿನ ಸ್ಥಾನ ; ಚರಿತ್ರೆ ಪುಟ ೨೨೩–೨೨೯.

ಶಿವಲಿಙ್ಗಂ ಪ್ರತಿಷ್ಠಾಪ್ಯ ಚಿದಮ್ಬರಸಭಾತಲೇ[1] ।
ಮೋಕ್ಷದಂ ಸರ್ವಜನ್ತೂನಾಂ ಭುವನತ್ರಯಸುನ್ದರಮ್ ॥೭॥
ವೈದಿಕಾನ್ ದೀಕ್ಷಿತಾನ್ ಶುದ್ಧಾನ್ ಶೈವಸಿದ್ಧಾನ್ತಪಾರಗಾನ್[2] ।
ಪೂಜಾರ್ಥಂ ಯುಯುಜೇ ಶಿಷ್ಯಾನ್ ಪುಣ್ಯಾರಣ್ಯವಿಹಾರಿಣಃ ॥೮॥
ಮುಕ್ತಿಲಿಂಗಂ[3] ತು ಕೇದಾರೇ ನೀಲಕಣ್ಠೇ ವರೇಶ್ವರಮ್[4] ।
ಪ್ರತಿಷ್ಠಾಪ್ಯ ಮಹಾಯೋಗೀ ಪರಾಂ ಪ್ರೀತಿಮವಾಪ ಸಃ ॥೯॥
ಕಾಞ್ಚ್ಯಾಂ ಶ್ರೀಕಾಮಕೋಟ್ಯಾಂ ತು ಯೋಗಲಿಙ್ಗ[5]ಮನುತ್ತಮಮ್ ।
ಪ್ರತಿಷ್ಠಾಪ್ಯ ಸುರೇಶಾರ್ಯಂ ಪೂಜಾರ್ಥಂ[6] ಯುಯುಜೇ ಗುರುಃ ॥
ಶ್ರೀಶಙ್ಕರಾರ್ಯಯೋಗೀ ಶೃಙ್ಗಗಿರಿಸ್ಥಾನ[7]ಮಗಮದಖಿಲೇ ದಶಃ ।
ಶ್ರೀಶಾರದಾಖ್ಯಪೀಠೇ ಶಿವಲಿಙ್ಗಂ ಭೋಗನಾಮಕಂ[8] ಚಕ್ರೇ ॥೧೧॥
ಅಹೋಬಲನೃಸಿಂಹಾಖ್ಯಸ್ಥಲೇ ಶ್ರೀಶಙ್ಕರೋ ಗುರುಃ ।
ನೃಸಿಂಹಯನ್ತ್ರೋದ್ಧರಣಂ ಚಕಾರ ಜಗತಾಂ ಮುದೇ ॥೧೨॥
ಶ್ರೀವೇಙ್ಕಟೇಶವೃಷಶೈಲಮುಪೇತ್ಯ ಯೋಗೀ
ಯನ್ತ್ರಂ ಜಗತ್ತ್ರಯವಶೀಕರಣೋದ್ಯತಂ ತತ್ ।
ಚಕ್ರೇ ಚರಾಚರಗುರುರ್ಜಗತಾಂ ವಿಭೂತ್ಯೈ
ಶ್ರೀಶಙ್ಕರೋ ನಿಗಮಶೇಖರಪಾರಗೋಽಯಮ್ ॥೧೩॥

---

1. ಆನಂದಗಿರೀಯಙ್ಕ್ಕೆ ಹೊಂದುತ್ತದೆ.

2, ಆಚಾರ್ಯಭಾಷ್ಯಗಳಲ್ಲಿ ಶೈವಮತಕ್ಕೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ.

3–5. ಆ॥ ಗೀ॥. ಇದೇ ಪರಿಶಿಷ್ಟದ ೩೭ನೆಯ ಪುಟವನ್ನು ನೋಡಿ.

6. 'ಪೂಜೆಗೆ' ಇಟ್ಟರೆಂದು ಬರೆದಿರುವದನ್ನು ಲಕ್ಷಿಸಬೇಕು; ಸುರೇಶ್ವರರು ಪೀಠಕ್ಕೆ ಅರ್ಹರಾಗಿರಲಿಲ್ಲವೆಂಬ ಅತ್ಯಬೋಧಕ ಅಭಿಪ್ರಾಯಕ್ಕೆ ಇದು ಹೊಂದುಗೆಯಾಗಿದೆ (1) ಸುರೇಶ್ವರಸ್ಯ ಸಕಲವಿಬುಧಶಿರೋಮಣಿತ್ವೇಽಪಿ ಶಪಥಪಥ್ಯೈಕಪ್ರಾಪಿತಾಶ್ರಮತಯಾ ಸ್ವಯಮುಪರಮಹಂಸತಯಾ ಚ ನ ಕ್ವಾಪಿ ಆಚಾರ್ಯತಯಾ ಪ್ರತಿಷ್ಠಿತಾ। ಸುಷಮಾ ಪು. ೩೭. (2) ಅಯಂ ಸುರೇಶ್ವರಃ ಸ್ವಯಮುಪರಮಹಂಸತಯಾ ಪರಮಹಂಸೈಕಸಮಧ್ಯಾಸನೀಯೋ ಜಗದ್ಗುರುಣಾ ಸ್ವಪೀಠೇ ಶಿಷ್ಯಪೀಠೇಷು ವಾ ನ ನಿವೇಶಿತೋಽಪಿ ಸ್ವಸಮಾನವೈದುಷ್ಯಭಾವೇನ ಭಾಜನತಯಾ ಮಹಾಯೋಗಿತಯಾ ಚ ಸರ್ವಪೀಠವ್ಯವಸ್ಥಾಗೋಪನೇ ನಿಯುಕ್ತಸ್ತತ್ರ ತತ್ರ ಕಿಯನ್ತಞ್ಚಿತ್ಕಾಲಮುವಾಸ॥ ಗು. ಠ. ೩೪, ಸುಷಮಾ, ಪು. ೯೦.

7. ಕಾಂಚೀಪೀಠಸ್ಥಾಪನೆಯಾದಮೇಲೆ ಶೃಂಗೇರಿಯಪೀಠದ ಸ್ಥಾಪನೆಯೆಂದಾಯಿತೆ?

8. ಭೋಗಲಿಂಗದ ವಿಚಾರಕ್ಕೆ ಶಿವರಹಸ್ಯದ ಕೊನೆಯಲ್ಲಿ ಕೊಟ್ಟಿರುವ ವಿಚಾರವನ್ನು ನೋಡಿ. 9. ಧಾಷ್ಯಗ್ರಂಥಗಳಲ್ಲಿ ಯಂತ್ರಗಳ ಪರಾಮರ್ಶವಿಲ್ಲ,

ಯೋ ವಾ ರಾಜಕುಲೋದ್ಭವಾ ಗುರುಪದಾನ್ಭೋಜಾರ್ಚನಂ
ಭಕ್ತಿತೋ
ನಾತನ್ವನ್ತಿ ನ ಮಾನಯನ್ತಿ ನ ಚ ವಾ ಸಂಮೋದಮಾಯಾನ್ತಿ ವೈ ।
ಸತ್ಯಂನಿರ್ವಿಭವೇ ತ ಏವ ಧನಧಾನ್ಯೈಶ್ವರ್ಯಹೀನಾಃ ಕ್ಷಣಾತ್[1]
ಕ್ಷೀಣಾ ಯಾನ್ತಿ[3] ಪರಾಜಯಂ ನನು ತತಃ ಶ್ರೀದೇಶಿಕಂ ಪೂಜಯೇತ್
ಯೋ ವಾ ಗುರುಚರಣಾಮ್ಬುಜವಿದ್ವೇಷಂ ತನ್ವತೇ ದುರಾತ್ಮಾನಃ ।
ತೇ ದುರ್ಗತಿಮುಚಿರೇಣ ಪ್ರಾಪ್ಯ ಪತನ್ತ್ಯನ್ಧತಾಮಿಸ್ರೇ ॥೧೫॥
ಯೋ ರುದ್ರಾಕ್ಷವಿಭೂತಿಭಿಃ[2] ಕೃತಶುಭಾಲಙ್ಕಾರದೇಹಾ ಮಹಾ–
ದೇವಧ್ಯಾನಜಪಾರ್ಚನಾಸು ನಿರತಾಸ್ತೈಃ ಶಙ್ಕರಾರ್ಯೋ ಗುರುಃ ।
ಸಂಪೂಜ್ಯಃ ಸತತಂ ಸುದೂರಭರಣಾ(?)ವಸ್ಥಾಸ್ಥಿತಃ ಶ್ರೀಪತಿಃ
ಬ್ರಹ್ಮಾ ಸಾಮ್ಬಸದಾಶಿವೋಽಪಿ ವಿತರನ್ತ್ಯೇತೇಷು ರಾಜ್ಯಶ್ರಿಯಮ್[3] ॥
ಸಂಕಟೇಸಮುದ್ಭೇ ಜಗತಾಂ ಶಙ್ಕರಗುರುಚರಣಪಙ್ಕಜಂ ಶರಣಮ್ ।
ಇತಿ ಜಯಘೋಷಾಭಿಘೋಷಃ ಕಸ್ಯ ಮನೋಹಸ್ತಿನಃ(?) ನ ಭೂಷಯತಿ
ಕಾಶೀಪ್ರಮುಖಮಹಾಸ್ಥಲಸಂಸ್ಥಾಪಿತಸಕಲಧರ್ಮಸಾರೋಽಯಮ್ |
ಗುರುರಪಿ ಚ ಮೇರುಮನ್ದರಕೈಲಾಸಾದಿಷ್ವಮೇಯ–
ಮಹಿಮಾಽವ್ಯಾತ್* ॥

ಮಹಾತ್ರಿಪುರಸುನ್ದರೀರಮಣಚನ್ದ್ರಮೌಲೀಶ್ವರ–
ಪ್ರಸಾದಪರಿಲಬ್ಧವಾಙ್ಮಯವಿಭೂಷಿತಾಶಾನ್ತರಮ್ ।
ನಿರನ್ತರಮುಪಾಸ್ಮಹೇ ನಿರುಪಮಾತ್ಮವಿದ್ಯಾನದೀ–
ನದೀನದಪತಿಪ್ರಭಂ ಮನಸಿ ಶಙ್ಕರಾರ್ಯಂ ಗುರುಮ್* ॥

ಸ್ಮರಾಮೋ ಮಾನಸೇ ನಿತ್ಯಂ ಶಙ್ಕರಾಚಾರ್ಯಪಾದುಕಾಮ್ ।
ಭವಾಮ್ಭೋಧಿಮಹಾನೌಕಾಂ ಭಕ್ತಶ್ರೀಕಾಮಧೇನುಕಾಮ್ ॥೨೦॥
ಆದಿತ್ಯಂ ಜಗದಮ್ಬಿಕಾಂ ಹರಿವಿಭೇನಾದ್ರ್ಯಂ ಮಹೇಶಂ ಗುರುಃ
ಪೂಜಾಯೈ ಪರಿಪೂರ್ಣಮಾನಸತಯಾ ಮೇನೇ ಯತಿಃ ಶಙ್ಕರಃ ।
ಶಿಷ್ಯೇಭ್ಯಶ್ಚದದೌ ಮುದಾ ಸುವಿಮಲಾಂ ಶ್ರೀಶೈವಪಞ್ಚಾಕ್ಷರೀಮ್[4] ।
ವಿದ್ಯಾವೈದಿಕಮಾರ್ಗದರ್ಶನಗುರುಃ ಶ್ರೀಷಣ್ಮತಸ್ಥಾಪಕಃ[5] ॥೨೨॥

---

1. ಶಂಕರಾಚಾರ್ಯರನ್ನು ಗೌರವಿಸದ ರಾಜರಿಗೆ ಶಾಪ.
2. ಶೈವರೇ ಆಚಾರ್ಯರ ಪೂಜೆಗೆ ವಿಶಿಷ್ಟಾಧಿಕಾರಿಗಳು.
3. ಆಚಾರ್ಯರನ್ನು ಪೂಜಿಸಿದವರಿಗೆ ಶುಭಫಲ.
*. ಹೀಗೆ ಗುರುಸ್ತುತಿಪರವಾಕ್ಯಗಳ ಅರ್ಥವು ಸ್ಪಷ್ಟವಾಗಿಲ್ಲ.
4. ಪಂಚಾಯತನ ಶಿವಪಂಚಾಕ್ಷರಿಗಳ ಪರಾಮರ್ಶವೂ ಭಾಷ್ಯಗಳಲ್ಲಿಲ್ಲ.
5. ಆಚಾರ್ಯರು ಷಣ್ಮತಸ್ಥಾಪಕರೆಂಬ ಅಭಿಪ್ರಾಯ ಇಲ್ಲಿವೆ ; ಚ. ಪು. ೨೮೦ ನೋಡಿ.

ಜಗದಖಿಲಗುರುರವಾದೀದಖಿಲಾನ್ ಶಿಷ್ಯಾನ್ ಪ್ರತಿ ಪ್ರಸನ್ನಮುಖಃ ।
ಅದ್ವೈತಮತನಿಷ್ಠೈಃ ಪಞ್ಚಾಯತನಾರ್ಚನಂ[1] ಪ್ರಕರ್ತವ್ಯಮ್ ॥
ಏವಂ ನಿರ್ಣಯಮತನೋದ್ ವೈದಿಕಮಾರ್ಗಪ್ರವರ್ತಕೋ ಯೋಗೀ।
ತಸ್ಮಾದ್ ಗುರುವರಚರಣೇ ಚೇತಃ ಸನ್ಧಾಯ ತನ್ಮತೇ ತಿಷ್ಠೇತ್॥೨೩॥
ಶ್ರೀಶಙ್ಕರಾಚಾರ್ಯೋಪದಾರವಿನ್ದಭಕ್ತೇಷು ಭದ್ರಾಣಿ ಭವನ್ತಿ ನಿತ್ಯಮ್
ನದ್ರಾಂ ವಿಹಾಯಾಥ ಸಮುಸ್ತಲೋಕೈರ್ಮುದ್ರಾ ತದೀಯಾ ಶಿರಸೈವ
ಧಾರ್ಯಾ ॥೨೪॥

ಶಙ್ಕರಗುರುವರಚರಿತಂ ನ್ಯಙ್ಕಮತೀನಾಂ ದುರಾಸದಂ ಭರಿತಮ್ ।
ಪರಮಾಮೃತರಸಪೂರ್ಣೈಃ ಪರಮಾನನ್ದೈಕದಾಯಿ ಪಠನೀಯಮ್ ॥

ಗುರುಪಾದಭಜನಸಂಭ್ರಮಸಮರಸಸುಖಭರಿತಮಾನಸಾಃ ಸರಸಾಃ ।
ಸಂಸೃತಿಮಹಾಸಮುದ್ರಂ ಸಂತೀರ್ಯಾನನ್ದರೂಪತಾಂ ಯಾನ್ತಿ ॥೨೬॥

ಇತಿ ಶ್ರೀ ಮಾರ್ಕಣ್ಡೇಯಸಂಹಿತಾಯಾಂ ಶತಖಣ್ಡಾತ್ಮಿಕಾಯಾಂ
ದ್ವಿಸಪ್ತತಿತಮಖಣ್ಡೇ ಸಪ್ತಮಪರಿಸ್ಪನ್ದಃ

ಶ್ರೀದೇಶಿಕಃ ಪದ್ಮಪದಂ[2] ಸ್ವಶಿಷ್ಯಂ
ಪಾಷಣ್ಡಷಣ್ಡಾರ್ಥ (?) ಮತಿಪ್ರಚಣ್ಡಮ್ ।
ಶೃಙ್ಗಾದ್ರಿದೇಶೇ ಶ್ರಿತತುಙ್ಗಭದ್ರೇ
ನಿಯೋಜಯಾಮಾಸ ಸ ಶಙ್ಕರಾರ್ಯಃ ॥೧॥

ಸುರೇಶ್ವರಾಚಾರ್ಯವರಂ[3] ಸ್ವಶಿಷ್ಯಂ
ಕಾಞ್ಚೀಪುರೀಸುನ್ದರಕಾಮಕೋಟೌ ।
ಶ್ರೀಚನ್ದ್ರಮೌಲೀಶ್ವರಪೂಜನಾರ್ಥಂ
ನಿಯೋ.ಜ್ಯ ಚಕ್ರೇಽಸ್ಯ ಧರಾಧಿಪತ್ಯಮ್ ॥೨॥

ಶ್ರೀಕಾಞ್ಚೀಕಾಮಕೋಟೀನಿಲಯಂ
ಶಶಿಕಲೋತ್ತಂಸಪೂಜಾಧುರೀಣಂ ।

---

1. ಪಂಚಾಯತನಪೂಜಾಕ್ರಮವು ದಕ್ಷಿಣದೇಶದ ಸ್ಮಾರ್ತರಲ್ಲಿ ಪ್ರಚುರವಾಗಿದೆ ; ಭಾಷ್ಯಗಳಲ್ಲಿ ಅದರ ಪರಾಮರ್ಶವಿಲ್ಲ.

2. ಪದ್ಮಪಾದರನ್ನು ಶೃಂಗೇರಿಯಲ್ಲಿಟ್ಟರೆಂದು ಆನಂದಗಿರಿಯ ಒಂದು ಪಾಠ. ಚ. ಪು. ೨೨೦.

3, ಸುರೇಶ್ವರಾಚಾರ್ಯರನ್ನು ಪೂಜೆಗೆ ಇಟ್ಟರೆಂದು ಆಗಲೆ ಹೇಳಿದೆ. ಹಿಂದಿನ ಪರಿಸ್ಪಂದದ ೧೦ನೆಯ ಶ್ಲೋಕವನ್ನು ನೋಡಿ.

ಪಾರೀಣಂ ಶ್ರೀಕಲಾಯಾಃ
ಪರಮಗುರುಪದಾಧೀಶ್ವರಂ ಯೋಗಿರಾಜವ್
ಯೇ ವಾ ನಾರ್ಚನ್ತಿ ಭೂಮೌ
ಶುಭತರಪರಮಾಮ್ನೈವ್ಯತಸಿದ್ಧಾನ್ತಮಾರ್ಗೋ-
ದ್ಭೂತಂ ಶ್ರೀರಾಜ್ಯಸಿಂಹಾಸನಪದಗ–
ಮಹೋ ಪಾಮರಾಸ್ತೇ ಪತನ್ತಿ[1] ॥ ೩ ॥
ಯೇ ಸೇವನ್ತೇ ಗುರುಂ ತಂ
ಸತತಮನುಗತಾ ಯೋಜನಾನಾಂ ಶತೇಽಪಿ
ಪ್ರಾಪುಂ ಸ್ಥಾನಂ ಪ್ರಕಾಮಂ
ನಿರವಧಿಧನಧಾನ್ಯಾದ್ಯ(?)ಢಾಜ್ಯಂ ಶ್ರಯನ್ತೇ ।
ಪುತ್ರಾನ್ ಪೌತ್ರಾನ್ ಪ್ರಪೌತ್ರಾನ್
ದುಹಿತೃಜನಮಪಿ ಪ್ರೌಢಭಾಗ್ಯಂ ಚ ಭೋಗ್ಯಂ ।
ಯೋಗ್ಯಾಗಾರಾಣಿ ಢಾವಾಃ ಶರದದು
(ಪೆ) ಮುಖೀಃ(?)ಮೋಕ್ಷಸಾಮ್ರಾಜ್ಯ ಲಕ್ಷ್ಮೀಮ್ ॥ ೪ ॥
ಕಾಞ್ಚ್ಯೀಪೀಠಾಧಿಪಂ ಯೇ
ಯತಿಪತಿಮಖಿಲಾಚಾರ್ಯಮಾಖಣ್ಡಲಶ್ರೀ-
ಸಂಪನ್ನಂ ಪನ್ನಗಾರಿಧ್ವಜವಿಧಿಹರಿ(?)
ಭಿರ್ಭಾವ್ಯಮಾನಂ ಶರಣ್ಯಮ್ ॥
ತೇ ಸಾತತ್ಯಂ ರಮನ್ತೇ ಕಲಶಜಲಧಿ
ಜಾವ್ಯಯುರಾರೋಗ್ಯಯುಕ್ತಾ
ಸ್ಥಾನೇಷ್ವಾನನ್ದಭೂಮುಸ್ವನವರತ
ಶುಭೈಶ್ವರ್ಯಭಾಜೋ ಮಹೀಷಾಃ[2] ॥ ೫ ॥

ಯೇ ಚೋನ್ಮತ್ತಾನ್ತರಜ್ಞಾ ಗುರುವರಚರಣಾಮ್ಭೋಜಸೇವಾವಿಹೀನಾ
ಹೀನಾಸ್ತೇ ಸರ್ವಸೌಖ್ಯೈರ್ನಿರಯವಸತಯೋ ನಿನ್ದಿತಾಃ ಸರ್ವಲೋಕೈಃ ।
ಕೃತ್ವಾಕೃತ್ವಾನ್ಯದೇವಾರ್ಚನಮಪಿ ಸುಕೃತಾನ್ಯಾಶತಾನ್ಯಾತ್ಮವಿದ್ಯಾ
ರಾಹಿತ್ಯಾದಾತ್ಮಹಾನಾದಹಹ ಕುಜನನಂ ಪ್ರಾಪ್ನುವನ್ತೀಹ ತೇ ವೈ ॥[3]

---

1. ಸುರೇಶ್ವರಾಚಾರ್ಯರು ಶ್ರೀವಿದ್ಯೆಯಲ್ಲಿ ಧುರೀಣರೆಂದು ಹೇಳಿ ಅವರನ್ನು ಕಾಂಚಿಯಲ್ಲಿಟ್ಟರೆಂದೂ ಇಲ್ಲಿ ಹೇಳಿದೆ.

2. ಕಾಂಚೀಪೀಠದ ಹೊಗಳಿಕೆಯ ಶ್ಲೋಕಗಳಿವು.

3. ಕಾಂಚಿಯ ಗುರುವನ್ನು ಪೂಜಿಸದೆ ಬೇರೆಯ ದೇವತೆಗಳನ್ನು ಪೂಜಿಸಿದವರಿಗೂ ಕುಜನ್ಮವಾಗುವಡೆಂದು ಇಲ್ಲಿ ಹೇಳಿದೆ.

ತಸ್ಮಾತ್ ಸರ್ವಾತ್ಮನಾ ಸರ್ವಪುರುಷಾರ್ಥೈಕಹೇತವೇ ।
ಸೇತವೇ ಸರ್ವಧರ್ಮಾಣಾಂ ಗುರವೇ ಸ್ಪೃಹಯೇದ್ ಬುಧಃ ॥ ೭ ॥

ಇತಿ ಶ್ರೀ ಮಾರ್ಕಣ್ಡೇಯಸಂಹಿತಾಯಾಂ ಶತಖಣ್ಡಾತ್ಮಿಕಾಯಾಂ
ದ್ವಿಸಪ್ತತಿತಮಖಣ್ಡೇ– ಅಷ್ಟಮಪರಿಸ್ಪನ್ದಃ

ಮಾರ್ಕಂಡೇಯಸಂಹಿತೆಯ ಪೂರ್ಣಪ್ರತಿಯನ್ನು ನಾವು ನೋಡಿಲ್ಲ. ಈ ಗ್ರಂಥವೇನು ಪುರಾಣವೋ, ಕಾವ್ಯವೋ, ತಿಳಿಯದು. ಸಮಾಪ್ತಿವಾಕ್ಯದಿಂದ ಬಹಳ ದೊಡ್ಡ ಗ್ರಂಥವಾಗಿರಬೇಕೆಂದು ಕಲ್ಪಿಸಬೇಕಾಗಿದೆ. ಇದು ಸಂವಾದರೂಪವಾಗಿಲ್ಲ; ಪದ್ಯಗಳು ದೀರ್ಘವಾದ ಪಾದಗಳ ರೂಪದಲ್ಲಿ ಕಾವ್ಯದ ಶೈಲಿಯಲ್ಲಿವೆ. ಬಂಧವೂ ಅಷ್ಟು ಬಿಗಿಯಾಗಿಲ್ಲ. ಅಲ್ಲಲ್ಲಿ ಸ್ಖಾಲಿತ್ಯಗಳು ಕಾಣುತ್ತಿವೆ. ಬಲು ಮಟ್ಟಿಗೆ ಕಾಂಚೀಪೀಠಕ್ಕೆ ಹೊಂದುವ ಆನಂದಗಿರೀಯಶಂಕರವಿಜಯಕ್ಕೆ ಒಪ್ಪಾಗಿರುವ ವಿಷಯಗಳೇ ಎದ್ದುಕಾಣುತ್ತಿವೆ.

ಇಲ್ಲಿ ಅದ್ವೈತಕ್ಕೆ ಅಷ್ಟು ಪ್ರಾಧಾನ್ಯವಿಲ್ಲ. ಮಂತ್ರಶಾಸ್ತ್ರ, ಶ್ರೀವಿದ್ಯಾಸ್ಮಾರ್ತರ ಶೈವಸಂಪ್ರದಾಯ, ಯೋಗಭೋಗಾದಿಲಿಂಗಗಳ ಸ್ಥಾಪನೆಯ ವಿವರ, ಕಾಂಚಿಯಲ್ಲಿ ಸುರೇಶ್ವರರನ್ನಿಟ್ಟ ವಿಚಾರ, ಕಾಂಚೀಪೀಠಕ್ಕೆ ಗೌರವವನ್ನು ತೋರಿಸದವರ ನಿಂದೆ, ಆ ಪೀಠವನ್ನು ಗೌರವಿಸುವವರ ಪ್ರಶಂಸೆ– ಇವುಗಳ ವಿಷಯವೇ ಮುಖ್ಯವಾಗಿರುವದರಿಂದ ಇದನ್ನು ಕಾಂಚೀಪೀಠದ ಸಂಪ್ರದಾಯದವರೇ ಆದರಿಸುತ್ತಿರುವದು ಸ್ವಾಭಾವಿಕವಾಗಿದೆ.

---

(೫) ಪುರಾಣಾಂತರವಚನಗಳು

(೧) ಲಿಂಗಪುರಾಣ

ನಿನ್ದನ್ತಿ ವೇದವಿದ್ಯಾಂ ಚ ದ್ವಿಜಾಃ ಕರ್ಮಾಣಿ ವೈ ಕಲೌ ।
ಕಲೌ ರುದ್ರೋ[1] ಮಹಾದೇವಃ ಶಙ್ಕರೋ ನೀಲಲೋಹಿತಃ ।
ಪ್ರಕಾಶತೇ ಪ್ರತಿಷ್ಠಾರ್ಥಂ ಧರ್ಮಸ್ಯ ವಿಕೃತಾಕೃತೇ ।
ಯೇ ತಂ ವಿಪ್ರಾ ನಿಷೇವನ್ತೇ ಯೇನ ಕೇನಾಪಿ ಶಙ್ಕರಮ್ ।
ಕಲಿದೋಷಾನ್ ವಿನಿರ್ಜಿತ್ಯ ಪ್ರಯಾನ್ತಿ ಪರಮಂ ಪದಮ್ ॥

ಪೂರ್ವಾರ್ಧ– ಅಧ್ಯಾಯ ೪೦–೨೦, ೨೯, ೩೨,

---

1. 'ದೇವೋ' ಎಂದು ಪಾ॥

(೨) ಕೂರ್ಮಪುರಾಣ

ಕಲೌ ರುದ್ರೋ ಮಹಾದೇವೋ ಲೋಕಾನಾಮೀಶ್ವರಃ ಪರಃ ।
ತದೇವ (?) ಸಾಧಯೇನ್ನ್ಯಾಣಾಂ ದೇವತಾನಾಂ ಚ ದೈವತಮ್ ॥
ಕರಿಷ್ಯತ್ಯವತಾರಂ[1] ಸ್ವಂ ಶಙ್ಕರೋ ನೀಲಲೋಹಿತಃ ।
ಶ್ರೌತಸ್ಮಾರ್ತಪ್ರತಿಷ್ಠಾರ್ಥಂ[2] ಭಕ್ತಾನಾಂ ಹಿತಕಾಮ್ಯಯಾ ॥
ಉಪದೇಕ್ಷ್ಯತಿ ತಜ್ಜ್ಞಾನಂ ಶಿಷ್ಯಾಣಾಂ ಬ್ರಹ್ಮಸಂಮಿತಮ್[3] ।
ಸರ್ವವೇದಾನ್ತಸಾರಂ ಹಿ ಧರ್ಮಾನ್ (?) ವೇದಾನ್ತದರ್ಶನಾತ್[4] ॥
ಯೇ ತಂ ಪ್ರೀತ್ಯಾ ನಿಷೇವನ್ತೇ ಯೇನಕೇನೋಪಚಾರತಃ ।
ವಿಜಿತ್ಯ ಕಲಿಜಾನ್ ದೋಷಾನ್ ಯಾನ್ತಿ ತೇ ಪರಮಂ ಪದಮ್ ॥

ಕೂರ್ಮ–ಅ. ೩೦–೩೨ರಿಂದ ೩೫

(೩) ವಾಯುಪುರಾಣ

ಚತುರ್ಭಿಃ ಸಹ ಶಿಷ್ಯೈಸ್ತು ಶಙ್ಕರೋಽವತರಿಷ್ಯತಿ ॥

(೪) ಸೌರಪುರಾಣ

ಚತುರ್ಭಿಃ ಸಹ ಶಿಷ್ಯೈಶ್ಚ ಶಙ್ಕರೋಽವತರಿಷ್ಯತಿ ॥
ವ್ಯಾಕುರ್ವನ್ ವ್ಯಾಸಸೂತ್ರಾಣಿ ಶ್ರುತೇರರ್ಥಂ ಯಥೋದಿತಮ್ ।
ಸ ಏವಾರ್ಥಃ ಶ್ರುತೇರ್ಗ್ರಾಹ್ಯಃ ಶಂಕರಪ್ರತಿಪಾದಿತಃ ॥

(೫) ಭವಿಷ್ಯೋತ್ತರಪುರಾಣ

ಕಲ್ಯಾದೌ ದ್ವಿಸಹಸ್ರಾಂತೇ ಲೋಕಾನುಗ್ರಹಕಾಮ್ಯಯಾ ।
ಚತುರ್ಭಿಃ ಸಹ ಶಿಷ್ಯೈಸ್ತು ಶಂಕರೋಽವತರಿಷ್ಯತಿ ॥

೫೬ನೆಯ ಅಧ್ಯಾಯ

ವಿಶೇಷ : ಲಿಂಗಪುರಾಣ ಮತ್ತು ಕೂರ್ಮಪುರಾಣಗಳನ್ನು ನಾವು ನೋಡಿರುತ್ತೇವೆ. ವಾಯು, ಸೌರ, ಭವಿಷ್ಯೋತ್ತರ–ಇವುಗಳಿಗೆ ಮುಖ್ಯವಾಗಿ ಶ್ರೇಷ್ಠಲೂರು ಕೃಷ್ಣಸ್ವಾಮಯ್ಯರು (ಶ್ರೀ. ಶಂ. ಪು. ೧೭–೧೮) ಮತ್ತು ಬಲದೇವ ಉಪಾಧ್ಯಾಯ (ಬಲ. ಶಂ. ೧೫–೧೬)–ಇವರುಗಳ ಗ್ರಂಥಗಳೇ ನಮಗೆ ಮುಖ್ಯ ಆಧಾರ. ನಮಗೆ ಸಿಕ್ಕಿರುವ ಪಾಠಾಂತರಗಳನ್ನು ಕೆಳಗೆ ಕೊಟ್ಟಿದೆ. ಲಿಂಗಕೂರ್ಮವಚನವ್ಯಕ್ತಿಗಳಿಗೂ ಮತ್ತು ವಾಯುಕೂರ್ಮವ್ಯಕ್ತಿಗಳಿಗೂ ಇರುವ ಸಾಮ್ಯವು ಲಕ್ಷಿಸತಕ್ಕದ್ದಾಗಿದೆ.

---

1. 'ಅವತಾರಾಣಿ' ಎಂದು ಪಾ॥
2. 'ಪ್ರತಿಷ್ಠಾರ್ಥಂ' ಎಂದು ಮುದ್ರಿತಪಾಠ.
3. 'ಬ್ರಹ್ಮಸಂಜ್ಞಿತಮ್'
4. 'ವೇದನಿದರ್ಶಿತಾನ್'

೨. ಆಚಾರ್ಯರುಗಳನ್ನು ನಿಂದಿಸುವ ಪುರಾಣಗಳ:

(೧) ಪದ್ಮಪುರಾಣ

(ಚರಿತ್ರೆ. ಪುಟ ೧೫)

ಶೃಣು ದೇವಿ ಪ್ರವಕ್ಷ್ಯಾಮಿ ತಾಮಸಾನಿ ಯಥಾಕ್ರಮಮ್ ।
ಯೇಷಾಂ ಶ್ರವಣಮಾತ್ರೇಣ ಪಾತಿತ್ಯಂ ಜ್ಞಾನಿನಾಮಪಿ ॥
ಪ್ರಥಮಂ ಹಿ ಮಯೈವೋಕ್ತಂ[1] ಶೈವಂ ಪಾಶುಪತಾದಿಕಮ್ ।
ಮದ್ಭಕ್ತ್ಯಾ[2] ವೇಶಿತೈರ್ವಿಪ್ರೈಃ ಸಂಪ್ರೋಕ್ತಾನಿ[3] ತತಃ ಪರಮ್[4] ॥
ಕಣಾದೇನ ತು ಸಂಪ್ರೋಕ್ತಂ ಶಾಸ್ತ್ರಂ ವೈಶೇಷಿಕಂ ಮಹತ್ ।
ಗೌತಮೇನ ತಥಾ ನ್ಯಾಯಂ ಸಾಂಖ್ಯಂ ತು ಕಪಿಲೇನ ವೈ ॥
ದ್ವಿಜನ್ಮನಾ ಜೈಮಿನಿನಾ ಪೂರ್ವಂ ವೇದಮಪಾರ್ಥಕಮ್ ।
ನಿರೀಶ್ವರೇಣ ವಾದೇನ ಕೃತಂ ಶಾಸ್ತ್ರಂ ಮಹತ್ತರಮ್[5] ॥
ಧೀಷಣೇನ ತಥಾ ಪ್ರೋಕ್ತಂ ಚಾರ್ವಾಕಮತಿಗರ್ಹಿತಮ್ ।
ದೈತ್ಯಾನಾಂ ನಾಶನಾರ್ಥಾಯ ವಿಷ್ಣುನಾ ಬುದ್ಧರೂಪಿಣಾ ॥
ಬೌದ್ಧಶಾಸ್ತ್ರಮಸತ್ ಪ್ರೋಕ್ತಂ ನಗ್ನನೀಲಪಟಾದಿಕಮ್ ।
ಹಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮೇವ ಚ[6] ॥
ಮಯೈವ ಕಥಿತಂ ದೇವಿ ಕಲೌ ಬ್ರಾಹ್ಮಣರೂಪಿಣಾ ।
ಅಪಾರ್ಥಂ ಶ್ರುತಿವಾಕ್ಯಾನಾಂ ದರ್ಶಯನ್ ಲೋಕಗರ್ಹಿತಮ್ ॥
ಕರ್ಮಸ್ವರೂಪತ್ಯಾಜ್ಯತ್ವಮತ್ರ ಚ[7] ಪ್ರತಿಪಾದ್ಯತೇ ।
ಸರ್ವಕರ್ಮಪರಿಭ್ರಂಶಾನ್ನೈಷ್ಕರ್ಮ್ಯಂ ತತ್ರ ಚೋಚ್ಯತೇ[8] ॥
ಪರಾತ್ಮ[9] ಜೀವಯೋರೈಕ್ಯಂ ಮಯಾ ತು ಪ್ರತಿಪಾದ್ಯತೇ ।
ಬ್ರಹ್ಮಣೋಽಸ್ಯ ಪರಂ ರೂಪಂ[10] ನಿರ್ಗುಣಂ ದರ್ಶಿತಂ[11] ಮಯಾ ॥
ಸರ್ವಸ್ಯ ಜಗತೋಽಪ್ಯಸ್ಯ[12] ನಾಶನಾರ್ಥಂ[13] ಕಲೌ ಯುಗೇ ।

1, 'ಮಯಾ ಚೋಕ್ತಮ್'
2. 'ಮಚ್ಛಕ್ತ್ಯಾವೇಶಿತೈಃ' 3. 'ಪ್ರೋಕ್ತಾನಿ ಚ' 4. 'ಶೃಣು'
5. ಈ ಶ್ಲೋಕವು ಪದ್ಮಪುರಾಣದಲ್ಲಿ ೭೫ನೆಯ ಶ್ಲೋಕವಾಗಿದೆ.
6. 'ಬೌದ್ಧಮುಚ್ಯತೇ' 7. 'ವೈ' ಎಂದು ಮುದ್ರಿತಪಾಠ
8. 'ಸರ್ವಕರ್ಮಾಪರಿಭ್ರಷ್ಟಂ ವೈಧರ್ಮ್ಯಂತ್ವಂ ತದುಚ್ಯತೇ'
9. 'ಪರೇಶ' ಎಂದು ಮುದ್ರಿತಪಾಠ.
10. 'ಸ್ವಯಂ' ಎಂದು ಮುದ್ರಿತಪಾಠ.
11. 'ವಕ್ಷ್ಯತೇ' ಎಂದು ಮುದ್ರಿತಪಾಠ.
12. 'ಅತ್ರ' ಎಂದು ಪಾ॥ 13. 'ಮೋಹನಾರ್ಥಂ'

ವೇದಾರ್ಥವನ್ಮೋಹಶಾಸ್ತ್ರಂ ಮಾಯಾವಾದಮವೈದಿಕಮ್[1] ||
ಮಯೈವ ರಕ್ಷ್ಯತೇ ದೇವಿ ಜಗತಾಂ ನಾಶಕಾರಣಾತ್ |

ಉತ್ತರಖಂಡ– ಅಧ್ಯಾಯ ೨೬ಳರಲ್ಲಿ ೬೬ರಿಂದ ೭೫

ವಿಶೇಷ ; ಮೇಲಿನ ಶ್ಲೋಕಗಳನ್ನು ಸಾಂಖ್ಯಪ್ರವಚನಭಾಷ್ಯದ ಮೊದಲಲ್ಲಿ (ಸಾಂ. ಪ್ರ. ಪು. ೫–೬) ವಿಜ್ಞಾನಭಿಕ್ಷುವೆಂಬಾತನು ಉದಾಹರಿಸಿರುತ್ತಾನೆ. ಆತನು ಶಂಕರಾಚಾರ್ಯರ ಅವ್ಯೈತಪ್ರಕ್ರಿಯೆಯನ್ನು ಖಂಡಿಸುವದರಲ್ಲಿ ಬಲವಾದ ಅಭಿನಿವೇಶವುಳ್ಳಾತನು. ಇಲ್ಲಿ (೧)ಪಾಶುಪತಾದಿಶೈವಶಾಸ್ತ್ರಗಳು, (೨) ವೈಶೇಷಿಕ, (೩) ನ್ಯಾಯ, (೪) ಸಾಂಖ್ಯ, (೫) ಪೂರ್ವಮೀಮಾಂಸೆ, (೬) ಬೌದ್ಧಶಾಸ್ತ್ರಗಳು– ಇವುಗಳನ್ನೆಲ್ಲ ತಾಮಸವೆಂದು ಹೇಳಿದ ಬಳಿಕ ಮಾಯಾವಾದವೆಂಬ ಅಸಚ್ಛಾಸ್ತ್ರವನ್ನು ಶಿವನೇ ಹೇಳಿರುತ್ತಾನೆಂದಿದೆ ! ಶಂಕರಾಚಾರ್ಯರ ಹೆಸರು ಇಲ್ಲಿಲ್ಲವಾದರೂ ಕರ್ಮತ್ಯಾಗ, ನಿರ್ಗುಣಬ್ರಹ್ಮಪ್ರತಿಪಾದನೆ, ಮಾಯಾವಾದ– ಇವೆಲ್ಲ ಅವೈದಿಕಗಳೆಂದು ಹೇಳಿರುವದರಿಂದ ಇದು ಆಚಾರ್ಯಮತದ ಪರಾಮರ್ಶವೇ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಸಕಲತಾಮಸದರ್ಶನಗಳನ್ನೂ ಕಿವಿಗೆ ಹಾಕಿಕೊಂಡಮಾತ್ರದಿಂದ ಜ್ಞಾನಿಗಳೂ (?) ಪತಿತರಾಗುವರೆಂದು ಇಲ್ಲಿ ಹೇಳಿದೆ !

ಈ ಅಧ್ಯಾಯದ ೪–೫ ಶ್ಲೋಕಗಳಲ್ಲಿ ಶಂಖ, ಚಕ್ರ, ಊರ್ಧ್ವಪುಂಡ್ರ –ಮುಂತಾದ ಹರಿಗೆ ಪ್ರಿಯತಮವಾದ ಚಿಹ್ನೆಗಳು ಯಾರಿಗಿಲ್ಲವೋ ಅವರು ಪಾಷಂಡಿಗಳು ಎಂದಿದೆ. ೧೯ರಿಂದ ೫೧ರವರೆಗಿನ ಶ್ಲೋಕಗಳಲ್ಲಿ ದೇವತೆಗಳಿಂದ ಜಯಿಸುವದಕ್ಕಾಗದೆ ಇದ್ದ ನಮುಚಿಯೇ ಮುಂತಾದ ದೈತ್ಯರುಗಳ ಮೋಹನಾರ್ಥವಾಗಿ ತಾಮಸಪುರಾಣಗಳನ್ನು ಮಾಡೆಂದೂ ಅಶುಚಿಯಾದ ಆಚಾರಗಳನ್ನು ಹೊರತೋರಿಸೆಂದೂ ವಿಷ್ಣುವು ಶಿವನಿಗೆ ಅಪ್ಪಣೆಮಾಡಿದಂತೆ ಬರೆದಿದೆ.

ಇವೆಲ್ಲ ಯಾರೋ ಮತಾಂಧರಾದ ವೀರವೈಷ್ಣವರು ಸೇರಿಸಿರುವ ಭಾಗಗಳೆಂದು ಹೇಳದೆ ಗತ್ಯಂತರವಿಲ್ಲ. ಆದರೆ ಮಾಯಾವಾದವನ್ನು ಹಳಿದ ಭಾಗವನ್ನು ಸೇರಿಸಿದ ಶಂಕರದ್ವೇಷಿಗಳು ಯಾರೊ! ಪದ್ಮಪುರಾಣದಲ್ಲಿ ನಾಲ್ಕು ಸಂಸ್ಕರಣಗಳಾಗಿವೆಯೆಂದು ಜ್ವಾಲಾಪ್ರಸಾದಮಿಶ್ರರು (ಆ.ಪು.ಪು. ೧೦೪–೧೦೫) ಬರೆದಿದಾರೆ.

(೨) ಮಧ್ವಪರಾಮರ್ಶಕಪುರಾಣವಾಕ್ಯಗಳು

ಕೂರ್ಮಪುರಾಣ (ಮುಷ್ಣಮಾಹಾತ್ಮ್ಯ), ಸ್ಕಾಂದಪುರಾಣ (ಮುಷ್ಣಮಾಹಾತ್ಮ್ಯ)– ಇವುಗಳಲ್ಲಿ ರಾಕ್ಷಸರು ಕಲಿಯುಗದಲ್ಲಿ ಮಾಡುವ ಮಿಥ್ಯಾಶಾಸ್ತ್ರಗಳನ್ನು ವಾಯುದೇವರು ಮಧ್ವಾಚಾರ್ಯರಾಗಿ ಅವತರಿಸಿ ಖಂಡಿಸುವರೆಂಬ ಭವಿಷ್ಯವನ್ನು ಹೇಳಿದೆಯಂತೆ. ನಮ್ಮಲ್ಲಿರುವ ಕೂರ್ಮಪುರಾಣದಲ್ಲಿ ಮುಷ್ಣಮಾಹಾತ್ಮ್ಯವಿಲ್ಲ.

ಸೌರಪುರಾಣ (೩೯,೪೦ನೆಯ ಅಧ್ಯಾಯಗಳಲ್ಲಿ) ಮಧ್ವಾಚಾರ್ಯರನ್ನು ನಿಂದಿಸುವ ವಾಕ್ಯಗಳಿವೆಯಂತೆ !

"ಮಧ್ವತಂತ್ರಮುಖಮರ್ದನವ್ಯಾಖ್ಯಾನ"ದ ೯–೧೦ನೆಯ ಪುಟಗಳನ್ನು ನೋಡಿ.

---

1. 'ಮಾಯಯಾ ಯದವೈದಿಕಮ್'

(೩) ಮಧ್ವರಾಮಾನುಜರು ಕಲಿಯ ಅಮಾತ್ಯರಾದ ಕಾಮುಕ್ರೋಧಾಂಶಾವತಾರರೆಂಬ ಕಥೆ

(ಸ್ಕಂದ. ಕೇದಾರಖಂಡ, ೬೧ನೆಯ ಅಧ್ಯಾಯ, ಯುಗಧರ್ಮಪ್ರಸ್ತಾವದಲ್ಲಿ ಕಲಿಧರ್ಮವನ್ನು ಭಗವಂತನು ಗರುಡನಿಗೆ ಹೇಳಿರುವದು)

ಕಾಮುಸ್ತು ದ್ರಾವಿಡೇ ದೇಶೇ ವರ್ಧಮಾನೋ ಮಹಾದ್ಯುತಿಃ ।
ಕಲಿಪೂರುಷಸಂದೇಶಾತ್ ವಿಷ್ಣುಪಾಷಣ್ಡನಾಮಕಮ್ ॥
ವ್ಯಾಖ್ಯಾಸ್ಯತಿ ದುರಾತ್ಮಾಸೌ ಮೋಹಯಿತ್ವಾ ಜನಾನ್ ಭೃಶಮ್ ।
ಭಜಸ್ವ ಸೂತ್ರಾಣಿ ಸರ್ವಾಣಿ ಬ್ರಹ್ಮಾದ್ವೈತಪರಾಣಿ ಚ ॥
ಶ್ರುತಿಸ್ಮೃತೀಸ್ತಥಾ ಭಜಸ್ವ ದ್ವೈತೇ ಸಂಸ್ಥಾಪಯಿಷ್ಯತಿ ।
ಕಾರಯಿಷ್ಯತಿ ಪುರಾಣಾನಿ ದ್ವಿಜಾದ್ಯೈಃ ಶ್ವೇತಮೃತ್ಸ್ನಯಾ ॥
ತಪ್ತಲೋಹೈರ್ದ್ವಿಜಾತೀನಾಂ ದಹಿಷ್ಯತಿ ಕಲೇವರಾನ್ ।
ತ್ಯಾಜಯಿಷ್ಯತಿ ಕರ್ಮಾಣಿ ವೈದಿಕಾನಿ ದುರಾತ್ಮವಾನ್ ॥
ಭಾಷಾಕೃತಪ್ರಬನ್ಧಾನಿ ಪಾಠಯಿಷ್ಯತಿ ಸರ್ವಶಃ ।
ಅಭೇದವಾದಿನಃ ಸಾಧೂನ್ ದೂಷಯಿಷ್ಯತಿ ದುರ್ಮತಿಃ ॥
ಕ್ರೋಧಃ ಕರ್ಣಾಟದೇಶೀಯಃ ಕಾಮುಶಾಸ್ತ್ರಂ ಸಮೀಕ್ಷ್ಯ ಚ ।
ಸ್ವಯಂ ವ್ಯಾಖ್ಯಾಸ್ಯತೇ ಪುತ್ರ ತದ್ವಿರುದ್ಧಮತೇ ಸ್ಥಿತಃ ॥
ತತ್ತ್ವವಾದಸಮಾಖ್ಯಾಂ ಚ ಕೃತ್ವಾ ತಸ್ಮಿನ್ನಿಜಾಗಮೇ ।
ಶ್ರುತಿಸ್ಮೃತಿಪುರಾಣಾನಿ ಭಞ್ಜಯಿಷ್ಯತಿ ಸರ್ವಶಃ ॥
ಸ್ವಯಂ ಕರಿಷ್ಯತೇ ಧೀರಃ ಪುರಾಣಾನಿ ಶ್ರುತಿಸ್ಮೃತೀಃ ।
ಅಷ್ಟಾದಶಪುರಾಣೇಷು ಸ್ಮೃತಿಷ್ವಷ್ಟಾದಶಸ್ವಪಿ ॥
ಅದ್ವೈತನಿರತಂ ಸರ್ವಂ ವಾಕ್ಯಮುತ್ಪಾಟಯಿಷ್ಯತಿ ।
ಕಾರಯಿಷ್ಯತಿ ಪುರಾಣಾನಿ ವೇಣುಪತ್ರಾಕೃತೀನಿ ಚ ॥
ಸ್ವಕಲ್ಪಿತಪುರಾಣಾನಿ ಖ್ಯಾಪಯಿಷ್ಯತಿ ಭೂತಲೇ ।
ತತ್ತ್ವವಾದಮತೇ ಸ್ಥಿತ್ವಾ ಕೇಚಿದ್ ಬ್ರಾಹ್ಮಣಬಾನ್ಧವಾಃ ॥
ದಾಹಯಿಷ್ಯನ್ತಿ ಗಾತ್ರಾಣಿ ತಪ್ತಲೋಹೈರ್ದ್ವಿಜಾಧಮಾನ್ (ಮಾಃ ?) ।
ದಗ್ಧದೇಹಾಶ್ಚ ತೇ ಸರ್ವೇ ತ್ಯಕ್ತವೈದಿಕಸತ್ಕ್ರಿಯಾಃ ॥
ಬ್ರಾಹ್ಮಣಾನೇವ ನಿನ್ದನ್ತಃ ಶ್ರಾದ್ಧಯಜ್ಞಾನ್ ಮಹಾರುಷಃ ।
ದುರಾತ್ಮಾನೋ ದುರಾಚಾರಾಃ ಕ್ರಿಮಿಕೂಪೇ ಭಯಙ್ಕರೇ ॥
ಪತಿಷ್ಯನ್ತಿ ನ ಸಂದೇಹೋ ಭೋಕ್ಷ್ಯನ್ತೇಽಪಿ ಚ ಯಾತನಾಃ ।

—ಶಂಕರಾಶಂಕರಭಾಷ್ಯವಿಮರ್ಶಃ. ಪು. ೩-೪

"ವೆಲ್ಲಂಕೊಂಡೋಹನಾಮಕ ರಾಮರಾಯಕವೀಂದ್ರ"ನೆಂಬಾತನು ರಚಿಸಿರುವ ಗ್ರಂಥದಲ್ಲಿ ಬರೆದಿರುವಂತೆ ಈ ಮೇಲಿನ ಶ್ಲೋಕಗಳನ್ನು ಬರೆದುಕೊಂಡಿದೇವೆ.

ವಿಶೇಷ: ಈ ಶ್ಲೋಕಗಳಲ್ಲಿ ರಾಮಾನುಜರನ್ನು ಕಾಮನ ಅಂಶವೆಂದೂ ಮಧ್ವಾಚಾರ್ಯರನ್ನು ಕ್ರೋಧನ ಅಂಶವೆಂದೂ ವರ್ಣಿಸಿಹೆ. ಈ ಇಬ್ಬರು ವೈಷ್ಣವಾಚಾರ್ಯರ ಮತವನ್ನು ಸಹಿಸದೆ ಯಾವನೋ ಮತಾಂಧನು ಈ ಶ್ಲೋಕಗಳನ್ನು ಪುರಾಣದಲ್ಲಿ ಸೇರಿಸಿರಬೇಕೆಂಬುದು ಸ್ಪಷ್ಟ. ನಾವು ನೋಡಿರುವ ಸ್ಕಾಂದಪುರಾಣದ ಮೊದಲನೆಯ ಮಾಹೇಶ್ವರಖಂಡದ ಭಾಗವಾದ ಕೇದಾರಖಂಡದಲ್ಲಿ ೩೫ ಅಧ್ಯಾಯಗಳಿವೆ. ಆದರಲ್ಲಿ ಯುಗಧರ್ಮದ ಪ್ರಸ್ತಾಪವೇ ಇಲ್ಲ! ಆದ್ದರಿಂದ ರಾಮರಾಯಕವೀಂದ್ರನು ಹೇಳುವ ಕೇದಾರಖಂಡವು ಇದಲ್ಲವೆಂದಾಯಿತು. ಉಪಪುರಾಣವಾದ ಸ್ಕಾಂದಪುರಾಣವು ಮತ್ತೊಂದಿದೆಯಂತೆ. ಅದರಲ್ಲೇನಾದರೂ ಈ ಭಾಗವಿದೆಯೋ ಇಲ್ಲವೋ ತಿಳಿಯದು.

(೪) ಸಂಸ್ಕೃತಚಂದ್ರಿಕೆ

ಈ ಹೆಸರಿನ ಪತ್ರಿಕೆಯ ಎರಡು ಜೀರ್ಣವಾದ ಹಾಳೆಗಳು ನಮಗೆ ದೊರೆತಿರುತ್ತವೆ. ಅದರಲ್ಲಿ ಹೀಗಿದೆ :—

ಸ್ಕಾಂದಪುರಾಣ ಉತ್ತರಕಾಂಡದಲ್ಲಿ ಈ ಕೆಳಗಿನ ಶ್ಲೋಕಗಳಿವೆಯಂತೆ:

ಸ್ಕಂದ ಉವಾಚ–

ಮಣಿಮತ್ಪೂರ್ವಕಾ ದುಷ್ಟಾ ದೈತ್ಯಾ ಆಸನ್ ಕಲೌ ಯುಗೇ |
ತೇ ಕುಶಾಸ್ತ್ರಂ ಪ್ರಕುರ್ವನ್ತೋ ಹರಿವಾಯುವಿರೋಧಿನಃ ||
ತೇಷಾಂ ಮಧ್ಯೇ ಸಂಕರಸ್ತು ಪೂರ್ವಂ ಯೋ ಮಣಿಮಾನ್ ಖಲಃ |
ಸೌಗನ್ಧಿಕವನೇ ದಿವ್ಯೇ ಭೀಮಸೇನಹತೋಽಸುರಃ ||
ಯಃ ಕ್ರೋಧತನ್ತ್ರಕೋ ದುಷ್ಟೋ ಮಿಥ್ಯಾಶಾಸ್ತ್ರಂ ವದನ್ ಪುನಃ |
ಕೃಷ್ಣೇ ಭೀಮೇ ಚ ವಿದ್ವೇಷಂ ಕುರ್ವನ್ ಭೂಮಾವಜಾಯತ ||
ಕಾಲಡೀಗ್ರಾಮಕೇ ರುದ್ರವರಾಜ್ಞಗದ್ವಿಮೋಹಯನ್ |
ಬೌದ್ಧಶಾಸ್ತ್ರಪರೋ ವಿಪ್ರೋ ಯಃ ಕಶ್ಚಿದ್ ಶ್ವಾಪರಶಿಷ್ಯಕಃ ||
ಸ ಸಂಕರಸ್ಯ ಸಂನ್ಯಸ್ಯ ತಸ್ಮಾತ್ಸಂನ್ಯಾಸರೂಪಿಣಃ |
ವೇದಾನ್ತಮತಮಿತ್ಯೇತದ್ದುಷ್ಟಶಾಸ್ತ್ರಂ ಚಕಾರ ಹ ||

–ಎಂಬುದಾಗಿ ಶಂಕರಾಚಾರ್ಯರನ್ನು ನಿಂದಿಸುವ ವಾಕ್ಯಗಳನ್ನು ವೇದವ್ಯಾಸರು ತಮ್ಮ ಪುರಾಣಗಳಲ್ಲಿ ಬರೆದಿರುವದು ಸರಿಯೆ? ಎಂದು ಒಬ್ಬ ಮಾಧ್ವಜಿಜ್ಞಾಸುವು ಕೇಳಿದ್ದಕ್ಕೆ ಪತ್ರಿಕಾಸಂಪಾದಕರು ಕೊಟ್ಟಿರುವ ಉತ್ತರದಲ್ಲಿ ಅದೇ ಸ್ಕಂದಪುರಾಣದ ಕೇದಾರಖಂಡದಲ್ಲಿ "ಕ್ರೋಧಃ ಕರ್ಣಾಟದೇಶೀಯಃ" ಎಂಬ ಶ್ಲೋಕಗಳನ್ನು ನೋಡು– ಎಂದು ಬರೆದಿದ್ದಾರೆ. ಈ ಶ್ಲೋಕಗಳು ಪುಟ ೩೮೪ರಲ್ಲಿ ನಾವು

ಕೊಟ್ಟಿರುವ ಶ್ಲೋಕಗಳಂತೆಯೇ ಇವೆ. ಜೊತೆಗೆ ಇನ್ನೊಂದು ಶ್ಲೋಕವನ್ನೂ ಹೆಚ್ಚಾಗಿ ಕೊಟ್ಟಿದ್ದಾರೆ. ಅದು ಹೀಗಿದೆ :

ಧೃತ್ವಾ ಕೈರಾತವೇಷಂ ಮನಸಿಜರಿಪುಣಾ
ದಾನವೋ ಮೂಕನಾಮಾ |
ರಕ್ಷಾರ್ಥಂ ಪಾಣ್ಡುಸೂನೋಃ ಪ್ರಕಟಕಿಟಿವಪುಃ
ಯೋ ಹತಃ ಪೂರ್ವಮದ್ರೌ ||
ಸೋಽಯಂ ಪಾಷಣ್ಡವಾದೀ ಸಮಜನಿ ತುಲವಃ
ಕ್ರೋಧನೋ ನಿಷ್ಕ್ರಿಯಾರ್ಥಂ |
ಗರ್ಭೇ ಮಾತ್ಸರ್ಯಬುದ್ಧಿರ್ಧರಣಿತಲಗತೋ
ಭೇದವಾದಾನ್ ಜಜಲ್ಪ ||

–ಎಂದೂ ಇದೆಯಂತೆ !

ಈ ಪತ್ರಿಕೆಯ ಎಲ್ಲಾ ಹಾಳೆಗಳೂ ನಮಗೆ ದೊರಕಿಲ್ಲವಾದ್ದರಿಂದ ಹೆಚ್ಚಿಗೆ ಏನೂ ಹೇಳಲು ಅವಕಾಶವಿಲ್ಲ. ಇವೆಲ್ಲ ಮತಾಂಧರ ಕುಕಲ್ಪನೆಗಳೆಂಬುದಂತೂ ಸ್ಪಷ್ಟ.

---

೩. ಪರಮತದವರ ಅಭಿಪ್ರಾಯಗಳು

(೧) ಮಧ್ವಾಚಾರ್ಯರ ಮಹಾಭಾರತ-ತಾತ್ಪರ್ಯನಿರ್ಣಯ

ತತ್ರಾಪರಾಂಶ್ಚೈವ ಬಹೂನಸತ್ಯಂ
ನಿರೀಶ್ವರಂ ಚಾಪ್ರತಿಷ್ಠಂ ಚ ಲೋಕಮ್ |
ಸಿದ್ಧೋಽಹಮಿತಿ ಬ್ರುವಾಣಾನ್
ಗುಣಾನ್ವಿಷ್ಣೋಃ ಖ್ಯಾಪಯನ್ವಾಯುತೋಽಜೈತ್ || ೨೨–೩೦೪

[ಈ ಶ್ಲೋಕದಲ್ಲಿ ಗೀತೆಯಲ್ಲಿ ಹೇಳಿರುವ ಆಸುರಸಂಪತ್ತಿನವರ ಸ್ವಭಾವವನ್ನು ಸೌಗಂಧಿಕಾವನದಲ್ಲಿದ್ದ ರಾಕ್ಷಸರಿಗೆ ಅಂಟಿಸಿ ಅವರು 'ನಾನು ಸಿದ್ಧನು', 'ನಾನೇ ಈಶ್ವರನು'–ಎನ್ನುತ್ತಿದ್ದರೆಂದು ಹೇಳಿದೆ. ರಾಕ್ಷಸರಿಗೂ ಭೀಮಸೇನನಿಗೂ ಸಗುಣನಿರ್ಗುಣವಿಷಯದಲ್ಲಿಯೂ ಜೀವೇಶ್ವರಭೇದಾಭೇದಗಳ ವಿಷಯದಲ್ಲಿಯೂ ವಾದವಾದಂತೆ ಕಲ್ಪಿಸಿದೆ.]

ಆಗ್ನೇ ನಿಧಾಯ ಮಣಿಮನ್ತಮಜೇಯಮುಗ್ರಂ
ಶಮ್ಭೋರ್ವರಾದ್ವಿವಿಧಶಸ್ತ್ರಮಹಾಭಿವೃಷ್ಟ್ಯಾ !
ತಾನ್ ಸರ್ವರಾಕ್ಷಸಗಣಾನ್ ಮಣಿಮತ್ಸಮೇತಾನ್
ಭೀಮೋ ಜಘಾನ ಸಪದಿ ಪ್ರವರೈಃ ಶರೌಘೈಃ || ೩೧೫ ||

ತೇ ಹತಾ ಭೀಮಸೇನೇನ ಪ್ರಾಪುರನ್ಧಂತಮೋಽಖಿಲಾಃ ॥ ೩೧೭ ॥
ಹತಾಃ ಸೌಗನ್ಧಿಕವನೇ ಮಣಿಮಾಂಶ್ಚ ಪುನಃ ಕಲೌ ।
ಜಾತೋಽ ಮಿಥ್ಯಾಮತಿಂ ಸಮ್ಯಗಾಸ್ತೀರ್ಯಾಪ ತಮೋಽಧಿಕಮ್ ॥ ೩೧೮

[ಇಲ್ಲಿ ಮಣಿಮಂತನು ಮಿಕ್ಕ ಪದ್ಮತ್ರಯಸಂಖ್ಯಾತರಾಕ್ಷಸರೊಡನೆ ಹತನಾಗಿ ಕಲಿಯುಗದಲ್ಲಿ ಹುಟ್ಟಿ ಮಿಥ್ಯಾಮತಿಯೆನ್ನು ಚೆನ್ನಾಗಿ ಹರಡಿ ಅಧಿಕವಾಗಿ ಅಂಧಂತಮಸ್ಸನ್ನು ಹೊಂದಿದನೆಂದಿದೆ. ಶಂಕರಾಚಾರ್ಯರ ಜಗನ್ಮಿಥ್ಯಾವಾದವು ಮಣಿಮಂತನದೆಂದು ಧ್ವನಿಯಿಂದ ಸೂಚಿಸಿದೆ. ಈ ಅಭಿಪ್ರಾಯಕ್ಕೆ ಭಾರತದಲ್ಲಿ ಆಧಾರವೇನೂ ಇಲ್ಲ.]

(೨) ಮಣಿಮಂಜರಿ

ಮಧ್ವಾಚಾರ್ಯರ ಪ್ರಿಯಶಿಷ್ಯ ತ್ರಿವಿಕ್ರಮಪಂಡಿತಾಚಾರ್ಯರು ಶಕೆ ೧೧೮೦ರ ಕೊನೆಯ ಭಾಗದಲ್ಲಿ ರಾಣಿಬೆನ್ನೂರು ತಾಲ್ಲೂಕು ಕೊಡೆಯಾಲಗ್ರಾಮದಲ್ಲಿ ಲಿಕುಚನೆಂಬ ಮಹಾಪಂಡಿತನ ವಂಶದಲ್ಲಿ ಹುಟ್ಟಿದರಂತೆ. ಮಧ್ವಾಚಾರ್ಯರೊಡನೆ ೧೫ ದಿನಗಳು ವಾದವನ್ನು ಮಾಡಿ ಸೋತಬಳಿಕ ದ್ವೈತಿಗಳಾದರಂತೆ. ಇವರ ಮಗ ನಾರಾಯಣಪಂಡಿತನೆಂಬಾತನು[1] ಬರೆದ "ಮಣಿಮಂಜರಿ" ಯಲ್ಲಿ ಮಣಿಮಂತನು ಶಂಕರಾಚಾರ್ಯರಾಗಿ ಮಾಯಾವಾದವನ್ನು ಹರಡಿದ ಬಗೆಯನ್ನು ವಿಸ್ತಾರವಾಗಿ ವರ್ಣಿಸಿದೆ.

ಈ ಗ್ರಂಥದ ಮೊದಲನೆಯ ನಾಲ್ಕು ಸರ್ಗಗಳಲ್ಲಿ ರಾಮಾಯಣಭಾರತಗಳ ಕಥೆಯ ಸಂಗ್ರಹವಿದೆ. ಹನುಮಂತನು ರಾಮಕಾರ್ಯಕ್ಕಾಗಿಯೂ ಭೀಮನು ಕೃಷ್ಣಕಾರ್ಯಕ್ಕಾಗಿಯೂ ದೈತ್ಯರನ್ನು ಸಂಹರಿಸಿದಂತೆ ಮಧ್ವಾಚಾರ್ಯರು ದೈತ್ಯರಾದ ಅದ್ವೈತಿಗಳನ್ನು ವಾಗ್ಯುದ್ಧದಲ್ಲಿ ಸೋಲಿಸಿದರೆಂದು ತಿಳಿಸುವದಕ್ಕಾಗಿ ಈ ಭಾಗವು ಬಂದಿದೆಯೆಂಬುದು ನಿಃಸಂಶಯ. ಮಧ್ವಾಚಾರ್ಯರು ತಾವು ಹನುಮಂತ ಮತ್ತು ಭೀಮ– ಇವರ ಅವತಾರವೆಂತ ಹೇಳಿಕೊಂಡಿರುವದು ಈ ಕಥೆಗೆ ಆಧಾರವಾಯಿತು.

ಅಸುರರು ರಹಸ್ಯವಾಗಿ ಆಲೋಚನೆಮಾಡಿ ಮಣಿಮಂತನನ್ನು ಕುರಿತು 'ಅಣ್ಣ, ಭೂಮಿಯಮೇಲೆ ಹುಟ್ಟಿ ವಿದ್ಯಾವೇದಪುರಾಣಗಳನ್ನು ಹೊಲಗೆಡಿಸಿ ವಿಷ್ಣುಗುಣಗಳನ್ನು ದೂಷಿಸು, ವಿಷ್ಣುವಿಗೆ ಜೀವೈಕ್ಯವನ್ನು ಹೇಳು. ಈಗ ಭೀಮನ ಅಂಜಿಕೆಯಿಲ್ಲ' ಎಂದು ಪ್ರೋತ್ಸಾಹಿಸಿ (೫–೧೯) ಪರತೀರ್ಥರೆಂಬ

1. ಈ ಪಂಡಿತನ ವಂಶದವರು ಈಗಲೂ ತುಳುವದೇಶದಲ್ಲಿದಾರೆಂದೂ ಮಾಧ್ವಮತವನ್ನು ಬಿಟ್ಟು ಮತ್ತೆ ಸ್ಮಾರ್ತರಾಗಿದಾರೆಂದೂ ತಿಳಿಯಬಂದಿರುವದಾಗಿ ಸೋಮನಾಥಯ್ಯನವರು (ಸೋ. ಶಂ. ಪು. ೨೨೬) ಬರೆದಿದಾರೆ. ಅದಕ್ಕೆ ಆಧಾರವೇನೋ ತಿಳಿಯಲಿಲ್ಲ.

ತಪಸ್ವಿಗಳಾದ ಯತಿಗಳನ್ನು ಆಶ್ರಯಿಸಿ ಅದ್ವೈತವನ್ನು ಹರಡಿದರೆ ಜನರಲ್ಲಿ ಸಂಭಾವಿತನಾಗುವೆ ಎಂದು (೫-೨೨) ತಿಳಿವಳಿಕೆಹೇಳಿದರು. ಮಣಿಮಂತನು ಶಂಕರಾಚಾರ್ಯರಾಗಿ ಹುಟ್ಟಿದನೆಂಬುದನ್ನು 'ಪಾದತಲೋಟಜ' (೬-೨೫), 'ಪತ್ತೆಲಜನ್ಮನಾ' (೮-೧)-ಎಂಬ ವಿಶೇಷಗಳಿಂದ ಗ್ರಂಥಕರ್ತನು ಸೂಚಿಸಿರುತ್ತಾನೆ. ಆದ್ದರಿಂದ ಪತತೀರ್ಥರೆಂಬ ವೈಷ್ಣವಸಂನ್ಯಾಸಿಗಳ ಕಾಲವನ್ನು ಗೊತ್ತು ಮಾಡಿದರೆ ನಾರಾಯಣಪಂಡಿತನಿಗೆ ಅಭಿಮತರಾಗಿರುವ ಶಂಕರಾಚಾರ್ಯರು ಯಾವ ಕಾಲದವರೆಂಬುದನ್ನು ನಿರ್ಣಯಿಸುವದಕ್ಕೆ ಸಹಾಯವಾಗುವಂತಿದೆ.

ಗೋವಿಂದಭಗವತ್ಪಾದರ ಕಥೆಯನ್ನು ೫ನೆಯ ಸರ್ಗದಲ್ಲಿ ವರ್ಣಿಸಿರುವದು ಹೀಗೆ !

ತತೋ ಗೋವಿನ್ದನಾಮಾಭೂದ್ದ್ವಿಜೋ ವಿದ್ಯಾವಿಶಾರದಃ ।
ಸ ಚತುರ್ವರ್ಣಜಾಃ ಕನ್ಯಾ ಊಢ್ವಾ ಪುತ್ರಾನಜೀಜನತ್ ॥ ೩೧ ॥
ಶಬರೋ ವಿಕ್ರಮಾದಿತ್ಯೋ ಹರಿಶ್ಚನ್ದ್ರೋಽಥ ಭರ್ತೃಹಾ ।
ಇತ್ಯೇತೇ ಕೋವಿದಾ ಆಸನ್ ಧೃತವರ್ಣಾಶ್ರಮವ್ರತಾಃ ॥ ೩೨ ॥

"ಪತಂಜಲಿಚರಿತ"ವನ್ನನುಸರಿಸಿ ಹಿಂದೆ (೮ನೆಯ ಪುಟದಲ್ಲಿ) ಕೊಟ್ಟಿರುವ ವಿವರದಲ್ಲಿ ಗೋವಿಂದಭಗವತ್ಪಾದರಿಗೆ ಪೂರ್ವಾಶ್ರಮದಲ್ಲಿ ಚಂದ್ರಶರ್ಮನೆಂದು ಹೆಸರು. ಅತನಿಗೆ ವರರುಚಿ, ವಿಕ್ರಮ, ಭಟ್ಟ, ಭರ್ತೃಹರಿ--ಎಂಬ ಹೆಸರಿನ ಮಕ್ಕಳಾದರು ಎಂದಿರುವಲ್ಲಿ ಇಲ್ಲಿ ಶಬರ, ವಿಕ್ರಮಾದಿತ್ಯ, ಹರಿಶ್ಚಂದ್ರ, ಭರ್ತೃಹರಿ- ಎಂಬ ಮಕ್ಕಳನ್ನು ಕಲ್ಪಿಸಿದೆ. ಶಬರನು ಜೈಮಿನಿಯ ಸೂತ್ರಗಳಿಗೆ ಭಾಷ್ಯವನ್ನು ಬರೆದನು, ವಿಕ್ರಮಾದಿತ್ಯನು ರಾಜ್ಯವನ್ನಾಳಿದನು, ಹರಿಶ್ಚಂದ್ರನು ದೇವತೆಗಳಿಂದ ಆಯುರ್ವೇದ(?)ವನ್ನು ಕಲಿತುಕೊಂಡನು, ಭರ್ತೃಹರಿಯು ಯಜ್ಞಹೃದಯವನ್ನು (?) ಅರಿತುಕೊಂಡನು ; ಶಬರನಿಗೆ ಭಟ್ಟಕುಮಾರ, ಭಟ್ಟನಾರಾಯಣ ಎಂದು ಇಬ್ಬರು ಮಕ್ಕಳು (೫-೩೮ರಿಂದ, ೩೬). ಹೀಗೆ ಪಂಡಿತನು ಕಲ್ಪಿಸುವದಕ್ಕೆ ಯಾವ ಆಧಾರವಿತ್ತೋ ತಿಳಿಯದು.

ಕುಮಾರಿಲಭಟ್ಟನು ಬೌದ್ಧರನ್ನು ಸೋಲಿಸಿದ ಬಳಿಕ ಅವರು ಮೊದಲೇ ಒಪ್ಪಿದಂತೆ ರಾಜಾಜ್ಞೆಯಿಂದ ಅವರಿಗೆ ಅಗ್ನಿಪ್ರವೇಶವನ್ನು ಮಾಡಿಸಿದನು. ಬೌದ್ಧರಲ್ಲಿ ಕೆಲವರು ಹಡಗನ್ನು ಹತ್ತಿ ದ್ವೀಪಾಂತರಕ್ಕೆ ಹೋದರು ; ಕೆಲವರು ಅಲ್ಲಲ್ಲಿ ಅಡಗಿಕೊಂಡರು, ಬಕ್ಕನೇ ಮೊಲಾದ ಕೆಲವರು ವೇಷಾಂತರದಿಂದ ರಾಜ್ಯದ ಹೊರಪ್ರಾಂತಕ್ಕೆ ಹೋದರು (೫-೩೮ರಿಂದ೫೧)- ಎಂದು ತಿಳಿಸಿ ಐದನೆಯ ಸರ್ಗವನ್ನು ಮುಗಿಸಿರುತ್ತದೆ.

ಆರನೆಯ ಸರ್ಗದಲ್ಲಿ ನಾರಾಯಣಪಂಡಿತನು ಭಾರವಿ, ಪ್ರಭಾಕರ, ಮಾಘ, ವರರುಚಿ, ಬಾಣ, ಮಯೂರ, ಕಾಲಿದಾಸ, ದಂಡಿ, ಉಂಬೇಕ

ಮುಂಡ್ಡನ, ರೇಷಣ–ಎಂಬಿವರನ್ನು (೬–೨೭ರಿಂದ ೫೫) ಶಾಸ್ತ್ರಜ್ಞರೆಂದು ಹೆಸರಿಸಿ ಮೀಮಾಂಸಾಶಾಸ್ತ್ರದ ವಿಷಯಕ್ಕೆ ತನಗಿದ್ದ ತಿಳಿವಳಿಕೆಯ ಮಟ್ಟವನ್ನು ಹೊರ ಪಡಿಸಿಕೊಂಡಿರುತ್ತಾನೆ.

ಶಂಕರರ ಜನ್ಮವು ಬ್ರಾಹ್ಮಣಿಯಲ್ಲಿ ಜಾರನಿಂದ ಆಯಿತೆಂದು ಈತನು ಹೇಳಿರುವದನ್ನು ಚರಿತ್ರೆಯ (ಳಳನೆಯ ಪುಟದ)ಲ್ಲಿ ಕೊಟ್ಟಿರುತ್ತೇವೆ ; ಹೆಸರನ್ನು ಸಂಕರನೆಂಬ ಅಶ್ಲೀಲಶಬ್ದದಿಂದ ಕರೆದಿರುವ ಈತನ ವಿವೇಕವನ್ನೂ ಅಲ್ಲಿ ವಿಮರ್ಶಿಸಿರುತ್ತೇವೆ. ಶಂಕರಾಚಾರ್ಯರ ಮನಸ್ಸು ತಾಮಸವೆಂದು ತಿಳಿಸುವದಕ್ಕೆ ಒಂದು ಕಥೆಯನ್ನು ಈತನು ಕಲ್ಪಿಸಿರುತ್ತಾನೆ: ಐದಾರು ಬದನೆಯಕಾಯಿಗಳನ್ನು ತೆಗೆದು ಕೊಂಡು ಬಾ ಎನ್ನಲು ಶಂಕರನು ಒಂದೊಂದು ಬದನೆಕಾಯಿಯೂ ಒಂದೊಂದೇ; ಎರಡನೆಯದಿಲ್ಲವೇ ಇಲ್ಲವಲ್ಲ ! (೬–೧೦) ಎಂದುಕೊಂಡನಂತೆ. ಅವನಿಗೆ ತಾಯಿಯು ತಾಮಸಪದಾರ್ಥಗಳನ್ನು ತಿನ್ನಿಸಿದ್ದರಿಂದ ಇಂಥ ತಾಮಸಬುದ್ಧಿಯುಂಟಾಯಿತಂತೆ ! 'ಏಕಮೇವಾದ್ವಿತೀಯಮ್' ಎಂಬ ಶ್ರುತಿಯ ಅರ್ಥವನ್ನು ಅದ್ವೈತಿಗಳು ಹೀಗೆ ಅವಿವೇಕರೀತಿಯಿಂದ ಮಾಡುತ್ತಾರೆಂಬುದನ್ನು ತಿಳಿಯುವ ಈತನ ಸೂಕ್ಷ್ಮಮತಿಯೂ ತವಕವೂ ಇಲ್ಲಿ ಸೇರಿರುತ್ತವೆ. ಹುಡುಗನು ದಡ್ಡನೆಂದ ಮರುಕ್ಷಣದಲ್ಲಿಯೇ 'ಈ ಜಾಣನಾದ ವಾಗ್ಮಿಯಾದ ಹುಡುಗನಿಗೆ' (೬–೧೩) ಒಬ್ಬನು ಉಪನಯನವನ್ನು ಮಾಡಿಸಿದನೆಂದಿರುವದರಿಂದ ದಡ್ಡನೆಂದಿರುವದು ಅಸೂಯಾ ಮಾತ್ರದ ಫಲವೆಂದಾಗುತ್ತದೆ ; ಆಚಾರ್ಯರು ದಡ್ಡರೂ ಜಾಣರೂ ಏಕಕಾಲಕ್ಕೆ ಆಗಿರಲಾರರಷ್ಟೆ ? ಅವರು ಸೌರಾಷ್ಟ್ರಕ್ಕೆ (೬–೧೩)ಹೋಗಿ ಶಾಸ್ತ್ರಾಭ್ಯಾಸವನ್ನು ಮಾಡಿದರೆಂದಿರುವದಕ್ಕೆ ಆಧಾರವು ಗ್ರಂಥಕರ್ತನಿಗೆ ಮಾತ್ರವೇ ಗೊತ್ತು.

ಶಂಕರರು ಪರಮಹಂಸರಾದ ಬಗೆಯನ್ನು ಈ ನಾರಾಯಣನು ವರ್ಣಿಸಿರುವದು ಇನ್ನೂ ಸೊಗಸಾಗಿದೆ. ಉತ್ತರದೇಶಕ್ಕೆ ಹೋಗುತ್ತಿರುವ ಅವರ ಜನಿವಾರವು ನದಿಯ ಪ್ರವಾಹದಿಂದ ಕೊಚ್ಚಿಹೋಯಿತಂತೆ. ಆಗ 'ಎಲೈ ಸೂತ್ರವೆ, ನಿನ್ನನ್ನು ನಾನು ಮೊದಲೇ ಬಿಟ್ಟಿದ್ದೆನು ; ಕರ್ಮವಿಲ್ಲದ ನನಗೆ ನಿನ್ನಿಂದೇನಾಗ ಬೇಕು ?' ಎಂದುಕೊಂಡು ಬೇಗನೆ ಮುಂದಕ್ಕೆ ಹೋಗಿಬಿಟ್ಟರಂತೆ! ಹೀಗೆ ಸೂತ್ರಹೀನನಾಗಿ 'ಪರತೀರ್ಥರ' ಬಳಿಗೆ ಹೋಗಲು ಅವರು ಈತನನ್ನು ಮಾತನಾಡಿಸಲೇ ಇಲ್ಲ. ಆಮೇಲೆ ಗೋದಾವರಿಯನ್ನು ದಾಟಿ ಶಂಕರರು ಬದರಿಗೆ ಹೋಗಿ ಪರತೀರ್ಥರ ಶಿಷ್ಯರಾದ ಸತ್ಯಪ್ರಜ್ಞರಲ್ಲಿ 'ನಿಮ್ಮ ಗುರುಗಳ ಶಿಷ್ಯನು ನಾನು ; ಅವರ ಅಪ್ಪಣೆಯಂತೆ ನಿಮ್ಮಲ್ಲಿಗೆ ಬಂದೆನು' ಎಂದು ಸುಳ್ಳುಹೇಳಿದರಂತೆ. (೬–೧೪ರಿಂದ ೨೧) ಇಂಥ ಸುಳ್ಳುಕಥೆಯನ್ನು ಕಲ್ಪಿಸಿರುವ ಗ್ರಂಥಕರ್ತನ ವಿಷಯಕ್ಕೆ ಯಾರಿಗೆತಾನೆ ಬೇಸರವುಂಟಾಗದಿರದು ?

ಸತ್ಯಪ್ರಜ್ಞರನ್ನು ಬಿಟ್ಟು, ಈ ದೈತ್ಯನು 'ಹಿಂದಿನ ಜನ್ಮದ ಸಂಸ್ಕಾರದಿಂದ ಶೂನ್ಯವೆಂದು ಅಥವಾ ನಿರ್ಗುಣನೆಂದು ಐಕಾತ್ಮ್ಯಭಾವನೆಯನ್ನು ಮಾಡುತ್ತಿದ್ದನು' (೬-೨೨) ಎಂಬ ವಾಕ್ಯದಿಂದ ಆದ್ವೈತಿಗಳು ಒಪ್ಪಿರುವ ನಿರ್ಗುಣ ಬ್ರಹ್ಮವಾದದ ಮರ್ಮವು ತನಗೆ ಎಳ್ಳಷ್ಟೂ ತಿಳಿಯದೆಂಬುದನ್ನು ಪ್ರಕಟಿಸಿಕೊಂಡಿರುತ್ತಾನೆ.

'ದ್ವೀಪಾಂತರಕ್ಕೆ ಓಡಿಹೋಗಿದ್ದ ಬಕ್ಕನು ಗೌಡಪಾದರಿಗೆ ಸಂನ್ಯಾಸವನ್ನು ಕೊಟ್ಟು ತತ್ತ್ವವನ್ನು ಉದೇಶಿಸಿದನಂತೆ; ಅವರಿಂದ ಗೋವಿಂದನು ಸಂನ್ಯಾಸವನ್ನು ಪಡೆದುಕೊಂಡಿರುತ್ತಾನೆ; ಸಂಪ್ರದಾಯಾಗತವಾದ ಈ ನಮ್ಮ ತತ್ತ್ವವನ್ನು ಅವನಿಂದ ನೀನು ತಿಳಿದುಕೊ, ವಿಷ್ಣುಗುಣಗಳನ್ನು ದೂಷಿಸು' ಎಂದು (೬-೨೬ ರಿಂದ ೩೯) ಅಸುರರು ಶಂಕರಾಚಾರ್ಯರಿಗೆ ದುರ್ಬೋಧನೆಮಾಡಿ ಹೋದರೆಂದು ಒಂದು ಕಲ್ಪನೆ. ಶಂಕರಾಚಾರ್ಯರು ಬೌದ್ಧಸಂಪ್ರದಾಯದವರೆಂದು ಅಪಪ್ರಚಾರವನ್ನು ಮಾಡುವದೇ ಈ ಪಂಡಿತನ ಉದ್ದೇಶ. ಗೌಡಪಾದರ ಬೌದ್ಧಗುರುವು 'ಬಕ್ಕ'ನು ಎಂದು ಕನ್ನಡದ ಹೆಸರಿನಿಂದ ಕರೆದಿರುವದನ್ನು ಓದುಗರು ಲಕ್ಷಿಸಬೇಕು. ಗೌಡಪಾದಾಚಾರ್ಯರು ಬಕ್ಕನಿಂದ ಉಪದೇಶವನ್ನು ಹೊಂದಿದ ಬಳಿಕ ಮನನಮಾಡಲಾಗಿ ಅವರಿಗೆ ನಿರ್ವಿಶೇಷವಾದ ಸರ್ವಾಭಾವವು ಹೊರತು ಮತ್ತೇನೂ ಕಾಣಿಸಲಿಲ್ಲವಂತೆ (೬-೩೬). ಗೌಡಪಾದಾಚಾರ್ಯರು ಬರೆದಿರುವ ಮಾಂಡೂಕ್ಯಕಾರಿಕೆಗಳು ಜಗತ್ಪ್ರಸಿದ್ಧವಾಗಿರುತ್ತವೆ; ಅವುಗಳಲ್ಲಿ ಅವರು ಪ್ರತಿಪಾದಿಸಿರುವ ಅದ್ವೈತತತ್ತ್ವವನ್ನು ಸರ್ವಾಭಾವವೆಂದು ತಿಳಿಯುವಷ್ಟು ಮುದ್ದು ಪಂಡಿತನು ಈತನು! ನಿರ್ವಿಶೇಷ, ನಿರ್ಗುಣ, ಶೂನ್ಯ, ಸರ್ವಾಭಾವ- ಇವೆಲ್ಲ ಈ ಪಂಡಿತಂಮನ್ಯನಿಗೆ ಪರ್ಯಾಯಗಳು!

ಶಂಕರಾಚಾರ್ಯರು ಗೋವಿಂದರ ಬಳಿಗೆ ಹೋಗಿ ಅವರ ಶಿಷ್ಯರಾದಬಳಿಕ 'ಮಾಯಿ' (ಮಾಯಾವಾದಿ)ಗಳಾದ ಶಂಕರಾಚಾರ್ಯರು ಶೂನ್ಯವಾದಿತ್ವವನ್ನು ಮುಚ್ಚಿಹಾಕಿ ವೇದಾಂತಿಗಳೆಂದು ಹೇಳಿಕೊಳ್ಳುತ್ತಾ ನಮ್ಮ ಮತವನ್ನು ಹರಡೋಣ! ಇಲ್ಲದಿದ್ದರೆ ಜನರು ನಮ್ಮನ್ನು ನಿಂದಿಸಿಯಾರು!- ಎಂದು ಗೋವಿಂದರಿಗೆ ಹೇಳಿ (೬-೬೩) ಬ್ರಹ್ಮದತ್ತನ ಬಳಿಗೆಹೋಗಿ ಪ್ರಭಾಕರ, ಭಟ್ಟಕುಮಾರ, ಭಾಸ್ಕರ- ಇವರೊಡನೆ ಆ ತ್ರಿದಂಡಿಯಲ್ಲಿ ಶ್ರವಣಮಾಡಿದರಂತೆ! (೬-೪೩)ಅವರೆಲ್ಲರಿಗೂ ಭಿನ್ನಭಿನ್ನಾಭಿಪ್ರಾಯವಾದದ್ದರಿಂದ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೋದರು! ಇವರೆಲ್ಲರೂ ಸಮಕಾಲಿಕರೆಂದರೆ ತನ್ನ ಅವಿವೇಕಕ್ಕೆ ಯಾರಾದರೂ ನಕ್ಕಾರು ಎಂಬ ಅಂಜಿಕೆಯೂ ಇಲ್ಲ, ಈ ಮಹಾಶಯನಿಗೆ. ಸುಳ್ಳಿಗೆ ಸಾವಿರಕಾಲುಗಳಲ್ಲವೆ?

ಆಮೇಲೆ ಶಂಕರಾಚಾರ್ಯರು ಬೌದ್ಧಮತವನ್ನೇ ಸೂತ್ರಗಳ ಮೂಲಕ ವಿವರಿಸಿ ಭಾಷ್ಯವನ್ನು ಮಾಡಿದರು. ಬ್ರಹ್ಮದತ್ತನು ಇವನ್ನು ಕೇಳಿ ಕಿವಿಗಳನ್ನು ಮುಚ್ಚಿಕೊಂಡನು ! ಭಾಸ್ಕರನು ಆ ಭಾಷ್ಯವನ್ನು ಖಂಡಿಸಿದನು. ಶಂಕರಾಚಾರ್ಯರು ಜನರನ್ನು ಪ್ರತಿವಾದಿಗಳನ್ನು ಗೆಲ್ಲುವದಕ್ಕಾಗಿ ಶಾಕ್ತೇಯಮುಂತ್ರಗಳನ್ನು ಸೇವಿಸಿದರು. ಭೈರವಿಯು ಆವರ ದೂತಿಯಾದಳು ! –ಎಂದು ಆರನೆಯ ಸರ್ಗವನ್ನು ಸಮಾಪ್ತಿಗೊಳಿಸಿರುತ್ತಾನೆ.

ಶಂಕರಾಚಾರ್ಯರಿಗೂ ವಿಶ್ವರೂಪನಿಗೂ ಆದ ವಾದವನ್ನು ಈ ಪಂಡಿತನು ಅತ್ಯಂತಜುಗುಪ್ಸಾವಹವಾದ ಕಥೆಯ ಕಲ್ಪನೆಯ ಮೂಲಕ ವರ್ಣಿಸಿರುತ್ತಾನೆ. ವಿಶ್ವರೂಪನು ಸಂನ್ಯಾಸಿಯಾದನು. ಈ ಸಂದರ್ಭದಲ್ಲಿ ಇವನು ಆಚಾರ್ಯರಿಗೂ ಅವನ ಹೆಂಡತಿಗೂ ಸಂಬಂಧವನ್ನು ಕಲ್ಪಿಸಿ ಬರೆದಿರುವ ಭಂಡತನದ ಮಾತುಗಳನ್ನು ಬರೆಯಲು ನಮ್ಮ ಲೇಖನಿ ಹಿಂಜಗ್ಗುತ್ತದೆ. ಇದನ್ನು ಕೇಳಿದಮೇಲೂ ಯಾರಾದರೂ ಕುತೂಹಲದಿಂದ ಮೂಲಗ್ರಂಥವನ್ನು ಓದುವಷ್ಟು ಧೈರ್ಯವನ್ನು ಮಾಡಿಕೊಂಡರೆ ನಾರಾಯಣನನ್ನು ಪಂಡಿತನೆನ್ನುವದಕ್ಕಿಂತ ಭಂಡನೆಂದೇ ಕರೆಯುವರೆಂಬುದರಲ್ಲಿ ಸಂಶಯವಿಲ್ಲ. ಇದಾದಬಳಿಕ ಭಟ್ಟನಿಂದ ಪರಾಜಿತನಾಗಿದ್ದ (!) ಮಂಡನನು ಆನೆಯನ್ನೇರಿ ಬರುತ್ತಿರುವಲ್ಲಿ ಶಂಕರಾಚಾರ್ಯರಿಗೂ ಅವರಿಗೂ ಆದ ವಾಗ್ವಾದದಲ್ಲಿರುವ 'ಕುತೋ ಮುಣ್ಡೀ' ಮುಂತಾದ ವಾಕ್ಯಗಳು ಮಾಧವೀಯಶಂಕರವಿಜಯದಿಂದ ಕದ್ದವುಗಳಾದ್ದರಿಂದ ಆ ವಿಷಯದಲ್ಲಿ ಇಲ್ಲಿ ಹೇಳಬೇಕಾದದ್ದೇನೂ ಉಳಿದಿರುವದಿಲ್ಲ. ಈ ಪಂಡಿತನಿಗೆ ವಿಶ್ವರೂಪನೂ ಮಂಡನನೂ ಬೇರೆಬೇರೆ ಎಂಬ ವಿಷಯವು ಎಲ್ಲಿಯೋ ಕಿವಿಗೆ ಬಿದ್ದಿತ್ತೆಂದೂ ಹೇಳಬೇಕಾಗಿದೆ. ಶಂಕರರು ಭೈರವೀಶಕ್ತಿ ಮತ್ತು ಕುಕ್ಕುಟಮುಂತ್ರ– ಇವುಗಳ ಬಲದಿಂದ ವಾದಮಾಡುತ್ತಿದ್ದರೆಂದು ದೂರಿರುವದು ಪಂಡಿತನಿಗೇ ವಿಾಸಲು.

ಶಂಕರಾಚಾರ್ಯರಿಗೆ ನಾಲ್ವರು ಶಿಷ್ಯರು : ತೋಟಕ, ಪದ್ಮಪಾದ, ಜ್ಞಾನೋತ್ತಮ, ಬೀಜಭುಕ್ (ಅಥವಾ ಬೀಜಾದ). ಅವರು ಮೂರು ಸಿದ್ಧಿಗಳನ್ನೂ (?) ತೋಟಕವೇ ಮುಂತಾದ ತಾಮಿಸ್ರಕ್ಕೆ ದ್ವಾರವಾದ (?) ನಾಲ್ಕು ಶಾಸ್ತ್ರಗಳನ್ನೂ ಮಾಡಿದರಂತೆ. ಬೀಜಾದನ ಹೆಸರು ಯಾವ ಕನಸಿನಲ್ಲಿ ಪಂಡಿತನ ಕಿವಿಗೆ ಬಿದ್ದಿತ್ತೋ ತಿಳಿಯದು.

ಶಂಕರರ ಶಿಷ್ಯಪ್ರಶಿಷ್ಯರ ಮೂಲಕ ಸಂನ್ಯಾಸಿಗಳ ಪರಂಪರೆಯು ಬೆಳೆಯಿತು. ಅವರು ದಕ್ಷಿಣಕ್ಕೆ ಹೋಗಿ ತಾಯಿಯ ಶರೀರವನ್ನು ದಹಿಸಿ ತಮ್ಮ ಮಠಕ್ಕೆ ಬಂದು ಶ್ವಾಸಜ್ವರ ಭಗಂದರಗಳಿಂದ ನರಳುತ್ತಿದ್ದರು (೭–೧೬, ೧೭). ಅವರು ಸಾಯುವಾಗಲೂ 'ಪರತೀರ್ಥರ ಶಿಷ್ಯರನ್ನು ನಾಶಗೊಳಿಸಿರಿ' ಎಂದು ಶಿಷ್ಯರಿಗೆ

ಹೇಳಿದರಂತೆ (೭-೧೯)! ಹೊಲಗೇರಿಯಲ್ಲಿ ಚಂಡಾಡುತ್ತಿರುವಾಗ ಶಂಕರರ ಸುದ್ದಿಯು ಅವರಿಗೆ ತಿಳಿದಾಗ ಅಲ್ಲಿ 'ಸಂಕರನಿಗೆ ಎರಡು, ಪದ್ಮಪಾದನಿಗೆ ಒಂದು, ನನಗೆ ಒಂದೂ ಇಲ್ಲ' (೭-೨೪) ಎಂದು ಆಚಾರ್ಯರಿಗೆ ಇನ್ನೂ ಎರಡು ಜನ್ಮಗಳಿವೆ ಎಂದು ತಿಳಿಸಿದರಂತೆ. ಅವರು 'ಹಾಹಾ! ಬೀಜಾದನೆ, ಇದು ನನ್ನ ಗುಟ್ಟು: ಅಪ್ಪ, ನಾನು ಬಹಳವಾಗಿ ಗುಣಗಳಲ್ಲಿ ವ್ಯಾಪೃತನಾದೆನು. ನನಗೆ ಏನಾಗುವದೋ, ಯಾವ ಗತಿಯಾಗುವದೋ!'-ಎಂದು ಹೇಳಿಕೊಳ್ಳುತ್ತಾ ಸತ್ತರಂತೆ! ಇಲ್ಲಿಗೆ ಶಂಕರರನ್ನು ನಿಂದಿಸಿ ತೀರಿಸಿದ್ದಾಯಿತು.

ಕೊನೆಯ ಸರ್ಗದಲ್ಲಿ ಜ್ಞಾನೋತ್ತಮಾದಿಗಳು ನಂದಿಗ್ರಾಮಕ್ಕೆ ಹೋಗಿ ಹಂಸರ ಮತವನ್ನು ಸುಟ್ಟದ್ದು, ಗೋಗಳನ್ನು ಕೊಂದದ್ದು, ಭೈರವೀಶಕ್ತಿಯಿಂದ ಬಾಲಕರನ್ನು ಕೊಂದದ್ದು. ಪ್ರಾಜ್ಞತೀರ್ಥರ ದಂಡಕಮಂಡಲುಗಳನ್ನು ಒಡೆದು ಹಾಕಿದ್ದು, ಅವರೂ ಅವರ ಕಡೆಯವರೂ ಜಗನ್ನಾಥಕ್ಕೆ ಹೋಗುತ್ತಿರಲು ದಾರಿಯಲ್ಲಿ ಅವರನ್ನು ಅಡ್ಡಗಟ್ಟಿ ನಮ್ಮ ಮತಕ್ಕೆ ಸೇರುವಿರೊ, ಸಾಯುವಿರೊ?-ಎಂದು ಬೆದರಿಸಿದ್ದು, ಅವರು ಅಂಜಿ ಹೊರಗೆ ನೋಡುವದಕ್ಕೆ ಇವರ ಮತವನ್ನು ಅವಲಂಬಿಸಿದಂತೆ ನಟಿಸಿ ಪ್ರಚ್ಛನ್ನವೇಷದಿಂದ ತಮ್ಮ ಮತವನ್ನು ಕಾಪಾಡಿಕೊಂಡದ್ದು, ಆ ಸಂಪ್ರದಾಯದ ಅಚ್ಯುತಪ್ರೇಕ್ಷರಲ್ಲಿ ಮಧ್ವಾಚಾರ್ಯರು ಆಶ್ರಮಸ್ವೀಕಾರ ಮಾಡಿದ್ದು- ಇವುಗಳನ್ನು ವರ್ಣಿಸಿದೆ. ಇಲ್ಲಿ ಶೃಂಗೇರಿಮಠದವರಿಗೂ ವೈಷ್ಣವರಿಗೂ ಆದ ಯಾವದಾದರೂ ಅಭಿಪ್ರಾಯವೈಷಮ್ಯವನ್ನು ಮನಸ್ಸಿನಲ್ಲಿಟ್ಟು ಈ ಕಥೆಯನ್ನು ಕಲ್ಪಿಸಿರುತ್ತಾನೆಯೋ, ಅಥವಾ ಅದ್ವೈತಿಗಳ್ಳ ಮತಾಂಧರೆಂದು ತಿಳಿಸಿಕೊಡುವದಕ್ಕೆ ಪ್ರಯತ್ನಿಸಿದ್ದಾನೆಯೋ ನಾವು ನಿಶ್ಚಯಿಸಲಾರೆವು.

ದೇವತಾನಿಂದೆ, ಗುರುಜನನಿಂದೆ, ದೈತ್ಯಸ್ಮರಣೆ, ಬ್ರಾಹ್ಮಣರಲ್ಲಿ ವಿಭಾಗವನ್ನೇರ್ಪಡಿಸುವ ಬುದ್ಧಿ, ರಾಗದ್ವೇಷಗಳ ವಾಸನೆ- ಇವುಗಳನ್ನು ಬಾಲಕರ ಅಂತಃಕರಣದಲ್ಲಿ ಬಿತ್ತುವ, ಇಂಥ ಗ್ರಂಥಗಳನ್ನು ಮಾಧ್ವರಾಗಲಿ ಸ್ಮಾರ್ತರಾಗಲಿ ಮತ್ತೆಯಾವ ಬ್ರಾಹ್ಮಣರಾಗಲಿ ಪ್ರಚಾರದಲ್ಲಿಡುವದು ಮಹಾಪಾಪಕೃತ್ಯವೆಂದು ಹೇಳಬೇಕಾದದ್ದೇ ಇಲ್ಲ. ಇದಕ್ಕೆ ಬದಲು ಭಗವದ್ಭಕ್ತಿಯನ್ನು ಪ್ರಚಾರ ಮಾಡಿ ಬ್ರಾಹ್ಮಣರನ್ನೂ ತೆನ್ನೂಲಕ ಹಿಂದೂಸಮಾಜವನ್ನೂ ಉನ್ನತಿಗೇರಿಸುವ ಪ್ರಯತ್ನವನ್ನು ಮಾಡುವಂತೆ ಗ್ರಂಥಪ್ರಕಾಶಕರಿಗೆಲ್ಲ ಶ್ರೀಮನ್ನಾರಾಯಣನ ಪ್ರೇರಣೆ ಇರಲೆಂದು ಹಾರೈಸೋಣ!

-೦-

(೫) ಥಿಯಸಾಫಿಕಲ್ ಸೊಸೈಟಿಯವರ ಅಭಿಪ್ರಾಯ

(1) ಮ್ಯಾಡಮ್ ಬ್ಲಾವಟ್ಸ್ಕಿ

'ಥಿಯಾಸಫಿ' ಎಂಬ ಮಾತಿಗೆ 'ಈಶ್ವರವಿದ್ಯೆ' ಎಂದು ಅಕ್ಷರಾರ್ಥ. 'ಥಿಯಸಾಫಿಕಲ್ ಸೊಸೈಟಿ' ಎಂಬ ಮಾತನ್ನು 'ಬ್ರಹ್ಮವಿದ್ಯಾಸಮಾಜ' ಎಂದು ಆ ಸಂಘದವರು ಅನುವಾದಮಾಡಿಕೊಳ್ಳುತ್ತಿದಾರೆ. ಆ ಸಮಾಜದ ಸ್ಥಾಪಕರಲ್ಲೊಬ್ಬರಾದ ಬ್ಲಾವಟ್ಸ್ಕಿಯವರು 'ರಹಸ್ಯೋಪದೇಶ' (Secret Doctrine) ಎಂಬ ತಮ್ಮ ಇಂಗ್ಲಿಷು ಗ್ರಂಥದಲ್ಲಿ (ಪುಟ 271, ಒಂದನೆಯ ಸಂಪುಟ) ಹೀಗೆಂದು ಬರೆದಿರುತ್ತಾರೆ :

(a) 'ಕಪಿಲವಸ್ತುವಿನ ಯುವರಾಜನಾದ ಗೌತಮನು ಬ್ರಾಹ್ಮಣರ ರಹಸ್ಯದಲ್ಲಿ, ಎಂದರೆ ಉಪನಿಷತ್ತುಗಳಲ್ಲಿ, ಇದ್ದ ಬ್ರಾಹ್ಮಣರ ಶಾಸ್ತ್ರವನ್ನೆಲ್ಲ ಕಲಿತುಕೊಂಡು ನೋಡಲಾಗಿ ಅದು ಹಿಮಾಲಯದಲ್ಲಿ ಮುಂಜಿನಬೆಟ್ಟಸಾಲುಗಳಲ್ಲಿ ವಾಸವಾಗಿದ್ದ ಜೀವನತತ್ತ್ವಗುರುಗಳ ಅಭಿಪ್ರಾಯಕ್ಕಿಂತ ಬೇರೆಯಲ್ಲವೆನ್ನುವಷ್ಟು ಅದಕ್ಕೆ ಹತ್ತಿರವಾಗಿತ್ತು. ಆಗ ಬ್ರಾಹ್ಮಣರಿಗಲ್ಲದೆ ಮತ್ತೆಯಾರಿಗೂ ಸಿಕ್ಕದಂತೆ ಇಟ್ಟುಕೊಂಡಿದ್ದನ್ನು ಕಂಡು ಈ ಬ್ರಾಹ್ಮಣ ಶಿಷ್ಯನು ಅಸಮಾಧಾನದಿಂದ ಅದನ್ನು ಎಲ್ಲರಿಗೂ ತಿಳಿಯುವಂತೆ ಮಾಡಿ ಲೋಕವನ್ನು ರಕ್ಷಿಸಬೇಕೆಂದು ನಿಶ್ಚಯಿಸಿದನು. ಆಗ ಬ್ರಾಹ್ಮಣರು....ಉಪನಿಷತ್ತುಗಳ ಮೂಲವನ್ನು ಸಂಕ್ಷೇಪಗೊಳಿಸಿದರು.... ಕೈಬರಹದ ಪುಸ್ತಕಗಳಲ್ಲಿ ಪರಮಾರ್ಥರಹಸ್ಯದ ಸಿದ್ಧಾಂತವನ್ನೊಳಗೊಂಡಿದ್ದ ಭಾಗಗಳನ್ನು ತೆಗೆದುಹಾಕಿದರು....'

(b) ಶ್ರೀಶಂಕರಾಚಾರ್ಯರು ಐತಿಹಾಸಿಕರಲ್ಲಿ ಜೀವಿಸಿದ್ದ ಅತ್ಯಂತ ಹೆಚ್ಚಿನ ಅನುಭವಿಗಳು. "ಅವರು ಉಪನಿಷತ್ತುಗಳಮೇಲೆ ಅನೇಕ ಭಾಷ್ಯಗಳನು ಬರೆದರು. ಆದರೆ ಅವರ ಮೂಲಗ್ರಂಥಗಳು ಇನ್ನೂ ನಾಸ್ತಿಕರ ಕೈಗೆ ಬಿದ್ದಿಲ್ಲವೆಂದು ನಂಬುವದಕ್ಕೆ ಕಾರಣವಿದೆ ; ಅವನ್ನು ಎಚ್ಚರಿಕೆಯಿಂದ ಮಠಗಳಲ್ಲಿ ರಕ್ಷಿಸಿಕೊಂಡಿರುತ್ತಾರೆ. ಆ ಆಚಾರ್ಯರು ಬ್ರಾಹ್ಮಣರ ರಹಸ್ಯವಿದ್ಯೆಯ ಅವೋಷಭಾಷ್ಯಗಳು ಸ್ಮಾರ್ತ ಬ್ರಾಹ್ಮಣರಿಗೇ ಹೊರತು ಮತ್ತೆಯಾರೊಬ್ಬರಿಗೂ ಇನ್ನೂ ಅನೇಕ ವರ್ಷಗಳವರೆಗೆ ಸಿಕ್ಕದೆಇರುವವೆಂದು ನಂಬುವದಕ್ಕೆ ಅವಕಾಶವಿದೆ....(ಪುಟ 271). ಆ (ಸ್ಮಾರ್ತ)ಗುಂಪಿನವರೇ ಶೃಂಗಗಿರಿಯಂಥ ಮಠಗಳಲ್ಲಿ ಆಗಿಂದಾಗ್ಗೆ ನಿಜವಾದ ತತ್ತ್ವಜ್ಞಾನಿಗಳಾದ ಮಠಾಧಿಪತಿಗಳು ಬರುತ್ತಾರಂತೆ."

(c) ಆದ್ವೈತಿಗಳನ್ನು ಮಹಾಯಾನಿಕಬೌದ್ಧರು ಪ್ರಚ್ಛನ್ನಬೌದ್ಧರೆಂದು ಕರೆಯುತ್ತಾರೆ ; ಬೌದ್ಧರನ್ನು ವೇದಾಂತಿಗಳು ಪ್ರಚ್ಛನ್ನವೇದಾಂತಿಗಳೆಂದು ಕರೆ

ಯುತ್ತಾರೆ–ಎಂದು ತಿಳಿಸಿದಬಳಿಕ 'ಚೆನ್ನಾಗಿ ವಿವೇಚನೆಮಾಡಿ ಹೋಲಿಸಿದರೆ ಗೌತಮಬುದ್ಧನಿಗೂ ಶಂಕರಾಚಾರ್ಯರಿಗೂ ಅತ್ಯಂತನಿಕಟಸಂಬಂಧವಿರುವಂತೆಯೇ, ಇವರಿಬ್ಬರ ರಹಸ್ಯೋಪದೇಶವೂ ಒಂದೇ ಆಗಿರಬೇಕೆಂದು ಗೊತ್ತಾಗುವದು. ಅಂತೂ ಇವರಿಬ್ಬರಿಗೂ ಇರುವ ವೈಲಕ್ಷಣ್ಯವು ಆಕಾರದಲ್ಲಿರುವದೇ ಹೊರತು ವಸ್ತುತತ್ತ್ವದಲ್ಲಿರುವದಿಲ್ಲ (II Vol. ಪುಟ 637) ಎಂದು ಬರೆದಿದೆ

(d) "ತನಗೆ ಉಪದಿಷ್ಟವಾಗಿದ್ದದ್ದನ್ನೆಲ್ಲ ತನ್ನ ವಾಗ್ದಾನಗಳ ನಿಮಿತ್ತದಿಂದ ಹೇಳುವದಕ್ಕೆ ಆಗದ್ದರಿಂದ....ಬೌದ್ಧನು (ರಹಸ್ಯದ) ಹೊರಮೈಯನ್ನು ಮಾತ್ರ ಪ್ರಪಂಚಕ್ಕೆ ಕೊಟ್ಟನು, ಅದರ ಆತ್ಮವನ್ನು ಅವನ ಪ್ರಿಯಶಿಷ್ಯರಿಗೆ ಮಾತ್ರ ಇರಿಸಿಕೊಂಡನು. 'ಆತ್ಮವಾದ'ದ ವಿಷಯವೂ ಅನೇಕ ಚೀನಾತತ್ತ್ವಶೋಧಕರಾದ ವಿದ್ವಾಂಸರ ಕಿವಿಗೆ ಬಿದ್ದಿವೆ, ಅದರ ನಿಜವಾದ ಅರ್ಥವನ್ನಾಗಲಿ ಪ್ರಾಧಾನ್ಯವನ್ನಾಗಲಿ ಯಾರೊಬ್ಬರೂ ಅರಿತುಕೊಂಡಿರುವಂತೆ ಕಾಣಲಿಲ್ಲ. (Vol. I ಪುಟ XXI)"

ಈ ಮೇಲೆ ಕೊಟ್ಟಿರುವ ಮೂಲಗ್ರಂಥದ ಸಾರವು ಈ ಚರಿತ್ರಕಾರರೇ ಸರಳಾನುವಾದಮಾಡಿ ಬರೆದದ್ದು.

(2) ಎ- ಪಿ. ಸಿನೆಟ್

ಈತನು 'ಪಾರಮಾರ್ಥಿಕಬೌದ್ಧಮತ' (Esoteric Buddhism; A. C. 1883. Chap. IX, pp. 148 to 155) ಎಂಬ ಗ್ರಂಥದಲ್ಲಿ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾನಂತೆ :

(1) ಶಂಕರಾಚಾರ್ಯರು ಸಕಲಾಂಶಗಳಲ್ಲಿಯೂ ನವೀನದೇಹಧಾರಿಯಾದ ಗೌತಮಬುದ್ಧನೇ– ಎಂಬುದು ರಹಸ್ಯವು. ಇದು ನನಗೆ ದಕ್ಷಿಣದೇಶದ ಒಬ್ಬ ಅದ್ವೈತಿಬ್ರಾಹ್ಮಣನಿಂದ ತಿಳಿಯಿತು. (2) ಬುದ್ಧನ ಅಪರಾವತಾರಗಳಲ್ಲಿ ಕೆಲವು ಬುದ್ಧನ ಆತ್ಮಚ್ಛಾಯೆಗಳೆಂದು ವರ್ಣಿತವಾಗಿವೆ ; ಆದರೆ ಶಂಕರಾಚಾರ್ಯರು ಸ್ವತಃ ಬುದ್ಧನ ಅವತಾರವೇ. (3) ತಾನು ಮೊದಲು ಬೋಧಿಸಿದ್ದದ್ದರಲ್ಲಿದ್ದ ಕೆಲವು ರಂಧ್ರಗಳನ್ನು ಮುಚ್ಚಿ ಕೆಲವು ತಪ್ಪುಗಳನ್ನು ತಿದ್ದುವದೇ ಅವನ ಮುಖ್ಯೋದ್ದೇಶವಾಗಿತ್ತು. (4) ಶಂಕರಾವತಾರಗಳಲ್ಲಿ ಬುದ್ಧನು ಈ ದೇಶದಲ್ಲಿ ಒದಗಲಿದ್ದ ಮತದ್ವೇಷವನ್ನು ಮಟ್ಟಹಾಕುವದಕ್ಕೆ ವ್ಯವಸಾಯವನ್ನು ಮಾಡಿದನು. (5) ಶಂಕರರು ಇಂಡಿಯಾದೇಶದ ಸರ್ವಪ್ರಾಂತಗಳಲ್ಲಿಯೂ ಸಂಚರಿಸಿ ಅನೇಕ ಮುಖ್ಯಸ್ಥಾನಗಳಲ್ಲಿ ಮಠಗಳನ್ನು ಸ್ಥಾಪಿಸಿದರು. (6) ಶಂಕರಾಚಾರ್ಯರು ತಮ್ಮ ಗ್ರಂಥಗಳಲ್ಲಿ ಜ್ಞಾನವು ಮೋಕ್ಷಕ್ಕೆ ಅವಶ್ಯವೆಂಬುದನ್ನು ಒತ್ತಿಹೇಳಿದರು.

(3) ಡಾಕ್ಟರ್ ಆನಿ ಬೆಸೆಂಟ್

ಇವರು ಅದ್ವೈತವನ್ನನುಸರಿಸಿಯೇ ಅನೇಕಗ್ರಂಥಗಳನ್ನು ಸ್ವತಂತ್ರವಾಗಿ ಬರೆದಿರುತ್ತಾರೆ. ಇವರ ಕೆಲವು ಅಭಿಪ್ರಾಯಗಳು ಕುತೂಹಲಜನಕವಾಗಿವೆ :

(1) ಶಂಕರಾಚಾರ್ಯರು ಮೂವತ್ತೆರಡು ವರ್ಷಗಳಕಾಲ ಒಂದು ಜ್ವಾಲೆಗೆ ದೇಹವಾಗಿದ್ದರು. (2) ಮಹಾತ್ಮರಲ್ಲಿ ಮಹಾತ್ಮರಾದ ಇವರು ಈಗಲೂ ಹಿಮವತ್ಪರ್ವತಗಳಿಂದ ಆಚೆಗೆ ಷಾಂಬಲ್ಲ ಭ್ರಾತೃಕೂಟದಲ್ಲಿ ಅಗೋಚರರಾಗಿ ವಾಸ ಮಾಡುತ್ತಿದಾರೆ. (3) ಪಾಶ್ಚಾತ್ಯಪಂಡಿತರು ಹೇಳುತ್ತಿರುವ ಶಂಕರಾಚಾರ್ಯರು ಇವರಲ್ಲ, ಇವರ ಪರಂಪರೆಯವರಲ್ಲೊಬ್ಬರು (The Theosophist May 1908).

(4) ಸರ್ ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು

ಥಿಯಸಾಫಿಕಲ್ ಸೊಸೈಟಿಗೆ ಸೇರಿದ್ದ ಸರ್. ಎಸ್. ಸುಬ್ರಹ್ಮಣ್ಯಯ್ಯರವರು ಒಂದು ಪತ್ರಿಕೆಯಲ್ಲಿ (The Indian Review for Aug. 1911) ಪ್ರಕಟಿಸಿದ ಅಭಿಪ್ರಾಯಗಳು ಕೆಲವು ವಿಚಿತ್ರವಾಗಿವೆ :

(1) ಶಂಕರಾಚಾರ್ಯರು ಲೋಕಪಾಲಕರುಗಳಲ್ಲಿ ಉನ್ನತಪದವಿಯನ್ನು ಪಡೆದ ಒಬ್ಬ ಸಿದ್ಧಪುರುಷರ ಅವತಾರ. (೭) ಮನುಷ್ಯರೂಪವನ್ನು ಧರಿಸಿ ಶಂಕರನಾಮಧೇಯದಿಂದ ಜ್ಞಾನಬೋಧನೆಮಾಡಿದ ಈ ವ್ಯಕ್ತಿಯು ಜ್ವಾಲಾದೈವತ್ರೆಯದಲ್ಲಿ ಕುಮಾರರೆಂಬುವರಲ್ಲಿ ಒಂದಾಗಿದೆ. ಈ ವ್ಯಕ್ತಿಗಳು ಗುರುಕುಲದ ಅಧ್ಯಕ್ಷನ ಸಾಕ್ಷಾಚ್ಛಿಷ್ಯರು. (3) ಮೊದಲು ಗೌತಮನು ಬುದ್ಧರೂಪದಲ್ಲಿ, ಅನಂತರ ಕುಮಾರನು ಶಂಕರರೂಪದಲ್ಲಿ, ಕೊನೆಗೆ ಮಹರ್ಷಿ ಮೈತ್ರೇಯನು ಇಂಡಿಯಾದೇಶದಲ್ಲಿ ಗೋಪಿನಾಥಕೃಷ್ಣನ ರೂಪದಲ್ಲಿ, ಪ್ಯಾಲಸ್ತೈನ್‌ದೇಶದಲ್ಲಿ ಕ್ರಿಸ್ತರೂಪದಲ್ಲಿ ಅವತರಿಸಿದರು. (4) ಥಿಯಸಾಫಿಕಲ್ ಸಂಘದ ಗುರುಗಳ ಈ ವಿಷಯದಲ್ಲಿ ನಡೆಯಿಸುತ್ತಿರುವ ಅನ್ವೇಷಣೆಯಲ್ಲಿ ನನಗೆ ಸಂಪೂರ್ಣವಾದ ನಂಬಿಕೆಯಿರುವದರಿಂದ ಅವರ ದ್ವಾರಾ ತಿಳಿಯಬಂದ ಸಂಗತಿಗಳನ್ನು ಪ್ರಕಟಿಸಿದೇನೆ. (5) ಕರ್ಮಮಾರ್ಗವನ್ನು ಉದ್ಧಾರಮಾಡುವದಕ್ಕೋಸ್ಕರ ಬುದ್ಧನು, ಜ್ಞಾನಮಾರ್ಗವನ್ನು ಬೋಧಿಸುವದಕ್ಕೋಸ್ಕರ ಶಂಕರನು, ಭಕ್ತಿಮಾರ್ಗವನ್ನು ಉಪದೇಶಿಸುವದಕ್ಕೋಸ್ಕರ ಕೃಷ್ಣಕ್ರಿಸ್ತರು ಅವತರಿಸಿದರು. (6) ಶಂಕರ ನಾಮಾಂಕಿತರು ಇಬ್ಬರು. ಅವರಲ್ಲಿ ಆದಿಶಂಕರರು ಸ್ವಯಂಜ್ಞಾನಿಯಾಗಿದ್ದ ಕಾರಣ ಯಾವ ಗುರುವಿಗು ಶಿಷ್ಯನಾಗಲಿಲ್ಲ, ಮತ್ತು ಇವರು ಗ್ರಂಥಗಳನ್ನು ಬರೆಯಲಿಲ್ಲ, ವಾಙ್ಮುಖವಾಗಿ ಮಾತ್ರ ಬೋಧಿಸಿದರು. ಎರಡನೆಯ ಅಭಿನವಶಂಕರರ್

ಗೋವಿಂದಭಗವತ್ಪಾದರ ಶಿಷ್ಯರು. ಅದರು ಭಾಷ್ಯವನ್ನು ರಚಿಸಿದರು. (7) ಈ ಇಬ್ಬರೂ ಅದ್ವೈತವನ್ನೇ ಬೋಧಿಸಿದರು. (8) ಆದಿಶಂಕರರು 'ಕುಮಾರನ' ಅವತಾರ. ಉಪನಿಷದ್ವಾಕ್ಯಗಳಿಗೆ ಸಮನ್ವಯವನ್ನಾಡುವದರಲ್ಲಿ ಯಾಗಲಿ ಭಾಷ್ಯ ಗಳನ್ನು ರಚಿಸುವದರಲ್ಲಿ ಯಾಗಲಿ ಕಾಲವನ್ನು ವ್ಯರ್ಥವಾಗಿ ಕಳೆಯಲಿಲ್ಲ. ಅಭಿನವ ಶಂಕರರು ರಚಿಸಿದ ಭಾಷ್ಯಗಳಿಂದ ಅವರೂ ಪ್ರಸಿದ್ಧರಾದರು. ಇವರಿಬ್ಬರೂ ಒಂದೇ ವ್ಯಕ್ತಿಯೆಂದು ಭಾವಿಸುವದು ತಪ್ಪು.

ಈ ಮೇಲಿನ ವಿಷಯಗಳನ್ನು ನಾವು ಸೋವುನಾಥಯ್ಯನವರ (ಸೋ. ಶಂ. ಪುಟ ೨೨೬ರಿಂದ ೨೩೦) ಗ್ರಂಥದಿಂದ ಸಂಗ್ರಹಿಸಿದೇವೆ. ಥಿಯಸಾಫಿಕಲ್ ಸಮಾಜವು ಅತ್ಯಂತಪ್ರಭಾವಶಾಲಿಯಾಗಿದ್ದಾಗ ಬರೆದ ಬರೆವಣಿಗೆಗಳಿವು. ಕಲ್ಪನಾಧುರೀಣರು ಏನೇನು ಹೇಳಬಹುದೆಂಬುದಕ್ಕೆ ಉದಾಹರಣೆಗಾಗಿ ಇವು ಗಳನ್ನು ಇಲ್ಲಿ ಸಂಗ್ರಹಿಸಿದೆ. ದಿವ್ಯಚಕ್ಷುಸ್ಸಿನಿಂದ ತ್ರಿಕಾಲಜ್ಞರಾದವರು ಕಂಡು ಹಿಡಿಯುವ ಇಂಥ ವಿಷಯಗಳ ವಿಷಯಕ್ಕೆ ಚರ್ಮಚಕ್ಷುಗಳಾದ ನಮ್ಮಂಥವರು ಏನೂ ಹೇಳುವದಕ್ಕೂ ಬರುವಂತಿಲ್ಲ.

---

೪. ಆಚಾರ್ಯರ ಕಾಲನಿರ್ಣಾಯಕರ ವಿವಿಧಾಭಿಪ್ರಾಯಗಳು

(ಚರಿತ್ರೆ. ಪು. ೨೩)

(೧) ಶಂಕರವಿಜಯಗಳು

(1) ಮಾಧವೀಯ (೨–೭೧)ದಲ್ಲಿ ಜನನದ ವರ್ಷವನ್ನು ಕೊಟ್ಟಿಲ್ಲವೆಂದು ಚರಿತ್ರೆಯಲ್ಲಿ (ಪು. ೨೨). ಆಗಲೆ ಹೇಳಿರುತ್ತೇವೆ. ಇದೇ ಶ್ಲೋಕವು ನಮ್ಮಲ್ಲರುವ ವ್ಯಾಸಾಚಲೀಯದಲ್ಲಿಯೂ ಇದೆ. ಇಲ್ಲಿ ಹೇಳಿರುವ ಗ್ರಹಗಳ ಸಂಪತ್ತಿಯು ಕ್ರಿ. ಶ. 805ಕ್ಕೆ ಆಗಿತ್ತೆಂದು ಕೇರಳ (ಕೊಚ್ಚಿ) ರಾಜ್ಯದ ಆಸ್ಥಾನವಿದ್ವಾನ್ ಜ್ಯೋತಿಷಶಿರೋಮಣಿ ವಿ. ಪಿಚ್ಚು ಅಯ್ಯರ್, ದಿವಾನ್‌ಬಹದ್ದೂರ್ ಸ್ವಾಮಿ ಕಣ್ಣು ಪಿಳ್ಳೈಯವರೂ ಅನುಮೋದಿಸಿರುವದಾಗಿಯೂ ತಿಳಿಯಬಂದಿದೆ. (ಸೋ. ಶಂ. ಪು. ೨೬, ಶ್ರೀ.ಶಂ.ಅನು. ೨,ಪು.೭). ಇದರಂತೆ ರಾಶಿಕುಂಡಲಿಯು ಪಕ್ಕದಲ್ಲಿ



ಕೊಟ್ಟಿರುವಂತೆ ಆಗುವದಂತೆ.[2] ಸೋ.ಶ್ರೀ. ಶಂ.) ಇದಕ್ಕನುಗುಣವಾಗಿ 'ಅನುಭೂತ ಜಾತಕತರಂಗಿಣಿ'ಯಲ್ಲಿ ಕಲಿ ೪೯೦೭, ಶಾಲಿವಾಹನಶಕ ೭೨೮ ಕ್ರಿ.ಶ. 805ನೆಯ ಈಶ್ವರ ಸಂವತ್ಸರದ ವೈಶಾಖ ಶುದ್ಧ ಪಂಚಮಿ ಸೋಮವಾರ, ಕರ್ಕಾಟಕ ಲಗ್ನ ಅಭಿಜಿನ್ಮುಹೂರ್ತ, ಆರ್ದ್ರಾ ೧ನೇ ಚರಣ ಕರ್ಕಾಟಕ ತೃತೀಯದ್ರೇಕ್ಕಾಣ ಶುಭಷಡ್ವರ್ಗಗಳಿರುವಂದು ಜನನ ಎಂದಿವೆಯಂತೆ; ಆದರೆ ಇದು ಈಶ್ವರಸಂವತ್ಸರಕ್ಕೆ ಹೊಂದುವಬದಲು ಪಾರ್ಥಿವವತ್ಸರಕ್ಕೆ ಹೊಂದುತ್ತದೆ ಎಂದು ಶ್ರೀ. ಶಂ. ಪು. ೩ರಲ್ಲಿ ಬರೆದಿದೆ. ಶ್ರೀರಾಜೇಂದ್ರನಾಥಘೋಷ್ ಎಂಬವರು "ಆಚಾರ್ಯ ಶಂಕರ ಮತ್ತು ರಾಮಾನುಜ" (ಪು.೮೦೨-೮೦೭) ಎಂಬ ಗ್ರಂಥದಲ್ಲಿ ೭೦೪ನೆ ಶಕ ವೈಶಾಖ ಶುಕ್ಲ ತೃತೀಯದಲ್ಲಿ ಜನ್ಮ ಎಂದೂ ಆಚಾರ್ಯರು ೩೪ವರ್ಷ ಬಾಳಿದರೆಂದೂ ಬರೆದಿದೆಯಂತೆ! (ಬಲ.ಶಂ.ಪು. ೩೯) ಈ ಯೋಗವು ಕಲ್ಯಾದಿ ೭೦೫ ವೈಶಾಖ ಶುದ್ಧ ೫ ಮತ್ತು ಕಲ್ಯಾದಿ ೨೮೧೫ವರ್ಷದ ಕರ್ಕಲಗ್ನದಲ್ಲಿ ಬರುವದೆಂದು ಕೆಲವರು ಹೇಳುತ್ತಾರೆ. (ಕೂ.ಶಂ.ಉಪ.ಪು.೮). ಇಲ್ಲಿಗೆ ಮಾಧವನು ಕೊಟ್ಟ ಜನ್ಮಕಾಲವಿಷಯಕ್ಕೆ ಜ್ಯೋತಿಷ್ಕರ ತರ್ಕದ ಮತ ಭೇದಗಳನ್ನು ತಿಳಿಸಿದ್ದಾಯಿತು. ಚರಿತ್ರೆಯಲ್ಲಿ (ಪು. ೧೯ರಲ್ಲಿ) ಉದಾಹರಿಸಿರುವ ವ್ಯಾಸಾಚಲೀಯದಿಂದಲೇ ಮಾಧವನು ತನ್ನ ಶ್ಲೋಕವನ್ನು ತೆಗೆದು ಕೊಂಡದ್ದೆಂದು ಕಲ್ಪಿಸುವವರ ಮತವು ಸಿದ್ಧವಾದರಂತೂ, ಕಲಿ ೩೫೪೩ನೆಯ ನಂದನಸಂವತ್ಸರದ ಉತ್ತರಾಯಣ, ವೈಶಾಖ ಶುಕ್ಲ ಪಂಚಮಿ ಭಾನುವಾರ ಪುನರ್ವಸುನಕ್ಷತ್ರದಲ್ಲಿ ಜನನವೆಂದಾಗುತ್ತದೆ. ಆಗ ರಾಶಿಕುಂಡಲಿಯು ಯಾವ ರೂಪವನ್ನು ತಳೆಯುವದೊ!

(2) ಚಿತ್ಸುಖಾಚಾರ್ಯರ ಬೃಹಚ್ಛಂಕರವಿಜಯದಲ್ಲಿ

ತತಃ ಸಾ ದಶಮೇ ಮಾಸೇ ಸಂಪೂರ್ಣಶುಭಲಕ್ಷಣೇ |
ಷಡ್ವಿಂಶೇ ಶತಕೇ ಶ್ರೀಮದ್ಯುಧಿಷ್ಠಿರಶಕಸ್ಯ ವೈ ||
ಏಕತ್ರಿಂಶೇಽಥ ವರ್ಷೇ ತು ಹಾಯನೇ ನನ್ದನೇ ಶುಭೇ |
ಮೇಷರಾಶಿಂ ಗತೇ ಸೂರ್ಯೇ ವೈಶಾಖೇ ಮಾಸಿ ಶೋಭನೇ ||

1. ಆದರೆ ಈ ಕುಂಡಲಿಯಲ್ಲಿ ರಾಹು ಕೇತುಗಳ ಸ್ಥಾನವನ್ನು ನಿರ್ದೇಶಿಸಿರುವದಿಲ್ಲವಾದ್ದರಿಂದ ಇದು ಸ್ವಲ್ಪಮಟ್ಟಿಗೆ ಅಪೂರ್ಣವೆಂದೇ ಹೇಳಬೇಕಾಗಿದೆ.

ಶುಕ್ಲಪಕ್ಷೇ ಚ ಪಞ್ಚಮ್ಯಾಂ ತಿಥ್ಯಾಂ ಭಾಸ್ಕರವಾಸರೇ |
ಪುನರ್ವಸುಗತೇ ಚನ್ದ್ರೇ ಲಗ್ನೇ ಕರ್ಕಾಟಕಾಹ್ವಯೇ ||
ಮಧ್ಯಾಹ್ನೇ ಚಾಭಿಜಿನ್ನಾಮ ಮುಹೂರ್ತೇ ಶುಭವೀಕ್ಷಿತೇ |
ಸ್ವೋಚ್ಚಸ್ಥೇ ಕೇನ್ದ್ರಸಂಸ್ಥೇ ಚ ಗುರೌ ಮನ್ದೇ ಕುಜೇ ರವೌ ||
ನಿಜತುಙ್ಗಗತೇ ಶುಕ್ರೇ ರವಿಣಾ ಸಂಗತೇ ಬುಧೇ |
ಪ್ರಾಸೂತ ತನಯಂ ಸಾಧ್ವೀ ಗಿರಿಜೇವ ಷಡಾನನಮ್ ||



ಇದರ ಪ್ರಕಾರ ಪಕ್ಕದಲ್ಲಿರುವಂತೆ ರಾಶಿ ಕುಂಡಲಿಯಾಗುವದು[1] ; ಚಿ ತ್ಸು ಖ ರು ಆಚಾರ್ಯರ ಸಮಕಾಲಿಕರೆಂದು ಆತ ಬೋಧರು ' ಸುಷಮಾ 'ಗ್ರಂಥದಲ್ಲಿ (ಗು. ರ. ಶ್ಲೋ. ೧೮) ಬರೆದಿರುತ್ತಾರೆ. ಆತ್ಮಬೋಧರು ಕಾಂಚೀಸಂಪ್ರದಾಯದವರೆಂಬ ಕಾರಣದಿಂದ ಇದನ್ನು ಕಡೆಗಣಿಸುವದಕ್ಕೆ ಬರುವದಿಲ್ಲ. ಏಕೆಂದರೆ ಮಾಧವನೂ "ಪದ್ಮಪಾದಸತೀರ್ಥ್ಯರಾದ ಚಿತ್ಸುಖನೇ ಮೊದಲಾದವರು ಗುಟ್ಟಿನಲ್ಲಿ ಹೀಗೆಂದು ಹೇಳಿದರು" (ಮಾ. ಶಂ. ೧೩-೫೫) ಎಂದಿರುತ್ತಾನೆ. ಈ ಪರಿಸ್ಥಿತಿಯಲ್ಲಿ ಚಿತ್ಸುಖಾಚಾರ್ಯರ ಬೃಹಚ್ಛಂಕರವಿಜಯವು ತನ್ನ ಕಾಲದಲ್ಲಿದ್ದರೂ ಅದು ಕಾಂಚೀಸಂಪ್ರದಾಯದ್ದೆಂಬ್ಮ ಕಾರಣದಿಂದ ಮಾಧವನು ಅದನ್ನು ಕೈಬಿಟ್ಟನೆಂದೋ ಅಥವಾ ಬೃಹಚ್ಛಂಕರ ವಿಜಯವೆಂಬುದೇ ಮಾಧವನಿಂದೀಚೆಗೆ ಕಲ್ಪಿತವಾದ ಕೃತ್ರಿಮಗ್ರಂಥವೆಂದೋ ಹೇಳಬೇಕಾಗಿರುತ್ತದೆ. ಇದರ ನಿಜವನ್ನು ಗೊತ್ತುಪಡಿಸುವದು ತತ್ತ್ವಶೋಧಕರಿಗೆ ಸೇರಿದ್ದು.

(3) "ಶಂಕರಮಂದಾರಸೌರಭ"ದಲ್ಲಿ ಆಚಾರ್ಯರು ವಿಭವಸಂವತ್ಸರದ ವೈಶಾಖ ಶುದ್ಧ ದಶಮಿಯ ದಿನ ಅವತರಿಸಿದರೆಂದು ಬರೆದಿರುವದನ್ನು ಚರಿತ್ರದಲ್ಲಿ (ಪುಟ ೨೨) ಹೇಳಿರುತ್ತೇವೆ. ವಾಕ್ಪತಿ ಭಟ್ಟೋದ್ಭಟ ವಿರಚಿತ 'ಶಂಕರೇಂದ್ರವಿಲಾಸ' ಎಂಬ ಗ್ರಂಥದಲ್ಲಿಯೂ

ಹಾಯನೇಽಥ ವಿಭವೇ ವೃಷಮಾಸೇ ಶುಕ್ಲಪಕ್ಷ ದಶಮೀದಿನಮಧ್ಯೇ |
ಶೇವಧಿದ್ವಿಪದಿಶಾನಲವರ್ಷೇ ತಿಷ್ಯ ಏನಮುದಸೋಽಷ್ಟ ವಿಶಿಷ್ಟಾ ||

ವಿಶಿಷ್ಟಾದೇವಿಯು ಕಲಿ ೩೪೮೯ನೆಯ ವಿಭವಸಂವತ್ಸರದ (ಕ್ರಿ. 7೦8) ವೃಷಭಮಾಸದಲ್ಲಿ ಶುಕ್ಲಪಕ್ಷ ದಶಮಿಯಲ್ಲಿ ಈತನನ್ನು ಹಡೆದಳು- ಎಂದಿದೆ

1. ಈ ಕುಂಡಲಿಯಲ್ಲಿಯೂ ರಾಹುಕೇತುಗಳ ಸ್ಥಾನವನ್ನು ತೋರಿಸಿಲ್ಲ.

ಯಂತೆ. (ಗು. ರ. ಸುಷಹಮಾ. ೬೦) ಇದು ಅಭಿನವಶಂಕರಾಚಾರ್ಯರ ವಿಷಯವೆಂದು ಕಾಂಚೀಸಂಪ್ರದಾಯದವರ ಮತ (ಚರಿತ್ರೆ. ಪುಟ ೪೦–೪೧).

(4) ಕೇರಳೀಯಶಂಕರವಿಜಯ

ಪ್ರವೃದ್ಧೇ ತತ್ರ ಚಾಸೂತ ನನ್ದನಂ ನನ್ದನೇ ಶುಭೇ ।
ವೈಶಾಖೇ ಮಾಸಿ ಪಞ್ಚಮ್ಯಾಂ ಶುಕ್ಲಪಕ್ಷೇ ಪುನರ್ವಸೌ ॥೨–೫೩.

(5) ಡಾ|| ಕೆ. ಬಿ. ಪಾಠಕ್ ಎಂಬವರಿಗೆ ಬೆಳಗಾವಿಯಲ್ಲಿ ಗೋವಿಂದ ಭಟ್ಟ ಎರ್ಲಿಕರ್ ಎಂಬವರಲ್ಲಿ ಮೂರು ಹಾಳೆಗಳ ಒಂದು ಕೈಬರಹದ ಪುಸ್ತಕವು ಸಿಕ್ಕಿತಂತೆ. ಅದರಲ್ಲಿ :

ದುಷ್ಟಾಚಾರವಿನಾಶಾಯೆ ಪ್ರಾದುರ್ಭೂತೋ ಮಹೀತಲೇ ।
ಸ ಏವ ಶಙ್ಕರಾಚಾರ್ಯಃ ಸಾಕ್ಷಾತ್ ಕೈವಲ್ಯನಾಯಕಃ ॥
ಅಷ್ಟವರ್ಷೇ ಚತುರ್ವೇದಾನ್(ದೀ ?) ದ್ವಾದಶೇ ಸರ್ವಶಾಸ್ತ್ರಕೃತ್ ।
ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥
ನಿಧಿನಾಗೇಭವಹ್ನ್ಯಬ್ದೇ ವಿಭವೇ ಶಙ್ಕರೋದಯಃ ।
ಗುಹಾಪ್ರನೇಶಃ ಕಲ್ಯಬ್ದೇ ಚನ್ದ್ರನೇತ್ರಾಙ್ಕವಹ್ನಿಗೇ ॥
ವೈಶಾಖೇ ಪೂರ್ಣಿಮಾಯಾಂ ತು ಶಙ್ಕರಃ ಶಿವತಾಮಗಾತ್ ।

ಇದರಲ್ಲಿ ಕ್ರಿ. ಶ. 788ರಿಂದ 820 ರವರೆಗೆ ಆಚಾರ್ಯರ ಕಾಲವೆಂದಿದೆ. ಈ ಗ್ರಂಥವನ್ನು ಅಥವಾ ಅದರಲ್ಲಿರುವ ಕಾಲವನ್ನು ಈಗಿನವರು ಅನೇಕರು ಒಪ್ಪುತ್ತಾರೆ. ಇದರ ಪ್ರಾರಂಭದಲ್ಲಿ 'ಅದೌ ಶಿವಃ' ಎಂದು ಪ್ರಾರಂಭಿಸಿ ಶಂಕರಾಚಾರ್ಯರವರೆಗೆ ಗುರುಪರಂಪರೆಯನ್ನು ಹೇಳಿದೆ. ಶಂಕರಾಚಾರ್ಯರು ತುಂಗಭದ್ರಾತೀರದಲ್ಲಿ ಪೃಥಿವೀಧರನನ್ನು ಪೀಠಾಧಿಪರನ್ನಾಗಿ ಮಾಡಿ *ಭಾರತೀ" ಎಂಬ ಬಿರುದನ್ನು ಕೊಟ್ಟು

ಆಗತ್ಯ ಸ್ವೇಚ್ಛಯಾ ಕಾಞ್ಚೀಂ ಪರ್ಯಟನ್ ಪೃಥಿವೀತಲೇ ।
ತತ್ರ ಸಂಸ್ಥಾಪ್ಯ ಕಾಮಾಕ್ಷೀಂ ಜಗಾಮ ಪರಮಂ ಪದಮ್ ॥[1]

---

1. ನಿಧಿನಾಗೇಭವಹ್ನ್ಯಬ್ದೇ ವಿಭವೇ ಮಾಸಿ ಮಾಧವೇ । ಶುಕ್ಲೇ ತಿಥೌ ಪಶಮ್ಯಾಂ ತು ಶಙ್ಕರಾರ್ಯೋದಯಃ ಸ್ಮೃತಃ ॥ ಎಂಬ ಯಜ್ಞೇಶ್ವರಶಾಸ್ತ್ರಿವಿರಚಿತ, 'ಆರ್ಯವಿದ್ಯಾ ಸುಧಾಕರ'ದ ವಾಕ್ಯಕ್ಕೆ ಇದೇ ಮೂಲವಾಗಿರಬೇಕೆಂದು ತೋರುತ್ತದೆ. ಕಾಂಚೀಗುರು ಪರಂಪರೆಯ ಕೊನೆಗೆ (೯ನೆಯ ಪರಿಶಿಷ್ಟ) ಬರೆದಿರುವ 'ಭಾರತೀಗುರುಪರಂಪರಾಸ್ತೋತ್ರ, ವನ್ನು ನೋಡಿ.

ಎಂದಿದೆಯಂತೆ. ಶಂಕರಾಚಾರ್ಯರು ಕೂಷ್ಮಾಂಡಜಾತರೆಂದು ಬರೆದಿದೆಯಂತೆ. (ಸೋ. ಶಂ. ಪು. ೨೧೧) ಇದರಿಂದ ಇದು ಕಾಂಚೀಸಂಪ್ರದಾಯದವರು ಯಾರೋ ಬರೆದದ್ದೆಂದೂ ಮುಂದೆ ಹೇಳುವ 'ಕೂಷ್ಮಾಂಡಶಂಕರವಿಜಯ'ದ ಆಧಾರದಿಂದಲೇ ರಚಿತವಾಗಿರಬೇಕೆಂದೂ ಸಿದ್ಧವಾಗುತ್ತದೆ. ಇದೂ ಅಲ್ಲದೆ

ಶ್ರೀಯಾದವಪ್ರಕಾಶಸ್ಯ ಶಿಷ್ಯೋ ರಾಮಾನುಜೋ ಯತಿಃ ।
ತೇನ ವೈಷ್ಣವಸಿದ್ಧಾನ್ತಃ ಸ್ಥಾಪಿತೋ ಗುರುಸಮ್ಮತಃ ॥ ೯ ॥
ಅಚ್ಯುತಪ್ರೇಕ್ಷಣಾವಾಸ್ತು ಶಿಷ್ಯೋ ಮಧ್ವಾಭಿಧೋ ಯತಿಃ ।
ತೇನೈವ ಭೇದಸಿದ್ಧಾನ್ತಃ ಸ್ಥಾಪಿತೋ ಗುರ್ವ(?)ಸಂಮತೇ ॥ ೧೦ ॥

ಎಂದಿದೆಯಂತೆ ! (ಸೋ. ಶಂ. ಪು. ೨೧೪). ಆನಂದಗಿರಿಯು, ಆಚಾರ್ಯರು ಶಿಷ್ಯರ ಮೂಲಕ ಷಣ್ಮತಸ್ಥಾಪನೆಮಾಡಿದ್ದನ್ನು ವರ್ಣಿಸಿರುವ ಬಗೆಯನ್ನು (ಚರಿತ್ರೆ. ಪುಟ ೨೯೩–೨೯೫) ಹೇಳಿರುತ್ತೇವೆ. ಇಲ್ಲಿಯೂ ಅದಕ್ಕನುಸಾರವಾಗಿಯೇ ಬರೆದಿರುವದರಿಂದ ಈ ಗ್ರಂಥವು ಮಧ್ವಾಚಾರ್ಯರಕಾಲದಿಂದ ಈಚೆಗೆ ಯಾರೋ ಕಾಂಚೀಸಂಪ್ರದಾಯದವರು ಬರೆದಿದ್ದಿರಬೇಕೆಂಬುದು ಸ್ಪಷ್ಟ. (ಪಾಠಕರ ಲೇಖನವು (The Indian Antiquary 1882 pp 173–175 ಎಂಬ ಪ್ರತಿಕೆಯಲ್ಲಿದೆಯಂತೆ) (ಬಲ. ಪು. ೩೫).

(6) ಕೇರಳೋತ್ಪತ್ತಿ

ಚೇರುಮಾನ ಪೇರುಮಲ್ಲನ ವಿಜಯಕಾಲದಲ್ಲಿ ಕಲಿಯುಗದ ೩೯೦೧ನೆಯ ಆರ್ದ್ರಾನಕ್ಷತ್ರದಲ್ಲಿ ಕೆಸೆಲಿಗ್ರಾಮದಲ್ಲಿ ಶಂಕರರ ಅವತಾರವಾಯಿತು. (ಕೂ.ಶಂ. ಪು. ೨) ಪೇರುಮಲ್ಲನು ಆನೆಗೊಂದಿ ಕೃಷ್ಣರಾಜನಿಂದ ಸಿಂಹಾಸನದಲ್ಲಿ ಪ್ರತಿಷ್ಠಿತನಾಗಿದ್ದನು. ಅವನು ಮಹಮ್ಮದೀಯ ಮತವನ್ನು ಸ್ವೀಕರಿಸಿ ಮಕ್ಕಾಯಾತ್ರೆಯನ್ನು ಮಾಡಿದನು. ಅರಬ್ಬಿಸ್ಥಾನದ ಜಫಾರ್ ಎಂಬಲ್ಲಿ ಅಬ್ದುಲ್ ರಹೆಮಾನ್ ಎಂಬ ಹೆಸರಿನಿಂದ ಅವನಿಗೆ ಸಮಾಧಿಯಾಯಿತು. ಎ. ಹೆಚ್. ೨೧೬ಕ್ಕೆ ಬಂದು ೨೧೭ರಲ್ಲಿ ಮೃತನಾದನು ; ಕ್ರಿ. ಶ. 827–28, 831–32ಕ್ಕೆ ಈ ವರ್ಷಗಳು ಸಮವಾಗಿವೆ ಎಂದು ಲೋಗನ್‌ನು Indian Antiquary, February 4) ಬರೆದಿದಾನಂತೆ. (ಶಂ. ಚೂ. ಪೂರ್ವಪೀಠಿಕಾ ಪುಟ ೯–೧೦) ಆದರೆ ಇಲ್ಲಿಯೂ ಮತಭೇದವಿದೆ.

(೨) ಅನ್ಯಮತಸ್ಥರ ಗ್ರಂಥಗಳು

(1) ಜಿನವಿಜಯ

ಋಷಿಬ್ರಾಹ್ಮಣಸ್ತಥಾ ಭೂಮಿರ್ಮರ್ತಾರ್ಯಕ್ಷೋ ವಾಮುವೇಳನಾತ್ ।
ಏಕತ್ವೇನ ಲಭೇದಜಿಷ್ಣೋ ರಕ್ತಾಕ್ಷ[1]ಸ್ತದ್ಧಿ ವತ್ಸರಃ ॥
ವಿಶ್ವಜಿಚ್ಚ ಪಿತಾ ಯಸ್ಯ ವಿಖ್ಯಾತಶ್ಚ ಚಿದಮ್ಬರೇ ।
ತಸ್ಯ ಭಾರ್ಯಾರ್ಯಾವಿಸ್ಸಿಕಾದೇವೀ ಪ್ರಸೂತಾ(?)ಲೋಕಶಙ್ಕರಮ್ ॥
(ಕೂ. ಶಂ. ಪು. ೮)

ಇಲ್ಲಿ ಯುಧಿಷ್ಠಿರ ಶಕೆ ೨೧೫೭ನೆಯ ರಕ್ತಾಕ್ಷಿಸಂವತ್ಸರದ "ಮಾಘ ಕೃಷ್ಣ ೧೪ ಸೋಮವಾರ ನಡುರಾತ್ರಿಯಲ್ಲಿ"(?) ವಿಶ್ವಜಿತ್ ಆಂಬಿಕೆ ಎಂಬ ಮಾತಾಪಿತೃಗಳಿಂದ ಚಿದಂಬರದಲ್ಲಿ ಆಚಾರ್ಯರು ಜನಿಸಿದರು ಎಂದಿದೆ. " " ಚಿಹ್ನೆಯೊಳಗಿರುವ ಭಾಗಕ್ಕೆ ಪ್ರಮಾಣವೇನೋ ತಿಳಿಯಲಿಲ್ಲ. ಇದು ಕ್ರಿ. ಪೂ. 477ಕ್ಕೆ ಸರಿಯಾಗುವದಂತೆ. (ಶ್ರೀ. ಶಂ. ಆಖು. ೨–೩೩).

[ಶ್ರೀ. ಶಂ. ಆನುಬಂಧ ೨ ಪುಟ ೩೧ರಲ್ಲಿ ಹೀಗಿದೆ :

ಋಷಿರ್ವಾರಸ್ತಥಾ ಪೂರ್ಣಂ ಮರ್ತ್ಯಾಕ್ಷೌ ವಾಮುವೇಲನಾತ್।
ಏಕೀಕೃತ್ಯ ಲಭೇತಾಜ್ಯಃ ಕ್ರೋಧೀ ಸ್ಯಾತ್ ತತ್ರ ವತ್ಸರಃ ॥
ಭಟ್ಟಾಚಾರ್ಯಕುಮಾರಸ್ಯ ಕರ್ಮಕಾಣ್ಡೈಕವಾದಿನಃ ।
ಜ್ಞೇಯಃ ಪ್ರಾದುರ್ಭವಸ್ತಸ್ಮಿನ್ ವರ್ಷೇ ಯೌಧಿಷ್ಠಿರೇ ಶಕೇ ॥

ಯುಧಿಷ್ಠಿರ ೨೦೭೭ನೆಯ ಕ್ರೋಧಿಸಂವತ್ಸರದಲ್ಲಿ ಕುಮಾರಿಲಭಟ್ಟರು ಹುಟ್ಟಿದರು.]

ಪಶ್ಚಾತ್ಪಞ್ಚದಶೇ ವರ್ಷೇ ಶಙ್ಕರಸ್ಯ ಗತೇ ಸತಿ ।
ಭಟ್ಟಾಚಾರ್ಯಕುಮಾರಸ್ಯ ದರ್ಶನಂ ಕೃತವಾನ್ ಶಿವಃ ॥

ಶಂಕರರಿಗೆ ೧೫ ವರ್ಷವಾದಾಗ ಕುಮಾರಿಲಭಟ್ಟರನ್ನು ಕಂಡರು ಎಂದಿದೆ. ಇದರಂತೆ ಆಚಾರ್ಯರ ಜನ್ಮಕಾಲವು ಕ್ರಿ. ಪೂ. 509 ಆಗುವದಂತೆ. (ಶ್ರೀ. ಶಂ. ಆನು. ೨ ಪು. 32)

ಸುಧನ್ವನಾಮಕೋ ರಾಜಾ ಸೋಽಪಿ ದುಷ್ಟಸ್ತಥಾ ಭುವಿ ।
ಜಿನಾನಾಂ ಯೇನ ಸಾಧೂನಾಂ ಕೃತಂ ಕದನಮದ್ಭುತಮ್ ॥

ಇಲ್ಲಿ ಸುಧನ್ವನೂ ಜಿನರನ್ನು ಹಿಂಸಿಸಿದನು ಎಂದಿದೆ. ಈ ಗ್ರಂಥವು ಮಾಧವೀಯಕ್ಕೆ ಪೂರ್ವದ್ದೊ, ಈಚಿನದೊ ಗೊತ್ತುಪಡಿಸುವದು ಒಳ್ಳೆಯದು.

1. 'ತಾಮ್ರಾಕ್ಷಃ' ಪಾ॥ ಶ್ರೀ. ಶಂ. ಆನು. ೨ ಪು. ೩೩

(2) ಶಂಕರಪದ್ಧತಿ

ಮಹಾನುಭಾವ ಸಂಪ್ರದಾಯದ 'ದರ್ಶನಪ್ರಕಾಶ'ದಲ್ಲಿ (ಕ್ರಿ. ಶ. 1658) ಈ ಹೆಸರಿನ ಗ್ರಂಥದಿಂದ ಉದಾಹರಿಸಿರುವ ಶ್ಲೋಕವಿದು :

ಯುಗ್ಮಪಯೋಧಿರಸಾವಿತಶಾಕೇ ರೌದ್ರಕವತ್ಸರ ಊರ್ಜಕಮಾಸೇ ।
ವಾಸರ ಈಜ್ಯ ಉತಾಚಲ ಮಾನೇ ಕೃಷ್ಣತಿಥೌ ದಿವಸೇ ಶುಭಯೋಗೇ ।
ಶಙ್ಕರ ಲೋಕಮಗಾನ್ನಿಜದೇಹಂ ಹೇಮಗಿರೌ ಪ್ರವಿಹಾಯ ಹಠೇನ ॥

ಇಲ್ಲಿ ಶಂಕರರ ಮೃತ್ಯುಕಾಲ ೬೪೨ ಶಕೆ (ಕ್ರಿ.ಶ. 720) ಎಂದಿರುವದರಿಂದ ಜನ್ಮವು ೭೧೦ ಶಕೆ (ಕ್ರಿ. ಶ. 688) ಎಂದಾಗುತ್ತದೆ. ಆದರೆ ಇಲ್ಲಿ ಹಠಯೋಗದಿಂದ ಹೇಮಗಿರಿಯಲ್ಲಿ ದೇಹವನ್ನು ಬಿಟ್ಟರೆಂದು ಹೇಳಿರುವದರಿಂದ ಇವರು ಯಾವ ಶಂಕರರೊ ! ಈ ಪ್ರಮಾಣವನ್ನು **ಬಲದೇವ ಉಪಾಧ್ಯಾಯರು** (ಪು. 39) ಉದಾಹರಿಸಿರುತ್ತಾರೆ. ಇದಕ್ಕೆ ಎಷ್ಟು ಬೆಲೆಕೊಡಬಹುದೆಂಬುದನ್ನು ವಾಚಕರೇ ನಿರ್ಣಯಿಸಬೇಕು.

(೩) ಆಧುನಿಕವಿದ್ವಾಂಸರ ಕಲ್ಪನೆಗಳು

ಈಗ ಆಧುನಿಕ ವಿದ್ವಾಂಸರು ಕೆಲವರ ತರ್ಕಗಳನ್ನು ಇಲ್ಲಿ ಕೊಡುವೆವು. ಡಾಕ್ಟರ್ ಪಾಠಕ್‌ರ ತರ್ಕಕ್ಕಿಂತ ಇವಕ್ಕೆ ಹೆಚ್ಚಿಗೆ ಬೆಲೆಯಿದೆ ಎಂದೇನೂ ನಮ್ಮ ಅಭಿಪ್ರಾಯವಲ್ಲ. ಆದರೂ ವಾಚಕರಿಗೆ ತಿಳಿದಿರಲೆಂದು ಇಲ್ಲಿ ಇವನ್ನು ಸಂಗ್ರಹಿಸಿರುತ್ತೇವೆ.

(1) ಕ್ರಿ. ಪೂ. 509ರಲ್ಲಿ **ಜನನ**ವೆಂಬವರು :—

(ಅ) ಮದರಾಸ್ ಹೈಕೋರ್ಟ್ ವಕೀಲರಾಗಿದ್ದ **ಟಿ. ಎಸ್. ನಾರಾಯಣ ಶಾಸ್ತ್ರಿಗಳು** : ಬೃಹತ್ಶಂಕರವಿಜಯವೇ ಮೊದಲಾದವುಗಳ ಆಧಾರದಿಂದ. The Age of Shankara (ಶ್ರೀ. ಶಂ. ಪು. 9 ; ಚರಿತ್ರೆಯ ೨೦ನೆಯ ಪುಟವನ್ನು ನೋಡಿ.)

(ಆ) **ಎನ್. ಕೆ. ವೆಂಕಟೇಶ ಪಂತುಲು** ಇವರ ಅಭಿಪ್ರಾಯ : ಗೋವರ್ಧನ, ದ್ವಾರಕಾ, ಕಾಂಚೀ— ಈ ಮಠಗಳ ಗುರುಪರಂಪರೆಯವರ ಕಾಲವನ್ನು ವಿಮರ್ಶಿಸಿದರೆ ಇದೇ ಸರಿಯೆಂದು ಗೊತ್ತಾಗುತ್ತದೆ. ಭಗವಾನ್ ಲಾಲ್ ಇಂದ್ರಜಿಯವರು ಒಬ್ಬ ಬೌದ್ಧಭಿಕ್ಷುವಿನಿಂದ ತಂದ 'Inscription From Nepal' (ನೇಪಾಳ ಶಾಸನಗಳು) ಎಂಬ ಕೈಬರಹದ ಪುಸ್ತಕವನ್ನು ನೋಡಿದರೆ ನೇಪಾಲಕ್ಕೆ ವೃಷಭದೇವವರ್ಮನ ಕಾಲಕ್ಕೆ ಆಚಾರ್ಯರು ಹೋಗಿದ್ದರೆಂದೂ ಆ ರಾಜನು ಆದ್ವೈತವನ್ನವಲಂಬಿಸಿ ತನ್ನ ಮಗನಿಗೆ ಶಂಕರದೇವ ವರ್ಮ ಎಂಬ ಹೆಸರನ್ನಿಟ್ಟನೆಂದೂ ತಿಳಿಯಬರುತ್ತದೆ. (NKVS pp. 6–6) ಚರಿತ್ರೆಯ ೨೧ನೆಯ ಪುಟವನ್ನು ನೋಡಿ.

(ಇ) ಕೆ. ಎಸ್ ರಾಮುಸ್ವಾಮಿಶಾಸ್ತ್ರಿಗಳು. (ಶ್ರೀ. ಶಂ. ಅನು. ೨ ಪು. ೧೦) ಇವರೂ ವೃಷಸೇನ ಕಥೆಯ ಆಧಾರದಿಂದಲೇ ಕ್ರಿ. ಪೂ. 509ನ್ನು ಒಪ್ಪಿರುತ್ತಾರೆ.

(೨) ಕ್ರಿಸ್ತಶಕದ ಆದಿಭಾಗ. ಕಾಂಚಿಯ ಮತ್ತು ದ್ವಾರಕೆಯ ಗುರು ಪರಂಪರೆಯ ಆಧಾರದ ಮೇಲೆ ಈ ಕಾಲವಾಗುತ್ತದೆ. ಈಗ ವಿದ್ವಾಂಸರು ನಿಶ್ಚಯಿಸಿರುವ ಕ್ರಿ. ಶ. 788 ಅಭಿನವ ಶಂಕರರದ್ದು. ಹಾಲ (ಮುಗಧ)ರಾಜನ ಕಾಲಕ್ಕೆ ಆಚಾರ್ಯರಿದ್ದರೆಂದು ಗುರುರತ್ನಮಾಲಿಕೆಯಿಂದ ತಿಳಿಯಬರುತ್ತದೆ. (ಶ್ಲೋ. ೨೧) 'ಮಾಣಿಕ್ಯ ವಾಚಗರ್' ಎಂಬಾತನು ಅದ್ವೈತವೇದಾಂತದಿಂದ ಪ್ರಭಾವಿತನಾಗಿರುವಂತೆ ಕಂಡುಬಂದಿದೆ. (NVSSK Pp. 17–22) (ಗುರು ಪರಂಪರೆಯ ವಿಷಯಕ್ಕೆ ೯ನೆಯ ಪರಿಶಿಷ್ಟವನ್ನು ನೋಡಿ ; ಗುರುರತ್ನ ಮಾಲಿಕೆಯ ಪ್ರಾಮಾಣ್ಯವನ್ನೂ ಅಲ್ಲಿಯೇ ಚರ್ಚಿಸಿದೆ.)

(3) ಕ್ರಿ. ಶ. 4ನೆಯ ಶತಮಾನ. ಆರ್. ಜಿ. ಭಂಡಾರಕರ್ (KRTTW p. ೯)

(4) ಕ್ರಿ. ಶ. 6ನೆಯ ಶತಮಾನ. ಕಾಶಿನಾಥ ತ್ರ್ಯಂಬಕ ತೆಲಂಗ್ (KRTTW p. 6) ಚರಿತ್ರೆಯ ೨೭ನೆಯ ಪುಟವನ್ನು ನೋಡಿ. ಅವರು ಉದಾಹರಿಸಿರುವ ಸ್ರುಘ್ನ, ಮಥುರಾ, ಪಾಟಲೀಪುತ್ರಗಳ ಉದಾಹರಣೆಗಳು ಪಾತಂಜಲಮಹಾಭಾಷ್ಯ (ನಿರ್ಣಯಸಾಗರಮುದ್ರಣ, Vol. II Pages 3, 95) ದಲ್ಲಿವೆ.

(5) ಕ್ರಿ. ಶ. 7ನೆಯ ಶತಮಾನ. ಡಾಕ್ಟರ್ ಫ್ಲೀಟ್ (The Indian Antiquary Vol. IV p. 350) ತಾರಾನಾಥನೆಂಬ ಬೌದ್ಧನ ಗ್ರಂಥದ ಆಧಾರದಿಂದ. ಡಾಕ್ಟರ್ ಬರ್ನೆಲ್(Dr. Burnell) ಎಂಬವರು "ದಕ್ಷಿಣಹಿಂದೂಸ್ಥಾನದ ಪ್ರಾಚೀನಲೇಖನಗಳ ಪ್ರಧಾನಾಂಶಗಳು" (Elements of South Indian Paleology) ಎಂಬ ಗ್ರಂಥದಲ್ಲಿ (p. 37) ಇದೇ ಅಭಿಪ್ರಾಯವನ್ನು ಪ್ರಕಟಿಸಿರುತ್ತಾರೆ. (ಶ್ರೀ. ಶಂ. ಅನು. ೨. ಪುಟ. ೧೧)

(6) 8ನೆಯ ಶತಮಾನದ ಅಂತ್ಯಭಾಗ. ಪ್ರೊಫೆಸರ್ ವಿಲ್ಸನ್ (Professor Wilson) ಎಂಬಾತನು ರಾಜಾ ರಾಮುಮೋಹನರಾಯನ ಮತದಂತೆ Wilson's Essays Vol. I p. 194, ಶ್ರೀ. ಶಂ. ಅನು. ೨, ಪುಟ ೧೨). ಕೃಷ್ಣಸ್ವಾಮಿ ಆಯ್ಯರ್‌ರವರು (C. N. K. S. pp. 17–18) ಶೃಂಗೇರಿ ಗುರುಪರಂಪರೆಯ ಆಧಾರದಿಂದಲೂ ಮಾಧವೀಯಶಂಕರ ವಿಜಯದಲ್ಲಿ ಬೌದ್ಧರನ್ನು ಕಾಶ್ಮೀರದಲ್ಲಿ ಹೇಳಿರುವದರ ಆಧಾರದಿಂದಲೂ

'ಸೌಂದರ್ಯಲಹರಿ'ಯಲ್ಲಿ ಸಂಬಂಧಾರ್ ಎಂಬ ತಮಿಳುಸಂತನ ಪರಾಮರ್ಶವಿರು ವದರಿಂದಲೂ ಕ್ರಿ. ಶ. 788 ಶಂಕರರ ಜನ್ಮಕಾಲವಿರಬೇಕು– ಎನ್ನುತ್ತಾನೆ. ಕೆ. ಆರ್. ವೆಂಕಟರಾಮುನ್ನರವರು (K R T T W p. 7) ಫ್ಲೀಟ್, ಲೋಗನ್, ಡಾ|| ಭಂಡಾರಕರ್, ಮ್ಯಾಕ್ಸ್‌ಮುಲರ್, ಮ್ಯಾಕ್‌ಡೊನಾಲ್ಡ್, ಭೂಲರ್ ಮತ್ತು ಬಾರ್– ಇವರ ಮತವನ್ನನುಸರಿಸಿ ಕ್ರಿ. ಶ. 788ರಿಂದ 820 ಕಾಲವೇ ಶಂಕರರದು, ಅಥವಾ ಅವರು ಕ್ರಿ. 805–837 (8) ರವರೆಗೆ ಇದ್ದರು ಎಂಬುದೇ ಉತ್ತಮಪಕ್ಷವೆಂದು ಕ್ಯಾಮ್ಬೋಡ್ಡಿಯ ಶಾಸನದಿಂದ ಗೊತ್ತಾಗುತ್ತದೆ. (ಯೇನಾಧೀತಾನಿ ಶಾಸ್ತ್ರಾಣಿ ಭಗವಚ್ಛಂಕರಾಹ್ವಯಾತ್) ರಾಜಗುರುವಾದ ಶಿವಸೋಮನು ಭಗವಚ್ಛಂಕರರಿಂದ ಶಾಸ್ತ್ರಗಳನ್ನು ಅಧ್ಯಯನಮಾಡಿದ್ದನೆಂದು ಆ ಶಾಸನದಲ್ಲಿದೆ– ಎಂದು ಬರೆದಿರುತ್ತಾರೆ. ಇದೇ ವಿಷಯದಲ್ಲಿ ಬಲದೇವ ಉಪಾಧ್ಯಾಯರು (ಬಲ. ಶಂ. ೩೬) ಈ ಶಾಸನದ ಬಗ್ಗೆ (Inscription on Cambodge) ಹೀಗೆ ಬರೆದಿದಾರೆ : ಚಂಪಾ ಅಧಿಪತಿಯಾದ ಇಂದ್ರ ವರ್ಮ (ಕ್ರಿ. ಶ. 877–880)ನ ಗುರುವಾದ ಶಿವಸೋಮನು ಕಂಭೋಜರಾಜ ನಾದ ದ್ವಿತೀಯ ಜಯವರ್ಮನ (ಕ್ರಿ. ಶ. 802–869) ಮಾತುಲನ ಪೌತ್ರನು ಎಂದಿರುತ್ತಾನೆ. ಶಾಸನದಲ್ಲಿ 'ಭಗವಚ್ಛಂಕರಾಹ್ವಯಾತ್' ಎಂದಿರುವದರಿಂದ ಇದು ಆದ್ಯಶಂಕರರ ವಿಷಯಕವೆಂದೇ ಅವರ ತರ್ಕ! ಬಲದೇವ ಉಪಾಧ್ಯಾಯರು ಕೊಟ್ಟಿರುವ ಬೇರೆಯ ಮತಭೇದಗಳು ಹೀಗಿವೆ : (ಬಲ. ಶಂ. ಪುಟ. ೨೯) ಕೋಲ್‌ಬ್ರೂಕ್ ಕ್ರಿ. ಶ. 800–900 ಟೀಲರ್ ಕ್ರಿ. ಶ. 900 ಹಾಗ್ಸನ್ ಕ್ರಿ. ಶ. 800 ವಿಲ್ಸನ್ ಕ್ರಿ. ಶ. 809–900 ಮೆಕೆನ್‌ಜೀ ಕ್ರಿ.ಶ. 500 ಮ್ಯಾಕ್ಸ್ ಮುಲ್ಲರ್, ಕೃಷ್ಣಸ್ವಾಮಿ ಮತ್ತು ಪಾಠಕ್ ಕ್ರಿ. ಶ. 578 ; ರಾಮಾವತಾರ ಶರ್ಮ : ಶಕ ೭೦೧ರಿಂದ ೭೬೫ ; ತೆಲಂಗ್ ಮತ್ತು ತಿಲಕರು: ಕ್ರಿ. ಶ. 688 ; ರಾಜೇಂದ್ರನಾಥಘೋಷ್ : ಕ್ರಿ. ಶ. 686 (ಶಕ ೭೦೮)– ಇವುಗಳ ವಿವರವನ್ನು ಇನ್ನೂ ಕೊಡುವದಕ್ಕೆ ನಮಗೆ ಮನಸ್ಸು ಬರಲಿಲ್ಲ.

ನಮಗೆ ಈಚೆಗೆ ದೊರೆತಿರುವ "ದ್ವಾರಕಾ ಶ್ರೀಶಾರದಾಪೀಠಗುರು ಪರಂಪರೆ" ಎಂಬ ಪುಸ್ತಕದಲ್ಲಿ ಈ ಕೆಳಗಿನ ವಿವರಗಳು ಇರುತ್ತವೆ :

ಯುಧಿಷ್ಠಿರಶಕೆ ೨೬೩೧ ವೈಶಾಖ ಶುಕ್ಲ ಪಂಚಮಿಯಲ್ಲಿ ಶ್ರೀಮಚ್ಛಂಕರಾವತಾರ.

೨೬೩೬ ಚೈತ್ರ ಶು. ೯ ಉಪನಯನ.

೨೬೩೮ ಕಾರ್ತಿಕ ಶುಕ್ಲೈಕಾದಶಿಯಲ್ಲಿ ಸಂನ್ಯಾಸಸ್ವೀಕಾರ.

೨೬೪೦ ಫಾಲ್ಗುನ ಶುಕ್ಲ ದ್ವಿತೀಯೆಯಲ್ಲಿ ಗೋವಿಂದಭಗವತ್ಪಾದರಿಂದ ಉಪದೇಶ, ಅಲ್ಲಿ ಜ್ಯೇಷ್ಠಾಮಾವಾಸ್ಯೆಯವರೆಗೆ ಬದರ್ಯಾಶ್ರಮದಲ್ಲಿ ೧೬ ಭಾಷ್ಯಗಳ ರಚನೆ, ನಾರಾಯಣಪ್ರತಿಷ್ಠೆ, ಜ್ಯೋತಿರ್ಮಠ ನಿರ್ಮಾಣ.

೨೬೪೨ ಕಾರ್ತಿಕ ಶುಕ್ಲ ೮ ಬಾದರಾಯಣಾಚಾರ್ಯರೊಡನೆ ಸಂಭಾಷಣೆ, ಸನಂದನರು ಬಂದದ್ದು.

೨೬೪೨ ಮಾರ್ಗಶೀರ್ಷ ಕೃಷ್ಣ ೩ ಮಂಡನನೊಡನೆ ವಾದಾರಂಭ.

೨೬೪೫ ಚೈತ್ರ ಶುಕ್ಲ ೪ ಮಂಡನಪರಾಜಯ.

೨೬೪೫ ಚೈತ್ರ ಶುಕ್ಲ ೬ ಸರಸ್ವತಿಯೊಡನೆ ವಾದ.

೨೬೪೫ ಚೈತ್ರ ಕೃಷ್ಣ ೮ ಅಮರುಕಕಾಯಪ್ರವೇಶ.

೨೬೪೫ ಕಾರ್ತಿಕ ಶುಕ್ಲ ೧೩ ತಮ್ಮ ದೇಹಕ್ಕೆ ಪ್ರವೇಶ.

೨೬೪೫ ಕಾರ್ತಿಕ ಕೃಷ್ಣ ೧ ಭಾರತೀಪರಾಜಯ.

೨೬೪೫ ಕಾರ್ತಿಕ ಕೃಷ್ಣ ೧ ಆಕಾಶಮಾರ್ಗದಿಂದ ತನ್ನ ಲೋಕಕ್ಕೆ ಹೋಗುತ್ತಿದ್ದ ಅಕೆಯನ್ನು ಚಿಂತಾಮಣಿಮಂತ್ರದಿಂದ ದ್ವಾರಕೆಯಲ್ಲಿ ಆಕರ್ಷಣೆ ಮಾಡಿದ್ದು.

೨೬೪೫ ಕಾರ್ತಿಕ ಕೃಷ್ಣ ೫ ಅಲ್ಲಿ ಅಕೆಯನ್ನು ಸ್ಥಾಪಿಸಿದ್ದು.

೨೬೪೫ ಕಾರ್ತಿಕ ಕೃಷ್ಣ ೧೩ರಿಂದ ಮಾಘ ಶುಕ್ಲ ೧೦ರವರೆಗೆ ಶಾರದಾಮಠ ನಿರ್ಮಾಣ, ರುದ್ರಮಾಲಾಕಾರದಿಂದ ಭಗವದಾಲಯ ನಿರ್ಮಾಣ, ಯಾದವೇಂದ್ರಪ್ರತಿಷ್ಠೆ, ಸಿದ್ಧೇಶ್ವರಾಲಯಪ್ರತಿಷ್ಠೆ.

೨೬೪೫ ಫಾಲ್ಗುನ ಶುಕ್ಲ ೯ರಂದು ವೈಧವ್ಯಭೀತಿಯಿಂದ ಮತ್ತೆ ಕಲಾಪ್ಪಕರೂಪದಿಂದ ತನ್ನ ಲೋಕಕ್ಕೆ ಹೋಗುತ್ತಿದ್ದ ಸರಸ್ವತಿಯನ್ನು ಅದೇ ಮಂತ್ರದಿಂದ ಶೃಂಗೇರಿಯಲ್ಲಿ ಆಕರ್ಷಣಮಾಡಿ ಮಠವನ್ನು ನಿರ್ಮಿಸಿ ಅಲ್ಲಿ ಮತ್ತೆ ಅಕೆಯನ್ನು ಸ್ಥಾಪಿಸಿದ್ದು.

೨೬೪೪ ಚೈತ್ರ ಶುಕ್ಲ ೯ ಮಂಡನನು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ್ದು.

೨೬೪೪ ಮಾರ್ಗತೀರ್ಷ ಶುಕ್ಲ ೧೦ ಸುಧನ್ವರಾಜನು ಶಿಷ್ಯನಾದದ್ದು.

೨೬೪೪ ಮಾಘ ಶುಕ್ಲ ೭ ಸುರೇಶ್ವರಾಚಾರ್ಯರನ್ನು ಶಾರದಾಪೀಠದಲ್ಲಿ ಅಭಿಷೇಕಮಾಡಿದ್ದು.

೨೬೫೦ ವೈಶಾಖ ಶುಕ್ಲ ೩ರಿಂದ ದಿಗ್ವಿಜಯಕ್ಕೆ ಆರಂಭ:

೨೬೫೪ ಶ್ರಾವಣ ಶುಕ್ಲ ೭ ಮತ್ತು ಆಶ್ವಿಜ ಶುಕ್ಲ ೧೧–ತ್ರೋಟಕಹಸ್ತಾಮಲಕರು ಶಿಷ್ಯರಾದದ್ದು.

೨೬೫೪ ಪೌಷ ಶುಕ್ಲ ೧೫ ಹಸ್ತಾಮಲಕಾಚಾರ್ಯರನ್ನು ಶೃಂಗೇರಿಯಲ್ಲಿ ಅಭಿಷೇಚನಮಾಡಿದ್ದು, ಅದೇ ದಿನದಲ್ಲಿ ತ್ರೋಟಕಾಚಾರ್ಯರನ್ನು ಜ್ಯೋತಿರ್ಮಠದಲ್ಲಿ ಅಭಿಷೇಕಮಾಡಿದ್ದು.

೨೬೫೩ ವೈಶಾಖ ಶುಕ್ಲ ೧೦ ದಿಗ್ವಿಜಯದ ನಡುವೆ ಪುರುಷೋತ್ತಮಕ್ಷೇತ್ರಕ್ಕೆ ಹೋದದ್ದು ; ಅಲ್ಲಿ ದಾರುಮಯ ಜಗದೀಶ ಪ್ರತಿಷ್ಠೆ ಆ ಕ್ಷೇತ್ರವು ಯಾರ್ಯಾದೆಯ ಪ್ರಬಂಧ, ಗೋವರ್ಧನಮಠಸ್ಥಾಪನೆ, ಪದ್ಮಪಾದರನ್ನು ಆ ಪೀಠಕ್ಕೆ ಅಭಿಷೇಕಮಾಡಿದ್ದು.

೨೬೬೫ ಭಾದ್ರಪದ ಶುಕ್ಲ ೧೫ರಿಂದ ೨೬೬೭ ಪುಷ್ಯ ಕೃಷ್ಣ ಅಮಾವಾಸ್ಯೆಯವರೆಗೆ ದಿಗ್ವಿಜಯಮಹೋತ್ಸವ, ಸುಧನ್ವ ಮುಂತಾದವರಿಗೆ ಪ್ರಜಾಪಾಲನೆಯನ್ನು ಮಾಡುವದೇ ಮುಂತಾದ ವಿಷಯಕ್ಕೆ ಅಪ್ಪಣೆ. ಕಾಶ್ಮೀರ ಮಠದಲ್ಲಿ ಶಾರದಾಪೀಠವಾಸ.- ಆ ಬಳಿಕ ೨೬೬೯ ಕಾರ್ತಿಕ ಶುಕ್ಲ ೩೦ರಲ್ಲಿ ಸ್ವದೇಹದಿಂದಲೇ ಕೈಲಾಸಗಮನ.

ಈ ಕಾಲಮಾನಗಳಿಗೆ ಆಧಾರವೇನೆಂಬುದನ್ನು ಪುಸ್ತಿಕೆಯಲ್ಲಿ ಕೊಟ್ಟಿಲ್ಲ.

ಇಲ್ಲಿಗೆ ಕಾಲವಿಚಾರದ ಮತಭೇದದ ಕೋಲಾಹಲವು ಮುಗಿಯಿತು. ಆಚಾರ್ಯರ ಮೂಲಗ್ರಂಥಗಳನ್ನು ನೋಡಿ ಊಹಾಪೋಹಗಳಲ್ಲಿ ಯಾವ ಯಾವದಕ್ಕೆ ಎಷ್ಟೆಷ್ಟು ಬೆಲೆಯಿದೆಯೋ ವಾಚಕರೇ ಊಹಿಸಿಕೊಳ್ಳಬೇಕು. ನಮ್ಮ ಸ್ವಂತ ಅಭಿಪ್ರಾಯಗಳಲ್ಲಿ ಕೆಲವನ್ನು ಚರಿತ್ರೆ (ಪು. ೨೪ರಿಂದ ೩೧) ಕೊಟ್ಟಿದೆ.

---

೫. ಶಂಕರವಿಜಯಪಾಠಗಳು

(೧) ಆನಂದಗಿರಿ

(ಚರಿತ್ರೆ ಪುಟ ೩೯, ೫೪–೫೫, ೯೬....)

ತೆಲುಗುಲಿಪಿಯಲ್ಲಿ ಅಚ್ಚಾಗಿರುವ ಅನಂತಾನಂದಗಿರಿಯ ಶಂಕರಾವತಾರದ ಕಥೆಯ ಶ್ಲೋಕಗಳನ್ನು ಇಲ್ಲಿ ಕೊಟ್ಟಿದೆ. ದೇವನಾಗರೀಪ್ರತಿಯ ಪಾಠಭೇದಗಳಿದ್ದರೆ ಅದನ್ನೂ ತೋರಿಸಿದೆ :೨

ತತಃ ಸರ್ವಾತ್ಮಕೋ ದೇವಶ್ಚಿದಮ್ಬರಪುರಾಶ್ರಿತಃ |
ಆಕಾಶಲಿಙ್ಗನಾಮ್ನಾ ತು ವಿಖ್ಯಾತೋಽಭೂನ್ಮಹೀತಲೇ ||
ತತ್ರ ವಿದ್ವನ್ಮಹೇನ್ದ್ರಸ್ಯ ಕುಲೇ ದ್ವಿಜಗಣಾಶ್ರಿತೇ |
ಜಾತಃ ಸರ್ವಜ್ಞನಾಮ್ನಾ ತು ಕಶ್ಚಿದ್ದ್ವಿಜಕುಲೇಶ್ವರಃ ||
ಕಾಮಾಕ್ಷೀತಿ ಸತೀ ಚಾಭೂತ್ತಸ್ಯ ಲಕ್ಷಣಲಕ್ಷಿತಾ |
ಚಿದಮ್ಬರೇಶ್ವರಂ ಧ್ಯಾತ್ವಾ ತಾವುಭೌ ಪ್ರಾಪತುಃ ಸುತಾಮ್ ||
ಸಾ ಕುಮಾರೀ ಸದಾ ಧ್ಯಾನಸಕ್ತಾ ಭೂಜ್ಞಾನತತ್ಪರಾ |

ವಿಶಿಷ್ಟೇತಿ ಚ ನಾಮ್ನಾ ತು ಪ್ರಸಿದ್ಧಾಽಭೂನ್ಮಹೀತಲೇ ॥
ತಾಮಷ್ಟಮೇಽಬ್ದೇ ವಿಪ್ರಾಯ ಶಾನ್ತಾಯಾದ್ಭುತಕರ್ಮಣೇ ।
ಪ್ರದದೌ ವಿಶ್ವಜಿನ್ನಾಮ್ನೋ ಸರ್ವಜ್ಞೋ ಜ್ಞೋ[1] ಪಿತಾ ಸ್ವಯಮ್ ॥
ಸಾ ಸಭಾ[2]ಪತಿಮುದ್ವೃತಂ ಧ್ಯಾತ್ವಾಕಾಶಾತ್ಮಕಂ ಶಿವಮ್ ।
ಅಸ್ಯಾ[3] ರಾಧನಮುತ್ಯುಗ್ರಮಾಚಕಾರ ವಿವೇಕಿನೀ ॥
ತಾದೃಶೀಮಪಿ ಸಂತ್ಯಕ್ತ್ವಾ[4] ಯಯೌ ವಿಶ್ವಜಿದದ್ಭುತಮ್ ।
ಅರಣ್ಯೇ[5] ತಪಸೇ ಕೃತ್ವಾ ಮನೋನಿಶ್ಚಯತಾಂ ಗತಃ ।
ತದಾ ಪ್ರಭೃತಿ ಸಾ ನಾರೀ ಚಿದಮ್ಬರಮಹೇಶ್ವರಮ್ ।
ಪೂಜ[7] ಯಾಮಾಸ ಪೂಜಾಭಿರ್ಧಾನ್ಯ ನೈರಾತ್ಮಗತೈಃ ಸದಾ ॥
ಸ ದೇವಃ ಸರ್ವಪೂರ್ಣೋಽಪಿ ತಸ್ಯಾ ವದನಪಙ್ಕಜಮ್ ।
ಪ್ರವಿಶ್ಯ ವಿಸ್ಮಿತಾನ್ ಕುರ್ವನ್ ಜನಾನನ್ಯಾನ್ ಸಮಾಗತಾನ್ ॥
ಮಹೋಗ್ರತೇಜಸಾ ಜುಷ್ಟಾ ವಿಶಿಷ್ಟಾಽಭೂತ್ ದೃಢಾಮ್ಬಿಕಾ[8] ।
ಸರ್ವೈಃ ಸಂಪೂಜಿತಾ ನಿತ್ಯಂ ಪಿತ್ರಾದಿಭಿರುಪಾಸಿತಾ[9] ॥
ಅತೀತೇ ನವಮಿ ಗರ್ಭಸ್ಯ ವೃದ್ಧಿರಾಸೀದ್ದಿನೇ ದಿನೇ ।
ಚಿದಮ್ಬರೇಶ್ವರಂ ಕೃತ್ವಾ ಯಜಮಾನಂ ದ್ವಿಜೋತ್ತಮಾಃ ॥
ತೃತೀಯಾದಿಷು ಮಾಸೇಷು ಚಕ್ರುಃ ಕರ್ಮಾಣಿ ವೇದತಃ ।
ಪ್ರಾಪ್ತೇ ತು ದಶಮೇ ಮಾಸಿ ವಿಶಿಷ್ಟಾಗರ್ಭಗೋಲತಃ ॥
ಪ್ರಾದುರಾಸೀನ್ಮಹಾದೇವಃ ಶಙ್ಕರಾಚಾರ್ಯನಾಮತಃ ।
ಆಸೀತ್ತದಾ ಪುಷ್ಪವೃಷ್ಟಿಃ ದೇವಸಙ್ಘೈಃ ಪ್ರಚೋದಿತಾ ।
ನೇದುರ್ದುನ್ದುಭಯೋ ದಿವ್ಯಾಃ ಸ್ವರ್ಗಲೋಕೇಽಮ್ಬರೇ ಸುಖಮ್[10] ॥

(೨) ಚಿದ್ವಿಲಾಸೀಯಬೃಹಚ್ಛಂಕರವಿಜಯಗಳು

[ಸೂಚನೆ: ಇಲ್ಲಿ ಕೊಟ್ಟಿರುವ ಬೃಹಚ್ಛಂಕರವಿಜಯದ ೩೨ನೆಯ ಪ್ರಕರಣವು ಶ್ರೀಪ್ಪಲೂರು ಕೃಷ್ಣಸ್ವಾಮಯ್ಯಂಗಾರು ಬರೆದ ಜಗದ್ಗುರು ಶ್ರೀಶಙ್ಕರಭಗವತ್ಪಾದಾಚಾರ್ಯಚರಿತ್ರವು ಎಂಬ ತೆಲುಗು ಗ್ರಂಥದ ಒಂದನೆಯ ಅನುಬಂಧದಿಂದ ಆರಿಸಿದೆ. ಚೌಕಕಂಸದಲ್ಲಿ ಚಿದ್ವಿಲಾಸೀಯದ ಶ್ಲೋಕಗಳನ್ನು ಹೋಲಿಕೆಗಾಗಿ ಕೊಟ್ಟಿದೆ. ಚರಿತ್ರೆಯ ೩೨ನೆಯ ಪುಟವನ್ನು ನೋಡಿ.]

ಕಾಲಟ್ಯಾಖ್ಯೇ ಗ್ರಾಮವರ್ಯೇ ಕೇರಳಾಲಙ್ಕೃತೀ ಕೃತೇ ।
ವಿದ್ಯಾಧಿರಾಜತನಯಃ ಪ್ರಾಜ್ಞಃ ಶಿವಗುರುರ್ಬಭೌ ॥ ೧ ॥

---

1. 'ಅಸ್ಯಾಃ' 2. 'ಸದಾ ಪತಿಮ್' 3. 'ತಸ್ಯ' 4. 'ಸಂತ್ಯಜ್ಯ'
5. 'ಅರಣ್ಯಂ' 6. 'ಗತವಾನ್' 7. 'ತೋಷಯಾಮಾಸ'
8. 'ಯಥಾಮ್ಬಿಕಾ' 9. 'ಪಿತ್ರಾದಿಭಿರುಪಾಶ್ರಿತಾ' 10. 'ಚಿರಂ ಸುಖಮ್'

[ಕೇರಳರ ಕಾಲಡಿಗ್ರಾಮದಲ್ಲಿ ವಿದ್ಯಾಧಿರಾಜತನಯನಾದ ಶಿವಗುರು ಆಚಾರ್ಯರ ತಂದೆ ಎಂದು ಇಲ್ಲಿ ಹೇಳಿದೆ.]

ತದಾ ಸದಾಶಿವಃ ಶಮ್ಭುರ್ಲೋಕಾನುಗ್ರಹತತ್ಪರಃ ।
ಆರ್ಯಾಮ್ಬಾಕಮಿತುಸ್ತಸ್ಯ ಭಕ್ತಿವೈರಾಗ್ಯಶಾಲಿನಃ ॥ ೨ ॥
ಸುತಾರ್ಥಂ ತಪ್ಯಮಾನಸ್ಯ ಪತ್ನ್ಯಾ ಸಾರ್ಧಮಹರ್ನಿಶಮ್ ।
ಮನೋರಥಂ ಪೂರಯಿತುಮಿಯೇಷ ಕರುಣಾನಿಧಿಃ ॥ ೩ ॥

['ಮತ್ತೋ ವಾಞ್ಛನ್ ಸತಃ ಪುತ್ರಾನನಪತ್ಯತ್ವದುರ್ಮನಾಃ' ಎಂಬುದರಿಂದ 'ತಪಸ್ಯತಿ ಚಿರಂ ಘೋರೇ ವರ್ಷೀಯಾನಪಿ ನಿಶ್ಚಲಃ' ಎಂಬವರೆಗಿನ ಚಿ, ಶಂ, ೪-೪೨ರಿಂದ ೪೫ರವರೆಗಿನ ಶ್ಲೋಕಗಳನ್ನು ಇದಕ್ಕೆ ಹೋಲಿಸಿರಿ]

ತತೋ (ಪೋ ?) ಮಹಿಮ್ನಾ ತತ್ಪತ್ನ್ಯಾಂ ಪ್ರವಿವೇಶ ಸ್ವತೇಜಸಾ ।
ಸಾ ದಧಾರ ಸತೀ ಗರ್ಭಮಾದಿತ್ಯಸಮತೇಜಸಮ್ ॥ ೪ ॥
ನಿಧಾನಗರ್ಭಾ ಧಾತ್ರೀವ ಶಮೀವಾನ್ತರ್ಹಿತಾನಲಾ ।
ವ್ಯಜಾಯತ ತದಾರ್ಯಾಮ್ಬಾ ಶಿವೈಕಾಯತ್ತಚೇತನಾ ॥ ೫ ॥

(ಪ್ರಾಚೀವಾನ್ತರ್ನಿಲೀನೇನ ಶಮೀವಾನ್ತರ್ಹಿತಾನಲಾ ।... ನಿಧಾನಗರ್ಭಾ ಧಾತ್ರೀವ ತ್ರೇತೇವಾಚ್ಛಾದಿತಾ ತುಷ್ಟೈ ಃ ॥ ...ವ್ಯರಾಜತ ತದಾರ್ಯಾಮ್ಬಾ ಶಿವೈಕಾಯತ್ತ ಚೇತನಾ ॥ ಚಿ. ಶಂ. ಜಿಶಃ೩ರಿಂದ ೪೫.)

ದೃಷ್ಟ್ವಾ ಶಿವಗುರುರ್ಯಜ್ಞಾ ಭಾರ್ಯಾಮಾರ್ಯಾಂ ಚ ಗರ್ಭಿಣೀಮ್
ವೃಷಾಚಲೇಶಂ ಸತತಂ ಸ್ಮರನ್ನೇಕಾಗ್ರಚೇತಸಾ ॥ ೬ ॥
ದಯಾಳುತಾಂ ಸ್ತುವನ್ ಶಮ್ಭೋರ್ದಿನೇಷ್ವಪಿ ಮಹತ್ಸ್ವಪಿ ।
ವವೃಧೇ ಸ ಪಯೋರಾಶಿಃ ಪೂರ್ಣೇನ್ದೋರಿವ ದರ್ಶನಾತ್ ॥ ೭ ॥

(ಚಿ. ಶಂ. ೫-೩೫, ೩೬, ೩೭ರಲ್ಲಿ ಇವೇ ಶ್ಲೋಕಗಳು.)

ವ್ಯಜಾಯತ ಶುಭಃ ಕಾಲಃ ಪಞ್ಚೋಚ್ಚಗ್ರಹಸಂಯುತಃ ।
ಕಲ್ಹಾರಕಲಿಕಾಗನ್ಧಬನ್ಧುರೋ ಮರುದಾವವೌ ॥ ೮ ॥

(ಚಿ. ಶಂ. ೫-೪೪)

ದಿಶಃ ಪ್ರಕಾಶಿತಾಕಾಶಾ ಬಭೂವುಃ ಸೂರ್ಯರಶ್ಮಿಭಿಃ ।
ಪ್ರಾಯಃ ಪ್ರದಕ್ಷಿಣಜ್ವಾಲಾ ಜಜ್ವಲುರ್ಯಜ್ಞಪಾವಕಾಃ ॥ ೯ ॥

(ಚಿ. ಶಂ. ೪೫-೪೫)

ನನನ್ದುರ್ಬಾನ್ಧವಾಃ ಸರ್ವೇ ನನೃತುಶ್ಚಾಪ್ಸರೋ ಗಣಾಃ ।
ಸಸೃಜುಃ ಪುಷ್ಪವರ್ಷಾಣಿ ದೇವಾ ಭೂಮ್ಯನ್ತರಿಕ್ಷಗಾಃ ॥ ೧೦ ॥

ಚಿ. ಶಂ. ೫-೪೪)

ಆಸೀತ್ತದಾ ದಿವ್ಯಗಾನಂ ಸ್ವರ್ಗಲೋಕೇ ಚಿರಂ ಸುಖಮ್ ।
ಪ್ರಸನ್ನಮಭವಚ್ಚಿತ್ತಂ ಸತಾಂ ವ್ರತಪರಾಮಪಿ ॥ ೧೧ ॥

[ಚಿ. ಶಂ. ೫-೪೬ [

ತತಃ ಸಾ ದಶಮೇ ಮಾಸೇ ಸಂಪೂರ್ಣಶುಭಲಕ್ಷಣೇ ।
ಷಡ್ವಿಂಶೇ ಶತಕೇ ಶ್ರೀಮದ್ಯುಧಿಷ್ಠಿರಶಕಸ್ಯ ವೈ ॥ ೧೨ ॥
[ಚಿ. ಶಂ. ೫–೩೭, 'ಮಾಸಿ' ಎಂದು ಪಾ॥]

ಏಕತ್ರಿಂಶೇಽಥ ವರ್ಷೇ ತು ಹಾಯನೇ ನನ್ದನೇ ಶುಭೇ ।
ಮೇಷರಾಶಿಂ ಗತೇ ಸೂರ್ಯೇ ವೈಶಾಖೇ ಮಾಸಿ ಶೋಭನೇ ॥ ೧೩ ॥

ಶುಕ್ಲಪಕ್ಷೇ ಚ ಪಞ್ಚಮ್ಯಾಂ ತಿಥ್ಯಾಂ ಭಾಸ್ಕರನಾಸರೇ ।
ಪುನರ್ವಸುಗತೇ ಚನ್ದ್ರೇ ಲಗ್ನೇ ಕರ್ಕಟಕಾಹ್ವಯೇ ॥ ೧೪ ॥
ಮಧ್ಯಾಹ್ನೇ ಚಾಭಿಜಿನ್ನಾಮ ಮುಹೂರ್ತೇ ಶುಭವೀಕ್ಷಿತೇ ।
[ಚಿ. ಶಂ. ೫–೩೮. "ಮುಹೂರ್ತೇ ಚಾರ್ದ್ರಯಾ ಯುತೇ" ಎಂದು ಪಾಠಾಂತರ.]

ಸ್ವೋಚ್ಚಸ್ಥೇ ಕೇನ್ದ್ರಸಂಸ್ಥೇ ಚ ಗುರೌ ಮನ್ದೇ ಕುಜೇ ರವೌ ।
ನಿಜತುಙ್ಗಗತೇ ಶುಕ್ರೇ ರವಿಣಾ ಸಙ್ಗತೇ ಬುಧೇ ।
ಪ್ರಾಸೂತ ತನಯಂ ಸಾಧ್ವೀ ಗಿರಿಜೇವ ಷಡಾನನಮ್ ॥ ೧೬ ॥
[ಚಿ. ಶಂ. ೫–೩೯. ಇಲ್ಲಿರುವ ಮುಹೂರ್ತದ ವಿಷಯವನ್ನು ಳನೆಯ ಪರಿಶಿಷ್ಟದಲ್ಲಿ

ಚರ್ಚಿಸಿದೆ.]
ಉದಯಾಚಲವೇಲೇವ ಭಾನುಮನ್ತಂ ಮಹೌಜಸಮ್ ।
ದುರ್ನಿರೀಕ್ಷ್ಯೈಃ ಸ್ವತೇಜೋಭಿರ್ಭಾಸಯನ್ತಂ ದಿಶೋ ದಶ ॥ ೧೭ ॥
[ಚಿ. ಶಂ. ೫೯, ೪೧]

ಬಾಲತ್ವೇಽಪಿ ವಿಶಾಲಾಕ್ಷಮತಿನಿಸ್ತೃತವಕ್ಷಸಮ್ ।
ಅಜಾನುಲಮ್ಬಿತಭುಜಂ ಸುವಿಶಾಲನಿಟಾಲಕಮ್ ॥ ೧೮ ॥
ಚಿ. ಶಂ. ೫–೪೯, ೫೯ 'ಬಾಲಭಾವೇ' ಪಾ॥ [

ಆರಕ್ತೋತ್ಪಾನ್ತನಯನವಿನಿನ್ದಿತಸರೋರುಹಮ್ ।
ಮುಖಕಾನ್ತಿಪರಾಭೂತರಾಕಾಹಿಮಕರಾಕೃತಿಮ್ ॥ ೧೯ ॥
[ಚಿ. ಶಂ. ೫೦, ೫೧]

ಶಙ್ಖಚಕ್ರಧ್ವಜಾಕಾರರೇಖಾಚಿಹ್ನಪದಾಮ್ಬುಜಮ್ ।
ದ್ವಾತ್ರಿಂಶಲ್ಲಕ್ಷಣೋಪೇತಂ ವಿದ್ಯುದಾಭಕಲೇವರಮ್ ॥ ೨೦ ॥
[ಚಿ. ಶಂ. ೫–೫೨]

ಪ್ರಮೋದಂ ದೃಷ್ಟಮಾತ್ರೇಣ ದಿಶನ್ತಂ ತಂ ಸ್ತನನ್ಧಯಮ್ ।
ಪಾಯಂ ಪಾಯಂ ದೃಶಾ ಪ್ರೇಮ್ಣಾ ಶ್ರೀಕೃಷ್ಣಮಿವ ದೇವಕೀ ॥ ೨೧ ॥

ಪ್ರಪೇದೇ ನ ಕ್ಷಣಂ ತೃಪ್ತಿಂ ಚಕೋರೀವ ಸುಧಾಕರಮ್ |
ತಾದೃಶಂ ಬಾಲಕಂ ದೃಷ್ಟ್ವಾ ಸಾ ಬಭೂವಾತಿವಿಸ್ಮಿತಾ ॥ ೨೨ ॥
(ಚಿ. ಶಂ. ೫– ೬೩, ೬೪ ಕೊನೆಯ ಪಾದ 'ತ್ವಾರ್ಯಾ ಸಾ ಶುಭಲಕ್ಷಣಾ' ಪಾ.)

ಸ ಚಾದ್ಭುತಃ ಕಿಶೋರೋಽಪಿ ಕಿಞ್ಚಿದ್ವಿಚಲಿತಾಧರಃ |
ತಾಡಯನ್ ಚರಣೌ ಹಸ್ತೌ ರುರೋದ ಮಧುರಧ್ವನಿಮ್ ॥ ೨೩ ॥

(ಚಿದ್ವಿಲಾಸೀಯದಲ್ಲಿ ಇದರ ಹಿಂದೆ ಚತುರ್ಭುಜನಾಗಿ ತ್ರಿನೇತ್ರನಾಗಿರುವ ಚಂದ್ರಶೇಖರನನ್ನು ನೋಡಿ ಚಕಿತಳಾಗಿ ಇವನು ವೃಷಾಚಲೇಶ್ವರನೇ ಎಂದು ನಿಶ್ಚಯಿಸಿ "ಬಾಲಭಾವದ ಲೀಲೆಗಳನ್ನು ತೋರಿಸು, ಸ್ವಾಮಿ" ಎಂದು ಬೇಡಿಕೊಂಡಳೆಂಬರ್ಥದ ಶ್ಲೋಕಗಳಿವೆ. ಪ್ರಕೃತಶ್ಲೋಕವು 'ತತಃ ಕಿಶೋರವತ್ಸೋಽಪಿ' ಎಂದು ಪ್ರಾರಂಭವಾಗಿದೆ.)

ತತ್ರತ್ಯಾ ವೃದ್ಧನಾರ್ಯೋಽಪಿ ಯಥೋಚಿತಮಥಾಚರನ್ |
ಬಾಲಕಂ ಮೇನಿಷೇ ಪ್ರೌಢಂ ದಿನದ್ವಯವಿಧೌ ವಿಧೌ ॥ ೨೪ ॥
(ಚಿ. ಶಂ. ೫–೫೧, ೫೧ ; ಪೂರ್ವೋತ್ತರಾರ್ಧಗಳು ವ್ಯತ್ಯಸ್ತಕ್ರಮದಲ್ಲಿವೆ.)
ತತಃ ಶ್ರುತ್ವಾ ಪಿತಾ ಸೋಽಪಿ ನಿಧಿಂ ಪ್ರಾಪ್ಯೇವ ನಿರ್ಧನಃ |
ಮುಮುದೇ ನಿತರಾಂ ಚಿತ್ತೇ ವಿತ್ತೇಶಂ ನಾಭ್ಯಲಕ್ಷ್ಯತ ॥ ೨೫ ॥
ಸ್ನಾತ್ವಾ ಶಿವಗುರುಸ್ತೂರ್ಣಂ ಯಜ್ವನಾಮಗ್ರಣೀಸ್ತತಃ |
ವಿಪ್ರಾನಾಕಾರಯಾಮಾಸ ಪುರನ್ಧ್ರೀರಪಿ ಸರ್ವತಃ ॥ ೨೬ ॥
ತದೋತ್ಸವೋ ಮಹಾನಾಸೀತ್ ಪುರೇ ಸದ್ಮನಿ ಸಂತತಮ್ |
ಧಾನ್ಯರಾಶೀನ್ ಮುಖಿಭ್ಯೋಽಸೌ ವಿದ್ವದ್ಭ್ಯೋ ಭೂಯಃ ಪ್ರದತ್ತವಾನ್
ಧನಾನಿ ಭೂರಿ ವಿಪ್ರೇಭ್ಯೋ ವೇದವಿದ್ಭ್ಯೋ ದಿದೇಶ ಸಃ |
ವಾಸಾಂಸಿ ಭೂಯೋ ದಿವ್ಯಾನಿ ಸಫಲಾನಿ ಪ್ರದತ್ತವಾನ್ ॥ ೨೭ ॥
ಪುರನ್ಧ್ರೀಣಾಂ ಚ ನೀರನ್ಧ್ರಂ ವಸ್ತುಜಾತಮುದಾದಸೌ |
ಘಟೋಧ್ನೀರ್ಬಹುಶೋ ಗಾಶ್ಚ ಸಾಲಙ್ಕಾರಾಃ ಸದಕ್ಷಿಣಾಃ ॥ ೨೮ ॥
(ಚಿ. ಶಂ. ೫–೫೨ರಿಂದ ೫೭ರವರೆಗೆ ಇದೇ ಶ್ಲೋಕಗಳು ಇದೇ ಕ್ರಮದಲ್ಲಿ ಇರುತ್ತವೆ)
ತತಃ ಶಿವಗುರುರ್ಯಜ್ವಾ ಬ್ರಾಹ್ಮಣಾನ್ ಪೂರ್ವತೋಽಧಿಕಮ್ |
ಸಂತರ್ಪ್ಯ ಬಹುಭಿಃ ಸಾರ್ಧಂ ಮುದಿತೋ ನ್ಯವಸತ್ಸುಧೀಃ ॥ ೩೦ ॥

ಸರ್ವಜ್ಞಾನ :
ಶ್ರೀಚಿತ್ಸುಖೇಂದ್ರ ಗುರುರಾಜಸಮುದ್ಭವೋದ್ಯೆ–
ದ್ವೃತ್ತಂ ನಿಶಮ್ಯ ನಿತರಾಂ ಹೃಷಿತಂ ಮನೋ ಮೇ |
ಆಗ್ರೇ ಯದದ್ಯ ವದ ತೇಚ್ಚರಿತಂ ಕ್ರಮೇಣ
ಭೂಯೋ ನತೋಽಸ್ಮಿ ಗುರವೇ ಭವತಾಪಹರ್ತ್ರೇ ॥ ೩೧ ॥

ಶ್ರೀಚಿತ್ಸುಖಃ :

ಸರ್ವಜ್ಞಾನಸುಧೀಮಣೇ ಸಕೃದಿಮಂ ಯೋ ವಾ ಶೃಣೋತ್ಯಾದರಾತ್
ಶ್ರೀಮಚ್ಛಙ್ಕರದೇಶಿಕೇನ್ದ್ರಚರಣಾವಿರ್ಭಾವಮತ್ಯದ್ಭುತಮ್ |
ಸೋಽಪ್ಯದ್ಧಾ ಭವಿತಾ ಭಿದಾ ವಿಗಳಿತಸ್ತ್ವೈಕ್ಯಂ ಚ ಜೀವೇಶಯೋ-
ರ್ಜೀವನ್ಮುಕ್ತ ಇವಾಚಲನ್ನತಿತರಾಂ ನಿಃಶ್ರೇಯಸಾಯೇಹತೇ ॥ ೩೨ ॥

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಚ್ಛಂಕರಭಗವತ್ಪೂಜ್ಯಪಾದಪಾಥೋಜ
ಮದನಿಷ್ಯನ್ದಾಸ್ವಾದತುನ್ದಿಲಾನನ್ದವಿಲಿನ್ದಾಯಮಾನಮಾನಸ ಶ್ರೀಚಿತ್ಸುಖಯತೀನ್ದ್ರ
ಸರ್ವಜ್ಞಾನತಪೋಧನೇನ್ದ್ರಸಂವಾದೇ ಶ್ರೀಬೃಹಚ್ಛಂಕರವಿಜಯೇ ಶಙ್ಕರಾಚಾರ್ಯ
ಸತ್ಪಥೇ ಶ್ರೀಕಙ್ಕರಪ್ರಾದುರ್ಭಾವಾಖ್ಯಂ ದ್ವಾತ್ರಿಂಶಪ್ರಕರಣಂ ಸಮಾಪ್ತಮ್

ವಿಶೇಷ : (1) ಚಿದ್ವಿಲಾಸೀಯದ ಶ್ಲೋಕಗಳನ್ನು ಬೃಹಚ್ಛಂಕರವಿಜಯ ಮೂಲದಲ್ಲಿರುವವೆಂದು ತೋರಿಸುವದಕ್ಕೆ ಚೌಕಕಂಸದಲ್ಲಿ ಸೂಚಿಸಿ ವಿಶೇಷ ವನ್ನೂ ಕೊಟ್ಟಿದೆ. ಈ ಬೃಹಚ್ಛಂಕರವಿಜಯದ ಒಂದು ಅಧ್ಯಾಯವು ಪೂರ್ಣ ವಾಗಿ ಸಿಕ್ಕಿರುವದರಿಂದ ಪೂರ್ಣಗ್ರಂಥವೂ ಕಾಂಚೀ (ಕುಂಭಕೋಣ) ಮಠದಲ್ಲಿ ಸಿಕ್ಕುವ ಸಂಭವವಿದೆ. ಹುಡುಕಿನೋಡುವದು ಅತ್ಯವಶ್ಯ.

(2) ಬೃಹಚ್ಛಂಕರವಿಜಯಕ್ಕೆ 'ಶಙ್ಕರಾಚಾರ್ಯಸತ್ಪಥ'ವೆಂದು ಹೆಸರೋ ಅಥವಾ ಆ ಗ್ರಂಥದ ಪ್ರಕೃತಭಾಗಕ್ಕೆ ಇದು ಹೆಸರೋ ತಿಳಿಯಲಿಲ್ಲ. ಆತ್ಮಬೋಧರ ಸುಷಮಾವ್ಯಾಖ್ಯಾನದಲ್ಲಿ (ಗು.ರ. ೧೯) ಪ್ರಮಾಲಾವಮ್ಮಾಯಶ್ಚ ಬೃಹಚ್ಛಂಕರವಿಜಯೇ ಶ್ರೀಶಙ್ಕರಾಚಾರ್ಯಸತ್ಪಥೇ ಸವಿಸ್ತರಂ ನಿರೂಪಿತಃ' ಎಂದಿದೆ. ಆದರೆ ಆತ್ಮಬೋಧರ ಪ್ರಾಮಾಣ್ಯವನ್ನು ಶಂಕಿಸು ವವರೂ ಇರುತ್ತಾರೆ.

(೩) ಗುರುಶಿಷ್ಯಸಂವಾದಕ್ರಮವು ಚಿದ್ವಿಲಾಸೀಯಕ್ಕೂ ಬೃಹಚ್ಛಂಕರ ವಿಜಯಕ್ಕೂ ಸಮಾನವಾಗಿದೆ. ಸಂವಾದದ ಮೂರನೆಯ ಶ್ಲೋಕವು ಚಿದ್ವಿಲಾಸ ದಲ್ಲಿ ಹೀಗೆಯೇ ಇದೆ. ತತ್ತ್ವಾನ್ವೇಷಕರಿಗೆ ಇದರಿಂದ ಯಾವದಾದರೊಂದು ಉಪಸಿದ್ಧಾಂತವನ್ನು ತೆಗೆಯುವದಕ್ಕೆ ಸಹಾಯವಾಗಬಹುದೆಂದು ನನ್ನ ನಿರೀಕ್ಷಣೆ.

೬. ಆನಂದಗಿರಿಯ

(ಅ) ಆನಂದಗಿರೀಯದ ಪ್ರಾಚೀನಪಾಠ

(ಚರಿತ್ರೆಯ ಪುಟ ೪೨, ೫೩)

ಈ ಪಾಠದ ಕೆಲವು ಶ್ಲೋಕಗಳು 'ಶ್ರೀಶಾಙ್ಕರಪೀಠತತ್ತ್ವದರ್ಶನಮ್' ಎಂಬ ಗ್ರಂಥದಲ್ಲಿ (ಪುಟ ೧೫೮ರಲ್ಲಿ) ಇದೆ. ಇವುಗಳಿರುವ ಪುಸ್ತಕವು ೧೭೬೭ನೆಯ ಶಕೆಯಲ್ಲಿ ಬರೆದದ್ದೆಂದು ಹೇಳಲಾಗಿದೆ.

ಕಾಲಟಾಖ್ಯೇ ಗ್ರಾಮವರ್ಯೇ ಕೇರಲಾಲಙ್ಕೃತೀಕೃತೇ ।
ವಿದ್ಯಾಧಿರಾಜನಾಮ್ನಾ ಯಃ ಪ್ರಾಜ್ಞಃ ಶಿವಗುರುರ್ಬಭೌ ॥
ತತಃ ಸದಾಶಿವಃ ಶಮ್ಭುರ್ಲೋಕಾನುಗ್ರಹತತ್ಪರಃ ।
ತಪೋಮಹಿಮ್ನಾ ತತ್ಪತ್ನ್ಯಾಂ ಪ್ರವಿವೇಶ ಸ್ವತೇಜಸಾ ॥
ಸಾ ದಧಾರ ಸತೀ ಗರ್ಭಮಾದಿತ್ಯಸಮತೇಜಸಮ್ ।
ವ್ಯಜಾಯತ ಶುಭೇ ಕಾಲೇ ಪಞ್ಚಮೇ ಚಿತ್ತಗ್ರಹಸಂಯುತೇ ॥

X X X X

ಆನನ್ದಂ ಬಾನ್ಧವಾಃ ಸರ್ವೇ ಪುಷ್ಪವರ್ಷೈರ್ದಿವಶ್ಚ್ಯುತಃ (?) ।
ಶನ್ಮೋರ್ವರಮನುಸ್ಮೃತ್ಯ ಪಿತಾ ಶಿವಗುರುಃ ಕಿಲ ॥
ಅಯುಷೋ ಹ್ರಸ್ವತಾಂ ಜಾನನ್ನಪಿ ನೋವಾಚ ಕಿಞ್ಚನ ।
ಸರ್ವಜ್ಞತ್ವಾದಿಸುಗುಣಾನ್ ಶಮ್ಭೂಕ್ತಾಂಸ್ತಸ್ಯ ಸಂಸ್ಮರನ್ ॥

X X X X

ತಸ್ಯ ಶಙ್ಕರ ಇತ್ಯಾಖ್ಯಾಂ ಚಕ್ರೇ ಶಿವಗುರುಸ್ತತಃ ।

X X X X

ಪಞ್ಚವರ್ಷಸ್ಯ ವರ್ಣಾದಿಗ್ರಹಣೇನಾಸ್ಯ ಧೀಮತಃ ।
ಉಪನೀತಿಮಕೃತ್ವೈವ ಮುಮೂರ ಮುಹಿತಃ ಪಿತಾ ॥

ವಿಶೇಷ : ಇಲ್ಲಿ 'ಕಾಲಾಟಾಖ್ಯೇ' ಎಂಬ ಶ್ಲೋಕವು ನಾವು ಹಿಂದಿನ ಪರಿಶಿಷ್ಟದಲ್ಲಿ ಉದಾಹರಿಸಿರುವ 'ಬೃಹಚ್ಛಂಕರವಿಜಯ'ದ ೩ನೆಯ ಪ್ರಕರಣದ ಮೊಟ್ಟಮೊದಲನೆಯ ಶ್ಲೋಕವೇ ಆಗಿದೆ. 'ತತ. ಸದಾಶಿವಃ' ಎಂಬ ಶ್ಲೋಕವು ಅದೇ ಪ್ರಕರಣದ ೨ನೆಯ ಶ್ಲೋಕಹಲ್ಲಿದೆ. 'ತಪೋಮಹಿಮ್ನಾ' ಎಂಬ ಶ್ಲೋಕವು ಅಲ್ಲಿ ೪ನೆಯ ಶ್ಲೋಕದಲ್ಲಿದೆ. 'ಸಾ ದಧಾರ' ಎಂಬ ಶ್ಲೋಕವೂ ಅದೇ ೪ನೆಯ ಶ್ಲೋಕದಲ್ಲಿದೆ. ('ಪಞ್ಚವರ್ಷಸ್ಯ' ಎಂಬ ಶ್ಲೋಕದ ವಿಷಯಕ್ಕೆ ಚರಿತ್ರೆಯ ಪುಡ ೩೭ರಲ್ಲಿ ಹೇಳಿರುವದನ್ನು ನೋಡಿರಿ.) ಈ ಹೊಲಿಕೆಗಳನ್ನು ಮನದಂದನೆ ಬೃಹಚ್ಛಂಕರವಿಜಯ, ಚಿದ್ವಿಲಾಸ, ಈ ಪ್ರಾಚೀನಪಾಠದ ನಿರ್ಮಾಪಕ–ಇವರು ಮೂರರಲ್ಲಿ ಯಾರೋ ಮತ್ತೊಬ್ಬರಿಂದ ವಿಷಯವನ್ನು ತೆಗೆದು ಕೊಂದಿದಾರೆಂದು ನಿಶ್ಚಿತವಾಗುತ್ತದೆ. ನಮ್ಮ ಅಭಿಪ್ರಾಯದಲ್ಲಿ ಈ ಪ್ರಾಚೀನಪಾಠವು ಯಾರೋ ಅರ್ವಾಚೀನರ ಕೈವಾಡದಿಂದ ಕೈಬರಹದ ಪುಸ್ತಕದಲ್ಲಿ ಸೇರಿರಬೇಕು. ಎನ್ನಿಸುತ್ತದೆ. ಶೋಧನಾಕಾರ್ಯದಲ್ಲಿ ನಿಪುಣರಾದ ವಿದ್ವಾಂಸರು ಇದರ ನಿಜವನ್ನು ಗೊತ್ತು ಪಡಿಸಬೇಕು.

(ಆ) ಆನಂದಗಿರೀಯದಲ್ಲಿರುವ ಪಾಠಾಂತರಗಳು

ಕಲಕತ್ತೆಯಲ್ಲಿ ಅಚ್ಚಾಗಿರುವ ದೇವನಾಗರಿಯ ಪ್ರತಿಗೂ ತೆಲುಗುಪ್ರತಿಗೂ ಇರುವ ಮುಖ್ಯಪಾಠಭೇದಗಳನ್ನು ಕಾಂಚೀಮಠದ ಪ್ರತಿವಾದಿಗಳು ತೋರಿಸಿ ಇದನ್ನು ಮಠದವರೇ ಸೇರಿಸಿರುತ್ತಾರೆನ್ನುತ್ತಾರೆ.

ಕಲಕತ್ತೆ		ತೆಲುಗು
ಪ್ರ ೫೫ ಪು ೧೭೯	ತಲ್ಲಾದಾದಜ್ಞಾನುವಲನ್ಬ ೪ ೪೫	ಪು ೨೦೯
ಪ್ರ ೫೫ ಪು ೧೮೦	ಸ ತು ನಾರಾಯಣಃ	ಪು ೨೧೦
ಪ್ರ ೬೨ ಪು ೧೯೦	ತತಃ ಪರಂ ಸತಸವಾಣೀಂ	ಪು ೨೨೩
ಪ್ರ ೬೩ ಪು ೧೯೧	ತತ್ರೈವ ಪರನುಗುರುವರ್ವಾದಶಾಬ್ದ	ಪು ೨೨೫
ಪ್ರ ೬೫ ಪು ೧೯೬	ತಸ್ಮಾತ್ ಸರ್ವೇಷಾಂ	ಪು ೨೩೧
ಪ್ರ ೬೭ ಪು ೨೦೩	ನಿಜಶಿಷ್ಯಪರಂಪರಾಂ ಶೃಙ್ಗಗಿರಿಸ್ಥಾನಸ್ಥಾಂ ಕೃತ್ವಾ	ಪು ೨೦೪
ಪ್ರ ೬೪ ಪು ೨೦೬	ಪತಃ ಪರಂ ಸರ್ವಜ್ಞಃ	ಪು ೨೫೫

ವಿಶೇಷ: ಈ ತೆಲುಗುಪ್ರತಿಯಲ್ಲಿ ಲಿಂಗದ ವಿಚಾರಗಳೂ ಕಾಂಚಿಯ ವಿಚಾರವೂ ಬಾವಿವೆ. ಆದ್ದರಿಂದ ಕಾಂಚೀಪರಂಪರೆಯ ಅನುಯಾಯಿಗಳ ಬದಲಾವಣೆಯಿಂದು ಎಂದೇ ಹೇಳಬೇಕಾಗಿದೆ. ಅವರೆ ಕಾಂಚೀಪೀಠದ ಅಭಿನವಾನಗಳಾದ ಎನ್. ವೆಂಕಟರಾಮನ್ ರವರು ಇದು ಪ್ರಕ್ಷಿಪ್ತವು, ನಿರುಪಯೋಗಿಗ್ರಂಥವೆಂದು ಸ್ಪಷ್ಟವಾಗಿ ಹೇಳಿಬಿಟ್ಟಿದಾರೆ! (NVSSK p 107).

---

೭. ಕೂಷ್ಮಾಂಡಶಂಕರವಿಜಯ

(ಚರಿತ್ರೆ. ಪುಟ. ೪೨, ೪೩–೧೦೯)

ಶಂಕರಭಗವತ್ಪಾದರವರ ಚರಿತ್ರೆಯ ವಿಷಯಗಳನ್ನು ಸಂಗ್ರಹಿಸುವಾಗ ಈ ಗ್ರಂಥವು ನಮಗೆ ದೊರೆತಿರಲಿಲ್ಲ. ಸೋಮನಾಥಯ್ಯನವರು (ಸೋ ಶಂ. ಪೀ. ೨೧೧) ಬರೆದಿದ್ದ ಅನುಬಂಧಾಂಶವನ್ನು ನೋಡಿ ನಮ್ಮ ಅಭಿಪ್ರಾಯಗಳನ್ನು ಬರೆದಿದ್ದೆವು. ಈಪ ನನುಗೆ ಪೂರ್ಣಗ್ರಂಥವು ದೊರಕಿದೆ. ಆದರೆ ನನ್ನ ಅಭಿಪ್ರಾಯವೇನೂ ಅದರ ವಿಷಯಕ್ಕೆ ಮಾರ್ಪಟ್ಟಿಲ್ಲ.

ಗ್ರಂಥಕ್ಕೆ ಸಂಕ್ಷಿಪ್ತ ಶ್ರೀಶಙ್ಕರಕೃಥಾಮೃತಸಾರವೆಂಬ ಹೆಸರನ್ನು ಕೊಟ್ಟು ಎಡತೊರೆಯ ಪೀಠಾಧಿಪರಾಗಿದ್ದ ಶ್ರೀ ಯೋಗಾನಂದಸ್ವಾಮಿಗಳವರು 1905ರಲ್ಲಿ ಪ್ರಕಟಿಸಿದರು. ಬೆಂಗಳೂರು ಬುಕ್ಕುಡಿಪೋ ಮುದ್ರಾಕ್ಷರ ಶಾಲೆಯಲ್ಲಿ ಆಚ್ಚಾಗಿದ್ದ ಪುಸ್ತಕವನ್ನು ನೋಡಿ ನಾವು ಪ್ರತಿಲಿಪಿಯನ್ನು ಮಾಡಿ ಕೊಂಡಿರುತ್ತೇವೆ. ಮೂಲದಲ್ಲಿ 'ಶ್ರೀಶಙ್ಕರವಿಜಯೆಸಂಗ್ರಹೇ ಈಶ್ವರೋಪದೇಶೋ ನಾಮ ಪ್ರಥಮೋಽಧ್ಯಾಯಃ' ಎಂದು ಇರುವದರಿಂದ ಇದನ್ನು ಶಂಕರವಿಜಯೆಸಂಗ್ರಹವೆಂದು ಗ್ರಂಥಕರ್ತನು ಕರೆದಿರುತ್ತಾನೆಂಬುದು ಸ್ಪಷ್ಟ. ಆದರೂ ಈ ಗ್ರಂಥಕ್ಕೆ ಕೂಷ್ಮಾಂಡಶಂಕರವಿಜಯವೆಂದೇ ಹೆಸರು ರೂಢಿಯಲ್ಲಿದೆ. ಇದರ ಕೆಲವು ಶ್ಲೋಕಗಳನ್ನು ಇಲ್ಲಿ ಉದಾಹರಿಸುವೆವು. ಶ್ಲೋಕಸಂಖ್ಯೆ ನಮ್ಮದು; ಅಚ್ಚಿನಲ್ಲಿಲ್ಲ.

೧೩ನೆಯ ಅಧ್ಯಾಯ

ಪುರಾ ಭೂಮಂಡಲೇ ಕಶ್ಚಿದ್ದೇಶಃ ಕೇರಲಸಂಜ್ಞಕಃ |
ಧನಧಾನ್ಯಸಮೃದ್ಧಶ್ಚ ಸಂವೃತೋ ಬಹುಭಿರ್ಜನೈಃ ॥ ೪ ॥
ಇಲಾ ನಾಮ ನದೀ ತತ್ರ ಸರ್ವಪಾಪಪ್ರಣಾಶಿನೀ |
ಮರುದ್ವೃಧಾ ನಾಮ ಮಹಾ[1] ತಟಿನೀ ಚ ವಿರಾಜಿತಾ ॥ ೫ ॥
ಚೂರ್ಣೇತಿ[2] ಪ್ರಥಿತಾ ಲೋಕೇ ತಟಿನೀ ಪುಣ್ಯದಾ ಪರಾ |
ದೇವಾಲಯಾ ಅಶ್ರಮಾಶ್ಚ ತತ್ತೀರೇ ನಿವಸನ್ತಿ ಹಿ ॥ ೬ ॥
ಪ್ರಖ್ಯಾತಂ ಪೃಥಿವೀಮಧ್ಯೇ ಪದ್ಮನಾಭಸ್ಯ ಮನ್ದಿರಮ್ |
ಸರ್ವೇಷಾಮೇವ ಲೋಕಾನಾಂ ದರ್ಶನಾದೇವ ಮುಕ್ತಿದಮ್ ॥ ೭ ॥
ಮಹತ್ತತ್ರ ಪ್ರವಿಖ್ಯಾತಂ ಕ್ಷೇತ್ರಂ ಕಾಲಟಿಸಂಜ್ಞಯಾ |
ಪುಷ್ಪಿತೈಃ ಫಲಿತೈರ್ವೃಕ್ಷೈರ್ವಿವಿಧೈರುಪಶೋಭಿತಮ್ ॥ ೮ ॥
ಕೈಲಾಸಾಧಿಪತಿಶ್ಶಮ್ಭುಃ ಕದಾಚಿದ್ವೀಕ್ಷಣೇಚ್ಛಯಾ |
ಸರ್ವಲಕ್ಷಣಸಂಪನ್ನೋ ಭಿಕ್ಷುರೂಪಂ[3] ಸಮಾಶ್ರಿತಃ) ॥ ೯ ॥
ಚರನ್ ಕಲಿಯುಗೇ ಭೂಮೌ ಜನಾನ್ ಪಾಪರತಾನ್ ಬಹೂನ್ |
ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನ್ ಸ್ವಧರ್ಮಾಚಾರವರ್ಜಿತಾನ್ ॥ ೧೦ ॥
ವೇದಾಗ್ನಿಹೋತ್ರೈಹೀನಾಂಶ್ಚ ದೃಷ್ಟ್ವಾ ಶಮ್ಭುರ್ಮಹೀತಲೇ |
ವಿಲೋಕ್ಯ ಕಾಲಟೀಕ್ಷೇತ್ರಂ ಸುಪ್ರಶಸ್ತಂ ಮನೋಹರಮ್ ॥ ೧೪ ॥
ಅವಿಭ್ರೂಯಾತ್ರ ದುಷ್ಟಾನಾಂ ಕರ್ತವ್ಯೋ ನಿಗ್ರಹೋ ಮಯಾ |
ಇತ್ಯಾಲೋಚ್ಯ ತದಾ ಸ್ನಾತ್ವಾ ಕಾಲಟೀಕ್ಷೇತ್ರಮಾವಿಶತ್ ॥ ೧೫ ॥
ತದಾನೀಂ ಶಾನ್ತ[4]ಯತಿನಂ ದೃಷ್ಟ್ವೈವ ಗತಭರ್ತೃಕಾ[5] |
ದೇವಪೂಜಾಪರಾ ನಿತ್ಯಂ ಶಿವಭಕ್ತಿಪರಾಯಣಾ ॥ ೧೬ ॥
ಪ್ರಾತಃಸ್ನಾನಾರ್ಥಮಾಯಾನ್ತೀ ಭಿಕ್ಷುರೂಪಧರಂ ಶಿವಮ್ |
ಪ್ರಣಿಪತ್ಯಾಥ ಪಪ್ರಚ್ಛ ಕಸ್ಮಾದ್ದೇಶಾತ್ ಸಮಾಗತಃ ॥ ೧೭ ॥
ಅಗತೋಽಹಂ[6] ಮಹಾಭಾಗೇ ಕೈಲಾಸಾಧಿಪತಿಃ ಶಿವಃ |
ಅವಿಭ್ರವಾಮಿ ಚಾತ್ರೈವ ಸೇವಾಂ ಕರ್ತುಮಿಹಾರ್ಹಸಿ ॥ ೧೮ ॥

1, 'ತಥಾ ತಟಿನೀ' ಪಾ॥
2. 'ಪೂರ್ಣಾ' ಎಂಬ ಹೆಸರಿಲ್ಲ; 'ಮರುದ್ವೃಧಾ' ಎಂದಿರುವದನ್ನು ಲಕ್ಷಿಸಬೇಕು
3. ಈಶ್ವರನು ಸಂನ್ಯಾಸಿಯ ರೂಪದಲ್ಲಿ ಬಂದನೆಂದು ಇಲ್ಲಿ ಹೇಳಿದೆ,
4. 'ಇದಾನೀಂ ಸರ್ವ (ಶರ್ವ ") ಯತಿನಂ' ಪಾ॥
5, ತಾಯಿಯು ವಿಭವ ಎಂದಿರುವದನ್ನೂ ಲಕ್ಷಿಸಬೇಕು
6. 'ಅಗತೋಽಯಂ' ಪಾ॥

ಇತ್ಯುಕ್ತ್ವಾ ಖಲು ಕೂಷ್ಮಾಣ್ಡ ಬೀಜಮೇಕಂ ಪ್ರದಾಯ ಚ ।
ತದ್ರಕ್ಷಣಾಯ ಯತ್ನೇನ ಸ್ತವ್ಭಮೂಲೇ ಪ್ರಣಿಕ್ಷಿಪ ॥ ೧೯ ॥
ಜಲಮಾಸಿಞ್ಚ[1] ತನ್ಮೂಲೇ ವಲ್ಲೀಂ ಪುಷ್ಪಂ ಫಲಂ ತಥಾ ।
ಮಾ[2] ಚ್ಛೈದಯ ಫಲಂ ಪಕ್ವಂ ಸ್ವಯಮೇವ ಪತಿಷ್ಯತಿ ॥ ೨೦ ॥
ಇತ್ಯುಕ್ತ್ವಾನ್ತರ್ದಧೇ ಶಮ್ಭುಃ ಕೈಲಾಸಮಗಮತ್ ಕ್ಷಣಾತ್ ॥

X X X X

ಇತಿ ಶ್ರೀಶಙ್ಕರವಿಜಯಸಙ್ಗ್ರಹೇ, ಈಶ್ವರೋಪದೇಶೋ ನಾಮ ಪ್ರಥಮೋಽಧ್ಯಾಯಃ

ಈ ಅಧ್ಯಾಯದಲ್ಲಿ ೨೨ ಶ್ಲೋಕಗಳಿವೆ.

೨ನೆಯ ಅಧ್ಯಾಯ

ಸಾ ಬೀಜಂ ಚ ತತಃ ಸಮ್ಯಕ್ ಸ್ತವ್ಭಮೂಲೇ ನಿಧಾಯ ಚ ।
ಜಲಮಾಸಿಞ್ಚ್ಯ(ಚ್ಯ ?) ಯತ್ನೇನ ರರಕ್ಷ ಸುಚಿರಂ ಮುದಾ ॥ ೧ ॥
ಫಲಮೇಕಂ ತದಾ ಪಕ್ವಂ ಸ್ತವ್ಭಾಗ್ರಾನ್ನಿಪಪಾತ ಹ ।
ಫಲೇ ಚ ಪತಿತೇ ತತ್ರ ಮಹಾಪುರುಷಮಾಶ್ವರಮ್ ॥ ೨ ॥
ದೃಷ್ಟ್ವಾ ಬಾಲಕಮಾದಾಯ ಸಂರರಕ್ಷ[3] ಪ್ರಯತ್ನತಃ ।
ತದಾನೀಂ ಬಾಲರುದಿತಂ ಶ್ರುತ್ವಾ ತತ್ರಾಖಿಲಾ ಜನಾಃ ॥ ೩ ॥
ಆಗತ್ಯ ತದ್ಗೃಹಂ ಶೀಘ್ರಂ ಸಬಾಲಾಂ ತಾಮಥಾಬ್ರುವನ್ ।
ಆಪುತ್ರ್ಯಾಯಾಸ್ತವ ಕಥಂ ಬಾಲ ಏಷ ಸಮಾಗತಃ ॥ ೪ ॥
ಇತ್ಥಂ ಜನೋದಿತಂ[4] ಶ್ರುತ್ವಾ ಸಾಽಬ್ರವೀತ್ ಭಯವಿಹ್ವಲಾ ।
ಇಹಾಗತ್ಯ ಯತಿಃ ಕಶ್ಚಿತ್ತು ಬೀಜಮೇಕಂ ಪ್ರದತ್ತವಾನ್ ॥ ೫ ॥
ರಕ್ಷೇತ್ಯವೋಚನ್ಮಹ್ಯಂ ತದ್ರಕ್ಷಿತಂ ಚ ಮಯಾದರಾತ್ ।
ತತ್ರ ಜಾತಾತ್ ಫಲಾತ್ತದ್ವತ್[5] ಪತಿತಾದೇಷ ಬಾಲಕಃ ॥ ೬ ॥
ಲಬ್ಧಶ್ಚಾನ್ಯನ್ನ ಜಾನೇಽಹಮಿತಿ ಶ್ರುತ್ವಾ ಚ ತೇ ಜನಾಃ ।
ನಾರೀಂ ನಿರ್ಭರ್ತ್ಸ್ಯ ಕೋಪೇನ ಸರ್ವೇಽಪಿ ಸ್ವಗೃಹಂ ಯಯುಃ ॥ ೭ ॥
ತತಃ ಸಾ ಬಾಲಕಂ ಸಮ್ಯಗತಿಹರ್ಷಾದಪಾಲಯತ್ ।
ಏತಸ್ಮಿನ್ನನ್ತರೇ ಕಾಲೇ ಸಮಾಗತ್ಯ ಬೃಹಸ್ಪತಿಃ ॥ ೮ ॥
ವೇದಶಾಸ್ತ್ರಪುರಾಣಾನಿ ಸರ್ವಾಣ್ಯುಪದಿದೇಶ ಹ ।
ತತಃ ಸ ವೇದಶಾಸ್ತ್ರಾರ್ಥಪುರಾಣಾದಿಷು ದಕ್ಷತಾಮ್ ॥ ೯ ॥
ಆಗನುಚ್ಚ ತತಃ ಸಮ್ಯಗ್ವಿಜ್ಞಾನೀ ತದಾಽಭವತ್ ।
ತತಃ ಸಂನ್ಯಾಸಮಾದಾಯ ಯಾತೋ ವೈ ಗುರುಸಂನಿಧಿಮ್ ॥ ೧೦ ॥
ಗೌಡಪಾದಾಭಿಧಾನಸ್ಯ ಶಿಷ್ಯಃ ಸರ್ವವಿದಾಂ ವರಃ ।
ಗೋವಿನ್ದಭಗವಾನ್ ಪ್ರೀತ್ಯಾ ಬಾಲಸ್ಯೋಪಾದಿಶನ್ನನುಮ್ ॥ ೧೧ ॥

1, 'ಬಿಲಮಾಸೀಚ್ಚ' ಪಾ॥ 2, 'ನ'
3. 'ಸಮರಕ್ಷತ' ಪಾ॥ 4, 'ಜನವಚಃ' 5, 'ಸದ್ಯಃ' ಪಾ॥

ಕುಂಬಳಕಾಯಲ್ಲಿ ಹುಟ್ಟಿದ್ದ ಮಗುವಿಗೆ ಬೃಹಸ್ಪತಿಯು ಉಪದೇಶ, ಗೋವಿಂದ ಭಗವತ್ಪಾದರ ನುಂತ್ರೋಪದೇಶ --ಇವುಗಳನ್ನು ಗಮನಿಸಿರಿ.

ಈ ಅಧ್ಯಾಯದಲ್ಲಿ ೧೨ ಶ್ಲೋಕಗಳಿವೆ.

೩ನೆಯ ಅಧ್ಯಾಯ

ಆಚಾರ್ಯರು ಬದರಿಗೆ ಹೋಗಿ ಭಾಷ್ಯವನ್ನು ರಚಿಸಿ ತಾಯಿಯು ಸ್ಮರಿಸಿದ್ದರಿಂದ ಊರಿಗೆ ಬಂದರು. ಅಲ್ಲಿ ಬ್ರಾಹ್ಮಣರು ದಹನಕ್ರಿಯೆಗೆ ಸಹಾಯಮಾಡದಿರಲು ದೇವತೆಗಳನ್ನು (?) ಕರೆಯಿಸಿ ಅವರಿಂದ ಕ್ರಿಯೆಯನ್ನು ಮಾಡಿಸಿದರು. ಬಳಿಕ ಬದರಿಗೆ ಹೋಗಿ ವಿಷ್ಣುಶರ್ಮನೆಂಬ ಬ್ರಾಹ್ಮಣನಿಗೆ ಸಂನ್ಯಾಸವನ್ನು ಕೊಟ್ಟರು. ಪ್ರಯಾಗದಲ್ಲಿ ಹಸ್ತಾಮಲಕನು ಶಿಷ್ಯನಾದನು. ತೋಟಕನು ಮೂರನೆಯ ಶಿಷ್ಯನು. - ಕಾಪಾಲಿಕಾದಿದುಷ್ಟಮತದವರನ್ನು ವಾದದಲ್ಲಿ ಜಯಿಸಿ ವರ್ಣಾಶ್ರಮಧರ್ಮವನ್ನು ಸ್ಥಾಪಿಸಿದರು -ಎಂಬುದು ಮೂರನೆಯ ಅಧ್ಯಾಯದ ಸಾರ. ಈ ಅಧ್ಯಾಯದಲ್ಲಿ ೨೦ ಶ್ಲೋಕಗಳಿವೆ.

೪ನೆಯ ಅಧ್ಯಾಯ

ಅಲ್ಲಿಂದ ಆಚಾರ್ಯರು ಸಿದ್ಧ(?)ಪುರಿಗೆ ಹೋದರು ; ಅಲ್ಲಿ ಸಂನ್ಯಾಸಾಶ್ರಮದೂಷಕನಾದ ಮಂಡನವಿಶ್ರನೆಂಬ ಬ್ರಾಹ್ಮಣನಿದ್ದನು. ಅವನ ಹೆಂಡತಿ ಸುಶೀಲೆ. ಶ್ರಾದ್ಧದ ದಿನ ಆಚಾರ್ಯರು ಸಾಲಗ್ರಾಮಸ್ಥಾನದಲ್ಲಿ ಕಾಲುಚಾಚಿರಲು 'ಕುತೋ ಮುಂಡೀ' ಮುಂತಾಗಿ ವಾದಕ್ಕೆ ಅವಕಾಶ ವಾಯಿತು. ಈ ಸಂದರ್ಭದಲ್ಲಿ ಮಾಧವೀಯದ ಶ್ಲೋಕಗಳು (೭ರಿಂದ೨೫ರವರೆಗೆ) ಬಂದಿವೆ. ಮುಂದೆ ವ್ಯಾಸರ ವಚನದಂತೆ ಭಿಕ್ಷೆಗೆ ಆಚಾರ್ಯರನ್ನು ಕರೆದನು. (ಈ ಭಾಗವು ವಚನದಲ್ಲಿದೆ). ಮುಂದಿನ ಪಾದಭಾಗವು ಚಿದ್ವಿಲಾಸೀಯವನ್ನು ಹೋಲುತ್ತಿದೆ. ಈ ಅಧ್ಯಾಯದಲ್ಲಿ ೩೭ ಶ್ಲೋಕಗಳಿವೆ.

೫ನೆಯ ಅಧ್ಯಾಯ

ಇದರಲ್ಲಿ ವಾಣಿಯೊಡನೆ ಕಾಮುಕಲೆಯಲ್ಲಿ ವಾದಮಾಡಿದ ವೃತ್ತಾಂತವಿದೆ. ವಾದವು ಆದಬಳಿಕ

ಸಮಾಸ್ಥಿತೈಃ ಸಭಾಸದ್ಭಿರತ್ಯರ್ಥಂ ಮಾನಿತಸ್ತದಾ ।
ವಾಣೀಂ ಪ್ರಾಹ ಮುದಾ ಯುಕ್ತಃ ಸಮಾಗಚ್ಛ ಮಯಾ ಸಹ ॥ ೮ ॥
ಇತಿ ಶ್ರುತ್ವಾ ಗುರೋರ್ವಾಕ್ಯಂ ವಾಣೀ ತು ತಮುಭ್ಯಾಷತ ।
ಅಗಚ್ಛಾವಿ ತ್ವಯಾ ಸಾರ್ಧಂ ಪಶ್ಚಾನ್ಮಾಂ ನಾವಲೋಕಯ ॥ ೯ ॥
ಅಲೋಕಯಸಿ ಚೇತ್ತ್ವಂ ಹಿ ಗಚ್ಛಾವಿ ಭವನಂ ಮಮ ।
ತಥೇತ್ಯುಕ್ತ್ವಾ ಪುರೋ ಗಚ್ಛನ್ ಗುರುಃ ಪಂಪಾಪುರಂ ಪ್ರತಿ ॥ ೧೦ ॥

ಅಯಾತಿ ವಾ ನ ವೇತೀತಿ ಪಶ್ಚಾದ್ಭಾಗಂ ಪ್ರದೃಷ್ಟವಾನ್ ।
ತದಾಗತ್ಯ ಗುರುಂ ಗನ್ತುಮನುಜ್ಞಾಂ ದಾತುಮರ್ಹಸಿ ॥ ೧೧ ॥

[ಇಲ್ಲಿಯವರೆಗಿನ ಕಥೆಯ ಸಾರವನ್ನು ಚರಿತ್ರೆಯು ೨೧೨ನೆಯ ಪುಟದಲ್ಲಿ ಬರೆದಿದೆ.]

ಇತ್ಯುಕ್ತ್ವಾ ತು ತದಾಽದೃಶ್ಯಾ ಬ್ರಹ್ಮಲೋಕಮುವಾಪ ಸಾ ।
ಭವಂ ಪ್ರದಕ್ಷಿಣೀಕೃತ್ಯ ಜಿತ್ವಾ ತತ್ರ ಸುದುರ್ಮದಾನ್ ।
ಷಣ್ಮತಂ ಸ್ಥಾಪಯಾಮಾಸ ಪೃಥಿವ್ಯಾಂ ಶಙ್ಕರೋ ಗುರುಃ ॥ ೧೩ ॥
ಶೈವಂ ಚ ವೈಷ್ಣವಂ ಶಾಕ್ತಂ ಸೌರಂ ವೈನಾಯಕಂ ತಥಾ ।
ಸ್ಮಾರ್ತಂ ಚ ಭಕ್ತಿಮಾರ್ಗಂ ಚ (?) ದರ್ಶನಾನಿ ಷಡೇವ ಹಿ ॥ ೧೪ ॥
ಏವಂ ಕ್ರಮೇಣ ಸಕಲಂ ಷಣ್ಮತೋದ್ಧಾರಣಂ ಕೃಮಾತ್ ।
ಕೃತ್ವಾ ಜಿತ್ವಾ ಚ ವಿಮತಾನ್ ರಾಮಸೇತುಮುವಾಪ ಸಃ ॥ ೧೪ ॥
ಸುರೇಶ್ವರಾಭಿದೋ ಯೋಗೀ ಸತ್ಯಲೋಕಮುವಾಪ ಸಃ ।
ಪದ್ಮಪಾದಾಭಿದೋ ಭಿಕ್ಷುಃ ಪ್ರಾಪ್ತವಾನ್ ವೈಷ್ಣವಂ ಪದಮ್ ॥ ೧೫ ॥
ಹಸ್ತಾಮಲಕಸಂಜ್ಞಶ್ತು ಶಕ್ರಲೋಕಮುವಾಪ್ತವಾನ್ ।
ಯಯೌ ತೋಟಕಯೋಗೀ ತು ಸೂರ್ಯಲೋಕಮನುತ್ತಮಮ್
ಏವಂ ಶಿಷ್ಯಾಸ್ತು ಚತ್ವಾರಸ್ತತ್ತದ್ದೇವಾಂಶಸಂಭವಾಃ ।
ಸ್ವಂ ಸ್ವಂ ಸ್ಥಾನಂ ಕ್ರಮೇಣೈವ ಶಙ್ಕರಾನುಗ್ರಹಾದ್ಯಯುಃ ॥ ೧೭ ॥
ಈದೃಶಂ ಶಙ್ಕರಾಚಾರ್ಯಚರಿತಾಮೃತಮದ್ಭುತಮ್ ।
ಶ್ರೋತವ್ಯಂ ಕೀರ್ತಿತವ್ಯಂ ಚ ಭಕ್ತ್ಯಾ ಸರ್ವೈರ್ಮನೀಷಿಭಿಃ ॥ ೧೮ ॥

ಸಕಲಭವನೈಕಕರ್ತಾ ಸರ್ವಪಾಪೈಕಹರ್ತಾ
ಸುಜನನಿಚಯಭರ್ತಾ ಬಾಲಚನ್ದ್ರಸ್ಯ ಧರ್ತಾ ।
ಅಖಿಲಸುಖವಿಧಾತಾ ಸರ್ವಲೋಕೈಕನೇತಾ
ರಜತಗಿರಿಸುಯಾತಾ ಶಙ್ಕರಃ ಶ್ರೇಯಃಪ್ರದಾತಾ ॥

[ಇಲ್ಲಿ ಶಿಷ್ಯರು ಆಯಾ ದೇವತೆಗಳನ್ನು ಸೇರಿದರೆಂದು ಹೇಳಿರುವ ಶ್ಲೋಕಗಳು, ಸೋಮನಾಥಯ್ಯನವರಿಗೆ ಸಿಕ್ಕಿದ್ದವೋ ಇಲ್ಲವೋ ಹೇಳುವದಕ್ಕೆ ಬರುವದಿಲ್ಲ. ಅವರಲ್ಲಿದ್ದ ಪುಸ್ತಕದಲ್ಲಿ ಐದೇ ಅಧ್ಯಾಯಗಳಿದ್ದಂತೆ ಕಾಣುತ್ತದೆ. ನಮ್ಮಲ್ಲಿರುವದರಲ್ಲಿ ೮ ಶ್ಲೋಕಗಳಿರುವ ೭ನೆಯ ಅಧ್ಯಾಯವೂ ಇದೆ. ಅದರಲ್ಲಿ ಪಾಂಡವರು ಐವರೂ ಶಂಕರ, ಪದ್ಮಪಾದ ಸುರೇಶ್ವರ, ಹಸ್ತಾಮಲಕ, ತೋಟಕ– ಈ ಭಿಕ್ಷುಗಳಾದರೆಂದು ಬರೆದಿದೆ !]

ಸೋಮನಾಥಯ್ಯನವರ ಪುಸ್ತಕದಂತೆ ಆಚಾರ್ಯರು ಶಿವಲೋಕಕ್ಕೆ ಹೋದರೆಂದು ಇದೆಯಂತೆ ; ಆ ಶ್ಲೋಕಗಳಿವು :

ತತಃ ಶಿಷ್ಯೈಃ ಪರಿವೃತೋ ವೃಷಾದ್ರೀಶಂ ಗುರುರ್ಯಯೌ ॥ ೧೫ ॥
ಸ್ವಾಯುಷೋಽನ್ತಂ ಸ ವಿಜ್ಞಾಯ ನತ್ವಾ ತತ್ರತ್ಯದೇವತಾಃ ।
ಭಕ್ತ್ಯಾ ಕುರ್ವನ್ ಹರಸ್ತೋತ್ರಂ ಶಿವಲೋಕಮುವಾಪ ಸಃ ॥ ೧೬ ॥

೮. ಆಚಾರ್ಯರ ಚರಿತ್ರೆಗೆ ಸಂಬಂಧಪಟ್ಟ ಸ್ತೋತ್ರಾದಿಗಳು

(೧) ಕನಕಲಕ್ಷ್ಮೀಸ್ತವ ಅಥವಾ ಕನಕಧಾರಾಸ್ತುತಿ

(ಚರಿತ್ರೆ ಪು. ೫೮)

ಅಙ್ಗಂ ಹರೇಃ ಪುಲಕಭೂಷಣಮಾಶ್ರಯನ್ತೀ
ಭೃಙ್ಗಾಙ್ಗನೇವ ಮುಕುಲಾಭರಣಂ ತಮಾಲಮ್ |
ಅಙ್ಗೀಕೃತಾಖಿಲವಿಭೂತಿರಪಾಙ್ಗಲೀಲಾ
ಮಾಙ್ಗಲ್ಯದಾಸ್ತು ಮಮ ಮಙ್ಗಲದೇವತಾಯಾಃ ॥ ೧ ॥
ಮುಗ್ಧಾ ಮುಹುರ್ವಿದಧತೀ ವದನೇ ಮುರಾರೇಃ
ಪ್ರೇಮತ್ರಪಾಪ್ರಣಿಹಿತಾನಿ ಗತಾಗತಾನಿ |
ಮಾಲಾದೃಶೋರ್ಮಧುಕರೀವ ಮಹೋತ್ಪಲೇ ಯಾ
ಸಾ ಮೇ ಶ್ರಿಯಂ ದಿಶತು ಸಾಗರಸಂಭವಾಯಾಃ ॥ ೨ ॥
[1]ಆಮೀಲಿತಾರ್ಧ[2] ಮಧಿಗಮ್ಯ ಮುದಾ ಮುಕುನ್ದ-
ಮಾನನ್ದಕನ್ದ[3] ಮನಿಮೇಷಮನಙ್ಗತನ್ತ್ರಮ್ |
ಆಕೇಕರಸ್ಥಿತಕನೀನಿಕಪಕ್ಷ್ಮನೇತ್ರಂ
ಭೂತ್ಯೈ ಭವೇನ್ಮಮ ಭುಜಙ್ಗಶಯಾಙ್ಗನಾಯಾಃ ॥ ೩ ॥
ಬಾಹ್ವನ್ತರೇ ಮಧುಜಿತಃ ಶ್ರಿತಕೌಸ್ತುಭೇ ಯಾ
ಹಾರಾವಲೀ ಚ[4] ಹರಿನೀಲಮಯೀ[5] ವಿಭಾತಿ |
ಕಾಮಪ್ರದಾ ಭಗವತೋಽಪಿ ಕಟಾಕ್ಷಮಾಲಾ
ಕಲ್ಯಾಣಮಾವಹತು ಮೇ ಕಮಲಾಲಯಾಯಾಃ ॥ ೪ ॥
ಕಾಲಾಮ್ಬುದಾಲಿಲಲಿತೋರಸಿ ಕೈಟಭಾರೇ
ರ್ಧಾರಾಧರಂ[6] ಸ್ಫುರತಿ ಯಾ ತಟಿದಙ್ಗನೇವ[7] |
ಮಾತುಃ ಸಮಸ್ತಜಗತಾಂ ಮಹನೀಯಮೂರ್ತಿಃ
ಭದ್ರಾಣಿ ಮೇ ದಿಶತು ಭಾರ್ಗವನನ್ದನಾಯಾಃ ॥ ೫ ॥
ಪ್ರಾಪ್ತಂ ಪದಂ ಪ್ರಥಮತಃ ಖಲು ಯತ್ಪ್ರಭಾವಾ-
ನ್ಮಾಙ್ಗಲ್ಯಭಾಜಿ ಮಧುಮಾಥಿನಿ ಮನ್ಮಥೇನ |

---

1. ಇದು ಕೆಲವು ಪಾಠಗಳಲ್ಲಿ ನಾಲ್ಕನೆಯದು.
2. ಆಮೀಲಿತಾಕ್ಷ ಪಾ॥ 3. ಆನನ್ದಕನ್ದ 4. ಹಾರಾವಲೀವ 5. ನೀಲಿಯಾ
6. ಧಾರಾಧರೇ 7. ಯುತ್ತಟಿದಙ್ಗನೇವ

ಮಯ್ಯಾಪತೇತ್ತದಿಹ ಮನ್ದರಮಾಕ್ಷಣಾರ್ಥಂ
ಮನ್ಥಾಲಸಾಕ್ಷಿ[1] ಮಕರಾಕರ[2] ಕನ್ಯಕಾಯಾಃ ॥ ೬ ॥
[3]ವಿಶ್ವಾಮರೇನ್ದ್ರಪದವಿಭ್ರಮದಾನದಕ್ಷ-
ಮಾನನ್ದಹೇತುರಧಿಕಂ ಮಧು[4] ವಿದ್ವಿಷೋಽಪಿ
ಈಷನ್ನಿಷೀದತು ಮಯಿ ಕ್ಷಣಮಾಕ್ಷಣಾರ್ಧ-
ಮಿನ್ದೀವರೋದರಸಹೋದರಮಿನ್ದಿರಾಯಾಃ ॥ ೭ ॥
[5]ಇಷ್ಟಾವಿಶಿಷ್ಟಮತಯೋಽಪಿ ನರಾ ಯಯಾ ದ್ರಾ-[6]
ಗ್ದೃಷ್ಟಾಸ್ತ್ರಿವಿಷ್ಟಪಪದಂ ಸುಲಭಂ ಲಭನ್ತೇ ।
ದೃಷ್ಟಿಃ ಪ್ರಹೃಷ್ಟಕಮಲೋದರದೀಪ್ತಿರಿಷ್ಟಾಂ
ಪುಷ್ಟಿಂ ಕೃಷೀಷ್ಟ ಮಮ ಪುಷ್ಕರವಿಷ್ಟರಾಯಾಃ ॥ ೮ ॥
[7]ದದ್ಯಾದ್ದಯಾನುಪವನೋ ದ್ರವಿಣಾಮ್ಬುಧಾರಾ-
ಮಸ್ಮಿನ್ನ ಕಿಞ್ಚನ ವಿಹಙ್ಗಶಿಶೌ ವಿಷಣ್ಣೇ ।
ದುಷ್ಕರ್ಮಘರ್ಮಮಪಹಾಯ[8] ಚಿರಾಯ ದೂರಾ-[9]
ನ್ನಾರಾಯಣಪ್ರಣಯಿನೀನಯನಾಮ್ಬುವಾಹಃ ॥ ೯ ॥
ಗೀರ್ದೇವತೇತಿ ಗರುಡಧ್ವಜಭಾಮಿನೀತಿ[10]
ಶಾಕಮ್ಭರೀತಿ ಶಶಿಶೇಖರವಲ್ಲಭೇತಿ ।
ಸೃಷ್ಟಿಸ್ಥಿತಿಪ್ರಲಯಸಿದ್ಧಿಷು[11] ಸಂಸ್ಥಿತಾಯೈ
ತಸ್ಯೈ ನಮಸ್ತ್ರಿಭುವನೈಕಗುರೋಸ್ತರುಣ್ಯೈ ॥ ೧೦ ॥
ಶ್ರುತ್ಯೈ ನಮೋಽಸ್ತು ಶುಭಕರ್ಮಫಲಪ್ರಸೂತ್ಯೈ
ರತ್ಯೈ ನಮೋಽಸ್ತು ರಮಣೀಯಗುಣಾಶ್ರಯಾಯೈ[12] ।
ಶಕ್ತ್ಯೈ ನಮೋಽಸ್ತು ಶತಪತ್ರನಿಕೇತನಾಯೈ
ಪುಷ್ಟ್ಯೈ ನಮೋಽಸ್ತು ಪುರುಷೋತ್ತಮವಲ್ಲಭಾಯೈ ॥ ೧೧ ॥
ನಮೋಽಸ್ತು ನಾಲೀಕನಿಭಾನನಾಯೈ
ನಮೋಽಸ್ತು ದುಗ್ಧೋದಧಿಜನ್ಮಭೂಮ್ಯೈ ।
ನಮೋಽಸ್ತು ಸೋಮಾಮೃತಸೋದರಾಯೈ
ನಮೋಽಸ್ತು ನಾರಾಯಣವಲ್ಲಭಾಯೈ ॥ ೧೨ ॥

---

1. ಮನ್ಥಾಲಸಂ ಚ ಪಾ॥ 2. ಮಕರಾಲಯ ಪಾ॥
3. ಇದು ಕೆಲವು ಪಾಠಗಳಲ್ಲಿ ಮೂರನೆಯದು. 4. ಮುರವಿದ್ವಿಷೋಽಪಿ ಪ್ರಾ
5. ಕೆಲವು ಪಾಠಗಳಲ್ಲಿ ೯ನೆಯದು. 6. ಯಯಾ ದಯಾರ್ದ್ರದೃಷ್ಟ್ಯಾ ಪಾ॥
7. ಕೆಲವು ಪಾಠಗಳಲ್ಲಿ ಎಂಟನೆಯದು. 8. ದುಷ್ಕರ್ಮಘರ್ಮಮಪನೀಯ
9. ದೂರಮ್ 10. ಸುನ್ದರೀತಿ ಪಾ॥ 11. ಕೇಲಿಷು 12. ಗುಣಾರ್ಣವಾಯೈ॥

ನಮೋಽಸ್ತು ಹೇಮಾಮ್ಬುಜಪೀಠಿಕಾಯೈ
ನಮೋಽಸ್ತು ಭೂಮಣ್ಡಲನಾಯಿಕಾಯೈ ।
ನಮೋಽಸ್ತು ದೇವಾದಿದಯಾಪರಾಯೈ
ನಮೋಽಸ್ತು ಶಾರ್ಙ್ಗಾಯುಧವಲ್ಲಭಾಯೈ ॥ ೧೩ ॥
ನಮೋಽಸ್ತು ದೇವ್ಯೈ ಭೃಗುನನ್ದನಾಯೈ
ನಮೋಽಸ್ತು ವಿಷ್ಣೋರುರಸಿ ಸ್ಥಿತಾಯೈ ।
ನಮೋಽಸ್ತು ಲಕ್ಷ್ಮೈ ಕಮಲಾಲಯಾಯೈ
ನಮೋಽಸ್ತು ದಾಮೋದರವಲ್ಲಭಾಯೈ ॥ ೧೪ ॥
ನಮೋಽಸ್ತು ಕಾನ್ತ್ಯೈ ಕಮಲೇಕ್ಷಣಾಯೈ
ನಮೋಽಸ್ತು ಭೂತ್ಯೈ ಭುವನಪ್ರಸೂತ್ಯೈ ।
ನಮೋಽಸ್ತು ದೇವಾದಿಭಿರರ್ಚಿತಾಯೈ
ನಮೋಽಸ್ತು ನನ್ದಾತ್ಮಜವಲ್ಲಭಾಯೈ ॥ ೧೫ ॥

ವಿಶೇಷ : ೧೩, ೧೪, ೧೫– ಈ ಶ್ಲೋಕಗಳು ಕೆಲವು ಪಾಠಗಳಲ್ಲಿಲ್ಲ. ಮುಂದಕ್ಕೆ ಈ ಕೆಳಗಿನ ಶ್ಲೋಕಗಳನ್ನು ಹೆಚ್ಚಾಗಿ ಪಠಿಸುವದುಂಟು :

ಸಂಪತ್ಕರಾಣಿ ಸಕಲೇನ್ದ್ರಿಯನನ್ದನಾನಿ
ಸಾಮ್ರಾಜ್ಯದಾನವಿಭವಾನಿ ಸರೋರುಹಾಣಿ[1] ।
ತ್ವದ್ವನ್ದನಾನಿ ದುರಿತಾಹರಣೋದ್ಯತಾನಿ
ಮಾಮೇವ ಮಾತರನಿಶಂ ಕಲಯನ್ತು ಮಾನ್ಯೇ ॥ ೧೩ ॥
ಯತ್ಕಟಾಕ್ಷಸಮುಪಾಸನಾವಿಧಿಃ
ಸೇವಕಸ್ಯ ಸಕಲಾರ್ಥಸಂಪದಃ ।
ಸನ್ತನೋತಿ ವಚನಾಙ್ಗಮಾನಸೈ-
ಸ್ತ್ವಾಂ ಮುರಾರಿಹೃದಯೇಶ್ವರೀಂ ಭಜೇ ॥ ೧೪ ॥
ಸರಸಿಜನಯನೇ[2] ಸರೋಜಹಸ್ತೇ
ಧವಲತರಾಂಶುಕಗನ್ಧಮಾಲ್ಯಶೋಭೇ ।
ಭಗವತಿ ಹರಿವಲ್ಲಭೇ ಮನೋಜ್ಞೇ
ತ್ರಿಭುವನಭೂತಿಕರಿ ಪ್ರಸೀದ ಮಹ್ಯಮ್ ॥ ೧೫ ॥
ದಿಗ್ಹಸ್ತಿಭಿಃ ಕನಕಕುಮ್ಭಮುಖಾವಸೃಷ್ಟ
ಸ್ವರ್ವಾಹಿನೀ ವಿಮಲಚಾರು ಜಲಪ್ಲುತಾಙ್ಗೀಮ್ ।
ಪ್ರಾತರ್ನಮಾಮಿ ಜಗತಾಂ ಜನನೀಮಶೇಷ
ಲೋಕಾಧಿನಾಥಗೃಹಿಣೀಮಮೃತಾಬ್ಧಿಪುತ್ರೀಮ್ ॥ ೧೬ ॥

1. ಸರೋರುಹಾಕ್ಷಿ ಪಾ॥ 2. ನಿಲಯೇ ಪಾ॥

ಕಮಲೇ ಕಮಲಾಕ್ಷವಲ್ಲಭೇ ತ್ವಂ
ಕರುಣಾಪೂರತರಙ್ಗಿತೈರಪಾಙ್ಗೈಃ |
ಅವಲೋಕಯ ಮಾಮಕಿಞ್ಚನಾನಾಂ
ಪ್ರಥಮಂ ಪಾತ್ರಮಕೃತ್ರಿಮಂ ದಯಾಯಾಃ || ೧೭ ||
ಸ್ತುವನ್ತಿ ಯೇ ಸ್ತುತಿಭಿರವಿಮಾಭಿರನ್ವಹಂ
ತ್ರಯೀಮಯೀಂ ತ್ರಿಭುವನಮಾತರಂ ರಮಾಮ್ |
ಗುಣಾಧಿಕಾ ಗುರುತರಭಾಗ್ಯಭಾಜಿನೋ
ಭವನ್ತಿ ತೇ ಭುವಿ ಬುಧಭಾವಿತಾಶಯಾಃ || ೧೮ ||

ಇಲ್ಲಿ ಕೊನೆಯಲ್ಲಿ ಕೊಟ್ಟಿರುವ ಶ್ಲೋಕಗಳು ಈ ಸ್ತೋತ್ರಕ್ಕೆ ಸೇರಿದವೋ ಅಲ್ಲವೋ ಹೇಳುವದಕ್ಕೆ ಬರುವಂತಿಲ್ಲ. ಹೇಗಿದ್ದರೂ ಚರಿತ್ರೆಯಲ್ಲಿ ಪರಾಮರ್ಶಿಸಿರುವ ಕಥೆಗೆ ಈ ಸ್ತೋತ್ರವು ಸಂಬಂಧಿಸಿರುವಂತೆ ಕಾಣಿಸುವದಿಲ್ಲ. ಸ್ತೋತ್ರದಲ್ಲಿರುವ ಪ್ರಾಸಾದಿಗಳ ಪ್ರದರ್ಶನವು 'ಪದಚಿತ್ರೈಃ' (ಮಾ.ಶಂ. ೪–೨೫) ಎಂಬ ಮಾಧವೀಯವಚನಕ್ಕೆ ಒಪ್ಪುವಂತಿದೆಯಾದರೂ ಆಚಾರ್ಯರ ಪದ್ಯಗಳ ಶೈಲಿಯಿಲ್ಲ. ಉಪದೇಶಸಾಹಸ್ರಿಯ ಪದ್ಯಗಳಿಗೆ ಇವನ್ನು ಹೋಲಿಸಿ ನೋಡಬಹುದು.

(೨) ನಿರ್ವಾಣದಶಕಸ್ತೋತ್ರ– ದಶಶ್ಲೋಕೀ

(ಚರಿತ್ರೆ–ಪು. ೭೭)

ನ ಭೂಮಿರ್ನ ತೋಯಂ ನ ತೇಜೋ ನ ವಾಯು-
ರ್ನ ಖಂ ನೇನ್ದ್ರಿಯಂ ವಾ ನ ತೇಷಾಂ ಸಮೂಹಃ |
ಅನೈಕಾನ್ತಿಕತ್ವಾತ್ ಸುಷುಪ್ತ್ಯೇಕಸಿದ್ಧ-
ಸ್ತದೇಕೋऽವಶಿಷ್ಟಃ ಶಿವಃ ಕೇವಲೋऽಹಮ್ || ೧ ||
ನ ವರ್ಣಾ ನ ವರ್ಣಾಶ್ರಮಾಚಾರಧರ್ಮಾ
ನ ಮೇ ಧಾರಣಾ ಧ್ಯಾನಯೋಗಾಪಯೋऽಪಿ |
ಅನಾತ್ಮಾಶ್ರಯಾಹಂಮಮಾಧ್ಯಾಸಹಾನಾ-
ತ್ತದೇಕೋऽವಶಿಷ್ಟಃ ಶಿವಃ ಕೇವಲೋऽಹಮ್ || ೨ ||
ನ ಮಾತಾ ಪಿತಾ ವಾ ನ ದೇವಾ ನ ಲೋಕಾ
ನ ವೇದಾ ನ ಯಜ್ಞಾ ನ ತೀರ್ಥಂ ಬ್ರುವನ್ತಿ |
ಸುಷುಪ್ತಾ ನಿರಸ್ತಾತಿಶೂನ್ಯಾತ್ಮಕತ್ವಾ-
[1]ತ್ತದೇಕೋ.... || ೩ ||

---

1. ಈ ಪಲ್ಲವಯನ್ನು ಮುಂದಿನ ಶ್ಲೋಕಗಳಲ್ಲಿಯೂ ಹೇಳಿಕೊಳ್ಳಬೇಕು.

ನ ಸಾಂಖ್ಯಂ ನ ಶೈವಂ ನ ತತ್ಪಾಞ್ಚರಾತ್ರಂ
ನ ಜೈನಂ ನ ಮಾಮಾಂಸಕಾದೇರ್ಮತಂ ವಾ ।
ವಿಶಿಷ್ಟಾನುಭೂತ್ಯಾ ವಿಶುದ್ಧಾತ್ಮಕತ್ವಾತ್.... ॥ ೪ ॥
ನ ಚೋರ್ಧ್ವಂ ನ ಚಾಧೋ ನ ಚಾನ್ತರ್ನ ಬಾಹ್ಯಂ
ನ ಮಧ್ಯಂ ನ ತಿರ್ಯಙ್ನ ಪೂರ್ವಾಪರಾ ದಿಕ್ ।
ವಿಯದ್ವ್ಯಾಪಕತ್ವಾದಖಣ್ಡೈಕರೂಪಂ.... ॥ ೫ ॥
ನ ಶುಕ್ಲಂ ನ ಕೃಷ್ಣಂ ನ ರಕ್ತಂ ನ ಪೀತಂ
ನ ಕುಬ್ಜಂ ನ ಪೀನಂ ನ ಹ್ರಸ್ವಂ ನ ದೀರ್ಘಮ್ ।
ಅರೂಪಂ ತಥಾ ಜ್ಯೋತಿರಾಕಾರವತ್ತ್ವಾತ್.... ॥ ೬ ॥
ನ ಶಾಸ್ತಾ ನ ಶಾಸ್ತ್ರಂ ನ ಶಿಷ್ಯೋ ನ ಶಿಕ್ಷಾ
ನ ಚ ತ್ವಂ ನ ಚಾಹಂ ನ ಚಾಯಂ ಪ್ರಪಞ್ಚಃ ।
ಸ್ವರೂಪಾವಬೋಧೋ ವಿಕಲ್ಪಾಸಹಿಷ್ಣುಸ್ತದೇಕೋ— ॥ ೭ ॥
ನ ಜಾಗ್ರನ್ನ ಮೇ ಸ್ವಪ್ನಕೋ ವಾ ಸುಷುಪ್ತಿ–
ರ್ನ ವಿಶ್ವೋ ನ ವಾ ತೈಜಸಃ ಪ್ರಾಜ್ಞಕೋ ವಾ ।
ಅವಿದ್ಯಾತ್ಮಕತ್ವಾತ್ತ್ರಯಾಣಾಂ ತುರೀಯಂ.... ॥ ೮ ॥
ಅಪಿ ವ್ಯಾಪಕತ್ವಾದ್ಧಿ ತತ್ತ್ವಪ್ರಯೋಗಾತ್
ಸ್ವತಃಸಿದ್ಧಭಾವಾದನನ್ಯಾಶ್ರಯತ್ವಾತ್ ।
ಜಗತ್ತುಚ್ಛಮೇತತ್ಸಮಸ್ತಂ ತದನ್ಯಸ್ತದೇಕೋ.... ॥ ೯ ॥
ನ ಚೈಕಂ ತದನ್ಯದ್ದ್ವಿತೀಯಂ ಕುತಃ ಸ್ಯಾ–
ನ್ನ ವಾ ಕೇವಲತ್ವಂ ನ ಚಾಕೇವಲತ್ವಮ್ ।
ನ ಶೂನ್ಯಂ ನ ಚಾಶೂನ್ಯಮುದ್ವೈತಕತ್ವಾತ್.... ॥ ೧೦ ॥

[ಈ ಶ್ಲೋಕಗಳು ಹೂಥವಕವಿಯು ಪೂರ್ವದಲ್ಲಿ ಪ್ರಸಿದ್ಧವಾಗಿದ್ದವೆಂದು ಮಾತ್ರ ಹೇಳಬಹುದು.]

(೩) ಮನೀಷಾಪಞ್ಚಕಮ್

(ಚರಿತ್ರೆಯ ಪು. ೯೫–೯೬)

ಸತ್ಯಾಚಾರ್ಯಸ್ಯ ಗಮನೇ ಕದಾಚಿನ್ಮುಕ್ತಿದಾಯಕಮ್ ।
ಕಾಶೀಕ್ಷೇತ್ರಂ ಪ್ರತಿ ಸಹ ಗೌರ್ಯಾ ಮಾರ್ಗೇ ತು ಶಙ್ಕರಮ್ ॥ ೧ ॥
ಅನ್ತ್ಯವೇಷಧರಂ ದೃಷ್ಟ್ವಾ ಗಚ್ಛ ಗಚ್ಛೇತಿ ಚಾಬ್ರವೀತ್ ।
ಶಙ್ಕರಃ ಸೋಽಪಿ ಚಾಣ್ಡಾಲಸ್ತಂ ಪುನಃ ಪ್ರಾಹ ಶಙ್ಕರಮ್ ॥ ೨ ॥
ಅನ್ನಮಯಾದನ್ನಮಯಮಥವಾ ಚೈತನ್ಯಮೇವ ಚೈತನ್ಯಾತ್ ।
ದ್ವಿಜವರ ದೂರೀಕರ್ತುಂ ವಾಞ್ಛಸಿ ಕಿಂ ಬ್ರೂಹಿ ಗಚ್ಛ ಗಚ್ಛೇತಿ ॥ ೩ ॥

ಕಿಂ ಗಚ್ಛಾಮ್ಯುನಿ ಬಿಮ್ಬಿತೇಽಮ್ಬರಮಣೌ ಚಣ್ಡಾಲವಾಟೀಪಯಃ–
ಪೂರೇ ಚಾನ್ತರಮಸ್ತಿ ಕಾಞ್ಚನಘಟೀಮೃತ್ಕುಮ್ಭಯೋರ್ವಾಮ್ಬರೇ |
ಪ್ರತ್ಯಗ್ವಸ್ತುನಿ ನಿಸ್ತರಙ್ಗಸಹಜಾನನ್ದಾವಬೋಧಾಮ್ಬುಧೌ
ವಿಪ್ರೋಽಯಂ ಶ್ವಪಚೋಽಯಮಿತ್ಯಪಿ ಮಹಾನ್ ಕೋಽಯಂ
ವಿಭೇದಭ್ರಮಃ ॥ ೪ ॥

ಜಾಗ್ರತ್ಸ್ವಪ್ನಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಮ್ಭತೇ
ಯಾ ಬ್ರಹ್ಮಾದಿಪಿಪೀಲಿಕಾನ್ತತನುಷು ಪ್ರೋತಾ ಜಗತ್ಸಾಕ್ಷಿಣೀ |
ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢಪ್ರಜ್ಞಾಪಿ ಯಸ್ಯಾಸ್ತಿ ಚೇತ್
[1]ಚಣ್ಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾಮಮ

ಬ್ರಹ್ಮೈವಾಹಮಿದಂ ಜಗಚ್ಚ ಸಕಲಂ ಚಿನ್ಮಾತ್ರವಿಸ್ತಾರಿತಂ
ಸರ್ವಂ ಚೈತದವಿದ್ಯಯಾ ತ್ರಿಗುಣಯಾ[2] ಶೇಷಂ ಮಯಾ ಕಲ್ಪಿತಮ್ |
ಇತ್ಥಂ ಯಸ್ಯ ದೃಢಾ ಮತಿಃ ಸುಖತರೇ ನಿತ್ಯೇ ಪರೇ ನಿರ್ಮಲೇ.... ॥ ೬ ॥

ಶಶ್ವನ್ನಶ್ವರಮೇವ ವಿಶ್ವಮಖಿಲಂ ನಿಶ್ಚಿತ್ಯ ವಾಚಾ ಗುರೋ–
ರ್ನಿತ್ಯಂ ಬ್ರಹ್ಮ ನಿರನ್ತರಂ ವಿಮೃಶತಾ ನಿರ್ವ್ಯಾಜಶಾನ್ತಾತ್ಮನಾ |
ಭೂತಂ ಭಾವಿ ಚ ದುಷ್ಕೃತಂ ಪ್ರದಹತಾ ಸಂವಿನ್ಮಯೇ ಪಾವಕೇ
ಪ್ರಾರಬ್ಧಾಯ ಸಮರ್ಪಿತಂ ಸ್ವಪುರಿತ್ಯೇಷಾ ಮನೀಷಾ ಮಮ ॥ ೭ ॥

ಯಾ ತಿರ್ಯಙ್ನರದೇವತಾಭಿರಹಮಿತ್ಯನ್ತಃ ಸ್ಫುಟಾ ಗೃಹ್ಯತೇ
ಯದ್ಭಾಸಾ ಹೃದಯಾಕ್ಷದೇಹವಿಷಯಾ ಭಾನ್ತಿ ಸ್ವತೋಽಚೇತನಾಃ |
ತಾಂ ಭಾಸ್ಯೈಃ ಪಿಹಿತಾರ್ಕಮಣ್ಡಲನಿಭಾಂ ಸ್ಫೂರ್ತಿಂ ಸದಾ ಭಾವಯನ್
ಯೋಗೀ ನಿರ್ವೃತಮಾನಸೋ ಹಿ ಗುರುರಿತ್ಯೇಷಾ ಮನೀಷಾ ಮಮ ॥

ಯತ್ಸೌಖ್ಯಾಮ್ಬುಧಿಲೇಶಲೇಶತ ಇಮೇ ಶಕ್ರಾದಯೋ ನಿರ್ವೃತಾ
ಯಚ್ಚಿತ್ತೇ ನಿತರಾಂ ಪ್ರಶಾನ್ತಕಲನೇ ಲಬ್ಧ್ವಾ ಮುನಿರ್ನಿರ್ವೃತಃ |
ಯಸ್ಮಿನ್ನಿತ್ಯಸುಖಾಮ್ಬುಧೌ ಗಲಿತಧೀರ್ಬ್ರಹ್ಮೈವ ನ ಬ್ರಹ್ಮವಿದ್
ಯಃ ಕಶ್ಚಿತ್ಸ ಸುರೇನ್ದ್ರವನ್ದಿತಪದೋ ನೂನಂ ಮನೀಷಾ ಮಮ ॥ ೯ ॥

[ಇಲ್ಲಿ 'ಸತ್ಯಾಚಾರ್ಯಸ್ಯ ಗಮನೇ' ಎಂದು ಮೊದಲಾಗಿರುವ ಶ್ಲೋಕವು ಎಲ್ಲಯದೆಂದು ತಿಳಿಯಲಿಲ್ಲ. ಅದ್ವೈತರಾಜ್ಯಲಕ್ಷ್ಮೀ ಟೀಕಾಕಾರನು 'ಕದಾಚಿ ಚ್ಛಙ್ಕರಾಚಾರ್ಯಃ ಕಾಶೀಂ ಪ್ರತಿ ಪುರೀಂ ಯಯೌ' –ಎಂದು ಪ್ರಾರಂಭಿಸುವದು

1. "ಏಷಾ ಮನೀಷಾ ಮಮ" –ಎಂಬ ಪಲ್ಲವಿಯಿಂದ ಪ್ರಕರಣಕ್ಕೆ ಈ ಹೆಸರು ಬಂದಿದೆ.

2. ಅವಿದ್ಯೆಯನ್ನು ತ್ರಿಗುಣವುಳ್ಳದ್ದೆಂದು ಕರೆದಿರುವದು ಭಾಷ್ಯಗ್ರಂಥಗಳಲ್ಲಿ ಎಲ್ಲಿಯೂ ಕಾಣಬರುತ್ತಿಲ್ಲ.

ಮನೀಷಾಪಂಚಕವೆಂದಿರುತ್ತಾನೆ (ಮಾ. ಶಂ. ೬–೩೪). 'ಅನ್ನಮಯಾಹನ್ನ ಮಯಮ್' ಎಂಬ ಶ್ಲೋಕವು ಆನಂದಗಿರೀಯದಲ್ಲಿದೆ ಎಂದು ಲಕ್ಷ್ಮಣಸೂರಿ ಗಳು ರಚಿಸಿರುವ "ಭಗವತ್ಪಾದಾಭ್ಯುದಯ"ದ ಟಿಪ್ಪಣಿಯಲ್ಲಿ (ಪು. ೫೧) ಇದೆ. ಆದರೆ ನಮ್ಮಲ್ಲಿರುವ ಆನಂದಗಿರೀಯದಲ್ಲಿ ಅದು ಕಾಣಿಸಲಿಲ್ಲ. ಹೇಗೂ ಈ ಮನೀಷಾಪಂಚಕವು ಮೊದಲೇ ಎಲ್ಲಿಯೋ ಇದ್ದು ಇದಕ್ಕೆ ಕಥೆಯನ್ನು ಜೋಡಿಸ ಲಾಗಿದೆ ಎಂದೇ ನಂಬಬೇಕಾಗಿದೆ.]

(೪) ಶ್ರೀಲಕ್ಷ್ಮೀನರಸಿಂಹಕರಾವಲಂಬನಸ್ತೋತ್ರ[1]

(ಚರಿತ್ರೆ. ಪು. ೧೯೭–೨೦೧)

ಶ್ರೀಮತ್ಪಯೋನಿಧಿನಿಕೇತನ ಚಕ್ರಪಾಣೇ
ಭೋಗೀಶ[2] ಭೋಗಿಮಣಿರಞ್ಜಿತ[3] ಪುಣ್ಯಮೂರ್ತೇ |
ಯೋಗೀಶ ಶಾಶ್ವತ ಶರಣ್ಯ ಭವಾಬ್ಧಿಪೋತ
[6]ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಮ್ಬಮ್ |೧|

ಬ್ರಹ್ಮೇನ್ದ್ರರುದ್ರಮರುದರ್ಕಕಿರೀಟಕೋಟಿ–
ಸಂಘಟ್ಟಿತಾಙ್ಘ್ರಿಕಮಲಾರುಣ[5] ಕಾನ್ತಿಕಾನ್ತ |
ಲಕ್ಷ್ಮೀಲಸತ್ಕುಚಸರೋರುಹರಾಜಹಂಸ | ಲಕ್ಷ್ಮೀ.... |೨|

ಸಂಸಾರಘೋರಗಹನೇ ಚರತೋ ಮುರಾರೇ
ಮಾರೋಗ್ರಭೀಕರಮೃಗಪ್ರವರಾ[4]ರ್ದಿತಸ್ಯ |
ಆರ್ತಸ್ಯ ಮತ್ಸರನಿದಾಘನಿಪೀಡಿತಸ್ಯ[7] ಲಕ್ಷ್ಮೀ.... |೩|

ಸಂಸಾರಕೂಪಮತಿಘೋರಮಗಾಧಮೂಲಂ
ಸಂಪ್ರಾಪ್ಯ ದುಃಖಶತಸರ್ಪಸಮಾಕುಲಸ್ಯ |
ದೀನಸ್ಯ ದೇವ ಕೃಪಣಾ[8] ಪದಮಾಗತಸ್ಯ.... |೪|

ಸಂಸಾರಸಾಗರವಿಶಾಲಕರಾಲಕಾಲ–
ನಕ್ರಗ್ರಹಗ್ರಸನ[9]ನಿಗ್ರಹವಿಗ್ರಹಸ್ಯ |
ವ್ಯಗ್ರಸ್ಯ ರಾಗರಸನೋ[10]ರ್ಮಿ ನಿಪೀಡಿತಸ್ಯ.... |೫|

ಸಂಸಾರವೃಕ್ಷಮಘಬೀಜಮನನ್ತಕರ್ಮ–
ಶಾಖಾಶತಂ[11] ಕರಣಪತ್ರಮನಙ್ಗಪುಷ್ಪಮ್ |
ಆರುಹ್ಯ ದುಃಖಫಲಿತಂ ಪತತೋ[12] ದಯಾಲೋ.... |೬|

---

1. ಇದನ್ನು 'ಲಕ್ಷ್ಮೀನೃಸಿಂಹಕರುಣಾರಸಸ್ತೋತ್ರ' ಎಂದು ವಾಣೀವಿಲಾಸಗ್ರಂಥ ಮಾಲೆಯಲ್ಲಿ ಕರೆದಿದೆ. 2. ಭೋಗೀನ್ದ್ರ ಪಾ॥ 3, ರಾಜಿತ ಪಾ॥
4. ಈ ಪಲ್ಲವಿಯು ಚರಣವನ್ನು ಮುಂದಿನ ಶ್ಲೋಕಗಳಲ್ಲಿ ಬಿಟ್ಟುಬಿಟ್ಟಿದೆ,
5, ಅಮಲ 6, ಪ್ರಚುರ 7, ಸುದುಃಖಿತಸ್ಯ 8, ಕೃಪಯಾ
9, ಗ್ರಸಿತ 10, ನಿಚಯೋ 11, ಯುತಮ್ 12, ಚಚಿತಮ್

ಸಂಸಾರಸರ್ಪಘನವಕ್ತ್ರಭಯೋಪತೀವ್ರ–
ದಂಷ್ಟ್ರಾಕರಾಲವಿಷದಗ್ಧ[1] ವಿನಷ್ಟಮೂರ್ತೇಃ |
ನಾಗಾರಿವಾಹನ ಸುಧಾಬ್ಧಿನಿವಾಸ ಶೌರೇ.... |೭|
ಸಂಸಾರದಾವದಹನಾತುರ[2]ಭೀಕರೋರು
ಜ್ವಾಲಾವಲೀಭಿರತಿದಗ್ಧತನೂರುಹಸ್ಯ |
ತ್ವತ್ಪಾದಪದ್ಮಸರಸೀ(?) ಶರಣಾಗತಸ್ಯ[3].... |೮|
ಸಂಸಾರಜಾಲಪತಿತಸ್ಯ ಜಗನ್ನಿವಾಸ
ಸರ್ವೇನ್ದ್ರಿಯಾರ್ಥಬಡಿಶಾರ್ಥ[4]ಝಷೋಪಮಸ್ಯ |
ಪ್ರೋತ್ಖಣ್ಡಿತಃ[5] ಪ್ರಚುರತಾಲುಕಸಂಸ್ತಕಸ್ಯ.... |೯|
ಸಂಸಾರಭೀಕರಕರೀನ್ದ್ರಕರಾಭಿಘಾತ–
ನಿಷ್ಪಿಷ್ಟಪೂರ್ಣ[6]ವಪುಷಃ ಸಕಲಾರ್ತಿನಾಶ |
ಪ್ರಾಣಪ್ರಯಾಣಭವಭೀತಿಸಮಾಕುಲಸ್ಯ.... |೧೦|
ಅನ್ಧಸ್ಯ ಮೇ ಹೃತವಿವೇಕಮಹಾಧನಸ್ಯ
ಚೋರೈಃ ಪ್ರಭೋ ಬಲಿಭಿ[7]ರಿನ್ದ್ರಿಯನಾಮಧೇಯೈಃ |
ಮೋಹಾನ್ಧಕೂಪಕುಹರೇ ವಿನಿಪಾತಿತಸ್ಯ.... |೧೧|
ಲಕ್ಷ್ಮೀಪತೇ ಕಮಲನಾಭ ಸುರೇಶ ವಿಷ್ಣೋ
ವೈಕುಣ್ಠ[8] ಕೃಷ್ಣ[9] ಮಧುಸೂದನ ಪುಷ್ಕರಾಕ್ಷ[10] |
ಬ್ರಹ್ಮಣ್ಯ ಕೇಶವ ಜನಾರ್ದನ ವಾಸುದೇವ
ದೇವೇಶ ದೇಹಿ ಕೃಪಣಸ್ಯ[11] ಕರಾವಲಮ್ಬಮ್ |೧೨|
ಯನ್ನಾಮಯೋರ್ಜಿತವಪುಃ ಪ್ರಚುರಪ್ರವಾಹ–
ಮಗ್ನಾರ್ಥಮತ್ರ ನಿವಹೋರುಕರಾವಲಮ್ಬಮ್ (?)
ಲಕ್ಷ್ಮೀನೃಸಿಂಹಚರಣಾಬ್ಜಮಧು ವ್ರತೇನ
ಸ್ತೋತ್ರಂ ಕೃತಂ ಸುಖಕರಂ ಭುವಿ ಶಙ್ಕರೇಣ[12] |೧೩|

ಇಲ್ಲಿ ಬೆಂಕಿಯಲ್ಲಿ ಬಿದ್ದಾಗ ಆಚಾರ್ಯರು ಸ್ತೋತ್ರಮಾಡಿದ್ದರೆಂಬುದಕ್ಕೆ ಯಾವ ಗುರುತೂ ಇಲ್ಲ. ಕೊನೆಯ ಶ್ಲೋಕವು ಈ ಸ್ತೋತ್ರಕ್ಕೆ ಸೇರಿದ್ದೇ ಎಂದು

---

1. ...ವಿಷದಿಗ್ಧಮಹೋಗ್ರತೀವ್ರದಂಷ್ಟ್ರಾಗ್ರಕೋಟಿಪರಿದಷ್ಟ 2, ದಹನಾಕರ
3. ಸರಸೀರುಹಮಾಗತಸ್ಯ 4. ಬಡಿಶಾಗ್ರ 5. ಪ್ರೋತ್ಕನ್ಪಿತ
6. 'ನಿಷ್ಪೀಡ್ಯಮಾನ 7. ಮಹಾಬಲಿಭಿಃ 8. ಯಜ್ಞೇಶ 9. ಯಜ್ಞ
10. ವಿಶ್ವರೂಪ 11. ಪಾ. ಇದಕ್ಕೂ 'ಲಕ್ಷ್ಮೀನೃಸಿಂಹ' ಎಂಬ ಪಲ್ಲದಿಯಿದೆ,
12. ಇದು ವಾ॥ ಪಾಠದಲ್ಲಿ ಪೂರ್ವಾರ್ಧವಾಗಿದೆ, ಉತ್ತರಾರ್ಧವು ಹೀಗಿದೆ ; 'ಯೇ ತತ್ಪಠನ್ತಿ ಮನುಜಾ ಹರಿಭಕ್ತಿಯುಕ್ತಾಸ್ತೇ ಯಾನ್ತಿ ತತ್ಪದಸರೋಜಮುಖಣ್ಣ ರೂಪಮ್'

ಇಟ್ಟುಕೊಂಡರೂ ಸಂಸಾರದಲ್ಲಿ ಮುಗ್ನರಾದವರಿಗಾಗಿ ಈ ಸ್ತೋತ್ರವನ್ನು ಶಂಕರನು ಮಾಡಿದನು ಎಂದಿಷ್ಟೇ ಇರುವದರಿಂದ ಶಂಕರವಿಜಯಕ್ಕೆ ಯಾರೋ ಇದನ್ನು ಹೇಗೋ ಗಂಟುಹಾಕಿರುವರೆಂದು ಹೇಳಬೇಕಾಗಿದೆ.[1]

(೫) ಹಸ್ತಾಮಲಕಸ್ತೋತ್ರ

(ಚರಿತ್ರೆಯ ಪು. ೨೧೩–೨೧೫)

[ಕಸ್ತ್ವಂ ಶಿಶೋ ಕಸ್ಯ ಕುತೋಽಸಿ ಗನ್ತಾ
ಕಿಂ ನಾಮ ತೇ ತ್ವಂ ಕುತ ಆಗತೋಽಸಿ |
ಏತನ್ಮಯೋಕ್ತಂ ವದ ಚಾರ್ಭಕ ತ್ವಂ
ಮತ್ಪ್ರೀತಯೇ ಪ್ರೀತಿವಿವರ್ಧನೋಽಸಿ ॥ ೧ ॥

ಹಸ್ತಾಮಲಕ ಉವಾಚ–

ನಾಹಂ ಮನುಷ್ಯೋ ನ ಚ ದೇವಯಕ್ಷೌ
ನ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರಾಃ |
ನ ಬ್ರಹ್ಮಚಾರೀ ನ ಗೃಹೀ ವನಸ್ಥೋ
ಭಿಕ್ಷುರ್ನ ಚಾಹಂ ನಿಜಬೋಧರೂಪಃ ॥ ೩ ॥
ನಿಮಿತ್ತಂ ಮನಶ್ಚಕ್ಷುರಾದಿಪ್ರವೃತ್ತೌ
ನಿರಸ್ತಾಖಿಲೋಪಾಧಿರಾಕಾಶಕಲ್ಪಃ |

ವಾಣೀವಿಲಾಸಪಾಠದಲ್ಲಿ ಈ ಕೆಳಗಿನ ಶ್ಲೋಕಗಳು ಹೆಚ್ಚಾಗಿವೆ :

1, ಸಂಸಾರಸಾಗರನಿಮಜ್ಜನ ಮುಹ್ಯಮಾನಂ
ದೀನಂ ವಿಲೋಕಯ ವಿಭೋ ಕರುಣಾನಿಧೇ ಮಾಮ್ ।
ಪ್ರಹ್ಲಾದಖೇದಪರಿಹಾರ ಪರಾವತಾರ
ಲಕ್ಷ್ಮೀನೃಸಿಂಹ ...॥ ೦॥
ಬದ್ಧ್ವಾ ಗಲೇ ಯಮಭಟಾ ಬಹು ತರ್ಜಯನ್ತಃ !
ಕರ್ಷನ್ತಿ ಯತ್ರ ಭವಪಾಶಶತೈರ್ಯುತಂ ಮಾಮ್
ಏಕಾಕಿನಂ ಪರವಶಂ ಚಕಿತಂ ದಯಾಲೋ ... ॥೨॥
ಏಕೇನ ಚಕ್ರಮಪರೇಣ ಕರೇಣ ಶಙ್ಖಂ
ಅನ್ಯೇನ ಸಿನ್ಧುತನಯಾಮವಲಮ್ಬ್ಯ ತಿಷ್ಠನ್ ।
ವಾಮೇ ಕರೇಣ ವರದಾಭಯಪದ್ಮಚಿಹ್ನಂ.... ॥೨॥
ಪ್ರಹ್ಲಾದನಾರದಪರಾಶರಪುಣ್ಡರೀಕ
ವ್ಯಾಸಾದಿಭಾಗವತಪುಙ್ಗವಹೃನ್ನಿವಾಸ ।
ಭಕ್ತಾನುರಕ್ತಪರಿಪಾಲನಪಾರಿಜಾತ .. ॥೪॥

ರವಿರ್ಲೋಕಚೇಷ್ಟಾನಿಮಿತ್ತಂ ಯಥಾ ಯಃ
ಸ ನಿತ್ಯೋಪಲಬ್ಧಿಸ್ವರೂಪೋಽಹಮಾತ್ಮಾ[1] ॥ ೧ ॥
ಯಮುಗ್ಮೃಷ್ಣವನ್ನಿತ್ಯಬೋಧಸ್ವರೂಪಂ
ಮನಶ್ಚಕ್ಷುರಾದೀಪ್ಯಬೋಧಾತ್ಮಕಾನಿ |
ಪ್ರವರ್ತನ್ತ ಆಶ್ರಿತ್ಯ ನಿಷ್ಕಮ್ಪಮೇಕಂ.... ॥ ೨ ॥
ಮುಖಾಭಾಸಕೋ ದರ್ಪಣೇ ದೃಶ್ಯಮಾನೋ
ಮುಖತ್ವಾತ್ ಪೃಥಕ್ತ್ವೇನ ನೈವಾಸ್ತಿ ವಸ್ತು |
ಚಿದಾಭಾಸಕೋ ಧೀಷು ಜೀವೋಽಪಿ ತದ್ವತ್.... ॥ ೩ ॥
ಯಥಾ ದರ್ಪಣಾಭಾವ ಆಭಾಸಹಾನೌ
ಮುಖಂ ವಿದ್ಯತೇ ಕಲ್ಪನಾಹೀನಮೇಕಮ್ |
ತಥಾ ಧೀವಿಯೋಗೇ ನಿರಾಭಾಸಕೋ ಯಃ.... ॥ ೪ ॥
ಮನಶ್ಚಕ್ಷುರಾದೇರ್ವಿಯುಕ್ತಃ ಸ್ವಯಂ ಯೋ
ಮನಶ್ಚಕ್ಷುರಾದೇರ್ಮನಶ್ಚಕ್ಷುರಾದಿಃ |
ಮನಶ್ಚಕ್ಷುರಾದೇರಗಮ್ಯಸ್ವರೂಪಃ.... ॥ ೫ ॥
ಯ ಏಕೋ ವಿಭಾತಿ ಸ್ವತಃ ಶುದ್ಧಚೇತಾಃ
ಪ್ರಕಾಶಸ್ವರೂಪೋಽಪಿ ನಾನೇವ ಧೀಷು |
ಶರಾವೋದಕಸ್ಥೋ ಯಥಾ ಭಾನುರೇಕಃ.... ॥ ೬ ॥
ಯಥಾನೇಕಚಕ್ಷುಃಪ್ರಕಾಶೋ ರವಿರ್ನ–
ಕ್ರಮೇಣ ಪ್ರಕಾಶೀಕರೋತಿ ಪ್ರಕಾಶ್ಯಮ್ |
ಅನೇಕಾ ಧಿಯೋ ಯಸ್ತಥೈಕಪ್ರಬೋಧಃ.... ॥ ೭ ॥
ವಿವಸ್ವತ್ಪ್ರಭಾತಂ ಯಥಾರೂಪಮಕ್ಷ್ಣಂ
ಪ್ರಗೃಹ್ಣಾತಿ ನಾಭಾತಮೇವಂ ವಿವಸ್ವಾನ್ |
ತಥಾ ಭಾತ[2] ಆಭಾಸಯತ್ಯಕ್ಷಮೇಕಃ.... ॥ ೮ ॥
ಯಥಾ ಸೂರ್ಯ ಏಕೋಽಪ್ಯನೇಕಶ್ಚಲಾಸು
ಸ್ಥಿರಾಸ್ವಪ್ಸು ಚೈಕೋಽ[3]ವಿಭಾವ್ಯಸ್ವರೂಪಃ
ಚಲಾಸು ಪ್ರಭಿನ್ನಾಸು ಧೀಷ್ವೇಕ ವುವ[4].... ॥ ೯ ॥
ಘನಚ್ಛನ್ನದೃಷ್ಟಿರ್ಘನಚ್ಛನ್ನಮರ್ಕಂ
ಯಥಾ ನಿಷ್ಪ್ರಭಂ ಮನ್ಯತೇ ಚಾತಿಮೂಢಃ |
ತಥಾ ಬದ್ಧವದ್ ಭಾತಿ ಯೋ ಮೂಢದೃಷ್ಟೇಃ.... ॥ ೧೦ ॥

---

1. ಈ ಪಲ್ಲವಿಯನ್ನು ಮುಂದಿನ ಶ್ಲೋಕಗಳಲ್ಲಿ ಬಿಟ್ಟುಬಿಟ್ಟಿದೆ.
2, ಯದಾಭಾತ 3. ಸ್ಥಿರಾಸ್ವಪ್ಸ್ವನನ್ವಕ್ 4. ಏವಮೇಕಃ

ಸಮಸ್ತೇಷು ವಸ್ತುಷ್ವನುಸ್ಯೂತಮೇಕಂ
ಸಮಸ್ತಾನಿ ವಸ್ತೂನಿ ಯಂ ನ ಸ್ಪೃಶನ್ತಿ ।
ವಿಯದ್ವತ್ ಸದಾ ಶುದ್ಧಮುಚ್ಚಸ್ವರೂಪಃ.... ॥ ೧೧ ॥
ಉಪಾಧೌ ಯಥಾ ಭೇದತಾಸನ್ಮಣೀನಾಂ
ತಥಾ ಭೇದತಾ ಬುದ್ಧಿಭೇದೇಷು ತೇಽಪಿ !
ಯಥಾ ಚನ್ದ್ರಕಾಣಾಂ ಜಲೇ ಚಞ್ಚಲತ್ವಂ
ತಥಾ ಚಞ್ಚಲತ್ವಂ ತವಾಪೀಹ ವಿಷ್ಣೋ ॥ ೧೨ ॥

ಮಾಧವೀಯಶಂಕರವಿಜಯದ ವ್ಯಾಖ್ಯಾನದಲ್ಲಿರುವಂತೆ ಪಾಠವನ್ನು ಕೊಟ್ಟಿದೇವೆ.

(೬) ತೋಟಕಪ್ರಕರಣ

(ಚರಿತ್ರೆಯ ಪು. ೨೨೫)

ಚಿದ್ವಿಲಾಸೀಯದಂತೆ

ವಿದಿತಾಖಿಲಶಾಸ್ತ್ರಸುಧಾಜಲಧೇ
ಮಹಿತೋಪನಿಷತ್ಕಥಿತಾರ್ಥನಿಧೇ !
ಹೃದಯೇ ಕಲಯೇ ವಿಮಲಂ ಚರಣಂ
[1]ಭವಶಙ್ಕರದೇಶಿಕ ಮೇ ಶರಣಮ್ ॥ ೧ ॥
ಕರುಣಾವರುಣಾಲಯ ಪಾಲಯ ಮಾಂ
ಭವಸಾಗರದುಃಖವಿದೂನಹೃದಯಮ್ !
ರಚಿತಾಖಿಲದರ್ಶನತತ್ತ್ವವಿದಂ.... ॥ ೨ ॥
ಭದತಾ ಜನತಾ ಸುಹಿತಾ ಭವಿತಾ
ನಿಜಬೋಧವಿಚಾರಣಚಾರುಮತೇ ।
ಕಲಯೇಶ್ವರಜೀವವಿವೇಕವಿದಂ.... ॥ ೩ ॥
ಭವ ಏವ ಭವಾನಿತಿ ಮೇ ನಿತರಾಂ
ಸಮಜಾಯತ ಚೇತಸಿ ಕೌತುಕತಾ ।
ಮಮ ವಾರಯ ಮೋಹಮಹಾಜಲಧಿಂ.... ॥ ೪ ॥
ಸುಕೃತೇಽಧಿಕೃತೇ ಬಹುಧಾ ಭವತೋ
ಭವಿತಾ ಪದದರ್ಶನಲಾಲಸತಾ
ಅತಿದೀನಮಿಮಂ ಪರಿಪಾಲಯ ಮಾಂ.... ॥ ೫ ॥
ಜಗತೀಮವಿತುಂ ಕಲಿತಾಕೃತಯೋ
ವಿಚರನ್ತಿ ಮಹಾಮಹಸಶ್ಚಲತಃ ।
ಅಹಿಮಾಂಶುರಿವಾತ್ರ ವಿಭಾಸಿ ಪು(ಗು)ರೋ.... ॥ ೬ ॥

---

1. ಪಲ್ಲವಿಯನ್ನು ಮುಂದಿನ ಶ್ಲೋಕಗಳಿಗೂ ಹೇಳಿಕೊಳ್ಳಬೇಕು.

ಗುರುಪುಙ್ಗವಪುಙ್ಗವಕೇತನ ತೇ
ಸಮತಾಮಯತಾಂ ನ ಹಿ ಕೋಽಪಿ ಸುಧೀಃ ।
ಶರಣಾಗತವತ್ಸಲ ತತ್ತ್ವನಿಧೇ.... ॥ ೭ ॥

ವಿದಿತಾ ನ ಮಯಾ ವಿಶದೈಕಕಲಾ ।
ನ ಚ ಕಿಞ್ಚನ ಕಾಞ್ಚನಮಸ್ತಿ ಗುರೋ ।
ದ್ರುತಮೇವ ವಿಧೇಹಿ ಕೃಪಾಂ ಸಹಜಾಂ.... ॥ ೮ ॥

[ಡಿಣ್ಡಿಮಕಾರನ ಮತದಂತೆ ಟಪ್ಪಣಿಯಲ್ಲಿ ಅಧಿಕಪಾಠ :
ಸಕಲಂ ಮನಸಾ ಕ್ರಿಯಯಾ ಜನಿತಂ
ಸಮವೇಕ್ಷ್ಯ ವಿನಾಶಿತಯಾ ತು ಜಗತ್ ।
ನಿರವದ್ಯತ ಕಶ್ಚಿದತೋ ನಿಖಿಲಾ–
ದವಿನಾಶಿಕೃತೇ ಯತಿತವ್ಯಮಿತಿ ॥ ೧ ॥

ಪ್ರತಿಪಿತ್ಸುರಸಾವವಿನಾಶಿಪದಂ ಯತಿಧರ್ಮರತೋ ಯತಿಮೇವ ಗುರುಮ್ ।
ವಿದಿತಾತ್ಮಕಲಂ ಸಮುಪೇತ್ಯ ಕವಿಃ । ಪ್ರಣಿಪತ್ಯ ನಿವೇದಿತವಾನ್ ಸ್ವಮತಮ್ ॥ ೨ ॥]

ಭಗವನ್ನುದಧೌ ಮೃತಿಜನ್ಮಜಲೇ
ಸುಖದುಃಖಝುಷೇ ಪತಿತಂ ವ್ಯಥಿತಮ್ ।
ಕೃಪಯಾ ಶರಣಾಗತಮುದ್ಧರ ಮಾ–
ಮನುಶಾಧ್ಯುಪಸನ್ನಮನನ್ಯಗತಿಮ್ ॥ ೧ ॥

ವಿನಿವರ್ತ್ಯ ರತಿಂ ವಿಷಯೇ ವಿಷವಾಂ
ಪರಿಮುಚ್ಯ ಶರೀರವಿಬದ್ಧಮತಿಮ್ ।
ಪರಮಾತ್ಮಪದೇ ಭವ ನಿತ್ಯರತೋ
ಜಹಿ ಮೋಹಮಯಂ ಭ್ರಮಮಾತ್ಮಮತೇ ॥ ೨ ॥

ವಿಸೃಜಾನ್ನಮಯಾದಿಷು ಪಞ್ಚಸು ತಾ-
ಮಹಮಸ್ಮಿ ಮಮೇತಿ ಮತಿಂ ಸತತಮ್ ।
ದೃಶಿರೂಪಮನನ್ತಮಜಂ ವಿಗುಣಂ
ಹೃದಯಸ್ಥಮವೇಹಿ ಸದಾಽಹಮಿತಿ ॥ ೩ ॥

ಜಲಭೇದಕೃತಾ ಬಹುತೇವ ರವೇ-
ರ್ಘಟಕಾದಿಕೃತಾ ನಭಸೋಽಪಿ ಯಥಾ ।
ಮತಿಭೇದಕೃತಾ ತು ತಥಾ ಬಹುತಾ
ತವ ಬುದ್ಧಿದೃಶೋಽವಿಕೃತಸ್ಯ ಸದಾ ॥ ೪ ॥

ದಿನಕೃತ್ಪ್ರಭಯಾ ಸದೃಶೇನ ಸದಾ
ಜನಚಿತ್ತಗತಂ ಸಕಲಂ ಸ್ವಚಿತಾ
ವಿದಿತಂ ಭವತಾSವಿಕೃತೇನ ಸದಾ
ಯತ ಏವಮತೋSಸಿ ಸದೇವ ಸದಾ ॥ ೫ ॥

['ಇತ್ಯಾದಿಭಿರ್ಗುರುಶಿಷ್ಯಸಂವಾದೇನ ಪರತತ್ತ್ವವ್ಯಞ್ಜಕೈಃ...ಸಹ ದೇಶಿಕವರಂ ಶ್ರೀಶಙ್ಕರಂ ಪ್ರತ್ಯಾಗತವಾನಿತ್ಯರ್ಥಃ'– ಎಂದಿರುವದರಿಂದ ಇನ್ನೂ ಕೆಲವು ಪದ್ಯಗಳಿರುವ ವೆಂದಾಗುತ್ತದೆ. 'ಶ್ರುತಿಸಾರಸಮುದ್ಧರಣ'ವೆಂಬ ೧೭೯ ತೋಟಕಗಳ ಸಂಗ್ರಹವು "ವೇದಾಂತ ಸಮುಚ್ಚಯ" (ಪ್ರ. ೨೦೭–೨೨೨)ವೆಂಬ ಗ್ರಂಥದಲ್ಲಿ ಬ್ರಹ್ಮರ್ಷಿ ಹರಿರಾಮು ಶರ್ಮಾ ಎಂಬವರಿಂದ ಪ್ರಕಾಶಿತವಾಗಿದೆಯಂತೆ. (ಬಲ. ಶಂ. ಪು. ೧೫೮) ಅದೇ ಈ ಗ್ರಂಥವೋ ಅಥವಾ ಬೇರೆಯೋ ಹೇಳಲಾರೆವು,]

(೭) ಶಿವಭುಜಙ್ಗಪ್ರಯಾತಸ್ತೋತ್ರ
(ಚರಿತ್ರೆ ಪುಟ ೨೪೦–೨೪೨)

[ಗಲದ್ದಾನಗಣ್ಡಂ ಮಿಲದ್ಭೃಙ್ಗಷಣ್ಡಂ
ಚಲಚ್ಚಾರುಶುಣ್ಡಂ ಜಗತ್ತ್ರಾಣಶೌಣ್ಡಮ್ ।
ಲಸದ್ದನ್ತಕಾಣ್ಡಂ ವಿಪದ್ಭಙ್ಗಚಣ್ಡಂ
ಶಿವಪ್ರೇಮಪಿಣ್ಡಂ ಭಜೇ ವಕ್ರತುಣ್ಡಮ್ ॥]

ಅನಾದ್ಯನ್ದಮಾದ್ಯಂ ಪರಂ ತತ್ತ್ವಮರ್ಥಂ
ಚಿದಾಕಾರಮೇಕಂ ತುರೀಯಂ ತ್ವಮೇಯಮ್
ಹರಿಬ್ರಹ್ಮವೃಗ್ಯಂ ಪರಬ್ರಹ್ಮರೂಪಂ
ಮನೋವಾಗತೀತಂ ಮಹಃ ಶೈವಮೀಡೇ ॥ ೧ ॥

ಸ್ವಶಕ್ತ್ಯಾದಿಶಕ್ತ್ಯನ್ತ ಸಿಂಹಾಸನಸ್ಥಂ
ಮನೋಹಾರಿಸರ್ವಾಙ್ಗರತ್ನಾದಿ[1] ಭೂಷಮ್
ಜಟಾಚನ್ದ್ರಗಙ್ಗಾಸ್ಥಿಸಂಪರ್ಕಮೌಲಿಂ[2]
ಪರಾ(?)ಶಕ್ತಿಮಿತ್ರಂ ನುಮಃ ಪಞ್ಚವಕ್ತ್ರಮ್ । ೨ ।

ಶಿವೇಶಾನತತ್ಪೂರುಷಾಘೋರವಾಮಾ–
ದಿಭಿರ್ಬ್ರಹ್ಮಭಿ[3] ರ್ಹೃನ್ಮುಖೈಃ ಷಡ್ಭಿರಜಸ್ರಂ ಗಲಃ ।
ಅನೌಪಮ್ಯಷಟ್ತ್ರಿಂಶಕಂ ತತ್ತ್ವವಿದ್ಯಾ–
ಮತೀತಂ ಪರಂ ತ್ವಾಂ ಕಥಂ ವೇತ್ತಿ ಕೋ ವಾ ॥ ೩ ।

---

1. ರತ್ನೋರು. 2. ಜಟಾಹೀನ್ದುಗಙ್ಗಾಸ್ಥಿಶಮ್ಯಾಕ 3. ಪಞ್ಚಭಿ'

ಪ್ರವಾಲಪ್ರವಾಹಪ್ರಭಾಶೋಣಮರ್ಧಂ
ಮರುತ್ವನ್ಮಣಿಶ್ರೀಮಹಃಶ್ಯಾಮಮರ್ಧಮ್ ।
ಗುಣಸ್ಯೂತಮೇಕಂ ವಪುಶ್ಚೈಕಮನ್ತಃ[1]
ಸ್ಮರಾಮಿ ಸ್ಮರಾಪತ್ತಿಸಂಪತ್ತಿಹೇತುಮ್[2] ।೪।

ಸ್ವಸೇವಾಸಮಾಯಾತದೇವಾಸುರೇನ್ದ್ರ–
ನಮನ್ಮೌಲಿಮನ್ದಾರಮಾಲಾಭಿಷಿಕ್ತಮ್ ।
ನಮಸ್ಯಾಮಿ ಶಮ್ಭೋ ಪದಾಮ್ಭೋರುಹಂ ತೇ
ಭವಾಮ್ಭೋಧಿಪೋತಂ ಭವಾನೀವಿಭಾವ್ಯಮ್ ।೫।

ಜಗನ್ನಾಥ ಮನ್ನಾಥ ಗೌರೀಸನಾಥ
ಪ್ರಪನ್ನಾನುಕಮ್ಪಿನ್ ವಿಪನ್ನಾರ್ತಿಹಾರಿನ್ ।
ಮಹಃಸ್ತೋಮಮೂರ್ತೇ ಸಮುಸ್ತೈ ಕಬನ್ಧೋ
ನಮಸ್ತೇ ನಮಸ್ತೇ ಪುನಸ್ತೇ ನಮೋऽಸ್ತು ।೬।

ಮಹಾದೇವ ದೇವೇಶ ದೇವಾದಿದೇವ
ಸ್ಮರಾರೇ ಪುರಾರೇ ಯಮಾರೇ ಹರೇತಿ ।
ಬ್ರುವಾಣಃ ಸ್ಮರಿಷ್ಯಾಮಿ ಭಕ್ತ್ಯಾ ಭವನ್ತಂ
ತತೋ ಮೇ ದಯಾಶೀಲ ದೇವ ಪ್ರಸೀದ ।೭।

ವಿರೂಪಾಕ್ಷ ವಿಶ್ವೇಶ ವಿಶ್ವಾಧಿಪೇಶ[3]
ತ್ರಯೀಮಾಮೂಲ ಶಮ್ಭೋ ಶಿವ ತ್ರ್ಯಮ್ಬಕ ತ್ವಮ್ ।
ಪ್ರಸೀದ ಸ್ಮರ ತ್ರಾಹಿ ಪಶ್ಯಾವ ಪುಷ್ಯ[4]
ಕ್ಷಮಸ್ವಾऽऽಪ್ನುಹೀತಿ ಕ್ಷಪಾ ಹಿ ಕ್ಷಿಪಾಮಃ[5] ।೮।

ತ್ವದನ್ಯಃ ಶರಣ್ಯಃ ಪ್ರಪನ್ನಸ್ಯ ನೇತಿ
ಪ್ರಸೀದ ಸ್ಮರನ್ನೇऽವ ಹನ್ಯಾಶು[6] ದೈನ್ಯಮ್ ।
ನ ಚೇತ್ತೇ ಭವೇದ್ಭಕ್ತವಾತ್ಸಲ್ಯಹಾನಿ–
ಸ್ತತೋ ಮೇ ದಯಾಲೋ ದಯಾಂ[7] ಸಂವಿಧೇಹಿ ।೯।

ಅಯಂ ದಾನಕಾಲಸ್ತ್ವಹಂ ದಾನಪಾತ್ರಂ
ಭವನ್ನಾಥ[8] ದಾತಾ ತ್ವದನ್ಯಂ ನ ಯಾಚೇ

---

1. ಗುಣಸ್ಯೂತಮೇತದ್ವಪುಃ ಶೈವಮನ್ತಃ 2. ಹೇತೋಃ
3. ವಿಶ್ವಾದಿದೇವ 4. ಪಶ್ಯಾವಮುಕ್ತ್ಯೈ
5. ಕ್ಷಮಾಂ ಪ್ರಾಪ್ನುಹಿ ತ್ರಾಹಿ ಮಾಂ ರಕ್ಷ ಮೋದಾತ್ 6. ಸ್ಮರನ್ನೇವ ಹನ್ಯಾಸ್ತು
7. ಸದಾ 8. ಭವಾನೇವ

ಭವದ್ಭಕ್ತಿಮೇವ ಸ್ಥಿರಾಂ ದೇಹಿ ಮಹ್ಯಂ
ಕೃಪಾಶೀಲ ಶರ್ವೋ ಕೃತಾರ್ಥೋಽಸ್ಮಿ ತಸ್ಮಾತ್ ॥ ೧೦ ॥
ಪಶುಂ ವೇತ್ಸಿ ಚೇನ್ಮಾಂ ತ್ವದೇವಾ[1] ಧಿರೂಢಃ
ಕಲಙ್ಕೀತಿ ವಾ ಮೂರ್ಧ್ನಿ ಧತ್ಸೇ ತ್ವಮೇವ[2] ।
ದ್ವಿಜಿಹ್ವಃ ಪುನಃ ಸೋಪಿ ತೇ ಕಣ್ಠಭೂಷಾ
ತ್ವದಙ್ಗೀಕೃತಾಃ ಶರ್ವ ಸರ್ವೇಽಪಿ ಧನ್ಯಾಃ ॥ ೧೧ ॥
ನ ಶಕ್ನೋಮಿ ಕರ್ತುಂ ಪರದ್ರೋಹಲೇಶಂ
ಕಥಂ ಪ್ರೀಯಸೇ ತ್ವಂ ನ ಜಾನೇ ಗಿರೀಶ ।
ತಥಾ ಹಿ ಪ್ರಸನ್ನೋಽಸಿ ಕಸ್ಯಾಪಿ ಕಾನ್ತಾ-
ಸುತದ್ರೋಹಿಣೋ ವಾ ಪಿತೃದ್ರೋಹಿಣೋ ವಾ ॥ ೧೨॥
ಸ್ತುತಿಂ ಧ್ಯಾನಮರ್ಚಾಂ ಯಥಾವದ್ವಿಧಾತುಂ
ಭಜನ್ನಪ್ಯಜಾನನ್ ಮಹೇಶಾವಲಮ್ಬೇ ।
ವಸನ್ತಂ[3] ಸುತಂ ತ್ರಾತುಮುಗ್ರೇ ಮೃಕಣ್ಡೋ-
ರ್ಯಮಪ್ರಾಣನಿರ್ವಾಪಣಂ ತ್ವತ್ಪದಾಬ್ಜಮ್ ॥ ೧೩ ॥
ಅಕಣ್ಠೇ ಕಲಙ್ಕಾದನಙ್ಗೇ ಭಜಙ್ಗಾ-
ದಪಾಣೌ ಕಪಾಲಾದಫಾಲೇಽನಲಾಕ್ಷಾತ್ ।
ಅಮೌಲೌ ಶಶಾಙ್ಕಾದವಾಮೇ ಕಲತ್ರಾ-
ದಹಂ ದೇವಮನ್ಯಂ ನ ಮನ್ಯೇ ನ ಮನ್ಯೇ ॥ ೧೪ ॥

[ವಾಣೀವಿಲಾಸಪಾಠದಲ್ಲಿ ಈ ಕೆಳಗಿನ ಶ್ಲೋಕಗಳು ಹೆಚ್ಚಾಗಿವೆ :]

ಶಿರೋದೃಷ್ಟಿಹೃದ್ರೋಗಶೂಲಪ್ರಮೇಹ-
ಜ್ವರಾರ್ಶೋಜರಾಯಕ್ಷ್ಮಹಿಕ್ಕಾವಿಷಾರ್ತಾನ್ ।
ತ್ವಮಾದ್ಯೋ ಭಿಷಕ್ ಭೇಷಜಂ ಭಸ್ಮ ಶಂಭೋ
ತ್ವಮುಲ್ಲಾಘಯಾಸ್ಮಾನ್ ವಪುರ್ಲಾಘವಾಯ ॥ ೧ ॥

ದರಿದ್ರೋಽಸ್ಮ್ಯಭದ್ರೋಽಸ್ಮಿ ಭಗ್ನೋಽಸ್ಮಿ ದೂಯೇ
ವಿಷಣ್ಣೋಽಸ್ಮಿ ಸನ್ನೋಽಸ್ಮಿ ಖಿನ್ನೋಽಸ್ಮಿ ಚಾಹಮ್ ।
ಭವಾನ್ ಪ್ರಾಣಿನಾಮನ್ತರಾತ್ಮಾಽಸಿ ಶಂಭೋ
ಮಮಾಧಿಂ ನ ವೇತ್ಸಿ ಪ್ರಭೋ ರಕ್ಷ ಮಾಂ ತ್ವಮ್ ॥ ೨ ॥

ತ್ವದಕ್ಷ್ಣೋಃ ಕಟಾಕ್ಷಃ ಪತೇತ್ತ್ರ್ಯಕ್ಷ ಯತ್ರ
ಕ್ಷಣಂ ಕ್ಷ್ಮಾ ಚ ಲಕ್ಷ್ಮೀಃ ಸ್ವಯಂ ತಂ ವೃಣಾತೇ ।

1–2, ತಮೇವ 3, ತ್ರಸನ್ತಂ

ಕಿರೀಟಸ್ಫುರಚ್ಚಾನುರಡ್ಬೃತ್ರಮಾಲಾ
ಕಲಾಚೀಗ(ಚಿರ್ಗ?) ಜಕ್ಷ್ಮಾಮಭೂಷಾವಿಶೇಷೈಃ ।೩।
ಭವಾನ್ಯೈ ಭವಾಯಾಪಿ ಮಾತ್ರೇ ಚ ಪಿತ್ರೇ
ಮೃಡಾನ್ಯೈ ಮೃಡಾಯಾಪ್ಯಘಘ್ನೈ ಮೃ ಮುಖಘ್ನೇ ।
ಶಿವಾಜಿ ೧ಶಿ ಶಿವಾಜ್ಞಾಯ ಕುರ್ಮಃ ಶಿವಾಯೈ
ಶಿವಾಯಾವಿಚ್ಚಿಕಾಯೈ ನಮಸ್ತ್ರ್ಯಂಬಕಾಯ ।೪।
ಭವದ್ಗೌರವಂ ಮುಲ್ಲಘುತ್ವಂ ವಿದಿತ್ವಾ
ಪ್ರಭೋ ರಕ್ಷ ಕಾರುಣ್ಯದೃಷ್ಟ್ಯಾನುಗಂ ಮಾಮ್ ।
ಶಿವಾತ್ಮಾನುಭಾವ ಸ್ತುತಾವಕ್ಷಮೋಽಹಂ
ಸ್ವಶಕ್ತ್ಯಾ ಕೃತಂ ಮೇಽಪರಾಧಂ ಕ್ಷಮಸ್ವ ।೫।
ಯದಾ ಕರ್ಣರಂಧ್ರಂ ವ್ರಜೇತ್ಕಾಲವಾಹ–
ದ್ವಿಷತ್ಕಣ್ಠಘಣ್ಟಾಘಣಾತ್ಕಾರನಾದಃ ।
ವೃಷಾಧೀಶಮಾರುಹ್ಯ ದೈವೋಪವಾಹ್ಯಂ
ತದಾ ವತ್ಸ ಮಾ ಭೀರಿತಿ ಪ್ರೀಣಯ ತ್ವಮ್ ।೬।

ಯದಾ ದಾರುಣಾ ಭಾಷಣಾ ಭೀಷಣಾ ಮೇ
ಭವಿಷ್ಯನ್ತ್ಯಪಾನ್ತೇ ಕೃತಾನ್ತಸ್ಯ ದೂತಾಃ ।
ತದಾ ಮನ್ಮನಸ್ತ್ವತ್ಪದಾಮ್ಭೋರುಹಸ್ಥಂ
ಕಥಂ ನಿಶ್ಚಲಂ ಸ್ಯಾನ್ನಮಸ್ತೇಽಸ್ತು ಶಂಭೋ ।೭।

ಯದಾ ದುರ್ನಿವಾರವ್ಯಥೋಽಹಂ ಶಯಾನೋ
ಲುಠನ್ನಿಃಶ್ವಸನ್ ನಿಃಸೃತಾವ್ಯಕ್ತವಾಣಿಃ ।
ತದಾ ಜಹ್ನುಕನ್ಯಾಜಲಾಲಜ್ಜಟಂ ತೇ
ಜಟಾಮಣ್ಡಲಂ ಮನ್ಮನೋಮನ್ದಿರಂ ಸ್ಯಾತ್ ।೮।

ಯದಾ ಪುತ್ರಮಿತ್ರಾದಯೋ ಮತ್ಸಕಾಶೇ
ರುದನ್ತ್ಯಸ್ಯ ಹಾ ಕೀದೃಶೀಯಂ ದಶೇತಿ ।
ತದಾ ದೇವದೇವೇಶ ಗೌರೀಶ ಶಂಭೋ
ನಮಸ್ತೇ ಶಿವಾಯೇತ್ಯಜಸ್ರಂ ಬ್ರವಾಣಿ ।೯।

ಯದಾ ಪಶ್ಯತಾಂ ಮಾಮಮೀ ವೇತ್ತಿ ನಾಸ್ಮಾ–
ನಯಂ ಶ್ವಾಸ ಏವೇತಿ ವಾಚೋ ಭವೇಯುಃ ।
ತದಾ ಭೂತಿಭೂಷಂ ಭುಜಙ್ಗಾವನದ್ಧಂ
ಪುರಾರೇ ಭವನ್ತಂ ಸ್ಫುಟಂ ಭಾವಯೇಯಮ್ ।೧೦।

ಯದಾ ಯಾತನಾದೇಹಸನ್ದೇಹವಾಹೀ
ಭವೇದಾತ್ಮದೇಹೇ ನ ಮೋಹೋ ಮಹಾನ್ಮೇ ।
ತದಾ ಕಾಶಶೀತಾಂಶುಸಂಕಾಶಮೀಶ
ಸ್ಮರಾರೇ ವಪುಸ್ತೇ ನಮುಸ್ತೇ ಸ್ಮರಾಮಿ ।೧೧।

ಯದಾಪಾರಮುಚ್ಚಾಯುಮುಸ್ಥಾನಮುದ್ಬಿ-
ರ್ಜನ್ಯೈರ್ವಾ ವಿಹೀನಂ ಗಮಿಷ್ಯಾಮಿ ಮಾರ್ಗಮ್ ।
ತದಾ ತಂ ನಿರುನ್ಧನ್ ಕೃತಾನ್ತಸ್ಯ ಮಾರ್ಗಂ
ಮಹಾದೇವ ಮಹ್ಯಂ ಮನೋಜ್ಞಂ ಪ್ರಯಚ್ಛ ।೧೨।

ಯದಾ ರೌರವಾದಿ ಸ್ಮರನ್ನೇವ ಭೀತ್ಯಾ
ವ್ರಜಾಮ್ಯತ್ರ ಮೋಹಂ ಮಹಾದೇವ ಘೋರಮ್ ।
ತದಾ ಮಾಮಹೋ ನಾಥ ಕಸ್ತಾರಯಿಷ್ಯ-
ತ್ಯನಾಥಂ ಪರಾಧೀನಮರ್ಧೇನ್ದುಮೌಳೇ ।೧೩।

ಯದಾ ಶ್ವೇತಪತ್ರಾ(?)ಯತಾಲಙ್ಘ್ಯಶಕ್ತೇಃ
ಕೃತಾನ್ತಾದ್ಭಯಂ ಭಕ್ತವಾತ್ಸಲ್ಯಭಾವಾತ್ ।
ತದಾ ಪಾಹಿ ಮಾಂ ಪಾರ್ವತೀವಲ್ಲಭಾನ್ಯಂ
ನ ಪಶ್ಯಾಮಿ ಪಾತಾರಮೇತಾದೃಶಂ ಮೇ ।೧೪।

ಇದಾನೀಮಿದಾನೀಂ ಮೃತಿರ್ಮೇ ಭವಿತ್ರೀ-
ತ್ಯಹೋ ಸಂತತಂ ಚಿನ್ತಯಾ ಪೀಡಿತೋಽಸ್ಮಿ ।
ಕಥಂ ನಾಮ ಮಾ ಭೂನ್ಮೃತೌ ಭೀತಿರೇಷಾ
ನಮುಸ್ತೇಽಗತೀನಾಂ ಗತೇ ನೀಲಕಣ್ಠ ।೧೫।

ಅಮುರ್ಯಾದಮೇವಾಹಮಾಬಾಲವೃದ್ಧಂ
ಹರನ್ತಂ ಕೃತಾನ್ತಂ ಸಮೀಕ್ಷ್ಯಾಸ್ಮಿ ಭೀತಃ ।
ಮೃತೌ ತಾವಕಾಙ್ಘ್ರ್ಯಬ್ಜದಿವ್ಯಪ್ರಸಾದಾ-
ದ್ಭವಾನೀಪತೇ ನಿರ್ಭಯೋಽಹಂ ಭವಾನಿ ।೧೬।

ಜರಾಜನ್ಮಗರ್ಭಾಧಿವಾಸಾದಿದುಃಖಾ-
ನ್ಯರಹ್ಯಾನಿ ಜಹ್ಯಾಂ ಜಗನ್ನಾಥ ದೇವ ।
ಭವನ್ತಂ ವಿನಾ ಮೇ ಗತಿರ್ನೈವ ಶಂಭೋ
ದಯಾಲೋ ನ ಜಾಗರ್ತಿ ಕಿಂ ವಾ ದಯಾ ತೇ ।೧೭।

ಶಿವಾಯೇತಿ ಶಬ್ದೋ ನಮಃ ಪೂರ್ವ ಏಷಃ
ಸ್ಮರನ್ ಮುಕ್ತಿಕೃನ್ಮೃತ್ಯುಹಾ ತತ್ತ್ವವಾಚೀ ।

ಮಹೇಶಾನ ಮಾ ಗಾನ್ಮನಸ್ತೋ ವಚಸ್ತಃ
ಸದಾ ಮಹ್ಯಮೇತತ್ಪ್ರದಾನಂ ಪ್ರಯಚ್ಛ ।೧೮।
ತ್ವಮುಷ್ಯಪ್ಪ ಮಾಂ ಪಶ್ಯ ಶೀತಾಂಶುಮೌಲಿ-
ಪ್ರಿಯೇ ಭೇಷಜಂ ತ್ವಂ ಭವವ್ಯಾಧಿಶಾನ್ತೌ ।
ಬಹುಕ್ಲೇಶಭಾಜಂ ಪದಾಮ್ಭೋಜಪೋತೇ
ಭವಾಬ್ಧೌ ನಿಮಗ್ನಂ ನಯಸ್ವಾದ್ಯ ಪಾರಮ್ ।೧೯।
ಅನುದ್ಯಲ್ಲಲಾಟಾಕ್ಷಿವಹ್ನಿಪ್ರರೋಹೈ-
ರವಾಮಸ್ಫುರಚ್ಚಾರುವಾಮೋರುಶೋಭೈಃ ।
ಅನಙ್ಗಭ್ರಮದ್ಭೋಗಿಭೂಷಾವಿಶೇಷೈ-
ರಜನ್ಯಾರ್ಧಚೂಡೈರಲಂ ದೈವತೈರ್ನಃ ।೨೦।
ಮಹಾದೇವ ಶಂಭೋ ಗಿರೀಶ ತ್ರಿಶೂಲಿನ್
ತ್ವಯೀದಂ ಸಮಸ್ತಂ ವಿಭಾತೀತಿ ಯಸ್ಮಾತ್
ಶಿವಾದನ್ಯಥಾ ದೈವತಂ ನಾಭಿಜಾನೇ
ಶಿವೋಽಹಂ ಶಿವೋಽಹಂ ಶಿವೋಽಹಂ ಶಿವೋಽಹಮ್ ।೨೧।
ಯತೋಽಜಾಯತೇದಂ ಪ್ರಪಞ್ಚಂ ವಿಚಿತ್ರಂ
ಸ್ಥಿತಿಂ ಯಾತಿ ಯಸ್ಮಿನ್ ಯದೇಕಾನ್ತಮನ್ತೇ ।
ಸ ಕರ್ಮಾದಿಹೀನಃ ಸ್ವಯಂಜ್ಯೋತಿರಾತ್ಮಾ
ಶಿವೋಽಹಂ ಶಿವೋಽಹಂ ಶಿವೋಽಹಂ ಶಿವೋಽಹಮ್ ।೨೨।
ಕಿರೀಟೇ ನಿಶೇಶೋ ಲಲಾಟೇ ಹುತಾಶೋ
ಭುಜೇ ಭೋಗಿರಾಜೋ ಗಲೇ ಕಾಲಿಮಾ ಚ ।
ತನೌ ಕಾಮಿನೀ ಯಸ್ಯ ತತ್ತುಲ್ಯದೇವಂ
ನ ಜಾನೇ ನ ಜಾನೇ ನ ಜಾನೇ ನ ಜಾನೇ ।೨೩।
ಅನೇನ ಸ್ತವೇನಾದರಾದಮ್ಬಿಕೇಶಂ
ಪರಾಂ ಭಕ್ತಿಮಾಸಾದ್ಯ ಯಂ ಯೇ ನಮನ್ತಿ ।
ಮೃತೌ ನಿರ್ಭಯಾಸ್ತೇ ಜನಾಸ್ತಂ ಭಜನ್ತೇ
ಹೃದಮ್ಭೋಜಮಧ್ಯೇ ಸದಾಸೀನಮೀಶಮ್ ।೨೪।
ಭುಜಙ್ಗಪ್ರಯಾಕಲ್ಪ ಶಂಭೋ ಮಯೈವಂ
ಭುಜಙ್ಗಪ್ರಯಾತೇನ ವೃತ್ತೇನ ಕ್ಲೃಪ್ತಮ್
ನರಃ ಸ್ತೋತ್ರಮೇತತ್ ಪಠಿತ್ವೋರುಭಕ್ತ್ಯಾ
ಸುಪುತ್ರಾಯುರಾರೋಗ್ಯಮೈಶ್ವರ್ಯಮೇತಿ ।೨೫।

(೮) ವಿಷ್ಣುಭುಜಙ್ಗಪ್ರಯಾತಸ್ತೋತ್ರಮ್

(ಚರಿತ್ರೆಯ ೨೪ನೆಯ ಪುಟ)

ಚಿದಂಶಂ ವಿಭುಂ ನಿರ್ಮಲಂ ನಿರ್ವಿಕಲ್ಪಂ
ನಿರೀಹಂ ನಿರಾಕಾರನೋಙ್ಕಾರಗಮ್ಯಮ್ ।
ಗುಣಾತೀತಮವ್ಯಕ್ತಮೇಕಂ ತುರೀಯಂ
ಪರಂ ಬ್ರಹ್ಮ ಯಂ ವೇದ ತಸ್ಮೈ ನಮಸ್ತೇ ।೧।

ವಿಶುದ್ಧಂ ಶಿವಂ ಶಾನ್ತಮಾದ್ಯನ್ತಶೂನ್ಯಂ
ಜಗಜ್ಜೀವನಂ ಜ್ಯೋತಿರಾನನ್ದಮೂರ್ತಿಮ್ ।[1]
ಅದಿಗ್ದೇಶಕಾಲವ್ಯವಚ್ಛೇದನೀಯಂ
ತ್ರಯೀವರ್ತಿ[2] ಯಂ ವೇದ ತಸ್ಮೈ ನಮಸ್ತೇ ।೨।

ಮಹಾಯೋಗಪೀಠೇ ಪರಿಭ್ರಾಜಮಾನೇ
ಧರಣ್ಯಾದಿತತ್ತ್ವಾತ್ಮಕೇ ಶಕ್ತಿಯುಕ್ತೇ ।
ಗುಣಾಹಸ್ಕರೇನಾಗ್ನಿಬಿಮ್ಬೇನ ಮಧ್ಯೇ[3]
ಸಮಾಸೀನಮೋಙ್ಕರ್ಣಿಕಾಷ್ಟಾಕ್ಷರಾಬ್ಜೇ ।೩।

ಸಮಾನೋದಿತಾನೇಕಸೂರ್ಯೋನ್ದುಕೋಟಿ–
ಪ್ರಭಾಪೂರತುಲ್ಯದ್ಯುತಿಂ ದುರ್ನಿರೀಕ್ಷ್ಯಮ್ ।
ನ ಶೀತಂ ನ ಚೋಷ್ಣಂ ಸುವರ್ಣಾವದಾತಂ
ಪ್ರಸನ್ನಂ ಸದಾನನ್ದಸಂವಿತ್ಸ್ವರೂಪಮ್ ।೪।

ಸುನಾಸಾಪುಟಂ ಸುನ್ದರಭ್ರೂಲಲಾಟಂ
ಕಿರೀಟೋಚಿತಾಕುಞ್ಚಿತಸ್ನಿಗ್ಧಕೇಶಮ್ ।
ಸ್ಫುರತ್ಪುಣ್ಡರೀಕಾಭಿರಾಮಾಯತಾಕ್ಷಂ
ಸಮುತ್ಫುಲ್ಲರತ್ನಪ್ರಸೂನಾವತಂಸಮ್ ।೫।

ಲಸತ್ಕುಣ್ಡಲಾಮೃಷ್ಟಗಣ್ಡಸ್ಥಲಾನ್ತಂ
ಜಪಾರಾಗ(ರುಣ್ಯ) ಚೋರಾಧರಂ ಚಾರುಹಾಸಮ್ ।
ಅಲಿವ್ಯಾಕುಲಾಮೋದಿಮನ್ದಾರಮಾಲಂ
ಮಹೋರಃಸ್ಫುರತ್ಕೌಸ್ತುಭೋದ್ದಾಮ[4]ಹಾರಮ್ ।೬।

---

1. ರೂಪಮ್ 2. ವರ್ತಿ
3. ಗುಣಾಹಸ್ಕರೇ ವಹ್ನಿಬಿಮ್ಬಾರ್ಧಮಧ್ಯೇ 4. ಕೌಸ್ತುಭೋದಾತ

ಸುರತ್ನಾಜ್ಞದೈರನ್ವಿತಂ ಬಾಹುದಣ್ಡೈ-
ಶ್ಚತುರ್ಭಿಶ್ಚಲತ್ಕಙ್ಕಣಾಲಙ್ಕೃತಾಗ್ರೈಃ।
ಉದಾರೋದರಾಲಙ್ಕೃತಂ ಪೀತವಸ್ತ್ರಂ
ಪದನ್ಯಸ್ತನಿರ್ಘೂತಪದ್ಮಾಭಿರಾಮಮ್ ।೭।

ಸ್ವಭಕ್ತೇಷು ಸಂದರ್ಶಿತಾಕಾರಮೇಕಂ
ಸದಾ ಭಾವಯನ್ ಸಂನಿರುದ್ಧೇನ್ದ್ರಿಯಸ್ತ್ವಮ್[1] ।
ದುರಾಪಂ ನರೋ ಯಾತಿ ಸಂಸಾರಪಾರಂ
ಪರಸ್ಮೈ ಪರೇಭ್ಯೋಽಪಿ ತಸ್ಮೈ ನಮಸ್ತೇ ।೮।

ಶ್ರಿಯಾ ಶಾತಕುಮ್ಭದ್ಯುತಿಸ್ನಿಗ್ಧಕಾನ್ತ್ಯಾ
ಧರಣ್ಯಾ ಚ ದೂರ್ವಾದಲಶ್ಯಾಮಲಾಜ್ಞ್ಯಾ ।
ಕಲತ್ರದ್ವಯೇನಾನಯಾ ತೋಷಿತಾಯೈ
ತ್ರಿಲೋಕೀಗೃಹಸ್ಥಾಯ ವಿಷ್ಣೋ ನಮಸ್ತೇ ।೯।

ಶರೀರಂ ಕಲತ್ರಂ ಸುತಂ ಬನ್ಧುವರ್ಗಂ
ವಯಸ್ಯಂ ಧನಂ ಸದ್ಮ ಭೃತ್ಯಂ ಭುವಂ ಚ ।
ಸಮಸ್ತಂ ಪರಿತ್ಯಜ್ಯ ಹಾ ಕಷ್ಟಮೇಕೋ
ಗಮಿಷ್ಯಾಮಿ ದುಃಖೇನ ದೂರಂ ಕಿಲಾಹಮ್ ।೧೦।

ಜರೇಯಂ ಪಿಶಾಚೀಯ ಹಾ ಜೀವತೋ ಮೇ
ವಸಾಮತ್ತಿ ರಕ್ತಂ ಚ ಮಾಂಸಂ ಬಲಂ ಚ[1]
ಅಹೋ ದೇವ ಸೀದಾಮಿ ದೀನಾನುಕಮ್ಪಿನ್
ಕಿಮದ್ಯಾಪಿ[2] ಹನ್ತ ತ್ವಯೋದಾಸಿತವ್ಯಮ್ ।೧೧।

ಕಫವ್ಯಾಹತೋಷ್ಣೋಲ್ಬಣಶ್ವಾಸವೇಗ-
ವ್ಯಥಾವಿಸ್ಫುರತ್ಸರ್ವಮರ್ಮಾಸ್ಥಿಬನ್ಧಮ್ ।
ವಿಚಿನ್ತ್ಯಾಹಮನ್ತ್ಯಮಚಿನ್ತ್ಯ[3]ಮವಸ್ಥಂ
ಬಿಭೇಮಿ ಪ್ರಭೋ ಕಂ ಕರೋಮಿ ಪ್ರಸೀದ ।೧೨।

ನಮಸ್ತೇ ಜಗನ್ನಾಥ ವಿಷ್ಣೋ ನಮಸ್ತೇ
ನಮಸ್ತೇ ಗದಾಚಕ್ರಪಾಣೇ ನಮಸ್ತೇ ।
ನಮಸ್ತೇ ಪ್ರಪನ್ನಾರ್ತಿಹಾರಿನ್ ನಮಸ್ತೇ
ಸಮಸ್ತಾಪರಾಧಂ ಕ್ಷಮಸ್ವಾಖಿಲೇಶ ।೧೩।

---

1. ಸುನಿರುದ್ಧೇನ್ದ್ರಿಯಾಶ್ವಃ 2. ಕಿಮದ್ಯಾಪಿ 3. ಅಸಂಖ್ಯಾಮು

ಮುಖೇ ಮನ್ದಹಾಸಂ ನಖೇ ಚನ್ದ್ರಭಾಸಂ
ಕರೇ ಚಾರುಚಕ್ರಂ ಸುರೇಶಾಭಿವನ್ದ್ಯಮ್ |
ಭುಜಶ್ಲೇ ಶಯಾನಂ ಭಜೇ ಪದ್ಮನಾಭಂ
ಹರೇರನ್ಯದೇವಂ ನ ಮನ್ಯೇ ನ ಮನ್ಯೇ ||೧೫||

['ಶಿವಭುಜಂಗಪ್ರಯಾತ'ದಂತೆ ಈ 'ವಿಷ್ಣುಭುಜಂಗಪ್ರಯಾತ'ದಲ್ಲಿಯೂ ಆಚಾರ್ಯರು ತಾಯಿಗಾಗಿ ಹೇಳಿದ್ದರ ಗುರುತು ಯಾವದೂ ಕಾಣುವದಿಲ್ಲ. ಇದು ಮಾಧವೀಯದಲ್ಲಿ ವರ್ಣಿತವಾಗಿರುವ ವಿಷ್ಣುವಿನ ಪರಿಯನ್ನು ಹೇಳುತ್ತಿಲ್ಲ. ಇದರಲ್ಲಿಯೂ ಶಿವಭುಜಂಗಪ್ರಯಾತದಂತೆ ಪ್ರಾಸಗಳಿವೆ : ಆದರೆ ಬಂಧವು ಅಷ್ಟು ಬಿಕ್ಕಟ್ಟಾಗಿಲ್ಲ. ಚಿದ್ವಿಲಾಸೀಯದಲ್ಲಿ ಹೇಳಿದ ವಿಷ್ಣುಭುಜಂಗಪ್ರಯಾತವು ಇದೇ ನಿಗಿದ್ದರೆ ಅವರ ಕಾಲಕ್ಕೆ ಇದು ಆಚಾರ್ಯಕೃತವೆಂದು ಪ್ರಸಿದ್ಧವಾಗಿತ್ತೆಂದು ಮಾತ್ರ ಹೇಳಬಹುದು. ಕೊನೆಯ ಪದ್ಯವ ವಾಕ್ಯದ ಸರಿಯಾಗಿ ಅನ್ವಯಿಸುವಂತೆ ಕಾಣಲಿಲ್ಲ. ಈ ಎರಡು ಭುಜಂಗಸ್ತೋತ್ರಗಳಲ್ಲಿಯೂ ಪಾಠಾಂತರಗಳಿವೆ. ವಿಶೇಷವಾಗಿ ಶಿವಭುಜಂಗದಲ್ಲಿ ಹೆಚ್ಚಾಗಿದೆ. ಕೆಲವು ಕಡೆ ಅರ್ಥವಾಗುವದೂ ಇಲ್ಲ.]

---

೯. ಮಠಾಮ್ನಾಯಗಳು ಮತ್ತು ಗುರುಪರಂಪರೆಯ ಪಟ್ಟಿಗಳು

(೧) ಮಠಾಮ್ನಾಯಃ

ಚತುರ್ದಿಕ್ಷು ಪ್ರಸಿದ್ಧಾಸು ಪ್ರಸಿದ್ಧ್ಯರ್ಥಂ ಸ್ವನಾಮತಃ |
ಚತುರೋಽಥ ಮಠಾನ್ ಕೃತ್ವಾ ಶಿಷ್ಯಾನ್ ಆಸ್ಥಾಪಯದ್ವಿಭುಃ |೧
ಚಕಾರ ಸಂಜ್ಞಾಮಾಚಾರ್ಯಶ್ಚತುರ್ಣಾ ನಾಮಭೇದತಃ |
ಕ್ಷೇತ್ರಂ ಚ ದೇವತಾಂ ಚೈವ ಶಕ್ತಿಂ ತೀರ್ಥಂ ಪೃಥಕ್ ಪೃಥಕ್ |೨|

---

1. ವಾಣೀವಿಲಾಸಪಾಠದಲ್ಲಿ ಕೊನೆಯ ಎರಡು ಶ್ಲೋಕಗಳಿಗೆ ಬದಲಾಗಿ ಈ ಕೆಳಗಿನ ಎರಡು ಶ್ಲೋಕಗಳಿವೆ.

ಲಪನ್ನಚ್ಯುತಾನನ್ತಗೋವಿನ್ದ ವಿಷ್ಣೋ
ಮುಂಕಾರೇ ಹರೇ ನಾಥ ನಾರಾಯಣೇತಿ |
ಯಥಾನುಸ್ಮರಿಷ್ಯಾಮಿ ಭಕ್ತ್ಯಾ ಭವನ್ತಂ
ತಥಾ ಮೇ ದಯಾಶೀಲ ದೇವ ಪ್ರಸೀದ ||೧||
ಭುಜಙ್ಗಪ್ರಯಾತಂ ಪಠೇದ್ಯಸ್ತು ಭಕ್ತ್ಯಾ
ಸಮಾಧಾಯ ಚಿತ್ತೇ ಭವನ್ತಂ ಮುರಾರೇ |
ಸ ಮೋಽಹಿಂ ವಿಹಾಯಾಶು ಯುಷ್ಮತ್ಪ್ರಸಾದಾತ್
ಸಮಾಶ್ರಿತ್ಯ ಯೋಗಂ ವ್ರಜತ್ಯಚ್ಯುತ ತ್ವಾಮ್ ||೨||

ಸಂಪ್ರದಾಯಂ ತಥಾಮ್ನಾಯಭೇದಂ ಚ ಬ್ರಹ್ಮಚಾರಿಣಾಮ್ ।
ಏವಂ ಪ್ರಕಲ್ಪಯಾಮಾಸ ಲೋಕೋಪಕರಣಾಯ ವೈ ॥೩॥

೧. ದಿಗ್ಭಾಗೇ ಪಶ್ಚಿಮೇ ಕ್ಷೇತ್ರಂ ದ್ವಾರಿಕಾ ಕಾಲಿಕಾಮಠಃ ।
ಕೀಟವಾಲಃ[1] ಸಂಪ್ರದಾಯಸ್ತೀರ್ಥಾಶ್ರಮಪದೇ ಉಭೇ ॥೪॥

ದೇವಃ ಸಿದ್ಧೇಶ್ವರಃ ಶಕ್ತಿರ್ಭದ್ರಕಾಲೀತಿ ವಿಶ್ರುತಾ ।
ಸ್ವರೂಪಬ್ರಹ್ಮಚಾರ್ಯಾಖ್ಯ ಆಚಾರ್ಯಃ ಪದ್ಮಪಾದಕಃ ॥೫॥

ವಿಖ್ಯಾತಂ ಗೋಮತೀತೀರ್ಥಂ ಸಾಮವೇದಶ್ಚ ತದ್ಗತಮ್ ।
ಜೀವಾತ್ಮಪರಮಾತ್ಮೈಕ್ಯಬೋಧೋ ಯತ್ರ ಭವಿಷ್ಯತಿ ॥೬॥

ವಿಖ್ಯಾತಂ ತನ್ಮಹಾವಾಕ್ಯಂ ವಾಕ್ಯಂ ತತ್ತ್ವಮಸೀತಿ ಚ ।
೨ ದ್ವಿತೀಯಃ ಪೂರ್ವದಿಗ್ಭಾಗೇ ಗೋವರ್ಧನಮಠಃ ಸ್ಮೃತಃ ॥೭॥

ಭೋಗವಾಲಃ ಸಂಪ್ರದಾಯಸ್ತತ್ಕಾರಣ್ಯವನೇ ಪದೇ ।
ತಸ್ಮಿನ್ ದೇವೋ ಜಗನ್ನಾಥಃ ಪುರುಷೋತ್ತಮಸಂಜ್ಞಿತಃ (ತಮ್)॥ ೮ ॥

ಕ್ಷೇತ್ರಂ ಚ ವೃಷಲಾದೇವೀ ಸರ್ವಲೋಕೇಷು ವಿಶ್ರುತಾ ।
ಪ್ರಕಾಶಬ್ರಹ್ಮಚಾರೀತಿ ಹಸ್ತಾಮಲಕಸಂಜ್ಞಿತಃ ॥೯॥

ಆಚಾರ್ಯಃ ಕಥಿತಸ್ತತ್ರ ನಾಮ್ನಾ ಲೋಕೇಷು ವಿಶ್ರುತಃ ।
ಖ್ಯಾತಂ ಮಹೋದಧಿಸ್ತೀರ್ಥಂ ಋಗ್ವೇದಃ ಸಮುದಾಹೃತಃ ॥೧೦॥

ಮಹಾವಾಕ್ಯಂ ಚ ತತ್ರೋಕ್ತಂ ಪ್ರಜ್ಞಾನಂ ಬ್ರಹ್ಮ ಚೋಚ್ಯತೇ ।
೩ ಉತ್ತರಸ್ಯಾಂ ಶ್ರೀಮಠಃ ಸ್ಯಾತ್ ಕ್ಷೇತ್ರಂ ಬದರಿಕಾಶ್ರಮಃ ॥೧೧॥

ದೇವೋ ನಾರಾಯಣೋ ನಾಮ ಶಕ್ತಿಃ ಪೂರ್ಣಗಿರೀತಿ ಚ ।
ಸಂಪ್ರದಾಯೋ ನನ್ದವಾಲಸ್ತೀರ್ಥಂ ಚಾಲಕನನ್ದಿಕಾ ॥೧೨॥

ಆನನ್ದಬ್ರಹ್ಮಚಾರೀತಿ ಗಿರಿಪರ್ವತಸಾಗರಾಃ ।
ನಾಮಾನಿ ತೋಟಕಾಚಾರ್ಯೋ ವೇದೋಽಥರ್ವಣಸಂಜ್ಞಿತಃ ॥೧೩॥

ಮಹಾವಾಕ್ಯಂ ಚ ತತ್ರಾಯಮಾತ್ಮಾ ಬ್ರಹ್ಮೇತಿ ಕೀರ್ತ್ಯತೇ ।
೪ ತುರೀಯೋ ದಕ್ಷಿಣಸ್ಯಾಂ ಚ ಶೃಙ್ಗೇರ್ಯಾಂ ಶಾರದಾಮಠಃ ॥೧೪॥

ಮಲಹಾನಿಕರಂ ಲಿಙ್ಗಂ ವಿಭಾಣ್ಡಕಸುಪೂಜಿತಮ್ ।
ಯತ್ರಾಸ್ತೇ ಋಷ್ಯಶೃಙ್ಗಸ್ಯ ಮಹರ್ಷೇರಾಶ್ರಮೋ ಮಹಾನ್ ॥೧೫॥

---

1. ಮುಂದೆ ಬರೆದಿರುವ ಸಂಪ್ರದಾಯವಿವರಣದಲ್ಲಿ 'ಕೀಟವಾರ' ಎಂದಿದೆ, 'ರಲಯೋರಭೇದಃ' ಎಂಬ ನಿಯಮದಿಂದ ಇಲ್ಲಿ ಲಕಾರವಿರಬಹುದೇನೊ !

ವರಾಹೋ ದೇವತಾ ತತ್ರ ರಾಮುಕ್ಷೇತ್ರಮುದಾಹೃತಮ್ ।
ತೀರ್ಥಂ ಚ ತುಙ್ಗಭದ್ರಾಖ್ಯಂ ಶಕ್ತಿಃ ಶ್ರೀಶಾರದೇತಿ ಚ ॥ ೧೬ ॥
ಆಚಾರ್ಯಸ್ತತ್ರ ಚೈತನ್ಯಬ್ರಹ್ಮಚಾರೀತಿ ವಿಶ್ರುತಃ ।
ವಾರ್ತಿಕಾದಿಬ್ರಹ್ಮವಿದ್ಯಾಕರ್ತಾ ಯೋ ಮುನಿಪೂಜಿತಃ ॥ ೧೭ ॥
ಸುರೇಶ್ವರಾಚಾರ್ಯ ಇತಿ ಸಾಕ್ಷಾದ್ಬ್ರಹ್ಮಾವತಾರಕಃ ।
ಸರಸ್ವತೀ ಪುರೀ ಚೇತಿ ಭಾರತ್ಯಾರಣ್ಯತೀರ್ಥಕೌ ॥ ೧೮ ॥
ಗಿರ್ಯಾಶ್ರಮಮುಖಾನಿ ಸ್ಯುಃ ಸರ್ವನಾಮಾನಿ ಸರ್ವದಾ ।
ಸಂಪ್ರದಾಯೋ ಭೂರಿವಾಲೋ ಯಜುರ್ವೇದ ಉದಾಹೃತಃ ॥ ೧೯ ॥
ಅಹಂ ಬ್ರಹ್ಮಾಸ್ಮೀತಿ ತತ್ರ ಮಹಾವಾಕ್ಯಮುದೀರಿತಮ್ ।
ಚತುರ್ಣಾಂ ದೇವತಾಶಕ್ತಿಕ್ಷೇತ್ರನಾಮಾನ್ಯನುಕ್ರಮಾತ್ ॥ ೨೦ ॥
ಮಹಾವಾಕ್ಯಾನಿ ವೇದಾಶ್ಚ ಸರ್ವಮುಕ್ತಂ ವ್ಯವಸ್ಥಯಾ ।
ಇತಿ ಶ್ರೀಮತ್ಪರಮಹಂಸಪರಿವ್ರಾಜಕಭೂಪತೇಃ ॥ ೨೧ ॥
ಆಮ್ನಾಯಸ್ತೋತ್ರಪಠನಾದಿಹಾಮುತ್ರ ಚ ಸದ್ಗತಿಮ್ ।
ಪ್ರಾಪ್ನ್ಯಾನ್ತೇ ಮೋಕ್ಷಮಾಪ್ನೋತಿ ದೇಹಾನ್ತೇ ನಾತ್ರ ಸಂಶಯಃ ॥ ೨೨ ॥

[ವಿಶೇಷಃ: ಇದು ಶ್ರೀವಾಣೀವಿಲಾಸಮುದ್ರಣಾಲಯದಲ್ಲಿ ಅಚ್ಚಾದದ್ದರ ಪ್ರತಿಲಿಪಿ. ಇದನ್ನು ಶೃಂಗೇರಿಸಂಪ್ರದಾಯವೆಂದು ಮಹಾದೇವ ರಾಜಾರಾಮು ಬೋಡಸ್ (ಬೋ. ಪು. ೪೮) ಕರೆದಿದ್ದಾರೆ. ಇದು ಆಚಾರ್ಯರು ಮಠಸ್ಥಾಪನೆಮಾಡಿದರೆಂದು ಯಾರೋ ಬರೆದದ್ದೆಂಬುದು ಸ್ಪಷ್ಟ. ಇದರಲ್ಲಿ ಸುರೇಶ್ವರರು ಶೃಂಗೇರೀಪೀಠಾಧಿಪರೆಂದಿದೆ. 'ಮೂರ್ಕ್ಕಂ ಡೇಯುಸಂಹಿತೆ'ಯಲ್ಲಿ ಶೃಂಗೇರಿಗೆ ಪದ್ಮಪಾದರೆಂದಿರುವದಕ್ಕೆ ಇದು ವಿರುದ್ಧ. ಆನಂದ ಗಿರೀಯದೇವನಾಗರೀ ಮುದ್ರಣದಲ್ಲಿ ಸುರೇಶ್ವರಾಖ್ಯಮ್ (ಪು. ೧೯೨) ಎಂದಿರುವದನ್ನು ತೆಲುಗು ಪುಸ್ತಕದಲ್ಲಿ (ಪು. ೬೩) 'ಪದ್ಮಪಾದ'ರೆಂದು ಮಾರ್ಪಡಿಸಿದೆ. ಇಲ್ಲಿ ಚಂದ್ರಮೌಲೀ ಶ್ವರಲಿಂಗವನ್ನು ಹೆಸರಿಸದೆ 'ಮಲಹಾನಿಕರಲಿಂಗ'ವನ್ನೇಕೆ ಬರೆದಿದೆಯೋ ತಿಳಿಯದು. ಶೃಂಗೇರಿಯ ಪೀಠಾಧಿಪರಿಗೆ 'ಸರ್ವನಾಮಾನಿ ಸರ್ವದಾ' ಎಲ್ಲ ಹೆಸರುಗಳೂ ಇರುತ್ತವೆ ಎಂದಿರುವದನ್ನು ಲಕ್ಷಿಸಬೇಕು. ಆನಂದಗಿರೀಯ ಚಿದ್ವಿಲಾಸೀಯಗಳಲ್ಲಿ ಭಾರತೀಸಂಪ್ರ ದಾಯವೆಂದು ಬರೆದಿರುತ್ತದೆ ಎಂದು (ಪು. ೨೨೧) ಆಗಲೆ ಹೇಳಿದೇವೆ. ಚಿದ್ವಿಲಾಸೀಯದಲ್ಲಿ ಆಚಾರ್ಯರು ದಶಸಂಪ್ರದಾಯಗಳನ್ನೇರ್ಪಡಿಸುವಂತೆ ಹೇಳಿದರೆಂಬುದನ್ನೂ ಅಲ್ಲಿ ಹೇಳಿರು ತ್ತೇವೆ.]

(೨) ಮಠಾಮ್ನಾಯಃ

[ಶಾರೀರಬ್ರಹ್ಮಮೀಮಾಂಸಾಭಾಷ್ಯಕರ್ತಾ ಹಿ ಸದ್ಗುರುಃ ।
ಮುನಿಃ ಶ್ರೀಶಙ್ಕರಾಚಾರ್ಯೋ ಲೋಕೋಪಕರಣಾಯ ವೈ ॥ ೧ ॥
ಚತುರ್ದಿಶಾಂ ಪ್ರದೇಶೇಷು ಪ್ರಸಿದ್ಧ್ಯರ್ಥಂ ಸ್ವನಾಮತಃ ।
ಚತುರಃ ಸ ಮಠಾನ್ ಕೃತ್ವಾ ಶಿಷ್ಯಾನಸ್ಥಾಪಯದ್ವಿಭುಃ ॥ ೧ ॥

ಚಕಾರ ಸಂಜ್ಞಾಮಾಚಾರ್ಯಃ ಚತುರ್ಣಾಂ ನಾಮಭೇದತಃ ।
ಕ್ಷೇತ್ರಂ ಚ ದೇವತಾಂ ಚೈವ ಶಕ್ತಿಂ ತೀರ್ಥಂ ಪೃಥಕ್ ಪೃಥಕ್ ॥ ೩ ॥
ಸಂಪ್ರದಾಯಾಂಶ್ಚ ನಾಮ್ನಾಂ ಚ ಭೇದಂ ಚ ಬ್ರಹ್ಮಚಾರಿಣಾಮ್ ।
ಚತುರ್ಣಾಂ ಚ ಮಠಾನಾಂ ಚ ಶಿಷ್ಯಾನ್ ದೇವಾನ್ ವ್ಯವಸ್ಥಯಾ ॥೪॥
ಏವಂ ಪ್ರಕಲ್ಪಯಾಮಾಸ ಲೋಕೋಪಕರಣಾಯ ವೈ ॥]

ವಿಶೇಷ : ಮೇಲೆ ಚೌಕಕಂಸದಲ್ಲಿಟ್ಟಿರುವ ಭಾಗ ಸ್ವಲ್ಪ ಹೆಚ್ಚುಕಡಿಮೆಯಾಗಿ ಹಿಂದಿನ ಮಠಾಮ್ನಾಯದಂತೆಯೇ ಇದೆ. ಇದನ್ನು ಇಲ್ಲಿ ಯಾರೋ ಸೇರಿಸಿಕೊಂಡಿದ್ದಾರೋ ಅಥವಾ ಇದು ಮೊದಲಿಂದಲೂ ಹೀಗೆಯೇ ಇವೆಯೋ ತಿಳಿಯದು. ಇದ್ದಿದ್ದರೆ ಇದು ಆಚಾರ್ಯಕೃತವಲ್ಲವೆಂಬುದಕ್ಕೊಂದು ಸಾಕ್ಷಿಯಾಗಿರುತ್ತದೆ.

ಅಥ ಪೂರ್ವಾಮ್ನಾಯಃ

೧. *ಪಶ್ಚಿಮೇ ಕಾಳಿಕಾಪೀಠಂ ದ್ವಾರಕಾಕ್ಷೇತ್ರ ಉಚ್ಯತೇ[1] ।
ಕೀಟವಾರಃ ಸಂಪ್ರದಾಯಸ್ತೀರ್ಥಾಶ್ರಮಪದೇ ಉಭೌ[2] ॥ ೧ ॥
ದೇವಃ ಸಿದ್ಧೇಶ್ವರಃ ಶಕ್ತಿರ್ಭದ್ರಕಾಲೀತಿ ವಿಶ್ರುತಾ ।
ಸ್ವರೂಪಬ್ರಹ್ಮಚಾರ್ಯಾಖ್ಯ ಆಚಾರ್ಯಃ ಪದ್ಮಪಾದಕಃ ॥ ೨ ॥
ವಿಖ್ಯಾತಂ ಗೋಮತೀತೀರ್ಥಂ ಸಾಮವೇದಸ್ತಥೋಚ್ಯತೇ
ತತ್ತ್ವಮಸ್ಯಾದಿವಾಕ್ಯಂ ಚ ಜೀವಾತ್ಮಪರಮಾತ್ಮನೋಃ ।
ಏಕೀಭಾವಂ ವಿನಿರ್ದಿಶ್ಯ ನಾಮಾನ್ಯುಕ್ತಾನ್ಯನುಕ್ರಮಾತ್ (?) ॥ ೩ ॥
೨. *ದ್ವಿತೀಯಃ ಪೂರ್ವದಿಗ್ಭಾಗೇ ಗೋವರ್ಧನಮಠಃ ಸ್ಮೃತಃ ।
ಭೋಗವಾರಃ ಸಂಪ್ರದಾಯೋ ವನಾರಣ್ಯಪದೇ ತಥಾ ॥ ೪ ॥

---

1. ಪ್ರಥಮಃ ಪಶ್ಚಿಮಾಮ್ನಾಯಃ ಶಾರದಾಮಠ ಉಚ್ಯತೇ ॥
2. ತಸ್ಯ ತೀರ್ಥಾಶ್ರಮೌ ಶುಭೌ.

೧. ದ್ವಾರಕಾಖ್ಯಂ ಹಿ ಕ್ಷೇತ್ರಂ ಸ್ಯಾದ್ದೇವಃ ಸಿದ್ಧೇಶ್ವರಃ ಸ್ಮೃತಃ ।
ಭದ್ರಕಾಲೀ ತು ದೇವೀ ಸ್ಯಾದಾಚಾರ್ಯೋ ವಿಶ್ವರೂಪಕಃ ॥ ೨ ॥
ಗೋಮತೀತೀರ್ಥಮಮಲಂ ಬ್ರಹ್ಮಚಾರೀ ಸ್ವರೂಪಕಃ ।
ಸಾಮವೇದಸ್ಯ ವಕ್ತಾ ಚ ತತ್ರ ಧರ್ಮಂ ಸಮಾಚರೇತ್ ॥ ೩ ॥

೨. ಪೂರ್ವಾಮ್ನಾಯೋ ದ್ವಿತೀಯಃ ಸ್ಯಾತ್ ಗೋವರ್ಧನಮಠಃ ಸ್ಮೃತಃ ।
ಭೋಗವಾರಃ ಸಂಪ್ರದಾಯೋ ವನಾರಣ್ಯೇ ಪದೇ ಸ್ಮೃತೇ ॥ ೪ ॥
ಪುರುಷೋತ್ತಮಂ ತು ಕ್ಷೇತ್ರಂ ಸ್ಯಾಜ್ಜಗನ್ನಾಥೋಽಸ್ಯ ದೇವತಾ ।
ವಿಮಲಾಖ್ಯಾ ಹಿ ದೇವೀ ಸ್ಯಾದಾಚಾರ್ಯಃ ಪದ್ಮಪಾದಕಃ ॥ ೫ ॥
ತೀರ್ಥಂ ಮಹೋದಧಿಃ ಪ್ರೋಕ್ತಂ ಬ್ರಹ್ಮಚಾರೀ ಪ್ರಕಾಶಕಃ ।
ಋಗಿತಿಹ್ಯಯಸ್ತತ್ರ ವೇದಸ್ತತ್ರ ಧರ್ಮಂ ಸಮಾಶ್ರಯೇತ್ ॥ ೬ ॥

ತಸ್ಮಿನ್ ದೇವೋ ಜಗನ್ನಾಥಃ ಪುರುಷೋತ್ತಮಸಂಜ್ಞಕಃ ।
ಕ್ಷೇತ್ರಂ ಚ ಸರ್ವಲೋಕೇಷು ತನ್ನಾಮ್ನೈವ ಹಿ ವಿಶ್ರುತಮ್ ॥ ೫ ॥

ಪ್ರಕಾಶಬ್ರಹ್ಮಚಾರೀತಿ ಹಸ್ತಾಮಲಕಸಂಜ್ಞಿತಃ ।
ಆಚಾರ್ಯಃ ಪ್ರಥಿತಸ್ತತ್ರ ನಾಮ್ನಾಂ ಭೇದಃ ಪೃಥಕ್ ಪೃಥಕ್ ॥ ೬ ॥

ಸ್ಥಾನಂ ಮಹೋದಧೇಸ್ತೀರ್ಥಂ ಶುಕ್ಲಂ ಯಜುರುದಾಹೃತಮ್ ।
ಮಹಾವಾಕ್ಯಂ ಚ ತತ್ರೋಕ್ತಂ 'ಪ್ರಜ್ಞಾನಂ ಬ್ರಹ್ಮ' ಸಂಜ್ಞಿತಮ್ ॥ ೭ ॥

೩.* ಉತ್ತರೇ ಶ್ರೀಮಠಃ ಕ್ಷೇತ್ರಂ ಖ್ಯಾತೋ ಬದರಿಕಾಶ್ರಮಃ ।
ದೇವೋ ನಾರಾಯಣೋ ದೇವೀ ಶಕ್ತಿಃ ಪೂರ್ಣಗಿರೀತಿ ಚ ॥ ೮ ॥

ಸಂಪ್ರದಾಯೋ ನನ್ದವಾರಸ್ತೀರ್ಥಂ ಚಾಲಕನನ್ದಕಾ ।
ಆನನ್ದಬ್ರಹ್ಮಚಾರೀತಿ ಗಿರಿಪರ್ವತಸಾಗರಾಃ ॥ ೯ ॥

ನಾಮಾನಿ ತ್ರೋಟಕಾಚಾರ್ಯೋ ವೇದೋಽಥರ್ವಣಸಂಜ್ಞಕಃ ।
ಮಹಾವಾಕ್ಯಂ ಚ ಕಥಿತಮಯಮಾತ್ಮಾ ಬ್ರಹ್ಮೇತಿ ಚ ॥ ೧೦ ॥

೪.* ದಿಗ್ಭಾಗೇ ದಕ್ಷಿಣೇ ರಮ್ಯಃ ಶೃಙ್ಗೇರ್ಯಾಂ ಶಾರದಾಮಠಃ ।
ವರಾಹೋ ದೇವತಾ ತತ್ರ ರಾಮಕ್ಷೇತ್ರಮುದಾಹೃತಮ್ ॥ ೧೧ ॥

ತೀರ್ಥಂ ಚ ತುಙ್ಗಭದ್ರಾಖ್ಯಂ ಶಕ್ತಿಃ ಶ್ರೀಶಾರದೇತಿ ಚ ।
ಚೈತನ್ಯಬ್ರಹ್ಮಚಾರ್ಯಾಖ್ಯ ಆಚಾರ್ಯೋ ವಿಶ್ವರೂಪಕಃ ॥ ೧೨ ॥
ಸರಸ್ವತೀತಿ ನಾಮಾನಿ ಭಾರತೀತಿ ಪುರೀತಿ ಚ ।

೩.* ತೃತೀಯಸೂತ್ತರಾಮ್ನಾಯೋ ಜ್ಯೋತಿಷ್ಮಾನ್ ಹಿ ಮಠೋ ಭವೇತ್ ।
ಆನನ್ದವಾರೋ ವಿಜ್ಞೇಯಃ ಸಂಪ್ರದಾಯೋಽಸ್ಯ ಸಿದ್ಧಿಕೃತ್ ॥ ೭ ॥
ಪದಾನಿ ತಸ್ಯಾಖ್ಯಾತಾನಿ ಗಿರಿಪರ್ವತಸಾಗರಾಃ ।
ಬದರೀ(ಶಾ) ಚಾಶ್ರಮಃ ಕ್ಷೇತ್ರಂ ದೇವತಾ ಚ ಸ ಏವ ಹಿ ॥ ೮ ॥
ದೇವೀ ಪುನ್ನಗಿರೀ ಜ್ಞೇಯಾ ಆಚಾರ್ಯಸ್ತ್ರೋಟಕಃ ಸ್ಮೃತಃ ।
ತೀರ್ಥಂ ತ್ವನಲ(?)ನನ್ದಾಖ್ಯಂ ನನ್ದಾಖ್ಯೋ ಬ್ರಹ್ಮಚಾರ್ಯಭೂತ್ ॥ ೯ ॥
ತಸ್ಯ ವೇದೋ ಹ್ಯಥರ್ವಾಖ್ಯಸ್ತತ್ರ ಥರ್ಮಂ ಸಮಾಚರೇತ್ ॥

೪.* ಚತುರ್ಥೋ ದಕ್ಷಿಣಾಮ್ನಾಯಃ ಶೃಙ್ಗೇರೀ ತು ಮಠೋ ಭವೇತ್ ॥ ೧೦ ॥
ಭೂರಿವಾರಾಹ್ವಯಸ್ತಸ್ಯ ಸಂಪ್ರದಾಯಃ ಸುಶೋಭನಃ ।
ಪದಾನಿ ತ್ರೀಣಿ ಖ್ಯಾತಾನಿ ಸರಸ್ವತೀ ಭಾರತೀ ಪುರೀ ॥ ೧೧ ॥
ರಾಮೇಶ್ವರಾಹ್ವಯಂ ಕ್ಷೇತ್ರಮಾದಿವಾರಾಹದೇವತಾ ।
ಶಾರದಾ ತ್ವಸ್ಯ ದೇವೀ ಸ್ಯಾತ್ ಸರ್ವಕಾಮಫಲಪ್ರದಾ ॥ ೧೨ ॥
ಹಸ್ತಾಮಲಕ ಆಚಾರ್ಯಸ್ತುಙ್ಗಭದ್ರೇತಿ ತೀರ್ಥಕಮ್ ।
ಚೈತನ್ಯಾಖ್ಯೋ ಬ್ರಹ್ಮಚಾರೀ ಯಜುರ್ವೇದಸ್ಯ ಪಾಠಕಃ ॥ ೧೩ ॥

ಸಂಪ್ರದಾಯೋ ಭೂರಿವಾರಃ ಕೃಷ್ಣಂ ಯಜುರುದಾಹೃತಮ್ ॥ ೧೩ ॥
ಮಹಾವಾಕ್ಯಂ ಚ ಕಥಿತಮಹಂ ಬ್ರಹ್ಮಾಸ್ಮಿನಾಮತಃ ॥

ವಿಶೇಷ : ಇಲ್ಲಿ ನಾವು ಕೊಟ್ಟಿರುವ ಆಮ್ನಾಯಗಳು ಎರಡು. ಮೇಲುಗಡೆ ಇರುವದು ಕಂಚಿಯ ಮಠಕ್ಕೆ ಹೊಂದುಗೆಯಾಗಿದೆ; ಕೆಳಗಡೆ ಇರುವದು ನವಭಾರತೀಕಾರ್ಯಾಲಯದಲ್ಲಿ ಪ್ರಕಾಶಿತವಾಗಿರುವದರಿಂದ ದ್ವಾರಕಾಮಠಕ್ಕೆ ಒಪ್ಪಾದವೆಂದನ್ನಬೇಕು. ಆದರೆ 'ದ್ವಾರಕಾ ಮಠದ ಇತಿಹಾಸ' (1940, ಪು.೪೭–೪೯)ದಲ್ಲಿ ಮೇಲಿನ ಪಾಠವನ್ನೇ ಒಪ್ಪಿದೆ.

ಪದ್ಮಪಾದರನ್ನು ದ್ವಾರಕೆಗೆ ಮೇಲಿನ ಆಮ್ನಾಯದಲ್ಲಿಟ್ಟಿದೆ; ಕೆಳಗಡೆ ವಿಶ್ವರೂಪರನ್ನಿಟ್ಟಿವೆ. ಆದರೆ 'ದ್ವಾರಕಾಮಠದ ಸಂಕ್ಷಿಪ್ತ ಇತಿಹಾಸ' (1940)ದಲ್ಲಿ (ಪು. ೮) ಪದ್ಮಪಾದರನ್ನೇ ಅಂಗೀಕರಿಸಿದೆಯಾದ್ದರಿಂದ ಇದರಲ್ಲಿ ವಿಶ್ವರೂಪರು ಹೇಗೆ ಬಂದರೆಂಬುದು ತಿಳಿಯದಂತಾಗಿದೆ; ಈ ಬದಲಾವಣೆಯು ಫಲವಾಗಿ ಈ ಮಠಾಮ್ನಾಯದಲ್ಲಿ ಶೃಂಗೇರಿಗೆ ಹಸ್ತಾಮಲಕರನ್ನು ವರ್ಗಾಯಿಸಿರುವದನ್ನು ಲಕ್ಷಿಸಬೇಕು.

ಮೇಲುಗಡೆಯು ಆಮ್ನಾಯದ ಉಪಸಂಹಾರವಾಕ್ಯಗಳು ಇಂತಿವೆ:

ಚತುರ್ಣಾಂ ಚ ಮಠಾನಾಂ ಚ ವೇದಾ ದೇವಾಶ್ಚ ಶಕ್ತಯಃ ।
ಮಹಾವಾಕ್ಯಾನಿ ಚಾಚಾರ್ಯಾ ಉಕ್ತಾಸ್ತೀರ್ಥಾಶ್ರಮಾದಯಃ ॥ ೧೪ ॥
ಆಚಾರ್ಯಶಿಷ್ಯಾಶ್ಚ ತ್ವಾರಃ ಸರ್ವಲೋಕೇಷು ವಿಶ್ರುತಾಃ ।
ಪದ್ಮಪಾದಃ ಸುರೇಶಶ್ಚ ಹಸ್ತಾಮಲಕತೋಟಕಾ ।
ಶಂಕರಾಚಾರ್ಯವರ್ಯಸ್ಯ ಶಿಷ್ಯಾ ಭಾಷ್ಯಕೃತಃ ಸ್ಮೃತಾಃ ॥ ೧೫ ॥

ಇತಿ ಪೂರ್ವಾಮ್ನಾಯಾಶ್ಚತ್ವಾರಃ

ಓವರ್

ಅಥ ಶ್ರೀಭಗವತ್ಪಾದೈಃ ಸ್ವಮಠತ್ವೇನ ಸಂಸ್ತುತಮ್(?)
ಸರ್ವೋತ್ತರಃ ಸರ್ವಸೇವ್ಯಃ ಕಾಮಕೋಷ್ಠಧರಾತಲೇ ॥ ೧೬ ॥
ಪರಾಶಕ್ತೇಃ ಪರಂ ಸ್ಥಾನಂ ಕಾಞ್ಚ್ಯಾಂ ಶ್ರೀಶಾರದಾಮಠಃ ।
ಕ್ಷೇತ್ರಂ ಸತ್ಯವ್ರತಂ ನಾಮ ತೀರ್ಥಂ ಕಮ್ಪಾನದೀ ವರಾ ॥ ೧೭ ॥
ದೇವಸ್ತತ್ರ ತಥೈಕಾಮ್ರನಾಥ ಋಗ್ವೇದ ಈರಿತಃ ।
ಶಕ್ತಿಃ ಶ್ರೀಕಾಮಕೋಟ್ಯೇವ ಪ್ರಣವಶ್ಚೋಪದೇಶವಾಕ್ ॥ ೧೮ ॥
ಶುದ್ಧಾ ಸರಸ್ವತೀ ಚೇನ್ದ್ರಾನನ್ದಪೂರ್ವಾ ಚ ಭಾರತೀ ।
ಭಗವತ್ಪಾದ ಇತ್ಯಾದಿನಾಮಾನ್ಯನ್ಯಾನಿ ಚ ಸ್ವತಃ ॥ ೧೯ ॥

ವಿಥ್ಯಾವಾರಃ ಸಂಪ್ರದಾಯೋ ಪರಿವ್ರಾಜಕಸಂಜ್ಞಿತಃ |
ಆಚಾರ್ಯೋ ಶಙ್ಕರಾಚಾರ್ಯೋಸ್ತತ್ರಾದ್ವೈತಪ್ರವರ್ತಕಃ |೨೦|

ಇತಿ ಮುಖ್ಯಾಮ್ನಾಯಃ

ಸಂಪ್ರದಾಯನಿರ್ವಚನಮ್

ಕೀಟವಾರೋ ಭೋಗವಾರಾನನ್ದವಾರೌ ತಥೈವ ಚ |
ಭೂರಿವಾರಶ್ಚ ಚತ್ವಾರಃ ಪೂರ್ವಾಮ್ನಾಯೇ ಪ್ರಕೀರ್ತಿತಾಃ |೨೧|
ಮುಖ್ಯಾಮ್ನಾಯೇ ತು ಯನ್ನಿತ್ಯಾ ವಾರ್ಯತೇ ಬ್ರಹ್ಮಣಃ ಪರಮ್ |
ವಿಥ್ಯಾವಾರ ಇತಿ ಖ್ಯಾತಃ ಸಂಪ್ರದಾಯಸ್ತಕೋ ಗುರೋಃ |೨೨|
ಕೀಟಂ ಘಾತಕಮಿತ್ಯುಕ್ತಂ ವಾರ್ಯತೇ ಯೇನ ಜೀವಿನಾಮ್ |
ಸಂಪ್ರದಾಯೋ ಯತೀನಾಂ ಚ ಕೀಟವಾರಃ ಸ ಉಚ್ಯತೇ[1] |೨೩|
ಭೋಗೋ ವಿಷಯ ಇತ್ಯುಕ್ತೋ ವಾರ್ಯತೇ ಯೇನ ಜೀವಿನಾಮ್ |
ಸಂಪ್ರದಾಯೋ ಯತೀನಾಂ ಚ ಭೋಗವಾರಃ ಸ ಉಚ್ಯತೇ |೨೪|
ಭೂರಿಶಬ್ದೇನ ಸೌವರ್ಣಂ ವಾರ್ಯತೇ ಯೇನ ಜೀವಿನಾಮ್ |
ಸಂಪ್ರದಾಯೋ ಯತೀನಾಂ ಚ ಭೂರಿವಾರಸ್ಯ ಉಚ್ಯತೇ |೨೫|
ಆನನ್ದೇತಿ ವಿಲಾಸೋ ಯೋ ವಾರ್ಯತೇ ಯೇನ ಜೀವಿನಾಮ್ |
ಸಂಪ್ರದಾಯೋ ಯತೀನಾಂ ಚಾನನ್ದವಾರಃ ಸ ಉಚ್ಯತೇ |೨೬|
ವಸಿಷ್ಠೋ ಭಾರ್ಗವಶ್ಚೈವ ಕಾಶ್ಯಪಸ್ತದನನ್ತರಮ್ |
ಭಾರದ್ವಾಜಶ್ಚ ಚತ್ವಾರಿ ಗೋತ್ರಾಣಿ ಕಥಿತಾನಿ ವೈ |೨೭|

[ಇಲ್ಲಿ ಗೋತ್ರಗಳೇಕೆ ಬಂದವೆಂಬ ದು ತಿಳಿಯುವಹಾಗಿಲ್ಲ. ನಮ್ಮಲ್ಲಿರುವ ಪುಸ್ತಕದಲ್ಲಿ ಒಂದು ಅಂಚಿನಲ್ಲಿ ಒಂದೊಂದು ಶಿಷ್ಯಮಠಕ್ಕೆ ಒಂದೊಂದು ಗೋತ್ರರ್ಷಿ, ಮುಖ್ಯ ಮಠಕ್ಕೆ ನಾಲ್ಕು ಗೋತ್ರರ್ಷಿಗಳು, ಅಭಿಮಾನಿಗಳು ಎಂದು ಬರೆದಿವೆ.]

---

1. ನವಭಾರತೀಮಠಾಮ್ನಾಯದ ಕೊನೆಯಲ್ಲಿ :
ಕೀಟಾದಯೋ ವಿಶೇಷೇಣ ವಾರ್ಯನ್ತೇ ಜೀವಜನ್ತವಃ ॥
ಭೂತಾನುಕಮ್ಪಯಾ ನಿತ್ಯಂ ಕೀಟವಾರಃ ಸ ಉಚ್ಯತೇ ॥
ಭೋಗೋ ವಿಷಯ ಇತ್ಯುಕ್ತೋ ವಾರ್ಯತೇ ಯೇನ ಜೀವಿನಾಮ್ |
ಸಂಪ್ರದಾಯೋ ಯತೀನಾಂ ಚ ಭೋಗವಾರಃ ಸ ಉಚ್ಯತೇ ॥
ಆನನ್ದೇತಿ ವಿಲಾಸಶ್ಚ ವಾರ್ಯತೇ ಯೇನ ಜೀವಿನಾಮ್ ॥
ಸಂಪ್ರದಾಯೋ ಯತೀನಾಂ ಚಾನನ್ದವಾರಃ ಸ ಉಚ್ಯತೇ ॥
ಭೂರಿಶಬ್ದೇನ ಸೌವರ್ಣಂ ವಾರ್ಯತೇ ಯೇನ ಜೀವಿನಾಮ್ |
ಸಂಪ್ರದಾಯೋ ಯತೀನಾಂ ಚ ಭೂರಿವಾರಃ ಸ ಉಚ್ಯತೇ ॥

ಅಥೋತ್ತರಾಮ್ನಾಯಾಃ

ಉಕ್ತಾಶ್ಚತ್ವಾರ ಆಮ್ನಾಯಾಃ ಪೂರ್ವೇಷಾಂ ತು ಪೃಥಕ್‌ಪೃಥಕ್ ।
ಅಥೋರ್ಧ್ವಶೇಷಾ ಗೌಣಾ ಯೇ ತೇಽಪಿ ಜ್ಞಾನೇನ ಸಿದ್ಧಿದಾಃ ।೨೮।

ಪಞ್ಚ ಮುಸ್ತೂರ್ಧ್ವ ಆಮ್ನಾಯಃ ಸುಮೇರುಮುಖ ಉಚ್ಯತೇ ।
ಸಂಪ್ರದಾಯೋಽಥ ಕಾಶೀ ಸ್ಯಾತ್ ಪದಂ ನಾಮ್ನಾಭಿದಂ ಸ್ಮೃತೇಮ್ (?)
ಕೈಲಾಸಃ (ಕೈವಲ್ಯ)ಕ್ಷೇತ್ರಮಿತ್ಯುಕ್ತಂ ದೇವತಾಸ್ಯ ನಿರಞ್ಜನಃ ।
ದೇವೀ ನೂಯಾ ತಥಾಚಾರ್ಯ ಈಶ್ವರಃ ಪರಿಕೀರ್ತಿತಃ ।೩೦।

ತೀರ್ಥಂ ಸುಮಾನಸಂ ಪ್ರೋಕ್ತಂ ತ್ರೈಲೋಕ್ಯಶರಣಂ ಮಹತ್ ।
ತತ್ರ ಸಂಹಾರಮಾರ್ಗೇಣ ಸಂನ್ಯಾಸಂ ಮಹದಾಶ್ರಯೇತ್ ।೩೧।

ಷಷ್ಠೇ ತ್ವಾತ್ಮನಿ ಚಾಮ್ನಾಯೇ ಪರಮಾತ್ಮಮಠೋ ಮಹಾನ್ ।
ಸತ್ಸಂತೋಷಃ ಸಂಪ್ರದಾಯಃ ಪರಂ ಯೋಗಮನುಸ್ಮರನ್ ।೩೨।

ತಸ್ಮಿನ್ ಸರೋವರಂ ಪ್ರೋಕ್ತಂ ಪರಹಂಸೋಽಸ್ಯ ದೇವತಾ ।
ದೇವೀ ಸ್ಯಾನ್ಮಾನಸೀ ಮಾಯಾದ್ಯಾಚಾರ್ಯಶ್ಚೇತನಾಹ್ವಯಃ ।೩೩।

ತ್ರಿಪುಟೇ ತೀರ್ಥಮಿತ್ಯುಕ್ತಂ ಸರ್ವಪುಣ್ಯಪ್ರದಾಯಕಮ್ ।
ಭವಪಾಶವಿನಾಶಾಯ ಸಂನ್ಯಾಸಂ ತತ್ರ ಚಾಶ್ರಯೇತ್ ।೩೪।

ಸಪ್ತಮೇ ನಿಷ್ಕಲಾಮ್ನಾಯೇ ಶುದ್ಧಶಾಸ್ತ್ರಾರ್ಥಜೋ ಮಠಃ ।
ಸಂಪ್ರದಾಯೋಽಸ್ಯ ತತ್ಸತ್ತ್ವಂ ಶ್ರೀಗುರೋಃ ಪಾದುಕೇ ಪದೇ ।೩೫।

ತತ್ರಾನುಭೂತಿಃ ಕ್ಷೇತ್ರಂ ಸ್ಯಾತ್ ವಿಶ್ವರೂಪೋಽಸ್ಯ ದೇವತಾ ।
ದೇವೀ ಚೈತನ್ಯಶಕ್ತಿಃ ಸ್ಯಾದಾಚಾರ್ಯಃ ಸದ್ಗುರುಸ್ತತಃ ।೩೬।

ಶಾಸ್ತ್ರಸ್ಯ ಶ್ರವಣಂ ತೀರ್ಥಂ ಜನ್ಮಮೃತ್ಯು ವಿನಾಶನಮ್ ।
ಪೂರ್ಣಾನನ್ದಕ್ರಮೇಣೈವ ಸಂನ್ಯಾಸಂ ತತ್ರ ಚಾಶ್ರಯೇತ್ ।೩೭।

ಇತ್ಯುತ್ತರಾಮ್ನಾಯಾಃ

ಇತ್ಯಾಮ್ನಾಯಾಷ್ಟಕಮ್

[ವಿಶೇಷಃ ಇಲ್ಲಿರುವ ಮುಖ್ಯಾಮ್ನಾಯ, ಮುತಕ್ತಿ ಉತ್ತರಾಮ್ನಾಯ– ಎಂಬ ನಾಲ್ಕು ಮಿಕ್ಕ ಆಮ್ನಾಯಗಳಲ್ಲಿಲ್ಲ. ಇದು ಕಾಂಚೀಸಂಪ್ರದಾಯಕ್ಕೆ ಮಾಸಲು. ಇಲ್ಲಿ ಕೊಟ್ಟಿರುವ ಅನುಕ್ರಮುಸಂಖ್ಯೆ ನಮ್ಮದು. ಉಪಸಂಹಾರದಲ್ಲಿ ಮುಂದಿನ ಶ್ಲೋಕವಿದೆ]

ಚತ್ವಾರಃ ಪೂರ್ವ ಆಮ್ನಾಯಾಃ ಸನುಖ್ಯಾಶ್ಚೋತ್ತರಾಸ್ತ್ರಯಃ ।
ಸಂಪ್ರದಾಯಸ್ತಥಾ ಪಞ್ಚ ನಾಮಾನಿ ದಶ ಚೇರಿತಮ್ ॥

'ಇತಿ ಶ್ರೀಶಙ್ಕರಾಚಾರ್ಯಸಪ್ಪಥೇ ಮಠಾಮ್ನಾಯಾಃ' ಎಂದು ಮುಗಿಸಿದಮೇಲೆ ಒಂದು ಟಿಪ್ಪಣಿಯ ಕೊನೆಯಲ್ಲಿ ಹೀಗಿದೆ :

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯಶ್ರೀಮಚ್ಛಂಕರಭಗವತ್ಪೂಜ್ಯ ಪಾದಶಿಷ್ಯಶ್ರೀಸರ್ವಜ್ಞಚಿತ್ಸುಖಾಚಾರ್ಯವಿರಚಿತೇ ಬೃಹಚ್ಛಂಕರ ವಿಜಯೇ ಆಮ್ನಾಯ ತದ್ಭೇದನಿರ್ವಚನಮ್ ನಾಮ ಶ್ರೀಮಠಾಮ್ನಾಯಾಪೇಕ್ಷಿತವಿಷಯಸುನಿರೂಪಕಮ್ ತ್ರಯೋದಶಮ್ ಪ್ರಕರಣಮ್

[ಇಲ್ಲಿರುವ ತೀರ್ಥಾಶ್ರಮಾದಿನಾಮನಿರ್ವಚನಗಳನ್ನು ಸದ್ಯಕ್ಕೆ ಬಿಟ್ಟುಬಿಟ್ಟಿದೇವೆ. ಈ ಗ್ರಂಥವು ಶ್ರೀಕಲ್ಪಟ್ಟ್ಯಭಿಜನಗುರುಸ್ವಾಮಿಶರ್ಮಣಾ ಕುಮ್ಭಕೋಣಸ್ಥಾಪಿತಾಯಾಂ ಶ್ರೀ ವಿದ್ಯಾ ಮುದ್ರಾಕ್ಷರಶಾಲಾಯಾಂ ಮುದ್ರಾಪಿತೋ ವಿಜಯತೇತರಾಮ್ 1894– ಎಂದು ಅಂಕಿತವಾಗಿದೆ. ನಮಗೆ ಶ್ರೀಪೂರ್ಣಾನಂದೇಂದ್ರಸರಸ್ವತೀಸ್ವಾಮಿಗಳವರು ನಕಲುಮಾಡಿಸಿ ಕೊಟ್ಟಿರುತ್ತಾರೆ.]

(೩) ಮಠಾಮ್ನಾಯಭಾಗ

[ಬಲದೇವ ಉಪಾಧ್ಯಾಯರು (ಪು. ೧೩೬) ಉದಾಹರಿಸಿರುವದು.]

ಗೋವರ್ಧನಮಠೇ ರಮ್ಯೇ ವಿಮಲಾಪೀಠಸಂಜ್ಞಕೇ ।
ಪೂರ್ವಾಮ್ನಾಯೇ ಭೋಗವಾರೇ ಶ್ರೀಮತ್ಕಾಶ್ಯಪಗೋತ್ರಜಃ ॥
ಮಾಧವಸ್ಯ ಸುತಃ ಶ್ರೀಮಾನ್ ಸನನ್ದನ ಇತಿ ಶ್ರುತಃ ।
ಪ್ರಕಾಶಬ್ರಹ್ಮಚಾರೀ ಚ ಋಗ್ವೇದೀ ಸರ್ವಶಾಸ್ತ್ರವಿತ್ ॥
ಶ್ರೀಪದ್ಮಪಾದಃ ಪ್ರಥಮಾಚಾರ್ಯತ್ವೇನಾಭ್ಯಷಿಚ್ಯತ ।

(೪) ಮಠಾಮ್ನಾಯಸೇತು

ಇದಂ ಪರಂ ಪದಂ ಸಾಕ್ಷಾತ್ ಪರಿವ್ರಾಜಕಸನ್ತತೇಃ ।
ಅಸ್ಮಿಂಸ್ತಿಷ್ಠನ್ತಿ ಯೇ ಪೀಠೇ ಕಾಮಕೋಟೀಸಮಾಹ್ವಯೇ ॥ ೧ ॥
ಶಾರದಾಪೀಠನಾಮ್ನಾ ತು ಪ್ರಸಿದ್ಧೇ ಜಗತೀತಲೇ ।
ತೇ ಸರ್ವದೇಶಸಂಚಾರೇ ಸಂಭವನ್ತ್ಯಕುತೋಭಯಾಃ ॥ ೨ ॥
ಏಷಾಮಾಜ್ಞಾ ನ ಚೋಲ್ಲಙ್ಘ್ಯಾ ಯದಿದಂ ಮೇ ಪರಂ ಪದಮ್ ।
ಮನ್ಮಾನ್ಯೈರ್ಯವ ಭವಿಷ್ಯನ್ತಿ ಮತ್ಪೀಠೇ ಮತ್ಸಮಾಶ್ರಯಾಃ ॥ ೩ ॥
ಬ್ರಹ್ಮಚರ್ಯಾದ್ಧಿ ಸಂನ್ಯಸ್ತಾ ನೇಷ್ಯನ್ತೇಽನ್ಯೇ ಮದಾಶ್ರಯೇ ।
ದೇಶಾನಾಮಪಿ ಸರ್ವೇಷಾಮೇಷಾಮಾಚಾರ್ಯಕಂ ಸ್ಮೃತಮ್ ॥ ೪ ॥

[1]ಯಸ್ತ್ವದ್ವೈತಮತೇ ಸ್ಥಿತ್ವಾ ಶಾರದಾಪೀಠನಿನ್ದಕಃ ।
ಸ ಯಾತಿ ನರಕಂ ಘೋರಂ ತಾ(ಯಾ?)ವದಾಭೂತಸಂಪ್ಲವಮ್ ॥ ೫ ॥

ಅಥಾಮ್ನಾಯಚತುರ್ಣಾಂ ಚ ಮಠಾನಾಂ ಶಿಷ್ಯಯೋಗಿನಾಮ್ ।
ಸವಿಸ್ತರಂ ವಿವೇಕಾಯ ವಕ್ಷ್ಯೇ ವಃ ಶೃಣುತ ದ್ವಿಜಾಃ ॥ ೬ ॥

೧. ಪ್ರಥಮಃ ಪಶ್ಚಿಮಾಮ್ನಾಯಃ ಕಾಳಿಕಾಮಠ ಉಚ್ಯತೇ ।
ಕೀಟವಾರಃ ಸಂಪ್ರದಾಯಸ್ತಸ್ಯ ತೀರ್ಥಾಶ್ರಮೌ ಪದೇ ॥ ೭ ॥

ಕ್ಷೇತ್ರಂ ಚ ದ್ವಾರಕಾನಾಮ ದೇವಃ ಸಿದ್ಧೇಶ್ವರಃ ಸ್ಮೃತಃ ।
ಭದ್ರಕಾಲೀ ತು ದೇವೀ ಸ್ಯಾದಾಚಾರ್ಯೋಽದ್ಯ ಸುರೇಶ್ವರಃ ।
ಗೋಮತೀತೀರ್ಥಮಮಲಂ ಬ್ರಹ್ಮಚಾರೀ ಸ್ವರೂಪಕಃ ।
ಸಾಮವೇದಸ್ಯ ವಕ್ತಾ ಚ ತತ್ರ ಧರ್ಮಂ ಸಮಾಚರೇತ್ ॥ ೮ ॥

೨. ದ್ವಿತೀಯಸ್ತೂತ್ತರಾಮ್ನಾಯೋ ಜ್ಯೋತಿಷ್ಮಾನ್ ಹಿ ಮಠೋ ಭವೇತ್ ।
ಆನನ್ದವಾರೋ ವಿಜ್ಞೇಯಃ ಸಂಪ್ರದಾಯೋಽಸ್ಯ ಸಿದ್ಧಿಕೃತ್ ॥ ೧೦ ॥

ಪದಾನಿ ತಸ್ಯ ಖ್ಯಾತಾನಿ ಗಿರಿಪರ್ವತಸಾಗರಾಃ ।
ಬದರೀಶಾಶ್ರಮಃ ಕ್ಷೇತ್ರಂ ದೇವೋ ಬದರಿಕೇಶ್ವರಃ ॥ ೧೧ ॥

ದೇವೀ ಪುನ್ಯಾಗಿರೀ ಜ್ಞೇಯಾ ಆಚಾರ್ಯಸ್ತೋಟಕಃ ಸ್ಮೃತಃ ।
ತೀರ್ಥಂ ತ್ವಲಕನನ್ದಾಖ್ಯಮಾನನ್ದೋ ಬ್ರಹ್ಮಚಾರ್ಯಭೂತ್ ॥ ೧೨ ॥

ತಸ್ಯ ವೇದೋ ಹ್ಯಥರ್ವಾಖ್ಯಸ್ತತ್ರ ಧರ್ಮಂ ಸಮಾಚರೇತ್ ।

೩. ತೃತೀಯಃ ಪೂರ್ವದಿಗ್ಭಾಗೇ ಗೋವರ್ಧನಮಠಃ ಸ್ಮೃತಃ ॥ ೧೩ ॥

ಭೋಗವಾರಃ ಸಂಪ್ರದಾಯೋ ವನಾರಣ್ಯಪದೇ ಸ್ಮೃತೇ ।
ದೇವತಾಸ್ಯ ಜಗನ್ನಾಥಃ ಕ್ಷೇತ್ರಂ ಚ ಪುರುಷೋತ್ತಮಮ್ ॥ ೧೪ ॥

ದೇವೀ ಚ ವಿಮಲಾ ತಸ್ಮಿನ್ನಾಚಾರ್ಯಃ ಪದ್ಮಪಾದಕಃ ।
ತೀರ್ಥಂ ಮಹೋದಧಿಃ ಪ್ರೋಕ್ತಂ ಬ್ರಹ್ಮಚಾರೀ ಪ್ರಕಾಶಕಃ ॥ ೧೫ ॥

ಶುಕ್ಲಂ ಯಜುಸ್ತಸ್ಯ ವೇದಸ್ತತ್ರ ಧರ್ಮಂ ಸಮಾಚರೇತ್ ।

೪. ತುರೀಯೋ ದಕ್ಷಿಣಾಮ್ನಾಯಃ ಶೃಙ್ಗೇರೀಶ್ರೀಮಠೋ ಭವೇತ್ ॥ ೧೬ ॥

ಭೂರಿವಾರಾಹ್ವಯಸ್ತಸ್ಯ ಸಂಪ್ರದಾಯಃ ಸುಶೋಭನಃ ।
ಸರಸ್ವತೀ ಭಾರತೀ ಚ ಪುರೀತ್ಯೇತತ್ ಪದತ್ರಯಮ್ ॥ ೧೭ ॥

---

1. ಹಿಂದೆ (ಚರಿತ್ರೆ ಪು. ೨೨೧)ರಲ್ಲಿ ಚಿದ್ವಿಲಾಸೀಯಾನಂದಗಿರೀಯಗಳಲ್ಲಿ ಉದಾಹೃತವಾಗಿರುವ ಶ್ಲೋಕವು ಇಲ್ಲಿ ಸ್ವಲ್ಪ ಮಾರ್ಪಟ್ಟಿದೆ.

ವಾರಾಹೋ ದೇವತಾ ತತ್ರ ರಾಮಕ್ಷೇತ್ರಮುದಾಹೃತಮ್ ।
ಶಾರದಾ ತಸ್ಯ ದೇವೀ ಸ್ಯಾತ್ ಸರ್ವಕಾಮಫಲಪ್ರದಾ ॥೧೮॥

ಪೃಥ್ವೀಧರಾ(ರಾ)ಖ್ಯ ಆಚಾರ್ಯೋಸ್ತುಙ್ಗಭದ್ರೇತಿ ತೀರ್ಥಕಮ್ ।
ಚೈತನ್ಯಾಖ್ಯೋ ಬ್ರಹ್ಮಚಾರೀ ಕೃಷ್ಣೇನ ಯಜುಷಾ ಯುತಃ ॥೧೯॥

ಉಕ್ತಾಶ್ಚತ್ವಾರ ಆಮ್ನಾಯಾ[1] ಯತೀನಾಂ ಹಿ ಪೃಥಕ್ ಪೃಥಕ್ ।
ತೇ ಸರ್ವೇ ಮತ್ಪದಾಚಾರ್ಯೈ[2] ನಿಯೋಗೇನ ಯಥಾವಿಧಿ ॥೨೦॥

ಪ್ರಬೋಕ್ತವ್ಯಾಃ ಸ್ವಧರ್ಮೇಷು ಶಾಸನೀಯಾಸ್ತತೋಽನ್ಯಥಾ ।
ಕುರ್ವನ್ತ ಏವ ಸತತಮಟಿನಂ ಧರಣೀತಲೇ ॥೨೧॥

ವಿರುದ್ಧಾಚಾರಸಂಪ್ರಾಪ್ತೌ ಮತ್ಪದಸ್ಥ[3] ಸಮಾಜ್ಞಯಾ ।
ಲೋಕಾನ್ ಸಂಶೀಲಯನ್ತ್ವೇತೇ[4] ಸ್ವಧರ್ಮಾಪ್ರತಿರೋಧತಃ ॥೨೨॥

ಸಿನ್ಧುಸೌವೀರಸೌರಾಷ್ಟ್ರಮಹಾರಾಷ್ಟ್ರಾಸ್ತಥಾನ್ತರಾಃ ।
ದೇಶಾಃ ಪಶ್ಚಿಮದಿಕ್ಸ್ಥಾ ಯೇ ಕಾಲಿಕಾಪೀಠಶಾಸನೇ[5] ॥೨೩॥

ಕುರುಕಾಶ್ಮೀರಕಾಮ್ಬೋಜಪಾಞ್ಚಾಲಾಃ ಗೌಡಕೋಸಲಾಃ[6] ।
ಜ್ಯೋತಿರ್ಮಠವಶಾ ದೇಶಾ ಉದೀಚ್ಯಾಂ ದಿಶಿ ಸಂಸ್ಥಿತಾಃ[7] ॥೨೪॥

ಅಙ್ಗವಙ್ಗಕಲಿಙ್ಗಾಶ್ಚ ಮಗಧೋತ್ಕಲಬರ್ಬರಾಃ ।
ಗೋವರ್ಧನಮಠಾಧೀನಾ ದೇಶಾಃ ಪ್ರಾಚ್ಯಾಂ ವ್ಯವಸ್ಥಿತಾಃ ॥೨೫॥

ಆನ್ಧ್ರದ್ರಾವಿಡಕರ್ಣಾಟಕೇರಲಾಟಕಕೋಙ್ಕಣಾಸ್ತೇಙ್ಕಣಾ ಅಪಿ ।
ಶೃಙ್ಗೇರ್ಯಧೀನಾ ದೇಶಾಸ್ತೇ ಸಂಶ್ರಿತಾ ದಕ್ಷಿಣಾಪಥಮ್[8] ॥೨೬॥

ಮಯೂರ್ಯಾದೈಷಾ ಸುವಿಜ್ಞೇಯಾ ಶಿಷ್ಯಪೀಠವಿಧಾನಭೃತ್ ।
ತಾನ್ ಸರ್ವಾನ್ ಶಾಸಯನ್ತ್ವೇತೇ ಆಚಾರ್ಯಾ ಮತ್ಪದಸ್ಥಿತಾಃ[9] ॥

---

1. 'ಆಮ್ನಾಯಾಃ ಕಥಿತಾ ಹ್ಯೇತೇ' ಬ, 2, 'ಚತುರಾಚಾರ್ಯಾಃ' ಬಲ.
3. 'ಆಚಾರ್ಯಾಣಾಂ' ಬ. ನ. 4. 'ಸಂಶೀಲಯನ್ತ್ವೇವ' ಬ. ನ.
5, 'ಶಾರದಾಪೀಠಸಾತ್ಕೃತಾಃ' ನ . ೨೩ರಿಂದ ೨೭ನೆ ಶ್ಲೋಕದ ಪೂರ ಬ.ದಲ್ಲಿಲ್ಲ
6. 'ಪಾಞ್ಚಾಲಾದಿವಿಭಾಗತಃ' ನ.
7. 'ಉದೀಚೀದಿಗವಸ್ಥಿತಾಃ' ನ. ಆಲ್ಲಿ ೨೫, ೨೬ನೆಯ ಶ್ಲೋಕಗಳಾದಮೇಲೆ ಈ ಶ್ಲೋಕವಿದೆ.
8. 'ಆನ್ದ್ರದ್ರವಿಡಕರ್ಣಾಟಕೇರಲಾದಿಪ್ರಭೇದತಃ [.... ಹ್ಯವಾಚೀದಿಗವಸ್ಥಿತಾಃ'
9. 'ಮಯೂರ್ಯಾದೈಷಾ ಸುವಿಜ್ಞೇಯಾ ಚತುರ್ಮಠವಿಧಾಯಿನೀ । ತಾಮೇತಾಶ್ಚ ಸಮುಪಾಶ್ರಿತ್ಯ ಆಚಾರ್ಯಾ ಸಂಪ್ರತಿಷ್ಠಿತಾಃ ॥' ನ.

ಸ್ವಸ್ವರಾಷ್ಟ್ರಪ್ರತಿಷ್ಠಿತೈ೯ ಸಂಚಾರಃ ಸುವಿಧೀಯತಾಮ್ ।
ತೈರನ್ಯತೋ ನ ಗವ್ಯೇತ ಮನ್ಮತ್ಯಾಃ ಸರ್ವತಶ್ಚರಾಃ[1] ॥೨೮॥
ವರ್ಣಾಶ್ರಮಸದಾಚಾರಾ ಮಾಮಕೈ[2]ರ್ಯೋ ಪ್ರಸಾಧಿತಾಃ ।
ರಕ್ಷಣೀಯಾಸ್ತ ಏವೈತೈಃ[3] ಸ್ವೆ ಸ್ವೇ ಭಾಗೇ ಯಥಾವಿಧಿ ॥೨೯॥
ಯತೋ ವಿನಷ್ಟಿರ್ಮಹತೀ ಧರ್ಮಸ್ಯಾತ್ರ ಪ್ರಜಾಯತೇ ।
ಮಾನ್ಧ್ಯಂ ಸಂತ್ಯಾಜ್ಯಮೇವಾತ್ರ ದಾಕ್ಷ್ಯಮೇವ ಸಮಾಶ್ರಯೇತ್ ॥
ಪರಸ್ಪರವಿಭಾಗೇ ತು ಪ್ರವೇಶೋಽನ್ಯಸ್ಯ ನೇಷ್ಯತೇ ।
ಪರಸ್ಪರೇಣ ಕರ್ತವ್ಯಾ ಹ್ಯಾಚಾರ್ಯಾಣಾಂ ವ್ಯವಸ್ಥಿತಿಃ ॥೩೧॥
ಮರ್ಯಾದಾಯಾ ವಿನಾಶೇನ ಭ್ರಶ್ಯೇರನ್ ಗೌರವಾನ್ಮಠಾಃ ।[4]
ಕಲಹವ್ಯೂಹಸಂಪತ್ತಿರತಸ್ತಂ ಪರಿವರ್ಜಯೇತ್ ॥೩೨॥
ಪರಿವ್ರಾಡಾರ್ಯಮರ್ಯಾದೋ ಮಾಮಕೀನಾನ್ ಯಥಾವಿಧಿ ।
ಚತುಷ್ಪೀಠಾಧಿಕಃ ಸತ್ತಾಂ ಬಿಭ್ರತ್ ಸಂಪೂಜಯೇತ್[5] ಸದಾ ॥೩೩॥
ಶುಚಿರ್ಜಿತೇನ್ದ್ರಿಯೋ ವೇದವೇದಾಙ್ಗಾದಿವಿಶಾರದಃ ।
ಬ್ರಹ್ಮಚರ್ಯಾಚ್ಚ ಸಂನ್ಯಸ್ತೋ ಯೋಽಸ್ಮದಾಸ್ಥಾನಮಾಪ್ನುಯಾತ್[7] ॥
ಉಕ್ತಲಕ್ಷಣಸಂಪನ್ನಃ ಸ್ಯಾಚ್ಚೀನತ್ರಿಪೀಠಭಾಗ್ ಭವೇತ್ ।
ಅನ್ಯಥಾSSರೂಢಪೀಠೋಪಿ ನಿಗ್ರಹಾರ್ಹೋ ಮನೀಷಿಣಾಮ್ ॥೩೫॥

ಇದಂ ಕಾಞ್ಚೀಪದಂ ಶ್ರೌತಂ ಪುಣ್ಯಂ ಸ್ವರ್ಗಂ ಚ ಮುಕ್ತಿದಮ್ ।
ಪೀಠೀಯಂ ಕಾಮಕೋಟೀ ಚ ತಥಾ ಶ್ರೀಷ್ಮಾ ತಪೋಭುವಾಮ್[8] ॥

ಕಾಮಕೋಟೀಪ್ರತಿನಿಧಿಃ ಕಾಮಕೋಷ್ಮಧರಾಮಣೇಃ ।
ಆಕಲ್ಪಃ ಕಶ್ಚಿದಾಕಲ್ಪಸ್ಥಾಯಿನಾ(")ಸ್ಥಾನಂ ತಪಸ್ವಿನಾಮ್ ।೩೭।

ಅಧಿತಿಷ್ಠನ್ತಿ ಯೇ ಪೀಠಮಮುಂ ಸಂಯೆಮಿಪುಙ್ಗವಾಃ ।
ಮನ್ವಾನೇಭ್ಯೋ ಹಿ ತೇ ಖ್ಯಾತಾ ಭವಿಷ್ಯನ್ತಿ ಮಹೀತಲೇ ।೩೮।

---

1. 'ಮಠೇ ತು ನಿಯತಾವಾಸ ಆಚಾರ್ಯಸ್ಯ ನ ಯುಜ್ಯತೇ' ಬ. ನ.
2. 'ಅಸ್ಮಾಭಿರ್ಯೋ' ಬ, ನ. 3. 'ಏತೇ' ಬ' ನ,
4. 'ಲುಪ್ಯೇರನ್ ನಿಯಮಾಃ ಶುಭಾಃ' ಬ. ನ.
5. 'ಕಲಹಾಙ್ಗಾರ' ಬ . 'ಕಲಹಾಗಾರ' ನ.
6. 'ಚತುಷ್ಪೀಠಾಧಿಗಾಂ ಸತ್ತಾಂ ಪ್ರಯುಞ್ಜಾಚ್ಚ ಪೃಥಕ್ ಪೃಥಕ್' ನ.
7. 'ಯೋಗಜ್ಞಃ ಸರ್ವತನ್ತ್ರಾಣಾಮಸ್ಮದಾಸ್ಥಾನಮಾಪ್ನುಯಾತ್' ಬ. ನ.
8. ಬ, ನ,ಗಳಲ್ಲಿ ಇಲ್ಲಿರುವ ಳಂನೆಯ ಶ್ಲೋಕಗಳವರೆಗಿನ ಭಾಗವು ಇಲ್ಲ.

ಆಚಿರ್ಕಾ(?) ಅಚಿರ್ತಾಃ ಸರ್ವೈಃ ಸಂನ್ಯಸ್ತಾ ಬ್ರಹ್ಮಚರ್ಯತಃ ।
ನ ಗಾರ್ಹಸ್ಥ್ಯನ್ನಾನ್ಯತೋ ವಾ ಸಂನ್ಯಸ್ತಾ ನಾನ್ಯನಾಮತಃ ।೩೯।
ಏಷಾಂ ನಾಮ ತು ವಿಖ್ಯಾತಮಿನ್ದ್ರ ಪೂರ್ವಾ ಸರಸ್ವತೀ ।
ವಿಭಾಣ್ಡವಾರಃ ಸಂಪ್ರದಾಯಃ[3] ಪ್ರಚ್ಛನ್ನಬ್ರಹ್ಮಚಾರಿ(?)ಭೃತ್ ।೪೦।
ಏಕ ಏವಾಭಿಷೇಚ್ಯಃ ಸ್ಯಾನ್ನನ್ತೋ ಲಕ್ಷಣಸಂಯುತಃ ।
ಪೀಠೇಷ್ವನ್ಯೇಷು ಚಾಪ್ಯೇವಮುಚ್ಯನ್ತಿ ನ ಬಹೂನ್ ಕ್ವಚಿತ್[1] ।೪೧।
ಅಸ್ಮತ್ಪೀಠೇ ಸಮಾರೂಢಃ ಪರಿವ್ರಾಡುಕ್ತಲಕ್ಷಣಃ ।
ಅಹಮೇವೇತಿ ವಿಜ್ಞೇಯೋ ಯಸ್ಯ ದೇವ ಇತಿ ಶ್ರುತೇಃ ।೪೨।
ಸುಧನ್ವನಃ ಸಮಾತ್ಸ್ಯನಿರ್ವೃತ್ಯೈ ಧರ್ಮಹೇತವೇ ।
ದೇವರಾಜೋಪಚಾರಾಂಶ್ಚ ಯಥಾವತ್ ತತ್ರ ಕಲ್ಪಯೇತ್[2] ।೪೩।
ಕೇವಲಂ ಧರ್ಮಮುದ್ದಿಶ್ಯ ವಿಭವೋ ಬಾಹ್ಯಚೇತಸಾಮ್ ।
ವಿಹಿತಶ್ಚೋಪಕಾರಾಯ ಪದ್ಮಪತ್ರನಯಂ ವ್ರಜೇತ್ ।೪೪।
ಸುಧನ್ವಾದ್ಯಾ ಮಹಾರಾಜಾಃ ಹಾಲಾದ್ಯಾಶ್ಚ ಮಹೀಶ್ವರಾಃ[3]।
ಧರ್ಮಪಾರಮ್ಪರೀಮೇತಾಂ ಪಾಲಯನ್ತು ನಿರನ್ತರಮ್ ।೪೫।
ಬ್ರಹ್ಮಸ್ತಮ್ಬೋದರೇ ಭೂತ್ವಾ ಯಃ ಪೀಠಂ ದೂಷಯೇದಮುಮ್[4]।
ಆಸುರ್ಯಾನೇತ್ಯ ಲೋಕಾನ್ ಸ ಮಜ್ಜತ್ಯನ್ಧೇ ತಮೋಭರೇ[4] ।೪೬।
ಬ್ರಹ್ಮಕ್ಷತ್ರಾದಿಜೋ ಭೂತ್ವಾ ಭಾರತೀಪೀಠದೂಷಕಃ[5] ।
ಪರಾಥ್ರ್ಯಾಚ್ಚ್ಯವತೇ ಚಾನ್ತೇ ಪೈಶಾಚೀಂ ಯೋನಿಮಾಪ್ನುಯಾತ್ ॥
ಪೀಠಮೇನಂ ತಥಾನ್ಯಾಂಶ್ಚ ಶಿಷ್ಯಾನ್ಶಿಷ್ಟಾಂ ಚತುರಃ ಶುಚೀನ್ ।
ಯೋ ದೂಷಯತಿ ದರ್ಪೇಣ ನರಃ ಸ ಪತಿತೋ ಭವೇತ್[6] ।೪೭।
ನ ಸ ಸಂವ್ಯವಹಾರ್ಯೋಽಸ್ಮಾತ್ಸ್ವಗ್ರಜನ್ಮಸು ಸರ್ವತಃ ।
ನಾಸ್ತಿಕತ್ವೇನ ನಿರ್ಹಾರ್ಯಃ ಬೌಧ(ಬೌದ್ಧ)ವತ್ ಕರ್ಮಭೂಮಿತಃ
ಆಸೇತೋರಾಹಿಮಾದ್ರೇಶ್ಚ ಸೇವ್ಯಾ ಮತ್ಪೀಠಸಂಶ್ರಯಾಃ ।
ತಥಾ ಮಚ್ಛಿಷ್ಯಪೀಠೀಯಾಃ ಸರ್ವೇಽಪ್ಯಾಚಾರ್ಯಸಂಮಿತಾಃ ।೫೦।

ಈ ಶ್ಲೋಕವು ಮುಂದಿನಶ್ಲೋಕವಾದಮೇಲೆ ಬ. ಉತ್ತರಾರ್ಧ: 'ತತ್ತತ್ ಪೀಠಕ್ರಮೇಣೈವ ನ ಬಹುಯರ್ಜ್ಯತೇ ಕ್ವಚಿತ್' ಬ. ನ.

2. 'ಯಥಾವದನುಪಾಲಯೇತ್' ಬ. ನ.

3. ಸುಧನ್ವಾ ಹಿ ಮಹಾರಾಜಸ್ತದನ್ಯೇ ಚ ನರೇಶ್ವರಾಃ' ಬ. ನ.

4. ಈ ಶ್ಲೋಕವಿಲ್ಲ. ಬ. ನ.

5. 'ಬ್ರಹ್ಮಕ್ಷತ್ರಕುಲೇ ಭೂತ್ವಾ ಭಾರತೀಪೀಠವಂಚಕಃ' ಸ.

6. ಇಲರಿಂದ ಮುಂದಿನ ಶ್ಲೋಕಗಳಿಲ್ಲ. ಬ. ನ.

ಶೃಙ್ಗೇರೀಮಠ ಆಚಾರ್ಯೋ ಭಾರತ್ಯಾಖ್ಯೋ ಬಹೂತ್ತಮಃ ।
ಕಾಲಿಕಾಮಠ[1] ಆಚಾರ್ಯ ಆಶ್ರಮಾಖ್ಯಃ ಸುನಿರ್ಮಲಃ ।।೫೧।।
ಜ್ಯೋತಿರ್ಮಠಸ್ಯ ನಿಗಿತ ಆಚಾರ್ಯಃ ಪರ್ವತಾಭಿಧಃ[2] ।
ಗೋವರ್ಧನಸ್ಯ ವಿಜ್ಞೇಯೋಽರಣ್ಯನಾಮಾ ವಿಚಕ್ಷಣಃ ।।೫೨।।
[3]ಕಾಮಕೋಟೀಮಠೇ ತ್ವಸ್ಮಿನ್ ಗುರುರಿನ್ದ್ರಸರಸ್ವತೀ ।
ಸರ್ವೋತ್ತರಃ ಸರ್ವಸೇವ್ಯಃ ಸಾರ್ವಭೌಮೋ ಜಗದ್ಗುರುಃ ।।೫೩।।
ಅನ್ಯೇ ತು ಗುರವಃ ಪ್ರೋಕ್ತಾ ಜಗದ್ಗುರುರಯಂ ಪರಃ ।
ನಾಸ್ಯ ಶಾಸನಮುಲ್ಲಙ್ಘ್ಯ ನಿಯಮ್ಯಃ[4] ಪೀಠಭಾಗ್ ಭವೇತ್ ।।೫೪
ಸ್ವರ್ಣಾಶ್ರಮಧರ್ಮಾಂಶ್ಚ ಪುಣ್ಯಭೂಮೌ ವಿಚಾರಯೇತ್ ।
ಚತುಷ್ಪೀಠೇಷು ಶಿಷ್ಯಾಣಾಂ ತದುದ್ದಿಶ್ಯೋ ಗುರುರ್ಭವೇತ್ ।।೫೫।।
ನಿರ್ಣಯೋಽಸೌ ಸುವಿಜ್ಞೇಯಃ ಪರಪೀಠಾಧಿಕಾರಿಣಾಮ್ ।
ನಾತ್ರವ್ಯತ್ಯಯ ಆದೇಯಃ ಕದಾಚಿದಪಿ ವೈದಿಕೈಃ ।।೫೬।।
ಅನ್ಯೇ ಮಠ್ಯಾಸ್ತು ಚತ್ವಾರ ಆಚಾರ್ಯಂ ಮುತ್ಪದೇ ಸ್ಥಿತಮ್ ।
ಸಂಪ್ರದಾಯೈಶ್ಚತುರ್ಭಿಃ ಸ್ವೈಃ ಸಮರ್ಚನ್ತು ಯಥಾವಿಧಿ[5] ।।೫೭।।
ಸ್ವಂ ಸ್ವಂ ದೇಶಂ ಸ್ವಮಾತ್ರಾಭಿಃ ಪಾಲಯನ್ತು ಪ್ರಜಾರ್ಚಿತಾಃ ।
ಇತಸ್ತತಃ ಸಞ್ಚರನ್ತಃ ಸತತಂ ಧರ್ಮವೃದ್ಧಯೇ ।।೫೮।।
ಚಾತುರ್ವರ್ಣ್ಯಂ ಯಥಾಯೋಗಂ ವಾಙ್ಮನಃಕಾಯಕರ್ಮಭಿಃ ।
ಗುರೋಃ ಪೀಠಂ ಸಮರ್ಚೇತ ವಿಭಾಗಾನುಕ್ರಮೇಣ ವೈ[7] ।।೫೯।।
ಧರಾಮಾಲಮ್ಬ್ಯ ರಾಜಾನಃ ಪ್ರಜಾಭ್ಯಃ ಕರಭಾಗಿನಃ ।
ಕೃತಾಧಿಕಾರಾ ಆಚಾರ್ಯಾ ಧರ್ಮತಸ್ತದ್ವದೇವ ಹಿ ।।೬೦।।
ಧರ್ಮೋ ಮೂಲಂ ಮನುಷ್ಯಾಣಾಂ ಸ ಚಾಚಾರ್ಯಾವಲಮ್ಬನಃ ।
ತಸ್ಮಾದಾಚಾರ್ಯಸುಮನೇಃ ಶಾಸನಂ ಸರ್ವತೋಽಧಿಕಮ್[8] ।।೬೧।।

1, ಶಾರದಾಮಠ. ನ.

2. .....ಸತತಂ ಪರ್ವತಾಖ್ಯೋ ನಿಗದ್ಯತೇ ।
ಶೃಂಗವೇರಮಠೇ ನಿತ್ಯಂ ಭಾರತೀ ಬಹುಭಾವನಃ ॥ ನ.

3. ೫೩ರಿಂದ ೫೬ರವರೆಗಿನ ಶ್ಲೋಕಗಳು ಬ. ನ.ಗಳಲ್ಲಿಲ್ಲ. ಮತ್ತು ಬ.ದಲ್ಲಿ ೫೮ರ' ವರೆಗಿನ ಶ್ಲೋಕಗಳಲ್ಲಿಲ್ಲ. 4. ನಿಯಮ್ಯಾ ಪಾ॥ 5. ವರ್ಣಾಶ್ರಮ ಪಾ॥

6. ಮಠಾಶ್ಚತ್ವಾರ ಆಚಾರ್ಯಾಶ್ಚತ್ವಾರಶ್ಚ ಧುರನ್ಧರಾಃ ।
ಸಂಪ್ರದಾಯಾಶ್ಚ ಚತ್ವಾರ ಏಷಾ ಧರ್ಮವ್ಯವಸ್ಥಿತಿಃ ॥ ನ.

7. ಇದರ ಹಿಂದಿನ ಶ್ಲೋಕಗಳಿಲ್ಲ. ಬ. ನ.

8. ಇದಾದಮೇಲೆ ೬೫ ಶ್ಲೋಕವಿದೆ ಬಲ ; 'ಶಾಸನಂ ಸರ್ವಸಂಮತಮ್' ಎಂದು ಪಾ॥

ಆಚಾರ್ಯೈಃ ಕ್ಷಿಪ್ತದಣ್ಡಾಸ್ತು ಕೃತ್ವಾ ಪಾಪಾನಿ ಮಾನವಾಃ ।
ನಿರ್ಮಲಾಃ ಸ್ವರ್ಗಮಾಯಾನ್ತಿ ಸನ್ತಃ ಸುಕೃತಿನೋ ಯಥಾ ॥೬೨॥
ತಂ ನಾವಮಾಚಾರ್ಯೋಪದೇಶೋ ದಣ್ಡಶ್ಚ ಪಾಲಯತೇ ।
ತಸ್ಮಾದ್ರಾಜಾಚಾರ್ಯೌ ಅನಿನ್ದ್ಯೌ ಅನಿನ್ದ್ಯೌ[1] ॥೬೩॥
ಇತ್ಯೇವಂ ಮನುರಪ್ಯಾಹ ಗೌತಮೋಽಪಿ ವಿಶೇಷತಃ ।
ವಿಶಿಷ್ಟಶಿಷ್ಟಾಚಾರೋಽಪಿ ಮೂಲಾದೇವ ಪ್ರಸಿಧ್ಯತಿ ॥೬೪॥
ತಸ್ಮಾತ್ ಸರ್ವಪ್ರಯತ್ನೇನ ಶಾಸನಂ ರಕ್ಷ್ಯತಾಮಿದಮ್[2] ।
ಆಚಾರ್ಯಸ್ಯ ವಿಶೇಷೇಣ ಹ್ಯೌದಾರ್ಯಭರಭಾಗಿನಃ ॥೬೫॥
ಧರ್ಮಪದ್ಧತಿರೇಷಾ ಹಿ ಜಗತಃ ಸ್ಥಿತಿಹೇತವೇ ।
ಸರ್ವವರ್ಣಾಶ್ರಮಾಣಾಂ ಹಿ ಯಥಾಶಾಸ್ತ್ರಂ ವಿಧೀಯತೇ ॥೬೬॥
ಕೃತೇ ವಿಶ್ವಗುರುರ್ಬ್ರಹ್ಮಾ ತ್ರೇತಾಯಾಮೃಷಿಸತ್ತಮಃ ।
ದ್ವಾಪರೇ ವ್ಯಾಸ ಏವ ಸ್ಯಾತ್ಕಲಾವತ್ರ ಭವಾಮ್ಯಹಮ್ ॥೬೭॥
ಅಥ ಸನ್ಧ್ಯುತ್ತರಾಮ್ನಾಯಾಸ್ತೇ ವಿಜ್ಞಾನೈಕವಿಗ್ರಹಾಃ ।
ಪಞ್ಚಮುಸ್ತೂರ್ಧ್ವ ಆಮ್ನಾಯಃ ಸುಮೇರುರ್ಮತ ಉಚ್ಯತೇ[3] ॥೬೮॥
ಸಂಪ್ರದಾಯೋ*ಸ್ಯ ಕಾಶೀ(?) ಸ್ಯಾತ್ ಸತ್ಯಜ್ಞಾನಾಭಿದೇ ಪದೇ ।
ಕೈಲಾಸೋ ಕ್ಷೇತ್ರಮಿತ್ಯುಕ್ತಂ ದೇವತಾಸ್ಯ ನಿರಞ್ಜನಃ ॥೬೯॥
ದೇವೀ ಮಾಯಾ ತಥಾ ಆಚಾರ್ಯ ಈಶ್ವರೋಽಸ್ಯ ಪ್ರಕೀರ್ತಿತಃ ।
ತೀರ್ಥಂ ತು ಮಾನಸಂ ಪ್ರೋಕ್ತಂ ಬ್ರಹ್ಮತತ್ತ್ವಾವಗಾಹಿ ತತ್ ॥೭೦॥
ತತ್ರ ಸಂಯೋಗಮಾರ್ಗೇಣ ಸಂನ್ಯಾಸಂ ಸಮುಪಾಶ್ರಯೇತ್ ।
ಸೂಕ್ಷ್ಮವೇದಸ್ಯ ವಕ್ತಾ ಚ ತತ್ರ ಧರ್ಮಂ ಸಮಾಚರೇತ್ ॥೭೧॥
ಷಷ್ಠಸ್ತ್ವಾತ್ಮಾಖ್ಯ ಆಮ್ನಾಯಃ ಪರಮಾತ್ಮಾ ಮಹೋ ಮಹಾನ್" ।
ಸತ್ಸಂತೋಷಃ[4] ಸಂಪ್ರದಾಯಃ ಪರಂ ಯೋಗಮನುಸ್ಮರೇತ್ ॥ ॥೭೨॥
ನಭಃ ಸರೋವರಂ ಕ್ಷೇತ್ರಂ ಪರಹಂಸೋಽಸ್ಯ ದೇವತಾ ।
ದೇವೀ ಸ್ಯಾನ್ಮಾನಸೀ ಮಾಯಾ ಆಚಾರ್ಯಶ್ಚೇತನಾಽಹ್ವಯಃ ॥೭೩॥
ತ್ರಿಪುಟೀತೀರ್ಥಮುತ್ಕೃಷ್ಟಂ ಸರ್ವಪುಣ್ಯಪ್ರದಾಯಕಮ್ ।
ಭವಪಾಶವಿನಾಶಾಯ ಸಂನ್ಯಾಸಂ ತತ್ರ ಚಾಶ್ರಯೇತ್ ॥೭೪॥

---

1. ಈ ಶ್ಲೋಕವು ಹೀಗೆಯೇ ಇವೆ. ನ; ಬ.ದಲ್ಲಿಲ್ಲ.
2. 'ಸರ್ವಸಂಮತಮ್' ನ.
3. ಇಲ್ಲಿಂದ ಮುಂದಿನ ಶ್ಲೋಕಗಳಿಲ್ಲ. ಬ. ನ.
4. ಸತ್ವತೋಷ ಎಂದು ಪಾಂ

ವೇದಾನ್ತವಾಕ್ಯವಕ್ತಾ ಚ ತತ್ರೈ ಧರ್ಮಂ ಸಮಾಚರೇತ್ ।
ಸಪ್ತಮೋ ನಿಷ್ಕಲಾಮ್ನಾಯಃ ಸಹಸ್ರಾರ್ಕದ್ಯುತಿರ್ಮತಃ ।।೭೫।।
ಸಂಪ್ರದಾಯೋಽಸ್ಯ ಸಚ್ಛಿಷ್ಯಃ ಶ್ರೀಗುರೋಃ ಪಾದುಕೇ ಪದೇ ।
ತತ್ರಾನುಭೂತಿಃ ಕ್ಷೇತ್ರಂ ಸ್ಯಾತ್ ವಿಶ್ವರೂಪೋಽಸ್ಯ ದೇವತಾ ।।೭೬।।
ದೇವೀ ಚಿಚ್ಛಕ್ತಿರಾಖ್ಯಾತಾ ಸದ್ಗುರುರ್ದೇಶಿಕಃ ಸ್ಮೃತಃ ।
ಸಚ್ಛಾಸ್ತ್ರಶ್ರವಣಂ ತೀರ್ಥಂ ಜರಾಮೃತ್ಯುವಿನಾಶನಮ್ ।।೭೭।।
ಪೂರ್ಣಾನನ್ದಪ್ರಸಾದೇನ ಸಂನ್ಯಾಸಂ ತತ್ರ ಚಾಶ್ರಯೇತ್ ।
ಪ್ರಣವಸ್ಯ ಪ್ರವಕ್ತಾ ಚ ತತ್ರ ಧರ್ಮಂ ಸಮಾಚರೇತ್ ।।೭೮।।
ಔತ್ತರಾಧರ್ಯಮಾಮ್ನಾಯೇಷ್ವೇವಂ ಕ್ಲೃಪ್ತಂ ಮನೀಷಿಭಿಃ ।
ಪಶ್ಚಿಮಾದುದಗಾಮ್ನಾಯಃ ಉದೀಚಃ ಪ್ರಾಕ್ಪರಃ ಸ್ಮೃತಃ ।।೭೯।।
ಪರೋಽಸ್ಮಾದ್ದಕ್ಷಿಣಾಮ್ನಾಯಃ ಸರ್ವೇಭ್ಯಶ್ಚ ಪರಂ ಮಮ ।
ಪರಂ ದುರಾಸದಂ ಸೇಯಂ ಕಾಮಕೋಟೀತಿ ಸಂಜ್ಞಿತಮ್ ।।೮೦।।
ಮೌಲಾಮ್ನಾಯ ಇತಿ ಖ್ಯಾತಸ್ತತೋಽನ್ಯೇ ಜ್ಞಾನಗೋಚರಾಃ ।
ಅಸ್ಮಾತ್ ಸುಮೇರುಃ ಪರಮಸ್ತಸ್ಮಾದಾತ್ಮಾ ಮಹಾನ್ ಪರಃ ।।೮೧।।
ತತೋಽಪಿ ನಿಷ್ಕಲಃ ಶ್ರೇಯಾನಾಮ್ನಾಯಃ ಸಂಪ್ರಕೀರ್ತಿತಃ ।
ಆಮ್ನಾಯೋಪ್ಯಕಥಮೇತದ್ಧಿ ಕಥಿತಂ ವಿಸ್ತರೇಣ ತು ।।೮೨।।
ಉತ್ತರೋತ್ತರಮೇತೇಷಾಮಾಮ್ನಾಯಾನಾಂ ಪೃಥಕ್ ಪೃಥಕ್ ।
ಅಪೇಕ್ಷಿತಮಾದಾನುಭೂತೇರ್ಗೌರವಂ ಪೂರ್ವತೋಽಧಿಕಮ್ ।।೮೩।।

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಶ್ರೀಮಚ್ಛಙ್ಕರ
ಭಗವತ್ಪೂಜ್ಯಪಾದಾನಾಮ್ ಅನುಶಾಸನೇ ಮಠಾಮ್ನಾಯಸೇತೌ

ಆಮ್ನಾಯವಿಸ್ತರಃ ಸಂಪೂರ್ಣಃ

ಓಂ ತತ್ಸತ್

ಇದು ಕಾಂಚೀಮಠದ ಏಜಂಟರು ಕುಪ್ಪುಸ್ವಾಮಯ್ಯರವರು 1918ರಲ್ಲಿ ಮದ್ರಾಸ್ ಕಲಾರತ್ನಾಕರ ಮುದ್ರಾಕ್ಷರಶಾಲೆಯಲ್ಲಿ ಅಚ್ಚುಮಾಡಿಸಿದ ಪುಣ್ಯಶ್ಲೋಕಮಂಜರಿಯಲ್ಲಿದೆ, ಇದನ್ನು ಹಿಂದೆ ನಾವು ಕೊಟ್ಟಿರುವ ತಿನೆಯ ಮಠಾಮ್ನಾಯಕ್ಕೆ (ಪು, ೪೫೯ರಲ್ಲಿ) ಹೋಲಿಸಬೇಕು, ಎರಡೂ ಕಾಂಚೀಮಠಕ್ಕೆ ಅನುಕೂಲವಾಗಿವೆ; ಇದರಲ್ಲಿ ಕಾಂಚೀ ಮಠವು ಮೂಲಮಠವೆಂದೂ ಮಿಕ್ಕವು ಶಿಷ್ಯಮಠಗಳೆಂದೂ ಇರುವದೊಂದು ವಿಶೇಷ, ಈ ವಿಚಾರದಲ್ಲಿ ಕಾಂಚೀಮಠದ ವಿಷಯಕ್ಕೆ ಮಿಕ್ಕ ಮಠದ ಶಿಷ್ಯರಿಗೆ ಸ್ವಲ್ಪ ಮನಃಕಷಾಯ ವಾಗಿರುತ್ತದೆ. ಕಾಂಚೀಕಾಮಕೋಟಪೀಠದ ಹೆಚ್ಚುಗಾರಿಕೆಯೇನೂ ಇಲ್ಲವೆಂದು ತೋರಿ ಸುವದಕ್ಕೆ ಕೆಲವರು ಗ್ರಂಥಗಳನ್ನೂ ಬರೆದಿರುತ್ತಾರೆ.

ಇಲ್ಲಿರುವ ಶ್ಲೋಕಗಳಲ್ಲಿ ಕೆಲವು ಅಂದರೆ 'ಉಕ್ತಾಶ್ಚತ್ವಾರ ಆಮ್ನಾಯಾಃ' ಎಂಬಲ್ಲಿಂದ ಪ್ರಾರಂಭವಾಗಿರುವ ಶ್ಲೋಕಗಳನ್ನು 'ಮಹಾನುಶಾಸನ' ಎಂಬ ಹೆಸರಿನಿಂದ ಬಲದೇವ ಉಪಾಧ್ಯಾಯರೂ (ಬಲ. ಉ. ಪು. ೨೦೯) ಮತ್ತು ನವಭಾರತೀಕಾರ್ಯಾಲಯದಲ್ಲಿ ಅಚ್ಚಾಗಿರುವ ಮಠಾಮ್ನಾಯದವರೂ ಪ್ರಕಟಿಸಿರುತ್ತಾರೆ. ಅಲ್ಲಿರುವ ಪಾಠಭೇದಗಳನ್ನು 'ಬ' 'ನ' ಎಂಬ ಸಂಕೇತಗಳಿಂದ ಅಡಿಯಲ್ಲಿ ಟಿಪ್ಪಣಿಯ ರೂಪದಿಂದ ತೋರಿಸಿರುತ್ತೇವೆ. ಮಹಾನುಶಾಸನವು ಮೊದಲು ಒಂದು ರೂಪದಲ್ಲಿದ್ದು ಕಾಂಚೀಸಂಪ್ರದಾಯದವರು ತಮ್ಮ ಹೆಚ್ಚುಗಾರಿಕೆಯನ್ನು ತೋರಿಸುವದಕ್ಕೆ ಮಾರ್ಪಡಿಸಿಕೊಂಡು ಮತ್ತಷ್ಟು ಶ್ಲೋಕಗಳನ್ನು ಸೇರಿಸಿಕೊಂಡು 'ಮಠಾಮ್ನಾಯಸೇತು' ಎಂಬ ಹೆಸರನ್ನಿಟ್ಟುಕೊಂಡರೆ, ಅಥವಾ ಸೇತುವಿನಿಂದಲೇ ಸ್ವಲ್ಪಭಾಗವನ್ನು ಆರಿಸಿಕೊಂಡು ಮಾರ್ಪಡಿಸಿಕೊಂಡು ಬೇರೆಯವರು 'ಮಹಾನುಶಾಸನ'ವೆಂಬ ನಾಮಕರಣವನ್ನು ಮಾಡಿಕೊಂಡರೆ?—ಎಂಬುದು ಶೋಧನವಾಗಬೇಕಾಗಿದೆ.

ಮಠಾಮ್ನಾಯಗಳ ವಿಷಯದಲ್ಲಿ ವಿಚಾರಮಾಡತಕ್ಕ ವಿಷಯಗಳು ಕೆಲವಿವೆ : (೧) ಇವನ್ನು ಬರೆದವರು ಯಾರು ? ಇವುಗಳಲ್ಲಿರುವ ಹೆಸರುಗಳು, ಅನುಕ್ರಮ—ಮುಂತಾದವುಗಳ ವೈಲಕ್ಷಣ್ಯಕ್ಕೆ ಕಾರಣವೇನು? (೨)ಮಠಾಮ್ನಾಯ ಸೇತುವನ್ನಾಗಲಿ, ಮಹಾನುಶಾಸನವನ್ನಾಗಲಿ ಆಚಾರ್ಯರು ಬರೆದರೆಂಬುದಕ್ಕೆ ಏನು ಆಧಾರವಿದೆ ? (೩) ಒಂದೊಂದು ಮಠಕ್ಕೆ ಕೀಟವಾರ, ಭೋಗವಾರ—ಮುಂತಾದ ಸಂಪ್ರದಾಯಗಳು ಇಲ್ಲಿ ವರ್ಣಿತವಾಗಿವೆ. ಇವುಗಳ ವಿವರಣೆಯ ಶ್ಲೋಕಗಳನ್ನು ಹಿಂದೆ(೪೪ನೆಯ ಪುಟದಲ್ಲಿ)ಕೊಟ್ಟಿದೆ. ಈ ಸಂಪ್ರದಾಯಗಳನ್ನು ಈಗಿನ ಮಠದವರೂ ಅವಶೇಷರೂಪವಾಗಿಯಾದರೂ ಇಟ್ಟುಕೊಂಡಿದ್ದಾರೆಯೆ ? ಇದ್ದರೆ ಅವುಗಳ ಮೂಲವೇನು? (೪) ಒಂದೊಂದು ಮಠಕ್ಕೂ ಒಬ್ಬೊಬ್ಬ ದೇವ, ಒಬ್ಬೊಬ್ಬಳು ದೇವಿ—ಹೀಗೆ ವಿಂಗಡಿಸಿರುತ್ತಾರೆ ; ಉದಾಹರಣೆಗೆ ಸಿದ್ಧೇಶ್ವರ, ಭದ್ರಕಾಲೀ. ಈಗಲೂ ದೇವದೇವಿಯರ ವಿಭಾಗವು ಅಲ್ಲಿದೆಯೆ ? ಇದು ನಿಜವಾದರೆ ದ್ವಾರಕಾಮಠ, ಕಾಂಚೀಮಠ—ಇವರೂ ತಮ್ಮದು 'ಶಾರದಾಮಠ'ವೆಂದು ಕರೆದುಕೊಳ್ಳುವ ವಾಡಿಕೆ ಹೇಗೆ ಬಂತು ? (೫) ಒಂದೊಂದು ಮಠಕ್ಕೆ ಒಂದೊಂದು ವೇದವನ್ನೂ ಒಂದೊಂದು ಮಹಾವಾಕ್ಯವನ್ನೂ ಹಂಚಿರುವದು ಯಾವ ತತ್ತ್ವದ ಮೇಲೆ? ಉದಾಹರಣೆಗೆ ಶೃಂಗೇರಿಗೆ ಕೃಷ್ಣಯಜುರ್ವೇದವನ್ನೂ 'ಅಹಂ ಬ್ರಹ್ಮಾಸ್ಮಿ' ಎಂಬ ಮಹಾವಾಕ್ಯವನ್ನೂ ಹಂಚಿಕೊಟ್ಟಿರುವದು ಹೊಂದುಗೆಯಾಗಿದೆಯೆ? ಮಹಾವಾಕ್ಯಗಳು ನಾಲ್ಕೇ ಎಂದು 'ಶುಕರಹಸ್ಯೋಪನಿಷತ್ತಿ'ನಲ್ಲಿ ಹೇಳಿಕೆಯಾದರೂ ಆಚಾರ್ಯರಿಂದಲಾಗಲಿ ಅಥವಾ ಮತ್ತೆಯಾವದಾದರೂ ವೇದಾಂತಸಂಪ್ರದಾಯದ ಗ್ರಂಥಕಾರರಿಂದಲಾಗಲಿ ಹೀಗೆಂದು ನಿರ್ಣಯವಾಗಿದೆಯೆ ? ಇವು ಉಪದೇಶದ ಮಂತ್ರಗಳೆ? ಕಾಮಕೋಟಿಪೀಠಕ್ಕೆ 'ಓಂ ತತ್ಸತ್' ಎಂಬುದು ಮಹಾವಾಕ್ಯವೆಂದು ಕೆಲವರು ಹೇಳುತ್ತಾರೆ. 'ಪ್ರಣವಶ್ಚೋಪದೇಶವಾಕ್' ಎಂದು ಆಮ್ನಾಯಾಷ್ಟಕದಲ್ಲಿದೆ ಎಂದು ಹಿಂದೆ (ಪು. ೪೬೨) ಕಂಡದ್ದಾಗಿದೆ. ಹೀಗೇಕೆ? ಇವುಗಳ ವಿಷಯಕ್ಕೆ ಚರಿತ್ರೆಯ (೮೧ನೆಯ ಪುಟ)ವನ್ನು ನೋಡಿರಿ. ಅದು ಹೇಗೆ ಸಂಗತ ? (೬)

ತೀರ್ಥ, ಆಶ್ರಮ, ಅರಣ್ಯ, ಸರಸ್ವತೀ, ಭಾರತೀ–ಮುಂತಾದ ಸಂನ್ಯಾಸಿಗಳ ಹತ್ತು ನಾಮಗಳನ್ನು ಮಠಗಳಿಗೆ ಹಂಚಿಕೊಟ್ಟಿರುವದು ಸರಿಯಾಗಿದೆಯೆ? ಉದಾಹರಣೆಗೆ ಶೃಂಗೇರಿಗೆ ಸರಸ್ವತೀ, ಭಾರತೀ, ಪುರೀ– ಎಂದು ಮೂರೇ ನಾಮಗಳನ್ನು ಒಂದು ಆಮ್ನಾಯದಲ್ಲಿ, ಇನ್ನೂ ಕೆಲವು ನಾಮಗಳನ್ನು ಹೆಚ್ಚಾಗಿ ಮತ್ತೊಂದು ಕಡೆಯಲ್ಲಿ –ಹೀಗೆ ಕೊಟ್ಟಿರುವದೇಕೆ ?

ಇನ್ನೊಂದು ಕಗ್ಗಂಟಿನ ಪ್ರಶ್ನೆ ಇಲ್ಲಿದೆ : **'ಮಠಾಮ್ನಾಯಸೇತು'ವನ್ನು** ಎಲ್ಲಾ ಮಠದವರೂ ಒಪ್ಪಿಲ್ಲ. ಅದು ಯಾವಾಗ ಹೊರಕ್ಕೆ ಬಂದಿತು ? ಅದರಲ್ಲಿರುವ **ಮೌಲಾಮ್ನಾಯ**–ಮೂಲಮಠದ ಆಮ್ನಾಯ-ವನ್ನು ಮಿಕ್ಕ ಮಠದವರು ಯಾವಾಗಲಾದರೂ ಒಪ್ಪಿದ್ದರೆಂಬುದಕ್ಕೆ ಐತಿಹಾಸಿಕವಾದ ಆಧಾರವಿದೆಯೆ ? ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವು ನಮಗೆ ಈವರೆಗೆ ದೊರಕಿರುವದಿಲ್ಲ.

ಯೋಗಪಟ್ಟಗಳು

ಮಠಗಳಲ್ಲಿ ಪೀಠಾಧಿಪತಿಗಳಾದವರೂ ಬಿಡಿಸಂನ್ಯಾಸಿಗಳೂ ಬೇರೆಬೇರೆಯ ಕೆಲವು ಗೊತ್ತಾದ ಹೆಸರುಗಳನ್ನು ಇಟ್ಟುಕೊಂಡಿರುವದು ಪ್ರಸಿದ್ಧವಾಗಿದೆ. ಈ ಹೆಸರುಗಳ ವಿವರವನ್ನು ಈ ಕೆಳಗಿನ ಶ್ಲೋಕಗಳಲ್ಲಿ ಕಾಣಬಹುದು. ಇವನ್ನು ನಾವು **ನವಭಾರತೀ ಕಾರ್ಯಾಲಯದ ಮಠಾಮ್ನಾಯ ಮತ್ತು ಬಲದೇವ ಉಪಾಧ್ಯಾಯರ ಗ್ರಂಥ**– ಇವುಗಳಿಂದ ತೆಗೆದುಕೊಂಡಿದ್ದೇವೆ.

ತೀರ್ಥಾಶ್ರಮವನಾರಣ್ಯಗಿರಿಪರ್ವತಸಾಗರಾಃ |
ಸರಸ್ವತೀ ಭಾರತೀ ಚ ಪುರೀ ನಾಮಾನಿ ವೈ ದಶ ‖ ೧ ‖
ತ್ರಿವೇಣೀಸಂಗಮೇ ತೀರ್ಥೇ ತತ್ತ್ವಮಸ್ಯಾದಿಲಕ್ಷಣೇ |
ಸ್ನಾಯಾತ್ ತತ್ತ್ವಾರ್ಥಭಾವೇನ ತೀರ್ಥನಾಮಾ ಸ ಉಚ್ಯತೇ ‖ ೨ ‖

೨. ತತ್ತ್ವಮಸಿ ಮುಂತಾದ ತ್ರಿವೇಣೀಸಂಗಮತೀರ್ಥದಲ್ಲಿ ತತ್ತ್ವಾರ್ಥಭಾವನೆಯಿಂದ ಸ್ನಾನಮಾಡುವವನನು 'ತೀರ್ಥ'ನೆಂಬ ಹೆಸರಿನವನೆನಿಸುವನು.

ಆಶ್ರಮಗ್ರಹಣೇ ಪ್ರೌಢ ಆಶಾಪಾಶವಿವರ್ಜಿತಃ |
ಯಾತಾಯಾತವಿನಿರ್ಮುಕ್ತ ಏಷ ಆಶ್ರಮ ಉಚ್ಯತೇ ‖ ೩ ‖

೩. ಆಶ್ರಮಗ್ರಹಣದಲ್ಲಿ ಪ್ರೌಢನಾಗಿ, ಆಶಾಪಾಶಗಳಿಂದ ಮುಕ್ತನಾಗಿ ಹೋಗಿಬರುವದರಿಂದ ಬಿಡುಗಡೆಯಾಗಿರುವಾತನು 'ಆಶ್ರಮ'ನೆನಿಸುವನು.

['ಏತದಾಶ್ರಮಲಕ್ಷಣಮ್' ಪಾ॥. ಆಶ್ರಮನಿಯಮವನ್ನು ಪಾಲಿಸುವವನು ; ಜ್ಞಾನದಿಂದ ಜನ್ಮಮರಣಗಳನ್ನು ವಿಾರಿ ಬಿಡುಗಡೆಯಾಗುವದಕ್ಕೆ ಯತ್ನಿಸುವವನು ಎಂದರ್ಥವಿರಬಹುದು.]

ಸುರಮ್ಯೇ ನಿರ್ಜನೇ ಸ್ಥಾನೇ ವನೇ ವಾಸಂ ಕರೋತಿ ಯಃ |
ಆಶಾಪಾಶವಿನಿರ್ಮುಕ್ತೋ ವನನಾಮಾ ಸ ಉಚ್ಯತೇ ‖ ೪ ‖

೪, ಬಹಳ ರಮಣೀಯವಾದ ನಿರ್ಜನವಾದ ಸ್ಥಲದಲ್ಲಿ ವಾಸವನ್ನು ಮಾಡಿಕೊಂಡು ಆಶಾಪಾಶಗಳಿಂದ ಬಿಡುಗಡೆಯಾಗಿರುವವನು 'ವನ' ಎಂಬ ಹೆಸರಿನವನೆನಿಸುವನು.

[ಇಲ್ಲಿ 'ನಿರ್ಧುರೇ? ಎಂಬ ನ. 'ಸ್ಥಾನೇ' ಎಂಬ ಬಲ. ಪಾಠವನ್ನು ಬಿಟ್ಟಿದ್ದೇವೆ.]

ಆರಣ್ಯೇ ಸಂಸ್ಥಿತೋ ನಿತ್ಯಮಾನನ್ದೇ ನನ್ದನೇ ವನೇ |
ತ್ಯಕ್ತ್ವಾ ಸರ್ವಮಿದಂ ವಿಶ್ವಮರಣ್ಯಃ ಪರಿಕೀರ್ತ್ಯತೇ]೧೧]

೫. ಈ ವಿಶ್ವವೆಲ್ಲವನ್ನೂ ತ್ಯಾಗಮಾಡಿ ಆನಂದನಂದನವನವೆಂಬ ಅರಣ್ಯದಲ್ಲಿಯೇ ಯಾವನು ಇರುವನೋ ಅವನು 'ಅರಣ್ಯ'ನೆನಿಸುವನು.

ವಾಸೋ ಗಿರಿವನೇ ನಿತ್ಯಂ ಗೀತಾಧ್ಯಯನತತ್ಪರಃ |
ಗಮ್ಭೀರಾಚಲಬುದ್ಧಿಶ್ಚ ಗಿರಿನಾಮಾ ಸ ಉಚ್ಯತೇ]೬]

೬. ಗಿರಿಗಳ ವನದಲ್ಲಿ ನಿತ್ಯವೂ ವಾಸಮಾಡುತ್ತಾ ಗೀತಾಧ್ಯಯನವನ್ನು ಮಾಡುತ್ತಾ ಗಂಭೀರವಾದ ನಿಶ್ಚಲಬುದ್ಧಿಯುಳ್ಳಾತನು 'ಗಿರಿ' ಎಂಬ ಹೆಸರಿನವನೆನಿಸುತ್ತಾನೆ,

[ಗೀತಾಭ್ಯಾಸೇ' ಬ,]

ವಸನ್ ಪರ್ವತಮೂಲೇಷು ಪ್ರೌಢಂ ಜ್ಞಾನಂ ಬಿಭರ್ತಿ ಯಃ |
ಸಾರಾಸಾರಂ ವಿಜಾನಾತಿ ಪರ್ವತಃ ಪರಿಕೀರ್ತ್ಯತೇ]೭]

೭, ಯಾವನಾದರೂ ಪರ್ವತದ ತಪ್ಪಲುಗಳಲ್ಲಿ ವಾಸಮಾಡುತ್ತಾ ಪ್ರೌಢವಾದ ಜ್ಞಾನವನ್ನು ಧರಿಸಿಕೊಂಡು ಸಾರಾಸಾರವನ್ನು ತಿಳಿದುಕೊಂಡಿರುವನೋ ಅವನು 'ಪರ್ವತ' ನೆನಿಸುತ್ತಾನೆ,

[ವಸೇತ್ ಪರ್ವತಮೂಲೇಷು ಪ್ರೌಢೋ ಯೋ ಧ್ಯಾನತತ್ಪರಃ [
ಸಾರಾಸಾರಂ ವಿಜಾನಾತಿ ಪರ್ವತಃ ಪರಿಕೀರ್ತಿತಃ ॥ ಬ.]

ತತ್ತ್ವಸಾಗರಗಮ್ಭೀರೋ ಜ್ಞಾನರತ್ನಪರಿಗ್ರಹಃ |
ಮರ್ಯಾದಾಂ ನೈವ ಲಙ್ಘ್ಯೇತ ಸಾಗರಃ ಪರಿಕೀರ್ತ್ಯತೇ]೮]

೮. ತತ್ತ್ವಸಾಗರದ ಆಳವುಳ್ಳವನಾಗಿ ಜ್ಞಾನರತ್ನಗಳ ಪರಿಗ್ರಹವುಳ್ಳವನಾಗಿ ಆಶ್ರಮಮರ್ಯಾದೆಯನ್ನು ಮೀರದೆ ಇರುವವನು ಸಾಗರನೆನಿಸುವನು.

[ವಸೇತ್ ಸಾಗರಗಂಭೀರೋ ಘನರತ್ನಪರಿಗ್ರಹಃ |
ಮರ್ಯಾದಾಶ್ಚ ನ ಲಙ್ಘ್ಯೇತ ಸಾಗರಃ ಪರಿಕೀರ್ತಿತಃ ॥]

ಸ್ವರಜ್ಞಾನರತೋ ನಿತ್ಯಂ ಸ್ವರವಾದೀ ಕವೀಶ್ವರಃ |
ಸಂಸಾರಸಾಗರೇ ಸಾರಾಭಿಜ್ಞೋ ಯಃ ಸ ಸರಸ್ವತೀ]೯]

೯. ಯಾವಾಗಲೂ ಸ್ವರಜ್ಞಾನದಲ್ಲಿ ನಿರತನಾಗಿ ಸ್ವರವಾದಿಯಾಗಿ ಜ್ಞಾನಿಶ್ರೇಷ್ಠನಾಗಿರುವವನು ಸಂಸಾರಸಾಗರದಲ್ಲಿ ಸಾರವನ್ನು ತಿಳಿದುಕೊಂಡಿರುವವನೇ ಸರಸ್ವತಿಯು.

['ಸ್ವರಜ್ಞಾನವತೋ' ಬ, ಇಲ್ಲಿ ಸ್ವರವೆಂದರೇನೆಂಬುದು ಸ್ಪಷ್ಟವಿಲ್ಲ. ಶ್ವಾಸವೆಂದು ಮೊದಲನೆಯ ಸ್ವರಶಬ್ದಕ್ಕೂ ವೇದದ ಸ್ವರಗಳೆಂದು ಎರಡನೆಯದಕ್ಕೂ ಬಲದೇವ ಉಪಾಧ್ಯಾಯರ ಅರ್ಥ. ಸ್ವರವೆಂದರೆ ಓಂಕಾರವೆಂದೂ ಅರ್ಥಮಾಡಬಹುದೆಂದು ತೋರುತ್ತದೆ. ಸಂಸಾರಸಾಗರದಲ್ಲಿ ಸಾರವೆಂದರೆ ಪರಮಾತ್ಮಜ್ಞಾನವೆಂದು ಅರ್ಥವಿರಬಹುದು, 'ಸಂಸಾರಸಾಗರಾಸಾಗರಂ ಹನ್ತ್ಯಸೌ ಹಿ ಸರಸ್ವತೀ' ಎಂದು–ನ; ಪಾಠ.]

ವಿದ್ಯಾಭಾರೇಣ ಸಂಪೂರ್ಣಃ ಸರ್ವಭಾರಂ ಪರಿತ್ಯಜನ್ ।
ದುಃಖಭಾರಂ ನ ಜಾನಾತಿ ಭಾರತೀ ಪರಿಕೀರ್ತ್ಯತೇ ।೧೦।

೧೦. ಯಾವನು ಸರ್ವಭಾರವನ್ನೂ ಪರಿತ್ಯಾಗಮಾಡಿ ವಿದ್ಯಾಭಾರದಿಂದ ಸಂಪೂರ್ಣನಾಗಿರುವನೋ ದುಃಖದ ಭಾರವನ್ನು ಅರಿಯುನೋ ಅವನು 'ಭಾರತೀ' ಎನಿಸುವನು,

['ಪರಿತ್ಯಜೇತ್', 'ಪರಿಕೀರ್ತಿತಃ' ಬ,]

ಜ್ಞಾನತತ್ತ್ವೇನ ಸಂಪೂರ್ಣಃ ಪೂರ್ಣತತ್ತ್ವಪದೇ ಸ್ಥಿತಃ ।
ಪರಬ್ರಹ್ಮರತೋ ನಿತ್ಯಂ ಪುರೀ ನಾಮಾ ಸ ಉಚ್ಯತೇ ।೧೧।

೧೧. ಜ್ಞಾನತತ್ತ್ವದಿಂದ ಪರಿಪೂರ್ಣನಾಗಿ ಪೂರ್ಣತತ್ತ್ವದ ಪದದಲ್ಲಿದ್ದುಕೊಂಡು ನಿತ್ಯವೂ ಪರಬ್ರಹ್ಮದಲ್ಲಿ ರತಿಯುಳ್ಳವನು 'ಪುರೀ' ಎಂಬ ಹೆಸರುಳ್ಳವನೆನಿಸುವನು.

ಮೊದಲು ಇಂಥಿಂಥ ಯೋಗ್ಯತೆಯಿರುವವರೆಂದು ನೋಡಿ ಈ ಹೆಸರನ್ನು ಕೊಡುತ್ತಿದ್ದರೆಂದು ಭಗವತ್ಪಾದರು ತಾವೇ ಬರೆದಿರುವ ಈ ಮೇಲಿನ ವ್ಯಾಖ್ಯಾನದಿಂದ ಗೊತ್ತಾಗುತ್ತದೆ—ಎಂತ ಬಲದೇವ ಉಪಾಧ್ಯಾಯರು (ಬಲ. ಉ. ಪು. ೨೧೨) ಬರೆದಿರುತ್ತಾರೆ. ಈ ಶ್ಲೋಕಗಳನ್ನು ಆಚಾರ್ಯರೇ ಬರೆದರೆಂಬುದೇ ವಾದಗ್ರಸ್ತವಾಗಿರುವಲ್ಲಿ ಈ ಅಭಿಪ್ರಾಯಕ್ಕೆ ಬೆಂಬಲವು ಕಡಿಮೆ ಎಂದು ಹೇಳಬೇಕಾಗಿಲ್ಲ. ಇದು ಹೇಗಾದರೂ ಇರಲಿ, ಈ ನಾಮಗಳನ್ನು ಶಂಕರಸಂಪ್ರದಾಯದ ಸಂನ್ಯಾಸಿಗಳಿಗೆ ಈಗ ಇಡುತ್ತಿರುವ ಪದ್ಧತಿಯಿದೆ ಎಂಬುದು ನಿಶ್ಚಯ. ಆದರೆ ಪೀಠಾಧಿಪತಿಗಳಿಗೇ ಇವು ವಿಶಾಸಲಾಗಿಲ್ಲ. 'ಇತಿ ದಶವಿಧಪರಿವ್ರಾಜಕಾನಾಂ ಯೋಗಪಟ್ಟನಿರ್ವಚನಾನಿ ಸಮಾಪ್ತಾನಿ' (ನ) ಎಂಬ ಉಕ್ತಿಯಿಂದ ಇವುಗಳಿಗೆ ಯೋಗಪಟ್ಟವೆಂಬ ಹೆಸರೂ ಇದೆ ಎಂದು ಗೊತ್ತಾಗುತ್ತದೆ.

ಇಲ್ಲಿ ಇನ್ನೊಂದು ವಿಚಾರ : ಕಾಂಚೀಪೀಠದ ಸ್ವಾಮಿಗಳಿಗೆ 'ಇಂದ್ರ ಸರಸ್ವತೀ' ಎಂಬ ಯೋಗಪಟ್ಟವು ಈಗ ತಪ್ಪದೆ ಇರುತ್ತದೆ. 'ಏಷಾಂ ನಾಮ ತು ವ್ಯಾಖ್ಯಾತಮಿನ್ದ್ರಪೂರ್ವಾ ಸರಸ್ವತೀ' ಎಂದು ಮಠಾಮ್ನಾಯಸೇತುವಿನ ವಚನವೂ ಇದೆ. ಆರ್. ಕೃಷ್ಣಸ್ವಾಮಿ ಅಯ್ಯರವರು ಬರೆದಿರುವ "ಕುಂಭಕೋಣ ಮಠದ ಮಿಥ್ಯಾಭಿಮಾನಿಗಳು" (KNC.) ಎಂಬರ್ಥದ ಇಂಗ್ಲಿಷುಗ್ರಂಥದಲ್ಲಿ 'ಕಾಮಕೋಟೀಮಠೇ ತ್ವಸ್ಮಿನ್ ಗುರುರಿನ್ದ್ರಸರಸ್ವತೀ' ಎಂಬು ಬೇರೊಂದು ಶ್ಲೋಕಾರ್ಧವನ್ನು ಬರೆದುಕೊಂಡಿದೆ. ಆಮ್ನಾಯಾಷ್ಟಕದಲ್ಲಿ "ಮುಖ್ಯಾಮ್ನಾಯ"ವೆಂಬ ಹೆಸರಿನಿಂದ ಬರೆದಿರುವ ಭಾಗದಲ್ಲಿ (ಪು. ೪೪೨) 'ಶುದ್ಧಾ ಸರಸ್ವತೀ ಚೇನ್ದ್ರಾನನ್ದಪೂರ್ವಾ ಚ ಭಾರತೀ | ಭಗವತ್ಪಾದ ಇತ್ಯಾದಿ ನಾಮಾನ್ಯನ್ಯಾನಿ ಚ ಸ್ವತಃ' ಎಂಬ ಶ್ಲೋಕವಿದೆ. ಹೀಗಿದ್ದರೂ 'ಇಂದ್ರ ಸರಸ್ವತೀ' ಎಂಬುದೇ ಕಾಂಚೀಮಠದವರ ಯೋಗಪಟ್ಟವೆಂಬ ನಂಬಿಕೆಯು ಈಗ ಪ್ರಚುರವಾಗಿರುತ್ತದೆ. 'ಶಂಕರಾಚಾರ್ಯರವರು ರುಗ್ಣರಾಗಿದ್ದ ಸುರೇಶ್ವರಾಚಾರ್ಯರಿಗಾಗಿ ಅಶ್ವಿನೀದೇವತೆಗಳ ಸಹಾಯವನ್ನು ಪಡೆಯಲು ಇಂದ್ರನು

ಸಿಟ್ಟಿನಿಂದ ಅಶ್ವಿನೀದೇವತೆಗಳ ಮೇಲೆ ವಜ್ರಾಯುಧವನ್ನು ಬಿಟ್ಟನು. ಆದರೆ ಅದು ಮುಂದಕ್ಕೆ ಹೋಗದೆ ಇರುವದನ್ನು ಕಂಡು ಶಂಕರಾಚಾರ್ಯರ ಪ್ರಭಾವವನ್ನು ತಿಳಿದ ಇಂದ್ರನು ತನ್ನ ಹೆಸರನ್ನು ಆ ಜಗದ್ಗುರುಗಳಿಗೆ ಕೊಟ್ಟನು; ಸರಸ್ವತಿ ಎಂಬುದು ಕಾಶ್ಮೀರದಲ್ಲಿ ಆಚಾರ್ಯರು ಸರಸ್ವತಿಯನ್ನು ಜಯಿಸಿದ್ದರಿಂದ ಬಂದದ್ದು' ಎಂದು ವೆಂಕಟೇಶಂ ಪೆಂತುಲುರವರು (NVSSK ಪು. 19–22) ಬರೆದಿರುತ್ತಾರೆ. ಇಂದ್ರನ ವಿಷಯದ ಕಥೆಯು ಯಾವ ಶಂಕರ ವಿಜಯದಲ್ಲಿಯೂ ಇಲ್ಲದ್ದರಿಂದಲೂ ಆಚಾರ್ಯರಿಗೆ ಈ ಬಿರುದನ್ನು ಇಟ್ಟಿರುವದು ಎಲ್ಲಿಯೂ ಕಂಡುಬರದೆ ಇರುವದರಿಂದಲೂ ಕಾಂಚೀಪೀಠಾಧಿಪತಿಗಳನೇಕರಿಗೆ ಈ ಬಿರುದು ಇರಲಿಲ್ಲವೆಂದು ತಿಳಿಯಬರುವದರಿಂದಲೂ ಮಠಕ್ಕೆ ಸಂಬಂಧಪಡದ ಅನೇಕರಿಗೆ ಈ ಯೋಗಪಟ್ಟವಿರುವದು ಕಂಡುಬರುವದರಿಂದಲೂ ಇದು ಸರಿಯಾದ ಕಾರಣವಲ್ಲ ಎಂದು (KMC. p. 49–50) ಆರ್ ಕೃಷ್ಣಸ್ವಾಮಿ ಅಯ್ಯೆರು–ಮೊದಲಾದವರು ಹೇಳುತ್ತಿದಾರೆ.

ದಶನಾಮಿ ಸಂಪ್ರದಾಯ

ದಶನಾಮಿಗಳೆಂದು ಪ್ರಸಿದ್ಧವಾದ 'ಗೋಸಾಇ'ಗಳು ಕೆಲವರಿರುತ್ತಾರೆ. ಅವರ ಸಂಪ್ರದಾಯವು ಹೇಗೆ ಉತ್ಪನ್ನವಾಯಿತೆಂಬುದನ್ನು ನಿರ್ಣಯಿಸುವದು ಕಷ್ಟ. ಒಂದು ದಂತಕಥೆಯಿದೆ: ಒಮ್ಮೆ ಆಚಾರ್ಯರು ಪರಿವ್ರಾಜಕಕ್ರಮದಿಂದ ಶಿಷ್ಯರೊಡನೆ :ಹೋಗುತ್ತಿರುವಲ್ಲಿ ಅವರ ಹಿಂದೆ ಶಿಷ್ಯರು ಬಾಯಾರಿಕೆಯಿಂದ ಸಂಕಟಪಡುತ್ತಿರುವದನ್ನು ಕಂಡು ದಾರಿಯಲ್ಲಿದ್ದ ಈಚಲುಮರದ ಹೆಂಡವನ್ನು ಕುಡಿಯುವದಕ್ಕೆ ಅಪ್ಪಣೆಕೊಟ್ಟರು; ಎಲ್ಲರೂ ಹೊಟ್ಟತುಂಬ ಕುಡಿದರು. ಮುಂದೆ ಹೋಗುತ್ತಿರಲು ಅಲ್ಲಿ ತಾವ್ರವನ್ನು ಕರಗಿಸಿಟ್ಟತ್ತು. ಆಚಾರ್ಯರು ಇದನ್ನು ಕುಡಿಯಿರಿ ಎಂದು ಶಿಷ್ಯರಿಗೆ ಹೇಳಲು ಮೊಟ್ಟಮೊದಲು ನಾಲ್ಕುಜನರು ಗಂಟಲು ಸುಡುವದೆಂಬುದನ್ನು ಲೆಕ್ಕಿಸದೆ ಕುಡಿದುಬಿಟ್ಟರು. ಉಳಿದವರು ಸುಮ್ಮನೆ ನಿಂತುಬಿಟ್ಟರು. ಆಗ ಅವರಿಗೆ ಗುರುಗಳು 'ಪತಿತರಾಗಿ' ಎಂದು ಶಾಪವನ್ನು ಕೊಟ್ಟರಂತೆ. ಇವರೇ ದಶನಾಮಿಗಳು. ಈ ಕಥೆಯಲ್ಲಿ ಎಷ್ಟು ಸತ್ಯಾಂಶವಿದೆಯೋ ತಿಳಿಯದು. ಇದಕ್ಕೆ ಅನೇಕ ರೂಪಗಳಿವೆ. ಬಲದೇವ ಉಪಾಧ್ಯಾಯರು ಇದನ್ನು ರೂಪಾಂತರದಲ್ಲಿ (ಬಲ.ಶಂ.ಪು. ೩೧೩) ಸಂಗ್ರಹಿಸಿರುತ್ತಾರೆ.

ಈ ದಶನಾಮಿಗಳು ಆಯುಧವನ್ನು ಧರಿಸುತ್ತಾರೆ. ರಾಜಪುತ್ರಸ್ಥಾನ ಮತ್ತು ಮಧ್ಯದೇಶಗಳಲ್ಲಿ ಈ ದಶನಾಮಿಗಳ ಅಧ್ಯಕರನ್ನು 'ಗೋಸಾಇ'ಗಳೆಂದು ಕರೆಯುತ್ತಿದ್ದರು; ಅವರು ರಾಜ್ಯಾಧಿಪತಿಗಳಾಗಿದ್ದು ಶಸ್ತ್ರಧಾರಿಗಳ ಸೈನ್ಯವನ್ನು ಇಟ್ಟುಕೊಂಡಿದ್ದರು. ಗುಪ್ತರಕಾಲದಲ್ಲಿ ಒಬ್ಬ 'ಪರಿವ್ರಾಜಕ'ರಾಜನು ಇದ್ದನಂತೆ.

ಹಿನ್ನುತಬಹಾದುರ'ಗಿರಿ' ಎಂಬಾತನು ಒಬ್ಬ ಸರದಾರನು. ಜಯಪುರದಲ್ಲಿ ಇಂಥ ಸಂಸ್ಥೆಯು ಈಗಲೂ ಇದೆಯಂತೆ. ದಶನಾಮಿಗಳಲ್ಲಿ ಅನೇಕ ಅಖಾಡ ಗಳುಂಟಂತೆ. ಅವುಗಳಲ್ಲಿ (೧) ಪಂಚಾಯಿತಿ ಅಖಾಡ ಮಹಾನಿರ್ವಾಣೀ ಇದರ ಮುಖ್ಯ ಸ್ಥಾನಪ್ರಯಾಗ, ಕಪಿಲದೇವರ ಉಪಾಸನೆ ಇವರದು ; (೨) ಪಂಚಾ ಯಿತಿ ಅಖಾಡಾನಿರಂಜನೀ, ಪ್ರಯಾಗ, ಸ್ವಾಮಿ ಕಾರ್ತಿಕೇಯನ ಉಪಾಸಕರು (೩) ಆಟಲ ಅಖಾಡಾ, ಗಣೇಶೋಪಾಸಕರು ; (೪) ಭೈರವ ಅಖಾಡಾ. ಈ ನಾಲ್ಕಕ್ಕೂ 'ಜೂನಾ" ಎಂಬ ಹೆಸರು (೫) ಅಖಾಡಾ ಅನಂದ, ದತ್ತಾತ್ರೇಯ ಉಪಾಸನೆ, (೫) ಅಖಾಡಾ ಅಗ್ನಿ ಮತ್ತು (೭) ಅಖಾಡಾ ಅನಾನ– ಇವರು ಹಿಂದೆ ಆಪತ್ಕಾಲದಲ್ಲಿ ಧರ್ಮರಕ್ಷಣೆಗೆ ಸಹಾಯಕರಾಗುತ್ತಿದ್ದರಂತೆ ; ನವಾಬರ ಸನ್ಮಾನಕ್ಕೆ ಪಾತ್ರರಾಗಿದ್ದಾರೆ. ಈಗ್ಗೆ ನಿರ್ವಾಣೀ, ನಿರಂಜನೀ–ಎಂಬ ಅಖಾಡ ಗಳು ಪ್ರಸಿದ್ಧವಾಗಿವೆಯಂತೆ. ಮಹಾಸಂಪದ್ಯುಕ್ತವಾದ ಈ ಅಖಾಡಗಳಿಂದ ದೇಶಕ್ಕೆ ಕಲ್ಯಾಣವಾಗುವಂತೆ ಮಾಡಿಕೊಳ್ಳುವದಕ್ಕೆ ಬರುವಂತಿದೆ ಎಂದು ಬಲದೇವ ಉಪಾಧ್ಯಾಯರು (ಬಲ. ಶಂ. ೨೧೩–೨೧೪) ಬರೆದಿರುತ್ತಾರೆ.

ಶಾಂಕರಸಂಪ್ರದಾಯದ ಯೋಗಪಟ್ಟಗಳಗೂ ಈ ದಶನಾಮಿಗಳಿಗೂ ಇರುವ ಸಂಬಂಧವನ್ನು ಐತಿಹಾಸಿಕರು ಇನ್ನೂ ಶೋಧಿಸಿ ತಿಳಿಯಬೇಕಾದ ಆವಶ್ಯಕತೆ ಇದೆ.

ಶೃಂಗೇರೀಗುರುಪರಂಪರೆ

ವಿಶೇಷ : ಮಠಗಳ ಗುರುಪರಂಪರೆಯ ಪಟ್ಟಿಗಳು ಒಂದೇಸಮನಾಗಿರು ವದಿಲ್ಲ. ಅವುಗಳ ಒಂದು ಮಠದ ಪಟ್ಟಿಯ ವಿಷಯಕ್ಕೆ ಮಿಕ್ಕ ಮಠಗಳವರು ಆಕ್ಷೇಪಿಸುತ್ತಿರುತ್ತಾರೆ. ಮಹಾದೇವ ರಾಜಾರಾವು ಬೋಡಸ್ ಎಂ. ಎ., ಎಲ್.ಎಲ್.ಬಿ– ಎಂಬವರು ಬರೆದ "ಶಂಕರಾಚಾರ್ಯ ವತ್ಯಾಂಚಾ ಸಂಪ್ರ ದಾಯ"–ಎಂಬ ಮರಾಠಿ ಗ್ರಂಥದಲ್ಲಿರುವ ಶೃಂಗೇರಿ ಪಟ್ಟಿಗಳನ್ನು ಇಲ್ಲಿ ಕೊಡ ಲಾಗಿದೆ. ಅವರು ತೋರಿಸಿರುವ ಪಟ್ಟಿಗಳು ನಾಲ್ಕು :

---

೧. ಜಗದ್ಗುರು ಆನೆಯ ನರಸಿಂಹಭಾರತೀಸ್ವಾಮಿಗಳ ಆಜ್ಞೆಯಂತೆ ಕ್ರಿ. ಶ. 1879ರಲ್ಲಿ ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳು ತಮಿಳುಭಾಷೆಯಲ್ಲಿ ಬರೆದದ್ದು.

೨. ಸೂರ್ಯನಾರಾಯಣರಾಯರು ವಿಜಯನಗರದ ಇತಿಹಾಸದ ಪರಿಶಿಷ್ಟದಲ್ಲಿ ಕೊಟ್ಟಿರುವದು'

೩. ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀಸ್ವಾಮಿಗಳು ವಾಣೀವಿಲಾಸ ಪ್ರೆಸ್ಸಿನಲ್ಲಿ ಅಚ್ಚುಮಾಡಿಸಿರುವದು.

೪. ರೈಸ್‌ಸಾಹೇಬರು ಮೈಸೂರು ಗೆಜಿಟಿಯರ್ (1907) ಸಂಪುಟ ೧ರ 473ನೆಯ ಪುಟದಲ್ಲಿ ಕೊಟ್ಟಿರುವದು.

ಇಲ್ಲಿ ಕೊಟ್ಟಿರುವ ಮೊದಲನೆಯ ಪಟ್ಟಿಯ ಕೆಳಗೆ ಟಿಪ್ಪಣಿಯಲ್ಲಿ ಮಿಕ್ಕ ಪಟ್ಟಿಗಳಲ್ಲಿರುವ ವೈಲಕ್ಷಣ್ಯವನ್ನು ತಿಳಿಸಿದೆ. ಶ್ರೀ|| ಕೆ. ಆರ್. ವೆಂಕಟರಾಮನ್ ರವರು ಕೊಟ್ಟಿರುವ ಪಟ್ಟಿಯನ್ನು ಕೊನೆಯಲ್ಲಿ ತೋರಿಸಿದೆ.

ಸಂ.	ಹೆಸರು	ಸಂನ್ಯಾಸಗ್ರಹಣ	ಬ್ರಹ್ಮೀಭಾವ	ಒಟ್ಟುವರ್ಷ
೧.	ಶ್ರೀಶಂಕರಾಚಾರ್ಯ	ಕ್ರಿ. ಪೂ. ೧೪	– ಕ್ರಿ. ಪೂ. ೧೨	೩[1]
೨.	ಸುರೇಶ್ವರಾಚಾರ್ಯ	ಕ್ರಿ. ಪೂ. ೧೨	– ಕ್ರಿ. ಶ. ೭೭೩	೭೮೫
೩.	ನಿತ್ಯಬೋಧಘನ (ಸರ್ವಜ್ಞಾತ್ಮಮುನಿ)[2]	ಕ್ರಿ.ಶ. ೭೭೩	ಕ್ರಿ.ಶ.–೮೪೮	೭೫
೪.	ಜ್ಞಾನಘನ[3]	೮೪೮	–೯೧೬	೬೮
೫.	ಜ್ಞಾನೋತ್ತಮ ಶಿವಾಚಾರ್ಯ[4]	೯೧೦	–೯೫೫	೪೫
೬.	ಜ್ಞಾನಗಿರಿ[5]	೯೫೫	–೧೦೫೮	೧೦೫
೭.	ಸಿಂಹಗಿರಿ[6]	೧೦೫೮	–೧೦೯೮	೬೦
೮.	ಈಶ್ವರತೀರ್ಥ[7]	೧೦೯೮	–೧೧೪೬	೪೮
೯.	ನರಸಿಂಹತೀರ್ಥ[8]	೧೧೪೬	–೧೨೩೮	೯೨
೧೦.	ವಿದ್ಯಾತೀರ್ಥ–ವಿದ್ಯಾಶಂಕರ[9]	೧೨೩೮	–೧೩೩೩	೧೦೫

1. ೨ನೆಯ ಪಟ್ಟಿಯಂತೆ ಶಂಕರಾಚಾರ್ಯರಿಗೆ ಕ್ರಿ. ಪೂ. 36–12 ಸುರೇಶ್ವರರಿಗೆ ಕ್ರಿ. ಪೂ. 28ರಿಂದ ಕ್ರಿ. ಶ. 773ವರೆಗೂ ಅಂದರೆ 800 ವರ್ಷಗಳು ಪೀಠಾಧಿಪತಿಗಳಾಗಿದ್ದರು ! ೩ನೆಯ ಟಿಪ್ಪಣಿಯಲ್ಲಿ ಸುರೇಶ್ವರರನ್ನು ವಿಶ್ವರೂಪರೆಂದಿವೆ.

೪ನೆಯ ಪಟ್ಟಿಯಂತೆ ಶಂಕರಾಚಾರ್ಯರ ಜನ್ಮಕಾಲ ಕ್ರಿ.ಶ. 737 ; ಪೀಠದಲ್ಲಿದ್ದ ಕಾಲ 745ರಿಂದ 739, ಸುರೇಶ್ವರರು 753.

ಬಲದೇವ ಉಪಾಧ್ಯಾಯರ ಪಟ್ಟಿಯಲ್ಲಿ ಸಂನ್ಯಾಸಗ್ರಹಣ ವಿಕ್ರಮಶಕೆ೨೨, ಸಿದ್ಧಿಕಾಲ ೪೫ ; ಜನ್ಮಾದಿಯಾಗಿ ೩೨ ವರ್ಷವೆಂದಿದೆ. ಸುರೇಶ್ವರರಿಗೆ ಸಂನ್ಯಾಸಗ್ರಹಣ ವಿಕ್ರಮ ೩೦ ರಿಂದ ೬೯೫, ಜನ್ಮಾದಿಯಾಗಿ ೭೨೫ ವರ್ಷಗಳು (!) ಎಂದು ಬರೆದಿದೆ.

2. ಸಂಕ್ಷೇಪಶಾರೀರಕರ್ತರು ನಂ. ೨,೪ ಈ ಪಟ್ಟಿಗಳಲ್ಲಿ ಇವರ ಜನ್ಮಕಾಲ ಕ್ರಿ ಶ, 758 ಮತ್ತು ಆಯುಸ್ಸು 90 ವರ್ಷಕೊಟ್ಟಿವೆ. ನಂ. ೩ನೆಯ ಪಟ್ಟಿಯಲ್ಲಿ 'ಬೋಧಘನ' ಎಂದಿಷ್ಟೇ ಇದೆ.

3. ೨–೪ನೆ ಪಟ್ಟಿಗಳಲ್ಲಿ ಇವರ ಕಾಲ 846-910

4. ೨–೪ರಲ್ಲಿ ಕಾಲ 905–653

5. ೨–೪ರಲ್ಲಿ ,, 949–1038

6. ೨–೪ರಲ್ಲಿ ,, 1036–1098

7. ೨–೪ರಲ್ಲಿ ,, 1097–1146

8. ೨–೪ರಲ್ಲಿ ,, 1145–1228

9. ಇವರ ಹೆಸರು ಸರ್ವಜ್ಞವಿಷ್ಣು, ಸಾಯಣಮಾಧವರ ಗುರು, ಕಾಂಚೀಪೀಠ ಪಲ್ಲಿಯೂ (?) ಇದ್ದರು.

ಸಂ.	ಹೆಸರು	ಸಂನ್ಯಾಸಗ್ರಹಣ	ಬ್ರಹ್ಮೀಭಾವ	ಒಟ್ಟು ವರ್ಷ
೧೧.	ಭಾರತೀಕೃಷ್ಣತೀರ್ಥ	ಕ್ರಿ.ಶ. ೧೩೩೩	ಕ್ರಿ ಶ.–೧೩೮೦	೪೭
೧೨.	ವಿದ್ಯಾರಣ್ಯ[1]	೧೩೮೦	–೧೩೮೫	೬
೧೩.	ಚಂದ್ರಶೇಖರಭಾರತೀ (೧)[2]	೧೩೮೬	–೧೩೯೯	೩
೧೪.	ನರಸಿಂಹಭಾರತೀ (೧)	೧೩೯೯	–೧೪೦೮	೧೯
೧೫.	ಪುರುಷೋತ್ತಮಭಾರತೀ (೧)	೧೪೦೮	–೧೪೪೮	೪೦
೧೬.	ಶಂಕರಾನಂದ	೧೪೪೮	–೧೪೫೫	೬
೧೭.	ಚಂದ್ರಶೇಖರಭಾರತೀ (೨)	೧೪೫೫	–೧೪೬೪	೧೦
೧೮.	ನರಸಿಂಹಭಾರತೀ (೨)	೧೪೬೪	–೧೪೭೯	೧೫
೧೯.	ಪುರುಷೋತ್ತಮಭಾರತೀ (೨)	೧೪೭೯	–೧೫೧೭	೩೮
೨೦.	ರಾಮಚಂದ್ರಭಾರತೀ	೧೫೧೭	–೧೫೬೦	೪೩
೨೧.	ನರಸಿಂಹಭಾರತೀ (೩)[3]	೧೫೬೦	–೧೫೭೩	೧೩
೨೨.	ನರಸಿಂಹಭಾರತೀ (೪)			
	ನರಸಿಂಹಭಾರತೀ (೧)	೧೫೭೩	–೧೫೬೬	೩
೨೩.	ನರಸಿಂಹಭಾರತೀ (೫),	೧೫೭೩	–೧೫೯೯	೨೩
೨೪.	ನರಸಿಂಹಭಾರತೀ (೬)	೧೫೯೯	–೧೬೨೨	೨೩
೨೫.	ಸಚ್ಚಿದಾನಂದಭಾರತೀ (೧)	೧೬೨೨	–೧೬೬೨	೪೧
೨೬.	ನರಸಿಂಹಭಾರತೀ (೭)	೧೬೬೩	–೧೭೦೫	೪೨
೨೭.	ಸಚ್ಚಿದಾನಂದಭಾರತೀ (೨)	೧೭೦೫	–೧೭೪೧	೩೬
೨೮.	ಅಭಿನವಸಚ್ಚಿದಾನಂದಭಾರತೀ (೧)	೧೭೪೧	–೧೭೬೭	೨೬
೨೯.	ಅಭಿನವನರಸಿಂಹಭಾರತೀ (೧)	೧೭೬೭	–೧೭೭೦	೩
೩೦.	ಸಚ್ಚಿದಾನಂದಭಾರತೀ (೨)	೧೭೭೦	–೧೮೧೪	೪೪
೩೧.	ಅಭಿನವಸಚ್ಚಿದಾನಂದಭಾರತೀ (೨)	೧೮೧೪	–೧೮೧೭	೩
೩೨.	ನರಸಿಂಹಭಾರತೀ (೮)	೧೮೧೭	–೧೮೭೮	೬೧

1, ಸಂ. ೨–೪ ಇವುಗಳಲ್ಲಿ ಭಾರತೀಕೃಷ್ಣರ ಕಾಲ 1328–1380. ಮತ್ತು ವಿದ್ಯಾರಣ್ಯರ ಕಾಲ 1331–1386.

2. ೨–೪ನೆಯ ಯಾದಿಗಳಲ್ಲಿ ಮುಂದಿನ ಎಂಟು ಸ್ವಾಮಿಗಳಿಗೂ ಆರಂಭಕಾಲ ಕ್ರಿ. ಶ, ೧೩೬೮. ೧೩೮೭, ೧೪೦೬, ೧೪೩೮, ೧೪೫೯, ೧೪೬೪, ೧೪೭೨, ೧೫೦೮– ಹೀಗೆ ಇದೆ, 3. ೨ ಮತ್ತು ೨೪ ರಲ್ಲಿ ಮುಂದಿನ ಇಬ್ಬರು ಸ್ವಾಮಿಗಳ ಆರಂಭಕಾಲ ಕ್ರಿ. ಶ. ೧೫೫೭. ೧೫೬೩.

4. ೨೨ನೆಯ ಪಟ್ಟಿಯಲ್ಲಿ ೨೩ರ ಮುಂಚೆ ಹಿಂಗಡೆಯಲ್ಲಿ ' ಇಮ್ಮಡಿಯ ' ೨೪ ಮತ್ತು ೨೫–ಈ ಇವುಗಳ ಮುಂಚೆ 'ಅಭಿನವ' ಎಂಬ ವಿಶೇಷಣಗಳಿವೆ.

ಸಂ,	ಹೆಸರು	ಸಂನ್ಯಾಸಗ್ರಹಣ	ಬಹ್ಮೀಭಾವ	ಒಟ್ಟುವರ್ಷ
೩೩.	ಸಚ್ಚಿದಾನಂದಶಿವಾಭಿನವನೃಸಿಂಹ ಭಾರತೀ	೧೮೭೮	೧೯೧೨	೩೪
೩೪.	ಚಂದ್ರಶೇಖರಭಾರತೀ (೩)[1]	೧೯೧೨	೧೯೫೪	೪೨
೩೫.	ಅಭಿನವವಿದ್ಯಾತೀರ್ಥಭಾರತೀ	೧೯೫೪		

---

(೧) ಶೃಂಗೇರೀಗುರುಪರಂಪರೆ

(ಶ್ರೀ॥ ಕೆ. ಆರ್. ವೆಂಕಟರಾಮನ್‌ರವರು ಬರೆದಿರುವದು)

ಸಂ,	ಹೆಸರು	ಸಂನ್ಯಾಸ	ಸಮಾಧಿ	ಪೀಠಾಧಿಪತ್ಯ
೧.	ಶ್ರೀಶಂಕರಾಚಾರ್ಯರು	೭೦೮	೮೪೦	
೨.	ಸುರೇಶ್ವರಾಚಾರ್ಯರು	೮೧೩	೮೩೩	
೩.	ನಿತ್ಯಬೋಧಘನ	೮೧೮	೮೪೮	
೪.	ಜ್ಞಾನಘನ	೮೪೬	೯೧೦	
೫.	ಜ್ಞಾನೋತ್ತಮ	೯೦೫	೯೫೩	
೬.	ಜ್ಞಾನಗಿರಿ	೯೪೯	೧೦೩೮	
೭.	ಸಿಂಹಗಿರಿ	೧೦೩೬	೧೦೯೮	
೮.	ಈಶ್ವರತೀರ್ಥ	೧೦೯೭	೧೧೪೬	
೯.	ನರಸಿಂಹತೀರ್ಥ[2]	೧೧೪೫	೧೨೨೮	
೧೦.	ವಿದ್ಯಾಶಂಕರತೀರ್ಥ[3]	೧೨೨೮	೧೩೩೩	
೧೧.	ಭಾರತೀಕೃಷ್ಣತೀರ್ಥ	೧೩೨೮	೧೩೮೦	
೧೨.	ವಿದ್ಯಾರಣ್ಯ[4]	೧೩೩೧	೧೩೮೬	

1. ಪೀಠದಲ್ಲಿ ಚಂದ್ರಶೇಖರಭಾರತೀಸ್ವಾಮಿಗಳಿದ್ದಾಗ ಬರೆದ ಪಟ್ಟಿಯಿದು. ಬಲದೇವ ಉಪಾಧ್ಯಾಯರು ಕೊಟ್ಟಿರುವ ಪಟ್ಟಿಯಲ್ಲಿ ಶಾಲಿಪಾಹನಶಕೆಗಳನ್ನು ಕೊಟ್ಟಿದೆ ಅವರು ತಮ್ಮ ಪಟ್ಟಿಗೆ ಆದಾರವನ್ನು ಕೊಟ್ಟಿಲ್ಲ. ಇಲ್ಲಿರುವ ಪಟ್ಟಿಯಲ್ಲಿ ಮೊದಲಿನ ಕೆಲವನ್ನು ಬಿಟ್ಟರೆ ಮಿಕ್ಕವು ಸ್ವಲ್ಪ ಹೆಚ್ಚುಕದಿವೆ ಕಾಲಗಳು ಹೊಂದುತ್ತವೆ. ಮುಂದೆ ಕೆ. ಆರ್, ವೆಂಕಟರಾಮನ್‌ರವರು ಕೊಟ್ಟಿರುವ ಗುರುಪಠಂಪರೆಯ ಪಟ್ಟಿಯನ್ನು ಬರೆದಿವೆ. ಆದೇ ಸಮಗೆ ಸಿಕ್ಕಿರುವ ಇತ್ತೀಚಿನ ಪಟ್ಟಿ.

2. ಇದುವರೆಗೆ ಶ್ರೀ॥ ವೆಂಕಟರಾಮನ್‌ರವರು ಚರಿತ್ರೆಯಲ್ಲಿ ಕಾಲವನ್ನು ಕೊಟ್ಟಿಲ್ಲ ಆದ್ದರಿಂದ ಇಷ್ಟೂ ಇತಿಹಾಸದೃಷ್ಟಿಯಿಂದ ಮಾಡಿದ ಕಲ್ಪನೆಯೆಂದಾಯಿತು.

3. ವಿದ್ಯಾತೀರ್ಥರೆಂದೂ ಇವರಿಗೆ ಹೆಸರು.

4. ಇವರ ವಿಷಯಕ್ಕೆ ಚರಿತ್ರೆಯನ್ನು (ಪು. ೩೪೯ನ್ನು) ನೋಡಿ. ಈ ಪಟ್ಟಿಯು ಕೆಳಗೂ ವಿಚಾರವನ್ನು ಬರೆದಿದೆ.

ಸಂ,	ಹೆಸರು	ಸಂನ್ಯಾಸ	ಸಮಾಧಿ	ಪೀಠಾಧಿಪತ್ಯ
೧೩.	ಚಂದ್ರಶೇಖರಭಾರತೀ (೧)	೧೩೬೮	೧೩೮೯	೧೩೮೬
೧೪.	ನರಸಿಂಹಭಾರತೀ (೧)[1]	೧೩೮೭	೧೪೦೮	೧೩೮೯
೧೫.	ಪುರುಷೋತ್ತಮಭಾರತೀ (೧)	೧೪೦೬	೧೪೪೮	೧೪೦೮
೧೬.	ಶಂಕರಾನಂದಭಾರತೀ	೧೪೩೮	೧೪೫೫	೧೪೪೮
೧೭.	ಚಂದ್ರಶೇಖರಭಾರತೀ (೨)	೧೪೪೯	೧೪೬೪	೧೪೫೫
೧೮.	ನರಸಿಂಹಭಾರತೀ (೨)	೧೪೬೪	೧೪೭೯	೧೪೬೪
೧೯.	ಪುರುಷೋತ್ತಮಭಾರತೀ (೨)	೧೪೭೯	೧೫೧೭	೧೪೭೯
೨೦.	ರಾಮಚಂದ್ರಭಾರತೀ	೧೫೧೦	೧೫೬೦	೧೫೧೭
೨೧.	ನರ(ನೃ)ಸಿಂಹಭಾರತೀ (೩)	೧೫೫೭	೧೫೭೩	೧೫೬೦
೨೨.	ನರ(ನೃ)ಸಿಂಹಭಾರತೀ (೪)	೧೫೬೩	೧೫೭೬	೧೫೭೩
೨೩.	ನರ(ನೃ)ಸಿಂಹಭಾರತೀ (೫)	೧೫೭೬	೧೫೯೯	೧೫೭೬
೨೪.	ಅಭಿನವನರ(ನೃ)ಸಿಂಹಭಾರತೀ (೧)	೧೫೯೯	೧೬೨೨	
೨೫.	ಸಚ್ಚಿದಾನಂದಭಾರತೀ (೧)	೧೬೨೨	೧೬೬೩	
೨೬.	ನರ(ನೃ)ಸಿಂಹಭಾರತೀ (೬)	೧೬೬೩	೧೭೦೫	
೨೭.	ಸಚ್ಚಿದಾನಂದಭಾರತೀ (೨)	೧೭೦೫	೧೭೪೧	
೨೮.	ಅಭಿನವಸಚ್ಚಿದಾನಂದಭಾರತೀ (೧)	೧೭೪೧	೧೭೭೭	
೨೯.	ನರ(ನೃ)ಸಿಂಹಭಾರತೀ (೭)	೧೭೭೦	೧೭೭೦	೧೭೭೭
೩೦.	ಸಚ್ಚಿದಾನಂದಭಾರತೀ (೩)	೧೭೭೦	೧೮೧೪	
೩೧.	ಅಭಿನವಸಚ್ಚಿದಾನಂದಭಾರತೀ (೨)	೧೮೧೪	೧೮೫೭	
೩೨.	ನರ(ನೃ)ಸಿಂಹಭಾರತೀ (೮)	೧೮೫೭	೧೮೮೯	
೩೩.	ಸಚ್ಚಿದಾನಂದಶಿವಾಭಿನವ ನರ(ನೃ)ಸಿಂಹಭಾರತೀ	೧೮೬೬	೧೯೧೨	೧೮೮೯
೩೪.	ಚಂದ್ರಶೇಖರಭಾರತೀ	೧೯೧೨	೧೯೫೪	
೩೫.	ಅಭಿನವವಿದ್ಯಾತೀರ್ಥ	೧೯೫೧	ಈಗ ಪೀಠದಲ್ಲಿದ್ದಾರೆ.	

---

(೧) ಮೇಲೆ ಕೊಟ್ಟಿರುವ ಮೂರನೆಯ ಸಂಖ್ಯೆಯು ಆಯಾ ಸ್ವಾಮಿಗಳು ಎಷ್ಟನೆಯ ವರ್ಷದಿಂದ ಪೀಠಾಧಿಪತ್ಯಕ್ಕೆ ಬಂದರೆಂಬುದನ್ನು ತಿಳಿಸುತ್ತದೆ.

1, 'ನೃಸಿಂಹಭಾರತೀ' ಎಂಬ ಚರಿತ್ರೆಯಲ್ಲಿ ಕೆ. ಅಂ. ವೆಂಕಟರಾಮನ್ನರು ಬರೆದಿದಾರೆ : ಮುಂದೆಯೂ ಹೀಗೆಯೇ.

ಇದರಿಂದ ಕೆಲವರು ಸ್ವಾಮಿಗಳು ತಮ್ಮ ಜೀವಿತಕಾಲದಲ್ಲಿಯೇ ಮತ್ತೊಬ್ಬರಿಗೆ ಆಶ್ರಮವನ್ನು ಕೊಡಿಸಿ ಇಟ್ಟುಕೊಳ್ಳುತ್ತಿದ್ದರೆಂದು ಗೊತ್ತಾಗುವದು.

(೨) ವಿದ್ಯಾತೀರ್ಥರು ಸಾಯಣಾಚಾರ್ಯರ, ಮಾಧವ ಅಥವಾ ವಿದ್ಯಾರಣ್ಯರ, ವೇದಾಂತದೇಶಿಕರ (!) ಮತ್ತು ಭಾರತೀಕೃಷ್ಣರ ಗುರುಗಳೆಂದೂ ಮಾಧ್ವರ ಮತ್ತು ಪೋರ್ಚುಗೀಸರ ಇಂಡಿಯದಲ್ಲಿ ರೋಮನ್ ಕಾಥೋಲಿಕರ ಹಾವಳಿಯ ಪ್ರಾಬಲ್ಯದ ಕಾರಣದಿಂದ ವದ್ಯಾತೀರ್ಥರು ಎಂಟು ಮಠಗಳನ್ನು ಸ್ಥಾಪಿಸಿ ತಮ್ಮ ಎಂಟು ಜನ ಶಿಷ್ಯರನ್ನು ಪೀಠಾಧಿಪತಿಗಳನ್ನಾಗಿ ಸ್ಥಾಪಿಸಿದರೆಂದೂ, ವಿದ್ಯಾರಣ್ಯರನ್ನು ವಿರೂಪಾಕ್ಷಮಠಕ್ಕೆ ಅಧಿಪತಿಗಳನ್ನಾಗಿ ಮಾಡಿದರೆಂದೂ, ಎನ್. ವೆಂಕಟರಾಮನ್‌ರವರು ಬರೆದಿರುತ್ತಾರೆ (NVSK p. p. 93–95). ಈ ವಿಷಯದಲ್ಲಿ ಕೆ.ಆರ್. ವೆಂಕಟರಾಮನ್‌ರವರು ನಮಗೆ ಬರೆದಿರುವದೇನೆಂದರೆ: 'ವಾಸ್ಕೋ ಡ ಗಾಮನು ಕ್ಯಾಲಿಕಟ್ ಎಂಬ ರೇವಿನಲ್ಲಿ ಇಳಿದದ್ದು ಕ್ರಿ ಶ. 1499 ಎಂದು ಹಿಂದೂದೇಶದ ಇತಿಹಾಸದಿಂದ ಗೊತ್ತಾಗುತ್ತದೆ. ಇದು ವಿದ್ಯಾತೀರ್ಥರು ಸಮಾಧಿಯಾದ ೧೫೦ ವರ್ಷಗಳಮೇಲೆ. ಈ ದೇಶದಲ್ಲಿ ಪೋರ್ಚುಗೀಸರು ಮೊಟ್ಟಮೊದಲು ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ್ದು-ಆಲ್ಮೇಡಾ (Almeida) ಎಂಬಾತನ ಮೂಲಕ 1509ರಲ್ಲಿ. ಎನ್. ವೆಂಕಟರಾಮನ್ನರು ಏಕೆ ಹೀಗೆಂದು ಬರೆದರೊ ಆಶ್ಚರ್ಯವಾಗಿದೆ. ಶ್ರೀಮಧ್ವಾಚಾರ್ಯರು ವಿದ್ಯಾತೀರ್ಥರ ಸಮಕಾಲಿಕರು, ವಿದ್ಯಾತೀರ್ಥರ ಸಮಾಧಿಯಾದ ಮೇಲೆಯೇ ಅವರ ಮತವು ಹರಡಿಕೊಂಡದ್ದು.'

(೩) ಶೃಂಗೇರೀಮಠವು ಬಹುಕಾಲ ಪೀಠಾಧಿಪತ್ಯವಿಲ್ಲದೆ ಇತ್ತೆಂಬುದೂ ಆಮೇಲೆ ಮತ್ತೆ ಉಜ್ಜೀವಿತವಾಯಿತೆಂಬುದೂ ಸುರೇಶ್ವರಾಚಾರ್ಯರಿಗೆ ೮೦೦ ವರ್ಷಗಳ ಕಾಲವನ್ನು ಕೊಟ್ಟರುವದರಿಂದಲೇ ಗೊತ್ತಾಗುತ್ತದೆ ಎಂದು ಎನ್. ವೆಂಕಟರಾಮನ್‌ರವರ ಹೇಳಿಕೆ. (NVSK p. 95; ಚರಿತ್ರೆ ಪು.೩೪೩)ವಿದ್ಯಾತೀರ್ಥರು ಸ್ಥಾಪಿಸಿದ ಎಂಟು ಮಠಗಳೂ ಶೃಂಗೇರಿಯಂತೆ ವಿದ್ಯಾರಣ್ಯ ಅಥವಾ 'ವಿದ್ಯಾಶಂಕರ' –ಎಂದು ತಮ್ಮ ಶ್ರೀಮುಖದಲ್ಲಿ ಅಥವಾ ಮಠಪದ್ಧತಿಯಲ್ಲಿ ಬರೆದು ಕೊಂಡಿವೆ ಎನ್ನುತ್ತಾರೆ. 'ವಿದ್ಯಾಶಂಕರ' ಎಂಬ ಹೆಸರಿನ ಮುದ್ರೆಯು ವಿದ್ಯಾತೀರ್ಥರಿಗೇ ಸಂಬಂಧಪಟ್ಟದ್ದು ಎಂಬ ಕೆ. ಆರ್. ವೆಂಕಟರಾಮನ್‌ರವರ ಮತವನ್ನು ಚರಿತ್ರೆಯಲ್ಲಿ (ಪು. ೩೪೫) ಕೊಟ್ಟಿರುತ್ತೇವೆ. ವಿದ್ಯಾಶಂಕರರು ವಿಘ್ನೇಶ್ವರ ವಿಗ್ರಹರೂಪದಿಂದ ಇದ್ದುಕೊಂಡು ಈಗಲೂ ಶೃಂಗೇರಿಯ ಮಠದ ಮೇಲು ವಿಚಾರಣೆಯ ಕರ್ತರಾಗಿರುವರೆಂಬ ಸಾಂಪ್ರದಾಯಿಕಕಥೆಯನ್ನು ಕೆ. ಆರ್ ವೆಂಕಟರಾಮನ್‌ರವರು ಇಂಗ್ಲಿಷಿನಲ್ಲಿ ಬರೆದ ಚರಿತ್ರೆಯಲ್ಲಿ(KRTTV p 45) ಬರೆದಿದೆ. ವೆಂಕಟರಾಮನ್‌ರವರು ಸುರೇಶ್ವರರಿಗೆ ೮೦೦ ವರ್ಷವೇಕೆಂಬ ಬಗ್ಗೆ ಪುಸ್ತಕದಲ್ಲಿ ಏನೂ ಹೇಳಿಲ್ಲವಾದರೂ ನಮಗೆ ಬರೆದಿರುವ ಒಂದು ಟೈಪಾದ ಇಂಗ್ಲಿಷು ಪತ್ರದಲ್ಲಿ ಹೀಗೆಂದಿರುತ್ತಾರೆ :

ಕಾಲಮಾನದ ವಿಷಯಕ್ಕೆ ಆಗಿರುವ ಭ್ರಾಂತಿಗೆ ಕಾರಣವೇನೆಂದರೆ :

(1) (ಅ) ಶಂಕರಾಚಾರ್ಯರು ಕ್ರಿಸ್ತನಿಗಿಂತ ಹಿಂದಿನ ಶತಮಾನಗಳಲ್ಲಿ ಜೀವಿಸಿದ್ದರೆಂಬ ದಂತಕಥೆಗೆ ಅಂಟಿಕೊಂಡಿರುವ ಸಂಪ್ರದಾಯ. ಈ ಕಷ್ಟದಿಂದ ಪಾರಾಗುವದಕ್ಕೆ ಶೃಂಗೇರೀಸಂಪ್ರದಾಯದ ವಿಷಯಕ್ಕೆ ಬರೆದವರು ಸುರೇಶ್ವರಾಚಾರ್ಯರಿಗೆ ೬೦೦ ವರ್ಷಗಳನ್ನು ಕೊಟ್ಟು, ಅವರ ಸಮಾಧಿಯುಕಾಲವನ್ನು ೮ನೆಯ ಶತಮಾನಕ್ಕೆ ಇಳಿಸಿರುತ್ತಾರೆ. ಕಾಂಚೀ ಸಂಪ್ರದಾಯದವರು ಕ್ರಿ. ಪೂ. 509ರಿಂದ ಕ್ರಿ. ಶ. 788ರವರೆಗೆ ಹಲವುಜನ ಪೀಠಾಧಿಪತಿಗಳನ್ನು ಕಲ್ಪಿಸಿ ಶಂಕರರಿಗೆ ಸಂಬಂಧಪಟ್ಟ ಘಟನೆಗಳನ್ನು ಮೂವರು ಬೇರೆ ಬೇರೆ ಶಂಕರರಿಗೆ ಹಂಚಿಕೊಟ್ಟಿರುತ್ತಾರೆ.'' (ಚರಿತ್ರೆಯ ಪು. ೩೫೧) ನೋಡಿ

(ಆ) ''ಗುರುಗಳ ಜೀವಿತಕಾಲದಲ್ಲಿಯೇ ಒಬ್ಬರು ಸಂನ್ಯಾಸಾಶ್ರಮವನ್ನು ಸ್ವೀಕರಿಸಬಹುದು, ಗುರುಗಳು 'ಜಗದ್ಗುರು'ಗಳಾಗಿಯೂ ಅವರ ಮುಂದಕ್ಕೆ ಪಟ್ಟಕ್ಕೆ ಬರಲಿರುವವರು ಚಿಕ್ಕಸ್ವಾಮಿಗಳಾಗಿಯೂ ಇರಬಹುದು– ಎಂಬ ಸಂಪ್ರದಾಯವನ್ನರಿಯದೆ ಇರುವದರಿಂದ ಗುರುಸ್ವಾಮಿಗಳ ಮತ್ತು ಶಿಷ್ಯಸ್ವಾಮಿಗಳ ಕಾಲದಲ್ಲಿ ಏತಕ್ಕೆ ಹೆಚ್ಚುಕಡಿಮೆಯಿದೆ ಎಂಬುದು ಐತಿಹಾಸಿಕರಿಗೂ ತಿಳಿಯದೆಹೋಗಿದೆ.'' (ಕೆ. ಆರ್. ವೆಂಕಟರಾಮನ್ನರ ಪಟ್ಟಿಯಲ್ಲಿ ಬೇರೆ ಬೇರೆಯ ಪೀಠಾಧಿಪರು ಪಟ್ಟಕ್ಕೆ ಬಂದ ಕಾಲವನ್ನು ತಿಳಿಸಿದೆ).

(ಇ) ಒಂದೂವರೆ ಶತಮಾನಗಳಷ್ಟು ಕಾಲದಲ್ಲಿ 'ನರಸಿಂಹಭಾರತೀ' ಎಂಬ ಹೆಸರಿನ ಐದುಜನ ಸ್ವಾಮಿಗಳು ಆಗಿಹೋಗಿರುತ್ತಾರೆ. ಇದೂ ಕೆಲವರು ತತ್ತ್ವಾನ್ವೇಷಕರಿಗೆ ಭ್ರಾಂತಿಯನ್ನುಂಟುಮಾಡಿದೆ.''

(ಈ) 'ಸೂರ್ಯನಾರಾಯಣರಾಯರು' ಶಂಕರರ ಜನ್ಮಕಾಲವನ್ನು ಒಂದು ಕಥೆಯ ಆಧಾರದಿಂದ ಕ್ರಿ. ಪೂ. 44 ಎಂದು ಇಟ್ಟುಕೊಂಡಿರುತ್ತಾರೆ.

ಶಂಕರರ ಜನ್ಮಕಾಲವು ಕ್ರಿ. ಶ. 788 ಎಂದಿಟ್ಟುಕೊಂಡಿರುವದರಿಂದ ಪೀಠಾಧಿಪತಿಗಳ ಕಾಲವು ಹೀಗಿರಬೇಕಾಗುತ್ತದೆ .

ಶಂಕರರ (ಜನ್ಮಕಾಲ 788)	ವಿದೇಹಮುಕ್ತಿ 820
ಸುರೇಶ್ವರರು ಪೀಠಕ್ಕೆ ಬಂದದ್ದು 813	(ವಿಜಯ ಚೈತ್ರ ಶುಕ್ಲ ೧೫)
ಮುಕ್ತಿ	833 (ಪ್ರಮಾಥಿ ಮಾಘ ಶುಕ್ಲ ೧೨)
ನಿತ್ಯಬೋಧಘನರು ಪೀಠಕ್ಕೆ ಬಂದದ್ದು 818	(ವಿಲಂಬಿ ಆಶ್ವೀಜ ಶುಕ್ಲ ೧೨)

(2) ರೈಸ್‌ರವರು ಕೊಟ್ಟಿರುವ ವರ್ಷಸಂಖ್ಯೆಗೆ ೬೦ ವರ್ಷ ಸೇರಿದರೆ ನಾನು ಕೊಟ್ಟಿರುವ ಕಾಲವಾಗುವದು. ಇಷ್ಟು ತಿದ್ದಿಕೊಂಡರೆ ರೈಸರು ಕೊಟ್ಟಿರುವ ಕಾಲವೆಲ್ಲ ಸರಿಯಾಗಿದೆ; ಆದರೆ ಪುಟ 306ರಲ್ಲಿ 1097ಕ್ಕೆ 1079 ಎಂದೂ 1145 (ಕ್ರೋಧನ ಮಾಘ ಶುಕ್ಲ ೧೧) ಎಂಬುದಕ್ಕೆ 1114 ಎಂದೂ ಆಚ್ಚಿನ ತಪ್ಪಾಗಿದೆ,

(೪) ವಿದ್ಯಾತೀರ್ಥರು (ಕ್ರಿ. ಶ. 1297–1385) ಕಾಂಚೀಪೀಠದ ೪೯ನೆಯ ಸ್ವಾಮಿಗಳೆಂದು ಕಾಂಚೀಸಂಪ್ರದಾಯದವರ ಹೇಳಿಕೆ (ಚರಿತ್ರೆ ಪು. ೩೫೨). ಈ ವಿಚಾರಕ್ಕೆ ಕೆ.ಆರ್. ವೆಂಕಟರಾಮನ್‌ರವರು ನಮಗೆ ಹೀಗೆಂದು ಬರೆದಿರುತ್ತಾರೆ :

"ವಿದ್ಯಾತೀರ್ಥರ ಹೆಸರಿನಲ್ಲಿ ಕ್ರಿ. ಶ. 1336ರಲ್ಲಿ ಒಂದು ಸ್ಮಾರಕವನ್ನು ಕಟ್ಟಿಸಿದೆ. ಶೃಂಗೇರಿಯಲ್ಲಿಯೂ ಕರ್ನಾಟಕದೇಶದಲ್ಲಿರುವ ಎಷ್ಟೋ ಬೇರೆಬೇರೆಯ ಸ್ಥಲಗಳಲ್ಲಿಯೂ ಅವರನ್ನು ಶೃಂಗೇರೀಪೀಠಾಧಿಪರೆಂದು ಉಲ್ಲೇಖಿಸುವ ಶಾಸನೆಗಳು ಸಿಕ್ಕುತ್ತವೆ; ಆದರೆ ಅವರ ಸಂಬಂಧದ ಒಂದು ಶಾಸನವಾದರೂ ಕಾಂಚಿ

ಯಲ್ಲಾಗಲಿ ಅದರ ಹತ್ತಿರವಿರುವ ಮುತ್ತೆ ಯಾವ ಸ್ಥಲದಲ್ಲಾಗಲಿ ಕಾಣಬರುತ್ತಿಲ್ಲ. ಆದ್ದರಿಂದ ವಿದ್ಯಾತೀರ್ಥರು ಕಾಂಚೀಪೀಠಾಧಿಪತಿಗಳಾಗಿದ್ದರೆಂದು ನಂಬುವದು ಕಷ್ಟ.

(೫) ವಿದ್ಯಾರಣ್ಯರು ಶೃಂಗೇರಿಯ ಪೀಠಾಧಿಪರಾಗಿದ್ದರೆ? ಈ ವಿಷಯದಲ್ಲಿ ಕೆ. ಆರ್. ವೆಂಕಟರಾಮನ್‌ರವರು ನಮಗೆ ಬರೆದಿರುವದೇನೆಂದರೆ :-

"ಎನ್. ವೆಂಕಟರಾಮನ್‌ರವರು ಶೃಂಗೇರಿಯ ಗುರುಪರಂಪರೆಯಲ್ಲಿ ವಿದ್ಯಾರಣ್ಯರನ್ನು ಸೇರಿಸುವದಕ್ಕೆ ಆಕ್ಷೇಪಣೆಯನ್ನು ತೆಗೆದಿರುತ್ತಾರೆ. ಭಾರತ ದೇಶದ ಅಥವಾ ಪರಕೀಯದೇಶದ ಒಬ್ಬನೇ ಒಬ್ಬ ಪ್ರಸಿದ್ಧ ಐತಿಹಾಸಿಕನೂ ಶೃಂಗೇರಿಗೆ ವಿದ್ಯಾರಣ್ಯರು ಪೀಠಾಧಿಪರಾಗಿದ್ದರೆಂದೂ ವಿಜಯನಗರದ ಸಂಸ್ಥಾಪಕರೆಂದೂ ಹೇಳದವನಿರುವದಿಲ್ಲ. ವೆಂಕಟರಾಮನ್‌ರವರ ಆಕ್ಷೇಪಣೆಗೆ ಉತ್ತರವನ್ನು ನಾನು ಬರೆದಿರುವ 'ಅತೀಂದ್ರಿಯ ಜ್ಞಾನಸಿಂಹಾಸನ' (The Thrcne of Transcendental Wisdom) ಎಂಬ ಪುಸ್ತಕದಲ್ಲಿ ಕಾಣಬಹುದು.

"ಇಲ್ಲಿ ಇಷ್ಟು ಹೇಳಿದರೆ ಸಾಕು. ಹರಿಹರ (೨) ರಾಯನು ಕ್ರಿ.ಶ. 1380 ರಲ್ಲಿ ವಿದ್ಯಾರಣ್ಯರಿಗೆ ಶೃಂಗೇರೀಮಠಕ್ಕೆ ಮಾನ್ಯವಾಗಿ ತಾನು ಹಿಂದೆ ಕೊಟ್ಟಿದ್ದ ಹಿಂದಿನ ಮಾನ್ಯಗಳಿಗೆ ಇನ್ನೂ ಕೆಲವು ಗ್ರಾಮಗಳನ್ನು ಸೇರಿಸಿಕೊಟ್ಟರುತ್ತಾನೆ; ಮತ್ತು 1367ರಲ್ಲಿ ಅಷ್ಟುಹೊತ್ತಿಗಾಗಲೆ ವಿದೇಹಮುಕ್ತರಾಗಿದ್ದ ವಿದ್ಯಾರಣ್ಯರ ಸ್ಮಾರಕವಾಗಿ ಮತ್ತೊಂದು ಮಾನ್ಯವನ್ನೂ ಶೃಂಗೇರಿಮಠಕ್ಕೆ ಕೊಟ್ಟರುತ್ತಾನೆ. ಹರಿಹರ(೨)ನು ಶೃಂಗೇರಿಯಲ್ಲಿ ಒಂದು ಅಗ್ರಹಾರವನ್ನು ಸ್ಥಾಪಿಸಿ ಅದಕ್ಕೆ ವಿದ್ಯಾರಣ್ಯರ ಹೆಸರಿನಲ್ಲಿ 'ವಿದ್ಯಾರಣ್ಯಪುರ' ಎಂಬ ಹೆಸರನ್ನು ಕೊಟ್ಟರುತ್ತಾನೆ. ಭಾರತೀತೀರ್ಥರು ಮತ್ತು ವಿದ್ಯಾರಣ್ಯರು ಇವರ ಸ್ಮಾರಕವಾಗಿ ಭಾರತೀ ರಾಮನಾಥ, ಮತ್ತು ವಿದ್ಯಾವಿಶ್ವೇಶ್ವರ- ಈ ದೇವಾಲಯಗಳು ನಿರ್ಮಾಣವಾದವು.

"ಇನ್ನೊಂದು ಮಾತು. ಶ್ರೀ ವಿದ್ಯಾತೀರ್ಥರು ಭಾರತೀತೀರ್ಥರಿಗೆ 1328 ರಲ್ಲಿಯೂ ವಿದ್ಯಾರಣ್ಯರಿಗೆ 1331ರಲ್ಲಿಯೂ ಸಂನ್ಯಾಸವನ್ನು ಕೊಟ್ಟರು. ಭಾರತೀತೀರ್ಥರು 1333ರಿಂದ 1380ರವರೆಗೆ ಪೀಠಾಧಿಪರಾಗಿದ್ದರು. ಆ ಕಾಲಕ್ಕೆ ವಿದ್ಯಾರಣ್ಯರು ಚಿಕ್ಕಸ್ವಾಮಿಗಳಾಗಿದ್ದುಕೊಂಡು ತೀರ್ಥಯಾತ್ರೆಹೋಗುವದು, ಅಥವಾ ಹಂಪೆಯಲ್ಲಿದ್ದಾಗ ಧ್ಯಾನಮಾಡುತ್ತಿರುವದು- ಹೀಗೆ ಕಾಲಕ್ಷೇಪಮಾಡುತ್ತಿದ್ದರು. ಅವರು 1380ರಿಂದ 1386ರವರೆಗೆ ಪೀಠಾಧಿಷ್ಠಿತರಾಗಿದ್ದರು."[1]

---

1. ಭಾರತೀಕೃಷ್ಣರಿಗೂ (1328–1380) ವಿದ್ಯಾರಣ್ಯರಿಗೂ (1331–1386) ಶೃಂಗೇರಿಯವರು ಇಸವಿ ಹಾಕಿರುತ್ತಾರಾದ್ದರಿಂದ ವಿದ್ಯಾರಣ್ಯರು ಪೀಠಾಧಿಪರೆಂದು ಹಿಡಿದಿರುವದು ತಪ್ಪು ಎಂತ ಎನ್. ವೆಂಕಟರಾಮನ್‌ರವರು (NVSK p. 95) ಬರೆದಿರುವದಕ್ಕೆ ಇದು ಸಮಾಧಾನವೆಂತ ಕಾಣುತ್ತದೆ.

(೨) ಕಾಂಚೀಮಠದ ಗುರುಪರಂಪರೆ

		ಪೀಠಾಧಿಪತ್ಯ	ಸಿದ್ಧಿಕಾಲ
	ಶ್ರೀಶಂಕರಾಚಾರ್ಯ	೩೨ ಜನ್ಮ	ಕ್ರಿ.ಪೂ.508 ಸಿದ್ಧಿ ಕ್ರಿ.ಪೂ.476
	ಸುರೇಶ್ವರಾಚಾರ್ಯ	೭೦(?)[1]	೪೦೬
೧.	ಸರ್ವಜ್ಞಾತ್ಮ	೧೧೨	೫೬೪
೨.	ಸತ್ಯಬೋಧ	೯೬	೨೬೮
೩.	ಜ್ಞಾನಾನಂದ	೬೩	೨೦೫
೪.	ಶುದ್ಧಾನಂದ	೪೧	೧೨೪
೫.	ಆನಂದಜ್ಞಾನ	೬೯	೫೫
೬.	ಕೈವಲ್ಯಾನಂದ	೪೩	ಕ್ರಿ.ಶ. ೨೪
೭.	ಕೃಪಾಶಂಕರ (೨)	೪೧	೬೯
೮.	ಸುರೇಶ್ವರ	೪೪	೧೨೭
೯.	ಚಿದ್ಘನ	೪೫	೧೭೨
೧೦.	ಚಂದ್ರಶೇಖರ (೧)	೬೩	೨೩೫
೧೧.	ಸಚ್ಚಿದ್ಘನ	೩೭	೨೭೨
೧೨.	ವಿದ್ಯಾಘನ (೧)	೪೫	೩೧೭
೧೩.	ಗಂಗಾಧರ (೧)	೧೨	೩೨೯
೧೪.	ಉಜ್ಜ್ವಲಶಂಕರ (೩)	೩೪	೩೬೭
೧೫.	ಸದಾಶಿವ	೮	೩೭೫
೧೬.	ಸುರೇಂದ್ರ	೧೦	೩೮೫
೧೭.	ವಿದ್ಯಾಘನ (೨)	೧೩	೩೯೮
೧೮.	ಮೂಕಶಂಕರ (೪)	೩೯	೪೩೭
೧೯.	ಚಂದ್ರಚೂಡ (೧)	೧೦	೪೪೭
೨೦.	ಪರಿಪೂರ್ಣಬೋಧ	೩೪	೪೪೧
೨೧.	ಸಚ್ಚಿತ್ಸುಖ	೩೧	೫೧೨
೨೨.	ಚಿತ್ಸುಖ (೧)	೧೫	೫೩೭
೨೩.	ಸಚ್ಚಿದಾನಂದಘನ	೨೧	೫೪೮
೨೪.	ಪ್ರಜ್ಞಾಘನ	೧೬	೫೬೪

1. ಆತ್ಮಬೋಧರು ತಮ್ಮ ಸಾಷಮಾಗ್ರಂಥದಲ್ಲಿ ಸುರೇಶ್ವರರು ಅಪರಮುಹಂಸರಾದ್ದರಿಂದ (?) ಪೀಠದಲ್ಲಿ ಅವರನ್ನು ಗುರುಗಳು ಕೂರಿಸಲಿಲ್ಲ; ಪೀಠವ್ಯವಸ್ಥೆಯನ್ನು ನೋಡುವದಕ್ಕೆ ಅಪರನ್ನು ಇಟ್ಟಿದ್ದರು (ಗು.ರ.ಪು. ೪೧)ಎಂದು ಬರೆದಿರುತ್ತಾರೆ. ಸುರೇಶ್ವರರನ್ನು ಇಲ್ಲಿ ಲೆಕ್ಕಹಿಡಿಯದೆ ಬಿಟ್ಟಿರುವದಕ್ಕೆ ಇದೂ ಒಂದು ಕಾರಣವಿರಬಹುದು.

೨೫.	ಚಿದ್ವಿಲಾಸ	೧೩	೫೭೭
೨೬.	ಮಹಾದೇವ (೧)	೨೪	೬೦೧
೨೭.	ಪೂರ್ಣಬೋಧ	೧೭	೬೧೪
೨೮.	ಬೋಧ (೧)	೩೭	೬೫೫
೨೯.	ಬ್ರಹ್ಮಾನಂದಘನ	೧೩	೬೬೪
೩೦.	ಚಿದಾನಂದಘನ	೪	೬೭೨
೩೧.	ಸಚ್ಚಿದಾನಂದ (೨)	೨೦	೭೯೨
೩೨.	ಚಂದ್ರಶೇಖರ (೨)	೧೪	೭೧೦
೩೩.	ಚಿತ್ಸುಖ (೨)	೨೭	೭೩೭
೩೪.	ಚಿತ್ಸುಖಾನಂದ	೨೧	೭೫೪
೩೫.	ವಿದ್ಯಾಘನ (೩)	೩೦	೭೪೪
೩೬.	ಅಭಿನವಶಂಕರ (೪)	೫೨	೪೪೦
೩೭.	ಸಚ್ಚಿದ್ವಿಲಾಸ	೩೩	೪೭೩
೩೪.	ಮಹಾದೇವ (೨)	೪೨	೯೧೫
೩೯.	ಗಂಗಾಧರ (೨)	೩೫	೯೫೦
೪೦.	ಬ್ರಹ್ಮಾನಂದಘನ (೨)	೨೪	೯೭೪
೪೧.	ಅನಂದಘನ	೩೬	೧೦೧೪
೪೨.	ಪೂರ್ಣಬೋಧ (೨)	೨೬	೧೦೪೦
೪೩.	ಪರಶಿವ (೧)	೨೧	೧೦೬೧
೪೪.	ಬೋಧ (೨)	೩೭	೧೦೯೪
೪೫.	ಚಂದ್ರಶೇಖರ (೩)	೬೪	೧೧೬೬
೪೬.	ಆದ್ವೈತಾನಂದಬೋಧ	೩೪	೧೨೦೦
೪೭.	ಮಹಾದೇವ (೩)	೪೬	೧೨೪೭
೪೪.	ಚಂದ್ರಚೂಡ (೨)	೫೦	೧೨೯೭
೪೯.	ವಿದ್ಯಾತೀರ್ಥ	೪೪	೧೩೪೫
೫೦.	ಶಂಕರಾನಂದ	೩೨	೧೪೧೭
೫೧.	ಪೂರ್ಣಾನಂದಸದಾಶಿವ	೪೧	೧೪೯೪
೫೨.	ಮಹಾದೇವ (೪)	೯	೧೫೦೭
೫೩.	ಚಂದ್ರಚೂಡ (೩)	೧೭	೧೫೨೪

೫೪.	ಸರ್ವಜ್ಞಸದಾಶಿವಬೋಧ	೧೫	೧೫೩೯
೫೫.	ಪರಮಶಿವ (೨)	೪೭	೧೫೪೬
೫೬.	ಆತ್ಮಬೋಧ	೫೨	೧೬೩೪
೫೭.	ಬೋಧ (೩)	೫೪	೧೬೯೨
೫೪.	ಅದ್ವಯಾತ್ಮಪ್ರಕಾಶ	೧೨	೧೭೦೪
೫೯.	ಮಹಾದೇವ (೫)	೪೨	೧೭೪೬
೬೦.	ಚಂದ್ರಶೇಖರ (೪)	೩೭	೧೭೪೩
೬೧.	ಮಹಾದೇವ (೬)	೩೧	೧೪೧೪
೬೨	ಚಂದ್ರಶೇಖರ (೫)	೩೭	೧೪೫೧
೬೩.	ಮಹಾದೇವ (೭)	೪೦	೧೪೯೧
೬೯.	ಶ್ರೀಚಂದ್ರಶೇಖರ (೬)	೧೭	೧೯೦೪
೬೫.	ಮಹಾದೇವ (೪) ೭ ದಿನೆಗಳು		೧೯೦೪
೬೬.	ಚಂದ್ರಶೇಖರೇಂದ್ರಸರಸ್ವತೀ	ಈಗಿನ ಜಗದ್ಗುರುಗಳು	

ಈ ಮೇಲೆ ಕೊಟ್ಟಿರುವ ಪಟ್ಟಿಯು ಎನ್. ವೆಂಕಟರಾಮನ್‌ರವರ ಗ್ರಂಥದಿಂದ (NVSK) ತೆಗೆದುಕೊಂಡದ್ದು. ಅವರಿಗೆ 'ಪುಣ್ಯಶ್ಲೋಕಮಂಜರೀ ಮತ್ತು ಗುರುರತ್ನಮಾಲಿಕಾ' ಮತ್ತು ಅದರಮೇಲೆ ಆತ್ಮಬೋಧರು ಬರೆದಿರುವ ಸುಷಮಾ ಎಂಬ ವ್ಯಾಖ್ಯಾನ– ಇವೇ ಮುಖ್ಯಾಧಾರಗಳು. (ಚರಿತ್ರೆ ಪು. ೧೩) 'ಇವುಗಳ ಕಾಲವೂ ಗ್ರಂಥಕಾರರೂ ಗೊತ್ತಾಗಿರುವದರಿಂದಲೂ ಶಂಕರರ ಮತ್ತು ಅದೇ ಹೆಸರಿನ ಶಿಷ್ಯಪರಂಪರೆಗೆ ಸೇರಿದ ಯತಿಗಳನ್ನು ಬೆಳಿಯಿಸಿ ಹೇಳುವದಿಲ್ಲವಾದರಿಂದಲೂ ಶಂಕರವಿಜಯಗಳಿಗಿಂತ ಇವುಗಳಲ್ಲಿಯೇ ನನಗೆ ಹೆಚ್ಚಿನ ವಿಶ್ವಾಸ. ಶಂಕರರಿಗಿಂತ ಈಗಿನ ವೇದಾಂತಇತಿಹಾಸವನ್ನು ತಿಳಿಸುವದಲ್ಲದೆ ಅವುಗಳಲ್ಲಿರುವ ಬಹಳ ಸಂದರ್ಭಗಳಲ್ಲಿ ಸಂವಾದಮಾಡಿ ನೋಡಬಹುದಾದ ಕೆಲವು ಕಾಲಸಮರ್ಪಕ ಘಟನೆಗಳನ್ನ್ನ ಅವು ತಿಳಿಸುತ್ತವೆ (NVSK. P.5) ಎಂತ ಅವರು ಬರೆದುಕೊಂಡಿರುತ್ತಾರೆ. 'ಕಾಮಕೋಟಿಪೀಠದ ಗುರುವರಂಪರೆಯ ಕಾಲದ ಪಟ್ಟಿಯು ಭಾರತದ ವಿಚಾರದ ಇತಿಹಾಸದ ಎಷ್ಟೋ ವಿಷಯಗಳಿಗೆ ಸರಿಯಾದ ಕಾಲವನ್ನು ತಿಳಿಸುವದರಿಂದ ಬಹುಮುಖ್ಯವಾಗಿರುತ್ತದೆ' (NVSK. p. 8) ಎಂತಲೂ ಅವರ ನಂಬಿಕೆ.[1]

ಆದರೆ ಕೆ. ಆರ್. ವೆಂಕಟರಾಮನ್‌ರವರು ಈ ಪರಂಪರೆಯ ವಿಷಯದಲ್ಲಿ ಬರೆದಿರುವದು ಇದಕ್ಕೆ ವಿರುದ್ಧವಾಗಿರುತ್ತದೆ. ಶಂಕರರ ಕಾಲವು ಕ್ರಿ. ಶ. 8 ಶತಕವಾಗಿದೆ ಎಂದು ಅವರು ಬರೆದಿರುವ ಅಭಿಪ್ರಾಯವನ್ನು ಆಗಲೆ (ಪು.ನಟಿ–

1. ಎನ್, ವೆಂಕಟರಾಮುದ್‌ರವರೂ ಸರ್ವಜ್ಞಾತ್ಮರಿಂದ ಹಿಡಿದು ಸಚ್ಚಿದ್ಘನರವರೆಗಿನ ಕಾಲವು ಕಲ್ಪನಾಮಯವಾಗಿ (fanciful) ಕಾಣುತ್ತದೆ ಎಂದು ಒಪ್ಪಿರುತ್ತಾರೆ NVSK. p 9).

ಳಿಳಿ) ಕೊಟ್ಟಿರುತ್ತೇವೆ. ಕಾಮಕೋಟಿಪೀಠದ ಪರಂಪರೆಯ ಪರೀಕ್ಷೆಯನ್ನು ಅವರು ಹೀಗೆ ಸಂಗ್ರಹವಾಗಿ ಬರೆದು ನಮಗೆ ಕಳುಹಿಸಿಕೊಟ್ಟಿರುತ್ತಾರೆ :

೧. **ಸರ್ವಜ್ಞಾತ್ಮರು** (ಗುರು ಸಂ. ೧) ಇವರು ಸಂಕ್ಷೇಪಶಾರೀರಕದ ಕರ್ತರು ; ದೇವೇಶ್ವರರ ಶಿಷ್ಯರು. ದಕ್ಷಿಣ ತಿರುವಾಂಕೋರಿನ ಮನುಕುಲಾದಿತ್ಯ ನೆಂಬ ರಾಜನ ಪ್ರೋತ್ಸಾಹದಲ್ಲಿದ್ದವರು. ೧೧ನೆಯ ಶತಮಾನದವರಿವರು.

೨. **ಜ್ಞಾನಾನಂದ, ಜ್ಞಾನೋತ್ತಮ** (ಗು.ಸಂ. ೩ ; ಕ್ರಿ.ಪೂ 26 – 205, ಪು. ೩೫೧)[1] 'ಈತನು ಮಹೋಪಾಧ್ಯಾಯನೆಂಬ ಜ್ಞಾನೋತ್ತಮಮಿಶ್ರ. ಗೌಡಬ್ರಾಹ್ಮಣ ಗೃಹಸ್ಥನು. ಕ್ರಿ. ಶ. 12ನೆಯ ಶತಮಾನದಲ್ಲಿ ಚೋಳರಾಜರ ಪ್ರೋತ್ಸಾಹದಿಂದ ಕಾವೇರಿತೀರದಲ್ಲಿ ನೆಲಸಿದನು. ಈತನು ತನ್ನ ತಂದೆಯ ಗುರುಗಳಾದ– ಶ್ರೀಶೃಂಗೇರೀಪೀಠಾಧಿಪರಾದ 'ಜ್ಞಾನೋತ್ತಮರ' ಹೆಸರು ತನಗೆ ಬಂದಿತೆಂದು ತಾನೇ ಬರೆದುಕೊಂಡಿದಾನೆ.

೩. **ಆನಂದಜ್ಞಾನ** (ಗು.ಸಂ. ೫, ಕ್ರಿ. ಪೂ. 124–55, ಪು. ೩೫೧) 'ಆನಂದಗಿರಿ'ಯೆಂದೂ ಈ ಕವಿಗೆ ಮತ್ತೊಂದು ಹೆಸರು. ಅನುಭೂತಿಪ್ರಕಾಶ ಮತ್ತು ಶುದ್ಧಾನಂದರ ಶಿಷ್ಯರು; ಇವರು ನಿಜವಾಗಿ ಇದ್ದದ್ದು ಕ್ರಿ.ಶ.13 ಪೂರ್ವಾಶ್ರಮದ ಹೆಸರು ಜನಾರ್ದನ.

೪. **ಕೃಪಾಶಂಕರ** (ಗು.ಸಂ. ೭, ಕ್ರಿ. ಶ. 28–69) ಇವರು ಷಣ್ಮತ ಸ್ಥಾಪನಾಚಾರ್ಯರಂತೆ, ಆದ್ಯಶಂಕರರಲ್ಲವಂತೆ. ಸುಭಟವಿಶ್ವರೂಪರನ್ನು ಶೃಂಗೇರೀಪೀಠಕ್ಕೆ ನಿಯಮಿಸಿದರಂತೆ! 'ವಿಶ್ವರೂಪ'ರೆಂಬವರು ಒಬ್ಬರೇ ; ಅವರೇ ಸುರೇಶ್ವರಾಚಾರ್ಯರಾದರೆಂಬುದು ಎಲ್ಲರಿಗೂ ಗೊತ್ತು.

೫. **ಚಿದ್ಘನ** (ಗು.ಸಂ. ೯, ಕ್ರಿ.ಶ. 127–172). ಇವರಿಗೆ ಶಿವಾದ್ವೈತದಲ್ಲಿ ಅಭಿಮಾನವಿತ್ತಂತೆ. ಶಿವಾದ್ವೈತವು ಕಾಶ್ಮೀರದಲ್ಲಿ ಸ್ಥಾಪಿತವಾದದ್ದು ಎಂಟನೆಯ ಶತಮಾನದಿಂದೀಚೆಗೆ; ಅದು ಲಕುಲೀಶದ ಪಾಶುಪತಮತಕ್ಕೆ ಪ್ರತಿಕ್ರಿಯೆ.

೬. **ಉಜ್ಜ್ವಲಶಂಕರ** (ಗು.ಸಂ. ೧೪, ಕ್ರಿ. ಶ. 329 367) ಇವರ ಕಾಲದಿಂದ ಕಾಂಚಿಯ ಕೆಲವರು ಆಚಾರ್ಯರುಗಳು ಕಾಶ್ಮೀರದಲ್ಲಿ ಇರುತ್ತಿದ್ದರೆಂದು ಹೇಳಲಾಗಿದೆ ; ಹಾಗಾದರೆ ಕಾಂಚಿಯಲ್ಲಿ ಆಗ ಏನಾಗುತ್ತಿತ್ತು ?

೭. **ಶಂಕರ** (೪) (ಗು.ಸಂ. ೧೪; ಕ್ರಿ.ಶ. 398–437, ಪು. ೩೫೧).[2] ಮೂಕರೆಂದೂ ಅವರಿಗೆ ಅಡ್ಡಹೆಸರು. ಸಾಂಪ್ರದಾಯಿಕವಾಗಿ ತಿಳಿಯಬಂದಿರುವ

---

1. ಕಂಸದಲ್ಲಿ ಹಾಕಿರುವದು ಕಾಂಚೀಪರಂಪರೆಯ ಗುರುಸಂಖ್ಯೆ. ಕಾಲ ಮತ್ತು ಈಗ ನಾವು ಬರೆದಿರುವ ಚರಿತ್ರೆಯ ಪುಟ. ಮುಂದೆ ಬರೆದಿರುವದು ಕೆ. ಆರ್. ವೆಂಕಟರಾಮಣ್ಣರ ಅಭಿಪ್ರಾಯ.

2. ಸುರೇಶ್ವರರ ಕಾಲದ ವಿಷಯಕ್ಕೆ ಕಾಂಚೀಶೃಂಗೇರೀಸಂಪ್ರದಾಯದ ಕಾಲ ಮಾನಗಳಿದ್ದಡನ್ನೂ ನಂಬುವಂತಿಲ್ಲವೆಂಬ (NVSK p. 54) ಎನ್. ವೆಂಕಟರಾಮಣ್ಣರೂ ಒಪ್ಪಿದಾರೆ.

ದೇನೆಂದರೆ, ಮೂಕನೆಂಬಾತನು ಕಾಂಚಿಯಲ್ಲಿದ್ದ ಒಬ್ಬ ಪೂಜಾರಿ. ಉಪಾಸನೆಯು ಫಲವಾಗಿ ಕಾವ್ಯಪ್ರತಿಭೆಯು ಅವನಿಗೆ ಬಂದಿತ್ತು. ಅವನ ಕಾಲವು ಹೇಗೂ ಕ್ರಿ.ಶ. 16ನೆಯ ಶತಮಾನಕ್ಕಿಂತ ಹಿಂದಿಲ್ಲ. ಕುಂಭಕೋಣದ ಪರಂಪರೆಯು ಅವನನ್ನು ಕಾಶ್ಮೀರಕ್ಕೆ ವರ್ಗಾಯಿಸಿದೆ. ಮೆಂಟನೆಂಬ ಕವಿಯನ್ನೂ ಮತ್ತು 'ಹಯಗ್ರೀವವಧ' ಎಂಬ ಅವನ ನಾಟಕವನ್ನೂ ಪರಾಮರ್ಶಿಸಲಾಗಿದೆ. ಆ ಕವಿಯ ಕಾಲವು ಐದನೆಯ ಶತಮಾನಕ್ಕಿಂತ ಬಹಳ ಈಚೆಗೆ. 'ಹಯಗ್ರೀವವಧೆ' ಎಂಬ ನಾಟಕವೂ ಯಾರಿಗೂ ತಿಳಿಯದು. ಇದರಂತೆ 'ರಾಮಲೀಲನ' ಮಣಿಪ್ರಭಾ ಎಂಬುದೂ ಕಲ್ಪನೆಯೇ. ಅವನ ನಾಟಕದ ಶ್ಲೋಕಗಳೆಂದು ಉದಾಹರಿಸಿರುವದೆಲ್ಲ ಸೃಷ್ಟಿಯೇ.

೮. ಚಂದ್ರಶೇಖರ ಪೃಥಮು (ಗು.ಸಂ. ೧೯, ಕ್ರಿ.ಶ. 437–47) ಮಾತೃಗುಪ್ತನು ಕಾಶ್ಮೀರದ ಅರಮನೆಯಲ್ಲಿದ್ದ ಒಬ್ಬ ಮಾವಟಿಗ. ರಾಜಕೀಯ ಸಂಚಿನಿಂದ ಬಹಳ ಸ್ವಲ್ಪಕಾಲ ಅಲ್ಲಿಯ ರಾಜನಾಥನು.[1] ಕಾಶಿಯಲ್ಲಿ ಸಂನ್ಯಾಸಿಯಾಗಿ ದೇಹವನ್ನು ಬಿಟ್ಟನು. ಪೀಠಾಧಿಪತ್ಯಕ್ಕೆ ಎಂಥ ಸತ್ಪಾತ್ರನಿವನು! ಅವನಿದ್ದದ್ದು ಐದನೆಯ ಶತಮಾನ, ಏಳನೆಯ ಶತಮಾನವಲ್ಲ.

೯. ಸಚ್ಚಿದಾನಂದಘನ (ಗು. ಸಂ. ೨೩, ಕ್ರಿ. ಶ. 527–48) ಸಿದ್ಧ ವಿಜಯಕಾವ್ಯದಲ್ಲಿ ಈ ಗುರುಗಳ ಪರಾಮರ್ಶವಿದೆಯಂತೆ. ಅದು ಯಾರ ಕಣ್ಣಿಗೂ ಬಿದ್ದಿಲ್ಲದ ಮತ್ತೊಂದು ಗ್ರಂಥ.

೧೦. ಚಿದಾನಂದಘನ (ಗು.ಸಂ. ೩೦, ಕ್ರಿ.ಶ. 668–72)ಎಂಬ ಹೆಸರು ಮತ್ತೊಂದು ಮಿಥ್ಯಾಕಲ್ಪನೆ. ಕಾಶ್ಮೀರದ ಲಲಿತಾದಿತ್ಯಮುಕ್ತಾಪೀಡನು ದಕ್ಷಿಣಕ್ಕೆ ದಂಡಯಾತ್ರೆಬಂದು ಕರ್ಣಾಟಕದ ರಟ್ಟರಾಣಿಯ ಮಗನನ್ನು ಸಿಂಹಾಸನಚ್ಯುತನನ್ನಾಗಿ ಮಾಡಿದ್ದನಂತೆ. ಅವನಿಗೆ ಈ ಆಚಾರ್ಯರು ಪಟ್ಟವನ್ನು ಕಟ್ಟಿಸಿದರಂತೆ. ಲಲಿತಾದಿತ್ಯನ ದಂಡಯಾತ್ರೆಯು ಕಾನ್ಯಕುಬ್ಜದವರೆಗೆ ಮಾತ್ರ ವಿಸ್ತರಿಸಿತ್ತು. ಅಲ್ಲಿಂದ ದಕ್ಷಿಣಕ್ಕೆ ಬರಲೇಇಲ್ಲ. ಕಾನ್ಯಕುಬ್ಜಕ್ಕೂ ಕರ್ಣಾಟಕಕ್ಕೂ ಎಲ್ಲಿಂದೆಲ್ಲಿಗೆ! ಆಗ್ಗೆ ದಕ್ಕನ್‌ಪ್ರಾಂತವನ್ನು ಚಾಲುಕ್ಯರು ಆಳುತ್ತಿದ್ದರು, ಅವರನ್ನು ಉತ್ತರದೇಶದ ಯಾವ ರಾಜನೇ ಆಗಲಿ ಪದಚ್ಯುತರನ್ನಾಗಿ ಮಾಡಿದರೆಂಬುದಕ್ಕೆ ಯಾವ ಆಧಾರವೂ ಇಲ್ಲ, ಕಾಶ್ಮೀರದ ರಾಜನು ಹಾಗೆ ಮಾಡಿದನೆಂಬುದೆಲ್ಲಿಂದ ಬಂತು? ಇದಕ್ಕೆ ಬದಲಾಗಿ ಅವರು ಹರ್ಷನನ್ನು ನರ್ಮದೆಯಿಂದ ದಕ್ಷಿಣಕ್ಕೆ ಬಾರದಂತೆ ಅಡ್ಡಗಟ್ಟಿದ್ದರು. ರಟ್ಟ ಎಂಬುದು ರಾಷ್ಟ್ರಕೂಟದ ತದ್ಭವವಾದ್ದರಿಂದ ಅದು ಒಬ್ಬರ ಹೆಸರೇ ಆಗಿರಲಾರದು

1. ಮಾತೃಗುಪ್ತನೇ 'ಚಂದ್ರಶೇಖರ' ಎಂಬ ಹೆಸರಿನ ಕಾಂಚೀಪೀಠಾಧಿಪತಿ ಎಂದು ಎನ್. ವೆಂಕಟರಾಮನ್ನರ ಹೇಳಿಕೆ (NvSK p. 74).

೧೧. **ಶಂಕರ ಪಂಚಮ** (ಗು.ಸಂ. ೩೬, ಪು.೪೦, 788 840)ಇವರ ವಿಷಯವನ್ನು ಪರೀಕ್ಷೆಮಾಡುವದನ್ನು ಸ್ಥಲಸಂಕೋಚದಿಂದ ಸದ್ಯಕ್ಕೆ ಬಿಟ್ಟಿರುತ್ತೇನೆ.

೧೨. **ಭೋಧ ದ್ವಿತೀಯ** (ಗು. ಸಂ. ೪೪, ಕ್ರಿ ಶ. 1061-98) 'ಇವರು ಪೂರ್ವಾಶ್ರಮದಲ್ಲಿ ಒಬ್ಬ ರಾಣಿಯ ತೃಪ್ತ್ಯರ್ಥವಾಗಿ ಕಥೆಗಳನ್ನು ಬರೆದ ಸೋಮದೇವನು. ದೇವತೆಗಳನ್ನು ಹಗುರವಾಗಿ ಆಸಡ್ಡೆಯಿಂದ ವರ್ಣಿಸಿರುತ್ತಾನೆ. ಧರ್ಮ(ಮತ)ವನ್ನು ತಿರಸ್ಕರಿಸಿರುತ್ತಾನೆ ದಡ್ಡರು, ದರೋಡೆಕೋರರು, ಠಕ್ಕರು. ಖೂನಿಕಾರರ ಗಂಡನನ್ನು ಕೊಂದ ಹೆಂಡತಿಯರು– ಇವರೇ ಅವನು ಕಥಾಪಾತ್ರಗಳು. ಕೆಲವು ಕಥೆಗಳಲ್ಲಿ ವ್ಯಭಿಚಾರದ ಕಾಮುವಿಲಾಸಗಳಿವೆ. ಅವನ ಚರಿತ್ರೆಯೆಂದರೆ, ಕೊನೆಗೆ ಅವನು ಶೈವಪಂಥದ ಸಂನ್ಯಾಸಿಯಾದನೆಂದಿಷ್ಟೇ ತಿಳಿದು ಬಂದಿದೆ. ಭೋಜನು ಕೊಟ್ಟ ಚಿನ್ನದ ಪಲ್ಲಕ್ಕಿಯಲ್ಲಿ ಕಾಂಚಿಗೆ ಬಂದು ಪೀಠಾಧ್ಯಕ್ಷನಾದನೆಂದು ಇಲ್ಲಿ ಹೇಳಲಾಗಿದೆ. ಇಷ್ಟೇ ಸಾಲದೆ, ಕಾಂಚಿಯಲ್ಲಿ ಮುಹಮ್ಮದೀಯರ ಕಾಟವನ್ನು ಪರಿಹರಿಸಿದನೆಂದೂ ಕಲ್ಪಿಸಲಾಗಿದೆ. ಆ ಕಾಲಕ್ಕೆ ಇದು ವೀರ ರಾಜೇಂದ್ರ, ಅಧಿರಾಜೇಂದ್ರ, ಕುಲೋತ್ತುಂಗ (೧)–ಎಂಬ ಬಲಿಷ್ಠರಾದ ಚೋಳ ರಾಜನ ರಾಜಧಾನಿಗಳಲ್ಲೊಂದಾಗಿತ್ತು. ದಕ್ಷಿಣಭಾರತದಲ್ಲೆಲ್ಲ ಅವರ ಅಧಿಕಾರವು ನಡೆಯುತ್ತಿತ್ತು. ಈ ಪ್ರಭಾವಶಾಲಿಗಳಾದ ಚೋಳಚಕ್ರಾಧಿಗತಿಗಳು ಒಬ್ಬ ಸಂನ್ಯಾಸಿಯ ಸಹಾಯದಿಂದ ಕಾಶ್ಮೀರದ ಕಳಸನೆಂಬವನ ಸಹಾಯವನ್ನು ಕೋರಿದರು ಎಂಬುದು ಎಂಥ ಹಾಸ್ಯಾಸ್ಪದವಾದ ಮಾತು! ಇದೂ ಅಲ್ಲದೆ ಆ ಕಾಲಕ್ಕೆ ಕಾಂಚಿಗೆ ಸುತ್ತ ಒಂದಸಾವಿರ ಮೈಲಿಗಳ ಕ್ಷೇತ್ರದಲ್ಲಿ ಚೋಲನಿಗೆ ಎದುರಾಗುವ ಮುಹಮ್ಮದೀಯರೇ ಇರಲಿಲ್ಲವಲ್ಲ!

೧೩. **ಚಂದ್ರಶೇಖರ ತೃತೀಯ** (?) ಅಥವಾ ಚಂದ್ರಚೂಡ (ಗು.ಸಂ. ೪೫, ಕ್ರಿ.ಶ. 1098–1166) ಈ ಸಂದರ್ಭದಲ್ಲಿ ಉದಾಹರಿಸಿರುವ (NVSK pp 88–89) ಜಯದೇವ. ಸುಹಲ –ಮುಂತಾದವರ ಗ್ರಂಥಗಳು ಅಪ್ರಸಿದ್ಧವಾಗಿವೆ.

೧೪. **ಅದ್ವೈತಾನಂದಬೋಧ** (ಗು.ಸಂ. ೪೬, ಕ್ರಿ.ಶ 1166ಇ1200) ಇವರು ಅಭಿನವಗುಪ್ತನನ್ನು ಜಯಿಸಿದರಂತೆ. ಆದರೆ ಆತನು ಈ ಗುರುಗಳಿಗಿಂಥ ಒಂದು ಶತಮಾನ ಮುಂಚೆಯೇ ಇದ್ದವನು; ಈ ಗುರುಗಳ ಗ್ರಂಥಗಳ ಹೆಸರನ್ನು ಯಾರೂ ಕೇಳಿದವರಿಲ್ಲ.

೧೫. **ವಿದ್ಯಾತೀರ್ಥ** (ಗು. ಸಂ. ೪೯, ಕ್ರಿ ಶ. 1497-1385, ಪು. ೩೫೨). ವಿದ್ಯಾಶಂಕರರೆಂದು ಪ್ರಸಿದ್ಧರಾದ ಇವರು ಕ್ರಿ. ಶ. 1333ರಲ್ಲಿ ಸಮಾಧಿಸ್ಥರಾದರು, ಕುಂಭಕೋಣದವರು ಬರೆದಿರುವಂತೆ ಕ್ರಿ. ಶ. 1385 ರಲ್ಲಲ್ಲ. ಶೃಂಗೇರಿಯಲ್ಲಿರುವ ವಿದ್ಯಾತೀರ್ಥರ ಸಮಾಧಿಗೆ ಬುಕ್ಕ, ಹರಿಹರ

(೨) ಮುಂತಾದವರು 1346, 1356, 1375ರಲ್ಲಿ ಕೊಟ್ಟ ಮಾನ್ಯಗಳ ದಾಖಲೆ ಇದೆ. ಇವರ ಪೂರ್ವಾಶ್ರಮದ ಹೆಸರು ಸರ್ವಜ್ಞವಿಷ್ಣು ಎಂದಿತ್ತಂತೆ. ಇದು ಆಗದ ಮಾತು. ಸರ್ವಜ್ಞವಿಷ್ಣುವು ಸಾಯಣನ ಗುರುವಲ್ಲ, ಅವನ ಮಗ ಮಾಧವನ (ಕ್ರಿ. ಶ. 1400) ಗುರು.

ಇವರು ಎಂಟು ಮಠಗಳನ್ನು ಸ್ಥಾಪಿಸಿದರೆಂಬ ವಿಷಯಕ್ಕೆ ಕೆ. ಆರ್. ವೆಂಕಟರಾಮನ್ನರ ಅಭಿಪ್ರಾಯವನ್ನು ಹಿಂದೆ (ಪು. ೪೭೩) ಕೊಟ್ಟಿದೆ. 'ವಿದ್ಯಾರಣ್ಯರೇ ಹೆರಿಹರ ದ್ವಿತೀಯನ ಸಹಾಯದಿಂದ ಅನೇಕ ಉಪಮಠಗಳನ್ನು ಸ್ಥಾಪಿಸಿದವರು' ಎಂದು ಕೆ. ಆರ್. ವೆಂಕಟರಾಮನ್ನರ ಅಭಿಪ್ರಾಯ.

೧೬. ಶಂಕರಾನಂದ (ಗು.ಸಂ. ೫೦, ಕ್ರಿ.ಶ. 1385–1417) 'ಇವರ ಗ್ರಂಥಗಳಿಂದ ವಿದ್ಯಾತೀರ್ಥರು ಅವರ ವಿದ್ಯಾಗುರುಗಳಿಂದೂ ದೀಕ್ಷಾಗುರುಗಳು 'ಆನಂದಾತ್ಮ'ರೆಂದೂ ತಿಳಿಯಬರುತ್ತದೆ. ಸಾಮಾನ್ಯಸಂನ್ಯಾಸಿಗಳಿಂದ ಆಶ್ರಮವನ್ನು ಸ್ವೀಕರಿಸಿದವರು ಪೀಠಾಧಿಪರಾದರೆಂದು ನಂಬುವದು ಕಷ್ಟ. ಇವರು ಪೀಠಾಧ್ಯಕ್ಷರಾಗಿರಲೇ ಇಲ್ಲ.

ಎನ್. ವೆಂಕಟರಾಮನ್‌ರವರು (NVSK p. 97) ಶಂಕರಾನಂದರ ಬೃಹದಾರಣ್ಯಕದೀಪಿಕೆಯಿಂದ ಒಂದು ಶ್ಲೋಕವನ್ನು ತೆಗೆದುಕೊಂಡು ಉದಾಹರಿಸಿರುತ್ತಾರೆ:

ಕಾಞ್ಚ್ಯೀಪೀಠಜುಷಃ ಕಠೋರಧಿಷಣಾ ನಿರ್ಧೂತದುರ್ಧೂರ್ವಹ–
ದ್ಭೃತಿವ್ರಾತದುರಾಗ್ರಹಗ್ರಹಭಯಾನ್ ಮಾಯಾವಿದೂರಕ್ರಿಯಾನ್ ।
ಆಚಾರ್ಯಾನ್ ಮಮ ಚದ್ಮಮೌಲಿಚರಣಧ್ಯಾನೈಕತಾನಾಶಯಾನ್
ವಿದ್ಯಾತೀರ್ಥಮಹೇಶ್ವರಾನ್ ಹೃದಿ ಸದಾ ವಿದ್ಯೋತಮಾನಾನ್ ಭಜೇ ॥"

ಇದರಲ್ಲಿ ವಿದ್ಯಾತೀರ್ಥರು ಕಾಂಚೀಪೀಠಾಧ್ಯಕ್ಷರೆಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಆದರೆ ಈ ಶ್ಲೋಕವು ಆ ಗ್ರಂಥದ ಯಾವ ಹಸ್ತಪತ್ರಿಕೆಯಲ್ಲಿಯೂ ಇಲ್ಲ' ಎಂದು ಕೆ. ಆರ್. ವೆಂಕಟರಾಮನ್ನರವರು ಬರೆದಿರುತ್ತಾರೆ.

೧೭. ಸರ್ವಜ್ಞಸದಾಶಿವಬೋಧ[1] (ಗು.ಸಂ. ೫೪, ಕ್ರಿ.ಶ. 1524–39) ರಾಮನಾಡಿನ ರಾಜನಾದ ಪ್ರವೀರನಿಂದ ಸೇವಿಸಲ್ಪಟ್ಟವರೆಂದು ಇವರನ್ನು ಗಣಿಸಲಾಗಿದೆ. ರಾಮನಾಡಿನಲ್ಲಿ ಆ ಹೆಸರಿನ ಅರಸು ಯಾವನೂ ಇರಲಿಲ್ಲ; ಆ ಕಾಲಕ್ಕೆ ರಾಮನಾಡರಾಜ್ಯವು ಇನ್ನೂ ರೂಪಿಸಿಕೊಂಡೇ ಇರಲಿಲ್ಲ.

೧೮. ಬೋಧ ತೃತೀಯ (ಗು.ಸಂ. ೫೭, ಕ್ರಿ ಶ. 1638–92) ಭಗವನ್ನಾಮಬೋಧೇಂದ್ರರೆಂಬವರು ತಮ್ಮ ಜೀವಿತಕಾಲದಲ್ಲೆಲ್ಲ ನಾಮಸಂಕೀರ್ತನೆ

---

1. 'ಪುಣ್ಯಶ್ಲೋಕಮಂಜರೀ' ಗ್ರಂಥಕರ್ತರಿವರು ಎಂದು ಎನ್. ವೆಂಕಟರಾಮನ್ನರ ಹೇಳಿಕೆ (NVSK p. 99).

ಯಲ್ಲಿಯೇ ನಿರತರಾಗಿದ್ದ ಮಹಾತ್ಮರು. ಕಾವೇರಿತೀರದಲ್ಲಿ 'ಗೋವಿಂದಪುರ'ವೆಂಬ ಮಠವನ್ನು ಸ್ಥಾಪಿಸಿದ್ದರು. ಪ್ರತಿವರ್ಷವೂ ಅವರ ಆರಾಧನೆಯು ಅಲ್ಲಿ ನಡೆಯುತ್ತಿದೆ. ಈ ಮಠಕ್ಕೆ ಸ್ವಾಸ್ಥ್ಯಗಳೂ ಇವೆ; ಅವುಗಳ ಮೇಲೆ ಕುಂಭಕೋಣ ಮಠಕ್ಕೆ ಯಾವ ಅಧಿಕಾರವೂ ಇರುವದಿಲ್ಲ. 'ಬೋಧ'ರು ಪೀಠಾಧಿಪತಿಗಳಾಗಿದ್ದರೆಂದು ಯಾರಿಗೂ ತಿಳಿಯದು.

೧೯. **ಪರಮಶಿವ ದ್ವಿತೀಯ, ಆತ್ಮಬೋಧ** (ಇಲ್ಲಿ ಸದಾಶಿವಬ್ರಹ್ಮರೆಂದು ಪ್ರಸಿದ್ಧವಾಗಿರುವ) ಸದಾಶಿವೇಂದ್ರರು ಪರಮಶಿವೇಂದ್ರದ್ವಿತೀಯರ ಶಿಷ್ಯರೆಂಬ ಹೇಳಿಕೆ, ಮತ್ತು ಸದಾಶಿವರು **"ಗುರುರತ್ನಮಾಲಿಕೆ"**ಯ ಕರ್ತರು ಎಂಬುದು– ಈ ಎರಡು ವಿಚಾರಪ್ರಚೋದಕವಿಷಯಗಳನ್ನು ಇಲ್ಲಿ ಚರ್ಚಿಸಬಹುದು :–

ಕುಂಭಕೋಣದ ಪೀಠಾಧ್ಯಕ್ಷರು	ಸದಾಶಿವರ ಗ್ರಂಥಗಳಿಂದ
ಸರ್ವಜ್ಞಸದಾಶಿವಬೋಧ (ಗು.ಸಂ. ೫೪)	ತಿಳಿಯಬರುವ ಶಿಷ್ಯಪರಂಪರೆ
1574–39	ಅಭಿನವನಾರಾಯಣೇಂದ್ರಸರಸ್ವತೀ
|	('ಪಂಚೀಕರಣಭಾವಪ್ರಕಾಶಿಕಾ'ಕರ್ತರು)
	|
ಶಿಷ್ಯರು ಪರಮಶಿವ ದ್ವಿತೀಯ (ಗು.ಸಂ ೫೫)	ಶಿಷ್ಯರು ಪರಮಶಿವ
1539–86	(ಮಹರವಿದ್ಯಾಪ್ರಕಾಶಕರ್ತರು)
|	|
(ಶಿಷ್ಯರು ಆತ್ಮಬೋಧರು ಗು.ಸಂ. ೫೬)	ಶಿಷ್ಯರು ಸದಾಶಿವೇಂದ್ರರು
1586–1638 (ಗೊತ್ತಿರುವ ಕಾಲಗಳು 1726, 1734, 1761)	

ಮೇಲಿನ ಪಟ್ಟಿಯಿಂದ ಸದಾಶಿವೇಂದ್ರರ ಗುರುಗಳಾದ ಪರಮಶಿವರು ಕುಂಭಕೋಣದ ಪೀಠಾಧಿಪರಾದ ಪರಮಶಿವೇಂದ್ರರಿಗಿಂತ ಭಿನ್ನರೆಂದು ಸ್ಪಷ್ಟವಾಗುತ್ತದೆ. ಮೊದಲನೆಯವರ ಗುರುಗಳು ಅಭಿನವನಾರಾಯಣೇಂದ್ರರು, ಎರಡನೆಯವರ ಗುರುಗಳು ಸರ್ವಜ್ಞಸದಾಶಿವರು. **ಸದಾಶಿವೇಂದ್ರರು ತಂಜಾವೂರಿನ ತುಲಸಾಜೀಮಹಾರಾಜರ, ತಿರುವಾಂಕೂರಿನ ಮಹಾರಾಜಶ್ರೀ ರಾಮವರ್ಮ ಕಾರ್ತಿಕೈ ತಿರುಮುಲ ಮತ್ತು ಪುದುಕೋಟೆಯ ರಾಜಾ ರಘುನಾಥರಾಯ ತೊಂಡಿಮಾನ**– ಇವರ ಕಾಲದವರು. ಅವರು ಪುದುಕೋಟೆಯ ರಾಜ ತೊಂಡಿಮಾನನಿಗೆ ಒಂದು ಮಂತ್ರದೀಕ್ಷೆಯನ್ನು (1739ರಲ್ಲಿ) ಕೊಟ್ಟರು. ಅಂದಿನಿಂದ ರಾಜಗುರುಗಳಾದರು. ಆ ರಾಜ್ಯದ ರಿಕಾರ್ಡ್‌ಗಳಲ್ಲಿ ಸದಾಶಿವರ ಮತ್ತು ನೆರೂರಿನಲ್ಲಿರುವ ಅವರ ಸಮಾಧಿಯ ಪರಾಮರ್ಶಗಳಿವೆ. ಆ ಸಮಾಧಿಗೆ ಪುದುಕೋಟೆಯ ರಾಜನು ಗ್ರಾಮಗಳನ್ನು ಮಾನ್ಯವಾಗಿ ಕೊಟ್ಟರು

ತ್ತಾನೆ. ಹದಿನೆಂಟನೆಯ ಶತಮಾನಕ್ಕೆ ಸೇರಿದ ಸದಾಶಿವರು ಅದಕ್ಕಿಂತ ಎರಡು ಶತಮಾನಗಳ ಹಿಂದೆಯೇ ಇದ್ದು ಸಮಾಧಿಸ್ಥರಾಗಿದ್ದ ಕುಂಭಕೋಣ ಮಠದ ಶಿಷ್ಯರಾಗುವದು ಹೇಗೆ? ಹದಿನೆಂಟನೆಯ ಶತಮಾನದ ಸದಾಶಿವರು ೧೬ನೆಯ ಮತ್ತು ೧೭ನೆಯ ಶತಮಾನದಲ್ಲಿದ್ದ ಆತ್ಮಬೋಧರ ಪ್ರೇರಣೆಯಿಂದ "ಗುರುರತ್ನಮಾಲಿಕೆ"ಯನ್ನು ಬರೆದರಂತೆ. ತನ್ನ ಕಾಲವಾದ ಒಂದು ಶತಮಾನದ ಮೇಲೆ ಹುಟ್ಟುವಾತನನ್ನು ಒಂದು ಗ್ರಂಥವನ್ನು ಬರೆಯಿರೆಂದು ಪ್ರೇರಿಸುವದು ಹೇಗೆ? ಹೀಗಿರುವದರಿಂದ ಸದಾಶಿವೇಂದ್ರರು ಕುಂಭಕೋಣದ ಗುರುಗಳ ಶಿಷ್ಯರೂ ಅಲ್ಲ, ಗುರುರತ್ನಮಾಲಿಕೆಯನ್ನು ಬರೆಯಲೂ ಇಲ್ಲ– ಎಂಬುದು ಸ್ಪಷ್ಟವಾಗಿರುತ್ತದೆ.

೨೦. 'ಗೋಪಿನಾಥರಾಯರು[1] ಸಂಪಾದಿಸಿರುವ ತಾಮ್ರಶಾಸನಗಳಲ್ಲಿ ಅನೇಕ ಅಸಂಗತಗಳಿವೆ. ಒಂದರಲ್ಲಿ ದಾನಕೊಟ್ಟಾತನು ಸಕ್ತ ೩೪ ವರ್ಷಗಳಾದ ಬಳಿಕದ ಕಾಲವನ್ನು ಹಾಕಿದೆ. ಮತ್ತೊಂದರಲ್ಲಿ ದಾನವಾಗಿ ಕೊಟ್ಟ ಗ್ರಾಮಗಳು ಕೊಟ್ಟ ರಾಜನ ರಾಜ್ಯಕ್ಕೆ ಸೇರಿರಲೇ ಇಲ್ಲ, ಮತ್ತೊಂದು ಮುಸಲ್ಮಾನರು ಕೊಟ್ಟ ದಾನವಾದರೂ ಹಿಂದೂದೇವತೆಗಳ ನಮಸ್ಕಾರಗಳಿಂದ ಪ್ರಾರಂಭವಾಗಿದೆ; ಈ ಶ್ಲೋಕಗಳೊಳಗೆ ಎರಡು ಮಾನ್ಯದ ಕಾಲಕ್ಕಿಂತ ಒಂದು ಶತಮಾನವಾದ ಬಳಿಕ ರಚಿತವಾದ ಗ್ರಂಥದಿಂದ ಆರಿಸಿಕೊಂಡವುಗಳಾಗಿದೆ. ಇನ್ನೊಂದು ಶಾಸನಕ್ಕೂ ಈ ಮಠಕ್ಕೂ ಯಾವ ಸಂಬಂಧವೂ ಇಲ್ಲ. ಈ ಶಾಸನಗಳನ್ನು ಸರಿಯಾಗಿ ಶೋಧಿಸಿ ಪರೀಕ್ಷಿಸುವದಕ್ಕೆ ಬಹಳಕಾಲವೂ ಸ್ಥಲವೂ ಬೇಕಾಗುವದು.'

ಈವರೆಗೆ ನಾವು ಕಾಂಚೀಗುರುಪರಂಪರೆಯ ವಿಷಯಕ್ಕೆ ಆ ಪೀಠದ ಚರಿತ್ರೆಯನ್ನು ಬರೆದಿರುವ ಎನ್. ವೆಂಕಟರಾಮನ್ನರವರಿಗೂ ಶೃಂಗೇರೀಪೀಠದ ಚರಿತ್ರೆಯನ್ನು ಬರೆದಿರುವ ಕೆ.ಆರ್.ವೆಂಕಟರಾಮನ್ನರವರಿಗೂ ಇರುವ ಮತಭೇದಗಳನ್ನು ವಿಸ್ತಾರವಾಗಿಯೇ ತಿಳಿಸಿರುತ್ತೇವೆ. ಕಾಂಚೀಪೀಠದ ಗುರುಪರಂಪರೆಯಲ್ಲಿರುವ ಕೊರತೆಗಳನ್ನು ತೋರಿಸಿರುವವರಲ್ಲಿ ಕೆ.ಆರ್. ವೆಂಕಟರಾಮನ್ನರವರೇ ಹೆಚ್ಚಿನ ಐತಿಹಾಸಿಕಚಿಕಿತ್ಸಾದೃಷ್ಟಿಯನ್ನುಪಯೋಗಿಸಿರುತ್ತಾರೆಂದು ನಮ್ಮ ನಂಬಿಕೆ. ಕೆ.ಎಸ್. ಸುಂದರರಾಮಯ್ಯನವರಶ್ರೀಶೃಂಗೇರೀಶಾರದಾಪೀಠ(Sri Sringeri Sharada Mutt) ಕೆ. ಕೃಷ್ಣಸ್ವಾಮಿ ಅಯ್ಯರ್‌ರವರ 'ಕುಂಭಕೋಣಮಠದ ದುರಭಿಮಾನಗಳು' (The Kumbhakonam Mutt Claims)– ಮುಂತಾದ ಗ್ರಂಥಗಳಲ್ಲಿ ಕಾಂಚೀಪೀಠದಲ್ಲಿ ದೋಷವನ್ನು ತೆಗೆದು ತೋರಿಸುವದ

1. ಟ್ರಾವಂಕೂರು ಸಂಸ್ಥಾನದ ಪ್ರಾಕ್ತನತತ್ತ್ವವಿಮರ್ಶನಶಾಖೆಯ ಸೂಪರಿಂಟೆಂಡೆಂಟರಾಗಿದ್ದ ಗೋಪಿನಾಥರಾಯರು ಬರೆದಿರುವ (Copper Plate Inscripticns (Mardas 1916) ಎಂಬ ಇಂಗ್ಲಿಷು ಸಂಸ್ಕೃತಪುಸ್ತಕವು ನಮ್ಮಲ್ಲಿದೆ. ಅದರ ವಿಚಾರವೇನೂ ಅಷ್ಟು ಲಾಭದಾಯಕವಾಗಿಲ್ಲವೆಂದು ಬಿಟ್ಟಿದೆ.

ರಲ್ಲಿಯೇ ಹೆಚ್ಚಿನ ಅಭಿನಿವೇಶವು ಕಾಣಬರುತ್ತಿದೆ. ಶೃಂಗೇರಿಗುರುಪರಂಪರೆಗಳಲ್ಲಿರುವ ಹೆಚ್ಚುಕಡಿಮೆಗಳನ್ನೂ ಎನ್. ವೆಂಕಟರಾಮನ್‌ರವರ ಅಭಿಪ್ರಾಯಗಳನ್ನೂ ನಾವು ಈವರೆಗೆ ತಿಳಿಸಿಯೇಇರುತ್ತೇವೆ. ಕಾಂಚೀ ಶೃಂಗೇರೀಪೀಠಗಳ ವಿಷಯಕ್ಕೆರುವ ಪರಸ್ಪರಘರ್ಷಣೆಯು ನಮಗೆ ಪ್ರಕೃತವಿಷಯದಲ್ಲಿ ಯಾವ ತೀರ್ಮಾನವನ್ನೂ ಕೊಡುವಂತಿಲ್ಲ. ಇದು ಬಹಳ ದೀರ್ಘಕಾಲದಿಂದಲೂ ಆಗುತ್ತಲೇ ಇದೆ. ಪ್ರಜೋತ್ಪತ್ತಿ (1871–72)ನೆಯ ಪಂಚಾಂಗದಲ್ಲಿ ಸುಬ್ರಹ್ಮಣ್ಯ ಸಿದ್ಧಾಂತಿಗಳೆಂಬವರು ಪ್ರಚುರಪಡಿಸಿದ ಪಂಚಾಂಗದ ಪೀಠಿಕೆಯಲ್ಲಿ– 'ಕೂಡಲೀ ಕುಮ್ಭಕೋಣಾದಿಮಠಾಧಿಪತಯಶ್ಚ ಯೇ | ಶೃಙ್ಗೇರೀಗುರುಶಿಷ್ಯಾ ಇತ್ಯಾದ್ರಿಯನ್ತೇಕ್ವಚಿಜ್ಜನೈಃ ||' ಎಂಬ ಶ್ಲೋಕವೊಂದು ಕಾಣಿಸಿಕೊಂಡಿತ್ತು. ಮಠಾಮ್ನಾಯ ಸೇತುವಿನಲ್ಲಿ ಕುಂಭಕೋಣದ(ಕಾಂಚೀಕಾಮಕೋಟಿ)ಪೀಠಕ್ಕೆ ಶಿಷ್ಯರಾದವರ ಮಠಗಳೇ ಮಿಕ್ಕವು ಎಂದು ಬರೆದಿರುವದನ್ನು ಆಗಲೆ ತಿಳಿಸಿದ್ದಾಗಿದೆ. ಆದಕ್ಕೆ ಇದು ಪ್ರತೀಕಾರವಾಗಿದ್ದರೂ ಇರಬಹುದು. ಮೂರನೆಯ ಆಂಗಿರಸಸಂವತ್ಸರದ ಚೈತ್ರಬಹುಳಚತುರ್ಥಿಯ ದಿದ (೭7–4–1872)[1] ಕಾಂಚೀಶೃಂಗೇರೀಪೀಠಗಳ ಅನುಯಾಯಿಗಳಾದ ಲೌಕಿಕವೈದಿಕಗೃಹಸ್ಥರು ವೇದಾಂತರಾಮಾನುಜ ಜೀಯರ್ ಎಂಬ ತಿರುವೆಲ್ಲೂರಿನ ಶ್ರೀವೈಷ್ಣವಸ್ವಾಮಿಗಳ ಅಗ್ರಾಸನಾಧಿಪತ್ಯದಲ್ಲಿ ಒಂದು ಸಭೆ ಸೇರಿದರು. ಈ ಶ್ಲೋಕಕ್ಕೆ ಯಾವ ಆಧಾರವೂ ಇಲ್ಲವೆಂದು ಸಭೆಯು ನಿರ್ಣಯಿಸಿತು.[2] ಜೀಯರ್‌ರವರ ನಿರ್ಣಯಗ್ರಂಥವನ್ನು ನೋಡಿದ್ದರಲ್ಲಿ ಅವರು ಕುಂಭಕೋಣಮಠದವರೇ ಶ್ರೀಶಂಕರಾಚಾರ್ಯರ ಗುರುಪರಂಪರೆಯವರೆಂಬುದಾಗಿದೆ. ಅಧ್ಯಕ್ಷರಿಗೆ ಮುಖ್ಯವಾಗಿ ಮಣಿಮುಂಜರೀಭೇದಿನೀ ಎಂಬ ಕಾವ್ಯದ ೩ನೆಯ ಸರ್ಗದಲ್ಲಿರುವ 'ಸ ದ್ವಾದಶಾಬ್ದಂ ಗುರುರತ್ರ ಪೀಠೇ | ಸ್ಥಿತ್ವಾನವದ್ಯಾಮುಪದಿಶ್ಯ ವಿದ್ಯಾಮ್ ॥ ಶ್ರೀಪದ್ಮಪಾದಂ ಚ ನಿಧಾಯ ತತ್ರ ಜಗಾಮ ಕಾಂಚೀಪುರಮನ್ಯಶಿಷ್ಯೈಃ||' ಮಣಿ. ಭೇ. ೩–೬೩ (ಆಚಾರ್ಯರು ಹನ್ನೆರಡು ವರ್ಷಗಳಾದ ಮೇಲೆ ಪದ್ಮಪಾದರನ್ನು ನಿಲ್ಲಿಸಿ ಕಾಂಚೀನಗರಕ್ಕೆ ಹೋದರು). "ತತ್ರೈಕಂ ಕೆಲ ನಿತ್ಯಬೋಧಸುಘನಾಚಾರ್ಯಾಖ್ಯಮೇತನ್ಮಠೇ[3] ? ಪೀಠಾಧ್ಯಕ್ಷಮಥಾರಚಯ್ಯ ಸ. ಯಯೌ ತೂರ್ಣಂ ಗುರೋಃ ಸಂನಿಧಿಮ್ ॥ (ಸುರೇಶ್ವರಾಚಾರ್ಯರು ನಿತ್ಯಬೋಧಘನಾಚಾರ್ಯರನ್ನು ಪೀಠದಲ್ಲಿಟ್ಟು ಗುರುಗಳ ಹತ್ತಿರಕ್ಕೆ ಹೋದರು) ಎಂಬ (ಮಣಿ. ಭೇ. ೪–೩೦) ಶ್ಲೋಕವೂ ಪ್ರಮಾಣಗಳು !

---

1. 'ಶ್ರೀಶಾಂಕರಪೀಠತತ್ತ್ವದರ್ಶನಮ್' (Appendix I p. 15–16).

2. ಮೇಲಿನ ತೀರ್ಮಾನವನ್ನು ಖಂಡನೆಮಾಡಿ ಭಟ್ಟ ಶ್ರೀ॥ ನಾರಾಯಣಶಾಸ್ತ್ರಿ, ಕೊಕ್ಕಂಡ ವೆಂಕಟರತ್ನಂ ಪಂತಲು ಮೊದಲಾದವರು ಕೆಲವು ಪ್ರಕಟನೆಗಳನ್ನು ಹೊರಡಿಸಿದ್ದಾಗಿ ತಿಳಿದುಬಂದಿದೆ. ನಿರ್ಣಯಕ್ಕೂ ಖಂಡನೆಗೂ ಅಷ್ಟೇ ಬೆಲೆ.

3. ನಮ್ಮಲ್ಲಿರುವ ಜೀಯರ ತೆಲುಗು ಸಿದ್ಧಾಂತಪತ್ರಿಕೆಯು ಹಾಳೆಯಲ್ಲಿ ಹರಿದಿದೆ.

"ಮಣಿಮಂಜರೀಭೇದಿನಿ" ಯಂಥ ಕಾವ್ಯವೊಂದರಮೇಲೆ ತೀರ್ಪನ್ನು ಕೊಡುವ ಮುತಾಂತರದ ಗುರುಗಳ ನಿರ್ಣಯವನ್ನು ಬಯಸಿದ ವಿದ್ವಾಂಸರುಗಳ ವಿಷಯಕ್ಕೆ ಏನೂ ಬರೆಯಬೇಕಾದದ್ದೇ ಇಲ್ಲ. ಆ ಆಗ್ರಾಸನಾಧಿಪತಿಗಳೂ 'ನನಗೆ ಎಲ್ಲಾ ಪ್ರಮಾಣಗಳನ್ನೂ ತೋರಿಸಿಲ್ಲ ; ಇದ್ದಷ್ಟು ಆಧಾರದಮೇಲೆ ತೀರ್ಮಿತ್ತಿದ್ದೇನೆ' ಎಂದಿದಾರೆಂದು ಶೃಂಗೇರಿಪಕ್ಷಪಾತಿಗಳು ಹೇಳುತ್ತಿದಾರೆ ! ಇದು ಹೇಗಾದರೂ ಇರಲಿ. (೧) ಕಾಂಚೀಶೃಂಗೇರೀಪೀಠಗಳು ಮಿಕ್ಕಮಠಗಳ ಮೇಲಿನ ಆಧಿಪತ್ಯಕ್ಕೆ ಪ್ಯೈಪೋಟಿಯಿಂದ ವರ್ತಿಸಿಕೊಂಡು ಬಂದಿವೆಯೆಂದೂ. ಶಂಕರಾಚಾರ್ಯರು ಕೊನೆಗೆ ಕಾಂಚಿಯಲ್ಲಿಯೇ ಸಮಾಧಿಸ್ಥರಾದರೆಂದು ತೋರಿಸುವದಕ್ಕೆ ಬಹಳ ಹಿಂದಿನಿಂದಲೂ ಪ್ರಯತ್ನಗಳು ನಡೆಯುತ್ತಲೇಬಂದಿವೆಯೆಂದೂ ಈ ಮೇಲಿನ ಕಚ್ಚಾಟದ ವೃತ್ತಾಂತದಿಂದ ತಿಳಿಯಬರುತ್ತದೆ. "ಶ್ರೀಶಾಂಕರಪೀಠತತ್ತ್ವದರ್ಶನ" (ಶಾ. ತ. ದ. ಪು. 8)ದಲ್ಲಿ ಡಾಕ್ಟರ್ ಹಲ್ಟ್ಸ್ ಎಂಬಾತನು (Dr. Hultzsch) ಮದರಾಸ್ ಸರ್ಕಾರದ ಪ್ರಾಚ್ಯಲಿಖಿತ ಪುಸ್ತಕ ಕೋಶಾಗಾರ ಪಟ್ಟಿಯಲ್ಲಿ (Madars Govt. Oriental Manuscripts Library Cat. No. III Pages. 135–134) ಕೊಟ್ಟಿರುವ ಒಂದು ಗುರುಪರಂಪರೆಯ ಪಟ್ಟಿ ಹೀಗಿದೆ :

ಭಾರತೀಗುರುಪರಂಪರಾಸ್ತೋತ್ರಮ್

ಆದೌ ಶಿವಸ್ತತೋ ವಿಷ್ಣುಸ್ತತೋ ಬ್ರಹ್ಮಾ ತತಃ ಪರಮ್ |
ವಸಿಷ್ಠಶ್ಚ ತತಃ ಶಕ್ತಿಃ ತತಷ್ಪ್ಲಷ್ಠಃ ಪರಾಶರಃ ॥ ೧ ॥
ತತೋ ವ್ಯಾಸಃ ಶುಕಃ ಪಶ್ಚಾತ್ ಗೌಡಪಾದಾಖಿದಸ್ತತಃ |
ಗೋವಿನ್ದಾ(ಚಾ)ರ್ಯಗುರುಸ್ತಸ್ಮಾಚ್ಛಂಕರಾಚಾರ್ಯಸಂಜ್ಞಕಃ ॥ ೨ ॥
ಪದ್ಮನಾಭ(ಪಾದಾಃ) ಸುರೇಶಶ್ಚ ಹಸ್ತಾಮಲಕತೋಟಕೌ ।
ವೇದಾನ್ತಶಿಕ್ಷಾಗುರವಃ ಸಾಚಾರ್ಯಾಪಾತು[1](ಆಚಾರ್ಯಾಃ ಪಾನ್ತು)ಮಾಂ ಸದಾ
ಶ್ರೀಶಙ್ಕರಾಚಾರ್ಯಮತಶ್ಚ ಪದ್ಮಪಾದಂ ಚ ಹಸ್ತಾಮಲಕಂ ಚ ಶಿಷ್ಯಮ್ |
ತಂ ತೋಟಕಂ ವಾರ್ತಿಕಕಾರಮನ್ಯಾನಸ್ಮದ್ಗುರೂನ್ ಸಂತತಮಾನತೋಽಸ್ಮಿ ॥
ಸಂಸ್ಥಾಪ್ಯ ಸ್ವಮಠಂ ಕೃತ್ವಾ ತುಂಗಭದ್ರಾನದೀತಟೇ |
ತತ್ರ ಸ್ಥಿತ್ವಾ ದ್ವಾದಶಾಬ್ದಂ ಯತಿಂ ಪೃಥ್ವೀಧರಾಭಿಧಮ್ ॥ ೫ ॥
ವಿದ್ಯಾಪೀಠಾಧಿಕಂ (ಪಂ) ಕೃತ್ವಾ ಭಾರತೀಸಂಜ್ಞಯಾ ಗುರುಃ |
ಅಗಚ್ಛತ್ ಸ್ವೇಚ್ಛಯಾ ಕಾಂ(ಞ್ಚೀಂ) ಪರ್ಯಟನ್ ಪೃಥಿವೀತಲೇ ॥ ೬ ॥
ತತ್ರ ಸಂಸ್ಥಾಪ್ಯ ಕಾಮಾಕ್ಷೀಂ ಜಗಾಮ ಪರಮಂ ಪದಮ್ |
ವಿಶ್ವರೂಪಯತಿಂ ಸ್ಥಾಪ್ಯ ಸ್ವಾಶ್ರಮಸ್ಯ ಪ್ರಚಾರಣೇ ॥ ೭ ॥

1. ಅಚ್ಚಿನ ಪುಸ್ತಕದಲ್ಲಿ ಹೀಗೇ ಇವೆ. 'ಸಾಚಾರ್ಯಾಃ ಪಾತು ಮಾಮ್' ಎಂದಿರಬಹುದೆ ?

ಸ್ವಯಂ ಕಾಮಕೋಟೀಮಗಾತ್ಪೂರ್ಣಂ ಶ್ರೀಪೃಥ್ವೀಧರಭಾರತೀ ।
ತದ್ವೃತ್ತಾನ್ತಂ ಸಮಾಕರ್ಣ್ಯ ತಪಸಃ ಸಿದ್ಧಯೇ ತದಾ ॥೪॥
ಶ್ರೀವಿಶ್ವರೂಪಯೋಗೀನ್ದ್ರಂ ಜಪನ್ತ್ಸ ಚಿದ್ರೂಪಭಾರತೀ ।
ತತೋ ಗಙ್ಗಾಧರಯತಿಃ ತತಶ್ಚಿಜ್ಜ್ಞಾನಭಾರತೀ ॥
ತತೋ ಬೋಧಾಯನೋ ಮೌನೀ ತತೋ ಜ್ಞಾನೋತ್ತರೋ ಯತಿಃ ।
ತಸ್ಮಾಚ್ಛಿವಾನನ್ದಯತಿಃ ತತೋ ಜ್ಞಾನೋತ್ತಮೋ ಗುರುಃ ॥
ತಸ್ಮಾನ್ನೃಸಿಂಹಯತಿರಾಟ್ ತತ ಈಶ್ವರಭಾರತೀ ।
ತತ ಈಶ್ವರಭಾರತ್ಯಾ ನೃಸಿಂಹಾಭಿಧಭಾರತೀ ॥
ತಸ್ಮಾದ್ವಿದ್ಯಾಶಙ್ಕರಾಖ್ಯೋ ಯತಿಃ ಕೃಷ್ಣಯತಿಸ್ತಥಾ ।
ತಸ್ಮಾಚ್ಚಂಕರಯೋಗೀ ಚ ಚನ್ದ್ರಶೇಖರಭಾರತೀ ।
ತತ ಅಸಿ (ಅಸೀತ್ ?) ತತೋ ಜಾತಃ ಸಚ್ಚಿದಾನಂದಭಾರತೀ ॥
ತತೋ ಬ್ರಹ್ಮಾನನ್ದಯತಿಸ್ತಶ್ಚಿದ್ರೂಪಭಾರತೀ ।
ಪುರುಷೋತ್ತಮಯೋಗೀ ಚ ತತೋಽಭೂನ್ನಧುಸೂಧನಃ ॥
ಗುರುಸ್ತತೋ ಜಗನ್ನಾಥೋ ವಿಶ್ವಾನಂದಯತಿಸ್ತಥಾ ।
ತಸ್ಮಾಚ್ಚ ವಿಮಲಾನನ್ದೋ ಯೋ ವಿದ್ಯಾರಣ್ಯಭಾರತೀ ॥
ತತೋ ಜಾತೋ ತ್ರಿಸ್ವರೂಪಯತಿರ್ಬೋಧಾಯನಸ್ತಥಾ ।
ತತೋ ಜಾತೋ ತಮ (ಜ್ಞಾನೋತ್ತಮ ?) ಯತಿಸ್ತತಃ ಶಂಕರಭಾರತೀ ॥

ಈ ಮೇಲೆ ಕೊಟ್ಟಿರುವದು ಕಚ್ಚುಕಚ್ಚಾಗಿರುವ ಗ್ರಂಥದ ಭಾಗವಾಗಿದೆ. ಶ್ಲೋಕಕ್ಕೆ ಸಂಖ್ಯೆಹಾಕಿರುವವರು ನಾವು. ೫ ರಿಂದ ೮ನೆಯ ಶ್ಲೋಕಗಳವರೆಗಿನ ಭಾಗವನ್ನು ಯಾರೋ ಕಾಂಚೀಪಕ್ಷಪಾತಿಗಳು ಇಲ್ಲಿ ಸೇರಿಸಿದಾರೆಂಬುದಕ್ಕೂ ಅವಕಾಶವಿದೆ. ಈ ಗುರುಪರಂಪರೆಯನ್ನು ಯಾರು ಯಾವಾಗ ಏಕೆ ಬರೆದರೋ ನಿಶ್ಚಯಿಸಿದರೆ ಇದರ ಯೋಗ್ಯತೆ ಗೊತ್ತಾದೀತು.

ಇಲ್ಲಿಗೆ ಕಾಂಚೀಪೀಠದ ಪರಂಪರೆಯ ವಿಚಾರವು ಸಾಕು. ಇನ್ನುಮುಂದೆ ಉತ್ತರದ ಮೂರು ಮುಖ್ಯಮಠಗಳ ಸುದ್ದಿಯನ್ನು ಬರೆದು ಆಮೇಲೆ ಉಪಮಠಗಳ ವಿಚಾರಕ್ಕೆ ತೆರಳುವೆವು. ಶೃಂಗೇರಿಯ ಅಥವಾ ಕಾಂಚಿಯ ಪೀಠಾಧಿಪರುಗಳ ಕಾಲದ ಶಕ, ಸಂವತ್ಸರ, ಮಾಸ, ತಿಥಿ–ಮುಂತಾದ ವಿವರಗಳನ್ನು ಸಮಗ್ರವಾಗಿ ಲಭಿಸಿದಷ್ಟನ್ನೂ ಇಲ್ಲಿ ಕೊಟ್ಟಿರುವದಿಲ್ಲ. ಏಕೆಂದರೆ ಈಗಿನ ವಾದಗ್ರಸ್ತಸ್ಥಿತಿಯಲ್ಲಿ ಅವೆಲ್ಲ ಕಲ್ಪನಾರಾಜ್ಯಕ್ಕೇ ಸೇರಿದವುಗಳೆನ್ನಬೇಕಾಗಿದೆ. ಮುಂದಿನ ಮಠಗಳ ವಿಷಯದಲ್ಲಿಯೂ ಹೀಗೆಯೇ ತಿಳಿಯಬೇಕು.

(೩) ದ್ವಾರಕಾಪೀಠಗುರುಪರಂಪರೆ

ಈ ಪೀಠದ ವಿಷಯವಾಗಿ ನಮಗೆ ತಿಳಿದಿರುವದು ಅತ್ಯಲ್ಪ. ಅಲ್ಲಿನ ಪೀಠಾಧಿಪತ್ಯಕ್ಕೆ ಅಧಿಕಾರಿಗಳು ಯಾರೆಂಬ ಬಗ್ಗೆ ವಿವಾದವುಂಟಾಗಿ ಕೊನೆಗೆ ಈಗಿರುವ ಶ್ರೀಮದಭಿನವಸಚ್ಚಿದಾನಂದತೀರ್ಥಸ್ವಾಮಿಗಳೇ ಅಧಿಕಾರಿಗಳೆಂದು ಸರಕಾರದವರಿಂದ ತೀರ್ಮಾನವಾದಂತೆ ಅವರೇ ಪೀಠಾದಿಷ್ಠಿತರಾಗಿ ಶಿಷ್ಯರುಗಳಿಗೆ ಧರ್ಮಜ್ಞಾನೋಪದೇಶವನ್ನು ಮಾಡುತ್ತಾ ಇರುತ್ತಾರೆ. ಕ್ರಿ. ಶ. 1957ರಲ್ಲಿ ಪೀಠದಿಂದ ಪ್ರಕಾಶಿತವಾಗಿರುವ ಗುರುಪರಂಪರೆಯ ಪಟ್ಟಿಯನ್ನೂ ಬಲದೇವ ಉಪಾಧ್ಯಾಯರ ಮತ್ತು ಬೋಡಸ್‌ರವರ ಪಟ್ಟಿಯಲ್ಲಿನ ವ್ಯತ್ಯಾಸಗಳನ್ನೂ ಈ ಕೆಳಗೆ ಕೊಟ್ಟಿದೆ :

		ಬಲ, ಉಪಾಧ್ಯಾಯ	
೧.	ಸುರೇಶ್ವರಾಚಾರ್ಯರು (ಯುಧಿ. ಶ)	೨೬೯೨	೨೬೯೧
೨.	ಚಿತ್ಸುಖಾಚಾರ್ಯರು	೨೭೧೫	
೩.	ಸರ್ವಜ್ಞಾನಾಚಾರ್ಯ	೨೭೭೪	
೪.	ಬ್ರಹ್ಮಾನಂದತೀರ್ಥ	೨೮೩೩	೨೮೨೩
೫.	ಸ್ವರೂಪಾಭಿಜ್ಞಾ(ನಾ)ಚಾರ್ಯ	೨೮೯೦	
೬.	ಮಂಗಲಮೂರ್ತ್ಯಾಚಾರ್ಯ	೨೯೪೨	
೭.	ಭಾಸ್ಕರಾಚಾರ್ಯ	೨೯೯೫	
೮.	ಪ್ರಜ್ಞಾನಾಚಾರ್ಯ	೩೦೦೮	
೯.	ಬ್ರಹ್ಮಜ್ಯೋತ್ಸ್ನಾಚಾರ್ಯ	೩೦೪೦	
೧೦.	ಆನಂದಾವಿರ್ಭಾವಾಚಾರ್ಯ	ವಿಕ್ರಮ ೦	

ಮಹಾದೇವ ರಾಜಾರಾಮ ಬೋಡಸ್

	ಶ್ರೀಶಂಕರಾಚಾರ್ಯ ಜನ್ಮ	೨೬೩೧
	ಸಂನ್ಯಾಸ	೨೬೩೯
	ನಿರ್ಯಾಣ	೨೬೬೩
೧.	ಬ್ರಹ್ಮಸ್ವರೂಪಾಚಾರ್ಯ	ಕ್ರಿ. ಪೂ. ೪೪೦
೨.	ಚಿತ್ಸುಖ	೪೧೬
೩.	ಬ್ರಹ್ಮಾನಂದತೀರ್ಥ	೩೫೭
೪.	ಸ್ವರೂಪಾಭಿಜ್ಞಾನ	೨೪೫
೫.	ಮಂಗಲಮೂರ್ತಿ	೧೯೩
೬.	ಭಾಸ್ಕರ	೧೪೦
೭,	ಪ್ರಜ್ಞಾನ	೧೩೭

		ಬಲ, ಉಪಾಧ್ಯಾಯ	ಬೋಡಸ್
೯. ಬ್ರಹ್ಮಜ್ಯೋತ್ಸ್ನಾ		೯೫	
೧೦. ಆನಂದಾವಿರ್ಭಾವ		ಸಂವತ್ ೨೫	

ಇಲ್ಲಿಂದ ಮುಂದಕ್ಕೆ ಇರುವ ವ್ಯತ್ಯಾಸಗಳನ್ನು ಪಕ್ಕದಲ್ಲಿ ತೋರಿಸಿದೆ.

೧೧. ಕಲಾನಿಧಿತೀರ್ಥ ವಿಕ್ರಮ	೮೨		೮೨
೧೨. ಚಿದ್ವಿಲಾಸಾಚಾರ್ಯ	೧೧೯		
೧೩. ವಿಭೂತ್ಯಾನನ್ದಾಚಾರ್ಯ	೧೫೪		
೧೪. ಸ್ಫೂರ್ತಿನಿಲಯ (ಪಾಡ)	೨೦೩		
೧೫. ವರತಂತುಪಾದ	೨೪೯	೨೫೯	
೧೬. ಯೋಗಾರೂಢಾಚಾರ್ಯ	೨೬೦	೩೬೦	೦೫೦
೧೭. ವಿಜಯಡಿಂಡಿಮಾಚಾರ್ಯ	೩೪೯		
೧೮. ವಿದ್ಯಾತೀರ್ಥ	೪೩೭		
೧೯. ಚಿಚ್ಛಕ್ತಿದೇಶಿಕ	೪೮೩	೪೩೮	
೨೦. ವಿಜ್ಞಾನೇಶ್ವರತೀರ್ಥ	೫೧೧		
೨೧. ಋತಂಭರಾಚಾರ್ಯ	೫೭೨		
೨೨. ಅಮರೇಶ್ವರಗುರು	೬೦೮		
೨೩. ಸರ್ವತೋಮುಖತೀರ್ಥ	೬೬೯		
೨೪. ಆನಂದದೇಶಿಕ	೭೨೧		ಸ್ವಾನಂದದೇಶಿಕ
೨೫. ಸಮಾಧಿರಸಿಕಾಚಾರ್ಯ	೭೯೯		
೨೬. ನಾರಾಯಣಾಶ್ರಮ	೮೩೬		
೨೭. ವೈಕುಣ್ಠಾಶ್ರಮ	೮೮೫		
೨೮. ವಿಕ್ರಮಾಶ್ರಮ	೯೧೧		ಶ್ರೀವಿಕ್ರಮಾಶ್ರಮ
೨೯. ನರಸಿಂಹಾಶ್ರಮ	೯೬೦		
೩೦. ತ್ರ್ಯಂಬಕಾಶ್ರಮ	೯೬೫		
೩೧. ವೈಷ್ಣವಾಶ್ರಮ	೧೦೦೧		ವಿಶ್ವಮಾಶ್ರಮ
೩೨. ಕೇಶವಾಶ್ರಮ	೧೦೬೦	೧೦೦೬	
೩೩. ಚಿದಂಬರಾಶ್ರಮ	೧೦೮೩		
೩೪. ಪದ್ಮನಾಭಾಶ್ರಮ	೧೧೦೯		
೩೫. ಮಹಾದೇವಾಶ್ರಮ	೧೧೮೪		
೩೬. ಸಚ್ಚಿದಾನಂದಾಶ್ರಮ	೧೨೦೭		
೩೭. ವಿದ್ಯಾಶಂಕರಾಶ್ರಮ	೧೨೬೫		
೩೮. ಅಭಿನವಸಚ್ಚಿದಾನಂದಾಶ್ರಮ	೧೨೯೩		

		ಬಲ.	ಉಪಾಧ್ಯಾಯ	ಬೋಡಸ್
೩೯.	ಶಶಿಶೇಖರಾಶ್ರಮ	೧೨೨೬	೧೩೨೬	೧೩೨೬
೪೦.	ವಾಸುದೇವಾಶ್ರಮ	೧೩೫೧	೧೩೬೨	೧೩೬೧
೪೧.	ಪುರುಷೋತ್ತಮಾಶ್ರಮ	೧೩೯೪		
೪೨.	ಜನಾರ್ದನಾಶ್ರಮ	೧೪೦೪		
೪೩.	ಹರಿಹರಾಶ್ರಮ	೧೪೧೧		
೪೪.	ಭವಾಶ್ರಮ	೧೪೨೧		
೪೫.	ಬ್ರಹ್ಮಾಶ್ರಮ	೧೪೩೬		
೪೬.	ವಾಮನಾಶ್ರಮ	೧೪೫೩		
೪೭.	ಸರ್ವಜ್ಞಾಶ್ರಮ	೧೪೪೯		
೪೮.	ಪ್ರದ್ಯುಮ್ನಾಶ್ರಮ	೧೪೯೫		
೪೯.	ಗೋವಿಂದಾಶ್ರಮ	೧೫೨೩		
೫೦.	ಚಿದಾಶ್ರಮ	೧೫೩೬		
೫೧.	ವಿಶ್ವೇಶ್ವರಾಶ್ರಮ	೧೬೦೪		
೫೨.	ದಾಮೋದರಾಶ್ರಮ	೧೬೧೫		
೫೩.	ಮಹಾದೇವಾಶ್ರಮ	೧೬೧೬		
೫೪.	ಅನಿರುದ್ಧಾಶ್ರಮ	೧೬೨೫		
೫೫.	ಅಚ್ಯುತಾಶ್ರಮ	೧೬೨೯		
೫೬.	ಮಾಧವಾಶ್ರಮ	೧೬೬೫		೧೬೮೫
೫೭.	ಅನಂತಾಶ್ರಮ	೧೭೧೬		
೫೮.	ವಿಶ್ವರೂಪಾಶ್ರಮ	೧೭೨೧		
೫೯.	ಚಿದ್ಘನಾಶ್ರಮ	೧೭೨೬		
೬೦.	ನೃಸಿಂಹಾಶ್ರಮ	೧೭೩೫		
೬೧.	ಮನೋಹರಾಶ್ರಮ	೧೭೬೧		
೬೨.	ಪ್ರಕಾಶಾನಂದಸರಸ್ವತೀ	೧೭೯೫		
೬೩.	ವಿಶುದ್ಧಾಶ್ರಮ	೧೬೯೯		ವಿಶುದ್ಧಾನಂದಾಶ್ರಮ
೬೪.	ವಾಮನೇಂದ್ರ	೧೮೩೧		ವಾಮನೇಶ
೬೫.	ಕೇಶವಾಶ್ರಮ	೧೮೨೪		
೬೬.	ಮಧುಸೂದನಾಶ್ರಮ	೧೮೪೯		
೬೭.	ಹಯಗ್ರೀವಾಶ್ರಮ	೧೮೬೨		
೬೮.	ಪ್ರಕಾಶಾಶ್ರಮ	೧೮೬೩		
೬೯.	ಹಯಗ್ರೀವಾನಂದಸರಸ್ವತೀ	೧೮೭೪		

	ಬಲ. ಉಪಾಧ್ಯಾಯ	ಬೋಡಸ್
೭೦. ಶ್ರಿಧರಾಶ್ರಮ	೧೯೧೪	
೭೧. ದಾಮೋದರಾಶ್ರಮ	೧೯೨೪	
೭೨. ಕೇಶವಾಶ್ರಮ	೧೯೩೫	
೭೩. ರಾಜರಾಜೇಶ್ವರ (ಶಂಕರಾಶ್ರಮ)	೧೯೫೬	೧೯೫೭
೭೪. ಮಾಧವತೀರ್ಥ	೧೯೭೨	೧೯೭೦
೭೫. ಶಾಂತ್ಯಾನಂದಸರಸ್ವತೀ*	೧೯೮೧	೧೯೭೬
೭೬. ಚಂದ್ರಶೇಖರಾಶ್ರಮ	೨೦೦೦	

೭೭. ಶ್ರೀಮದಭಿನವಸಚ್ಚಿದಾನಂದತೀರ್ಥಸ್ವಾಮಿಗಳು ಈಗ ಇರುವವರು.

೧. ಮೇಲೆ ಕೊಟ್ಟಿರುವ ಪಟ್ಟಿಗಳಲ್ಲಿ ಒಂದೆರಡು ಕಡೆ ಹೊರತು ಮಿಕ್ಕ ಕಡೆಗಳಲ್ಲಿ ಕಾಲಗಳೆಲ್ಲ ಮೂರು ಪಟ್ಟಿಗಳಲ್ಲಿಯೂ ಸರಿಹೋಗಿವೆ. ದ್ವಾರಕೆ ಮತ್ತು ಕಾಂಚಿ ಇವೆರಡು ಪಟ್ಟಿಗಳಲ್ಲಿಯೂ ಶಂಕರಾಚಾರ್ಯರಿಗೆ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಕಾಲವನ್ನು ಎಂದರೆ ಕ್ರಿ.ಪೂ. ೫ನೆಯ ಶತಮಾನವನ್ನು ಕೊಟ್ಟಿರುತ್ತದೆ; ಇವೆರಡರಲ್ಲಿಯೂ ಮೊದಮೊದಲಿನ ಗುರುಗಳಿಗೆ ಹೆಚ್ಚಿನ ಕಾಲಾವಧಿಯನ್ನೂ ಇತ್ತೀಚಿನ ಗುರುಗಳಿಗೆ ಒಪ್ಪುವ ಕಾಲವನ್ನೂ ಬರೆದಿರುತ್ತದೆ. ಎರಡು ಮಠಗಳಲ್ಲಿಯೂ ಒಂದೇ ಕಾಲಾವಧಿಗೆ ಅಷ್ಟೇ ಸಂಖ್ಯೆಯ ಪೀಠಾಧ್ಯಕ್ಷರನ್ನು ಕೊಟ್ಟಿರುತ್ತದೆ ಎಂಬುದು ಕಾಂಚೀಮಠದ ಪಟ್ಟಿಗೆ ಪುಷ್ಟಿಯನ್ನು ಕೊಡುತ್ತದೆ ಎಂದು ಎನ್. ವೆಂಕಟರಾಮನ್ನರು (NVSK p. 13–14) ಬರೆದಿರುತ್ತಾರೆ. ಆದರೆ ಕಾಂಚೀಕಾಲಾವಧಿಯ ವಿಷಯಕ್ಕೇ ವಿವಾದವಿರುವದರಿಂದ ಈ ಹೇಳಿಕೆಯಿಂದ ನಮಗೆ ಹೆಚ್ಚಿನ ವಿಷಯವೇನೂ ಸಿಕ್ಕಿದಂತೆ ಆಗಿಲ್ಲ.

೨. ಎನ್. ವೆಂಕಟರಾಮನ್, ಬಲದೇವ ಉಪಾಧ್ಯಾಯ– ಇವರಿಬ್ಬರೂ ಬರೆದಿರುವಂತೆ ದ್ವಾರಕೆಯ ಪೀಠಾಧಿಪತಿಗಳ ವಿಷಯಕ್ಕೆ ಐತಿಹಾಸಿಕಘಟನೆಗಳು ಯಾವವೂ ದೊರೆತಿಲ್ಲ.

೩. ಈ ಪಟ್ಟಿಯಲ್ಲಿ ಸುರೇಶ್ವರರನ್ನು ಸೇರಿಸಿರುವದನ್ನು ಲಕ್ಷಿಸಬೇಕು. ಅವರಿಗೆ ಯುಧಿಷ್ಠಿರಶಕ ೩೬೪೯ರಲ್ಲಿ ಮಾಘ ಶುಕ್ಲ ೭ರಲ್ಲಿ ಶಾರದಾಪೀಠಕ್ಕೆ ಅಧ್ಯಕ್ಷರಾಗಿ ಅಭಿಷೇಕವಾಯಿತೆಂದು ಈ ಪುಸ್ತಿಕೆಯಲ್ಲಿದೆ. ಈ ಪೀಠಕ್ಕೆ ಹಸ್ತಾಮಲಕರು ಆಚಾರ್ಯರೆಂದು ಎರಡು ಕಡೆಗಳಲ್ಲಿ (ಬಲ. ಶಂ. ಪು. ೧೬೭, ೧೭೭) ಬರೆದಿರುವ ಬಲದೇವ ಉಪಾಧ್ಯಾಯರು ಶಾರದಾಪೀಠಕ್ಕೆ ಮೊದಲನೆಯ ಆಚಾರ್ಯರು ಸುರೇಶ್ವರಾಚಾರ್ಯರೆಂದೇ ಬರೆದುಕೊಂಡಿರುತ್ತಾರೆ (ಪು. ೧೭೭).

---

* ಬಲದೇವ ಉಪಾಧ್ಯಾಯರ ಮತ್ತು ಬೋಡಸ್‌ರವರ ಪಟ್ಟಿ ಇಲ್ಲಿಗೆ ನಿಂತಿದೆ.

೪. ಮಠಾಮ್ನಾಯದಲ್ಲಿ 'ಭದ್ರಕಾಲೀ'ದೇವಿ ಎಂದಿದ್ದರೂ ಈ ಪೀಠಕ್ಕೆ ಶಾರದಾಪೀಠವೆಂಬ ಹೆಸರು ಹೇಗೆ ಬಂದಿತೆಂಬುದು ವಿಚಾರಣೀಯವಾಗಿದೆ ಶಾರದಾಪ್ರತಿಷ್ಠೆಯನ್ನು ಯುಧಿಷ್ಠಿರ ಶಕೆ ೨೬೪೪ ಯಲ್ಲಿಯೇ ಮಾಡಲಾಯಿತೆಂದು (ಪು. ೪೦೪ ನೋಡಿ) ದ್ವಾರಕೆಯವರ ಸಂಪ್ರದಾಯವಿದ್ದರೂ 'ಭದ್ರಕಾಲಿ' ಎಂಬ ದೇವಿಗೇ ಪ್ರಾಶಸ್ತ್ಯವೇಕೆ ? ಮಠಾಮ್ನಾಯಸೇತುವಿನಲ್ಲಿ 'ಕಾಲಿಕಾಪೀಠಶಾಸನೇ' ಎಂದಿರುವದು ದ್ವಾರಕೆಗೆ ಒಪ್ಪಾದ ಮಹಾನುಶಾಸನದಲ್ಲಿ ಪೂತ್ರ 'ಶಾರದಾಪೀಠ ಸಾತ್ಯತಾಃ' ಎಂದು ಆಗಿದೆ. ಆದರೂ ದ್ವಾರಕಾಸಂಕ್ಷಿಪ್ತ ಇತಿಹಾಸದಲ್ಲಿ 'ಭದ್ರ ಕಾಲೀ' ಎಂದಿದೆ, ಶಾರದಾದೇವಿಯ ಹೆಸರಿಲ್ಲ. ಬಲದೇವ ಉಪಾಧ್ಯಾಯರು (ಪು.೩೦೫)ರಲ್ಲಿ ಆಚಾರ್ಯರು ವಿಶ್ವರೂಪರೆಂದು ಬರೆದಿದಾರೆ. 'ದ್ವಾರಕಾಸಂಸ್ಥಾ ನದ ಸಂಕ್ಷಿಪ್ತ ಇತಿಹಾಸ' ಎಂಬ ಪುಸ್ತಿಕೆಯಲ್ಲಿರುವ ಮಠಾಮ್ನಾಯದಲ್ಲಿ 'ಸ್ವರೂಪ ಬ್ರಹ್ಮಚಾರ್ಯಾಖ್ಯ ಆಚಾರ್ಯಃ ಪದ್ಮಪಾದಕಃ' (ಪು.೪೪) ಎಂದೇ ಇದೆ. ಹೀಗೆಯೇ ಕಾಂಚಿಯಲ್ಲಿ ಕಾಮಾಕ್ಷಿದೇವಿಗೆ ಹೆಚ್ಚಿನ ಪ್ರಾಶಸ್ತ್ಯವಿರುವದು ಯುಕ್ತ ವಾದರೂ ತಮ್ಮದು ಶಾರದಾಪೀಠವೆಂದೇ ಕಾಂಚಿಯವರು ಹೇಳಿಕೊಳ್ಳುತ್ತಿದಾರೆ. ಶೃಂಗೇರಿಯಲ್ಲಿ ಶಾರದಾಪ್ರತಿಷ್ಠೆಯಾಯಿತೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇದರ ಗುಟ್ಟೇನೆಂಬುದೂ ಶೋಧಿಸತಕ್ಕದ್ದಾಗಿದೆ.

ದ್ವಾರಕಾಗುರುಪರಂಪರೆ (೨ನೆಯ ಪಟ್ಟಿ)

(ಸಂಕ್ಷಿಪ್ತ ಇತಿಹಾಸದ ಪುಟ ೫೨)

ಇದರಲ್ಲಿ ಈ ಆಚಾರ್ಯರ ಹೆಸರುಗಳಿವೆ :

ಶ್ರೀಶಂಕರಾಚಾರ್ಯರು. ೧. ಶ್ರೀಪದ್ಮಪಾದಾಚಾರ್ಯರು. ೨. ವಿಷ್ಣು ಸ್ವಾಮಿತೀರ್ಥರು. ೩. ಬ್ರಹ್ಮಾನಂದತೀರ್ಥರು. ೪. ಕೃಷ್ಣಾನಂದತೀರ್ಥರು. ೫. ಕೈವಲ್ಯಾನಂದತೀರ್ಥರು. ೬. ವಿಜ್ಞಾನಾನಂದತೀರ್ಥರು. ೭. ಸದಾನಂದ ತೀರ್ಥರು. ೮. ಕೃಷ್ಣಾನಂದ ಯೋಗೀಂದ್ರತೀರ್ಥರು. ೯. ಶಿವಾನಂದತೀರ್ಥರು. ೧೦. ಸದಾನಂದತೀರ್ಥರು (೨). ೧೧. ಸಚ್ಚಿದಾನಂದತೀರ್ಥರು. ೧೨. ಕೃಷ್ಣ ಯೋಗೀಂದ್ರತೀರ್ಥರು ೧೩. ಸದಾಶಿವಾನಂದತೀರ್ಥರು. ೧೪. ಸಚ್ಚಿದಾನಂದ ತೀರ್ಥರು (೨). ೧೫. ಅಭಿನವಯೋಗೀಂದ್ರತೀರ್ಥರು. ೧೬. ಸದಾನಂದ ತೀರ್ಥರು (೩). ೧೭. ಕೃಷ್ಣಾನಂದತೀರ್ಥರು (೨). ೧೮. ಸಚ್ಚಿದಾನಂದ ತೀರ್ಥರು (೩). ೧೯. ಸದಾನಂದತೀರ್ಥರು (೪). ೨೦. ಕೃಷ್ಣಾನಂದತೀರ್ಥರು (೩) ೨೧. ಸಚ್ಚಿದಾನಂದತೀರ್ಥರು (೪). ೨೨. ಕೃಷ್ಣಾನಂದತೀರ್ಥರು (೪). ೨೩. ಸಚ್ಚಿದಾನಂದತೀರ್ಥರು (೫). ೨೪. ಕೈವಲ್ಯಾನಂದತೀರ್ಥರು. (೨) ೨೫. ಕೃಷ್ಣಾನಂದತೀರ್ಥರು (೫). ೨೬. ಸದಾನಂದತೀರ್ಥರು (೫) ೨೭. ಸಚ್ಚಿದಾನಂದ ತೀರ್ಥರು (೬). ೨೮. ಅಗ್ನಿಮೂರ್ಧಕೃಷ್ಣಾನಂದತೀರ್ಥರು. ೨೯. ಸಚ್ಚಿದಾ

ನಂದತೀರ್ಥರು (೭). ೩೦. ಅಭಿನವ ಕೃಷ್ಣಾನಂದತೀರ್ಥರು. ೩೧ ಅಭಿನವ ಸದಾನಂದತೀರ್ಥರು. ೩೨. ಅಭಿನವ ಕೃಷ್ಣಾನಂದತೀರ್ಥರು (೨). ೩೩. ಅಭಿನವ ಸದಾನಂದತೀರ್ಥರು (೨) ೩೪ ಅಭಿನವ ಕೃಷ್ಣಾನಂದತೀರ್ಥರು (೩) ೩೫. ಶ್ರೀಮದಭಿನವ ಸಚ್ಚಿದಾನಂದತೀರ್ಥಸ್ವಾಮಿಗಳವರು.

ಈ ಪಟ್ಟಿಯಲ್ಲಿ ಲಕ್ಷಿಸತಕ್ಕ ವಿಷಯಗಳೇನೆಂದರೆ :

(೧) ಮೇಲೆ ನಾವು ಕೊಟ್ಟಿರುವ ಪಟ್ಟಿಗೂ ಈ ಪಟ್ಟಿಗೂ ಆಚಾರ್ಯರ ಸಂಖ್ಯೆ ಅಥವಾ ಹೆಸರುಗಳಲ್ಲಿ ಹೊಂದಿಕೆಯೇ ಇಲ್ಲ. ೨. ಈ ಪಟ್ಟಿಯಲ್ಲಿ 'ತೀರ್ಥ' ಎಂಬ ಯೋಗಪಟ್ಟಕ್ಕೆ ಪ್ರಾಚುರ್ಯವಿದೆ, ಪದ್ಮಪಾದಾಚಾರ್ಯರನು ಸುರೇಶ್ವರರ ಸ್ಥಾನದಲ್ಲಿಟ್ಟಿದೆ.

ದ್ವಾರಕಾಮಠದ ವಿಷಯಕ್ಕೆ ನಮಗೆ ಯಾವ ಐತಿಹಾಸಿಕವಿಷಯಗಳೂ ತಿಳಿದಿಲ್ಲ. ಆದರೆ ಈಗಿನ ಪೀಠಾಧಿಪತಿಗಳಾಗಿರುವ ಶ್ರೀಮದಭಿನವಸಚ್ಚಿದಾನಂದ ತೀರ್ಥಸ್ವಾಮಿಗಳವರಿಗಿಂತ ಹಿಂದೆ ಮೈಸೂರು ಪ್ರಾಂತದಲ್ಲಿದ್ದ ಕೆಲವರು ಗುರು ಗಳ ಚರಿತ್ರೆಯ ಘಟನೆಗಳನ್ನು 'ಶ್ರೀದ್ವಾರಕಾಜಗದ್ಗುರು ಸಂಸ್ಥಾನದ ಸಂಕ್ಷಪ್ತ ಇತಿಹಾಸ' ಎಂಬ ಪುಸ್ತಿಕೆಯಿಂದ ಸಂಗ್ರಹಿಸಿದೆ.

೧. 'ಪವಿತ್ರದ್ವಾರಕಾಪೀಠದಲ್ಲಿ ಶ್ರೀಮತ್ಪದ್ಮಪಾದಾಚಾರ್ಯರಿಂದಾ ರಂಭಿಸಿ ಕ್ರಮವಾಗಿ ಶಿಷ್ಯಪರಂಪರೆಯು ನಡೆದುಬರುತ್ತಿರಲು ಶಾಲಿವಾಹನಶಕ ೧೪೦೦ ವರ್ಷಗಳ ಸುಮಾರಿನಲ್ಲಿ ಯವನರ ಉಪಟಳವು ಬಲುಹೆಚ್ಚಿ ಇನ್ನಲ್ಲಿ ವಾಸಿಸಲು ಸಾಧ್ಯವಿಲ್ಲವೆಂಬಷ್ಟು ಬಹಳ ತೊಂದರೆಯಾದಾಗ ಆಗಿನ ಗುರುಗಳಾದ ಶ್ರೀಕೃಷ್ಣಾನಂದತೀರ್ಥಸ್ವಾಮಿಗಳವರು ದ್ವಾರಕೆಯನ್ನು ಬಿಟ್ಟು ಇತ್ತ ದಕ್ಷಿಣದೇಶಕ್ಕೆ ಬಂದು ವಿಜಯನಗರದರಸರಿಂದ ಸನ್ಮಾನಿತರಾದರಲ್ಲದೆ ಅರಸರ ಆದರ ಸತ್ಕಾರಗಳಿಂದ ಸಂತುಷ್ಟರಾಗಿ ಮುಳುಬಾಗಿಲಿನಲ್ಲಿ ಮಠವನ್ನು ಸ್ಥಾಪಿಸಿ ಕೊಂಡು ಅಲ್ಲಿಯೇ ತಪಸ್ಸ್ವಾಧ್ಯಾಯನಿರತರಾಗಿ ನಿಂತರು. ಶ್ರೀಕೃಷ್ಣಾನಂದ ಸ್ವಾಮಿಗಳವರಿಂದ ಪ್ರತಿಷ್ಠಿತವಾದ್ದರಿಂದ ಆ ಮಠಕ್ಕೆ ಶ್ರೀಕೃಷ್ಣಾನಂದಮಠ ವೆಂದು ಪ್ರಸಿದ್ಧಿಯುಂಟಾಯಿತು.' (ಇತಿ. ೯–೯).

[ಟಿಪ್ಪಣಿಯಲ್ಲಿ ,ಶಕೆ ೧೪೬೯ನೆಯ ಪರಾಭವಸಂವತ್ಸರದ ಮಾಘ ಬಹುಳ ಪಂಚಮಿ (ಕ್ರಿಸ್ತಾಬ್ದ 1547)ರಲ್ಲಿ ಮುಳುಬಾಗಿಲು ತಾಲೂಕಿನೊಳಗಿನ ಪಾಯುಸಂಕಿಳ್ಳಿಗ್ರಾಮ ಮುಂತಾದ ಏಳೂವರೆಗ್ರಾಮಗಳನ್ನು ಶ್ರೀಕೃಷ್ಣಾನಂದಸ್ವಾಮಿಗಳವರ ಮಠಕ್ಕೆ ಶಿಷ್ಯ ಪ್ರಶಿಷ್ಯಪಾರಂಪರ್ಯವಾಗಿ ಅನ್ನಛತ್ರದೀಪಾರಾಧನೆ ಸಕಲಧರ್ಮದ ಬಗ್ಗೆ ಸಹಿರಣ್ಯೋ ದಕದಾನವಾಗಿ ಕೊಟ್ಟಿರುವಂತೆ ಶಾಸನವಿದೆ'–ಎಂತ ಬರೆದಿದೆ, ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕಿನಲ್ಲಿ ಶ್ರೀಕೃಷ್ಣಾನಂದಮಠದ ಹತ್ತಿರವಿರುವ ವಿಠ್ಠಲಸ್ವಾಮಿ ದೇವಸ್ಥಾನದ ಮುಂದೆ ಈ ಶಾಸನವಿದೆಯಂತೆ.]

೨. ಇವರ ಬಳಿಕ ಸೆದಾನಂದತೀರ್ಥಸ್ವಾಮಿಗಳು, ಬಳಿಕ ಸಚ್ಚಿದಾನಂದ ತೀರ್ಥಸ್ವಾಮಿಗಳು ಪೀಠಕ್ಕೆ ಬಂದರು. ಮೂರನೆಯವರು ಶ್ರೀ ಅಗ್ನಿಮೂರ್ಧ ಕೃಷ್ಣಾನಂದತೀರ್ಥಸ್ವಾಮಿಯವರು ; 'ಇವರಿಗೆ ಸಿಟ್ಟುಬಂದಾಗ ಶಿರಸ್ಸಿನಿಂದ ಬೆಂಕಿಕಿಡಿಗಳು ಹಾರುತ್ತಿದ್ದುದರಿಂದ ಅಗ್ನಿಮೂರ್ಧ ಎಂಬ ಉಪನಾಮವು ಬಂದಿದ್ದಿತು' (ಪು. ೯).

೩. ಶಾಲಿವಾಹನ ೧೫೮೯ರಲ್ಲಿ ಸಚ್ಚಿದಾನಂದತೀರ್ಥಸ್ವಾಮಿಗಳು ಭದ್ರಸಮುದ್ರ ಅಗ್ರಹಾರದ ಬ್ರಾಹ್ಮಣರಿಗೆ ಕೊಟ್ಟ ಒಂದು ತಾಮ್ರಶಾಸನದಲ್ಲಿ "ಶ್ರೀ ಅಗ್ನಿಮೂರ್ಧ ಕೃಷ್ಣಾನಂದತೀರ್ಥಸ್ವಾಮಿಗಳವರಿಗೆ 'ಶಿವ ವೆಂಕಟೇಂದ್ರ ರಚಿತಾನೇಕಾರ್ಹಣೇಷು" ಎಂಬುದೊಂದು ವಿಶೇಷಣವು ಕೊಡಲ್ಪಟ್ಟಿದೆ. ಇದರಿಂದ ನಗರದ ಶಿವಪ್ಪನಾಯಕನು ಅಗ್ನಿಮೂರ್ಧಕೃಷ್ಣಾನಂದತೀರ್ಥಸ್ವಾಮಿಗಳನ್ನು ಸತ್ಕರಿಸಿದಂತೆ ಕಾಣುತ್ತದೆ (ಪು. ೧೦). ಇದೇ ಸ್ವಾಮಿಗಳಿಗೆ ಮಠ ಧರ್ಮಕ್ಕಾಗಿ ಶಾಲಿವಾಹನ ೧೫೮೩ನೆ ಶಾರ್ವರಿಸಂವತ್ಸರದಲ್ಲಿ ಕೆಳದಿ ಶಿವಪ್ಪನಾಯಕರ ತಮ್ಮ ವೆಂಕಟಪ್ಪನಾಯಕರೂ ಶಾಲಿವಾಹನಶಕ ೧೫೮೪ನೆ ಪ್ಲವ ಸಂವತ್ಸರದಲ್ಲಿ ಶಿವಪ್ಪನಾಯಕರ ತಮ್ಮ ಭದ್ರಪ್ಪನಾಯಕರೂ ಇನಾಮುಗ್ರಾಮುಗಳನ್ನು ಕೊಟ್ಟಿರುವದಕ್ಕೆ ತಾಮ್ರಶಾಸನಗಳಿವೆ. ಶಾಲಿವಾಹನ ೧೫೮೨ರಲ್ಲಿ ವಿಜಯನಗರದ ಅರನೆ ಶ್ರೀರಂಗರಾಯರು ಬೇಲೂರಿಗೆ ಒಂದೆರಡು ಮೈಲು ದೂರವಿರುವ ರಣಗಟ್ಟಿ- ಹಾರೋನಹಳ್ಳಿ ಸೂರಾಪುರ– ಎಂಬ ಗ್ರಾಮಗಳನ್ನು ಇವರಿಗೆ ಇನಾಮಾಗಿ ಕೊಟ್ಟಿದ್ದರೆಂದು ಆ ಗ್ರಾಮಗಳಲ್ಲಿ ಶಿಲಾಶಾಸನಗಳಿವೆ. ಇದರಿಂದ ಶಾಲಿವಾಹನ ೧೫೭೫ (ಕ್ರಿಸ್ತಾಬ್ದ 1653) ಸುಮಾರಿನಲ್ಲಿ ಶ್ರೀಸಂಸ್ಥಾನವು ಕೋಲಾರ ಮುಳುಬಾಗಿಲಿನಿಂದ ತೀರ್ಥಹಳ್ಳಿ ತಾಲ್ಲೂಕಿಗೆ ಬಂತೆಂದು ಊಹಿಸಬಹುದಾಗಿದೆ–ಎಂದು ಇತಿಹಾಸ (ಪು. ೧೦).

೪. ಕೆಳದಿರಾಜನು ತೀರ್ಥರಾಜಪುರದ (ತೀರ್ಥಹಳ್ಳಿ) ಹತ್ತಿರ ಭದ್ರಸಮುದ್ರ ಅಗ್ರಹಾರದಲ್ಲಿ ತುಂಗಾನದಿಯ ದಡದಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟು ಸಂಸ್ಥಾನದ ಖರ್ಚಿಗಾಗಿ ಭೂದಾನಶಾಸನಗಳನ್ನಿತ್ತನು. ಈ ಊರಿಗೂ ಅಂದಿನಿಂದ ಮುಳುಬಾಗಿಲು ಎಂದೇ ಹೆಸರುಳಿಯಿತು (ಪು. ೧೧) ಸ್ವಾಮಿಗಳು ಗಜಾರಣ್ಯಕ್ಷೇತ್ರವಾದ ತಲಕಾಡಿನಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಅಲ್ಲಿಯೂ ಒಂದು ಭಾಗವತಸಂಪ್ರದಾಯದ ಮಠವಿದೆ. ಅದಕ್ಕೆ 'ಬಾಲಕೃಷ್ಣಾನಂದ ಮಠ'ವೆಂದು ಹೆಸರು. (ಪು. ೧೨).

೫. ಅಭಿನವಕೃಷ್ಣಾನಂದತೀರ್ಥರು (ಗು. ಸಂ. ೩೦) ಉತ್ತರದೇಶದಲ್ಲೆಲ್ಲ ಸಂಚಾರಮಾಡಿ ಮಠದ ಕೀರ್ತಿಯನ್ನು ಹೆಚ್ಚಿಸಿದರು (ಪು. ೧೪).

೬. **ಅಭಿನವಸದಾನಂದತೀರ್ಥರು** ಶಾಲಿವಾಹನ ೧೭೫೫ರಲ್ಲಿ ಸಂಚಾರ ಕ್ರಮದಿಂದ ಗುಜರಾತಿಗೆ ಹೋಗಲಾಗಿ ಅಲ್ಲಿ ಇವರೇ ನಿಜವಾಗಿ ದ್ವಾರಕಾಪೀಠಕ್ಕೆ ಹಕ್ಕುದಾರರೆಂದು ಮಹಾಜನರಿಂದ ನಿರ್ಣಯವಾಯಿತು (ಪು. ೧೬).

೭. **ಅಭಿನವಕೃಷ್ಣಾನಂದತೀರ್ಥರು** (ಗು. ಸಂ. ೩೪) ಕ್ರಿ. ಶ. 1894ರಲ್ಲಿ ಸಂನ್ಯಾಸವನ್ನು ಸ್ವೀಕರಿಸಿದರು. ಇವರು ಭರತಖಂಡವಲ್ಲೆಲ್ಲ ಸಂಚಾರಮಾಡಿ ಪ್ರಸಿದ್ಧರಾದರು (ಪು. ೧೬–೧೪).

ಈಗ **ಶ್ರೀಮದಭಿನವಸಚ್ಚಿದಾನಂದತೀರ್ಥಸ್ವಾಮಿಗಳವರು** ದ್ವಾರಕಾ ಪೀಠಾಧಿಷ್ಠಿತರಾಗಿರುತ್ತಾರೆ. ಈ ಮೇಲಿನ ಚರಿತ್ರೆಯ ಭಾಗವನ್ನು ದ್ವಾರಕಾ ಮಠಕ್ಕೆ ಸಂಬಂಧಿಸಿದ್ದನೆಂಬ ಕಾರಣದಿಂದ ಇಲ್ಲಿ ಸಂಗ್ರಹಿಸಿಕೊಡಲಾಗಿದೆ.

(೪) ಗೋವರ್ಧನಮಠ

ಈ ಪೀಠದ ಚರಿತ್ರೆಯೇನೂ ನಮಗೆ ತಿಳಿದಿಲ್ಲ. ಇದು ಜಗನ್ನಾಥಪುರಿಯಲ್ಲಿದೆ. **ಬಲದೇವ ಉಪಾಧ್ಯಾಯರು ಕೊಟ್ಟಿರುವ** (ಪು. ೧೪೧)ಶ್ಲೋಕಬದ್ಧವಾಗಿರುವ ಗುರುಪರಂಪರೆಯನ್ನು ಈ ಕೆಳಗೆ ಕೊಟ್ಟಿರುತ್ತೇವೆ. ಟಿಪ್ಪಣಿಯಲ್ಲಿ ಜೋಡಸ್‌ರವರ ಪಟ್ಟಿಯಲ್ಲಿ ಕಾಣುವ ಹೆಚ್ಚುಕಡಿಮೆಗಳನ್ನು ತೋರಿಸಬೇಕೆಂದಿದ್ದೆವು. ಬರಿಯ ಹೆಸರುಗಳೇ ಆಗಿರುವದರಿಂದ ವಾಚಕರಿಗೆ ಪ್ರಯೋಜನವೇನೂ ಆಗಲಾರದೆಂದು ಬರೆಯಲಿಲ್ಲ.

[ಮಾಧವಸ್ಯ ಸುತಃ ಶ್ರೀಮಾನ್ ಸನನ್ದನ ಇತಿ ಶ್ರುತಃ ।
ಪ್ರಕಾಶಬ್ರಹ್ಮಚಾರೀ ಚ ಋಗ್ವೇದಿಃ ಸರ್ವಶಾಸ್ತ್ರವಿತ್ ॥ ೧೭ ॥
ಶ್ರೀಪದ್ಮಪಾದಃ ಪ್ರಥಮಾಚಾರ್ಯಸ್ತ್ವೇನಾಭ್ಯಷಿಚ್ಯತ ।
ಶ್ರಿಮತ್ಪರಮಹಂಸಾದಿಬಿರುದೈರಖಿಲೈಃ ಸಹ ॥ ೧೮ ॥
ಅಜ್ಞವಜ್ಞಕಲಿಜ್ಞಾಶ್ಚ ಮಗಧೋತ್ಕಲಬರ್ಬರಾಃ ।
ಗೋವರ್ಧನಮಠಾಧೀನಾಃ ಕೃತಾಃ ಪ್ರಾಚೀವ್ಯವಸ್ಥಿತಾಃ ॥ ೧೯ ॥
ತಸ್ಮಿನ್ ಗೋವರ್ಧನಮಠೇ ಶಙ್ಕರಾಚಾರ್ಯಪೀಠಗಾನ್ ।
ಜಗದ್ಗುರೂನ್ ಕ್ರಮಾದ್ ವಕ್ಷ್ಯೇ ಜನ್ಮಮೃತ್ಯುನಿವೃತ್ತಯೇ ॥ ೨೦ ॥]
ಪದ್ಮಪಾದಃ ಶೂಲಪಾಣಿಸ್ತತೋ ನಾರಾಯಣಾಭಿಧಃ ।
ವಿದ್ಯಾರಣ್ಯೋ ವಾಮದೇವಃ ಪದ್ಮನಾಭಾಭಿಧಸ್ತತಃ ॥ ೨೧ ॥
ಜಗನ್ನಾಥಃ ಸಪ್ತಮಃ ಸ್ಯಾದಷ್ಟಮೋ ಮಧುರೇಶ್ವರಃ ।
ಗೋವಿನ್ದಃ ಶ್ರೀಧರಸ್ವಾಮೀ ಮಾಧವಾನನ್ದ ಏವ ಚ ॥ ೨೨ ॥
ಕೃಷ್ಣಬ್ರಹ್ಮಾನನ್ದನಾಮಾ ರಾಮಾನನ್ದಾಭಿಧಸ್ತತಃ ।
ವಾಗೀಶ್ವರಃ ಶ್ರೀಪರಮೇಶ್ವರೋ ಗೋಪಾಲನಾಮಕಃ ॥ ೨೩ ॥

ಜನಾರ್ದನೆಸ್ತಥಾ ಜ್ಞಾನಾನನ್ದಶ್ಚಾಷ್ಟಾದಶಃ ಸ್ಮೃತಃ ।
ಮಧ್ಯಕಾಲೇ ಸ್ಥಿತಾನೇತಾನಾಚಾರ್ಯಾಖ್ಯಾನ್ ನಮಾಮ್ಯಹಮ್ ॥ ೨೪ ॥
ಅಥ ತೀರ್ಥಾಭಿಧಾನ್ ಶ್ರೀಮದ್ಗೋವರ್ಧನಮಠೇ ಸ್ಥಿತಾನ್ ।
ಅಸ್ಮದಾಚಾರ್ಯಪರ್ಯನ್ತಾನ್ ಗುರೂನ್ನಾಮ್ನಾ ಸ್ಮರಾಮ್ಯಹಮ್ ॥ ೨೫ ॥
ಏಕೋನವಿಂಶ ಆಚಾರ್ಯೋ ಬೃಹದಾರಣ್ಯತೀರ್ಥಕಃ ।
ಮಹಾದೇವೋಽಥ ಪರಮಬ್ರಹ್ಮಾನನ್ದಸ್ತತಃ ಸ್ಮೃತಃ ॥ ೨೬ ॥
ರಾಮಾನನ್ದಸ್ತತೋ ಜ್ಞೇಯಸ್ತ್ರಯೋವಿಂಶಃ ಸದಾಶಿವಃ ।
ಹರೀಶ್ವರಾನನ್ದತೀರ್ಥೋ ಬೋಧಾನನ್ದಸ್ತತಃ ಪರಮ್ ॥ ೨೭ ॥
ಶ್ರೀರಮಾಕೃಷ್ಣತೀರ್ಥೋಽಥ ಚಿದ್ಭೋಧಾತ್ಮಾಭಿಧಸ್ತತಃ ।
ತತ್ತ್ವಾಕ್ಷರಮುನಿಃ ಪಶ್ಚಾದೂನತ್ರಿಂಶಸ್ತು ಶಙ್ಕರಃ ॥ ೨೮ ॥
ಶ್ರೀವಾಸುದೇವತೀರ್ಥಶ್ಚ ಹಯಗ್ರೀವ ಶ್ರುತೀಶ್ವರಃ ।
ವಿದ್ಯಾನನ್ದಸ್ತ್ರಯಸ್ತ್ರಿಂಶೋ ಮುಕುನ್ದಾನನ್ದ ಏವ ಚ ॥ ೨೯ ॥
ಹಿರಣ್ಯಗರ್ಭತೀರ್ಥಶ್ಚ ನಿತ್ಯಾನನ್ದಸ್ತತಃ ಪರಮ್ ।
ಸಪ್ತತ್ರಿಂಶಃ ಶಿವಾನನ್ದೋ ಯೋಗೀಶ್ವರಸುದರ್ಶನೌ ॥ ೩೦ ॥
ಅಥ ಶ್ರೀವ್ಯೋಮಕೇಶಾಖ್ಯೋ ಜ್ಞೇಯೋ ದಾಮೋದರಸ್ತತಃ ।
ಯೋಗಾನನ್ದಾಭಿಧಸ್ತೀರ್ಥೋ ಗೋಲಕೇಶಸ್ತತಃ ಪರಮ್ ॥ ೩೧ ॥
ಶ್ರೀಕೃಷ್ಣಾನನ್ದತೀರ್ಥಶ್ಚ ದೇವಾನನ್ದಾಭಿಧಸ್ತಥಾ ।
ಚನ್ದ್ರಚೂಡಾಭಿಧಃ ಷಟ್ಚತ್ವಾರಿಂಶೋಽಥ ಹಲಾಯುಧಃ ॥ ೩೨ ॥
ಸಿದ್ಧಸೇವ್ಯಸ್ತಾರಕಾತ್ಮಾ ತತೋ ಬೋಧಾಯನಾಭಿಧಃ ।
ಶ್ರೀಧರೋ ನಾರಾಯಣಶ್ಚ ಜ್ಞೇಯಶ್ಚಾನ್ಯಃ ಸದಾಶಿವಃ ॥ ೩೩ ॥
ಜಯಕೃಷ್ಣೋ ವಿರೂಪಾಕ್ಷೋ ವಿದ್ಯಾರಣ್ಯಸ್ತಥಾಪರಃ ।
ವಿಶ್ವೇಶ್ವರಾಭಿಧಸ್ತೀರ್ಥೋ ವಿಬುಧೇಶ್ವರ ಏವ ಚ ॥ ೩೪ ॥
ಮಹೇಶ್ವರಸ್ತೂನಷಷ್ಟಿತಮೋಽಥ ಮಧುಸೂದನಃ ।
ರಘೂತ್ತಮೋ ರಾಮಚನ್ದ್ರೋ ಯೋಗೀನ್ದ್ರಶ್ಚ ಮಹೇಶ್ವರಃ ॥ ೩೫ ॥
ಓಙ್ಕಾರಾಖ್ಯಃ ಪಞ್ಚಷಷ್ಟಿತಮೋ ನಾರಾಯಣೋಽಪರಃ ।
ಜಗನ್ನಾಥಃ ಶ್ರೀಧರಶ್ಚ ರಾಮಚನ್ದ್ರಸ್ತಥಾಪರಃ ॥ ೩೬ ॥
ಅಥ ತಾಮ್ರಕತೀರ್ಥಃ ಸ್ಯಾತ್ ತತ ಉಗ್ರೇಶ್ವರಃ ಸ್ಮೃತಃ ।
ಉದ್ದಣ್ಡತೀರ್ಥಶ್ಚೈ ತತಃ ಸಂಕರ್ಷಣಜನಾರ್ದನೌ ॥ ೩೭ ॥
ಅಖಣ್ಡಾತ್ಮಾಭಿಧಸ್ತೀರ್ಥಃ ಪಞ್ಚಸಪ್ತತಿಸಂಖ್ಯಕಃ ।
ದಾಮೋದರಃ ಶಿವಾನನ್ದಸ್ತತಃ ಶ್ರೀಮದ್ಗದಾಧರಃ ॥ ೩೮ ॥
ವಿದ್ಯಾಧರೋ ವಾಮನಶ್ಚ ತತಃ ಶ್ರೀಶಙ್ಕರೋಽಪರಃ ।
ನೀಲಕಣ್ಠೋ ರಾಮಕೃಷ್ಣಸ್ತಥಾ ಶ್ರೀಮದ್ರಘೂತ್ತಮಃ ॥ ೩೯ ॥

ದಾಮೋದರೋಽನ್ಯೋ ಗೋಪಾಲಃ ಷಡಶೀತಿತಮೋ ಗುರುಃ ।
ಮೃತ್ಯುಞ್ಜಯೋಽಥ ಗೋವಿನ್ದೋ ವಾಸುದೇವಸ್ತಥಾಽಪರಃ ॥ ೪೦ ॥
ಗಜಾಧರಾಭಿಧಸ್ತೀರ್ಥಸ್ತತಃ ಶ್ರೀಮತ್ಸದಾಶಿವಃ ।
ವಾಮದೇವಶ್ಚೋಪಮನ್ಯುರ್ಹಯಗ್ರೀವೋ ಹರಿಸ್ತಥಾ ॥ ೪೧ ॥
ರಘೂತ್ತಮಾಭಿಧಸ್ತ್ವನ್ಯಃ ವುಣ್ಡರೀಕಾಕ್ಷ ಏವ ಚ ।
ಪರಶಙ್ಕರತೀರ್ಥಶ್ಚ ಶತಾದೂನಃ ಪ್ರಕಥ್ಯತೇ ॥ ೪೨ ॥
ವೇದಗರ್ಭಾಭಿಧಸ್ತೀರ್ಥಸ್ತತೋ ವೇದಾನ್ತಭಾಸ್ಕರಃ ।
ರಾಮಕೃಷ್ಣಾಭಿಧಸ್ತ್ವನ್ಯಶ್ಚತುಃಶತತಮೋ ಮತಃ ।
ವೃಷಧ್ವಜಃ ಶುದ್ಧಬೋಧಸ್ತತಃ ಸೋಮೇಶ್ವರಾಭಿಧಃ ॥ ೪೪ ॥
ಅಷ್ಟೋತ್ತರಶತತಮೋ ಬೋಪದೇವಃ ಪ್ರಕೀರ್ತಿತಃ ।
ಶಮ್ಭುತೀರ್ಥೋ ಭೃಗುಶ್ಚಾಥ ಕೇಶವಾನನ್ದತೀರ್ಥಕಃ ॥ ೪೫ ॥
ವಿದ್ಯಾನನ್ದಾಭಿಧಸ್ತೀರ್ಥೋ ವೇದಾನನ್ದಾಭಿಧಸ್ತತಃ ।
ಶ್ರೀಬೋಧಾನನ್ದತೀರ್ಥಶ್ಚ ಸುತಪಾನನ್ದ ಏವ ಚ ॥ ೪೬ ॥
ತತಃ ಶ್ರೀಧರತೀರ್ಥೋಽನ್ಯಸ್ತಥಾ ಚಾನ್ಯೋ ಜನಾರ್ದನಃ ।
ಕಾಮನಾಶಾನನ್ದತೀರ್ಥಃ ಶತಮಷ್ಟಾದಶಾಧಿಕಮ್ ॥ ೪೭ ॥
ತತೋ ಹರಿಹರಾನನ್ದೋ ಗೋಪಾಲಾಖ್ಯೋಽಪರಸ್ತತಃ ।
ಕೃಷ್ಣಾನನ್ದಾಭಿಧಸ್ತ್ವನ್ಯೋ ಮಾಧವಾನನ್ದ ಏವ ಚ ।
ಮಧುಸೂದನತೀರ್ಥೋಽನ್ಯೋ ಗೋವಿನ್ದೋಽಥ ರಘೂತ್ತಮಃ ।
ವಾಮದೇವೋ ಹೃಷೀಕೇಶಸ್ತತೋ ದಾಮೋದರೋಽಪರಃ ॥ ೪೯ ॥
ಗೋಪಾಲಾನನ್ದತೀರ್ಥಶ್ಚ ಗೋವಿನ್ದಾಖ್ಯೋಽಪರಸ್ತತಃ ।
ತಥಾ ರಘೂತ್ತಮಶ್ಚಾನ್ಯೋ ರಾಮಚನ್ದ್ರಸ್ತಥಾಪರಃ ॥ ೫೦ ॥
ಗೋವಿನ್ದೋ ರಘುನಾಥಶ್ಚ ರಾಮಕೃಷ್ಣಸ್ತತೋಽಪರಃ ।
ಮಧುಸೂದನತೀರ್ಥಶ್ಚ ತಥಾ ದಾಮೋದರೋಽಪರಃ ॥ ೫೨ ॥
ರಘೂತ್ತಮಃ ಶಿವೋ ಲೋಕನಾಥೋ ದಾಮೋದರಸ್ತತಃ ।
ಮಧುಸೂಧನತೀರ್ಥಾಖ್ಯಸ್ತತ ಆಚಾರ್ಯ ಉಚ್ಯತೇ ॥ ೫೩ ॥
ಅಜನ್ಮಬ್ರಹ್ಮಚಾರೀ ಯೋ ಭಾತಿ ಗೋವರ್ಧನೇ ಮಠೇ ।
ದ್ವಿಚತ್ವಾರಿಂಶದಧಿಕಶತಸಂಖ್ಯಃ ಸನನ್ದನಾತ್ ॥ ೫೪ ॥
ಶ್ರೀಮತ್ಪರಮಹಂಸಾದಿನಾನಾಬಿರುದಶೋಭಿತಾನ್ ।
ತೀರ್ಥಾಭಿಧಾನಿಮಾನ್ ಸರ್ವಾನ್ ಗುರೂನ್ನಿತ್ಯಂ ನಮಾಮ್ಯಹಮ್ ॥ ೫೫ ॥

೧. ಈ ಮಠದಲ್ಲಿ 'ತೀರ್ಥ' ಎಂಬ ಹೆಸರಿನವರೇ ಬಹಳ, ೫೩ನೆಯ ಶ್ಲೋಕವನ್ನು ನೋಡಿದರೆ ಬ್ರಹ್ಮಚರ್ಯದಿಂದಲೇ ಸಂನ್ಯಾಸಿಗಳಾಗಬೇಕೆಂಬ ನಿಯಮವು ಈ ಪೀಠದಲ್ಲಿಲ್ಲವೆಂದು ತೋರುತ್ತದೆ.

೨. ಶ್ರೀಭಾರತೀಕೃಷ್ಣತೀರ್ಥರೆಂಬ ಸ್ವಾಮಿಗಳು ಈ ಪೀಠದಲ್ಲಿ ಸುಪ್ರಸಿದ್ಧರಾಗಿದ್ದು ಬ್ರಹ್ಮೀಭೂತರಾದಮೇಲೆ ಈಚೆಗೆ ನಮಗೆ ಮಠಾಧ್ಯಕ್ಷರು ಯಾರೆಂಬುದು ತಿಳಿದಿಲ್ಲ.

—

(೫) ಜ್ಯೋತಿರ್ಮಠ

ಈ ಮಠವು ಬದರಿಯಿಂದ ೨೦ ಮೈಲು ದಕ್ಷಿಣಕ್ಕೆ ಇದೆ; 'ಜೋಶೀ' ಮಠವೆಂದು ಸಾಮಾನ್ಯರು ಕರೆಯುತ್ತಾರೆ. ಬದರಿಯ ಪೂಜಾರಿಯಾದ ರಾವಲಜಿಯವರ ಸ್ಥಾನವಿದು. ಅಕ್ಟೋಬರ್ ತಿಂಗಳಿಂದ ಏಪ್ರಿಲ್‌ವರೆಗೆ ಚಳಿಯ ನಿಮಿತ್ತದಿಂದ ಬದರಿಯ ಮಂದಿರವು ಮುಚ್ಚಿರುತ್ತದೆ; ಆಗ ಚಲಪ್ರತಿಮಾದಿಗಳನ್ನು ಇಲ್ಲಿಗೆ ತರುತ್ತಾರೆ. ಬದರಿಯಲ್ಲಿರುವ ಮೂರ್ತಿಯನ್ನು ಆಚಾರ್ಯರು ಪ್ರತಿಷ್ಠೆ ಮಾಡಿದರೆಂದು ಐತಿಹಾಸಿಕರು ತಿಳಿಯುತ್ತಾರೆ. ಈ ಮಠದ ವಿಷಯವೆಲ್ಲ ನಮಗೆ ಬಲದೇವ ಉಪಾಧ್ಯಾಯರ ಪುಸ್ತಕದಲ್ಲಿಯೇ (ಪು. ೧೪೩) ಸಿಕ್ಕಿರುತ್ತದೆ. ಇಲ್ಲಿಯ ಗುರುಪರಂಪರೆಯನ್ನು ಪ್ರಾತಃಸ್ಮರಣೆಗೆಂದು ಜನರು ನೆನಪಿಟ್ಟುಕೊಳ್ಳುತ್ತಾರಂತೆ :

ತೋಟಕೋ ವಿಜಯಃ ಕೃಷ್ಣಃ ಕುಮಾರೋ ಗರುಡಧ್ವಜಃ |
ವಿನ್ಧ್ಯೇ ವಿಶಾಲೋ ವಕುಲೋ ವಾಮನಃ ಸುನ್ದರೋಽರುಣಃ ||
ಶ್ರೀನಿವಾಸಃ ಸುಖಾನನ್ದೋ ವಿದ್ಯಾನನ್ದಃ ಶಿವೋ ಗಿರಿಃ |
ವಿದ್ಯಾಧರೋ ಗುಣಾನನ್ದೋ ನಾರಾಯಣ ಉಮಾಪತಿಃ ||
ಏತೇ ಜ್ಯೋತಿರ್ಮಠಾಧೀಶಾ ಆಚಾರ್ಯಾಶ್ಚಿರಜೀವಿನಃ |
ಯ ಏತಾನ್ ಸಂಸ್ಮರೇನ್ನಿತ್ಯಂ ಯೋಗಸಿದ್ಧಿಂ ಸ ವಿನ್ದತಿ ||

ಬಲ. ಶಂ. ಪು. ೧೪೪

[ಈ ಮೂರು ಶ್ಲೋಕಗಳಲ್ಲಿ ಹೇಳಿರುವ ಮಠಾಧೀಶ್ವರರು ಚಿರಂಜೀವಿಗಳು, ಇವರ ಸ್ಮರಣೆಯನ್ನು ನಿತ್ಯವೂ ಮಾಡುವವರಿಗೆ ಯೋಗಸಿದ್ಧಿಯಾಗುವದು ಎಂದು ಇಲ್ಲಿ ಹೇಳಿದೆ.[

ಬಲದೇವ ಉಪಾಧ್ಯಾಯರ ಕಲ್ಪನೆ ಏನೆಂದರೆ, ಸ್ಥೂಲರೂಪದಿಂದ ಲೆಕ್ಕ ಹಾಕಿದರೆ ವಿಕ್ರಮ ಸಂ. ೭೦೦ರಿಂದ ೧೧೦೦ರವರೆಗೂ ಈ ಪರಂಪರೆ ಇತ್ತು; ಆಮೇಲೆ ಪರಂಪರೆ ಉಚ್ಛಿನ್ನವಾಯಿತು. ೪೦೦ ವರ್ಷಗಳು ಯಾರೂ ಆಚಾರ್ಯರಿರಲಿಲ್ಲ. ಈ ಸಂನ್ಯಾಸಿಗಳೇ ಮೊದಲಿಂದಲೂ ಬದರೀನಾಥನ ಅರ್ಚನೆಯನ್ನು ಮಾಡುತ್ತಿದ್ದರು. ಸಂವತ್ ೧೫೦೦ರಿಂದ ಮುಂದಕ್ಕೆ ಬದರಿಯ ಮಹಾಂತರ ನಾಮಾವಲಿ ಸಿಕ್ಕುತ್ತದೆ. ಇವರೇ ಮಠಕ್ಕೂ ಅಧ್ಯಕ್ಷರಾಗಿದ್ದರೆಂದು ತೋರುತ್ತದೆ. ಇದಕ್ಕಿಂತ ಮೊದಲಿನ ೪೦೦ ವರ್ಷಗಳ ಅಧ್ಯಕ್ಷರ ಪರಿಚಯವು ಸಿಕ್ಕುತ್ತಿಲ್ಲ. ಈ ಅಧ್ಯಕ್ಷರ ನಾಮಾವಳಿ ಹೀಗಿದೆ :

	ಹೆಸರು	ಸಂವತ್‌ಕಾಲ	ಪೂಜಾಕಾಲ
೧.	ಬಾಲಕೃಷ್ಣಸ್ವಾಮಿ	೧೫೦೦–೧೫೫೭	೫೭
೨.	ಹರಿಬ್ರಹ್ಮಸ್ವಾಮಿ	೧೫೫೭–೧೫೫೮	೧
೩.	ಹರಿಸ್ಮರಣಸ್ವಾಮಿ	೧೫೫೮–೧೫೬೬	೮
೪.	ವೃಂದಾವನಸ್ವಾಮಿ	೧೫೬೬–೧೫೭೮	೨
೫.	ಅನಂತನಾರಾಯಣಸ್ವಾಮಿ	೧೫೬೮–೧೫೬೯	೧
೬.	ಭವಾನಂದಸ್ವಾಮಿ	೧೫೬೯–೧೫೮೩	೧೪
೭.	ಕೃಷ್ಣಾನಂದಸ್ವಾಮಿ	೧೫೮೩–೧೫೯೩	೧೦
೮.	ಹರಿನಾರಾಯಣಸ್ವಾಮಿ	೧೫೯೩–೧೬೦೧	೮
೯.	ಬ್ರಹ್ಮಾನಂದಸ್ವಾಮಿ	೧೬೦೧–೧೬೨೧	೨೦
೧೦.	ದೇವಾನಂದಸ್ವಾಮಿ	೧೬೨೧-೧೬೩೬	೧೮
೧೧.	ರಘುನಾಥಸ್ವಾಮಿ	೧೬೩೫–೧೬೬೧	೨೫
೧೨.	ಪೂರ್ಣದೇವಸ್ವಾಮಿ	೧೬೬೧–೧೫೮೭	೨೭
೧೩.	ಕೃಷ್ಣದೇವಸ್ವಾಮಿ	೧೬೮೭–೧೬೯೬	೯
೧೪.	ಶಿವಾನಂದಸ್ವಾಮಿ	೧೬೯೬–೧೭೦೩	೭
೧೫.	ಬಾಲಕೃಷ್ಣಸ್ವಾಮಿ	೧೭೦೩–೧೭೧೭	೧೪
೧೬.	ನಾರಾಯಣೋಪೇಂದ್ರಸ್ವಾಮಿ	೧೭೧೭–೧೭೫೦	೩೩
೧೭.	ಹರಿಶ್ಚಂದ್ರಸ್ವಾಮಿ	೧೭೫೦–೧೭೬೩	೧೩
೧೮.	ಸದಾನಂದಸ್ವಾಮಿ	೧೭೬೩–೧೭೭೩	೧೦
೧೯.	ಕೇಶವಸ್ವಾಮಿ	೧೭೭೩–೧೭೮೧	೮
೨೦.	ನಾರಾಯಣತೀರ್ಥಸ್ವಾಮಿ	೧೭೮೧-೧೮೨೩	೪೧
೨೧.	ರಾಮಕೃಷ್ಣಸ್ವಾಮಿ	೧೮೨೩–೧೮೩೩	೧೦

ಇಲ್ಲಿಂದ ಮುಂದಕ್ಕೆ ಸಂನ್ಯಾಸಿಗಳ ಕೈಯಿಂದ 'ಬ್ರಹ್ಮಚಾರೀ ರಾವಲ'ರ ವಶಕ್ಕೆ ಬಂತು. ೧೮೩೩ರಲ್ಲಿ ರಾಮಕೃಷ್ಣಸ್ವಾಮಿಗಳು ದೇಹವನ್ನಿಟ್ಟಮೇಲೆ ಉತ್ತರಾಧಿಕಾರಿಗಳು ಯಾರೂ ಇರಲಿಲ್ಲ ಗಡವಾಲ ಮಹಾರಾಜ ಪ್ರದೀಪಶಾಹ ಎಂಬಾತನು ಅಲ್ಲಿಗೆ ಬಂದು ಪೂಜಾರಿಯಿಲ್ಲದ್ದನ್ನು ಕಂಡು ಗೋಪಾಲನೆಂಬವನಿಗೆ (ದೇವರಿಗೆ ನೈವೇದ್ಯಕ್ಕೆ ಏರ್ಪಾಡುಮಾಡುತ್ತಿದ್ದ ನಂಬೂದ್ರಿಬ್ರಾಹ್ಮಣ) 'ರಾವಲ' ಎಂಬ ಸ್ಥಾನವನ್ನು ಕೊಟ್ಟು ಛತ್ರಿಚಾಮರಾದಿಗಳೊಡನೆ ರಾಮಕೃಷ್ಣಸ್ವಾಮಿಗಳ ಸ್ಥಾನದಲ್ಲಿಟ್ಟನು. ಅಂದಿನಿಂದ ಅಲ್ಲಿ 'ರಾವಲರೇ' ಇರುತ್ತಾರೆ. ಅವರೆಲ್ಲರೂ ನಂಬೂದ್ರಿಯವರೇ ಆಗಿರುತ್ತಾರೆ. ಈ ರಾವಲರ ಪರಂಪರೆಯ ಪಟ್ಟಿಯನ್ನು ಈಗ ಕೊಡುತ್ತೇವೆ :

	ಹೆಸರು	ಅಧಿಕಾರ	ಪೂಜಾವಧಿ
೧.	ಗೋಪಾಲ ರಾವಲ	೧೪೩೩–೧೪೪೨	೯
೨.	ರಾಮಚಂದ್ರ ರಾಮಬ್ರಹ್ಮ	೧೪೪೨–೧೪೪೩	೧
೩.	ನೀಲದಂತ ರಾವಲ	೧೪೪೩–೧೪೪೪	೫
೪.	ಸೀತಾರಾಮ	೧೪೪೪–೧೪೫೯	೧೧
೫.	ನಾರಾಯಣ	೧೪೫೯–೧೪೭೩	೧೪
೬.	ನಾರಾಯಣ (೨)	೧೪೭೩–೧೪೯೪	೨೫
೭.	ಕೃಷ್ಣ	೧೪೯೪–೧೯೦೨	೨
೮.	ನಾರಾಯಣ (೩)	೧೯೦೨–೧೯೧೬	೧೪
೯.	ಪುರುಷೋತ್ತಮ	೧೯೧೬–೧೯೫೭	೪೧
೧೦.	ವಾಸುದೇವ	೧೯೫೭–೧೯೫೪	೧

(ವಾಸುದೇವ ರಾವಲರು ಕಾರಣಾಂತರದಿಂದ ತ್ಯಾಗಪತ್ರವನ್ನು ಕೊಟ್ಟರು; ಅವರ ತರುವಾಯ ನಂಬೂದ್ರಿ ರಾವಲರನ್ನು ಮಾಡಿದ್ದರು; ಅವರು ದೇಹವಿಟ್ಟ ಬಳಿಕ ಮತ್ತೆ ವಾಸುದೇವ ರಾವಲರಿಗೇ ಪ್ರಾಪ್ತವಾಯಿತು. ಆದ್ದರಿಂದ ಅವರ ಹೆಸರು ಎರಡು ಬಾರಿ ಬಂದಿದೆ).

೧೧.	ರಾಮ ರಾವಲ	೧೯೫೪–೧೯೬೨	೪
೧೨.	ವಾಸುದೇವ	೧೯೬೨–೧೯....	—

ಈ ರಾವಲರಿಗೆ ಬದರೀನಾಥಸಂಬಂಧವೇ ಮುಖ್ಯ; ಮಠಕ್ಕೆ ಸಾಕ್ಷಾತ್ತಾಗಿ ಸಂಬಂಧವೇನೂ ಇಲ್ಲ. 'ಮಠವು ಬಹುಕಾಲ ಅಧ್ಯಕ್ಷರಿಲ್ಲದೆ ಇತ್ತು. ಈಗ ಕಾಶಿಯ ವಿದ್ವಾನ್ ಬ್ರಹ್ಮಾನಂದಸ್ವಾಮಿಗಳು ಅಧ್ಯಕ್ಷರಾಗಿರುತ್ತಾರೆ' -ಎಂದು ಬಲದೇವ ಉಪಾಧ್ಯಾಯರು ಬರೆದಿರುತ್ತಾರೆ. ಈಚೆಗೆ ಅಲ್ಲಿ ಯಾರಿದ್ದಾರೋ ನಮಗೆ ತಿಳಿಯದು. ಆಲ್ಲಿಯ ಪೀಠವೂ ವಿವಾದಸ್ಥಾನವಾಗಿದೆ ಎಂದು ನಮಗೆ ತಿಳಿಯಬಂದಿದೆ. ಈ ಪೀಠದ ಮಾಹಾತ್ಮ್ಯವನ್ನು ಬಲದೇವ ಉಪಾಧ್ಯಾಯರು (ಬಲ. ಶಂ. ಪು. ೧೪೬) ಬರೆದಿರುತ್ತಾರೆ. ಗುರುಪರಂಪರೆಗೆ ಸಂಬಂಧಪಟ್ಟಲ್ಲ ವೆಂದು ಅದನ್ನು ಇಲ್ಲಿ ಕಾಣಿಸಿಲ್ಲ.

(೬) ಸಮೇರುಮಠ

ಮಠಾಮ್ನಾಯದಲ್ಲಿ ಇದರ ಹೆಸರೂ ಇದ್ದರೂ ಇದರ ವಿಷಯಕ್ಕೆ ಹೆಚ್ಚಿಗೆ ಯೇನೂ ನಮಗೆ ತಿಳಿದಿಲ್ಲ.

ಉಪಪೀಠಗಳು

ಈವರೆಗೆ ಹೇಳಿದ ಪ್ರಧಾನಪೀಠಗಳಲ್ಲದೆ ಕೂಡಲಿ, ಸಂಕೇಶ್ವರ, ಪುಷ್ಪಗಿರಿ, ಶಿವಗಂಗೆ– ಮುಂತಾದ ಅನೇಕ ಪೀಠಗಳಿವೆ. ಇವುಗಳ ವಿಷಯವು

ಅಷ್ಟಾಗಿ ಇತಿಹಾಸಶುದ್ಧವಾಗಿಲ್ಲವಾದ್ದರಿಂದ ಅವುಗಳ ವಿಷಯವಾಗಿ ಹೆಚ್ಚಿಗೆ ಬರೆಯುವದು ಆಗಿಲ್ಲ. ನಮಗೆ ತಿಳಿದಿರುವಷ್ಟು ಕೆಲವು ಮುಖ್ಯವಿಷಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ತಿಳಿಸುವೆವು.

(೧) ಕೂಡಲಿ

(ಚರಿತ್ರೆ ಪುಟ. ೩೪೯)

ಕೆ.ಆರ್. ವೆಂಕಟರಾಮನ್‌ರವರು ಬರೆದಿರುವದೇನೆಂದರೆ : (೧) ತೀರ್ಥ ಮತ್ತೂರು ಮತ್ತು ಕೂಡಲಿಮಠಗಳು ೧೪ನೆಯ ಶತಮಾನದಲ್ಲಿ ಶೃಂಗೇರಿಗುರುಗಳ ಮತ್ತು ಚಕ್ರವರ್ತಿಗಳ ಮಾರ್ಗದರ್ಶಿತ್ವದಿಂದ ಸ್ಥಾಪಿತವಾದವು (KRTTW p. 41). (೨) ಕೂಡ್ಲಿಮಠದ ಸ್ವಾಮಿಗಳು ಬಿಜಾಪುರದ ಸರಕಾರದವರನ್ನು ಹರಕೆರೆ ಮತ್ತು ಮುಂಡಲಿಗ್ರಾಮಗಳನ್ನು ತಮ್ಮ ಸ್ವಾಧೀನಕ್ಕೆ ಕೊಡುವಂತೆ ಪ್ರೇರಿಸಿದರು. ಶ್ರೀಸಚ್ಚಿದಾನಂದಸ್ವಾಮಿಗಳ ಸ್ವಾಸ್ಥ್ಯಗಳಿಗೆ ಅಡ್ಡಿ ತರಬಾರದೆಂತ ಖೋಚಾಯಿಸಮುಲ್ ಖಾನ್, ಅಡಾಮನ್ ಅಫಸಲ್ ಖಾನ್ ಮತ್ತು ಖಾನ್ ಅಲಿ ಷಾ–ಇವರಿಗೆ ವೀರಭದ್ರನಾಯಕನು ಬರೆದನು (KRTTW p. 63). (೩) ಕ್ರಿ. ಶ. 1561 ರಲ್ಲಿ ಕೃಷ್ಣಪ್ಪನಾಯಕನು ಶಿವವಿಷ್ಣುಗಳ ಐಕ್ಯವನ್ನು ಪರಾಮರ್ಶಿಸಿ ಒಂದು ಶಾಸನದಲ್ಲಿ 'ಈ ವಿವಾದವನ್ನು ತಪ್ಪಿಸುವದಕ್ಕೆ ಮಹಾ ಕರುಣಾಶಾಲಿಗಳಾದ ಹರಿಯೂ ಹರನೂ ಹರಿಹರನೆಂಬ ದಿವ್ಯರೂಪವನ್ನು 'ಕೂಡಲಿ'ಯಲ್ಲಿ (ಹರಿಹರದಲ್ಲಿ) ಸ್ವೀಕರಿಸಿದರು" (KRTTW p. 73)

ಆದರೆ ಕೂಡಲಿಯವರ ಅಭಿಪ್ರಾಯವು ಬೇರೆಯಾಗಿದೆ. ಶ್ರೀಸಂಸ್ಥಾನದವರು ಮೈಸೂರಿನಲ್ಲಿ ಅಚ್ಚುಮಾಡಿಸಿ ಪ್ರಕಟಿಸಿರುವ 'ಗುರುಪರಂಪರಾನಾಮಮಾಲೆ'ಯಲ್ಲಿ ಈ ಶ್ಲೋಕಗಳಿವೆ :

ತಜ್ಜ' ಪರಿವ್ರಾಟ್ ಸುತ್ರಾಮಾ ಶ್ರೀನೃಸಿಂಹಸುಭಾರತೀ ।
ವಾರಣಸ್ಯಾದಿತೀರ್ಥಾನಾಂ ಯಾತ್ರಾರ್ಥಮುಗಮದ್ಗುರುಃ ॥೨೨॥
ಪ್ರತ್ಯಾವೃತ್ತೋ ಬಹೋಃ ಕಾಲಾಚ್ಛೃಙ್ಗೇರ್ಯಾಂ ಚ ಮಹಾಜನೈಃ ।
ಅನ್ಯಂ ಹಠಾದವಿಧಿನಾ ಕೃತಂ ದೃಷ್ಟ್ವಾ ಯತಿಂ ಸ್ವಯಮ್ ॥೨೩॥
ತುಙ್ಗಭದ್ರಾಸಙ್ಗಮಗಂ ಕೂಡಲೀಕ್ಷೇತ್ರಮೇತ್ಯ ಸಃ ।
ಜಗದ್ಗುರುಪದಂ ತತ್ರ ಪ್ರತಿಷ್ಠಾಪ್ಯಾವಸತ್ ಸುಖಮ್ ॥೨೪॥

'ರಾಮಚಂದ್ರಭಾರತಿಗಳಾದಮೇಲೆ ಬಂದ ಶ್ರೀನೃಸಿಂಹಭಾರತಿಗಳು ವಾರಾಣಸ್ಯಾದಿ ತೀರ್ಥಕ್ಷೇತ್ರಗಳ ಯಾತ್ರಾರ್ಥವಾಗಿ ಹೋಗಿ ಬಹಳಕಾಲದ ಮೇಲೆ ಹಿಂತಿರುಗಿಬರಲು ಶೃಂಗೇರಿಯಲ್ಲಿ ಮಹಾಜನರಿಂದ ಮತ್ತೊಬ್ಬನನ್ನು ಬಲಾತ್ಕಾರದಿಂದ ಸಂನ್ಯಾಸಿಯಾಗಿ ಮಾಡಿದ್ದನ್ನು ಕಂಡು ತಾವು ಭದ್ರಾಸಂಗಮ

ದಲ್ಲಿರುವ ಕೂಡಲೀಕ್ಷೇತ್ರಕ್ಕೆ ಬಂದು ಅಲ್ಲಿ ಜಗದ್ಗುರುಪದವನ್ನು ಪ್ರತಿಷ್ಠಾಪನೆ ಮಾಡಿ ಸುಖವಾಗಿದ್ದರು' ಎಂಬುದು ಶ್ಲೋಕಗಳ ಅರ್ಥ. ಈ ವಿಷಯದಲ್ಲಿ ಈಗಿನ ಕೂಡಲೀ ಶೃಂಗೇರಿ ಜಗದ್ಗುರು ಸ್ವಾಮಿಗಳವರನ್ನು ಕೇಳಲಾಗಿ ಅವರು ಶ್ರೀಮಜ್ಜಗದ್ಗುರು ಶ್ರೀಕೂಡ್ಲಿಶೃಂಗೇರಿ ಸಂಸ್ಥಾನದ "ಪ್ರಾಚೀನ ಶಾಸನ ಲೇಖನ ಸಂಗ್ರಹ" ಎಂಬ ಶಿರೋನಾಮೆಯ ಒಂದು ಅಚ್ಚಿನ ಪ್ರತಿಯನ್ನು ತೋರಿಸಿದರು. ಅದರ ಒಂದನೆಯ ಭಾಗದಲ್ಲಿ 'ಕದಂಬರ ಮತ್ತು ವಿಜಯನಗರೆದನರ ಕಾಲ'ದ ಶಾಸನಾವಿಗಳು ಪ್ರಕಟಿತವಾಗಿರುತ್ತವೆ. ಎರಡನೆಯ ಭಾಗದಲ್ಲಿ 'ಮಠಾಧೀಶ್ವರರು ಮುಂತಾದವರ ಲೇಖನಗಳು' ಎಂಬ ಶಿರೋನಾಮೆಯಲ್ಲಿ ವಿಷುಸಂವತ್ಸರದ ಮಾಘ ಶುದ್ಧ ೭ ಶಾ. ಶ. ೧೫೦೪ ಕ್ರಿ. ಶ. 1582ನೇ ಕಾಲದ ಒಂದು ಬಾಲಬೋಧಲಿಪಿಯ ಪತ್ರವಿದೆ. ಸಾಂಪ್ರದಾಯಿಕವಾದ ಬಿರುಮಬಾವಲಿಗಳ ಒಕ್ಕಣೆಯನ್ನು !–

"ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ....ಋಷ್ಯ ಶೃಂಗಪುರವರಾಧೀಶ್ವರ ತುಂಗಭದ್ರಾತೀರವಾಸ ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀರಾಮಚಂದ್ರಭಾರತೀಸ್ವಾಮಿ ಕರಕಮಲ ಸಂಜಾತ ಶೃಂಗೇರೀ ಶ್ರೀನೃಸಿಂಹಭಾರತೀಸ್ವಾಮಿನಾಂ ಚರಣಸರೋಜೇಷು" ಎಂದು ಕೊಟ್ಟಬಳಿಕ–

ತಮ್ಮ ಪ್ರಿಯಶಿಷ್ಯನಾದ ಶೃಂಗೇರೀ ಶ್ರೀಶಾರದಾಂಬನವರ ಪೂಜೆಗೆ ನೇಮಿಸಲ್ಪಟ್ಟ ರಾಮಚಂದ್ರಭಾರತಿಯು ಭಾಷಾಪೂರ್ವಕ ಬರಶಿ ವಪ್ಪಿಶಿದ ನಿಬಂಧನೆಃ ಬಿನ್ನವತ್ತಳೆ ಅದಾಗಿ ಶ್ರೀಕರ್ತರು ಮಹಾಯಾತ್ರೆಗೆ ಚಿತ್ತೈಸಿದ ವ್ಯಾಳ್ಯದಲ್ಲಿ ಸ್ಥಲದ ಮಹಾಜನಗಳು ಕೃತ್ರಿಮತನದಿಂದ ನಮಗೆ ಆಶ್ರಮಾಕೊಡಿಸಿ ತಾವೂ ಸಳಕ್ಕೆ ಬರಬಾರದು ದುರಾಲೋಚನೆ ಮಾಡಿ ಸ್ಥಳ ಬಂದುಕಟ್ಟುವಾಡಿಕೊಂಡು ಇವ್ವಲ್ಲಿ ಯಾತ್ರೀತೀರ್ಥಮಾಡಿಕೊಂಡು ತಾವು ಪುನಃ ಶೃಂಗೇರಿಗೆ ಚಿತ್ತೈಸಬೇಕೆಂದು ಸಕಲದೇಶಗಳೂ ಸಂಚಾರಮಾಡಿಕೊಳ್ಳುತ್ತಾ ತುಂಗಭದ್ರಾಸಂಗಮ ಕೂಡ್ಲಿಕ್ಷೇತ್ರಕ್ಕೆ ದಿಗ್ವಿಜಯಮಾಡಿದ ತರುವಾಯ ಸ್ಥಳದ ವಿದ್ಯಾಮಾನಗಳ್ಯಾವತ್ತೂ ದಿವ್ಯಚಿತ್ತಕ್ಕೆ ಶ್ರುತವಾಗಿ ನಮಗೆ ಕೃತ್ರಿಮತನದಿಂದ ಆಶ್ರಮಾಕೊಡಿಶಿದ ಮಹಾಜನ ನಮ್ಮನ್ನು ಸಹ ಈ ಕೂಡ್ಲಿಕ್ಷೇತ್ರಕ್ಕೆ ಕರಶಿಕೊಂಡು ನಿಗ್ರಹಪೂರ್ವಕ ಆಜ್ಞಾಮಾಡಿಶಿದ ಕಾರಣ ನಾವು ಶ್ರೀದಿವ್ಯಚಿತ್ತದಲ್ಲಿ ಅಪ್ಪಣೆಯಾದಪ್ರಕಾರ ನಡೆದುಕೊಳ್ಳುವದಕ್ಕೆ ಸಿದ್ಧವಾಗಿ ಇದ್ದೇನೆಂದು ವಿನಯಪೂರ್ವಕ ಬಿನ್ನಹಮಾಡಿಕೊಂಡದ್ದರಿಂದ ಪರಮ ಕಾರುಣ್ಯ ಹುಟ್ಟಿ ಅನುಗ್ರಹಪೂರ್ವಕ ಅಪ್ಪಣೆ ದಯಪಾಲಿಶಿ ಸ್ಥಳದಲ್ಲಿ ಶ್ರೀಶಾರದಾಂಬನವರ ಪೂಜಾ ಮುಂತಾದ ವಿನಿಯೋಗವನ್ನು ನಿಬಂಧನೆಪ್ರಕಾರ ನಡಿಶಿಕೊಂಡು ಆಜ್ಞಾನುಸಾರ ನಡಕೊಂಬುವಂತೆ ಅಪ್ಪಣೆ ಆಯಿತಾದ ಕಾರಣಾ ಅದೇ ಮೇರೆಗೆ ಶ್ರೀ ಅಮ್ಮನವರ ಪೂಜಾವಾಡಿಕೊಂಡು ಕಾಲಂಪ್ರತಿಯಲ್ಲೂ ಹುಟ್ಟಿಮುಟ್ಟಿದ ಆದಾಯವೆಚ್ಚದ ಲೆಖ್ಖಾವಿಗತೀ ಆದ ದ್ರವ್ಯಸಹಾ ಶ್ರೀಸನ್ನಿಧಾನಕ್ಕೆ ವಪ್ಪಿಸಿಕೊಳ್ಳುತ್ತಾ ಬಂದೆನು. ಮುಂದೆ ತಾವು ಸಂಸ್ಥಾನಕ್ಕೆ ನೇಮಿಸಲ್ಪಟ್ಟವರಿಗೂ ತಮ್ಮ ಸ್ಥಾನಾಪನ್ನರಾಗಿ ಕರಕಮಲಸಂಜಾತ

ರಾಗಿ ನೇಮಿಸಲ್ಪಟ್ಟವರಿಗೂ ಇನೇ ಪ್ರಕಾರ ಆದಾಯವೆಚ್ಚ ಮಿಗತೀಹಣ ಸಹ ವಪ್ಪಿಕೊಂಡು ಸಂಚಾರ ಆಚಾರವಿಚಾರ ಮೊದಲಾದ ಹೆಚ್ಚು ಹವ್ಯಾನಕ್ಕೆ ಹೋಗದೇ ಆಜ್ಞಾನುಸಾರ ನಡಕೊಳ್ಳತಕ್ಕವನು. ಇದಕ್ಕೆ ನನ್ನು ಪರಂಪರಾಗತದಲ್ಲಿ ಯಾರಾದರೂ ಅನ್ಯಥಾ ಮಾಡಿದಲ್ಲಿ ಶ್ರೀಗುರುಚರಣಕ್ಕೆ ಅನ್ಯಥಾಮಾಡಿದ ಹಾಗೆ ಎಂದು ನನ್ನು ಆತ್ಮಸಾಕ್ಷಿಯಿಂದ ಭಾಷಾಪೂರ್ವಕ ಬರೆಸಿ ಒಪ್ಪಿಸಿವ ಬಿನ್ನವತ್ತಳೀ ವಿಷುಸಂವತ್ಸರದ ಮಾಘ ಶುದ್ಧ ೭ರಲ್ಲೂ ಇತಿ ವಿಜ್ಞಾಪ್ತಯಃ (ಶ್ರೀ) ॥'

ಎಂತ ಬರೆದಿದೆ. ಚಿತ್ರಭಾನು ಶಾ. ಶ. ೧೫೦೫ ಕ್ರಿ ಶ. 1583ರಲ್ಲಿ ಪೂಜೆಮಾಡಿ ಮಿಗತೀಹಣ ಐನೂರನಲವತ್ತೆಂಟು ವರಹ ಚಿಲ್ಲರೆ ಕೊಟ್ಟು ಕಳು ಹಿಸಿದ್ದಕ್ಕೆ ಪತ್ರವೂ ಬಂದಿದೆ :–

ಈ ವಿಷಯದಲ್ಲಿ ಕೂಡಲಿಯ ಶ್ರೀಶ್ರೀಗಳವರ ಸಂನಿಧಿಯಲ್ಲಿ ನಾವು ಕೇಳಿದ ಪ್ರಶ್ನೆಗಳಿವು :–

(೧) ಈ ಪತ್ರದಲ್ಲಿ ತೋರಿಬರುವ ಮಠಗಳೆರಡಕ್ಕೂ ಇರುವ ಸಂಬಂಧವು ಯಾವಾಗ ಹೇಗೆ ಕಡಿದುಹೋಯಿತು ?– ಎಂಬುದಕ್ಕೆ ದಾಖಲೆ ಏನಾದರೂ ಇದೆಯೆ ?

(೨) ಶೃಂಗೇರಿ, ಕೂಡಲಿಶೃಂಗೇರಿಮಠಗಳ ಶಿಷ್ಯಕೋಟಿಗೆ ಸೇರಿರುವವರ ಗ್ರಾಮಗಳ ಗಡಿ ಯಾವಾಗ, ಹೇಗೆ ನಿರ್ಣಯವಾಯಿತು ? ಬಹಳ ಹತ್ತಿರವಿರುವ ಗ್ರಾಮಗಳು ಬೇರೆಬೇರೆಯ ಮಠಗಳಿಗೆ ಸೇರಿದ್ದು ಹೇಗೆ ?

(೩) ಕೂಡಲಿಮಠದವರು ಸಂಚಾರಹೊರಟಾಗ ಚಂದ್ರಮೌಲೀಶ್ವರಲಿಂಗ ಅವರಲ್ಲಿತ್ತೆ? ಇದ್ದರೆ ಅದು ಮತ್ತೆ ಶೃಂಗೇರಿಗೆ ಯಾವಾಗ, ಹೇಗೆ ಹೋಯಿತು ?

ಮೊದಲನೆಯ ಎರಡು ಪ್ರಶ್ನೆಗಳಿಗೆ ಮನಸ್ತೃಪ್ತಿಕರವಾದ ಉತ್ತರಗಳು ಸಿಕ್ಕಲಿಲ್ಲ. ಮೂರನೆಯ ಪ್ರಶ್ನೆಗೆ ಉತ್ತರವಾಗಿ ಶ್ರೀಮಠದ ಕಡಿತದ ಒಂದು ಭಾಗವನ್ನು ಓದಿತೋರಿಸಿದರು. ಅದರಲ್ಲಿ ಶೃಂಗೇರೀಮಠದವರು ರಾಜರ ಸಹಾಯದಿಂದ ಬಲಾತ್ಕಾರಪೂರ್ವಕವಾಗಿ ಚಂದ್ರಮೌಳೀಶ್ವರ, ಮತ್ತು ಕೆಲವು ಅನರ್ಘ್ಯಪದಾರ್ಥಗಳನ್ನು ತೆಗೆದುಕೊಂಡುಹೋದದ್ದಾಗಿ ಬರೆದಿತ್ತು.

ಕೂಡಲಿ ಶೃಂಗೇರಿ ಮತ್ತು ಶೃಂಗೇರಿ–ಈ ಎರಡರಲ್ಲಿ ಶಂಶರಾಚಾರ್ಯರು ಸ್ಥಾಪಿಸಿದ ಮಠವು ಎಲ್ಲಿಯದು?–ಎಂಬ ಬಗ್ಗೆ ವಿವಾದವನ್ನು ಕೆಲವರು ತೆಗೆದಿರುತ್ತಾರೆ. ಶೃಂಗೇರಿಯು ತುಂಗಾತೀರದಲ್ಲಿದೆ, ಕೂಡಲಿಯೇ ಮೊದಲಿನ ಶೃಂಗೇರಿಯಾಗಿತ್ತು. ಚಿಕ್ಕಮಗಳೂರು ತಾಲ್ಲೂಕಿನ (Epigraphica Carnatica No. 77, p. 186) ಶಾಸನವೊಂದರಲ್ಲಿ ತುಂಗಭದ್ರಾತೀರದಲ್ಲಿ ಮಾರ್ಕಂಡೇಯ, ಅಗಸ್ತ್ಯ–ಮುಂತಾದವರು ತಪಸ್ಸುಮಾಡಿದರು: ಇಲ್ಲಿ ಒಂದು ಪರ್ವತವು ಎದ್ದುಕೊಂಡಿತು–ಎಂದಿದೆಯಂತೆ. "ಋಷ್ಯಶೃಂಗ"ರ ಹೆಸರಿನಿಂದ

ಇದಕ್ಕೆ ಶೃಂಗೇರೀ ಎಂಬ ಹೆಸರಾಯಿತೆಂದೂ ಈ ಸ್ಥಳಕ್ಕೆ ನರಸಿಂಹಕ್ಷೇತ್ರ, ಕೂಡಲಿ, ವಿದ್ಯಾನಗರ (?) ಋಷ್ಯಾಶ್ರಮ—ಎಂದು ಮುಂತಾದ ಹೆಸರುಗಳಿದ್ದವೆಂದೂ ವಿದ್ಯಾರಣ್ಯರ ಗುರುಗಳಾದ ಭಾರತೀತೀರ್ಥರು ಏಕಾಂತವಾಗಿ ತಪಸ್ಸುಮಾಡುವದಕ್ಕೆಂದು ಆರಿಸಿಕೊಂಡಿದ್ದರಿಂದ (ಸುಮಾರು ಕ್ರಿ. ಶ. 1346 ರಲ್ಲಿ) ಇನ್ನೊಂದಕ್ಕೂ ಗೌಣವಾಗಿ 'ಶೃಂಗೇರಿ' ಎಂಬ ಹೆಸರು ಬಂದಿತೆಂದೂ ಅವರ ಕಲ್ಪನೆ. ಇದಕ್ಕೆ ಬಹುಜನಸಮ್ಮತಿಯು ಇರುವಂತೆ ಈವರೆಗೆ ಕಾಣಿಸಲಿಲ್ಲ.

ಕೂಡಲಿಯ ಮಠವು ಈಗ ಎರಡು ಶಾಖೆಗಳಾಗಿ ಒಡೆದುಕೊಂಡಿದೆ. ಒಂದು "ಕೂಡಲಿಶೃಂಗೇರಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ. ಅವರ ಅಭಿಪ್ರಾಯದಂತೆ ಶೃಂಗೇರಿಯ ಪೀಠಾಧಿಪರು ಆವರೇ ಆಗಿದ್ದು ಶೃಂಗೇರಿಯ ಪೀಠದವರು ಶಾರದಮ್ಮನವರ ಪೂಜೆಗೆ ಅವರಿಂದ ನಿಯಮಿಸಲ್ಪಟ್ಟವರ ಪೀಳಿಗೆಯವರು. ಈ ಕೂಡಲಿಮಠಕ್ಕೆ ಹಕ್ಕುದಾರರು ಯಾರು ?—ಎಂಬ ಬಗ್ಗೆ ವಿವಾದವು ನಡೆದು ಈಗ ಈಗಿನ ಪೀಠಾಧಿಪರಾದ ಶ್ರೀಸಚ್ಚಿದಾನಂದಶಂಕರಭಾರತೀಸ್ವಾಮಿಗಳವರ ಅಧೀನವಾಗಿಯೇ ಮಠದ ಸ್ವಾಸ್ಥ್ಯಗಳೆಲ್ಲ ಇರುತ್ತವೆ. 1873ನೆಯ ಇಸವಿಯಿಂದ ತಾವು ನಿಜವಾದ ಹಕ್ಕುದಾರರೆಂತ ಹೇಳಿಕೊಂಡುಬಂದಿರುವ ಮತ್ತೊಂದು ಶಾಖೆಯುವರಿಗೆ ಕೆಲವು ಭೂಮಿಕಾಣಿಗಳೂ ಶಿಷ್ಯವರ್ಗವೂ ಸೇರಿರುತ್ತವೆ. ಅವರು ಹೇಳುವದೇನೆಂದರೆ, 'ಶ್ರೀನರಸಿಂಹಭಾರತಿಸ್ವಾಮಿಗಳು ಸುಮಾರು 1580ರಲ್ಲಿ ಯಾತ್ರೆಗೆ ಹೋಗಿದ್ದಾಗ ಶೃಂಗೇರಿಯ ಜನರು 'ಪುಸ್ತಕ ಸಂನ್ಯಾಸ'ಕ್ರಮದಿಂದ ನರಸಿಂಹಭಾರತಿಸ್ವಾಮಿ ಎಂಬವರನ್ನು ('ರಾಮಚಂದ್ರ ಭಾರತಿ'ಯವರನ್ನೆಲ್ಲ) ಶೃಂಗೇರಿಪೀಠದಲ್ಲಿ ಕುಳ್ಳಿರಿಸಿದರು. ಆಗ್ಗೆ ಕೆಳದಿಯಲ್ಲಿ ಆಳುತ್ತಿದ್ದ ವೆಂಕಟಪ್ಪನಾಯಕ (1553–1629) ನಲ್ಲಿಗೆ ಈ ವಿವಾದವು ಹೋಗಲು ಆತನು ಹೊಸ ಸಂನ್ಯಾಸಿಯು ಶಾರದಮ್ಮನವರ ಪೂಜೆಗೇ ನಿಂತು ಅಲ್ಲಿರುವ ಮಠದ ವಿಚಾರವನ್ನು ನೋಡಿಕೊಂಡಿರಬೇಕೆಂದು ನಿರ್ಣಯಿಸಿದನು.[1] ಶೃಂಗೇರಿಜಹಗೀರಿಯ ನಂ. 2 ಮತ್ತು 12ನೆಯ ಶಾಸನಗಳಲ್ಲಿ (ಪು. 348 ಮತ್ತು 374 Epigraphica Carnatika Kadur Dist.)

---

1. ಈ ವಿಷಯದಲ್ಲಿ 'ಗುರುವಂಶಕಾವ್ಯ'ದಲ್ಲಿ ೧೧ನೆಯ ಸರ್ಗದಲ್ಲಿ ಮೇಲಿನ ಅಭಿಪ್ರಾಯಕ್ಕೆ ವಿರುದ್ಧವಾದ ಶ್ಲೋಕಗಳು ಇರುವದಾಗಿ ಶೃಂಗೇರಿಮಠದವರ ಕಡೆಯಿಂದ ತಿಳಿದುಬಂದಿದೆ. 'ರಾಮಚಂದ್ರಭಾರತಿಗಳ ಶಿಷ್ಯನಾದ ನರಸಿಂಹಭಾರತಿ ಎಂಬಾತನು ಮಾಡಿದ ಗುರುದ್ರೋಹದಿಂದ ಅವನನ್ನು ಮಠದಿಂದ ಓಡಿಸಲಾಗಿ ರಾಜರ ಪ್ರೇರಣೆಯಿಂದ ಆತನು ಕೂಡಲಿಯಲ್ಲಿ ಉಳಿದನು. ಮುಂದೆ ಆತನ ಕಾಲಾನಂತರ ಮಠದ ಆಸ್ತಿಗಳನ್ನೆಲ್ಲ ಪುನಃ ಶ್ರೀಸಚ್ಚಿದಾನಂದಮುನೀಶ್ವರರಿಗೆ ರಾಜನು ಕೊಟ್ಟನು'— ಎಂಬುದು ಶ್ಲೋಕಗಳ ಸಾರ. ಗುರುವಂಶಕಾವ್ಯವನ್ನು ನಾವು ನೋಡಿಲ್ಲ.

ಕೂಡ್ಲಿಶೃಂಗೇರಿಯು ನರಸಿಂಹಭಾರತೀಸ್ವಾಮಿಗಳ 'ಚರಣಾರವಿಂದದ ಶಿಷ್ಯ' ಎಂದು ಬರೆದುಕೊಂಡಿರುತ್ತಾರೆ; 'ಕರಕಮಲಸಂಜಾತ' ಎಂದು ಬರೆದುಕೊಂಡಿಲ್ಲ ವಸ್ತುಸ್ಥಿತಿಯು ಹೀಗಿದ್ದರೂ ಶೃಂಗೇರಿಯವರು ತಾವೇ ಶೃಂಗೇರಿಮಠದ ಜಗದ್ ಗುರುಗಳೆಂದು ಹೇಳಿಕೊಳ್ಳುತ್ತಾಬಂದಿರುತ್ತಾರೆ. ಹೊಸ ಶೃಂಗೇರಿಯಲ್ಲಿ ಉಳಿದ ನರಸಿಂಹಭಾರತೀಸ್ವಾಮಿಗಳ ಮಠಕ್ಕೆ ಹಲವು ಗ್ರಾಮಗಳು ದಾನವಾಗಿ ಬಂದವು; ಅವರ ಕೀರ್ತಿಯೂ ಹಬ್ಬಿತು. ಅವರನ್ನು ಜಗದ್ಗುರುಗಳೆಂದು ಪ್ರಧಾನ ಶೃಂಗೇರಿಮಠದ ಅಧಿಪತಿಗಳೂ ಭಕ್ತರೂ ಸರಕಾರದವರೂ ಹೇಗೆ ಒಪ್ಪಿದರೆಂಬುದು ಈಗ ನಿಶ್ಚಯವಾಗುವಂತಿಲ್ಲ. ಮಹಾರಾಷ್ಟ್ರದಲ್ಲಿ ಆಳುತ್ತಿದ್ದ ಸಾಹು ಮಹಾರಾಜನ ಆಮಂತ್ರಣದಿಂದ ಸಾತಾರೆಗೆ ಬಂದಿದ್ದ ಕೂಡ್ಲಿ ಶೃಂಗೇರಿಯ ಶಂಕರಭಾರತೀಸ್ವಾಮಿಗಳು (ನರಸಿಂಹಭಾರತೀಸ್ವಾಮಿಗಳ ಶಿಷ್ಯರು) ಮತ್ತು ಅಲ್ಲಿಗೇ ಬಂದಿದ್ದ ಸಂಕೇಶ್ವರ ಮತ್ತು (ಹೊಸ) ಶೃಂಗೇರಿಯ ಸ್ವಾಮಿಗಳು– ಈ ಮೂವರ ಸನ್ನಿಧಿಯಲ್ಲಿ ಮಹಾರಾಜನು ಕ್ರಿ. ಶ. 1725ರಲ್ಲಿ ಈ ಮೂರೂ ಮಠಗಳಿಗೆ ಆಚಾರವಿಚಾರಕ್ಕೆ ಒಳಪಟ್ಟ ಕ್ಷೇತ್ರಗಳನ್ನು ಗೊತ್ತುಮಾಡಿದನು. ಆ ತೀರ್ಪಿನಂತೆ ಸಂಕೇಶ್ವರಕ್ಕೆ ಉತ್ತರಭಾಗ. (ಕೂಡ್ಲಿ)ಶೃಂಗೇರಿಗೆ ದಕ್ಷಿಣಭಾಗ, (ಹೊಸ) ಶೃಂಗೇರಿಗೆ ಸ್ಥಳವೇವತೆಯು ಪೂಜೆ– ಹೀಗೆ ವಿಭಾಗಮಾಡಿದನು. ಸಂಕೇಶ್ವರಮಠದ ಚರಿತ್ರೆ ಇದಕ್ಕೆ ಆಧಾರ. ಶೃಂಗೇರಿಯ ಸ್ವಾಮಿಗಳು ಕ್ರಿ. ಶ. 1742ರಲ್ಲಿ ಮಠಾಧಿಪತಿಗಳ ಬಿಡುದುಬಾವಲಿಗಳೊಡನೆ ಸಂಚಾರಕ್ಕೆ ಹೊರಡಲು ಕೆಳದಿಯ ಇಮ್ಮಡಿ ಬಸಪ್ಪನಾಯಕನು ಪೂರ್ವಪದ್ಧತಿಗೆ ವಿರೋಧವಾಗಿ ಹಾಗೆ ಮಾಡದಂತೆ ತಡೆಗಟ್ಟಿದನು. ಇನ್ನೊಂದು ಸಲ ಕ್ರಿ. ಶ. 1806ರಲ್ಲಿ ದಿವಾನ ಪೂರ್ಣಯ್ಯನವರು ಹೀಗೆಯೇ ಅಡ್ಡಿಮಾಡಿ ಹುಕುಂಕೊಟ್ಟಿರುತ್ತಾರೆ. ಆದರೂ ಶೃಂಗೇರಿಯವರು ಕ್ರಮಕ್ರಮವಾಗಿ ತಮ್ಮದು ಜಗದ್ಗುರುಪೀಠವೆಂಬುದನ್ನು ಶಾಸನಾದಿಗಳ ಮೂಲಕ ಪ್ರಚುರಪಡಿಸಿಕೊಂಡುಬಂದಿರುತ್ತಾರೆ.

ಈ ಮೇಲೆ ನಾವು ಸಂಗ್ರಹಿಸಿಕೊಟ್ಟಿರುವ ವಿವರಣೆಯನ್ನು Indian Patriot ('ಭಾರತದೇಶಾಭಿಮಾನಿ' ಎಂಬರ್ಥದ) ಇಂಗ್ಲಿಷ್ ವರ್ತಮಾನಪತ್ರಿಕೆಯ 1912 ಇಸವಿ, ಏಪ್ರಿಲ್ 19 ಮೇ 15, ಮತ್ತು ಜೂನ್ 5– ಈ ತಾರೀಖುಗಳ ಸಂಚಿಕೆಯಿಂದ ತೆಗೆದುಕೊಂಡಿದೆಯೆಂದು ಬೆಂಗಳೂರುಶಾಖೆಯ ಕೂಡಲಿಶೃಂಗೇರಿಮಠದವರು ಹೇಳುತ್ತಿದ್ದಾರೆ. '1879ನೆಯ ಹೇವಿಳಂಬಿ ಸಂವತ್ಸರದ ಕೂಡಲಿಶೃಂಗೇರಿಮಹಾಸಂಸ್ಥಾನದ 'ಆಡಳಿತದರ್ಶನ'ದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇದೇ ವಿವರವು ಸಂಕ್ಷಿಪ್ತವಾಗಿ ಇರುತ್ತದೆ. ಆ ವೃತ್ತಾಂತದಲ್ಲಿ ಕರ್ನಾಟಕದ ರಾಜರುಗಳಿಂದಲೇ ಅಲ್ಲದೆ ಔರಂಗಜೇಬ, ಇಬ್ರಾಹಿಂ ಆದಿಲ್‌ಷಹ, ಪೇಶ್ವೆಯರು, ಮಹಾರಾಷ್ಟ್ರೀಯ ಅರಸರುಕೂಡ ಕೂಡಲಿಶೃಂಗೇರಿಮಠಕ್ಕೆ ಮಾಡಿದ ಸಹಾಯದ ಉಲ್ಲೇಖವಿದೆ.

ಬೊಂಬಾಯಿಯಲ್ಲಿ (ಕ್ಷೇಮರಾಜ ಶ್ರೀಕೃಷ್ಣದಾಸ ಶ್ರೇಷ್ಠಿಯವರ) ವೆಂಕಟೇಶ್ವರಮುದ್ರಾಲಯದಲ್ಲಿ ಅಚ್ಚಾಗಿರುವ ಶ್ರೀಕಾಶೀ ಶೇಷವೆಂಕಟಾಚಲಶಾಸ್ತ್ರಿಗಳು ಸಂಪಾದಿಸಿರುವ ಶಾರೀರಕಭಾಷ್ಯದ ಭೂಮಿಕೆ (ಪು. ೩೨)ಯಲ್ಲಿರುವ ಈ ಕಥೆಯು ಹೀಗಿದೆ :

"೧೪೨೨ನೇ ಶಕ(?)ವರ್ಷದಲ್ಲಿ ಶ್ರೀಶಂಕರಾಚಾರ್ಯರಿಂದ ಹತ್ತನೆಯವರಾದ ಶ್ರೀಶಂಕರಭಾರತೀಸ್ವಾಮಿಗಳವರು ಶ್ರೀಗೋವಿಂದಭಗವತ್ಪಾದರ (?) ಗುಹೆಯನ್ನು ನೋಡುವದಕ್ಕೆ ಹಿಮಾಲಯಕ್ಕೆ ಹೋಗಿ ಗುಹಾಪ್ರವೇಶಮಾಡುವಾಗ 'ಇಷ್ಟು ದಿನಕ್ಕೆ ನಾನು ಹೊರಕ್ಕೆ ಬರುವೆನು, ಹಾಗೆ ಬಾರದೆ ಇದ್ದರೆ ನಿಮ್ಮೊಳಗೆ ಒಬ್ಬರನ್ನು ಗುರುವಾಗಿ ಆರಿಸಿಕೊಂಡು ಪೀಠದಲ್ಲಿ ಕೂರಿಸಿರಿ' ಎಂದರಂತೆ. ಅವರು ಕಾಲದೊಳಗೆ ಬಾರದ್ದರಿಂದ ಶಿಷ್ಯರು ಹಿಂದಕ್ಕೆ ಬಂದು ಕೂಡಲಿಯನ್ನು ಸೇರಿದರು. ಇತ್ತ ಗುಹೆಯಿಂದ ಹೊರಹೊರಟ ಶಂಕರಭಾರತಿಗಳೂ ಅಲ್ಲಿಗೆ ಬಂದು ಸೇರಿದರು. ಶೃಂಗೇರಿಯಲ್ಲಿ ಒಬ್ಬರಿಗೆ ಪುಸ್ತಕಸಂನ್ಯಾಸವನ್ನು ಕೊಟ್ಟಿದ್ದ ಮಠಾಧಿಕಾರಿಗಳು ಅವರಿಗೆ ಶೃಂಗೇರಿಯನ್ನು ಪ್ರವೇಶಿಸಲು ಅವಕಾಶವನ್ನು ಕೊಡಲಿಲ್ಲ. ಸ್ವಾಮಿಗಳ ಶಿಷ್ಯರು ನ್ಯಾಯಾಲಯದಲ್ಲಿ ದೂರುಕೊಟ್ಟರು. 'ಹೊಸ ಸಂನ್ಯಾಸಿಗಳು ಶಾರದಾ ಪೂಜೆಯನ್ನು ಮಾಡಿಕೊಂಡು ಶೃಂಗೇರಿಯಲ್ಲಿಯೇ ಇರಬೇಕು ; ಶಂಕರಭಾರತೀ ಸ್ವಾಮಿಗಳವರು ದೇಶಸಂಚಾರಾದಿಗಳನ್ನು ಮಾಡಿಕೊಂಡು ಕೂಡಲಿಯಲ್ಲಿರಬೇಕು' ಎಂದು ನ್ಯಾಯಾಲಯದಲ್ಲಿ 1855ನೇ ಜನವರಿ 31ರಲ್ಲಿ ತೀರ್ಮಾನವಾಯಿತು." ಇಲ್ಲಿ ಸಂಗ್ರಹಿಸಿಕೊಟ್ಟಿರುವ ಈ ವೃತ್ತಾಂತವು 'ಶ್ರೀಸಂಸ್ಥಾನಸಂಕೇಶ್ವರಮಠ. ಕರವೀರ ವ ಸಂಕೇಶ್ವರಚಾ ಇತಿಹಾಸ್' ಎಂಬ ಮಹಾರಾಷ್ಟ್ರಪುಸ್ತಕದಲ್ಲಿ ಅಚ್ಚಾಗಿದೆಯಂತೆ.

ಈಗ ಈ ವಿಷಯದಲ್ಲಿ ಶ್ರೀ!! ಕೆ. ಆರ್. ವೆಂಕಟರಾಮನ್‌ರವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ ನನಗೆ ಬರೆದಿರುವದರ ಸಾರವೇನೆಂದರೆ :—

೧

(೧) ಮೈಸೂರು ಗೆಜಿಟಿಯರ್ V–p. 1307ರಲ್ಲಿ ಹೀಗಿದೆ :

Kudali. a sacred village in Shimoga Taluk, at the confluence of the Tunga and Bhadra, is the seat of **a matha connected with the one at Sringeri, the original Guru having been appointed by the Sringeri Swami abont 528 years ago**

to minister to the smarthas of Maharastra descent.

ಈ ಗ್ರಂಥವನ್ನು ಪ್ರಕಟಿಸುವದಕ್ಕಿಂತ 528 ವರ್ಷಗಳ ಹಿಂದೆ ಶೃಂಗೇರಿ ಸ್ವಾಮಿಗಳಿಂದ ಮಹಾರಾಷ್ಟ್ರವಂಶೀಯರಾದ ಸ್ಮಾರ್ತರ ಆಚಾರವಿಚಾರಗಳನ್ನು ನೋಡಿಕೊಳ್ಳುವದಕ್ಕೆಂದು ಸ್ಥಾಪಿತವಾದ ಮಠವು ಕೂಡಲಿ ಎಂಬ ಪವಿತ್ರಸ್ಥಲದಲ್ಲಿದೆ–ಎಂದು ವಾಕ್ಯದ ಅರ್ಥ.

(೨) ಶೃಂಗೇರಿಯಲ್ಲಿ 1500ರಲ್ಲಿದ್ದ ಪೀಠಾಧಿಪತಿಗಳು ಪುರುಷೋತ್ತಮ ಭಾರತಿಗಳು ; ಶ್ರೀಕಾಶೀ ಶೇಷ ವೆಂಕಟಾಚಲಶಾಸ್ತ್ರಿಗಳು ಹೇಳುವಂತೆ 'ಶಂಕರ ಭಾರತಿ'ಗಳಲ್ಲ.

೨

(೧) ಕೂಡಲಿಮಠದವರ ರಿಕಾರ್ಡಿನಲ್ಲಿರುವಂತೆ 1582ರಲ್ಲಿ 'ರಾಮ ಚಂದ್ರಭಾರತಿ'ಗಳೆಂಬ ಹೆಸರಿನ ಸ್ವಾಮಿಗಳು ಇರಲಿಲ್ಲ ; ಆಗ (ಐದನೆಯ) ನರಸಿಂಹಭಾರತೀಸ್ವಾಮಿಗಳಿದ್ದರು.

(೨) ರಾಮಚಂದ್ರಭಾರತಿಗಳು ವಿಷುಸಂವತ್ಸರದಲ್ಲಿಯೂ ಮುಂದಿನ ವರ್ಷವೂ (ಕ್ರಿ. ಶ. 1583) ಬರೆದುಕೊಟ್ಟರೆಂಬ "ಬಿನ್ನವತ್ತಳೆ"ಗಳ ಕನ್ನಡವು ಬಹಳ ಇತ್ತೀಚಿನ ಭಾಷೆಯಂತಿದೆ, ೧೬ನೆಯ ಶತಮಾನಕ್ಕೆ ಸೇರಿದ್ದಾಗಿಲ್ಲ.

(೩) ಶೃಂಗೇರಿಯಲ್ಲಿ 1582, 1583ರಲ್ಲಿದ್ದ ನರಸಿಂಹಭಾರತೀಸ್ವಾಮಿಗಳಿಗೆ ವಿದ್ಯಾನರಸಿಂಹಭಾರತೀ(ಸ್ವಾಮಿ)ಗಳೆಂದೂ ಹೆಸರಿತ್ತು (M. A. R. 1934 No. 51.)

(೪) ಯುವ (1576)ಸಂವತ್ಸರದ ಕಾರ್ತಿಕ ಬಹುಳ ೧೫ರಲ್ಲಿ ಸಂಕಣ್ಣ ನಾಯಕನು ನರಸಿಂಹಭಾರತಿ (ಅಮ್ಮಾಜಿಸ್ವಾಮಿ)ಗಳ ಶಿಷ್ಯರಾದ ವಿದ್ಯಾರಣ್ಯ ಸ್ವಾಮಿಗಳ ನಡತೆಯನ್ನು ವಿಚಾರಮಾಡಿ ಮಹಾಜನರ ಹೇಳಿಕೆಯಂತೆ ಅವರು ಮಠಾಧಿಪತಿಗಳಾಗಿರಲು ಅನರ್ಹರೆಂದು ತೀರ್ಮಾನವಿತ್ತನು.

(೫) ಬ್ರಹ್ಮೇಶಭಟ್ಟನೆಂಬಾತನು ಕೂಡಲಿಮಠವನ್ನು ಸ್ವಾಧೀನಪಡಿಸಿಕೊಂಡನು, ಶಿವಪ್ಪನಾಯಕನು ಅವನು ಪೀಠಕ್ಕೆ ಅನರ್ಹನೆಂದು ಗೊತ್ತುಮಾಡಿ ಅಮ್ಮಾಜಿಗಳಿಗೆ ಕೊಟ್ಟಿದ್ದ ಗ್ರಾಮಗಳನ್ನು ಶೃಂಗೇರಿಮಠಕ್ಕೆ ಕೊಟ್ಟನು. (ಶಾರ್ವರಿ ಭಾದ್ರಪದ ಕ್ರಿ. ಶ. 166.)

(೬) ಕ್ರಿ. ಶ. 1807ರಲ್ಲಿ ದಿವಾನ ಪೂರ್ಣಯ್ಯನವರು ಶೃಂಗೇರಿಸ್ವಾಮಿಗಳಿಗೆ ಮಾತ್ರವೇ ಅಡ್ಡಪಾಲಕಿಯ ಮರ್ಯಾದೆ ಬಿರುದು ಸೇರತಕ್ಕದ್ದೆಂದೂ

ಮಿಕ್ಕ ಮಠಗಳ ವಿಷಯದಲ್ಲಿ ಶೃಂಗೇರಿಯ ಜಗದ್ಗುರುಗಳೇ ಯೋಗ್ಯನಿರೂಪಗಳನ್ನು ಕೊಡತಕ್ಕವರೆಂದೂ (1810) ಹುಕುಂಮಾಡಿರುತ್ತಾರೆ.

(೭) ಸಾತಾರೆಯ ಶಂಭುಛತ್ರಪತಿಯು ಶೃಂಗೇರಿಸ್ವಾಮಿಗಳಿಗೇ(ಕೂಡಲಿಗಲ್ಲ) ಇಮ್ಮಡಿಜನಿವಾನುಗಳೇ- ಮುಂತಾದವು ಸೇರತಕ್ಕದ್ದೆಂದು ಹುಕುಂಮಾಡಿರುತ್ತಾನೆ.

(೮) ಕೆಲವು ಬಿರುದುಮಾನಮರ್ಯಾದೆಗಳ ಬಗ್ಗೆ ಹೈದರಾಬಾದಿನಲ್ಲಿಯೂ ಮೈಸೂರಿನಲ್ಲಿಯೂ ಕೂಡಲಿಯವರು ಮಾಡಿಕೊಂಡ ದೂರುಗಳನ್ನು ತಳ್ಳಿಹಾಕಿ ಹೈದರಾಬಾದ್ ಸರಕಾರದವರೂ (ಕ್ರಿ. ಶ. 1845) ಮೈಸೂರು ದಿವಾನರೂ (1884), ಮೈಸೂರು ರೆಸಿಡೆಂಟರೂ (1895) ಶೃಂಗೇರಿಪರವಾಗಿಯೇ ಫೈಸಲುಕೊಟ್ಟಿರುತ್ತಾರೆ.

ಈವರೆಗೆ ನಾವು ಬರೆದಿರುವ ವಿವರಗಳು ವಾಚಕರಿಗೆ ದಿಗ್ಭ್ರಮೆಯನ್ನು ಉಂಟುಮಾಡುವದು ಸ್ವಾಭಾವಿಕವಾಗಿದೆ. ಎರಡು ಮಠಗಳ ಕಡೆಯವರೂ ತಮ್ಮ ರಿಕಾರ್ಡುಗಳನ್ನು ತೋರಿಸುತ್ತಿದ್ದಾರೆ; ಎರಡು ಕಡೆಯವರಿಗೂ ಮಹಾರಾಷ್ಟ್ರದವರ, ಹೈದರಾಬಾದಿನವರ ಮತ್ತು ಮೈಸೂರಿನವರ ಸಹಾಯವಾಗಿದೆ. ಈ ಕಥೆಯು ಪುರಾಣಗಳಲ್ಲಿರುವ ಪುಂಡರೀಕವಾಸುದೇವನ ಕಥೆಯಾಗಿ ಕಾಣುತ್ತಿದೆ. ನಿಜವಾದ ವಾಸುದೇವನು ಯಾರು ? ವಾಸುದೇವನೇ ಬಲ್ಲ ! ಋಷಿಮೂಲವನ್ನೂ ನದೀಮೂಲವನ್ನೂ ಹೆಚ್ಚಾಗಿ ಶೋಧಿಸುವದಕ್ಕೆ ಹೋಗಬಾರದು–ಎಂಬ ನಾಣ್ಣುಡಿಯೊಂದುಂಟು. ನಾವೂ ಆ ಅಭಿಪ್ರಾಯಕ್ಕೆ ತಲೆಬಾಗಿ ಈ ಪುರಾಣವನ್ನು ಇಲ್ಲಿಗೆ ನಿಲ್ಲಿಸುವೆವು.

ಕೂಡಲಿಯ ಮಠದ ಗುರುಪರಂಪರೆಯಲ್ಲಿ ೭೭ ಗುರುಗಳ ಹೆಸರುಗಳಿವೆ. ಹೆಚ್ಚಿಗೆ ವಿಷಯಗಳೇನೂ ಚರಿತ್ರಾರ್ಹವಾಗಿ ಸಿಕ್ಕಿಲ್ಲವಾದ್ದರಿಂದ ಅವನ್ನು ಇಲ್ಲಿ ಬರೆಯಲಿಲ್ಲ.

(೨) ಶಿವಗಂಗೆ

ಈ ಸಂಸ್ಥಾನವು ಬೆಂಗಳೂರಿನ ಪಶ್ಚಿಮಕ್ಕೆ ಸುಮಾರು ೩೪ ಮೈಲು ದೂರದಲ್ಲಿರುವ ಶಿವಗಂಗೆಬೆಟ್ಟದ ಉತ್ತರದ ತಪ್ಪಲಲ್ಲಿದೆ.

ಈ ಮಠದ ವಿಷಯಕ್ಕೆ ಶ್ರೀ|| ಕೆ. ಆರ್. ವೆಂಕಟರಾಮನ್ನರು ಬರೆದಿರುವದೇನೆಂದರೆ : ಶೃಂಗೇರಿಯ ಅಭಿನವನೃಸಿಂಹಭಾರತಿ(ಪ್ರಥಮ)–ಇವರು ಅಲ್ಲಿ ಮೈಸೂರು ರಾಜಒಡೆಯರ ಪ್ರಾರ್ಥನೆಯಂತೆ ಶಿವಗಂಗೆಯಲ್ಲಿ ಒಂದು ಮಠವನ್ನು ಸ್ಥಾಪಿಸಿ ತಮ್ಮ ಶಿಷ್ಯರಾದ ಶಂಕರಭಾರತಿಗಳನ್ನು ಅಲ್ಲಿ ಪೀಠಾಧಿಪತಿಗಳನ್ನಾಗಿ

ಮಾಡಿದರು. (KRTTW. 50), ಈ ಪೀಠದ ಆಧ್ಯಕ್ಷರಾಗಿದ್ದ ಅಭಿನವೋದ್ದಂಡಗಂಗಾಧರಭಾರತಿಗಳು ತಮ್ಮ ಶಿಷ್ಯರ ವರ್ತನೆಯಿಂದ ಅಸಂತುಷ್ಟರಾಗಿ ಬೇರೊಬ್ಬ ಸ್ವಾಮಿಗಳನ್ನು ಪೀಠದಮೇಲೆ ಇಡಬೇಕೆಂದು ಪ್ರಾರ್ಥಿಸಿದ ದಾಖಲೆಗಳು (1841, 43, 47) ಇವೆ.

ಈ ಮಠದವರೂ ಮೇಲಿನ ವಿಷಯಕ್ಕೆ ಉಪೋದ್ಬಲಕವಾಗಿ ಕೆಲವು ವಿಷಯಗಳನ್ನು ನಮಗೆ ಬರೆದುಕೊಟ್ಟಿರುತ್ತಾರೆ. ಶ್ರೀಶೃಂಗೇರೀ ಶಿವಗಂಗಾಜಗದ್ಗುರು ಪೀಠವೆಂದೇ ಇದಕ್ಕೆ ಹೆಸರು. ಕಾಲಟಿಯಲ್ಲಿ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹ ಭಾರತೀಸ್ವಾಮಿಗಳ ದಿವ್ಯಸನ್ನಿಧಿಯಲ್ಲಿ 1910ನೆಯ ಫೆಬ್ರವರಿ 21 (ಸೌಮ್ಯ ಮಾಘ ಶು. ೧೨) ಶ್ರೀಶಂಕರಭಗವತ್ಪಾದರವರ ಮತ್ತು ಶ್ರೀಶಾರದಾಂಬೆಯ ವಿಗ್ರಹಗಳ ಪ್ರತಿಷ್ಠೆಯು ನಡೆದಾಗ ಶಿವಗಂಗೆಯು ಸ್ವಾಮಿಗಳೂ ಸಂನಿಹಿತರಾಗಿದ್ದರು. ಅಹವನ್ನು ಪ್ರಕೃತಗ್ರಂಥಕರ್ತರು ಕಣ್ಣಾರೆ ನೋಡಿದಾರೆ. ಆದ್ದರಿಂದ ಈ ಮಠದ ವಿಷಯಕ್ಕೆ ಯಾವ ವಿವಾದವೂ ಇಲ್ಲ.

(೩) ಸಂಕೇಶ್ವರಮಠ

ಈ ಪೀಠದ ವಿಷಯಕ್ಕೆ ಕಾ. ಶೇ. ವೆಂಕಟಾಚಲಶಾಸ್ತ್ರಿಗಳು ಬರೆದಿರುವದೇನೆಂದರೆ: ಕೂಡಲೀಪೀಠವನ್ನು ಸ್ಥಾಪಿಸಿದ ಶ್ರೀಶಂಕರಭಾರತೀಸ್ವಾಮಿಗಳು ಮತ್ತೆ ಕಾಶೀಯಾತ್ರೆಗೆ ಹೊರಟು ಮಧ್ಯಮಾರ್ಗದಲ್ಲಿ ಸಂಕೇಶ್ವರಗ್ರಾಮದ ಉತ್ತರದಲ್ಲಿರುವ ವಲ್ಲಭಗಡವೆಂಬಲ್ಲಿಗೆ ಹರಿದ್ರಾದೇವಿಯ ದರ್ಶನಕ್ಕಾಗಿ ಬಂದರು. 'ನೀವು ಸಂಕೇಶ್ವರನ ಪೂಜೆಯನ್ನು ಮಾಡಿರಿ' ಎಂದು ಅವರಿಗೆ ಸ್ವಪ್ನವಾಗಲಾಗಿ ಕಶ್ಮಲಾಪಹಾರಿ (ಹಿರಣ್ಯಕೇಶೀ) ನದಿಯಲ್ಲಿ ದಿನವೂ ಮಿಂದು ಈಶ್ವರಪೂಜೆಯನ್ನು ಮಾಡುತ್ತಿದ್ದರು. ಒಮ್ಮೆ ಬಿಜಾಪುರ ಬಾದಷಹನ ಸೇನಾಪತಿಯಾದ ಇಬ್ರಾಹಿಂ ಕ್ಯಾದಲ್ ಎಂಬಾತನು ಅಲ್ಲಿಗೆ ಬಂದು ಅವರಿಗೆ ಕೆಲವು ಗ್ರಾಮಗಳನ್ನು ಕೊಟ್ಟನು. ಮುಂದೆ ಕೊಲ್ಲಾಪುರದ ಮಹಾರಾಜರು ಕೆಲವು ಗ್ರಾಮಗಳನ್ನು ಕೊಟ್ಟರು. ಅಲ್ಲಿಂದ ಮುಂದಕ್ಕೆ ಮಠಕ್ಕೆ 'ಕರವೀರ'ಮಠವೆಂದೇ ಹೆಸರು ಬಂತು. ಈ ಮಠದಲ್ಲಿ ಶಂಕರಭಾರತಿಗಳು ಗೃಹಸ್ಥರೊಬ್ಬರಿಗೆ ಸಂನ್ಯಾಸವನ್ನು ಕೊಟ್ಟು ಪೀಠಾಧಿಪರನ್ನಾಗಿ ಮಾಡಿದ್ದರಿಂದ ಆ ಸಂಪ್ರದಾಯವೇ ಈಗಲೂ ನಡೆದುಕೊಂಡುಬಂದಿದೆ. ಈ ಎರಡು ಮಠಗಳಲ್ಲಿಯೂ 'ಭಾರತೀ' ಎಂಬ ಹೆಸರೇ ಬಂದಿರುವದಕ್ಕೆ ಶೃಂಗೇರೀಸಂಪ್ರದಾಯಕ್ಕೆ ಸೇರಿರುವದೇ ಕಾರಣ (ಪು. ೨೪–೩೫).

ಕೂಡಲೀಕರವೀರಮಠಗಳ ಸಂಬಂಧ

ನಿಶಿಷ್ಟಾದೇವಿಯ ಮುಖದ್ವಾರದಿಂದ ಒಳಹೊಕ್ಕು ಚಿದಂಬರೇಶ್ವರನೇ ಶಂಕರಾಚಾರ್ಯರಾಗಿ ಯುಧಿಷ್ಠಿರಶಕ ೨೬೩೫ರಲ್ಲಿ ಸರ್ವಧಾರಿವರ್ಷದಲ್ಲಿ ಜನಿಸಿ

ದನು. ಆಚಾರ್ಯರು ನಾಲ್ಕು ಶಿಷ್ಯರನ್ನು ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ಪೀಠಗಳಿಗೆ ಅಧಿಪತಿಗಳನ್ನಾಗಿ ನೇಮಿಸಿದರು. ಶೃಂಗೇರಿಯಲ್ಲಿ ಕೆಲವು ಕಾಲವಿದ್ದು ಸರಸ್ವತಿಯ ವಾಕ್ಯನ್ನು ಸತ್ಯವಾಗಿಸಲೋಸುಗ 'ದಕ್ಷಿಣಕಾಶಿ' ಎಂದು ಪ್ರಸಿದ್ಧವಾದ ಕರವೀರಕ್ಷೇತ್ರದಲ್ಲಿ ಮಠವನ್ನು ಸ್ಥಾಪಿಸಿ ಇಲ್ಲಿ ವಿದ್ಯಾಧರ್ಮಪೀಠವನ್ನು ಸ್ಥಾಪಿಸಿರೆಂದು ಶಿಷ್ಯರಿಗೆ ಆಜ್ಞಪಿಸಿತ್ತು ಬೊಂಬಾಯಿನಗರದ ಹತ್ತಿರವಿರುವ "ವಿಮಲನಿರ್ಮಲ"ವೆಂಬ ಕ್ಷೇತ್ರದಲ್ಲಿ ಸಮಾಧಿಸ್ಥರಾದರು.[1]

ಮುಂದೆ ಅನೇಕ ವರ್ಷಗಳ ತರುವಾಯ ಶೃಂಗೇರಿಯ ಪೀಠಾಧಿಪರಾದ ವಿದ್ಯಾನೃಸಿಂಹಭಾರತೀಸ್ವಾಮಿಗಳವರು ತಮ್ಮ ಶಿಷ್ಯರಾದ ವಿದ್ಯಾಶಂಕರ ಭಾರತಿಗಳಿಗೆ ವ್ಯಾಸದತ್ತಚಂದ್ರವಾಲೀಶ್ವರಲಿಂಗದ ಪೂಜೆಯನ್ನು ಯಥಾವಿಧಿಯಾಗಿ ಪೂಜಿಸುತ್ತಿರುವಂತೆ ಹೇಳಿ ಮಹಾಯಾತ್ರೆಗೆ ಹೋಗಿ ಹಿಂತಿರುಗಿದಾಗ ಶಿಷ್ಯಸ್ವಾಮಿಗಳು ತಾವೇ ನನ್ನನ್ನು ಇಲ್ಲಿ ಸ್ಥಾಪಿಸಿ ಈಗ ಮತ್ತೆ ಪೀಠವನ್ನು ಬಯಸುವದು ತಕ್ಕದ್ದಲ್ಲವೆಂದು ಬಿನ್ನವಿಸಿಕೊಂಡರು. ಇವನು ನನ್ನ ಶಿಷ್ಯನು ಎಂದು ಅವನನ್ನು ಉಪೇಕ್ಷೆನೂಡಿ, ಕೂಡಲಿಯಲ್ಲಿ ಬೇರೆ ಒಂದು ಮಠವನ್ನು ಸ್ಥಾಪಿಸಿ ನಿಂತರು. ಬಳಿಕ ಕರವೀರ(ಕೊಲ್ಲಾಪುರದ) ಅರಸನ ಪ್ರಾರ್ಥನೆಯಂತೆ ತಮ್ಮ ಶಿಷ್ಯನನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಕೆಲವು ದಿನಗಳಾದ ಬಳಿಕ ಕೂಡಲಿಯಲ್ಲಿದ್ದ ಸ್ವಾಮಿಗಳು ಬಹಳ ವೃದ್ಧರಾಗಿದ್ದದ್ದರಿಂದ 'ಈ ಕೂಡಲೆ ನೀವು ಹೊರಟುಬರಬೇಕು ; ನೀವು ಬರುವದು ತಡವಾದರೆ ನೀವು ಪ್ರತ್ಯುತ್ತರವನ್ನು ಕಳುಹಿಸುವ ಬ್ರಾಹ್ಮಣನಿಗೇ ಸಂನ್ಯಾಸವನ್ನು ಕೊಟ್ಟು ಇಲ್ಲಿಗೆ ಕಳುಹಿಸಬೇಕು' ಎಂದು ಬರೆದರು. ಕರವೀರಸ್ವಾಮಿಗಳು ಕಳುಹಿಸಿಕೊಟ್ಟ ಬ್ರಾಹ್ಮಣಸಂನ್ಯಾಸಿಯು ಹರಿಹರಕ್ಕೆ ಬರುವದರೊಳಗೆ ವೃದ್ಧ ಸ್ವಾಮಿಗಳು ಸಮಾಧಿಸ್ಥರಾದರು. ಆ ಸಂನ್ಯಾಸಿಯು ಕೂಡಲಿಗೆ ಬರುವಹೊತ್ತಿಗೆ ಮಠದ ಸರ್ವಾಧಿಕಾರಿಯು ತನ್ನ ಕಡೆಯವರೊಬ್ಬರಿಗೆ ಪುಸ್ತಕಸಂನ್ಯಾಸವನ್ನು ಕೊಡಿಸಿ[2] ಪೀಠಕ್ಕೆ ಕೂರಿಸಿದ್ದನು. ಆದ್ದರಿಂದ ಕರವೀರದಿಂದ ಬಂದ ಸ್ವಾಮಿಯು ಅಲ್ಲಿಗೇ ಹಿಂತಿರುಗಿ ಬಂದು ಗುರುಸಂನ್ನಿಧಿಯಲ್ಲಿ ನಿಂತುಬಿಟ್ಟನು (ಪು. ೩೭).

ಮುಂದೆ ಒಮ್ಮೆ ಕೂಡಲಿಯ ಸ್ವಾಮಿಗಳು ಸಾತಾರೆಗೆ ಬಂದು ತಮಗೂ ಕರವೀರದ ಪೀಠಾಧಿಪತಿಗಳಿಗೂ ಆಚಾರಾದಿವ್ಯವಸ್ಥೆಗಳಲ್ಲಿ ಸಮಾನಹಕ್ಕುಗಳಿರು

---

1. ಆವಂದಗಿರಿಯು ಹೇಳುವ 'ಶಂಕರರು' ಇವರೇ ಆಗಿರಬಹುದೆ ?

2. ಈ ದಂತಕಥೆಯಂತೆ ಕೂಡಲಿಮಠದವರೇ 'ಪುಸ್ತಕಸಂನ್ಯಾಸಿಗಳ ಪರಂಪರೆ ಯವರು' ಎಂದು ಕರವೀರಪೀಠದ ಅನುಯಾಯಿಗಳು ಹೇಳಿರುವಂತೆ ಆಯಿತು, ಕೂಡಲಿಮಠದ ದ್ವಿತೀಯಶಾಖೆಯುವದು ಹೇಳುವಂತೆ ಶೃಂಗೇರಿಯವರಿಗೆ ಈ ಅಪವಾದ ವಿಲ್ಲವೆಂದಾಯಿತು.

ವಂತೆ ಮಾಡಿಸಿಕೊಡಬೇಕೆಂದು ಛತ್ರಪತಿಗಳ ಆಜ್ಞೆಯನ್ನು ಪಡೆಯುವದಕ್ಕೆ ಪ್ರಯತ್ನಮಾತಿದರು. ಮಹಾರಾಜನು ಎಲ್ಲವನ್ನೂ ವಿಚಾರಮಾಡಿ ಕೂಡಲೆ ಸ್ವಾಮಿಗಳು ಅಲ್ಲಿಯ ದೇವಪೂಜೆಯನ್ನು ಮಾಡಿಕೊಂಡು ತುಂಗಭದ್ರಾಮಲಾಸ ಹಾರಿಣೀನದಿಗಳ ನಡುವೆ ಇರುವ ಭಾಗದಲ್ಲಿ ಆಚಾರವ್ಯವಹಾರಾದಿಗತನ್ನು ನೋಡಿಕೊಂಡಿರತಕ್ಕದ್ದು, ಮಲಾಪಹಾರಿಣಿಯ ಉತ್ತರಕ್ಕೆ ಪೂರ್ವಪಶ್ಚಿಮ ಸಮುದ್ರಗಳ ನಡುವೆ ಇರುವ ಭಾಗದಲ್ಲಿ ಕರವೀರಪೀಠಾಧಿಪರ ಅಧಿಕಾರವೇ ಇರತಕ್ಕದ್ದು—ಎಂದು ಇಬ್ಬರು ಸ್ವಾಮಿಗಳನ್ನೂ ಒಪ್ಪಿಸಿ ನಿರ್ಣಯಿಸಿದನು [1] (ಪು. ೩೬–೩೭).

ಇಲ್ಲಿ ನಾವು ಸಂಗ್ರಹಿಸಿಕೊಟ್ಟಿರುವಷ್ಟು ಭಾಗವನ್ನು ಶ್ರೀ|| ಕಾ. ಶೇ ಪೆಂಕಟಾಚಲಶಾಸ್ತ್ರಿಗಳವರು ಪ್ರೊ. ರಾಜವಾಡೇಕೃತ "ಮರಾಠ್ಯಾಂ ಚ್ಯಾ ಇತಿಹಾಸಾಚೀಂ ಸಾಧನೇಂ" ಎಂಬ ಪುಸ್ತಕದಿಂದ ತೆಗೆದುಕೊಂಡದ್ದೆಂದು ಬರೆದಿರುತ್ತಾರೆ.

ಕರವೀರ(ಸಂಕೇಶ್ವರ)ಮಠದ ವಿಷಯಕ್ಕೆ ಇನ್ನೊಂದು ಕಥೆ

ಸೋಮವಂಶದ ಕೃಷ್ಣರಾಜನೆಂಬಾತನು ಕ್ರಿ. ಶ. ೧೩ನೇ ಶತಮಾನದಲ್ಲಿ ಕರವೀರದಲ್ಲಿ ಆಳುತ್ತಿದ್ದನು. ಆತನ ಸ್ಪಾರ್ಧನೆಯಂತೆ (ಮೊದಲಿನ ಕಥೆಯುಲ್ಲಿ ಹೇಳಿರುವ) ಶಂಕರಭಾರತೀಸ್ವಾಮಿಗಳು ಬೊಂಬಾಯಿಯ ಹತ್ತಿರವಿರುವ 'ವಸಈ' ಗ್ರಾಮದ ಹತ್ತಿರವಿರುವ 'ವಿಮಲನಿರ್ಮಲ' ಎಂಬಲ್ಲಿ ಸಮಾಧಿಸ್ಥರಾದರು. ಈಗಲೂ ಅಲ್ಲಿ ಅವರದ್ದು ಒಂದು ಧರ್ಮಪೀಠವಿದೆ ಎಂದು ತಿಳಿಯಬರುತ್ತದೆ. ಹೀಗೆಯೇ ಸಂಕೇಶ್ವರ, ವಿದ್ಯಾಪುರ, ನೃಸಿಂಹವಾಡಿ, ಗೋಲವಣ, ಪೈಠಣ, ಕಾಶಿ—ಮುಂತಾದ ಸ್ಥಲಗಳಲ್ಲಿಯೂ ಕರವೀರದವರ ಪೀಠಗಳು ನಿರ್ಮಿತವಾಗಿವೆ.

ಕ್ರಿ. ಶ. ೧೫೦೦ರ ಸುಮಾರಿನಲ್ಲಿ ಸಂಕೇಶ್ವರದಲ್ಲಿ ಒಂದು ಮಠವನ್ನು ಮೇಲೆ ಹೇಳಿದ ಶಂಕರಭಾರತೀಸ್ವಾಮಿಗಳು—ಜಗದ್ಗುರು ದೇವ ಗೋಸಾವಿ ಎಂದೂ ಅವರಿಗೆ ಮತ್ತೊಂದು ಹೆಸರು— ಒಂದು ಮಠವನ್ನು ಸ್ಥಾಪಿಸಿದರು. ಕೊನ್ನೆಹ್ಹೇರ ರಾವ್ ಪಟವರ್ಧನ (ಕಾಗವಾಡಕರ) ಎಂಬ (ಪೇಶ್ವೆಗಳ) ಸೇನಾಪತಿಯು ಲೂಟಿ ಮಾಡಿ ಮಠಕ್ಕೆ ಬೆಂಕಿಹೊತ್ತಿಸಿದ್ದರಿಂದ ಅಲ್ಲಿದ್ದ ಆಚಾರ್ಯರು ಸಂಕೇಶ್ವರದಲ್ಲಿ

---

1. ಸಾಹುಛತ್ರಪತಿಯು ತೀರ್ಪಿನಲ್ಲಿರುವ ವಿಷಯಗಳಲ್ಲಿ ಕೂಡಲಿಯ ದ್ವಿತೀಯ ಶಾಖೆಯವರು ಹೇಳುವದಕ್ಕೂ ಇಲ್ಲಿರುವ ವೃತ್ತಾಂತಕ್ಕೂ ವೈಲಕ್ಷಣ್ಯವಿದೆ ಎಂಬುದನ್ನು ಲಕ್ಷಿಸಬೇಕು. ಇಲ್ಲಿ ಕರವೀರಪೀಠವವರಿಗೇ ಮುಖ್ಯಸ್ಥಾನ. ಈ ತೀರ್ಪನ್ನು ಶೃಂಗೇರಿಯ ನೃಸಿಂಹಭಾರತೀಸ್ವಾಮಿಗಳವರಿಗೂ ಸಾಹುಮಹಾರಾಜನು ಕಾರ್ತಿಕ ಕೃಷ್ಣ ೦ ಸೋಮವಾರದ (ಸಂವತ್ಸರದ ಹೆಸರಿಲ್ಲ) ಪುತ್ರವೊಂದರಲ್ಲಿ ತಿಳಿಸಿದ್ದಾಗಿ ಶಾಸ್ತ್ರಿಗಳು ಬರೆದಿರುತ್ತಾರೆ.

ಯೇ ನಿಂತಶು. ಅಲ್ಲಿಂದ ಮುಂದಕ್ಕೆ ಮೊದಲನೆಯ ಆಚಾರ್ಯರಿಗೆ ಕರವೀರ ಪೀಠಾಧಿಪರೆಂದೂ ಸಂಕೇಶ್ವರಪೀಠಾಧಿಪರೆಂದೂ ಹೆಸರು ಬಳಕೆಗೆ ಬಂತು. ಈ ವೃತ್ತಾಂತವು ಮರೆತುಹೋದದ್ದರಿಂದ ಈಗ ಸಂಕೇಶ್ವರವೇ ಆನಾದಿಯೆಂದು ಹೇಳಿಕೊಳ್ಳುತ್ತಿದಾರೆ.

ವಿಶೇಷ

ಮು॰ರಾ॥ ಬೋಡಸ್‌ರವರು ಬರೆದಿರುವ 'ಶಂಕರಾಚಾರ್ಯ' ಎಂಬ ಪುಸ್ತಕದಲ್ಲಿಯೂ ಸ್ವಲ್ಪ ಹೆಚ್ಚುಕಡಿಮೆಯಾಗಿ ಮೇಲೆ ಹೇಳಿದ ವಿವರಗಳೇ ಕಂಡುಬರುತ್ತವೆ (ಪು. ೬೯–೭೭). ಅವರು ಕೊಟ್ಟಿರುವ ಇನ್ನೂ ಕೆಲವು ವಿವರಗಳನ್ನು ಇಲ್ಲಿ ವಾಚಕರ ಮನಸ್ಸು ಮುತ್ತಷ್ಟು ಗಲಿಬಿಲಿಯಾದೀತೆಂದು ಕೊಡಲಿಲ್ಲ. ಕರವೀರದಲ್ಲಿ (೧) ಸಾಕ್ಷಾತ್ತಾಗಿ ಶಂಕರಾಚಾರ್ಯರು, (೨) ಶೃಂಗೇರಿಯ ಶಂಕರಭಾರತೀ ಸ್ವಾಮಿಗಳು, (೩) ವಿದ್ಯಾನರಸಿಂಹಭಾರತೀಸ್ವಾಮಿಗಳು–ಈ ಮೂವರಲ್ಲಿ ಒಬ್ಬರು ಮಠವನ್ನು ಸ್ಥಾಪಿಸಿದರು ಎಂದು ಕಥೆಗಳಿಂದ ಏರ್ಪಡುತ್ತದೆ. ಕರವೀರದವರಿಗೂ ಕೂಡಲಿ ಶೃಂಗೇರಿಯವರಿಗೂ ಯಾವದು ಗುರುಪೀಠ, ಯಾವದು ಶಿಷ್ಯಸ್ವಾಮಿ ಪೀಠ?– ಎಂಬ ಬಗ್ಗೆ ವಿವಾದವಿದೆ. ಕರವೀರ, ಸಂಕೇಶ್ವರ– ಈ ಎರಡರ ಆನು ಯಾಯಿಗಳಲ್ಲಿ ಯಾವದು ಮೂಲಮಠ? ಎಂಬ ಬಗ್ಗೆ ವಿವಾದವಿದೆ ಎಂದಾಯಿತು.

ಈಗ ಇನ್ನೊಂದು ವಿಷಯ. ಶ್ರೀಕೂಡಲಿ ಜಗದ್ಗುರುಗಳವರನ್ನು ನಾವು ಸಾಕ್ಷಾತ್ತಾಗಿ ನೋಡಿದಾಗ ಅವರು ಸಂಕೇಶ್ವರಮಠದಿಂದ ತಮ್ಮ ಮಠಕ್ಕೆ ಬಂದಿದ್ದ ಎರಡು ಪತ್ರಗಳನ್ನು ತೋರಿಸಿದ್ದರು. ಅವುಗಳಲ್ಲೊಂದು ಕ್ರಿ. ಶ. 1558ರಲ್ಲಿ ಬರೆದದ್ದು. ಅದರ ಪ್ರಾರಂಭದ ಒಕ್ಕಣೆ ಹೀಗಿದೆ :–

ಪಿಂಗಲ ಸಂವತ್ಸರ ಮಾಘ ಶು. ೧೫. ಶಾ. ಶ. ೧೪೮೦ ಕ್ರಿ. ಶ. 1558 ಅತ್ಯಂತಪ್ರಿಯಶಿಷ್ಯ ಅಭಿನವವಿದ್ಯಾಶಂಕರಭಾರತೀ ಮಠ ಸಂಸ್ಥಾನ ಶಂಕೇಶ್ವರ ಯಾಣ (ಚ?) ತ್ರಿಸಂಧ್ಯಾಕಾಲೀ ವಿಜ್ಞಾಪನಾಪೂರ್ವಕ ಕೃತ ದಂಡವತ್ ಪ್ರಣಾವಾಃ ||

ಇದು

(೧) ಪಿಂಗಲಸಂವತ್ಸರದ ಮಾಘ ಶು. ೧೫ ಶಾ. ಶ. ೧೪೮೦.

'ಶ್ರೀಮಜ್ಜಗದ್ಗುರು ಶ್ರೀಕೂಡ್ಲಿ – ಶೃಂಗೇರಿಸಂಸ್ಥಾನದ 'ಪ್ರಾಚೀನಶಾಸನ –ಲೇಖನಸಂಗ್ರಹ'ದ ಒಂದನೆಯ ಭಾಗದ ೧೪ನೆಯ ಜಂಜರುಸಂಖ್ಯೆಯಪತ್ರ.[1]

1. ಶ್ರೀಶ್ರೀಗಳವರು ನಮಗೆ ಈ ಪುಸ್ತಕದ ಒಂದು ಪ್ರತಿಯನ್ನು ಕೊಟ್ಟದ್ದು ಮತ್ತೆ ಏಕೋ ಹಿಂದಕ್ಕೆ ತರಿಸಿಕೊಂಡುಬಿಟ್ಟರು. ಪುಸ್ತಕದಲ್ಲಿ ಕೆಲವು ತಪ್ಪುಗಳನ್ನು ತಿದ್ದಬೇಕಾಗಿದೆ ಎಂತ ನಮಗೆ ತಿಳಿಸಿರುತ್ತಾರೆ. ಆದ್ದರಿಂದ ಈ ಸಂಖ್ಯೆಗಳು ಹೆಚ್ಚುಕಡಿಮೆಯಾದೀತೇನೊ, ತಿಳಿಯದು.

(೨) ಇನ್ನೊಂದು (ಸಂಖ್ಯೆ ೧೦) ಸಂವತ್ಸರ ನಮೂದಿಲ್ಲದ ಪತ್ರ. ಊಹೆಯಿಂದ ಹಾಕಿರುವ ವರ್ಷ ಸುಮಾರು ಶಾ.ಶ. ೧೬೦೭, ಕ್ರಿ.ಶ. 1686. ಇದರಲ್ಲಿರುವ ಒಕ್ಕಣೆ ಹೀಗಿದೆ :–

ಶ್ರಿಮತ್ಪರಮಹಂಸ ಪರಿವ್ರಾಜಕಾಚ್ಯನೇಕ ಬಿರುದ ಮಾಲಾ ವಿಶಿಷ್ಟ ಶೃಂಗೇರಿ ತಂಕರಭಾರತೀ ಯತೀಂದ್ರಾನ್ ಪ್ರತಿ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಾದ್ಯನೇಕ ಬಿರುದಾಂಕಿತ ಶೃಂಗೇರಿ ನರಸಿಂಹಭಾರತೀ ಯತೀಂದ್ರಕೃತ ಪರಸ್ಪರಂ ನಾರಾಯಣ ಸ್ಮರಣ ಪೂರ್ವಕ

[ಈ ಪತ್ರದಲ್ಲಿ ಶೃಂಗೇರಿಯವರು ಬರೆದ ಪತ್ರದಲ್ಲಿ ಸಮಾನಪ್ರತಿಪತ್ತಿಯಿಂದ ಬರೆದ ಒಕ್ಕಣೆಯನ್ನು ಲಕ್ಷಿಸಬೇಕು. ಶಾರದಾಪೂಜಾಸಕ್ತ– ಎಂದೇನೂ ಇಲ್ಲಿಲ್ಲ.]

ಪತ್ರಿಕೆಯೆಲ್ಲವೂ ದೇವನಾಗರಿಯಲ್ಲಿದೆ. ಅದರ ವಿಷಯದ ಸಾರವೇನೆಂದರೆ:

'ಮೊಕ್ಕೂರ ಮಹಾದೇವ'ನೆಂಬಾತನ ಮೂಲಕ ಕಳುಹಿಸಿದ 'ವಿಜ್ಞಪ್ತಿ' ಪತ್ರಿಕೆಯಿಂದಲೂ ಕೊಂಡಿಭಟ್ಟರು ಬಾಯಲ್ಲಿ ಹೇಳಿದ್ದರಿಂದಲೂ ಆಲ್ಲಿಯ ವಿಚಾರವೆಲ್ಲ ತಿಳಿಯಿತು.

ಭಾಗ್ಯನಗರದ ಕಡೆಯಲ್ಲಿ ಸಂಕೇಶ್ವರದ ಯಾವನೋ ಒಬ್ಬನು ತೆನ್ನ ಹೊಟ್ಟೆಯನ್ನು ಹೊರೆದುಕೊಳ್ಳುವದಕ್ಕಾಗಿ 'ನನಗೆ ಕೂಡಲಿಮಠದ ಶ್ರೀಗಳು ಸಂನ್ಯಾಸವನ್ನು ಕೊಟ್ಟಿರುತ್ತಾರೆ' ಎಂದು ಹೇಳಿಕೊಳ್ಳುತ್ತಿದಾನಂತೆ. ವಿಚಾರಿಸಿದ್ದರಲ್ಲಿ ಆವನು ಋಗ್ವೇದಿ, ಗೃಹಸ್ಥ, ಗೋಸಾವೀಸಂಪ್ರದಾಯದವನು. ಇಂಥವನು ದ್ರಾವಿಡ, ದಕ್ಷಿಣಾಮ್ನಾಯ ಭೋಗವಾರಸಂಪ್ರದಾಯದ ಭಗವತ್ಪಾದರ ಸಂಪ್ರದಾಯಕ್ಕೆ ಹೇಗೆ ಅಧಿಕಾರಿಯಾದಾನು? ಈ ಮಠದಲ್ಲಿ ಬ್ರಹ್ಮಚರ್ಯವಾದ ಮೇಲೆ ಸಂನ್ಯಾಸ, ಯಜುರ್ವೇದದಲ್ಲಿರುವ ಮಹಾವಾಕ್ಯ, ಹೀಗಿರುವಲ್ಲಿ ಆವನು ಹೇಗೆ ಈ ಮಠದ ಸಂನ್ಯಾಸಕ್ಕೆ ಅಧಿಕಾರಿಯಾದಾನು? ಈ ವೇಷಧಾರಿಗೆ ಯಥಾಯೋಗ್ಯವಾಗಿ ಕೊಂಡಿಭಟ್ಟನ ಮೂಲಕ ದಂಡನೆಯ ಪತ್ರವನ್ನು ತಾವು ಕೊಡಬೇಕು ; ಅಥವಾ ಆವನ ವಿಚಾರವನ್ನು ಬರೆದು ಕಳುಹಿಸಿದರೆ ನಾವೇ ಆವನಿಗೆ ನಿಗ್ರಹಕೊಡುವೆವು.'

ಈ ಎರಡು ಪತ್ರಿಕೆಗಳನ್ನು ನೋಡಿದರೆ ಸಂಕೇಶ್ವರಮಠದವರು ಕೂಡಲಿ ಮಠಕ್ಕೆ ಅಧೀನರೆಂದು ಒಂದು ಪತ್ರದಿಂದ, ಆವರಿಗೆ ಶಂಕರಸಂಪ್ರದಾಯದ ಸಂನ್ಯಾಸಕ್ಕೆ ಅಧಿಕಾರವೇ ಇಲ್ಲವೆಂದು ಮತ್ತೊಂದು ಪತ್ರದಿಂದ ತಿಳಿಯಬರುತ್ತದೆ. ಇದರ ನಿಜವನ್ನು ತಿಳಿಯಬೇಕೆಂದು ನಾವು 1960ರಲ್ಲಿ ಚಾತುರ್ಮಾಸ್ಯಕ್ಕಾಗಿ ಧಾರವಾಡದಲ್ಲಿ ನಿಂತಿದ್ದಾಗ ಸಂಕೇಶ್ವರಮಠಕ್ಕೆ ಪತ್ರವನ್ನು ಬರೆಯಿಸಿದೆವು.

ಅಂಚೆಯ ಇಲಾಖೆಯಿಂದ ಬೇರೆಬೇರೆ ಮೂರು ಕಡೆಗಳಲ್ಲಿ[1] ಆ ಹೆಸರಿನ ಮಠಗಳಿರುವದಾಗಿ ತಿಳಿಯಬಂದಿತು. ರಿಜಿಸ್ಟರುಮೂಲಕ ಬರೆದ ಪತ್ರಗಳಿಗೆ ಸಂಕೇಶ್ವರದಿಂದ ಮಾತ್ರ (ಸಂ. 56|60-61 ತಾ॥ 11-9-60) ಹೀಗೆಂದು ಉತ್ತರವು ಬಂದಿತು: 'ತಾವು ಕೇಳಿದ ಖುಲಾಸಾದ ಬಗ್ಗೆ ನಮ್ಮಲ್ಲಿರುವ ರಿಕಾರ್ಡದಲ್ಲಿ ತಪಾಸ್ ಮಾಡಿ ತಮಗೆ ಏನಂಬೋದನ್ನು ತಿಳಿಸುವದಲ್ಲಿ ಬರುವದು. ರಿಕಾರ್ಡು ನೋಡುವ ಕೆಲಸ ಸುರು ಅದೆ. ತಿಳಿಯಬೇಕು.'

೪ ಅವನೀಮಠ

ಈ ಮಠವು ಶಂಗೇರೀಮಠದ ಶ್ರೀನೃಸಿಂಹಭಾರತೀಸ್ವಾಮಿಗಳು ಕೋಲಾರದಲ್ಲಿಳಿದಿದ್ದಾಗ ಸ್ಥಾಪಿಸಿದರು (MAR. 1929, p. 88) ಎಂದು ಕೆ. ಆರ್ ವೆಂಕಟರಾಮನ್‌ರವರು (KRTTW. p. 60) ಬರೆದಿರುತ್ತಾರೆ. ಅವರ ಶ್ರೀಮುಖದಲ್ಲಿರುವ ಒಕ್ಕಣೆಯಲ್ಲಿ ಶ್ರೀಶೃಂಗೇರೀ 'ಶ್ರೀವಿದ್ಯಾಶಙ್ಕರದೇವದಿವ್ಯ ಶ್ರೀಪಾದಪದ್ಮಾರಾಧಕ' ಎಂದಿರುವದರಿಂದಲೂ 'ಅವನಿಶೃಂಗೇರಿ'ಮಠವೆಂಬ ಹೆಸರಿರುವದರಿಂದಲೂ ಇದು ಸಂಭಾವಿತವೆಂದೇ ತೋರುತ್ತದೆ. ಆದರೆ ಈಚೆಗೆ ಅವನೀಮಠವು ಸ್ವತಂತ್ರವಾಗಿ ಶಂಕರಾಚಾರ್ಯರ ಸಂಪ್ರದಾಯಕ್ಕೆ ಸೇರಿದ ಮಠವೆಂದು ಬರೆದ ಒಂದು ತಮಿಳುಗ್ರಂಥದ ಕನ್ನಡಾನುವಾದವೂ ನಮಗೆ ಸಿಕ್ಕಿರುತ್ತದೆ. ಇದು 'ಪದ್ಮಪಾದಾಚಾರ್ಯವಿರಚಿತವಾದ ಗ್ರಂಥದ ಆಧಾರದಿಂದ ತಾವು ಬರೆದಿರುವದಾಗಿ ಹೇಳಿಕೊಂಡಿರುವ ಶ್ರೀಬ್ರಹ್ಮವಿದ್ಯಾನಂದನಾಥಭಾರತೀ ಸ್ವಾಮಿಗಳ ಕೃತಿ.[2]

೫. ಶ್ರೀರಾಮಚಂದ್ರಾಪುರಮಠ

ಶೃಂಗೇರಿಯ ಶ್ರೀಶಂಕರಾನಂದಭಾರತಿ (1448-54) ಇವರ ಶಿಷ್ಯ ಮಾಧವ ಭಾರತಿಗಳವರು ಚಕ್ರವರ್ತಿಯಿಂದ ಒಂದು ಇನಾಮತಿಯನ್ನು ಪಡೆದು (A.R.S.I.E. 1916 No. 27,Sg. R. 7) ಗೋಕರ್ಣದಲ್ಲಿ ಒಂದು ಮಠವನ್ನು ಸ್ಥಾಪಿಸಿದರು-ಎಂದು ಕೆ.ಆರ್. ವೆಂಕಟರಾಮನ್‌ರವರು(KRTT-W p. 52) ಬರೆದಿರುತ್ತಾರೆ.

---

1. (೧) ಶಂಕರಾಚಾರ್ಯರು : ಕರವೀರಮಠ, ಕೊಲ್ಲಾಪುರ : ಬೊಂಬಾಯಿ, (೨) ಶ್ರೀಜಗದ್ಗುರು ಶ್ರೀಶಂಕರಾಚಾರ್ಯಸಂಕೇಶ್ವರಮಠ, ಸಂಕೇಶ್ವರ (ಬೆಳಗಾಂವಿ) (೩) ಶ್ರೀಜಗದ್ಗುರು(ಕರವೀರ) ಶ್ರೀಶಂಕರಾಚಾರ್ಯ ಡಾ॥ ಕುರ್ತಕೋಟಿ, ಕೃಷ್ಣಮಂದಿರು ಪಂಚವಟಿ, ನಾಸಿಕ.

2. ಈ ಸ್ವಾಮಿಗಳು 'ಓಂಕಾರಸ್ವಾಮಿ'ಗಳೆಂಬ ಹೆಸರಿನಿಂದ ಪ್ರಖ್ಯಾತರಾಗಿ ಮೈಸೂರಿನಲ್ಲಿ ಹಲವು ವರ್ಷಗಳಿಂದ ಇದ್ದು ಅಲ್ಲಿಯೇ ಸಮಾಧಿಸ್ಥರಾದರು. ಅವನೀಮಠಕ್ಕೆ ತಾವೂ ಅಧಿಕಾರಿಗಳೆಂದು ಹೊಡೆದಾಡಿ ವ್ಯವಹಾರದಲ್ಲಿ ಪರಾಜಿತರಾದವರಿವರು.

ಮಠದ ಇತಿಹಾಸಪ್ರಕಾಶನಸಮಿತಿಯವರು ಪ್ರಕಟಿಸಿರುವ 'ಹನ್ಯಕಸಮಾಜ ಮತ್ತು ಶ್ರೀಗುರುಮಠದ ಸಂಕ್ಷಿಪ್ತ ಇತಿಹಾಸ' ಎಂಬ ಪುಸ್ತಕದಲ್ಲಿರುವ ವಿವರವೇನೆಂದರೆ : ಶ್ರೀಶಂಕರಾಚಾರ್ಯರು ಸುರೇಶ್ವರರನ್ನು ಶೃಂಗೇರಿಯಲ್ಲಿ ಸ್ಥಾಪಿಸಿ ಅವರ ಶಿಷ್ಯರಾದ ವಿದ್ಯಾನಂದರನ್ನು ಕರೆದುಕೊಂಡು ತೀರ್ಥಯಾತ್ರಾ ಕ್ರಮದಿಂದ ಗೋಕರ್ಣಕ್ಕೆ ಬಂದರು. ಅಲ್ಲಿ ಅಗಸ್ತ್ಯಶಿಷ್ಯರಾದ ವರದಮುನಿಗಳು ತಪೋರಾಮ, ಸೀತಾ, ಲಕ್ಷ್ಮಣ; ಪಟ್ಟಾಭಿರಾಮ, ಸೀತಾ, ಲಕ್ಷ್ಮಣ-ಎಂಬ ಎರಡು ವಿಗ್ರಹಗಳನ್ನು ಆಚಾರ್ಯರಿಗೆ ಕೊಟ್ಟು ಹಿಮಾಲಯಕ್ಕೆ ತೆರಳಿದರು. ಆಚಾರ್ಯರು ಪ್ರಶಿಷ್ಯನಾದ ವಿದ್ಯಾನಂದನಿಗೆ ಅವುಗಳನ್ನು ಕೊಟ್ಟು 'ಅಶೋಕ' ಎಂಬಲ್ಲಿ ಮಠವನ್ನು ಸ್ಥಾಪಿಸಿ ನಿರ್ಮಿಸಿ ಅದಕ್ಕೆ ಅತನನ್ನು ಅಧಿಪತಿಯಾಗಿ ಮಾಡಿದರು. (ಹ,ಗು. ಇ. ೨೬, ೨೭) ಶ್ರೀರಾಮನೇ ಇದಕ್ಕೆ ಮುಖ್ಯಾಧಿದೇವತೆಯಾದದ್ದರಿಂದ ಇದಕ್ಕೆ 'ರಘೂತ್ತಮಮಠ'ವೆಂದು ಹೆಸರಾಯಿತು. ಹೀಗೆ ಸುರೇಶ್ವರಜ್ಯೇಷ್ಠ ಶಿಷ್ಯರಾದ ವಿದ್ಯಾನಂದರಿಂದ ರಘೂತ್ತಮ(ರಾಮಚಂದ್ರಮಠವೂ), ಎರಡನೆಯ ಶಿಷ್ಯರಾದ ನಿತ್ಯಬೋಧಘನಾಚಾರ್ಯರಿಂದ ಶೃಂಗೇರಿಮಠವೂ ಸ್ವತಂತ್ರವಾಗಿ ನಡೆದುಕೊಂಡು ಬಂದವು (ಹ.ಗು.ಇ. ೨೮). ರಘೂತ್ತಮಮಠದ ಗುರುಪರಂಪರೆಯಲ್ಲಿ ೧೧ನೆಯವರಾದ ರಾಮಚಂದ್ರಭಾರತಿಗಳು ಹಂಪೆಯ ಸೋಮಣ್ಣ ನಾಯಕನಿಂದಲೂ ಕೆಳದಿ ಮತ್ತು ನಗರದ ಸಂಸ್ಥಾನಿಕರಿಂದಲೂ ಕೆಲವು ಉಪಕಾರಗಳನ್ನು ಪಡೆದು ನಗರದಿಂದ ದಕ್ಷಿಣಕ್ಕೆ ಶರಾವತೀನದೀತೀರದಲ್ಲಿ ಅಗಸ್ತ್ಯತೀರ್ಥದ ಉತ್ತರ, ಶ್ರೀಕಾರ್ಣಗಿರಿಯ ಉತ್ತರಪೂರ್ವಗಳ ಮಧ್ಯಭಾಗದಲ್ಲಿಯೂ ಇದ್ದ ಪ್ರದೇಶಕ್ಕೆ 'ರಾಮಚಂದ್ರಾಪುರ'ವೆಂದು ಹೆಸರಿಟ್ಟು ಸೀತಾರಾಮಲಕ್ಷ್ಮಣವಿಗ್ರಹಗಳನ್ನು ಸ್ಥಾಪಿಸಿದರು. ಅಲ್ಲಿಂದ ಮುಂದಕ್ಕೆ ಈ ಮಠಕ್ಕೆ ರಾಮಚಂದ್ರಮಠವೆಂದು ಹೆಸರಾಯಿತು. ಆಲ್ಲಿಂದೀಚೆಗೆ ರಘೂತ್ತಮಮಠದಲ್ಲಿ ಬೇರೆ ಮಠಾಧಿಪತಿಗಳಿಲ್ಲ.

ಅಂದಿನಿಂದ ಕೆಕ್ಕಾರಿನ ಮಠದಲ್ಲಿಯೂ ಅಶ್ರಮಪರಂಪರೆ ನಡೆಯುತ್ತಾ ಬಂದಿತು.

[ಹೀಗೆ ಒಬ್ಬ ಗುರುಗಳ ಶಿಷ್ಯರೇ ಎರಡುಕಡೆಗಳಲ್ಲಿ ಏಕೆ ಯಾವ ಸಂದರ್ಭದಲ್ಲಿ ಬೇರೆಬೇರೆಯು ಮಠಗಳನ್ನು ಸ್ಥಾಪಿಸಿದರೆಂಬುದಕ್ಕೆ ವಿವರವು ಚರಿತ್ರೆಯಲ್ಲಿಲ್ಲ.]

ಕೆಕ್ಕಾರುಮಠದ 'ರಾಮಚಂದ್ರಭಾರತಿ'ಗಳ ಶಿಷ್ಯರಲ್ಲೊಬ್ಬರು ನೆಲೆವಾವಿನಲ್ಲಿ ಉಳಿದರು (ಹ.ಗು.ಇ.ಪು. ೩೧). ಕೆಕ್ಕಾರುಮಠದ ೧೩ನೆಯ ರಾಘವೇಶ್ವರ ಭಾರತಿಗಳು ರಾಮಚಂದ್ರಮಠದ ೨೯ನೆಯ ರಾಮಚಂದ್ರಭಾರತಿಗಳು ಇನ್ನೂ

1. ಗುರುಪರಂಪರೆಯು ೧೦ನೆಯವರಾದ ರಾಘವೇಶ್ವರಭಾರತಿ (1464)ಗಳ ಶಿಷ್ಯರು 'ರಘೂತ್ತಮಭಾರತಿ' ಎಂಬವರಿಂದ ಈ ರಘೂತ್ತಮಮಠವು ಮುನ್ನಡೆಯಿತಂತೆ.

ಚಿಕ್ಕವರಾದ್ದರಿಂದ ಆಲ್ಲಿಯ ಎಲ್ಲಾ ಆಡಳಿತಗಳನ್ನೂ ನೋಡಿಕೊಳ್ಳುತ್ತಿದ್ದರು. ಇವರು ಶಾ.ಶ. ೧೭೪೭ರಲ್ಲಿ ಮುಕ್ತರಾದಬಳಿಕ ರಾಮಚಂದ್ರಭಾರತಿಗಳೇ ಎರಡು ಮಠಗಳಿಗೂ ಅಧಿಕಾರಿಗಳಾದರು. ಕೆಕ್ಕಾರಿನಲ್ಲಿ ಮತ್ತೆ ಬೇರೆ ಸಂನ್ಯಾಸಿಗಳು ಬರಲಿಲ್ಲ, ಮಠಾಧಿಪತಿಗಳಿಲ್ಲ.

[ಬೇರೆಬೇರೆಯಾಗಿದ್ದ ಎರಡು ಮಠಗಳೂ ಇಲ್ಲಿಗೆ ಒಂದಾದಂತೆ ಆಯಿತು.]

ಗುರುಪರಂಪರೆಯಲ್ಲಿ ೧೫ನೆಯವರಾದ ಅನಂತೇಂದ್ರಭಾರತಿಗಳು ತಮ್ಮ ಶಿಷ್ಯರನ್ನು ರಾಮಚಂದ್ರಾಪುರದಲ್ಲಿ ಕೂಡಿಸಿ ತಾವು ಬಿದರಕಾಲು ಎಂಬಲ್ಲಿ ಮಠವನ್ನು ಸ್ಥಾಪಿಸಿ ಕೆಲವು ಆಸ್ತಿಗಳನ್ನು ಸಂಪಾದಿಸಿಕೊಂಡರು.

೧೯ನೆಯ ರಘುನಾಥಭಾರತಿಗಳ ಕಾಲದಲ್ಲಿ ತೀರ್ಥಹಳ್ಳಿಯಲ್ಲಿ ಒಂದು ಮಠವು ಸ್ಥಾಪಿತವಾಗಿದ್ದು ಆಲ್ಲಿನ ಹವ್ಯಕಬ್ರಾಹ್ಮಣರ ಮೇಲುವಿಚಾರಣೆಯನ್ನು ನಡೆಯಿಸುತ್ತಿತ್ತು.

೩೦ನೆಯ ರಾಮಚಂದ್ರಭಾರತಿಗಳ ಕಾಲದಲ್ಲಿಯೇ ಕೆಕ್ಕಾರುಮಠವು ರಾಮಚಂದ್ರಾಪುರದಲ್ಲಿ ವಿಲೀನವಾಯಿತು.

೩೧ನೆಯ ರಾಘವೇಂದ್ರಭಾರತಿಗಳ ಕಾಲದಲ್ಲಿ ಸಿದ್ದಾಪುರದ ತಾಲ್ಲೂಕಿನ ಕೊಂಬಿನಕೈಮಠ, ಕಳಸದ ರುದ್ರಸಾದಮಠ, ಅಮಗೊಡ್ಲಿನ ಕೃಷ್ಣಾನಂದ ಮಠ, ಹೊಸಳ್ಳಿಮಠ– ಈ ನಾಲ್ಕು ರಾಮಚಂದ್ರಮಠದಲ್ಲಿ ವಿಲೀನವಾದವು. ತೀರ್ಥಹಳ್ಳಿಮಠವೂ ಹೀಗೆಯೇ ವಿಲೀನವಾಯಿತು.

೩೨ನೆಯ ರಾಘವೇಶ್ವರಭಾರತಿಗಳ ಕಾಲದಲ್ಲಿ ಮಂಗಳೂರುಪ್ರಾಂತದ ೫೦೦ ಹವ್ಯಕಮನೆಗಳವರು ಶೃಂಗೇರಿಗೆ ಸೇರಿಕೊಂಡರು. ಕೋರ್ಟಿನಲ್ಲಿ ವ್ಯಾಜ್ಯ ನಡೆದು ಶೃಂಗೇರಿಯವರು ಸ್ವತಂತ್ರವಾಗಿರುವ ರಾಮಚಂದ್ರಮಠದ ಆಡಳಿತದಲ್ಲಿ ಕೈಹಾಕುವದು ತಪ್ಪೆಂದು ನಿರ್ಣಯವಾಯಿತು. ಶಿಷ್ಯರು ಮತ್ತೆ ರಾಮಚಂದ್ರಾಪುರದ ಮಠಕ್ಕೆ ಸೇರಿಕೊಂಡರು.

೩೩. ಈಗ ಶ್ರೀ॥ ರಾಘವೇಂದ್ರಭಾರತೀಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ.

೬. ವಿರೂಪಾಕ್ಷಿಮಠ

ಈ ಮಠವನ್ನು ಕಾಂಚೀಪೀಠದ ಗುರುಪರಂಪರೆಯಲ್ಲಿ ೪೯ನೆಯವರಾದ ವಿದ್ಯಾತೀರ್ಥರು ಮಾಧ್ವರ ಮತ್ತು ಪೋರ್ಚುಗೀಸರ ಪ್ರದೇಶದಲ್ಲಿದ್ದ ರೋಮನ್ ಕ್ಯಾಥೊಲಿಕರ ಮತಪ್ರಚಾರವನ್ನು ತಡೆಗಟ್ಟುವದಕ್ಕೆಂದು ಶಿಷ್ಯರ ಮೂಲಕ ಎಂಟು ಹೊಸ ಮಠಗಳನ್ನು ಸ್ಥಾಪಿಸಿದರೆಂದೂ ಅವರ ಶಿಷ್ಯರಾದ ವಿದ್ಯಾರಣ್ಯರು ಮತ್ತು ಸತೀರ್ಥರಾದವರು ಸಂನ್ಯಾಸಿಗಳೊಡನೆ ಆ ಮಠವನ್ನು ಅಧಿಪತಿಗಳಾಗಿ ನೋಡಿಕೊಳ್ಳುತ್ತಿದ್ದರೆಂದೂ ತಾವು ವಿರೂಪಾಕ್ಷಿಮಠಕ್ಕೆ ಅಧ್ಯಕ್ಷರಾದರೆಂದೂ ೮೦೦

ವರ್ಷಗಳಿಂದ ಶಿಥಿಲವಾಗಿದ್ದ ಶೃಂಗೇರಿಮಠವನ್ನು ಉಜ್ಜೀವನಗೊಳಿಸಿದರೆಂದೂ ಎನ್. ವೆಂಕಟರಾಮನ್‌ರವರು(NVSSK ಪು. 95–96)ರಲ್ಲಿ)ಬರೆದಿರುತ್ತಾರೆ. ಇದಕ್ಕೆ ಸುಷುಮಾಗ್ರಂಥದಲ್ಲಿ ಬರೆದಿರುವದೇ ಆಧಾರವಾಗಿರಬೇಕು.

"ಶ್ರೂಯತೇ ಚಾಯಮೇವ ಶ್ರೀಶಂಕರಾನಂದೇಂದ್ರ ಮುನಿನಾ ದತ್ತವಿದ್ಯಾರಣ್ಯ ನಾಮಾ ಸಹೈವಾಪ್ತಭಿಃ ಸಬ್ರಹ್ಮಚಾರಿಭಿಃ ಸಚ್ಚಿದಾನಂದಾದಿಭಿರಚೀಕ್ಲೃಪದವಾಕ್ಯೈ ಮಠಾನಾತ್ಮನಶ್ಚಕಮಧಿತ ಜಗದ್ಭದ್ರವತು ವಿರೂಪಾಕ್ಷೇಶ್ವರಮ್ ಅತಿವೇಲ ಪುವೃದ್ಧ ಮುಧ್ಯಕದಧ್ವಾದಿವಿಮತ ಪ್ರಚಾರರೋಧಿನ ಇತಿ" ॥ ಗು.ರ.ಸು. ೭೫.

ಆದರೆ ಸುಷುಮಾಕಾರರು 'ಹೀಗೆಂದು ಹೇಳುತ್ತಾರೆ' ಎಂದೇ ಬರೆದಿರುತ್ತಾರೆ. ಇದು ಐತಿಹಾಸಿಕಕಾಲವಾನಕ್ಕೆ ಹೊಂದುವಂತಿಲ್ಲವೆಂದು ಕೆ. ಆರ್. ವೆಂಕಟರಾಮನ್‌ರವರು ಬರೆದಿರುವದನ್ನು ಶೃಂಗೇರಿಯ ಗುರುಪರಂಪರೆಯ ವಿಮರ್ಶೆಯ ಸಂದರ್ಭದಲ್ಲಿ (ಪು. ೪೬೩) ತಿಳಿಸಿರುತ್ತೇವೆ.

ನಮಗೆ ಸಿಕ್ಕಿರುವ ವಿರೂಪಾಕ್ಷಪೀಠಗುರುಪರಂಪರೆಯ ಪಟ್ಟಿಯಲ್ಲಿ[1] ಶೃಂಗೇರಿಯ ಗುರುಪರಂಪರೆಯ ೧೧ನೆಯವರಾದ ಭಾರತೀಕೃಷ್ಣತೀರ್ಥರ ಶಿಷ್ಯರಾದ ವೇದಭಾಷ್ಯಕರ್ತರಾದ ವಿದ್ಯಾರಣ್ಯಸ್ವಾಮಿಗಳು ವಿರೂಪಾಕ್ಷಿಮಠವನ್ನು ಸ್ಥಾಪಿಸಿದರು ಎಂದಿದೆ. ಅವರು ಶೋಭಕೃತ್ ವೈಶಾಖ ಶುಕ್ಲ ತೃತೀಯಾ ದಿನ ಆ ಕ್ಷೇತ್ರದ ಗುಹೆಯಲ್ಲಿ ಯೋಗಸಮಾಧಿಯನ್ನು ಹೊಂದಿದರೆಂದಿದೆ. ಕೆ. ಆರ್. ವೆಂಕಟರಾಮನ್‌ರವರು ಶಕಟಪುರ (ಬಂಡಿಗದ್ದೆ), ಹರಿಹರಪುರ' ತೀರ್ಥ ಮತ್ತೂರು' ಕೂಡಲಿ –ಈ ಮಠಗಳು ಈ ಕಾಲದಲ್ಲಿ ಸ್ಥಾಪಿತವಾದವೆಂದು (KRTTW p. 44) ಬರೆದಿರುತ್ತಾರಾದರೂ ಈ ಮಠವನ್ನು ಹೆಸರಿಸಿಲ್ಲ.

೭. ಪುಷ್ಪಗಿರಿ

ಎನ್. ವೆಂಕಟರಾಮನ್‌ರವರು (NVSSK ಪು.95)ಬರೆದಿರುವ ಎಂಟು ಮಠಗಳಲ್ಲಿ ಇದೂ ಒಂದು.

ನಮಗೆ ಸಿಕ್ಕಿದ್ದ ಪುಸ್ತಕದಲ್ಲಿ, (ಇದರಲ್ಲಿ ಜಗನ್ನಾಥದಲ್ಲಿ ಪದ್ಮಪಾದರನ್ನೂ ದ್ವಾರಕೆಯಲ್ಲಿ ಹಸ್ತಾಮಲಕರನ್ನೂ, ಜ್ಯೋತಿರ್ಮಠದಲ್ಲಿ ತ್ರೋಟಕಾಚಾರ್ಯರನ್ನೂ, ಶೃಂಗೇರಿಯಲ್ಲಿ ಸುರೇಶ್ವರರನ್ನೂ ಆಚಾರ್ಯರು ಇಟ್ಟರೆಂದಿದೆ (?) ಕೈಲಾಸಾಚಲದಿಂದ ಚಂದ್ರಮೌಳಿಲಿಂಗಗಳನ್ನು ತಂದು ಶಿಷ್ಯರಿಗೆ ಕೊಟ್ಟರೆಂದಿದೆ') ಸುರೇಶ್ವರರಿಂದ ಸದಾನಂದಸರಸ್ವತಿಗಳೂ ಮುಂದೆ ಆನಂದಗಿರೀಂದ್ರ ಆಮೇಲೆ ಕೃಷ್ಣಾನಂದಸರಸ್ವತಿಗಳು, ಆಮೇಲೆ ಬಂದವರು ವಿದ್ಯಾರಣ್ಯರು.[2] ಶಕೆ ೧೧೭೭ರಲ್ಲಿ ವಿದ್ಯಾರಣ್ಯರು ಕಾಂಚಿಯಲ್ಲಿದ್ದರು, ಅವರು ಪಂಪಾಕ್ಷೇತ್ರ

1. ಇದು 1931ರಲ್ಲಿ 'ಜಾನಪಾಟಿ ಪಟ್ಟಾಭಿರಾಮಶಾಸ್ತ್ರಿಗಳು' ಕರ್ನೂಲ್‌ನಲ್ಲಿ ಪ್ರಕಾಶಿಸಿರುವ ತೆಲುಗುಪುಸ್ತಕ.

2. ಶಾಲಿವಾಹನಶಕೆ ೧೭೭೭ರಲ್ಲಿ ಆಚ್ಚಾದ ತೆಲುಗುಲಿಪಿಯ ಪುಸ್ತಕವಿದು,

ದಲ್ಲಿಯೂ ಇದ್ದರು–ಎಂದು ಹೇಳಿದೆ. ಶಿಷ್ಯರಾದ ಚಂದ್ರಶೇಖರಭಾರತಿಗಳನ್ನು ಶೃಂಗೇರಿಯಲ್ಲಿಟ್ಟು ತಾವು ವಿರೂಪಾಕ್ಷವಲ್ಲಿ ಮಠವನ್ನು ಮಾಡಿ ನೃಸಿಂಹೇಂದ್ರ ಭಾರತಿಗಳೆಂಬ ಶಿಷ್ಯರನ್ನು ಅಲ್ಲಿಟ್ಟು ಶುಭಕೃತ್ಸಂವತ್ಸರದ (?) ಕೃಷ್ಣ ೩ ಸೋಮವಾರದ ದಿನ ತೆರಳಿದರು. "ನೃಸಿಂಹೇಂದ್ರಭಾರತಿಗಳಿಂದ ಮುಂದಕ್ಕೆ ಎರಡು ಪೀಠಗಳಾದವು" ಎಂದು ಬರೆದಮೇಲೂ ಕೆಲವು ಗುರುಗಳ ಹೆಸರುಗಳನ್ನು ಬರೆದಿದೆ. ಬಳಿಕ ವಿದ್ಯಾಶಂಕರಭಾರತಿಗಳ ಶಿಷ್ಯರಾದ ವಿದ್ಯಾನೃಸಿಂಹೇಂದ್ರ ಸರಸ್ವತಿಗಳು ಶಿಷ್ಯರ ಪ್ರಾರ್ಥನೆಯಂತೆ ಪುಷ್ಪಗಿರಿಗೆ ಬಂದು ಅಲ್ಲಿ ಮಠವನ್ನು ನಿರ್ಮಿಸಿ ಶಕೆ ೧೩೨೯ ಸರ್ವಜಿತ್ ವೈಶಾಖ ಶುದ್ಧ ಸಪ್ತಮಿಯಾ ಭೃಗು ವಾರದಲ್ಲಿ ನೃಸಿಂಹೇಂದ್ರಸರಸ್ವತಿಗಳನ್ನು ಪೀಠಾಧಿಪರನ್ನಾಗಿ ಮಾಡಿದರು–ಎಂದು ಬರೆದಿದೆ

ಈ ಪಟ್ಟಿಯಲ್ಲಿ ಶೃಂಗೇರೀಗುರುಪರಂಪರೆಯೂ ಸರಿಯಾಗಿರುವಂತೆ ಕಾಣುವದಿಲ್ಲ. ಆಗಾಗ್ಗೆ ಕಾಂಚಿಯ ಸಂಬಂಧವನ್ನು ಗಂಟುಹಾಕಿರುತ್ತದೆ ಎಂಬುದನ್ನು ಲಕ್ಷಿಸಬೇಕು. ಈ ಗುರುಪರಂಪರೆಯ ಪಟ್ಟಿಗೆ ಎಷ್ಟು ಬೆಲೆಯನು ಕೊಡಬೇಕೆಂಬುದನ್ನು ವಾಚಕರೇ ಊಹಿಸಿಕೊಳ್ಳಬೇಕಾಗಿದೆ.

ಉಪಸಂಹಾರ

ಶ್ರೀಕಾಶೀಶೇಷ ವೆಂಕಟಾಚಲಶಾಸ್ತ್ರಿಗಳು ಶಾರೀರಕವಿಮಾಮಾಂಸೆಯ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯಪರಂಪರೆಯವೆಂದು ಒಟ್ಟು ೩೫ ಮಠಗಳ ಹೆಸರನ್ನು ಕೊಟ್ಟಿರುತ್ತಾರೆ. (ಶಂ. ಚ. ಪು. ೨೩,೨೪) ಇವುಗಳಲ್ಲಿ ನಮಗೆ ಸಿಕ್ಕಿದಷ್ಟು ಮಠಗಳ ಹೆಸರುಗಳನ್ನು ಉಲ್ಲೇಖಿಸಿ ಮೇಲೆ ವಿವರವನ್ನು ಕೊಟ್ಟಿದೇವೆ. ರಾಮಚಂದ್ರಾಪುರದ ಮಠವ ಚರಿತ್ರೆಯಿಂದ ಕೆಲವು ಉಪಮಠಗಳ ಹೆಸರುಗಳು ಸಿಕ್ಕಿವೆ; ಅವನ್ನು ಆ ಮಠದ ಚರಿತ್ರೆಯ ವಿವರದಲ್ಲಿ ನಾವು ಕಪ್ಪಕ್ಕರದಲ್ಲಿ ಅಚ್ಚು ಮಾಡಿಸಿರುತ್ತೇವೆ.

ಮೇಲ್ಕಂಡ ಉಪಪೀಠಗಳ ಜೊತೆಗೆ 1963ನೆಯ ಏಪ್ರಿಲ್ 28ನೆಯ ತಾರೀಖಿನ "ಪ್ರಭಾತ" ಎಂಬ ಮಂಗಳೂರಿನ ವಾರಪತ್ರಿಕೆಯ "ಶ್ರೀಜಗದ್ಗುರು ಅಂಕ"ವೆಂಬ ವಿಶೇಷಸಂಚಿಕೆಯ ಪುಟ 8–9ರಲ್ಲಿ ಈ ಕೆಳಗೆ ಹೆಸರಿಸಿರುವ ಮಠಗಳ ಸಂಕ್ಷಿಪ್ತವಿವರವಿದೆ. ವಾಚಕರ ಅವಗಾಹನೆಗಾಗಿ ಅವುಗಳ ಹೆಸರುಗಳನು ಮಾತ್ರ ಇಲ್ಲಿ ಕೊಡಲಾಗಿದೆ :–

(೧) ಹರಿಹರಮಠ (ಕೊಪ್ಪ ತಾ||) (೨) ಭಂಡಿಗೇಡಿಮಠ(ಕೊಪ್ಪ ತಾ||) (೩) ಯೋಗಾನಂದೇಶ್ವರಮಠ, ಹೊಳೆನರಸೀಪುರ (೪) ಕೋದಂಡಾಶ್ರಮಮಠ, ಹೆಬ್ಬೂರು (ತುಮಕೂರು ಡಿ||) (೫) ಬಾಳೆಕುದುರುಮಠ (ಉಡುಪಿ ತಾ||) (೬) ಯಡನೀರುಮಠ(ಕಾಸರಗೋಡುತಾ||) (೭) ಹೊನ್ನವಳ್ಳಿಮಠ(ಶಿರಸಿತಾ||)

(೮) ಚಿತ್ರಾಪುರಮಠ, ಶಿರಾಲಿ (ಉ. ಕನ್ನಡ) (೯) ಕೈವಲ್ಯಮಠ, ಕೆಲೋಸಿ (ಗೋವಾ) (೧೦) ತಾರಕೇಶ್ವರಮಠ, (ಬಂಗಾಳ) (೧೧) ಚಿಂತಾಮಣಿಮಠ, ಹೊಸಪೇಟೆ.

ಈ ಪರಿಶಿಷ್ಟವನ್ನು ಉಪಸಂಹಾರಮಾಡುವಾಗ ನಮ್ಮದೊಂದು ನಮ್ರ ವಿಜ್ಞಾಪನೆಯನ್ನು ಇಲ್ಲಿ ಮಾಡಿಕೊಳ್ಳಬೇಕಾಗಿದೆ. ಈವರೆಗೆ ಬರೆದಿರುವ ಮಠಗಳು ಅಥವಾ ಉಪಮಠಗಳು– ಈಗ ಎಷ್ಟೋ ಶಿಷ್ಯಕೋಟಿಯನ್ನು ಉದ್ಧರಿಸುತ್ತಿವೆ. ಆಯಾ ಮಠದ ಅನುಯಾಯಿಗಳು ಆಯಾ ಮಠದಲ್ಲಿ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುವದು ಯುಕ್ತವೂ ಆಗಿದೆ. ನಾವು ಇಲ್ಲಿ ಬರೆದಿರುವ ಇತಿಹಾಸ, ಕಾಲ, ವಿದ್ವಾಂಸರ ಅಭಿಪ್ರಾಯಗಳು, ಅವುಗಳ ಮೇಲೆ ನಮ್ಮ ಅಭಿಪ್ರಾಯ– ಇವುಗಳನ್ನೆಲ್ಲ ಕೊಟ್ಟಿರುವದು ಮಠಗಳ ಚರಿತ್ರೆಯನ್ನು ಐತಿಹಾಸಿಕದೃಷ್ಟಿಯಿಂದ ನೋಡುವವರಿಗೆ ಎಷ್ಟು ತೊಂದರೆಗಳಿವೆ ಎಂಬುದನ್ನು ಸ್ಪಷ್ಟಪಡಿಸುವದಕ್ಕೇ ಹೊರತು ಯಾವದೊಂದು ಮಠದ ಮೇಲಿನ ದುರಭಿಮಾನ ಅಥವಾ ದ್ವೇಷದಿಂದ ಒಂದು ಚಕಾರಟುಕಾರವನ್ನೂ ನಾವು ಇಲ್ಲಿ ಬರೆದಿಲ್ಲವೆಂಬುದನ್ನು ಪ್ರತಿಜ್ಞಾಪೂರ್ವಕವಾಗಿ ತಿಳಿಸುತ್ತೇವೆ.

ಪೀಠಾಧಿಪತಿಗಳೆಲ್ಲರೂ ಶ್ರೀಶಂಕರಭಗವತ್ಪಾದರವರ ಪ್ರತಿನಿಧಿಗಳು. ಅವರುಗಳಲ್ಲಿ ಅನೇಕರು ಸಂಸ್ಕೃತವಿದ್ಯಾಭ್ಯಾಸಕ್ಕೆ ಕೊಡುತ್ತಿರುವ ಪ್ರೋತ್ಸಾಹವು ಅತ್ಯಂತ ಅಭಿನಂದನೀಯವಾಗಿರುತ್ತದೆ. ಜನರಿಗೆ ಗುರುದೇವತೆಗಳಲ್ಲಿ ಶ್ರದ್ಧೆಯೂ ಧರ್ಮದಲ್ಲಿ ಅಭಿರುಚಿಯೂ ಕಡಿಮೆಯಾಗುತ್ತಿರುವ ಈ ಕರಾಲಕಲಿಕಾಲದಲ್ಲಿ ವೇದಾಂತಾಭ್ಯಾಸಕ್ಕೆ ಮನವೊಲಿಯುವವರು ಎಲ್ಲಿ ಸಿಕ್ಕಬೇಕು ? ಶ್ರೀಶಂಕರಭಗವತ್ಪಾದರವರ ಪ್ರೇರಣೆಯಿಂದ ಎಲ್ಲಾ ಮಠಗಳೂ ಸೇರಿ ಕರ್ಮಜ್ಞಾನಗಳ ಪ್ರಸಾರಕ್ಕೆ ಅನುಕೂಲವಾದ ಮಹಾವಿದ್ಯಾಪೀಠವೊಂದನ್ನು ನಿರ್ಮಿಸುವಂತಾಗಲೆಂದು ಆ ಮಹಾಮಹಿಮರನ್ನು ಸೆರಗೊಡ್ಡಿ ಬೇಡಿಕೊಳ್ಳುತ್ತೇವೆ.

ಓಂ ತತ್ ಸತ್

———

ಗ್ರಂಥಕರ್ತರ ಬಗ್ಗೆ

ಸುಮಾರು ಎಂಟು ದಶಕಗಳ ಕಾಲ ಶ್ರೀಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನೇ ಮತ್ತೆ ಮತ್ತೆ ವ್ಯಾಸಂಗ ಮಾಡಿ ಶಂಕರ ವೇದಾಂತ ಪ್ರಕ್ರಿಯೆಯನ್ನು ನಿರ್ಧರಿಸಿ ಕಂಡುಕೊಂಡಿರುವ ಈ ಗ್ರಂಥಕರ್ತರಾದ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಶ್ರೀಶಂಕರಭಗವತ್ಪಾದರ ಜೀವನ ಚರಿತ್ರೆಯನ್ನು ಗೊತ್ತುಮಾಡಲು ಹೊರಟು ಬಹಳ ಪರಿಶ್ರಮಪಟ್ಟು ಕಡೆಗೆ ಸರ್ವಸಮ್ಮತವಾಗಿ ಕಂಡು ಬಂದ ವಿಷಯಗಳನ್ನು ನಿರ್ಭೀತಿಯಿಂದ ಈ ಗ್ರಂಥದಲ್ಲಿ ತಿಳಿಸಿದ್ದಾರೆ. ಉಳಿದ ಕಲ್ಪಿತ ಕಥೆಗಳನ್ನೆಲ್ಲ ಯುಕ್ತಿಗಳಿಂದ ಜಾಲಾಡಿ ಅವುಗಳ ಅಸಾರತೆಯನ್ನೂ ಪ್ರಕಟಿಸಿದ್ದಾರೆ.

ಆದರೆ ಶಂಕರರ ಜೀವನ ಚರಿತ್ರೆಯನ್ನು ಪ್ರಾಮಾಣಿಕವಾಗಿ ಕಂಡು ಹಿಡಿದು ತಿಳಿಸಲು ಹೋದವರಿಗೆ ಬರಬಹುದಾದ ತೊಡಕು ಗಳನ್ನೆಲ್ಲ ಇಲ್ಲಿ ಪ್ರಸ್ತಾಪಿಸಿ ನಿಜವಾದ ಶಂಕರರ ಚರಿತ್ರೆಯು ಅಲಭ್ಯವೆಂದೂ ಆ ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳೇ ನಿಜವಾದ ಶಂಕರಾಚಾರ್ಯರೆಂದೂ ಓದುಗರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಇಂಥ ಮಹಾಪ್ರಬಂಧವನ್ನು ರಚಿಸಿ ಕನ್ನಡದ ಜನರಿಗೆ ನೀಡಿ ಶ್ರೀ ಶಂಕರಾಚಾರ್ಯರ ವಿಷಯಕ್ಕೆ ಜನರಿಗೆ ಇರಬಹುದಾದ ಮೌಢ್ಯವನ್ನು ನಿರಾಸಮಾಡಿ ಭಗವತ್ಪಾದರಲ್ಲಿ ಶ್ರದ್ಧಾಭಕ್ತಿಗಳುಂಟಾ ಗುವಂತೆಯೂ ಸತ್ಯವಾದ ಚರಿತ್ರೆಯು ದುರ್ಲಭವೆಂದೂ ತಿಳಿಸಿ ಕೊಟ್ಟಿರುವ ಗ್ರಂಥಕರ್ತರಿಗೆ ಶಂಕರಭಕ್ತರೆಲ್ಲರೂ ಚಿರಋಣಿಗಳಾಗಿದ್ದಾರೆ.



ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

(1880-1975)